ಶ್ರೀಮದ್ವಾಲ್ಮೀಕಿರಾಮಾಯಣವು

2

VENKATESHWARA PUBLISHERS
MYLAPORE, MADRAS–600 004

ಶ್ರೀಃ

ವಾಲ್ಮೀಕಿಮಹರ್ಷಿಪ್ರಣೀತ

ಶ್ರೀಮದ್ವಾಲ್ಮೀಕಿರಾಮಾಯಣವು

(ಎರಡನೆಯ ಭಾಗವು)

ಕರ್ಣಾಟಿಕ ವಚನವು

ಶ್ರೀಮದ್ಯದುಶೈಲನಿವಾಸರಸಿಕ

ಪಂಡಿತ ದೇವಶಿಖಾಮಣಿ ಅಳಸಿಂಗರಾಚಾರ್ಯ ವಿರಚಿತವು.

ಪ್ರಕಾಶಕರು

[illegible]

VENKATESWARA PUBLISHERS
14, Bhimasena Gardens,
Mylapore, Madras-600 004.

Rs. 40/-

ಶ್ರೀರಸ್ತು

ಶ್ರೀರಾಮಚಂದ್ರಪರಬ್ರಹ್ಮಣೇ ನಮಃ

ವಿಜ್ಞಪ್ತಿ

ಭಗವತ್ಕೃಪೆಯಿಂದ ಶ್ರೀಮದ್ರಾಮಾಯಣಗ್ರಂಥವು ನಿರ್ವಿಘ್ನವಾಗಿ ಪೂರ್ತಿಹೊಂದಿತು. ಇದುವರೆಗೆ ಈ ಗ್ರಂಥವನ್ನೋದಿ ರಸಾಸ್ವಾದನ ಮಾಡಿದ ಆಸ್ತಿಕ ಶಿಖಾಮಣಿಗಳೆಲ್ಲರೂ, ದೋಷದೃಷ್ಟಿಯಿಲ್ಲದೆ, ಕೇವಲ ಗುಣಗ್ರಾಹಿಗಳಾಗಿ, ಅಭಿನಂದನಪತ್ರಿಕೆಗಳಿಂದ ಪ್ರೋತ್ಸಾಹಿಸುತ್ತಿದ್ದುದಕ್ಕಾಗಿ ತುಂಬ ಕೃತಜ್ಞನಾಗಿರುತ್ತೇನೆ. ಹೀಗೆ ಸರ್ವತೋಮುಖವಾಗಿ ಬರುತ್ತಿದ್ದ ಪ್ರೋತ್ಸಾಹವೇ ಈ ಕಾರ್ಯದ ನಿರ್ವಿಘ್ನಪರಿಸಮಾಪ್ತಿಗೆ ಮುಖ್ಯ ಕಾರಣವಾಯಿತಲ್ಲದೆ ಬೇರೆಯಲ್ಲ.

"ಅರಸರ್ ಕುಡುವಾ ಕಾರ್ತ | ಸ್ವರಕಂಕಣ ಮಿಕ್ಕೆ! ಸರಸರಾಸ್ವಾದಿಸಿಕಾ॥
ನ್ಯರಸವ ಸೂಸುವ ಸುಖಭಾ | ಸ್ವರಾಶ್ರುಕಂಕಣಮೆ ಕವಿಗೆ ಕಂಕಣಮಲ್ತೆ।"

ಎಂಬ ಕವಿವಾಕ್ಯದಂತೆ, ಹೀಗೆ ಸಹೃದಯರಾದ ಅನೇಕ ಮಹನೀಯರು ಈ ಗ್ರಂಥವನ್ನೋದಿ ಸಂತೋಷದಿಂದ ಕಳುಹಿಸಿರುವ ಅಭಿನಂದನ ಪತ್ರಿಕೆಗಳೇ ನಮಗೆ ಕನಕಾಭಿಷೇಕಪ್ರಾಯವಾಗಿರುವುವಲ್ಲದೆ ಬೇರೆಯಲ್ಲ. ಈಗ ದಿನದಿನಕ್ಕೆ ಹೆಚ್ಚಿ ಬರುತ್ತಿರುವ ವಿದೇಶಭಾಷಾಪ್ರಾಚುರ್ಯದಿಂದ, ನಮ್ಮ ಜನಗಳಿಗೆ ಸ್ವದೇಶ ಭಾಷೆಯಲ್ಲಿ ಕ್ರಮಕ್ರಮವಾಗಿ ಅನಾದರವು ಹುಟ್ಟುತ್ತಿದೆಯೆಂಬ ವಿಷಯವು ಎಲ್ಲರಿಗೂ ತಿಳಿದಿದೆ. ಅದರಲ್ಲಿಯೂ ಈಗ ಇತರಭಾಷೆಗಳೊಡನೆ ನಮ್ಮ ಕನ್ನಡ ಭಾಷೆಯನ್ನು ಹೋಲಿಸಿದಪಕ್ಷದಲ್ಲಿ, ಇದರಲ್ಲಿ ಭಾಷಾಭಿಮಾನವುಳ್ಳವರೇ ಬಹಳ ಕಡಿಮೆ! ಈ ಕಾರಣದಿಂದ ಈ ಭಾಷೆಯಲ್ಲಿ ತಕ್ಕ ಮಟ್ಟಿಗೆ ಗ್ರಂಥರಚನಾ ಸಾಮರ್ಥ್ಯವುಳ್ಳವರೂ ಕೂಡ ಆ ಕಾರ್ಯದಲ್ಲಿ ಉತ್ಸಾಹವಿಲ್ಲದೆ ಹಿಂಜರಿಯುತ್ತಿರುವರು. ಹೀಗೆ ಕರ್ಣಾಟಕಭಾಷೆಯು ನಮ್ಮ ಕನ್ನಡಿಗರಿಗೇ ಕೇವಲ ಅನಾದರಣೀಯವಾಗುವಷ್ಟು ದುಸ್ಥಿತಿಯಲ್ಲಿರುವಾಗಲೂ ಕೂಡ, ಉದಾರಬುದ್ಧಿ

ಯುಳ್ಳ, ಮೆ. ಆರ್. ವೆಂಕಟೇಶ್ವರ ಕಂಪೆನಿಯವರು ತಾವು ಅನ್ಯದೇಶೀಯ ರಾಗಿದ್ದರೂ, ನಮ್ಮ ಕರ್ಣಾಟ ದೇಶೀಯರ ಉಪಯೋಗಾರ್ಥವಾಗಿ, ಬಹಳ ದ್ರವ್ಯಸಾಧ್ಯವಾದ ಈ ದೊಡ್ಡಪ್ರಯತ್ನವನ್ನಾರಂಭಿಸಿ ಮುಗಿಸಿದುದರಿಂದ ಇವರ ಸಾಹಸವು ಸರ್ವಾಭಿನಂದ್ಯವೆಂಬುದನ್ನು ಯಾರೂ ಒಪ್ಪಿಕೊಳ್ಳದಿರಲಾರರು. ಇವರ ಈ ಮಹಾಪ್ರಯತ್ನಕ್ಕೆ ಸಾಫಲ್ಯವುಂಟಾಗುವಂತೆ ನಮ್ಮ ಕರ್ಣಾಟದೇಶೀಯರಾದ ಆಸ್ತಿಕಶಿರೋಮಣಿಗಳೂ, ಭಾಷಾಭಿಮಾನಿಗಳೂ ಇದುವರೆಗೆ ತಕ್ಕಷ್ಟು ಪ್ರೋತ್ಸಾಹವನ್ನು ಕೊಡುತ್ತ ಬಂದುದರಿಂದ, ಇವರಿಗೆ, ಮುಂದೆಯೂ ಹೀಗೆಯೇ ನಮ್ಮ ಭಾಷೆಯಲ್ಲಿ ಇನ್ನೂ ಅನೇಕಸದ್ಗ್ರಂಥಗಳನ್ನು ಪ್ರಕಟಿಸಬೇಕೆಂಬ ಉತ್ಸಾಹವು ಹುಟ್ಟುವುದಕ್ಕೆ ಕಾರಣವಾಗಿದೆ.

ಈ ರಾಮಾಯಣದಂತೆಯೇ ಮುಂದೆ ಮೇಲ್ಕಂಡ ಕಂಪೆನಿಯವರ, ಶ್ರೀಭಾಗವತವನ್ನು ಸಚಿತ್ರವಾಗಿಯೂ, ಸವ್ಯಾಖ್ಯಾನವಾಗಿಯೂ ಮುದ್ರಿಸಿ ಪ್ರಕಟಿಸಬೇಕೆಂದಿರುವುದರಿಂದ ಭಾಷಾಭಿಮಾನಿಗಳೆಲ್ಲರೂ ಈಗಿನಂತೆಯೇ ಚಂದಾದಾರರಾಗಿದ್ದು ಪ್ರೋತ್ಸಾಹಿಸಬೇಕೆಂದು ಕೋರಿಕೆ.

ಸಜ್ಜನವಿಧೇಯನಾದ

ದೇವಶಿಖಾಮಣಿ—ಅಳಸಿಂಗರಾಚಾರ್ಯ

ಯುದ್ಧಕಾಂಡದ ಎರಡನೆಯ ಭಾಗದ ವಿಷಯಾನುಕ್ರಮಣಿಕೆ.

ಸರ್ಗಸಂಖ್ಯೆ. ವಿಷಯಗಳು ಪುಟಸಂಖ್ಯೆ

ಅವತಾರಿಕೆ.

60 ರಾವಣನು ರಾಮಬಾಣಗಳ ಬಾಧೆಯಿಂದ ಬಹಳವಾಗಿ ನೊಂದು, ಕುಂಭಕರ್ಣನನ್ನು ನಿದ್ರೆಯಿಂದೆಬ್ಬಿಸಿ ಕರೆತರುವಂತೆ ನಿಯಮಿಸಿದುದು. ಕುಂಭಕರ್ಣನು ಬಂದು ರಾವಣನನ್ನು ನಿಂದಿಸಿದುದು. ರಾವಣನ ಕೋಪವು. ಕುಂಭಕರ್ಣನು ರಾವಣನಿಗೆ ಕೋಪಸಮಾಧಾನವನ್ನು ಮಾಡಿ ಯುದ್ಧಕ್ಕೆ ಹೊರಟುದು. 1

61 ರಾಮನು ಕುಂಭಕರ್ಣನ ವೃತ್ತಾಂತವೇನೆಂದು ಕೇಳಲು, ವಿಭೀಷಣನು ಅದನ್ನು ರಾಮನಿಗೆ ವಿವರಿಸಿ ಹೇಳಿದುದು. 20

62 ರಾವಣನು ಕುಂಭಕರ್ಣನನ್ನು ಮನ್ನಿಸಿ ಅನುನಯಿಸುತ್ತ, ರಾಮನಿಂದ ತನಗುಂಟಾಗಿರುವ ಭಯವನ್ನು ತಿಳಿಸಿ, ಹೇಗಾದರೂ ತನ್ನನ್ನುದ್ಧರಿಸಬೇಕೆಂದು ಪ್ರಾರ್ಥಿಸಿದುದು. 24

63 ಕುಂಭಕರ್ಣನು, ಹಿಂದೆ ತನ್ನ ಮತ್ತು ವಿಭೀಷಣನ ಬುದ್ಧಿವಾದವನ್ನು ಕೇಳದುದಕ್ಕಾಗಿಯೇ ಈ ಹಾನಿಯುಂಟಾಯಿತೆಂದು ರಾವಣನನ್ನು ನಿಂದಿಸಿದುದು. ಅದಕ್ಕೆ ರಾವಣನು ಕೋಪಗೊಂಡುದನ್ನು ನೋಡಿ, ಅವನ ಕೋರಿಕೆಯಂತೆ ಶತ್ರುಗಳನ್ನು ಜಯಿಸುವುದಾಗಿ ಪ್ರತಿಜ್ಞೆ ಮಾಡಿದುದು. 27

64 ಮಹೋದರನು ಕುಂಭಕರ್ಣನನ್ನು ಹೆದರಿಸಿದುದು. 36

65 ಕುಂಭಕರ್ಣನು ಯುದ್ಧಕ್ಕೆ ಹೊರಟುದು. 43

66 ಕುಂಭಕರ್ಣನು ವಾನರರೊಡನೆ ಯುದ್ಧವನ್ನಾರಂಭಿಸಿದುದು. ಭಯದಿಂದೋಡುತ್ತಿದ್ದ ವಾನರರನ್ನು ಅಂಗದನು ತಡೆದು ನಿಲ್ಲಿಸಿದುದು. 50

67 ವಾನರರೊಡನೆ ಕುಂಭಕರ್ಣನ ಯುದ್ಧವು. ಅಂಗದನ ಪರಾಜಯವು. ಪ್ರಹಾರದಿಂದ ಮೂರ್ಛಿತನಾದ ಸುಗ್ರೀವನನ್ನು ಕುಂಭಕರ್ಣನು ಲಂಕೆಗೆ ಎತ್ತಿಕೊಂಡು ಹೋಗುತ್ತಿರುವಾಗ, ರಾಜವೀಧಿಯಲ್ಲಿ ನಡೆಸಿದ ಶೈತ್ಯೋಪಚಾರಗಳಿಂದ ಸುಗ್ರೀವನು ಮೂರ್ಛೆತಿಳಿದು, ಕುಂಭಕರ್ಣನ ಕಿವಿಮೂಗುಗಳನ್ನು

ಕಚ್ಚಿ, ಹಿಂತಿರುಗಿ ಬಂದು ವಾನರಸೈನ್ಯದೊಡನೆ ಸೇರಿದುದು. ರಾಮಕುಂಭಕರ್ಣರ ಯುದ್ಧವು. ಕುಂಭಕರ್ಣನ ವಧವು. 54

68 ಕುಂಭಕರ್ಣನ ಮರಣವನ್ನು ಕೇಳಿ ರಾವಣನು ವಿಲಪಿಸಿದುದು. 75

69 ದೇವಾಂತಕನರಾಂತಕರೂ, ಮಹೋದರ ಮಹಾಪಾರ್ಶ್ವರೂ, ಅತಿಕಾಯ ತ್ರಿಶಿರಸ್ಸುಗಳೂ ರಾವಣನಿಂದ ಪ್ರೇರಿತರಾಗಿ ಯುದ್ಧಕ್ಕೆ ಬಂದುದು. 78

70 ಹನುಮಂತನು ದೇವಾಂತಕ ತ್ರಿಶಿರಸ್ಸುಗಳನ್ನೂ, ನೀಲನು ಮಹೋದರನನ್ನೂ, ಋಷಭನು ಮಹಾಪಾರ್ಶ್ವನನ್ನೂ ಕೊಂದುದು. 89

71 ಅತಿಕಾಯನು ಯುದ್ಧಕ್ಕೆ ಬಂದುದು. ವಿಭೀಷಣನು ಅತಿಕಾಯನ ವೃತ್ತಾಂತವನ್ನು ರಾಮನಿಗೆ ತಿಳಿಸಿದುದು. ಅತಿಕಾಯನು ವಾನರರನ್ನು ನಿಗ್ರಹಿಸಿ ರಾಮನನ್ನಿದಿರಿಸುವುದಕ್ಕಾಗಿ ಬರುವಾಗ, ಲಕ್ಷ್ಮಣನು ಬ್ರಹ್ಮಾಸ್ತ್ರದಿಂದ ಆತನನ್ನು ಕೊಂದುದು. 97

72 ರಾವಣನು ಅತಿಕಾಯಾದಿಗಳ ವಧವನ್ನು ಕೇಳಿ ವ್ಯಸನಪೀಡಿತನಾಗಿ, ರಾಮನ ಪರಾಕ್ರಮಕ್ಕಾಗಿ ತನಗೆ ತಾನೇ ಮೆಚ್ಚುತ್ತ, ನಗರರಕ್ಷಣಕ್ಕಾಗಿ ಭೃತ್ಯರನ್ನು ನಿಯೋಗಿಸಿ, ಪುತ್ರದುಃಖದಿಂದ ತಾನು ಅಂತಃಪುರಕ್ಕೆ ಹೋದುದು. 109

73 ಇಂದ್ರಜಿತ್ತು ರಾವಣನನ್ನು ಸಮಾಧಾನಪಡಿಸಿ, ಅಭಿಚಾರಿಕ ಹೋಮವನ್ನು ಮಾಡಿ, ಬ್ರಹ್ಮಾಸ್ತ್ರದಿಂದ ರಾಮಲಕ್ಷ್ಮಣರನ್ನೂ ವಾನರಯೂಥಪತಿಗಳನ್ನೂ ಮೂರ್ಛೆಹೊಂದಿಸಿದುದು. 111

74 ಜಾಂಬವಂತನ ಮಾತಿನಮೇಲೆ ಹನುಮಂತನು ಹಿಮವಂತದ ಪಕ್ಕದಲ್ಲಿದ್ದ ಓಷಧಿಪರ್ವತವನ್ನು ತಂದುದು. ಅದರೊಳಗಿನ ದಿವ್ಯೌಷಧಿಗಂಧವನ್ನು ಮೂಸಿನೋಡಿದಮಾತ್ರಕ್ಕೆ ರಾಮಲಕ್ಷ್ಮಣಾದಿಗಳೆಲ್ಲರೂ ಮೂರ್ಛೆತಿಳಿದುದು. 119

75 ಆ ರಾತ್ರಿಯ ಬೆಳಗಿನ ಜಾವದಲ್ಲಿ ಸುಗ್ರೀವಾಜ್ಞೆಯಿಂದ ವಾನರಯೂಥಪತಿಗಳು ಕೊಳ್ಳಿಗಳನ್ನು ಹಿಡಿದು, ಪ್ರಾಕಾರವನ್ನು ದಾಟಿ ಲಂಕೆಗೆ ನುಗ್ಗಿದುದು. ರಾವಣನು ಕೋಪಗೊಂಡು ಕುಂಭಕರ್ಣನ ಪುತ್ರ

ರಾದ ಕುಂಭನಿಕುಂಭರಿಬ್ಬರನ್ನೂ ಯೂಪಾಕ್ಷವಿರೂಪಾಕ್ಷಾದಿಗಳೊಡನೆ ಸೇರಿಸಿ ಯುದ್ಧಕ್ಕೆ ಕಳುಹಿಸಿದುದು. ತುಮುಲಯುದ್ಧವು. 129

76 ಅಂಗದನು ಅಕಂಪನಪ್ರಜಂಘರನ್ನೂ, ದ್ವಿವಿದನು ಶೋಣಿತಾಕ್ಷನನ್ನೂ ಮೈಂದನು ಯೂಪಾಕ್ಷನನ್ನೂ, ಸುಗ್ರೀವನು ಕುಂಭನನ್ನೂ ಕೊಂದುದು. 138

77 ನಿಕುಂಭನು ಹನುಮಂತನನ್ನಿದಿರಿಸಿ, ಅವನಿಂದ ಸಂಹೃತನಾದುದು. 147

78 ಮಕರಾಕ್ಷನು ಯುದ್ಧಕ್ಕೆ ಹೊರಟುದು. 150

79 ಶ್ರೀರಾಮನು ಮಕರಾಕ್ಷನನ್ನು ಕೊಂದುದು. 152

80 ತಿರುಗಿ ಇಂದ್ರಜಿತ್ತು ಯುದ್ಧರಂಗಕ್ಕೆ ಬಂದು, ಅಭಿಚಾರಿಕ ಹೋಮವನ್ನಾರಂಭಿಸಿ ರಾಮಾದಿಗಳನ್ನು ಪೀಡಿಸಿದುದು. ಲಕ್ಷ್ಮಣನು ಇಂದ್ರಜಿತ್ತಿನ ಚೇಷ್ಟೆಯನ್ನು ಸಹಿಸಲಾರದೆ, ಸರ್ವರಾಕ್ಷಸವಧಾರ್ಥವಾಗಿ ಬ್ರಹ್ಮಾಸ್ತ್ರವನ್ನು ಪ್ರಯೋಗಿಸುವುದಕ್ಕೆ ನಿಶ್ಚಯಿಸಿ, ಅದಕ್ಕಾಗಿ ರಾಮನ ಅನುಜ್ಞೆಯನ್ನು ಕೇಳಲು, ರಾಮನು ಅವನನ್ನು ನಿವಾರಿಸಿದುದು. 158

81 ಇಂದ್ರಜಿತ್ತು ಹನುಮಂತನು ನೋಡುತ್ತಿರುವಾಗ ಮಾಯಾಸೀತೆಯನ್ನು ಛೇದಿಸಿದುದು. 162

82 ಹನುಮಂತನು ಭಯದಿಂದೋಡುತ್ತಿದ್ದ ವಾನರರನ್ನು ತಡೆದು ನಿಲ್ಲಿಸಿ, ರಾಕ್ಷಸಸೈನ್ಯವನ್ನು ಧ್ವಂಸಮಾಡಿ, ಸೀತಾವಧವನ್ನು ರಾಮನಿಗೆ ತಿಳಿಸುವುದಕ್ಕಾಗಿ ವಾನರಸೈನ್ಯದೊಡನೆ ರಾಮನ ಬಳಿಗೆ ಹೋದುದು. ಇತ್ತಲಾಗಿ ಇಂದ್ರಜಿತ್ತು ನಿಕುಂಭಿಲೆಯಲ್ಲಿ ಹೋಮವನ್ನಾರಂಭಿಸಿದುದು. 168

83 ಇಂದ್ರಜಿತ್ತು ಸೀತೆಯನ್ನು ಕೊಂದನೆಂದು ಹನುಮಂತನು ರಾಮನಿಗೆ ತಿಳಿಸಿದುದು. ರಾಮನ ವ್ಯಸನವು. ಲಕ್ಷ್ಮಣನು ರಾಮನಿಗೆ ಸಮಾಧಾನವನ್ನು ಹೇಳಿದುದು. 171

84 ವಿಭೀಷಣನು ರಾಮನನ್ನು ಸಮಾಧಾನಪಡಿಸಿ, 'ಇಂದ್ರಜಿತ್ತಿನ ವಧಕ್ಕಾಗಿ ಲಕ್ಷ್ಮಣನನ್ನು ಕಳುಹಿಸುವಂತೆ ಪ್ರಾರ್ಥಿಸಿದುದು. 176

85 ರಾಮನು ವಿಭೀಷಣನ ವಚನದಿಂದ ಧೈರ್ಯವನ್ನು ಹೊಂದಿ, ಇಂದ್ರಜಿತ್ತನ್ನು ಕೊಲ್ಲುವುದಕ್ಕಾಗಿ ವಿಭೀಷಣಾದಿಗಳೊಡನೆ ಲಕ್ಷ್ಮಣನನ್ನು ನಿಕುಂಭಿಲೆಗೆ ಕಳುಹಿಸಿದುದು. 176h

86 ಲಕ್ಷ್ಮಣನೂ, ಹನುಮದಾದಿವಾನರರೂ ನಿಕುಂಭಿಲೆಯ ಸುತ್ತಲೂ ಕಾವಲಾಗಿ ನಿಲ್ಲಿಸಲ್ಪಟ್ಟಿದ್ದ ರಾಕ್ಷಸಸೇನೆಯನ್ನು ನಾಶಮಾಡಿದುದು. ಇದನ್ನು ಕೇಳಿ ಇಂದ್ರಜಿತ್ತು ಕೋಪಗೊಂಡು ತನ್ನ ಹೋಮಕಾರ್ಯವು ಮುಗಿಯುವು ದಕ್ಕೆ ಮೊದಲೇ ಯುದ್ಧಕ್ಕೆ ಬಂದುದು. 176k

87 ವಿಭೀಷಣನು ಲಕ್ಷ್ಮಣನಿಗೆ ನಿಕುಂಭಿಲೆಯೆಂಬ ನ್ಯಗ್ರೋಧ ಮೂಲವನ್ನು ತೋರಿಸಿ, ಇಂದ್ರಜಿತ್ತು ಆ ಸ್ಥಳಕ್ಕೆ ಬರುವುದಕ್ಕೆ ಮೊದಲೇ ಅವನನ್ನು ಕೊಲ್ಲಬೇಕೆಂದು ಹೇಳಿದುದು. ಈ ಮರ್ಮಗಳನ್ನು ಲಕ್ಷ್ಮಣನಿಗೆ ತಿಳಿಸಿದುದಕ್ಕಾಗಿ ಇಂದ್ರಜಿತ್ತು ವಿಭೀಷಣನನ್ನು ನಿಂದಿಸಿದುದು. ವಿಭೀಷಣನ ಪ್ರತ್ಯುತ್ತರವು. 176o

88 ಲಕ್ಷ್ಮಣನೂ ಇಂದ್ರಜಿತ್ತೂ ಪರಸ್ಪರವೀರಾಲಾಪಗಳೊಡನೆ ಒಬ್ಬರಮೇಲೊಬ್ಬರು ಬಾಣಗಳನ್ನು ಪ್ರಯೋಗಿಸಿದುದು. 176t

89 ಇಂದ್ರಜಿತ್ತಿಗೂ ಲಕ್ಷ್ಮಣನಿಗೂ ನಡೆದ ಮಹಾಯುದ್ಧವು. 176x

90 ವಿಭೀಷಣನು ಇಂದ್ರಜಿತ್ತಿನ ಪರಿವಾರಗಳನ್ನು ಕೊಲ್ಲುವು ದಕ್ಕಾಗಿ ವಾನರವೀರರನ್ನು ಪ್ರೋತ್ಸಾಹಪಡಿಸಿದುದು. ಲಕ್ಷ್ಮಣನು ಇಂದ್ರ ಜಿತ್ತಿನ ಸಾರಥಿಯನ್ನೂ ಪ್ರಮಾಥಿ ಮೊದಲಾದ ವಾನರರು ಅವನ ರಥಾಶ್ವ ಗಳನ್ನೂ ಕೊಂದುದು. 177

91 ಇಂದ್ರಜಿತ್ತು ಬೇರೆ ರಥವನ್ನೇರಿ ಬರಲು, ತಿರುಗಿ ಲಕ್ಷ್ಮಣನು ಅವನ ರಥಾಶ್ವಗಳನ್ನು ಕೊಂದುದು. ಕೊನೆಗೆ ಲಕ್ಷ್ಮಣನಿಂದ ಇಂದ್ರಜಿತ್ತು ಹತನಾದುದು. 182

92 ಲಕ್ಷ್ಮಣನು ವಿಭೀಷಣಾದಿಗಳೊಡನೆ ರಾಮನ ಬಳಿಗೆ ಬಂದು, ಅವನಿಗೆ ಇಂದ್ರಜಿದ್ವಧವನ್ನು ತಿಳಿಸಿದುದು. ರಾಮನು ಲಕ್ಷ್ಮಣನನ್ನಾಲಿಂ ಗಿಸಿ, ವಾನರರೆಲ್ಲರನ್ನೂ ಶ್ಲಾಘಿಸಿದುದು. ರಾಮಾಜ್ಞೆಯಿಂದ ಸುಷೇಣನು ಲಕ್ಷ್ಮಣಾದಿಗಳ ದೇಹದಲ್ಲಿ ನಾಟಿದ್ದ ಬಾಣಗಳನ್ನು ಕಿತ್ತು ಅವರ ನೋವನ್ನಾರಿಸಿ ಉಪಚರಿಸಿದುದು. 191

93 ರಾವಣನು ಪುತ್ರಶೋಕದಿಂದ ವಿಲಪಿಸುತ್ತ, ಕೋಪದಿಂದ ಸೀತೆಯನ್ನು ಕೊಲ್ಲುವುದಾಗಿ ನಿಶ್ಚಯಿಸಿ, ಅಶೋಕವನಕ್ಕೆ ಹೊರಟುದು. ಸುಪಾರ್ಶ್ವನೆಂಬ ಮಂತ್ರಿಯು ಯುಕ್ತಿಯುಕ್ತವಾದ ಮಾತಿನಿಂದ ಅವನನ್ನು ತಡೆದುದು. 194

94 ಶ್ರೀರಾಮನು ಯುದ್ಧಕ್ಕೆ ಬಂದ ರಾವಣನ ಮೂಲಬಲವನ್ನು ಕೊಂದುದು. 203

95 ಬಂಧುಮರಣಕ್ಕಾಗಿ ರಾಕ್ಷಸ ಸ್ತ್ರೀಯರ ವಿಲಾಪವು. 209

96 ರಾವಣನು ಮಹೋದರ ಮಹಾಪಾರ್ಶ್ವ ವಿರೂಪಾಕ್ಷರೆಂಬ ಮೂವರು ಮಂತ್ರಿಗಳೊಡಗೂಡಿ ಲಂಕೆಯ ಉತ್ತರದ್ವಾರದಿಂದ ಯುದ್ಧಕ್ಕೆ ಹೊರಟುದು. ರಾವಣನಿಗೆ ದಾರಿಯಲ್ಲಿ ದುರ್ನಿಮಿತ್ತಗಳು ಕಂಡುಬಂದುದು. ರಾವಣನು ವಾನರಸೇನೆಯೊಡನೆ ಯುದ್ಧಮಾಡಿದುದು. 214

97 ಸುಗ್ರೀವನು ವಿರೂಪಾಕ್ಷನನ್ನು ಕೊಂದುದು. 219

98 ಮಹೋದರನು ಸುಗ್ರೀವನಿಂದ ಹತನಾದುದು. 223

99 ಅಂಗದನು ರಾವಣಮಂತ್ರಿಯಾದ ಮಹಾಪಾರ್ಶ್ವನನ್ನು ಕೊಂದುದು. 227

100 ರಾಮರಾವಣರ ಯುದ್ಧಾರಂಭವು. 230

101 ರಾಮನು ಸ್ವಲ್ಪ ವಿಶ್ರಾಂತಿಯನ್ನು ಹೊಂದಿದಾಗ, ಲಕ್ಷ್ಮಣ ವಿಭೀಷಣರಿಬ್ಬರೂ ರಾವಣನ ರಥಾಶ್ವಸಾರಥಿಗಳನ್ನು ಧ್ವಂಸಮಾಡಿದುದು. ರಾವಣನು ವಿಭೀಷಣನಮೇಲೆ ಪ್ರಯೋಗಿಸಿದ ಶಕ್ತಿಯನ್ನು ಲಕ್ಷ್ಮಣನು ಖಂಡಿಸಿದುದು. ರಾವಣನ ಮಯನಿರ್ಮಿತವಾದ ಅಮೋಘಶಕ್ತಿಯಿಂದ ಲಕ್ಷ್ಮಣನ ಮೂರ್ಛೆ. ರಾವಣನ ಪಲಾಯನವು. 235

102 ರಾಮನು ಲಕ್ಷ್ಮಣನನ್ನು ಕುರಿತು ವಿಲಪಿಸಿದುದು. ಸುಷೇಣನ ಮಾತಿನಿಂದ ಹನುಮಂತನು ಓಷಧಿಪರ್ವತವನ್ನು ತಂದುದು. ಸುಷೇಣನು ದಿವ್ಯೌಷಧಿರಸವನ್ನು ಲಕ್ಷ್ಮಣನ ಮೂಗಿಗೆ ಹಿಂಡಲು, ಲಕ್ಷ್ಮಣನು ವಿಶಲ್ಯನಾಗಿ ಸುಖದಿಂದೆದ್ದುದು. 242

103 ಇಂದ್ರನು ರಾಮನಿಗಾಗಿ ಮಾತಲಿಯೊಡನೆ ತನ್ನ ರಥವನ್ನು ಕಳುಹಿಸಿಕೊಡಲು, ರಾಮನು ಆ ರಥವನ್ನೇರಿ ಕುಳಿತು ಯುದ್ಧವನ್ನಾರಂಭಿಸಿದುದು. ಆಗ ಲೋಕಭಯಂಕರಗಳಾದ ಮಹೋತ್ಪಾತಗಳು ತಲೆದೋರಿದುದು. 248

104 ರಾಮನು ತನಗೆ ಇಂದ್ರದತ್ತವಾದ ಶಕ್ತಿಯಿಂದ ರಾವಣನ ಶೂಲವನ್ನು ಮುರಿದು, ಆತನ ರಥಾಶ್ವಗಳನ್ನು ಪ್ರಹರಿಸಿದುದು. 252

105 ರಾಮನು ರಾವಣನಮೇಲೆ ಶರಂಪರೆಯಾಗಿ ಬಾಣಗಳನ್ನು ವರ್ಷಿಸಿದುದು. ರಾಮಬಾಣಗಳಿಂದ ರಾವಣನು ಮೈಮರೆತಿದ್ದುನ್ನು ನೋಡಿ, ಅವನ ಸಾರಥಿಯು ರಥವನ್ನು ಹಿಂತಿರುಗಿಸಿದುದು. 255

106 ರಾವಣನು ಕ್ಷಣಕಾಲದಮೇಲೆ ಚೇತರಿಸಿಕೊಂಡು, ಸಾರಥಿಯಮೇಲೆ ಕೋಪಗೊಂಡು ಅವನನ್ನು ಹೆದರಿಸಿದುದು. ಸಾರಥಿಯು ತಕ್ಕಕಾರಣವನ್ನು ತಿಳಿಸಿ, ರಾವಣನನ್ನು ಸಮಾಧಾನಪಡಿಸಿ ತಿರುಗಿ ರಾವಣಾಜ್ಞೆಯಿಂದ ರಥವನ್ನು ರಣಾಗ್ರಕ್ಕೆ ತಂದುದು. 259

107 ಅಗಸ್ತ್ಯಮಹಾಮುನಿಯು ರಾಮನಿಗೆ ಆದಿತ್ಯ ಹೃದಯವನ್ನುಪದೇಶಿಸಲು, ರಾಮನು ಆ ಸ್ತೋತ್ರವನ್ನು ಜಪಿಸಿ ಸೂರ್ಯಾನುಗ್ರಹವನ್ನು ಪಡೆದುದು. 262

108 ರಾವಣನಿಗೆ ಮರಣಸೂಚಕಗಳಾದ ದುರ್ನಿಮಿತ್ತಗಳು ತೋರಿದುದು. 278

109 ರಾವಣನು ರಾಮನ ರಥವನ್ನು ಭೇದಿಸುವುದಕ್ಕಾಗಿ ಬಿಟ್ಟ ಬಾಣವು ನಿರರ್ಥಕವಾಗಿ ಕೆಳಗೆ ಬಿದ್ದುದು. ರಾಮನು ರಾವಣನ ರಥಧ್ವಜವನ್ನು ಭೇದಿಸಿದುದು. 282

110 ಶ್ರೀರಾಮನು ರಾವಣನ ಒಂದೊಂದು ತಲೆಯನ್ನು ಕತ್ತರಿಸುತ್ತ ಬಂದ ಹಾಗೆಲ್ಲಾ, ತಿರುತಿರುಗಿ ಆದೇಸ್ಥಾನದಲ್ಲಿ ಹೊಸತಲೆಯು ಮೊಳೆಯುತ್ತಿದ್ದುದು. ಇದೇ ರೀತಿಯಲ್ಲಿ ರಾಮನು ನೂರೊಂದಾವೃತ್ತಿ ತಲೆಗಳನ್ನು ಖಂಡಿಸಿದುದು. 285

111 ರಾಮನು ಬ್ರಹ್ಮಾಸ್ತ್ರದಿಂದ ರಾವಣನನ್ನು ವಧಿಸಿದುದು. 290

112 ವಿಭೀಷಣನು ತನ್ನಣ್ಣನ ವಧಕ್ಕಾಗಿ ವಿಲಪಿಸುವುದನ್ನು ನೋಡಿ, ರಾಮನು ಆ ವಿಭೀಷಣನ ದುಃಖವನ್ನು ನಿವಾರಿಸುವುದಕ್ಕಾಗಿ ಹಿತವಾಕ್ಯಗಳನ್ನು ಹೇಳಿದುದು. 294

113 ಪತಿಮರಣಕ್ಕಾಗಿ ರಾವಣಪತ್ನಿಯರ ವಿಲಾಪವು. 300

114 ಮಂಡೋದರಿಯ ವಿಲಾಪವು ವಿಭೀಷಣನು ರಾಮಾಜ್ಞೆಯಿಂದ ರಾವಣನಿಗೆ ಅಪರಸಂಸ್ಕಾರಗಳನ್ನು ನಡೆಸಿದುದು. 303

115 ರಾಮಾಜ್ಞೆಯಿಂದ ಲಕ್ಷ್ಮಣನು ಲಂಕೆಯಲ್ಲಿ ವಿಭೀಷಣನಿಗೆ ರಾವಣನ ಸಿಂಹಾಸನದ ಮೇಲೆ ಪಟ್ಟವನ್ನು ಕಟ್ಟಿದುದು. ಪಟ್ಟಾಭಿಷಿಕ್ತನಾದ ವಿಭೀಷಣನು ಪ್ರಜೆಗಳನ್ನು ಸಂತೋಷಪಡಿಸಿ,ಹಿಂತಿರುಗಿ ಬಂದುದು, ರಾಮನು ಸೀತೆಗೆ ತನ್ನ ಜಯವನ್ನು ತಿಳಿಸುವುದಕ್ಕಾಗಿ ಹನುಮಂತನನ್ನು ಕಳುಹಿಸಿದುದು, 320

116 ಹನುಮಂತನು ಸೀತೆಗೆ ರಾಮನ ಜಯವನ್ನು ತಿಳಿಸಿ, ಅವಳ ಸಂದೇಶವನ್ನು ತೆಗೆದುಕೊಂಡು ರಾಮನ ಬಳಿಗೆ ಬಂದುದು. 323

117 ರಾಮನಿಯೋಗದಿಂದ ವಿಭೀಷಣನು ಸೀತೆಗೆ ಸ್ನಾನಾಲಂಕಾರಗಳನ್ನು ಮಾಡಿಸಿ ಕರೆತಂದುದು. ಸೀತೆಯು ಸ್ನೇಹಸಂತೋಷಗಳಿಂದ ಶ್ರೀರಾಮನ ಮುಖಕಮಲವನ್ನು ನೋಡಿದುದು. 331

118 ರಾಮನು ಸೀತೆಯನ್ನು ನೋಡಿ ಬಹುಕಾಲದಿಂದ ಆಕೆಯು ರಾವಣಗೃಹದಲ್ಲಿದ್ದುದಕ್ಕಾಗಿ ಪರುಷವಾಕ್ಯವನ್ನಾಡಿದುದು. 336

119 ಸೀತೆಯು ರಾಮನ ಮಾತಿಗೆ ಪ್ರತ್ಯುತ್ತರವನ್ನು ಹೇಳಿ, ಆತನಿಗೆ ತನ್ನ ನಡತೆಯಲ್ಲಿ ನಂಬಿಕೆಯನ್ನು ಹುಟ್ಟಿಸುವುದಕ್ಕಾಗಿ ಅಗ್ನಿ ಪ್ರವೇಶ ಮಾಡಿದುದು. 340

120 ಬ್ರಹ್ಮಾದಿದೇವತೆಗಳು ವಿಮಾನಾರೂಢರಾಗಿ ಶ್ರೀರಾಮನ ಸನ್ನಿಧಿಗೆ ಬಂದು ರಾಮನನ್ನು ಸ್ತುತಿಸಿದುದು. 344

121 ಅಗ್ನಿಪುರುಷನು ಚಿತೆಯ ಮಧ್ಯದಿಂದ ಸೀತೆಯನ್ನೆತ್ತಿ ತಂದು ರಾಮನಿಗೊಪ್ಪಿಸಿ, ಆಕೆಯ ಪಾತಿವ್ರತ್ಯವನ್ನು ಶ್ಲಾಘಿಸಿದುದು. ಶ್ರೀರಾಮನು

ಸೀತೆಯ ಚರಿತ್ರವನ್ನು ಕೊಂಡಾಡಿ, ಆಕೆಯನ್ನು ಸ್ವೀಕರಿಸಿದುದು. ಸೀತಾರಾಮರಿಗೆ ಪರಸ್ಪರ ಸಮಾಗಮದಿಂದುಂಟಾದ ನಿರತಿಶಯಾನಂದವು. 355

122 ರುದ್ರನು ರಾಮನನ್ನು ಸ್ತುತಿಸಿ, ಸ್ವರ್ಗದಲ್ಲಿ ದಿವ್ಯಶರೀರದಿಂದಿದ್ದ ದಶರಥನನ್ನು ಕರೆಸಿ ತೋರಿಸಿದುದು. ರಾಮಾದಿಗಳೆಲ್ಲರೂ ದಶರಥನಿಗೆ ನಮಸ್ಕರಿಸಿದುದು. ದಶರಥನು ಸ್ವಸ್ಥಾನಕ್ಕೆ ಹಿಂತಿರುಗಿ ಹೋದುದು. 359

123 ಯುದ್ಧದಲ್ಲಿ ಹತರಾದ ವಾನರಭಲ್ಲೂಕಾದಿಸೈನಿಕರೆಲ್ಲರೂ ಇಂದ್ರಾನುಗ್ರಹದಿಂದ ಪುನರ್ಜೀವನವನ್ನು ಹೊಂದಿದುದು. ದೇವತೆಗಳು ತಮ್ಮ ತಮ್ಮ ಸ್ಥಾನಗಳಿಗೆ ಹೋದುದು. 363

124 ವಿಭೀಷಣನು ರಾಮನಿಗೆ ಮಂಗಳಸ್ನಾನವನ್ನು ಮಾಡಿಸುವುದಾಗಿ ಪ್ರಾರ್ಥಿಸಲು, ರಾಮನು ಭರತನನ್ನು ಬಿಟ್ಟು ತಾನು ಅದನ್ನು ನಡೆಸಲಾರೆನೆಂದು ಹೇಳಿದುದು. ತಿರುಗಿ ವಿಭೀಷಣನು ರಾಮನನ್ನು ಲಂಕೆಯಲ್ಲಿ ಎರಡುಮೂರು ದಿನಗಳಿದ್ದು ಹೋಗಬೇಕೆಂದು ಪ್ರಾರ್ಥಿಸಲು ರಾಮನು ಅದಕ್ಕೂ ಒಪ್ಪದೆ, ಭರತನನ್ನು ನೋಡುವ ಆತುರದಿಂದ ಪ್ರಯಾಣಕ್ಕಾಗಿ ಪುಷ್ಪಕವಿಮಾನವನ್ನು ತರುವಂತೆ ಹೇಳಿದುದು. 366

125 ರಾಮಾಜ್ಞೆಯಿಂದ ವಿಭೀಷಣನು ಸಮಸ್ತವಾನರರನ್ನೂ ಬಹುಮಾನಿಸಿದುದು. ಶ್ರೀರಾಮನು ತನ್ನೊಡನೆ ಬರಬೇಕೆಂದಪೇಕ್ಷಿಸಿದ ಸುಗ್ರೀವಾದಿ ವಾನರರೊಡನೆಯೂ, ವಿಭೀಷಣನೊಡನೆಯೂ ಆತನ ಮಂತ್ರಿಗಳೊಡನೆಯೂ ಸೇರಿ, ಸೀತಾಲಕ್ಷ್ಮಣಸಹಿತನಾಗಿ ಪುಷ್ಪಕವನ್ನೇರಿ ಅಯೋಧ್ಯೆಗೆ ಪ್ರಯಾಣ ಮಾಡಿದುದು. 370

126 ರಾಮನು ವಿಮಾನವನ್ನೇರಿ ಬರುವಾಗ, ದಾರಿಯಲ್ಲಿ ಲಂಕೆಯಿಂದ ಅಯೋಧ್ಯೆಯವರೆಗೆ ಅಲ್ಲಲ್ಲಿನ ವಿಶೇಷಗಳನ್ನು ಸೀತೆಗೆ ತಿಳಿಸುತ್ತ ಬಂದುದು. ಕಿಷ್ಕಿಂಧೆಯ ಸಮೀಪದಲ್ಲಿ ಸೀತಾಪ್ರಾರ್ಥನೆಯಿಂದ ಸುಗ್ರೀವಾದಿ ವಾನರಪತ್ನಿಯರನ್ನೂ ಪುಷ್ಪಕದಲ್ಲಿ ಏರಿಸಿಕೊಂಡು ಭರದ್ವಾಜಾಶ್ರಮವನ್ನು ಸೇರಿದುದು. 373

127 ರಾಮನು ಭರದ್ವಾಜಮುನಿಯಿಂದ ಅಯೋಧ್ಯೆಯಲ್ಲಿ ಭರತಾದಿಗಳ ಕ್ಷೇಮವನ್ನು ತಿಳಿದು, ಆತನ ಪ್ರಾರ್ಥನೆಯಿಂದ ಆ ಆಶ್ರಮದಲ್ಲಿಯೇ

ಆ ದಿನವನ್ನು ಕಳೆದುದು. ಭರದ್ವಾಜಮುನಿಯು ತನ್ನಾಶ್ರಮದಿಂದ ಅಯೋಧ್ಯೆಯವರೆಗೂ ದಾರಿಯು ಪುಷ್ಪಫಲಸಮೃದ್ಧವಾಗಿರುವಂತೆ ಅನು ಗ್ರಹಿಸಿದುದು. 381

128 ರಾಮಾಜ್ಞೆಯಿಂದ ಹನುಮಂತನು ಮುಂದಾಗಿ ಹೊರಟು ಶೃಂಗಿಬೇರಪುರದಲ್ಲಿ ಗುಹನಿಗೂ, ನಂದಿಗ್ರಾಮದಲ್ಲಿ ಭರತನಿಗೂ, ರಾಮಾ ಗಮನ ವೃತ್ತಾಂತವನ್ನು ತಿಳಿಸಿದುದು. 386

129 ಭರತನು ಕೇಳಿದುದರಮೇಲೆ ಹನುಮಂತನು ರಾಮನ ವನವಾಸ ವೃತ್ತಾಂತಗಳೆಲ್ಲವನ್ನೂ ಕ್ರಮವಾಗಿ ಹೇಳಿ ತಿಳಿಸಿದುದು. 392

130 ಭರತನು ಅಯೋಧ್ಯಾನಗರವನ್ನಲಂಕರಿಸುವಂತೆ ಆಜ್ಞೆಮಾಡಿ ದುದು. ನಟನರ್ತಕಾದಿಗಳೊಡನೆ ಪುರಜನಪರಿವಾರಗಳೆಲ್ಲವೂ ರಾಮದರ್ಶ ನಾರ್ಥವಾಗಿ ನಂದಿಗ್ರಾಮಕ್ಕೆ ಬಂದುದು. ಭರತನು ಈ ಸಮಸ್ತಪರಿ ವಾರಗಳೊಡನೆ ಹೊರಟು ರಾಮನನ್ನಿದಿರುಗೊಂಡು ತನ್ನಾಶ್ರಮಕ್ಕೆ ಕರೆ ತಂದುದು. ರಾಮನು ಪುಷ್ಪಕವಿಮಾನವನ್ನು ಕುಬೇರನಿಗೆ ಕೊಟ್ಟು, ಭರತಾಶ್ರಮದಲ್ಲಿ ವಸಿಷ್ಠಾದಿಗಳೊಡನೆ ಉಚಿತಾಸನದಲ್ಲಿ ಕುಳಿತುದು. 399

131 ಭರತನ ಪ್ರಾರ್ಥನೆಯಮೇಲೆ ರಾಮನು ರಾಜ್ಯವನ್ನಂಗೀಕ ರಿಸುವುದಕ್ಕೆ ಸಮ್ಮತಿಸಿ, ಲಕ್ಷ್ಮಣಸಹಿತನಾಗಿ ಜಟಾವಲ್ಕಲಗಳನ್ನು ತೆಗೆದು ಮಂಗಳ ಸ್ನಾನವನ್ನು ಮಾಡಿ ಸುಗ್ರೀವಾದಿಗಳೊಡನೆ ದಿವ್ಯರಥ ವನ್ನೇರಿ ಅಯೋಧ್ಯೆಗೆ ಬಂದುದು. ಅಲ್ಲಿ ಮಾಣಿಕ್ಯಮಂಟಪದ ನಡುವೆ ದಿವ್ಯಸಿಂಹಾಸನವನ್ನೇರಿ ಕುಳಿತುದು. ವಸಿಷ್ಠಾದಿಮಹರ್ಷಿಗಳು ತೀರ್ಥೋ ದಕದಿಂದ ಅಭಿಷೇಕವನ್ನು ನಡೆಸಿದುದು. ವಿಭೀಷಣಾದಿಗಳು ರಾಮ ನಿಂದ ಸತ್ಕೃತರಾಗಿ, ತಮ್ಮತಮ್ಮ ಸ್ಥಾನಗಳಿಗೆ ಹಿಂತಿರುಗಿದುದು. ಭರ ತನಿಗೆ ಯೌವರಾಜ್ಯಾಭಿಷೇಕವು. ರಾಮರಾಜ್ಯ ವೈಭವವು. ಫಲಶ್ರುತಿ. 407

ಶ್ರೀಃ

ಶ್ರೀರಾಮಚಂದ್ರ ಪರಬ್ರಹ್ಮಣೇ ನಮಃ

ಶ್ರೀಮದ್ವಾಲ್ಮೀಕಿ ರಾಮಾಯಣವು

ಯುದ್ಧಕಾಂಡವು

ದ್ವಿತೀಯ ಭಾಗವು

ರಾವಣನು ರಾಮಬಾಣಗಳ ಬಾಧೆಯಿಂದ ಬಹಳವಾಗಿ ನೊಂದು ಕುಂಭಕರ್ಣನನ್ನು ನಿದ್ರೆಯಿಂದೆಬ್ಬಿಸಿ ಕರೆತರುವಂತೆ ನಿಯಮಿಸಿದುದು. ಕುಂಭಕರ್ಣನು ಬಂದು ರಾವಣನನು ನಿಂದಿಸಿದುದು. ರಾಮನ ಕೋಪವು. ಕುಂಭಕರ್ಣನು ರಾವಣನಿಗೆ ಕೋಪಸಮಾಧಾನವನ್ನು ಮಾಡಿ ಯುದ್ಧಕ್ಕೆ ಹೊರಟುದು.

ಅತ್ತಲಾಗಿ ರಾವಣನು ಲಂಕೆಯನ್ನು ಪ್ರವೇಶಿಸಿ, ಅನವರತವೂ ರಾಮಬಾಣಗಳ ಭಯದಿಂದ ಕೊಬ್ಬಡಗಿ ಕಳವಳಿಸುತ್ತಿದ್ದನು. ಸಿಂಹದಿಂದ ಆನೆಗೂ, ಗರುಡನಿಂದ ಸರ್ಪಕ್ಕೂ ಭಂಗವುಂಟಾದಂತೆ, ಮಹಾತ್ಮನಾದ ರಾಮನಿಂದ ರಾವಣನಿಗೆ ದೊಡ್ಡ ಪರಾಭವವುಂಟಾಯಿತು. ಆ ರಾವಣನು ರಾಕ್ಷಸಚಕ್ರವರ್ತಿಯೆನಿಸಿಕೊಂಡಿದ್ದರೂ ಕೂಡ, ಬ್ರಹ್ಮದಂಡದಂತೆ ತೇಜೋವಿಶಿಷ್ಟಗಳಾಗಿಯೂ, ಮಿಂಚಿಗೆ ಸಮಾನವಾದ ಜ್ವಾಲೆಯುಳ್ಳವುಗಳಾಗಿಯೂ ಇದ್ದ ರಾಮಬಾಣಗಳನ್ನು ಸ್ಮರಿಸಿಕೊಂಡಹಾಗೆಲ್ಲಾ ಭಯದಿಂದ ತತ್ತಳಿಸುತ್ತಿದ್ದನು. ಹೀಗೆ ಭಯಗ್ರಸ್ತನಾದ ರಾವಣನು, ಸುವರ್ಣಮಯವಾದ ತನ್ನ ದಿವ್ಯಾಸನದಲ್ಲಿ ಕುಳಿತಿದ್ದಹಾಗೆಯೇ ತನ್ನ ಮುಂದಿದ್ದ ರಾಕ್ಷಸರನ್ನು ನೋಡಿ, "ಎಲೈ ರಾಕ್ಷಸದೂತರೆ! ಮಹೇಂದ್ರಸಮಾನನಾದ ನಾನು, ಕೇವಲ ಮನುಷ್ಯಮಾತ್ರನಾದ ಆ ರಾಮನಿಂದ ಹಾಗೆ ಪರಾಭವವನ್ನು ಹೊಂದಿ ಬಂದೆನಲ್ಲವೆ? ಎಷ್ಟು ತಪೋಬಲವಿದ್ದರೇನು? ನಾನು ಮಾಡಿದ ತಪಸ್ಸೆಲ್ಲವೂ ವ್ಯರ್ಥವು. ಮೊದಲೇ ಬ್ರಹ್ಮದೇವನು ನನ್ನನ್ನು ಕುರಿತು "ನಿನಗೆ ಮನುಷ್ಯನಿಂದ ಮಾತ್ರ ಎಂದಿಗೂ ಭಯವು ತಪ್ಪದು" ಎಂದು

ಹೇಳಿದ್ದನು. ಆಗ ಅವನು ಹೇಳಿದ ಭಯಂಕರವಾಕ್ಯಕ್ಕೆ ಈಗ ನನಗೆ ಚೆನ್ನಾಗಿ ಫಲವು ಕಂಡುಬಂದಿತು. ಬ್ರಹ್ಮದೇವನ ವಾಕ್ಯವು ಸುಳ್ಳಾಗುವುದೆಂದರೇನು? ದೇವ ದಾನವ ಯಕ್ಷ ರಾಕ್ಷಸ ನಾಗ ಗಂಧರ್ವರಲ್ಲಿ ಯಾರೊಬ್ಬರಿಂದಲೂ ಸಾವಿಲ್ಲದಿರುವಂತೆ ನಾನು ಆ ಬ್ರಹ್ಮನಿಂದಲೇ ವರವನ್ನು ಪಡೆದುಬಂದೆನು. ಆದರೆ ನನ್ನ ದುರದೃಷ್ಟಕ್ಕೆ ಮನುಷ್ಯರಿಂದ ಸಾವಿಲ್ಲದಂತೆ ವರವನ್ನು ಕೇಳುವುದಕ್ಕೆ ಆಗ ನನಗೆ ಬಾಯಿಬಾರದೆ ಹೋಯಿತು. ಪೂರ್ವದಲ್ಲಿ ಇಕ್ಷ್ವಾಕುಕುಲನಾಥನಾದ ಅನರಣ್ಯನನ್ನು ನಾನು ಕೊಲ್ಲುವಾಗ, ಅವನೂ ನನ್ನನ್ನು ನೋಡಿ ಕೋಪದಿಂದ "ಎಲೆ ಕುಲಗೇಡಿ! ಎಲೆ ರಾಕ್ಷಸಾಧಮಾ! ಎಲೆ ದುರ್ಬುದ್ಧಿ! ಮುಂದೆ ಯುದ್ಧದಲ್ಲಿ ನಿನ್ನನ್ನು, ನಿನ್ನ ಮನೆಮಂದಿ ಮಕ್ಕಳೊಡನೆಯೂ, ಮಂತ್ರಿಸೇನಾಬಲಾದಿಗಳೊಡನೆಯೂ ವಧಿಸತಕ್ಕ ಮಹಾಪುರುಷನೊಬ್ಬನು ನನ್ನ ವಂಶದಲ್ಲಿಯೇ ಹುಟ್ಟುವನು. ಇದು ನಿಶ್ಚಯವು" ಎಂದು ಪ್ರತಿಜ್ಞಾಪೂರ್ವಕವಾಗಿ ಶಪಿಸಿರುವನು. ಅದರಂತೆಯೇ ಈಗ ಈ ರಾಮನೆಂಬವನು ಅನರಣ್ಯನ ವಂಶದಲ್ಲಿ ದಶರಥಕುಮಾರನಾಗಿ ಹುಟ್ಟಿರುವನೆಂದು ತೋರುವುದು. ನನಗೆ ಮೃತ್ಯುಭೂತನಾಗಿಯೇ ಈತನು ಮನುಷ್ಯರೂಪದಿಂದ ಬಂದಿರುವನು. ಇದಲ್ಲದೆ ಪೂರ್ವದಲ್ಲಿ ನಾನು ವೇದವತಿಯನ್ನು ಬಲಾತ್ಕರಿಸಿ ಭಂಗಪಡಿಸುವುದಕ್ಕೆ ಹೋದಾಗ ಆಕೆಯೂ ನನ್ನನ್ನು ಶಪಿಸಿರುವಳು. ಮಹಾತ್ಮಳಾದ ಆ ವೇದವತಿಯೇ ತನ್ನ ಶಾಪವನ್ನು ಈಡೇರಿಸಿಕೊಳ್ಳುವುದಕ್ಕಾಗಿ ಈಗ ಈ ಜನಕ ಪುತ್ರಿಯಾಗಿ ಹುಟ್ಟಿರುವಳು. ಅದೂ ಅಲ್ಲದೆ, ಪೂರ್ವದಲ್ಲಿ ಪಾರ್ವತಿಯೂ, ನಂದಿಕೇಶ್ವರನೂ, ವರುಣಕನ್ಯೆಯಾದ ಪುಂಜಿಕಸ್ಥಲಿಯೂ ತಮ್ಮ ತಮ್ಮ ತಪಃ ಪ್ರಭಾವಬಲದಿಂದ ಯಾವ ಯಾವ ಸೂಚನೆಗಳನ್ನು ಕೊಟ್ಟಿದ್ದರೋ, ಅವೆಲ್ಲವೂ ಹಾಗೆಯೇ ಆಗಿರುವುವು. ಋಷಿವಚನವು ಎಂದಿಗೂ ಸುಳ್ಳಾಗದು. ಎಲೆ ರಾಕ್ಷಸರೆ! ಈ ಶಾಪಸ್ವರೂಪವೆಲ್ಲವನ್ನೂ ನೀವು ಚೆನ್ನಾಗಿ ಕೇಳಿದಿರಷ್ಟೆ? ಇನ್ನು ಮುಂದೆಯಾದರೂ ಈ ಶತ್ರುವನ್ನು ಗೆಲ್ಲುವ ವಿಷಯದಲ್ಲಿ ನೀವೆಲ್ಲರೂ ಬಹಳ ಎಚ್ಚರಿಕೆಯಿಂದಿರಬೇಕು. ಇನ್ನು ಮೇಲೆ ನಮ್ಮ ಕಡೆಯ ರಾಕ್ಷಸರಲ್ಲಿ, ಕೆಲವರು ಗೋಪುರದ ಪಾರ್ಶ್ವಗಳಲ್ಲಿರುವ ಭಟಸಂಚಾರಪ್ರದೇಶದಲ್ಲಿಯೂ, ಗೋಪುರಶಿಖರಗಳಲ್ಲಿಯೂ, ಬಹಳ

ಜಾಗರೂಕತೆಯಿಂದ ಕಣ್ಣಿಟ್ಟು ಕಾಯುತ್ತಿರಬೇಕು. ಎಲ್ಲಕ್ಕಿಂತಲೂ ಮುಖ್ಯವಾಗಿ, ಈಗ ಮೊದಲು ನಡೆಸಬೇಕಾದ ಕೆಲಸವೇನೆಂದರೆ, ನನ್ನ ತಮ್ಮನಾದ ಕುಂಭಕರ್ಣನನ್ನು ಹೇಗಾದರೂ ಪ್ರಯತ್ನಮಾಡಿ ನಿದ್ರೆಯಿಂ ದೆಬ್ಬಿಸಿ ಕರೆತರಬೇಕು. ಅವನಾದರೋ ಎಣೆಯಿಲ್ಲದ ಗಾಂಭೀರ್ಯವುಳ್ಳವನು. ದೇವದಾನವರ ಕೊಬ್ಬನ್ನಾದರೂ ಮುರಿಯಬಲ್ಲವನು. ಆದರೆ ಪೂರ್ವದಲ್ಲಿ ಅವನಿಗುಂಟಾದ ಬ್ರಹ್ಮಶಾಪದಿಂದ ಯಾವಾಗಲೂ ಅವನು ನಿದ್ರೆಯಿಂದ ಮೈಮರೆತು ಬಿದ್ದಿರುವನು. ಮೊದಲು ನೀವೆಲ್ಲರೂ ಹೋಗಿ ಅವನನ್ನೆಬ್ಬಿ ಸಿರಿ!" ಎಂದನು. ಮಹಾಬಲಾಢ್ಯನಾದ ಆ ರಾವಣನು ಅದಕ್ಕೆ ಮೊದಲು ನಡೆದ ಪ್ರಹಸ್ತವಧವನ್ನೂ, ತನಗುಂಟಾದ ಪರಾಭವವನ್ನೂ ನೆನೆಸಿಕೊಂಡ ಹಾಗೆಲ್ಲಾ ಸಂಕಟಪಡುತ್ತ, ಕುಂಭಕರ್ಣನು ಭಯಂಕರ ಬಲವುಳ್ಳವನೆಂದು ನಿಶ್ಚಯಿಸಿ, ಅವನನ್ನೆಬ್ಬಿಸಿ ಕರೆತರುವುದಕ್ಕಾಗಿ ತಿರುಗಿ ತಿರುಗಿ ರಾಕ್ಷಸರನ್ನು ಪ್ರೇರಿಸುತ್ತ "ಎಲೈ ರಾಕ್ಷಸರೆ! ನಾನು ಹೇಳಿದುದನ್ನು ಕೇಳಿದಿರಷ್ಟೆ? ನಮ್ಮ ಪಟ್ಟಣದ ಸಣ್ಣ ಸಣ್ಣ ದ್ವಾರಗಳಲ್ಲಿ ನೀವೆಲ್ಲರೂ ಎಚ್ಚರದಿಂದ ಕಾದಿರಬೇಕು. ಅಲ್ಲಲ್ಲಿ ಕೆಲವು ರಾಕ್ಷಸಭಟರು ಪ್ರಾಕಾರದ ಗೋಡೆಗಳನ್ನೇರಿ ವಾನರಸೈನ್ಯವು ಒಳಗೆ ಬಾರದಂತೆ ಯತ್ನದಿಂದ ನೋಡಿಕೊಳ್ಳಬೇಕು. ಕೆಲವರು ಹೋಗಿ, ನಿದ್ರೆಯಿಂದ ಮೈಮರೆತು ಮಲಗಿರುವ ಕುಂಭಕರ್ಣನನ್ನು ಎಬ್ಬಿಸಿ ಕರೆತರ ಬೇಕು. ಆಹಾ! ನಾನೇನು ಹೇಳಲಿ! ಇತ್ತಲಾಗಿ ನಾನು ಚಿಂತಾಗ್ನಿ ಯಿಂದ ಬೆಂದು, ಹಿಂದುಮುಂದು ತೋರದೆ ಕಳವಳಿಸುತ್ತಿರುವೆನು. ಅತ್ತ ಲಾಗಿ ಆ ಕುಂಭಕರ್ಣನಾದರೋ ಕಾಲವಶದಿಂದ ಬುದ್ಧಿಗೆಟ್ಟು, ಮನಸ್ಸಿನಲ್ಲಿ ಯಾವುದೊಂದು ಚಿಂತೆಯೂ ಇಲ್ಲದೆ ಸುಖದಿಂದ ನಿದ್ರಿಸುತ್ತಿರುವನು. ಅವನಿಗೆ ನಿದ್ರೆಯೆಂಬುದು ಈಗ ಮಾತ್ರವೇ ಅಲ್ಲ. ಒಮ್ಮೊಮ್ಮೆ ಒಂಭತ್ತುತಿಂಗಳು! ಒಮ್ಮೆ ಆರುತಿಂಗಳು! ಒಮ್ಮೆ ಏಳುತಿಂಗಳು! ಒಮ್ಮೆ ಎಂಟುತಿಂಗಳು! ಹೀಗೆ ಯಾವಾಗಲೂ ಅವನು * ನಿಯತಿಯಿಲ್ಲದೆ ನಿದ್ರೆಮಾಡುವನು.

---

* ಕುಂಭಕರ್ಣನು ಹೀಗೆ ನಿಯಮಿತಿಯಿಲ್ಲದೆ ನಿದ್ರೆಮಾಡುವನೆಂಬುದು ಉತ್ತರ ಕಾಂಡದಲ್ಲಿ ಸೂಚಿತವಾಗಿದೆ. ಕುಂಭಕರ್ಣನು ಬ್ರಹ್ಮನನ್ನು ಕುರಿತು ವರವನ್ನು ಕೇಳು ವಾಗ "ಸ್ವಪ್ತುಂ ವರ್ಷಾಣ್ಯನೇಕಾನಿ ದೇವದೇವ ಮಮೇಪ್ಸಿತಮ್" ಎಂಬುದಾಗಿ ನಿದ್ರಿಸಬೇಕಾದ ಕಾಲವನ್ನು ಇಷ್ಟೆಂದು ನಿರ್ಣಯಿಸದೆ ಹೇಳಿರುವನು. ಆದರೆ ಮುಂದೆ

*ಇದಕ್ಕೆ ಹಿಂದೆ ಒಂಭತ್ತನೆಯ ದಿನದ ಕೆಳಗೆ ಅವನು ನನ್ನೊಡನೆ ಸಭಾಸ್ಥಾನದಲ್ಲಿ ಮಂತ್ರಾಲೋಚನೆಯನ್ನು ನಡೆಸಿ, ಮಾರುದಿನವೇ ಮಲಗಿಬಿಟ್ಟಿರುವನು. ಇನ್ನೂ ಅವನು ಮಲಗಿ ಬಹಳ ದಿನಗಳಲ್ಲದುದರಿಂದ ಅವನನ್ನು ಸುಲಭವಾಗಿ ಎಚ್ಚರಗೊಳಿಸಬಹುದು. ನೀವು ಶೀಘ್ರದಲ್ಲಿಯೇ ಹೋಗಿ ಬಲಾಢ್ಯನಾದ ಕುಂಭಕರ್ಣನನ್ನು ಎಬ್ಬಿಸಿ ಕರೆತನ್ನಿರಿ! ಮಹಾಬಾಹು

ರಾಮನೊಡನೆ ವಿಭೀಷಣನು ಈ ಕುಂಭಕರ್ಣನ ಚರಿತ್ರವನ್ನು ತಿಳಿಸುವಾಗ ಮಾತ್ರ "ತಯಿತಾಹ್ಯೇಷ ಷಣ್ಮಾಸಾನೇಕಾಹಂ ಜಾಗರಿಷ್ಯತಿ" ಎಂಬುದಾಗಿ ಆರುತಿಂಗಳಿಗೊಮ್ಮೆ ಒಂದು ದಿನದ ಮಟ್ಟಿಗೆ ಎಚ್ಚರಗೊಂಡಿರುವುದಾಗಿ ಕಾಲನಿಯಮವನ್ನು ವ್ಯಕ್ತವಾಗಿ ಹೇಳಿರುವುದೇಕೆ? ಎಂದರೆ, ಈ ಆರುತಿಂಗಳೆಂಬ ನಿರ್ಣಯವೇ ಇನ್ನೂ ಹೆಚ್ಚು ತಿಂಗಳಿಗಳುಗೂ ಉಪಲಕ್ಷಣವೆಂದೂ, ಆರುತಿಂಗಳಿಗೆ ಕಡಿಮೆಯಾಗಿ ಮಾತ್ರ ಎಂದಿಗೂ ನಿದ್ರಿಸುವವನಲ್ಲವೆಂದೂ ಅಭಿಪ್ರಾಯದಿಂದ ಹಾಗೆ ಹೇಳಿರಬಹುದೆಂದು ಗ್ರಹಿಸಬೇಕು. ಮೇಲೆ ಹೇಳಿದ ಏಳು, ಎಂಟು, ಮೊದಲಾದ ಮಾಸಸಂಖ್ಯೆಗಳಲ್ಲಿ ಆರುತಿಂಗಳೆಂಬುದೂ ಅಂತರ್ಗತವಾಗಿಯೇ ಇರುವುದರಿಂದ ವಿರೋಧವೇನೂ ಬಾರದು. ಇಲ್ಲಿ "ನವ ಸಪ್ತ ದಶಾಷ್ಟೌಚ ಮಾಸಾನ್ ಸ್ವಪಿತಿ ರಾಕ್ಷಸಃ" ಎಂಬ ಪಾಠಾಂತರವೂ ಉಂಟು. ಈ ಪಾಠದಲ್ಲಿ "ದಶಾಷ್ಟಾ" ಎಂದರೆ ಹತ್ತುತಿಂಗಳು ಕಡಿಮೆಯಾಗಿ, "ನವಸಪ್ತಮಾಸಾನ್" (9+7=16) ಹದಿನಾರು ಮಾಸಗಳವರೆಗೆ ನಿದ್ರಿಸುವನೆಂಬರೆ ಆರುತಿಂಗಳು ಮಾತ್ರವೇ ನಿದ್ರಿಸುವನೆಂದು ಹೇಳಿದಂತಾಗುವುದರಿಂದ ವಿಭೀಷಣವಾಕ್ಯಕ್ಕೆ ವಿರೋಧವು ಬಾರದು. ಅಥವಾ "ಷಡಹೈರ್ಮಾಸಾಂತ್ಸಂಪಾದ್ಯಾಹರುತ್ಸೃಜಂತಿ, ಷಡಹೈರ್ಹಿ ಮಾಸಾಂತ್ಸಂಪಶ್ಯಂತಿ, ಅರ್ಧಮಾಸೈರ್ಮಾಸಾಂತ್ಸಂಪಾದ್ಯಾಹರುತ್ಸೃಜಂತಿ, ಅರ್ಧಮಾಸೈರ್ಹಿ ಮಾಸಾಂತ್ಸಂಪಶ್ಯಂತಿ" ಇತ್ಯಾದಿ ಮಾಸವಿಕಲ್ಪಗಳಲ್ಲಿ, ಆರುದಿನಗಳಿಗೂ ಮಾಸವೆಂಬ ವ್ಯವಹಾರವು ಶ್ರುತ್ಯುಕ್ತವಾಗಿರುವುದರಿಂದ, ಈ ಕ್ರಮವನ್ನನುಸರಿಸಿ "ನವಷಟ್ಸಪ್ತಚಾಷ್ಟಾಚಮಾಸಾನ್" (9—6—7—8) ಎಂಬಂತೆ, ಈ ಮಾಸಗಳೆಲ್ಲವೂ ಸೇರಿ ಮೂವತ್ತು ಮಾಸಗಳಾಗುವುವು. ಈ ಒಂದೊಂದು ಮಾಸಕ್ಕೂ ಆರುದಿನಗಳಂತೆ ಎಣಿಸಿದರೆ 180 ದಿನಗಳಾಗುವುವು. ಆಗ ಅಮಾವಾಸ್ಯೆಯಿಂದ ಅಮಾವಾಸ್ಯೆಯವರೆಗಾಗಲಿ, ಹುಣ್ಣಿಮೆಯಿಂದ ಹುಣ್ಣಿಮೆಗಾಗಲಿ, ಎಣಿಸಲ್ಪಡುವ ಮೂವತ್ತು ದಿನಗಳುಳ್ಳ ತಿಂಗಳುಗಳು ಆರಾಗುವುದರಿಂದ, ವಿಭೀಷಣನು ಹೇಳಿದ ಆರು ತಿಂಗಳೆಂಬ ಪಕ್ಷಕ್ಕೆ ವಿರೋಧವು ಬಾರದೆಂದೂ ಗ್ರಾಹ್ಯವು. ಇದು ಶ್ರುತಿವಾಕ್ಯವನ್ನನುಸರಿಸಿ ಷಡಹ ಮಾಸಪಕ್ಷವನ್ನು ಹೇಳುವುದರ ಸಮರ್ಥನವು.

* ಇಲ್ಲಿ "ಮಂತ್ರಯಿತ್ವಾ ಪ್ರಸುಪ್ತೋಯಮಿತಸ್ತು ನವಮೇಹನಿ" ಎಂದು ಮೂಲವು. ಇಲ್ಲಿ ಕೆಲವರು "ಏಕಾಹಂ ಜಾಗರಿಷ್ಯತಿ" ಎಂದು ಕುಂಭಕರ್ಣನು

ವಾಗಿಯೂ, ಸಮಸ್ತ ರಾಕ್ಷಸ ಪ್ರಧಾನನಾಗಿಯೂ ಇರುವ ಕುಂಭಕರ್ಣನು ನನ್ನಂತೆ ಶಾಪಗ್ರಸ್ತನಲ್ಲದುದರಿಂದ, ಯುದ್ಧದಲ್ಲಿ ಆತನು ಸಮಸ್ತ ವಾನರರನ್ನೂ ರಾಮಲಕ್ಷ್ಮಣರನ್ನೂ ಶೀಘ್ರದಲ್ಲಿಯೇ ಕೊಲ್ಲುವುದರಲ್ಲಿ ಸಂದೇಹವಿಲ್ಲ. ರಾಕ್ಷಸಶ್ರೇಷ್ಠನಾಗಿ ಯುದ್ಧದಲ್ಲಿ ಜಯಧ್ವಜದಂತಿರುವ ಆ ಕುಂಭಕರ್ಣನು ತನ್ನ ವೀರ್ಯವನ್ನು ತಾನು ಸಕಾಲದಲ್ಲಿ ತೋರಿಸುವುದಕ್ಕೂ ಅದೃಷ್ಟವಿಲ್ಲದೆ, ಮೂಢನಾಗಿ ಕೇವಲ ಗ್ರಾಮ್ಯಸುಖದಲ್ಲಿಯೇ ಮುಳುಗಿ ಯಾವಾಗಲೂ ನಿದ್ರಿಸುತ್ತಿರುವನು. ಈಗ ಅವನ ಸುಖನಿದ್ರೆಯನ್ನು ತಪ್ಪಿಸಿದರೂ ಅದರಿಂದ ನನ್ನ ಮನಸ್ಸಿಗೆ ವ್ಯಥೆಯೇನೂ ಉಂಟಾಗಲಾರದು. ಭಯಂಕರವಾದ ಈ ಯುದ್ಧದಲ್ಲಿ ರಾಮನಿಂದ ಅಷ್ಟೊಂದು ಪರಾಭವವನ್ನು ಹೊಂದಿ ಬಂದ ನನಗೆ, ಈಗ ಕುಂಭಕರ್ಣನ ನಿದ್ರೆಯನ್ನು ಕೆಡಿಸುವುದೇನೂ ಅಷ್ಟೊಂದು ದುಃಖವನ್ನುಂಟುಮಾಡಲಾರದು. ನನಗೆ ಒಡಹುಟ್ಟಿದ ತಮ್ಮನಾದ ಆ ಕುಂಭಕರ್ಣನು ಇಂದ್ರನಿಗೆಣೆಯಾದ ಪರಾಕ್ರಮವುಳ್ಳವನಾಗಿದ್ದರೂ, ನನಗೆ ಇಂತಹ ಮಹಾವ್ಯಸನವು ಸಂಭವಿಸಿರುವಾಗ ಅವನು

ನಿದ್ರೆಯಿಂದೆದ್ದ ಮೇಲೆ ಒಂದು ದಿನದಮಾತ್ರವೇ ಎಚ್ಚರಗೊಂಡಿರುವುದಾಗಿ ನಿಯಮವಿರುವುದರಿಂದ, ಹಿಂದೆ ಅವನು ಮಂತ್ರಾಲೋಚನೆಯನ್ನು ನಡೆಸಿದ ಮರುದಿನವೇ ನಿದ್ರೆಯನ್ನಾರಂಭಿಸಿರಬೇಕು. "ಅಜಗಾಮ ಮುಹೂರ್ತೇನ" ಎಂಬುದರಿಂದ, ವಿಭೀಷಣನೂ ಆ ಮಂತ್ರಾಲೋಚನೆಯಾದ ದಿನವೇ ರಾಮನ ಬಳಿಗೆ ಬಂದನೆಂದೂ "ವಿಭೀಷಣೇನಾಶು ಜಗಾಮಸಂಗಮಮ್" ಎಂಬುದರಿಂದ ಕೂಡಲೇ ರಾಮನೂ ವಿಭೀಷಣನನ್ನು ಸ್ವೀಕರಿಸಿದನೆಂದೂ ಸೂಚಿತವಾಗುವುದು. ಆದುದರಿಂದ ಈ ಕಾರ್ಯಗಳು ಒಂದೇ ದಿನದಲ್ಲಿ ನಡೆದಿರುವುವು. ಅದರಿಂದಾಚೆಗೆ ಮೂರುದಿನಗಳವರೆಗೆ ದರ್ಭಶಯನವು. ಆಮೇಲೆ ಐದುದಿನಗಳವರೆಗೆ ಸೇತುಬಂಧನವು. ಸೇತುವನ್ನು ಕಟ್ಟಿ ಮುಗಿಸಿದ ಸಾಯಂಕಾಲವೇ ಸುವೇಲಾರೋಹಣವು. ಆ ರಾತ್ರಿಯೇ ಸುಗ್ರೀವರಾವಣರ ದ್ವಂದ್ವಯುದ್ಧವು. ಮರುದಿನದಲ್ಲಿ ತುಮುಲಯುದ್ಧವು. ಆ ರಾತ್ರಿಯಲ್ಲಿಯೇ ನಾಗಪಾಶಬಂಧ ಮೋಕ್ಷಗಳೊಡನೆ, ಧೂಮ್ರಾಕ್ಷವಜ್ರದಂಷ್ಟ್ರ ಕಂಪನರ ವಧವು. ಅದಕ್ಕೆ ಮರುದಿನದಲ್ಲಿ ಪ್ರಹಸ್ತವಧವು. ಆ ದಿನವೇ ರಾವಣನ ಮಕುಟಭಂಗವು. ಹೀಗೆ (ಇತಃ) ಎಂಬುದಕ್ಕೆ "ಮಕುಟಭಂಗವಾದ ದಿನದಿಂದ" ಎಂಬರ್ಥಮಾಡಿ ದಿನಗಳ ಲೆಕ್ಕವನ್ನು ಸರಿಹೋಲಿಸುವರು. ಆದರೆ ಕೆಲವರು ಇದರಲ್ಲಿ ಅಷ್ಟಾಗಿ ಸಾಮಂಜಸ್ಯವಿಲ್ಲವೆನ್ನುವರು. ಏಕೆಂದರೆ, ಸುವೇಲಾದ್ರಿಯನ್ನೇರಿದ ಕಾಲದಲ್ಲಿ ಪೂರ್ಣಚಂದ್ರೋದಯವನ್ನು ವರ್ಣಿಸಿರುವುದರಿಂದ, ಆ ದಿನವು ಹುಣ್ಣಿಮೆ

ನನ್ನ ಸಹಾಯಕ್ಕೆ ಬಾರದಮೇಲೆ ಅವನಿದ್ದೂ ನನಗೆ ಪ್ರಯೋಜನವೇನು?”
ಎಂದನು. ರಾಕ್ಷಸರೆಲ್ಲರೂ ರಾವಣನ ಈ ಮಾತನ್ನು ಕೇಳಿದೊಡನೆ
ಅತ್ಯಾತುರದಿಂದ ಮೇಲೆದ್ದು ಕುಂಭಕರ್ಣನ ನಿವಾಸಕ್ಕೆ ಹೊರಟರು. ರಕ್ತ
ಮಾಂಸಗಳನ್ನು ತಿಂದು ಕೊಬ್ಬಿದ ಆ ರಾಕ್ಷಸರೆಲ್ಲರೂ, ರಾವಣಾಜ್ಞೆಯನ್ನು
ಪಡೆದು, ಅತ್ತಲಾಗಿ ಕುಂಭಕರ್ಣನನ್ನು ನಿದ್ರೆಯಿಂದೆಬ್ಬಿಸಿದೊಡನೆ ಅವನ
ಹಸಿವು ಬಾಯಾರಿಕೆಗಳನ್ನು ತೀರಿಸಿ ಸಂತೋಷಪಡಿಸುವುದಕ್ಕಾಗಿ, ವಿವಿಧ
ಭಕ್ಷ್ಯಗಳನ್ನೂ, ಗಂಧಮಾಲ್ಯಾದಿಗಳನ್ನೂ, ಸಂಗ್ರಹಿಸಿಟ್ಟುಕೊಂಡು ವೇಗ
ದಿಂದ ಬಂದರು. ಆ ರಾಕ್ಷಸರೆಲ್ಲರೂ ಸೇರಿ ಮಹಾದ್ವಾರವುಳ್ಳದಾಗಿಯೂ,
ಸುತ್ತಲೂ ಒಂದು ಯೋಜನದ ವಿಸ್ತಾರವುಳ್ಳದಾಗಿಯೂ, ರಮಣೀಯ
ವಾಗಿಯೂ, ಕುಂಭಕರ್ಣನು ಧರಿಸಿದ್ದ ಚಂದನಾದಿಸುಗಂಧದಿಂದ ವಾಸಿತ
ವಾಗಿಯೂ ಇದ್ದ ಗುಹಾಕಾರವಾದ ಕುಂಭಕರ್ಣನ ಶಯನಗೃಹದ ಬಳಿಗೆ
ಬಂದರು. ಈ ರಾಕ್ಷಸರೆಲ್ಲರೂ ಮಹಾಬಲವುಳ್ಳವರಾಗಿದ್ದರೂ, ಗುಹಾ
ದ್ವಾರದಿಂದ ಒಳಗೆ ಪ್ರವೇಶಿಸುವಾಗಲೇ, ಕುಂಭಕರ್ಣನ ಉಸಿರಿನ ಗಾಳಿಯು

ಯಾಗಿರಬೇಕೆಂಬುದು ಸಿದ್ಧವು. ರಾವಣನ ಸತ್ತದಿನವು ಅಮಾವಾಸ್ಯೆಯೆಂಬುದೂ
ಸ್ಪಷ್ಟವು. ಹೀಗಿರುವಾಗ ಈ ಪೂರ್ವಪಕ್ಷಗಳು ಹೇಳಿದಂತೆ ಸುವೇಲಾರೋಹಣವಾದ
ಎರಡನೆಯ ದಿವಸದಲ್ಲಿಯೇ ಎಂದರೆ, ದ್ವಿತೀಯಾತಿಥಿಯಲ್ಲಿ ಮಕುಟಭಂಗವಾಗಿದ್ದ
ಪಕ್ಷದಲ್ಲಿ, ರಾವಣನು ಅಲ್ಲಿಂದ ಮುಂದೆ ಅಮಾವಾಸ್ಯೆಯವರೆಗೆ ಕಾದಿದ್ದು ಆಮೇಲೆ
ಯುದ್ಧಕ್ಕೆ ಹೋದುದಾಗಿ ನಿರ್ಧರಿಸಬೇಕಾಗುವುದು. ಆದುದರಿಂದ ಇದು ಚಿಂತ್ಯವು.
ವಾಸ್ತವದಲ್ಲಿ 'ಇತಃ' ಎಂದರೆ; "ಈ ಪ್ರಕೃತಯುದ್ಧಾರಂಭವಾದ ದಿನದಿಂದ"
ಎಂದರ್ಥಮಾಡಿ, ಆ ದಿನವನ್ನು ಬಿಟ್ಟು, ಅದರ ಹಿಂದಿನ ದಿನದಿಂದಾಚೆಗೆ ಒಂಬತ್ತ
ನೆಯ ದಿನದಲ್ಲಿ ಕುಂಭಕರ್ಣನು ನಿದ್ರಿಸುವುದಕ್ಕೆ ಹೋದನೆಂದೂ, ಅದಕ್ಕೆ ಮೊದಲ
ದಿನದಲ್ಲಿ ಮಂತ್ರಾಲೋಚನೆಯನ್ನು ನಡೆಸಿದನೆಂದೂ ಹೇಳುವರು. ಈ ಲೆಕ್ಕದಂತೆ
ಹುಣ್ಣಿಮೆಯಲ್ಲಿ ಸುವೇಲಾರೋಹಣವೂ, ಪ್ರಥಮೆಯಲ್ಲಿ ಯುದ್ಧಾರಂಭವೂ
ಆದರೆ, ಹಿಂದಿನ ಒಂಬತ್ತನೆಯ ದಿನಕ್ಕೆ ಸಪ್ತಮಿಯಾಗುವುದು. ಆ ದಿನವೇ
ಕುಂಭಕರ್ಣನ ನಿದ್ರಾರಂಭದೊಡನೆ ಇತ್ತಲಾಗಿ ರಾಮನ ದರ್ಭಶಯನವು. ಷಷ್ಠಿ
ಯಲ್ಲಿ ಕುಂಭಕರ್ಣಾದಿಗಳೊಡನೆ ಮಂತ್ರವಿಚಾರವು. ಆ ದಿನವೇ ವಿಭೀಷಣನಿರ್ಗಮ
ವೆನ್ನುವರು. ಬೇರೆ ಕೆಲವರ ಮತವೇನೆಂದರೆ, ಸೀತಾಪಹರಣಕ್ಕೆ ಮೊದಲೇ
ಹದಿಮೂರು ಸಂವತ್ಸರಗಳು ಕಳೆದುಹೋದುವು. ಪಂಪಾತೀರದಲ್ಲಿ ವಸಂತಾಗಮನ
ವನ್ನು ವರ್ಣಿಸಿರುವುದರಿಂದ ಹದಿನಾಲ್ಕನೆಯ ಸಂವತ್ಸರಾರಂಭದಲ್ಲಿ ಸೀತಾಪಹಾರವು.

ಇವರನ್ನು ವೇಗದಿಂದ ಹಿಂದಕ್ಕೆ ತೂರಿಸುತ್ತಿತ್ತು. ಹೀಗಿದ್ದರೂ ಇವರು ಪ್ರಯತ್ನದಿಂದ ಆ ಗಾಳಿಗಿದಿರಾಗಿ ಗುಹೆಯನ್ನು ಪ್ರವೇಶಿಸಿದರು. ಹೀಗೆ ರಾಕ್ಷಸರೆಲ್ಲರೂ, ರಮಣೀಯವಾಗಿಯೂ, ಮಂಗಳದ್ರವ್ಯಗಳಿಂದ ತುಂಬಿದು ದಾಗಿಯೂ, ಸುವರ್ಣಮಯವಾದ ನೆಲಗಟ್ಟುಗಳುಳ್ಳದಾಗಿಯೂ ಇದ್ದ ಆ ಗುಹೆಯನ್ನು ಪ್ರವೇಶಿಸಿ ಅಲ್ಲಿ ಭಯಂಕರಸ್ವರೂಪದಿಂದ ಮಲಗಿದ್ದ ರಾಕ್ಷಸ ಸಿಂಹನಾದ ಕುಂಭಕರ್ಣನನ್ನು ನೋಡಿದರು. ಉದ್ದಕ್ಕೆ ಬಿದ್ದ ಪರ್ವತದಂತೆ ವಿಕಾರರೂಪದಿಂದ ಮಲಗಿ, ಮಹಾನಿದ್ರೆಯಿಂದ ಮೈಮರೆತಿರುವ ಆ ರಾಕ್ಷಸ ನನ್ನು ಇವರೆಲ್ಲರೂ ಒಟ್ಟಾಗಿ ಸೇರಿ ಎಚ್ಚರಗೊಳಿಸುವುದಕ್ಕೆ ತೊಡಗಿದರು. ಆಗ ಆ ಕುಂಭಕರ್ಣನ ಘೋರ ಸ್ವರೂಪವನ್ನು ಕೇಳಬೇಕೆ? ಸರ್ವಾ ವಯವಗಳಲ್ಲಿಯೂ ನಿಗುರಿನಿಂತ ಕೂದಲುಗಳು! ಬುಸುಗುಟ್ಟುವ ಮಹಾ ಸರ್ಪದಂತೆ ಭಯಂಕರವಾದ ನಿಟ್ಟುಸಿರು! ಅತ್ಯಂತ ಘೋರಾಕೃತಿ! ಪಾತಾಳಕುಹರದಂತೆ ವಿಶಾಲವಾಗಿ ಬಿಚ್ಚಿದ ಬಾಯಿ! ಹೀಗೆ ತನ್ನ ಸರ್ವಾವಯವಗಳನ್ನೂ ಹಾಸಿಗೆಯ ಮೇಲೆ ಬೀಸಿ ಉದ್ದಕ್ಕೆ ಮಲಗಿರುವನು.

ಆಷಾಢದಲ್ಲಿ ವಾಲಿವಧವು. ಇದಾದಮೇಲೆ ವರ್ಷರ್ತುವನ್ನು ವರ್ಣಿಸಿರುವುದರಿಂದ ಆಶ್ವಯುಜಮಾಸದಲ್ಲಿ ಸೀತಾನ್ವೇಷಣ ಪ್ರಯತ್ನವೆಂಬುದು ಸ್ಪಷ್ಟವು. ಸ್ವಯಂ ಪ್ರಭೆಯ ಬಿಲದಲ್ಲಿ ಬಹುಕಾಲವು ಕಳೆದುಹೋಯಿತು. ಆ ಬಿಲದಿಂದ ಹೊರಗೆ ಬಂದೊಡನೆ ತಿರುಗಿ ವಸಂತಾರಂಭವನ್ನು ವರ್ಣಿಸಿರುವುದರಿಂದ ಫಾಲ್ಗುಣ ಶುದ್ಧ ತ್ರಯೋದಶಿಯಲ್ಲಿ ಹನುಮಂತನ ಲಂಕಾಪ್ರವೇಶವು. ಯಾವ ರಾತ್ರಿಯಲ್ಲಿ ಹನು ಮಂತನು ಸೀತಾನ್ವೇಷಣವನ್ನು ಮಾಡಿದನೋ ಅದಕ್ಕೆ ಮರುದಿನದ ಬೆಳಿಗ್ಗೆ ಲಂಕಾ ದಹನವು. ಹೇಗೆಂದರೆ:—'ಅವಶ್ಯಮೇವ ದ್ರಷ್ಟವ್ಯಾ ಮಯಾ ಲಂಕಾ ನಿಶಾಕ್ಷಯೇ' ಎಂದು ಹನುಮಂತನು ಬಾಲದ ಬೆಂಕಿಯೊಡನೆ ಲಂಕೆಯಲ್ಲಿ ಸುತ್ತಿಸಲ್ಪಟ್ಟುದಾಗಿ ಸೂಚಿತವಾಗಿದೆ. ಆಗಲೇ ಸೀತೆಯೂ ಹನುಮಂತನನ್ನು ಕುರಿತು "ವಸೈಕಾಹ ಮರಿಂದಮ" ಎಂದು ಹೇಳಿದುದಕ್ಕೆ ಆತನು ಇಷ್ಟಪಡದೆ "ಗಮನಾಯ ಮತಿಂ ಚಕ್ರೇ" ಎಂದು ಹೇಳಿದುದರಿಂದ, ಮಧ್ಯಾಹ್ನಕ್ಕೆ ಮೊದಲೇ ಹನುಮಂತನ ಪರಾ ವರ್ತನವು. ಆಮೇಲೆ ಆಂಜನೇಯನು ಹಿಂತಿರುಗಿ ಸಮುದ್ರವನ್ನು ದಾಟುವುದಕ್ಕಾಗಿ ಅರಿಷ್ಟ ಪರ್ವತವನ್ನೇರಿದಾಗ ಆ ಪರ್ವತವರ್ಣನವ್ಯಾಜದಿಂದ "ಬೋಧ್ಯಮಾನಮಿವ ಪ್ರೀತ್ಯಾ ದಿವಾಕರಕರೈಃ" ಎಂಬುದಾಗಿ ಸೂರ್ಯೋದಯವನ್ನು ಸೇರುವವರೆಗೆ ಅಸ್ತಮಯವನ್ನು ಹೇಳಿದುದರಿಂದಲೂ, ಹನುಮಂತನು ಪ್ರಾತಃಕಾಲದಲ್ಲಿ ಲಂಕಾ ದಹನವನ್ನು ಮಾಡಿದಮೇಲೆ ಮಧ್ಯಾಹ್ನಕ್ಕೆ ಮೊದಲೇ, ಅಂಗದಾದಿಗಳೊಡನೆ

ಆಗಾಗ ಅವನು ತಿಂದು ಬಿಸುಟ ಮೇದೋ ಮಾಂಸಗಳ ದುರ್ಗಂಧವು, ಆ ಅಂಗಳದ ಸುತ್ತಲೂ ವ್ಯಾಪಿಸಿರುವುದು. ಮತ್ತು ಆತನ ಭುಜಗಳಲ್ಲಿ ಉತ್ತಮವಾದ ತೋಳ್ಬಳೆಗಳೂ ತಲೆಯಲ್ಲಿ ದಿವ್ಯಕಿರೀಟವೂ ಶೋಭಿಸುತ್ತಿರುವುದು. ಶತ್ರುಗಳನ್ನು ಧ್ವಂಸಮಾಡತಕ್ಕ ಮಹಾಬಲವುಳ್ಳ ರಾಕ್ಷಸಶಾರ್ದೂಲನಾದ ಆ ಕುಂಭಕರ್ಣನು, ನಿದ್ರಾವಶನಾಗಿರುವುದನ್ನು ಇವರೆಲ್ಲರೂ ಸ್ವಲ್ಪಹೊತ್ತಿನವರೆಗೆ ಆಶ್ಚರ್ಯದಿಂದ ನೋಡುತ್ತ ನಿಂತರು. ಮಹಾಕಾಯವುಳ್ಳ ಕೆಲವು ರಾಕ್ಷಸರು ಬಹಳ ತೃಪ್ತಿಕರವಾದ ಮಾಂಸಗಳನ್ನು ತಂದು, ಮೇರುಪರ್ವತದಂತೆ ಆ ಕುಂಭಕರ್ಣನ ಮುಂದೆ ರಾಶಿಹಾಕಿದರು. ಕೆಲವರು ಜಿಂಕೆಯ ಮಾಂಸಗಳನ್ನೂ, ಕೆಲವರು ಮಹಿಷಮಾಂಸಗಳನ್ನೂ, ಕೆಲವರು ಹಂದಿಯ ಮಾಂಸಗಳನ್ನೂ, ಕೆಲವರು ನಾನಾಬಗೆಯ ಅನ್ನದ ರಾಶಿಗಳನ್ನೂ ಮಹಾದ್ಭುತವಾಗಿ ಸೇರಿಸಿಟ್ಟರು. ಹಾಗೆಯೇ ಕುಂಭಕರ್ಣನ ಮುಂದೆ ಕೆಲವು ರಾಕ್ಷಸರು ದೊಡ್ಡ ದೊಡ್ಡ ರಕ್ತಕುಂಭಗಳನ್ನೂ, ಬಗೆಬಗೆಯ ಮದ್ಯಗಳನ್ನೂ ತಂದಿಟ್ಟರು. ಆಮೇಲೆ ಕೆಲವರು ಶತ್ರು

ಮಧುವನವನ್ನು ಭಂಗಿಸಿ, ರಾಮನನ್ನು ಸೇರಿದುದಾಗಿ ಸೂಚಿತವು. ಕೂಡಲೇ ರಾಮನು "ಅಸ್ಮಿನ್ ಮುಹೂರ್ತೇ ಸುಗ್ರೀವ ಪ್ರಯಾಣಮಭಿರೋಚಯೇ ಯುಕ್ತೋ ಮುಹೂರ್ತೋ ವಿಜಯಃ ಪ್ರಾಪ್ತೋ ಮಧ್ಯಂ ದಿವಾಕರಃ" ಎಂಬುದಾಗಿ ತ್ವರೆಪಡಿಸಿದುದರಿಂದ ಆ ದಿನವೇ ಎಂದರೆ ಚತುರ್ದಶೀಶೇಷದೊಡಗೂಡಿದ ಪೂರ್ಣಿಮೆಯ ಮಧ್ಯಾಹ್ನದಲ್ಲಿಯೇ ಯುದ್ಧಯಾತ್ರೆಯು. ಅದಕ್ಕೆ ಮರುದಿನವೇ ಸಮುದ್ರತೀರದಲ್ಲಿ ಸೇನಾನಿವೇಶವು. "ಸಾಸ್ಮ ಯಾತಿ ದಿವಾರಾತ್ರಂ ಮುಹೂರ್ತಮಪಿ ನಾಸತ" ಇತ್ಯಾದಿ ವಾಕ್ಯಗಳಲ್ಲಿ ವಾನರಸೇನೆಯ ಪ್ರಯಾಣವು, ಎಡೆಬಿಡದೆ ಹಗಲು ರಾತ್ರಿಯೂ ನಡೆದುದಾಗಿ ಹೇಳಿರುವುದರಿಂದ ಇದು ಸ್ಪಷ್ಟವಾಗುವುದು. ಇದನ್ನನುಸರಿಸಿ ಅತ್ತಲಾಗಿ ಲಂಕೆಯಲ್ಲಿಯೂ, ಲಂಕಾದಹನವಾದ ದಿನವೇ ರಾವಣನು ಮಂತ್ರಾಲೋಚನೆಯನ್ನು ಹೇಳಿದುದು. ''ತತಃ ಪ್ರತ್ಯುಷಸಿ ಪ್ರಾಪ್ತೇ'' ಎಂದು ಅದಕ್ಕೆ ಮರುದಿನದ ಪ್ರಾತಃಕಾಲದಲ್ಲಿ ವಿಭೀಷಣನು ಎರಡನೆಯಸಾರಿ ಮಾಡಿದ ಹಿತೋಪದೇಶವೂ, ಆಮೇಲೆ ತಿರುಗಿ ರಾವಣನು ಕುಂಭಕರ್ಣವಿಭೀಷಣಾದಿಗಳೊಡನೆ ಮಂತ್ರಸಭೆಗೆ ಬಂದುದೂ ಸೂಚಿಸಲ್ಪಟ್ಟಿದೆ. ಈ ಮೂರನೆಯ ಉಪದೇಶದಲ್ಲಿ ರಾವಣನಿಂದ ತಿರಸ್ಕೃತನಾದ ಆ ವಿಭೀಷಣನು ''ಅಜಗಾಮ ಮುಹೂರ್ತೇನ'' ಎಂದು ಲಂಕಾದಹನವಾದ ಮರುದಿನವೇ ರಾಮನ ಬಳಿಗೆ ಬಂದು ಸೇರಿದುದನ್ನು ವರ್ಣಿಸಿರುವುದರಿಂದ, ದ್ವಿತೀಯದಿನದಲ್ಲಿಯೇ ರಾಮನೂ ಸಮುದ್ರತೀರ

ವಿಧ್ವಂಸಕನಾದ ಆ ಕುಂಭಕರ್ಣನ ಮೈಮೇಲೆ ಉತ್ತಮವಾದ ಚಂದನವನ್ನು ತಂದು ಪೂಸಿದರು. ಉತ್ತಮವಾದ ವಾಸನೆಯುಳ್ಳ ಹೂದಂಡೆಗಳಿಂದಲೂ ಸುಗಂಧದ್ರವ್ಯಗಳಿಂದಲೂ, ಕೆಲವರು ಆ ಕುಂಭಕರ್ಣನ ದೇಹವನ್ನು ಅಲಂಕರಿಸಿಟ್ಟರು. ಕೆಲವರು ಸುಗಂಧದ ಧೂಪಗಳನ್ನು ಹಾಕಿದರು. ಕೆಲವರು ಸುತ್ತಲೂ ನಿಂತು ಸ್ತೋತ್ರಮಾಡಿದರು. ಅವನನ್ನು ಎಚ್ಚರಗೊಳಿಸುವುದಕ್ಕಾಗಿ ಕೆಲವರು ಸುತ್ತಲೂ ನಿಂತು ಮೇಘಗಳಂತೆ ಗರ್ಜಿಸುತ್ತಿದ್ದರು. ಚಂದ್ರನಂತೆ ಕಾಂತಿಯುಳ್ಳ ಶಂಖಗಳನ್ನು ನುಡಿಸಿದರು. ಇಷ್ಟಾದರೂ ಆ ಕುಂಭಕರ್ಣನಿಗೆ ಎಚ್ಚರವಾಗದುದನ್ನು ನೋಡಿ, ಕೋಪಗೊಂಡು ಎಲ್ಲರೂ ಆ ಒಂದೇ ಕೂಗಾಗಿ ಕೂಗಿದರು. ಕೆಲವರು ಅವನನ್ನು ಕೈಯಿಂದ ಗುದ್ದಿ ಅವನ ದೇಹವನ್ನು ಅತ್ತಿತ್ತ ಉರುಳಾಡಿಸುತ್ತಿದ್ದರು. ಕೆಲವರು ಅವನ ಸಮೀಪದಲ್ಲಿ ನಿಂತು ಮಹಾಧ್ವನಿಯಿಂದ ಬೊಬ್ಬೆಹಾಕಿದರು. ಈ ಗದ್ದಲದಲ್ಲಿ ಅಲ್ಲಲ್ಲಿದ್ದ ಪಕ್ಷಿಗಳು, ಇಲ್ಲಿನ ಶಂಖಭೇರಿಧ್ವನಿಗಳನ್ನೂ, ಪಣವಧ್ವನಿಗಳನ್ನೂ, ಭುಜಾಸ್ಫಾಲನಧ್ವನಿಗಳನ್ನೂ, ಗರ್ಜನ

ವನ್ನು ಸೇರಿದನೆಂದೂ ಸೂಚಿತವಾಗಿದೆ. ಸಮುದ್ರತೀರವನ್ನು ಸೇರಿದ ದಿನವು ಫಾಲ್ಗುಣದ ಹುಣ್ಣಿಮೆಯು ಅವಶಿಷ್ಟದಿನವಾದುದರಿಂದಲೇ "ಉತ್ತರಾಫಲ್ಗುನೀಹ್ಯದ್ಯ" ಎಂದು ನಾಲ್ಕನೆಯ ಸರ್ಗದಲ್ಲಿ ಯುದ್ಧಪ್ರಯಾಣ ದಿನವು ಹುಣ್ಣಿಮೆಯೊಡನೆ ಸೇರಿದುದೆಂದು ಹೇಳಿದುದೂ ವಿರುದ್ಧವಲ್ಲ. ಸಮುದ್ರತೀರಕ್ಕೆ ಬಂದುದು ಹುಣ್ಣಿಮೆಯೆಂಬುದಕ್ಕೆ ಆ ಸಂದರ್ಭದಲ್ಲಿ ಸಂಧ್ಯಾಕಾಲದಲ್ಲಿಯೇ ಚಂದ್ರೋದಯವನ್ನು ವರ್ಣಿಸಿರುವುದರಿಂದಲೂ ಸಿದ್ಧವಾಗುವುದು. ಸೇನಾನಿವೇಶ ವಿಭೀಷಣಾ ಗಮನ ವೃತ್ತಾಂತಗಳೆರಡೂ ಒಂದೇ ದಿನದಲ್ಲಿ ನಡೆದಿದ್ದರೂ ಕಾರ್ಯಾನುಪೂರ್ವಿಯನ್ನು ತಿಳಿಸುವುದಕ್ಕಾಗಿ ಮಾತ್ರವೇ ಬಿಡಿಸಿ ಹೇಳಲ್ಪಟ್ಟಿವೆ. ಪ್ರಥಮಾತಿಥಿಯಲ್ಲಿ ಇತ್ತಾಗಿ ರಾಮನ ದರ್ಭಶಯನವೂ, ಅತ್ತಲಾಗಿ ಕುಂಭಕರ್ಣನ ನಿದ್ರೆಯೂ ಆರಂಭಿಸಲ್ಪಟ್ಟುವು. ಚತುರ್ಥಿಯಿಂದ ಅಷ್ಟಮಿಯವರೆಗೆ ಸೇತುವನ್ನು ಕಟ್ಟಿ ಆ ರಾತ್ರಿಯೇ ಸುವೇಲಾರೋಹಣವು. ಆದರೆ, ಸುವೇಲಪರ್ವತದಲ್ಲಿ "ಪೂರ್ಣಚಂದ್ರಪ್ರದೀಪಾಚ ನಿಶಾ ಸಮಭಿವರ್ತತೇ" ಎಂದು ಪೂರ್ಣಚಂದ್ರನ ಪ್ರಸ್ತಾಪವೇಕೆ? ಎಂದರೆ, ಆ ಕಪಿಸೈನ್ಯದಲ್ಲಿ ಭೇರಿಮೃದಂಗಾದಿ ವಾದ್ಯಗಳಿದ್ದಂತೆ, ದೀಪಾದಿಗಳೂ ಇದ್ದಿರಬಹುದಾದುದರಿಂದ, ಪೂರ್ಣಚಂದ್ರನಂತಿರುವ ದೀಪಗಳಿಂದ ತುಂಬಿದ ರಾತ್ರಿಯೆಂದು ಹೇಳಬೇಕೇ ಹೊರತು, ಪೂರ್ಣಚಂದ್ರ ವಿಶಿಷ್ಟವಾದ ರಾತ್ರಿಯೆಂದರ್ಥವಲ್ಲ. ಸುವೇಲವನ್ನೇರಿದ ಮರುದಿನದ ಹಗಲಿನಲ್ಲಿಯೇ ಲಂಕೆಯನ್ನು ಮುತ್ತಿದುದು.

ಧ್ವನಿಗಳನ್ನೂ, ಸಿಂಹನಾದಧ್ವನಿಗಳನ್ನೂ, ಕೇಳಿ ಭಯದಿಂದ ದಿಕ್ಕು ದಿಕ್ಕಿಗೆ ಹಾರಿದುವು. ಅಲ್ಲಿಯೂ, ಭಯವಡಗದೆ ಅಲ್ಲಿಂದ ಆಕಾಶಕ್ಕೆ ಬೀಳುತ್ತಿದ್ದುವು. ಹೀಗೆ ಶ್ರಮಪಟ್ಟು ಅನೇಕ ಪ್ರಯತ್ನಗಳನ್ನು ನಡೆಸಿದರೂ ತಮ್ಮ ಗರ್ಜನಾದಿಗಳಿಗೆ ಕುಂಭಕರ್ಣನು ಎಚ್ಚರಗೊಳ್ಳದಿರುವುದನ್ನು ನೋಡಿ ಆ ರಾಕ್ಷಸರೆಲ್ಲರೂ ಗುಂಪಾಗಿ ಹೊರಟು, ಮುಸುಂಡಿ, ಮುಸಲ, ಮುದ್ಗರ, ಗದೆ, ಮೊದಲಾದ ವಿವಿಧಾಯುಧಗಳನ್ನು ಕೈಗೆತ್ತಿಕೊಂಡು ಬಂದರು. ಬಲದಿಂದ ಕೊಬ್ಬಿದ ಆ ರಾಕ್ಷಸರೆಲ್ಲರೂ, ತಾವು ತಾವು ಹಿಡಿದಿದ್ದ ಪರ್ವತಶಿಖರಗಳಿಂದಲೂ, ಮುಸಲಗಳಿಂದಲೂ, ಗದೆಗಳಿಂದಲೂ, ವೃಕ್ಷಗಳಿಂದಲೂ, ಅಂಗೈಗಳಿಂದಲೂ, ಮುದ್ಗರಗಳಿಂದಲೂ, ಮುಷ್ಟಿಗಳಿಂದಲೂ, ಸುಖಸುಪ್ತನಾಗಿ ನಿದ್ರಿಸುತ್ತಿದ್ದ ಆ ಕುಂಭಕರ್ಣನನ್ನು ಪ್ರಹರಿಸುವುದಕ್ಕೆ ತೊಡಗಿದರು. ಏನಾದರೇನು ? ಈ ರಾಕ್ಷಸರೆಲ್ಲರೂ ಮಹಾಬಲಾಢ್ಯರಾಗಿದ್ದರೂ, ಆ ಕುಂಭಕರ್ಣನ ಉಸಿರಿನ ಗಾಳಿಯನ್ನೇ ತಡೆದು ನಿಲ್ಲಲಾರದೆ, ಆ ಗಾಳಿಯ ವೇಗಕ್ಕೆ ಅಲ್ಲಲ್ಲಿ ತೂರಿ ಬೀಳುತ್ತಿದ್ದರು. ಆಮೇಲೆ ಭಯಂಕರ

ಏಕೆಂದರೆ "ತಾಂ ರಾತ್ರಿಮುಷಿತಾಸ್ತತ್ರಸುವೇಲೇ" ಎಂದು ವಾನರರು ಆ ರಾತ್ರಿಯಲ್ಲಿ ಸುವೇಲಪರ್ವತದಲ್ಲಿಯೇ ಇದ್ದು ಲಂಕೆಯ ವನೋಪವನಗಳನ್ನು ನೋಡುತ್ತಿದ್ದುದಾಗಿ ಹೇಳಿ, ಆಮೇಲೆ ಯುದ್ಧವು ವರ್ಣಿಸಲ್ಪಟ್ಟಿದೆ. ಆ ಪ್ರಥಮ ದಿನ ಯುದ್ಧದಲ್ಲಿಯೇ ನಾಗಾಸ್ತ್ರಬಂಧಮೋಕ್ಷಾದಿಗಳೆಲ್ಲವೂ ನಡೆದುವೆಂಬುದಕ್ಕೆ ಆ ಸಂದರ್ಭದ ಆ ಸೂರ್ಯಾಸ್ತಮ ವರ್ಣನವೂ, ಇಂದ್ರಜಿತ್ತಿನ ನಾಗಾಸ್ತ್ರಬಂಧಾದಿಗಳೂ ನಿರೂಪಕಗಳಾಗಿವೆ. ಆಮೇಲೆ ನಡುರಾತ್ರಿಯಲ್ಲಿ ವಾನರ ಸಿಂಹನಾದವನ್ನು ಕೇಳಿ ಕುಪಿತನಾದ ರಾವಣನು ಕಳುಹಿಸಿದ ಧೂಮ್ರಾಕ್ಷ ವಜ್ರದಂಷ್ಟ್ರರ ಯುದ್ಧವೂ, ಅವರ ವಧವೂ ರಾತ್ರಿಯಲ್ಲಿಯೇ ನಡೆದಿರಬೇಕೆಂದೂ ಸ್ಪಷ್ಟವು. ಆ ರಾತ್ರಿಶೇಷದಲ್ಲಿ ಅವರಿಬ್ಬರೂ ಹತರಾದಮೇಲೆ, ದ್ವಿತೀಯ ದಿನದಲ್ಲಿ ಅಕಂಪನನೊಡನೆ ಯುದ್ಧವು. ಏಕೆಂದರೆ, ಅಕಂಪನನು ಬಂದಾಗ "ಅಭೂತ್ಸುದಿನೇ ಚಾಪಿ ದುರ್ದಿನಂ" ಎಂದು ಹಗಲು ಸ್ಪಷ್ಟವಾಗಿದ್ದರೂ, ಮೋಡದಿಂದ ಮರೆಸಲ್ಪಟ್ಟಿತೆಂದು ಹೇಳಿರುವುದರಿಂದ, ಅವನ ಯುದ್ಧವು ಹಗಲಿನಲ್ಲಿಯೇ ನಡೆದಿರಬೇಕೆಂದೂ ಸೂಚಿತವಾಗುವುದು. ಅಕಂಪನನು ಹತನಾದ ಕೂಡಲೆ ರಾವಣನು ಪೂರ್ವಾಹ್ಣದಲ್ಲಿಯೇ ಲಂಕೆಯನ್ನು ಸುತ್ತಿಬಂದುದು. ಉತ್ತರಕ್ಷಣದಲ್ಲಿಯೇ ಪ್ರಹಸ್ತನ ಯುದ್ಧಾರಂಭವು. ಆ ಮಧ್ಯಾಹ್ನದಲ್ಲಿ ಪ್ರಹಸ್ತ ವಧವು. ಆದರೆ ಈ ಪ್ರಹಸ್ತಯುದ್ಧ ಮಧ್ಯದಲ್ಲಿ "ಗ್ರಹಾಶ್ಚನ ಚ ಕಾಶಿರೇ" ಎಂದು ಗ್ರಹಗಳಿಗೆ ಪ್ರಕಾಶ

ಪರಾಕ್ರಮವುಳ್ಳ ಆ ರಾಕ್ಷಸರು ತಮ್ಮ ಹಿಂದಿನ ಪ್ರಯತ್ನವೆಲ್ಲವೂ ವಿಫಲವಾದುದನ್ನು ನೋಡಿ, ಹೇಗಾದರೂ ದೃಢಪ್ರಯತ್ನ ಮಾಡಬೇಕೆಂದು ನಿಶ್ಚಯಿಸಿ, ಹತ್ತುಸಾವಿರ ಮಂದಿ ರಾಕ್ಷಸರು ಒಂದಾಗಿ ಸೇರಿ ಆ ಕುಂಭಕರ್ಣನನ್ನು ಸುತ್ತಿ ನಿಂತು ಕೆಲವರು ಮೃದಂಗಗಳನ್ನೂ, ಕೆಲವರು ಪಣವವಾದ್ಯಗಳನ್ನೂ, ಕೆಲವರು ಭೇರಿಗಳನ್ನೂ, ಕೆಲವರು ಕುಂಭವಾದ್ಯಗಳನ್ನೂ ಏಕಕಾಲದಲ್ಲಿ ನುಡಿಸಿದರು. ಕಾಡಿಗೆಯಂತೆ ಕಪ್ಪುಮೈಯುಳ್ಳ ಆ ರಾಕ್ಷಸಭಟರೆಲ್ಲರೂ ಕುಂಭಕರ್ಣನನ್ನೆಬ್ಬಿಸುವುದಕ್ಕಾಗಿ ಅವನನ್ನು ಹೊಡೆದು, ಬಡಿದು, ಬೊಬ್ಬೆಹಾಕಿ ಕೂಗಿದರು. ಇಷ್ಟಾದರೂ ಆತನಿಗೆ ಸ್ವಲ್ಪವೂ ಎಚ್ಚರವಾಗಲಿಲ್ಲ. ಇದರಿಂದಲೂ ಅವನು ಎಚ್ಚರಗೊಳ್ಳದುದನ್ನು ನೋಡಿ, ಅದಕ್ಕಿಂತಲೂ ಭಯಂಕರವಾದ ಬೇರೊಂದು ದೊಡ್ಡ ಪ್ರಯತ್ನವನ್ನು ಮಾಡುವುದಕ್ಕೆ ತೊಡಗಿದರು. ಕೆಲವರು ಒಂಟೆಗಳನ್ನೂ, ಕೆಲವರು ಕತ್ತೆಗಳನ್ನೂ, ಕೆಲವರು ಕುದುರೆಗಳನ್ನೂ, ಕೆಲವರು ಆನೆಗಳನ್ನೂ ಕರೆತಂದು, ಅವುಗಳನ್ನು ದಂಡಗಳಿಂದಲೂ, ಚಾಟಿಗಳಿಂದಲೂ, ಅಂಕುಶ

ವಿಲ್ಲದಂತೆ ಹೇಳಿರುವುದರಿಂದ, ಪ್ರಹಸ್ತ ಯುದ್ಧವು ರಾತ್ರಿಯಲ್ಲಿ ನಡೆದಿರಬೇಕೆಂದೆಣಿಸಕೂಡದು. ಏಕೆಂದರೆ, ಮುಂದೆ ರಾವಣನ ಯುದ್ಧದಲ್ಲಿ "ಪ್ರಾಜಾಪತ್ಯಂಚ ನಕ್ಷತ್ರಂ ರೋಹಿಣೀಂ ಶಶಿನಃ ಪ್ರಿಯಾಂ। ಸಮಾಕ್ರಮ್ಯ ಬುಧಸ್ತಸ್ಥೌ" ಇತ್ಯಾದಿ ರೀತಿಯಿಂದ ದಿವಾಯುದ್ಧದಲ್ಲಿಯೂ ಕೂಡ, ರಾತ್ರಿಯಲ್ಲಿ ಕಾಣುವ ನಕ್ಷತ್ರಾದಿಗಳು (ಉತ್ಪಾತ ಸೂಚಕಗಳಾಗಿ) ಕಾಣಿಸುತ್ತಿದ್ದಂತೆ ಹೇಳಿರುವುದರಿಂದ, ಇಲ್ಲಿಯೂ ಅದರಂತೆಯೇ ಹೊರತು, ರಾತ್ರಿಯೆಂದು ಗ್ರಹಿಸಬಾರದು. ಆ ದ್ವಿತೀಯ ದಿನದಲ್ಲಿಯೇ ರಾವಣನ ಪರಾಜಯವೂ, ಕುಂಭಕರ್ಣನ ಉದ್ಬೋಧನವೂ, ಅವನ ಯುದ್ಧವೂ ನಡೆದಿರುವುವು. ಏಕೆಂದರೆ, ಈ ನಡುವೆ ಅಲ್ಲಿಯೂ ಕಾಲ ವಿಶೇಷವನ್ನು ಹೇಳದೆ ಇವುಗಳನ್ನೇ ಅವಿಚ್ಛಿನ್ನವಾಗಿ ಹೇಳಿ, ಕೊನೆಗೆ ನಡೆದ ಬ್ರಹ್ಮಾಸ್ತ್ರಬಂಧನ ತದ್ವಿಮೋಕ್ಷಗಳನ್ನು ಹೇಳುವಾಗ ಮಾತ್ರ ಕಾಲವ್ಯತ್ಯಯವನ್ನು ಹೇಳಿರುವುದರಿಂದ, ಮೇಲೆ ಹೇಳಿದ ರಾವಣನ ಮುಕುಟಭಂಗವೇ ಮೊದಲಾದ ಮೂರು ಕೃತ್ಯಗಳೂ ಹಗಲಲ್ಲಿಯೇ ನಡೆದುವೆಂಬುದು ಸಿದ್ಧವು. ಇದಲ್ಲದೆ "ಸಪ್ತಷಷ್ಟಿರ್ಹತಾಃ ಕೋಟ್ಯೋ ವಾನರಾಣಾಂ ತರಸ್ವಿನಾಮ್। ಅಹ್ನಃ ಪಂಚಮಶೇಷೇಣ" ಎಂದು ಹೇಳಲ್ಪಟ್ಟದೆ. ಇಲ್ಲಿ ಹಗಲಿನ ಐದನೆಯ ಭಾಗವೆಂದರೆ ಪ್ರಾತಸ್ಸಂಗವಮಧ್ಯಾಹ್ನಾಪರಾಹ್ನ ಸಾಯಂಕಾಲಗಳೆಂಬ ಐದು ಭಾಗಗಳಲ್ಲಿ ಕೊನೆಯ ಭಾಗವಾದ ಸಾಯಂಕಾಲವೆಂದು ಸ್ಪಷ್ಟವಾಗಿ ಕಾಣುವುದು. ಆ ದಿನದ ರಾತ್ರಿಯಲ್ಲಿಯೇ ಬ್ರಹ್ಮಾಸ್ತ್ರ

ಗಳಿಂದಲೂ ಹೊಡೆದು ಕುಂಭಕರ್ಣನ ಮೇಲೆ ಬಿಟ್ಟು ತುಳಿಸಿದರು. ಆಗಲೂ ಕುಂಭಕರ್ಣನಿಗೆ ನಿದ್ರೆ ತಿಳಿಯಲಿಲ್ಲ. ತಿರುಗಿ ರಾಕ್ಷಸರೆಲ್ಲರೂ ಸೇರಿ ಶಂಖಭೇರೀ ಮೃದಂಗಾದಿ ವಾದ್ಯಗಳನ್ನು ತಂದು ತಮ್ಮ ಶಕ್ತಿಯನ್ನು ಮೀರಿ ನುಡಿಸಿದರು. ಆಗಲೂ ಕುಂಭಕರ್ಣನಿಗೆ ಎಚ್ಚರವಾಗಲಿಲ್ಲ. ತಿರುಗಿ ಆ ರಾಕ್ಷಸರೆಲ್ಲರೂ ಗುಂಪುಗೂಡಿ, ದೊಡ್ಡ ದೊಡ್ಡ ದೊಣ್ಣೆಗಳಿಂದಲೂ, ಶೂಲಗಳಿಂದಲೂ, ಮುಸಲ ಮುದ್ಗರಾಯುಧಗಳಿಂದಲೂ, ತಮ್ಮ ಶಕ್ತಿ ಮೀರಿ ಕುಂಭಕರ್ಣನನ್ನು ಅಪ್ಪಳಿಸಿ ಹೊಡೆದರು. ಆ ಮಹಾಧ್ವನಿಯು ಲಂಕೆಯಲ್ಲಿರುವ ಪರ್ವತಾರಣ್ಯಗಳೇ ಮೊದಲಾದ ಸಮಸ್ತ ಭಾಗವನ್ನೂ ವ್ಯಾಪಿಸಿತು. ಇಷ್ಟಾದರೂ ಕುಂಭಕರ್ಣನಿಗೆ ಎಚ್ಚರವಾಗಲಿಲ್ಲ. ಆಮೇಲೆ ಈ ರಾಕ್ಷಸರು, ಸಾವಿರಾರು ಭೇರಿಗಳನ್ನು ತಂದು ಆ ಕುಂಭಕರ್ಣನ ಸುತ್ತಲೂ ನಿಂತು ದೊಡ್ಡ ದೊಡ್ಡ ಸುವರ್ಣದಂಡಗಳನ್ನು ಹಿಡಿದು ಏಕಕಾಲದಲ್ಲಿ ಎಲ್ಲರೂ ಒಟ್ಟಾಗಿ ಬಾರಿಸಿದರು. ಬ್ರಹ್ಮಶಾಪದಿಂದ ಮಹಾನಿದ್ರೆಯಲ್ಲಿ ಮಲಗಿದ್ದ ಆ ಕುಂಭಕರ್ಣನಿಗೆ ಅದರಿಂದಲೂ ಎಚ್ಚರವಾಗಲಿಲ್ಲ.

ವಿಮೋಕ್ಷವಾದಮೇಲೆ ತಿರುಗಿ ಲಂಕೆಯನ್ನು ಮುತ್ತಿ ಅದನ್ನು ದಹಿಸಿದುದು. ಮತ್ತು ಕುಂಭ ನಿಕುಂಭ ಯೂಪಾಕ್ಷ ಶೋಣಿತಾಕ್ಷ ಪ್ರಜಂಘಾಕಂಪನ ಮಕರಾಕ್ಷರ ವಧವು. "ತತೋಽಸ್ತಂಗತ ಆದಿತ್ಯೇ ರಾತ್ರೌತಸ್ಮಿನ್ನಿಶಾಮುಖೇ। ಲಂಕಾಮಭಿಮುಖಾಸ್ಸೋಲ್ಕಾಃ ಜಗ್ಮುಸ್ತೇ ಪ್ಲವಗರ್ಷಭಾಃ" ಎಂಬ ಆ ರಾತ್ರಿಯಲ್ಲಿ ವಾನರರು ಕೊಳ್ಳಿಗಳನ್ನು ಹಿಡಿದುಕೊಂಡು ಹೋದುದಾಗಿ ಹೇಳಿರುವುದರಿಂದ, ಮೇಲೆ ಹೇಳಿದ ಕೃತ್ಯಗಳೆಲ್ಲವೂ ಆ ರಾತ್ರಿಯೇ ನಡೆದುವೆಂಬು ಸಿದ್ಧವು. ಹೀಗೆ ಎರಡು ದಿನಗಳ ಯುದ್ಧದಲ್ಲಿ ರಾವಣನ ಮೂಲಬಲವೂ, ರಾವಣನೂ, ಇಂದ್ರಜಿತ್ತೂ ಹೊರತು, ಮಿಕ್ಕ ರಾಕ್ಷಸರೆಲ್ಲರೂ ಹತರಾಗಲು, ಅದರಿಂದಾಚೆಗೆ ಮೂರು ದಿನಗಳ ವರೆಗೆ ಇಂದ್ರಜಿದ್ಯುದ್ಧವು. ಕೊನೆಗೆ "ಅಹೋರಾತ್ರೈಸ್ತ್ರಿಭಿರ್ವೀರಃ ಕಥಂಚಿದ್ವಿನಿಪಾತಿತಃ" ಎಂದು ಪೂರ್ಣವಾಗಿ ಮೂರುದಿನಗಳ ಯುದ್ಧವಾದಮೇಲೆ ಇಂದ್ರಜಿತ್ತಿನ ವಧವು. ಆಮೇಲೆ ಆರನೆಯ ದಿನದಲ್ಲಿ ಮೂಲಬಲ ವಧವು. ಅಥವಾ ಸಪ್ತಮದಿನದಲ್ಲಿ ರಾವಣಯುದ್ಧವಾಗಿ, ಅಷ್ಟಮದಿನದ ಬೆಳಿಗ್ಗೆ ರಾವಣ ವಧವು. "ಅಭ್ಯುತ್ಥಾನಂ ತ್ವಮದ್ಯೈವ ಕೃಷ್ಣಪಕ್ಷಚತುರ್ದಶೀಂ। ಕೃತ್ವಾ ನಿರ್ಯಾಹ್ಯಮಾವಾಸ್ಯಾಂ ವಿಜಯಾಯ ಬಲೈರ್ವೃತಃ" ಇತ್ಯಾದಿ ಸಂದರ್ಭದಲ್ಲಿ ಈ ಎರಡು ವಿಧವಾಗಿಯೂ ಅರ್ಥಮಾಡಬಹುದು. ಪೂರ್ವಾಮಾವಾಸ್ಯೆಯಲ್ಲಿ ರಾವಣವಧೆ ಸಂದಿಟ್ಟುಕೊಂಡೇ ಅಮಾವಾಸ್ಯೆಯಲ್ಲಿ ರಾವಣವಧವೆಂಬ ಪ್ರವಾದವಿದೆ. ಹೀಗಾದರೆ

ಮೊದಲೇ ಕೋಪಗೊಂಡಿದ್ದ ಆ ರಾಕ್ಷಸರಿಗೆ ಇನ್ನೂ ಮೇಲೆ ಮೇಲೆ ಕೋಪಾವೇಶವು ಹೆಚ್ಚಿಹೋಯಿತು. ಆಗ ಕೆಲವು ರಾಕ್ಷಸರು ಕುಂಭಕರ್ಣನ ಮೈಯನ್ನು ತಮ್ಮ ಮುಷ್ಟಿಗಳಿಂದ ಹೊಡೆದು, ತಮ್ಮ ಸರ್ವಶಕ್ತಿಯನ್ನೂ ತೋರಿಸಿದರು. ತಿರುಗಿ ಕೆಲವರು ಭೇರಿಗಳನ್ನು ನುಡಿಸಿದರು. ಕೆಲವರು ಮಹಾಧ್ವನಿಯಿಂದ ಕೂಗಿದರು. ಏನಾದರೂ ಕುಂಭಕರ್ಣನಿಗೆ ನಿದ್ರೆ ತಿಳಿಯಲಿಲ್ಲ. ಆಮೇಲೆ ಕೋಪೋದ್ರಿಕ್ತರಾದ ಆ ರಾಕ್ಷಸರೆಲ್ಲರೂ ಸೇರಿ, ಕುಂಭಕರ್ಣನನ್ನು ನಾನಾವಿಧವಾಗಿ ಹಿಂಸಿಸುವುದಕ್ಕೆ ತೊಡಗಿದರು. ಕೆಲವರು ಕುಂಭಕರ್ಣನ ತಲೆಕೂದಲನ್ನು ಕೀಳುತ್ತಿದ್ದರು. ಕೆಲವರು ಅವನ ಕಿವಿಯನ್ನು ಕಚ್ಚಿದರು. ಬೇರೆ ಕೆಲವರು ನೂರಾರು ಕೊಡಗಳಲ್ಲಿ ನೀರನ್ನು ತುಂಬಿತಂದು ಅವನ ಕಿವಿಗಳಲ್ಲಿ ಹುಯ್ಯುತ್ತಿದ್ದರು. ಇಷ್ಟಾದರೂ ಮಹಾನಿದ್ರೆಯಲ್ಲಿ ಮಲಗಿದ್ದ ಆ ಕುಂಭಕರ್ಣನ ದೇಹವು ಸ್ವಲ್ಪಮಾತ್ರವೂ ಕದಲಲಿಲ್ಲ. ಬೇರೆ ಕೆಲವು ರಾಕ್ಷಸರು ಚಮ್ಮಟಿಗೆಗಳನ್ನೂ ಕಬ್ಬಿಣದೊನಕೆಗಳನ್ನೂ ಹಿಡಿದು, ಅವುಗಳಿಂದ ಕುಂಭಕರ್ಣನ ನಡುನೆತ್ತಿಯಮೇಲೆಯೂ,

---

"ರಾಮರಾವಣಯೋರ್ಯುದ್ಧಂ ಸಪ್ತರಾತ್ರಮವರ್ತತ" ಎಂದು ರಾಮರಾವಣರ ಯುದ್ಧವು ಏಳುರಾತ್ರಿಗಳವರೆಗೆ ನಡೆಯಿತೆಂಬ ವಚನವೂ ಕೂಡ, ರಾಮರಾವಣ ರಿಬ್ಬರಿಗೆ ಮಾತ್ರವೇ ಅಲ್ಲದೆ, ರಾವಣಸೇನೆಯೊಡನೆ ನಡೆದ ಯುದ್ಧವನ್ನೂ ಲೆಕ್ಕ ಮಾಡಿ ಹೇಳಿದುದಾಗಿ, ಗ್ರಹಿಸಿದರೆ ಸಮಂಜಸವಾಗುವುದು. ಈ ಲೆಕ್ಕದಿಂದ "ಮಂತ್ರಯಿತ್ವಾ ಪ್ರಸುಪ್ತೋಯಂ ಇತಸ್ತು ನವಮೇಹನಿ" ಎಂದು ಎಲ್ಲಾ ಕೋಶಗಳಲ್ಲಿರುವ ವಚನವೂ ಸುಸಂಗತವಾಗುವುದು. (ಇತಃ) ಈ ಮಕುಟಭಂಗದಿನದಿಂದ ಹಿಂದೆ ಒಂಬತ್ತನೆಯ ದಿನದಲ್ಲಿ ಎಂದರೆ, ಈ ದಿನವನ್ನು ಬಿಟ್ಟು ನಿನ್ನೆಯಿಂದಾಚೆಗೆ ಒಂಬತ್ತನೆಯ ದಿನದಲ್ಲಿ (ಪ್ರಸುಪ್ತಃ) ಮಲಗಿದನೆಂದನ್ವಯವು. ಆದುದರಿಂದ (ಮಂತ್ರಯಿತ್ವಾ ಪ್ರಸುಪ್ತಃ) ಎಂಬುದಕ್ಕೆ ಅದಕ್ಕೆ ಮೊದಲುದಿನವೇ ಮಂತ್ರಾಲೋಚನೆಯನ್ನು ನಡೆಸಿ ಆ ಒಂಬತ್ತನೆಯ ದಿನದಲ್ಲಿ ಮಲಗಿದುದಾಗಿ ಗ್ರಾಹ್ಯವು.

ಆದರೆ ಇಲ್ಲಿ ಬೇರೊಂದು ಪೂರ್ವಪಕ್ಷವುಂಟು. ಹಿಂದೆ ಸೀತೆಯನ್ನು ಕುರಿತು ರಾವಣನು "ದ್ವೌಮಾಸೌ ರಕ್ಷಿತವ್ಯೌ ಮೇ ಯೋऽವಧಿಸ್ತೇ ಮಯಾಕೃತಃ" ಎಂದು ಎರಡು ತಿಂಗಳ ಗಡುವನ್ನು ಹೇಳಿರುವನು. ಇದೇ ವಿಷಯವನ್ನು ಸೀತೆಯು ಹನುಮಂತನಿಗೆ ತಿಳಿಸಿದಾಗಲೂ, "ದ್ವೌಮಾಸೌ ತೇನ ಕಾಲೋ ಮೇ ಜೀವಿತಾನುಗ್ರಹಃ ಕೃತಃ। ವರ್ತತೇ ದಶಮೋ ಮಾಸೋ ದ್ವೌತು ಶೇಷೌ ಪ್ಲವಂಗಮ" ಎಂದು

ಇನ್ನೂ ಅಂಗಾಂಗಗಳ ಮೇಲೆಯೂ ಅಪ್ಪಳಿಸಿ ಬಡಿದರು. ಮತ್ತೆ ಕೆಲವರು ಹಗ್ಗಗಳ ಕಟ್ಟಿನಿಂದ ಬಿಗಿದ ಶತಘ್ನಿಗಳಿಂದ, ಸುತ್ತಲೂ ಆತನ ದೇಹವನ್ನು ಭೇದಿಸುತ್ತಿದ್ದರು. ಆಗಲೂ ಅವನಿಗೆ ಎಚ್ಚರವಾಗಲಿಲ್ಲ. ಆಮೇಲೆ ಕೆಲವು ರಾಕ್ಷಸರು ಸಾವಿರಾರು ಆನೆಗಳನ್ನು ಅವನ ಮೈಮೇಲೆ ಬಿಟ್ಟು ತುಳಿಸಿದರು. ಆ ಆನೆಗಳಿಂದ ತುಳಿಸಿದಾಗ ಮಾತ್ರ, ಆ ಕುಂಭಕರ್ಣನಿಗೆ ಸಣ್ಣಿರುವೆಗಳು ಮೈಮೇಲೆ ಹರಿದಂತೆ ಸ್ವಲ್ಪವಾಗಿ ಸ್ಪರ್ಶಜ್ಞಾನವು ತೋರಿ ಎಚ್ಚರವುಂಟಾಯಿತು. ನಿದ್ರೆತಿಳಿದ ಮೇಲೆಯೂ ಕೂಡ, ಅವನಿಗೆ ಆ ನಿದ್ರೆಯ ಮಯಕವನ್ನು ತಪ್ಪಿಸಿ ಅವನನ್ನು ಹಾಸಿಗೆಯಿಂದೆಬ್ಬಿಸುವುದಕ್ಕಾಗಿ ಆಗಾಗ ರಾಕ್ಷಸರು ಅವನ ಮೈಮೇಲೆ ದೊಡ್ಡ ದೊಡ್ಡ ಪರ್ವತಶಿಖರಗಳನ್ನೂ, ವೃಕ್ಷಗಳನ್ನೂ, ಬೀಸಿ ಬಡಿಯುತ್ತಿದ್ದರು. ಆ ಪ್ರಹಾರಗಳೊಂದನ್ನೂ ಕುಂಭಕರ್ಣನು ಲಕ್ಷ್ಯಮಾಡದೆ, ನಿದ್ರೆತಿಳಿದೊಡನೆ ಹಸಿವಿನ ಆತುರದಿಂದಲೂ, ಆಕಸ್ಮಿಕವಾದ ನಿದ್ರಾಭಂಗದಿಂದುಂಟಾದ ಸಂಭ್ರಮದಿಂದಲೂ ಪೀಡಿತನಾಗಿ ಮೈಮುರಿಯುತ್ತ ತಟ್ಟನೆ ಮೇಲೆದು ಕುಳಿತನು. ಮೇಲೆದ್ದು ಮೈಮುರಿಯುವಾಗ ಅವನ ವಿಕೃತಸ್ವರೂಪವನ್ನು ಕೇಳಬೇಕೆ? ಬೆಟ್ಟದ ಕೋಡುಗಳಂತೆ ದೃಢವಾಗಿ, ಸರ್ಪದೇಹದಂತೆಯೂ ಪರ್ವತಶಿಖರದಂತೆಯೂ, ಪೃಥುಲವಾಗಿದ್ದ ತೋಳುಗಳೆರಡನ್ನೂ ಊರ್ಧ್ವಕ್ಕೆ ಚಾಚಿ, ಬಡಬಾಮುಖದಂತೆ ವಿಸ್ತಾರವಾಗಿ ಬಾಯನ್ನು ತೆರೆದು ಭಯಂಕರ ಸ್ವರೂಪದಿಂದ ಆಕಳಿಸಿದನು. ಹೀಗೆ ಆ ರಾಕ್ಷಸನು ಬಾರಿಬಾರಿಗೂ ಆಕಳಿಸು

ವ್ಯಕ್ತವಾಗಿ ಹೇಳಿರುವಳು. ಇದರಿಂದ ಹನುಮಂತನ ಲಂಕಾಪ್ರವೇಶಕಾಲವು ಹತ್ತನೆಯ ತಿಂಗಳೆಂದು ಸಿದ್ಧವಾಗುವುದಲ್ಲವೆ? ಹೀಗಿರುವಾಗ ಮೇಲೆ ಹೇಳಿದ ಕಾಲಸಂಖ್ಯೆಗೆ ಸರಿಹೋಗುವುದು. ಹೀಗೆ ಎಂದರೆ, ಹಾಗಲ್ಲ. "ಊರ್ಧ್ವಂ ಮಾಸಾನ್ನ ಜೀವೇಯಂ ಮಾಸಾದೂರ್ಧ್ವಂ ನ ಜೀವಿಷೇ" ಇತ್ಯಾದಿ ವಾಕ್ಯಗಳಿಂದ ಸೀತೆಯೇ ಬೇರೆ ಕಡೆಗಳಲ್ಲಿ ಒಂದು ತಿಂಗಳ ಗಡುವನ್ನು ಹೇಳಿರುವುದರಿಂದ, ರಾವಣನು ಹೇಳಿದ ಎರಡು ತಿಂಗಳ ಗಡುವೆಂಬುದು, ಕೇವಲ ಮದೋನ್ಮತ್ತನಾದ ಆ ರಾವಣನು ಸೀತೆಯ ಮನಸ್ಸಮಾಧಾನಕ್ಕಾಗಿ ಹೇಳಿದುದೇ ಹೊರತು, ಯಥಾರ್ಥವಲ್ಲವೆಂದು ಸಿದ್ಧವಾಗುವುದು. ಸೀತೆಯು ನಿಜಸ್ಥಿತಿಯನ್ನು ಬಲ್ಲವಳಾಗಿದ್ದರೂ ರಾವಣನ ಮಾತನ್ನೇ ಅನುವಾದಮಾಡಿ ಹೇಳುವುದಕ್ಕಾಗಿ ಹನುಮಂತನಿಗೆ ಎರಡು ತಿಂಗಳೆಂದು ಹೇಳಿರುವಳೇ ಹೊರತು ಬೇರೆಯಲ್ಲ.

ತ್ತಿರುವಾಗ, ಪಾತಾಳರಂಧ್ರಕ್ಕೆ ಸಮಾನವಾದ ಅವನ ಬಾಯಿಯು, ಸಾವರ್ಣಿಮೇರುಪರ್ವತದ ಶಿಖರಾಗ್ರದಲ್ಲಿ ಉದಿಸಿಬಂದ ಸೂರ್ಯನಂತೆ ಜ್ವಲಿಸುತ್ತಿತ್ತು. ಬಲಾಢ್ಯನಾದ ಆ ಕುಂಭಕರ್ಣನು ಹೀಗೆ ಮೈಮುರಿದು ಆಕಳಿಸುತ್ತ ಮೇಲೆದ್ದು ಕುಳಿತಮೇಲೆ, ಅವನ ಬಾಯಿಂದ ಹೊರಡುತ್ತಿದ್ದ ಉಸಿರಿನ ಗಾಳಿಯು, ಪರ್ವತಾಗ್ರದಿಂದ ಹೊರಟು ಬರುವ ಬಿರುಗಾಳಿ ಯಂತೆ ಬೀಸುತ್ತಿತ್ತು. ಆ ಕುಂಭಕರ್ಣನು ಮೇಲೇಳುವಾಗ ಆಭರಣಾ ಲಂಕೃತವಾದ ಆತನ ಕಪ್ಪಾದ ದೇಹವು, ವರ್ಷಾಕಾಲದಲ್ಲಿ ಕೊಕ್ಕರೆ ಗಳಿಂದ ಕೂಡಿದ ಕರೀಮೇಘದಂತೆ ಕಾಣುತ್ತಿತ್ತು. ಉರಿಯುವ ಬೆಂಕಿ ಯಂತೆ ಕ್ರೂರಗಳಾಗಿಯೂ, ಮಿಂಚಿನಂತೆ ಜಾಜ್ವಲ್ಯಮಾನವಾದ ತೇಜ ಸ್ಸುಳ್ಳವುಗಳಾಗಿಯೂ ಇದ್ದ ಅವನ ಕಣ್ಣುಗಳೆರಡೂ ಶನ್ಯಂಗಾರಕಗಳೆಂಬ ಮಹಾಗ್ರಹಗಳಂತೆ ಕಾಣುತ್ತಿದ್ದುವು. ಆಮೇಲೆ ಅಲ್ಲಿದ್ದ ರಾಕ್ಷಸಭಟರು ಕುಂಭಕರ್ಣನ ಸಂತೋಷಾರ್ಥವಾಗಿ ತಾವು ತಂದಿದ್ದ ಸಮಸ್ತ ಭಕ್ಷ್ಯರಾಶಿ ಗಳನ್ನೂ ಆತನಿಗೆ ತೋರಿಸಿದರು. ಬಗೆಬಗೆಯಾಗಿಯೂ ವಿಸ್ತಾರವಾಗಿಯೂ ಇದ್ದ ಆ ಭಕ್ಷ್ಯರಾಶಿಗಳನ್ನೂ, ವರಾಹಮಹಿಷಾದಿ ಪ್ರಾಣಿಗಳನ್ನೂ ಅವನು ಕ್ರಮವಾಗಿ ಭಕ್ಷಿಸಿಬಿಟ್ಟನು. ಹೀಗೆ ಆ ಕುಂಭಕರ್ಣನು ಹಸಿವಿನ ಆತುರದಿಂದ ಮಾಂಸವನ್ನು ತಿಂದು, ದಾಹ ಶಮನಾರ್ಥವಾಗಿ ಆಗಾಗ ರಕ್ತವನ್ನು ಹೀರುತ್ತ, ನಡುನಡುವೆ ಮೇದಸ್ಸಿನಿಂದ ತುಂಬಿದ ಗಡಿಗೆಗಳನ್ನೂ, ನಾನಾವಿಧ ಮದ್ಯಗಳನ್ನೂ ಕುಡಿಯುತ್ತಿದ್ದನು. ಆಮೇಲೆ ಅಲ್ಲಲ್ಲಿ ಭಯ ದಿಂದ ಮರೆಯಾಗಿದ್ದ ರಾಕ್ಷಸರೆಲ್ಲರೂ] ಕುಂಭಕರ್ಣನು ರಕ್ತಮಾಂಸದಿಂದ ತೃಪ್ತನಾದುದನ್ನು ತಿಳಿದು, ಧೈರ್ಯದಿಂದ ಮುಂದೆಬಂದು, ಆತನಿಗೆ ತಲೆಬಗ್ಗಿ ನಮಸ್ಕರಿಸಿ ಸುತ್ತಲೂ ನಿಂತರು. ಕುಂಭಕರ್ಣನಾದರೋ ನಿದ್ರೆಯಿಂದ ಕುಗ್ಗಿ ಕಳವಳಿಸುವ ಕಣ್ಣುಳ್ಳವನಾಗಿ, ನಾಲ್ಕುಕಡೆಗಳಿಗೂ ದೃಷ್ಟಿಯಿಟ್ಟು ಆ ರಾಕ್ಷಸರೆಲ್ಲರನ್ನೂ ನೋಡಿದನು. ಹೀಗೆ ಕುಂಭಕರ್ಣನು ತನ್ನ ಪ್ರಸನ್ನದೃಷ್ಟಿಯಿಂದ ಅಲ್ಲಿದ್ದ ಸಮಸ್ತ ರಾಕ್ಷಸಭಟರನ್ನೂ ಸಮಾಧಾನಗೊಳಿಸುತ್ತ, ಅವರು ತನ್ನನ್ನು ಅಕಸ್ಮಾತ್ತಾಗಿ ಎಚ್ಚರಗೊಳಿ ಸಿದುದಕ್ಕಾಗಿ ಆಶ್ಚರ್ಯದಿಂದ ಅವರನ್ನು ನೋಡಿ "ಎಲೆ ರಾಕ್ಷಸರೆ! ಇದೇ ನಿದು! ನೀವು ಹೀಗೆ ಅಕಾಲದಲ್ಲಿ ನನ್ನನ್ನು ಎಬ್ಬಿಸುವುದಕ್ಕೆ ಕಾರಣ

ವೇನು? ನಿಮ್ಮ ಪ್ರಭುವಾದ ರಾವಣನಿಗೆ ಕ್ಷೇಮವಷ್ಟೆ? ಆತನಿಗೆ ಭಯ ವೇನೂ ಇಲ್ಲವಷ್ಟೆ? ಹಾಗಿರದು! ಅವನಿಗೆ ಬೇರೆಯವರಿಂದ ಏನೋ ಒಂದು ಮಹಾಭಯವುಂಟಾಗಿರಬೇಕು. ಇದರಲ್ಲಿ ಸಂದೇಹವಿಲ್ಲ. ಆ ಭಯವನ್ನು ತಪ್ಪಿಸುವುದಕ್ಕಾಗಿಯೇ ನೀವು ಇಷ್ಟಾತುರದಿಂದ ಬಂದು ನನ್ನನ್ನು ಎಚ್ಚರಗೊಳಿಸಿರಬೇಕು. ಹಾಗಿದ್ದರೂ ಇರಲಿ! ಚಿಂತೆಯಿಲ್ಲ! ಅವನಿಗೆ ಯಾವ ಭಯವಿದ್ದರೂ ನಿಶ್ಶೇಷವಾಗಿ ನೀಗಿಸಬಲ್ಲೆನು. ದೇವೇಂದ್ರನನ್ನಾ ದರೂ ಕೊಂದು ಕೆಡುಹವೆನು. ಅಗ್ನಿಹೋತ್ರನನ್ನಾದರೂ ಕತ್ತರಿಸಿ ಕೊಲ್ಲುವೆನು. ನಮ್ಮ ಪ್ರಭುವಾದ ರಾವಣನಿಗೆ ಯಾವುದೋ ಒಂದು ಮಹಾಭಯವುಂಟಾಗಿರುವುದರಲ್ಲಿ ಸಂದೇಹವಿಲ್ಲ. ಹಾಗಿಲ್ಲದಿದ್ದರೆ ನನಗೆ ಪ್ರಿಯಸಹೋದರನಾದ ಆ ರಾಕ್ಷಸರಾಜನು, ಅಲ್ಪಕಾರಣಕ್ಕಾಗಿ ನನ್ನನ್ನು ಅಕಾಲದಲ್ಲಿ ಎಬ್ಬಿಸಿ ನನ್ನ ನಿದ್ರೆಗೆ ಭಂಗವನ್ನು ತರುತ್ತಿರಲಿಲ್ಲ. ಆದುದ ರಿಂದ ಎಲೈ ರಾಕ್ಷಸಭಟರೆ! ಈಗ ನೀವು ನನ್ನನ್ನೆಬ್ಬಿಸುವುದಕ್ಕೆ ಕಾರಣ ವೇನೆಂಬುದನ್ನು ಮುಚ್ಚುಮರೆಯಿಲ್ಲದೆ ನಿಜವಾಗಿ ತಿಳಿಸಿರಿ!" ಎಂದನು. ಹೀಗೆ ಆತುರದಿಂದ ಪ್ರಶ್ನೆಮಾಡುತ್ತಿರುವ ಮಹಾಬಲಾಢ್ಯನಾದ ಕುಂಭ ಕರ್ಣನನ್ನು ಕುರಿತು, ರಾಜಮಂತ್ರಿಯಾದ ಯೂಪಾಕ್ಷನೆಂಬವನು ಕೈ ಮುಗಿದು ನಿಂತು ವಿಜ್ಞಾಪಿಸುವನು. "ಎಲೈ ರಾಜನೆ! ನಮಗೆ ದೇವತೆ ಗಳಿಂದ ಎಂದಿಗಾದರೂ ಸ್ವಲ್ಪವೂ ಭಯವಿಲ್ಲವೆಂಬುದನ್ನು ನೀನೂ ಬಲ್ಲೆ ಯಷ್ಟೆ? ಆದರೇನು? ಈಗ ಅವರಿಗಿಂತಲೂ ಹೀನರಾದ ಮನುಷ್ಯ ರಿಂದಲೇ ಮಹಾಭಯವು ಪ್ರಾಪ್ತವಾಗಿ ಬಲವಾಗಿ ಪೀಡಿಸುತ್ತಿರುವುದು. ದೈತ್ಯರಿಂದಾಗಲಿ, ದಾನವರಿಂದಾಗಲಿ, ನಮಗೆ ಅಷ್ಟೊಂದು ಭಯವು ಸಂಭವಿಸಿದುದಿಲ್ಲ. ಈಗ ನಮಗೆ ಮನುಷ್ಯರಿಂದುಂಟಾಗಿರುವ ಈ ಭಯ ವಾದರೋ ಮಿತಿಮೀರಿ ಹೋಗಿರುವುದು. ಪರ್ವತಾಕಾರವುಳ್ಳ ಕೆಲವು ವಾನರರು ಲಂಕೆಯ ಸುತ್ತಲೂ ಮುತ್ತಿಗೆ ಹಾಕಿರುವರು. ರಾಮನೆಂಬ ವನು ಸೀತಾಪಹರಣದುಃಖದಿಂದ ಬೆಂದು ನಮಗೆ ಈ ಘೋರವಾದ ಭಯವನ್ನು ತಂದಿಟ್ಟಿರುವನು. ಎಲೈ ಯುವರಾಜನೆ! ಪೂರ್ವದಲ್ಲಿ ಏಕಾಕಿ ಯಾಗಿ ಬಂದ ಯಾವುದೋ ಒಂದು ಕಪಿಯಿಂದಲೇ ನಮ್ಮ ಪಟ್ಟಣವೆಲ್ಲವೂ ಕ್ಷಣಮಾತ್ರದಲ್ಲಿ ದಗ್ಧವಾಯಿತು. ಅಕ್ಷಕುಮಾರನೂ ತನ್ನ ಪರಿವಾರ

ಗಳೊಡನೆಯೂ, ತನ್ನ ಮಹಾಗಜದೊಡನೆಯೂ ಸೇರಿ ಆ ಕಪಿಯಿಂದಲೇ ಹತನಾಗಿ ಬಿದ್ದನು. ಸಮಸ್ತ ದೇವತೆಗಳನ್ನೂ ಗೋಳಾಡಿಸತಕ್ಕ ಮಹಾ ವೀರ್ಯವುಳ್ಳ ನಮ್ಮ ಪ್ರಭುವಾದ ರಾವಣನೂ ಕೂಡ, ಈಗ ತಾನೇ ಹೋಗಿ ರಾಮನೊಡನೆ ಯುದ್ಧವನ್ನಾರಂಭಿಸಿ ಆ ಯುದ್ಧದಲ್ಲಿ ಸೂರ್ಯ ತೇಜಸ್ಸುಳ್ಳ ರಾಮನಿಂದ ಪರಾಜಿತನಾಗಿ ಬಂದನು. ಆಗಲೂ ರಾಮನು, ನಿರಾಯುಧನಾದ ರಾವಣನನ್ನು ನೋಡಿ ಈತನು ಮೃತಪ್ರಾಯನೆಂಬ ಬುದ್ಧಿಯಿಂದ ಬಿಟ್ಟುಕಳುಹಿಸಿದನು. ಮಹಾಪ್ರಭೂ! ರಾಕ್ಷಸರಾಜನ ವಿಷಯದಲ್ಲಿ ದೇವದಾನವದೈತ್ಯರಲ್ಲಿ ಯಾರೊಬ್ಬರಿಂದಲೂ ಸಾಗದ ಕೆಲಸ ವನ್ನು ಮನುಷ್ಯಮಾತ್ರನಾದ ಆ ರಾಮನು ನಡೆಸಿಬಿಟ್ಟನು! ನಿನ್ನಣ್ಣ ನಾದ ರಾವಣನು ಆ ಯುದ್ಧದಲ್ಲಿ ಬದುಕುವನೋ ಇಲ್ಲವೋ ಎಂಬ ಸಂದೇಹವು ತೋರಿದಮೇಲೆಯೇ ರಾಮನು ಅವನನ್ನು ಬಿಟ್ಟಿರುವನು" ಎಂದನು. ಯೂಪಾಕ್ಷನ ಬಾಯಿಂದ, ತನ್ನಣ್ಣನಾದ ರಾವಣನಿಗೆ ಯುದ್ಧದಲ್ಲಿ ಭಂಗವುಂಟಾಯಿತೆಂಬ ಸುದ್ದಿಯನ್ನು ಕೇಳಿದೊಡನೆ, ಕುಂಭ ಕರ್ಣನು ಕೋಪದಿಂದ ಕಣ್ಣಾಲಿಗಳನ್ನು ತಿರುಗಿಸುತ್ತ "ಯೂಪಾಕ್ಷಾ! ಏನು ಹೇಳಿದೆ? ಕೇವಲ ಮನುಷ್ಯಮಾತ್ರನಾದ ರಾಮನಿಂದ ನಮ್ಮಣ್ಣ ನಿಗೆ ಅಷ್ಟೊಂದು ಪರಾಭವವೇ? ಓಹೋ ಇರಲಿ! ಹಾಗಿದ್ದರೆ ಈಗಲೇ ನಾನು ಮೊದಲು ನಮ್ಮ ಶತ್ರುಸೈನ್ಯವೆಲ್ಲವನ್ನೂ, ರಾಮಲಕ್ಷ್ಮಣರನ್ನೂ, ಯುದ್ಧದಲ್ಲಿ ಕೊಂದಮೇಲೆಯೇ ನನ್ನಣ್ಣನನ್ನು ನೋಡುವೆನು. ಮೊದಲು ಆ ವಾನರರ ರಕ್ತಮಾಂಸದಿಂದ ಇಲ್ಲಿನ ರಾಕ್ಷಸರನ್ನು ತೃಪ್ತಿಪಡಿಸುವೆನು. ನಾನೇ ಆ ರಾಮಲಕ್ಷ್ಮಣರ ರಕ್ತವನ್ನು ಕುಡಿಯುವೆನು!" ಎಂದನು. ಹೀಗೆ ಕುಂಭಕರ್ಣನು ಗರ್ವದಿಂದುಬ್ಬಿ ಕೋಪಾವೇಶದಿಂದ ಯುಕ್ತಾ ಯುಕ್ತವನ್ನರಿಯದೆ ಮಾತಾಡುವುದನ್ನು ಕೇಳಿ, ರಾಕ್ಷಸ ಪ್ರಧಾನನಾದ ಮಹೋದರನು ಕೈಮುಗಿದು ನಿಂತು "ಮಹಾಪ್ರಭೂ! ನೀನು ಮೊದಲು ರಾವಣನ ಬಳಿಗೆ ಹೋಗಿ ಬರುವುದೇ ಮೇಲು! ಮೊದಲು ಅವನನ್ನು ಕಂಡು ಅವನು ಹೇಳುವ ಮಾತುಗಳನ್ನು ಕೇಳಿ, ಅವುಗಳಲ್ಲಿರುವ ಗುಣ ದೋಷಗಳನ್ನೂ ಚೆನ್ನಾಗಿ ವಿಮರ್ಶಿಸಿ, ಆಮೇಲೆ ಯುದ್ಧದಲ್ಲಿ ಶತ್ರು ಗಳನ್ನು ಜಯಿಸಬಹುದು" ಎಂದನು. ತೇಜಸ್ವಿಯಾದ ಕುಂಭಕರ್ಣನು

ಮಹೋದರನ ಮಾತನ್ನು ಕೇಳಿ, ರಾಕ್ಷಸರಿಂದ ಪರಿವೇಷ್ಟಿತನಾಗಿ ರಾವಣನ ಮನೆಗೆ ಹೊರಡುವುದಕ್ಕೆ ಸಿದ್ಧನಾದನು. ಇಷ್ಟರಲ್ಲಿ ಹೀಗೆ ಭಯಂಕರಾಕಾರವುಳ್ಳ ಕುಂಭಕರ್ಣನನ್ನು ನಿದ್ರೆಯಿಂದೆಬ್ಬಿಸುವುದಕ್ಕಾಗಿ ಬಂದಿದ್ದ ರಾಕ್ಷಸರಲ್ಲಿ ಕೆಲವರು, ವೇಗದಿಂದ ಮುಂದಾಗಿ ಹೊರಟು ರಾವಣನ ಮನೆಗೆ ಬಂದರು. ಈ ರಾಕ್ಷಸರೆಲ್ಲರೂ ಸೇರಿ ಸಿಂಹಾಸನದಲ್ಲಿ ಕುಳಿತಿದ್ದ ರಾವಣನನ್ನು ಕಂಡು ಅವನಿಗೆ ಕೈಮುಗಿದು, "ಎಲೈ ರಾಕ್ಷಸೋತ್ತಮನೆ! ನಿನ್ನ ತಮ್ಮನಾದ ಕುಂಭಕರ್ಣನು ನಿದ್ರೆತಿಳಿದೆದ್ದಿರುವನು. ನೀನೇ ಅಲ್ಲಿಗೆ ಹೋಗುವೆಯಾ? ಇಲ್ಲವೇ ಅವನೇ ಇಲ್ಲಿಗೆ ಬಂದಮೇಲೆ ನೋಡುವೆಯಾ? ನಿನ್ನಿಷ್ಟವೇನು?" ಎಂದು ಕೇಳಿದರು. ಕುಂಭಕರ್ಣನು ನಿದ್ರೆಯಿಂದೆದ್ದಿರುವ ವೃತ್ತಾಂತವನ್ನು ಕೇಳಿದೊಡನೆ ರಾವಣನು ಪರಮಸಂತೋಷಯುಕ್ತನಾಗಿ, ಮುಂದಿದ್ದ ರಾಕ್ಷಸರನ್ನು ಕುರಿತು "ಎಲೆ ಸೇವಕರೆ! ನಾನು ಕುಂಭಕರ್ಣನನ್ನು ಇಲ್ಲಿಯೇ ನೋಡಬೇಕೆಂದಿರುವೆನು. ಆದುದರಿಂದ ನೀವು ನ್ಯಾಯರೀತಿಯಿಂದ ಆತನನ್ನು ಸತ್ಕರಿಸಿ ಇಲ್ಲಿಗೇ ಕರೆತನ್ನಿರಿ!" ಎಂದನು. ಆ ರಾಕ್ಷಸರು "ಮಹಾರಾಜನಪ್ಪಣೆ" ಎಂದು ಹಿಂತಿರುಗಿ ಕುಂಭಕರ್ಣನ ಬಳಿಗೆ ಬಂದು "ಎಲೆ ರಾಜನೆ! ರಾಕ್ಷಸಸಾರ್ವಭೌಮನಾದ ರಾವಣನು ಅಲ್ಲಿಯೇ ನಿನ್ನನ್ನು ನೋಡಬೇಕೆಂದಿರುವನು. ಅಲ್ಲಿಗೆ ಹೊರಡುವುದಕ್ಕೆ ಪ್ರಯತ್ನಿಸು! ನಿನ್ನಣ್ಣನಿಗೆ ಸಂತೋಷವನ್ನುಂಟುಮಾಡು" ಎಂದರು. ಮಹಾಬಾಹುವಾಗಿಯೂ ಶತ್ರುದುರ್ಜಯನಾಗಿಯೂ ಇರುವ ಕುಂಭಕರ್ಣನು ಅಣ್ಣನಾಜ್ಞೆಯನ್ನು ಕೇಳಿ, "ಸರಿ! ಹಾಗೆಯೇ ಆಗಲಿ" ಎಂದು ಹೇಳಿ, ಹಾಸಿಗೆಯಿಂದೆದ್ದು, ಸಂತೋಷದಿಂದ ಮುಖವನ್ನು ತೊಳೆದು ಸ್ನಾನಮಾಡಿ, ಕಾಲೋಚಿತವಾದ ಭೂಷಣಗಳಿಂದ ದೇಹವನ್ನಲಂಕರಿಸಿಕೊಂಡು, ತಿರುಗಿ ದಾಹಶಾಂತಿಗಾಗಿ ಬಲವೃದ್ಧಿಕರವಾದ ಮದ್ಯವನ್ನು ಶೀಘ್ರದಲ್ಲಿ ತಂದಿಡುವಂತೆ ಸೇವಕರನ್ನು ತ್ವರೆಪಡಿಸಿದನು. ಆಗಲೇ ಅನೇಕ ರಾಕ್ಷಸರು ವೇಗದಿಂದ ಹೊರಟು, ಬಗೆಬಗೆಯ ಮದ್ಯಗಳಿಂದ ತುಂಬಿದ ಪಾತ್ರೆಗಳನ್ನು ತಂದು ಕುಂಭಕರ್ಣನಿಗೆ ಸಮರ್ಪಿಸಿದರು. ಕುಂಭಕರ್ಣನು ಅವುಗಳಲ್ಲಿ ಎರಡು ಸಹಸ್ರ ಮದ್ಯಕುಂಭಗಳನ್ನು ಕುಡಿದು, ರಾವಣನ ಬಳಿಗೆ ಹೋಗುವುದಕ್ಕೆ ಸಿದ್ಧನಾದನು. ಸ್ವಭಾವದಿಂದಲೇ ಮತ್ತನಾದ

ಆತನಿಗೆ ಈ ಮದ್ಯಪಾನವು ಮತ್ತಷ್ಟು ಮದವನ್ನು ಹೆಚ್ಚಿಸಿತು. ತೇಜೋಬಲ ವಿಶಿಷ್ಟನಾದ ಆ ಕುಂಭಕರ್ಣನು ಪಾನಮದದಿಂದುಂಟಾದ ಸಂತೋಷದಿಂದುಬ್ಬುತ್ತ ಪ್ರಳಯಕಾಲದ ಯಮನಂತೆ ಕಾಣಿಸುತ್ತಿದ್ದನು. ಆ ಕುಂಭಕರ್ಣನು ಅನೇಕ ರಾಕ್ಷಸ ಸಮೂಹಗಳೊಡಗೂಡಿ, ಅಣ್ಣನಾದ ರಾವಣನ ಅರಮನೆಯ ಕಡೆಗೆ ಹೋಗುವಾಗ, ಅವನ ಹೆಜ್ಜೆಯ ಭಾರಕ್ಕೆ ಸಮಸ್ತ ಭೂಮಿಯೂ ನಡುಗುವಂತಾಯಿತು. ಆಗ ಕುಂಭ ಕರ್ಣನು, ಸೂರ್ಯನು ತನ್ನ ಕಿರಣಗಳಿಂದ ಭೂಮಿಯನ್ನು ಪ್ರಕಾಶ ಪಡಿಸುವಂತೆ ತನ್ನ ದೇಹಕಾಂತಿಯಿಂದಲೇ ರಾಜಮಾರ್ಗಗಳನ್ನು ಬೆಳಗುತ್ತ ಮುಂದೆ ಸಾಗಿಬಂದನು. ಬೀದಿಬೀದಿಗಳಲ್ಲಿಯೂ ಪುರವಾಸಿಗಳು ಸಾಲಾಗಿ ಕೈಮುಗಿದು ನಿಂತು ನಮಸ್ಕರಿಸುತ್ತಿರಲು, ದೇವೇಂದ್ರನೇ ಬ್ರಹ್ಮದೇವನ ಗೃಹಕ್ಕೆ ಹೋಗುವಂತೆ ರಾವಣನ ಮನೆಗೆ ಬರುತ್ತಿದ್ದನು. ಅತ್ತಲಾಗಿ ಲಂಕೆಯ ಹೊರಗಿದ್ದ ವಾನರರೂ ಕೂಡ ಅಪ್ರಮೇಯಾಕಾರವುಳ್ಳವನಾಗಿ, ಪರ್ವತಶಿಖರಕ್ಕೆ ಸಮಾನನಾಗಿ, ರಾಜಮಾರ್ಗದಲ್ಲಿ ಬರುತ್ತಿದ್ದ ಈ ಕುಂಭ ಕರ್ಣನನ್ನು ಅಕಸ್ಮಾತ್ತಾಗಿ ಕಂಡರು. ಅವರಲ್ಲಿ ಯೂಥಪತಿಗಳೆನಿಸಿ ಕೊಂಡವರಿಗೂ ಕೂಡ, ಈ ರಾಕ್ಷಸಾಕಾರವನ್ನು ಕಂಡೊಡನೆ ಮನಸ್ಸಿ ನಲ್ಲಿ ಮಿತಿಮೀರಿದ ಭಯವು ಹುಟ್ಟಿತು. ಭಯಾರ್ತರಾದ ವಾನರರಲ್ಲಿ ಕೆಲವರು ಆಗಲೇ ಬಂದು ರಾಮನಲ್ಲಿ ಮರೆಹೊಕ್ಕರು. ಕೆಲವರು ಭಯ ದಿಂದ ಪೀಡಿತರಾಗಿ ಪ್ರಜ್ಞೆತಪ್ಪಿ ನೆಲಕ್ಕೆ ಬಿದ್ದರು. ಕೆಲವರು ದಿಕ್ಕು ದಿಕ್ಕಿಗೆ ಓಡಿದರು. ಕೆಲವರು ಶಕ್ತಿಗುಂದಿ ಮಲಗಿದರು. ಅನೇಕ ವಾನರರು ಪರ್ವತಶಿಖರದಂತೆ ಅದ್ಭುತಾಕಾರವುಳ್ಳವನಾಗಿಯೂ, ಮಹಾಕಿರೀಟಧಾರಿ ಯಾಗಿಯೂ, ಸೂರ್ಯನಂತೆ ಜ್ವಲಿಸುವ ದೇಹಕಾಂತಿಯುಳ್ಳವನಾಗಿಯೂ ಇದ್ದ ಆ ಕುಂಭಕರ್ಣನ ಮಹಾದ್ಭುತಾಕಾರವನ್ನು ನೋಡಿ ನಿಲ್ಲಲಾರದೆ, ಭಯದಿಂದ ದಿಕ್ಕುದಿಕ್ಕಿಗೆ ಪಲಾಯನಮಾಡಿದರು.

ಇಲ್ಲಿಗೆ ಅರುವತ್ತನೆಯ ಸರ್ಗವು.

ರಾಮನು ಕುಂಭಕರ್ಣನ ವೃತ್ತಾಂತವೇನೆಂದು ಕೇಳಲು,
ವಿಭೀಷಣನು ಅದನ್ನು ರಾಮನಿಗೆ ವಿವರಿಸಿ ಹೇಳಿದುದು.

ಇತ್ತಲಾಗಿ ಮಹಾತೇಜಸ್ವಿಯಾಗಿಯೂ, ವೀರ್ಯಶಾಲಿಯಾಗಿಯೂ ಇರುವ ರಾಮನು, ಅತ್ತಲಾಗಿ ಕಿರೀಟಧಾರಿಯಾಗಿ ಬರುತ್ತಿದ್ದ ಮಹಾಕಾಯುವುಳ್ಳ ಕುಂಭಕರ್ಣನನ್ನು ನೋಡಿದನು. ಆ ಕುಂಭಕರ್ಣನಾದರೋ ಪರ್ವತದಂತೆ ಅತಿ ಸ್ಥೂಲವಾದ ದೇಹವುಳ್ಳವನು. ಪೂರ್ವದಲ್ಲಿ ತನ್ನ ಅಡಿಯಿಂದಲೇ ಆಕಾಶವನ್ನಳೆದ ಶ್ರೀಮನ್ನಾರಾಯಣನಂತೆ ಅದ್ಭುತಾಕಾರವುಳ್ಳವನು. ನೀರಿನಿಂದ ತುಂಬಿದ ಮೇಘದಂತೆ ಕಪ್ಪಾದ ಮೈಯುಳ್ಳವನು. ಚಿನ್ನದ ತೋಳ್ಬಳೆಗಳಿಂದಲಂಕೃತವಾಗಿ ಹೊಳೆಯುವ ಮಹಾಬಲವುಳ್ಳವನು. ಇಂತಹ ಆ ರಾಕ್ಷಸನ ಸ್ವರೂಪವನ್ನು ಶ್ರೀರಾಮನು ಆಶ್ಚರ್ಯಭರಿತನಾಗಿ ನೋಡುತ್ತಿದ್ದನು. ರಾಮನನ್ನು ಸುತ್ತಿ ನಿಂತಿದ್ದ ವಾನರ ಸೈನ್ಯವೆಲ್ಲವೂ ಆ ಕುಂಭಕರ್ಣನನ್ನು ನೋಡಿದೊಡನೆ ಭಯದಿಂದ ಪಲಾಯನಮಾಡುತ್ತಿದ್ದುವು. ಆಗ ರಾಮನು ಇತ್ತಲಾಗಿ ವಾನರ ಸೈನ್ಯವು ಭಯಗೊಂಡು ಪಲಾಯನಮಾಡುವುದನ್ನೂ, ಅತ್ತಲಾಗಿ ಪರ್ವತದಂತಿರುವ ಕುಂಭಕರ್ಣನ ಆಕೃತಿಯನ್ನೂ ನೋಡಿ ಆಶ್ಚರ್ಯಭರಿತನಾಗಿ ಸಮೀಪದಲ್ಲಿದ್ದ ವಿಭೀಷಣನನ್ನು ಕುರಿತು, "ವಿಭೀಷಣಾ! ಯಾರವನು? ಅದೋ! ಅಲ್ಲಿ ಪರ್ವತಾಕಾರನಾಗಿ ಪಿಂಗಳನೇತ್ರವುಳ್ಳ ವೀರನೊಬ್ಬನು, ದೊಡ್ಡ ಕಿರೀಟವನ್ನು ಧರಿಸಿ, ಮಿಂಚಿನಿಂದ ಕೂಡಿ ಬರುವ ಮೇಘದಂತೆ ಕಾಣುವನು ನೋಡು! ಅವನು ಯಾರು? ಈ ಸಮಸ್ತ ಭೂಮಿಗೂ ಆತನೇ ಧ್ವಜದಂತೆ ಕಾಣುತ್ತಿರುವನು. ಅವನ ಆಕಾರವನ್ನು ನೋಡಿದಮಾತ್ರದಿಂದಲೇ ನಮ್ಮ ಕಡೆಯ ವಾನರರೆಲ್ಲರೂ ಭಯದಿಂದ ಚದರುತ್ತಿರುವರು! ಇಷ್ಟೊಂದು ಮಹಾದ್ಭುತಾಕಾರವುಳ್ಳವನು ಯಾರವನು? ಅವನು ರಾಕ್ಷಸನೆ? ಅಥವಾ ಅಸುರನೆ? ನನಗೆ ಚೆನ್ನಾಗಿ ವಿವರಿಸಿ ತಿಳಿಸು! ನಾನು ಇದುವರೆಗೆ ಇಂತಹ ಮಹಾಭೂತವನ್ನು ಹಿಂದೆ ಯಾವಾಗಲೂ ನೋಡಿದವನಲ್ಲ" ಎಂದನು. ಅದಕ್ಕಾ ವಿಭೀಷಣನು ರಾಮನನ್ನು ಕುರಿತು, "ರಾಮಾ! ಇವನಿಗೆ ಕುಂಭಕರ್ಣನೆಂದು ಹೆಸರು. ಇವನು ವಿಶ್ರವಸ್ಸಿನ ಮಗನು. ಯುದ್ಧದಲ್ಲಿ ಮಹೇಂದ್ರಯಮರನ್ನೂ ಓಡಿಸಿದವನು. ಮಹಾ

ಪ್ರತಾಪಶಾಲಿಯು. ದೇಹಪ್ರಮಾಣದಲ್ಲಿ ಇವನಿಗೆ ಸಮಾನನಾದ ರಾಕ್ಷಸನು ಬೇರೊಬ್ಬನೂ ಇಲ್ಲವು. ರಾಮಾ! ಇವನಿಂದ ಯುದ್ಧದಲ್ಲಿ ಎಷ್ಟೋಮಂದಿ ದಾನವರೂ, ದೇವತೆಗಳೂ, ಯಕ್ಷರೂ, ರಾಕ್ಷಸರೂ, ಗಂಧರ್ವರೂ, ಕಿನ್ನರರೂ, ಪನ್ನಗರೂ, ವಿದ್ಯಾಧರರೂ, ಪರಾಜಿತರಾಗಿ ಭಂಗವನ್ನು ಹೊಂದಿರುವರು. ಹಿಂದೆ ಮಹಾಬಲಾಢ್ಯನಾದ ಈ ಕುಂಭಕರ್ಣನು ಶೂಲಪಾಣಿಯಾಗಿ, ವಿಕಟಾಕಾರವುಳ್ಳ ಕಣ್ಣುಗಳೊಡನೆ ರಣಾಗ್ರದಲ್ಲಿ ನಿಂತಾಗ, ದೇವತೆಗಳಾದರೂ ಇವನನ್ನು ತಡೆದು ನಿಗ್ರಹಿಸಲಾರದೆ, "ಈತನೇ ತ್ರಿಲೋಕ ಸಂಹಾರಿಯಾದ ಕಾಲಯಮನಾಗಿರಬೇಕೆಂದು ಭ್ರಮಿಸಿದರು. ಈ ಕುಂಭಕರ್ಣನು ವರದಾನದಿಂದಲೇ ಅಲ್ಲದೆ ಸ್ವಭಾವದಿಂದಲೂ ಬಹಳ ಬಲವಂತನು. ರಾವಣನೇ ಮೊದಲಾದ ಇತರ ರಾಕ್ಷಸಪ್ರಧಾನರೆಲ್ಲರಿಗೂ ಈಗಿರತಕ್ಕ ಬಲವು ಬ್ರಹ್ಮಾದಿ ದೇವತೆಗಳ ವರಪ್ರಸಾದದಿಂದ ಲಭಿಸಿರುವುದು. ಈತನು ಮಾತ್ರ ಹುಟ್ಟುವಾಗಲೇ ಮಹಾಬಲಾಢ್ಯನಾಗಿ ಹುಟ್ಟಿದುದಲ್ಲದೆ, ಆಗ ತನಗಿದ್ದ ಹಸಿವಿನ ಆತುರಕ್ಕಾಗಿ ಅನೇಕ ಸಹಸ್ರ ಪ್ರಾಣಿಗಳನ್ನು ಹಿಡಿದು ಭಕ್ಷಿಸುವುದಕ್ಕೆ ತೊಡಗಿದನು. ಹೀಗೆ ಇವನು ಸಿಕ್ಕಿದ ಪ್ರಜೆಗಳನ್ನು ಭಕ್ಷಿಸುತ್ತಿರಲು, ಅವರೆಲ್ಲರೂ ಭಯಪೀಡಿತರಾಗಿ ದೇವೇಂದ್ರನಲ್ಲಿ ಮರೆಹೊಕ್ಕು, ಈ ವಿಷಯವನ್ನು ಆತನಲ್ಲಿ ಹೇಳಿಕೊಂಡರು. ಆಗ ದೇವೇಂದ್ರನು ಕುಪಿತನಾಗಿ, ತೀಕ್ಷ್ಣವಾದ ತನ್ನ ವಜ್ರಾಯುಧದಿಂದ ಕುಂಭಕರ್ಣನನ್ನು ಪ್ರಹರಿಸಿದನು. ಮಹಾಬಲಾಢ್ಯನಾಗಿದ್ದ ಈ ಕುಂಭಕರ್ಣನಾದರೂ ಈ ವಜ್ರಪ್ರಹಾರದಿಂದ ಕ್ಷಣಮಾತ್ರದವರೆಗೆ ಚಲನ ಹೊಂದಿದಂತಾಗಿ, ಆಮೇಲೆ ಕೋಪಗೊಂಡು ವಿಕಟಸ್ವರದಿಂದ ಕೂಗಿದನು. ಮೊದಲೇ ಭಯಗ್ರಸ್ತರಾಗಿದ್ದ ಪ್ರಜೆಗಳೆಲ್ಲರೂ ಇವನ ಕಂಠಸ್ವರವನ್ನು ಕೇಳಿ ಮತ್ತಷ್ಟು ಭಯಪೀಡಿತರಾಗಿ ನಡುಗುತ್ತಿದ್ದರು. ಆಗ ಕುಂಭಕರ್ಣನು ಕೋಪದಿಂದ ಐರಾವತದ ದಂತವನ್ನು ಕಿತ್ತು, ಅದರಿಂದ ಇಂದ್ರನ ಎದೆಯ ಮೇಲೆ ಪ್ರಹರಿಸಿದನು. ಈ ಕುಂಭಕರ್ಣನ ಪ್ರಹಾರಕ್ಕೆ ಇಂದ್ರನ ಎದೆಯು ಕ್ಷಣಮಾತ್ರದವರೆಗೆ ನಡುಗಿಹೋಯಿತು. ಇಂದ್ರನು ಆ ಕೋಪದಿಂದ ತನ್ನಲ್ಲಿ ತಾನೇ ತಪಿಸುತ್ತಿದ್ದನು. ಆಗ ದೇವತೆಗಳೂ, ಬ್ರಹ್ಮಋಷಿಗಳೂ, ದಾನವರೂ, ಮನಸ್ಸಿನಲ್ಲಿ ಮಹಾವ್ಯಸನವನ್ನು ಹೊಂದಿದರು. ಕುಂಭ

ಕರ್ಣನ ಮೇಲೆ ಇಂದ್ರನ ವೀರ್ಯವೇನೂ ಸಾಗಲಿಲ್ಲ. ಆಗ ದೇವೇಂದ್ರನು ಪ್ರಜೆಗಳೊಡಗೂಡಿ ಬ್ರಹ್ಮನ ಬಳಿಗೆ ಹೋದನು. ಅಲ್ಲಿ ಅವರೆಲ್ಲರೂ ಸೇರಿ ಕುಂಭಕರ್ಣನ ದುಷ್ಕಾರ್ಯಗಳೆಲ್ಲವನ್ನೂ ಕ್ರಮವಾಗಿ ವಿವರಿಸುತ್ತ ಬಂದರು. ಈ ಕುಂಭಕರ್ಣನು ಆಗಾಗ ಪ್ರಜೆಗಳನ್ನು ಭಕ್ಷಿಸುತ್ತಿರುವುದು, ದೇವತೆಗಳನ್ನು ತಿರಸ್ಕರಿಸುವುದು, ಋಷ್ಯಾಶ್ರಮಗಳನ್ನು ಹಾಳುಮಾಡುವುದು, ಪರಸ್ತ್ರೀಯರನ್ನಪಹರಿಸುವುದು, ಮೊದಲಾಗಿ ಇವನ ದುಷ್ಕಾರ್ಯಗಳೆಲ್ಲವನ್ನೂ ಕ್ರಮವಾಗಿ ತಿಳಿಸುತ್ತ ಬಂದು, ಕೊನೆಗೆ ಅವರೆಲ್ಲರೂ ಬ್ರಹ್ಮನನ್ನು ಕುರಿತು, "ಎಲೆ ಪಿತಾಮಹನೆ! ಹೀಗೆಯೇ ಈ ಕುಂಭಕರ್ಣನು ಪ್ರತಿನಿತ್ಯವೂ ಪ್ರಜೆಗಳನ್ನು ಭಕ್ಷಿಸುತ್ತ ಬಂದಪಕ್ಷದಲ್ಲಿ, ಇನ್ನು ಸ್ವಲ್ಪಕಾಲದೊಳಗಾಗಿಯೇ ಸಮಸ್ತ ಲೋಕವೂ ಶೂನ್ಯವಾಗುವುದು" ಎಂದರು. ಇಂದ್ರಾದಿ ದೇವತೆಗಳ ಮಾತನ್ನು ಕೇಳಿದೊಡನೆ ಬ್ರಹ್ಮನು ಸಮಸ್ತ ರಾಕ್ಷಸರನ್ನೂ ಕರೆಸಿ, ಮುಂದೆ ನಿಲ್ಲಿಸಿಕೊಂಡು, ಅವರ ನಡುವೆ ಕುಂಭಕರ್ಣನ ಸ್ವರೂಪವನ್ನು ನೋಡಿದನು. ಅವನ ಅದ್ಭುತಾಕಾರವನ್ನು ನೋಡಿದಾಗ ಸರ್ವಲೋಕಪಿತಾಮಹನಾದ ಆ ಬ್ರಹ್ಮದೇವನಿಗೂ ಎದೆ ನಡುಗಿತು. ಆಗ ಬ್ರಹ್ಮನು ಆ ರಾಕ್ಷಸನನ್ನು ನೋಡಿ, ಬಹಳ ನಯವಾದ ಸಮಾಧಾನ ವಾಕ್ಯದಿಂದ ಸಮೀಪಕ್ಕೆ ಕರೆದು ಕುಳ್ಳಿರಿಸಿಕೊಂಡು "ವತ್ಸ ಕುಂಭಕರ್ಣ! ಲೋಕನಾಶಕ್ಕಾಗಿಯೇ ವಿಶ್ರವಸ್ಸು ನಿನ್ನನ್ನು ಹೀಗೆ ಸೃಷ್ಟಿಸಿರುವನು. ಇದರಲ್ಲಿ ಸಂದೇಹವಿಲ್ಲ. ಆದುದರಿಂದ *ನೀನು ಇದು ಮೊದಲು ಸತ್ತವನಹಾಗೆ ಬಿದ್ದು ಯಾವಾಗಲೂ ಮಲಗಿರು" ಎಂದನು. ಆ ಬ್ರಹ್ಮಶಾಪದಿಂದ ಪ್ರತಿಹತನಾದ ಕುಂಭಕರ್ಣನು, ಆ ಕ್ಷಣವೇ ತನ್ನಣ್ಣನಾದ ರಾವಣನ ಮುಂದೆ ಬಿದ್ದನು. ಇದನ್ನು ನೋಡಿ ರಾವಣನು ಬಹಳ ಭಯಪಟ್ಟು ಬ್ರಹ್ಮದೇವನನ್ನು ಕುರಿತು, "ತಾತಾ!

* ಇದೇ ಪೂರ್ವದಲ್ಲಿ ಕುಂಭಕರ್ಣನಿಗೆ ಬಂದ ಬ್ರಹ್ಮಶಾಪವು. ಈ ಶಾಪವು ಕುಂಭಕರ್ಣನು ತಪಸ್ಸುಮಾಡಿದಮೇಲೆಯೇ ಬಂದಿರಬೇಕೇ ಹೊರತು ಅದಕ್ಕೆ ಮೊದಲು ಬಂದುದಲ್ಲ. ಮೊದಲೇ ಬಂದುದಾಗಿ ಹೇಳಿದರೆ, ಸತ್ತಹಾಗೆ ಮಲಗಿದವನು ತಪಸ್ಸು ಮಾಡಿದನೆಂಬುದು ಅಸಂಭವವಾಗುವುದರಿಂದ, ಇವನಿಗೆ ಆ ಶಾಪವು ತಪಸ್ಸುಮಾಡಿ ಮುಗಿಸಿದಮೇಲೆಯೇ ಬಂದಂತೆ ಗ್ರಾಹ್ಯವು.

ಇದೇನು! ಸುವರ್ಣಲತೆಯಂತೆ ಚೆನ್ನಾಗಿ ಬೆಳೆಸಿಟ್ಟ ವೃಕ್ಷವನ್ನು ಫಲ ಕಾಲದಲ್ಲಿ ಕತ್ತರಿಸಿ ಹಾಕಿದಂತಾಯಿತು. ನೀನು ನಿನ್ನ ಮುಮ್ಮಗನಾದ ಈತನನ್ನು ಹೀಗೆ ಶಾಪದಿಂದ ಕೆಡಿಸುವುದು ನ್ಯಾಯವೆ? ಆದರೆ ಈಗ ನಿನ್ನ ಬಾಯಿಂದ ಹೊರಟ ಮಾತು ತಪ್ಪಿಹೋಗಲಾರದು. ಹೇಗಿದ್ದರೂ ನಿನ್ನ ಶಾಪದಂತೆ ಇವನು ನಿದ್ರಿಸುವುದಕ್ಕೂ, ಎಚ್ಚರಗೊಂಡಿರುವುದಕ್ಕೂ ಕೆಲವು ಕಾಲನಿಯಮವನ್ನಾದರೂ ಏರ್ಪಡಿಸಿಕೊಡು" ಎಂದನು. ಇದನ್ನು ಕೇಳಿ ಬ್ರಹ್ಮನು ರಾವಣನನ್ನು ಕುರಿತು, "ರಾವಣಾ! ಒಳ್ಳೆಯದು! ಹಾಗೂ ಆಗಲಿ! ಈ ಕುಂಭಕರ್ಣನು ಆರುತಿಂಗಳಕಾಲಕ್ಕೆ ಕಡಿಮೆಯಿಲ್ಲದೆ ನಿದ್ರಾವಶನಾಗಿದ್ದು, ಆ ಆರುತಿಂಗಳು ತುಂಬಿದಮೇಲೆ ಒಂದು ದಿನದವರೆಗೆ ಮಾತ್ರ ಎಚ್ಚರದಿಂದಿರಲಿ. ಇವನು ಆರುತಿಂಗಳಿಗೊಮ್ಮೆ ನಿದ್ರೆಯಿಂದೆದ್ದಾಗಲೂ, ಹಸಿವಿನ ಆತುರದಿಂದ ದೊಡ್ಡದಾಗಿ ಬಾಯನ್ನು ತೆರೆದು ಅಲ್ಲಲ್ಲಿ ಸಂಚರಿಸುತ್ತ, ಕ್ರುದ್ಧನಾದ ಅಗ್ನಿಹೋತ್ರದಂತೆ ಪ್ರಜೆಗಳನ್ನು ಭಕ್ಷಿಸುವನು" ಎಂದನು. ರಾಮಾ! ಹೀಗೆ ಬ್ರಹ್ಮಶಾಪದಿಂದ ನಿದ್ರಾವಶನಾಗಿದ್ದ ಕುಂಭಕರ್ಣನನ್ನು ಈಗ ರಾವಣನು ನಿನ್ನ ಪರಾಕ್ರಮಕ್ಕೆ ಹೆದರಿ ಅಕಾಲದಲ್ಲಿ ಎಬ್ಬಿಸಿರುವನು. ಭಯಂಕರಪರಾಕ್ರಮವುಳ್ಳ ಈ ಕುಂಭಕರ್ಣನೂ ಕೂಡ, ಇದೋ! ಈಗಲೇ ತನ್ನ ಶಿಬಿರದಿಂದ ಹೊರಟಿರುವನು. ರಾಮಾ! ಇವನು ಇನ್ನು ಸ್ವಲ್ಪಕಾಲದೊಳಗಾಗಿಯೇ ಕೋಪದಿಂದ ವಾನರರನ್ನು ಭಕ್ಷಿಸುವುದಕ್ಕಾಗಿ ಹೊರಡುವನು. ಇದೋ! ಈಗಾಗಲೇ ನಮ್ಮ ಕಡೆಯ ವಾನರರು ಅವನ ಸ್ವರೂಪವನ್ನು ನೋಡಿದಮಾತ್ರಕ್ಕೆ ಹೆದರಿ ಪಲಾಯನ ಮಾಡುತ್ತಿರುವರು ನೋಡು! ಇನ್ನು ಈ ಕುಂಭಕರ್ಣನು ಕ್ರುದ್ಧನಾಗಿ ಯುದ್ಧಕ್ಕೆ ಬಂದು ನಿಂತರೆ, ವಾನರರು ಇವನನ್ನು ಹೇಗೆ ತಡೆಯಬಲ್ಲರು? ಆದುದರಿಂದ ರಾಮಾ! ಈಗಿನಿಂದಲೇ ನಾವು ನಮ್ಮ ಕಡೆಯ ವಾನರರಿಗೆ ಇವನಿಂದುಂಟಾಗಿರುವ ಭಯವನ್ನು ತಪ್ಪಿಸಿ, ಧೈರ್ಯವನ್ನು ಹೇಳುತ್ತಿರಬೇಕು. ಆದುದರಿಂದ ಈಗ ನಾವು ನಮ್ಮ ವಾನರರಿಗೆ ಇವನ ಸ್ಥಿತಿಯನ್ನು ತಿಳಿಸದೆ "ಇದು ನಮ್ಮನ್ನು ಹೆದರಿಸುವುದಕ್ಕಾಗಿ ರಾಕ್ಷಸರು ಮೇಲೆತ್ತಿ ಕಟ್ಟಿದ ಒಂದು ಯಂತ್ರದ ಬೊಂಬೆ (ಬಿಭೀಷಿಕೆ) ಯೇ ಹೊರತು ಬೇರೆಯಲ್ಲ" ಎಂದು ಹೇಳಬೇಕು. ಆಗ ವಾನರರು ಇವನ ವಿಷಯದಲ್ಲಿ

ನಿರ್ಭಯರಾಗಿರುವರು' ಎಂದನು. ಹೀಗೆ ಯುಕ್ತಿಯುಕ್ತವಾಗಿ ಹೇಳಿದ ವಿಭೀಷಣನ ಮಾತನ್ನು ಕೇಳಿ, ರಾಮನು ಆಗಲೇ ಸೇನಾಪತಿಯಾದ ನೀಲನನ್ನು ಕರೆದು, "ಎಲೈ ಅಗ್ನಿಪುತ್ರನೆ! ನೀನು ಈಗಲೇ ನಮ್ಮ ಸಮಸ್ತ ಸೈನ್ಯಗಳನ್ನೂ ವ್ಯೂಹರೂಪವಾಗಿ ಮಾಡಿ ಲಂಕೆಯ ದ್ವಾರಗಳಲ್ಲಿಯೂ, ಭಟಸಂಚಾರಸ್ಥಾನಗಳಲ್ಲಿಯೂ, ದಿಡ್ಡಿಯ ಬಾಗಿಲುಗಳಲ್ಲಿಯೂ ಕಾವಲಾಗಿ ನಿಲ್ಲಿಸಬೇಕು. ಅವರವರು ತಮತಮಗೆ ಯುದ್ಧಸಾಧನಗಳಿಗಾಗಿ ಪರ್ವತ ಶಿಖರಗಳನ್ನೂ, ವೃಕ್ಷಗಳನ್ನೂ, ಶಿಲೆಗಳನ್ನೂ ಕೈಯಲ್ಲಿ ಹಿಡಿದು ಸಿದ್ಧ ರಾಗಿರಲಿ! ಹೀಗೆ ವಾನರರ ಸೈನ್ಯವನ್ನು ಸಿದ್ಧಪಡಿಸು!" ಎಂದನು. ಈ ರಾಮಾಜ್ಞೆಯಂತೆಯೇ ಕಪಿಸೇನಾಪತಿಯಾದ ನೀಲನು ಸಮಸ್ತ ವಾನರ ಸೈನ್ಯಕ್ಕೂ ಆಜ್ಞೆ ಮಾಡಿದನು. ಅದರಂತೆ ಪರ್ವತಾಕಾರವುಳ್ಳ, ಗವಾಕ್ಷನೂ, ಶರಭನೂ, ಹನುಮಂತನೂ, ಅಂಗದನೂ ಈ ನಾಲ್ವರೂ, ಪರ್ವತಶಿಖರಗಳನ್ನು ಕೈಗೆತ್ತಿಕೊಂಡು ದ್ವಾರಪ್ರದೇಶಗಳನ್ನು ತಡೆದು ನಿಂತರು. ಜಯಾಕಾಂಕ್ಷಿಗಳಾದ ಆ ಸಮಸ್ತ ವಾನರರೂ, ರಾಮಾಜ್ಞೆ ಯನ್ನನುಸರಿಸಿ ದೊಡ್ಡ ದೊಡ್ಡ ವೃಕ್ಷಗಳನ್ನು ಹಿಡಿದು ಅವುಗಳಿಂದ ಶತ್ರು ಸೈನ್ಯವನ್ನು ಮರ್ದಿಸುತ್ತ ಬಂದರು. ಆ ಕಪಿಸೈನ್ಯವು ಮಹೋನ್ನತ ಗಳಾದ ಪರ್ವತಗಳನ್ನು ಕೈಯಲ್ಲಿ ಹಿಡಿದು, ಯುದ್ಧೋದ್ಯುಕ್ತವಾಗಿ ನಿಂತಾಗ ಭಯಂಕರಗಳಾದ ಮಹಾಮೇಘಗಳ ಸಾಲುಗಳಿಂದ ವ್ಯಾಪ್ತವಾದ ಪರ್ವತಶಿಖರದಂತೆ ಕಾಣುತ್ತಿತ್ತು.

ಇಲ್ಲಿಗೆ ಅರುವತ್ತೊಂದನೆಯ ಸರ್ಗವು.

ರಾವಣನು ತನ್ನ ಬಳಿಗೆ ಬಂದ ಕುಂಭಕರ್ಣನನ್ನು ಮನ್ನಿಸಿ, ಅನುನಯಿಸುತ್ತ, ರಾಮನಿಂದ ತನಗುಂಟಾಗಿರುವ ಭಯವನ್ನು ತಿಳಿಸಿ, ಹೇಗಾದರೂ ತನ್ನನುದ್ಧರಿಸಬೇಕೆಂದು ಪ್ರಾರ್ಥಿಸಿದುದು.

ಅತ್ತಲಾಗಿ ಮಹಾಪರಾಕ್ರಮಿಯಾಗಿ, ಸಮರದುರ್ಜಯನೆನಿಸಿಕೊಂಡ ರಾಕ್ಷಸಸಿಂಹನಾದ ಕುಂಭಕರ್ಣನು, ನಿದ್ರಾಭಂಗದಿಂದಲೂ, ಮದ್ಯಪಾನ

ದಿಂದಲೂ ಬಹಳ ಮತ್ತನಾಗಿ, ಸಾವಿರಾರು ಮಂದಿ ರಾಕ್ಷಸವೀರರೊಡಗೂಡಿ ಹೊರಟು, ಅತ್ಯಂತ ಕಾಂತಿವಿಶಿಷ್ಟವಾದ ರಾಜಬೀದಿಯನ್ನು ಹಿಡಿದು ಬರುತ್ತಿದ್ದನು. ದಾರಿಯುದ್ದಕ್ಕೂ ಪುರವಾಸಿಗಳು ಉಪ್ಪರಿಗೆಗಳ ಮೇಲೆ ನಿಂತು ನೋಡುತ್ತ, ಇವನ ಮೇಲೆ ಪುಷ್ಪವರ್ಷಗಳನ್ನು ಕರೆಯುತ್ತಿದ್ದರು. ಇಷ್ಟೊಂದು ಮಹಾವೈಭವದಿಂದ ಆ ಕುಂಭಕರ್ಣನು ಬೀದಿಗಳನ್ನು ದಾಟಿ ಮುಂದೆ ಮುಂದೆ ಸಾಗಿ ಬಂದಮೇಲೆ, ಅಲ್ಲಿ ಸುವರ್ಣಗವಾಕ್ಷಗಳ ಕಾಂತಿಯಿಂದ ಸೂರ್ಯನಂತೆ ದೇದೀಪ್ಯಮಾನವಾಗಿಯೂ, ವಿಶಾಲವಾಗಿಯೂ, ರಮಣೀಯವಾಗಿಯೂ ಇರುವ ರಾವಣನ ಅರಮನೆಯನ್ನು ಕಂಡನು. ಸೂರ್ಯನು ಮೇಘಸಮೂಹವನ್ನು ಪ್ರವೇಶಿಸುವಂತೆ ಕುಂಭಕರ್ಣನು ಆ ರಾಜಗೃಹದ ಹೊರಬಾಗಿಲನ್ನು ದಾಟುವಾಗ, ದೇವೇಂದ್ರನು ಪದ್ಮಪೀಠದಲ್ಲಿರುವ ಬ್ರಹ್ಮದೇವನನ್ನು ನೋಡುವಂತೆ * ದೂರದ ತೊಟ್ಟಿಯಲ್ಲಿ ಸಿಂಹಾಸನದಲ್ಲಿ ಕುಳಿತಿದ್ದ ತನ್ನಣ್ಣನಾದ ರಾವಣನನ್ನು ಕಂಡನು. ಈ ಕುಂಭಕರ್ಣನು ರಾಕ್ಷಸಸಮೂಹದಿಂದ ತುಂಬಿದ ರಾಜಗೃಹವನ್ನು ಪ್ರವೇಶಿಸುವಾಗ, ತನ್ನ ಪದನ್ಯಾಸಗಳಿಂದಲೇ ನೆಲವನ್ನು ನಡುಗಿಸುವಂತೆ ಮುಂದೆ ಬಂದನು. ಹೀಗೆ ಕುಂಭಕರ್ಣನು ತನ್ನಣ್ಣನಾದ ರಾವಣನ ಗೃಹವನ್ನು ಪ್ರವೇಶಿಸಿ, ಒಳಬಾಗಿಲನ್ನು ದಾಟಿ, ಅಲ್ಲಿ ಪುಷ್ಪಕವಿಮಾನದಮೇಲೆ ದುಃಖದಿಂದ ಕುಳಿತಿದ್ದ ತನ್ನಣ್ಣನನ್ನು ಕಂಡನು ಇಷ್ಟರಲ್ಲಿ ರಾವಣನು ಕುಂಭಕರ್ಣನು ಬರುವುದನ್ನು ನೋಡಿ, ಸಂತೋಷದಿಂದ ತಟ್ಟನೆ ಮೇಲೆದ್ದು, ಸಮೀಪಕ್ಕೆ ಕರೆಸಿಕೊಂಡನು. ಆಮೇಲೆ ಮಹಾಬಲಾಢ್ಯನಾದ ಕುಂಭಕರ್ಣನು, ಪೀಠದಲ್ಲಿ ಕುಳಿತಿದ್ದ ತನ್ನಣ್ಣನ ಕಾಲುಗಳನ್ನು ಹಿಡಿದು ನಮಸ್ಕರಿಸಿ "ಅಣ್ಣಾ! ಈಗ ನಾನು ಮಾಡಬೇಕಾದ ಕಾರ್ಯವೇನು?" ಎಂದು ವಿನಯದಿಂದ ಕೇಳಿದನು. ಈ ಮಾತನ್ನು ಕೇಳಿದೊಡನೆ ರಾವಣನಿಗೆ ಪರಮಸಂತೋಷವಾಯಿತು. ತಟ್ಟನೆ ತನ್ನ ಪೀಠದಿಂದ ಹಾರಿ ಆತನನ್ನು ಆಲಿಂಗಿಸಿಕೊಂಡನು. ತನ್ನಣ್ಣನಾದ ರಾವಣನ ಸತ್ಕಾರಗಳನ್ನು ನೋಡಿ ಸಂತೋಷಯುಕ್ತನಾದ ಕುಂಭಕರ್ಣನು, ಅಲ್ಲಿ ಸುಂದರವಾದ ಒಂದು

* ರಾವಣಗೃಹವೇ ಪುಷ್ಪಕವಾಗಿರುವುದರಿಂದ, ಅದು ಮಹೋನ್ನತವಾಗಿ ಬಹಳ ದೂರದಲ್ಲಿರುವವನಿಗೂ ಸ್ಪಷ್ಟವಾಗಿ ಕಾಣುತ್ತಿತ್ತೆಂದು ಗ್ರಾಹ್ಯವು.

ದಿವ್ಯಾಸನವನ್ನೇರಿ ಕುಳಿತನು. ಆಮೇಲೆ ಕುಂಭಕರ್ಣನು ಆಸನದಲ್ಲಿ ಕುಳಿತಿದ್ದಹಾಗೆಯೇ ಸಹಜವಾದ ಕೋಪದಿಂದ ಕೆಂಪೇರಿದ ಕಣ್ಣುಳ್ಳವನಾಗಿ, ರಾವಣನನ್ನು ಕುರಿತು, "ಎಲೆ ರಾಜೇಂದ್ರನೆ! ನಿದ್ರಿಸುತ್ತಿದ್ದ ನನ್ನನ್ನು ನೀನು ಇಷ್ಟೊಂದು ಆತುರದಿಂದ ಎಬ್ಬಿಸಿದ ಕಾರಣವೇನು? ಈಗ ನಿನಗೆ ಯಾರಿಂದ ಭಯವುಂಟಾಗಿರುವುದು? ಈಗ ನನ್ನ ಕೈಯಿಂದ ಯಾರು ಸಾಯಬೇಕಾಗಿರುವುದು? ಹೇಳು" ಎಂದನು. ಆಗ ರಾವಣನು ಕೋಪದಿಂದುಕ್ಕುತ್ತಿರುವ ತನ್ನ ತಮ್ಮನಾದ ಕುಂಭಕರ್ಣನನ್ನು ನೋಡಿ ತಾನು ಕಣ್ಣಾಲಿಗಳನ್ನು ತಿರುಗಿಸುತ್ತ "ಎಲೆ ಬಲಾಢ್ಯನೆ! ನೀನು ಮಲಗುವುದಕ್ಕೆ ಹೋಗಿ ಇದುವರೆಗೆ ಹೆಚ್ಚುದಿನಗಳಾದುದರಿಂದ, ಸುಖನಿದ್ರೆಯಲ್ಲಿದ್ದ ನಿನಗೆ ಈಗ ರಾಮನಿಂದ ನನಗುಂಟಾಗಿರುವ ಭಯವು ತಿಳಿದಿಲ್ಲ. ಇದೋ! ಈಗ ದಶರಥಪುತ್ರನಾದ, ಬಲಾಢ್ಯನಾದ ರಾಮನು ಸುಗ್ರೀವಸಹಿತನಾಗಿ ಸಮುದ್ರವನ್ನು ದಾಟಿ ಬಂದುದಲ್ಲದೆ, ನಮ್ಮನ್ನು ಸಮೂಲವಾಗಿ ಛೇದಿಸುತ್ತಿರುವನು. ನಮ್ಮ ಮೂಲಬಲವನ್ನು ನಾಶಮಾಡುತ್ತಿರುವನು. ಆ ರಾಮನು ಸಮುದ್ರದಲ್ಲಿ ಸೇತುವನ್ನು ಕಟ್ಟಿಸಿ, ಅದನ್ನು ನಿರಾಯಾಸವಾಗಿ ದಾಟಿ ಬಂದು, ಲಂಕೆಯ ವನೋಪವನಗಳನ್ನೆಲ್ಲಾ ಒಂದೇ ವಾನರರೂಪವಾದ ಸಮುದ್ರವನ್ನಾಗಿ ಮಾಡಿಬಿಟ್ಟಿರುವನು ನೋಡು! ನಮ್ಮಲ್ಲಿ ಅನೇಕ ರಾಕ್ಷಸಪ್ರಧಾನರು ಯುದ್ಧದಲ್ಲಿ ವಾನರರಿಂದ ಹತರಾದರು. ಇದುವರೆಗೆ ಒಂದಾವೃತ್ತಿಯಾದರೂ ಯುದ್ಧದಲ್ಲಿ ವಾನರರು ಸತ್ತುದನ್ನಾಗಲಿ ಇವರಿಗೆ ಪರಾಜಯವುಂಟಾದುದನ್ನಾಗಲಿ ನಾನು ಕೇಳಲಿಲ್ಲ. ಇದೇ ನಮಗೆ ಈಗ ಸಂಭವಿಸಿರುವ ಮಹಾಭಯವು. ಎಲೆ ಬಲಾಢ್ಯನೆ! ಈಗ ಈ ಲಂಕೆಯನ್ನು ರಕ್ಷಿಸಿಕೊಳ್ಳುವ ಭಾರವು ನಿನಗೆ ಸೇರಿದೆ. ಆ ವಾನರರನ್ನೂ ನೀನೇ ಕೊಲ್ಲಬೇಕಾಗಿರುವುದು. ಇದಕ್ಕಾಗಿಯೇ ನಿನ್ನನ್ನು ಎಚ್ಚರಗೊಳಿಸಿದೆನು. ವತ್ಸ ಕುಂಭಕರ್ಣ! ಈಗ ನನ್ನ ದುರವಸ್ಥೆಯನ್ನು ನಾನೇನೆಂದು ಹೇಳಲಿ! ನನ್ನ ಸಕಲೈಶ್ವರ್ಯವೂ ಕ್ಷೀಣಿಸಿತು! ಲಂಕೆಯಲ್ಲಿದ್ದ ಮುಖ್ಯರಾಕ್ಷಸರೆಲ್ಲರೂ ಹತರಾದರು! ಕೆಲವು ಮಂದಿ ಮುದುಕರು ಮಕ್ಕಳು ಮಾತ್ರವೇ ಉಳಿದಿರುವರು. ಈಗ ನೀನು ಈ ನನ್ನ ದುಃಸ್ಥಿತಿಯನ್ನು ಚೆನ್ನಾಗಿ ಪರ್ಯಾಲೋಚಿಸಿ ಈ ಲಂಕೆಯನ್ನು ರಕ್ಷಿಸಿಕೊಳ್ಳುವುದಕ್ಕೆ

ಪ್ರಯತ್ನಿಸು. ಇದೊಂದು ದುಷ್ಕರಕಾರ್ಯವನ್ನು ನಡೆಸಿಕೊಡಬೇಕು. ಎಲೆ ಪರಂತಪನೆ! ಇದುವರೆಗೆ ನಾನು ಯಾವಾಗಲೂ ನಿನ್ನನ್ನು ಹೀಗೆ ನಿರ್ಬಂಧಿಸಿ ಮಾತಾಡಿದವನಲ್ಲವಷ್ಟೆ? ನಿನ್ನಲ್ಲಿ ನನಗೆ ವಿಶೇಷವಾದ ಸ್ನೇಹ ಗೌರವಗಳುಂಟು. ರಾಕ್ಷಸೋತ್ತಮನೆ! ದೇವಾಸುರ ಯುದ್ಧಗಳಲ್ಲಿ ನೀನು ಅನೇಕಾವರ್ತಿ ದೇವತೆಗಳನ್ನು ಜಯಿಸಿ ಓಡಿಸಿರುವೆ! ಅನೇಕ ದೈತ್ಯರನ್ನೂ ಯುದ್ಧದಲ್ಲಿ ಜಯಿಸಿರುವೆ! ನಿನ್ನ ವೀರ್ಯವು ಎಂತವರಿಗೂ ಭಯವನ್ನು ಹುಟ್ಟಿಸುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಈಗ ನೀನು ಆ ಪರಾಕ್ರಮ ಗಳೆಲ್ಲವನ್ನೂ ಉಪಯೋಗಿಸಬೇಕು! ಸಮಸ್ತ ಭೂತಗಳಲ್ಲಿಯೂ ನಿನಗೆ ಸಮಾನನಾದ ಬಲಾಢ್ಯನನ್ನು ನಾವು ಕಾಣೆವು. ಇದರಮೇಲೆ ಯುದ್ಧ ದಲ್ಲಿಯೂ ನಿನಗೆ ಬಹಳ ಪ್ರೀತಿಯುಂಟು. ಬಂಧುಜನಗಳಲ್ಲಿಯೂ ನೀನು ಬಹಳ ಪ್ರೀತಿಯುಳ್ಳವನು. ಆದುದರಿಂದ ಈಗ ನನಗೆ ಪ್ರಿಯವಾಗಿಯೂ, ಹಿತವಾಗಿಯೂ ಇರುವ ಪ್ರೀತಿಗನುಗುಣವಾಗಿಯೇ ನಡೆಸಿಕೊಡಬೇಕು. ಬಿರುಗಾಳಿಯು ಹೆಚ್ಚಿ ಶರತ್ಕಾಲದ ಮೇಘಗಳನ್ನು ಧ್ವಂಸಮಾಡುವಂತೆ, ಈಗ ನೀನು ನಿನ್ನ ಮಹಾವೀರ್ಯದಿಂದ ಶತ್ರುಸೈನ್ಯಗಳನ್ನು ಹುಟ್ಟಡಗಿಸ ಬೇಕು" ಎಂದನು.

ಇಲ್ಲಿಗೆ ಅರುವತ್ತೆರಡನೆಯ ಸರ್ಗವು.

ಕುಂಭಕರ್ಣನು ಹಿಂದೆ ತನ್ನ ಮತ್ತು ವಿಭೀಷಣನ ಬುದ್ಧಿವಾದ ವನ್ನು ಕೇಳದುದಕ್ಕಾಗಿಯೇ ಈ ಹಾನಿಯುಂಟಾಯಿತೆಂದು ರಾವಣನನ್ನು ನಿಂದಿಸಿದುದು. ಆದಕ್ಕೆ ರಾವಣನು ಕೋಪ ಗೊಂಡುದುದನ್ನು ನೋಡಿ ಅವನ ಕೋರಿಕೆಯಂತೆ ಶತ್ರುಗಳನ್ನು ಜಯಿಸುವುದಾಗಿ ಪ್ರತಿಜ್ಞೆಮಾಡಿದುದು.

ಹೀಗೆ ರಾವಣನ ಗೋಳಾಟವನ್ನು ಕೇಳಿ ಕುಂಭಕರ್ಣನು ಅವನ ದುರ್ಬುದ್ಧಿಗಾಗಿ ಅಟ್ಟಹಾಸದಿಂದ ನಗುತ್ತ "ಅಣ್ಣಾ! ನಾವು ಮೊದಲೇ ಈ ವಿಷಯವನ್ನು ಆಲೋಚಿಸಿದ್ದೆವಲ್ಲವೆ? ಆಗ ನಾವು ಮುಂದೆ ಯಾವ ವಿಪತ್ತು ಬರಬಹುದೆಂದು ನಿಶ್ಚಯಿಸಿದ್ದೆವೋ ಆ ನಿಶ್ಚಯದಂತೆಯೇ ನಡೆ

ಯಿತು. ವಿಶೇಷವೇನಿದೆ? ನೀನು ಹಿತೈಷಿಗಳ ಮಾತನ್ನು ಕೇಳದುದಕ್ಕಾಗಿ ಯಾವ ಫಲವನ್ನು ಹೊಂದಬೇಕೋ ಆ ಫಲವೇ ಪ್ರಾಪ್ತವಾಯಿತು. ಶತ್ರುಗಳಿಂದ ದೊಡ್ಡ ಭಯವುಂಟಾಗುವುದೆಂದು ನಾವು ಮೊದಲೇ ಆಲೋಚಿಸಿದ್ದೆವಷ್ಟೆ? ಪಾಪಕಾರ್ಯಗಳಿಗೆ ನರಕದಲ್ಲಿ ಬೀಳಬೇಕಾದುದೇ ಹೇಗೆ ಫಲವೋ, ಹಾಗೆ ನೀನು ನಡೆಸಿದ ಸೀತಾಪಹಾರವೆಂಬ ಪಾಪಕಾರ್ಯಕ್ಕೆ ತಕ್ಕ ಫಲವು ಶೀಘ್ರದಲ್ಲಿಯೇ ಕಾಣಿಸಿತಲ್ಲದೆ ಬೇರೆಯಲ್ಲ! ಮಹಾರಾಜನೆ! ನೀನು ಕೇವಲ ವೀರ್ಯಮದದಿಂದ ಸೀತೆಯನ್ನು ಕದ್ದು ತಂದೆಯೇ ಹೊರತು, ಅಕೃತ್ಯವನ್ನು ನಡೆಸುವುದಕ್ಕೆ ಮೊದಲು, ಅದು ಯುಕ್ತವೇ, ಅಯುಕ್ತವೇ ಎಂಬುದನ್ನು ವಿಚಾರಿಸಲಿಲ್ಲ! ಅದರಿಂದುಂಟಾಗಬಹುದಾದ ಅಪಾಯವೇನೆಂಬುದನ್ನೂ ತಿಳಿಯಲಿಲ್ಲ. ಪ್ರಜೆಗಳನ್ನು ರಕ್ಷಿಸತಕ್ಕ ಯಾವ ರಾಜನು ಕಾರ್ಯಾರಂಭಕ್ಕೆ ಮೊದಲು ನಡೆಸಬೇಕಾದ ಆಲೋಚನೆಗಳನ್ನು ಕಾರ್ಯವು ನಡೆದುಹೋದಮೇಲೆಯೂ, ಆಲೋಚಿಸಿದಮೇಲೆ ನಡೆಸಬೇಕಾದ ಕಾರ್ಯಗಳನ್ನು ಮೊದಲೂ ನಡೆಸುವನೋ ಅವನಿಗೆ ನ್ಯಾಯಾನ್ಯಾಯಗಳೊಂದೂ ತಿಳಿಯವು. ಅಂತವನೇ ಯುಕ್ತಾಯುಕ್ತಗಳನ್ನು ತಿಳಿಯದವನು. ಕಾಲದೇಶಗಳನ್ನು ವಿಚಾರಿಸದೆ ನಡೆಸಿದ ಕಾರ್ಯಗಳು ವಿಪರೀತಗಳಾಗಿಯೇ ಪರಿಣಮಿಸಿ, ಮಂತ್ರಾಧ್ಯಯನಾದಿಗಳಿಲ್ಲದೆ ಅಯೋಗ್ಯರಿಂದ ಹೋಮ ಮಾಡಲ್ಪಟ್ಟ ಹವಿಸ್ಸುಗಳಂತೆ ನಿರರ್ಥಕಗಳಾಗುವುವು. ರಾಜರು ತಮ್ಮ ಮತ್ತು ಶತ್ರುಗಳ ಬಲ ತಾರತಮ್ಯವನ್ನು ನೋಡಿಕೊಂಡು, ಕಾಲೋಚಿತವಾಗಿ ನಡೆಸಬೇಕಾದ ಯಾನಸಂಧಾನ ದಾನಗಳೆಂಬ * ಉತ್ತಮ ಮಧ್ಯಮಾಧಮ ಕರ್ಮಗಳು ಮೂರುಂಟಲ್ಲವೆ? ಈ ಒಂದೊಂದು ಕಾರ್ಯವನ್ನು

* ತಾನು ಬಲಿಷ್ಠನಾಗಿ ಶತ್ರುವು ದುರ್ಬಲನಾಗಿದ್ದಾಗ ನಡೆಸಬೇಕಾದ ಯುದ್ಧವು ಉತ್ತಮ ಕರ್ಮವೆನಿಸುವುದು. ತಾನೂ ಶತ್ರುವೂ ಸಮಾನಬಲರಾಗಿರುವಾಗ ನಡೆಸತಕ್ಕ ಸಂಧಿಯು ಮಧ್ಯಮಕರ್ಮವು. ಶತ್ರುವಿಗಿಂತಲೂ ತಾನು ದುರ್ಬಲನಾಗಿರುವಾಗ ನಡೆಸುವ ದಾನವು ಅಧಮಕರ್ಮವು. ಈ ಮೂರು ಕರ್ಮಗಳನ್ನೂ ಮಂತ್ರಿಗಳೊಡನೆ ಕಲೆತು ಚೆನ್ನಾಗಿ ಆಲೋಚಿಸಿ, ಆ ಕಾರ್ಯವನ್ನಾರಂಭಿಸುವುದಕ್ಕೆ ಬೇಕಾದ ಉಪಾಯವನ್ನೂ, ಅದಕ್ಕೆ ಬೇಕಾದ ಜನಸಹಾಯ ದ್ರವ ಸಹಾಯಗಳನ್ನೂ, ದೇಶಕಾಲವಿಭಾಗವನ್ನೂ ವಿಘ್ನನಿವಾರಣೋಪಾಯವನ್ನೂ, ಕಾರ್ಯಸಿದ್ಧಿಕ್ರಮವನ್ನೂ ನಿಶ್ಚಯಿಸಿ ತಿಳಿಯುವವನೇ ನೀತಿವಿದನೆಂದು ಭಾವವು.

ನಡೆಸಬೇಕಾಗಿದ್ದರೂ, ಮೊದಲು ಆಯಾ ಕಾರ್ಯಗಳನ್ನಾರಂಭಿಸುವುದಕ್ಕೆ ಬೇಕಾದ ಉಪಾಯಗಳು, ಅದಕ್ಕೆ ಬೇಕಾದ ಜನಸಹಾಯ, ದ್ರವ್ಯಸಹಾಯ ಗಳು, ಅವನು ನಡೆಸತಕ್ಕ ಕಾಲದೇಶಸ್ಥಿತಿ, ನಡುವೆ ಸಂಭವಿಸಬಹುದಾದ ವಿಘ್ನಗಳಿಗೆ ತಕ್ಕ ಪ್ರತೀಕಾರಗಳು, ಕಾರ್ಯಸಿದ್ಧಿ, ಇವೈದನ್ನೂ ಯಾವನು ಮಂತ್ರಿಗಳೊಡನೆ ಚೆನ್ನಾಗಿ ಆಲೋಚಿಸಿ ತಿಳಿದು ನಡೆಸುವನೋ, ಅವನೊಬ್ಬನೇ ನೀತಿಮಾರ್ಗವನ್ನನುಸರಿಸತಕ್ಕವನು. ಅವನೊಬ್ಬನೇ ನೀತಿ ಫಲವನ್ನೂ ಹೊಂದುವನು. ಯಾವನು ಬುದ್ಧಿವಂತರಾದ ಮಂತ್ರಿಗಳೊಡನೆ ಆಲೋಚಿಸಿ, ಸ್ನೇಹಿತರೊಡನೆ ಕಲೆತು ವಿಚಾರಮಾಡಿ, ನೀತಿಶಾಸ್ತ್ರವನ್ನತಿಕ್ರಮಿಸದೆ, ಕಾರ್ಯವನ್ನು ನಿರ್ಣಯಿಸಲೆಣಿಸುವನೋ ಆ ರಾಜನೇ ನೀತಿಪರನು. ಎಲೆ ರಾಕ್ಷಸೇಂದ್ರನೆ! ಯಾವ ಪುರುಷನಾದರೇನು? ನೀತಿ ಶಾಸ್ತ್ರದಲ್ಲಿ ವಿಧಿಸಲ್ಪಟ್ಟಿರುವಂತೆ ಪುರುಷಾರ್ಥಗಳನ್ನು ಆಯಾ ವಿಭಾಗ ವನ್ನನುಸರಿಸಿ, ಎಂದರೆ, ಪ್ರಾತಃಕಾಲದಲ್ಲಿ ಧರ್ಮವನ್ನೂ, ಮಧ್ಯಾಹ್ನ ದಲ್ಲಿ ಅರ್ಥವನ್ನೂ, ಸಾಯಂಕಾಲದಲ್ಲಿ ಕಾಮವನ್ನೂ ಸೇವಿಸಬೇಕು. ಇಲ್ಲವೇ ಪ್ರಾತಃಕಾಲದಲ್ಲಿ ತತ್ಕಾಲವಿಹಿತವಾದ ಧರ್ಮದೊಡನೆ ಮಧ್ಯಾಹ್ನ ವಿಹಿತವಾದ ಅರ್ಥದೊಡನೆ ಪ್ರಾತಃಕಾಲದಲ್ಲಿ ನಡೆಸಬೇಕಾದ ಧರ್ಮವನ್ನೂ, ಸಾಯಂಕಾಲಗಳಲ್ಲ ತತ್ಕಾಲವಿಹಿತವಾದ ಕಾಮದೊಡನೆ ಧರ್ಮವನ್ನೂ, ಹೀಗೆ ಒಂದೊಂದು ಕಾಲಕ್ಕೆ ಎರಡೆರಡರಂತೆ ಈ ಪುರುಷಾರ್ಥಗಳನ್ನು ಜತೆ ಜತೆಯಾಗಿಯಾದರೂ ಸೇವಿಸಬಹುದು. ಅಥವಾ ಸಾಯಂಕಾಲದಲ್ಲಿ ಆ ಕಾಲಕ್ಕೆ ವಿಹಿತವಾದ ಕಾಮದೊಡನೆ, ಪ್ರಾತರ್ಮಧ್ಯಾಹ್ನಕಾಲಗಳ ಧರ್ಮಾರ್ಥಗಳನ್ನೂ ಸೇರಿಸಿ ಇವು ಮೂರನ್ನೂ ಒಂದಾಗಿಯೂ ಸಾಧಿಸ ಬಹುದು. ಇದು ಹೊರತು ಅಕಾಲದಲ್ಲಿ ಮಾತ್ರ ಇವುಗಳನ್ನು ಸೇವಿಸ ಬಾರದು. ಮುಖ್ಯವಾಗಿ ಕೇವಲ ಕಾಮವನ್ನೇ ಸರ್ವಕಾಲಗಳಲ್ಲಿಯೂ ಸೇವಿಸತಕ್ಕವನು ಪುರುಷಾಧಮನೇ ಹೊರತು ಬೇರೆಯಲ್ಲ. ಅಣ್ಣಾ! ಲೋಕ ದಲ್ಲಿ ಯಾವ ರಾಜನಾಗಲಿ, ರಾಜಕಾರ್ಯವನ್ನು ನಡೆಸುವ ಬೇರೆ ಪುರುಷನಾ ಗಲಿ, ಮೇಲೆ ಹೇಳಿದ ತ್ರಿವರ್ಗಗಳಲ್ಲಿ ಯಾವುದು ಶ್ರೇಷ್ಠವೆಂಬುದನ್ನು ತಿಳಿದು, ಅದರಂತೆ ನಡೆಯುದಿರುವನೋ, ಅವನ ಶಾಸ್ತ್ರಶ್ರವಣವೆಲ್ಲವೂ ವ್ಯರ್ಥವು. ಎಲೆ ರಾಕ್ಷಸೋತ್ತಮನೆ! ಲೋಕದಲ್ಲಿ ಯಾವನು ತನ್ನ ಮನಸ್ಸನ್ನು ತನ್ನ

ವಶದಲ್ಲಿರಿಸಿಕೊಂಡು ಆಯಾ ಕಾಲಕ್ಕೆ ತಕ್ಕಂತೆ, ಸಾಮದಾನಭೇದದಂಡಗಳೆಂಬ ಚತುರುಪಾಯಗಳನ್ನೂ, ಪ್ರತ್ಯೇಕವಾಗಿಯಾಗಲಿ, ಸಾಕಲ್ಯದಿಂದಾಗಲಿ ಪ್ರಯೋಗಿಸುವಾಗ ಅವುಗಳನ್ನೂ ನಿರ್ವಹಿಸುವುದಕ್ಕೆ ಮಾರ್ಗಗಳಾದ ನಯಾನಯಗಳನ್ನೂ, ಧರ್ಮಾರ್ಥಕಾಮಗಳನ್ನೂ, ಮೊದಲೇ ಮಂತ್ರಿಗಳೊಡನೆ ಚೆನ್ನಾಗಿ ಆಲೋಚಿಸಿ, ಆಯಾ ಕಾಲಗಳಿಗೆ ತಕ್ಕಂತೆ ಸೇವಿಸುವನೋ, ಅವನು ಎಂದಿಗೂ ಲೋಕದಲ್ಲಿ ವ್ಯಸನವನ್ನು ಹೊಂದಲಾರನು. ಯಾವ ರಾಜನು ಅರ್ಥತತ್ವಗಳನ್ನು ಚೆನ್ನಾಗಿ ತಿಳಿದ ಮಂತ್ರಿಗಳೊಡನೆ ಆಲೋಚಿಸಿ, ತನಗೆ ಮುಂದೆ ಹಿತವನ್ನುಂಟುಮಾಡುವ ಕರ್ತವ್ಯಾಕರ್ತವ್ಯಗಳನ್ನು ನಿಶ್ಚಯಿಸಿಕೊಂಡು ಕರ್ತವ್ಯವನ್ನು ಮಾತ್ರವೇ ಮಾಡುವನೋ, ಅವನೇ ಈ ಲೋಕದಲ್ಲಿ ಸುಖವಾಗಿ ಜೀವಿಸಬಲ್ಲನು. ಅಣ್ಣಾ! ರಾಜರ ಸಂಗತಿಯಂತೂ ಹೀಗಾಯಿತಷ್ಟೆ? ಮಂತ್ರಿಗಳ ಸ್ವಭಾವಗಳನ್ನೂ ಹೇಳುವೆನು ಕೇಳು! ನೀತಿಶಾಸ್ತ್ರಾರ್ಥಗಳನ್ನು ಗುರುಮುಖವಾಗಿ ಕೇಳಿ ತಿಳಿಯದೆ, ಆಕಾರದಲ್ಲಿ ಮಾತ್ರ ಪುರುಷರಂತಿದ್ದರೂ, ಬುದ್ಧಿಯಲ್ಲಿ ಪಶುಗಳಂತೆ ಆಹಾರ ನಿದ್ರಾದಿಗಳನ್ನು ಮಾತ್ರವೇ ತಿಳಿದವರು ಕೆಲವರುಂಟು. ರಾಜನು ಭ್ರಾಂತರಾಗಿ ಇಂತವರನ್ನು ರಾಜಕಾರ್ಯ ವಿಚಾರಗಳಲ್ಲಿ ಆಲೋಚನೆಗಳನ್ನು ಹೇಳುವುದಕ್ಕಾಗಿ ಸೇರಿಸಿಕೊಂಡರೆ, ಇಷ್ಟು ಮಾತ್ರಕ್ಕೇ ಅವರು ತಾವೇ ಸರ್ವಜ್ಞರೆಂಬ ಗರ್ವವನ್ನು ಹೊಂದಿ ಊಹಾಪೋಹಗಳೊಂದೂ ಇಲ್ಲದೆ, ಬರೀ ಹೆಮ್ಮೆಯಿಂದ ಬಾಯಿಗೆ ಬಂದಂತೆ ಬಗುಳುವುದಕ್ಕೆ ತೊಡಗುವರೇ ಹೊರತು ಯುಕ್ತಾಯುಕ್ತಗಳನ್ನು ನಿಶ್ಚಯಿಸಲಾರರು. ಅರ್ಥಶಾಸ್ತ್ರಜ್ಞಾನವಿಲ್ಲದ ಆ ಮಂತ್ರಿಗಳ ಅಹಿತವಾಕ್ಯಗಳಿಗೆ ಎಂದಿಗೂ ಕಿವಿಗುಡಬಾರದು. ಮತ್ತು ಯಾರು ತಮಗೆ ಸ್ವಲ್ಪಮಾತ್ರವೂ ಶಾಸ್ತ್ರಜ್ಞಾನವಿಲ್ಲದಿದ್ದರೂ, ಕೇವಲ ಧಾರ್ಷ್ಟ್ಯದಿಂದ, ವಾಸ್ತವಕ್ಕೆ ಅಹಿತವಾಗಿ ಮೇಲೆ ಮಾತ್ರ ಹಿತದಂತೆ ತೋರುವ ದುರಾಲೋಚನೆಗಳನ್ನು ಅಕ್ರಮವಾಗಿ ಬೋಧಿಸುವರೋ, ಅಂತವರು ಕಾರ್ಯವನ್ನು ಕೆಡಿಸತಕ್ಕ ದುರ್ಮಂತ್ರಿಗಳಾದುದರಿಂದ, ಅಂತವರನ್ನು ಮೊದಲೇ ಚೆನ್ನಾಗಿ ಪರೀಕ್ಷಿಸಿ ತಿಳಿದುಕೊಂಡು, ಅವರ ಮಾತಿಗೆ ಕಿವಿಗುಡದಿರುವುದು ಮಾತ್ರವಲ್ಲದೆ, ಅವರನ್ನು ಮಂತ್ರಸಭೆಗಳಲ್ಲಿ ತಲೆಹಾಕದಂತೆಯೇ ಹೊರಗಿಡಬೇಕು. ಇಂತಹ ದುರ್ಮಂ

ತ್ರಿಗಳು ರಾಜರಿಗೆ ಅಹಿತವನ್ನು ಹೇಳಿ ದುರ್ಬೋಧನೆಯನ್ನು ಮಾಡುವುದು ಮಾತ್ರವೇ ಅಲ್ಲ. ಉಪಾಯವನ್ನು ಬಲ್ಲ ಶತ್ರುಗಳಿಂದ ಪ್ರೇರಿತರಾಗಿ ತನ್ನ ಸ್ವಾಮಿಯನ್ನೇ ಕೆಡಿಸಬೇಕೆಂದು ಪ್ರಯತ್ನಿಸಿ, ಆಗಾಗ ಅವನ ಕೈಯಿಂದ ವಿಪರೀತಕಾರ್ಯಗಳನ್ನೇ ಮಾಡಿಸುವರು. ಹೀಗೆ ಲಂಚಕ್ಕೊಳಗಾಗಿ ಶತ್ರುಪಕ್ಷವನ್ನು ಹಿಡಿದು ಮಿತ್ರರಂತೆ ನಟಿಸುತ್ತ, ಕಾರ್ಯದಲ್ಲಿ ಮಾತ್ರ ಶತ್ರುತ್ವವನ್ನೇ ತೋರಿಸುವ ಮಂತ್ರಿಗಳನ್ನು ರಾಜನಾದವನು ಚೆನ್ನಾಗಿ ಒಳಹೊಕ್ಕು ಪರೀಕ್ಷಿಸಬೇಕು. ಅವರೊಡನೆ ಮಂತ್ರಾಲೋಚನೆಯ ನೆವದಿಂದಲೇ ಅನೇಕವಿಧ ವಾಕ್ಯಗಳನ್ನಾಡಿ ಅವರ ಕಪಟವನ್ನು ಕಂಡುಕೊಳ್ಳಬೇಕು. "ಎಷ್ಟೇ ಕುಟಿಲಬುದ್ಧಿಯುಳ್ಳವರಾಗಿದ್ದರೂ ಅಶಕ್ತರಾದ ಮಂತ್ರಿಗಳು ಏನು ಮಾಡಬಲ್ಲರು?" ಎಂದು ಕೇಳುವೆಯಾ? ಲಂಚಮೊದಲಾದುವುಗಳಿಂದ ತಂತ್ರಜ್ಞರಾದ ಶತ್ರುಗಳಿಗೆ ಸುಲಭವಾಗಿ ವಶರಾಗುವ ಆ ಮಂತ್ರಿಗಳು, ತನ್ನ ರಾಜನಿಗೆ ಪ್ರಸ್ತುತವಾದ ಒಂದು ಕಾರ್ಯವಿರುವಾಗ ಅದಕ್ಕೆ ವಿರುದ್ಧವಾದ ಕಾರ್ಯಗಳಿಗೆ ಪ್ರೇರಿಸುವರು. ಚಪಲಸ್ವಭಾವವುಳ್ಳ ರಾಜರೂ ಕೂಡ ಹಿಂದುಮುಂದು ನೋಡದೆ ಅವರ ಮಾರ್ಗವನ್ನೇ ಹಿಡಿಯುವರು. ಇದರಿಂದ ಕ್ರೌಂಚಪರ್ವತದಲ್ಲಿ ಕುಮಾರಸ್ವಾಮಿಯು ಮಾಡಿದ ರಂಧ್ರದಿಂದ ಸಣ್ಣಪಕ್ಷಿಗಳು ಪ್ರವೇಶಿಸಿ ಬರುವಂತೆ, ಶತ್ರುಗಳು, ರಾಜನಲ್ಲಿ ದುರ್ಮಂತ್ರಿಗಳಿಂದಾದ ಈ ಛಿದ್ರವನ್ನು ನೋಡಿಕೊಂಡಿದ್ದು ಅಸಂದರ್ಭದಲ್ಲಿ ಒಳಹೊಕ್ಕು ಅವನನ್ನಾಕ್ರಮಿಸುವರು. ಯಾವ ರಾಜನು ಮಂತ್ರಿವ್ಯವಹಾರಾದಿಗಳಿಂದ ತನಗೆ ಹಿತರಾರೆಂಬುದನ್ನು ಪರೀಕ್ಷಿಸಿ ತಿಳಿದುಕೊಳ್ಳದೆ, ಆ ದುರ್ಮಂತ್ರಿಗಳಿಂದ ತನ್ನನ್ನು ರಕ್ಷಿಸಿಕೊಳ್ಳಲಾರದೆ ಹೋಗುವನೋ, ಅತನು ಅನೇಕ ಕಷ್ಟಗಳಿಗೆ ಗುರಿಯಾಗುವುದಲ್ಲದೆ ತನ್ನ ಪದವಿಯನ್ನೂ ತಪ್ಪಿಸಿಕೊಳ್ಳುವನು. ಅಣ್ಣಾ! ಈಗಲೂ ನೀನು ಈ ವಿಷಯದಲ್ಲಿ ಹಿಂದೆ ನಮ್ಮ ತಮ್ಮನಾದ ವಿಭೀಷಣನು ಹೇಳಿದಂತೆ ನಡೆಸುವುದೇ ಮೇಲು! ಪ್ರಕೃತದಲ್ಲಿ ಅದೇ ನಮಗೆ ಹಿತವಾದ ದಾರಿಯು. ಇದರ ಮೇಲೆ ನಿನಗೆ ಇಷ್ಟಬಂದಂತೆ ನಡೆಸಬಹುದು" ಎಂದನು. ಕುಂಭಕರ್ಣನು ಹೇಳಿದ ಈ ಮಾತನ್ನು ಕೇಳಿ ರಾವಣನಿಗೆ ಮಿತಿಮೀರಿದ ಕೋಪವುಂಟಾಯಿತು. ಆ ಕೋಪಾವೇಶದಿಂದ ರಾವಣನು

ಹಣೆಯ ಮೇಲೆ ಹುಬ್ಬನ್ನು ಗಂಟಿಕ್ಕುತ್ತ, ಅವನನ್ನು ಕುರಿತು "ಓಹೋ! ಕುಂಭಕರ್ಣಾ! ನನಗಿಂತಲೂ ಚಿಕ್ಕವನಾದ ನೀನು, ಕೇವಲ ಪೂಜ್ಯನಾಗಿಯೂ, ಆಚಾರವರ್ತಕನಾಗಿಯೂ ಇರುವ ಗುರುವಿನಂತೆ, ಜ್ಯೇಷ್ಠನಾದ ನನ್ನನ್ನೇ ಶಿಕ್ಷಿಸುವೆಯಾ? ನೀನು ಈಗ ನನಗೆ ಉಪದೇಶಿಸಬೇಕಾದುದೇನೂ ಇಲ್ಲ! ಉಪದೇಶಾದಿಗಳಿಗೆ ಇದು ಕಾಲವೂ ಅಲ್ಲ. ಈ ಮಾತುಗಳಿಂದ ಕೇವಲ ಪ್ರಯಾಸವೇ ಹೊರತು ಬೇರೆ ಪ್ರಯೋಜನವಿಲ್ಲ. ಈ ಕಾಲಕ್ಕೆ ಯಾವುದು ಯುಕ್ತವೋ ಅದಕ್ಕೆ ತಕ್ಕಂತೆ ನಡೆಸು. ಮುಖ್ಯವಾಗಿ ಈಗ ಪರಾಕ್ರಮವೇ ಕಾಲೋಚಿತವು ಮೊದಲು ನಾನು ಭ್ರಮದಿಂದಲೋ, ಅಜ್ಞಾನದಿಂದಲೋ, ವೀರ್ಯಮದದಿಂದಲೋ ನ್ಯಾಯಾನ್ಯಾಯಗಳನ್ನು ವಿಚಾರಿಸದೆ, ನಡೆಯಬೇಕಾದ ರೀತಿಯಲ್ಲಿಯೂ ನಡೆಯದೆ ಹೋದೆನು. ಇನ್ನುಮೇಲೆ ಅದನ್ನು ನಡೆಸುವುದಕ್ಕೂ ಕಾಲವು ಮಿಂಚಿ ಹೋಯಿತು. ಈಗ ಆ ಹಿಂದಿನ ಕಥೆಗಳನ್ನೇ ತಿರುತಿರುಗಿ ಎತ್ತಿಹೇಳುವುದರಿಂದ ಪ್ರಯೋಜನವೇನು? ಈಗಿನ ಕಾಲಕ್ಕೆ ಯಾವುದುಚಿತವೋ ಅದನ್ನೇ ಈಗ ನಡೆಸಬೇಕು. ಕಳೆದು ಹೋದುದನ್ನು ಕುರಿತು ಬುದ್ಧಿವಂತರು ದುಃಖಿಸಲಾರರು. ಕಳೆದುಹೋದುದು ಹೋದಂತೆಯೇ ಹೊರತು ಹಿಂತಿರುಗಿ ಬಾರದು. ಕುಂಭಕರ್ಣಾ! ಹೆಚ್ಚಾಗಿ ಹೇಳಿದುದರಿಂದೇನು! ನಿನಗೆ ನಿಜವಾಗಿ ನನ್ನಲ್ಲಿ ಪ್ರೀತಿಯಿದ್ದರೆ, ನಿನ್ನ ಪರಾಕ್ರಮದಲ್ಲಿಯೂ ನಿನಗೆ ನಂಬಿಕೆಯಿದ್ದರೆ, ಈಗ ಯುದ್ಧವೇ ಅವಶ್ಯವಾದ ಉತ್ತಮಕಾರ್ಯವೆಂದು ನಿನಗೂ ತೋರಿದ್ದರೆ, ಇದುವರೆಗೆ ನನ್ನ ಅವಿವೇಕದಿಂದ ಪ್ರಾಪ್ತವಾದ ದೋಷವನ್ನು ನಿನ್ನ ಪರಾಕ್ರಮದಿಂದ ತಿದ್ದಿ ಸರಿಮಾಡು! ಯಾವನು ತಾನು ಯತ್ನಿಸಿದ ಪ್ರಯೋಜನಕ್ಕೆ ಅಪಾಯವುಂಟಾಗಬಹುದೆಂದು ತೋರಿದಾಗ, ಅದರಿಂದ ಮನಸ್ಸು ಕಲಗಿ ಕೊರಗುತ್ತಿರುವನೋ, ಅವನಿಗೆ ಯಾವಾಗಲೂ ಸಮೀಪದಲ್ಲಿದ್ದು ಪ್ರೋತ್ಸಾಹವನ್ನು ಕೊಡತಕ್ಕ ಸ್ನೇಹಿತನೇ ಸ್ನೇಹಿತನೆನಿಸುವನು. ನೀತಿತಪ್ಪಿ ಕಷ್ಟಕ್ಕೆ ಸಿಕ್ಕಿಬಿದ್ದವರಿಗೆ ಸಹಾಯಕನಾಗಿದ್ದು ಉದ್ಧರಿಸುವ ಬಂಧುವೇ ಬಂಧುವು" ಎಂದನು. ಹೀಗೆ ರಾವಣನು ಗಂಭೀರವಾಗಿಯೂ ನಿಷ್ಠೂರವಾಗಿಯೂ ಹೇಳಿದ ಮಾತಿನ ರೀತಿಯನ್ನೂ, ಅವನ ಹುಬ್ಬುಗಂಟುಗಳನ್ನೂ ನೋಡಿದಾಗ, ಕುಂಭಕರ್ಣನಿಗೆ, ತನ್ನ ಹಿತವಾದ

ದಿಂದ ರಾವಣನಿಗೆ ಅವನ ಇಂದ್ರಿಯಗಳೇ ಅವನಿಗೆ ಸ್ವಾಧೀನವಿಲ್ಲದಷ್ಟು ಮಿತಿಮೀರಿದ ಕೋಪವುಂಟಾಗಿರಬೇಕೆಂದು ತೋರಿದುದರಿಂದ, ಮಾತು ಮಾತಿಗೂ ಮೆಲ್ಲಗೆ ಅವನನ್ನು ಸಮಾಧಾನಪಡಿಸುತ್ತ, "ಎಲೈ ರಾಕ್ಷಸ ರಾಜನೆ! ನಿನ್ನ ಮನಸ್ಸಂತಾಪವು ಸಾಕು! ಕೋಪವನ್ನು ಬಿಟ್ಟು* ಸ್ವಸ್ಥನಾಗು! ನಾನು ಬದುಕಿರುವಾಗಲೂ ನೀನು ಹೀಗೆ ಚಿಂತಾಕುಲ ನಾಗಿರಬಹುದೆ? ನೀನು ಯಾವನ ನಿಮಿತ್ತವಾಗಿ ಹೀಗೆ ಪರಿತಪಿಸುತ್ತಿರು ವೆಯೋ ಆ ರಾಮನನ್ನು ನಾನು ನಾಶಮಾಡುವೆನು. ಆದರೆ, ನನಗೆ ನಿನ್ನಲ್ಲಿರುವ ಸಾಮಾನ್ಯ ಸ್ನೇಹಭಾವದಿಂದಲೂ, ಅದರಲ್ಲಿಯೂ ಮುಖ್ಯ ವಾದ ಸಹೋದರ ಪ್ರೀತಿಯಿಂದಲೂ, ನೀನು ರೋಷದಲ್ಲಿದ್ದರೂ, ಅಥವಾ ಸಂತೋಷದಲ್ಲಿದ್ದರೂ, ಬೇರೆ ಯಾವ ಸ್ಥಿತಿಯಲ್ಲಿದ್ದರೂ, ನನಗೆ ತೋರಿದ ಹಿತವನ್ನು ನಾನು ಅವಶ್ಯವಾಗಿ ನಿನಗೆ ಹೇಳಬೇಕಾದುದರಿಂದ, ಅಷ್ಟೊಂದು ಮಾತುಗಳನ್ನು ಹೇಳಿದೆನೇ ಹೊರತು ಬೇರೆಯಲ್ಲ. ವಿಶೇಷ ಸ್ನೇಹವುಳ್ಳ ಬಂಧುವಿಗೆ, ಇಂತಹ ಆಪತ್ಕಾಲದಲ್ಲಿ ನಡೆಸಬೇಕಾದ ಯುಕ್ತಕಾರ್ಯವು ಶತ್ರುವಧವೆಂಬುದೇನೋ ನಿಜವು. ಅದರಂತೆಯೇ ನಾನು ಮುಂದಿನ ಯುದ್ಧದಲ್ಲಿ ಅದೇ ಕಾರ್ಯವನ್ನು ನಡೆಸದೆ ಬಿಡೆನು. ಎಲೆ ಮಹಾಬಾಹೋ! ಈಗ ನಾನು ಯುದ್ಧರಂಗದಲ್ಲಿ ರಾಮಲಕ್ಷ್ಮಣರನ್ನು ಕೊಂದಮೇಲೆ, ಆ ಶತ್ರುಸೈನ್ಯವು ದಿಕ್ಕುದಿಕ್ಕಿಗೆ ಪಲಾಯನಮಾಡುವ ರೀತಿಯನ್ನಾದರೂ ನೋಡು! ನಾನು ರಣರಂಗದಿಂದ ರಾಮನ ತಲೆಯನ್ನು ಕತ್ತರಿಸಿ ತಂದು ನಿನ್ನ ಮುಂದಿರಿಸಿದಾಗ ಅದನ್ನು ನೀನು ಕಣ್ಣಾರೆ ನೋಡಿ ಸಂತೋಷಿಸುವು ದಲ್ಲದೆ, ನಿನ್ನ ಮನಸ್ಸಂತೋಷವನ್ನು ಇನ್ನೂ ಹೆಚ್ಚಿಸುವಂತೆ ಸೀತೆಯು

---

* ಇಲ್ಲಿ "ಸ್ವಸ್ಥೋಭವಿತುಮರ್ಹಸಿ" ಎಂದು ಮೂಲವು. (ಸ್ವಸ್ಥಃ) ಎಂಬು ದಕ್ಕೆ "ಸ್ವರ್ಗಸ್ಥನಾಗುವೆ" ಎಂದು ವಾಸ್ತವಾರ್ಥವು. ಮುಂದೆಯೂ ಇದೇ ರೀತಿ ಯಾಗಿ ಕುಂಭಕರ್ಣನು ರಾಮನಿಗೆ ವಿರುದ್ಧವಾಗಿ ಹೇಳುವ ವಾಕ್ಯಗಳಿಗೆಲ್ಲಾ ಶೇಷಪೂರಣದಿಂದಲೂ, ಅನ್ವಯಭೇದದಿಂದಲೂ, ಕಾಕುವಿನಿಂದಲೂ, ತತ್ವಾರ್ಥ ಬೋಧಕವಾದ ಅರ್ಥಾಂತರವನ್ನು ಕಲ್ಪಿಸಬಹುದು. ಆ ಅರ್ಥಾಂತರಗಳೆಲ್ಲವೂ ಕೇವಲ ಕ್ಲಿಷ್ಟಕಲ್ಪನವಲ್ಲದೆ, ಹಿಂದೆಯೇ ಕೆಲವು ಶ್ಲೋಕಾರ್ಥಗಳು ವಿವರಿಸಲ್ಪಟ್ಟಿರು ವುದರಿಂದ ಇಲ್ಲಿ ಬಿಟ್ಟಿದೆ.

ದುಃಖವನ್ನನುಭವಿಸಲಿ. ಇದುವರೆಗೆ ನಮ್ಮ ಲಂಕೆಯಲ್ಲಿ ಶತ್ರುಗಳ ಹಾವಳಿಯಿಂದ ತಮ್ಮ ತಮ್ಮ ಬಂಧುಗಳನ್ನು ಕಳೆದುಕೊಂಡು ದುಃಖಿಸುತ್ತಿರುವ ರಾಕ್ಷಸರೆಲ್ಲರೂ, ಈಗ ತಮಗೆ ವಿಶೇಷ ಸಂತೋಷಕರವಾದ ರಾಮವಧವನ್ನು ನೋಡಿ ತೃಪ್ತಿಹೊಂದಲಿ! ಅಣ್ಣಾ! ಈಗಿನ ಯುದ್ಧದಲ್ಲಿ ನಾನು ಬಂಧುವಧದಿಂದ ದುಃಖಿತರಾದ ನಮ್ಮ ರಾಕ್ಷಸರಿಗೆ, ನಮ್ಮ ಶತ್ರುವನ್ನು ವಧಿಸುವುದರಿಂದಲೇ ಕಣ್ಣೀರನ್ನೊರಸಿ ಆಪ್ಯಾಯನವನ್ನುಂಟುಮಾಡುವೆನು. ಇನ್ನು ಕ್ಷಣಕಾಲದಲ್ಲಿಯೇ ಪರ್ವತಾಕಾರವುಳ್ಳ ಸುಗ್ರೀವನೆಂಬ ಕಪಿರಾಜನು, ಸೂರ್ಯಕಾಂತಿಯಿಂದ ಕೂಡಿದ ಮೇಘದಂತೆ, ರಕ್ತದಿಂದ ತೊಯ್ದು ಮೈಯುಳ್ಳವನಾಗಿ ರಣರಂಗದಲ್ಲಿ ಬಿದ್ದಿರುವುದನ್ನು ನಿನ್ನ ಕಣ್ಣಾರೆ ನೀನೇ ನೋಡುವೆ. ಎಲೈ ದೋಷರಹಿತನೆ! ಇಷ್ಟೊಂದು ಮಂದಿ ರಾಕ್ಷಸವೀರರೂ, ನಿನ್ನ ಪ್ರಿಯಸಹೋದರನಾದ ನಾನೂ, ಆ ರಾಮನನ್ನು ವಧಿಸುವುದರಲ್ಲಿಯೇ ಆತುರವುಳ್ಳವರಾಗಿ, ನಿನ್ನನ್ನು ರಕ್ಷಿಸುತ್ತಿರುವಾಗ, ನಿನಗೆ ರಾಮನಿಂದ ವಧವೆಂದರೇನು? ಎಲೆ ರಾಕ್ಷಸೇಂದ್ರನೆ! ಒಂದುವೇಳೆ ಆ ರಾಮನ ಕೈಯಿಂದಲೇ ನಿನಗೆ ವಧವು ನಿಶ್ಚಿತವಾಗಿದ್ದರೂ, ಅವನು ಮೊದಲು ನನ್ನನ್ನು ಕೊಂದಹೊರತು ನಿನ್ನ ಮೇಲೆ ಕೈಮಾಡಲಾರನು. ನನ್ನನ್ನು ವಧಿಸಿದಮೇಲೆಯೇ ನಿನ್ನನ್ನು ಕೊಲ್ಲಬೇಕಾಗುವುದು. ನಾನಾದರೋ ಯಾವ ಶತ್ರುವಿನಿಂದಲೂ, ಎಂದಿಗೂ ಪರಾಭವವನ್ನು ಹೊಂದುವವನಲ್ಲ. ನನ್ನನ್ನು ಯಾವನೊಬ್ಬನೂ ಕೊಲ್ಲಲಾರನು. ನಾನೇ ಸಾಯದಿದ್ದಮೇಲೆ ನಿನಗೆ ಭಯವೆಲ್ಲಿಯದು? ಅಣ್ಣಾ! ಈಗಲೂ ನನ್ನ ಸಾವಿಗಾಗಿ ನಾನು ಎಂದಿಗೂ ಭಯಪಡತಕ್ಕವನಲ್ಲ. ನಾನು ಸತ್ತಮೇಲೆ ನಿನಗೆ ಯಾವ ಅಪಾಯವುಂಟಾಗುವುದೋ ಎಂಬುದಕ್ಕಾಗಿ ಮಾತ್ರವೇ ನಾನು ಚಿಂತಿಸುತ್ತಿರುವೆನು. ಎಲೈ ಪರಂತಪನೆ! ಈಗಲೇ ನೀನು ನಂಬಿಕೆಯಿಂದ ಯುದ್ಧಕ್ಕೆ ಅನುಜ್ಞೆಯನ್ನು ಕೊಡು. ನೀನು ನಂಬಿಕೆಯಿಂದ ಯುದ್ಧಕ್ಕೆ ಕಳುಹಿಸಬೇಕೆಂದರೆ ನನಗಿಂತಲೂ ಬೇರೊಬ್ಬನು ನಿನಗಿಲ್ಲವು. ನಿನ್ನ ಶತ್ರುಗಳೆಲ್ಲರನ್ನೂ ನಾನೇ ಕೊಂದುಹಾಕುವೆನು. ಇಂದ್ರನಾಗಲಿ, ಯಮನಾಗಲಿ, ಅಗ್ನಿವಾಯುಗಳಾಗಲಿ, ಕುಬೇರವರುಣರಾಗಲಿ ಯಾರೇ ಬಂದರೂ ಅವರೊಡನೆ ನಾನು ಹೋರಾಡಿ ಬದುಕಿರಬಲ್ಲೆನು. ಅಣ್ಣಾ! ಪರ್ವತದಂತಿರುವ ನನ್ನ ಈ

ದೊಡ್ಡದೇಹವನ್ನು ನೋಡು! ತೀಕ್ಷ್ಣಗಳಾದ ನನ್ನ ಕೋರೆಗಳನ್ನು ನೋಡು! ಹೀಗೆ ಸ್ವಭಾವದಿಂದಲೇ ಭಯಂಕರಾಕಾರವುಳ್ಳ ನಾನು ತೀಕ್ಷ್ಣವಾದ ಶೂಲವನ್ನೂ ಕೈಯಲ್ಲಿ ಹಿಡಿದು ಸಿಹ್ಮನಾದವನ್ನು ಮಾಡುತ್ತ ಹೊರಟರೆ, ದೇವೇಂದ್ರನಾದರೂ ಭಯಪಟ್ಟು ಪಲಾಯನಮಾಡಬೇಕಲ್ಲವೆ? ಅಥವಾ ಪ್ರಯತ್ನವೂ ಬೇಕಾದುದಿಲ್ಲ. ನಾನು ಆಯುಧಾದಿ ಸಹಾಯಗಳೊಂದೂ ಇಲ್ಲದೆ ಬರೀ ಬಾಹುಬಲದಿಂದಲೇ ಶತ್ರುವನ್ನಿದಿರಿಸಿ ಹೊಡೆಯುವುದಕ್ಕೆ ತೊಡಗಿದರೂ ಕೂಡ ಬದುಕಬೇಕೆಂಬ ಆಸೆಯುಳ್ಳ ಯಾವನೊಬ್ಬನೂ ನನ್ನ ಮುಂದೆ ನಿಲ್ಲಲಾರನು. ಅಣ್ಣಾ! ನನಗೆ ಶಸ್ತ್ರಾಸ್ತ್ರಯುಧವಾಗಲಿ, ಗದೆಯಾಗಲಿ, ಖಡ್ಗವಾಗಲಿ, ತೀಕ್ಷ್ಣಬಾಣಗಳಾಗಲಿ, ಯಾವುದೊಂದೂ ಬೇಕಾದುದಿಲ್ಲ! ನಾನು ಕೋಪಾವೇಶದಿಂದ ಬಂದು ನಿಂತರೆ, ವಜ್ರಧಾರಿಯಾದ ಇಂದ್ರನನ್ನಾದರೂ ಬರೀ ಕೈಯಿಂದಲೇ ಬಡಿದು ಕೊಲ್ಲುವೆನು. ಮೊದಲು ಆ ರಾಮನು ನನ್ನ ಮುಷ್ಟಿಪ್ರಹಾರವನ್ನಾದರೂ ತಡೆದು ನಿಲ್ಲುವುದು ನಿಜವಾದರೆ, ಆಮೇಲೆ ಅವನ ಬಾಣಸಮೂಹಗಳು ನನ್ನ ದೇಹದ ರಕ್ತವನ್ನು ಕುಡಿಯಬಲ್ಲುವು. ಅವನು ನನ್ನ ಮುಷ್ಟಿಪ್ರಹಾರವನ್ನೇ ತಡೆದು ನಿಲ್ಲಲಾರನು. ಇನ್ನು ನಮ್ಮನ್ನು ಕೊಲ್ಲುವುದೆಂದರೇನು? ರಾಜೇಂದ್ರನೆ! ನಾನಿರುವಾಗ ನೀನೇಕೆ ಹೀಗೆ ಚಿಂತಿಸಿ ಕೊರಗುವೆ? ಇದೋ! ನಿನ್ನ ಶತ್ರುಗಳನ್ನು ಕೊಲ್ಲುವುದಕ್ಕಾಗಿ ಹೋರಾಡುತ್ತಿರುವೆನು. ರಾಮನನ್ನೂ, ಲಕ್ಷ್ಮಣನನ್ನೂ, ಅವರಲ್ಲಿ ಮಹಾಬಲಾಢ್ಯನೆನಿಸಿಕೊಂಡ ಸುಗ್ರೀವನನ್ನೂ, ಹಿಂದೆ ಇಲ್ಲಿ ಅನೇಕ ರಾಕ್ಷಸರನ್ನು ಕೊಂದು ಲಂಕೆಯನ್ನು ಸುಟ್ಟುಹೋದ ಹನುಮಂತನನ್ನೂ, ಆ ರಣರಂಗದಲ್ಲಿ ಬಂದು ನಿಲ್ಲುವ ಇನ್ನೂ ಅನೇಕ ವಾನರರನ್ನೂ ಕೊಂದು ಬರುವೆನು. ಅಣ್ಣಾ! ಲೋಕದಲ್ಲಿ ಬೇರೆ ಯಾರಿಗೂ ಸಲ್ಲದ ಅಸಾಧಾರಣ ಕೀರ್ತಿಯನ್ನು ನಿನಗೆ ತಂದು ಸೇರಿಸಬೇಕೆಂಬುದೇ ನನ್ನ ಕೋರಿಕೆ! ಇನ್ನು ಹೆಚ್ಚು ಮಾತಿನಿಂದೇನು? ಒಂದುವೇಳೆ ನಿನಗೆ ಇಂದ್ರನಿಂದಲೇ ಭಯವುಂಟಾಗಿದ್ದರೂ, ಕೊನೆಗೆ ಬ್ರಹ್ಮನಿಂದಲೇ ಅಪಾಯವುಂಟಾಗಬಹುದಾಗಿದ್ದರೂ ಅದನ್ನೂ ನಾನು ನೀಗಿಸಬಲ್ಲೆನು. ನಾನು ಕೋಪದಿಂದ ನೋಡಿದಮಾತ್ರಕ್ಕೆ ದೇವತೆಗಳಾದರೂ ಭಯದಿಂದ ಮೂರ್ಛಿತರಾಗಿ ಮಲಗಬೇಕು. ನಾನು ಯಮ

ನನ್ನಾದರೂ ಅಡಗಿಸಬಲ್ಲೆನು. ಅಗ್ನಿಯನ್ನಾದರೂ ಭಕ್ಷಿಸಬಲ್ಲೆನು. ಸೂರ್ಯನನ್ನು ನಕ್ಷತ್ರಗಳೊಡನೆ ಆಕಾಶದಿಂದ ಕೆಳಕ್ಕುದಿರಿಸುವೆನು. ಇಂದ್ರನನ್ನು ಕೊಂದು ಕೆಡಹುವೆನು. ಮಹಾಸಾಗರವನ್ನು ಹೀರಿಬಿಡುವೆನು. ಪರ್ವತಗಳನ್ನಾದರೂ ಪುಡಿಮಾಡುವೆನು. ಈಗ ಭೂಮಿಯನ್ನೂ ಭೇದಿಸುವೆನು. ಈಗ ನನ್ನ ಬಾಯಿಗೆ ತುತ್ತಾಗುತ್ತಿರುವ ಸಮಸ್ತ ಭೂತಗಳೂ, ಬಹುಕಾಲದಿಂದ ಮಲಗಿದ್ದ ಕುಂಭಕರ್ಣನ ಪರಾಕ್ರಮವೆಂತದೆಂಬುದನ್ನು ಚೆನ್ನಾಗಿ ಕಂಡುಕೊಳ್ಳಲಿ! ಎಲೆ ರಾಕ್ಷಸಸಾರ್ವಭೌಮನೆ! ಈ ತ್ರೈಲೋಕ್ಯವನ್ನು ಸೇರಿಸಿದರೂ ನನಗೆ ಒಂದುಹೊತ್ತಿನ ಊಟಕ್ಕೇ ಸಾಲದು. ಇನ್ನು ಇತರರಿಗೆ ನನ್ನೊಡನೆ ಯುದ್ಧವೆಂದರೇನು? ಅಣ್ಣಾ! ಈಗ ನಾನು ರಾಮನನ್ನು ಕೊಂದು, ನಿನಗೆ ಸರ್ವೋತ್ತಮವಾದ ಸುಖವನ್ನುಂಟುಮಾಡಬೇಕೆಂದೇ ಹೊರಡುತ್ತಿರುವೆನು. ಆ ರಾಮಲಕ್ಷ್ಮಣರನ್ನು ಕೊಲ್ಲುವುದು ಮಾತ್ರವಲ್ಲದೆ, ಇತರ ವಾನರರೆಲ್ಲರನ್ನೂ ಒಂದೇತುತ್ತಾಗಿ ಭಕ್ಷಿಸಿ ಬರುವೆನು. ಇನ್ನು ನೀನು ಮನಸ್ಸಿನ ಚಿಂತೆಯನ್ನು ಬಿಟ್ಟು ಯಥೇಚ್ಛವಾಗಿ ಕ್ರೀಡಿಸುತ್ತಿರು! ಬೇಕಾದ ಮದ್ಯವನ್ನು ಕುಡಿ! ತೋರಿದ ಕೆಲಸವನ್ನು ಮಾಡು! ಮನಸ್ಸಿನ ಕಳವಳವನ್ನು ಬಿಡು! ಅತ್ತಲಾಗಿ ನಾನು ರಾಮನನ್ನು ಯಮಪುರಿಗೆ ಕಳುಹಿಸಿದ ಕ್ಷಣವೇ, ಇತ್ತಲಾಗಿ ಸೀತೆಯು ಬಹುಕಾಲದವರೆಗೆ ನಿನಗೆ ವಶವಾಗಿರುವಳು" ಎಂದನು.

ಇಲ್ಲಿಗೆ ಅರುವತ್ತಮೂರನೆಯ ಸರ್ಗವು.

ಮಹೋದರನು ಕುಂಭಕರ್ಣನನ್ನು ಹೆದರಿಸಿದುದು.

ಮಹಾಕಾಯವುಳ್ಳವನಾಗಿಯೂ, ಮಹಾಬಾಹುವಾಗಿಯೂ, ಬಲಾಢ್ಯನಾಗಿಯೂ ಇದ್ದ ಕುಂಭಕರ್ಣನ ವೀರನಾದವನ್ನು ಕೇಳಿದೊಡನೆ, ರಾವಣನ ಸಮೀಪದಲ್ಲಿದ್ದ ಮಹೋದರನೆಂಬ ಮಂತ್ರಿಯು, ಕುಂಭಕರ್ಣನನ್ನು ನೋಡಿ ತಿರಸ್ಕಾರಪೂರ್ವಕವಾಗಿ, "ಕುಂಭಕರ್ಣಾ! ನೀನು ದೊಡ್ಡ

ವಂಶದಲ್ಲಿ ಹುಟ್ಟಿದವನಾಗಿದ್ದರೂ ನಿನ್ನ ಬುದ್ಧಿಯು ಅತ್ಯಲ್ಪವಾಗಿರುವುದು. ನಿನ್ನಲ್ಲಿ ಕೇವಲ ಧೈರ್ಯವೊಂದೇ ಇರುವುದೇ ಹೊರತು ಶಾಸ್ತ್ರಜ್ಞಾನ ವಿಲ್ಲ. ಗರ್ವವು ಮಾತ್ರ ನಿನ್ನಲ್ಲಿ ಪೂರ್ಣವಾಗಿರುವುದು. ಆಯಾ ಕಾರ್ಯ ದಲ್ಲಿ ನಡೆಸಬೇಕಾದ ಮಂತ್ರಾಲೋಚನೆಯ ರೀತಿಯೇನೆಂದು ನಿನಗೆ ತಿಳಿಯದು. ಕುಂಭಕರ್ಣಾ! ಈಗ ನೀನೇನು ಹೇಳಿದೆ? ನಮ್ಮ ರಾಜನು ತನ್ನ ಪರಾಕ್ರಮದ ಗರ್ವದಿಂದ ಮುಂದೆ ಬರಬಹುದಾದ ಗುಣದೋಷ ಗಳನ್ನು ವಿಚಾರಿಸಲಿಲ್ಲವೆಂದೂ, ನ್ಯಾಯಾನ್ಯಾಯಗಳನ್ನು ತಿಳಿಯನೆಂದೂ ಹೇಳಿದೆಯಲ್ಲವೆ? ಹಾಗಲ್ಲ! ನಮ್ಮ ರಾಜನಿಗೆ ನಯಾನಯಗಳು ತಿಳಿಯದೆ ಹೋಗಿಲ್ಲ. ನೀನಾದರೆ ಹುಡುಗುತನದಿಂದ ಗುರುಹಿರಿಯರೆಂಬ ಭಯ ವಿಲ್ಲದೆ ಇಲ್ಲಿ ಬಾಯಿಗೆ ಬಂದಂತೆ ಮಾತಾಡುತ್ತಿರುವೆ? ನೀನು ಹೇಳುವ ಮಾತುಗಳಲ್ಲಿ ಒಂದಾದರೂ ಶಾಸ್ತ್ರಜ್ಞಾನದಿಂದ ಬಂದುದಲ್ಲ. ರಾಕ್ಷಸ ಶ್ರೇಷ್ಠನಾದ ನಮ್ಮ ರಾವಣನು ವಿವಿಕ್ತಾದಿಮಂತ್ರಗಳೆಲ್ಲವನ್ನೂ ಬಲ್ಲವನು. ಅದಕ್ಕೆ ತಕ್ಕ ದೇಶಕಾಲಗಳನ್ನೂ, ವಿರುದ್ಧದೇಶಕಾಲಗಳನ್ನೂ, ಬೇರೆ ಬೇರೆಯಾಗಿ ತಿಳಿದಿರುವನು. ಆ ಜ್ಞಾನಬಲದಿಂದಲೇ ತನಗೂ, ಶತ್ರು ಗಳಿಗೂ ಇರತಕ್ಕ ಕ್ಷಯಸ್ಥಾನವೃದ್ಧಿಗಳೆಂಬ ತ್ರಿವರ್ಗಗಳನ್ನೂ ಚೆನ್ನಾಗಿ ಬಲ್ಲನು. ಆದುದರಿಂದ ಇವನಿಗೆ ದೇಶಕಾಲಜ್ಞಾನವಿಲ್ಲವೆಂದು ನೀನು ಹೇಳಿದುದು ಯುಕ್ತವಲ್ಲ. ಕೇವಲ ಬಾಹುಬಲವೊಂದನ್ನೇ ನಂಬಿಕೊಂಡು, ಅಲ್ಪಬುದ್ಧಿಯುಳ್ಳವನಾಗಿ, ಹಿರಿಯರನ್ನು ಸೇವಿಸದ ಕುತ್ಸಿತನಿಗೂ ಅಕಾರ್ಯವೆನಿಸಿಕೊಂಡ ಕೆಲಸಗಳನ್ನು ಪಂಡಿತರಾದವರು ಮಾಡುವರೇ? ಯಾರೂ ಮಾಡಲಾರರು. ಇನ್ನು ಪ್ರಾಜ್ಞನಾದ ರಾವಣನ ವಿಷಯ ವನ್ನು ಹೇಳಬೇಕಾದುದೇನು? ಇದಲ್ಲದೆ ನೀನು ಧರ್ಮಾರ್ಥಕಾಮಗಳಲ್ಲಿ ಒಂದೊಂದಕ್ಕೂ ಬೇರೆಬೇರೆ ಫಲವು ನಿಯತವಾಗಿರುವುದೆಂದೂ, ಅವುಗಳಲ್ಲಿ ಧರ್ಮಕ್ಕೆ ಉತ್ತಮ ಫಲವೂ, ಅಧರ್ಮಕ್ಕೆ ದುಷ್ಫಲವೂ ವಿಹಿತವಾಗಿರು ವುದರಿಂದ ಸೀತಾಪಹಾರರೂಪವಾದ ಅಧರ್ಮದಿಂದಲೇ ನಮ್ಮ ರಾಜನಿಗೆ ಈ ಕೆಟ್ಟ ಫಲವುಂಟಾಯಿತೆಂದೂ ಹೇಳಿದೆಯಷ್ಟೆ? ಆ ಧರ್ಮಾರ್ಥಕಾಮ ಗಳಿಗೆ ಬೇರೆಬೇರೆಯಾಗಿ ಆಯಾ ಫಲವೇ ನಿಯತವೆಂಬುದನ್ನು ನಿಸ್ಸಂದೇಹ ವಾಗಿ ತಿಳಿಯುವುದಕ್ಕೆ ನಿನಗೆ ಪ್ರಮಾಣವೇನಿರುವುದು? ಯಾವುದೂ ಇಲ್ಲ!

ಸ್ವರ್ಗನರಕರೂಪಗಳಾದ ಸಮಸ್ತ ಫಲಗಳಿಗೂ ಕರ್ಮಗಳೇ ಸಾಧನಗಳು.* ಆದರೆ ಈ ಕರ್ಮಸಮೂಹಗಳಲ್ಲಿ ಪುಣ್ಯಕರ್ಮಗಳಿಗೆ ಉತ್ತಮಫಲವೆಂದೂ, ಪಾಪಕರ್ಮಗಳಿಗೆ ಕೆಟ್ಟಫಲವೆಂದೂ, ವಿಭಾಗವೇನೂ ಕಾಣುವುದಿಲ್ಲ. ಅತ್ಯಂತ ಪಾಪಕರ್ಮಗಳಿಗೂ ಉತ್ತಮ ಫಲವೇ ಲಭಿಸಬಹುದು. ಧರ್ಮಾಧರ್ಮಗಳಾಗಲಿ, ಅರ್ಥಾನರ್ಥಗಳಾಗಲಿ, ಇವು ನಾಲ್ಕೂ ಶ್ರೇಯಸ್ಸನ್ನೇ ಕೊಡುವುವು. ಆದರೆ ಅವುಗಳಲ್ಲಿ ಅಧರ್ಮಕ್ಕೂ, ಅನರ್ಥಕ್ಕೂ, ಎಂದಾದರೂ ಒಮ್ಮೆ ಆಕಸ್ಮಿಕವಾಗಿ ಅಶ್ರೇಯಸ್ಸೂ ಫಲವಾಗಿ ಕಾಣಬಹುದು. ಆದರೇನು? ಇವೆರಡಕ್ಕೂ ಶುಭಾಶುಭಗಳೆಂಬ ಎರಡು ಬಗೆಯ ಫಲಗಳೂ ಉಂಟೇ ಹೊರತು, ಇವುಗಳಿಗೆ ಅಶ್ರೇಯಸ್ಸೇ ಫಲವೆಂದು ನಿರ್ಧರಿಸುವುದು ಮಾತ್ರ ಸರಿಯಲ್ಲ. ಧರ್ಮಾಧರ್ಮಗಳಿಗೆ ಫಲನಿಯಮವಿಲ್ಲವೆಂಬುದೂ ಹಾಗಿರಲಿ! ಪುರುಷರು ಇಹಪರ ಲೋಕಗಳೆರಡಕ್ಕೂ ಉಪಯೋಗಿಸುವ ವಿಹಿತಕರ್ಮಗಳನ್ನು ಎಷ್ಟೋ ವಿಧವಾಗಿ ನಡೆಸುತ್ತಲೇ ಇರುವರು. ಅವುಗಳಿಂದುಂಟಾಗತಕ್ಕ ಫಲಗಳನ್ನೂ ಅನುಭವಿಸುತ್ತಿರುವರು. ಈ ವಿಧಿವಿಹಿತಕರ್ಮಗಳನ್ನೂ ನಡೆಸದೆ, ತನ್ನ ಇಷ್ಟಾನುಸಾರವಾಗಿ ಕಾಮವಶನಾಗಿ ಕರ್ಮಗಳನ್ನಾಚರಿಸುವವನೂ ಕೂಡ, ಮಂಗಳಕರಗಳಾದ ಕರ್ಮಫಲಗಳನ್ನೇ ಹೊಂದುವನು. ಆದುದರಿಂದ ಶಾಸ್ತ್ರವಿಹಿತ ಕರ್ಮಗಳೇ ಶುಭಪ್ರದಗಳೆಂದೂ, ನಿಷಿದ್ಧಕರ್ಮಗಳು ಹಾಗಲ್ಲವೆಂದೂ ನಿಯಮವೇನೂ ಇಲ್ಲದುದರಿಂದ ಕಾಮಕ್ಕೂ ಫಲನಿಯತಿಯಿಲ್ಲವು. ಹೀಗೆ ಧರ್ಮಾದಿಗಳಿಗೆ ಫಲನಿಯಮವೇನೂ ಇಲ್ಲದೆ, ಎಲ್ಲಕ್ಕೂ ಎಲ್ಲವೂ

---

* ಇಲ್ಲಿನ ಅಭಿಪ್ರಾಯವೇನೆಂದರೆ:— ಸುಖಫಲಪ್ರದವಾದ ಯಾಗಾದಿಕರ್ಮವನ್ನನುಷ್ಠಿಸುವಾಗ, ಆಗಿನ ಶರೀರಾಯಾಸದಿಂದ ದುಷ್ಫಲವೇ ಮೊದಲು ಕಾಣುವುದು. ಆದುದರಿಂದ ಇಲ್ಲಿ ಸತ್ಕಾರ್ಯಕ್ಕೆ ದುಃಖವೇ ಫಲವಾಯಿತು. ಪರದ್ರವ್ಯಾಪಹರಣವೇ ಮೊದಲಾದ ಅಧರ್ಮಗಳನ್ನು ನಡೆಸಿದರೂ ಮೊದಲು ಅದರಿಂದ ಸುಖವನ್ನೇ ಅನುಭವಿಸಬಹುದು. ಆದುದರಿಂದ ಅಧರ್ಮಕ್ಕೆ ಪ್ರಥಮಫಲವು ಸುಖವಾಯಿತು. ಹೀಗೆಯೇ ಧರ್ಮ ಕಾಮಾರ್ಥಗಳೆಲ್ಲಕ್ಕೂ ಸಮಯೋಚಿತವಾಗಿ ಸುಖವೂ, ದುಃಖವೂ ಫಲವಾಗಬಹುದಾದುದರಿಂದ ಧರ್ಮಕ್ಕೆ ಉತ್ತಮಫಲವೆಂದೂ, ಅಧರ್ಮಕ್ಕೆ ಕೆಟ್ಟ ಫಲವೆಂದೂ ನಿರ್ಣಯಿಸುವುದಕ್ಕೆ ಪ್ರಮಾಣವೇನೂ ಇಲ್ಲವೆಂದು ಭಾವವು.

ಫಲವೆಂದು ಹೇಳುವ ಮತವನ್ನು ಹಿಡಿದೇ, ನಮ್ಮ ರಾಜನು ಈಗ ಕಾಮವನ್ನು ಸೇವಿಸಿದರೂ ಸುಖವನ್ನು ಹೊಂದಬಹುದೆಂಬ ಭಾವದಿಂದ, ಮನಸ್ಸಿನಲ್ಲಿ ಚೆನ್ನಾಗಿ ಆಲೋಚಿಸಿಯೇ ಸೀತಾಪಹಾರವೆಂಬ ಈ ಕಾರ್ಯವನ್ನು ನಡೆಸಿರುವನು. ನಾವೂ ಅದಕ್ಕೆ ಅನುಮತಿಸಿದೆವು. ಆದುದರಿಂದ ಇಲ್ಲಿ ನಾವು ಶತ್ರುವಿನ ವಿಷಯವಾಗಿ ಮುಂದಾಲೋಚನೆಯಿಲ್ಲದೆ ಸಾಹಸದಿಂದ ನಡೆಸಿದ ಕಾರ್ಯವೇನೆಂಬುದನ್ನು ತೋರಿಸು! ರಾವಣನು ದುರಾಲೋಚನೆಯಿಲ್ಲದೆ ಕಾರ್ಯವನ್ನು ನಡೆಸಿದನೆಂಬ ವಿಷಯವೂ ಹಾಗಿರಲಿ! ನೀನೊಬ್ಬನೇ ಅಸಹಾಯನಾಗಿ ಯುದ್ಧಕ್ಕೆ ಹೋಗುವೆನೆಂದು ನಿನ್ನ ಪರಾಕ್ರಮವನ್ನು ಹೇಳಿಕೊಂಡೆಯಲ್ಲವೆ? ಅದರಲ್ಲಿಯೂ ಎಷ್ಟೋ ಅಸಂಬದ್ಧಗಳುಂಟು. ಅದರಲ್ಲಿರುವ ದೋಷವನ್ನೂ ಹೇಳುವೆನು ಕೇಳು! ಯಾವನು ಪೂರ್ವದಲ್ಲಿ ಜನಸ್ಥಾನದಲ್ಲಿದ್ದ ಮಹಾಬಲಾಢ್ಯರಾದ ಅನೇಕ ರಾಕ್ಷಸರನ್ನು ತಾನೊಬ್ಬನೇ ನಿಂತು ಕೊಂದನೋ, ಅಂತಹ ರಾಮನನ್ನು ನೀನೊಬ್ಬನೇ ಹೇಗೆ ಜಯಿಸಬಲ್ಲೆ? ಆದುದರಿಂದ ನಿನ್ನ ಈ ಮಾತೂ ಅಯುಕ್ತವು. ಮೊದಲು ಜನಸ್ಥಾನದಲ್ಲಿ ಮಹಾತೇಜಸ್ವಿಗಳಾದ ಯಾವ ರಾಕ್ಷಸರು ರಾಮನಿಂದ ವಧಿಸಲ್ಪಟ್ಟರೋ, ಆ ಜಾತಿಯವರೆಲ್ಲರೂ ಈಗ ರಾಮನ ಹೆಸರನ್ನು ಕೇಳಿದಮಾತ್ರಕ್ಕೆ ನಡುಗುವರು. ನೀನೂ ಅದನ್ನು ಕಣ್ಣಾರೆ ನೋಡುತ್ತಿರುವೆ. ಆದುದರಿಂದ ನಿನ್ನ ಮಾತು ಹಿತವಾದುದಲ್ಲ. ದಶರಥಪುತ್ರನಾದ ಆ ರಾಮನು ಕೋಪಗೊಂಡ ಮಹಾಸಿಂಹವೆಂಬುದನ್ನು ತಿಳಿಯದೆ, ಮಲಗಿದ ಕಾಲಸರ್ಪವನ್ನು ಕಾಲಿನಿಂದ ಕೆಣಕಿ ಎಚ್ಚರಿಸುವಂತೆ ನೀನು ಅವನನ್ನು ರೇಗಿಸಬೇಕೆಂದಿರುವೆ! ಆ ರಾಮನಾದರೋ ಯಾವಾಗಲೂ ದಿವ್ಯತೇಜಸ್ಸಿನಿಂದ ಬೆಳಗುತ್ತಿರುವನು. ಅವನಿಗೆ ಕೋಪವುಂಟಾದಾಗ ಯಾರಿಂದಲೂ ಇದಿರಿಸುವುದು ಸಾಧ್ಯವಲ್ಲ. ಮೃತ್ಯುವಿನಂತೆ ಇತರರಿಂದ ಸಹಿಸಲಸಾಧ್ಯವಾದ ವೀರ್ಯವುಳ್ಳವನು. ಇಂತಹ ರಾಮನನ್ನಿದಿರಿಸಿ ಬದುಕುವವನಾವನು? ನಮಗೆ ಶತ್ರುವಾದ ಆ ರಾಮನಿಗಿದಿರಾಗಿ ನಿಲ್ಲುವ ವಿಷಯದಲ್ಲಿ, ನಮ್ಮ ರಾಕ್ಷಸಬಲವೆಲ್ಲವೂ ಪ್ರಾಣಸಂಶಯದಿಂದ ನಡುಗುತ್ತಿರುವುದು. ಹೀಗಿರುವಾಗ ನೀನೊಬ್ಬನೇ ಆತನ ಮುಂದೆ ನಿಂತು ಹೋರಾಡುವೆನೆಂಬುದು ನಮಗೆ ಎಷ್ಟುಮಾತ್ರವೂ ಸಮ್ಮತವಲ್ಲ. ತನ್ನ ಬಲವು ಕ್ರಮಕ್ರಮವಾಗಿ

ಕ್ಷೀಣಿಸುತ್ತಿರುವುದನ್ನೂ, ಶತ್ರುಬಲವು ಮೇಲೆ ಮೇಲೆ ವೃದ್ಧಿಹೊಂದು ತ್ತಿರುವುದನ್ನೂ ಕಂಡು ಕಂಡು, ಆ ಶತ್ರುವನ್ನಿದಿರಿಸಿದ ಪಕ್ಷದಲ್ಲಿ ಪ್ರಾಣ ಹಾನಿಯೆಂಬುದೇ ನಿಜವು. ಈ ನಿಶ್ಚಯವಿರುವಾಗಲೂ ಅಂತಹ ಶತ್ರು ವನ್ನು ಅಲ್ಪನೆಂದು ತಿಳಿದು ಲಕ್ಷ್ಯವಿಲ್ಲದೆ ಇದಿರಿಸಿ ನಿಲ್ಲುವುದಕ್ಕೆ ಇಷ್ಟ ಪಡುವವನಾವನು? ಕುಂಭಕರ್ಣಾ! ನಿನಗೂ ಈಗ ಪ್ರಾಣವನ್ನು ಬಿಡ ಬೇಕೆಂಬ ನಿಶ್ಚಯವೇ ಇದ್ದಪಕ್ಷದಲ್ಲಿ, ಆ ರಾಮನೊಡನೆ ಯುದ್ಧಕ್ಕೆ ನಿಲ್ಲ ಬಹುದು. ಆ ರಾಮನು ಮನುಷ್ಯನಾದರೂ ಮನುಷ್ಯರಲ್ಲಿ ಆತನಿಗೆ ಯಾವನೊಬ್ಬನೂ ಸಾಟಿಯಿಲ್ಲ. ದೇವತೆಗಳಲ್ಲಿ ಇಂದ್ರನಿಗೂ, ಸೂರ್ಯ ನಿಗೂ ಸಮವಾದ ತೇಜಸ್ಸುಳ್ಳ ಆ ರಾಮನೊಡನೆ ಯುದ್ಧಕ್ಕೆ ನಿಲ್ಲುವುದಾಗಿ ಹೇಳುವೆಯಲ್ಲಾ! ಈ ಮಾತನ್ನು ನೀನು ಬಾಯಿಂದಾಡುವುದೇ ಸರಿಯಲ್ಲ. ಹೀಗಿರುವಾಗ ಅವನೊಡನೆ ಯುದ್ಧವೆಂದರೇನು?" ಎಂದನು. ಆಮೇಲೆ ಆ ಮಹೋದರನು ರಾಕ್ಷಸಸಭಾಮಧ್ಯದಲ್ಲಿದ್ದ ರಾವಣನನ್ನು ನೋಡಿ, ಅಲ್ಲಿದ್ದವರೆಲ್ಲರೂ ಕೇಳುವಂತೆ "ಎಲೈ ರಾಕ್ಷಸೇಂದ್ರನೆ! ಸೀತೆಯೋನೋ ಈಗ ನಿನ್ನ ವಶದಲ್ಲಿರುವಳು! ಈಗ ಬೇರೆ ಬೇರೆ ಮಾತಗಳನ್ನಾಡುವುದರಿಂದ ಫಲವೇನು? ಇವುಗಳಿಂದೇನೂ ಫಲವಿಲ್ಲವು. ನೀನು ಯಾವಾಗ ಕೋರು ವೆಯೋ ಆಗ ಸೀತೆಯು ನಿನಗೆ ವಶವಾಗಿಯೇ ತೀರಬೇಕು. ಆ ಸೀತೆಯು ತಾನಾಗಿಯೇ ನಿನ್ನಲ್ಲಿ ಬರುವಹಾಗೆ ಮಾಡುವುದಕ್ಕೂ ನನಗೊಂದುಪಾ ಯವು ತೋರಿರುವುದು. ನಿನಗೂ ಅದು ಸಮ್ಮತವಾಗಿದ್ದ ಪಕ್ಷದಲ್ಲಿ, ನಿನ್ನ ಸ್ವಬುದ್ಧಿಯಿಂದ ಯೋಚಿಸಿ, ನನ್ನ ಮಾತಿನಂತೆ ನಡೆಸು. ಇತರರ ಬುದ್ಧಿಯನ್ನು ಮಾತ್ರವೇ ನಂಬಿ ನಿಲ್ಲಬೇಡ! ಉಪಾಯವೇನೆಂದು ಕೇಳು ವೆಯಾ? ಈಗ ನೀನು, ನನಗೂ, ದ್ವಿಜಿಹ್ವನಿಗೂ, ಸಂಹ್ರಾದಿಗೂ, ಈ ಕುಂಭಕರ್ಣನಿಗೂ, ವಿತರ್ದನನಿಗೂ, ಈ ಐದು ಮಂದಿಗೂ, ರಾಮನನ್ನು ಕೊಲ್ಲುವುದಕ್ಕಾಗಿ ಹೋಗಬೇಕೆಂದು ನಿಯಮಿಸು! ಅದರಂತೆ ನಾವು ಹೋಗಿ ಕಷ್ಟಪಟ್ಟು ರಾಮನೊಡನೆ ಯುದ್ಧಮಾಡುವೆವು. ಹಾಗೆ ನಾವು ಯುದ್ಧ ಮಾಡುವಾಗಲೇ ರಾಮಲಕ್ಷ್ಮಣರನ್ನು ಜಯಿಸಿದ ಪಕ್ಷದಲ್ಲಿ, ಆಗ ನಿನಗೆ ಬೇರೆ ಉಪಾಯಗಳಿಂದೇನೂ ಕೆಲಸವಿಲ್ಲ. ಒಂದುವೇಳೆ ನಾವು ಅಷ್ಟು ಶ್ರಮಪಟ್ಟು ಯುದ್ಧಮಾಡಿದರೂ ರಾಮನು ನಮಗೆ ದುರ್ಜಯನಾಗಿ

ಸಾಯದೆ ಬದುಕಿದ್ದ ಪಕ್ಷದಲ್ಲಿ, ಆಗ ನಾವು ಒಂದು ಉಪಾಯವನ್ನು ನಡೆಸಿಬಿಡುವೆವು. ನನಗೆ ತೋರಿರುವ ಆ ಉಪಾಯವೇನೆಂದು ಕೇಳುವೆಯಾ? ನಾವೇನೋ ನಮ್ಮಿಂದಾದ ಮಟ್ಟಿಗೆ ಹೋರಾಡುವೆವು. ಕೊನೆಗೂ ರಾಮನನ್ನು ಜಯಿಸುವುದು ಸಾಧ್ಯವಲ್ಲವೆಂದು ತೋರಿದರೆ, ನಮ್ಮ ದೇಹವೆಲ್ಲವೂ ರಾಮಬಾಣಗಳಿಂದ ಭೇದಿಸಿದಂತೆ ತೋರಿಸುವುದಕ್ಕಾಗಿ ಸರ್ವಾಂಗಗಳಲ್ಲಿಯೂ ರಕ್ತವು ಸುರಿಯುವಂತೆ, ರಾಮನಾಮಾಂಕಿತಗಳಾದ ಬಾಣಗಳನ್ನು ನಾವಾಗಿಯೇ ತೆಗೆದು ಅಂಗಾಂಗಗಳಿಗೂ ನಾಟಿಕೊಂಡು, ಯುದ್ಧರಂಗದಿಂದ ಹಿಂತಿರುಗಿ ಬರುವೆವು. ನಾವು ಈ ಕಪಟವೇಷದಿಂದ ಬಂದು, "ರಾಮಲಕ್ಷ್ಮಣರಿಬ್ಬರನ್ನೂ ನಾವು ಭಕ್ಷಿಸಿ ಬಂದೆವು" ಎಂದು ಎಲ್ಲರ ಕಿವಿಗೂ ಬೀಳುವಂತೆ ಹೇಳಿ, ನಿನ್ನ ಪಾದಗಳಿಗೆ ನಮಸ್ಕರಿಸುವೆವು. ಆಗ ನೀನೂ ನಮ್ಮ ಮಾತನ್ನು ನಿಜವೆಂದು ನಂಬಿದಹಾಗೆ ನಟಿಸಿ, ನಮಗೆ ಬೇಕುಬೇಕಾದ ಉಡುಗೊರೆಗಳನ್ನು ಕೊಟ್ಟು ನಮ್ಮನ್ನು ಸತ್ಕರಿಸು! ಮತ್ತು ನಮ್ಮನ್ನು ಆನೆಯ ಮೇಲೆ ಕುಳ್ಳಿರಿಸಿ, ಈ ಊರಿನ ಬೀದಿಬೀದಿಗಳಲ್ಲಿಯೂ ಅಟ್ಟಹಾಸದಿಂದ ಮೆರವಣಿಗೆ ಮಾಡಿಸುತ್ತ "ರಾಮಲಕ್ಷ್ಮಣರಿಬ್ಬರೂ ಸಮಸ್ತ ವಾನರ ಸೈನ್ಯಗಳೊಡನೆ ಹತರಾದರು" ಎಂದು ಡಂಗುರವನ್ನು ಹೊಡೆಯಿಸಿ ಪಟ್ಟಣದ ಸುತ್ತಲೂ ಸಾರಿಸು. ಇದಕ್ಕಾಗಿ ನೀನು ಬಹಳ ಸಂತೋಷಪಟ್ಟವನಂತೆ ನಟಿಸುತ್ತ ನಿನ್ನ ಭೃತ್ಯವರ್ಗಗಳೆಲ್ಲಕ್ಕೂ ಬೇಕುಬೇಕಾದ ಭೋಗ್ಯವಸ್ತುಗಳನ್ನೂ, ದಾಸದಾಸೀ ಪರಿವಾರಗಳನ್ನೂ, ಇನ್ನೂ ಅವರವರು ಕೋರಿದ ಕೋರಿಕೆಗಳನ್ನೂ, ದ್ರವ್ಯರಾಶಿಗಳನ್ನೂ ಕೊಟ್ಟು ಸಂಮಾನಿಸು. ಆ ಯುದ್ಧದಿಂದ ಹಿಂತಿರುಗಿ ಬಂದ ವೀರಭಟರೆಲ್ಲರಿಗೂ ವಿಶೇಷವಾಗಿ ವಸ್ತ್ರಾಭರಣಗಂಧಮಾಲ್ಯಾದಿಗಳನ್ನು ಕೊಟ್ಟು ಸತ್ಕರಿಸು. ಅವರವರಿಗೆ ಯಥೇಷ್ಟವಾಗಿ ಪಾನದ್ರವ್ಯಗಳನ್ನು ತರಿಸಿಕೊಡು! ನೀನೂ ಬೇಕಾದ ಹಾಗೆ ಸಂತೋಷದಿಂದ ಮದ್ಯವನ್ನು ಕುಡಿ! ಹೀಗೆ ಮಾಡಿದರೆ "ರಾಮನು ತನ್ನ ಪರಿವಾರಗಳೊಡನೆ ರಾಕ್ಷಸರಿಂದ ಭಕ್ಷಿಸಲ್ಪಟ್ಟ"ನೆಂಬ ಪ್ರವಾದವು ಈ ನಮ್ಮ ಪಟ್ಟಣದ ಎಲ್ಲಾ ಕಡೆಗಳಿಗೂ ವ್ಯಾಪಿಸುವುದು. ಸೀತೆಯ ಕಿವಿಗೂ ಈ ವೃತ್ತಾಂತವು ಮುಟ್ಟುವುದು. ಅವಳಿಗೆ ಈ ವೃತ್ತಾಂತಗಳೆಲ್ಲವೂ ಯಥಾರ್ಥವೆಂದು ಪೂರ್ಣವಾದ

ನಂಬಿಕೆಯೂ ಹುಟ್ಟುವುದು. ಹೀಗೆ ಅವಳು ಆಶಾಭಂಗವನ್ನು ಹೊಂದಿ ದುಃಖಿಸುತ್ತಿರುವ ಸಮಯಕ್ಕೆ ಸರಿಯಾಗಿ, ನೀನು ಅವಳ ಬಳಿಗೆ ಹೋಗಿ, ಮೊದಮೊದಲು ಸಾಂತ್ವವಾಕ್ಯಗಳಿಂದಲೇ ಅವಳಿಗೆ ರಾಮವಿಯೋಗದಿಂದುಂಟಾದ ದುಃಖವನ್ನು ಸಮಾಧಾನಪಡಿಸು. ಆಮೇಲೆ ನಿನ್ನನ್ನು ಸ್ವೀಕರಿಸುವಂತೆ ಏಕಾಂತವಾಗಿ ಅವಳನ್ನು ಪ್ರಾರ್ಥಿಸು. ಮತ್ತು ಅವಳಿಗೆ ಬೇಕಾದ ಕೋರಿಕೆಗಳನ್ನೂ, ಧನಧಾನ್ಯಗಳನ್ನೂ, ರತ್ನರಾಶಿಗಳನ್ನೂ ಕೊಟ್ಟು ಆಸೆ ಹುಟ್ಟಿಸು. ಈ ಕಪಟೋಪಾಯದಿಂದ ಸೀತೆಗೆ ಭಯವೂ, ದುಃಖವೂ ಹೆಚ್ಚುವುದು. ಆಕೆಯು ಮೊದಲು ನಿನ್ನನ್ನು ತಿರಸ್ಕರಿಸಿದ್ದರೂ ಈಗ ಅನಾಥೆಯಾದುದರಿಂದ, ತಪ್ಪದೆ ನಿನಗೆ ವಶಳಾಗುವಳು. ತನ್ನ ಮನಸ್ಸಿಗೆ ಪ್ರಿಯಪತಿಯು ಹತನಾದನೆಂಬ ಆಶಾಭಂಗವೊಂದು; ಸ್ತ್ರೀಯರಿಗೆ ಸಹಜವಾದ ಚಪಲಸ್ವಭಾವವೊಂದು; ಇವೆರಡರಿಂದಲೂ ಅವಳು ಬೇರೆ ಗತಿಯಿಲ್ಲದೆ ನಿನ್ನ ಕೈಸೇರುವಳು. ಇದಲ್ಲದೆ ಆಕೆಯು ಬಾಲ್ಯದಿಂದಲೂ ಸುಖದಲ್ಲಿಯೇ ಬೆಳೆದವಳು. ಮುಂದೆಯೂ ಸುಖದಿಂದಲೇ ಬಳೆಯಬೇಕಾದವಳು. ಆದುದರಿಂದ ಇನ್ನು ಮುಂದೆಯೂ ಹಾಗೆಯೇ ದುಃಖದಿಂದ ಕಂದಿರಲಾರದೆ, ನಿನ್ನಿಂದಲೇ ತನಗೆ ಸುಖವುಂಟಾಗಬೇಕೆಂದು ತಿಳಿದು, ಸರ್ವಪ್ರಕಾರದಿಂದಲೂ ನಿನ್ನನ್ನೇ ಆಶ್ರಯಿಸಿಬಿಡುವಳು. ಈ ಉಪಾಯವನ್ನು ನಾನೇ ನನ್ನ ಸ್ವಬುದ್ಧಿಯಿಂದ ಆಲೋಚಿಸಿ ನಿಶ್ಚಯಿಸಿರುವೆನು. ಇದನ್ನು ಬಿಟ್ಟು ನೀನು ರಾಮನ ಕಣ್ಣಿದಿರಿಗೆ ಬಿದ್ದರೆ ಮಾತ್ರ ಎಂದಿಗೂ ನಿನಗೆ ಅನರ್ಥವು ತಪ್ಪದು. ಈ ಉಪಾಯದಿಂದಲೇ ನಿನ್ನ ಕೋರಿಕೆಯು ಕೈಗೂಡಬೇಕೇ ಹೊರತು ಬೇರೆಯಿಲ್ಲ. ಆದುದರಿಂದ ಈಗ ನೀನು ಯುದ್ಧಕ್ಕೆ ಮಾತ್ರ ಆತುರಪಡಬೇಡ! ಪ್ರಕೃತದಲ್ಲಿ ಯುದ್ಧವನ್ನು ನಿಲ್ಲಿಸುವುದರಿಂದ ಹೆಚ್ಚು ಲಾಭವುಂಟು. ಮುಖ್ಯವಾಗಿ ರಾಜನಾದವನು ತನ್ನ ಮತ್ತು ಶತ್ರುಗಳ ಬಲಾಬಲವನ್ನು ತಾನು ತಿಳಿಯದಿದ್ದಾಗ, ತನಗೆ ಪ್ರಾಣಸಂದೇಹವು ಬಾರದಂತೆ ಸುಖದಿಂದಿರಬೇಕಾದರೆ, ಯುದ್ಧವಿಲ್ಲದೆಯೇ ಉಪಾಯದಿಂದ ಶತ್ರುಗಳನ್ನು ಜಯಿಸುವುದಕ್ಕೆ ಪ್ರಯತ್ನಿಸಬೇಕು. ಹಾಗೆ ನಡೆಸಿದರೆ ಮಾತ್ರವೇ ಅವನಿಗೆ ಚಿರ

ಸ್ಥಾಯಿಯಾದ ಕೀರ್ತಿಯೂ, ಪುಣ್ಯಫಲ ರೂಪವಾದ ಮಹಾಸುಖವೂ, ಸ್ಥಿರವಾದ ಮತ್ತು ವಿಸ್ತಾರವಾದ ಸಂಪತ್ತೂ ಲಭಿಸುವುದು" ಎಂದನು.

ಇಲ್ಲಿಗೆ ಅರುವತ್ತುನಾಲ್ಕನೆಯ ಸರ್ಗವು.

ಕುಂಭಕರ್ಣನು ಯುದ್ಧಕ್ಕೆ ಹೊರಟುದು.

ಮಹೋದರನ ಮಾತಿಗೆ ಕುಂಭಕರ್ಣನು ಕೋಪಗೊಂಡು, ಅತನನ್ನು ಹೆದರಿಸಿ ಮೇಲೆ ತನ್ನಣ್ಣನಾದ ಆ ರಾವಣನ ಕಡೆಗೆ ತಿರುಗಿ, ಅಣ್ಣಾ! ನನ್ನ ಪರಾಕ್ರಮವು ನಿನಗೆ ತಿಳಿದೇ ಇರುವುದಷ್ಟೆ? ಅಂತಹ ಅಪಾರ್ಯ ವೀರ್ಯವುಳ್ಳ ನಾನು ಈಗಲೇ ಯುದ್ಧಕ್ಕೆ ಹೊರಟು ದುರಾತ್ಮನಾದ ಆ ರಾಮನನ್ನು ಕೊಂದು ಅವನಿಂದ ಈಗ ನಿನಗುಂಟಾಗಿರುವ ಭಯವನ್ನು ನೀಗಿಸದೆ ಬಿಡೆನು. ಇನ್ನುಮೇಲೆ ನೀನು ವೈರವನ್ನು ಬಿಟ್ಟು ಸುಖವಾಗಿರ ಬಹುದು. ಶೂರರಾದವರು ನೀರಿಲ್ಲದ ಮೇಘಗಳಂತೆ ವ್ಯರ್ಥವಾಗಿ ಗರ್ಜಿಸ ಲಾರರು. ನಾನು ಮುಂದಿನ ಯುದ್ಧದಲ್ಲಿ ಈ ನನ್ನ ಗರ್ಜನಕ್ಕೆ ತಕ್ಕಂತೆ ನಡೆಸುವ ವೀರಕಾರ್ಯವನ್ನಾದರೂ ನೋಡು! ಲೋಕದಲ್ಲಿ ಶೂರರಾದವರು ಇತರರಿಂದುಂಟಾದ ಅವಮಾನವನ್ನು ಸಹಿಸಿಕೊಂಡು ಸುಮ್ಮನಿರಲಾರರು. ತಾವಾಗಿಯೇ ತಮ್ಮ ಪೌರುಷವನ್ನೂ ಹೊಗಳಿಕೊಳ್ಳಲಾರರು. ತಮ್ಮ ಪೌರುಷವನ್ನು ಬಾಯಿಂದಾಡಿಕೊಳ್ಳದೆಯೇ ದುಷ್ಕರ ಕಾರ್ಯವನ್ನು ಮಾಡಿ ತೋರಿಸುವರು. ಎಲೆ ಮಹೋದರಾ! ಕೇವಲ ಭಯಶೀಲರಾ ಗಿಯೂ, ಬುದ್ಧಿಹೀನರಾಗಿಯೂ, ತಮಗೆ ತಾವೇ ಪಂಡಿತರೆಂಬ ಅಹಂಭಾವ ವುಳ್ಳವರಾಗಿಯೂ, ಇರುವ ನಿಮ್ಮಂತವರ ಮಾತನ್ನು ಕೇಳಿದುದರಿಂದಲೇ ನಮ್ಮ ರಾಜನಿಗೆ ಈ ಮಹಾವಿಪತ್ತು ಬಂದೊದಗಿತು. ಯುದ್ಧವೆಂದರೆ ನಡುಗುತ್ತ, ಯಾವಾಗಲೂ ರಾಜನ ಮನಸ್ಸನ್ನನುವರ್ತಿಸಿ, ಯುಕ್ತಾ ಯುಕ್ತವನ್ನರಿಯದೆ ಅವನಿಗೆ ಪ್ರಿಯವಾಕ್ಯಗಳನ್ನೇ ನುಡಿದು ಮುಖಸ್ತುತಿ ಮಾಡುತ್ತಿರುವ ನಿಮ್ಮ ದೆಸೆಯಿಂದಲೇ ಇಷ್ಟೊಂದು ಮಹಾನರ್ಥವು ಸಂಭವಿಸಿತು. ಮೇಲೆ ಮಾತ್ರ ನೀವು ರಾಜನನ್ನು ಮಿತ್ರಭಾವದಿಂದ ನೋಡುತ್ತಿದ್ದರೂ, ವಾಸ್ತವಕ್ಕೆ ಶತ್ರುತ್ವವನ್ನೇ ತೋರಿಸುತ್ತ, ಅವನು

ಹೋದ ದಾರಿಯನ್ನೇ ಹಿಡಿದು ಹೋಗುತ್ತಿದ್ದುದರಿಂದಲ್ಲವೇ ಈ ನಮ್ಮ ಲಂಕೆಯಲ್ಲಿ ವೀರರೆಲ್ಲರೂ ಹತರಾಗಿ ರಾಜನೊಬ್ಬನೇ ಉಳಿಯುವಂತಾಯಿತು? ನಮ್ಮ ಬೊಕ್ಕಸದ ಹಣವೆಲ್ಲವೂ ಕರಗಿತು! ಸೈನ್ಯವೆಲ್ಲವೂ ಹತವಾಯಿತು! ನಿಮ್ಮ ದುರ್ನಯದಿಂದಲೇ ಇಷ್ಟೊಂದು ಮಹಾನರ್ಥವು ಪ್ರಾಪ್ತವಾಯಿತು. ಆದರೇನು? ಈಗಲೂ ಚಿಂತೆಯಿಲ್ಲ. ಇದೋ! ಈಗಲೇ ನಾನು ಶತ್ರುಜಯೋದ್ಯೋಗದಿಂದ ಯುದ್ಧಕ್ಕೆ ಹೊರಡುವೆನು. ನಿಮ್ಮ ದುರ್ನಯದಿಂದಾದ ತಪ್ಪನ್ನು ಆ ಯುದ್ಧರಂಗದಲ್ಲಿಯೇ ತಿದ್ದಿ ಸರಿಮಾಡಿ ಬರುವೆನು" ಎಂದನು. ಧೀಮಂತನಾದ ಕುಂಭಕರ್ಣನು ಹೇಳಿದ ಮಾತನ್ನು ಕೇಳಿ ರಾಕ್ಷಸರಾಜನಾದ ರಾವಣನು ಸಂತೋಷದಿಂದುಬ್ಬಿ ನಗುತ್ತ, ಕುಂಭಕರ್ಣನನ್ನು ನೋಡಿ "ವತ್ಸ ಕುಂಭಕರ್ಣಾ! ಭಲೆ! ಚೆನ್ನಾಗಿ ಹೇಳಿದೆ. ಈ ಮಹೋದರನು ರಾಮನಿಗಾಗಿ ಹೆದರಿ ನಡುಗುತ್ತಿರುವುದೇನೊ ನಿಜವು. ಇದರಲ್ಲಿ ಸಂದೇಹವಿಲ್ಲ. ಈ ಕಾರಣದಿಂದಲೇ ಇವನಿಗೆ ಯುದ್ಧ ಮಾಡುವುದು ಸಮ್ಮತವಲ್ಲ. ನೀನಾದರೋ ಯುದ್ಧಕಾರ್ಯದಲ್ಲಿ ಮಹಾನಿಪುಣನು. ಎಲೆ ವತ್ಸನೆ! ಇಲ್ಲಿ ನನಗೆ ನಿನ್ನಂತೆ ಸುಹೃತ್ತಾಗಲಿ ಶೂರನಾಗಲಿ ಬೇರೊಬ್ಬನಿಲ್ಲ. ಇನ್ನು ನೀನು ಶತ್ರುವಧಕ್ಕಾಗಿ ಹೊರಟು, ಪೂರ್ಣವಾದ ಜಯವನ್ನು ಹೊಂದಿ ಬಾ! ನೀನು ಎಣೆಯಿಲ್ಲದ ಪರಾಕ್ರಮವುಳ್ಳವನಾದುದುದರಿಂದಲೇ, ಈ ಮಹಾಭಯವನ್ನು ತಪ್ಪಿಸುವುದಕ್ಕಾಗಿ ನಿನ್ನನ್ನು ನಾನು ನಿದ್ರೆಯಿಂದೆಬ್ಬಿಸಿ ಕರೆಸಬೇಕಾಯಿತು. ನನ್ನಲ್ಲಿ ನಿಜವಾದ ಪ್ರೇಮವುಳ್ಳ ರಾಕ್ಷಸ ಕುಲದವರು ನನಗೆ ಸಹಾಯ ಮಾಡುವುದಕ್ಕೆ ಇದೇ ತಕ್ಕ ಸಮಯವು ಇನ್ನು ನೀನು ಪಾಶಹಸ್ತನಾದ ಯಮನಂತೆ ಶೂಲವನ್ನು ಹಿಡಿದು ರಣರಂಗಕ್ಕೆ ಹೊರಡು! ಅಲ್ಲಿನ ವಾನರರನ್ನೂ ಸೂರ್ಯತೇಜಸ್ಸಿನಿಂದ ಬೆಳಗುತ್ತಿರುವ ರಾಜಕುಮಾರರನ್ನೂ ಒಂದೇ ತುತ್ತಾಗಿ ಭಕ್ಷಿಸಿ ಬಂದುಬಿಡು! ಈ ನಿನ್ನ ಘೋರಸ್ವರೂಪವನ್ನು ನೋಡಿದ ಮಾತ್ರದಲ್ಲಿಯೇ ವಾನರರೆಲ್ಲರೂ ಭಯಪಟ್ಟು ಪಲಾಯನಮಾಡುವರು. ನಿನ್ನನ್ನು ನೋಡಿದ ಮಾತ್ರದಲ್ಲಿ ಆ ರಾಮಲಕ್ಷ್ಮಣರಿಗೂ ಎದೆಯೊಡೆಯುವುದು" ಎಂದನು. ರಾಕ್ಷಸರಾಜನಾದ ರಾವಣನು ಕುಂಭಕರ್ಣನನ್ನು ಕರೆದು ಹೀಗೆಂದು ಹೇಳಿ, ಅವನ ಜಯದಲ್ಲಿ ಪೂರ್ಣವಾದ ನಂಬಿಕೆ

ಯನ್ನಿಟ್ಟು, ಆಗಲೇ ತಾನು ಶತ್ರುಹುಟ್ಟದವನಂತೆ ಭಾವಿಸಿ ಸಂತೋಷ ದಿಂದಿದ್ದನು. ರಾವಣನು ಕುಂಭಕರ್ಣನ ಬಲವನ್ನು ಆಗಾಗ ನೋಡಿ ತಿಳಿದವನಾದುದರಿಂದ, ಅವನ ಪರಾಕ್ರಮವನ್ನೇ ಮನಸ್ಸಿನಲ್ಲಿ ಗುಣಿಸುತ್ತ, ನಿಷ್ಕಳಂಕನಾದ ಚಂದ್ರನಂತೆ ಚಿಂತಾರಹಿತನಾಗಿ, ಸಂತೋಷದಿಂದ ಪ್ರಸನ್ನ ಮನಸ್ಕನಾದನು. ಕುಂಭಕರ್ಣನೂ ರಾವಣನು ಹೇಳಿದ ಈ ಸ್ತುತಿ ವಾಕ್ಯವನ್ನು ಕೇಳಿ ಸಂತೋಷದಿಂದುಬ್ಬುತ್ತ, ಆಗಲೇ ಯುದ್ಧೋದ್ಯುಕ್ತನಾಗಿ ಅಲ್ಲಿಂದ ಹೊರಟನು. ಶತ್ರುಗಳನ್ನು ಭೇದಿಸತಕ್ಕುದಾಗಿಯೂ, ಆಮೂಲಾ ಗ್ರವಾಗಿ ಉಕ್ಕಿನಿಂದಲೇ ನಿರ್ಮಿಸಲ್ಪಟ್ಟುದಾಗಿಯೂ, ನಡುನಡುವೆ ಚಿನ್ನದ ಕಟ್ಟುಗಳಿಂದಲಂಕೃತವಾಗಿಯೂ, ಅಗ್ನಿಯಂತೆ ದೇದೀಪ್ಯಮಾನವಾಗಿಯೂ, ದೇವೇಂದ್ರನ ವಜ್ರಕ್ಕೆ ಸಮಾನವಾಗಿಯೂ, ಮಹಾ ಭಯಂಕರವಾಗಿಯೂ ಇದ್ದ ತನ್ನ ತೀಕ್ಷ್ಣವಾದ ಶೂಲವನ್ನು ಕೈಗೆತ್ತಿಕೊಂಡನು. ಆ ಶೂಲ ವಾದರೋ ಇದುವರೆಗೆ ಎಷ್ಟೋ ದೇವದಾನವ ಯಕ್ಷಕಿನ್ನರ ಗಂಧರ್ವರನ್ನು ಕೊಂದಿಕ್ಕಿರುವುದು. ಕೆಂಪಾದ ಪುಷ್ಪಮಾಲಿಕೆಗಳಿಂದಲಂಕೃತವಾಗಿರುವುದು. ಮಹತ್ತಾದ ತೇಜಸ್ಸಿನಿಂದ ಹೊಳೆಯುತ್ತಿರುವುದು. ಇದ್ದಹಾಗೆ ಅಗ್ನಿ ಜ್ವಾಲೆಯನ್ನು ಕಕ್ಕುತ್ತಿರುವುದು. ಅನೇಕ ಶತ್ರುಗಳ ರಕ್ತದ ಗುರುತು ಗಳಿಂದ ಶೋಭಿಸುತ್ತಿರುವುದು. ಇಂತಹ ತೀಕ್ಷ್ಣವಾದ ಶೂಲವನ್ನು ಕೈ ಗೆತ್ತಿಕೊಂಡೊಡನೆ, ಮಹಾತೇಜಸ್ವಿಯಾದ ಕುಂಭಕರ್ಣನು ರಾವಣನನ್ನು ಕುರಿತು, "ಅಣ್ಣಾ! ಈಗಿನ ಯುದ್ಧಕ್ಕೆ ನಾನೊಬ್ಬನೇ ಹೋಗುವೆನು. ನನ್ನ ಸೈನ್ಯವೆಲ್ಲವೂ ಇಲ್ಲಿಯೇ ಇರಲಿ! ನನ್ನನ್ನು ನೋಡಿದೊಡನೆ ಬೆದರಿ ಓಡುತ್ತಿರುವ ಸಮಸ್ತ ವಾನರರನ್ನೂ ಒಂದೇ ತುತ್ತಾಗಿ ಭಕ್ಷಿಸಿ ಬರುವೆನು ನೋಡು" ಎಂದನು. ಇದನ್ನು ಕೇಳಿ ರಾವಣನು "ವತ್ಸ ಕುಂಭಕರ್ಣಾ! ಹೇಗಿದ್ದರೂ ನೀನು ಏಕಾಕಿಯಾಗಿ ಯುದ್ಧಕ್ಕೆ ಹೋಗಬಾರದು. ಶೂಲ ಮುದ್ಗರಾದ್ಯಾಯುಧಗಳೊಡನೆ ನಿನ್ನ ಸೈನಿಕರನ್ನೂ ಸಿದ್ಧಪಡಿಸಿ ಕರೆದು ಕೊಂಡು ಹೋಗು! ಆ ವಾನರರು ಸಾಮಾನ್ಯರಲ್ಲ. ಬಹಳ ಬುದ್ಧಿಶಾಲಿ ಗಳು. ಬಹಳ ವೇಗವುಳ್ಳವರು. ಬಹಳ ಪ್ರಯತ್ನಪರರು. ಏಕಾಕಿಯಾಗಿ ಬಂದವನನ್ನೂ, ವೈಮರೆತವನನ್ನೂ ಹಲ್ಲುಗಳಿಂದಲೇ ಕಡಿದು ಕೊಲ್ಲುವರು. ಆದುದರಿಂದ ನೀನು ಈಗ ಶತ್ರುದುರ್ಜಯರಾದ ಕೆಲವು ಸೈನಿಕರನ್ನು

ಸೇರಿಸಿಕೊಂಡೇ ಹೋಗಿ, ನಮಗೆ ಶತ್ರುಗಳಾದ ಆ ಸಮಸ್ತ ವಾನರಸೈನ್ಯ ಗಳನ್ನೂ ಕೊಂದು ಬಾ!" ಎಂದನು. ಈ ಮಾತನ್ನು ಹೇಳಿ ಮುಗಿಸು ವಷ್ಟರಲ್ಲಿಯೇ ರಾವಣನು ತನ್ನ ಸಿಂಹಾಸನದಿಂದ ತಟ್ಟನೆ ಮೇಲೆದ್ದು, ನಡುನಡುವೆ ರತ್ನಗಳಿಂದ ಕೆತ್ತಲ್ಪಟ್ಟ ಒಂದು ಸುವರ್ಣಮಾಲಿಕೆಯನ್ನು ತರಿಸಿ ಕುಂಭಕರ್ಣನ ಕೊರಳಿಗೆ ಹಾಕಿದನು. ಮತ್ತು ಉತ್ತಮವಾದ ತೋಳ್ಬಳೆಗಳನ್ನೂ, ಉಂಗುರಗಳನ್ನೂ, ಇನ್ನೂ ಬಗೆಬಗೆಯ ಉತ್ತಮಾ ಭರಣಗಳನ್ನೂ, ಚಂದ್ರನಂತೆ ಥಳಥಳಿಸುತ್ತಿದ್ದ ಮುತ್ತಿನ ಸರವನ್ನೂ ತಂದು ತೊಡಿಸಿದನು. ಕಾಂತಿವಿಶಿಷ್ಟಗಳಾದ ಎರಡು ಕುಂಡಲಗಳನ್ನು ತಂದು ತನ್ನ ಕೈಯಿಂದಲೇ ಅವನನ್ನಲಂಕರಿಸಿದನು. ದೊಡ್ಡ ಕಿವಿಯುಳ್ಳ ಆ ಕುಂಭಕರ್ಣನು, ಹೀಗೆ ಚಿನ್ನದ ತೋಳ್ಬಳೆಗಳಿಂದಲೂ, ಕೇಯೂರ ಗಳಿಂದಲೂ, ಉತ್ತಮವಾದ ನಾಯಕರತ್ನದಿಂದಲೂ, ಇತರಾಭರಣಗಳಿಂ ದಲೂ ಅಲಂಕೃತನಾಗಿ, ಆ ಆಭರಣಗಳ ಕಾಂತಿಯಿಂದ ಚೆನ್ನಾಗಿ ಹುತ ಮಾಡಲ್ಪಟ್ಟ ಬೆಂಕಿಯಂತೆ ಜ್ವಲಿಸುತ್ತಿದ್ದನು. ನೀಲರತ್ನಗಳಿಂದ ಕೆತ್ತಲ್ಪಟ್ಟ ಉಡೆದಾರವನ್ನು ಕಟ್ಟಿದ ಅವನ ದೊಡ್ಡ ದೇಹವು, ಅಮೃತಮಥನ ಕಾಲದಲ್ಲಿ ವಾಸುಕಿಯಿಂದ ಸುತ್ತಲ್ಪಟ್ಟ ಮಂದರ ಪರ್ವತದಂತೆ ಕಾಣು ತ್ತಿತ್ತು. ಮತ್ತು ಸುವರ್ಣಮಯವಾಗಿ ಎಷ್ಟು ಭಾರವನ್ನಾದರೂ ತಡೆಯ ಬಲ್ಲುದಾಗಿ, ಅಭೇದ್ಯವಾಗಿ, ಮಿಂಚಿನಂತೆ ಕಾಂತಿಯುಳ್ಳುದಾಗಿ, ಆ ಕಾಂತಿಯಿಂದ ಜ್ವಲಿಸುವಂತೆ ತೋರುವ ದೊಡ್ಡ ಸುವರ್ಣಕವಚದಿಂದ ಮುಚ್ಚಲ್ಪಟ್ಟ ಆತನ ದೇಹವು, ಸಂಧ್ಯಾಕಾಲದ ಮೇಘಗಳಿಂದ ಕವಿದ ದೊಡ್ಡ ಬೆಟ್ಟದಂತೆ ಕಾಣುತ್ತಿತ್ತು. ಹೀಗೆ ಸರ್ವಾಂಗಗಳಲ್ಲಿಯೂ, ಸಮಸ್ತಾ ಭರಣಗಳನ್ನೂ ತೊಟ್ಟು, ಶೂಲವನ್ನು ಕೈಯಲ್ಲಿ ಹಿಡಿದಿದ್ದ ಆ ಕುಂಭ ಕರ್ಣನ ರೂಪವು, ಪೂರ್ವದಲ್ಲಿ ಮೂರಡಿಗಳಿಂದ ನೆಲವನ್ನಳೆಯುವುದಕ್ಕಾಗಿ ಮೇಲೆ ಮೇಲೆ ಉಬ್ಬಿ ಬೆಳೆಯುತ್ತಿದ್ದ ತ್ರಿವಿಕ್ರಮಮೂರ್ತಿಯಾದ ನಾರಾ ಯಣನ ರೀತಿಯನ್ನು ಹೋಲುತ್ತಿತ್ತು. ಹೀಗೆ ಕುಂಭಕರ್ಣನು ಸಿದ್ಧನಾಗಿ, ರಾವಣನನ್ನು ಪ್ರೀತಿಯಿಂದಾಲಿಂಗಿಸಿ, ಅವನಿಗೆ ಪ್ರದಕ್ಷಿಣವನ್ನು ಮಾಡಿ ತಲೆಬಗ್ಗಿ ನಮಸ್ಕರಿಸಿ ಯುದ್ಧಕ್ಕಾಗಿ ಹೊರಟನು. ಮಹಾಕಾಯವುಳ್ಳವ ನಾಗಿಯೂ, ಮಹಾಧ್ವನಿಯುಳ್ಳವನಾಗಿಯೂ, ಮಹಾಬಲವುಳ್ಳವನಾ

ಗಿಯೂ ಇದ್ದ ಆ ಕುಂಭಕರ್ಣನು ಯುದ್ಧಕ್ಕೆ ಹೊರಡುವಾಗ, ರಾವಣನು ಆತನಿಗೆ ಮೇಲಾದ ಆಶೀರ್ವಾದಗಳನ್ನು ಮಾಡಿದನು. ಈ ಕುಂಭಕರ್ಣನು ಜಯಪ್ರಯಾಣಕ್ಕಾಗಿ ಹೊರಡುವುದಕ್ಕೆ ಸಿದ್ಧನಾದ ಕೂಡಲೆ, ಅಲ್ಲಲ್ಲಿ ಅನೇಕ ರಾಕ್ಷಸಸೈನಿಕರು ಉತ್ತಮಾಯುಧಗಳನ್ನು ಹಿಡಿದು ಹೊರಟರು. ಶಂಖಭೇರಿಧ್ವನಿಗಳೂ ಆರಂಭಿಸಲ್ಪಟ್ಟುವು. ಆನೆಗಳೂ, ಕುದುರೆಗಳೂ, ಮೇಘದಂತೆ ಗಂಭೀರಧ್ವನಿಯುಳ್ಳ ರಥಗಳೂ, ಹಿಂಬಾಲಿಸಿ ಹೊರಟವು. ಅನೇಕ ರಾಕ್ಷಸರು ಸರ್ಪಗಳನ್ನೂ, ಒಂಟೆಗಳನ್ನೂ, ಕತ್ತೆಗಳನ್ನೂ, ಕುದುರೆಗಳನ್ನೂ, ಸಿಂಹಗಳನ್ನೂ, ಆನೆಗಳನ್ನೂ, ಇತರ ಮೃಗಪಕ್ಷಿಗಳನ್ನೂ ತಮ್ಮ ತಮ್ಮ ಬಳಕೆಗೆ ತಕ್ಕಂತೆ ವಾಹನಗಳನ್ನಾಗಿ ಮಾಡಿಕೊಂಡು ಕುಂಭಕರ್ಣನ ಹಿಂದೆ ಹೊರಟರು. ಆ ಲಂಕಾನಗರದ ಬೀದಿಬೀದಿಗಳಲ್ಲಿಯೂ, ಅಲ್ಲಿನ ಪುರವಾಸಿಗಳು ಇವನ ಮೇಲೆ ಪುಷ್ಪವರ್ಷವನ್ನು ಕರೆಯುತ್ತಿದ್ದರು. ಹೀಗೆ ಕುಂಭಕರ್ಣನು ವಿವಿಧೋಪಚಾರಗಳಿಂದ ಸತ್ಕರಿಸಲ್ಪಟ್ಟು, ತಲೆಯ ಮೇಲೆ ಶೋಭಿಸುವ ಉತ್ತಮವಾದ ಶ್ವೇತಛತ್ರದೊಡನೆ ಕೈಯಲ್ಲಿ ತೀಕ್ಷ್ಣವಾದ ಶೂಲವನ್ನು ಹಿಡಿದು ಬರುತ್ತಿದ್ದನು. ಸ್ವಭಾವದಿಂದಲೇ ಮತ್ತನಾದ ಕುಂಭಕರ್ಣನು ನಿದ್ರೆಯಿಂದೆದ್ದೊಡನೆ ಕುಡಿದು ಬಂದ ರಕ್ತದ ವಾಸನೆಯು ಅವನಿಗೆ ಮತ್ತಷ್ಟು ಮದವನ್ನು ಹೆಚ್ಚಿಸುತ್ತಿತ್ತು. ಹೀಗೆ ಮದೋನ್ಮತ್ತನಾದ ಕುಂಭಕರ್ಣನು ರಣರಂಗವನ್ನು ಕುರಿತು ಹೊರಡುವಾಗ, ಮಹಾಬಲಾಢ್ಯರಾಗಿಯೂ, ಮಹಾಧ್ವನಿಯುಳ್ಳವರಾಗಿಯೂ ಇದ್ದ ಅನೇಕ ಘೋರರಾಕ್ಷಸ ಪದಾತಿಗಳು ಅವನನ್ನು ಹಿಂಬಾಲಿಸಿ ಬರುತ್ತಿದ್ದರು. ಅವರಲ್ಲಿಯೋ ಒಬ್ಬೊಬ್ಬರೂ ಭಯಂಕರವಾದ ಕಣ್ಣುಳ್ಳವರು! ಒಬ್ಬೊಬ್ಬರೂ ಶಸ್ತ್ರಧಾರಿಗಳು! ಒಬ್ಬೊಬ್ಬರೂ ಕಾಡಿಗೆಯ ರಾಶಿಯಂತೆ ಕಪ್ಪು ಬಣ್ಣವುಳ್ಳವರು! ಇಂತಹ ರಾಕ್ಷಸರಲ್ಲಿ ಕೆಲವರು ಶೂಲಗಳನ್ನೂ, ಕೆಲವರು ಕತ್ತಿಗಳನ್ನೂ, ಕೆಲವರು ತೀಕ್ಷ್ಣಗಳಾದ ಗಂಡುಗೊಡಲಿಗಳನ್ನೂ, ಕೆಲವರು ನಾಲ್ಕಾರುಮಾರುದ್ದವುಳ್ಳ ಪರಿಘಗಳನ್ನೂ, ಕೆಲವರು ಗದೆಗಳನ್ನೂ, ಕೆಲವರು ಕಬ್ಬಿಣದೊನಕೆಗಳನ್ನೂ, ಕೆಲವರು ದೊಡ್ಡ ದೊಡ್ಡ ತಾಳೆಯ ತೊಲೆಗಳನ್ನೂ, ಇನ್ನೂ ಕೆಲವರು ಅಸಾಧ್ಯವೇಗವುಳ್ಳ ಇತರಾಯುಧಗಳನ್ನೂ ಹಿಡಿದು ಬರುತ್ತಿದ್ದರು. ಇಷ್ಟರಲ್ಲಿ ಮಹಾತೇಜಸ್ವಿಯಾ

ಗಿಯೂ, ಬಲಾಢ್ಯನಾಗಿಯೂ ಇರುವ ಕುಂಭಕರ್ಣನು ತನ್ನ ಮೊದಲಿನ ಸ್ವರೂಪಕ್ಕಿಂತಲೂ ಹೆಚ್ಚು ಭಯಂಕರವಾದ ಬೇರೊಂದು ರೂಪವನ್ನು ಧರಿಸಿ ವೇಗದಿಂದ ಮುಂದೆ ಬಂದನು. ಆಗ ಆ ಕುಂಭಕರ್ಣನು ಕೈಕೊಂಡ ಹೊಸ ರೂಪವು ನೂರುಬಿಲ್ಲಿನ ಪ್ರಮಾಣದಷ್ಟು ವಿಸ್ತಾರವಾಗಿಯೂ, ಆರುನೂರುಬಿಲ್ಲುಗಳ ಪ್ರಮಾಣದಷ್ಟು ಉನ್ನತವಾಗಿಯೂ ಬೆಳೆದು, ಬಂಡಿಯ ಚಕ್ರದಂತೆ ಅಗಲವಾದ ಕಣ್ಣುಗಳುಳ್ಳದಾಗಿ ಒಂದು ದೊಡ್ಡ ಬೆಟ್ಟಕ್ಕೆ ಸಮಾನವಾಗಿ ಅತಿ ಭಯಂಕರವಾಯಿತು. ಕಾಡುಗಿಚ್ಚಿನಿಂದ ಬೆಂದ ಬೆಟ್ಟದಂತೆ ಕಪ್ಪಾದ ದೊಡ್ಡ ದೇಹವುಳ್ಳ ಆ ಕುಂಭಕರ್ಣನು, ತನ್ನ ಹಿಂದೆ ಬರುತ್ತಿದ್ದ ರಾಕ್ಷಸರನ್ನು ಸುತ್ತಲೂ ಕಣ್ಣಿಟ್ಟು ನೋಡಿ, ದೊಡ್ಡದಾಗಿ ಬಾಯನ್ನು ತೆರೆದು ಪಕಪಕನೆ ನಕ್ಕು ಅವರನ್ನು ಕುರಿತು "ಎಲೆ ಸೈನಿಕರೆ! ಅಗ್ನಿಯು ಶಲಭಗಳನ್ನು ದಹಿಸುವಂತೆ, ಇದೋ ಈಗಲೇ ನಾನು ರಣರಂಗದಲ್ಲಿರುವ ಸಮಸ್ತ ವಾನರರನ್ನೂ ಗುಂಪುಗುಂಪಾಗಿ ಸೇರಿಸಿ ಸುಟ್ಟುಬರುವೆನು. ಆದರೆ ಕಾಡಿನಲ್ಲಿ ಬದುಕುತ್ತಿರುವ ಆ ವಾನರರು ನನಗೆ ಯಾವ ವಿಧದಲ್ಲಿಯೂ ಅಪರಾಧವನ್ನು ಮಾಡಿದವರಲ್ಲ. ಇದರಮೇಲೆ ಆ ವಾನರಜಾತಿಯೆಂಬುದು ನಮ್ಮಂತಹ ಕ್ರೀಡಾಪರರಿಗೆ ಪುರೋದ್ಯಾನದ ಭೂಷಣವಾಗಿರುವುದು. ಆದುದರಿಂದ ಮೊದಲೇ ಆ ವಾನರರನ್ನು ಕೊಲ್ಲುವುದರಿಂದ ಲಾಭವಿಲ್ಲ. ಮುಖ್ಯವಾಗಿ ಈಗ ನಮ್ಮ ಪಟ್ಟಣವನ್ನು ಮುತ್ತುವುದಕ್ಕೆ ಆ ರಾಮಲಕ್ಷ್ಮಣರಿಬ್ಬರೇ ಮೂಲಕಾರಣವು. ಮೊದಲು ಲಕ್ಷ್ಮಣಸಹಿತನಾದ ಆ ರಾಮನನ್ನು ಕೊಂದರೆ, ಸಮಸ್ತ ಸೈನ್ಯವನ್ನೂ ಕೊಂದಂತೆಯೇ ಆಗುವುದು. ಆದುದರಿಂದ ಈಗಿನ ಯುದ್ಧದಲ್ಲಿ ನಾನು ಮೊದಲು ಆ ರಾಮನನ್ನೇ ಇದಿರಿಸಿ ಕೊಲ್ಲುವೆನು" ಎಂದನು. ಈ ವೀರವಾದವನ್ನು ಕೇಳಿದೊಡನೆ ಅಲ್ಲಿದ್ದ ಸಮಸ್ತ ರಾಕ್ಷಸರೂ ಸಂತೋಷದಿಂದ ಕೇಕೆಹಾಕಿ, ಸಮುದ್ರವನ್ನೇ ನಡುಗಿಸುವಂತೆ ಭಯಂಕರವಾದ ಸಿಂಹನಾದವನ್ನು ಮಾಡಿದರು. ಧೀಮಂತನಾದ ಕುಂಭಕರ್ಣನು ಇಷ್ಟೊಂದು ಮಹೋತ್ಸಾಹದೊಡನೆ, ವೇಗದಿಂದ ಮುಂದೆ ನಡೆದುಬರುವಷ್ಟರಲ್ಲಿ, ಅವನ ಸುತ್ತಲೂ ಭಯಂಕರವಾದ ದುರ್ನಿಮಿತ್ತಗಳು ಕಂಡುಬಂದುವು. ಆಕಾಶದಲ್ಲಿ, ಮೇಘಗಳು ಉಲ್ಕೆಗಳಿಂದಲೂ, ಕೊಳ್ಳಿಗಳಿಂದಲೂ ತುಂಬಿ,

ಕತ್ತಿಯಂತೆ ಮಲಿನವಾದ ಕೆಂಪುಬಣ್ಣವುಳ್ಳವುಗಳಾಗಿ ಕಂಡುಬಂದವು. ಸಮುದ್ರಾರಣ್ಯಗಳೊಡಗೂಡಿದ ಸಮಸ್ತ ಭೂಮಿಯೂ ನಡುಗಿತು. ಅಲ್ಲಲ್ಲಿ ನರಿಗಳು ಬಾಯಿಂದ ಉರಿಯನ್ನು ಕಕ್ಕುತ್ತ ಭಯಂಕರ ಸ್ವರೂಪವುಳ್ಳವುಗಳಾಗಿ ಕೂಗಿದುವು. ಕುಂಭಕರ್ಣನು ಬರುವ ಮಾರ್ಗದಲ್ಲಿ ರಣಹದ್ದುಗಳು ಮಂಡಲಾಕಾರವಾಗಿ ಸುತ್ತಿ ಮೇಲೆ ಬೀಳುತ್ತಿದ್ದುವು. ಕುಂಭಕರ್ಣನ ಎಡಗಣ್ಣು ಅದಿರಿತು. ಅವನ ಎಡದ ತೋಳು ನಡುಗಿತು. ಉರಿಯುತ್ತಿರುವ ಕೊಳ್ಳಿಯು ಭಯಂಕರ ಧ್ವನಿಯೊಡನೆ ಆಕಾಶದಿಂದ ಕೆಳಗೆ ಬಿದ್ದಿತು. ಸೂರ್ಯಮಂಡಲದ ಕಾಂತಿಯು ಕಂದಿತು. ವಾಯುವಿನಲ್ಲಿ ಅದುವರೆಗೆ ತೋರುತ್ತಿದ್ದ ಸುಖಸ್ಪರ್ಶವು ತಗ್ಗಿತು. ಕುಂಭಕರ್ಣನು ಮೃತ್ಯುವಿನ ಬಾಯಿಗೆ ಸಿಕ್ಕಿಬಿದ್ದವನಾದುದರಿಂದ, ನೋಡುವಾಗಲೇ ಭಯವನ್ನು ಹುಟ್ಟಿಸತಕ್ಕ ಈ ಮಹೋತ್ಪಾತಗಳನ್ನು ಕಂಡಾಗಲೂ ಅವೊಂದನ್ನೂ ಲಕ್ಷ್ಯಮಾಡದೆ ಮುಂದೆ ಸಾಗಿ ಬಂದನು. ಪರ್ವತಾಕಾರವುಳ್ಳ ಆ ಕುಂಭಕರ್ಣನು ಒಂದೇ ದಾಟಿನಿಂದ ಆ ಲಂಕೆಯ ಪ್ರಾಕಾರವನ್ನು ದಾಟಿ ಮುಂದೆ ಬಂದು, ಮಹಾಮೇಘಸಮೂಹದಂತೆ ಅದ್ಭುತವಾದ ವಾನರ ಸೈನ್ಯವನ್ನು ಕಂಡನು. ಅತ್ತಲಾಗಿ ವಾನರ ಸೈನಿಕರೂ ಕೂಡ ಪರ್ವತಾಕಾರವುಳ್ಳ ಈ ಕುಂಭಕರ್ಣನನ್ನು ನೋಡಿದೊಡನೆ ಭಯಪಟ್ಟು ಬಿರುಗಾಳಿಗೆ ಸಿಕ್ಕಿದ ಮೇಘಗಳಂತೆ ದಿಕ್ಕುದಿಕ್ಕಿಗೆ ಪಲಾಯನಮಾಡಿದರು. ಹೀಗೆ ವಾನರರೆಲ್ಲರೂ ತನ್ನನ್ನು ನೋಡಿ ಭಯಪಟ್ಟು ಪಲಾಯನಮಾಡುವುದನ್ನು ಕಂಡು ಕುಂಭಕರ್ಣನು ಪರಮಸಂತೋಷಗೊಂಡು, ಮೇಘವು ಗುಡುಗುವಂತೆ ದೊಡ್ಡ ಸಿಂಹನಾದವನ್ನು ಮಾಡಿದನು. ಮೇಘಧ್ವನಿಯಂತಿರುವ ಈ ಸಿಂಹನಾದ ಧ್ವನಿಯನ್ನು ಕೇಳಿ, ವಾನರರಿಗೆ ಮತ್ತಷ್ಟು ಭಯವುಂಟಾಯಿತು. ಅನೇಕ ವಾನರರು ಬುಡವನ್ನು ಕಡಿದ ಮರದಂತೆ ಭಯದಿಂದ ಮೂರ್ಛಿತರಾಗಿ ಕೆಳಗೆ ಬಿದ್ದರು. ಹೀಗೆ ಮಹಾಬಲಾಢ್ಯನಾದ ಕುಂಭಕರ್ಣನು, ವಾನರರಿಗೆ ಮೇಲೆ ಮೇಲೆ ಭಯವನ್ನು ಹೆಚ್ಚಿಸುತ್ತ, ಪ್ರಳಯಕಾಲದಲ್ಲಿ ಸಜ್ಜೀಕನವಾಗಿ ತನ್ನಾಜ್ಞೆಯನ್ನು ನಿರೀಕ್ಷಿಸುತ್ತಿರುವ ದಂಡಾಯುಧದಿಂದ ಕೂಡಿದ ಯಮನಂತೆ ದೊಡ್ಡ ಪರಿಘವನ್ನು ಕೈಯಲ್ಲಿ

ಹಿಡಿದು ಭಯಂಕರ ಸ್ವರೂಪವುಳ್ಳವನಾಗಿ ಶತ್ರುವಧವನ್ನುದ್ದೇಶಿಸಿ ಮುಂದೆ ಬಂದನು.

ಇಲ್ಲಿಗೆ ಅರುವತ್ತೈದನೆಯ ಸರ್ಗವು.

ಕುಂಭಕರ್ಣನು ವಾನರರೊಡನೆ ಯುದ್ಧವನ್ನಾರಂಭಿಸಿದುದು.
ಭಯದಿಂದೋಡುತ್ತಿದ್ದ ವಾನರರನ್ನು ಅಂಗದನು ತಡೆದು
ನಿಲ್ಲಿಸಿದುದು.

ಪರ್ವತಶಿಖರದಂತೆ ಮಹಾದೇಹವುಳ್ಳ ಆ ಕುಂಭಕರ್ಣನು, ಹೀಗೆ ಒಂದೇ ದಾಟಿಗೆ ಪ್ರಾಕಾರವನ್ನು ದಾಟಿ, ವೇಗದಿಂದ ಲಂಕೆಯ ಹೊರಗೆ ಬಂದನು. ಹೊರಗೆ ಬಂದೊಡನೆ ಆ ರಾಕ್ಷಸನು ತನ್ನ ಧ್ವನಿಯಿಂದ ಸಮುದ್ರದಲ್ಲಿ ಪ್ರತಿಧ್ವನಿಯುಂಟಾಗಿಸುವಂತೆಯೂ, ಸಿಡಿಲುಗಳನ್ನು ಹುಟ್ಟಿಸುವಂತೆಯೂ, ಪರ್ವತಗಳನ್ನು ತೂರಿಬಿಡುವಂತೆಯೂ ಒಂದು ದೊಡ್ಡ ಸಿಂಹನಾದವನ್ನು ಮಾಡಿದನು. ಇಂದ್ರನಿಂದಾಗಲಿ, ಯಮನಿಂದಾಗಲಿ, ವರುಣನಿಂದಾಗಲಿ ನಿಗ್ರಹಿಸುವುದಕ್ಕೆ ಸಾಧ್ಯವಿಲ್ಲದಂತೆ, ಭಯಂಕರಗಳಾದ ಕಣ್ಣುಗಳನ್ನು ತೆರೆದು ಬರುತ್ತಿದ್ದ ಆ ರಾಕ್ಷಸನನ್ನು ನೋಡಿ, ವಾನರರೆಲ್ಲರೂ ಭಯದಿಂದ ಪಲಾಯನಮಾಡುತ್ತಿದ್ದರು. ಹೀಗೆ ವಾನರರೆಲ್ಲರೂ ಭಯದಿಂದೋಡುವುದನ್ನು ಕಂಡು ವಾಲಿಪುತ್ರನಾದ ಅಂಗದನು, ಆ ವಾನರರಲ್ಲಿ ಪ್ರಮುಖರಾದ ನಲನನ್ನೂ, ನೀಲನನ್ನೂ, ಗವಾಕ್ಷನನ್ನೂ, ಮಹಾಬಲವುಳ್ಳ ಕುಮುದನನ್ನೂ ನೋಡಿ "ಎಲೆ ವೀರರೆ! ಇದೇನು? ಈಗ ನೀವು ನಿಮ್ಮ ಸ್ವರೂಪವನ್ನೂ, ನಿಮ್ಮ ವೀರ್ಯವನ್ನೂ, ನಿಮ್ಮ ಕುಲೋನ್ನತಿಯನ್ನೂ ಮರೆತು, ಕ್ಷುದ್ರಕಪಿಗಳಂತೆ ಹೀಗೆ ಭಯದಿಂದ ಎಲ್ಲಿಗೆ ಹೋಗುತ್ತಿರುವಿರಿ? ಬಹಳ ಚೆನ್ನಾಯಿತು! ಎಲೆ ಸೌಮ್ಯರೆ! ಹಿಂತಿರುಗಿ ಬನ್ನಿರಿ! ನಿಮ್ಮ ಪ್ರಾಣಗಳನ್ನು ರಕ್ಷಿಸುವಿರೇನು? ಎಲೆ ವಾನರರೆ! ನಿಮ್ಮ ಭಯವನ್ನು ಬಿಡಿರಿ! ಈ ರಾಕ್ಷಸಾಕೃತಿಯು ಯುದ್ಧಮಾಡುವುದಕ್ಕಾಗಿ ಬಂದುದಲ್ಲ. ರಾಕ್ಷಸರು ನಮ್ಮನ್ನು ಹೆದರಿಸುವುದಕ್ಕಾಗಿ ತಂದು ನಿಲ್ಲಿಸಿದ ಪುರುಷಾಕಾರದ ಒಂದು ಬಿಭೀಷಿಕೆ (ಬೊಂಬೆ) ಯೇ ಹೊರತು

ನಿಜವಾಗಿ ಯುದ್ಧಕ್ಕೆ ಬಂದ ರಾಕ್ಷಸನಲ್ಲ. ರಾಕ್ಷಸರು ಮೋಸದಿಂದೆಬ್ಬಿಸಿರುವ ಈ ಭೀಕರಾಕೃತಿಯನ್ನು ನಾನು ನಿಮಿಷಮಾತ್ರದಲ್ಲಿ ನನ್ನ ಪರಾಕ್ರಮದಿಂದ ಮುರಿದು ಹಾಕುವೆನು ನೋಡಿರಿ! ಹಿಂತಿರುಗಿ ಬನ್ನಿರಿ! ಹೆದರಬೇಡಿರಿ!" ಎಂದನು. ಈ ಮಾತನ್ನು ಕೇಳಿಯೂ ವಾನರರು ತಮ್ಮ ಮನಸ್ಸಿನಲ್ಲಿ ಭಯವನ್ನು ಬಿಡದೆ, ಕೊನೆಗೆ ನಿರ್ಬಂಧಕ್ಕಾಗಿ ಹೇಗೋ ಮನಸ್ಸನ್ನು ದೃಢಪಡಿಸಿಕೊಂಡು, ಅಲ್ಲಲ್ಲಿ ಒಬ್ಬರಿಗೊಬ್ಬರು ಬೆಂಬಲವಾಗಿ ಸೇರಿಕೊಂಡು, ಬೆಟ್ಟಗಳನ್ನೂ, ಗಿಡಗಳನ್ನೂ, ಯುದ್ಧಸಾಧನವನ್ನಾಗಿ ಕೈಯಲ್ಲಿ ಹಿಡಿದು ರಣರಂಗಕ್ಕೆ ಹಿಂತಿರುಗಿದರು. ಹೀಗೆ ಹಿಂತಿರುಗಿಬಂದ ವಾನರರೆಲ್ಲರೂ ಕ್ರಮಕ್ರಮವಾಗಿ ಕೋಪವನ್ನು ತಂದುಕೊಂಡು, ಮದ ದಾನೆಗಳಂತೆ ಮುಂದೆ ನುಗ್ಗಿ, ಕುಂಭಕರ್ಣನನ್ನು ಪ್ರಹರಿಸಿದರು. ಕೆಲವರು ಬೆಟ್ಟದ ಶಿಖರಗಳನ್ನು ಬೀಸಿದರು. ಕೆಲವರು ಶಿಲೆಗಳಿಂದ ಹೊಡೆದರು. ಕೆಲವರು ಪುಷ್ಪಿತಗಳಾದ ವೃಕ್ಷಗಳಿಂದ ಬಡಿದರು. ಏನಾದರೇನು? ಆ ಕುಂಭಕರ್ಣನ ದೇಹವು ಸ್ವಲ್ಪವಾದರೂ ಕದಲಲಿಲ್ಲ. ಆ ವಾನರರು ಪ್ರಯೋಗಿಸಿದ ದೊಡ್ಡ ಶಿಲೆಗಳೆಲ್ಲವೂ ಆ ಕುಂಭಕರ್ಣನ ಮೈಗೆ ತಗುಲಿ ದೊಡನೆ ನೂರಾರು ತುಂಡುಗಳಾಗಿ ಒಡೆದುಬಿದ್ದುವು. ಇವರು ಬೀಸಿದ ಮರಗಳೆಲ್ಲವೂ ತುಂಡಾಗಿ ನೆಲಕ್ಕೆ ಬಿದ್ದುವು. ಕುಂಭಕರ್ಣನಾದರೋ ಇಷ್ಟರಲ್ಲಿ ಬಹಳ ಕೋಪಗೊಂಡವನಾಗಿ, ಮಹಾವೀರ್ಯಶಾಲಿಗಳಾದ ವಾನರರ ನಡುವೆ ನುಗ್ಗಿ, ಕಾಡುಕಿಚ್ಚು ಕಾಡನ್ನು ದಹಿಸುವಂತೆ ಬಹಳ ಸಾಹಸದಿಂದ ಆ ಕಪಿ ಸೈನ್ಯವೆಲ್ಲವನ್ನೂ ನಿರ್ಮೂಲ ಮಾಡುತ್ತ ಬಂದನು. ಆ ರಾಕ್ಷಸನ ಪ್ರಹಾರದಿಂದ ಅನೇಕ ವಾನರರು ಮೈಮುರಿದು ರಕ್ತದಿಂದ ತೊಯ್ದ ಮೈಯುಳ್ಳವರಾಗಿ ಅಲ್ಲಲ್ಲಿ ಕಿತ್ತುಬಿಸುಟ ಕೆಂಪುಹೂವಿನ ಮರ ಗಳಂತೆ ಸತ್ತು ನೆಲಕ್ಕೆ ಬಿದ್ದರು. ಕೆಲವು ವಾನರರು ಭಯದಿಂದ ಹಿಂತಿರುಗಿ ನೋಡದೆ, ಒಬ್ಬರ ಮೇಲೊಬ್ಬರು ಹಾರಿ ಹಾರಿ ಪಲಾಯನ ಮಾಡುತ್ತಿದ್ದರು. ಕೆಲವರು ಸಮುದ್ರದಲ್ಲಿ ಬಿದ್ದರು. ಕೆಲವರು ಆಕಾಶಕ್ಕೆ ಹಾರಿದರು. ಮಹಾಬಲಾಢ್ಯನಾದ ಕುಂಭಕರ್ಣನ ಕೊಲೆಯನ್ನು ತಡೆಯಲಾರದೆ ಕೆಲವು ವಾನರರು ತಾವು ಹಿಂದೆ ಸಮುದ್ರವನ್ನು ದಾಟಿಬಂದ ಸೇತುವಿನ ಮಾರ್ಗವಾಗಿಯೇ ಹಿಂತಿರುಗಿ ಪಲಾಯನಮಾಡಿದರು. ಅವರಲ್ಲಿ

ಭಯದಿಂದ ಕಂದಿದ ಮುಖವುಳ್ಳ ಕೆಲವು ವಾನರರು ಓಡುವುದಕ್ಕನು ಕೂಲಿಸುವಂತೆ ಸಮಭೂಮಿಯನ್ನು ಹುಡುಕಿಕೊಂಡು ಹೋದರು. ಕೆಲವರು ಸಮೀಪದಲ್ಲಿ ಸಿಕ್ಕಿದ ಹಳ್ಳಗಳಲ್ಲಿ ಹುದುಗಿಕೊಂಡರು. ಕರಡಿಯ ಸೈನ್ಯಗಳಲ್ಲಿ ಕೆಲವು ಮರಗಳನ್ನೇರಿ ಕುಳಿತುವು. ಕೆಲವು ಬೆಟ್ಟಗಳನ್ನೇರಿದುವು. ಕೆಲವು ಸಮುದ್ರದಲ್ಲಿ ಮುಳುಗಿದುವು. ಕೆಲವು ಗುಹೆಗಳಲ್ಲಿ ಅಡಗಿಕೊಂಡುವು. ಕೆಲವು ವಾನರರು ಸತ್ತವರಂತೆ ನಟಿಸುತ್ತ ನೆಲದ ಮೇಲೆ ಮಲಗಿದ್ದರು. ಕೆಲವರು ನಿಂತ ಕಡೆಯಲ್ಲಿ ನಿಲ್ಲದೆ ದಿಗ್ಭ್ರಮೆ ಹಿಡಿದು ಸುತ್ತುತ್ತಿದ್ದರು. (ಕೆಲವರು ಭಯದಿಂದ ನಡೆಯಲಾರದೆ ಭೂಮಿಗೆ ಬಿದ್ದರು. ಕೆಲವರು ಸತ್ತವರಂತೆ ಮಲಗಿದರು.) ಹೀಗೆ ಕದಲಿನ ವಾನರ ಸೈನ್ಯಗಳನ್ನು ನೋಡಿ ಅಂಗದನು “ಎಲೆ ವಾನರರೆ! ನಿಲ್ಲಿರಿ! ನಿಲ್ಲಿರಿ! ಯುದ್ಧಮಾಡುವೆವು ಬನ್ನಿರಿ. ಓಡಬೇಡಿರಿ! ನೀವು ಇಲ್ಲಿಂದ ಭಂಗವನ್ನು ಹೊಂದಿ ಈ ಸಮಸ್ತ ಭೂಮಿಯನ್ನು ಸುತ್ತಿದರೂ ನೆಮ್ಮದಿಯಿಂದಿರುವಿ ತೆಂದು ನನಗೆ ತೋರಲಿಲ್ಲ. ಹಿಂತಿರುಗಿ ಬನ್ನಿರಿ. ಪ್ರಾಣಗಳನ್ನು ರಕ್ಷಿಸಿ ಕೊಳ್ಳುವುದರಿಂದೇನು? ಎಲೈ ವೀರರೇ! ನೀವಾದರೋ ಎಣೆಯಿಲ್ಲದ ಪರಾಕ್ರಮವುಳ್ಳವರು. ಅಸಮಾನವಾದ ವೇಗವುಳ್ಳವರು. ಇಷ್ಟು ಸಾಮರ್ಥ್ಯವುಳ್ಳ ನೀವೇ ಹೀಗೆ ಈ ಯುದ್ಧವನ್ನು ಬಿಟ್ಟು ಭಯದಿಂದ ಪಲಾಯನ ಮಾಡಿದರೆ, ನಿಮ್ಮ ಪತ್ನಿಯರೇ ನಿಮ್ಮನ್ನು ಹಾಸ್ಯಮಾಡಲಾರರೆ? ಮಾನವುಳ್ಳವರಿಗೆ ಇದೇ ಮರಣಪ್ರಾಯವಲ್ಲವೆ? ನಾವೆಲ್ಲರೂ ಉತ್ತಮಕುಲದಲ್ಲಿ ಹುಟ್ಟಿದವರು. ನಮ್ಮ ವಂಶವೋ ಅತಿ ವಿಸ್ತೀರ್ಣವಾದುದು. ಕ್ಷುದ್ರ ಕಪಿಗಳಂತೆ ಭಯಪಟ್ಟು ಹೀಗೆ ಓಡಿಹೋಗುವುದೆಂದರೇನು? ನೀವು ನಿಮ್ಮ ನಿಮ್ಮ ಪರಾಕ್ರಮವನ್ನು ಬಿಟ್ಟು ಭಯದಿಂದ ಓಡುತ್ತಿದ್ದರೆ, ನನಗೆ ಪೂಜ್ಯತೆಯೆಲ್ಲಿಯದು? ಮೊದಲು ನೀವೆಲ್ಲರೂ ಆಗಾಗ ಜನಸಮೂಹಗಳಲ್ಲಿ ನಾನಾವಿಧವಾಗಿ ಆತ್ಮಸ್ತುತಿಗಳನ್ನು ಮಾಡಿಕೊಂಡು ಹೆಮ್ಮೆ ಕೊಚ್ಚಿಕೊಂಡಿರಲ್ಲವೆ? ಆ ದೊಡ್ಡ ದೊಡ್ಡ ಆತ್ಮಸ್ತುತಿಗಳೆಲ್ಲವೂ ಈಗೆಲ್ಲಿ ಹೋದುವು? ಯಾವನು ಶತ್ರುಗಳಿಂದ ಪರಾಜಿತನಾಗಿಯೂ ಪ್ರಾಣದಿಂದ ಬದುಕಿರುವನೋ, ಅಂತವನನ್ನು ಜನರು ನಾನಾವಿಧವಾಗಿ ಹೀಗಳೆದು, ಹೇಡಿಯೆಂದಾಡಿಕೊಳ್ಳುವರು. ಆದುದರಿಂದ ಎಲೈ ಕಪಿವೀರರೆ! ಸತ್ಪುರು

ಪರ ದಾರಿಯನ್ನು ಹಿಡಿಯಿರಿ! ಭಯವನ್ನು ಬಿಡಿರಿ! ನಾವು ಒಂದುವೇಳೆ ಈ ಕಾಲಕ್ಕೆ ತಲೆತಪ್ಪಿಸಿಕೊಂಡು ಬದುಕಿ ಹೋದರೂ, ನಮ್ಮ ಆಯುಃ ಕಾಲವು ಬಹಳ ಸ್ವಲ್ಪವಾದುದರಿಂದ ನಾವು ಸ್ಥಿರವಾಗಿ ಬದುಕಿರುವುದೇನೋ ಸುಳ್ಳು. ಆದುದರಿಂದ ನಾವು ಈಗ ಈ ಯುದ್ಧದಲ್ಲಿಯೇ ಧೈರ್ಯದಿಂದ ನಿಂತು, ಶತ್ರುಗಳಿಂದ ಹತರಾಗಿ ಈ ರಣರಂಗದಲ್ಲಿ ಮಲಗಿದರೆ, ಈ ಸುಲಭೋಪಾಯದಿಂದ ಬೇರೊಬ್ಬರಿಗೆ ದುರ್ಲಭವಾದ ಬ್ರಹ್ಮಲೋಕವನ್ನೇ ಹೊಂದಬಹುದು. ಹಾಗಿಲ್ಲದೆ ನಾವೇ ಯುದ್ಧದಲ್ಲಿ ಶತ್ರುಗಳನ್ನು ನಿಗ್ರಹಿಸಿದ ಪಕ್ಷದಲ್ಲಿ, ಸರ್ವೋತ್ತಮವಾದ ಕೀರ್ತಿಯನ್ನಾದರೂ ಪಡೆಯಬಹುದು. ಆದುದರಿಂದ ಎಲೈ ವೀರರೆ! ದುರ್ಲಭವಾದ ಆ ಬ್ರಹ್ಮಲೋಕಕ್ಕೆ ಬೆಲೆಯಾಗಿ, ಅತ್ಯಲ್ಪವಾದ ನಮ್ಮ ಪ್ರಾಣವನ್ನು ಕೊಟ್ಟುಬಿಡುವೆವು. ಈ ಕುಂಭಕರ್ಣನು ರಾಮನನ್ನು ನೋಡಿದಮೇಲೆ ಎಂದಿಗೂ ಬದುಕಿ ಹೋಗಲಾರನು. ಉರಿಯುವ ಬೆಂಕಿಯನ್ನು ಪ್ರವೇಶಿಸಿದ ಈಚಲಹುಳದಂತೆ ಕ್ಷಣಮಾತ್ರದಲ್ಲಿ ದಗ್ಧನಾಗುವನು. ನಾವೆಲ್ಲರೂ ಇದುವರೆಗೆ ಒಳ್ಳೆಯ ಕೀರ್ತಿಯನ್ನು ಸಂಪಾದಿಸಿರುವೆವು. ಹೀಗೆ ಯಶಸ್ವಿಗಳಾದ ನಾವು ಇಷ್ಟು ಮಂದಿ ಸೇರಿರುವಾಗಲೂ ಕುಂಭಕರ್ಣನೊಬ್ಬನಿಗಾಗಿ ಭಯಪಟ್ಟು ಪಲಾಯನಮಾಡಿ, ನಮ್ಮ ಪ್ರಾಣವನ್ನು ರಕ್ಷಿಸಿಕೊಂಡರೆ ನಮಗೆ ಇದುವರೆಗೆ ಪ್ರಾಪ್ತವಾದ ಕೀರ್ತಿಯೂ ನಶಿಸುವುದಲ್ಲವೆ?" ಎಂದನು. ಹೀಗೆ ಶೂರನಾದ ಅಂಗದನು ಸಮಸ್ತ ವಾನರರಿಗೂ ಯುದ್ಧೋತ್ಸಾಹವನ್ನು ಹುಟ್ಟಿಸುತ್ತ, ಸುವರ್ಣಾಂಗದಗಳಿಂದ ಶೋಭಿತವಾದ ತೋಳನ್ನು ಮೇಲಕ್ಕೆತ್ತಿ ಕರೆಯುತ್ತಿರಲು, ಭಯದಿಂದೋಡುತ್ತಿದ್ದ ಆ ವಾನರರೆಲ್ಲರೂ ತಮ್ಮ ಹೇಡಿತನವನ್ನು ಮತ್ತಷ್ಟು ಪ್ರಕಾಶಪಡಿಸುವಂತೆ, ಶೂರರಿಗೆ ಯೋಗ್ಯವಲ್ಲದ ಮಾತಿನಿಂದ ಅವನನ್ನು ಕುರಿತು "ಅಯ್ಯಾ! ಸಾಕು! ಸಾಕು! ಕುಂಭಕರ್ಣನೆಂಬ ಈ ರಾಕ್ಷಸನಲ್ಲಿ ನಾವು ಇದುವರೆಗೆ ಅನುಭವಿಸಿದ ಅವಸ್ಥೆಯೇ ಸಾಕು! ನಿಂತು ಮಾತಾಡುವುದಕ್ಕೂ ಇದು ಸಮಯವಲ್ಲ. ನಾವು ಹೋಗುವೆವು. ತಮ್ಮ ಪ್ರಾಣವು ನಮಗೆ ಹೆಚ್ಚಲ್ಲವೆ" ಎಂದರು. ಆ ವಾನರರೆಲ್ಲರೂ ಈ ಮಾತನ್ನು ಹೇಳುವಷ್ಟರಲ್ಲಿ, ಭಯಂಕರಾಕಾರವುಳ್ಳ ಕುಂಭಕರ್ಣನು ತಮ್ಮ ಮೇಲೆ ಬೆನ್ನಟ್ಟಿ ಬರುತ್ತಿರುವುದನ್ನು ನೋಡಿ

ದಿಕ್ಕುದಿಕ್ಕಿಗೆ ಓಡುತ್ತಲೇ ಇದ್ದರು. ಇಷ್ಟಾದರೂ ಅಂಗದನು ಸುಮ್ಮನಿರದೆ ಭಯದಿಂದೋಡುತ್ತಿದ್ದ ಆ ವಾನರರನ್ನು ಸಾಮವಾಕ್ಯಗಳಿಂದಲೂ, ಹಿಂದೆ ರಾಮನು ನಡೆಸಿದ ವೀರ್ಯಕಾರ್ಯಗಳನ್ನು ನಿದರ್ಶಿಸಿ ಧೈರ್ಯವನ್ನುಂಟು ಮಾಡತಕ್ಕ ಮಾತುಗಳಿಂದಲೂ ಅವರೆಲ್ಲರನ್ನೂ ಹಿಂತಿರುಗಿಸಿದನು. ಹೀಗೆ ಬುದ್ಧಿವಂತನಾದ ಅಂಗದನು ಅವರಿಗೆ ಮೇಲೆ ಮೇಲೆ ಉತ್ಸಾಹವನ್ನು ಹುಟ್ಟಿಸಿದಮೇಲೆ ಅವರೆಲ್ಲರೂ ಭೀತಿಯನ್ನು ಬಿಟ್ಟು ಸಂತುಷ್ಟರಾಗಿ, ಮುಂದಿನ ಯುದ್ಧಕ್ಕಾಗಿ ಸುಗ್ರೀವಾಜ್ಞೆಯನ್ನು ನಿರೀಕ್ಷಿಸುತ್ತ ಸಿದ್ಧರಾಗಿ ನಿಂತರು. ಇಷ್ಟರಲ್ಲಿ ಋಷಭನೂ, ಶರಭನೂ, ಮೈಂದನೂ, ಧೂಮ್ರನೂ, ನೀಲನೂ, ಕುಮುದನೂ, ಸುಷೇಣನೂ, ಗವಾಕ್ಷನೂ, ರಂಭನೂ, ತಾರನೂ, ದ್ವಿವಿದನೂ, ಪನಸನೂ, ಹನುಮಂತನೇ ಮೊದಲಾದ ಇನ್ನೂ ಅನೇಕ ವಾನರ ಪ್ರಮುಖರೊಡನೆ, ಅತಿ ತ್ವರೆಯಿಂದ ಯುದ್ಧಾಭಿಮುಖರಾಗಿ ಹೋದರು.

ಇಲ್ಲಿಗೆ ಅರುವತ್ತಾರನೆಯ ಸರ್ಗವು.

ವಾನರರೊಡನೆ ಕುಂಭಕರ್ಣನ ಯುದ್ಧವು. ಅಂಗದನ ಪರಾಜಯವು. ತನ್ನ ಪ್ರಹಾರದಿಂದ ಮೂರ್ಛಿತನಾದ ಸುಗ್ರೀವನನ್ನು ಕುಂಭಕರ್ಣನು ಲಂಕೆಗೆ ಎತ್ತಿಕೊಂಡು ಹೋಗುತ್ತಿರುವಾಗ, ರಾಜವೀಧಿಯಲ್ಲಿ ನಡೆಸಿದ ಶೈತ್ಯೋಪಚಾರಗಳಿಂದ ಸುಗ್ರೀವನು ಮೂರ್ಛೆ ತಿಳಿದು, ಕುಂಭಕರ್ಣನ ಕಿವಿಮೂಗುಗಳನ್ನು ಕಚ್ಚಿ, ಹಿಂತಿರುಗಿ ಬಂದು ವಾನರಸೈನ್ಯದೊಡನೆ ಸೇರಿದುದು. ಕುಂಭಕರ್ಣನು ಲಜ್ಜಿತನಾಗಿ ಕೋಪದಿಂದ ತಿರುಗಿ ಯುದ್ಧಕ್ಕೆ ಬಂದುದು. ರಾಮಕುಂಭಕರ್ಣರ ಯುದ್ಧವು. ಕುಂಭಕರ್ಣನ ವಧವು.

ಮಹಾಕಾಯವುಳ್ಳ ಆ ವಾನರರೆಲ್ಲರೂ ಅಂಗದನ ಮಾತನ್ನು ಕೇಳಿ ಹಿಂತಿರುಗಿ ಸ್ಥಿರಮನಸ್ಸಿಂದ ಯುದ್ಧಾಕಾಂಕ್ಷಿಗಳಾಗಿ ನಿಂತರು. ಅಂಗದನೂ ಮೇಲೆ ಮೇಲೆ ಅವರ ಪೂರ್ವಪರಾಕ್ರಮಗಳನ್ನು ಹೊಗಳಿ, ಅವರ ವೀರ್ಯವನ್ನು ಕೊಂಡಾಡಿ, ಪ್ರೋತ್ಸಾಹವನ್ನು ಹುಟ್ಟಿಸುತ್ತಿದ್ದನು. ಈ ಅಂಗದನ

ವಾಕ್ಯವನ್ನು ಕೇಳಿ, ಆ ವಾನರರು ಸ್ಥಿರಬುದ್ಧಿಯುಳ್ಳವರಾಗಿ, ತಾವೂ ತಮ್ಮ ವೀರಕಾರ್ಯಗಳನ್ನು ಹೇಳಿಕೊಳ್ಳುತ್ತ ಯುದ್ಧೋದ್ಯುಕ್ತರಾಗಿದ್ದರು. ಎಲ್ಲರಿಗೂ ಮನಸ್ಸಿನಲ್ಲಿ ಒಂದು ವಿಧವಾದ ಹರ್ಷವು ಉಕ್ಕುತ್ತಿತ್ತು. ಒಬ್ಬೊಬ್ಬರೂ ತಮ್ಮ ಜೀವದ ಮೇಲೆ ಆಸೆಯನ್ನು ಬಿಟ್ಟು, ಮರಣಕ್ಕೂ ಸಿದ್ಧರಾಗಿ ತುಮುಲಯುದ್ಧವನ್ನಾರಂಭಿಸಿದರು. ಆ ವಾನರರೆಲ್ಲರೂ ವೃಕ್ಷ ಗಳನ್ನೂ, ದೊಡ್ಡ ದೊಡ್ಡ ಪರ್ವತಶಿಖರಗಳನ್ನೂ ಎತ್ತಿಕೊಂಡು ಕುಂಭ ಕರ್ಣನ ಮೇಲೆ ನುಗ್ಗಿದರು. ಇದನ್ನು ನೋಡಿ ವೀರ್ಯವಂತನಾದ ಕುಂಭಕರ್ಣನು ಕೋಪಗೊಂಡು, ಗದೆಯನ್ನೆತ್ತಿ ಅಲ್ಲಲ್ಲಿ ವಾನರರನ್ನು ಪ್ರಹರಿಸುತ್ತ, ಆ ಸೈನ್ಯಗಳನ್ನು ದಿಕ್ಕುದಿಕ್ಕಿಗೆ ಚದರಿಸಿದನು. ಕುಂಭ ಕರ್ಣನ ಪ್ರಹಾರದಿಂದ ನೊಂದು ಮೈಮುರಿದ ವಾನರರು ಒಂದೊಂದು ಗದಾಪ್ರಹಾರಕ್ಕೂ ಏಳುನೂರು, ಎಂಟುನೂರು, ಸಾವಿರದಂತೆ ತಂಡ ತಂಡವಾಗಿ ಸತ್ತು ನೆಲಕ್ಕೆ ಬೀಳುತ್ತಿದ್ದರು. ಕುಂಭಕರ್ಣನು ಮಿತಿಮೀರಿ ಕೋಪಗೊಂಡು ಗರುಡನು ಸರ್ಪಗಳನ್ನು ಭಕ್ಷಿಸುವಂತೆ ಒಂದೊಂದು ಸಲಕ್ಕೆ ಎಂಟು, ಹತ್ತು, ಹದಿನಾರು, ಇಪ್ಪತ್ತು, ಮೂವತ್ತು, ಹೀಗೆ ಮೊತ್ತ ಮೊತ್ತವಾಗಿ ವಾನರರನ್ನು ತೋಳುಗಳಲ್ಲಿ ಸಿಕ್ಕಿಸಿಕೊಂಡು ಒಂದೇ ತುತ್ತಾಗಿ ಭಕ್ಷಿಸುತ್ತಬಂದನು. ಬಲಾಢ್ಯರಾದ ಕೆಲವು ವಾನರರು ತಮ್ಮ ಮನಸ್ಸಿ ನಲ್ಲಿ ಬಹಳ ಭಯವುಂಟಾಗಿದ್ದರೂ, ಹೇಗೋ ಧೈರ್ಯವನ್ನು ತಂದು ಕೊಂಡು, ಒಬ್ಬರಿಗೊಬ್ಬರು ಬೆಂಬಲವಾಗಿ ಸೇರಿ, ಮರಗಳನ್ನೂ, ಬೆಟ್ಟ ಗಳನ್ನೂ ಹಿಡಿದು ಯುದ್ಧಕ್ಕೆ ಸಿದ್ಧರಾಗಿ ನಿಂತರು. ಇಷ್ಟರಲ್ಲಿ ವಾನರ ಪ್ರಮುಖನಾದ ದ್ವಿವಿದನೆಂಬವನು ಒಂದು ದೊಡ್ಡ ಪರ್ವತವನ್ನು ಕಿತ್ತು ಕೊಂಡು, ಜಲಭಾರದಿಂದ ಕುಗ್ಗಿದ ಮೇಘದಂತೆ ಮುಂದೆ ಹೋಗಿ ಪರ್ವತ ಶಿಖರಾಕಾರವುಳ್ಳ ಕುಂಭಕರ್ಣನನ್ನಿದಿರಿಸಿದನು. ಮತ್ತು ದ್ವಿವಿದನು ಕುಂಭಕರ್ಣನ ಮೇಲೆ ಆ ಪರ್ವತವನ್ನು ವೇಗದಿಂದ ಬೀಸಿ ಹೊಡೆಯಲು, ಅದು ಗುರಿತಪ್ಪಿ ಮಹಾಕಾಯವುಳ್ಳ ಆತನ ಮೈಮೇಲೆ ಬಿದ್ದಿತು. ಈ ಪರ್ವತವು ಬಿದ್ದುದರಿಂದ ಸೈನ್ಯದಲ್ಲಿದ್ದ ಕುದುರೆಗಳೂ, ಆನೆಗಳೂ, ರಥಗಳೂ, ಇನ್ನೂ ಅನೇಕ ರಾಕ್ಷಸಸೈನ್ಯಗಳೂ, ಚೂರ್ಣವಾದುವು. ಇಷ್ಟರಲ್ಲಿಯೇ ದ್ವಿವಿದನು ಮತ್ತೊಂದು ಪರ್ವತಶಿಖರವನ್ನು ತಂದು ಪ್ರಯೋಗಿಸಿದನು.

ಈ ಪರ್ವತಪ್ರಹಾರದ ವೇಗದಿಂದ ಆ ಯುದ್ಧಭೂಮಿಯೆಲ್ಲವೂ ರಕ್ತಮಯ ವಾಗುವಂತೆ ಅನೇಕ ರಥಾಶ್ವಗಳೂ, ಅನೇಕ ಸಾರಥಿಗಳೂ ಚೂರ್ಣೀ ಭೂತವಾದುವು. ಅತ್ತಲಾಗಿ ರಾಕ್ಷಸರಥಿಕರೆಲ್ಲರೂ ಭಯಂಕರಗಳಾದ ಸಿಂಹನಾದಗಳನ್ನು ಮಾಡುತ್ತ, ಕಾಲಮೃತ್ಯುವಿನಂತಿರುವ ಕ್ರೂರಬಾಣ ಗಳಿಂದ, ಇತ್ತಲಾಗಿ ಕತ್ತರಿಸುತ್ತಬಂದರು. ಮಹಾಕಾಯವುಳ್ಳ ವಾನರರೂ ಕೂಡ ದೊಡ್ಡ ದೊಡ್ಡ ವೃಕ್ಷಗಳನ್ನೂ ಕಿತ್ತುಕೊಂಡು, ಆ ರಾಕ್ಷಸ ಸೈನ್ಯದಲ್ಲಿದ್ದ ರಥಗಳನ್ನೂ, ಕುದುರೆಗಳನ್ನೂ, ಆನೆಗಳನ್ನೂ, ಪ್ರಧಾನ ರಾಕ್ಷಸರನ್ನೂ ಬಡಿದು ಕೆಡಹುತ್ತ ಬಂದರು. ಇಷ್ಟರಲ್ಲಿ ಹನುಮಂತನು ಥಟ್ಟನೆ ಆಕಾಶಕ್ಕೆ ಹಾರಿ, ಕುಂಭಕರ್ಣನ ತಲೆಯ ಮೇಲೆ ಎಡೆಬಿಡದೆ ಶಿಲೆಗಳನ್ನೂ, ವೃಕ್ಷಗಳನ್ನೂ ವರ್ಷಿಸುತ್ತಿದ್ದನು. ಮಹಾಬಲಾಢ್ಯನಾದ ಕುಂಭಕರ್ಣನಾದರೋ ತನ್ನ ಮೇಲೆ ಬೀಳುತಿದ್ದ ಆ ಪರ್ವತಶಿಖರಗಳನ್ನೂ, ವೃಕ್ಷವರ್ಷವನ್ನೂ, ತನ್ನ ಶೂಲದಿಂದ ಭೇದಿಸಿ ಕೆಡಹುತ್ತಿದ್ದನು. ಆಮೇಲೆ ಕುಂಭಕರ್ಣನು ತನ್ನ ತೀಕ್ಷ್ಣಶೂಲವನ್ನು ಹಿಡಿದು, ಅದರಿಂದ ತನಗೆದು ರಾಗಿದ್ದ ವಾನರಸೈನ್ಯವೆಲ್ಲವನ್ನೂ ತಿವಿದೋಡಿಸುತ್ತಿರಲು, ಈ ವಾನರರು ಭಯಪಟ್ಟೋಡುವುದನ್ನು ನೋಡಿ ಹನುಮಂತನು ಒಂದು ದೊಡ್ಡ ಪರ್ವತ ಶಿಖರವನ್ನು ಕಿತ್ತುಕೊಂಡು ಕುಂಭಕರ್ಣನನ್ನಿದಿರಿಸಿ ಅವನ ಮುಂದೆ ನಿಂತನು. ಮತ್ತು ಪರ್ವತಾಕಾರವುಳ್ಳ ಕುಂಭಕರ್ಣನನ್ನು ಆ ಪರ್ವತ ಶಿಖರದಿಂದ ಪ್ರಹರಿಸಿದನು. ಈ ಪ್ರಹಾರದಿಂದ ಕುಂಭಕರ್ಣನ ದೇಹವು ಕದಲಿತು. ಅವನ ಅಂಗಾಂಗಗಳಲ್ಲಿಯೂ ರಕ್ತವು ಕಿತ್ತುಕೊಂಡಿತು. ಅವನ ಮೈಯೆಲ್ಲವೂ ಮೇದಸ್ಸಿನಿಂದ ತೊಯ್ದುಹೋಯಿತು. ಇಷ್ಟಾ ದರೂ ಕುಂಭಕರ್ಣನು ತನ್ನ ಸಾಹಸವನ್ನು ಬಿಡದೆ, ಮಿಂಚಿನಂತೆಯೂ, ಜ್ವಾಲೆಯನ್ನು ಕಾರುವ ಪರ್ವತಶಿಖರಾಗ್ರದಂತೆಯೂ, ದೇದೀಪ್ಯಮಾನ ವಾದ ತನ್ನ ಶೂಲವನ್ನೆತ್ತಿ, ಷಣ್ಮುಖನು ತನ್ನ ಶಕ್ತ್ಯಾಯುಧದಿಂದ ಕ್ರೌಂಚಪರ್ವತವನ್ನು ಪ್ರಹರಿಸಿದಂತೆ ಹನುಮಂತನ ಎದೆಗೆ ಗುರಿಯಿಟ್ಟು ಹೊಡೆದನು. ಈ ಶೂಲಪ್ರಹಾರಕ್ಕೆ ಹನುಮಂತನ ಹೃದಯವು ಭೇದಿಸಿ ದಂತಾಯಿತು. ಅವನಿಗೆ ಮೈಮೇಲೆ ಪ್ರಜ್ಞೆಯು ತಪ್ಪಿತು. ಅವನ ಬಾಯಿಂದ ರಕ್ತವು ಕಾರುತ್ತಿತ್ತು. ಈ ಪ್ರಹಾರದಿಂದ ನೊಂದ ಹನು

ಮಂತನು ಪ್ರಳಯಕಾಲದ ಮೇಘಧ್ವನಿಗೆ ಸಮಾನವಾದ ದೊಡ್ಡ ಧ್ವನಿ ಯಿಂದ, ಕೇಳುವವರಿಗೆ ಭಯವುಂಟಾಗುವಂತೆ ಕೂಗಿದನು. ಹನುಮಂತನು ಹೀಗೆ ಬಹಳವಾಗಿ ನೊಂದುದನ್ನು ನೋಡಿ, ಆಗಲೇ ರಾಕ್ಷಸರೆಲ್ಲರೂ ಸಂತೋಷದಿಂದ ಸಿಂಹನಾದ ಮಾಡಿದರು. ಇತ್ತಲಾಗಿ ವಾನರರು ಭಯ ದಿಂದ ನಡುಗುತ್ತ ಆ ಕುಂಭಕರ್ಣನ ಮುಂದೆ ನಿಲ್ಲಲಾರದೆ ದಿಕ್ಕುದಿಕ್ಕಿಗೆ ಪಲಾಯನಮಾಡಿದರು. ಇದನ್ನು ನೋಡಿ ಬಲಾಢ್ಯನಾದ ನೀಲನು ಆ ವಾನರಸೈನ್ಯಕ್ಕೆ ಧೈರ್ಯವನ್ನು ಹೇಳಿ ನಿಲ್ಲಿಸಿ, ಕುಂಭಕರ್ಣನ ಮೇಲೆ ಒಂದು ದೊಡ್ಡ ಪರ್ವತಶಿಖರವನ್ನು ಪ್ರಯೋಗಿಸಿದನು. ಇದನ್ನು ನೋಡಿ ಕುಂಭಕರ್ಣನು ಆ ಪರ್ವತವು ತನ್ನ ಮೇಲೆ ಬೀಳುವಷ್ಟರಲ್ಲಿಯೇ ತನ್ನ ಮುಷ್ಟಿಯಿಂದ ಅದನ್ನು ಭೇದಿಸಲು, ಆ ಪ್ರಹಾರದಿಂದ ಆ ಪರ್ವತವು ಪುಡಿಪುಡಿಯಾಗಿ, ಉರಿಯನ್ನೂ, ಕಿಡಿಗಳನ್ನೂ ಕಾರುತ್ತ ನೆಲಕ್ಕೆ ಬಿದ್ದಿತು. ಆಮೇಲೆ ಋಷಭ, ನೀಲ, ಗವಾಕ್ಷ, ಗಂಧಮಾದನ ಶರಭ ಐದುಮಂದಿ ವಾನರ ಸೇನಾಪತಿಗಳು ಒಂದಾಗಿ ಸೇರಿ ಕುಂಭಕರ್ಣನ ಮೇಲೆ ನುಗ್ಗಿದರು. ಮಹಾಬಲಾಢ್ಯರಾದ ಈ ಐದುಮಂದಿಯೂ ತಮ್ಮ ತಮ್ಮ ಬಲಕ್ಕೆ ತಕ್ಕಂತೆ, ಬೆಟ್ಟಗಳಿಂದಲೂ, ಮರಗಳಿಂದಲೂ, ಅಂಗೈ ಗಳಿಂದಲೂ, ಕಾಲುಗಳಿಂದಲೂ, ಮುಷ್ಟಿಗಳಿಂದಲೂ, ಮಹಾಕಾಯನಾದ ಕುಂಭಕರ್ಣನನ್ನು ಸುತ್ತಿಮುತ್ತಿ ಹೊಡೆಯುತ್ತಿದ್ದರು. ಇಷ್ಟು ಮಂದಿಯೂ ಸೇರಿ ಏಕಕಾಲದಲ್ಲಿ ಪ್ರಹರಿಸುತ್ತಿದ್ದರೂ, ಇವರ ಪ್ರಹಾರಗಳೆಲ್ಲವೂ ಆತ ನಿಗೆ ಕೇವಲ ಸುಖಸ್ಪರ್ಶವಾಗಿ ತೋರುತ್ತಿತ್ತೇ ಹೊರತು ಸ್ವಲ್ಪವೂ ನೋವನ್ನುಂಟುಮಾಡಲಿಲ್ಲ. ಈ ನಡುವೆ ಕುಂಭಕರ್ಣನು ತನ್ನ ಎರಡು ತೋಳುಗಳನ್ನೂ ನೀಡಿ ಋಷಭನೆಂಬ ವಾನರನನ್ನು ಆ ತೋಳುಗಳ ನಡುವೆ ಸಿಕ್ಕಿಸಿಕೊಂಡನು. ಕುಂಭಕರ್ಣನ ತೋಳುಗಳಿಂದ ಪೀಡಿತನಾದ ಆ ಋಷಭನು ಬಾಯಿಂದ ರಕ್ತವನ್ನು ಕಕ್ಕುತ್ತ ಕೆಳಗೆ ಬಿದ್ದನು. ಹೀಗೆ ಋಷಭನನ್ನು ನಿಗ್ರಹಿಸಿದಮೇಲೆ ಕುಂಭಕರ್ಣನು ಮುಷ್ಟಿಯಿಂದ ಶರಭನನ್ನು ಹೊಡೆದನು. ಹೀಗೆಯೇ ಮೊಳಕಾಲಿನಿಂದ ನೀಲನನ್ನು ಗುದ್ದಿ, ಅಂಗೈಯಿಂದ ಗವಾಕ್ಷನನ್ನಪ್ಪಳಿಸಿ, ಕಾಲಿನಿಂದ ಗಂಧಮಾದನನ ನ್ನೊದೆದು ಕೆಡಹಿದನು. ಈ ಪ್ರಹಾರಗಳಿಂದ ಆ ವಾನರೋತ್ತಮರೂ

ಬ್ಬೊಬ್ಬರೂ ಪ್ರಜ್ಞೆತಪ್ಪಿ, ರಕ್ತದಿಂದ ತೊಯ್ದು ಮೈಯುಳ್ಳವರಾಗಿ, ಕಡಿದ ಮುತ್ತುಗದ ಮರದಂತೆ ಕೆಳಗೆ ಬಿದ್ದರು. ಹೀಗೆ ಮಹಾತ್ಮರಾದ ಐದುಮಂದಿ ವಾನರರೂ ಕೆಳಗೆ ಬಿದ್ದುದನ್ನು ನೋಡಿ, ಕೋಪವನ್ನು ತಡೆಯಲಾರದೆ, ಸಾವಿರಾರುಮಂದಿ ವಾನರರು ಗುಂಪಾಗಿ ಸೇರಿ ಕುಂಭ ಕರ್ಣನ ಮೇಲೆ ನುಗ್ಗಿದರು. ಪರ್ವತಾಕಾರವುಳ್ಳವರಾಗಿಯೂ, ಬಲಾಢ್ಯ ರಾಗಿಯೂ ಇದ್ದ ಆ ವಾನರವೀರರೆಲ್ಲರೂ ಪರ್ವತಶಿಖರಕ್ಕೆ ಹಾರುವಂತೆ ಕುಂಭಕರ್ಣನ ಮೇಲೆ ಹಾರಿಬಿದ್ದು, ಕೆಲವರು ಹಲ್ಲುಗಳಿಂದ ಕಡಿದರು. ಕೆಲವರು ಉಗುರುಗಳಿಂದ ಅವನ ಮೈಯನ್ನು ಪರಚಿದರು. ಕೆಲವರು ಮುಷ್ಟಿಗಳಿಂದ ಹೊಡೆದರು. ಕೆಲವರು ಮೊಳಕಾಲುಗಳಿಂದ ಗುದ್ದಿದರು. ಹೀಗೆ ಸಾವಿರಾರು ವಾನರರು ಮೈಮೇಲೆ ಬಿದ್ದು ಪೀಡಿಸುತ್ತಿದ್ದರೂ, ಪರ್ವತಾಕಾರವುಳ್ಳ ಆ ಕುಂಭಕರ್ಣನು ವೃಕ್ಷಗಳಿಂದ ತುಂಬಿದ ಬೆಟ್ಟ ದಂತೆ ಸ್ವಲ್ಪಮಾತ್ರವೂ ಕದಲದೆ ನಿಂತಿದ್ದನು. ಇಷ್ಟೇ ಅಲ್ಲದೆ, ಅವನು ಬಹಳ ಬಲಾಢ್ಯನಾದುದರಿಂದ ಗರುಡನು ಸರ್ಪಗಳನ್ನು ಭಕ್ಷಿಸುವಂತೆ, ತನ್ನ ಮೈಮೇಲೆ ಬಿದ್ದ ವಾನರನೊಬ್ಬೊಬ್ಬನನ್ನೂ ಭಕ್ಷಿಸುವುದಕಾರಂಭಿ ಸಿದನು. ಆದರೇನು? ಹೀಗೆ ಕುಂಭಕರ್ಣನು ವಾನರರನ್ನು ಒಬ್ಬೊಬ್ಬ ರನ್ನಾಗಿ ಹಿಡಿದು ಪಾತಾಳಬಿಲದಂತಿರುವ ತನ್ನ ಬಾಯಿಗೆ ಹಾಕಿಕೊಳ್ಳು ತ್ತಿರುವಾಗಲೇ, ಅವರು ಅವನ ಮೂಗಿನ ರಂಧ್ರಗಳಿಂದಲೂ, ಕಿವಿಗಳಿಂ ದಲೂ, ಹೊರಗೆ ಬರುತ್ತಿದ್ದರು. ಕುಂಭಕರ್ಣನಾದರೋ ತನ್ನ ಬಾಯಿಗೆ ಬಿದ್ದ ವಾನರರು ಕ್ಷಣಮಾತ್ರದಲ್ಲಿ ಹೊರಗೆ ಬರುವುದನ್ನು ನೋಡಿ ಮತ್ತಷ್ಟು ಕೋಪಭರಿತನಾಗಿ, ಆಯಾ ವಾನರರು ಕೈಗೆ ಸಿಕ್ಕಿದೊಡನೆಯೋ ಅವರನ್ನು ಕೊಂದು ಭಕ್ಷಿಸುವುದಕ್ಕೆ ತೊಡಗಿದನು. ಹೀಗೆ ಕುಂಭಕರ್ಣನು ಪ್ರಳಯಕಾಲಾಗ್ನಿಯಂತೆ ರೌದ್ರಾಕಾರವುಳ್ಳವನಾಗಿ ಕೋಪದಿಂದ ಮೈ ತಿಳಿಯದೆ ಆ ವಾನರಸೈನ್ಯ ಮಧ್ಯದಲ್ಲಿ ಸುತ್ತುತ್ತ ಆ ರಣಭೂಮಿಯೆಲ್ಲವೂ ಕಪಿಗಳ ರಕ್ತಮಾಂಸದಿಂದಲೇ ಮುಚ್ಚಿಹೋಗುವಂತೆ ಮಾಡಿದನು. ವಜ್ರಧಾರಿ ಯಾದ ದೇವೇಂದ್ರನಂತೆಯೂ, ಪಾಶಹಸ್ತನಾದ ಯಮನಂತೆಯೂ, ಆ ಕುಂಭ ಕರ್ಣನು ಶೂಲಪಾಣಿಯಾಗಿ ಯುದ್ಧರಂಗದಲ್ಲಿ ಬೆಳಗುತ್ತಿದ್ದನು. ಬೇಸಗೆಯಲ್ಲಿ ಕಾಡುಗಿಚ್ಚು ಒಣಗಿದ ಕಾಡನ್ನು ದಹಿಸುವಂತೆ ಕುಂಭಕರ್ಣನು ಕ್ಷಣಮಾತ್ರ

ದಲ್ಲಿಅನೇಕರನ್ನು ದಹಿಸಿಬಿಟ್ಟನು. ಹೀಗೆ ಕುಂಭಕರ್ಣನ ಪ್ರಹಾರದಿಂದ ಅನೇಕ ವಾನರಸೈನ್ಯಗಳು ಹತವಾದುವು. ಇದರಿಂದ ಆ ವಾನರರೆಲ್ಲರೂ ಚದರಿ, ಅನಾಥರಾಗಿ ಭಯದಿಂದ ಕೊರಗುತ್ತ ದೀನಸ್ವರದಿಂದ ಕೂಗು ವುದಕ್ಕೆ ತೊಡಗಿದರು. ಕುಂಭಕರ್ಣನ ಪ್ರಹಾರವನ್ನು ತಡೆಯಲಾರದೆ ಅನೇಕ ವಾನರರು ರಾಮನ ಬಳಿಗೆ ಬಂದು ಅವನಲ್ಲಿ ಮರೆಹೊಕ್ಕರು. ಹೀಗೆ ವಾನರರಿಗುಂಟಾದ ಭಂಗವನ್ನು ನೋಡಿ ವಾಲಿಪುತ್ರನಾದ ಅಂಗದನು ತಾನೇ ವೇಗದಿಂದ ಮುಂದೆ ಹೋಗಿ ಕುಂಭಕರ್ಣನನ್ನಿದಿರಿಸಿದನು. ಆ ಅಂಗದನು ಒಂದು ದೊಡ್ಡ ಪರ್ವತಶಿಖರವನ್ನು ಕೈಗೆತ್ತಿಕೊಂಡು ಕುಂಭ ಕರ್ಣನ ಸುತ್ತಲೂ ನಿಂತಿದ್ದ ಸಮಸ್ತ ರಾಕ್ಷಸರನ್ನೂ, ತನ್ನ ಸಿಂಹನಾದ ದಿಂದಲೇ ಹೆದರಿಸುತ್ತ ಮುಂದೆ ನುಗ್ಗಿ, ತಾನು ತಂದಿದ್ದ ಪರ್ವತಶಿಖರ ವನ್ನು ಕುಂಭಕರ್ಣನ ನಡುನೆತ್ತಿಗೆ ಗುರಿಯಿಟ್ಟು ಬೀಸಿದನು. ಈ ಪರ್ವತವು ತಲೆಯ ಮೇಲೆ ಬಿದ್ದೊಡನೆ ಕುಂಭಕರ್ಣನಿಗೆ ಸಹಿಸಲಾರದ ಕೋಪವುಂಟಾಯಿತು. ಅವನು ತನ್ನ ಸಿಂಹನಾದದಿಂದಲೇ ಸಮಸ್ತ ವಾನರರನ್ನೂ ಹೆದರಿಸುತ್ತ ವಾಲಿಪುತ್ರನಾದ ಅಂಗದನಿಗಿದಿರಾಗಿ ಬಂದು ಕೋಪದಿಂದ ಆ ಅಂಗದನ ಮೇಲೆ ಶೂಲವನ್ನು ಬೀಸಿದನು. ಅಂಗದ ನಾದರೋ ಯುದ್ಧಮಾರ್ಗದಲ್ಲಿ ಬಹಳ ನಿಪುಣನಾಗಿಯೂ, ಬಲಾಢ್ಯನಾ ಗಿಯೂ ಇದ್ದುದರಿಂದ, ಈ ಕುಂಭಕರ್ಣನು ತನ್ನ ಮೇಲೆ ಬೀಸುವ ಸಂಚನ್ನು ಮೊದಲೇ ತಿಳಿದುಕೊಂಡು, ತನ್ನ ದೇಹಲಾಘವದಿಂದ ಆ ಶೂಲಪ್ರಹಾರವನ್ನು ತಪ್ಪಿಸಿಕೊಂಡುದಲ್ಲದೆ, ತಟ್ಟನೆ ಮೇಲೆ ಹಾರಿಬಂದು ತನ್ನ ಅಂಗೈಯಿಂದ ಕುಂಭಕರ್ಣನ ಎದೆಯನ್ನು ಅಪ್ಪಳಿಸಿದನು. ಕುಂಭ ಕರ್ಣನು ಬೆಟ್ಟದಂತೆ ಮಹಾಕಾಯವುಳ್ಳವನಾದರೂ ಈ ತಲಪ್ರಹಾರ ದಿಂದ ಪ್ರಜ್ಞೆ ತಪ್ಪಿದಂತಾಯಿತು. ಆದರೆ ಆ ರಾಕ್ಷಸನು ಬಹಳ ಬಲಾಢ್ಯ ನಾದುದರಿಂದ, ಒಡನೆಯೇ ಚೇತರಿಸಿಕೊಂಡು ತನ್ನ ಮುಷ್ಟಿಯನ್ನು ತಿರುಗಿಸಿ ಹಿಡಿದು, ಅಂಗೈಯಿಂದ ಅಂಗದನನ್ನು ಅಪ್ಪಳಿಸಿ ಹೊಡೆದನು. ಈ ಪ್ರಹಾರವನ್ನು ತಡೆಯಲಾರದೆ ಅಂಗದನು ಮೂರ್ಛಿತನಾಗಿ ನೆಲದ ಮೇಲೆ ಬಿದ್ದೊಡನೆ ಕುಂಭಕರ್ಣನು ಶೂಲವನ್ನೆತ್ತಿಕೊಂಡು ಸುಗ್ರೀವನಿ ಗಿದಿರಾಗಿ ಹೋದನು. ಆಗ ಕಪಿರಾಜನಾದ ಸುಗ್ರೀವನು ಮಹಾಬಲ

ವುಳ್ಳ ಕುಂಭಕರ್ಣನು ತನಗಿದಿರಾಗಿ ಬರುವುದನ್ನು ನೋಡಿ ಯುದ್ಧೋತ್ಸಾಹದಿಂದ ತಟ್ಟನೆ ಹಾರಿ, ಒಂದು ಪರ್ವತಶಿಖರವನ್ನು ಕಿತ್ತುತಂದು ಗರಗರನೆ ತಿರುಗಿಸುತ್ತ ಕುಂಭಕರ್ಣನನ್ನಿದಿರಿಸಿ ಹೋದನು. ಇದನ್ನು ನೋಡಿ ಕುಂಭಕರ್ಣನು ವಿಸ್ತೃತವಾದ ಸರ್ವಾವಯವವುಳ್ಳವನಾಗಿ ಸುಗ್ರೀವನಿದಿರಿಗೆ ಬಂದು ನಿಂತನು. ಅನೇಕ ವಾನರರನ್ನು ಭಕ್ಷಿಸಿ ಆ ವಾನರರ ರಕ್ತದಿಂದ ತೊಯ್ದ ಮೈಯುಳ್ಳ ಕುಂಭಕರ್ಣನು ಬಂದು ಮುಂದೆ ನಿಂತುದನ್ನು ನೋಡಿ ಸುಗ್ರೀವನು ಅವನನ್ನು ಕುರಿತು "ಎಲೆ ಕುಂಭಕರ್ಣಾ! ನೀನಾದರೋ ಇದುವರೆಗೆ ಅನೇಕ ವಾನವೀರರನ್ನು ಕೊಂದು, ಬೇರೆಯುವರಿಗೆ ಸಾಧ್ಯವಲ್ಲದ ಕಾರ್ಯವನ್ನು ನಡೆಸಿದೆ! ಎಷ್ಟೋ ವಾನರ ಸೈನ್ಯವನ್ನು ಭಕ್ಷಿಸಿದೆ! ಇದರಿಂದ ದೊಡ್ಡ ಕೀರ್ತಿಯನ್ನೂ ಪಡೆದೆ! ಎಲೆ ರಾಕ್ಷಸಾ! ಈ ವಾನರಸಮೂಹವನ್ನು ಬಿಡು! ವೀರನಾದ ನಿನಗೆ ಆ ಕ್ಷುದ್ರಕಪಿಗಳೊಡನೆ ಹೋರಾಟವೇಕೆ? ಇದೋ! ಇಲ್ಲಿ ಬಾ! ಈಗ ನಾನು ಈ ಪರ್ವತವನ್ನು ನಿನ್ನ ಮೇಲೆ ಪ್ರಯೋಗಿಸುವೆನು. ಇದೊಂದು ಪ್ರಹಾರವನ್ನು ಸಹಿಸು!" ಎಂದನು. ಹೀಗೆ ವಾನರರಾಜನಾದ ಸುಗ್ರೀವನು, ತನ್ನ ಶಕ್ತಿಗೂ ಧೈರ್ಯಕ್ಕೂ ತಕ್ಕಂತೆ ಹೇಳಿದ ಮಾತನ್ನು ಕೇಳಿ, ರಾಕ್ಷಸಸಿಂಹನಾದ ಕುಂಭಕರ್ಣನು ಅವನನ್ನು ಕುರಿತು "ಎಲೆ ವಾನರಾ! *

---

* "ಪ್ರಜಾಪತೇಸ್ತು ಪೌತ್ರಃ" ಎಂದು ಮೂಲವು—ಪೂರ್ವದಲ್ಲಿ ಬ್ರಹ್ಮನು ಆಕಳಿಸುವಾಗ ಅವನ ಮುಖದಿಂದ ಋಕ್ಷರಜಸ್ಸೆಂಬ ವಾನರನು ಹುಟ್ಟಿದನು. ಈ ವಾನರನು ಅಲ್ಲಲ್ಲಿ ಸುತ್ತುತ್ತ, ಒಮ್ಮೆ ಬ್ರಹ್ಮಲೋಕದಲ್ಲಿ ಅಪ್ಸರೋರೂಪವನ್ನುಂಟು ಮಾಡತಕ್ಕ ಒಂದಾನೊಂದು ಸರಸ್ಸಿನಲ್ಲಿ ಸ್ನಾನಕ್ಕಿಳಿದು, ಅಪ್ಸರೋರೂಪವನ್ನು ಹೊಂದಿದನು. ಈ ರೂಪವನ್ನು ನೋಡಿ ಇಂದ್ರಸೂರ್ಯರಿಬ್ಬರೂ ಮೋಹಿತರಾಗಿ, ಏಕಕಾಲದಲ್ಲಿ ಬಂದು ಅವಳ ಕೈಯನ್ನು ಹಿಡಿದರು. ಇವರ ಸಂಬಂಧದಿಂದ (ವಾಲದಲ್ಲಿಯೂ, ಕಂಠದಲ್ಲಿಯೂ ಬಿದ್ದ ಇವರಿಬ್ಬರ ವೀರ್ಯಸಂಬಂಧದಿಂದ) ಆ ಅಪ್ಸರಸ್ಸಿಗೆ ಆಗಲೇ ವಾಲಿಸುಗ್ರೀವರೆಂಬ ಮಕ್ಕಳಿಬ್ಬರು ಹುಟ್ಟಿದರು. ಬ್ರಹ್ಮನು ಇದನ್ನು ನೋಡಿ ನಗುತ್ತ, ಆ ಋಕ್ಷರಜಸ್ಸಿಗೂ, ಆ ಕುಮಾರರಿಗೂ ಮೊದಲಿನ ರೂಪವನ್ನು ಹೊಂದಿಸುವುದಕ್ಕಾಗಿ ಬೇರೊಂದು ಕೊಳದಲ್ಲಿ ಮುಳುಗಿಸಿ, ಮೊದಲಿನಂತೆ ವಾನರ ರೂಪವನ್ನು ಹೊಂದಿಸಿದನು. ಇದರಿಂದ ವಾಲಿಸುಗ್ರೀವರಿಬ್ಬರೂ ಬ್ರಹ್ಮನ

ನೀನು ಬ್ರಹ್ಮದೇವನ ಮುಮ್ಮಗನೆಂದೂ, ಬ್ರಹ್ಮಪುತ್ರನಾದ ಋಕ್ಷರಜಸ್ಸಿಗೆ ಹುಟ್ಟಿದವನೆಂದೂ, ಬಹಳ ಪ್ರಖ್ಯಾತನಾದ ಪರಾಕ್ರಮಸಂಪತ್ತಿಯುಳ್ಳವನೆಂದೂ ನಾನು ಮೊದಲೇ ಚೆನ್ನಾಗಿ ಬಲ್ಲೆನು. ನೀನೇಕೆ ಹೀಗೆ ಗರ್ಜಿಸುವೆ" ಎಂದನು. ಈ ಮಾತನ್ನು ಕೇಳಿದೊಡನೆ ಸುಗ್ರೀವನು ಇಂದ್ರನ ವಜ್ರಾಯುಧಕ್ಕೂ, ಸಿಡಿಲಿಗೂ ಸಮಾನವಾದ ಆ ಪರ್ವತವನ್ನು ಗರಗರನೆ ತಿರುಗಿಸಿ ಕುಂಭಕರ್ಣನ ಎದೆಗೆ ಗುರಿಯಿಟ್ಟು ಪ್ರಯೋಗಿಸಿದನು. ಈ ಮಹಾಪರ್ವತಶಿಖರವೂ ಕೂಡ ಕುಂಭಕರ್ಣನ ಎದೆಗೆ ತಗುಲಿದೊಡನೆ ಚೂರ್ಣವಾಗಿ ಬಿದ್ದಿತು. ಇದನ್ನು ನೋಡಿ ವಾನರರೆಲ್ಲರೂ ವಿಷಾದವನ್ನು ಹೊಂದಿದರು. ರಾಕ್ಷಸಸೈನಿಕರೆಲ್ಲರೂ ಸಂತೋಷದಿಂದ ಸಿಂಹನಾದ ಮಾಡಿದರು. ಈ ಪರ್ವತಪ್ರಹಾರದಿಂದ ಕುಂಭಕರ್ಣನಿಗೆ ಮತ್ತಷ್ಟು ಕೋಪವು ಹೆಚ್ಚಿತು. ಈ ಕೋಪದಿಂದ ಅವನು ದೊಡ್ಡದಾಗಿ ಬಾಯಿ ತೆರೆದು ಕೂಗುತ್ತಾ ಮಿಂಚಿನಂತೆ ಹೊಳೆಯುತ್ತಿದ್ದ ಶೂಲವನ್ನು ಗರಗರನೆ ತಿರುಗಿಸಿ, ಸುಗ್ರೀವನನ್ನು ಆ ಒಂದೇ ಪ್ರಹಾರಕ್ಕೆ ಕೊಂದುಬಿಡಬೇಕೆಂದು ಅವನ ಮೇಲೆ ಪ್ರಯೋಗಿಸಿದನು. ಇದನ್ನು ನೋಡುತ್ತಿದ್ದ ಹನುಮಂತನು, ಆ ಕ್ಷಣವೇ ಮುಂದೆ ಬಂದು, ಕುಂಭಕರ್ಣನು ಶಕ್ತಿಮೀರಿ ಬೀಸಿದ ಬಂಗಾರದ ಕಟ್ಟುಳ್ಳ ಆ ತೀಕ್ಷ್ಣಶೂಲವು ಸುಗ್ರೀವನ ಮೇಲೆ ಬೀಳದಂತೆ ಅದಕ್ಕಡ್ಡಲಾಗಿ ಹಾರಿ ನಿಂತು, ತನ್ನ ಎರಡು ಕೈಗಳಿಂದಲೂ ಅದನ್ನಾತುಕೊಂಡನು. ಮತ್ತು ವಾನರಶ್ರೇಷ್ಠನಾದ ಆ ಹನುಮಂತನು ವೀರೋತ್ಸಾಹದಿಂದುಕ್ಕುತ್ತ, ಸಹಸ್ರಭಾರದ ತೂಕವುಳ್ಳ ಆ ಉಕ್ಕಿನ ಶೂಲವನ್ನು ತನ್ನ ಮೊಳಕಾಲುಗಳಲ್ಲಿ ಮೆಟ್ಟಿ ಮುರಿದುಹಾಕಿದನು. ಈ ಹನುಮಂತನ ಮಹಾಸಾಹಸವನ್ನು ನೋಡಿ ಸಮಸ್ತ ವಾನರಸೈನ್ಯವೂ ಸಂತೋಷದಿಂದ ಬೊಬ್ಬೆಹಾಕಿತು. ನಾನಾಕಡೆಗಳಿಂದಲೂ ವಾನರರು ಓಡಿಬಂದರು. ಎಲ್ಲರೂ ಪರಮಸಂತೋಷದಿಂದ ಸಿಂಹನಾದಮಾಡಿದರು. ಆ ಶೂಲವು ಹಾಗಾದುದನ್ನು ನೋಡಿ, ಒಬ್ಬೊಬ್ಬರೂ ಆಂಜನೇಯನನ್ನು ಗೌರವಿಸಿ ಪೂಜಿಸುತ್ತಿದ್ದರು. ಇಷ್ಟರಲ್ಲಿ ಅತ್ತಲಾಗಿ ಕುಂಭಕರ್ಣನು, ತನ್ನ ಶೂಲವು

ಮುಮ್ಮಕ್ಕಳು. ಅಥವಾ ಕಶ್ಯಪ ಪ್ರಜಾಪತಿಯಿಂದ ಸೂರ್ಯನೂ, ಸೂರ್ಯನಿಂದ ಸುಗ್ರೀವನೂ ಹುಟ್ಟಿದುದರಿಂದ, ಪ್ರಜಾಪತಿ ಪೌತ್ರನೆಂದೂ ಗ್ರಹಿಸಬಹುದು.

ಆಂಜನೇಯನಿಂದ ಭಗ್ನವಾದುದನ್ನು ನೋಡಿ ತಡೆಯಲಾರದ ಕೋಪ ವನ್ನು ಹೊಂದಿ, * ಲಂಕಾಮಲಯಪರ್ವತದ ಮೇಲಿನ ಒಂದು ಶಿಖರ ವನ್ನು ಕಿತ್ತುಕೊಂಡು, ಸುಗ್ರೀವನಿದಿರಾಗಿ ಬಂದು ಅದನ್ನು ಅವನ ಮೇಲೆ ಬೀಸಿದನು. ಆ ಶಿಖರವು ಮೇಲೆ ಬಿದ್ದೊಡನೆ ಸುಗ್ರೀವನು ಅದರ ಪ್ರಹಾರ ದಿಂದ ಮೂರ್ಛಿತನಾಗಿ ನೆಲಕ್ಕೆ ಬಿದ್ದನು. ಸುಗ್ರೀವನು ಪ್ರಜ್ಞೆತಪ್ಪಿ ಬಿದ್ದುದನ್ನು ನೋಡಿ ರಾಕ್ಷಸರೆಲ್ಲರೂ ಸಂತೋಷದಿಂದ ಸಿಂಹನಾದಮಾಡಿ ದರು. ವಾನರರು ದುಃಖಪಡುತ್ತಿದ್ದರು. ಇಷ್ಟರಲ್ಲಿ ಕುಂಭಕರ್ಣನು ತನ್ನ ಪ್ರಹಾರದಿಂದ ಮೈಮರೆತು ಬಿದ್ದಿದ್ದ ಸುಗ್ರೀವನ ಬಳಿಗೆ ಬಂದು, ಬಿರು ಗಾಳಿಯು-ಆಕಾಶದಲ್ಲಿ ಮೇಘಗಳನ್ನು ಸಾಗಿಸಿಕೊಂಡು ಹೋಗುವಂತೆ ವೇಗ ದಿಂದ ಆ ಸುಗ್ರೀವನನ್ನೆತ್ತಿಕೊಂಡು ಹೊರಟನು. ಮೇರುಪರ್ವತದಂತೆ ಮಹಾಕಾರವುಳ್ಳ ಆ ಕುಂಭಕರ್ಣನು, ಮೇಘದಂತಿದ್ದ ಆ ಸುಗ್ರೀವನನ್ನೆತ್ತಿ ಕೊಂಡು ಹೋಗುವಾಗ ದೊಡ್ಡ ಶಿಖರದಿಂದ ಶೋಭಿಸುವ ಮಹಾ ಮೇರುವಿನಂತೆಯೇ ಕಾಣುತ್ತಿದ್ದನು. ಹೀಗೆ ವೀರನಾದ ಕುಂಭಕರ್ಣನು ಸುಗ್ರೀವನನ್ನೆತ್ತಿಕೊಂಡು ಹೋಗುವಾಗ, ಆ ರಣರಂಗದಲ್ಲಿ ರಾಕ್ಷಸವೀರ ರೆಲ್ಲರೂ ಸಂತೋಷದಿಂದ ಆತನನ್ನು ನಾನಾವಿಧವಾಗಿ ಹೊಗಳುತ್ತಿದ್ದರು. ಸುಗ್ರೀವನು ಕುಂಭಕರ್ಣನ ಕೈಗೆ ಸಿಕ್ಕಿಬಿದ್ದುದನ್ನು ನೋಡಿ ಆಕಾಶದಲ್ಲಿದ್ದ ದೇವತೆಗಳೆಲ್ಲರೂ ಭಯಾಶ್ಚರ್ಯಗಳಿಂದ ಹಾಹಾಕಾರಗಳನ್ನು ಮಾಡು ತ್ತಿದ್ದರು. ಕುಂಭಕರ್ಣನು ಇವೆಲ್ಲವನ್ನೂ ಕೇಳುತ್ತ, ದೇವೇಂದ್ರಸಮಾನ ನಾದ ಆ ವಾನರರಾಜನನ್ನು ತಾನು ಕೈಯಲ್ಲಿ ಹಿಡಿದಿದ್ದ ಹಾಗೆಯೇ ಮುಂದೆ ಮುಂದೆ ಸಾಗಿ, ತನ್ನಲ್ಲಿ ತಾನು "ಭಲೆ! ಇನ್ನು ನಮ್ಮ ಕಾರ್ಯ ವಾಯಿತು! ವಾನರರಿಗೆ ಪ್ರಧಾನರಾಜನಾದ ಈತನನ್ನು ಲಂಕೆಗೆ ಸಾಗಿಸಿ ಬಿಟ್ಟರೆ, ರಾಮಲಕ್ಷ್ಮಣರೊಡಗೂಡಿದ ಈ ಸಮಸ್ತ ವಾನರಸೈನ್ಯವನ್ನೂ ಹಿಡಿದಂತೆಯೇ ಆಗುವುದು" ಎಂದು ತನ್ನಲ್ಲಿ ತಾನೇ ಸಂತೋಷದಿಂದುಕ್ಕು ತ್ತಿದ್ದನು. ಇತ್ತಲಾಗಿ ವಾನರಸೈನ್ಯವೆಲ್ಲವೂ ಭಯದಿಂದ ಚದರುತ್ತಿತ್ತು.

* "ತ್ರಿಕೂಟಾಗ್ರದಲ್ಲಿ ಲಂಕಾದ್ವಾರದಲ್ಲಿದ್ದ ಕುಂಭಕರ್ಣನು, ಬೇರೊಂದು ಕಡೆ ಯಲ್ಲಿರುವ ಲಂಕಾಮಲಯಪರ್ವತಶಿಖರವನ್ನು ಕೀಳುವುದು ಹೇಗೆ?" ಎಂದರೆ, ಆಗ ಅವನು ಆ ಕಾರ್ಯಕ್ಕೆ ತಕ್ಕಷ್ಟು ದೊಡ್ಡ ದೇಹವನ್ನೇ ತಾಳಿದ್ದನೆಂದು ಗ್ರಾಹ್ಯವು.

ಹೀಗೆ ಸುಗ್ರೀವನು ಕುಂಭಕರ್ಣನ ಕೈಗೆ ಸಿಕ್ಕಿಬಿದ್ದುದನ್ನೂ, ಇತ್ತಲಾಗಿ ವಾನರಸೈನ್ಯವು ಭಯದಿಂದ ಪಲಾಯನಮಾಡುವುದನ್ನೂ ವಾಯುಪುತ್ರನಾದ ಹನುಮಂತನು ನೋಡಿದನು. ಆ ಹನುಮಂತನು ಬಹಳ ಬಲವಂತನಾದುದರಿಂದ, ಆಗ ತನ್ನಲ್ಲಿ ತಾನು "ಆಹಾ! ಸುಗ್ರೀವನು ರಾಕ್ಷಸನ ಕೈಗೆ ಸಿಕ್ಕಿಬಿಟ್ಟನು. ವಾನರರಾಜನಾದ ಸುಗ್ರೀವನಿಗೆ, ಈ ಅವಸ್ಥೆಯುಂಟಾದಮೇಲೆ ಇನ್ನು ನಮ್ಮ ಪಾಡೇನು? ಈಗ ನಾನು ಮಾಡಬೇಕಾದುದೇನು? ಆದರೇನು? ಇರಲಿ! ಈ ಕಾಲಕ್ಕೆ ಹೇಗೆ ಮಾಡುವುದು ನ್ಯಾಯವೋ ಹಾಗೆಯೇ ಮಾಡುವೆನು. ಈಗಲೇ ನನ್ನ ದೇಹವನ್ನು ಪರ್ವತಾಕಾರವಾಗಿ ಬೆಳೆಸಿ ಈ ರಾಕ್ಷಸನನ್ನು ನಾಶಮಾಡುವೆನು. ನಾನು ಈ ಯುದ್ಧದಲ್ಲಿಯೇ ಮಹಾಬಲಾಢ್ಯನಾದ ಕುಂಭಕರ್ಣನನ್ನು ನನ್ನ ಮುಷ್ಟಿಯಿಂದ ಹೊಡೆದು ಅವನ ದೇಹವನ್ನು ನಜ್ಜುಗುಜ್ಜಾಗಿ ಮಾಡಿ, ಅವನ ಪ್ರಾಣವನ್ನು ನೀಗಿಸಿ, ನಮ್ಮ ಪ್ರಭುವಾದ ಆ ಸುಗ್ರೀವನನ್ನು ಬಿಡಿಸಿಕೊಂಡು ಬಂದಹೊರತು ಈ ಸಮಸ್ತ ವಾನರರಿಗೂ ಸಂತೋಷವನ್ನು ಹುಟ್ಟಿಸುವುದಕ್ಕೆ ಬೇರೆ ದಾರಿಯಿಲ್ಲ. ಹಾಗೆಯೇ ಮಾಡುವೆನು. ಅಥವಾ ನಮ್ಮ ಪ್ರಭುವಾದ ಈ ಸುಗ್ರೀವನನ್ನು ದೇವದಾನವಪನ್ನಗರಲ್ಲಿ ಯಾರೋ ಹಿಡಿದುಕೊಂಡು ಹೋದರೂ, ಅವನು ತಾನಾಗಿಯೇ ತಪ್ಪಿಸಿಕೊಂಡು ಬರುವುದಕ್ಕೂ ಸಮರ್ಥನು. ಆದರೆ ಪ್ರಕೃತದಲ್ಲಿ ಕುಂಭಕರ್ಣನು ಪ್ರಯೋಗಿಸಿದ ಪರ್ವತಶಿಖರದ ಪ್ರಹಾರದಿಂದ ಈ ಸುಗ್ರೀವನು ಬಹಳವಾಗಿ ನೊಂದು, ಮೈಮೇಲೆ ಪ್ರಜ್ಞೆಯಿಲ್ಲದಿರುವನೆಂದು ತೋರುವುದು. ಹಾಗಿಲ್ಲದ ಪಕ್ಷದಲ್ಲಿ ಅವನು ಇಷ್ಟರಲ್ಲಿ ತಾನಾಗಿಯೇ ಬಿಡಿಸಿಕೊಂಡು ಬರುತ್ತಿದ್ದನು. ಈಗಲೂ ಚಿಂತೆಯಿಲ್ಲ. ಇನ್ನು ಮುಹೂರ್ತಕಾಲದೊಳಗಾಗಿಯೇ ಈತನು ಚೇತರಿಸಿಕೊಂಡು, ತನಗೂ, ತನ್ನ ಕಡೆಯ ವಾನರರಿಗೂ ಕ್ಷೇಮವನ್ನು ತರುವುದರಲ್ಲಿ ಸಂದೇಹವಿಲ್ಲ. ಅಥವಾ ಈಗ ನಾನೇ ಹೋಗಿ ಅವರನ್ನು ಬಿಡಿಸಿ ಕರೆತರಬಹುದು. ಆದರೆ ಅದು ನ್ಯಾಯವಲ್ಲ. ಈಗ ನಾನು ನನ್ನ ಪರಾಕ್ರಮದಿಂದ ಅವನನ್ನು ಬಿಡಿಸಿದ ಪಕ್ಷದಲ್ಲಿ, ಮಹಾಪರಾಕ್ರಮಿಯಾದ ಅವನ ಮನಸ್ಸಿಗೆ ಅಸಮಾಧಾನವುಂಟಾಗುವುದು. ಅವನ ಕೀರ್ತಿಯೂ ಕೆಡುವುದು. ಆದುದರಿಂದ ನಾನು ಇನ್ನೂ ಸ್ವಲ್ಪ

ಕಾಲದವರೆಗೆ ನಿರೀಕ್ಷಿಸಿ ನೋಡುವೆನು. ಈ ಸುಗ್ರೀವನು ತಾನಾಗಿ ತನ್ನ ಪರಾಕ್ರಮವನ್ನು ಪ್ರಯೋಗಿಸುವವರೆಗೂ ಕಾದಿರುವೆನು. ಅಷ್ಟರೊಳ ಗಾಗಿ ಇತ್ತಲಾಗಿ ಭಯದಿಂದ ಚದರುತ್ತಿರುವ ವಾನರಸೈನ್ಯವನ್ನು ಸಮಾ ಧಾನಪಡಿಸುತ್ತಿರುವೆನು" ಎಂದು ನಿಶ್ಚಯಿಸಿಕೊಂಡನು. ವಾಯುಪುತ್ರ ನಾದ ಹನುಮಂತನು ಹೀಗೆಂದು ಮನಸ್ಸಿನಲ್ಲಿ ನಿರ್ಧರಿಸಿಕೊಂಡನು. ಇಷ್ಟ ರಲ್ಲಿ ಅತ್ತಲಾಗಿ ಕುಂಭಕರ್ಣನು ಅತ್ತಿತ್ತ ಹೊರಳಾಡುತ್ತಿದ್ದ ಸುಗ್ರೀವ ನನ್ನು ದೃಢವಾಗಿ ತೋಳುಗಳಿಂದ ಹಿಡಿದು ಎತ್ತಿಕೊಂಡು ಹೋಗುತ್ತಿದ್ದನು. ಇವನು ಹೋಗುವ ದಾರಿಯಲ್ಲಿ ಉಪ್ಪರಿಗೆಗಳ ಮೇಲೆಯೂ, ಚರ್ಯಾಗೃಹ ಗಳಲ್ಲಿಯೂ, ಗೋಪುರದ್ವಾರಗಳಲ್ಲಿಯೂ ಇದ್ದ ಅನೇಕ ರಾಕ್ಷಸರು ಇವನ ಮೇಲೆ ಸಂತೋಷದಿಂದ ಪುಷ್ಪವರ್ಷವನ್ನು ಕರೆಯುತ್ತಿದ್ದರು. ಹೀಗೆ ಮಹಾವೈಭವದಿಂದ ನಾನಾವಿಧವಾಗಿ ಕುಂಭಕರ್ಣನನ್ನು ಉಪಚರಿಸುವು ದಕ್ಕೆ ತೊಡಗಿ, ಕುಂಭಕರ್ಣನ ಮೇಲೆ, ಲಾಜಗಳನ್ನೂ, ಸುಗಂಧದ ನೀರನ್ನೂ ಚಲ್ಲುತ್ತಿದ್ದರು. ಇವನು ಬರುವ ಪುರಮಾರ್ಗಗಳನ್ನು ಸುಗಂಧ ಶೀತಲವಾದ ನೀರಿನಿಂದ ತಂಪೇರಿಸುತ್ತಿದ್ದರು. ಈ ಶೈತ್ಯೋಪಚಾರಗ ಳಿಂದ ಸುಗ್ರೀವನಿಗೆ ಮೆಲ್ಲಮೆಲ್ಲಗೆ ಮೂರ್ಛೆಯು ತಿಳಿಯಿತು. ಮಹಾ ಧೀರನಾದ ಸುಗ್ರೀವನು ಬಹಳ ಪ್ರಯತ್ನದಿಂದ ಪ್ರಜ್ಞೆಹೊಂದಿ, ಆ ಕುಂಭಕರ್ಣನ ಎದೆಯಲ್ಲಿದ್ದಂತೆಯೇ ಲಂಕಾಪುರದ ರಾಜಮಾರ್ಗಗಳ ಸೊಗಸನ್ನು ನೋಡುತ್ತ ಬಂದನು. ಕೊನೆಗೆ ಆ ಸುಗ್ರೀವನು ತನ್ನಲ್ಲಿ ತಾನು, "ನಾನಾದರೋ ಈಗ ಈ ರಾಕ್ಷಸನ ಕೈಗೆ ಸಿಕ್ಕಿಬಿದ್ದಿರುವೆನು. ಈಗಲೇ ಇದಕ್ಕೆ ತಕ್ಕ ಪ್ರತೀಕಾರವನ್ನುಮಾಡಿ ತಪ್ಪಿಸಿಕೊಂಡು ಹೋಗ ಬೇಕು. ಇದಕ್ಕೆ ಉಪಾಯವೇನು ? ಇರಲಿ ! ಈಗ ಯಾವಕಾರ್ಯ ಮಾಡಿದರೆ ನಮ್ಮ ಸಮಸ್ತ ವಾನರರಿಗೂ ಹಿತವಾಗಿಯೂ, ಇಷ್ಟವಾ ಗಿಯೂ ಇರುವುದೋ ಅದರಂತೆಯೇ ಏನಾದರೂ ಒಂದುಪಾಯವನ್ನು ಮಾಡುವೆನು" ಎಂದು ನಿಶ್ಚಯಿಸಿದನು. ಹೀಗೆ ಆಲೋಚಿಸುತ್ತಿದ್ದ ಹಾಗೆಯೇ ಆ ಸುಗ್ರೀವನು ತನ್ನ ತೀಕ್ಷ್ಣವಾದ ಕೈಯುಗುರುಗಳಿಂದ ತಟ್ಟನೆ ಆ ರಾಕ್ಷಸನ ಕಿವಿಗಳೆರಡನ್ನೂ ಪರಚಿ, ಹಲ್ಲುಗಳಿಂದ ಅವನ ಮೂಗನ್ನು ಕಡಿದು, ತನ್ನ ಎರಡು ಕಾಲುಗಳಿಂದಲೂ ಆ ರಾಕ್ಷಸನ

ಕಿವಿ, ಮೂಗು, ಪಾರ್ಶ್ವಗಳನ್ನು ಕಚ್ಚಿ ಗಾಯಮಾಡಿದನು. ಹೀಗೆ ಕುಂಭಕರ್ಣನಿಗೆ ಕಿವಿಮೂಗುಗಳು ಹರಿದು ಪಾರ್ಶ್ವಗಳಲ್ಲಿ ರಕ್ತವು ಚಿಮ್ಮುತ್ತಿರಲು ಅವನಿಗೆ ತಡೆಯಲಾರದ ಕೋಪವುಂಟಾಯಿತು. ಆ ಕೋಪದಿಂದ ಸುಗ್ರೀವನನ್ನು ಗರಗರನೆ ತಿರುಗಿಸಿ ನೆಲಕ್ಕೆ ಬಡಿದು ತುಳಿದನು. ಹೀಗೆ ಕುಂಭಕರ್ಣನು ನೆಲಕ್ಕೆ ಬಡಿದು ತುಳಿದರೂ, ರಾಕ್ಷಸರು ಸುತ್ತಲೂ ಸೇರಿ ಹೊಡೆಯುತ್ತಿದ್ದರೂ, ಸುಗ್ರೀವನು ಒಂದಕ್ಕೂ ಲಕ್ಷ್ಯಮಾಡದೆ ತಟ್ಟನೆ ಪುಟಹಾರಿ ಅಂತರಿಕ್ಷಕ್ಕೆ ನೆಗೆದು ಹಿಂತಿರುಗಿ ರಾಮನ ಬಳಿಗೆ ಬಂದು ಸೇರಿದನು. ಇತ್ತಲಾಗಿ ಕುಂಭಕರ್ಣನು ಕಿವಿಮೂಗು ಹರಿದು, ದೇಹದಿಂದ ರಕ್ತವನ್ನು ಕಾರುತ್ತ ಗಿರಿನದಿಗಳ ಪ್ರವಾಹದಿಂದ ಕೂಡಿದ ಪರ್ವತದಂತೆ ಕಾಣುತ್ತಿದ್ದನು. ಕುಂಭಕರ್ಣನು ಮಹಾಪರಾಕ್ರಮವುಳ್ಳವನಾದುದರಿಂದ, ತನ್ನ ಅಂಗಾಂಗಗಳಲ್ಲಿಯೂ ರಕ್ತವು ಸುರಿಯುತ್ತಿರುವಾಗಲೂ ಆ ನೋವನ್ನು ಲಕ್ಷ್ಯಮಾಡದೆ, ಹಾಗೆಯೇ ಹಿಂತಿರುಗಿ ಯುದ್ಧರಂಗಕ್ಕೆ ಬಂದು, ಯುದ್ಧವನ್ನು ನಡೆಸಬೇಕೆಂದು ನಿಶ್ಚಯಿಸಿಕೊಂಡನು. ಕಾಡಿಗೆಯ ರಾಶಿಯಂತೆ ಕಪ್ಪುಮೈಯುಳ್ಳ ಆ ಕುಂಭಕರ್ಣನು, ಕೋಪದಿಂದ ಕೆಂಪೇರಿದ ಮುಖವುಳ್ಳವನಾಗಿ ಸರ್ವಾಂಗಗಳಲ್ಲಿಯೂ ರಕ್ತವನ್ನು ಕಾರುತ್ತಾ ಸಂಜೆಯ ಮೇಘದಂತೆ ತೋರುತ್ತಿದ್ದನು. ಸುಗ್ರೀವನು ತನ್ನ ಕೈಯಿಂದ ತಪ್ಪಿಸಿಕೊಂಡು ಹೋದುದಕ್ಕಾಗಿ ಅತ್ಯಂತ ಕೋಪಾವೇಶವನ್ನು ಹೊಂದಿ, ರೌದ್ರಾಕಾರವನ್ನು ತಾಳಿ ಯುದ್ಧಾತುರದಿಂದ ಬರುವಾಗ, ತಾನು ನಿರಾಯುಧನಾಗಿರುವುದನ್ನು ತಿಳಿದು ಕೂಡಲೇ ಭಯಂಕರವಾದ ಒಂದು ಮುದ್ಗರವನ್ನು ತರಿಸಿ ಕೈಗೆತ್ತಿಕೊಂಡು ಹೊರಟನು. ಮಹಾತೇಜಸ್ವಿಯಾದ ಆ ಕುಂಭಕರ್ಣನು ಲಂಕೆಯನ್ನು ಬಿಟ್ಟು ವೇಗದಿಂದ ಹೊರಟು ಕ್ರೂರವಾದ ವಾನರಸೈನ್ಯವನ್ನು ಪ್ರವೇಶಿಸಿ, ಉರಿಯುವ ಪ್ರಳಯಕಾಲಾಗ್ನಿಯು ಪ್ರಜೆಗಳನ್ನು ಆಹುತಿಯಾಗಿ ತೆಗೆದುಕೊಳ್ಳುವಂತೆ, ಆ ವಾನರರ ರಕ್ತಮಾಂಸಗಳನ್ನು ತಿನ್ನಬೇಕೆಂಬ ಆಶೆಯಿಂದ, ಕೈಗೆ ಸಿಕ್ಕಿದ ವಾನರರನ್ನು ಹಿಡಿದು ಭಕ್ಷಿಸುತ್ತ ಬಂದನು. ಕೋಪದಿಂದಲೂ ಹಸಿವಿನಿಂದಲೂ ಪೀಡಿತನಾದ ಆ ಕುಂಭಕರ್ಣನು, ಕಾಲಮೃತ್ಯುವು ಲೋಕವನ್ನು ನಾಶಮಾಡುವಂತೆ

ತನ್ನವರೆಂದೂ, ಶತ್ರುಗಳೆಂದೂ ಯೋಚಿಸದೆ, ಅಲ್ಲಲ್ಲಿ ಸಿಕ್ಕಿದ ರಾಕ್ಷಸರನ್ನೂ, ವಾನರರನ್ನೂ, ಪಿಶಾಚಗಳನ್ನೂ, ಭಲ್ಲೂಕಗಳನ್ನೂ ಹಿಡಿದು ಭಕ್ಷಿಸುತ್ತಿದ್ದನು. ಕೋಪಾವಿಷ್ಟನಾದ ಆ ಕುಂಭಕರ್ಣನು, ಅಲ್ಲಲ್ಲಿ ಪ್ರಾಣಿಗಳು ತನ್ನ ಕೈಗೆ ಸಿಕ್ಕಿದಂತೆ ತನ್ನ ಕಡೆಯ ರಾಕ್ಷಸರನ್ನೂ ಸೇರಿಸಿ, ಒಂದೊಂದು ಸಲಕ್ಕೆ ಒಬ್ಬೊಬ್ಬರನ್ನಾಗಿಯೂ, ಮೂವರು ಮೂವರನ್ನಾಗಿಯೂ ಒಮ್ಮೊಮ್ಮೆ ಇನ್ನೂ ಹೆಚ್ಚಾಗಿಯೂ ಒಂದೇ ಕೈಯಿಂದ ಹಿಡಿದು ಬಾಯಿಗೆ ಹಾಕಿಕೊಳ್ಳುತ್ತಿದ್ದನು. ಈ ಕ್ರೂರಕೃತ್ಯವನ್ನು ತಪ್ಪಿಸುವುದಕ್ಕಾಗಿ ಅನೇಕ ವಾನರವೀರರು ಕುಂಭಕರ್ಣನ ಮೇಲೆ ಪರ್ವತಶಿಖರಗಳನ್ನು ತಂದು ಬೀಸಿ ಹೊಡೆಯುತ್ತಿದ್ದರು. ಹೀಗಿದ್ದರೂ ಅವನು ಆ ಪ್ರಹಾರಗಳನ್ನು ಲಕ್ಷ್ಯಮಾಡದೆ, ಅವರನ್ನು ಹಿಡಿದು ತಿನ್ನುವ ಆತುರದಲ್ಲಿ, ಕಡೆಬಾಯಿಗಳಿಂದ, ರಕ್ತವನ್ನೂ. ಮೇದಸ್ಸನ್ನೂ ಸುರಿಸುತ್ತ, ಅನೇಕ ಪ್ರಾಣಿಗಳನ್ನು ಭಕ್ಷಿಸಿದನು. ಈ ಕ್ರೂರಕೃತ್ಯವನ್ನು ನೋಡಿ ಅಲ್ಲಲ್ಲಿ ತಲೆತಪ್ಪಿಸಿಕೊಂಡು ಬಂದ ಕೆಲವು ವಾನರರು ರಾಮನ ಬಳಿಯಲ್ಲಿ ಮೊರೆಯಿಟ್ಟರು. ಅತ್ತಲಾಗಿ ಕುಂಭಕರ್ಣನಾದರೋ ಮೇಲೆ ಮೇಲೆ ಕೋಪದಿಂದ ಜ್ವಲಿಸುತ್ತ ಒಂದೊಂದು ಸಲಕ್ಕೆ ಏಳುನೂರು, ಎಂಟುನೂರು, ಎರಡುಸಾವಿರ, ಮೂರುಸಾವಿರಗಳಂತೆ, ಎರಡು ತೋಳುಗಳನ್ನೂ ನೀಡಿ ಅವುಗಳ ನಡುವೆ ಸಿಕ್ಕಿದ ವಾನರರನ್ನು ಹಿಡಿದು ತಿನ್ನುತ್ತ, ಉಳಿದ ವಾನರರನ್ನು ಬೆನ್ನಟ್ಟಿ ಹೋಗುತ್ತಿದ್ದನು. ಇಷ್ಟರಲ್ಲಿ ಶತ್ರುಸೂದನನಾದ ಲಕ್ಷ್ಮಣನು ಮುಂದೆ ಬಂದು ಯುದ್ಧವನ್ನಾರಂಭಿಸಿದನು. ಶ್ರೀಮಂತನಾದ ಆ ಲಕ್ಷ್ಮಣನು ಮೊದಲು ಕುಂಭಕರ್ಣನ ದೇಹದೊಳಗೆ ಏಳು ಬಾಣಗಳನ್ನು ನಾಟಿ, ಇನ್ನೂ ಮೇಲೆ ಮೇಲೆ ಬಾಣಗಳನ್ನೆಳೆದು ಬಿಡುತ್ತಿದ್ದನು. ಕುಂಭಕರ್ಣನಾದರೋ ಈ ಲಕ್ಷ್ಮಣನ ಬಾಣಪ್ರಹಾರವನ್ನೂ ಲಕ್ಷ್ಯಮಾಡದೆ, ಅವನನ್ನು ದಾಟಿಕೊಂಡು, ನೆಲವನ್ನು ನಡುಗಿಸುವಂತೆ ಹೆಜ್ಜೆಯಿಡುತ್ತ, ರಾಮನನ್ನೇ ಇದಿರಿಸುವುದಕ್ಕೆ ಹೋದನು. ಇದನ್ನು ನೋಡಿ ದಶರಥಪುತ್ರನಾದ ರಾಮನು, ಭಯಂಕರವಾದ ಒಂದು ದಿವ್ಯಾಸ್ತ್ರವನ್ನು ಸಂಧಾನಮಾಡಿ ಆ ತೀಕ್ಷ್ಣಬಾಣವನ್ನು ಕುಂಭಕರ್ಣನ ಎದೆಗೆ ಗುರಿಯಿಟ್ಟು ಹೊಡೆದನು. ಈ ರಾಮಬಾಣಗಳು, ತನ್ನೆದೆಗೆ ತಾಗಿದುದಕ್ಕಾಗಿ ಕುಂಭಕರ್ಣನು

ಮತ್ತಷ್ಟು ಕೋಪಾವೇಶವನ್ನು ಹೊಂದಿ ವೇಗದಿಂದ ಮುಂದೆ ಬರುವಾಗ ಅವನ ಬಾಯಿಂದ ಅಗ್ನಿಜ್ವಾಲೆಗಳು ಹೊರಡುತ್ತಿದ್ದುವು. ರಾಮಾಸ್ತ್ರ ದಿಂದ ನೊಂದ ಆ ರಾಕ್ಷಸರಾಜನು, ಅಲ್ಲಿದ್ದ ವಾನರಸೈನ್ಯವೆಲ್ಲವೂ ಭಯ ಪಟ್ಟು ಓಡುವಂತೆ ಭಯಂಕರವಾಗಿ ಸಿಂಹನಾದವನ್ನು ಮಾಡುತ್ತ, ರಾಮನಿಗಿದಿರಾಗಿ ಬಂದನು. ನವಿಲುಗರಿಗಳನ್ನು ಕಟ್ಟಿದ ರಾಮಬಾಣ ಗಳು, ಆ ಕುಂಭಕರ್ಣನ ಎದೆಯಲ್ಲಿ ನಾಟಿದೊಡನೆ ಆ ರಾಕ್ಷಸನಿಗೆ ಪ್ರಜ್ಞೆ ತಪ್ಪಿದಂತಾಗಿ, ಅವನು ಹಿಡಿದಿದ್ದ ಗದೆಯು ಕೈಯಿಂದ ಸಡಿಲಿ ಬಿದ್ದಿತು ಅವನು ಹಿಡಿದಿದ್ದ ಸಮಸ್ತಾಯುಧಗಳೂ ಚೆಲ್ಲಾಚದರಾಗಿ ಕೆಳಗೆ ಬಿದ್ದುವು. ಕ್ಷಣಮಾತ್ರದಲ್ಲಿಯೇ ಕುಂಭಕರ್ಣನು ಚೇತರಿಸಿ ನಿಂತು ತನ್ನ ಕೈಯಲ್ಲಿ ಆಯುಧವಿಲ್ಲದುದನ್ನು ನೋಡಿ, ಮುಷ್ಟಿಗಳಿಂದಲೂ, ಕಾಲು ಗಳಿಂದಲೂ ಯುದ್ಧವನ್ನು ಮಾಡುವುದಕ್ಕೆ ತೊಡಗಿದನು. ಹೀಗೆ ಯುದ್ಧ ಮಾಡುವಾಗಲೂ ಕೂಡ ಪರ್ವತದಿಂದ ಗಿರಿನದಿಯು ಪ್ರವಹಿಸುವಂತೆ ಬಾಣಗಳಿಂದ ಭಿನ್ನವಾದ ಆತನ ದೇಹದಿಂದ ಎಡೆಬಿಡದೆ ರಕ್ತವು ಸುರಿಯು ತ್ತಿತ್ತು. ಹೀಗೆ ತನ್ನ ದೇಹದಲ್ಲಿ ರಕ್ತವು ಸುರಿಯುವುದನ್ನು ನೋಡಿದ ಹಾಗೆಲ್ಲಾ, ಆ ರಾಕ್ಷಸನು ತೀವ್ರಕೋಪದಿಂದುಕ್ಕುತ್ತ, ತಿರುಗಿ ಅಲ್ಲಲ್ಲಿ ಸಿಕ್ಕಿದ ವಾನರರನ್ನೂ, ರಾಕ್ಷಸರನ್ನೂ, ಭಲ್ಲೂಕಗಳನ್ನೂ ಹಿಡಿದು ಭಕ್ಷಿಸು ವುದಕ್ಕೆ ತೊಡಗಿದನು. ಮತ್ತು ಭಯಂಕರ ಪರಾಕ್ರಮದಿಂದ ಮೃತ್ಯುವಿ ಗೆಣೆಯಾದ ಆ ಕುಂಭಕರ್ಣನು, ಒಂದು ದೊಡ್ಡ ಪರ್ವತಶಿಖರವನ್ನು ಕಿತ್ತು ತಂದು, ಅದನ್ನು ಗಿರಗಿರನೆ ತಿರುಗಿಸಿ ರಾಮನ ಮೇಲೆ ಬೀಸಿದನು. ಇದನ್ನು ನೋಡಿ ಪುರುಷಶ್ರೇಷ್ಠನಾದ ರಾಮನು, ಆ ಪರ್ವತಶಿಖರವು ತನ್ನ ಬಳಿಗೆ ಬರುವುದಕ್ಕೆ ಮೊದಲೇ ಸುವರ್ಣಾಲಂಕೃತಗಳಾದ ಏಳು ಬಾಣಗಳಿಂದ ನಡುದಾರಿಯಲ್ಲಿ ಅದನ್ನು ಕತ್ತರಿಸಿ ಕೆಡಹಿದನು. ಮೇರು ಶಿಖರದಂತೆ ಮಹಾಕಾರವುಳ್ಳುದಾಗಿ, ಕಾಂತಿಯಿಂದ ಜ್ವಲಿಸುವಂತಿದ್ದ ಆ ಪರ್ವತಶಿಖರವು, ಒಂದೇಸಲಕ್ಕೆ ಇನ್ನೂರುಮಂದಿ ವಾನರರನ್ನು ಕೊಲ್ಲು ವಷ್ಟು ವೇಗದಿಂದ ಬರುತ್ತಿರುವುದನ್ನು ತುಂಡುಮಾಡಿ ಕೆಡಹಿದನು. ಇಷ್ಟರಲ್ಲಿ ಧರ್ಮಾತ್ಮನಾದ ಲಕ್ಷ್ಮಣನು ಕುಂಭಕರ್ಣನನ್ನು ಕೊಲ್ಲ ಬೇಕೆಂಬ ಆತುರದಿಂದ ಅದಕ್ಕಾಗಿ ವಿವಿಧೋಪಾಯಗಳನ್ನು ಚಿಂತಿಸುತ್ತ,

ಕೊನೆಗೆ ರಾಮನನ್ನು ಕುರಿತು "ಅಣ್ಣಾ! ಈ ರಾಕ್ಷಸನಾದರೋ ರಕ್ತ ಗಂಧದಿಂದ ಬಹಳವಾಗಿ ಮತ್ತೇರಿರುವಂತಿದೆ! ಅದರಿಂದಲೇ ರಾಕ್ಷಸರೆಂದೂ, ವಾನರರೆಂದೂ ತಿಳಿಯದೆ, ಕೈಗೆ ಸಿಕ್ಕಿದವರನ್ನು ಹಿಡಿದು ಭಕ್ಷಿಸುತ್ತಿರುವನು! ಹೀಗೆ ಇವನು ಮತ್ತನಾಗಿರುವಾಗಲೇ ನಮ್ಮಲ್ಲಿ ಉಬ್ಬಿದ ಮೈಯುಳ್ಳ ಕೆಲವು ವಾನರರು ಗುಂಪಾಗಿ ಸೇರಿ ಈ ರಾಕ್ಷಸನ ಮೈಮೇಲೆ ಹಾರಿ ಕುಳ್ಳಿರಲಿ! ಇಷ್ಟರಲ್ಲಿ ಬೇರೆ ಕೆಲವು ಯೂಥಪತಿಗಳು ಇವನನ್ನು ಸುತ್ತಲೂ ಮುತ್ತಿ ಮೇಲೆ ಬಿದ್ದು ಅವನು ಮೈಯನ್ನು ಕದಲಿಸದಹಾಗೆ ಮಾಡಲಿ! ಹೀಗಾದರೆ ದುರ್ಬುದ್ಧಿಯುಳ್ಳ ಈ ರಾಕ್ಷಸನು, ಆ ವಾನರರ ಭಾರದಿಂದ ಪೀಡಿತನಾಗಿ ಕೆಳಗೆ ಬೀಳುವನು. ಆಗ ಅವನಿಗೆ ಮೇಲೇಳುವುದಕ್ಕೂ ಸಾಧ್ಯವಿಲ್ಲದುದರಿಂದ ಇನ್ನುಮುಂದೆ ವಾನರರನ್ನು ಹಿಡಿದು ಭಕ್ಷಿಸಲಾರನು" ಎಂದನು. ಲಕ್ಷ್ಮಣನು ಈ ಮಾತನ್ನು ಹೇಳಿದೊಡನೆ ಕೆಲವು ವಾನರರು ಪರಮಸಂತೋಷದಿಂದ ಕುಂಭಕರ್ಣನ ಮೈಮೇಲೆ ಹಾರಿ ಕುಳಿತರು. ಹೀಗೆ ವಾನರರು ಮೈಮೇಲೆ ಬಿದ್ದುದನ್ನು ನೋಡಿ ಕುಂಭಕರ್ಣನು ಕೋಪಾವಿಷ್ಟನಾಗಿ, ಮದದಾನೆಯು ಮೈಯನ್ನೊದರಿ ಮಾವಟಿಗನನ್ನು ಕೆಡಹುವಂತೆ, ಮೇಲೆ ಬಿದ್ದ ವಾನರರನ್ನೊದರಿಬಿಟ್ಟನು. ಇದನ್ನು ನೋಡಿ ಮಹಾತ್ಮನಾದ ಶ್ರೀರಾಮನು, ಆ ರಾಕ್ಷಸನು ಪರಮ ಕ್ರೂರನೆಂದು ತಿಳಿದು, ಅವನನ್ನು ನಿಗ್ರಹಿಸುವುದಕ್ಕಾಗಿ ಉತ್ತಮಧನುಸ್ಸನ್ನೆತ್ತಿಕೊಂಡು ವೇಗದಿಂದ ಮುಂದೆ ಬಂದನು. ವೀರಾಗ್ರಣಿಯಾದ ಆ ಶ್ರೀರಾಮನು, ತನ್ನ ದೃಷ್ಟಿಯಿಂದಲೇ ಸಮಸ್ತ ರಾಕ್ಷಸರನ್ನೂ ದಹಿಸಿಬಿಡುವಂತೆ ಕೋಪದಿಂದ ಕೆಂಪೇರಿದ ಕಣ್ಣುಳ್ಳವನಾಗಿ, ಕುಂಭಕರ್ಣನ ಭಯದಿಂದ ತತ್ತಳಿಸುತ್ತಿದ್ದ ಸಮಸ್ತ ವಾನರಸೈನ್ಯಕ್ಕೂ ಸಂತೋಷವುಂಟಾಗುವಂತೆ ವೇಗದಿಂದ ಆ ರಾಕ್ಷಸನಿಗಿದಿರಾಗಿ ಹೋದನು. ಮತ್ತು ಸರ್ಪದೇಹದಂತೆ ಭಯಂಕರವಾಗಿ, ದೃಢವಾದ ನಾಣಿನಿಂದಲೂ, ಚಿನ್ನದ ಕಟ್ಟುಗಳಿಂದಲೂ ಕೂಡಿದ ತನ್ನ ದಿವ್ಯಧನುಸ್ಸನ್ನು ಕೈಗೆತ್ತಿಕೊಂಡು ಉತ್ತಮಬಾಣಗಳಿಂದ ತುಂಬಿದ ಬತ್ತಳಿಕೆಯನ್ನು ಸೇರಿಸಿ ಕಟ್ಟಿಕೊಂಡು, ಭಯಗ್ರಸ್ತರಾದ ವಾನರರಿಗೆ ಧೈರ್ಯವನ್ನು ಹೇಳಿ ಸಮಾಧಾನಪಡಿಸುತ್ತ ಮುಂದೆ ಹೊರಟನು. ಇತರರಿಗೆ ದುರ್ಜಯನೆನಿಸಿಕೊಂಡ ಮಹಾಬಲಾಢ್ಯ

ನಾದ ಆ ರಾಮನು ಯುದ್ಧಾತುರನಾಗಿ ಹೊರಟಾಗ, ಕೆಲವು ವಾನರ ಸೈನಿಕರೂ ಅವನೊಡನೆ ಹೊರಟರು. ಲಕ್ಷ್ಮಣನೂ ಅವನ ಹಿಂದೆ ಹೊರಟನು. ಹೀಗೆ ರಾಮನು ಯುದ್ಧೋತ್ಸಾಹದಿಂದ ಹೊರಟುಬಂದನು. ಮುಂದೆ ಪರ್ವತದಂತೆ ಮಹಾಕಾಯವುಳ್ಳವನಾಗಿ, ತಲೆಯಲ್ಲಿ ಉತ್ತಮ ವಾದ ಕಿರೀಟವನ್ನು ಧರಿಸಿ ನಿಂತಿದ್ದ ಶತ್ರುನಿಗ್ರಾಹಕನಾದ ಕುಂಭಕರ್ಣನಿ ಗಾದರೋ ಸರ್ವಾಂಗಗಳಲ್ಲಿಯೂ ರಕ್ತವು ಸುರಿಯುತ್ತಿರುವುದು. ಹೀಗಿ ದ್ದರೂ ಅವನು ಎಣೆಯಿಲ್ಲದ ಬಲವುಳ್ಳವನಾದುದರಿಂದ, ಕೋಪಗೊಂಡ ದಿಗ್ಗಜದಂತೆ ಕಂಡಕಂಡವರನ್ನು ಬೆನ್ನಟ್ಟಿ ಹೋಗುತ್ತಿರುವನು. ಕೋಪಾ ವೇಶದಿಂದ ಅಲ್ಲಲ್ಲಿ ವಾನರರನ್ನು ಹುಡುಕುತ್ತಿರುವನು. ಅನೇಕ ರಾಕ್ಷಸರು ಅವನನ್ನು ಸುತ್ತಿಬರುತ್ತಿರುವರು. ಅವನ ಆಕೃತಿಯೋ ವಿಂಧ್ಯಮಂದರ ಪರ್ವತಗಳಂತೆ ಮಹಾದ್ಭುತವಾಗಿರುವುದು. ಅವನ ತೋಳುಗಳಲ್ಲಿ ಚಿನ್ನದ ತೋಳ್ಬಳೆಗಳು ಶೋಭಿಸುತ್ತಿರುವುವು. ಅವನ ಬಾಯಿಂದ ರಕ್ತವು ಕಾರುತ್ತಿರುವುದು. ಮಳೆಗಾಲದ ಮೇಘದಂತೆ ಕಾಣುವನು. ಕಡೆಬಾಯಿ ಗಳಲ್ಲಿ ಅಂಟಿಕೊಂಡಿರುವ ರಕ್ತವನ್ನು ಆಗಾಗ ನಾಲಗೆಯಿಂದ ನೆಕ್ಕುತ್ತಿರು ವನು. ಅವನ ಕಣ್ಣುಗಳೆರಡೂ ರಕ್ತದಂತೆ ಕೆಂಪೇರಿರುವುವು. ಅಲ್ಲಲ್ಲಿ ಕೈಗೆ ಸಿಕ್ಕಿದ ವಾನರರನ್ನು ಗುಂಪುಗುಂಪಾಗಿ ಹಿಡಿದು ಕಾಲುಗಳ ಕೆಳ ಗಿಟ್ಟು ಮರ್ದಿಸುತ್ತ, ಪ್ರಳಯಕಾಲದಲ್ಲಿ ಪ್ರಜಾನಾಶಕ್ಕಾಗಿ ಹೊರಟಿರುವ ಮೃತ್ಯುವಿನಂತೆ ಕಾಣುತ್ತಿರುವನು. ಹೀಗೆ ಉರಿಯುವ ಬೆಂಕಿಯಂತೆ ತೇಜಸ್ಸಿನಿಂದ ಜ್ವಲಿಸುತ್ತಿದ್ದ ಆ ಕುಂಭಕರ್ಣನನ್ನು ನೋಡಿ ಪುರುಷಶ್ರೇಷ್ಠ ನಾದ ರಾಮನು, ತಾನು ಯುದ್ಧಸನ್ನದ್ಧನಾಗಿ ಬಂದ ವಿಷಯವನ್ನು ಸೂಚಿಸುವಂತೆ ಒಮ್ಮೆ ಧನುಷ್ಟಂಕಾರವನ್ನು ಮಾಡಿದನು. ಈ ಧ್ವನಿ ಯನ್ನು ಕೇಳಿದೊಡನೆ ಕುಂಭಕರ್ಣನು ಸಹಿಸಲಾರದೆ ಕೋಪದಿಂದ ರಾಮ ನನ್ನಿದಿರಿಸಿ ಬಂದನು. ಪರ್ವತದಂತೆ ಆಕಾರವುಳ್ಳವನಾಗಿಯೂ, ಸರ್ಪ ಶರೀರದಂತೆ ನೀಡಿದ ತೋಳುಳ್ಳವನಾಗಿಯೂ, ಇದ್ದ ಆ ಕುಂಭಕರ್ಣನು ಬಿರುಗಾಳಿಯಿಂದ ತೂರಿಸಲ್ಪಟ್ಟ ಮಹಾಮೇಘಗಳಂತೆ ವೇಗದಿಂದ ತನಗಿದಿ ರಾಗಿ ಬರುವುದನ್ನು ನೋಡಿ ರಾಮನು ಆತನನ್ನು ಕುರಿತು ಮನೋಲ್ಲಾಸಕ ವಾದ ಮೃದುವಾಕ್ಯದಿಂದ "ಎಲೆ ರಾಕ್ಷಸರಾಜನೆ! ಬಾ! ಸಂಕೋಚವನ್ನು

ಬಿಡು! ನೀನು ನಿಶ್ಚಿಂತನಾಗಿ ನನ್ನನ್ನಿದಿರಿಸಬಹುದು. (ಇನ್ನು ನಿನ್ನ ಕಷ್ಟವೂ ನೀಗುವುದು) ಇದೋ! ನಾನು ಧನುಸ್ಸನ್ನು ಹಿಡಿದು ಸಿದ್ಧನಾಗಿರುವೆನು. ನೀನು ಇಂದ್ರಶತ್ರುವೆಂಬ ಪ್ರಸಿದ್ಧಿಯನ್ನು ಹೊಂದಿರಬಹುದು. ಆದರೆ ನನ್ನನ್ನು ಆ ಇಂದ್ರನೆಂದು ತಿಳಿಯಬೇಡ. ನಾನು ರಾಮನು! ಇನ್ನು ಮುಹೂರ್ತಕಾಲದಲ್ಲಿಯೇ ನಿನಗೆ ನನ್ನ ಕೈಯಿಂದ ಮರಣವು ಸಿದ್ಧವೆಂದು ತಿಳಿ!" ಎಂದನು. ಈ ಮಾತನ್ನು ಕೇಳಿದೊಡನೆ ಕುಂಭಕರ್ಣನು, ರಾಮನೇ ತನ್ನೊಡನೆ ಯುದ್ಧಕ್ಕೆ ನಿಂತಿರುವುದನ್ನು ತಿಳಿದು, ವಿಕೃತಧ್ವನಿಯಿಂದ ಅಟ್ಟಹಾಸವನ್ನು ಮಾಡಿ ನಗುತ್ತ, ಮೇಲೆ ಮೇಲೆ ಕೋಪದಿಂದುಬ್ಬಿ, ಅಲ್ಲಲ್ಲಿದ್ದ ವಾನರರೆಲ್ಲರನ್ನೂ ಹೆದರಿಸಿ ಓಡಿಸುತ್ತ, ವೇಗದಿಂದ ಮುಂದೆ ನುಗ್ಗಿ ಸಮಸ್ತ ವಾನರರ ಹೃದಯವೂ ಭೇದಿಸುವಂತೆ ರಾಮನನ್ನಿದಿರಿಸಿದನು. ಮಹಾತೇಜಸ್ವಿಯಾದ ಆ ಕುಂಭಕರ್ಣನು ವಿಕೃತವಾಗಿಯೂ, ಮೇಘಗರ್ಜನದಂತೆ ಗಂಭೀರವಾಗಿಯೂ ಇರುವ ಅಟ್ಟಹಾಸ ಧ್ವನಿಯೊಡನೆ ನಗುತ್ತ, ರಾಮನನ್ನು ಕುರಿತು "ರಾಮಾ! ನಾನು ಯಾರೆಂದು ಬಲ್ಲೆ! ನಾನು ವಿರಾಧನಲ್ಲ! ಕಬಂಧನೂ ಅಲ್ಲ! ವಾಲಿಯೂ ಅಲ್ಲ! ನಾನು ಮಾರೀಚನೂ ಅಲ್ಲ! ಅವರಂತೆ ನನ್ನನ್ನು ತಿಳಿಯಬೇಡ! ನಾನು ಕುಂಭಕರ್ಣನು! ಇದೋ ನಿನ್ನೊಡನೆ ಯುದ್ಧಕ್ಕಾಗಿ ಬಂದಿರುವೆನು. ಆಮೂಲಾಗ್ರವೂ ಉಕ್ಕಿನಿಂದ ನಿರ್ಮಿತವಾಗಿ, ಮಹಾಭಯಂಕರವಾದ ನನ್ನ ಕೈಯಲ್ಲಿರುವ ಈ ದೊಡ್ಡ ಮುದ್ಗರವನ್ನು ನೋಡಿದೆಯಾ? ಇದರಿಂದಲೇ ನಾನು ಪೂರ್ವದಲ್ಲಿ ಎಷ್ಟೋ ದೇವದಾನವರನ್ನು ನಿಗ್ರಹಿಸಿ ಬಂದಿರುವೆನು. ನನಗೆ ಕಿವಿಮೂಗುಗಳಿಲ್ಲದ ಮಾತ್ರಕ್ಕಾಗಿ ನನ್ನನ್ನು ನೀನು ಅಲಕ್ಷ್ಯದಿಂದ ಕಾಣಬೇಡ! ಈ ಕಿವಿಮೂಗುಗಳು ಹೋದುದರಿಂದ ನನಗೆ ಸ್ವಲ್ಪವಾದರೂ ಬಾಧೆಯಿಲ್ಲ. ಎಲೈ ಇಕ್ಷ್ವಾಕುಸಿಂಹನೆ! ನನ್ನ ಮೈಮೇಲೆ ನಿನ್ನ ಪರಾಕ್ರಮವನ್ನು ಸ್ವಲ್ಪವಾದರೂ ತೋರಿಸು. ನೋಡುವೆನು. ಮೊದಲು ನಿನ್ನ ಪೌರುಷವನ್ನೂ, ಪರಾಕ್ರಮವನ್ನೂ ನೋಡಿ ತಿಳಿದುಕೊಂಡು, ಆಮೇಲೆ ನಿನ್ನನ್ನು ಒಂದೇ ತುತ್ತಾಗಿ ಭಕ್ಷಿಸಿಬಿಡುವೆನು" ಎಂದನು. ಈ ಮಾತನ್ನು ಕೇಳಿ ರಾಮನು ಕೋಪಗೊಂಡು, ಬಲವಾದ ಹಿಡಿಗಳುಳ್ಳ ಕೆಲವು ಬಾಣಗಳನ್ನು ಅವನ ಮೇಲೆ

ಪ್ರಯೋಗಿಸಿದನು. ಸಿಡಿಲಿಗೆ ಸಮಾನವಾದ ವೇಗವುಳ್ಳ ಆ ಬಾಣಗಳು ಮೇಲೆ ಬಂದು ಬಿದ್ದರೂ ಆ ಕುಂಭಕರ್ಣನಿಗೆ ಸ್ವಲ್ಪವಾದರೂ ಬಾಧೆಯು ತೋರಲಿಲ್ಲ. ಅವನು ಸ್ವಲ್ಪವಾದರೂ ಧೈರ್ಯಗುಂದಲಿಲ್ಲ. ಮೊದಲು ಯಾವ * ಬಾಣಗಳಿಂದಲೇ ಅತಿ ಪ್ರಬಲಗಳಾದ ಸಪ್ತಸಾಲಗಳೂ ಏಕ ಕಾಲದಲ್ಲಿ ಮುರಿದು ಬಿದ್ದುವೋ, ಯಾವ ಬಾಣದಿಂದ ವಾನರ ಶ್ರೇಷ್ಠನಾದ ವಾಲಿಯು ಹತನಾಗಿ ಬಿದ್ದನೋ, ವಜ್ರಸಮಾನಗಳಾದ ಆ ರಾಮ ಬಾಣಗಳೂ ಕೂಡ ಈಗ ಕುಂಭಕರ್ಣನ ದೇಹದಲ್ಲಿ ಸ್ವಲ್ಪಮಾತ್ರವೂ ಬಾಧೆಯನ್ನುಂಟುಮಾಡಲಾರದೆ ಹೋದುವು. ದೇವೇಂದ್ರಶತ್ರುವಾದ ಆ ಕುಂಭಕರ್ಣನನ್ನು ಅಷ್ಟೊಂದು ತೀಕ್ಷ್ಣವೇಗವುಳ್ಳ ರಾಮಬಾಣಗಳು ಮೈಮೇಲೆ ಬಂದು ನಾಟುತ್ತಿದ್ದರೂ, ತೀರ್ಥಪಾನಮಾಡಿದಂತೆ ಕೇವಲ ಲೀಲಾಮಾತ್ರದಿಂದಲೇ ಅವುಗಳನ್ನು ತಡೆದು ನಿಂತು, ಇನ್ನೂ ಮೇಲೆ ಮೇಲೆ ಬರುತ್ತಿದ್ದ ರಾಮಬಾಣಗಳನ್ನು ತಡೆಯುವುದಕ್ಕಾಗಿ ಕ್ರೂರವಾದ ತನ್ನ ಮುದ್ಗರಾಯುಧವನ್ನು ಗಿರಗಿರನೆ ತಿರುಗಿಸುತ್ತ, ಆ ಬಾಣಗಳೆಲ್ಲ ವನ್ನೂ ಭಂಗಪಡಿಸಿದನು. ಮತ್ತು ಕುಂಭಕರ್ಣನು ರಕ್ತದಿಗ್ಧವಾಗಿಯೂ, ಸಮಸ್ತ ದೇವಸೈನ್ಯಕ್ಕೂ ಭಯವನ್ನುಂಟುಮಾಡತಕ್ಕುದಾಗಿಯೂ, ತೀವ್ರ ವೇಗವುಳ್ಳುದಾಗಿಯೂ ಇದ್ದ ಆ ಮುದ್ಗರವನ್ನೇ ಮಹಾವೇಗದಿಂದ ತಿರುಗಿಸುತ್ತ ಸಮಸ್ತ ವಾನರ ಸೈನ್ಯವನ್ನೂ ಓಡಿಸಿದನು. ಇಷ್ಟರಲ್ಲಿ ರಾಮನು ಮೇಲಾದ ವಾಯುವ್ಯಾಸ್ತ್ರವೊಂದನ್ನು ತೆಗೆದು ಕುಂಭಕರ್ಣನ ಮೇಲೆ ಪ್ರಯೋಗಿಸಿದನು. ಈ ಮಹಾಸ್ತ್ರವು ಮುದ್ಗರಾಯುಧ ಸಹಿತವಾದ ಆ ಕುಂಭಕರ್ಣನ ಒಂದು ತೋಳನ್ನು ಕತ್ತರಿಸಿ ಕೆಡಹಿತು. ಆ ತೋಳು ಮುರಿದು ಬಿದ್ದೊಡನೆ ಕುಂಭಕರ್ಣನು ದೊಡ್ಡ ಆರ್ತಧ್ವನಿಯಿಂದ ಕೂಗಿದನು. ಪರ್ವತಶಿಖರದಂತಿದ್ದ ಆ ಕ್ರೂರರಾಕ್ಷಸನ ತೋಳು ರಾಮಬಾಣದಿಂದ ಕತ್ತರಿಸಲ್ಪಟ್ಟು ಕೆಳಗೆ ಬೀಳುವಾಗಲೂ ಕೂಡ, ತನ್ನ ಕ್ರೌರ್ಯವನ್ನು ಬಿಡದೆ, ಆ ಸುಗ್ರೀವಸೈನ್ಯದ ಮಧ್ಯದಲ್ಲಿಯೇ ಬಿದ್ದು ಅದರಲ್ಲಿದ್ದ

---

* ರಾಮನು ಸಪ್ತಸಾಲವನ್ನೂ, ವಾಲಿಯನ್ನೂ ಒಂದೊಂದೇ ಬಾಣದಿಂದ ಭೇದಿಸಿದ್ದರೂ, ಇಲ್ಲಿ ಆ ವರ್ಗಕ್ಕೆ ಸೇರಿದ ಬಾಣಗಳ ಸಂಬಂಧವನ್ನು ಹೇಳುವ ಅಭಿಪ್ರಾಯದಿಂದ ಬಹುವಚನವೆಂದು ಗ್ರಾಹ್ಯವು.

ಅನೇಕ ವಾನರಸೈನ್ಯವನ್ನು ನಾಶಮಾಡಿತು. ಇದರಲ್ಲಿ ಸತ್ತುಳಿದ ಕೆಲವರು ಮಾತ್ರ ದುಃಖಿತರಾಗಿ ಭಯದಿಂದ ನಡುಗುತ್ತ ದೂರಕ್ಕೆ ಸರಿದು ನಿಂತು ಇತ್ತಲಾಗಿ ರಾಮನಿಗೂ, ಕುಂಭಕರ್ಣನಿಗೂ ನಡೆಯುತ್ತಿದ್ದ ಮಹಾ ಭಯಂಕರವಾದ ದ್ವಂದ್ವ ಯುದ್ಧವನ್ನು ಆತುರದಿಂದ ನೋಡುತ್ತಿದ್ದರು. ವಾಯುವ್ಯಾಸ್ತ್ರದಿಂದ ಒಂದು ತೋಳು ಕತ್ತರಿಸಿ ಬಿದ್ದರೂ, ಆ ಕುಂಭಕರ್ಣನು ಮನಸ್ಸಿನಲ್ಲಿ ಯುದ್ಧೋತ್ಸಾಹವನ್ನು ಬಿಡದೆ ಮುಂದೆ ತೋಳುಗಳುಳ್ಳ ಮಹಾಪರ್ವತದಂತೆ ಕಾಣಿಸುತ್ತ, ಉಳಿದ ಮತ್ತೊಂದು ಕೈಯಿಂದಲೇ ಒಂದು ವೃಕ್ಷವನ್ನು ಕಿತ್ತು ಹಿಡಿದು, ತಿರುಗಿ ರಾಮನ ಮೇಲೆ ಯುದ್ಧಕ್ಕೆ ಹೊರಟನು. ಇದನ್ನು ನೋಡಿ ರಾಮನು, ಚಿನ್ನದ ಕಟ್ಟುಗಳಿಂದ ಚಿತ್ರಿತವಾದ ಒಂದು ಬಾಣವನ್ನು ತೆಗೆದು, ಐಂದ್ರಾಸ್ತ್ರದಿಂದಭಿಮಂತ್ರಿಸಿ, ಅತ್ತಲಾಗಿ ಸರ್ಪಶರೀರದಂತೆ ಭಯಂಕರವಾಗಿ ಸಾಲವೃಕ್ಷವನ್ನು ಹಿಡಿದು ಬರುತ್ತಿದ್ದ ಕುಂಭಕರ್ಣನ ಮತ್ತೊಂದು ತೋಳನ್ನು ಅದರಿಂದ ಕತ್ತರಿಸಿ ಕೆಡಹಿದನು. ಹೀಗೆ ರಾಮಬಾಣದಿಂದ ಕತ್ತರಿಸಲ್ಪಟ್ಟ ಆ ಕುಂಭಕರ್ಣನ ದ್ವಿತೀಯ ಭುಜವೂ ಕೂಡ, ಪರ್ವತದಂತೆ ಗಿರಗಿರನೆ ತಿರುಗಿ ಕೆಳಗೆ ಬೀಳುತ್ತ ಆ ಸುತ್ತಿನಲ್ಲಿದ್ದ ಅನೇಕ ವೃಕ್ಷಗಳನ್ನೂ, ಅನೇಕ ಪರ್ವತಗಳನ್ನೂ, ಅನೇಕ ಶಿಲೆಗಳನ್ನೂ, ಅನೇಕ ವಾನರಸೈನ್ಯಗಳನ್ನೂ ಚೂರ್ಣಮಾಡಿತು. ಹೀಗೆ ಕುಂಭಕರ್ಣನಿಗೆ ಎರಡು ತೋಳುಗಳೂ ಕತ್ತರಿಸಿ ಬಿದ್ದರೂ, ಆವನು ಧೈರ್ಯಗೆಡದೆ, ಮಹಾಧ್ವನಿಯಿಂದ ಕೂಗಿಡುತ್ತ, ರಾಮನನ್ನಿದಿರಿಸಿ ಬರುತ್ತಿರಲು, ರಾಮನು ಅದನ್ನು ನೋಡಿ ತೀಕ್ಷ್ಣಗಳಾದ ಎರಡು ಅರ್ಧಚಂದ್ರಬಾಣಗಳನ್ನು ತೆಗೆದು ಅವುಗಳಿಂದ ಆ ರಾಕ್ಷಸನ ಕಾಲುಗಳೆರಡನ್ನೂ ಕತ್ತರಿಸಿದನು. ರಾಮಬಾಣದಿಂದ ಕತ್ತರಿಸಲ್ಪಟ್ಟ ಆ ಕುಂಭಕರ್ಣನ ಕಾಲುಗಳೆರಡೂ ಕೆಳಗೆ ಬಿದ್ದಾಗ, ಅದರಿಂದುಂಟಾದ ಮಹಾಧ್ವನಿಯು ದಿಕ್ಕುಗಳಲ್ಲಿಯೂ, ವಿದಿಕ್ಕುಗಳಲ್ಲಿಯೂ, ಪರ್ವತಗಳಲ್ಲಿಯೂ, ಪರ್ವತಗುಹೆಗಳಲ್ಲಿಯೂ, ಮಹಾಸಮುದ್ರದಲ್ಲಿಯೂ, ಲಂಕಾನಗರಿಯಲ್ಲಿಯೂ, ಕಪಿರಾಕ್ಷಸಸೈನ್ಯದಲ್ಲಿಯೂ, ದೊಡ್ಡ ಪ್ರತಿಧ್ವನಿಯನ್ನು ಹರಡಿಸಿತು. ಹೀಗೆ ಕುಂಭಕರ್ಣನಿಗೆ ಕೈಕಾಲುಗಳು ಕತ್ತರಿಸಿ ಬಿದ್ದ

ಮೇಲೆಯೂ, ಅವನು ಸನ್ನುನಿರದೆ, ಬಡಬಾಮುಖದಂತಿರುವ ಬಾಯನ್ನು ತೆರೆದುಕೊಂಡು, ಆಗಾಗ ಗರ್ಜನವನ್ನು ಮಾಡುತ್ತ ಅಂತರಿಕ್ಷದಲ್ಲಿ ಚಂದ್ರನ ಮೇಲೆ ಬೀಳುವುದಕ್ಕೆ ಬರುವ ರಾಹುವಿನಂತೆ ತೊಡೆಗಳಿಂದಲೇ ರಾಮನನ್ನಿದಿರಿಸಿ ಹೋದನು. ಆಗ ರಾಮನು, ಕುಂಭಕರ್ಣನು ದೊಡ್ಡ ಬಾಯನ್ನು ತೆರೆದುಕೊಂಡು ತನಗಿದಿರಾಗಿ ಬರುವುದನ್ನು ಕಂಡು, ಚಿನ್ನದ ಹಿಡಿಗಳುಳ್ಳ ತೀಕ್ಷ್ಣಬಾಣಗಳನ್ನು ಎಡೆಬಿಡದೆ ಆ ರಾಕ್ಷಸನ ಬಿಚ್ಚಿದ ಬಾಯಿಯಲ್ಲಿ ತುಂಬಿಬಿಟ್ಟನು. ಆಗ ಕುಂಭಕರ್ಣನು ಬಾಣಗಳಿಂದ ತುಂಬಿದ ಬಾಯುಳ್ಳವನಾಗಿ, ಮಾತಾಡುವುದಕ್ಕೂ ಸಾಧ್ಯವಿಲ್ಲದೆ, ಪ್ರಯತ್ನದಿಂದರಚುತ್ತ, ಹಾಗೆಯೇ ಪ್ರಜ್ಞೆತಪ್ಪಿದಂತಾದನು. ಇಷ್ಟರೊಳಗಾಗಿ ರಾಮನು ಸೂರ್ಯನಂತೆ ದೇದೀಪ್ಯಮಾನವಾಗಿ, ವಾಯುವೇಗವುಳ್ಳುದಾಗಿದ್ದ ಚಿನ್ನದ ಹಿಡಿಯುಳ್ಳ ಒಂದು ಇಂದ್ರಬಾಣವನ್ನು ಕೈಗೆ ತೆಗೆದುಕೊಂಡನು. ಚಿನ್ನದಿಂದ ಕೆತ್ತಲ್ಪಟ್ಟ ಹಿಡಿಗಳುಳ್ಳುದಾಗಿಯೂ, ಸೂರ್ಯಾಗ್ನಿಗಳಂತೆ ತೇಜೋವಿಶಿಷ್ಟವಾಗಿಯೂ, ಇಂದ್ರನ ವಜ್ರಾಯುಧದಂತೆ ಬಲವುಳ್ಳುದಾಗಿಯೂ ಇದ್ದ ಆ ಬಾಣವು ತನ್ನ ಕಾಂತಿಯಿಂದಲೇ ಹತ್ತುದಿಕ್ಕುಗಳನ್ನೂ ಬೆಳಗುತ್ತ ನೆಟ್ಟಗೆ ಕುಂಭಕರ್ಣನ ಕಡೆಗೆ ಬಂದಿತು. ಈ ಬಾಣವು ಬಂದೊಡನೆ ಪೂರ್ವದಲ್ಲಿ ದೇವೇಂದ್ರನು ವೃತ್ರಾಸುರನ ತಲೆಯನ್ನು ಕಡಿದಹಾಗೆ ವಕ್ರವಾದ ಕೋರೆಗಳಿಂದಲೂ, ಅಂದವಾದ ಕುಂಡಲಗಳಿಂದಲೂ ಕೂಡಿ, ಪರ್ವತಶಿಖರದಂತಿದ್ದ ಕುಂಭಕರ್ಣನ ತಲೆಯನ್ನು ಕತ್ತರಿಸಿತು. ಕತ್ತರಿಸಿದ ವೇಗದಿಂದ ಆಕಾಶಕ್ಕೆ ಹಾರಿದ ಆ ಕುಂಭಕರ್ಣನ ದೊಡ್ಡ ತಲೆಯು, ಅದಿತಿದೇವತಾತ್ಮಕವಾದ ಪುನರ್ವಸು * ನಕ್ಷತ್ರಗಳೆರಡೂ ಉದಿಸಿದಾಗ ಅದರ ನಡುವೆ ಶೋಭಿಸುವ ಚಂದ್ರನಂತೆ ದೊಡ್ಡ ಕರ್ಣಕುಂಡಲಗಳ ನಡುವೆ ಪ್ರಕಾಶಿಸುತ್ತಿತ್ತು. ರಾಮಬಾಣದಿಂದ ಕತ್ತರಿಸಲ್ಪಟ್ಟ ಪರ್ವತಾಕಾರವುಳ್ಳ ಆ ಕುಂಭಕರ್ಣನ ಶಿರಸ್ಸು ಕೆಳಗೆ ಬಿದ್ದಾಗ, ಅದರ ಹತಿಗೆ ಲಂಕೆಯ ಚರ್ಯಾಗೃಹಗಳೂ ಗೋಪುರ

---

* ಇಲ್ಲಿ ಕುಂಭಕರ್ಣನ ಕರ್ಣಕುಂಡಲವನ್ನು ವರ್ಣಿಸಿರುವುದರಿಂದ, ಹಿಂದೆ ಸುಗ್ರೀವನು ಇವನ ಕಿವಿಗಳನ್ನು ಕೀಳುವಾಗ, ಆ ಕಿವಿಗಳ ಕೆಳಭಾಗವನ್ನು ಬಿಟ್ಟು ತುಕ್ಕುವುಗಳನ್ನು ಮಾತ್ರ ಕಿತ್ತಿರಬೇಕೆಂದೂಹ್ಯವು.

ಗಳೂ, ಪ್ರಾಕಾರಗಳೂ ಪುಡಿಪುಡಿಯಾದುವು. ಇತ್ತಲಾಗಿ ರಣರಂಗದಲ್ಲಿದ್ದ ಕುಂಭಕರ್ಣನ ತಲೆಯಿಲ್ಲದ ಮುಂಡವೂ ಕೂಡ, ತನ್ನ ಸುತ್ತಲೂ ಭಯದಿಂದೋಡುತ್ತಿದ್ದ ಅನೇಕ ಕೋಟಿ ವಾನರರನ್ನು ನಜ್ಜುಗುಜ್ಜಾಗಿ ಮಾಡಿ ಕೆಳಕ್ಕುರುಳಿತು. ಹಿಮವತ್ಪರ್ವತದಂತೆ ದೊಡ್ಡದಾದ ಆ ಕುಂಭಕರ್ಣನ ದೇಹವು ಕೆಳಗೆ ಬಿದ್ದಾಗ, ಅದರ ಕಾಲಿನ ಕಡೆಯು ಸಮುದ್ರದೊಳಗೆ ಚಾಚಿ ಅಲ್ಲಿ, ಮೊಸಳೆ, ಮೀನು, ಹಾವು ಮೊದಲಾದ ದೊಡ್ಡ ದೊಡ್ಡ ಜಲಚರಗಳನ್ನು ಮರ್ದಿಸಿ, ಕೊನೆಗೆ ನೆಲದಲ್ಲಿ ಹುದುಗಿತು. ಬ್ರಾಹ್ಮಣರಿಗೂ ದೇವತೆಗಳಿಗೂ ಶತ್ರುವಾದ ಮತ್ತು ಬಲಾಢ್ಯನಾದ ಆ ಕುಂಭಕರ್ಣನು ಯುದ್ಧದಲ್ಲಿ ಸತ್ತುಬಿದ್ದೊಡನೆ, ಸಮಸ್ತ ಭೂಮಿಯೂ ಅದಿರಿತು. ಪರ್ವತಗಳೆಲ್ಲವೂ ನಡುಗಿದುವು. ಸಮಸ್ತ ದೇವತೆಗಳೂ ಸಂತೋಷದಿಂದ ಕೋಲಾಹಲವನ್ನು ಮಾಡಿದರು. ಒಡನೆಯೇ, ದೇವರ್ಷಿಗಳೂ, ಮಹರ್ಷಿಗಳೂ, ಪನ್ನಗರೂ, ಸುರರೂ, ಭೂತಗಳೂ, ಗರುಡರೂ, ಗುಹ್ಯಕರೂ, ಯಕ್ಷರೂ, ಗಂಧರ್ವರೂ, ಆಕಾಶದಲ್ಲಿ ಸೇರಿ ರಾಮನ ಪರಾಕ್ರಮದಿಂದ ಸಂತುಷ್ಟರಾಗಿ, ಸಂತೋಷಧ್ವನಿಗಳನ್ನು ಮಾಡುತ್ತಿದ್ದರು. ಇತ್ತಲಾಗಿ ರಾವಣನ ಕಡೆಯ ರಾಕ್ಷಸರನೇಕರು ವೀರ್ಯಶಾಲಿಗಳಾಗಿದ್ದರೂ, ಕುಂಭಕರ್ಣನ ವಧವನ್ನು ನೋಡಿ ಬಹಳ ದುಃಖಿತರಾಗಿ, ದೇವಾಸುರಯುದ್ಧದಲ್ಲಿ ದೇವತೆಗಳಿಂದ ಪೀಡಿತರಾದ ಅಸುರರು ವಿಷ್ಣುವನ್ನು ನೋಡಿ ನಡುಗುವಂತೆ ರಾಮನನ್ನು ನೋಡಿ ಭಯದಿಂದ ಕೂಗಿಡುತ್ತಿದ್ದರು. ರಾಹುಮುಖದಿಂದ ಮುಕ್ತನಾದ ಸೂರ್ಯನು, ದೇವಲೋಕದ ಅಂಧಕಾರವನ್ನು ನೀಗಿಸಿ ಕಾಂತಿಯಿಂದ ಪ್ರಕಾಶಿಸುವಂತೆ, ರಾಮನೂ ಯುದ್ಧದಲ್ಲಿ ಕುಂಭಕರ್ಣನನ್ನು ಕೊಂದು, ವಾನರ ಸಮೂಹ ಮಧ್ಯದಲ್ಲಿ ಅದ್ಭುತವಾದ ಒಂದು ದಿವ್ಯತೇಜಸ್ಸಿನಿಂದ ಪ್ರಕಾಶಿಸುತ್ತಿದ್ದನು. ಭಯಂಕರ ಪರಾಕ್ರಮವುಳ್ಳವನಾಗಿಯೂ, ಶತ್ರುದುರ್ಜಯನಾಗಿಯೂ, ಇರುವ ಕುಂಭಕರ್ಣನು ಹತನಾಗಿ ಬಿದ್ದುದನ್ನು ನೋಡಿ, ಸಮಸ್ತ ವಾನರರೂ ಸಂತೋಷದಿಂದುಕ್ಕುತ್ತಿದ್ದರು. ಒಬ್ಬೊಬ್ಬ ವಾನರನ ಮುಖವೂ ಅರಳಿದ ಕಮಲದಂತೆ ಉಲ್ಲಾಸವನ್ನು ಹೊಂದಿತು. ಕುಂಭಕರ್ಣಜಯರೂಪವಾದ ಇಷ್ಟಸಿದ್ಧಿಯನ್ನು ಹೊಂದಿ ಶೋಭಿಸುತ್ತಿದ್ದ ರಾಮನನ್ನು ಆ

ವಾನರರೆಲ್ಲರೂ ಬಂದು ಗೌರವಿಸಿ ಪೂಜಿಸುತ್ತಿದ್ದರು. ಇದುವರೆಗೆ ಅನೇಕ ಮಹಾಯುದ್ಧವನ್ನಾದರೂ ಲೀಲಾಮಾತ್ರದಿಂದಲೇ ನಡೆಸಿ ಜಯಹೊಂದಿರ ತಕ್ಕ ಕುಂಭಕರ್ಣನನ್ನು ಶ್ರೀರಾಮನು ಯುದ್ಧದಲ್ಲಿ ಕೊಂದೊಡನೆ ವೃತ್ರಾಸುರನನ್ನು ಕೊಂದ ದೇವೇಂದ್ರನಂತೆ ಬಹಳ ಸಂತೋಷಭರಿತ ನಾಗಿದ್ದನು.

ಇಲ್ಲಿಗೆ ಅರುವತ್ತೇಳನೆಯ ಸರ್ಗವು.

ಕುಂಭಕರ್ಣನ ಮರಣವನ್ನು ಕೇಳಿ ರಾವಣನು ವಿಲಪಿಸಿದುದು.

* ಮಹಾತ್ಮನಾದ ರಾಮನಿಂದ ಕುಂಭಕರ್ಣನು ಹತನಾದುದನ್ನು ನೋಡಿ ಕೆಲವು ರಾಕ್ಷಸರು ಆಗಲೇ ಹೋಗಿ ರಾಕ್ಷಸಪ್ರಭುವಾದ ರಾವಣ ನಿಗೆ ಈ ಸಂಗತಿಯನ್ನು ತಿಳಿಸಿದರು. "ಮಹಾಪ್ರಭೂ! ಮೃತ್ಯುಸಮಾನ ನಾದ ನಿನ್ನ ತಮ್ಮನು ಇಲ್ಲಿಂದ ಹೋದೊಡನೆ, ಅನೇಕ ವಾನರಸೈನ್ಯ ವನ್ನೋಡಿಸಿ, ಅನೇಕ ವಾನರರನ್ನು ಹಿಡಿದು ಭಕ್ಷಿಸಿ, ಕೊನೆಗೆ ಮೃತ್ಯು ವಿನ ಕೈಗೆ ಸಿಕ್ಕಿಬಿಟ್ಟನು. (ಮೃತ್ಯು ಕರ್ಮರೂಪವಾದ ಮರಣಕ್ಕೆ ಸಿಕ್ಕಿ ದನು.) ಪರ್ವತಾಕಾರದಿಂದಿದ್ದ ಆ ನಿನ್ನ ತಮ್ಮನು, ಮುಹೂರ್ತಕಾಲದ ವರೆಗೆ ಬಹಳವಾಗಿ ತನ್ನ ಪ್ರತಾಪವನ್ನು ತೋರಿಸುತ್ತಿದ್ದು, ಕೊನೆಗೆ ರಾಮನ ವೀರ್ಯದಿಂದ ನಿಗ್ರಹಿಸಲ್ಪಟ್ಟನು. ರಾಮನು ತನ್ನ ಬಾಣ ಗಳಿಂದ ಅವನ ಕೊರಲು, ಕೈ, ಕಾಲು, ಮುಂತಾದ ಅವಯವಗಳನ್ನೆಲ್ಲಾ ಕ್ರಮವಾಗಿ ಕತ್ತರಿಸಿಬಿಟ್ಟನು. ಆ ಕುಂಭಕರ್ಣನ ಅಂಗಾಂಗಗಳಲ್ಲಿಯೂ ವಿಶೇಷವಾಗಿ ರಕ್ತವು ಸೋರುತ್ತಿತ್ತು. ರಾಮಬಾಣಗಳಿಂದ ಪೀಡಿತನಾದ ನಿನ್ನ ತಮ್ಮನು ಕಾಡುಗಿಚ್ಚಿನಿಂದ ದಗ್ಧವಾದ ಮರದಂತೆ, ಒಂದೇ ಪಿಂಡ

---

* ಇಲ್ಲಿ "ಕುಂಭಕರ್ಣಂ ಹತಂ ದೃಷ್ಟ್ವಾ ರಾಘವೇಣ ಮಹಾತ್ಮನಾ। ರಾಕ್ಷಸಾ ರಾಕ್ಷಸೇಂದ್ರಾಯ ನ್ಯವೇದಯನ್" ಎಂದು ಮೂಲವು. ಈ ಶ್ಲೋಕದಲ್ಲಿ 'ರಾಕ್ಷಸೇಂ ದ್ರಾಯ' ಎಂಬಲ್ಲಿರುವ ಯಕಾರವು, ಈ ಗಾಯತ್ರಿಯ ಹದಿನೆಂಟನೆಯ ವರ್ಣ ವಾದುದರಿಂದ, ಈ ಶ್ಲೋಕದಿಂದ ಹದಿನೆಂಟನೆಯ ಸಹಸ್ರವು ಆರಂಭಿಸಲ್ಪಡುವ ದೆಂದು ಸೂಚಿತವು.

ನಾಗಿ ಕೆಳಗೆ ಬಿದ್ದನು. ವಿಕೃತಾಕಾರವುಳ್ಳ ಅವನ ಮುಂಡವು ಕೆಳಗೆ ಬೀಳುವಾಗ ಅದರಲ್ಲಿ ಅರ್ಧಭಾಗವು ಸಮುದ್ರದೊಳಗೆ ಜಾಚಿತು. ಮೇಲಿನ ಇನ್ನರ್ಧಭಾಗವು ನಮ್ಮ ಲಂಕೆಯ ಬಾಗಿಲನ್ನು ಮುಚ್ಚುವಂತೆ ಇತ್ತ ಲಾಗಿ ಬಿದ್ದಿತು. ಹೀಗೆ ನಿನ್ನ ತಮ್ಮನಾದ ಕುಂಭಕರ್ಣನು ಆ ರಾಮನ ವೀರ್ಯದಿಂದ ಹತನಾದನು" ಎಂದರು. ಕುಂಭಕರ್ಣನು ಯುದ್ಧದಲ್ಲಿ ಹತನಾದನೆಂಬ ವೃತ್ತಾಂತವನ್ನು ಕೇಳಿದೊಡನೆ, ರಾವಣನು ವ್ಯಸನದಿಂದ ಬೆಂದು ಮೂರ್ಛಿತನಾಗಿ ಕೆಳಗೆ ಬಿದ್ದನು. ತಮ್ಮ ಚಿಕ್ಕಪ್ಪನು ಹತನಾದ ನೆಂಬ ವೃತ್ತಾಂತವನ್ನು ಕೇಳಿ ದೇವಾಂತಕನರಾಂತಕರೂ, ತ್ರಿಶಿರಸ್ಸೂ, ಅತಿಕಾಯನೂ, ಶೋಕಪೀಡಿತರಾಗಿ ರೋದನವನ್ನು ಮಾಡುತ್ತಿದ್ದರು. ತಮಗೆ ಒಡಹುಟ್ಟಿದವನಾದ ಕುಂಭಕರ್ಣನು ರಾಮನಿಂದ ಹತನಾದು ದನ್ನು ಕೇಳಿ ಮಹೋದರಮಹಾಪಾರ್ಶ್ವರೆಂಬವರೂ ಬಹಳ ದುಃಖಿತ ರಾದರು. ಮೂರ್ಛೆ ಬಿದ್ದಿದ್ದ ರಾವಣನು ಕ್ಷಣಕಾಲದ ಮೇಲೆ ಮೆಲ್ಲಗೆ ಚೇತರಿಸಿಕೊಂಡು, ಕುಂಭಕರ್ಣನ ಮರಣಕ್ಕಾಗಿ ದುಃಖಿಸುತ್ತ ರೋದಿಸು ವುದಕ್ಕೆ ತೊಡಗಿದನು. "ಹಾ ವೀರನೆ! ಹಾ ಶತ್ರುಸಂಹಾರನೆ! ನೀನು ಮಹಾಬಲನೆನಿಸಿಕೊಂಡವನಲ್ಲವೆ? ನೀನು ನನ್ನನ್ನು ಬಿಟ್ಟು ದೈವಗತಿ ಗೀಡಾಗಿ ಯಮಲೋಕಕ್ಕೆ ಹೋದೆಯಾ? ಹಾ ವತ್ಸಾ! ನೀನು ನನಗೂ, ನಿನ್ನ ಇತರ ಬಂಧುಗಳಿಗೂ ಈಗ ಶಲ್ಯದಂತೆ ಪೀಡಿಸುತ್ತಿರುವ ದುಃಖ ವನ್ನೂ ನೀಗಿಸದೆ, ಮುಹೂರ್ತಕಾಲದವರೆಗೆ ಮಾತ್ರ ಶತ್ರುಸೈನ್ಯದಲ್ಲಿ ನಿನ್ನ ಪ್ರತಾಪವನ್ನು ತೋರಿಸಿ ನಮ್ಮನ್ನು ಬಿಟ್ಟು ಹೋದೆಯಾ! ನಾನು ಇದುವರೆಗೆ, ಯಾವುದರ ಬಲವನ್ನು ನಂಬಿ ದೇವಾಸುರರಿಗೂ ಭಯಪಡ ದಿದ್ದೆನೋ ಅಂತಹ ಬಲದ ಭುಜವೇ (ನನಗೆ ಬಲದ ಭುಜದಂತಿದ್ದ ನೀನೇ) ಬಿದ್ದುಹೋದಮೇಲೆ ನಾನು ಬದುಕಿದ್ದರೂ ಇಲ್ಲದಂತೆಯೇ ಆದೆನು. ಆಹಾ! ಇದೇನು? ದೇವದಾನವರ ಕೊಬ್ಬನ್ನಡಗಿಸಿ ಕಾಲಾಗ್ನಿರುದ್ರನಿ ಗೆಣೆಯಾದ ಅಂತಹ ಮಹಾವೀರನಾದ ನಿನಗೂ ಕೂಡ, ಯುದ್ಧದಲ್ಲಿ ಕೇವಲ ಮನುಷ್ಯ ಮಾತ್ರನಾದ ರಾಮನೊಬ್ಬನಿಂದ ವಧವೆಂದರೇನು! ಯಾವ ನಿನಗೆ ವಜ್ರಾಯುಧಪ್ರಹಾರವೂ ಕೂಡ ಕ್ಷಣಮಾತ್ರವಾದರೂ ವ್ಯಸನವನ್ನುಂಟುಮಾಡಲಾರದೋ, ಅಂತಹ ನೀನು ಆ ರಾಮಬಾಣದಿಂದ

ಪೀಡಿತನಾಗಿ ನೆಲದಲ್ಲಿ ಮಲಗುವುದೆಂದರೇನು? ಅಯ್ಯೋ! ಆಗಲೇ ಆಕಾಶದಲ್ಲಿ ದೇವತೆಗಳೆಲ್ಲರೂ, ದೇವರ್ಷಿಗಳೊಡನೆ ಗುಂಪುಸೇರಿ, ನೀನು ಯುದ್ಧದಲ್ಲಿ ಹತನಾದುದನ್ನು ನೋಡಿ ಸಂತೋಷದಿಂದ ಸಿಂಹನಾದಮಾಡುತ್ತಿರುವರು. ಇನ್ನು ನಮ್ಮ ಶತ್ರುಗಳಾದ ಈ ವಾನರರನ್ನು ಕೇಳಬೇಕೆ? ಇವರು ನಿನ್ನ ಮರಣದಿಂದ ಹರ್ಷಿತರಾಗಿ, ಇದೇ ತಮಗೆ ತಕ್ಕ ಅವಕಾಶವೆಂದು ತಿಳಿದು, ನಮ್ಮ ದುರ್ಗಗಳನ್ನೂ, ಲಂಕಾದ್ವಾರಗಳನ್ನೂ, ಸುತ್ತಲೂ ಆಕ್ರಮಿಸಿಬಿಡುವುದರಲ್ಲಿ ಸಂದೇಹವಿಲ್ಲ. ಅಥವಾ ಇನ್ನು ನನಗೆ ಈ ಲಂಕಾರಾಜ್ಯದಿಂದೇನು? ಇನ್ನು ನನಗೆ ಆ ಸೀತೆಯಿಂದಾದರೂ ಕೆಲಸವೇನು? ನನಗೆ ಪ್ರಿಯಸಹೋದರನಾದ ಆ ಕುಂಭಕರ್ಣನೇ ಕೈತಪ್ಪಿ ಹೋದಮೇಲೆ, ನನ್ನ ಜೀವದ ಮೇಲೆಯೇ ನನಗೆ ಆಸೆಯಿಲ್ಲ. ಇನ್ನಾದರೂ ನಾನು ನನ್ನ ಜೀವದ ತಮ್ಮನನ್ನು ಕೊಂದ ಆ ರಾಮನನ್ನು, ಅದೇ ಯುದ್ಧದಲ್ಲಿ ಕೊಲ್ಲದಿದ್ದಪಕ್ಷದಲ್ಲಿ ಈ ವ್ಯರ್ಥವಾದ ಬದುಕ್ಕಿಂತಲೂ ನನಗೆ ಮರಣವೇ ಮೇಲು. ನನ್ನ ತಮ್ಮನನ್ನು ಬಿಟ್ಟು ನಾನು ಕ್ಷಣಮಾತ್ರವೂ ಬದುಕಿರಲಾರೆನು. ಈಗಲೇ ನಾನೂ ನನ್ನ ತಮ್ಮನಿರುವ ಕಡೆಗೆ ಹೊರಡುವೆನು. ಹಾ ಕಷ್ಟವೆ? ಪೂರ್ವದಲ್ಲಿ ನಾನು ದೇವತೆಗಳಿಗೆ ಎಷ್ಟೆಷ್ಟೋ ವಿಧದಿಂದ ಅಪಕಾರವನ್ನು ಮಾಡಿರುವೆನು. ಈಗ ಅವರೆಲ್ಲರೂ ನನ್ನನ್ನು ನೋಡಿ ಹೀಗಳೆಯದೆ ಬಿಡುವರೆ? ಹಾ ವತ್ಸ ಕುಂಭಕರ್ಣ! ನೀನು ಸತ್ತಮೇಲೆ ಇನ್ನು ನನ್ನ ಗತಿಯೇನು? ಇನ್ನುಮೇಲೆ ನಾನು ಇಂದ್ರನನ್ನು ಜಯಿಸುವ ಬಗೆಯೇನು? ಮಹಾತ್ಮನಾದ ಆ ವಿಭೀಷಣನು ನನಗೆ ಹಿತವನ್ನು ಕೋರಿ ಹೇಳಿದ ಮಾತು ಈಗ ಯಥಾರ್ಥವಾಯಿತು! ಅಜ್ಞಾನದಿಂದ ನಾನು ಮೊದಲು ಅವನ ಮಾತನ್ನು ಕೇಳದೆ ಹೋದೆನು. ಆಗ ಪ್ರಹಸ್ತನೂ, ಈಗ ಕುಂಭಕರ್ಣನೂ ಹತನಾದಂದಿನಿಂದ ಆ ವಿಭೀಷಣನ ಹಿತವಾದವನ್ನು ನೆನೆಸಿಕೊಂಡಹಾಗೆಲ್ಲಾ ನನಗೆ ನಾನೇ ನಾಚುತ್ತಿರುವೆನು. ಆಹಾ! ಧರ್ಮಾತ್ಮನಾಗಿಯೂ, ಶ್ರೀಮಂತನಾಗಿಯೂ, ಇರುವ ಆ ವಿಭೀಷಣನನ್ನು ನಾನು ನಿಷ್ಕಾರಣವಾಗಿ ನಿರಾಕರಿಸಿ ಹೊರಡಿಸಿಬಿಟ್ಟೆನಲ್ಲವೆ? ಆ ಪಾಪದ ಫಲವೇ ಈಗ ನನಗೆ ಹೀಗೆ ದುಃಖಕರವಾಗಿ ಪರಿಣಮಿಸಿರುವುದು" ಎಂದು ಪಶ್ಚಾತ್ತಾಪಪಟ್ಟು ಕೊರಗುತ್ತಿದ್ದನು. ಹೀಗೆ

ರಾವಣನು ಕುಂಭಕರ್ಣನ ಮರಣವನ್ನು ಕೇಳಿ ಬಹಳ ದುಃಖಾಕುಲವಾದ ಮನಸ್ಸುಳ್ಳವನಾಗಿ ತನ್ನ ಸಹೋದರನನ್ನು ಕುರಿತು ದೈನ್ಯದಿಂದ ವಿಲಪಿಸುತ್ತ, ಆ ದುಃಖವನ್ನು ಸಹಿಸಲಾರದೆ ಆಗಾಗ ಮೂರ್ಛೆಬೀಳುತ್ತಿದ್ದನು.

ಇಲ್ಲಿಗೆ ಅರುವತ್ತೆಂಟನೆಯ ಸರ್ಗವು.

ದೇವಾಂತಕನರಾಂತಕರೂ, ಮಹೋದರಮಹಾಪಾರ್ಶ್ವರೂ ಅತಿಕಾಯ ತ್ರಿಶಿರಸ್ಸುಗಳೂ ರಾವಣನಿಂದ ಪ್ರೇರಿತರಾಗಿ ಯುದ್ಧಕ್ಕೆ ಬಂದುದು.

ದುರಾತ್ಮನಾದ ರಾವಣನು ಹೀಗೆ ದುಃಖದಿಂದ ಕೊರಗಿ ಗೋಳಿಡುವುದನ್ನು ನೋಡಿ ತ್ರಿಶಿರಸ್ಸೆಂಬವನು ಆತನನ್ನು ಕುರಿತು "ಎಲೈ ಜನಕನೆ! ಇದೇಕೆ ಶೋಕಿಸುವೆ? ಸತ್ಪುರುಷರಾದವರು ನಿನ್ನಂತೆ ಹೀಗೆ ವಿಲಪಿಸಲಾರರು. ನಮ್ಮ ನಡುತಂದೆಯಾದ ಕುಂಭಕರ್ಣನು, ನೀನು ಹೇಳಿದಂತೆ ಮಹಾವೀರ್ಯವುಳ್ಳವನೆಂಬುದರಲ್ಲಿ ಸಂದೇಹವಿಲ್ಲ. ಹಾಗಿದ್ದರೂ ದೈವಯೋಗದಿಂದ ಹತನಾದನು. ಮಹಾಪ್ರಭೂ! ಮೂರುಲೋಕಕ್ಕೂ ನೀನೊಬ್ಬನೇ ಸಾಕಾಗಿರುವೆ. ಹೀಗಿದ್ದರೂ ಈಗ ನೀನು ನಿನ್ನ ಸ್ಥಿತಿಯನ್ನು ಕುರಿತು ಪ್ರಾಕೃತನಂತೆ ಹೀಗೇಕೆ ದುಃಖಿಸುವೆ? ದುಃಖಿಸಬಾರದು! ನಿನಗಾದರೋ ಬ್ರಹ್ಮದೇವನ ಅನುಗ್ರಹದಿಂದ ಅಸಾಧಾರಣವಾದ ಶಕ್ತಿಯುಂಟು! ಉತ್ತಮವಾದ ಕವಚವುಂಟು! ಮೇಲಾದ ಬಾಣಗಳುಂಟು! ದಿವ್ಯ ಧನುಸ್ಸುಂಟು! ಸಹಸ್ರಖರಯುಕ್ತವಾಗಿ ಮೇಘದಂತೆ ಮಹಾಧ್ವನಿಯುಳ್ಳ ದೊಡ್ಡ ರಥವುಂಟು! ನಿನಗೆ ಯಾವ ಭಾಗದಲ್ಲಿಯೂ ನ್ಯೂನತೆಯಿಲ್ಲ. ಇದಲ್ಲದೆ ಹಿಂದೆ ನೀನೊಮ್ಮೆ ನಿರಾಯುಧನಾಗಿಯೇ ಹೊರಟು ಅನೇಕ ದೇವದಾನವರನ್ನು ಧ್ವಂಸಮಾಡಿ ಬಂದವನಲ್ಲವೆ? ಅಂತಹ ನೀನು ಈಗ ಸರ್ವಾಯುಧ ಸಂಪನ್ನನಾಗಿರುವಾಗ, ರಾಮನನ್ನಡಗಿಸಲಾರೆಯಾ? ಎಲೆ ಮಹಾರಾಜನೆ! ಅಷ್ಟೇಕೆ! ನೀನು ಇಲ್ಲಿಯೇ ಸುಮ್ಮನೆ ಸುಖವಾಗಿ ಕುಳಿತಿರು! ಈಗಿನ ಯುದ್ಧಕ್ಕೆ ನಾನು ಹೊರಡುವೆನು. ಗರುಡನು ಸರ್ಪಗಳನ್ನು ನಿಗ್ರಹಿಸುವಂತೆ ನಾನೇ ನಿನ್ನ ಶತ್ರುಗಳನ್ನಡಗಿಸಿ

ಬರುವೆನು. ಪೂರ್ವದಲ್ಲಿ ದೇವೇಂದ್ರನು ಶಂಬರಾಸುರನನ್ನೂ, ಮಹಾವಿಷ್ಣುವು * ನರಕಾಸುರನನ್ನೂ ಕೊಂದು ಕೆಡಹಿದಂತೆ, ಈಗ ರಾಮನನ್ನು ನಾನೇ ಯುದ್ಧದಲ್ಲಿ ಕೆಡಹಿಬರುವೆನು ನೋಡು" ಎಂದನು. ರಾಕ್ಷಸರಾಜನಾದ ರಾವಣನಿಗೆ ಈ ತ್ರಿಶಿರಸ್ಸಿನ ವಾಕ್ಯವನ್ನು ಕೇಳಿ ಪರಮಾನಂದವಾಯಿತು. ಮೃತ್ಯುಚೋದಿತನಾದ ಆ ರಾವಣನು, ಈ ಆನಂದದಿಂದ ಆಗಲೇ ತಾನು ಸತ್ತು ಹುಟ್ಟಿದಂತೆ ಸಂತೋಷದಿಂದುಬ್ಬಿದನು. ಈ ತ್ರಿಶಿರಸ್ಸಿನ ವೀರವಾಕ್ಯವನ್ನು ಕೇಳಿದ ಮೇಲೆ, ಅಲ್ಲಿದ್ದ ಅತಿಕಾಯ, ದೇವಾಂತಕ, ನರಾಂತಕರೆಂಬ ಮೂರುಮಂದಿ ರಾವಣಪುತ್ರರಿಗೂ ಮನಸ್ಸಿನಲ್ಲಿ ಯುದ್ಧೋತ್ಸಾಹವು ಹುಟ್ಟಿತು. ಇಂದ್ರನಿಗೆಣೆಯಾದ ಪರಾಕ್ರಮವುಳ್ಳ ರಾವಣಪುತ್ರರಾದ ಈ ಮೂರುಮಂದಿ ರಾಕ್ಷಸವೀರರೂ ಯುದ್ಧಾತುರದಿಂದ ನಾನು ತಾನೆಂದು ಗರ್ಜಿಸುತ್ತ ಉತ್ಸಾಹದಿಂದ ನಿಂತಿದ್ದರು. ಈ ರಾಕ್ಷಸರಲ್ಲಿಯೋ ಒಬ್ಬೊಬ್ಬರೂ ಆಕಾಶದಲ್ಲಿ ಸಂಚರಿಸತಕ್ಕ ಶಕ್ತಿಯುಳ್ಳವರು! ಒಬ್ಬೊಬ್ಬರೂ ಮಾಯೆಯಲ್ಲಿ ನಿಪುಣರು! ಒಬ್ಬೊಬ್ಬರೂ ದೇವತೆಗಳ ಕೊಬ್ಬನ್ನು ಮುರಿಯಬಲ್ಲವರು! ಒಬ್ಬೊಬ್ಬರೂ ಯುದ್ಧದಲ್ಲಿ ಶತ್ರುಗಳಿಗೆ ದುರ್ಜಯವಾದ ಪರಾಕ್ರಮವುಳ್ಳವರು! ಎಲ್ಲರೂ ಬಹಳ ಬಲಾಢ್ಯರು! ಎಲ್ಲರೂ ವಿಶೇಷ ಕೀರ್ತಿಸಂಪನ್ನರು! ದೇವಗಂಧರ್ವಕಿನ್ನರ ಮಹೋರಗರೆಲ್ಲರೂ ಒಂದಾಗಿ ಸೇರಿ ಬಂದಾಗಲೂ ಇವರು ಪರಾಜಯವನ್ನು ಹೊಂದಿದರೆಂಬ ಸುದ್ದಿಯನ್ನು ಇದುವರೆಗೆ ಕೇಳಿದುದೇ ಇಲ್ಲ! ಎಲ್ಲರೂ ವಿದ್ಯಾವಂತರು! ಎಲ್ಲರೂ ಮಹಾವೀರರು! ಎಲ್ಲರೂ ಯುದ್ಧದಲ್ಲಿ ನಿಪುಣರು! ಎಲ್ಲರೂ ಉತ್ಕೃಷ್ಟವಾದ ಶಾಸ್ತ್ರಜ್ಞಾನವುಳ್ಳವರು! ಎಲ್ಲರೂ ವರವನ್ನು ಪಡೆದು ಬಂದವರು! ಹೀಗೆ ಮಹಾದ್ಭುತಶಕ್ತಿಯುಳ್ಳವ

---

* ಈ ನರಕಾಸುರನು ಭೂಪುತ್ರನಾದ ನರಕಾಸುರನಲ್ಲ! ಏಕೆಂದರೆ, ಕೃಷ್ಣನಿಂದ ಹತನಾದ ಆ ನರಕಾಸುರನು, ವಾಲ್ಮೀಕಿಯು ರಾಮಾಯಣಗ್ರಂಥವನ್ನು ರಚಿಸಿದ ಕಾಲದಲ್ಲಿ ಹುಟ್ಟಿಯೇ ಇರಲಿಲ್ಲ. ಆದುದರಿಂದ "ವಾತಾಪಿರ್ನಮುಚಿಶ್ಚೈವ ಇಲ್ವಲಸ್ಸುಮನಸ್ತಥಾ। ಅಂತಕೋ ನರಕಶ್ಚೈವ ಕಾಲನಾಭಸ್ತಥೈವಚ" ಎಂಬುದಾಗಿ ವಿಪ್ರಚಿತ್ತಿಗೆ ಸಿಂಹಿಕೆಯಲ್ಲಿ ಹುಟ್ಟಿದ ವಾತಾಪಿ ಮೊದಲಾದ ರಾಕ್ಷಸರಲ್ಲಿ ಅವನೊಬ್ಬನೆಂದು ಗ್ರಹಿಸಬೇಕು.

ರಾಗಿ, ಸೂರ್ಯನಂತೆ ವರ್ಚಸ್ಸುಳ್ಳವರಾಗಿ, ಶತ್ರುಸಂಹಾರಕವಾದ ಆ ಮೂರುಮಂದಿ ಕುಮಾರರೂ ತನ್ನನ್ನು ಸುತ್ತಿ ನಿಂತಾಗ, ರಾಕ್ಷಸರಾಜನಾದ ಆ ರಾವಣನು, ದಾನವರ ಕೊಬ್ಬನ್ನು ಮುರಿಯತಕ್ಕ ದೇವತೆಗಳಿಂದ ಪರಿವೃತನಾದ ದೇವೇಂದ್ರನಂತೆಯೇ ಪ್ರಕಾಶಿಸುತ್ತಿದ್ದನು. ಆಗ ರಾವಣನು ಆ ಮೂರು ಮಕ್ಕಳನ್ನೂ ಪ್ರೀತಿಯಿಂದಾಲಿಂಗಿಸಿ, ವೀರಭೂಷಣಗಳಿಂದ ಅವರ ದೇಹವನ್ನಲಂಕರಿಸಿ, ಅವರಿಗೆ ಮಂಗಳಾಶೀರ್ವಾದಗಳನ್ನು ಮಾಡಿ ಯುದ್ಧಪ್ರಯಾಣಕ್ಕನುಮತಿಯನ್ನು ಕೊಟ್ಟನು. ಮತ್ತು ಯುದ್ಧದಲ್ಲಿ ಇವರ ಬೆಂಬಲಕ್ಕಾಗಿ ತನ್ನ ತಮ್ಮಂದಿರಾದ, * ಯುದ್ಧೋನ್ಮತ್ತನೆಂದೂ ಮತ್ತನೆಂದೂ ನಾಮಾಂತರವುಳ್ಳ ಮಹೋದರ ಮಹಾಪಾರ್ಶ್ವರನ್ನೂ ಕಳುಹಿಸಿಕೊಟ್ಟನು. ಮಹಾಕಾಯವುಳ್ಳ ಈ ಆರುಮಂದಿ ರಾಕ್ಷಸರೂ, ರಾವಣನಿಗೆ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿ ಯುದ್ಧಕ್ಕೆ ಹೊರಟರು. ಅವರೆಲ್ಲರೂ ಆಗ, ಯುದ್ಧದಲ್ಲಿ ಶಸ್ತ್ರಪ್ರಹಾರಗಳನ್ನು ನಿವಾರಿಸತಕ್ಕ ಕೆಲವು † ಮಹೌಷಧಿಗಳನ್ನೂ, ಸುಗಂಧದ್ರವ್ಯಗಳನ್ನೂ ಮೈಗೆ ಲೇಪಿಸಿಕೊಂಡು ಯುದ್ಧಾತುರದಿಂದ ಪ್ರಯಾಣಮಾಡಿದರು. ಮೊದಲು ತ್ರಿಶಿರಸ್ಸೂ, ಆಮೇಲೆ ಅತಿಕಾಯ ದೇವಾಂತಕ ನರಾಂತಕರೂ, ಅವರ ಹಿಂದೆ ಮಹೋದರಮಹಾಪಾರ್ಶ್ವರೂ, ಈ ಆರುಮಂದಿಯೂ ಕಾಲಚೋದಿತರಾಗಿ ಅತ್ಯಾತುರದಿಂದ ರಣರಂಗವನ್ನು ಕುರಿತು ಹೊರಟರು. ಇವರಲ್ಲಿ ಮಹೋದರನೆಂಬವನು ಐರಾವತಕುಲದಲ್ಲಿ ಹುಟ್ಟಿ, ಕಾಲಮೇಘದಂತೆ ಬೆಳಗುತ್ತಿದ್ದ ಸುದರ್ಶನವೆಂಬ ಆನೆಯನ್ನೇರಿದನು. ಸಮಸ್ತಾಯುಧಗಳಿಂದಲೂ, ಬಾಣಗಳನ್ನು ತುಂಬಿದ ಬತ್ತಳಿಕೆಗಳಿಂದಲೂ ಕೂಡಿ,

---

* ರಾವಣನ ತಮ್ಮಂದಿರಾದ ಮಹೋದರ ಮಹಾಪಾರ್ಶ್ವರಿಬ್ಬರಿಗೂ ಕ್ರಮವಾಗಿ ಯುದ್ಧೋನ್ಮತ್ತ ಮತ್ತರೆಂಬ ನಾಮಾಂತರವು.

† ಇಲ್ಲಿ "ಕೋಷ್ಠಂ ಮಾಂಸಿ ಹರಿದ್ರೇ ದ್ವೇ ಮುರಾ ಶೈಲೇಯ ಚಂದನೇ । ತ್ವಚಾ ಚಂಪಕಮುಸ್ತಾಶ್ಚ ಶಸ್ತ್ರೌಷಧ್ಯೋದಶಸ್ಮೃತಾಃ" ಎಂಬುದಾಗಿ, ಕೋಷ್ಠ, ಜಟಾಮಾಂಸಿ, ಅರಿಸಿನ, ಮರದರಿಸಿನ, ಮುರ, ಕಲ್ಲುಹೂ, ಚಂದನ, ಲವಂಗಪಟ್ಟೆ, ಸಂಪಗೆ, ಕೊನಾರಿಗೆಡ್ಡೆ, ಈ ಹತ್ತು ಮೂಲಿಕೆಗಳೂ ಶಸ್ತ್ರದ ಗಾಯವನ್ನು ತಪ್ಪಿಸತಕ್ಕವುಗಳೆಂದು ವೈದ್ಯಶಾಸ್ತ್ರವು.

ಸರ್ವಾಲಂಕಾರಭೂಷಿತವಾದ ಆ ಆನೆಯನ್ನೇರಿ ಕುಳಿತಿದ್ದ ಮಹೋದರನು * ಅಸ್ತಮಯಪರ್ವತವನ್ನೇರಿದ ಸೂರ್ಯನಂತೆ ತೋರುತ್ತಿದ್ದನು. ರಾವಣ ಪುತ್ರನಾದ ತ್ರಿಶಿರಸ್ಸು ಸಮಸ್ತಾಯುಧಗಳಿಂದಲೂ ತುಂಬಿ ಉತ್ತಮಾಶ್ವ ಗಳ ಮೇಲೆ ಹೂಡಿದ ಒಂದು ದಿವ್ಯರಥವನ್ನೇರಿದನು. ಈ ಆಯುಧ ಕಾಂತಿಗಳಿಂದ ದೇದೀಪ್ಯಮಾನವಾಗಿ ಮಹಾಧ್ವನಿಯೊಡನೆ ಬರುತ್ತಿದ್ದ ಆ ರಥದ ಮೇಲೆ ಧನುರ್ಧಾರಿಯಾಗಿ ಕುಳಿತಿದ್ದ ಆ ತ್ರಿಶಿರಸ್ಸು, ಮಿಂಚಿ ನಿಂದಲೂ, ಇಂದ್ರಧನುಸ್ಸಿನಿಂದಲೂ, ಉಲ್ಕೆಗಳಿಂದಲೂ ಕೂಡಿ ಪರ್ವತಾ ಗ್ರದಲ್ಲಿ ಶೋಭಿಸುವ ಮಹಾಮೇಘದಂತೆ ತೋರುತ್ತಿದ್ದನು. ಮತ್ತು ಆ ತ್ರಿಶಿರಸ್ಸು ಮೂರು ತಲೆಗಳಲ್ಲಿಯೂ ಮೂರು ಕಿರೀಟಗಳನ್ನು ಧರಿಸಿ, ಉನ್ನತವಾದ ಆ ರಥದ ಮೇಲೆ ಕುಳಿತಾಗ ಮೂರು ಸುವರ್ಣಶಿಖರ ಗಳಿಂದ ಶೋಭಿಸುವ ಪರ್ವತಶ್ರೇಷ್ಠವಾದ ಹಿಮವಂತನಂತೆ ಕಾಣು ತ್ತಿದ್ದನು. ಆಗ ಮಹಾತೇಜಸ್ವಿಯಾಗಿ ಧನುರ್ಧಾರಿಗಳಲ್ಲಿ ಮೇಲೆನಿಸಿ ಕೊಂಡ ರಾವಣಪುತ್ರನಾದ ಅತಿಕಾಯನು, ಉತ್ತಮವಾದ ಚಕ್ರದಿಂ ದಲೂ, ನೊಗದಿಂದಲೂ, ಅಚ್ಚಿನಿಂದಲೂ, ದೃಢವಾದ ಮರದ ಹಲಗೆ ಗಳಿಂದಲೂ, ಬಿಗಿಯಾಗಿ ಜೋಡಿಸಲ್ಪಟ್ಟು, ಬಿಲ್ಲು ಬತ್ತಳಿಕೆಗಳಿಂದಲೂ ಪ್ರಾಸಪರಿಘ ಖಡ್ಗಾದ್ಯಾಯುಧಗಳಿಂದಲೂ ತುಂಬಿದ ಬೇರೊಂದು ರಥ ವನ್ನೇರಿದನು. ದೇದೀಪ್ಯಮಾನವಾದ ಸುವರ್ಣಕಿರೀಟವನ್ನೂ ಇತರ ಭೂಷಣಗಳನ್ನೂ ಧರಿಸಿ ಆ ರಥದ ಮೇಲೇರಿ ಕುಳಿತಿದ್ದ ಅತಿಕಾಯನು ಕಾಂತಿವಿಶಿಷ್ಟವಾದ ಮೇರುಪರ್ವತದಂತೆ ಶೋಭಿಸುತ್ತಿದ್ದನು. ರಥಾ ರೂಢನಾದ ಈ ಅತಿಕಾಯನ ಸುತ್ತಲೂ, ದೇವೇಂದ್ರನನ್ನು ಸುತ್ತಿ ನಿಂತ ದೇವತೆಗಳಂತೆ ಅನೇಕ ರಾಕ್ಷಸವೀರರು ಬೆಂಬಲವಾಗಿ ಬರುತ್ತಿದ್ದರು. ಆಮೇಲೆ ನರಾಂತಕನೆಂಬವನು, ಉಚ್ಚೈಶ್ರವಸ್ಸಿನಂತೆ ಸುಲಕ್ಷಣಗಳುಳ್ಳ ದಾಗಿಯೂ, ಸುವರ್ಣಾಲಂಕೃತವಾಗಿಯೂ, ಮನೋವೇಗವುಳ್ಳದಾಗಿಯೂ ಇದ್ದ ದೊಡ್ಡ ಬಿಳೀಕುದುರೆಯನ್ನೇರಿದನು. ಆಕಾಶದ ಕೊಳ್ಳಿಯಂತೆ ಭಯಂಕರವಾದ ಪ್ರಾಸವನ್ನು ಕೈಯಲ್ಲಿ ಹಿಡಿದು, ಕುದುರೆಯ ಮೇಲೆ

* ಇಲ್ಲಿ ಅಸ್ತಮಯಸೂರ್ಯನನ್ನು ಹೋಲಿಸಿರುವುದರಿಂದ ರಾಕ್ಷಸನಿಗೆ ಕೂಡಲೆ ವಿನಾಶವೆಂದು ಸೂಚಿತವಾಗುವುದು.

ಕುಳಿತು ಬರುತ್ತಿದ್ದ ನರಾಂತಕನು, ಶಕ್ತ್ಯಾಯುಧವನ್ನು ಹಿಡಿದು, ನವಿಲನ್ನೇರಿ ಬರುತ್ತಿರುವ ಮಹಾತೇಜಸ್ವಿಯಾದ ಕುಮಾರಸ್ವಾಮಿಯಂತೆ ಪ್ರಕಾಶಿಸುತ್ತಿದ್ದನು. ದೇವಾಂತಕನೆಂಬುವನು ವಜ್ರದ ಮುಳ್ಳುಗಳುಳ್ಳ ಪರಿಘವನ್ನೆತ್ತಿ ಹಿಡಿದು, ಸಮುದ್ರಮಥನದ ಕಾಲದಲ್ಲಿ ಮಂದರಪರ್ವತವನ್ನು ಧರಿಸಿದ ಮಹಾವಿಷ್ಣುವಿನ ರೂಪವನ್ನನುಕರಿಸುತ್ತ ಕಾಲನಡೆಯಿಂದಲೇ ಹೊರಟನು. ಹಾಗೆಯೇ ಮಹಾಕಾಯವುಳ್ಳ ಮಹಾಪಾರ್ಶ್ವನೆಂಬುವನು ಒಂದು ಗದೆಯನ್ನೆತ್ತಿಕೊಂಡು ಯುದ್ಧದಲ್ಲಿ ಗದಾಪಾಣಿಯಾಗಿ ನಿಂತ ಕುಬೇರನಂತೆ ಪ್ರಕಾಶಿಸುತ್ತ ಮುಂದೆ ಹೊರಟನು. ಮಹಾಬಲಾಢ್ಯರಾದ ಆ ರಾಕ್ಷಸರೆಲ್ಲರೂ ಎಣೆಯಿಲ್ಲದ ವೀರ್ಯವುಳ್ಳ ಅನೇಕ ರಾಕ್ಷಸ ಸೈನ್ಯಗಳಿಂದ ಪರಿವೃತರಾಗಿ, ದೇವತೆಗಳು ಅಮರಾವತಿಯಿಂದ ದಂಡೆತ್ತಿ ಹೊರಡುವಂತೆ ಲಂಕೆಯಿಂದ ಹೊರಟರು. ಈ ರಾಕ್ಷಸಸೈನಿಕರೂ ಕೂಡ, ಉತ್ತಮಾಯುಧಗಳನ್ನು ಹಿಡಿದು, ಕೆಲವರು ಆನೆಗಳನ್ನೂ, ಕೆಲವರು ಕುದುರೆಗಳನ್ನೂ, ಕೆಲವರು ಮೇಘಗಳಂತೆ ಮೊರೆಯುವ ರಥಗಳನ್ನೂ ಏರಿ ಆ ಮಹೋದರಾದಿ ರಾಕ್ಷಸರ ಹಿಂದೆ ಹೊರಟರು. ಅಹಳ ಬಲಾಢ್ಯರಾಗಿಯೂ, ಸೂರ್ಯನಂತೆ ತೇಜಸ್ವಿಗಳಾಗಿಯೂ, ಕಿರೀಟಧಾರಿಗಳಾಗಿಯೂ ಬರುತ್ತಿದ್ದ ಈ ರಾವಣಕುಮಾರರೆಲ್ಲರೂ, ಆಕಾಶದಲ್ಲಿ ಬೆಳಗುತ್ತಿರುವ ಮಹಾಗ್ರಹಗಳಂತೆ ತೋರುತ್ತಿದ್ದರು. ಈ ರಾಕ್ಷಸರೆಲ್ಲರೂ ಹಿಡಿದಿದ್ದ ಬಿಳುಪಾದ ಶಸ್ತ್ರಸಮೂಹವು ಶರತ್ಕಾಲದ ಮೇಘಕ್ಕೆ ಸಮಾನವಾಗಿ, ಆಕಾಶದಲ್ಲಿ ಸಾಲಾಗಿ ಸಂಚರಿಸುತ್ತಿರುವ ಹಂಸಪಕ್ಷಿಗಳಂತೆ ಪ್ರಕಾಶಿಸುತ್ತಿತ್ತು. ಈ ರಾಕ್ಷಸರೊಬ್ಬೊಬ್ಬರೂ ಆಗ ತಮ್ಮಲ್ಲಿ ತಾವು "ಈ ಯುದ್ಧದಲ್ಲಿ ತಾವಾದರೂ ಸಾಯಬೇಕು. ಶತ್ರುಗಳನ್ನಾದರೂ ಕೊಲ್ಲಬೇಕು!" ಎಂಬ ದೃಢನಿಶ್ಚಯವನ್ನು ಮಾಡಿಕೊಂಡು, ಯುದ್ಧಾಕಾಂಕ್ಷಿಗಳಾಗಿ ಬರುತ್ತಿದ್ದರು. ಯುದ್ಧಮದದಿಂದ ಕೊಬ್ಬಿದ ಆ ರಾಕ್ಷಸರೆಲ್ಲರೂ ಹೀಗೆ ಮಹೋತ್ಸಾಹದಿಂದ ಬರುವಾಗ, ಗರ್ಜಿಸುವವರು ಕೆಲವರು! ಶತ್ರುಗಳನ್ನು ಕಾಣುವುದಕ್ಕೆ ಮೊದಲೇ ಬಾಣಗಳನ್ನು ಬಿಡುವವರು ಕೆಲವರು! ಬಿಟ್ಟ ಬಾಣಗಳನ್ನು ಕೈಯಿಂದಾತುಕೊಳ್ಳುವವರು ಕೆಲವರು! ಹೀಗೆ ನಾನಾವಿಧಗಳಾದ ಉತ್ಸಾಹಚೇಷ್ಟೆಗಳನ್ನು ಮಾಡುತ್ತ ಬಂದರು.

ಆಗ ಈ ರಾಕ್ಷಸರ ಸಿಂಹನಾದ ಧ್ವನಿಗಳೂ, ಭುಜಾಸ್ಫಾಲ ಧ್ವನಿಗಳೂ, ಮೇಲೆ ಮೇಲೆ ಹೆಚ್ಚಿ, ಅದರಿಂದ ಭೂಮಿಯೆಲ್ಲವೂ ನಡುಗಿದಂತಾಯಿತು. ಹೀಗೆ ಮಹಾಬಲಶಾಲಿಗಳಾದ ರಾಕ್ಷಸರೆಲ್ಲರೂ ಅತ್ಯುತ್ಸಾಹದಿಂದ ಹೊರಟು ಬಂದು, ಇತ್ತಲಾಗಿ ಶಿಲೆಗಳನ್ನೂ, ವೃಕ್ಷಗಳನ್ನೂ, ಹಿಡಿದು ಯುದ್ಧಕ್ಕೆ ಸಿದ್ಧರಾಗಿ ನಿಂತಿದ್ದ ವಾನರ ಸೈನ್ಯವನ್ನು ಕಂಡರು. ಬಲಾಢ್ಯರಾದ ವಾನರರೂ ತಮಗಿದಿರಾಗಿ ಬರುತ್ತಿದ್ದ ದೊಡ್ಡ ರಾಕ್ಷಸ ಸೈನ್ಯವನ್ನೂ ನೋಡಿದರು. ಆ ರಾಕ್ಷಸ ಸೈನ್ಯದಲ್ಲಿಯೇ ಎಲ್ಲಿ ನೋಡಿದರೂ ಆನೆಗಳು! ಎಲ್ಲಿ ನೋಡಿದರೂ ಕುದುರೆಗಳು! ಎಲ್ಲಿ ನೋಡಿದರೂ ರಥಗಳು! ಹೀಗೆ ಚತುರಂಗ ಸೈನ್ಯಗಳೂ ಕಿಕ್ಕಿರಿದು ತುಂಬಿರುವುವು. ಅಲ್ಲಿನ ರಥಗಳಿಗೆ ಕಟ್ಟಿದ ನೂರಾರು ಕಿರುಗಂಟೆಗಳ ಘಣಘಣ ಧ್ವನಿಯೇ ಎಷ್ಟೋ ದೂರ ದಿಂದ ಕೇಳಿಸುತ್ತಿರುವುದು. ಆ ಸೈನ್ಯದಲ್ಲಿರುವ ಒಬ್ಬೊಬ್ಬ ರಾಕ್ಷಸನೂ ದೊಡ್ಡ ದೊಡ್ಡ ಆಯುಧಗಳನ್ನೆತ್ತಿ ಹಿಡಿದು, ಉರಿಯುವ ಬೆಂಕಿಯಂ ತೆಯೂ, ಜ್ವಲಿಸುವ ಸೂರ್ಯನಂತೆಯೂ ತೇಜಸ್ಸಿನಿಂದ ಬೆಳಗುತ್ತ, ಗುಂಪುಗುಂಪಾಗಿ ಸೇರಿ ಬರುತ್ತಿರುವಾಗ ಆ ರಾಕ್ಷಸ ಸೈನ್ಯವು ವರ್ಷಾ ಕಾಲದಲ್ಲಿ ಸಾಗಿಬರುತ್ತಿರುವ ಕಾಳಮೇಘ ಸಮೂಹದಂತೆ ಕಾಣುತ್ತಿರು ವುದು. ಹೀಗೆ ಮಹಾವೈಭವದಿಂದ ಬರುತ್ತಿದ್ದ ಆ ರಾಕ್ಷಸ ಸೇನೆಯನ್ನು ನೋಡಿದೊಡನೆ, ಈ ಕಡೆಯಲ್ಲಿದ್ದ ವಾನರರೆಲ್ಲರೂ ತಮ್ಮ ಪರಾಕ್ರಮ ವನ್ನು ತೋರಿಸುವುದಕ್ಕೆ ತಕ್ಕ ಅವಕಾಶವು ಸಿಕ್ಕಿತೆಂಬ ಸಂತೋಷದಿಂದ, ದೊಡ್ಡ ದೊಡ್ಡ ಬೆಟ್ಟಗಳನ್ನು ಕೈಗೆತ್ತಿಕೊಂಡು ಮಹಾಧ್ವನಿಯಿಂದ ಸಿಂಹನಾದವನ್ನು ಮಾಡಿದರು. ಇವರ ಗರ್ಜನ ಧ್ವನಿಯನ್ನೂ, ಉತ್ಸಾಹ ವನ್ನೂ ನೋಡಿ ಸಹಿಸಲಾರದೆ, ಅತ್ತಲಾಗಿ ರಾಕ್ಷಸರೂ ಕೂಡ ಇವರಿ ಗಿಂತಲೂ ಹೆಚ್ಚಾದ ಧ್ವನಿಯಿಂದ ಪ್ರತಿಗರ್ಜನಗಳನ್ನು ಮಾಡಿದರು. ಇಷ್ಟರಲ್ಲಿಯೇ ಕೆಲವು ವಾನರಯೂಥಪತಿಗಳು ಭಯಂಕರವಾದ ಆ ರಾಕ್ಷಸ ಸೇನೆಯಲ್ಲಿ ನುಗ್ಗಿ, ದೊಡ್ಡ ದೊಡ್ಡ ಪರ್ವತವನ್ನು ಕೈಯಿಂದೆತ್ತಿ ಹಿಡಿದು, ಶಿಖರಗಳಿಂದ ಕೂಡಿದ ಬೆಟ್ಟಗಳಂತೆ ಆ ಸೇನೆಯ ನಡುವೆ ಸುತ್ತುತ್ತ ರಾಕ್ಷಸ ಸೈನಿಕರನ್ನು ಚದರಿಸುವುದಕ್ಕೆ ತೊಡಗಿದರು. ಈ ವಾನರ ಯೂಥಪತಿಗಳೆಲ್ಲರೂ ಕೋಪದಿಂದ ದೊಡ್ಡ ದೊಡ್ಡ ಕೊಂಬೆಗಳುಳ್ಳ

ಮರಗಳನ್ನೆತ್ತಿಕೊಂಡು, ಕೆಲವರು ಆಕಾಶ ಮಾರ್ಗವಾಗಿಯೂ, ಕೆಲವರು ಭೂಮಿಯ ಮಾರ್ಗವಾಗಿ ನಡೆದೂ ರಾಕ್ಷಸ ಸೈನ್ಯದಲ್ಲಿ ಪ್ರವೇಶಿಸಿ, ಆ ಸೈನಿಕರನ್ನು ಸುತ್ತಿಸುತ್ತಿ ಹೊಡೆಯುತ್ತ ಬಂದರು. ಆಗ ವಾನರರಾಕ್ಷಸರಿಗೆ ನಡೆದ ಯುದ್ಧವು ಬಹಳ ಭಯಂಕರವಾಯಿತು. ಈ ಯುದ್ಧದಲ್ಲಿ ಭಯಂಕರ ಪರಾಕ್ರಮವುಳ್ಳ ವಾನರರು ತಮ್ಮನ್ನು ರಾಕ್ಷಸರು ತೀಕ್ಷ್ಣ ಬಾಣಗಳಿಂದ ತಡೆಯುತ್ತಿದ್ದರೂ ಲಕ್ಷ್ಯಮಾಡದೆ, ಗಿಡಗಳನ್ನೂ, ಶಿಲೆಗಳನ್ನೂ, ಪರ್ವತಗಳನ್ನೂ ಕಿತ್ತು ತಂದು, ಆ ರಾಕ್ಷಸ ಸೈನ್ಯದ ಮೇಲೆ ಎಡೆಬಿಡದೆ ಸುರಿಯುತ್ತಿದ್ದರು. ಇತ್ತಲಾಗಿ ವಾನರರೂ, ಅತ್ತಲಾಗಿ ರಾಕ್ಷಸರವ ಆಗಾಗ ಯುದ್ಧೋತ್ಸಾಹದಿಂದ ಗರ್ಜಿಸಿ ಸಿಂಹನಾದ ಮಾಡುತ್ತಿದ್ದರು. ವಾನರರು ಅಲ್ಲಲ್ಲಿ ಸಿಕ್ಕಿದ ರಾಕ್ಷಸರನ್ನು ಶಿಲೆಗಳಿಂದ ಬಡಿದು ಚೂರ್ಣಮಾಡಿದರು. ಆ ಯುದ್ಧದಲ್ಲಿ ಕೆಲವು ವಾನರರು, ಅಲ್ಲಲ್ಲಿ ಯುದ್ಧ ಕವಚಗಳನ್ನೂ ವೀರಭೂಷಣಗಳನ್ನೂ ಧರಿಸಿ, ರಥಗಳ ಮೇಲೆಯೂ, ಆನೆಗಳ ಮೇಲೆಯೂ, ಕುದುರೆಗಳ ಮೇಲೆಯೂ ಕುಳಿತು ಬರುತ್ತಿದ್ದ ರಾಕ್ಷಸ ವೀರರನ್ನು ನೋಡಿ, ಕೋಪದಿಂದ ಅವರ ಮೇಲೆ ಹಾರಿಬಿದ್ದು ಕೊಲ್ಲುತ್ತಿದ್ದರು. ಹೀಗೆ ವಾನರರು ಬೀಸಿಬಡಿದ ಪರ್ವತಶಿಖರಗಳಿಂದ ರಾಕ್ಷಸ ಸೈನ್ಯದಲ್ಲಿ ಮೈಮುರಿದು ಬಿದ್ದವರೂ, ಈ ವಾನರರ ಮುಷ್ಟಿಪ್ರಹಾರದಿಂದ ಕಿತ್ತ ಕಣ್ಣುಳ್ಳವರೂ ತಂಡತಂಡವಾಗಿ ಸಾಯುತ್ತಿದ್ದರು. ಹೀಗೆ ರಾಕ್ಷಸರು ನಾನಾವಿಧವಾಗಿ ನೊಂದು, ನಿಂತಕಡೆಯಲ್ಲಿ ನಿಲ್ಲದೆ ಸುತ್ತುತ್ತ ಕೆಳಗೆ ಬಿದ್ದು ಕೂಗಿಡುತ್ತಿದ್ದರು. ಇಷ್ಟರಲ್ಲಿ ಕೆಲವು ರಾಕ್ಷಸರು ತೀಕ್ಷ್ಣಬಾಣಗಳಿಂದಲೂ, ಶೂಲಗಳಿಂದಲೂ, ಮುದ್ಗರಗಳಿಂದಲೂ, ಪ್ರಾಸಗಳಿಂದಲೂ, ಶಸ್ತ್ರಾಯುಧಗಳಿಂದಲೂ ಅಲ್ಲಲ್ಲಿ ಸಿಕ್ಕಿದ ಕಪಿಗಳನ್ನು ಭೇದಿಸಿ ಕೊಲ್ಲುತ್ತ ಬಂದರು. ಈ ತುಮುಲಯುದ್ಧದಲ್ಲಿ ವಾನರರಾಕ್ಷಸರಿಬ್ಬರೂ ಒಬ್ಬರನ್ನೊಬ್ಬರು ಜಯಿಸಬೇಕೆಂಬ ಹಟದಿಂದ ಮೇಲೆ ಬಿದ್ದು, ಶತ್ರುಗಳ ರಕ್ತದಿಂದ ತೊಯ್ದು ಮೈಯುಳ್ಳವರಾಗಿ ಒಬ್ಬರನ್ನೊಬ್ಬರು ಕೊಂದು ಕೆಡಹುತ್ತಿದ್ದರು. ಹೀಗೆ ವಾನರರಾಕ್ಷಸ ಸೈನಿಕರು ಒಬ್ಬರ ಮೇಲೊಬ್ಬರು ಬೀಸಿಬಡಿದ ಪರ್ವತಶಿಖರಗಳಿಂದಲೂ, ಖಡ್ಗಾದ್ಯಾಯುಧಗಳಿಂದಲೂ ಆ ಯುದ್ಧಭೂಮಿಯೆಲ್ಲವೂ ಮುಹೂರ್ತಮಾತ್ರದಲ್ಲಿ ತುಂಬಿ

ಹೋಯಿತು. ರಣಾಂಗಣವೆಲ್ಲವೂ ರಕ್ತಪ್ರವಾಹಮಯವಾಯಿತು. ಆ ರಣಭೂಮಿಯೆಲ್ಲವೂ ಆಗಾಗ ಅನೇಕ ಶತ್ರುಗಳನ್ನು ಕೊಂದಿಕ್ಕಿ ಯುದ್ಧ ಮದದಿಂದ ಕೊಬ್ಬಿದ ಪರ್ವತಾಕಾರವುಳ್ಳ ರಾಕ್ಷಸರ ದೇಹಗಳಿಂದ ದಟ್ಟ ವಾಗಿ ತುಂಬಿಹೋಯಿತು. ಅಲ್ಲಲ್ಲಿ ಕೆಲವು ವಾನರರು ಬಾಹುಯುದ್ಧ ವನ್ನಾರಂಭಿಸಿ ರಾಕ್ಷಸರ ಮೇಲೆ ಬಿದ್ದು, ಅವರ ಶೂಲಾದ್ಯಾಯುಧಗಳನ್ನು ಗಳನ್ನು ಮುರಿದು, ಆ ರಾಕ್ಷಸರನ್ನೇ ಕೈಯಿಂದೆತ್ತಿ ದೂರಕ್ಕೊಗೆಯು ತ್ತಿದ್ದರು. ಆ ರಾಕ್ಷಸರೂ ಧೈರ್ಯಗುಂದದೆ, ಆ ಕ್ಷಣವೇ ಹಿಂತಿರುಗಿ ಬಂದು ವಾನರರ ಮೇಲೆ ಬಿದ್ದು, ನೋಡುವವರಿಗೆ ಆಶ್ಚರ್ಯವನ್ನುಂಟು ಮಾಡುವಂತೆ ಬಾಹುಯುದ್ಧವನ್ನಾರಂಭಿಸಿದರು. ರಾಕ್ಷಸರು ಕೆಲವು ವಾನರ ರನ್ನು ವಾನರರಿಂದಲೇ ಕೊಲ್ಲುವರು. ಮತ್ತು ರಾಕ್ಷಸರು ವಾನರರ ಕೈ ಯಲ್ಲಿದ್ದ ಶಿಲೆಗಳನ್ನು ಕಿತ್ತುಕೊಂಡು ಅವುಗಳಿಂದಲೇ ಅವರನ್ನು ಕೊಂದು ಕೆಡಹುವರು. ವಾನರರು ಹಾಗೆಯೇ ರಾಕ್ಷಸರ ಕೈಯಿಂದ ಶಸ್ತ್ರಗಳನ್ನು ಕಿತ್ತುಕೊಂಡು ಆ ಶಸ್ತ್ರಗಳಿಂದಲೇ ರಾಕ್ಷಸರನ್ನು ಕೊಲ್ಲುವರು! ಹೀಗೆ ವಾನರರಾಕ್ಷಸರಿಬ್ಬರೂ, ತಮ್ಮ ತಮ್ಮ ಕೈಗೆ ಸಿಕ್ಕಿದಂತೆ ಪರ್ವತಗಳಿಂ ದಲೂ, ಶೂಲಗಳಿಂದಲೂ, ಬಾಣಗಳಿಂದಲೂ, ಒಬ್ಬರನ್ನೊಬ್ಬರು ಭೇದಿಸಿ ಹೊಡೆದು ಸಿಂಹನಾದ ಮಾಡುತ್ತಿದ್ದರು. ವಾನರರ ಪ್ರಹಾರದಿಂದ ರಾಕ್ಷ ಸರ ಮೈಮೇಲಿನ ಯುದ್ಧಕವಚಗಳೆಲ್ಲವೂ ಹರಿದು ಅವರ ಅಂಗಾಂಗಗಳ ಲ್ಲಿಯೂ ಖಂಡಖಂಡವಾಗಿ ರಕ್ತವು ಸುರಿಯುತ್ತಿರಲು, ಕತ್ತಿಯಿಂದ ಪಟ್ಟೆ ಯನ್ನು ಕೆತ್ತಿದಾಗ ರಸವನ್ನು ಕಾರುವ ವೃಕ್ಷದಂತೆ ಕಾಣುತ್ತಿದ್ದರು. ಆ ಯುದ್ಧದಲ್ಲಿ ಕೆಲವು ವಾನರರು ರಥದಿಂದ ರಥಗಳನ್ನೂ, ಕುದುರೆಗಳಿಂದ ಕುದುರೆಗಳನ್ನೂ, ಆನೆಗಳಿಂದ ಆನೆಗಳನ್ನೂ ಬಡಿದು ಕೊಲ್ಲುತ್ತ ಬಂದರು. ಕೆಲವು ವಾನರರು ತಮಗೆ ಜಯವು ಕೈಗೂಡಿತೆಂದು ಸಂತುಷ್ಟರಾಗಿ, ಮಣಿಶಿಲೆಗಳನ್ನೂ, ಅನೇಕ ಶಾಖೆಗಳುಳ್ಳ ವೃಕ್ಷಗಳನ್ನೂ ಹೊತ್ತುತಂದು, ಅವುಗಳಿಂದ ಅನೇಕ ರಾಕ್ಷಸರನ್ನು ಕೊಂದು ಕೆಡಹಿದರು. ಈ ಯುದ್ಧವು ಅತ್ಯಂತ ಭಯಂಕರವಾಗಿ ಕಾಣಿಸಿತು. ಅತ್ತಲಾಗಿ ರಾಕ್ಷಸರೂ ಕೂಡ, ಶಕ್ತಿಗಳಿಂದಲೂ, ಅರ್ಧಚಂದ್ರಬಾಣಗಳಿಂದಲೂ, ಭಲ್ಯಗಳಿಂದಲೂ, ಮೊನೆ ಬಾಣಗಳಿಂದಲೂ ವಾನರರು ತಮ್ಮ ಮೇಲೆ ಪ್ರಯೋಗಿಸುತ್ತಿದ್ದ ಶಿಲೆ

ಗಳನ್ನೂ, ವೃಕ್ಷಗಳನ್ನೂ ಭೇದಿಸುತ್ತ ಬಂದರು. ಆಗ ಆ ರಣರಂಗದಲ್ಲಿ ಸುತ್ತಲೂ ಚದರಿ ಬಿದ್ದಿದ್ದ ಪರ್ವತಶಿಖರಗಳೂ, ಕಡಿದು ಬಿದ್ದ ವೃಕ್ಷಗಳೂ, ಹತರಾದ ವಾನರರಾಕ್ಷಸರೂ ದಟ್ಟವಾಗಿ ತುಂಬಿ ಕಾಲಿಡುವುದಕ್ಕೂ ಸ್ಥಳವಿಲ್ಲದಂತಾಯಿತು. ಆಗ ವಾನರರೆಲ್ಲರೂ ಗರ್ವದಿಂದುಬ್ಬಿ ನಾನಾಚೇಷ್ಟೆಗಳನ್ನು ಮಾಡುತ್ತ ನಿರ್ಭಯವಾಗಿ ಯುದ್ಧರಂಗವನ್ನು ಪ್ರವೇಶಿಸಿ, ರಾಕ್ಷಸರ ವಶದಲ್ಲಿದ್ದ ಆಯುಧಗಳನ್ನು ಕಿತ್ತುಕೊಂಡು, ಅವುಗಳನ್ನೇ ತಮ್ಮ ಯುದ್ಧಸಾಧನಗಳನ್ನಾಗಿ ಹಿಡಿದು ರಾಕ್ಷಸರೊಡನೆ ಹೋರಾಡಿದರು. ಹೀಗೆ ದೊಂಬಿಯುದ್ಧವು ನಡೆಯುತ್ತಿರುವಾಗ, ವಾನರರು ಜಯದಿಂದುಬ್ಬುತ್ತಿರುವುದನ್ನು ನೋಡಿ, ಮಹರ್ಷಿಗಳೂ, ದೇವತೆಗಳೂ, ಸಂತೋಷದಿಂದ ಕೂಗಿದರು. ಇಷ್ಟರಲ್ಲಿ ನರಾಂತಕನು ವಾಯುವಿಗೆಣೆಯಾದ ವೇಗವುಳ್ಳ ಕುದುರೆಯನ್ನೇರಿ, ತೀಕ್ಷ್ಣವಾದ ಶಕ್ತ್ಯಾಯುಧವನ್ನು ಹಿಡಿದು, ಮತ್ಸ್ಯವು ಮಹಾಸಮುದ್ರವನ್ನು ಪ್ರವೇಶಿಸುವಂತೆ ವಾನರಸೈನ್ಯವನ್ನು ಪ್ರವೇಶಿಸಿ, ಅಲ್ಲಿ ತಾನೊಬ್ಬನೇ ಕ್ಷಣಮಾತ್ರದಲ್ಲಿ ತೀಕ್ಷ್ಣವಾದ ತನ್ನ ಪ್ರಾಸಾಯುಧದಿಂದ ಏಳುನೂರು ಮಂದಿ ವಾನರರನ್ನು ಕತ್ತರಿಸಿ, ಇನ್ನೂ ಅನೇಕ ಕಪಿಸೈನ್ಯಗಳನ್ನು ಪ್ರಹರಿಸುತ್ತ ಬಂದನು. ಹೀಗೆ ಮಹಾಕಾಯವುಳ್ಳ ನರಾಂತಕನು, ಕುದುರೆಯ ಮೇಲೆ ಕುಳಿತು, ವಾನರಸೈನ್ಯದಲ್ಲಿ ಅನೇಕ ವಾನರರನ್ನು ಕೊಲ್ಲುತ್ತಿರಲು, ವಿದ್ಯಾಧರರೂ, ಮಹರ್ಷಿಗಳೂ ಬಹಳ ಭಯಗೊಂಡು ನೋಡುತ್ತಿದ್ದರು. ಈ ನರಾಂತಕನು ಸಂಚರಿಸುವ ಕಡೆಗಳಲ್ಲೆಲ್ಲಾ ಪರ್ವತಾಕಾರವುಳ್ಳ ವಾನರ ಕಳೇಬರಗಳೂ, ಅವರ ದೇಹದ ರಕ್ತಮಾಂಸಗಳೂ, ಎಡೆಬಿಡದೆ ತುಂಬಿಹೋಗುತ್ತಿದ್ದುವು. ಕೆಲವು ವಾನರರು ಇವನನ್ನು ನಿವಾರಿಸುವುದಕ್ಕಾಗಿ ತಮ್ಮ ಪರಾಕ್ರಮವನ್ನು ತೋರಿಸಬೇಕೆಂದು ಪ್ರಯತ್ನಿಸುವಷ್ಟರಲ್ಲಿ, ಇವನು ಅವರ ಮೇಲೆ ಬಿದ್ದು ಅವರನ್ನು ಭೇದಿಸುತ್ತಿದ್ದನು. ಆ ರಣರಂಗದಲ್ಲಿ, ನರಾಂತಕನು, ಜಾಜ್ವಲ್ಯಮಾನವಾಗಿ ಉರಿಯುತ್ತಿದ್ದ ತನ್ನ ಪ್ರಾಸವನ್ನು ಹಿಡಿದು, ಕಾಡುಗಿಚ್ಚು ಕಾಡನ್ನು ದಹಿಸುವಂತೆ ವಾನರ ಸೈನ್ಯಗಳನ್ನು ದಹಿಸುತ್ತ ಬಂದನು. ವಾನರರು ಇವನನ್ನಿದಿರಿಸುವುದಕ್ಕಾಗಿ ವೃಕ್ಷಗಳನ್ನಾಗಲಿ ಬೆಟ್ಟಗಳನ್ನಾಗಲಿ ಕಿತ್ತುತರುವಷ್ಟರಲ್ಲಿ, ಇವನ ಪ್ರಾಸದಿಂದ ಹತರಾಗಿ ಬುಡ

ಕಡಿದ ಮರದಂತೆ ನೆಲಕ್ಕೆ ಬೀಳುತ್ತಿದ್ದರು. ಹೀಗೆ ಬಲಾಢ್ಯನಾದ ನರಾಂತಕನು, ಮಳೆಗಾಲದ ಬಿರುಗಾಳಿಯಂತೆ ತಡೆಯಿಲ್ಲದೆ ನಾನಾದಿಕ್ಕುಗಳಿಗೂ ಸುತ್ತುತ್ತಾ, ಕಂಡಕಂಡ ವಾನರರನ್ನು ಹಿಡಿದು ಮರ್ದಿಸುತ್ತ ಬಂದನು. ವೀರ್ಯವಂತನಾದ ಈ ನರಾಂತಕನು, ಅಲ್ಲಲ್ಲಿ ವಾನರರು ಭಯದಿಂದ ಮೇಲೆ ಹಾರುತ್ತಿದ್ದರೂ, ಸುಮ್ಮನೆ ನಿಂತಿದ್ದರೂ, ಓಡುತ್ತಿದ್ದರೂ, ಬೇರೆ ಯಾವ ಸ್ಥಿತಿಯಲ್ಲಿದ್ದರೂ ಬಿಡದೆ ಹಿಡಿದು ಕೊಲ್ಲುತ್ತಿದ್ದುದರಿಂದ, ವಾನರರಿಗೆ ಭಯದಿಂದ ಓಡುವುದಕ್ಕಾಗಲಿ, ಸುಮ್ಮನೆ ನಿಲ್ಲುವುದಕ್ಕಾಗಲಿ, ಅತ್ತಿತ್ತ ಸರಿಯುವುದಕ್ಕಾಗಲಿ ಸಾಧ್ಯವಿಲ್ಲದೇ ಹೋಯಿತು. ಸೂರ್ಯನಂತೆ ತೇಜಸ್ವಿಯಾಗಿ ಮೃತ್ಯುಸಮಾನವಾದ ಆ ಒಂದು ಪ್ರಾಸದಿಂದಲೇ ಎಷ್ಟೋ ವಾನರ ಸೈನ್ಯಗಳು ಹತವಾಗಿ ಬಿದ್ದುವು. ವಜ್ರಾಯುಧಹತಿಗೆ ಸಮಾನವಾದ ಆ ಪ್ರಾಸದ ಪೆಟ್ಟನ್ನು ತಡೆಯಲಾರದೆ ವಾನರರೆಲ್ಲರೂ ಉಚ್ಚಸ್ವರದಿಂದ ಕೂಗುತ್ತಿದ್ದರು. ಆ ಪ್ರಾಸಕ್ಕೆ ಸಿಕ್ಕಿ ಅಲ್ಲಲ್ಲಿ ಸತ್ತು ಬೀಳುತ್ತಿದ್ದ ವಾನರ ಸೈನಿಕರ ದೇಹಗಳು ಇಂದ್ರನ ವಜ್ರಾಯುಧದ ಪ್ರಹಾರದಿಂದ ಮುರಿದ ಶಿಖರಗಳುಳ್ಳ ಪರ್ವತಗಳಂತೆ ಕಾಣುತ್ತಿದ್ದುವು. ಮೊದಲು ಕುಂಭಕರ್ಣನ ಪ್ರಹಾರದಿಂದ ನೊಂದು ಮೂರ್ಛಿತರಾಗಿ ಮಲಗಿದ್ದ ವಾನರರಲ್ಲಿ ಕೆಲವರು, ಇಷ್ಟರಲ್ಲಿ ಮೆಲ್ಲಗೆ ಮೂರ್ಛೆ ತಿಳಿದು, ಮೇಲೆದ್ದು ಸುಗ್ರೀವನ ಬಳಿಗೆ ಬಂದು, ಅವನಲ್ಲಿ ಮರೆಬಿದ್ದರು. ಇಷ್ಟರಲ್ಲಿ ಸುಗ್ರೀವನೂ ಅತ್ತಿತ್ತ ತಿರುಗಿ ನೋಡುವಾಗ, ತನ್ನ ಕಪಿಸೈನ್ಯವು ಭಯದಿಂದ ಚದರಿ ಪಲಾಯನಮಾಡುವುದನ್ನು ಕಂಡನು. ಹೀಗೆ ತನ್ನ ಕಡೆಯ ಸೈನ್ಯವು ಭಯದಿಂದೋಡುವುದನ್ನೂ, ಆ ಸೈನ್ಯದ ನಡುವೆ ನರಾಂತಕನು ದೊಡ್ಡ ಪ್ರಾಸವನ್ನು ಹಿಡಿದು ಕುದುರೆಯ ಮೇಲೆ ಕುಳಿತು ಸುತ್ತುತ್ತಿರುವುದನ್ನೂ ನೋಡಿದನು. ಆಗ ಮಹಾ ತೇಜಸ್ವಿಯಾದ ಸುಗ್ರೀವನು ಇಂದ್ರನಿಗೆಣೆಯಾದ ಪರಾಕ್ರಮವುಳ್ಳ ತನ್ನ ಕುಮಾರನಾದ ಅಂಗದನನ್ನು ನೋಡಿ "ಎಲೈ ವತ್ಸ ಅಂಗದಾ! ಈಗಲೇ ನೀನು ಹೋಗಿ ಅದೋ ಅತ್ತಲಾಗಿ ಕುದುರೆಯ ಮೇಲೆ ಕುಳಿತು ನಮ್ಮ ಕಪಿಸೈನ್ಯವನ್ನು ಚದರಿಸುತ್ತಿರುವ ಆ ರಾಕ್ಷಸನನ್ನು ಶೀಘ್ರದಲ್ಲಿಯೇ ಕೊಲ್ಲಬೇಕು! ಬೇಗನೆ ಹೊರಡು" ಎಂದನು. ಈ ರಾಜಾಜ್ಞೆಯನ್ನು ಕೇಳಿದೊಡನೆ ಅಂಗದನು ಮೇಘ

ಸಮೂಹದಿಂದ ಹೊರಗೆ ಬರುವ ಸೂರ್ಯನಂತೆ ಮಹಾ ಮೇಘಪರಂಪರೆಯಂತಿದ್ದ ಆ ದೊಡ್ಡ ವಾನರಸೈನ್ಯದ ಮಧ್ಯದಿಂದ ತಟ್ಟನೆ ಮೇಲೆ ಹಾರಿದನು. ಪರ್ವತದಂತೆ ಮಹಾ ದೇಹವುಳ್ಳ ವಾನರಶ್ರೇಷ್ಠನಾದ ಈ ಅಂಗದನು, ಉತ್ತಮವಾದ ತೋಳ್ಬಳೆಗಳಿಂದ ಶೋಭಿಸುತ್ತ ಮುಂದೆ ಬರುವಾಗ, ಗೈರಿಕಾದಿಧಾತುಗಳಿಂದ ಶೋಭಿತವಾದ ಪರ್ವತದಂತೆ ಕಾಣುತ್ತಿದ್ದನು. ಮಹಾ ತೇಜಸ್ವಿಯಾದ ಆ ವಾಲಿಪುತ್ರನು ಯಾವ ಆಯುಧಗಳೂ ಇಲ್ಲದೆ ಕೇವಲ ನಖದಂತಗಳನ್ನೇ ಯುದ್ಧಸಾಧನವಾಗಿಟ್ಟುಕೊಂಡು ನರಾಂತಕನನ್ನಿದಿರಿಸಿ, ಅವನನ್ನು ಕುರಿತು "ಎಲೆ ರಾಕ್ಷಸಾ! ನಿಲ್ಲು! ಈ ಅಲ್ಪವಾನರರೊಡನೆ ನಿನಗೇನು! ಇದೋ ನಾನು ಬಂದಿರುವೆನು! ವಜ್ರದಂತೆ ವೇಗವುಳ್ಳ ನಿನ್ನ ಪ್ರಾಸವನ್ನು ನನ್ನ ಎದೆಯ ಮೇಲೆ ಪ್ರಯೋಗಿಸು! ನೋಡುವೆನು" ಎಂದನು. ಅಂಗದನು ಹೇಳಿದ ಈ ಮಾತನ್ನು ಕೇಳಿದೊಡನೆ ನರಾಂತಕನಿಗೆ ಇನ್ನೂ ಕೋಪವು ಹೆಚ್ಚಿತು. ಆ ಕೋಪಾವೇಶದಿಂದ ಆ ರಾಕ್ಷಸನು, ತುಟಿಗಳನ್ನು ಕಚ್ಚಿ ಸರ್ಪದಂತೆ ಬುಸುಗುಟ್ಟುತ್ತ, ಅಂಗದನನ್ನಿದಿರಿಸಿ, ತೇಜಸ್ಸಿನಿಂದ ಜಾಜ್ವಲ್ಯಮಾನವಾದ ತನ್ನ ಪ್ರಾಸವನ್ನು ಗಿರಗಿರನೆ ತಿರುಗಿಸಿ, ವೇಗದಿಂದ ಅವನ ಮೇಲೆ ಪ್ರಯೋಗಿಸಿದನು. ಈ ಪ್ರಾಸವು ವಜ್ರದಂತೆ ಕಠಿಣವಾದ ಅಂಗದನ ಎದೆಗೆ ತಗುಲಿದೊಡನೆ ಪುಡಿಪುಡಿಯಾಗಿ ಒಡೆದು ಕೆಳಗೆ ಬಿದ್ದಿತು. ಆಗ ಅಂಗದನು ಗರುಡನಿಂದ ಕತ್ತರಿಸಲ್ಪಟ್ಟ ಸರ್ಪಶರೀರದಂತೆ ಆ ಪ್ರಾಸಾಯುಧವು ಮುರಿದುಬಿದ್ದುದನ್ನು ನೋಡಿ, ಮತ್ತಷ್ಟು ಉತ್ಸಾಹಗೊಂಡವನಾಗಿ, ತನ್ನ ಮುಷ್ಟಿಯನ್ನೆತ್ತಿ, ಆ ನರಾಂತಕನು ಕುಳಿತಿದ್ದ ಪರ್ವತಾಕಾರವಾದ ಕುದುರೆಯ ತಲೆಯ ಮೇಲೆ ಹೊಡೆದನು. ಅಂಗದನ ತಲಪ್ರಹಾರಕ್ಕೆ ಆ ಕುದುರೆಯು ತಲೆಯೊಡೆದು, ದವಡೆಗಳು ಹಳ್ಳಬಿದ್ದು, ಕಣ್ಣಾಲಿಗಳು ಕಳಚಿ, ನಾಲಗೆಯು ಕಿತ್ತು ಭಿನ್ನಭಿನ್ನವಾಗಿ ಕೆಳಗೆ ಬಿದ್ದಿತು. ಹೀಗೆ ತನ್ನ ಕುದುರೆಯು ಸತ್ತು ಬಿದ್ದುದನ್ನು ನೋಡಿ ನರಾಂತಕನು ಮೈಮರೆಯುವಷ್ಟು ಕೋಪದಿಂದ ಮುಂದೆ ನುಗ್ಗಿ, ಮುಷ್ಟಿಯನ್ನೆತ್ತಿ ಅಂಗದನ ತಲೆಯ ಮೇಲೆ ಹೊಡೆದನು. ಆ ನರಾಂತಕನ ಮುಷ್ಟಿಪ್ರಹಾರಕ್ಕೆ ಅಂಗದನ ತಲೆಯು ಭೇದಿಸಿ, ಬಿಸಿಬಿಸಿಯಾದ ರಕ್ತ

ಪ್ರವಾಹವು ಹೊರಡುವುದಕ್ಕಾರಂಭಿಸಿತು. ಆಗ ಅಂಗದನಿಗೆ ಶತ್ರುವಿನ ಮೇಲಿನ ಕೋಪದಿಂದಲೂ, ನೋವಿನಿಂದುಂಟಾದ ಮೂರ್ಛೆಯಿಂದಲೂ ಮೈಮರೆಯುವಂತಾಯಿತು. ಹೀಗಿದ್ದರೂ ಧೀರನಾದ ಅಂಗದನು ಮೆಲ್ಲಗೆ ಚೇತರಿಸಿಕೊಂಡು, ನರಾಂತಕನ ದೇಹಬಲಕ್ಕಾಗಿ ತನ್ನಲ್ಲಿ ತಾನೇ ಆಶ್ಚರ್ಯ ಪಡುತ್ತಿದ್ದನು. ಕ್ಷಣಮಾತ್ರದಲ್ಲಿಯೇ ತಿರುಗಿ ಅಂಗದನು ವಜ್ರದಂತೆ ತೀವ್ರವಾಗಿ, ಪರ್ವತಶಿಖರಕ್ಕೆ ಸಮಾನವಾದ ಮುಷ್ಟಿಯನ್ನು ಹಿಡಿದು, ಅದರಿಂದ ನರಾಂತಕನ ಎದೆಯ ಮೇಲೆ ಹೊಡೆದನು. ಈ ಮುಷ್ಟಿ ಘಾತಕ್ಕೆ ನರಾಂತಕನ ಎದೆಯು ಭೇದಿಸಿತು. ಅಗ್ನಿಜ್ವಾಲೆಯಂತೆ ರಕ್ತ ಧಾರೆಯು ಕಿತ್ತುಕೊಂಡಿತು. ಅವನ ಸರ್ವಾಂಗವೂ ರಕ್ತಮಯವಾಯಿತು. ಕೊನೆಗೆ ವಜ್ರಾಹತಿಯಿಂದ ಮುರಿದುಬೀಳುವ ಪರ್ವತದಂತೆ ಸತ್ತು ಕೆಳಗೆ ಬಿದ್ದನು. ಹೀಗೆ ವೀರಾಗ್ರೇಸರನಾದ ನರಾಂತಕನು ಆ ಯುದ್ಧದಲ್ಲಿ ಹತ ನಾದುದನ್ನು ನೋಡಿ, ಆಕಾಶದಲ್ಲಿ ದೇವಋಷಿಗಳೂ, ಇತ್ತಲಾಗಿ ರಣ ರಂಗದಲ್ಲಿ ವಾನರರೂ ಸಂತೋಷಕೋಲಾಹಲಗಳನ್ನು ಮಾಡಿದರು. ಹೀಗೆ ಅಂಗದನು ರಾಮನ ಮನಸ್ಸಿಗೆ ಸಂತೋಷವಾಗಿಯೂ, ಬೇರೊಬ್ಬರಿಗೆ ದುಷ್ಕರವಾಗಿಯೂ ಇರುವ ಈ ಪರಾಕ್ರಮಕಾರ್ಯವನ್ನು ತೋರಿಸಿದುದ ಕ್ಕಾಗಿ, ರಾಮನು ತಾನು ಲೋಕೈಕವೀರನೆನಿಸಿಕೊಂಡಿದ್ದರೂ ಆ ಅಂಗ ದನ ವೀರ್ಯವನ್ನು ನೋಡಿ ಆಶ್ಚರ್ಯಪಡುತ್ತಿದ್ದನು. ರಾಮನು ತನ್ನ ವೀರ್ಯಕ್ಕೆ ಮೆಚ್ಚಿದುದನ್ನು ಕಂಡು, ಅಂಗದನು ಮೇಲೆ ಮೇಲೆ ಯುದ್ಧೋ ತ್ಸಾಹದಿಂದುಬ್ಬುತ್ತಾ, ತಿರುಗಿ ಮುಂದಿನ ಯುದ್ಧಕ್ಕೆ ಸಿದ್ಧನಾದನು.

ಇಲ್ಲಿಗೆ ಅರುವತ್ತೊಂಬತ್ತನೆಯ ಸರ್ಗವು.

ಹನುಮಂತನು ದೇವಾಂತ ತ್ರಿಶಿರಸ್ಸುಗಳನ್ನೂ, ನೀಲನು
ಮಹೋದರನನ್ನೂ, ಋಷಭನು ಮಹಾಪಾರ್ಶ್ವನನ್ನೂ
ಕೊಂದುದು.

ನರಾಂತಕನು ಹತನಾದುದನ್ನು ನೋಡಿ, ದೇವಾಂತಕನೂ, ತ್ರಿಶಿ ರಸ್ಸೂ, ಮಹೋದರನೂ, ಈ ಮೂರುಮಂದಿ ರಾಕ್ಷಸರೂ, ಭಯದಿಂದಲೂ,

ದುಃಖದಿಂದಲೂ, ಕೋಪದಿಂದಲೂ ಒಂದೇ ಕೂಗಾಗಿ ಕೂಗುತ್ತಬಂದರು. ಮಹೋದರನು ಮೇಘದಂತಿದ್ದ ಒಂದು ಮದದಾನೆಯನ್ನೇರಿ ವೀರ್ಯವಂತನಾದ ಅಂಗದನನ್ನಿದಿರಿಸಿ ಬಂದನು. ಹಾಗೆಯೇ ದೇವಾಂತಕನೂ ತನಗೆ ಒಡಹುಟ್ಟಿದವನಾದ ನರಾಂತಕನ ಸಾವಿಗಾಗಿ ದುಃಖದಿಂದ ಕುದಿಯುತ್ತ, ದೇದೀಪ್ಯಮಾನವಾದ ಪರಿಘವನ್ನು ಕೈಗೆತ್ತಿಕೊಂಡು ಅಂಗದನನ್ನಿದಿರಿಸುವುದಕ್ಕಾಗಿ ಬಂದನು. ಮತ್ತೊಂದು ಕಡೆಯಿಂದ ವೀರನಾದ ತ್ರಿಶಿರಸ್ಸು, ಉತ್ತಮಾಶ್ವಗಳಿಂದ ಕಟ್ಟಲ್ಪಟ್ಟು ಸೂರ್ಯನಂತೆ ತೇಜೋವಿಶಿಷ್ಟವಾದ ತನ್ನ ಮಹಾರಥವನ್ನೇರಿ ಹೊರಟು ಬಂದನು. ದೇವತೆಗಳಕೊಬ್ಬನ್ನು ಮುರಿಯತಕ್ಕ ಮಹಾವೀರ್ಯವುಳ್ಳ ಈ ಮೂರುಮಂದಿ ರಾಕ್ಷಸಪ್ರಧಾನರೂ ಏಕಕಾಲದಲ್ಲಿ ತನ್ನ ಮೇಲೆ ಯುದ್ಧಕ್ಕೆ ಬರುವುದನ್ನು ಕಂಡು ವಾಲಿಪುತ್ರನಾದ ಅಂಗದನು, ಮಹಾಶಾಖೆಗಳುಳ್ಳ ಒಂದು ಮರವನ್ನು ಕಿತ್ತುಕೊಂಡು, ಇಂದ್ರನು ಪರ್ವತಗಳ ಮೇಲೆ ತನ್ನ ವಜ್ರಾಯುಧವನ್ನು ಬೀಸುವಂತೆ, ಆ ವೃಕ್ಷವನ್ನು ದೇವಾಂತಕನ ಮೇಲೆ ಬೀಸಿದನು. ಇದನ್ನು ಕಂಡು ತ್ರಿಶಿರಸ್ಸು ಸರ್ಪಗಳಂತಿರುವ ತನ್ನ ಬಾಣಗಳಿಂದ ನಡು ದಾರಿಯಲ್ಲಿಯೇ ಈ ವೃಕ್ಷವನ್ನು ಕತ್ತರಿಸಿ ಕೆಡಹಿದನು. ಆ ವೃಕ್ಷವು ತುಂಡಾಗಿ ಬಿದ್ದುದನ್ನು ನೋಡಿ ಕಪಿಕುಂಜರನಾದ ಅಂಗದನು, ಬೇರೆ ಕೆಲವು ವೃಕ್ಷಗಳನ್ನೂ, ಪರ್ವತಗಳನ್ನೂ ಕಿತ್ತು, ಮೇಲೆ ಹಾರಿ, ಅವುಗಳನ್ನು ಆ ರಾಕ್ಷಸರ ಮೇಲೆ ಎಡೆಬಿಡದೆ ಸುರಿಸುತ್ತಿದ್ದನು. ಈ ಶಿಲಾವರ್ಷಗಳನ್ನೂ ತ್ರಿಶಿರಸ್ಸು ತನ್ನ ತೀಕ್ಷ್ಣಬಾಣಗಳಿಂದಲೂ, ದೇವಾಂತಕನು ತನ್ನ ಪರಿಘದ ಕೊನೆಯಿಂದಲೂ ಕತ್ತರಿಸಿದರು. ಅವೆಲ್ಲವೂ ಮುರಿದು ಬಿದ್ದಮೇಲೆ ತ್ರಿಶಿರಸ್ಸು ವೀರನಾದ ಅಂಗದನ ಮೇಲೆ ಬಾಣಗಳನ್ನು ಬಿಡುತ್ತ ಮುಂದೆ ಬಂದನು. ಈ ಸಮಯಕ್ಕೆ ಸರಿಯಾಗಿ ಮಹೋದರನೂ ತನ್ನ ಆನೆಯನ್ನು ಮುಂದೆ ಬಿಟ್ಟು, ವಜ್ರ ಸಮಾನಗಳಾದ ತೋಮರಗಳಿಂದ ಅಂಗದನ ಎದೆಯ ಮೇಲೆ ಪ್ರಹರಿಸಿದನು. ಇದೇ ಕಾಲದಲ್ಲಿ ದೇವಾಂತಕನೂ ಕೋಪಾವೇಶದಿಂದ ಮುಂದೆ ಬಂದು, ತನ್ನ ಪರಿಘಾಯುಧದಿಂದ ಅಂಗದನನ್ನು ಪ್ರಹರಿಸಿ, ವೇಗದಿಂದ ಹಿಂದಕ್ಕೆ ಸರಿದನು. ಹೀಗೆ ಮೂವರು ರಾಕ್ಷಸವೀರರೂ ಏಕಕಾಲದಲ್ಲಿ ತನ್ನ ಮೇಲೆ

ಬಿದ್ದು ಹೊಡೆಯುತ್ತಿದ್ದರೂ, ಮಹಾತೇಜಸ್ವಿಯಾದ ಅಂಗದನು ಸ್ವಲ್ಪ ಮಾತ್ರವೂ ಎದೆಗುಂದದೆ, ಪೂರ್ಣವಾದ ತನ್ನ ವೇಗವನ್ನು ಹಿಡಿದು ಮೇಲೆ ಹಾರಿ, ಮಹೋದರನು ಕುಳಿತಿದ್ದ ಮಹಾಗಜವನ್ನು ತನ್ನ ಮುಷ್ಟಿಯಿಂದ ಬಲವಾಗಿ ಅಪ್ಪಳಿಸಿ ಹೊಡೆದನು. ಈ ಮುಷ್ಟಿಪ್ರಹಾರ ದಿಂದ ಆ ಆನೆಯ ಕಣ್ಣಾಲೆಗಳೆರಡೂ ಕಳಚಿ ಬೀಳಲು, ಅದು ದೀನಸ್ವರ ದಿಂದ ಕೂಗಿತು. ಆಮೇಲೆ ಬಲಾಢ್ಯನಾದ ಅಂಗದನು ಆ ಆನೆಯ ಕೊಂಬನ್ನೇ ಕೈಗೆ ಕಿತ್ತುಕೊಂಡು ಮೇಲೆ ಹಾರಿ, ಅದರಿಂದ ದೇವಾಂತಕ ನನ್ನು ಪ್ರಹರಿಸಿದನು. ಈ ಪ್ರಹಾರದಿಂದ ಆ ರಾಕ್ಷಸನ ಸರ್ವಾಯವ ಗಳೂ ಸಡಿಲಿ ಜರ್ಝರಿತವಾದುವು. ಆಗಲೇ ಅವನು ಬಿರುಗಾಳಿಯಿಂದ ಕಿತ್ತು ಬಿದ್ದ ಮರದಂತೆ ಪ್ರಜ್ಞೆತಪ್ಪಿ ಬಿದ್ದನು. ಅವನ ಬಾಯಿಂದ ಅರಗಿನ ರಸದಂತೆ ಕೆಂಪಾದ ರಕ್ತವು ಸಾರುತ್ತಿತ್ತು. ಆದರೆ ಮಹಾ ವೀರ್ಯವುಳ್ಳವನಾಗಿಯೂ, ಬಲಾಢ್ಯನಾಗಿಯೂ ಇದ್ದ ದೇವಾಂತಕನು, ಕ್ಷಣಮಾತ್ರದಲ್ಲಿ ತಾನೇ ಚೇತರಿಸಿಕೊಂಡು, ಘೋರವಾದ ತನ್ನ ಪರಿಘಾ ಯುಧವನ್ನು ವೇಗದಿಂದ ತಿರುಗಿಸಿ ಅಂಗದನ ಮೇಲೆ ಬೀಸಿದನು. ಈ ಪರಿಘಪ್ರಹಾರದಿಂದ ಅಂಗದನಿಗೆ ಮೈನಡುಗಿ ತತ್ತಳಿಸಿ ಕೆಳಗೆ ಬೀಳು ವಂತಾದರೂ, ಆತನು ತನ್ನ ದೇಹಬಲದಿಂದ ಕೆಳಗೆ ಬೀಳದಹಾಗೆ ನೆಲದ ಮೇಲೆ ಮೊಳಕಾಲುಗಳನ್ನೂರಿ ನಿಂತು, ತಿರುಗಿ ಕ್ಷಣಮಾತ್ರದಲ್ಲಿ ಮೇಲಕ್ಕೆ ಹಾರಿದನು. ಹೀಗೆ ಹಾರಿಬರುತ್ತಿರುವ ಅಂಗದನನ್ನು ನೋಡಿ, ತ್ರಿಶಿರಸ್ಸು ಋಜುಗತಿಯುಳ್ಳ ಮೂರು ತೀಕ್ಷ್ಣಬಾಣಗಳಿಂದ ಅವನ ಹಣೆಯ ಮೇಲೆ ಹೊಡೆದನು. ಮೂರುಮಂದಿ ರಾಕ್ಷಸರೂ ಏಕಕಾಲದಲ್ಲಿ ಅಂಗದನ ಮೇಲೆ ಬಿದ್ದು ಪ್ರಹರಿಸುವುದನ್ನು ಕಂಡು, ಹನುಮಂತನೂ, ನೀಲನೂ, ಅವನಿಗೆ ಬೆಂಬಲವಾಗಿ ಹೊರಟು ಬಂದರು. ನೀಲನು ತ್ರಿಶಿರಸ್ಸಿನ ಮೇಲೆ ಒಂದು ದೊಡ್ಡ ಪರ್ವತಶಿಖರವನ್ನು ಬೀಸಿದನು. ಧೀಮಂತನಾದ ತ್ರಿಶಿರಸ್ಸು, ಆಗಲೇ ಅದನ್ನು ಅನೇಕ ತೀಕ್ಷ್ಣಬಾಣಗಳಿಂದ ಕತ್ತರಿಸಿ ಕೆಡಹಿದನು. ಹೀಗೆ ಬಾಣಗಳಿಂದ ಭಿನ್ನವಾದ ಆ ಪರ್ವತಶಿಖರವು ಉರಿಯನ್ನೂ ಕಿಡಿಗಳನ್ನೂ ಕೆದರುತ್ತ ತುಂಡುತುಂಡಾಗಿ ಕೆಳಗೆ ಬಿದ್ದುದನ್ನು ನೋಡಿ, ದೇವಾಂತಕನು ಉತ್ಸಾಹಗೊಂಡವನಾಗಿ, ತನ್ನ ಪರಿಘವನ್ನೆತ್ತಿ ಹಿಡಿದು

ಹನುಮಂತನ ಮೇಲೆ ಯುದ್ಧಕ್ಕೆ ಹೊರಟನು. ದೇವಾಂತಕನು ಎದುರಾಗಿ ಬರುತ್ತಿರುವುದನ್ನು ಕಂಡೊಡನೆ ಹನುಮಂತನು ವೇಗದಿಂದ ಹಾರಿ ವಜ್ರಸಮಾನವಾದ ಮುಷ್ಟಿಯಿಂದ ಆ ರಾಕ್ಷಸನ ನಡುನೆತ್ತಿಯ ಮೇಲೆ ಅಪ್ಪಳಿಸಿ, ಸಮಸ್ತ ರಾಕ್ಷಸರೂ ಭಯದಿಂದ ನಡುಗುವಂತೆ ಒಂದು ದೊಡ್ಡ ಸಿಂಹನಾದವನ್ನು ಮಾಡಿದನು. ಈ ಹನುಮಂತನ ಮುಷ್ಟಿಪ್ರಹಾರಕ್ಕೆ ದೇವಾಂತಕನ ತಲೆಯು ಭೇದಿಸಿತು. ಅವನ ಕಣ್ಣಾಲಿಗಳು ಕಳಚಿ ಬಿದ್ದುವು. ಅವನ ಹಲ್ಲುಗಳು ಪುಡಿಪುಡಿಯಾದುವು. ನಾಲಗೆಯು ಹೊರಕ್ಕೆ ಚಾಚಿತು. ಆ ಕ್ಷಣವೇ ಆ ರಾಕ್ಷಸನು ಗತಪ್ರಾಣನಾಗಿ ಕೆಳಗೆ ಬಿದ್ದನು. ರಾಕ್ಷಸವೀರರಲ್ಲಿ ಪ್ರಮುಖನಾಗಿಯೂ, ಮಹಾಬಲವುಳ್ಳವನಾಗಿಯೂ ಇದ್ದ ದೇವಾಂತಕನು ಯುದ್ಧದಲ್ಲಿ ಹತನಾಗಿ ಬಿದ್ದುದನ್ನು ಕಂಡು, ತ್ರಿಶಿರಸ್ಸು ತಡೆಯಲಾರದ ಕೋಪದಿಂದ ಮುಂದೆ ಬಂದು ಎದುರಾಗಿದ್ದ ನೀಲನ ಎದೆಯ ಮೇಲೆ ಅನೇಕ ಕ್ರೂರಬಾಣಗಳನ್ನು ಪ್ರಯೋಗಿಸಿದನು. ಇದೇ ಸಮಯದಲ್ಲಿ ಮಹೋದರನೂ ಬಹಳ ಕೋಪಗೊಂಡು ಮಂದರಪರ್ವತ ವನ್ನೇರಿದ ಸೂರ್ಯನಂತೆ ಪರ್ವತಾಕಾರವುಳ್ಳ ಬೇರೊಂದು ಮಹಾಗಜ ವನ್ನೇರಿ ಬಂದು ಮಿಂಚಿನಿಂದಲೂ, ಇಂದ್ರಧನುಸ್ಸಿನಿಂದಲೂ ಕೂಡಿದ ಮೇಘವು ಬೆಟ್ಟದ ಮೇಲೆ ಮಳೆಯನ್ನು ಕರೆಯುವಂತೆ ನೀಲನ ಎದೆಯ ಮೇಲೆ ಬಾಣವರ್ಷಗಳನ್ನು ಕರೆದನು. ಹೀಗೆ ಈ ರಾಕ್ಷಸರಿಬ್ಬರೂ ಏಕ ಕಾಲದಲ್ಲಿ ಬಾಣವರ್ಷಗಳನ್ನು ಕರೆಯುತ್ತಿದ್ದುದರಿಂದ, ವಾನರಸೇನಾಪತಿ ಯಾದ ನೀಲನ ಸರ್ವಾವಯವಗಳೂ ಭಿನ್ನವಾಗಿ, ಅವನಿಗೆ ಪ್ರಜ್ಞೆತಪ್ಪಿ ದಂತಾಯಿತು. ಕ್ಷಣಮಾತ್ರದವರೆಗೆ ಅವನ ದೇಹವು ಸ್ತಬ್ಧವಾಯಿತು. ಆಮೇಲೆ ಮುಹೂರ್ತಮಾತ್ರದಲ್ಲಿಯೇ ನೀಲನು ಚೇತರಿಸಿಕೊಂಡು, ಅನೇಕ ವೃಕ್ಷಸಮೂಹಗಳಿಂದ ತುಂಬಿದ ಒಂದು ಪರ್ವತವನ್ನು ಕೈಗೆತ್ತಿಕೊಂಡು, ಅತಿ ವೇಗದಿಂದ ಮಹೋದರನ ಮೇಲೆ ಹಾರಿ, ಆ ಪರ್ವತದಿಂದ ಅವನ ತಲೆಯ ಮೇಲೆ ಹೊಡೆದನು. ಈ ಪರ್ವತಪ್ರಹಾರದಿಂದ ಮಹೋದರನು ವಜ್ರದಿಂದ ಭೇದಿಸಲ್ಪಟ್ಟ ಪರ್ವತದಂತೆ ತಾನು ಕುಳಿತಿದ್ದ ಆನೆಯೊಡನೆ ನಜ್ಜುಗುಜ್ಜಾಗಿ ಸತ್ತು ಕೆಳಗೆ ಬಿದ್ದನು. ಆಗ ತ್ರಿಶಿರಸ್ಸು ತನ್ನ ಚಿಕ್ಕ ತಂದೆಯಾದ ಮಹೋದರನು ಸತ್ತುಬಿದ್ದುದನ್ನು ಕಂಡು ಮಹಾಕೋಪ

ದಿಂದ ಬಿಲ್ಲನ್ನು ಹಿಡಿದು, ತನಗಿದಿರಾಗಿದ್ದ ಹನುಮಂತನ ಮೇಲೆ ತೀಕ್ಷ್ಣ ಬಾಣಗಳನ್ನು ಬಿಡುತ್ತಬಂದನು. ಇದರಿಂದ ಹನುಮಂತನು ಬಹಳ ಕೋಪಗೊಂಡು ಅವನ ಮೇಲೆ ಒಂದು ಪರ್ವತಶಿಖರವನ್ನು ಬೀಸಿದನು. ಬಲಾಢ್ಯನಾದ ತ್ರಿಶಿರಸ್ಸು ಆ ಪರ್ವತಶಿಖರವನ್ನೂ ತನ್ನ ತೀಕ್ಷ್ಣಬಾಣ ಗಳಿಂದ ನೂರಾರು ತುಂಡಾಗಿ ಭೇದಿಸಿ ಕೆಡಹಿದನು. ಆಗ ಹನುಮಂತನು, ತಾನು ಬೀಸಿದ ಪರ್ವತಶಿಖರವು ವ್ಯರ್ಥವಾದುದನ್ನು ನೋಡಿ ಕೋಪ ಗೊಂಡು, ರಾವಣಪುತ್ರನಾದ ಆ ತ್ರಿಶಿರಸ್ಸಿನ ಮೇಲೆ ಎಡೆಬಿಡದೆ ವೃಕ್ಷ ವರ್ಷವನ್ನು ಕರೆಯುವುದಕ್ಕೆ ತೊಡಗಿದನು. ವೀರ್ಯಶಾಲಿಯಾದ ತ್ರಿಶಿ ರಸ್ಸು ಆ ವೃಕ್ಷಸಮೂಹವನ್ನೂ ಕೂಡ ತನ್ನ ತೀಕ್ಷ್ಣಬಾಣಗಳಿಂದ ಆಕಾಶದಲ್ಲಿಯೇ ಕತ್ತರಿಸಿ ಕೆಡಹುತ್ತ, ಆಗಾಗ ಸಿಂಹನಾದ ಮಾಡುತ್ತಿ ದ್ದನು. ಆಗ ಹನುಮಂತನು, ತನ್ನ ವೃಕ್ಷಗಳೂ ವಿಫಲವಾದುದನ್ನು ನೋಡಿ ಕೋಪದಿಂದ ಮೇಲೆ ಹಾರಿ, ಸಿಂಹವು ಆನೆಯನ್ನು ಭೇದಿಸುವಂತೆ ಆ ತ್ರಿಶಿರಸ್ಸಿನ ರಥಾಶ್ವಗಳನ್ನು ತನ್ನ ಉಗುರುಗಳಿಂದ ಭೇದಿಸಿದನು. ಇದನ್ನು ನೋಡಿ ತ್ರಿಶಿರಸ್ಸು, ಕಾಳರಾತ್ರಿಯೊಡಗೂಡಿ ಬರುವ ಯಮನಂತೆ ಒಂದು ದಿವ್ಯಶಕ್ತಿಯನ್ನೆತ್ತಿಕೊಂಡು ಬಂದು, ಅದನ್ನು ಹನುಮಂತನ ಮೇಲೆ ಪ್ರಯೋಗಿಸಿದನು. ಆಕಾಶದ ಕೊಳ್ಳಿಯಂತೆ ಮೇಲೆ ಬೀಳುತ್ತಿ ರುವ ಆ ಶಕ್ತಿಯನ್ನು ನೋಡಿ ಹನುಮಂತನು ಅದು ತನ್ನ ಮೇಲೆ ಬೀಳು ವಷ್ಟರಲ್ಲಿಯೇ ಅದನ್ನು ಕೈಯಿಂದಾತುಕೊಂಡು ಎರಡು ತುಂಡಾಗಿ ಮುರಿದು ಸಿಂಹನಾದ ಮಾಡಿದನು. ಹೀಗೆ ಅತಿ ಘೋರವಾದ ಶಕ್ತ್ಯಾ ಯುಧವೂ ಹನುಮಂತನ ಕೈಯಿಂದ ಭಗ್ನವಾದುದುದನ್ನು ನೋಡಿ, ಅಲ್ಲಿದ್ದ ವಾನರಸೇನೆಯೆಲ್ಲವೂ ಪರಮಸಂತೋಷದಿಂದ ಮೇಘಧ್ವನಿಯಂತೆ ಸಿಂಹನಾದ ಮಾಡಿದುವು. ಆಮೇಲೆ ತ್ರಿಶಿರಸ್ಸು ತನ್ನ ಕತ್ತಿಯನ್ನು ಹಿಡಿದು ಬಂದು, ಅದರಿಂದ ಹನುಮಂತನ ಉಬ್ಬಿದ ಎದೆಯ ಮೇಲೆ ಹೊಡೆದನು. ಈ ಖಡ್ಗಪ್ರಹಾರದಿಂದ ನೊಂದ ಹನುಮಂತನು ತನ್ನ ಅಂಗೈಯಿಂದ ತ್ರಿಶಿರಸ್ಸಿನ ಎದೆಯ ಮೇಲೆ ಅಪ್ಪಳಿಸಿದನು. ಆ ತಲಪ್ರಹಾ ರಕ್ಕೆ ತ್ರಿಶಿರಸ್ಸಿನ ಖಡ್ಗವು ಕೈಯಿಂದ ಸಡಲಿ ಅವನು ಮೂರ್ಛಿತನಾಗಿ ಕೆಳಗೆ ಬಿದ್ದನು. ಅವನು ಬೀಳುವಷ್ಟರಲ್ಲಿ ಪರ್ವತಾಕಾರವುಳ್ಳ ಹನು

ಮಂತನು ಅವನ ಕೈಯಿಂದ ಖಡ್ಗವನ್ನು ಕಿತ್ತುಕೊಂಡು ತನ್ನ ಧ್ವನಿಯಿಂದಲೇ ಸಮಸ್ತ ರಾಕ್ಷಸರನ್ನೂ ನಡುಗಿಸುವಂತೆ ಸಿಂಹನಾದ ಮಾಡಿದನು. ಇಷ್ಟರಲ್ಲಿ ತ್ರಿಶಿರಸ್ಸು ಮೆಲ್ಲಗೆ ಪ್ರಜ್ಞೆಯನ್ನು ಹೊಂದಿ, ಆ ಹನುಮಂತನ ಸಿಂಹನಾದ ಧ್ವನಿಯನ್ನು ಕೇಳಿ ಸಹಿಸಲಾರದೆ, ಅವನ ಮೇಲೆ ಹಾರಿ ಮುಷ್ಟಿಯಿಂದ ಆ ಹನುಮಂತನನ್ನು ಹೊಡೆದನು. ಆ ಮುಷ್ಟಿಪ್ರಹಾರದಿಂದ ಹನುಮಂತನು ಮತ್ತಷ್ಟು ಕೋಪಗೊಂಡು, ಆ ರಾಕ್ಷಸನ ಮೇಲೆ ಹಾರಿ, ಅವನ ಕಿರೀಟವನ್ನು ಮೆಟ್ಟಿ ಹಿಡಿದು, ಪೂರ್ವದಲ್ಲಿ ದೇವೇಂದ್ರನು ತ್ವಷ್ಟೃಪುತ್ರನಾದ ವಿಶ್ವರೂಪನ ತಲೆಗಳನ್ನು ಕಡಿದಂತೆ, ತನ್ನ ಕೈಯಲ್ಲಿದ್ದ ತೀಕ್ಷ್ಣವಾದ ಆ ಕತ್ತಿಯಿಂದಲೇ ಕಿರೀಟಕುಂಡಲಾದಿಗಳಿಂದಲಂಕೃತವಾದ ಆ ತ್ರಿಶಿರಸ್ಸಿನ ಮೂರು ತಲೆಗಳನ್ನೂ ಕತ್ತರಿಸಿಬಿಟ್ಟನು. ಉರಿಯುವ ಬೆಂಕಿಯಂತಿರುವ ಕಣ್ಣಾಲೆಗಳಿಂದಲೂ ಅಗಲವಾದ ಬಿಚ್ಚಿದ ರೆಪ್ಪೆಗಳಿಂದಲೂ ಕೂಡಿ ಪರ್ವತಶಿಖರಗಳಂತಿದ್ದ ಆ ಮೂರು ತಲೆಗಳೂ, ಪುಣ್ಯಫಲವನ್ನನುಭವಿಸಿ ತೀರಿದಮೇಲೆ ಆಕಾಶದಿಂದ ಬೀಳುವ ಜ್ಯೋತಿಗಳಂತೆ ಕೆಳಗೆ ಬಿದ್ದುವು. ಹೀಗೆ ಇಂದ್ರಪರಾಕ್ರಮವುಳ್ಳ ಹನುಮಂತನಿಂದ ದೇವಶತ್ರುವಾದ ತ್ರಿಶಿರಸ್ಸು ಹತನಾಗಿ ಬಿದ್ದುದನ್ನು ನೋಡಿ ಸಮಸ್ತ ವಾನರರೂ ಸಂತೋಷದಿಂದ ಸಿಂಹನಾದ ಮಾಡಿದರು. ಆ ತ್ರಿಶಿರಸ್ಸಿನ ತಲೆಯು ಬಿದ್ದಮಾತ್ರಕ್ಕೆ ರಣಭೂಮಿಯೆಲ್ಲವೂ ನಡುಗಿತು. ಅತ್ತಲಾಗಿ ರಾಕ್ಷಸರೆಲ್ಲರೂ ಭಯದಿಂದ ದಿಕ್ಕುದಿಕ್ಕಿಗೆ ಪಲಾಯನಮಾಡಿದರು. ಹೀಗೆ ಆ ಯುದ್ಧದಲ್ಲಿ ತ್ರಿಶಿರಸ್ಸೂ, ಮಹೋದರನೂ, ದುರ್ಜಯರಾದ ದೇವಾಂತಕನರಾಂತಕರೂ ವಾನರರಿಂದ ಹತರಾದುದನ್ನು ನೋಡಿ, ರಾಕ್ಷಸಪುಂಗವನಾದ * ಮತ್ತನೆಂಬ ನಾಮಾಂತರವುಳ್ಳ ಆ ಮಹಾಪಾರ್ಶ್ವನಿಗೆ ತಡೆಯಲಾರದಷ್ಟು ಕೋಪವುಂಟಾಯಿತು. ಆ ಕೋಪದಿಂದ ಮಹಾಪಾರ್ಶ್ವನು ಉರಿಯನ್ನು ಕಕ್ಕುತ್ತಿರುವ ಭಯಂಕರವಾದ ಉಕ್ಕಿನ

ಈ ಮಹಾಪಾರ್ಶ್ವ ಮಹೋದರರಿಬ್ಬರೂ ರಾವಣನ ತಮ್ಮಂದಿರು. ರಾವಣನ ಮಂತ್ರಿಗಳಾದ ಮಹೋದರ ಮಹಾಪಾರ್ಶ್ವರೇ ಬೇರೆ. ಈ ಮಹಾಪಾರ್ಶ್ವನಿಗೆ ಮತ್ತನೆಂದೂ ಮತ್ತಾನೀಕನೆಂದೂ ನಾಮಾಂತರವು. ಹಾಗೆಯೇ ಮಹೋದರನಿಗೆ ಉನ್ಮತ್ತನೆಂದು ನಾಮಾಂತರವು.

ಗದೆಯೊಂದನ್ನು ಕೈಗೆತ್ತಿಕೊಂಡು ಹೊರಟನು. ಆ ಗದೆಯಾದರೋ ನಡು ನಡುವೆ ಚಿನ್ನದ ಕಟ್ಟುಗಳಿಂದ ಕಂಗೊಳಿಸುತ್ತಿರುವುದು. ಇದುವರೆಗೆ ಹಿಂದೆ ಎಷ್ಟೋ ಶತ್ರುಗಳನ್ನು ಕೊಂದು ನೊರೆಗಟ್ಟಿದ ರಕ್ತಮಾಂಸಗಳಿಂದ ಭಯಂಕರವಾಗಿರುವುದು. ಈಗಿನ ಯುದ್ಧದಲ್ಲಿಯೂ ಅನೇಕ ಶತ್ರುಗಳ ರಕ್ತದಿಂದ ತೊಯ್ದು, ತೇಜಸ್ಸಿನಿಂದ ದೇದೀಪ್ಯಮಾನವಾಗಿರುವುದು. ಅಲ್ಲಲ್ಲಿ ಕೆಂಪಾದ ಹೂದಂಡೆಗಳಿಂದಲಂಕರಿಸಲ್ಪಟ್ಟಿರುವುದು. ಐರಾವತ, ಪುಂಡರೀಕ, ಸಾರ್ವಭೌಮಗಳೆಂಬ ಪ್ರಧಾನ ದಿಗ್ಗಜಗಳಿಗೂ ಕೂಡ ನೋಡಿದ ಮಾತ್ರಕ್ಕೆ ಭಯವನ್ನು ಹುಟ್ಟಿಸುವಂತಿರುವುದು. ಅಂತಹ ಗದೆಯನ್ನು ಕೈಗೆತ್ತಿಕೊಂಡು ರಾಕ್ಷಸವೀರನಾದ ಮಹಾಪಾರ್ಶ್ವನು, ಪ್ರಳಯಕಾಲದ ಬೆಂಕಿಯಂತೆ ಕೋಪದಿಂದುರಿಯುತ್ತ ವಾನರರನ್ನು ಬೆನ್ನಟ್ಟಿ ಬಂದನು. ಇದನ್ನು ನೋಡಿ ಬಲಾಢ್ಯನಾದ ಋಷಭನೆಂಬ ಕಪಿವೀರನು ಒಂದು ನೆಗೆತಕ್ಕೆ ಹಾರಿ ಬಂದು, ರಾವಣನ ತಮ್ಮನಾದ ಆ ಮಹಾಪಾರ್ಶ್ವನನ್ನು ತಡೆದು ಮುಂದೆ ನಿಂತುದನ್ನು ನೋಡಿ ಮಹಾಪಾರ್ಶ್ವನು ಕೋಪಗೊಂಡು, ವಜ್ರಸಮಾನವಾದ ತನ್ನ ಗದೆಯಿಂದ ಅವನ ಎದೆಯ ಮೇಲೆ ಹೊಡೆದನು. ಈ ಗದಾಪ್ರಹಾರಕ್ಕೆ ಋಷಭನ ಎದೆಯು ಭೇದಿಸಿದಂತಾಯಿತು. ಅವನ ದೇಹವು ನಡುಗಿತು. ಬಹಳವಾಗಿ ರಕ್ತವು ಕಿತ್ತುಕೊಂಡಿತು. ಇದರಿಂದ ಇವನಿಗೆ ಕ್ಷಣಕಾಲದವರೆಗೆ ಪ್ರಜ್ಞೆ ತಪ್ಪಿದಂತಾದರೂ, ಸ್ವಲ್ಪ ಕಾಲದಮೇಲೆ ಮೆಲ್ಲಗೆ ಚೇತರಿಸಿಕೊಂಡು ಆ ರಾಕ್ಷಸನ ಮೇಲೆ ಬಿದ್ದು ಅವನ ಕೈಯಲ್ಲಿದ್ದ ಭಯಂಕರವಾದ ಗದೆಯನ್ನು ಕಿತ್ತುಕೊಂಡು, ಅದನ್ನು ಗಿರಗಿರನೆ ತಿರುಗಿಸಿ, ಅದರಿಂದಲೇ ಮಹಾಬಲಾಢ್ಯನಾದ ಆ ಮಹಾಪಾರ್ಶ್ವನನ್ನು ಪ್ರಹರಿಸಿದನು. ಇದರಿಂದ ಮಹಾಪಾರ್ಶ್ವನಿಗೆ ತನ್ನ ಗದೆಯೇ ತನಗೆ ಮೃತ್ಯುವಾಯಿತು. ಆ ಗದಾಪ್ರಹಾರದಿಂದ ಹಲ್ಲು ಮುರಿದು, ಕಣ್ಣು ಕಳಚಿ ಅವನು ವಜ್ರಾಹತವಾದ ಪರ್ವತದಂತೆ ಸತ್ತು ಕೆಳಗೆ ಬಿದ್ದನು. ಹೀಗೆ ರಾಕ್ಷಸವೀರನಾದ ಮಹಾಪಾರ್ಶ್ವನು ಗದಾಪ್ರಹಾರದಿಂದ ಸತ್ತು ಕೆಳಗೆ ಬಿದ್ದುದನ್ನು ನೋಡಿ ಸಮಸ್ತ ರಾಕ್ಷಸಸೈನ್ಯಗಳೂ ಭಯದಿಂದ ಪಲಾಯನಮಾಡಿದುವು. ಆಗ ಉನ್ಮತ್ತನೆಂಬ ನಾಮಾಂತರವುಳ್ಳ ಮಹೋದರನು, ತನಗೆ ಸಹೋದರನಾದ ಮಹಾಪಾರ್ಶ್ವನು ಯುದ್ಧದಲ್ಲಿ

ಹತನಾದುದನ್ನು ನೋಡಿ, ಕೋಪದಿಂದ ಪ್ರಳಯಕಾಲಾಗ್ನಿಯಂತೆ ಜ್ವಲಿಸುತ್ತ, ತನ್ನ ಗದೆಯನ್ನೆತ್ತಿಕೊಂಡು, ಪ್ರಚಂಡವಾಗಿ ಉರಯುವ ಬೆಂಕಿಯಂತೆ ವಾನರಸೈನ್ಯದಲ್ಲಿ ಪ್ರವೇಶಿಸಿ, ಸಮಸ್ತ ವಾನರರನ್ನೂ ಹೆದರಿಸುತ್ತಿದ್ದನು. ಇದನ್ನು ನೋಡಿ ಪರ್ವತಾಕಾರವುಳ್ಳ ಗವಾಕ್ಷನೆಂಬ ಕಪಿಯು, ಒಂದು ದೊಡ್ಡ ಪರ್ವತವನ್ನೆತ್ತಿಕೊಂಡು, ಅದರಿಂದ ಆ ರಾಕ್ಷಸನನ್ನು ಕೊಲ್ಲಬೇಕೆಂದು ಮುಂದೆ ಬಂದನು. ಹೀಗೆ ಬರುತ್ತಿರುವ ಕಪಿಯನ್ನು ನೋಡಿ ಉನ್ಮತ್ತನು, ಆಗಲೇ ಅವನು ಹಿಡಿದಿದ್ದ ಪರ್ವತವನ್ನು ತನ್ನ ಗದೆಯಿಂದ ಮೂರು ತುಂಡಾಗಿ ಕತ್ತರಿಸಿ ಕೆಡಹಿದನು. ಆಗ ಗವಾಕ್ಷನು ತಾನು ತಂದ ಪರ್ವತವು ರಾಕ್ಷಸನಿಂದ ಪ್ರತಿಹತವಾದುದನ್ನು ನೋಡಿ, ಆ ರಾಕ್ಷಸನ ಪರಾಕ್ರಮಕ್ಕಾಗಿ ತನ್ನಲ್ಲಿ ತಾನೇ ಆಶ್ಚರ್ಯಪಡುತ್ತ ಕೋಪದಿಂದ ಆಗಾಗ ಸಿಂಹನಾದ ಮಾಡುತ್ತಿದ್ದನು. ಇಷ್ಟರಲ್ಲಿಯೇ ಉನ್ಮತ್ತನು, ಜ್ವಲಿಸುವ ತನ್ನ ಗದೆಯನ್ನೆತ್ತಿ ಅದರಿಂದ ಗವಾಕ್ಷನ ಎದೆಯ ಮೇಲೆ ಹೊಡೆದನು. ಈ ಗದಾಪ್ರಹಾರದಿಂದ ಗವಾಕ್ಷನಿಗೆ ಪ್ರಜ್ಞೆ ತಪ್ಪಿತು. ಅವನ ದೇಹವೆಲ್ಲವೂ ರಕ್ತಮಯವಾಯಿತು. ಆದರೆ ಅವನು ಕ್ಷಣಮಾತ್ರದಲ್ಲಿಯೇ ತಿರುಗಿ ಚೇತರಿಸಿಕೊಂಡು ಮೇಲೆದ್ದು ಬಂದು, ಆ ಉನ್ಮತ್ತನ ತಲೆಯ ಮೇಲೆ ಅಂಗೈಯಿಂದ ಹೊಡೆದನು. ಈ ಪ್ರಹಾರದಿಂದ ಪರ್ವತಾಕಾರವುಳ್ಳ ಆ ರಾಕ್ಷಸನು, ಹಲ್ಲು ಮುರಿದು, ಕಣ್ಣಾಲಿಗಳು ಕಿತ್ತು ಕೆಳಗೆ ಬಿದ್ದನು. ಅವನ ಸರ್ವಾಂಗಗಳಲ್ಲಿಯೂ ಬಿಸಿಬಿಸಿಯಾಗಿ ರಕ್ತವು ಕಿತ್ತುಕೊಂಡಿತು. ಅವನು ಪ್ರಾಣವನ್ನೂ ಬಿಟ್ಟನು. ಹೀಗೆ ರಾವಣಸಹೋದರನಾದ ಮಹೋದರನು ಸತ್ತುಬಿದ್ದುದನ್ನು ನೋಡಿ, ಸಮುದ್ರದಂತೆ ಅಪಾರವಾಗಿದ್ದ ರಾಕ್ಷಸಸೈನ್ಯವೆಲ್ಲವೂ ಭಯಪಟ್ಟು, ತಮ್ಮ ತಮ್ಮ ಆಯುಧಗಳನ್ನೂ ಅಲ್ಲಿಯೇ ಬಿಸುಟು, ಬದುಕಿದರೆ ಸಾಕೆಂದು ತಿಳಿದು, ಮೇರೆತಪ್ಪಿದ ಮಹಾಸಾಗರದಂತೆ ನಾನಾದಿಕ್ಕುಗಳಿಗೆ ಚದರಿದುವು.

ಇಲ್ಲಿಗೆ ಎಪ್ಪತ್ತನೆಯ ಸರ್ಗವು.

ಅತಿಕಾಯನು ಯುದ್ಧಕ್ಕೆ ಬಂದುದು. ವಿಭೀಷಣನು ಅತಿಕಾಯನ ವೃತ್ತಾಂತವನ್ನು ರಾಮನಿಗೆ ತಿಳಿಸಿದುದು. ಅತಿಕಾಯನು ವಾನರರನ್ನು ನಿಗ್ರಹಿಸಿ ರಾಮನನ್ನಿದಿರಿಸುವುದಕ್ಕಾಗಿ ಬರುವಾಗ ಲಕ್ಷ್ಮಣನು ಬ್ರಹ್ಮಾಸ್ತ್ರದಿಂದ ಆತನನ್ನು ಕೊಂದುದು.

ಈ ಅನರ್ಥಗಳೆಲ್ಲವನ್ನೂ ನೋಡಿ, ಅಲ್ಲಿದ್ದ ಅತಿಕಾಯನಿಗೆ ಮಹಾಕೋಪವು ಹುಟ್ಟಿತು. ಈ ರಾಕ್ಷಸನೋ ಮಹಾದ್ಭುತವಾದ ತೇಜಸ್ಸುಳ್ಳವನು. ಬ್ರಹ್ಮನಿಂದ ಅನೇಕ ವರಗಳನ್ನು ಪಡೆದವನು. ಹೆಸರಿಗೆ ತಕ್ಕಂತೆ ಪರ್ವತಾಕಾರವುಳ್ಳವನು. ಅನೇಕ ದೇವದಾನವರ ಕೊಬ್ಬನ್ನು ಮುರಿದವನು. ಈ ಮಹಾರಾಕ್ಷಸನು ನೋಡುವವರಿಗೆ ರೋಮಾಂಚವು ಹುಟ್ಟುವಂತೆ ತನ್ನ ಕಡೆಯ ರಾಕ್ಷಸಸೇನೆಯೆಲ್ಲವೂ ಚಲ್ಲಾಚದರಾಗಿ ದಿಕ್ಕುಗೆಟ್ಟು ಪಲಾಯನಮಾಡುವುದನ್ನೂ, ಆ ಯುದ್ಧದಲ್ಲಿ ಇಂದ್ರನಿಗೆಣೆಯಾದ ಪರಾಕ್ರಮವುಳ್ಳ ತನ್ನ ಒಡಹುಟ್ಟಿದವರು ಹತರಾದುದನ್ನೂ, ಮತ್ತು ಮಹೋದರ ಮಹಾಪಾರ್ಶ್ವರೆಂಬ ಚಿಕ್ಕಪ್ಪಂದಿರಿಬ್ಬರೂ ವಾನರರ ಕೊಲೆಗೆ ಸಿಕ್ಕಿಬಿದ್ದುದನ್ನೂ ನೋಡಿ, ಕೋಪವನ್ನು ತಡೆಯಲಾರದೆ ಸಹಸ್ರಸೂರ್ಯಪ್ರಕಾಶಮಾನವಾದ ಒಂದು ರಥವನ್ನೇರಿ ಕುಳಿತು ವಾನರಸೈನ್ಯವನ್ನಿಟ್ಟುತ್ತ ಬಂದನು. ಉತ್ತಮಕಿರೀಟದಿಂದಲೂ, ಹೊಳೆಯುವ ಕುಂಡಲಗಳಿಂದಲೂ ಭೂಷಿತನಾದ ಆ ಅತಿಕಾಯನು, ತನ್ನ ಬಿಲ್ಲನ್ನು ಮಿಡಿದು ಟಂಕಾರ ಮಾಡುತ್ತ "ಇದೋ! ಅತಿಕಾಯನೆಂಬ ನಾನು ಬಂದಿರುವೆನು" ಎಂದು ತನ್ನ ಹೆಸರನ್ನು ಹೇಳಿ ಸಿಂಹನಾದಮಾಡಿದನು. ಹೀಗೆ ಅತಿಕಾಯನು ತನ್ನ ಸಿಂಹನಾದ ಧ್ವನಿಯಿಂದಲೂ, ತನ್ನ ನಾಮೋದ್ಘೋಷಣದಿಂದಲೂ, ತನ್ನ ಧನುಷ್ಟಂಕಾರ ಧ್ವನಿಯಿಂದಲೂ ವಾನರರನ್ನು ನಡುಗಿಸುತ್ತ ಮುಂದೆ ಬಂದನು. ಇವನ ಮಹಾದ್ಭುತವಾದ ಆಕಾರವನ್ನು ನೋಡಿದಾಗಲೇ ಅಲ್ಲಿದ್ದ ವಾನರರೆಲ್ಲರಿಗೂ ಭಯವು ಹುಟ್ಟಿ, ಅವರೆಲ್ಲರೂ ತಮ್ಮಲ್ಲಿ ತಾವು "ಓಹೋ! ಆ ಕುಂಭಕರ್ಣನೇ ಇವನು! ತಿರುಗಿ ಎದ್ದು ಬಂದಿರುವನು!" ಎಂದು ಶಂಕಿತರಾಗಿ ಭಯದಿಂದ ಒಬ್ಬರಿಗೊಬ್ಬರು ತಬ್ಬಿಹಿಡಿದು ನಿಂತರು. ಮಹಾವಿಷ್ಣುವಿನ ತ್ರಿವಿಕ್ರಮರೂಪದಂತಿದ್ದ ಅವನ ಆಕಾರವನ್ನು ನೋಡಿ, ಕೆಲವು ವಾನರರು ಅಲ್ಲಲ್ಲಿ ಗುಂಪು

ಗುಂಪಾಗಿ ಓಡುತ್ತಿದ್ದರು. ಕೆಲವು ವಾನರರು ಅತಿಕಾಯನನ್ನು ನೋಡಿ ಭಯದಿಂದ ಹಿಂದುಮುಂದು ತೋರದೆ, ಸರ್ವಲೋಕಶರಣ್ಯನಾದ ಶ್ರೀರಾಮನ ಬಳಿಗೆ ಬಂದು ಅವನಲ್ಲಿ ಮರೆಹೊಕ್ಕರು. ಆಗ ರಾಮನೂ ಕೂಡ, ತನಗಿದಿರಾಗಿ ರಥದ ಮೇಲೆ ಕುಳಿತು, ಕೈಯಲ್ಲಿ ಧನುಸ್ಸನ್ನು ಹಿಡಿದು, ಕಾಲಮೇಘದಂತೆ ಆಗಾಗ ಗರ್ಜಿಸುತ್ತ, ಪರ್ವತಾಕಾರದಿಂದ ಬರುತ್ತಿದ್ದ ಅತಿಕಾಯನನ್ನು ಕಂಡನು. ಅವನ ಆಕಾರವನ್ನು ನೋಡಿ ರಾಮನಿಗೂ ಆಶ್ಚರ್ಯವುಂಟಾಯಿತು. ಆಗ ರಾಮನು ವಾನರರಿಗೆ ಧೈರ್ಯವನ್ನು ಹೇಳಿ ಸಮಾಧಾನಪಡಿಸಿ, ವಿಭೀಷಣನನ್ನು ನೋಡಿ "ವಿಭೀಷಣಾ! ಯಾರವನು? ಪರ್ವತದಂತಿರುವ ದೇಹದಿಂದಲೂ, ಪಿಂಗಳ ವಾದ ಸಿಂಹದೃಷ್ಟಿಯಿಂದಲೂ ಭಯಂಕರನಾಗಿ, ಕೈಯಲ್ಲಿ ದೊಡ್ಡ ಧನುಸ್ಸನ್ನು ಹಿಡಿದು, ದೊಡ್ಡ ರಥವನ್ನೇರಿರುವನು! ಮತ್ತು ಇವನು ತೇಜಸ್ಸಿನಿಂದ ಜ್ವಲಿಸುವ ತೀಕ್ಷ್ಣಶೂಲಗಳನ್ನೂ, ಪ್ರಾಸತೋಮರಗಳನ್ನೂ ತನ್ನ ಸುತ್ತಲೂ ರಥದಲ್ಲಿ ತುಂಬಿಟ್ಟುಕೊಂಡು, ಭೂತಗಣಗಳಿಂದ ಪರಿ ವೃತನಾದ ಕಾಲರುದ್ರನಂತೆ ಬರುತ್ತಿರುವನು! ಮತ್ತು ತನ್ನ ರಥದಲ್ಲಿ ಮೃತ್ಯುವಿನ ನಾಲಗೆಯಂತಿರುವ ಶಕ್ತ್ಯಾಯುಧಗಳನ್ನಿರಿಸಿರುವುದರಿಂದ ಮಿಂಚುಗಳೊಡಗೂಡಿದ ಕಾಲಮೇಘದಂತೆ ಕಾಣುವನು. ಸಿದ್ಧವಾಗಿ ನಾಣೇರಿಸಲ್ಪಟ್ಟು, ಬೆನ್ನಿನ ಮೇಲೆ ಚಿನ್ನದ ಕಟ್ಟುಗಳುಳ್ಳ ಇವನ ಧನುಸ್ಸು ಗಳೆಲ್ಲವೂ ಆಕಾಶದಲ್ಲಿ ಕಾಣುವ ಇಂದ್ರಧನುಸ್ಸುಗಳಂತೆ ರಥದ ಸುತ್ತಲೂ ತೂಗಾಡುತ್ತಿರುವುವು ನೋಡು! ಸೂರ್ಯನಂತೆ ಬೆಳಗುತ್ತಿರುವ ರಥದ ಮೇಲೆ ಕುಳಿತು ನಮಗಿದಿರಾಗಿ ಬರುತ್ತಿರುವ ಈ ರಾಕ್ಷಸನಾವನು? ಇವನು ಸೂರ್ಯಕಿರಣಗಳಂತಿರುವ ತನ್ನ ಬಾಣಗಳಿಂದ ಹತ್ತು ದಿಕ್ಕುಗಳನ್ನೂ ಬೆಳಗುತ್ತಿರುವನು. ಧ್ವಜಾಗ್ರದಲ್ಲಿ ರಾಹುಚಿಹ್ನದಿಂದ ಶೋಭಿಸುತ್ತಿರು ವನು. ಇವನ ಕೈಯಲ್ಲಿರುವ ಧನುಸ್ಸು ಆದ್ಯಂತಗಳಲ್ಲಿಯೂ ನಡುವೆಯೂ ವಕ್ರವಾಗಿ ಬಗ್ಗಿ, ನಡುನಡುವೆ ಚಿನ್ನದ ಕಟ್ಟುಗಳಿಂದಲಂಕೃತವಾಗಿ, ಮೇಘಧ್ವನಿಯಂತೆ ಮೊಳಗುತ್ತ, ಇಂದ್ರಧನುಸ್ಸಿನ ಹಾಗೆ ಪ್ರಕಾಶಿಸು ತ್ತಿರುವುದು. ಇವನ ಮಹಾರಥವು ಧ್ವಜಪತಾಕೆಗಳಿಂದಲೂ, ದೃಢವಾದ ಆಸನದ ಹಲಗೆಯಿಂದಲೂ, ನಾಲ್ಕುಮಂದಿ ಸಾರಥಿಗಳಿಂದಲೂ ಕೂಡಿ

ಮೇಘಧ್ವನಿಯಂತೆ ಗಂಭೀರವಾಗಿ ಮೊಳಗುತ್ತಿರುವುದು. ಈ ರಥದ ಸುತ್ತಲೂ ಒಂದುಕಡೆಯಲ್ಲಿ ಇಪ್ಪತ್ತು, ಮತ್ತೊಂದು ಕಡೆಯಲ್ಲಿ ಹತ್ತು, ಇನ್ನೊಂದು ಕಡೆಯಲ್ಲಿ ಎಂಟು, ಹೀಗೆ ಮೂವತ್ತೆಂಟು ಬತ್ತಳಿಕೆಗಳು ತೂಗಾಡುತ್ತಿರುವುವು. ಅಲ್ಲಲ್ಲಿ ಭಯಂಕರಗಳಾದ ಧನುರ್ದಂಡಗಳೂ, ಹೊಂಬಣ್ಣದ ನಾಣುಗಳೂ ಶೋಭಿಸುತ್ತಿರುವುವು. ರಥದ ಮೇಲೆ ಅವನ ಉಭಯಪಾರ್ಶ್ವಗಳಲ್ಲಿಯೂ ಎರಡು ಕತ್ತಿಗಳು ಹೊಳೆಯುತ್ತಿರುವುವು. ಒಂದೊಂದು ಕತ್ತಿಯೂ ಹತ್ತು ಮೊಳದುದ್ದವುಳ್ಳುದಾಗಿ, ನಾಲ್ಕುಹಸ್ತ ಪ್ರಮಾಣದ ಹಿಡಿಯಿಂದಲೂ, ಎರಡು ಪಕ್ಕಗಳಲ್ಲಿಯೂ ಥಳಥಳಿಸುವ ತೀಕ್ಷ್ಣ ಧಾರೆಗಳಿಂದಲೂ ಶೋಭಿಸುತ್ತಿರುವುದು. ಕೆಂಪಾದ ಪುಷ್ಪ ಮಾಲಿಕೆಯನ್ನು ಕೊರಲಿಗೆ ಧರಿಸಿ ಪರ್ವತಾಕಾರದಿಂದ ಬರುತ್ತಿರುವ ಈ ಧೀರನಾವನು? ಕಾಡಿಗೆಯಂತೆ ಕಪ್ಪಾದ ಮೈಯುಳ್ಳ ಈ ರಾಕ್ಷಸನು ಮೃತ್ಯುವಿನ ಬಾಯಂತಿರುವ ದೊಡ್ಡ ಬಾಯನ್ನು ತೆರೆದು ಬರುತ್ತಿರುವಾಗ ಇವನ ಮುಖವು, ಕಾಳಮೇಘಗಳಲ್ಲಿ ಮರೆಗೊಂಡ ಸೂರ್ಯಬಿಂಬದಂತೆ ಕಾಣುವುದು ನೋಡು! ಎರಡು ತೋಳುಗಳಿಗೂ ಚಿನ್ನದ ತೋಳ್ಬಳೆಗಳನ್ನು ಧರಿಸಿರುವ ಈ ರಾಕ್ಷಸನ ಆಕಾರವು ಮಹೋನ್ನತಗಳಾದ ಎರಡು ಶಿಖರಗಳಿಂದ ಶೋಭಿಸುವ ಹಿಮವತ್ಪರ್ವತದಂತಿರುವುದು. ನೇತ್ರಕಾಂತಿಯಿಂದ ಕೂಡಿ, ಉಭಯಪಾರ್ಶ್ವಗಳಲ್ಲಿಯೂ ಹೊಳೆಯುವ ಕರ್ಣಕುಂಡಲಗಳಿಂದ ಶೋಭಿಸುವ ಈತನ ಮುಖವು, ಪುನರ್ವಸೂ ನಕ್ಷತ್ರಗಳ ನಡುವೆ ಕಾಣುವ ಪೂರ್ಣಚಂದ್ರ ಬಿಂಬವನ್ನು ಹೋಲುತ್ತಿರುವುದು. ಇವನನ್ನು ನೋಡಿದ ಮಾತ್ರಕ್ಕೆ ನಮ್ಮ ಕಡೆಯ ವಾನರರೆಲ್ಲರೂ ಭಯಪಟ್ಟು, ಓಡುತ್ತಿರುವರು. ಎಲೆ ಮಹಾಬಾಹೊ! ಈ ರಾಕ್ಷಸೋತ್ತಮನಾರೆಂಬುದನ್ನು ನನಗೆ ತಿಳಿಸು!” ಎಂದನು. ಎಣೆಯಿಲ್ಲದ ವೀರ್ಯವುಳ್ಳ ರಾಮನೂ ಕೂಡ ಹೀಗೆ ಆಶ್ಚರ್ಯಪಟ್ಟು ಪ್ರಶ್ನೆಮಾಡಿದುದನ್ನು ಕೇಳಿ, ಮಹಾತೇಜಸ್ವಿಯಾದ ವಿಭೀಷಣನು ಅತಿಕಾಯನ ವೃತ್ತಾಂತವನ್ನು ರಾಮನಿಗೆ ತಿಳಿಸುವುದಕ್ಕೆ ತೊಡಗಿದನು. “ರಾಮಾ! ಕುಬೇರನಿಗೆ ತಮ್ಮನಾಗಿ, ಕ್ರೂರಕರ್ಮಿಯಾಗಿ ಮಹಾತೇಜಸ್ವಿಯೆನಿಸಿಕೊಂಡು ದಶಗ್ರೀವನು ಇಲ್ಲಿನ ರಾಕ್ಷಸರಿಗೆ ರಾಜನಾಗಿ ಲಂಕೆಯನ್ನಾಳುತ್ತಿರುವನಷ್ಟೆ? ವೀರ್ಯ

ವಂತನಾದ ಈ ರಾಕ್ಷಸನು ಆ ರಾವಣನ ಮಗನು. ಯುದ್ಧದಲ್ಲಿ ತನ್ನ ತಂದೆಗೆ ಸಮಾನನು. ಇವನು ಸಾಮಾನ್ಯನಲ್ಲ. ಅನೇಕ ವೃದ್ಧರನ್ನು ಸೇವಿಸಿದವನು. ಅನೇಕ ಶಾಸ್ತ್ರಗಳನ್ನು ಕೇಳಿ ತಿಳಿದವನು. ಅಸ್ತ್ರ ವಿಶಾರದರೊಳಗೆಲ್ಲಾ ತಾನೇ ಮೇಲೆನಿಸಿಕೊಂಡವನು. ಆನೆಗಳನ್ನೂ, ಕುದುರೆಗಳನ್ನೂ, ರಥಗಳನ್ನೂ ಏರಿ ನಡೆಸುವುದರಲ್ಲಿ ಬಹಳ ನಿಪುಣನು. ಕತ್ತಿ, ಬಿಲ್ಲು, ಮುಂತಾದ ಶಸ್ತ್ರವಿದ್ಯೆಗಳನ್ನು ಚೆನ್ನಾಗಿ ಬಲ್ಲವನು. ಇತರರ ಮನಸ್ಸನ್ನಾಕರ್ಷಿಸುವುದರಲ್ಲಿಯೂ ಬಹಳ ಚತುರನು. ಸಾಮ ದಾನ ಭೇದಗಳಲ್ಲಿಯೂ ಸಮರ್ಥನೆಂದು ಹೆಸರುಗೊಂಡವನು. ಇವನ ಬಾಹುಬಲವನ್ನು ನಂಬಿಯೇ ಲಂಕೆಯು ಇದುವರೆಗೂ ನಿರ್ಭಯವಾಗಿರು ವುದು. ಇವನು ರಾವಣನಿಗೆ ಕನಿಷ್ಠ ಪತ್ನಿಯಾದ ಧಾನ್ಯಮಾಲಿನಿಯ ಗರ್ಭದಲ್ಲಿ ಹುಟ್ಟಿದವನು. ಇವನನ್ನು ಅತಿಕಾಯನೆಂದು ಕರೆಯುವರು. ಇವನು ಪೂರ್ವದಲ್ಲಿ ಒಂದೇ ದೃಢಾಧ್ಯವಸಾಯದಿಂದ ತಪಸ್ಸನ್ನು ಮಾಡಿ, ಬ್ರಹ್ಮದೇವನನ್ನು ಸಂತೋಷಪಡಿಸಿ, ಅವನ ಅನುಗ್ರಹದಿಂದ ಅನೇಕ ದಿವ್ಯಾಸ್ತ್ರಗಳನ್ನು ಪಡೆದಿರುವನು. ಇದುವರೆಗೆ ಎಷ್ಟೋ ಶತ್ರುಗಳನ್ನು ಜಯಿಸಿರುವನು. ಬ್ರಹ್ಮನು ಇವನ ತಪಸ್ಸಿಗೆ ಮೆಚ್ಚಿ ದೇವದಾನವರಿಂ ದಲೂ ಸಾವಿಲ್ಲದಂತೆ ಇವನಿಗೆ ವರವನ್ನು ಕೊಟ್ಟಿರುವನು. ಇವನು ಈಗ ಧರಿಸಿಬಂದಿರುವ ಈ ದಿವ್ಯಕವಚವೂ, ಸೂರ್ಯತೇಜಸ್ಸುಳ್ಳ ಈ ದಿವ್ಯರಥವೂ ಇವನಿಗೆ ಬ್ರಹ್ಮಾನುಗ್ರಹದಿಂದಲೇ ಲಭಿಸಿರುವುವು. ಇವನು ಅನೇಕಾವರ್ತಿ ದೇವದಾನವರನ್ನು ಜಯಿಸಿ ರಾಕ್ಷಸರಿಗೆ ಅಪಾಯವಿಲ್ಲದಂತೆ ರಕ್ಷಿಸಿರುವನು. ಅನೇಕ ಯಕ್ಷರು ಇವನಿಂದ ಹತರಾಗಿರುವರು. ಧೀಮಂ ತನಾದ ಇಂದ್ರನ ವಜ್ರಾಯುಧವೂ ತನ್ನ ಮೇಲೆ ಸಾಗದಂತೆ ಇವನು ಅದನ್ನು ಸ್ತಬ್ಧವಾಗಿ ಮಾಡುವನು. ವರುಣನ ಪಾಶಾಯುಧವನ್ನೂ ವಿಫಲಮಾಡಿರುವನು. ರಾಮಾ! ಈ ಅತಿಕಾಯನು ಬಹಳ ಬಲಾಢ್ಯನು. ರಾಕ್ಷಸರಿಗೆಲ್ಲಾ ಪ್ರಮುಖನು. ಬಹಳ ಬುದ್ಧಿವಂತನು. ಅನೇಕ ದೇವ ದಾನವರ ಕೊಬ್ಬನ್ನಡಗಿಸಿದವನು. ರಾವಣನಿಗೆ ಪ್ರಿಯಪುತ್ರನು. ಆದುದ ರಿಂದ ಇವನು ತನ್ನ ಬಾಣಗಳಿಂದ ನಮ್ಮ ವಾನರ ಸೈನ್ಯವನ್ನು ನಾಶ ಮಾಡುವುದಕ್ಕೆ ಮೊದಲೇ, ನೀನು ಶೀಘ್ರದಲ್ಲಿ ಇವನನ್ನು ನಿಗ್ರಹಿಸು

ವುದಕ್ಕೆ ಯತ್ನಮಾಡಬೇಕು" ಎಂದನು. ವಿಭೀಷಣನು ಈ ಮಾತು ಗಳನ್ನಾಡುತ್ತಿರುವಷ್ಟರಲ್ಲಿಯೇ ಬಲಾಢ್ಯನಾದ ಅತಿಕಾಯನು, ಧನು ಷ್ಟಂಕಾರದೊಡನೆ ವಾನರಸೈನ್ಯದ ನಡುವೆ ಪ್ರವೇಶಿಸಿ, ಬಾರಿಬಾರಿಗೂ ಸಿಂಹನಾದ ಮಾಡುತ್ತಿದ್ದನು. ಹೀಗೆ ಭಯಂಕರವಾದ ರಥದ ಮೇಲೆ ಕುಳಿತು ಬರುತ್ತಿದ್ದ ರಥಿಕೋತ್ತಮವಾದ ಆ ಅತಿಕಾಯನನ್ನು ನೋಡಿ, ಕೆಲವು ಮಂದಿ ವಾನರಪ್ರಧಾನರು ಅವನನ್ನಿದಿರಿಸುವುದಕ್ಕಾಗಿ ಮುಂದೆ ಬಂದರು. ಕುಮುದನೂ, ಮೈಂದನೂ, ದ್ವಿವಿದನೂ, ನೀಲನೂ, ಶರ ಭನೂ ಈ ಐದುಮಂದಿಯೂ ಒಂದಾಗಿ ಸೇರಿ, ವೃಕ್ಷಗಳನ್ನೂ, ಪರ್ವತ ಶಿಖರಗಳನ್ನೂ ಕೈಗೆತ್ತಿಕೊಂಡು ಏಕಕಾಲದಲ್ಲಿ ಅವನ ಮೇಲೆ ಹೊರಟರು. ಇದನ್ನು ನೋಡಿ ಮಹಾವೀರ್ಯಶಾಲಿಯಾಗಿಯೂ, ಶಸ್ತ್ರಾಸ್ತ್ರಗಳನ್ನು ಬಲ್ಲವರಲ್ಲಿ ಮೇಲೆನಿಸಿದವನಾಗಿಯೂ ಇರುವ ಅತಿಕಾಯನು, ಚಿನ್ನದ ಕಟ್ಟುಳ್ಳ ಬಾಣಗಳಿಂದ ಆ ವಾನರರು ಹೊತ್ತುತಂದ ವೃಕ್ಷಗಳನ್ನೆಲ್ಲಾ ತುಂಡು ಮಾಡಿ ಕೆಡಹಿದನು. ಮತ್ತು ಬಲಾಢ್ಯನಾಗಿಯೂ, ಭಯಂಕ ರಾಕಾರವುಳ್ಳವನಾಗಿಯೂ ಇದ್ದ ಆ ರಾಕ್ಷಸನು ಸಮಸ್ತ ವಾನರರನ್ನೂ ಧೈರ್ಯದಿಂದಿರಿಸಿ, ಅವರ ದೇಹವನ್ನು ಉಕ್ಕಿನ ಬಾಣಗಳಿಂದ ಎಡೆಬಿಡದೆ ಭೇದಿಸುತ್ತಿದ್ದನು. ಆ ವಾನರರೆಲ್ಲರೂ ಈ ಬಾಣವರ್ಷದಿಂದ ಬಹಳವಾಗಿ ಗಾಯಪಟ್ಟು ಆ ಮಹಾಯುದ್ಧದಲ್ಲಿ ಅತಿಕಾಯನ ಮೇಲೆ ಕೈಮಾಡ ಲಾರದೆ ಹೋದರು. ಯೌವನಮದದಿಂದ ಕೊಬ್ಬಿ ಕೋಪಗೊಂಡ ಸಿಂಹವು, ಕ್ಷುದ್ರಮೃಗಗಳನ್ನು ಹೇಗೋ ಹಾಗೆ ಆ ರಾಕ್ಷಸನು ತನ್ನ ಪರಾಕ್ರಮ ದಿಂದ ಅಲ್ಲಿನ ಸಮಸ್ತ ವಾನರಸೈನ್ಯವನ್ನೂ ನಡುಗಿಸುತ್ತಿದ್ದನು. ಹೀಗೆ ಅತಿಕಾಯನು ವಾನರಸೈನ್ಯದಲ್ಲಿ ಪ್ರವೇಶಿಸಿ ವಾನರರನ್ನು ಹೆದರಿಸುತ್ತಿ ದ್ದರೂ, ತನಗಿದಿರಾಗಿ ಬಾರದವನೊಬ್ಬನನ್ನೂ ಕೊಲ್ಲದೆ, ಬಿಲ್ಲುಬತ್ತಳಿಕೆ ಗಳೊಡನೆ ನೆಟ್ಟಗೆ ರಾಮನ ಸಮೀಪಕ್ಕೆ ಬಂದು, ಗರ್ವಯುಕ್ತವಾದ ಮಾತಿನಿಂದ ಆತನನ್ನು ಕುರಿತು "ಎಲೈ ರಾಜಪುತ್ರನೆ! ಇದೋ! ನಾನು ಬಿಲ್ಲು ಬಾಣಗಳೊಡನೆ ರಥವನ್ನೇರಿ ಯುದ್ಧಕ್ಕೆ ಸಿದ್ಧನಾಗಿ ಬಂದಿರುವೆನು. ಆದರೆ ಸಮಾನರಲ್ಲದವರೊಡನೆ ಮಾತ್ರ ನಾನು ಯುದ್ಧಕ್ಕೆ ನಿಲ್ಲುವವ ನಲ್ಲ! ನನಗೆ ಸರಿಯಾದ ಯುದ್ಧೋತ್ಸಾಹವುಳ್ಳವರು ಯಾರಾದರೂ

ಇದ್ದ ಪಕ್ಷದಲ್ಲಿ ಅವರು ಈಗಲೇ ನನ್ನೊಡನೆ ಯುದ್ಧಕ್ಕೆ ನಿಲ್ಲಬಹುದು" ಎಂದನು. ಈ ಗರ್ವದ ಮಾತನ್ನು ಕೇಳಿ ಪರಂತಪನಾದ ಲಕ್ಷ್ಮಣನಿಗೆ ಕೋಪವು ಹುಟ್ಟಿತು. ಅವನ ಹೆಮ್ಮೆಯನ್ನು ನೋಡಿ ಸಹಿಸಲಾರದೆ ಲಕ್ಷ್ಮಣನು ನಸುನಗುತ್ತ, ಧನುಸ್ಸನ್ನು ಹಿಡಿದು ಮುಂದೆ ಹೋದನು. ಹೀಗೆ ಕೋಪಗೊಂಡ ಲಕ್ಷ್ಮಣನು ವೇಗದಿಂದ ಮುಂದೆ ಹೋಗಿ ಬತ್ತಳಿಕೆ ಯಿಂದ ಬಾಣವನ್ನು ತೆಗೆದು ಅತಿಕಾಯನ ಮುಂದೆ ನಿಂತು ನಾಣನ್ನೆ ಳೆದು ಟಂಕಾರಮಾಡಿದನು. ಲಕ್ಷ್ಮಣನ ಈ ಧನುಷ್ಟಂಕಾರ ಧ್ವನಿಯೇ ಅತಿ ಭಯಂಕರವಾಗಿ ಸಮಸ್ತ ರಾಕ್ಷಸರನ್ನೂ ಹೆದರಿಸಿತಲ್ಲದೆ, ಸಮಸ್ತ ಭೂಮಿಯನ್ನೂ, ಬೆಟ್ಟಗಳನ್ನೂ, ಆಕಾಶವನ್ನೂ, ಸಮುದ್ರವನ್ನೂ, ದಿಕ್ಕು ಗಳನ್ನೂ ತುಂಬಿತು. ಲಕ್ಷ್ಮಣನ ಭಯಂಕರವಾದ ಚಾಪಘೋಷವನ್ನು ಕೇಳಿ ಮಹಾ ತೇಜಸ್ವಿಯಾದ ಅತಿಕಾಯನಿಗೂ ಆಶ್ಚರ್ಯವುಂಟಾಯಿತು. ಆಮೇಲೆ ಅತಿಕಾಯನು ಲಕ್ಷ್ಮಣನು ತನಗಿದಿರಾಗಿರುವುದನ್ನು ಕಂಡು ಕೋಪಗೊಂಡು, ತೀಕ್ಷ್ಣಬಾಣವನ್ನು ತೆಗೆದು ಆ ಲಕ್ಷ್ಮಣನನ್ನು ಕುರಿತು "ಎಲೆ ಲಕ್ಷ್ಮಣಾ! ಇನ್ನೂ ನೀನು ಬಾಲನು! ಪರಾಕ್ರಮಕಾರ್ಯಗಳಲ್ಲಿ ಪರಿಚಯವಿಲ್ಲದವನು! ಆದುದರಿಂದ ನೀನು ಇಲ್ಲಿ ನಿಲ್ಲಬೇಡ! ಹೋಗು! ಮೃತ್ಯುವಿಗೆ ಸಮಾನನಾದ ನನ್ನೊಡನೆ ಯುದ್ಧಮಾಡಬೇಕೆಂಬ ಆಸೆಯು ನಿನಗೆ ತರವಲ್ಲ. ನನ್ನ ಭುಜಪ್ರಯುಕ್ತಗಳಾದ ಅಸ್ತ್ರಗಳ ವೇಗವನ್ನು ಹಿಮವಂತವಾಗಲಿ, ಅಂತರಿಕ್ಷವಾಗಲಿ, ಭೂಮಿಯಾಗಲಿ ಸಹಿಸಲಾರವು. ಸುಖಪ್ರಸುಪ್ತವಾದಂತೆ ತನ್ನಷ್ಟಕ್ಕೆ ತಾನೇ ಶಾಂತವಾದ ಕಾಲಾಗ್ನಿ ಯನ್ನು ಉರಿಸುವುದಕ್ಕೆ ಪ್ರಯತ್ನಿಸಬೇಡ. ನಿನ್ನಧನುಸ್ಸನ್ನು ಇಲ್ಲಿಯೇ ಇಟ್ಟು ಹಿಂತಿರುಗಿ ಹೋಗು. ನನ್ನ ಕೈಗೆ ಸಿಕ್ಕಿ ಪ್ರಾಣವನ್ನು ಬಿಡ ಬೇಡ! ಹಾಗಿಲ್ಲದೆ ನಿನಗೆ ನನ್ನೊಡನೆ ಹೋರಾಡಿದ ಹೊರತು ಹಿಂತಿರುಗಿ ಹೋಗುವುದಕ್ಕೆ ಇಷ್ಟವಿಲ್ಲದಿದ್ದರೆ ಮುಂದೆ ನಿಲ್ಲು! ಈಗಲೇ ನೀನು ಪ್ರಾಣ ವನ್ನು ಬಿಟ್ಟು ಯಮಪುರಿಗೆ ಹೋಗುವುದರಲ್ಲಿ ಸಂದೇಹವಿಲ್ಲ. ನನ್ನ ತೀಕ್ಷ್ಣಬಾಣಗಳ ರೀತಿಯನ್ನಾದರೂ ನೋಡು! ಇದುವರೆಗೆ ಎಷ್ಟೋ ಶತ್ರುಗಳ ಕೊಬ್ಬನ್ನು ಮುರಿದು, ಕಾಲರುದ್ರನ ತ್ರಿಶೂಲಕ್ಕೆ ಸಮಾನ ವಾಗಿ, ಪುಟಹಾಕಿದ ಚಿನ್ನದ ಕಟ್ಟುಗಳಿಂದಲಂಕೃತವಾಗಿರುವ ಈ ನನ್ನ

ಬಾಣವು, ಕೋಪಗೊಂಡ ಸಿಂಹವು ಆನೆಯ ರಕ್ತವನ್ನು ಹೀರುವಂತೆ, ಈಗಲೇ ನಿನ್ನ ರಕ್ತವನ್ನು ಕುಡಿಯುವುದು" ಎಂದನು. ಹೀಗೆಂದು ಹೇಳಿ ಅತಿಕಾಯನು, ಬಾಣವನ್ನು ಧನುಸ್ಸಿನಲ್ಲಿ ಸಂಧಾನಮಾಡಿ ನಿಂತನು. ಹೀಗೆ ಕೋಪದಿಂದಲೂ, ಗರ್ವದಿಂದಲೂ ಹೇಳಿದ ಈ ಮಾತನ್ನು ಕೇಳಿ ಲಕ್ಷ್ಮಣನಿಗೆ ಇನ್ನೂ ಕೋಪವು ಹೆಚ್ಚಿತು ಬಲಾಢ್ಯನಾಗಿಯೂ, ಶ್ರೀಮಂತನಾಗಿಯೂ ಇರುವ ಲಕ್ಷ್ಮಣನು, ತಿರುಗಿ ಅತಿಕಾಯನನ್ನು ಕುರಿತು ಸಾರವತ್ತಾದ ಮಾತಿನಿಂದ "ಎಲೆ ರಾಕ್ಷಸಾ! ಎಲೆ ದುರಾತ್ಮಾ! ಮಾತಿನಿಂದಲೇ ನಿನಗೆ ಮೇಲ್ಮೆಯು ಬರುವುದೇನು? ಕಾರ್ಯದಿಂದ ಶೂರರೆನಿಸಿಕೊಳ್ಳಬೇಕೇ ಹೊರತು ಆತ್ಮಸ್ತುತಿಯಿಂದ ಯಾರೂ ಶೂರ ರೆನಿಸಿಕೊಳ್ಳಲಾರರು. ಇದೋ! ನಾನು ಧನುರ್ಬಾಣಗಳನ್ನು ಹಿಡಿದು ನಿಂತಿರುವೆನು ನಿನ್ನ ಬಲವನ್ನು ತೋರಿಸು. ಕಾರ್ಯದಲ್ಲಿ ನಿನ್ನ ನಿಜವನ್ನು ತೋರಿಸಬೇಕೇ ಹೊರತು, ಈ ಆತ್ಮಸ್ತುತಿಯಿಂದ ಫಲವಿಲ್ಲ. ನಿಜವಾದ ಪೌರುಷವುಳ್ಳವನೇ ಶೂರನೆನಿಸುವನು. ನೀನೂ ಈಗ ಸರ್ವಾ ಯುಧಗಳನ್ನೂ ಸಿದ್ಧಪಡಿಸಿಕೊಂಡು ಮಹಾಧನುಸ್ಸನ್ನು ಕೈಯಲ್ಲಿ ಹಿಡಿದು, ಯುದ್ಧರಥವನ್ನೇರಿ ಬಂದಿರುವೆಯಷ್ಟೆ? ಬಾಣಗಳಿಂದಲೋ, ಮಂತ್ರಾಸ್ತ್ರ ಗಳಿಂದಲೋ ನಿನ್ನ ಪರಾಕ್ರಮವನ್ನು ತೋರಿಸು! ಆಮೇಲೆ ನಾನು ಈ ನನ್ನ ತೀಕ್ಷ್ಣಬಾಣಗಳಿಂದ, ಗಾಳಿಯು ಮರದ ಕೊನೆಯಿಂದ ಪಕ್ವ ವಾದ ತಾಳೆಯ ಹಣ್ಣನ್ನು ಕೆಳಗೆ ಕೆಡಹುವಂತೆ ನಿನ್ನ ತಲೆಯನ್ನು ಕತ್ತರಿಸಿ ಕೆಡಹುವೆನು. ಎಲೆ ರಾಕ್ಷಸಾ! ಇದೋ ಈಗಲೇ ಸುವರ್ಣಾ ಲಂಕೃತಗಳಾದ ನನ್ನ ಬಾಣಗಳು ನಿನ್ನ ದೇಹವನ್ನು ಕೊರೆದು ರಕ್ತ ವನ್ನು ಹೀರುವುವು. ನಾನು ಬಾಲನೆಂದು ತಿಳಿದು ನನ್ನನ್ನು ನೀನು ಅಲಕ್ಷ್ಯದಿಂದ ಕಾಣಬೇಡ. ನಾನು ಬಾಲನಾದರೇನು? ವೃದ್ಧನಾದ ರೇನು? ಹೇಗಿದ್ದರೂ ಈ ಯುದ್ಧದಲ್ಲಿ ನಾನೇ ನಿನಗೆ ಮೃತ್ಯುವೆಂದು ತಿಳಿ! ಪೂರ್ವದಲ್ಲಿ ಬಾಲರಲ್ಲಿ ಬಾಲನಾದ ವಿಷ್ಣುವು ತನ್ನ ಮೂರಡಿ ಗಳಿಂದಲೇ ಮೂರುಲೋಕಗಳನ್ನೂ ಆಕ್ರಮಿಸಲಿಲ್ಲವೇ?" ಎಂದನು. ಹೀಗೆ ಸಹೇತುವಾಗಿಯೂ, ಸಾರವತ್ತಾಗಿಯೂ ಇರುವ ಲಕ್ಷ್ಮಣನ ಮಾತನ್ನು ಕೇಳಿ, ಅತಿಕಾಯನು ಮಿತಿಮೀರಿದ ಕೋಪದಿಂದ ಸರ್ವೋ

ತ್ತಮವಾದ ಒಂದು ಬಾಣವನ್ನು ಕೈಗೆತ್ತಿಕೊಂಡನು. ಈ ಮಹಾಯುದ್ಧ ವನ್ನು ನೋಡುವುದಕ್ಕಾಗಿ ಅಂತರಿಕ್ಷದಲ್ಲಿ, ಮಹಾತ್ಮರಾದ ವಿದ್ಯಾಧರರೂ, ಭೂತಗಳೂ, ದೇವದಾನವರೂ, ಮಹರ್ಷಿಗಳೂ, ಗುಹ್ಯರೂ ಗುಂಪು ಗುಂಪಾಗಿ ಬಂದು ಸೇರಿದರು. ಆಮೇಲೆ ಅತಿಕಾಯನು ಕೋಪದಿಂದ ಬಾಣವನ್ನು ಬಿಲ್ಲಿಗೆ ಸೇರಿಸಿ, ಆಕಾಶವನ್ನೇ ನುಂಗಿಬಿಡುವಂತೆ ವೇಗದಿಂದ ಲಕ್ಷ್ಮಣನ ಮೇಲೆ ಆ ಬಾಣವನ್ನು ಪ್ರಯೋಗಿಸಿದನು. ಇಷ್ಟರಲ್ಲಿ ಪರಂತಪನಾದ ಲಕ್ಷ್ಮಣನು ಸರ್ಪದಂತೆ ತನಗಿದಿರಾಗಿ ಬರುತ್ತಿದ್ದ ಆ ತೀಕ್ಷ್ಣಬಾಣವನ್ನು ತನ್ನ ಅರ್ಧಚಂದ್ರಬಾಣದಿಂದ ನಡುದಾರಿಯಲ್ಲಿಯೇ ಕತ್ತರಿಸಿ ಕೆಡಹಿದನು. ಕತ್ತರಿಸಿದ ಸರ್ಪದೇಹದಂತೆ ತನ್ನ ಬಾಣವು ಲಕ್ಷ್ಮಣನ ಬಾಣದಿಂದ ಮುರಿದು ಬಿದ್ದುದನ್ನು ನೋಡಿ ಅತಿಕಾಯನು ಮತ್ತಷ್ಟು ಕೋಪಗೊಂಡವನಾಗಿ, ಐದು ಬಾಣಗಳನ್ನು ತೆಗೆದು ಅವೈದನ್ನೂ ಒಂದೇ ಕಾಲದಲ್ಲಿ ಲಕ್ಷ್ಮಣನ ಮೇಲೆ ಪ್ರಯೋಗಿಸಿದನು. ಆ ಐದು ಬಾಣಗಳನ್ನೂ ಲಕ್ಷ್ಮಣನು ತನ್ನ ತೀಕ್ಷ್ಣಬಾಣಗಳಿಂದ ನಡು ದಾರಿಯಲ್ಲಿಯೇ ಕತ್ತರಿಸಿ ಕೆಡಹಿದನು. ಹೀಗೆ ಆ ಬಾಣವನ್ನು ಕತ್ತರಿ ಸಿದಮೇಲೆ ಲಕ್ಷ್ಮಣನು, ಜ್ವಲಿಸುತ್ತಿರುವ ಬೇರೊಂದು ತೀಕ್ಷ್ಣಬಾಣ ವನ್ನು ಕೈಗೆತ್ತಿಕೊಂಡು, ಆ ಬಾಣವನ್ನು ತನ್ನ ಮಹಾಧನುಸ್ಸಿನಲ್ಲಿ ಸಂಧಾನಮಾಡಿ, ಆಕರ್ಣಾಂತವಾಗಿ ವೇಗದಿಂದೆಳೆದು ಅತಿಕಾಯನ ಮೇಲೆ ಪ್ರಯೋಗಿಸಿದನು ಹೀಗೆ ಲಕ್ಷ್ಮಣನು ಆಕರ್ಣಾಂತವಾಗಿ ನಾಣೆಳೆದು ಬಿಟ್ಟ ಋಜುವಾದ ಆ ಬಾಣವು ಅತಿಕಾಯನ ಹಣೆಯಲ್ಲಿ ನಾಟಿತು. ಆ ಘೋರರಾಕ್ಷಸನ ಹಣೆಯಲ್ಲಿ ನಾಟನಿಂತ ಆ ಬಾಣವು ಗಾಯದ ರಕ್ತ ದಿಂದ ತೊಯ್ದು ಪರ್ವತಾಗ್ರದ ಮೇಲೆ ಹೆಡೆಯಾಡುವ ಸರ್ಪದಂತೆ ಕಾಣುತ್ತಿತ್ತು. ಲಕ್ಷ್ಮಣನ ಈ ಬಾಣದಿಂದ ಪೀಡಿತವಾದ ಆ ರಾಕ್ಷಸನ ದೇಹವು, ಪೂರ್ವದಲ್ಲಿ ರುದ್ರನ ಬಾಣದಿಂದ ಪೀಡಿತವಾದ ಪುರದ್ವಾರದಂತೆ ಕ್ಷಣಮಾತ್ರದವರೆಗೆ ಕಂಪಿಸಿಹೋಯಿತು. ಇದರಿಂದ ಪ್ರಜ್ಞೆತಪ್ಪಿದಂ ತಿದ್ದ ಆ ಅತಿಕಾಯನು, ಸ್ವಲ್ಪಕಾಲದಲ್ಲಿಯೇ ಮೆಲ್ಲಗೆ ಚೇತರಿಸಿಕೊಂಡು, ಮುಂದೆ ಮಾಡಬೇಕಾದ ಕಾರ್ಯವೇನೆಂದು ತನ್ನಲ್ಲಿ ತಾನೇ ಆಲೋಚಿಸಿ ನಿಶ್ಚಯಿಸಿಕೊಂಡು ಲಕ್ಷ್ಮಣನನ್ನು ಕುರಿತು "ಎಲೈ ರಾಜಪುತ್ರ! ಭಲೆ!

ಶಹಬಾಸ್! ನೀನು ಶತ್ರುವಾದರೂ ನಿನ್ನ ಬಾಣಪ್ರಯೋಗವನ್ನು ನೋಡಿ ನಿನ್ನನ್ನು ಶ್ಲಾಘಿಸಬೇಕಾಗಿದೆ" ಎಂದು ಹೇಳಿ, ತಲೆಯನ್ನು ತಗ್ಗಿಸಿ ಭುಜಗಳನ್ನೊದರಿ ಸ್ವಾಧೀನಪಡಿಸಿಕೊಂಡು, ರಥದಲ್ಲಿ ಕುಳಿತು ಚಿತ್ರಗತಿಯಿಂದ ಸುತ್ತುತ್ತ, ಒಂದು, ಮೂರು, ಐದು, ಏಳು ಹೀಗೆ ಮೇಲೆ ಮೇಲೆ ಗುಂಪುಗುಂಪಾಗಿ ಬಾಣಗಳನ್ನೆತ್ತಿ ಸಂಧಾನಮಾಡಿ, ಬಾಣವನ್ನು ವೇಗದಿಂದೆಳೆದು ಬಿಡುತ್ತಿದ್ದನು. ಮೃತ್ಯುಸಮಾನಗಳಾಗಿ ಅತಿಕಾಯನ ಧನುಸ್ಸಿನಿಂದ ಹೊರಟ ಆ ಬಾಣಗಳು, ಚಿನ್ನದ ಹಿಡಿಗಳಿಂದ ಕೂಡಿ ಸೂರ್ಯಸಂತೆ ಜ್ವಲಿಸುತ್ತ, ಆಕಾಶವನ್ನೇ ಉರಿಸುವಂತೆ ಬರುತ್ತಿದ್ದುವು. ಆಗಲೂ ಲಕ್ಷ್ಮಣನು ಧೈರ್ಯಗುಂದದೆ, ಅನೇಕ ತೀಕ್ಷ್ಣಬಾಣಗಳಿಂದ ಆ ರಾಕ್ಷಸನ ಬಾಣಗಳನ್ನೆಲ್ಲಾ ಕತ್ತರಿಸಿ ಕೆಡಹಿದನು. ಈ ಬಾಣಗಳೂ ವಿಫಲವಾಗುದನ್ನು ನೋಡಿ, ಇಂದ್ರಶತ್ರುವಾದ ಅತಿಕಾಯನಿಗೆ ಇನ್ನೂ ಕೋಪವು ಹೆಚ್ಚಿತು. ಆ ಆಗ ರಾಕ್ಷಸನು ಬೇರೊಂದು ತೀಕ್ಷ್ಣಬಾಣವನ್ನು ತೆಗೆದು ಧನುಸ್ಸಿನಲ್ಲಿ ಸಂಧಾನಮಾಡಿ, ಲಕ್ಷ್ಮಣನ ಎದೆಗೆ ಗುರಿಯಿಟ್ಟು ಹೊಡೆದನು. ಈ ಬಾಣಪ್ರಹಾರದಿಂದ ಲಕ್ಷ್ಮಣನ ಎದೆಯಲ್ಲಿ, ಆನೆಯ ಗಂಡಸ್ಥಳದಿಂದ ಸುರಿಯುವ ಮದಜಲದಂತೆ ವೇಗದಿಂದ ರಕ್ತವು ಕಿತ್ತುಕೊಂಡಿತು. ಆದರೆ ಲಕ್ಷ್ಮಣನು ಧೀರನಾದುದರಿಂದ, ತನ್ನ ಎದೆಯಲ್ಲಿ ನಾಟಿದ ಬಾಣವನ್ನು ತನ್ನ ಕೈಯಿಂದಲೇ ಕಿತ್ತೆಸೆದು, ಬಾಧೆಯನ್ನು ನಿವಾರಿಸಿಕೊಂಡು, ಆಗಲೇ ತನ್ನಲ್ಲಿದ್ದ ಒಂದು ತೀಕ್ಷ್ಣಬಾಣವನ್ನು ತೆಗೆದು, ಅದನ್ನು ಆಗ್ನೇಯಾಸ್ತ್ರಮಂತ್ರದಿಂದಭಿಮಂತ್ರಿಸಿದನು. ಹೀಗೆ ಮಂತ್ರಿಸಿ ಹೊಡಸೆ ಧನುಸ್ಸಿನಲ್ಲಿ ಸಂಧಾನಮಾಡಿದ್ದ ಆ ಬಾಣವು ಮಹಾಜ್ವಾಲೆಯಿಂದ ಉರಿಯುವುದಕ್ಕೆ ತೊಡಗಿತು. ಇದನ್ನು ನೋಡಿ ಅತ್ತಲಾಗಿ ಮಹಾತೇಜಸ್ವಿಯಾದ ಅತಿಕಾಯನೂ ಕೂಡ ಸೂರ್ಯಾಸ್ತ್ರಮಂತ್ರವನ್ನು ಧ್ಯಾನಮಾಡಿ, ಆ ಮಂತ್ರದಿಂದ, ಸರ್ಪಸದೃಶವಾದ ಒಂದು ಬಾಣವನ್ನಭಿಮಂತ್ರಿಸಿದನು. ಇಷ್ಟರಲ್ಲಿ ಲಕ್ಷ್ಮಣನು, ತಾನು ಹೂಡಿದ ಭಯಂಕರವಾದ ಆಗ್ನೇಯಾಸ್ತ್ರವನ್ನು ಯಮನು ಕಾಲದಂಡವನ್ನು ಪ್ರಯೋಗಿಸುವಂತೆ ಅತಿಕಾಯನ ಮೇಲೆ ಪ್ರಯೋಗಿಸಿದನು. ಇದನ್ನು ನೋಡಿ ಅತ್ತಲಾಗಿ ಅತಿಕಾಯನೂ ತಾನು ಹೂಡಿದ್ದ ಸೌರಾಸ್ತ್ರವನ್ನು

ಲಕ್ಷ್ಮಣನ ಮೇಲೆ ಬಿಟ್ಟನು. ಅವೆರಡೂ ಆಕಾಶದಲ್ಲಿ ಒಂದಾಗಿ ಕಲೆತು ಕೋಪಗೊಂಡ ಸರ್ಪಗಳಂತೆ ಜಾಜ್ವಲ್ಯಮಾನವಾದ ತೇಜಸ್ಸಿನೊಡನೆ ಹೋರಾಡುತ್ತಿದ್ದುವು. ಕ್ಷಣಮಾತ್ರದಲ್ಲಿಯೇ ಅವೆರಡೂ ಒಂದರಿಂದೊಂದು ದಗ್ಧವಾಗಿ, ಉರಿಯಡಗಿ, ಕಾಂತಿಗುಂದಿ, ಭಸ್ಮೀಭೂತಗಳಾಗಿ ಕೆಳಗೆ ಬಿದ್ದುವು. ಆಗ ಅತಿಕಾಯನು ಕೋಪಗೊಂಡು, ಐಷೀಕಾಸ್ತ್ರವನ್ನು ಪ್ರಯೋಗಿಸಿದನು. ವೀರ್ಯವಂತನಾದ ಲಕ್ಷ್ಮಣನು ಅದನ್ನು ತನ್ನ ಐಂದ್ರಾಸ್ತ್ರದಿಂದ ಖಂಡಿಸಿದನು. ಇದನ್ನು ನೋಡಿ ಅತಿಕಾಯನು ಕೋಪಗೊಂಡು ಒಂದು ಬಾಣವನ್ನು ಯಮಾಸ್ತ್ರ ಮಂತ್ರದಿಂದಭಿಮಂತ್ರಿಸಿ, ಅದನ್ನು ಲಕ್ಷ್ಮಣನ ಮೇಲೆ ಬಿಟ್ಟನು. ಲಕ್ಷ್ಮಣನು ಇದನ್ನು ತನ್ನ ವಾಯುವ್ಯಾಸ್ತ್ರದಿಂದ ನಿಗ್ರಹಿಸಿದುದಲ್ಲದೆ, ಅತಿಕಾಯನ ಸಾಹಸಗಳನ್ನು ನೋಡಿ ಸಹಿಸಲಾರದೆ, ಮೇಘವು ಮಳೆಯನ್ನು ಕರೆಯುವಂತೆ ಆ ರಾಕ್ಷಸನ ಮೇಲೆ ಎಡೆಬಿಡದೆ ಬಾಣವರ್ಷಗಳನ್ನು ಕರೆಯುತ್ತಿದ್ದನು. ಈ ಬಾಣಗಳೆಲ್ಲವೂ ಮುರಿದು ಕೆಳಗೆ ಬೀಳುತ್ತಿದ್ದುವು. ಹೀಗೆ ತನ್ನ ಬಾಣಗಳು ವಿಫಲವಾದುದನ್ನು ನೋಡಿ ಲಕ್ಷ್ಮಣನು ಇನ್ನೂ ಮೇಲೆ ಮೇಲೆ ಕೋಪದಿಂದುಕ್ಕುತ್ತ, ಸಾವಿರಾರು ಸಂಖ್ಯೆಯಿಂದ ಇನ್ನೂ ಮೇಲಾದ ಬಾಣಗಳನ್ನು ಆ ರಾಕ್ಷಸನ ಮೇಲೆ ಎಡೆಬಿಡದೆ ಸುರಿಯುತ್ತಿದ್ದನು. ಹೀಗೆ ಲಕ್ಷ್ಮಣನು ತಂಡತಂಡವಾಗಿ ಬಾಣಗಳನ್ನು ಬಿಡುತ್ತಿದ್ದರೂ, ಆ ಯುದ್ಧದಲ್ಲಿ ಅಭೇದ್ಯಕವಚವನ್ನು ಧರಿಸಿ ಬಂದಿದ್ದ ಅತಿಕಾಯನಿಗೆ, ಸ್ವಲ್ಪ ಮಾತ್ರವೂ ಬಾಧೆಯುಂಟಾಗಲಿಲ್ಲ. ಆಮೇಲೆ ಅತಿಕಾಯನು ಸರ್ಪಾಕಾರವಾದ ಬಾಣವನ್ನು ತೆಗೆದು ಲಕ್ಷ್ಮಣನ ಮೇಲೆ ಬಿಟ್ಟನು. ಆ ಬಾಣವು ಲಕ್ಷ್ಮಣನಿಗೆ ಮರ್ಮಸ್ಥಾನದಲ್ಲಿ ತಗುಲಿದುದರಿಂದ ಮುಹೂರ್ತಮಾತ್ರದವರೆಗೆ ಅವನಿಗೆ ಪ್ರಜ್ಞೆತಪ್ಪಿದಂತಾಯಿತು. ಒಡನೆಯೇ ಲಕ್ಷ್ಮಣನು ಮೂರ್ಛೆತಿಳಿದು, ಮೇಲಾದ ನಾಲ್ಕು ಬಾಣಗಳನ್ನು ತೆಗೆದು ಅತಿಕಾಯನ ಸಾರಥಿಯನ್ನು ಕೊಂದನು. ಮತ್ತೊಮ್ಮೆ ಬಾಣವರ್ಷವನ್ನು ಕರೆದು, ಆ ರಾಕ್ಷಸನ ಧ್ವಜವನ್ನು ಮುರಿದನು. ಒಡನೆಯೇ ಆ ರಾಕ್ಷಸನನ್ನು ಕೊಲ್ಲುವುದಕ್ಕಾಗಿ ಬೇರೆ ಕೆಲವು ಬಾಣಗಳನ್ನು ಪ್ರಯೋಗಿಸಿದನು. ಪುರುಷಶ್ರೇಷ್ಠನಾದ ಲಕ್ಷ್ಮಣನು ಎಷ್ಟೇ ಪ್ರಯತ್ನಪಟ್ಟರೂ ಯುದ್ಧದಲ್ಲಿ

ಅತಿಕಾಯನನ್ನು ನೋಯಿಸುವುದಕ್ಕೆ ಸಾಧ್ಯವಾಗಲಿಲ್ಲ. ಇಷ್ಟರಲ್ಲಿ ವಾಯುದೇವನು ಲಕ್ಷ್ಮಣನನ್ನು ಕುರಿತು "ಲಕ್ಷ್ಮಣಾ! ಈ ಅತಿಕಾಯನು ಬ್ರಹ್ಮನಿಂದನುಗ್ರಹಿಸಲ್ಪಟ್ಟ ಅಭೇದ್ಯವಾದ ಕವಚವನ್ನು ಧರಿಸಿರುವನು. ಆದುದರಿಂದ ಬ್ರಹ್ಮಾಸ್ತ್ರದಿಂದ ಹೊರತು ಬೇರೆ ವಿಧದಿಂದ ಇವನನ್ನು ಕೊಲ್ಲುವುದು ಸಾಧ್ಯವಿಲ್ಲ" ಎಂದು ಹೇಳಿ, ಕಣ್ಮರೆಯಾದನು. ಇಂದ್ರನಿಗೆಣೆಯಾದ ಪರಾಕ್ರಮವುಳ್ಳ ಲಕ್ಷ್ಮಣನು, ವಾಯುದೇವನ ಮಾತನ್ನು ಕೇಳಿದೊಡನೆ, ಬ್ರಹ್ಮಾಸ್ತ್ರವನ್ನು ಜಪಿಸಿ, ಅಮೋಘವೇಗವುಳ್ಳ ಒಂದು ಬಾಣವನ್ನು ಬಿಲ್ಲಿನಲ್ಲಿ ಸಂಧಾನಮಾಡಿದನು. ಲಕ್ಷ್ಮಣನು ತೀಕ್ಷ್ಣವಾದ ಮೊನೆಯುಳ್ಳ ಬಾಣವನ್ನು ಬ್ರಹ್ಮಾಸ್ತ್ರ ಮಂತ್ರದಿಂದ ಅಭಿಮಂತ್ರಿಸಿದೊಡನೆ, ಚಂದ್ರಸೂರ್ಯಾದಿ ಗ್ರಹಗಳೆಲ್ಲವೂ ಭಯದಿಂದ ನಡುಗಿದುವು. ದಿಕ್ಕುಗಳೂ, ಆಕಾಶವೂ ಅದಿರಿತು. ಭೂಮಿಯೂ ನಡುಗಿತು. ದೃಢವಾದ ಹಿಡಿಯುಳ್ಳುದಾಗಿ, ಯಮದೂತರಿಗೆ ಸಮಾನವಾಗಿದ್ದ ಆ ಬಾಣವನ್ನು ಲಕ್ಷ್ಮಣನು ಬ್ರಹ್ಮಾಸ್ತ್ರದಿಂದಭಿಮಂತ್ರಿಸಿ ಬಿಲ್ಲಿನಲ್ಲಿ ಸಂಧಾನಮಾಡಿ, ಇಂದ್ರಶತ್ರುವಾದ ಆ ಅತಿಕಾಯನ ಮೇಲೆ ಪ್ರಯೋಗಿಸಿದನು. ಲಕ್ಷ್ಮಣನು ಈ ಬಾಣವನ್ನು ಪ್ರಯೋಗಿಸಿದೊಡನೆ ಆ ದಿವ್ಯಾಸ್ತ್ರವು ಅಗ್ನಿಯಂತೆ ಜ್ವಲಿಸುತ್ತ ವೇಗದಿಂದ ಹೊರಟಿತು. ವಜ್ರಖಚಿತಗಳಾದ ಚಿನ್ನದ ಹಿಡಿಗಳಿಂದ ವಿಚಿತ್ರವಾದ ಆ ಬಾಣವು ತನಗಿದಿರಾಗಿ ಬರುವುದನ್ನು ಅತಿಕಾಯನು ನೋಡಿದನು. ಆ ಬಾಣವನ್ನು ನಿಗ್ರಹಿಸುವುದಕ್ಕಾಗಿ ಅತಿಕಾಯನು ಅದರ ಮೇಲೆ ಅನೇಕ ಬಾಣಗಳನ್ನು ಪ್ರಯೋಗಿಸಿ ತಡೆಯುತ್ತಿದ್ದನು. ಆ ರಾಕ್ಷಸನು ಎಷ್ಟೋ ತೀಕ್ಷ್ಣಬಾಣಗಳಿಂದ ತಡೆಯುತ್ತಿದ್ದರೂ, ಗರುಡನಂತೆ ವೇಗವುಳ್ಳ ಆ ಬಾಣವು, ನಿರಂಕುಶವಾಗಿ ಹೊರಟು, ಅತಿಕಾಯನ ಸಮೀಪವನ್ನು ಮುಟ್ಟಿತು. ಆಗಲೂ ಅತಿಕಾಯನು ಸ್ವಲ್ಪಮಾತ್ರವೂ ಧೈರ್ಯಗುಂದದೆ, ಲೋಕನಾಶಕ್ಕಾಗಿ ಜ್ವಲಿಸುವ ಕಾಲಯಮನಂತೆ ನಿಂತು, ಮೇಲೆ ಬೀಳುತ್ತಿರುವ ಆ ಬಾಣವನ್ನು ಶಕ್ತಿಯಿಂದಲೂ, ಋಷ್ಟ್ಯಾಯುಧಗಳಿಂದಲೂ, ಮುಷ್ಟಿಗಳಿಂದಲೂ, ಗದೆಗಳಿಂದಲೂ, ಕೊಡಲಿಗಳಿಂದಲೂ, ಶೂಲಗಳಿಂದಲೂ, ದ್ವಿಫಲಪತ್ರಾಗ್ರಗಳೆಂಬ ಹುಳಾಯುಧಗಳಿಂದಲೂ ತನ್ನ ಶಕ್ತಿಮೀರಿ ಹೊಡೆದು ತಡೆಯು

ತ್ತಿದ್ದನು. ಆ ಮಹಾಸ್ತ್ರವಾದರೋ ಈ ಆಯುಧ ಪ್ರಹಾರಗಳೊಂದನ್ನೂ ಲಕ್ಷ್ಯಮಾಡದೆ ಅಗ್ನಿಯಂತೆ ಜ್ವಲಿಸುತ್ತ ವೇಗದಿಂದ ಬಂದು ಕಿರೀಟಾಲಂಕೃತವಾದ ಅತಿಕಾಯನ ತಲೆಯನ್ನು ಹಾರಿಸಿಕೊಂಡು ಹೋಯಿತು. ಲಕ್ಷ್ಮಣನ ಬಾಣದಿಂದ ಕಿರೀಟಸಹಿತವಾಗಿ ಹಾರಿಸಲ್ಪಟ್ಟ ಅತಿಕಾಯನ ಶಿರಸ್ಸು, ಹಿಮವತ್ಪರ್ವತದ ಶಿಖರವು ಮುರಿದು ಬೀಳುವಂತೆ ವೇಗದಿಂದ ಕೆಳಗೆ ಬಿದ್ದಿತು. ಹೀಗೆ ಅತಿಕಾಯನ ತಲೆಯು ಕತ್ತರಿಸಿ ಬಿದ್ದುದನ್ನು ನೋಡಿ ಆ ಯುದ್ಧದಲ್ಲಿ ಸತ್ತುಳಿದ ರಾಕ್ಷಸರೆಲ್ಲರೂ ಬಹಳ ದುಃಖಿತರಾದರು. ಎಲ್ಲರ ಮುಖವೂ ಕಾಂತಿಗುಂದಿತು. ಎಲ್ಲರ ಮುಖದಲ್ಲಿಯೂ ದೈನ್ಯವು ತೋರುತ್ತಿತ್ತು. ಮೊದಲೇ ಬಾಣಪ್ರಹಾರದಿಂದ ನೊಂದಿದ್ದ ಆ ರಾಕ್ಷಸರೆಲ್ಲರೂ, ಈ ಅತಿಕಾಯನ ಮರಣದಿಂದ ಇನ್ನೂ ದುಃಖಿತರಾಗಿ, ವಿಕೃತಸ್ವರದಿಂದ ಕೂಗುತ್ತಿದ್ದರು. ಹೀಗೆ ತಮಗೆ ಪ್ರಭುವಾದ ಅತಿಕಾಯನು ಹತನಾದುದನ್ನು ನೋಡಿ ಆ ರಾಕ್ಷಸರೆಲ್ಲರೂ ಭಯಪಟ್ಟು, ಯುದ್ಧದಾಸೆಯನ್ನು ಬಿಟ್ಟು, ವೇಗದಿಂದ ಲಂಕೆಯ ಕಡೆಗೆ ಪಲಾಯನಮಾಡಿದರು. ಇತ್ತಲಾಗಿ ವಾನರರೆಲ್ಲರೂ ಸಂತೋಷದಿಂದುಬ್ಬುತ್ತಿದ್ದರು. ಅರಳಿದ ತಾವರೆ ಹೂವಿನಂತೆ ಅವರೆಲ್ಲರ ಮುಖವೂ ಉಲ್ಲಾಸವನ್ನು ಹೊಂದಿತು. ಯಾರಿಂದಲೂ ಜಯಿಸುವುದಕ್ಕಾಗದ ಅತಿಕಾಯನನ್ನು, ಲಕ್ಷ್ಮಣನು ತನ್ನ ವೀರ್ಯದಿಂದ ಕೊಂದುದಕ್ಕಾಗಿ ಒಬ್ಬೊಬ್ಬರೂ ಸಂತೋಷದಿಂದ ಲಕ್ಷ್ಮಣನ ಬಳಿಗೆ ಬಂದು ಕೃತಕೃತ್ಯನಾದ ಆತನನ್ನು ಗೌರವಿಸಿ ಮನ್ನಿಸಿದರು. ಲಕ್ಷ್ಮಣನೂ ಕೂಡ ಮಹಾಬಲಾಢ್ಯನಾದ ಅತಿಕಾಯನನ್ನು ತಾನು ಯುದ್ಧದಲ್ಲಿ ಕೊಂದುದಕ್ಕಾಗಿ ಮನಸ್ಸಿನಲ್ಲಿ ಸಂತೋಷಿಸುತ್ತ, ಅನೇಕ ವಾನರಸೈನ್ಯದಿಂದ ಪೂಜಿತನಾಗಿ ರಾಮನ ಸಮೀಪಕ್ಕೆ ಬಂದನು.

ಇಲ್ಲಿಗೆ ಎಪ್ಪತ್ತೊಂದನೆಯ ಸರ್ಗವು.

ರಾವಣನು ಅತಿಕಾಯಾದಿಗಳ ವಧವನ್ನು ಕೇಳಿ ವ್ಯಸನಪೀಡಿತನಾಗಿ, ರಾಮನ ಪರಾಕ್ರಮಕ್ಕಾಗಿ ತನಗೆ ತಾನೇ ಮೆಚ್ಚುತ್ತ, ನಗರ ರಕ್ಷಣಕ್ಕಾಗಿ ಭೃತ್ಯರನ್ನು ನಿಯೋಗಿಸಿ ಪುತ್ರದುಃಖದಿಂದ ತಾನು ಅಂತಃಪುರಕ್ಕೆ ಹೋದುದು.

ತೇಜಸ್ವಿಯಾದ ಲಕ್ಷ್ಮಣನಿಂದ ಅತಿಕಾಯನು ಹತನಾದುದನ್ನು ಕೇಳಿ ಅತ್ಯಲಾಗಿ ರಾಕ್ಷಸಪ್ರಭುವಾದ ರಾವಣನಿಗೆ ಮಹಾವ್ಯಸನವುಂಟಾಯಿತು. ಈ ದುಃಖದಿಂದ ರಾವಣನು “ಆಹಾ! ಇದೇನು! ಲೋಕದಲ್ಲಿ ಮನುಷ್ಯನಿಗೆ ಇಷ್ಟೊಂದು ಅನರ್ಥಪರಂಪರೆಯುಂಟೆ? ಧೂಮ್ರಾಕ್ಷನು ಯಾವ ಶತ್ರುಗಳ ಪರಾಕ್ರಮವನ್ನೂ ಸ್ವಲ್ಪಮಾತ್ರವೂ ಸಹಿಸದವನೆಂದೂ, ಧನುರ್ವಿದ್ಯೆಯಲ್ಲಿ ನಿಪುಣನೆಂದೂ, ಶಸ್ತ್ರಧಾರಿಗಳಲ್ಲಿ ಮೇಲೆನಿಸಿದವನೆಂದೂ ನಂಬಿ, ನಾನು ಅವನನ್ನು ಯುದ್ಧಕ್ಕೆ ಕಳುಹಿಸಿದೆನು. ಅಕಂಪನನೂ, ಪ್ರಹಸ್ತನೂ, ಕುಂಭಕರ್ಣನೂ, ಈ ರಾಕ್ಷಸರೆಲ್ಲರೂ ಬಹಳ ಬಲಾಢ್ಯರು! ಮಹಾ ವೀರರು! ಯಾವಾಗಲೂ ಯುದ್ಧಕ್ಕಾಗಿ ಕಾದಿರತಕ್ಕವರು! ಇವರು ಎಂತಹ ಶತ್ರುಸೈನ್ಯವನ್ನಾದರೂ ಜಯಿಸತಕ್ಕವರೇ ಹೊರತು ಯಾವಾಗಲೂ ಪರಾಜಯವನ್ನು ಹೊಂದತಕ್ಕವರಲ್ಲ. ಹೀಗೆ ಮಹಾ ವೀರ್ಯವುಳ್ಳವರಾಗಿಯೂ, ಮಹಾಸ್ತ್ರಗಳನ್ನು ಬಲ್ಲವರಾಗಿಯೂ ಇದ್ದ ಈ ರಾಕ್ಷಸರನ್ನೂ ಕೂಡ ರಾಮನು ಲೀಲಾಮಾತ್ರದಿಂದಲೇ ಕೊಂದುಬಿಟ್ಟನು! ಇವರ ಸಂಗತಿಯೂ ಹಾಗಿರಲಿ! ಲೋಕಪ್ರಸಿದ್ಧವಾದ ವೀರ್ಯವುಳ್ಳ ನನ್ನ ಮಗನಾದ ಇಂದ್ರಜಿತ್ತು, ಆ ರಾಮಲಕ್ಷ್ಮಣರೆಂಬ ಅಣ್ಣತಮ್ಮಂದಿರಿಬ್ಬರನ್ನೂ ತನಗೆ ವರಪ್ರಾಪ್ತಗಳಾದ ನಾಗಾಸ್ತ್ರಗಳಿಂದ ಬಿಗಿದು ಬಂದಿದ್ದನು. ಆ ಕಟ್ಟನ್ನು ಬಿಡಿಸಿಕೊಳ್ಳುವುದಕ್ಕೆ ದೇವತೆಗಳಿಗಾಗಲಿ, ಮಹಾಬಲಾಢ್ಯರಾದ ದಾನವರಿಗಾಗಲಿ, ಯಕ್ಷಗಂಧರ್ವಕಿನ್ನರರಿಗಾಗಲಿ ಯಾರೊಬ್ಬರಿಗೂ ಸಾಧ್ಯವಲ್ಲ! ಆ ರಾಮಲಕ್ಷ್ಮಣರು ಹೇಗೋ ಆ ನಾಗಾಸ್ತ್ರಬಂಧನವನ್ನೂ ಬಿಡಿಸಿಕೊಂಡರು! ಅದು ಅವರಿಗೆ ತಮ್ಮ ಸಹಜವಾದ ಪ್ರಭಾವದಿಂದಲೋ, ಮಾಯೆಯಿಂದಲೋ, ಮೋಸದಿಂದಲೋ ಹೀಗೆಂದು ನಿರ್ಣಯಿಸಿ ತಿಳಿಯುವುದಕ್ಕಿಲ್ಲ. ಇದಲ್ಲದೆ ನನ್ನಾಜ್ಞೆಯಿಂದ ಯಾವ ಯಾವ ವೀರ ರಾಕ್ಷಸರು ಯುದ್ಧಕ್ಕೆ ಹೊರಟರೋ, ಅವರಲ್ಲಿ ಒಬ್ಬರಾ

ದರೂ ಹಿಂತಿರುಗದೆ ವಾನರರಿಂದ ಹತರಾದರು. ಇನ್ನುಮೇಲೆ ಯುದ್ಧ ದಲ್ಲಿ ಆ ರಾಮನನ್ನೂ, ಅವನ ತಮ್ಮನಾದ ಲಕ್ಷ್ಮಣನನ್ನೂ, ಅವನ ವಾನರಸೇನೆಯನ್ನೂ, ವಿಭೀಷಣಸುಗ್ರೀವರನ್ನೂ ಕೊಂದು ಬರುವುದಕ್ಕೆ ನಮ್ಮಲ್ಲಿ ಯಾವನು ಸಮರ್ಥನೋ ನನಗೆ ತೋರಲಿಲ್ಲ. ಆಹಾ! ರಾಮನ ಶಕ್ತಿಯು ಮಹಾದ್ಭುತವಾಗಿರುವುದು! ಅವನ ಅಸ್ತ್ರಬಲವೂ ಅಸಾಧಾ ರಣವಾದುದು! ಅವನ ಪರಾಕ್ರಮದಲ್ಲಿ ಸಿಕ್ಕಿಬಿದ್ದ ರಾಕ್ಷಸನೊಬ್ಬನಾ ದರೂ ಬದುಕಿ ಬರಲಿಲ್ಲವಲ್ಲಾ! ಅಬ್ಬಾ! ಅವನ ಮಹಿಮೆಯೇನು? ಅವನ ಶಕ್ತಿಯೇನು? ಅವನ ಅಸ್ತ್ರಬಲವೇನು? ಆ ರಾಮನೆಂಬವನು ನಿಜವಾಗಿಯೂ ಸಾಮಾನ್ಯಮನುಷ್ಯನೆಂದು ತೋರಲಿಲ್ಲ! ಅಪ್ರಮೇಯ ವಾದ ಸಾಕ್ಷಾನ್ನಾರಾಯಣನೆಂದೇ ತೋರುವುದು! ಅವನ ಭಯದಿಂದಲ್ಲವೇ ಈಗ ನಾನು ದೇವದಾನವರಿಗೂ ದುರ್ಗಮವಾದ ಈ ಲಂಕೆಯ ಒಳ ಬಾಗಿಲುಗಳೆಲ್ಲವನ್ನೂ ಮುಚ್ಚಿಡಬೇಕಾಗಿದೆ! ಎಲೈ ರಾಕ್ಷಸರೆ! ಆದುದಾ ಯಿತು! ಇನ್ನಾದರೂ ನೀವು ಎಚ್ಚರತಪ್ಪದೆ ನಿಮ್ಮನ್ನೂ, ಈ ನಮ್ಮ ಲಂಕೆಯನ್ನೂ ರಕ್ಷಿಸಿಕೊಳ್ಳಬೇಕು! ಇದರ ಸುತ್ತಲೂ ಜಾಗರೂಕತೆ ಯಿಂದ ಕಾವಲಿರಬೇಕು. ಮುಖ್ಯವಾಗಿ ಸೀತೆಯನ್ನು ಬಚ್ಚಿಟ್ಟಿರುವ ಅಶೋಕವನದಲ್ಲಿ ನೀವು ಬಹಳ ಎಚ್ಚರಿಕೆಯಿಂದ ಕಾವಲಿರಬೇಕು. ನನಗೆ ತಿಳಿಸದೆ ಯಾವನನ್ನಾಗಲಿ ಯಾವ ಕಾರಣದಿಂದಲೂ ಆ ಸ್ಥಳಕ್ಕೆ ಬಿಡ ಕೂಡದು. ನನ್ನ ಅನುಮತಿಯಿಲ್ಲದೇ ಯಾವನೊಬ್ಬನಿಗೂ ಅಲ್ಲಿಂದ ಹೊರಗೆ ಬರುವುದಕ್ಕೂ ಅವಕಾಶವನ್ನು ಕೊಡಕೂಡದು. ಮತ್ತು ಯಾವ ಯಾವ ಕಡೆಗಳಲ್ಲಿ ನಮ್ಮ ಸೇನಾ ನಿವಾಸಸ್ಥಳಗಳುಂಟೋ, ಅವೆಲ್ಲ ವನ್ನೂ ನಿಮ್ಮ ನಿಮ್ಮ ಸೇನೆಗಳೊಡನೆ ಕಣ್ಣಿಟ್ಟು ಕಾಯುತ್ತಾ ಸುತ್ತಲೂ ತಿರುಗುತ್ತಿರಬೇಕು. ಸಂಜೆಯಾಗಿರಲಿ! ನಡುರಾತ್ರಿಯಾಗಿರಲಿ! ಪ್ರಾತಃ ಕಾಲವಾಗಿರಲಿ! ಯಾವ ಸಮಯವಾಗಿದ್ದರೂ ಕಾಲನಿಯಮವನ್ನು ನೋಡದೆ, ಆಗಾಗ ಆ ವಾನರರ ಪ್ರಯತ್ನವೇನೆಂಬುದನ್ನು ಕಂಡುಕೊಳ್ಳು ತ್ತಿರಬೇಕು. ಕಪಿಗಳೆಂದು ಅವರಲ್ಲಿ ಮಾತ್ರ ನೀವು ಎಂದಿಗೂ ಅಲಕ್ಷ್ಯ ದಿಂದಿರಬೇಡಿರಿ. ಶತ್ರುಸೈನ್ಯವು ಯುದ್ಧಕ್ಕೆ ಸಿದ್ಧವಾಗಿ ನಿಂತಿದೆಯೆ? ಪ್ರಯತ್ನವಿಲ್ಲದೆ ಸುಮ್ಮನಿದೆಯೆ? ಎಂಬೀ ವಿಚಾರವನ್ನು ಆಗಾಗ ತಿಳಿದು

ಕೊಳ್ಳುತ್ತಿರಬೇಕು" ಎಂದು ಆಜ್ಞೆಮಾಡಿದನು. ಈ ರಾಜಾಜ್ಞೆಯನ್ನು ಕೇಳಿದೊಡನೆ ರಾಕ್ಷಸರೆಲ್ಲರೂ ಎಲ್ಲವನ್ನೂ ಹಾಗೆಯೇ ನಡೆಸುತ್ತಿದ್ದರು. ಹೀಗೆ ರಾವಣನು ತನ್ನ ಸೈನಿಕರಿಗೆ ಆಜ್ಞೆಯನ್ನು ಮಾಡಿ, ಮನಸ್ಸಿನಲ್ಲಿ ನಾನಾವಿಧವಾದ ವ್ಯಸನದಿಂದ ಕೊರಗುತ್ತ ತನ್ನ ಮನೆಗೆ ಹೋದನು. ಕೋಪಾಗ್ನಿಯೊಡನೆ ಪುತ್ರವ್ಯಸನವೂ ಬಹಳವಾಗಿ ಅವನ ಮನಸ್ಸನ್ನು ದಹಿಸುತ್ತಿದ್ದುದರಿಂದ, ಆಗಾಗ ನಿಟ್ಟುಸಿರನ್ನು ಬಿಡುತ್ತಿದ್ದನು.

ಇಲ್ಲಿಗೆ ಎಪ್ಪತ್ತೆರಡನೆಯ ಸರ್ಗವು.

ಇಂದ್ರಜಿತ್ತು ರಾವಣನನ್ನು ಸಮಾಧಾನಪಡಿಸಿ, ಅಭಿಚಾರಕ ಹೋಮವನ್ನು ಮಾಡಿಸಿ, ಬ್ರಹ್ಮಾಸ್ತ್ರದಿಂದ ರಾಮಲಕ್ಷ್ಮಣರನ್ನೂ, ವಾನರಯೂಥಪತಿಗಳನ್ನೂ ಮೂರ್ಛೆ ಹೊಂದಿಸಿದುದು.

ಯುದ್ಧದಲ್ಲಿ ಸತ್ತುಳಿದ ಕೆಲವು ರಾಕ್ಷಸರು ವೇಗದಿಂದ ಲಂಕೆಗೆ ಬಂದು ರಾವಣನನ್ನು ನೋಡಿ, ದೇವಾಂತಕನೇ ಮೊದಲಾಗಿ ಅತಿಕಾಯನ ವರೆಗೆ ಯುದ್ಧದಲ್ಲಿ ಹತರಾದ ರಾಕ್ಷಸರೆಲ್ಲರನ್ನೂ ಕ್ರಮವಾಗಿ ತಿಳಿಸಿದರು. ಈ ರಾಕ್ಷಸರ ವಧವನ್ನು ಕೇಳಿದೊಡನೆ ರಾವಣನು ಮಹಾವ್ಯಸನದಿಂದ ಕಣ್ಣೀರು ಬಿಟ್ಟು ಗೋಳಿಡುತ್ತ, ತನ್ನ ಪುತ್ರನಾದ ಅತಿಕಾಯನಿಗೂ, ಮಹೋದರನೇ ಮೊದಲಾದ ಸಹೋದರರಿಗೂ ಸಂಭವಿಸಿದ ಘೋರವಾದ ಕೊಲೆಯನ್ನು ಮನಸ್ಸಿನಲ್ಲಿ ನೆನೆಸಿಕೊಂಡಹಾಗೆಲ್ಲಾ ಸಂಕಟವನ್ನು ತಡೆಯಲಾರದೆ ಆಗಾಗ ಮೂರ್ಛೆ ಹೊಂದುತ್ತಿದ್ದನು. ಹೀಗೆ ರಾವಣನು ದುಃಖಸಮುದ್ರದಲ್ಲಿ ತತ್ತಳಿಸುವುದನ್ನು ನೋಡಿ, ಅವನ ಮಗನಾದ ಇಂದ್ರಜಿತ್ತು ತಂದೆಯ ಬಳಿಗೆ ಬಂದು ಸಮಾಧಾನಪಡಿಸುತ್ತ "ಜನಕಾ! ನೀನೇಕೆ ಹೀಗೆ ದುಃಖಿಸುವೆ? ಇಂದ್ರಜಿತ್ತೆಂಬ ನಾನು ಬದುಕಿರುವಾಗ ನಿನಗೆ ಶೋಕವೆಂದರೇನು? ಯುದ್ಧದಲ್ಲಿ ಈ ಇಂದ್ರಜಿತ್ತಿನ ಬಾಣಸಂಹಾರಕ್ಕೆ ಸಿಕ್ಕಿದಮೇಲೆ ಎಂತವನಾಗಿದ್ದರೂ ತನ್ನ ಪ್ರಾಣಗಳನ್ನು ರಕ್ಷಿಸಿಕೊಳ್ಳಲಾರನೆಂಬುದನ್ನು ನೀನು ಕಾಣೆಯಾ? ತಾತಾ! ಇನ್ನು ನಿನ್ನ ವ್ಯಸನವನ್ನು ಬಿಡು. ಈಗಿನ ಯುದ್ಧದಲ್ಲಿಯೇ ಆ ರಾಮನು ತನ್ನ ತಮ್ಮ

ನಾದ ಲಕ್ಷ್ಮಣನೊಡನೆ ನನ್ನ ತೀಕ್ಷ್ಣಬಾಣದಿಂದ ನಾಟಿದ ಮೈಯುಳ್ಳವ ನಾಗಿ ಸತ್ತು ಛಿನ್ನಭಿನ್ನವಾಗಿ ಕೆಳಗೆ ಬೀಳುವುದನ್ನಾದರೂ ನೋಡು! ಈ ಇಂದ್ರಜಿತ್ತು ಮನಸ್ಸಿನಲ್ಲಿ ಚೆನ್ನಾಗಿ ನಿಶ್ಚಯಿಸಿ, ದೈವಬಲ ಪುರುಷ ಬಲಗಳೆರಡೂ ಕೂಡಿ ಬರುವಂತೆ ಈ ದೃಢಪ್ರತಿಜ್ಞೆಯನ್ನು ಮಾಡಿರುವ ನೆಂದು ತಿಳಿ! ಈಗಲೇ ನಾನು ನನ್ನ ಅಮೋಘಬಾಣದಿಂದ ರಾಮ ಲಕ್ಷ್ಮಣರಿಬ್ಬರನ್ನೂ ತೀರಿಸಿಬಿಡುವೆನು. ಇನ್ನು ಕ್ಷಣಮಾತ್ರದಲ್ಲಿಯೇ ಇಂದ್ರನೂ, ಯಮನೂ, ವಿಷ್ಣುವೂ, ಮಿತ್ರನೂ, ಸಾಧ್ಯರೂ, ಅಶ್ವಿನೀ ದೇವತೆಗಳೂ, ಅಗ್ನಿಯೂ, ಚಂದ್ರಸೂರ್ಯರೂ, ಅಂತರಿಕ್ಷದಲ್ಲಿ ನೆರೆದು, ಪೂರ್ವದಲ್ಲಿ ತ್ರಿವಿಕ್ರಮರೂಪಿಯಾದ ಮಹಾವಿಷ್ಣುವು ಬಲಿಯಾಗದಲ್ಲಿ ತೋರಿಸಿದ ಪರಾಕ್ರಮದಂತೆ, ನಾನು ತೋರಿಸುವ ಅಪ್ರಮೇಯ ಪರಾ ಕ್ರಮವನ್ನು ಕುತೂಹಲದಿಂದ ನೋಡಲಿ!" ಎಂದನು. ಅಪಾರ್ಯ ವೀರ್ಯವುಳ್ಳ ಇಂದ್ರಜಿತ್ತು ರಾವಣನಿಗೆ ಈ ಮಾತನ್ನು ಹೇಳಿ, ಆಗಲೇ ಅವನಿಂದ ಅನುಜ್ಞೆಯನ್ನು ಪಡೆದು, ವಾಯುವೇಗವುಳ್ಳ ಕತ್ತೆಗಳ ಮೇಲೆ ಹೂಡಿದ ಒಂದು ರಥವನ್ನೇರಿ, ಆ ರಥದ ಮೇಲೆ ಕುಳಿತು ಆಗಲೇ ಯುದ್ಧರಂಗಕ್ಕೆ ಹೊರಟನು. ಅವನು ಯುದ್ಧೋದ್ಯುಕ್ತನಾಗಿ ಹೊರ ಟೊಡನೆ ಬಲಾಢ್ಯರಾದ ಕೆಲವು ರಾಕ್ಷಸವೀರರು ಮಹೋತ್ಸಾಹದಿಂದ ಬ್ಬುತ್ತ ದೊಡ್ಡ ದೊಡ್ಡ ಬಿಲ್ಲುಗಳನ್ನು ಹಿಡಿದು, ಕೆಲವರು ಆನೆಗಳನ್ನೂ, ಕೆಲವರು ಉತ್ತಮಾಶ್ವಗಳನ್ನೂ ಏರಿ ಅವನ ಹಿಂದೆ ಹೊರಟರು. ಭಯಂ ಕರ ಪರಾಕ್ರಮವುಳ್ಳ ಬೇರೆ ಕೆಲವರು ಪರ್ವತಾಕಾರವುಳ್ಳ ಹುಲಿಗಳನ್ನೂ, ಕೆಲವರು ಚೇಳುಗಳನ್ನೂ, ಕೆಲವರು ಬೆಕ್ಕುಗಳನ್ನೂ, ಕೆಲವರು ಕತ್ತೆ ಗಳನ್ನೂ, ಕೆಲವರು ಒಂಟೆಗಳನ್ನೂ, ಕೆಲವರು ಸರ್ಪಗಳನ್ನೂ, ಇನ್ನೂ ಬೇರೆ ಬೇರೆ ಕೆಲವರು ಹಂದಿ, ನಾಯಿ, ಸಿಂಹ, ನರಿ, ಮೊಲ, ಹಂಸ, ನವಿಲು, ಮುಂತಾದುವುಗಳನ್ನೂ ಏರಿ ಹೊರಟರು. ಈ ರಾಕ್ಷಸರೆಲ್ಲರೂ ಅವರವರಿಗೆ ಬಳಕೆಯಿದ್ದಂತೆ ಪ್ರಾಸಗಳನ್ನೂ, ಮುದ್ಗರಗಳನ್ನೂ, ಕತ್ತಿ ಗಳನ್ನೂ, ಕೊಡಲಿಗಳನ್ನೂ, ಗದೆಗಳನ್ನೂ ಹಿಡಿದು ಹೊರಟರು. ಇಂದ್ರಜಿತ್ತು ಯುದ್ಧಕ್ಕಾಗಿ ಹೊರಟಾಗ ಅವನ ಮುಂದೆ ಶಂಖಧ್ವನಿ ಗಳೂ, ಭೇರಿಧ್ವನಿಗಳೂ, ಹೊಗಳುಭಟರ ಸ್ತುತಿಪಾಠಧ್ವನಿಗಳೂ ಆರಂಭಿ

ಸಲ್ಪಟ್ಟಿದ್ದವು. ಆಕಾಶವು ಪೂರ್ಣಚಂದ್ರನಿಂದ ಪ್ರಕಾಶಿಸುವಂತೆ, ಶಂಖಕ್ಕೂ ಚಂದ್ರಬಿಂಬಕ್ಕೂ ಸಮಾನವಾದ ಬಿಳೀಬಣ್ಣವುಳ್ಳ ಶ್ವೇತಛತ್ರವು ಅವನ ತಲೆಯ ಮೇಲೆ ಶೋಭಿಸುತ್ತಿತ್ತು. ಧನುರ್ಧಾರಿಗಳಲ್ಲಿ ಮೇಲೆನಿಸಿಕೊಂಡ ಆ ಇಂದ್ರಜಿತ್ತು ಹೊರಟು ಬರುವಾಗ, ಅವನ ಮುಂದೆ ಕೆಲವರು ಚಿನ್ನದ ಹಿಡಿಗಳಿಂದಲೂ, ಚಿನ್ನದ ಸರಿಗೆಗಳಿಂದಲೂ ಅಲಂಕೃತಗಳಾದ ಚಾಮರಗಳನ್ನು ಹಿಡಿದು ಬೀಸುತ್ತಿದ್ದರು. ಹೀಗೆ ಇಂದ್ರಜಿತ್ತು ದೊಡ್ಡ ಸೈನ್ಯದೊಡಗೂಡಿ ಮಹೋತ್ಸಾಹದಿಂದ ಹೊರಡುವಾಗ, ರಾಕ್ಷಸಚಕ್ರವರ್ತಿಯಾದ ರಾವಣನು ತನ್ನ ಪುತ್ರನನ್ನು ನೋಡಿ, "ಎಲೆ ವತ್ಸನೆ! ಯುದ್ಧದಲ್ಲಿ ನೀನು ಇದಿರಿಲ್ಲದವನು! ಮೊದಲು ದೇವಾಧಿಪತಿಯಾದ ಇಂದ್ರನನ್ನೇ ಜಯಿಸಿ ಬಂದವನು! ಹೀಗಿರುವಾಗ ಕೇವಲ ಮನುಷ್ಯಮಾತ್ರನಾದ ರಾಮನು ನಿನ್ನ ವೀರ್ಯಕ್ಕೆ ಎಷ್ಟುಮಾತ್ರದವನು? ಹೇಗಿದ್ದರೂ ನೀನು ಅವನನ್ನು ಜಯಿಸುವುದರಲ್ಲಿ ಸಂದೇಹವಿಲ್ಲ" ಎಂದನು. ಹೀಗೆ ರಾವಣನು ಆಶೀರ್ವಾದಗಳನ್ನು ಮಾಡುತ್ತಿರಲು, ಇಂದ್ರಜಿತ್ತು ಅವುಗಳನ್ನು ಭಕ್ತಿಯಿಂದ ಸ್ವೀಕರಿಸುತ್ತ ಮುಂದೆ ಹೊರಟನು. ಸೂರ್ಯನಿಗೆಣೆಯಾದ ತೇಜಸ್ಸುಳ್ಳ ಮತ್ತು ಪರಾಕ್ರಮದಲ್ಲಿ ಇದಿರಿಲ್ಲದ ಆ ಇಂದ್ರಜಿತ್ತು ಬೀದಿಯಲ್ಲಿ ಬರುತ್ತಿರುವಾಗ, ಸೂರ್ಯನಿಂದ ಆಕಾಶವು ಹೇಗೋ ಹಾಗೆ ಇವನ ತೇಜಸ್ಸಿನಿಂದ ಲಂಕಾನಗರವೆಲ್ಲವೂ ಪ್ರಕಾಶವಿಶಿಷ್ಟವಾಯಿತು. ಹೀಗೆ ಇಂದ್ರಜಿತ್ತು ಅತ್ಯಾಡಂಬರದಿಂದ ಬಂದು ಯುದ್ಧಭೂಮಿಯನ್ನು ಸೇರಿದ ಮೇಲೆ, ಅಲ್ಲಿ ತನಗೆ ಯುದ್ಧಯೋಗ್ಯವಾದ ಒಂದು ದಿವ್ಯರಥವನ್ನು ಪಡೆಯುವುದಕ್ಕಾಗಿ ಹೋಮವನ್ನಾರಂಭಿಸಿ, ಸುತ್ತಲೂ ರಾಕ್ಷಸರನ್ನು ಕಾವಲಿರಿಸಿದನು. ಅಗ್ನಿತೇಜಸ್ಸುಳ್ಳ ಆ ಇಂದ್ರಜಿತ್ತು ಅಲ್ಲಿ ಶಾಸ್ತ್ರವಿಧಿಯನ್ನನುಸರಿಸಿ ಮಂತ್ರಪೂರ್ವಕವಾಗಿ ಅಗ್ನಿಕಾರ್ಯವನ್ನಾರಂಭಿಸಿ, ಮೊದಲು ಗಂಧಮಾಲ್ಯಾದಿಗಳಿಂದ ಸಂಸ್ಕರಿಸಲ್ಪಟ್ಟ ಹವಿಸ್ಸುಗಳನ್ನೂ, ಅರಳುಗಳನ್ನೂ ಹೋಮಮಾಡಿದನು. ಅಭಿಚಾರಿಕಹೋಮದ ನಿಯಮವನ್ನನುಸರಿಸಿ, ಶಸ್ತ್ರಗಳನ್ನೂ, ನೊಣೆಯುಹುಲ್ಲುಗಳನ್ನೂ ಪರಿಸ್ತರಣವಾಗಿ ಮಾಡಿ, ತಾರೇಮರದ ಸಮಿತ್ತುಗಳನ್ನೂ ಸಂಗ್ರಹಿಸಿಟ್ಟು, ಕೆಂಪುಬಟ್ಟೆಯನ್ನು ಸಂಗ್ರಹಿಸಿಟ್ಟು, ಕೆಂಪುಬಟ್ಟೆಯನ್ನುಟ್ಟು, ಕರೀಕಬ್ಬಿಣದ

ಸ್ರುವೆಯನ್ನು (ಸೌಟನ್ನು) ಸಿದ್ಧಪಡಿಸಿಕೊಂಡನು. ಹೀಗೆ ಆ ರಾವಣ ಪುತ್ರನು ತೋಮರಗಳಿಂದಲೂ, ನೊದೆಯುಹುಲ್ಲುಗಳಿಂದಲೂ ವೇದಿಕಾ ಪರಿಸ್ತರಣವನ್ನು ಮಾಡಿ, ಜೀವಸಹಿತವಾದ ಒಂದು ಕರೀಮೇಕೆಯನ್ನು ಯಜ್ಞಪಶುವನ್ನಾಗಿಟ್ಟು, ಹೋಮವನ್ನಾರಂಭಿಸಿದನು. ಇವನು ಒಂದಾ ವೃತ್ತಿ ಹುತಮಾಡಿದಮಾತ್ರಕ್ಕೆ ಆ ಅಗ್ನಿಯು ಹೊಗೆಯಿಲ್ಲದ ಜ್ವಾಲೆ ಯನ್ನು ಕೆದರುತ್ತ, ದೇದೀಪ್ಯಮಾನವಾಗಿ ಉರಿಯಲಾರಂಭಿಸಿ, ಅವನ ಕಾರ್ಯಸಿದ್ಧಿಗೆ ಸೂಚಕವಾಯಿತು. ಆಗ ಅಗ್ನಿಯು ತಾನಾಗಿಯೇ ಸುವರ್ಣಭೂಷಣಗಳಿಂದಲಂಕೃತನಾಗಿ ಪುರುಷಾಕಾರದಿಂದ ಬಂದು, ಪ್ರದ ಕ್ಷಿಣವಾಗಿ ಸುತ್ತಿಬರುವ ಜ್ವಾಲೆಗಳೊಡನೆ ಹವಿಸ್ಸನ್ನು ಸ್ವೀಕರಿಸುತ್ತಿದ್ದನು. ಆಗ ಇಂದ್ರಜಿತ್ತು ವಿಧಿಪೂರ್ವಕವಾಗಿ ಹೋಮಮಾಡುತ್ತ, ಮೊದಲು ಬ್ರಹಾಸ್ತ್ರವನ್ನು ಆಮಂತ್ರಿಸಿದನು (ಕರೆದನು). ಮತ್ತು ತನಗೆ ಬೇಕಾದ ಧನುಸ್ಸು, ರಥ, ಮುಂತಾದ ಯುದ್ಧದ ಸಾಧಕಗಳೆಲ್ಲವನ್ನೂ ಅಭಿಮಂತ್ರಿಸಿ ಕರೆದನು. ಹೀಗೆ ಇಂದ್ರಜಿತ್ತು ಮಂತ್ರೋಚ್ಚಾರಣಪೂರ್ವಕವಾಗಿ ಅಸ್ತ್ರ ವನ್ನು ಕರೆದು ಹೋಮ ಮಾಡುವುದನ್ನು ನೋಡಿ ಗ್ರಹನಕ್ಷತ್ರ ಚಂದ್ರಾದಿ ಗಳೊಡನೆ ನಭಸ್ಥಲವೆಲ್ಲವೂ ಭೀತಿಯಿಂದ ನಡುಗಿತು. ಅಗ್ನಿಯಂತೆ ತೇಜಸ್ಸುಳ್ಳವನಾಗಿಯೂ, ಇಂದ್ರನಂತೆ ಮಹಾಪ್ರಭಾವವುಳ್ಳವನಾಗಿಯೂ ಇರುವ ಆ ಇಂದ್ರಜಿತ್ತು, ಹೀಗೆ ಹೋಮವನ್ನು ಮಾಡಿ, ತನಗೆ ಬೇಕಾದ ಧನುರ್ಬಾಣಗಳನ್ನೂ, ಕತ್ತಿಯನ್ನೂ, ರಥಾಶ್ವಗಳನ್ನೂ, ಸಾರಥಿಯನ್ನೂ ಪಡೆದು, ಅವುಗಳೊಡನೆ ಆಕಾಶದಲ್ಲಿ ಕಣ್ಮರೆಯಾಗಿಬಿಟ್ಟನು. ಈ ಸಂಚನ್ನು ತಿಳಿದ ರಾಕ್ಷಸರೆಲ್ಲರೂ ಇತ್ತಲಾಗಿ ಸಂತೋಷದಿಂದ ಕೂಗುತ್ತ ತಮ್ಮ ತಮ್ಮ ಕುದುರೆಗಳೊಡನೆಯೂ, ರಥಗಳೊಡನೆಯೂ, ಧ್ವಜಪತಾಕೆ ಗಳೊಡನೆಯೂ ಕೂಡಿ, ವಾನರರ ಮೇಲೆ ಯುದ್ಧಕ್ಕೆ ಹೊರಟರು. ಈ ಸೇನೆಗಳೆಲ್ಲವೂ ಮುಂದೆ ನುಗ್ಗಿ, ತೀಕ್ಷ್ಣವೇಗವುಳ್ಳವುಗಳಾಗಿಯೂ, ಸುವರ್ಣಾಲಂಕೃತಗಳಾಗಿಯೂ, ವಿಚಿತ್ರಗಳಾಗಿಯೂ ಇರುವ ಬಗೆಬಗೆಯ ಬಾಣಗಳಿಂದಲೂ, ತೋಮರಗಳಿಂದಲೂ, ಅಂಕುಶಗಳಿಂದಲೂ ವಾನರ ರನ್ನು ಹೊಡೆಯುವುದಕ್ಕೆ ತೊಡಗಿದರು. ಈ ಸಮಯದಲ್ಲಿ ಅಂತರಿಕ್ಷದಲ್ಲಿ ಮರೆಯಾಗಿದ್ದ ಇಂದ್ರಜಿತ್ತು ಕೂಡ, ಆ ರಾಕ್ಷಸರನ್ನು ಉದ್ರೇಕಗೊಳಿಸು

ವುದಕ್ಕಾಗಿ ತಾನೂ ಕೋಪವನ್ನು ತೋರಿಸುತ್ತ, ಅವರನ್ನು ಕುರಿತು, "ಎಲೆ ರಾಕ್ಷಸರೆ! ಭಯಪಡದೆ ಸಂತೋಷದಿಂದ ಯುದ್ಧಮಾಡಿ, ವಾನರರನ್ನು ಕೊಲ್ಲುವುದಕ್ಕೆ ಪ್ರಯತ್ನಿಸಿರಿ!" ಎಂದನು. ಈ ವಾಕ್ಯವನ್ನು ಕೇಳಿ ರಾಕ್ಷಸರಿಗೆ ಇನ್ನೂ ಉತ್ಸಾಹವು ಹೆಚ್ಚಿತು. ಒಬ್ಬೊಬ್ಬರೂ ಜಯಾಕಾಂಕ್ಷೆಯುಳ್ಳವರಾಗಿ ಸಿಂಹನಾದಗಳನ್ನು ಮಾಡುತ್ತ, ವಾನರರ ಮೇಲೆ ಎಡೆಬಿಡದೆ ಬಾಣವರ್ಷಗಳನ್ನು ಕರೆಯುತ್ತಿದ್ದರು. ಈ ಸಮಯಕ್ಕೆ ಸರಿಯಾಗಿ ಇಂದ್ರಜಿತ್ತು ಆಕಾಶದಿಂದ ಯಾರಿಗೂ ಕಾಣಿಸದೆ ಅಡ್ಡಲಗಿನ ಬಾಣಗಳನ್ನೂ, ಮೊನೆಯಲಗಿನ ಬಾಣಗಳನ್ನೂ, ಗದೆಗಳನ್ನೂ, ಮುಸಲಗಳನ್ನೂ ವರ್ಷಿಸಿ, ವಾನರ ಸೈನ್ಯವನ್ನು ಪೀಡಿಸುತ್ತಿದ್ದನು. ಹೀಗೆ ರಾಕ್ಷಸಸೈನ್ಯದಿಂದ ನಾನಾ ದಿಕ್ಕುಗಳಲ್ಲಿಯೂ ಪೀಡಿತರಾದ ವಾನರರು, ಅಲ್ಲಲ್ಲಿ ಸಿಕ್ಕಿದ ಮರಗಳನ್ನು ಕಿತ್ತುಕೊಂಡು ಗುಂಪುಗುಂಪಾಗಿ ಇಂದ್ರಜಿತ್ತಿನ ದಾರಿಯನ್ನು ಹುಡುಕುತ್ತ ಹೊರಟರು. ಇವರು ಹೋದಕಡೆಗಳಲ್ಲೆಲ್ಲಾ ಇಂದ್ರಜಿತ್ತು ಅವರನ್ನು ಬಹಳವಾಗಿ ಪೀಡಿಸುತ್ತಲೇ ಇದ್ದನು. ಕೋಪಗೊಂಡು ಆ ಇಂದ್ರಜಿತ್ತು, ತನ್ನ ಒಂದೊಂದು ಬಾಣಕ್ಕೂ, ಒಂಬತ್ತು, ಐದು, ಏಳು, ಹೀಗೆ ಮೊತ್ತಮೊತ್ತವಾಗಿ ಕಪಿಗಳನ್ನು ಕೊಂದು ಕೆಡಹುತ್ತ, ರಾಕ್ಷಸರಿಗೆ ಸಂತೋಷವನ್ನು ಹುಟ್ಟಿಸಿ ಪ್ರೋತ್ಸಾಹಿಸುತ್ತಿದ್ದನು. ಮತ್ತು ಶತ್ರುದುರ್ಜಯನಾದ ಆ ರಾವಣಕುಮಾರನು, ಸುವರ್ಣಾಲಂಕೃತಗಳಾಗಿ ಸೂರ್ಯವರ್ಚಸ್ಸುಳ್ಳ ಬಾಣಗಳಿಂದ ವಾನರರನ್ನು ಮೇಲೆ ಮೇಲೆ ಪ್ರಹರಿಸುತ್ತಲೇ ಇದ್ದನು. ಈ ಬಾಣಪ್ರಹಾರದಿಂದ ಅನೇಕ ವಾನರರು ನೊಂದು, ಮೈಮುರಿದು, ದೇವತೆಗಳಿಂದ ಪೀಡಿತರಾದ ದಾನವರಂತೆ ಭಗ್ನಮನೋರಥರಾಗಿ ಕೆಳಗೆ ಬಿದ್ದರು. ಇಷ್ಟರಲ್ಲಿ ಬೇರೆ ಕೆಲವು ವಾನರರು, ಬಾಣದುರಿಯಿಂದ ಸೂರ್ಯನಂತೆ ದಹಿಸುತ್ತಿರುವ ಇಂದ್ರಜಿತ್ತನ್ನು ಅಡಗಿಸುವುದಕ್ಕಾಗಿ ಅವನ ಬಾಣದ ದಾರಿಯನ್ನು ಹಿಡಿದು ಬೆಂಬತ್ತಿಹೋದರು. ಇವರ ಪ್ರಯತ್ನವೂ ವಿಫಲವಾಯಿತು. ಈ ವಾನರರೂ ಇಂದ್ರಜಿತ್ತಿನ ಬಾಣಗಳಿಂದ ನೊಂದು ಮೈಮುರಿದು, ರಕ್ತದಿಂದ ತೊಯ್ದು ಮೈಯುಳ್ಳವರಾಗಿ ಹಿಂದುಮುಂದು ತೋರದೆ ಪಲಾಯನಮಾಡಿದರು. ಇನ್ನು ಕೆಲವು ವಾನರರು ರಾಮ

ಕಾರ್ಯಕ್ಕಾಗಿ ತಮ್ಮ ಪ್ರಾಣಗಳಲ್ಲಿಯೂ ಆಸೆಯನ್ನು ಬಿಟ್ಟು ಪರಾಕ್ರಮವನ್ನು ತೋರಿಸುತ್ತ ದೊಡ್ಡ ದೊಡ್ಡ ಶಿಲೆಗಳನ್ನೂ, ಪರ್ವತಗಳನ್ನೂ ಕೈಗೆತ್ತಿಕೊಂಡು ಗರ್ಜಿಸುತ್ತ ಹಿಮ್ಮೆಟ್ಟದೆ ಮುಂದೆ ನುಗ್ಗಿ, ಇಂದ್ರಜಿತ್ತು ಮರೆಯಾಗಿದ್ದ ಸ್ಥಳವನ್ನು ಸುತ್ತುಮುತ್ತಿ ನಿಂತು ಅವನ ಕಡೆಗೆ ಶಿಲಾವರ್ಷವನ್ನು ಕರೆಯುತ್ತಿದ್ದರು. ಎಂತಹ ಶತ್ರುವಿಗಾದರೂ ಪ್ರಾಣವನ್ನು ನೀಗಿಸತಕ್ಕ ಈ ಶಿಲಾವೃಕ್ಷಗಳ ವರ್ಷವೂ ಕೂಡ, ರಣದುರ್ಜಯನೆನಿಸಿಕೊಂಡ, ಮಹಾತೇಜಸ್ವಿಯಾದ ಆ ಇಂದ್ರಜಿತ್ತಿನಲ್ಲಿ ವಿಫಲವಾಯಿತು. ಇವರ ಶಿಲೆಗಳನ್ನೂ, ವೃಕ್ಷಗಳನ್ನೂ ಆ ರಾಕ್ಷಸನು ತನ್ನ ಬಾಣದಿಂದ ನಿವಾರಿಸಿದನು. ಆಮೇಲೆ ರಣಪಂಡಿತನಾದ ಇಂದ್ರಜಿತ್ತು, ಅಗ್ನಿಯಂತೆ ದೇದೀಪ್ಯಮಾನಗಳಾಗಿಯೂ, ಸರ್ಪಗಳಂತೆ ಕ್ರೂರಗಳಾಗಿಯೂ ಇದ್ದ ಬಾಣಗಳಿಂದ ವಾನರಸೈನ್ಯವನ್ನು ತುಂಡತುಂಡವಾಗಿ ಭೇದಿಸುತ್ತ ಬಂದನು. ಹದಿನೆಂಟು ತೀಕ್ಷ್ಣಬಾಣಗಳಿಂದ ಗಂಧಮಾದನನನ್ನು ಹೊಡೆದನು. ದೂರದಿಂದಲೇ ನಳನನ್ನು ಒಂಬತ್ತು ಬಾಣಗಳಿಂದ ಪ್ರಹರಿಸಿದನು. ಮರ್ಮಭೇದಕಗಳಾದ ಏಳು ಬಾಣಗಳಿಂದ ಮೈಂದನನ್ನೂ, ಐದು ಬಾಣಗಳಿಂದ ಗಜನನ್ನೂ, ಹತ್ತು ಬಾಣಗಳಿಂದ ಜಾಂಬವಂತನನ್ನೂ, ಮೂವತ್ತು ಬಾಣಗಳಿಂದ ನೀಲನನ್ನೂ ಭೇದಿಸಿದನು. ಹಾಗೆಯೇ ತನಗೆ ವರಬಲದಿಂದ ದೊರೆತ ಇನ್ನೂ ಅನೇಕ ಘೋರಬಾಣಗಳಿಂದ ಸುಗ್ರೀವನನ್ನೂ, ಋಷಭನನ್ನೂ, ಅಂಗದನನ್ನೂ ಪ್ರಹರಿಸಿ ಅವರನ್ನು ಮೂರ್ಛೆಹೊಂದಿಸಿದನು. ಮತ್ತು ಆ ರಾಕ್ಷಸನು ಪ್ರಳಯಕಾಲಾಗ್ನಿಯಂತೆ ಮೇಲೆ ಮೇಲೆ ಕೋಪದಿಂದುರಿಯುತ್ತ ಇನ್ನೂ ಅನೇಕ ಬಾಣಗಳನ್ನು ಬಿಟ್ಟು ಇತರ ವಾನರರನ್ನೂ ಭೇದಿಸಿದನು. ಮಹಾವೀರ್ಯವುಳ್ಳ ಆ ಇಂದ್ರಜಿತ್ತು, ಹೀಗೆ ಆ ಯುದ್ಧದಲ್ಲಿ, ಸೂರ್ಯಸಮಾನಗಳಾಗಿಯೂ ಆಕರ್ಣಾಕೃಷ್ಟಗಳಾಗಿಯೂ, ಶೀಘ್ರಗತಿಯುಳ್ಳವುಗಳಾಗಿಯೂ ಇದ್ದ ಅನೇಕ ಬಾಣಗಳಿಂದ ವಾನರಸೈನ್ಯವನ್ನು ತಲೆಯೆತ್ತದ ಹಾಗೆ ಅಡಗಿಸುತ್ತ ಬಂದನು. ಹೀಗೆ ಅವನ ಬಾಣಸಮೂಹದಿಂದ ಸಮಸ್ತ ವಾನರಸೈನ್ಯವೂ ಬಹಳವಾಗಿ ಕಲಗಿ, ಮೂರ್ಛೆಹೊಂದಿ, ರಕ್ತದಿಂದ ತೊಯ್ದು ತತ್ತಳಿಸುತ್ತಿತ್ತು. ಇದನ್ನು ನೋಡಿದಾಗ, ವೀರ್ಯಬಲದಿಂದ ಕೊಬ್ಬಿದ ಆ ಇಂದ್ರಜಿತ್ತಿಗೆ

ಇಷ್ಟೂ ಉತ್ಸಾಹವು ಹುಟ್ಟಿತು. ಈ ಉತ್ಸಾಹದಿಂದ ಮೇಲೆ ಮೇಲೆ ಭಯಂಕರವಾದ ಬಾಣವರ್ಷವನ್ನೂ, ಶಸ್ತ್ರವರ್ಷವನ್ನೂ ಕರೆದು, ಆ ವಾನರಸೇನೆಯನ್ನು ಎಡೆಬಿಡದೆ ಪ್ರಹರಿಸುತ್ತಿದ್ದನು. ಹೀಗೆ ಇಂದ್ರಜಿತ್ತು ಆ ಮಹಾಯುದ್ಧದಲ್ಲಿ ಕ್ಷಣಕ್ಷಣಕ್ಕೂ ಉತ್ಸಾಹದಿಂದುಬ್ಬುತ್ತ, ಇದು ವರೆಗೆ ರಾಕ್ಷಸಸೇನೆಗೆ ಮೇಲಾಗಿ ಅಂತರಿಕ್ಷದಲ್ಲಿ ತಾನಿದ್ದ ಸ್ಥಳವನ್ನು ಬಿಟ್ಟು, ವೇಗದಿಂದ ವಾನರಸೈನ್ಯದ ನಡುವೆ ಪ್ರವೇಶಿಸಿ, ಅಲ್ಲಿಯೂ ಬೇರೊಬ್ಬರ ಕಣ್ಣಿಗೆ ಗೋಚರಿಸದೆ, ಕಾಳಮೇಘವು ಮಳೆಯನ್ನು ಕರೆಯು ವಂತೆ ವಾನರ ಸೇನೆಯ ಮೇಲೆ ಭಯಂಕರವಾದ ಬಾಣವರ್ಷವನ್ನು ಕರೆದನು. ಆ ಯುದ್ಧದಲ್ಲಿ ಪರ್ವತಾಕಾರವುಳ್ಳ ಕೆಲವು ವಾನರರು ಇಂದ್ರಜಿತ್ತಿನ ಮಾಯೆಯಿಂದ ಮೋಹಿತರಾಗಿ, ಅವನ ಬಾಣಗಳಿಂದ ಮೈಮುರಿದು, ವಿಕೃತಸ್ವರದಿಂದರಚುತ್ತ ವಜ್ರಾಹತಗಳಾದ ಪರ್ವತ ಗಳಂತೆ ನೆಲಕ್ಕೆ ಬಿದ್ದರು. ಆಗ ಆ ವಾನರರೆಲ್ಲರೂ ತಮ್ಮ ಮೇಲೆ ಬಾಣ ಗಳು ಬೀಳುವುದೊಂದನ್ನು ಮಾತ್ರವೇ ಕಾಣುತ್ತಿದ್ದರೇ ಹೊರತು, ಮಾಯೆ ಯಿಂದ ಕಣ್ಮರೆಯಾಗಿದ್ದ ಇಂದ್ರಜಿತ್ತೆಲ್ಲಿರುವನೆಂದು ಯಾರಿಗೂ ತಿಳಿಯ ಲಿಲ್ಲ. ಮಹಾಮಹಿಮೆಯುಳ್ಳ ಆ ಇಂದ್ರಜಿತ್ತು ಮಾಯೆಯಿಂದ ತಾನು ಅಗೋಚರನಾಗಿದ್ದುದು ಮಾತ್ರವೇ ಅಲ್ಲದೆ, ಸೂರ್ಯಸಮಾನಗಳಾದ ತನ್ನ ತೀಕ್ಷ್ಣಬಾಣಗಳಿಂದ ಸಮಸ್ತ ದಿಕ್ಕುಗಳನ್ನೂ ಮರೆಸಿ ವಾನರರಿಗೆ ಕಣ್ಣೇ ಕಾಣದ ಹಾಗೆ ಮಾಡಿ, ಅವರನ್ನು ಕೊಲ್ಲುತ್ತಿದ್ದನು. ಮತ್ತು ಅವನು ದೇದೀಪ್ಯಮಾನಗಳಾಗಿ ಬೆಂಕಿಯ ಕಿಡಿಗಳನ್ನು ಕೆದರುತ್ತಿರುವ ಶೂಲ ಗಳನ್ನೂ, ಕತ್ತಿಗಳನ್ನೂ, ಕೊಡಲಿಗಳನ್ನೂ, ವಾನರಸೈನ್ಯದ ಮೇಲೆ ಅತಿ ತೀವ್ರವಾಗಿ ಪ್ರಯೋಗಿಸುತ್ತಿದ್ದನು. ಅಗ್ನಿಸಮಾನಗಳಾದ ಇಂದ್ರಜಿತ್ತಿನ ಬಾಣಗಳಿಂದ ಅನೇಕ ವಾನರಯೂಥಗಳು ಗಾಯಹೊಂದಿ, ಸರ್ವಾವ ಯವಗಳಲ್ಲಿಯೂ ರಕ್ತವನ್ನು ಸುರಿಸುತ್ತಾ ಅರಳಿದ ಮುತ್ತುಗದ ಮರ ದಂತೆ ಕಾಣಿಸಿದರು. ಈ ಬಾಣಪ್ರಹಾರಗಳನ್ನು ತಡೆಯಲಾರದೆ ಅನೇಕ ವಾನರರು ಒಬ್ಬರಸ್ನೊಬ್ಬರು ತಬ್ಬಿ ವಿಕೃತಸ್ವರದಿಂದ ಕೂಗುತ್ತ ಕೆಳಗೆ ಬಿದ್ದರು. ಕೆಲವರು ಇಂದ್ರಜಿತ್ತಿನ ಸಂಚನ್ನು ತಿಳಿಯಬೇಕೆಂಬುದಕ್ಕಾಗಿ ತಲೆಯೆತ್ತಿ ಮೇಲೆ ನೋಡುತ್ತಿರುವಾಗಲೇ ಅವನ ಬಾಣದಿಂದ ನಾಟಿದ

ಕಣ್ಣುಳ್ಳವರಾಗಿ, ಒಬ್ಬರನ್ನೊಬ್ಬರು ತಬ್ಬಿ ಕೆಳಗೆ ಬಿದ್ದರು. ಆಗ ಇಂದ್ರಜಿತ್ತು ಮೇಲೆ ಮೇಲೆ ವೀರ್ಯೋತ್ಸಾಹದಿಂದುಬ್ಬುತ್ತ, ಕ್ರಮವಾಗಿ ಹನುಮಂತನನ್ನೂ, ಸುಗ್ರೀವಾಂಗದರನ್ನೂ, ಗಂಧಮಾಧನನನ್ನೂ, ಜಾಂಬವಂತನನ್ನೂ, ಸುಷೇಣನನ್ನೂ, ವೇಗದರ್ಶಿಯನ್ನೂ, ಮೈಂದದ್ವಿವಿದರನ್ನೂ, ನೀಲನನ್ನೂ, ಗಜಗವಾಕ್ಷಗೋಮುಖರೆಂಬವರನ್ನೂ, ಕೇಸರಿಯನ್ನೂ, ಹರಿಲೋಮನನ್ನೂ, ವಿದ್ಯುದ್ದಂಷ್ಟ್ರನನ್ನೂ, ಸೂರ್ಯಾನನ ಜ್ಯೋತಿಮುಖದಧಿಮುಖರೆಂಬವರನ್ನೂ, ಪಾವಕಾಕ್ಷನನ್ನೂ, ನಲನನ್ನೂ, ಕುಮುದನನ್ನೂ, ಇನ್ನೂ ಅನೇಕ ವಾನರಯೂಥಪರನ್ನೂ ಬ್ರಹ್ಮಾಸ್ತ್ರದಿಂದಭಿಮಂತ್ರಿಗಳಾದ ಪ್ರಾಸಗಳಿಂದಲೂ, ಶೂಲಗಳಿಂದಲೂ, ತೀಕ್ಷ್ಣಬಾಣಗಳಿಂದಲೂ ಬಹಳವಾಗಿ ಭೇದಿಸುತ್ತ ಬಂದನು. ಹೀಗೆ ಇಂದ್ರಜಿತ್ತು ಗದೆಗಳಿಂದಲೂ, ಚಿನ್ನದ ಹಿಡಿಗಳುಳ್ಳ ಬಾಣಗಳಿಂದಲೂ, ವಾನರಯೂಥಪತಿಗಳ ಶಕ್ತಿಯನ್ನಡಗಿಸಿದಮೇಲೆ, ಸೂರ್ಯಕಿರಣಗಳಂತಿರುವ ಬಾಣವರ್ಷಗಳಿಂದ ರಾಮಲಕ್ಷ್ಮಣರನ್ನೂ ಪ್ರಹರಿಸುವುದಕ್ಕೆ ತೊಡಗಿದನು. ರಾಮನು ಬಹಳ ಆಶ್ಚರ್ಯಕರವಾದ ಧೈರ್ಯಲಕ್ಷ್ಮಿಯುಳ್ಳವನಾದುದರಿಂದ, ಇಂದ್ರಜಿತ್ತು ತನ್ನ ಮೇಲೆ ಎಡೆಬಿಡದೆ ಬಾಣವನ್ನು ಕರೆಯುತ್ತಿದ್ದರೂ, ಅವುಗಳನ್ನು ಕೇವಲ ಜಲವರ್ಷಗಳಂತೆ ಭಾವಿಸಿ, ಅಲಕ್ಷ್ಯದಿಂದಿದ್ದು, ಆಮೇಲೆ ಸಮೀಪದಲ್ಲಿದ್ದ ಲಕ್ಷ್ಮಣನನ್ನು ಕುರಿತು ಹೇಳುವನು. "ವತ್ಸ ಲಕ್ಷ್ಮಣಾ! ಈ ಇಂದ್ರಜಿತ್ತು ಬ್ರಹ್ಮಾಸ್ತ್ರವನ್ನು ಹಿಡಿದು ಅನೇಕ ವಾನರ ಸೈನ್ಯವನ್ನು ಕೆಡಹಿ, ಈಗ ನಮ್ಮ ಮೇಲೆಯೂ ಬಾಣಗಳನ್ನು ಪ್ರಯೋಗಿಸುತ್ತಿರುವನು. ಈ ರಾಕ್ಷಸನು ಬ್ರಹ್ಮನಿಂದ ವರವನ್ನು ಪಡೆದವನು! ಮಹಾಪ್ರಭಾವವುಳ್ಳವನು. ಈಗ ಆಕಾಶದಲ್ಲಿ ತನ್ನ ಭಯಂಕರವಾದ ರೂಪವನ್ನು ಮರೆಸಿಕೊಂಡು ಈ ಕಾರ್ಯವನ್ನು ನಡೆಸುತ್ತಿರುವನು. ಹೀಗೆ ಕಣ್ಣಿಗೆ ಕಾಣಿಸದಂತೆಯೇ ನಮ್ಮ ಮೇಲೆ ಬಾಣವರ್ಷಗಳನ್ನು ಕರೆಯುತ್ತಿರುವ ಈ ಇಂದ್ರಜಿತ್ತನ್ನು ವಧಿಸುವುದಕ್ಕೆ ಹೇಗೆ ಸಾಧ್ಯವೋ ಕಾಣೆನು. ಆದರೆ ಈ ಪೂಜ್ಯವಾದ ಅಸ್ತ್ರಕ್ಕೆ ಪ್ರಧಾನದೇವತೆಯಾಗಿ, ಅದರ ಉತ್ಪತ್ತಿಗೂ ಮೂಲಕಾರಣನಾದ ಆ ಬ್ರಹ್ಮದೇವನ ಮಹಿಮೆಯು ಅಪ್ರಮೇಯವೆಂಬುದನ್ನು ನಾನು ಬಲ್ಲೆನು.

ಆದುದರಿಂದ ಎಲೈ ಧೀಮಂತನೆ! ಈಗ ನಾವಿಬ್ಬರೂ ಸ್ವಲ್ಪಕಾಲದವರೆಗೆ ಮನಸ್ಸು ಕಲಗದೆ ಈ ಬಾಣವರ್ಷಗಳನ್ನು ಸಹಿಸಿಕೊಂಡಿರುವುದು ಮೇಲು. ಈ ರಾಕ್ಷಸನು ತನ್ನ ಬಾಣವರ್ಷಗಳಿಂದ ಸಮಸ್ತ ದಿಕ್ಕುಗಳನ್ನೂ ಮರೆಸುತ್ತಿರುವನಲ್ಲದೆ, ಇವನ ಬಾಣಗಳಿಂದ ನಮ್ಮ ವಾನರ ಸೈನ್ಯದಲ್ಲಿಯೂ ಅನೇಕ ಪ್ರಧಾನಯೂಥಪತಿಗಳು ಬಿದ್ದುಹೋದುದರಿಂದ, ನಮ್ಮ ಸೈನ್ಯದ ಕಳೆಯೇ ಕೆಟ್ಟುಹೋಗಿರುವುದು. ಹಾಗಿದ್ದರೂ ಈಗ ನಾವು ನಡೆಸಬೇಕಾದ ಕಾರ್ಯವೇನೆಂದರೆ, ಸ್ವಲ್ಪಕಾಲದವರೆಗೆ ಯುದ್ಧಮಾಡುವುದನ್ನು ನಿಲ್ಲಿಸಿ, ಮನಸ್ಸಿನಲ್ಲಿ ಕೋಪತಾಪಗಳನ್ನು ಬಿಟ್ಟು, ಯುದ್ಧೋತ್ಸಾಹವನ್ನೂ ತಗ್ಗಿಸಿ, ಮೂರ್ಛೆ ಹೊಂದಿದವರಂತೆ ಮಲಗಿರಬೇಕು. ಆಗ ಈ ರಾಕ್ಷಸನು ನಮ್ಮ ಸ್ಥಿತಿಯನ್ನು ನೋಡಿದೊಡನೆ, ಈ ಯುದ್ಧದಲ್ಲಿ ತನಗೆ ಜಯಲಕ್ಷ್ಮಿಯು ಕೈಸೇರಿದಳೆಂಬ ಸಂತೋಷದಿಂದ ಮುಂದಿನ ಪ್ರಯತ್ನವನ್ನು ಬಿಟ್ಟು ಲಂಕೆಗೆ ಹಿಂತಿರುಗುವನು. ಇದರಲ್ಲಿ ಸಂದೇಹವಿಲ್ಲ" ಎಂದನು. ಅದರಂತೆಯೇ ಆ ರಾಮಲಕ್ಷ್ಮಣರಿಬ್ಬರೂ ಇಂದ್ರಜಿತ್ತಿನ ಬಾಣಗಳಿಂದ ಪೀಡಿತರಾಗಿ ನೆಲದ ಮೇಲೆ ಮಲಗಿಬಿಟ್ಟರು. ಹೀಗೆ ರಾಮಲಕ್ಷ್ಮಣರಿಬ್ಬರೂ ಮೂರ್ಛಿತರಾದ ಹಾಗೆ ಮಲಗಿದುದನ್ನು ನೋಡಿ, ಇಂದ್ರಜಿತ್ತು ಸಂತೋಷದಿಂದ ಸಿಂಹನಾದ ಮಾಡಿದನು. ಈ ರೀತಿಯಲ್ಲಿ ಇಂದ್ರಜಿತ್ತು ಸಮಸ್ತ ವಾನರಸೈನ್ಯವನ್ನೂ, ರಾಮಲಕ್ಷ್ಮಣರನ್ನೂ ನಿಶ್ಚೇಷ್ಟರನ್ನಾಗಿ ಮಾಡಿ, ವೇಗದಿಂದ ಹಿಂತಿರುಗಿ, ರಾವಣ ರಕ್ಷಿತವಾದ ಲಂಕೆಯನ್ನು ಪ್ರವೇಶಿಸಿದನು.

ಇಲ್ಲಿಗೆ ಎಪ್ಪತ್ತಮೂರನೆಯ ಸರ್ಗವು.

ಜಾಂಬವಂತನ ಮಾತಿನಮೇಲೆ ಹನುಮಂತನು ಹಿಮವಂತದ ಪಕ್ಕದಲ್ಲಿದ್ದ ಓಷಧಿಪರ್ವತವನ್ನು ತಂದುದು. ಅದರೊಳಗಿನ ದಿವ್ಯೌಷಧಿಗಂಧವನ್ನು ಮೂಸಿನೋಡಿದಮಾತ್ರಕ್ಕೆ ರಾಮಲಕ್ಷ್ಮಣಾದಿಗಳೆಲ್ಲರೂ ಮೂರ್ಛೆತಿಳಿದುದು.

ಹೀಗೆ ಆ ರಣಾಗ್ರದಲ್ಲಿ ರಾಮಲಕ್ಷ್ಮಣರಿಬ್ಬರೂ ಕೆಳಗೆ ಬಿದ್ದುದನ್ನು ನೋಡಿ ಸಮಸ್ತ ವಾನರಸೈನ್ಯವೂ ಭಯದಿಂದ ಮೂರ್ಛೆಹೊಂದಿತು.

ಆಗ ಆ ಸೈನ್ಯಕ್ಕೆ ಪ್ರಮುಖರಾದ ನೀಲ ಜಾಂಬವಂತರೇ ಮೊದಲಾದವರೂ ಕೂಡ, ಮುಂದೇನು ಮಾಡಬೇಕೆಂದು ತೋರದೆ ಕ್ಷಣಕಾಲದವರೆಗೆ ದುಃಖಿತರಾಗಿದ್ದರು. ಆಗ ಬುದ್ಧಿವಂತರಲ್ಲಿ ಮೇಲೆನಿಸಿಕೊಂಡ ವಿಭೀಷಣನು, ಭಯದಿಂದ ತತ್ತರಿಸುತ್ತಿರುವ ಸಮಸ್ತ ವಾನರವೀರರನ್ನೂ ಸಮಾಧಾನಪಡಿಸುತ್ತ "ಎಲೈ ವಾನರರೆ! ಭಯಪಡಬೇಡಿರಿ! ದುಃಖಿಸುವುದಕ್ಕೆ ಇದು ಕಾಲವಲ್ಲ. ರಾಮಲಕ್ಷ್ಮಣರಿಬ್ಬರೂ ಹೀಗೆ ಮೈಮರೆತು ಮಲಗಿರುವರೆಂದು ನೀವು ಚಿಂತಿಸುವುದಕ್ಕೆ ಏನೇನೂ ಕಾರಣವಿಲ್ಲ. ಏಕೆಂದರೆ, ಇವರಿಬ್ಬರೂ ಬ್ರಹ್ಮದೇವನ ಮಾತಿಗೆ ಗೌರವವನ್ನು ಕೊಡುವುದಕ್ಕಾಗಿಯೇ, ಇಂದ್ರಜಿತ್ತಿನ ಬ್ರಹ್ಮಾಸ್ತ್ರದಿಂದ ತಾವು ಮೂರ್ಛೆಹೊಂದಿದಂತೆ ನಟಿಸುತ್ತಿರುವರೇ ಹೊರತು ಬೇರೆಯಲ್ಲ! ಬ್ರಹ್ಮದೇವನೇ ತಾನಾಗಿ ಈ ಇಂದ್ರಜಿತ್ತಿಗೆ ಅಮೋಘವೇಗವುಳ್ಳ ಈ ದಿವ್ಯಾಸ್ತ್ರವನ್ನು ಕೊಟ್ಟಿರುವನು. ಆ ಬ್ರಹ್ಮಾನುಗ್ರಹಕ್ಕೆ ಗೌರವವನ್ನುಂಟುಮಾಡಬೇಕೆಂದೇ ಇವರು ಅದರ ಬಾಧೆಯನ್ನು ಸಹಿಸಿಕೊಂಡಿರುವರು. ಇದಕ್ಕಾಗಿ ನೀವು ದುಃಖಿಸುವುದೇಕೆ" ಎಂದನು. ಇಷ್ಟರಲ್ಲಿ ವಾಯುಪುತ್ರನಾದ ಹನುಮಂತನು ತಾನು ಆ ಬ್ರಹ್ಮಾಸ್ತ್ರವನ್ನು ಗೌರವಿಸುವುದಕ್ಕಾಗಿ ಮುಹೂರ್ತಕಾಲದವರೆಗೆ ಅದಕ್ಕೆ ಬದ್ಧನಾಗಿದ್ದು, ಶೀಘ್ರದಲ್ಲಿಯೇ ಅದರಿಂದ ಮುಕ್ತನಾಗಿ ಬಂದು, ವಿಭೀಷಣನ ಮಾತಿಗೆ ಪ್ರತ್ಯುತ್ತರವಾಗಿ ಅವನನ್ನು ಕುರಿತು "ವಿಭೀಷಣಾ! ಈಗ ನಮ್ಮ ಸೈನ್ಯದಲ್ಲಿ ಬಲಾಢ್ಯರಾದ ಅನೇಕ ವಾನರರು ಹತರಾಗಿರುವರು. ಈಗ ಬದುಕಿರುವವರನ್ನಾದರೂ ಹುಡುಕಿ ನಾವು ಅವರಿಗೆ ಮೊದಲು ಸಮಾಧಾನವನ್ನು ಹೇಳಿಬರಬೇಕಲ್ಲವೆ?" ಎಂದನು. ಅದರಂತೆಯೇ ಅವರಿಬ್ಬರೂ ಆ ರಾತ್ರಿಯಲ್ಲಿ ಗೊರವಿಯ ಕಡ್ಡಿಗಳನ್ನು ಹತ್ತಿಸಿಕೊಂಡು ಅಲ್ಲಲ್ಲಿ ಜೀವಸಹಿತವಾಗಿರುವ ವಾನರರನ್ನು ಹುಡುಕುತ್ತ ಯುದ್ಧಭೂಮಿಯಲ್ಲಿ ತಿರುಗುತ್ತಿದ್ದರು. ಇಂದ್ರಜಿತ್ತಿನ ಬಾಣಗಳಿಂದ ಅಲ್ಲಲ್ಲಿ ಮೈಮುರಿದು ಬಿದ್ದಿದ್ದ ವಾನರರ ದುರವಸ್ಥೆಯನ್ನು ಕೇಳಬೇಕೆ? ಬಾಲ ಕತ್ತರಿಸಿದವರು ಕೆಲವರು! ಕೈಮುರಿದವರು ಕೆಲವರು! ತೊಡೆಯಿಲ್ಲದವರು ಕೆಲವರು! ಕಾಲುಮುರಿದವರು ಕೆಲವರು! ಬೆರಳು ಕತ್ತರಿಸಿದವರು ಕೆಲವರು! ಕೊರಲು ಮುರಿದವರು ಕೆಲವರು! ಕೆಲವರಿಗೆ ಅಂಗಾಂಗಗಳ

ಕ಼್್ಲೆಯೂ ರಕ್ತವು ಸುರಿಯುತ್ತಿರುವುದು! ಕೆಲವರು ಗಾಯದ ನೋವನ್ನು ತಡೆಯಲಾರದೆ ಮೂತ್ರಸ್ರಾವವನ್ನು ಮಾಡುತ್ತಿರುವರು! ಎಲ್ಲಿ ನೋಡಿ ದರೂ ಪರ್ವತಾಕಾರವುಳ್ಳ ವಾನರರ ಮೃತದೇಹಗಳು! ಎಲ್ಲಿ ನೋಡಿ ದರೂ ಜಾಜ್ವಲ್ಯಮಾನಗಳಾದ ತೀಕ್ಷ್ಣಾಯುಧಗಳು! ಹೀಗೆ ಮುರಿದ ಶೂಲಾದ್ಯಾಯುಧಗಳಿಂದಲೂ, ಹತರಾದ ವಾನರರ ಮೃತದೇಹಗಳಿಂದಲೂ ಹಟ್ಟಿಹಾಗಿ ತುಂಬಿದ ಆ ಯುದ್ಧಭೂಮಿಯನ್ನು ಆಂಜನೇಯ ವಿಭೀಷಣ ರಿಬ್ಬರೂ ಹುಡುಕುತ್ತ ಬಂದರು. ಆಗ ರಣರಂಗದಲ್ಲಿ ಹತಪ್ರಾಯರಾಗಿ ಬಿದ್ದಿದ್ದ ಸುಗ್ರೀವನನ್ನೂ, ಅಂಗದನನ್ನೂ, ನೀಲನನ್ನೂ, ಶರಭನನ್ನೂ, ಗಂಧಮಾದನನನ್ನೂ, ಗವಾಕ್ಷನನ್ನೂ, ಸುಷೇಣನನ್ನೂ, ವೇಗದರ್ಶಿ ಯನ್ನೂ, ಆಹುಕನನ್ನೂ, ಮೈಂದದ್ವಿವಿದರನ್ನೂ, ನಳನನ್ನೂ, ಜ್ಯೋತಿ ಮುಖನನ್ನೂ, ಪನಸನನ್ನೂ, ಇನ್ನೂ ಇತರ ವಾನರರನ್ನೂ ನೋಡಿ ಅವರವರಿಗೆ ಧೈರ್ಯವನ್ನು ಹೇಳುತ್ತ ಬಂದರು. ಬ್ರಹ್ಮದೇವನಿಗೆ ಪ್ರೀತಿ ಪಾತ್ರನಾದ ಆ ಇಂದ್ರಜಿತ್ತು, ಬ್ರಹ್ಮಾನುಗ್ರಹದಿಂದ ಬಂದ ಅಸ್ತ್ರ ದಿಂದಲೇ ಆ ದಿನದ ಐದನೆಯ ಭಾಗವಾದ ಸಾಯಾಹ್ನವೆಂಬ ಆರುಘಳಿ ಗೆಯ ಹೊತ್ತಿನಲ್ಲಿ ಮಹಾಬಲಾಢ್ಯರಾದ ಅರುವತ್ತೇಳುಕೋಟಿ ವಾನರ ರನ್ನು ಕೊಂದು ಕೆಡಹಿದ್ದನು. ಹೀಗೆ ಇಂದ್ರಜಿತ್ತಿನ ಬಾಣಗಳಿಂದ ಪೀಡಿತವಾಗಿ ಸಮುದ್ರಪ್ರವಾಹದಂತೆ ಅಪಾರವಾಗಿಯೂ, ಭಯಂಕರವಾ ಗಿಯೂ ಬಿದ್ದಿದ್ದ ಆ ವಾನರಸೈನ್ಯದ ನಡುವೆ, ವಿಭೀಷಣನೂ, ಹನು ಮಂತನೂ ಸುತ್ತಿಸುತ್ತಿ ತಿರುಗುತ್ತ, ವೃದ್ಧನಾದ ಜಾಂಬವಂತನನ್ನು ಹುಡುಕುತ್ತ ಬಂದರು. ಕೊನೆಗೆ ಅಪಾರವಾದ ಆ ವಾನರಸೈನ್ಯದಲ್ಲಿ ಸ್ವಾಭಾವಿಕವಾಗಿ ವಯಸ್ಸಿನಿಂದಲೇ ಮುದುಕನಾಗಿಯೂ, ಜ್ಞಾನವೃದ್ಧ ನಾಗಿಯೂ ಇದ್ದ ಬ್ರಹ್ಮಪುತ್ರನಾದ ಜಾಂಬವಂತನು, ನೂರಾರು ಬಾಣ ಗಳಿಂದ ನಾಟಿದ ಮೈಯುಳ್ಳವನಾಗಿ, ಕ್ರಮಕ್ರಮವಾಗಿ ನಂದುತ್ತಿರುವ ಅಗ್ನಿಯಂತೆ ಉತ್ಕ್ರಮಣಾವಸ್ಥೆಯಲ್ಲಿ ನೆಲದ ಮೇಲೆ ಮಲಗಿರುವುದನ್ನು ಕಂಡರು. ಮೊದಲು ವಿಭೀಷಣನು ಅವನನ್ನು ಕಂಡು ಸಮೀಪಕ್ಕೆ ಹೋಗಿ "ಎಲೆ! ಆರ್ಯನೆ! ಈ ತೀಕ್ಷ್ಣಬಾಣಗಳು ನಿನ್ನ ಪ್ರಾಣಕ್ಕೇನೂ ಅಪಾಯವನ್ನು ತಂದಿಲ್ಲವಷ್ಟೆ?" ಎಂದು ಕೇಳಿದನು. ಈ ಮಾತನ್ನು

ಕೇಳಿ ಋಕ್ಷರಾಜನಾದ ಜಾಂಬವಂತನು, ಬಹಳ ಶ್ರಮದಿಂದ ಅವನಿಗೆ ಪ್ರತ್ಯುತ್ತರವನ್ನು ಹೇಳತೊಡಗಿ "ಎಲೈ ರಾಕ್ಷಸೋತ್ತಮನೆ! ಎಲೈ ಮಹಾವೀರನೆ! ನಿನ್ನ ಕಂಠಸ್ವರದಿಂದ ನೀನು ಯಾರೆಂಬುದನ್ನು ಕಂಡುಕೊಂಡೆನು. ತೀಕ್ಷ್ಣಬಾಣಗಳು ನನ್ನ ಕಣ್ಣಿನಲ್ಲಿ ನಾಟಿರುವುದರಿಂದ ನಿನ್ನನ್ನು ನೋಡುವುದಕ್ಕೂ ನನಗೆ ಸಾಧ್ಯವಿಲ್ಲ! ವಿಭೀಷಣಾ! ಯಾವನಿಂದ ಆ ವಾಯುದೇವನೂ, ಆ ಅಂಜನಾದೇವಿಯೂ, ಸುಪುತ್ರವಂತರೆಂಬ ಕೀರ್ತಿಯನ್ನು ಪಡೆದರೋ, ಆ ವಾನರೋತ್ತಮನಾದ ಹನುಮಂತನ ಪ್ರಾಣಗಳಿಗೆ ಏನೂ ಅಪಾಯವಿಲ್ಲವಷ್ಟೆ?" ಎಂದನು. ಇದನ್ನು ಕೇಳಿ ವಿಭೀಷಣನು, ಅವನ ಮಾತಿಗೆ ಆಶ್ಚರ್ಯಗೊಂಡು, "ಎಲೈ ಪೂಜ್ಯನೆ! ಇದೇನು? ಮೊದಲು ಆ ರಾಮಲಕ್ಷ್ಮಣರ ಯೋಗಕ್ಷೇಮವನ್ನೂ ಕೇಳದೆ, ಆಂಜನೇಯನ ಕ್ಷೇಮಲಾಭವನ್ನು ಕೇಳುವುದಕ್ಕೆ ಕಾರಣವೇನು? ಅಯ್ಯಾ! ಈಗ ನೀನು ವಾಯುಪುತ್ರನಾದ ಆ ಹನುಮಂತನಲ್ಲಿ ತೋರಿಸುತ್ತಿರುವ ಈ ವಾತ್ಸಲ್ಯಾತಿಶಯವನ್ನು ನೋಡಿದರೆ, ನಿನ್ನ ಪ್ರಭುವಾದ ಸುಗ್ರೀವನಲ್ಲಿಯಾಗಲಿ, ಆ ರಾಮನಲ್ಲಿಯಾಗಲಿ ನಿನಗೆ ಅಷ್ಟೊಂದು ಪ್ರೀತಿಯಿಲ್ಲವೆಂದು ತೋರುತ್ತದೆ. ಇದೇ ಪ್ರೀತಿಯನ್ನು ಅವರಲ್ಲಿ ತೋರಿಸಲಿಲ್ಲವೇಕೆ?" ಎಂದನು. ಅದಕ್ಕಾ ಜಾಂಬವಂತನು, "ವಿಭೀಷಣಾ! ಅವರೆಲ್ಲರೂ ಬಿಟ್ಟು ಆ ವಾಯುಪುತ್ರನನ್ನೇ ಕೇಳುವುದಕ್ಕೆ ಕಾರಣವನ್ನು ಹೇಳುವೆನು ಕೇಳು! ಆ ಮಹಾತ್ಮನೊಬ್ಬನು ಮಾತ್ರ ಬದುಕಿದ್ದರೆ, ಇತರ ಸೈನ್ಯವೆಲ್ಲವೂ ಈಗ ವಿಶೇಷವಾಗಿ ಹತವಾಗಿದ್ದರೂ ಎಲ್ಲವೂ ಬದುಕಿದಂತೆಯೇ ಹೊರತು ಬೇರೆಯಲ್ಲ. ಆ ಹನುಮಂತನೊಬ್ಬನು ಹತನಾಗಿದ್ದ ಪಕ್ಷದಲ್ಲಿ ನಾವೆಲ್ಲರೂ ಬದುಕಿದರೂ ಮೃತಪ್ರಾಯರೆಂಬುದರಲ್ಲಿ ಸಂದೇಹವಿಲ್ಲ. ಅಯ್ಯಾ! ವೀರ್ಯದಲ್ಲಿ ಅಗ್ನಿಗೆ ಸಮಾನನಾಗಿಯೂ, ಬಲದಲ್ಲಿ ವಾಯುವಿಗೆಣೆಯಾಗಿಯೂ ಇರುವ ಆ ಹನುಮಂತನು ಜೀವಿಸಿದ್ದರೆ ಮಾತ್ರವೇ ನಮ್ಮೆಲ್ಲರಿಗೂ ಬದುಕುವ ಆಸೆಯುಂಟು" ಎಂದನು. ಆಗ ವಾಯುಪುತ್ರನಾದ ಹನುಮಂತನು ಜಾಂಬವಂತನ ಈ ಮಾತನ್ನು ಕೇಳಿ ತಟ್ಟನೆ ಮುಂದೆ ಬಂದು, ವೃದ್ಧನಾದ ಆ ಜಾಂಬವಂತನ ಪಾದಗಳನ್ನು ಹಿಡಿದು ಶಾಸ್ತ್ರೋಕ್ತವಾಗಿ ಹೆಸರನ್ನು ಹೇಳಿ ಅಭಿವಾದನ ಮಾಡಿದನು. ಆಗ ಜಾಂಬ

ಮಂತನು ಬಾಣಬಾಧೆಯಿಂದ ಪರವಶವಾದ ಇಂದ್ರಿಯವುಳ್ಳವನಾಗಿದ್ದರೂ, ಹನುಮಂತನು ತನ್ನ ನಾಮೋಚ್ಚಾರಣಪೂರ್ವಕವಾಗಿ ನಮಸ್ಕರಿಸಿದಾಗ ಅವನ ಧ್ವನಿಯನ್ನು ಕೇಳಿ ಆಗಲೇ ತನಗೆ ಪುನರ್ಜನ್ಮವಾದಂತೆ ಭಾವಿಸಿ ಕೊಂಡನು. ಆಮೇಲೆ ಅವನು ಹನುಮಂತನನ್ನು ಕುರಿತು, "ಎಲೆ ವಾನರ ಸಿಂಹನೆ! ಇಲ್ಲಿ ಬಾ! ನೀನೇ ಈ ಸಮಸ್ತ ವಾನರರನ್ನೂ ರಕ್ಷಿಸ ಬೇಕು. ಈ ಕಾರ್ಯವು ನಿನ್ನಿಂದಲ್ಲದೆ ಬೇರೊಬ್ಬರಿಂದ ಸಾಧ್ಯವಲ್ಲ! ನಿನಗೆ ಇವರಲ್ಲಿ ವಿಶೇಷ ಪ್ರೀತಿಯೂ ಇರುವುದರಿಂದ ನಿನ್ನಂಥವನು ಪರಾ ಕ್ರಮವನ್ನು ತೋರಿಸುವುದಕ್ಕೆ ಇದೇ ತಕ್ಕ ಕಾಲವು. ಈ ಕಾಲದಲ್ಲಿ ಬೇರೊಬ್ಬನು ಇದಕ್ಕೆ ಸಮರ್ಥನೆಂದು ನನಗೆ ತೋರಲಿಲ್ಲ. ಈ ಸಮಸ್ತ ವಾನರ ಭಲ್ಲೂಕ ಸೈನ್ಯಗಳಿಗೂ ಈಗ ನೀನೇ ಕ್ಷೇಮವನ್ನುಂಟುಮಾಡ ಬೇಕು. ಇದಕ್ಕಾಗಿ ನೀನು ಮಾಡಬೇಕಾದ ಕಾರ್ಯವೇನೆಂದು ಕೇಳು ವೆಯಾ? ಈಗಲೇ ನೀನು ಸಮುದ್ರವನ್ನು ಹಾರಿ ಅಲ್ಲಿಂದ ಬಹಳ ದೂರ ಹೋಗಿ ಪರ್ವತೋತ್ತಮವಾದ ಹಿಮವತ್ಪರ್ವತವನ್ನು ಸೇರಬೇಕು. ಅಲ್ಲಿಂದಾಚೆಗೆ ಮಹೋನ್ನತವಾಗಿ ಸುವರ್ಣಮಯವಾದ ಋಷಭವೆಂಬ ಪರ್ವತವೂ, ಕೈಲಾಸಶಿಖರವೂ ನಿನಗೆ ಗೋಚರಿಸುವುವು. ಆ ಎರಡು ಪರ್ವತಗಳ ನಡುವೆ ಎಣೆಯಿಲ್ಲದ ಕಾಂತಿಯಿಂದ ಜ್ವಲಿಸುವ ಓಷಧಿ ಪರ್ವತವೊಂದುಂಟು. ಅದರಲ್ಲಿ ಅನೇಕ ದಿವ್ಯೌಷಧಿಗಳು ತುಂಬಿರುವುವು. ಆ ಪರ್ವತಶಿಖರದಲ್ಲಿ ಕಾಂತಿಯಿಂದ ಹತ್ತು ದಿಕ್ಕುಗಳನ್ನೂ ಬೆಳಗುತ್ತಿ ರುವ ನಾಲ್ಕು ದಿವ್ಯೌಷಧಿಗಳನ್ನು ನೀನು ನೋಡಬಹುದು. ಆ ನಾಲ್ಕು ದಿವ್ಯೌಷಧಿಗಳಿಗೂ, ಕ್ರಮವಾಗಿ * ಮೃತಸಂಜೀವಿನಿ, ವಿಶಲ್ಯಕರಣಿ, ಸಾವರ್ಣ್ಯಕರಣಿ, ಸಂಧಾನಕರಣಿ ಎಂದು ಹೆಸರು. ನೀನು ಶೀಘ್ರ ದಲ್ಲಿಯೇ ಹೋಗಿ ಆ ನಾಲ್ಕು ಮೂಲಿಕೆಗಳನ್ನೂ ಕಿತ್ತು ತಂದು, ಅವು

* ಸತ್ತವರನ್ನು ಬದುಕಿಸುವುದು ಮೃತಸಂಜೀವಿನಿ. ಪ್ರಾಣವುಂಟಾದ ಮೇಲೆ ದೇಹದಲ್ಲಿ ನಾಟಿದ ಅಲಗುಗಳನ್ನು ಕಿತ್ತು ನೋವಾರಿಸತಕ್ಕುದು ವಿಶಲ್ಯಕರಣಿ. ಗಾಯದಲ್ಲಿ ಕಿತ್ತುಹೋದ ಚರ್ಮವನ್ನು ಕೂಡಿಸತಕ್ಕುದು ಸಂಧಾನಕರಣಿ. ಗಾಯ ದಿಂದುಂಟಾದ ವಿವರ್ಣತೆಯನ್ನು ಹೋಗಲಾಡಿಸಿ ಇತರ ದೇಹಭಾಗದೊಡನೆ ಸಮಾನ ವರ್ಣವನ್ನುಂಟುಮಾಡತಕ್ಕುದು ಸಾವರ್ಣ್ಯಕರಣಿ.

ಗಳಿಂದ ಈ ಸಮಸ್ತ ವಾನರರನ್ನೂ ಬದುಕಿಸಬೇಕು" ಎಂದನು. ಈ ಮಾತನ್ನು ಕೇಳಿದೊಡನೆ ಆಂಜನೇಯನು ಜಲಪ್ರವಾಹದಿಂದುಕ್ಕಿಬರುವ ಸಮುದ್ರದಂತೆ ಬಲಾತಿಶಯದಿಂದುಬ್ಬುತ್ತ, ಅಸಾಧಾರಣ ಶಕ್ತಿಯನ್ನು ತಂದುಕೊಂಡು, ಆಗಲೇ ಅಲ್ಲಿಂದ ತ್ರಿಕೂಟಶಿಖರಕ್ಕೆ ಹಾರಿ, ಅದನ್ನು ತನ್ನ ಪದಘಾತದಿಂದ ನಡುಗಿಸುತ್ತ ಬೇರೊಂದು ಪರ್ವತದಂತೆ ಕಾಣು ತ್ತಿದ್ದನು. ಹನುಮಂತನ ಕಾಲಿನ ತುಳಿತಕ್ಕೆ ಆ ಪರ್ವತವೇ ಕುಗ್ಗಿದಂ ತಾಗಿ ಅವನ ಭಾರವನ್ನು ತಡೆಯಲಾರದೆ ಹೋಯಿತು. ಆ ಪರ್ವತದ ಮೇಲಿದ್ದ ಅನೇಕ ವೃಕ್ಷಗಳೂ, ಶಿಲೆಗಳೂ ಮುರಿದು, ಇವನ ತೊಡೆಯ ವೇಗದಿಂದ ಒಂದಕ್ಕೊಂದು ತಾಡಿಸಿ, ಬೆಂಕಿಯ ಕಿಡಿಗಳನ್ನು ಕಕ್ಕುತ್ತಿ ದ್ದುವು. ಅಲ್ಲಲ್ಲಿ ಅನೇಕ ಶಿಖರಗಳು ಪುಡಿಪುಡಿಯಾಗಿ ಬಿದ್ದುವು. ಹೀಗೆ ಚೂರ್ಣೀಭೂತಗಳಾದ ಶಿಲೆಗಳಿಂದಲೂ, ವೃಕ್ಷಗಳಿಂದಲೂ ತುಂಬಿದ ಆ ಪರ್ವತವು, ಹನುಮಂತನ ಕಾಲಿನ ತುಳಿತಕ್ಕೆ ಆಮೂಲಾಗ್ರವಾಗಿ ನಡುಗು ತ್ತಿರಲು, ಆ ಪರ್ವತದ ಕೆಳಗೆ ಯುದ್ಧರಂಗದಲ್ಲಿ ಸತ್ತುಳಿದ ವಾನರ ರೆಲ್ಲರೂ ನಿಲ್ಲಲಾರದೆ ಕೆಳಗೆ ಬಿದ್ದರು. ಮತ್ತು ಇತ್ತಲಾಗಿ ಆ ಪರ್ವತಕ್ಕೆ ಸಮೀಪದಲ್ಲಿದ್ದ ಲಂಕಾನಗರದಲ್ಲಿಯೂ ಕೂಡ ಹೆಬ್ಬಾಗಿಲುಗಳೆಲ್ಲವೂ ನಡುಗಿ, ಗೃಹಗೋಪುರಗಳೆಲ್ಲವೂ ಮುರಿದು, ಆ ರಾತ್ರಿಯಲ್ಲಿ ಆ ಪಟ್ಟ ಣವೇ ಭಯದಿಂದ ಕುಣಿದಾಡುವಂತೆ ತೋರಿತು. ಪರ್ವತಾಕಾರವುಳ್ಳ ಹನುಮಂತನು ತನ್ನ ಕಾಲಿನ ತುಳಿತದಿಂದ ಹೀಗೆ ತ್ರಿಕೂಟಪರ್ವತವನ್ನು ಪೀಡಿಸಿದಾಗ, ಸಮುದ್ರಾಂತವಾದ ಸಮಸ್ತ ಭೂಮಿಯೂ ಚಲನೆಹೊಂದಿ ದಂತಾಯಿತು. ಆಮೇಲೆ ಹನುಮಂತನು ಅಲ್ಲಿಂದ ಹಾರಿ, ಮೇರುಮಂದರ ಗಳಿಗೆ ಸಮಾನವಾಗಿಯೂ, ಅನೇಕ ಗಿರಿನದಿಗಳಿಂದ ತುಂಬಿದುದಾಗಿಯೂ ಇದ್ದ ಲಂಕಾಮಲಯ ಪರ್ವತವನ್ನು ಸೇರಿದನು. ಆ ಪರ್ವತದಲ್ಲಿಯೇ ಎಲ್ಲಿ ನೋಡಿದರೂ ಬಗೆಬಗೆಯ ವೃಕ್ಷಗಳೂ, ಅರಳಿದ ತಾವರೆನೈದಿಲೆ ಗಳೂ ತುಂಬಿರುವುವು. ಯಾವಕಡೆಯಲ್ಲಿ ನೋಡಿದರೂ, ದೇವತೆಗಳೂ, ಗಂಧರ್ವರೂ, ವಿದ್ಯಾಧರರೂ, ಮಹರ್ಷಿಗಳೂ, ಅಪ್ಸರಸ್ಸುಗಳೂ, ವಿಹರಿ ಸುತ್ತಿರುವರು. ಆ ಪರ್ವತವು ಬುಡದಿಂದ ಕೊನೆಯವರೆಗೆ ಅರುವತ್ತು ಯೋಜನದ ಎತ್ತರವುಳ್ಳುದಾಗಿ, ನಾನಾ ಜಾತಿಯ ಮೃಗಗಳಿಂದಲೂ,

ಚಿತ್ರವಿಚಿತ್ರವಾದ ಪರ್ವತಗುಹೆಗಳಿಂದಲೂ ಶೋಭಿಸುತ್ತಿರುವುದು. ಹೀಗೆ ಶೋಭಾತಿಶಯದಿಂದ ಕೂಡಿದ ಆ ಪರ್ವತವನ್ನು ಹನುಮಂತನು ತನ್ನ ಕಾಲಿನಿಂದ ಮೆಟ್ಟಿದೊಡನೆ, ಯಕ್ಷಗಂಧರ್ವಕಿನ್ನರಾದಿಗಳೆಲ್ಲರೂ ಭಯದಿಂದ ತತ್ತಳಿಸಿದರು. ಆ ಪರ್ವತವನ್ನು ಸೇರಿದೊಡನೆ ಹನುಮಂತನು ಅದನ್ನು ತನ್ನ ಕಾಲಿನಿಂದ ಜಗ್ಗಿಸಿ, ಸಮೀಪದ ಲಂಕೆಯಲ್ಲಿದ್ದ ರಾಕ್ಷಸರೆಲ್ಲರಿಗೂ ಭಯವನ್ನು ಹುಟ್ಟಿಸುವುದಕ್ಕಾಗಿ ಮಹಾಮೇಘದಂತೆ ತನ್ನ ದೇಹವನ್ನು ದೊಡ್ಡದಾಗಿ ಬೆಳೆಸಿ, ಬಡಬಾಮುಖದಂತೆ ಅಗಲವಾಗಿ ಬಾಯನ್ನು ತೆರೆದು ಆರ್ಭಟಿಸಿ ಕೂಗಿದನು. ಈ ಮಹಾದ್ಭುತವಾದ ಧ್ವನಿಯನ್ನು ಕೇಳಿದೊಡನೆ ಲಂಕೆಯಲ್ಲಿದ್ದ ಸಮಸ್ತ ರಾಕ್ಷಸರೂ ಭಯದಿಂದ ಬೆಜ್ಜರಗೊಂಡು ಅತ್ತಿತ್ತ ಕದಲಲಾರದೆ ಸ್ತಬ್ಧರಾದರು. ಆಮೇಲೆ ಭಯಂಕರ ಪರಾಕ್ರಮವುಳ್ಳ ಹನುಮಂತನು, ಶ್ರೀರಾಮನಿಗಾಗಿ ದುಷ್ಕರಕಾರ್ಯವನ್ನು ಮಾಡಬೇಕೆಂದು ನಿಶ್ಚಯಿಸಿ, ತನ್ನ ಮನಸ್ಸಿನಲ್ಲಿಯೇ ಶ್ರೀರಾಮನ ಪಾದಗಳನ್ನು ಧ್ಯಾನಿಸಿ, ಅಲ್ಲಿಂದ ಮುಂದೆ ಹಾರುವುದಕ್ಕೆ ಸಿದ್ಧನಾದನು. ಪ್ರಚಂಡವೇಗವುಳ್ಳ ಆ ಹನುಮಂತನು ಹಾರುವುದಕ್ಕಾಗಿ ಸರ್ಪದಂತಿದ್ದ ತನ್ನ ಬಾಲವನ್ನು ಮೇಲಕ್ಕೆತ್ತಿ ನಡುವನ್ನು ಬಗ್ಗಿಸಿ, ಕಿವಿಯನ್ನು ಕುಗ್ಗಿಸಿ, ಬಡಬಾಮುಖದಂತಿದ್ದ ಬಾಯನ್ನು ತೆರೆದು ಆಕಾಶಕ್ಕೆ ನೆಗೆದನು. ಇವನು ಆ ಪರ್ವತದಿಂದ ಮೇಲೆ ಹಾರುವಾಗ ತನ್ನ ತೋಳುಗಳ ಮತ್ತು ತೊಡೆಗಳ ಗಾಳಿಯ ವೇಗದಿಂದ ಅಲ್ಲಿನ ಮರಗಳನ್ನೂ, ಆ ಬೆಟ್ಟದ ಕಾಡುಗಳಲ್ಲಿ ವಾಸಮಾಡುವ ಕಪಿಗಳನ್ನೂ ತನ್ನೊಡನೆ ಎಳೆದುಕೊಂಡು ಹೋಗುವಂತೆ ಕಾಣುತ್ತಿದ್ದನು. ಇವೆಲ್ಲವೂ ವೇಗದಿಂದ ಬಹುದೂರಕ್ಕೆ ಹೋಗಿ, ಕೊನೆಕೊನೆಗೆ ಆ ವೇಗವಡಗಿ, ಸಮುದ್ರಜಲದಲ್ಲಿ ಬಿದ್ದುವು. ಮೇಲೆ ಹಾರುವಾಗ ಹನುಮಂತನು ಸರ್ಪಶರೀರಗಳಂತಿದ್ದ ತನ್ನ ತೋಳುಗಳೆರಡನ್ನೂ ಚಾಚಿ ದಿಕ್ಕುಗಳೆಲ್ಲವನ್ನೂ ಆಲಿಂಗಿಸುವಂತೆ ಕಾಣುತ್ತ, ಮೇರುಪರ್ವತದಿಕ್ಕಿನ ಮಾರ್ಗವಾಗಿ ಹಿಮವಂತದ ಕಡೆಗೆ ಹೋದನು. ಇವನು ಮೇಲೆ ಹಾರುವಾಗ ಕೆಳಗೆ ಸಮುದ್ರದಲ್ಲಿ ಅಲೆಗಳು ವೇಗದಿಂದ ತೂಗಾಡುವುದನ್ನೂ, ತನ್ನ ವೇಗಕ್ಕೆ ಸಮಸ್ತ ಜಲಜಂತುಗಳೂ ಬಹಳವಾಗಿ ಭಯದಿಂದ ತತ್ತಳಿಸಿ ಸುಳಿದಾಡುವುದನ್ನೂ ನೋಡುತ್ತ, ಶ್ರೀವಿಷ್ಣು

ವಿನ ಕರಾಗ್ರದಿಂದ ಪ್ರಯೋಗಿಸಲ್ಪಟ್ಟ ಸುದರ್ಶನ ಚಕ್ರದಂತೆ ಅತಿವೇಗದಿಂದ ಬಂದನು. ವಾಯುವೇಗವುಳ್ಳ ಆ ಹನುಮಂತನು ತಾನು ಮೇಲೆ ಹಾರುವಾಗಲೇ ಅಲ್ಲಲ್ಲಿನ ಪರ್ವತಗಳನ್ನೂ, ವೃಕ್ಷಗಳನ್ನೂ, ಕೊಳಗಳನ್ನೂ, ನದಿಗಳನ್ನೂ, ಕೆರೆಗಳನ್ನೂ, ದೊಡ್ಡ ದೊಡ್ಡ ಪಟ್ಟಣಗಳನ್ನೂ, ಸಮೃದ್ಧಗಳಾದ ದೇಶಗಳನ್ನೂ ನೋಡುತ್ತ ಬಂದನು. ಆಕಾಶದಲ್ಲಿ ಹಾರಿ ಬರುವಾಗಲೂ ಆತನಿಗೆ ಸ್ವಲ್ಪವಾದರೂ ಶ್ರಮವು ತೋರಲಿಲ್ಲ. ಇವನು ವಾಯುವಿನಂತೆ ವೇಗದಿಂದ ಬರುವಾಗ, ಇವನ ಗಮನವೇಗದಿಂದುಂಟಾದ ಶಬ್ದವು ಸಮಸ್ತ ದಿಕ್ಕನ್ನೂ ತುಂಬಿತು. ಹೀಗೆ ಹನುಮಂತನು, ಜಾಂಬವಂತನು ತನಗೆ ಹೇಳಿದ ಗುರುತುಗಳನ್ನು ಮನಸ್ಸಿನಲ್ಲಿ ನೆನಪಿಟ್ಟುಕೊಂಡು, ವಾಯುವೇಗದಿಂದ ಬಂದು ಮುಂದೆ ಹಿಮವತ್ಪರ್ವತವನ್ನು ಕಂಡನು. ಬಗೆಬಗೆಯ ಚಿಲುಮೆಗಳಿಂದಲೂ, ಗಿರಿನದಿಗಳಿಂದಲೂ, ಗುಹೆಗಳಿಂದಲೂ, ಬಿಳೀ ಮೇಘಗಳಂತೆ ಅಂದವಾದ ಶಿಖರಗಳಿಂದಲೂ, ಬಗೆಬಗೆಯ ವೃಕ್ಷಗಳಿಂದಲೂ ಶೋಭಿತವಾದ ಆ ಹಿಮವತ್ಪರ್ವತಕ್ಕೆ ಬಂದು ಸೇರಿದನು. ಬಹಳ ಎತ್ತರವಾಗಿ ಭಯಂಕರವಾಗಿರುವ ಶಿಖರಗಳುಳ್ಳ ಆ ಪರ್ವತವನ್ನು ಸೇರಿದೊಡನೆ, ಹನುಮಂತನು ಅಲ್ಲಿ ದೇವಶ್ರೇಷ್ಠರಿಂದಲೂ, ಮಹರ್ಷಿಗಳಿಂದಲೂ ಸೇವಿತಗಳಾದ ಅನೇಕ ಪುಣ್ಯಾಶ್ರಮಗಳನ್ನು ನೋಡುತ್ತ ಬಂದನು. ಮತ್ತು ಅಲ್ಲಿ ಬ್ರಹ್ಮನಿಗೆ ನಿವಾಸಸ್ಥಾನವಾದ ಬ್ರಹ್ಮಕೋಶವೆಂಬ ಸ್ಥಳವನ್ನೂ, ಇಂದ್ರನು ತಪಸ್ಸು ಮಾಡಿದ ಸ್ಥಳವನ್ನೂ, ರುದ್ರನು ಲೀಲಾರ್ಥವಾಗಿ ಬಾಣಪ್ರಯೋಗಮಾಡಿದ ಸ್ಥಾನವನ್ನೂ, ಹಯಗ್ರೀವಾರಾಧನ ಕ್ಷೇತ್ರವನ್ನೂ, ಬ್ರಹ್ಮಕಪಾಲ ಸ್ಥಳವನ್ನೂ, ಅಲ್ಲಲ್ಲಿ ವಿಶ್ರಮಾರ್ಥವಾಗಿ ನಿಂತಿದ್ದ ಗ್ರಾಮಣಿ ಮೊದಲಾದ ಸೂರ್ಯಕಿಂಕರರನ್ನೂ ನೋಡಿದನು. ಮತ್ತು ಅಲ್ಲಿ ಇಂದ್ರನಿಗೆ ಬ್ರಹ್ಮದೇವನು ವಜ್ರಾಯುಧವನ್ನು ಕೊಟ್ಟ ಸ್ಥಾನವನ್ನೂ, ಸೂರ್ಯತೇಜಸ್ಸುಳ್ಳ ಕುಬೇರ ಸ್ಥಾನವನ್ನೂ, ವಿಶ್ವಕರ್ಮನು ಸೂರ್ಯಪತ್ನಿಯಾದ ಛಾಯಾದೇವಿಯಲ್ಲಿ ತನಗಿರುವ ಪ್ರೀತಿಯಿಂದ, ಅವಳಿಗೆ ಸೂರ್ಯತಾಪವನ್ನು ತಗ್ಗಿಸುವುದಕ್ಕಾಗಿ, ಸೂರ್ಯಬಿಂಬವನ್ನು ಸಾಣೆಹಿಡಿಯುವುದಕ್ಕೆ ನಿಯಮಿಸಿಕೊಟ್ಟ ಸ್ಥಾನವನ್ನೂ, ದೇವಗಣಗಳ ಸಂದರ್ಶನಕ್ಕಾಗಿ ಬ್ರಹ್ಮನಿಗೆ ಏರ್ಪಟ್ಟಿರುವ ಸಿಂಹಾಸನ

ಸ್ಥಾನವನ್ನೂ, ಶಿವಧನುಸ್ಥಾನವನ್ನೂ, ಭೂಮಿಯಿಂದ ಪಾತಾಳಕ್ಕೆ ಪ್ರವೇಶಿಸುವ ರಂಧ್ರವನ್ನೂ ನೋಡಿದನು. ಮತ್ತು ಅಲ್ಲಿ ಹನುಮಂತನು ಉತ್ತಮವಾದ ಕೈಲಾಸವನ್ನೂ, ಹಿಮವಚ್ಛಿಲೆಯೆಂಬ ಕಲ್ಲುಬಂಡೆಯನ್ನೂ, ಋಷಭವೆಂಬ ಓಷಧಿಪರ್ವತವನ್ನೂ, ಮೇರುವೆಂಬ ಸುವರ್ಣ ಪರ್ವತವನ್ನೂ, ರಾತ್ರಿಯಲ್ಲಿ ಜ್ವಲಿಸುವ ಜ್ಯೋತಿರ್ಲತೆಗಳೇ ಮೊದಲಾದ ಸರ್ವವಿಧ ಮೂಲಿಕೆಗಳಿಂದಲೂ, ಮೃತಸಂಜೀವಿನಿ ಮೊದಲಾದ ಸರ್ವೌಷಧಿಗಳಿಂದಲೂ ತುಂಬಿದ ಪರ್ವತೋತ್ತಮವನ್ನೂ ಕಂಡನು. ಅಗ್ನಿತೇಜಸ್ಸಿನಿಂದ ಹೊಳೆಯುತ್ತಿರುವ ಆ ಪರ್ವತವನ್ನು ಕಂಡೊಡನೆ, ವಾಯುಪುತ್ರನಾದ ಹನುಮಂತನಿಗೆ ಅತ್ಯಾಶ್ಚರ್ಯವುಂಟಾಯಿತು. ಅಲ್ಲಿ ಜಾಂಬವಂತನು ಹೇಳಿದ ಮೂಲಿಕೆಗಳನ್ನು ಹುಡುಕುತ್ತ ಆ ಪರ್ವತದ ಮೇಲೆ ಅಲ್ಲಲ್ಲಿ ಸುತ್ತಿ ಬರುತ್ತಿದ್ದನು. ಆ ಪರ್ವತದಲ್ಲಿದ್ದ ಮಹೌಷಧಿಗಳೆಲ್ಲವೂ, ಹನುಮಂತನು ತಮ್ಮನ್ನು ಅಲ್ಲಿಂದ ಸಾಗಿಸುವುದಕ್ಕಾಗಿ ಬಂದಿರುವುದನ್ನು ತಿಳಿದು, ಅಲ್ಲಲ್ಲಿಯೇ ಕಣ್ಮರೆಯಾದುವು. ಆ ಮಹೌಷಧಿಗಳು ತನ್ನ ಕಣ್ಣಿಗೆ ಗೋಚರಿಸದಿದ್ದುದನ್ನು ಕಂಡು ಹನುಮಂತನಿಗೆ ಕೋಪವುಂಟಾಯಿತು. ಅವನು ಆ ಕೋಪವನ್ನು ತಡೆಯಲಾರದೆ ಗರ್ಜಿಸಿ ಕೂಗಿ, ಕಣ್ಣುಗಳಿಂದ ಕಿಡಿಗಳನ್ನು ಕೆದರುತ್ತ, ಆ ಪರ್ವತವನ್ನು ಕುರಿತು “ಎಲೈ ಪರ್ವತರಾಜನೆ! ಓಹೋ! ಇದೇನು? ಆ ರಾಮನಲ್ಲಿಯೂ ನಿನಗೆ ದಯೆಯಿಲ್ಲವೆ? ಈ ನಿಶ್ಚಯುವೇ ನಿನ್ನ ಮನಸ್ಸಿನಲ್ಲಿ ದೃಢವಾಗಿರುವುದೇನು? ಈಗಲೂ ನಿಜವನ್ನು ಹೇಳು! ಹಾಗಿದ್ದ ಪಕ್ಷದಲ್ಲಿ ಈಗ ನಾನು ನನ್ನ ಬಾಹುಬಲದಿಂದ ನಿನ್ನನ್ನು ಪುಡಿಮಾಡಿ ಕೆಡಹಿ, ಧೂಳಿಬ್ಬಿಸುವ ರೀತಿಯನ್ನಾದರೂ ನೋಡು!” ಎಂದನು. ಆಮೇಲೆ ಅವನು ವಿವಿಧ ವೃಕ್ಷಗಳಿಂದಲೂ, ಆನೆಗಳಿಂದಲೂ, ಚಿನ್ನದ ಗಣಿಗಳಿಂದಲೂ, ಸಾವಿರಾರು ಗೈರಿಕಾದಿ ಧಾತುಗಳಿಂದಲೂ, ಓಷಧಿಗಳಿಂದಲೂ ತುಂಬಿದ ಆ ಪರ್ವತದ ಶಿರಸ್ಸನ್ನು ಹಿಡಿದು, ಅದರ ಸಣ್ಣ ಸಣ್ಣ ಶಿಖರಗಳೆಲ್ಲವೂ ಪುಡಿಪುಡಿಯಾಗಿ ಬೀಳುವಂತೆ ವೇಗದಿಂದ ಅದನ್ನಾಡಿಸಿದನು. ಮತ್ತು ಆಗ ಹನುಮಂತನು, ದೇವತೆಗಳಿಗೂ, ಇನ್ನೂ ಉಳಿದ ಸಮಸ್ತ ಲೋಕಗಳಿಗೂ ಭಯವು ಹುಟ್ಟುವಂತೆ ಆ ಪರ್ವತವನ್ನು ಕಿತ್ತುಕೊಂಡು ಅಂತ

ರಿಕ್ಷಕ್ಕೆ ಹಾರಿ, ಅಲ್ಲಿ ದೇವತೆಗಳಿಂದ ಸ್ತುತಿಸಲ್ಪಡುತ್ತ ಗರುಡನಂತೆ ಮಹಾ ವೇಗದಿಂದ ಬರುತ್ತಿದ್ದನು. ಹೀಗೆ ಸೂರ್ಯತೇಜಸ್ಸುಳ್ಳ ಹನುಮಂತನು, ಸೂರ್ಯನಂತೆ ಕಾಂತಿವಿಶಿಷ್ಟವಾದ ಆ ಪರ್ವತವನ್ನೆತ್ತಿಕೊಂಡು ಸೂರ್ಯನ ಸಮೀಪದಲ್ಲಿ ಎರಡನೆಯ ಸೂರ್ಯನಂತೆ ಕಾಣುತ್ತ, ಸೂರ್ಯಪಥದ ಲ್ಲಿಯೇ ಹೊರಟು ಬಂದನು. ಪರ್ವತಾಕಾರವುಳ್ಳ ಆ ವಾಯುಪುತ್ರನು ಆ ಪರ್ವತವನ್ನೆತ್ತಿಕೊಂಡು ಬರುವಾಗ, ಆಕಾಶದಲ್ಲಿ ಸಹಸ್ರಧಾರೆಗಳಿಂದ ಕೂಡಿ ಸುತ್ತಲೂ ಅಗ್ನಿಜ್ವಾಲೆಯನ್ನು ಕೆದರುತ್ತಿರುವ ಸುದರ್ಶನವೆಂಬ ಚಕ್ರವನ್ನು ಕೈಯಲ್ಲಿ ಹಿಡಿದ ಮಹಾವಿಷ್ಣುವನ್ನು ಹೋಲುತ್ತಿದ್ದನು. ಇವನು ದೂರದಲ್ಲಿ ಬರುವಾಗಲೇ ಇತ್ತಲಾಗಿ ರಣರಂಗದಲ್ಲಿ ಬಿದ್ದಿದ್ದ ಕೆಲವು ವಾನರರು ಆ ಓಷಧಿಗಂಧವನ್ನಾಘ್ರಾಣಿಸಿದುದರಿಂದ ಜೀವಿತರಾಗಿ ಸಂತೋಷದಿಂದ ಕೂಗಿ ಕೋಲಾಹಲ ಮಾಡಿದರು. ಇದನ್ನು ಕೇಳಿ ಹನುಮಂತನು ಇವರಿಗಿಂತಲೂ ಗಟ್ಟಿಯಾಗಿ ಸಿಂಹನಾದಮಾಡಿ, ಪ್ರತಿ ಧ್ವನಿಯನ್ನು ಕೊಟ್ಟನು. ಇವರಿಬ್ಬರ ಸಿಂಹನಾದಗಳನ್ನು ಕೇಳಿ ಲಂಕಾ ವಾಸಿಗಳಾದ ರಾಕ್ಷಸರೆಲ್ಲರೂ ಭಯಗೊಂಡು ಮತ್ತಷ್ಟು ಗಟ್ಟಿಯಾಗಿ ಅರಚಿದರು. ಇಷ್ಟರಲ್ಲಿಯೇ ಮಹಾತ್ಮನಾದ ಹನುಮಂತನು ವೇಗದಿಂದ ಬಂದು ತ್ರಿಕೂಟಾಗ್ರದಲ್ಲಿದ್ದ ವಾನರಸೈನ್ಯದ ಮಧ್ಯದಲ್ಲಿಳಿದನು. ಮೊದಲು ಅಲ್ಲಿದ್ದ ವೃದ್ಧವಾನರರಿಗೆ ತಲೆಬಗ್ಗಿ ನಮಸ್ಕರಿಸಿ, ಆಮೇಲೆ ವಿಭೀಷಣನನ್ನು ಆಲಿಂಗಿಸಿಕೊಂಡನು. ಹನುಮಂತನು ಅಲ್ಲಿಗೆ ಬಂದೊಡನೆ, ರಾಮ ಲಕ್ಷ್ಮಣರಿಬ್ಬರಿಗೂ ಆ ಮಹೌಷಧಿಗಳ ಗಂಧವನ್ನಾಘ್ರಾಣಮಾಡಿಸಲು, ಅವರಿಬ್ಬರೂ ಕ್ಷಣಮಾತ್ರದಲ್ಲಿ ಸುಖದಿಂದೆದ್ದರು. ಹಾಗೆಯೇ ಇತರ ವಾನರರೆಲ್ಲರೂ ಆ ಗಂಧವನ್ನಾಘ್ರಾಣಿಸಿ ಸೌಖ್ಯವನ್ನು ಹೊಂದಿದರು. ಇದಕ್ಕೆ ಮೊದಲೇ ಹತರಾಗಿ ಬಿದ್ದಿದ್ದ ವಾನರ ಭಲ್ಲೂಕಸೈನ್ಯಗಳೂ ಕೂಡ ಆ ದಿವ್ಯೌಷಧಗಂಧದಿಂದ ಪ್ರಾಣವನ್ನು ಹೊಂದಿ, ರಾತ್ರಿಯಲ್ಲಿ ಮಲಗಿ ದವರು ಬೆಳಗಾದಮೇಲೆ ಹಾಸಿಗೆಯಿಂದೇಳುವಂತೆ ಮೇಲೆದ್ದು ಸುಖದಿಂದಿ ದ್ದರು. ಲಂಕೆಯಲ್ಲಿ ವಾನರರ ರಾಕ್ಷಸರ ಯುದ್ಧವು ಆರಂಭವಾದುದು ಮೊದಲು, ವಾನರರಿಂದ ಹತರಾದ ರಾಕ್ಷಸರ ಸಂಖ್ಯೆಯು ಬೇರೆಯವರಿಗೆ ತಿಳಿಯದಾಗಬೇಕೆಂಬುದಕ್ಕಾಗಿ, ರಾವಣಾಜ್ಞೆಯಿಂದ ಆಗಾಗ ಯುದ್ಧದಲ್ಲಿ

ಸತ್ತುಬಿದ್ದ ರಾಕ್ಷಸರು ಆಗಾಗಲೇ ಸಮುದ್ರದಲ್ಲಿ ಹಾಕಲ್ಪಟ್ಟುದರಿಂದ, ಸತ್ತ ರಾಕ್ಷಸನೊಬ್ಬನಾದರೂ ತಿರುಗಿ ಬದುಕುವುದಕ್ಕವಕಾಶವಿಲ್ಲದೆ ಹೋಯಿತು. ಹೀಗೆ ವಾನರರೆಲ್ಲರೂ ಬದುಕಿದ ಮೇಲೆ ಮಹಾ ವೀರ್ಯಶಾಲಿಯಾದ ಹನುಮಂತನು, ಆ ಓಷಧಿ ಪರ್ವತವನ್ನು ತಿರುಗಿ ಹಿಮವತ್ಪರ್ವತದಲ್ಲಿಯೇ ಸೇರಿಸಿ, ವೇಗದಿಂದ ಹಿಂತಿರುಗಿ ಬಂದು ರಾಮನೊಡನೆ ಸೇರಿಕೊಂಡನು.

ಇಲ್ಲಿಗೆ ಎಪ್ಪತ್ತನಾಲ್ಕನೆಯ ಸರ್ಗವು.

ಆ ರಾತ್ರಿಯ ಬೆಳಗಿನ ಜಾವದಲ್ಲಿ ಸುಗ್ರೀವಾಜ್ಞೆಯಿಂದ ವಾನರಯೂಥಪತಿಗಳು ಕೊಳ್ಳಿಗಳನ್ನು ಹಿಡಿದು ಪ್ರಾಕಾರವನ್ನು ದಾಟಿ ಲಂಕೆಗೆ ನುಗ್ಗಿದುದು. ರಾವಣನು ಕೋಪಗೊಂಡು ಕುಂಭಕರ್ಣಪುತ್ರರಾದ ಕುಂಭನಿಕುಂಭರಿಬ್ಬರನ್ನೂ ಯೂಪಾಕ್ಷವಿರೂಪಾಕ್ಷಾದಿಗಳೊಡನೆ ಸೇರಿಸಿ ಯುದ್ಧಕ್ಕೆ ಕಳುಹಿಸಿದುದು. ತುಮುಲಯುದ್ಧವು.

ಆಮೇಲೆ ಮಹಾ ತೇಜಸ್ವಿಯಾದ ಸುಗ್ರೀವನು, ಸಾರಯುಕ್ತವಾದ ಮಾತನ್ನು ರಾಮನಲ್ಲಿ ವಿಜ್ಞಾಪಿಸುವ ನೆಪದಿಂದ ಹನುಮಂತನನ್ನು ಕುರಿತು "ಎಲೆ ವಾಯುಪುತ್ರನೆ! ಈಗ ರಾವಣನು ತನ್ನ ತಮ್ಮನಾದ ಕುಂಭಕರ್ಣನನ್ನೂ, ವೀರರಾದ ಪುತ್ರರನ್ನೂ ಕಳೆದುಕೊಂಡುದರಿಂದ ಮನಸ್ಸಿನಲ್ಲಿ ಬಹಳವಾಗಿ ಕೊರಗುತ್ತ, ಉತ್ಸಾಹತಪ್ಪಿರುವುದರಿಂದ, ನಮ್ಮೊಡನೆ ಸರಿಯಾಗಿ ಯುದ್ಧವನ್ನು ಕೊಡಲಾರನು. ಆದುದರಿಂದ ಈಗ ನಮ್ಮಲ್ಲಿ ಬಲದಲ್ಲಿಯೂ, ವೇಗದಲ್ಲಿಯೂ ಯಾರು ಯಾರು ಪ್ರಸಿದ್ಧಿ ಹೊಂದಿರುವರೋ, ಅವರೆಲ್ಲರೂ ಒಂದಾಗಿ ಸೇರಿ, ಕೊಳ್ಳಿಗಳನ್ನು ಹಿಡಿದು, ಈ ಪ್ರಾಕಾರವನ್ನು ಹಾರಿ ಲಂಕೆಯೊಳಗೆ ಹುಗಬೇಕು. (ಸಿಂಹದಂತೆ ಪರಾಕ್ರಮವುಳ್ಳ ಆ ವಾನರರೆಲ್ಲರೂ, ರಾವಣನ ಅರಮನೆಯನ್ನು ಸುಡುವ ಪ್ರಯತ್ನವನ್ನು ಮಾಡಬೇಕು)" ಎಂದನು. * ಸೂರ್ಯಾಸ್ತಮಯವಾದ

---

* ಇಲ್ಲಿ "ತತೋಽಸ್ತಂಗತ ಆದಿತ್ಯೇ ರೌದ್ರೇ ತಸ್ಮಿನ್ನಿಶಾಮುಖೇ। ಲಂಕಾಮಭಿಮುಖಾಸ್ಸೋಲ್ಕಾಃ" ಎಂದು ಮೂಲವು. ನೋಡಲೇ ವಿಭೀಷಣ ಹನುಮಂತರಿಬ್ಬರೂ

ಮೇಲೆ ಭಯಂಕರವಾದ ಆ ರಾತ್ರಿಯ ಬೆಳಗಿನ ಜಾವದಲ್ಲಿ, * ಕಪಿಗಳೆಲ್ಲರೂ ಸುಗ್ರೀವಾಜ್ಞೆಯಂತೆ ಕೊಳ್ಳಿಗಳನ್ನು ಹಿಡಿದು ಲಂಕೆಯ ಕಡೆಗೆ ಹೋದರು. ಹೀಗೆ ವಾನರಸೇನೆಯೆಲ್ಲವೂ ಕೊಳ್ಳಿಗಳನ್ನು ಹಿಡಿದು ನಾಲ್ಕು ಕಡೆಗಳಿಂದಲೂ ಮೇಲು ಬಿದ್ದು ಬರುತ್ತಿರಲು, ಆ ಲಂಕೆಯ ಗುಲ್ಮಸ್ಥಾನಗಳಲ್ಲಿ ಪುರರಕ್ಷಣೆಗಾಗಿ ನಿಯಮಿಸಲ್ಪಟ್ಟಿದ್ದ ರಾಕ್ಷಸರೆಲ್ಲರೂ, ಭಯಪಟ್ಟು ಪಲಾಯನಮಾಡಿದರು. ಈ ವಾನರರು ಮಹೋತ್ಸಾಹದಿಂದುಬ್ಬುತ್ತ ಪುರದ್ವಾರಗಳಲ್ಲಿಯೂ, ಅಟ್ಟಲೆಗಳಲ್ಲಿಯೂ, ರಾಜಮಾರ್ಗಗಳಲ್ಲಿಯೂ, ಸಣ್ಣಸಣ್ಣ ಸಂದುಗಳಲ್ಲಿಯೂ ನುಗ್ಗಿ, ಅಲ್ಲಲ್ಲಿಗೆ ಬೆಂಕಿಯನ್ನಿಡುತ್ತ ಬಂದರು. ಈ ಬೆಂಕಿಯಿಂದ ರಾಕ್ಷಸರು ವಾಸಮಾಡುತ್ತಿದ್ದ ಸಾವಿರಾರು ಮನೆಗಳು ಸುಟ್ಟು ಬೂದಿಯಾದುವು. ಪರ್ವತಗಳಂತಿದ್ದ ಎಷ್ಟೋ ಉಪ್ಪರಿಗೆಗಳು ಸುಟ್ಟುಬಿದ್ದುವು. ಅಲ್ಲಲ್ಲಿ ಅಗರು ಚಂದನಗಳೂ ಹರಿಚಂದನಗಳೂ ದಗ್ಧವಾಗಿ ಸುವಾಸನೆಯನ್ನು ಹೊರಡಿಸುತ್ತಿದ್ದುವು. ಅಲ್ಲಲ್ಲಿ ರಾಕ್ಷಸ ಗೃಹಗಳಲ್ಲಿ ನುಣುಪಾದ ಮುತ್ತಿನ ಮಣಿಗಳೂ, ಹವಳಗಳೂ, ಪಟ್ಟೆಯ ಮಡಿಗಳೂ, ನಾರುಮಡಿಗಳೂ, ಸುವರ್ಣಾಭರಣಗಳೂ, ಆಯುಧಗಳೂ, ಬಗೆಬಗೆಯ ಕೈಕೆಲಸಗಳಿಂದ ವಿಚಿತ್ರವಾಗಿ ಶೋಭಿಸುತ್ತಿದ್ದ ಬಗೆಬಗೆಯ ಶಾಲುಗಳೂ, ಅಶ್ವಾಲಂಕಾರಗಳೂ, ಪಲ್ಲಣಗಳೂ, ಆನೆಯ ಕಂಠಾಭರಣಗಳೂ, ಗಜಬಂಧನಗಳೂ, ರಥಸಾಮಗ್ರಿಗಳೂ, ರಾಕ್ಷಸಭಟರ ಯುದ್ಧಕವಚಗಳೂ, ಆನೆಕುದುರೆಗಳಿಗೆ ತೊಡಿಸತಕ್ಕ ಉಕ್ಕಿನ ಕವಚಗಳೂ, ಕತ್ತಿ, ಬಿಲ್ಲು, ನಾಣು, ಬಾಣಗಳು, ಮುಂತಾದ

"ಉಲ್ಕಾಹಸ್ತಾ ತದಾ ರಾತ್ರ್ಯಾಂ" ಎಂದು ರಾತ್ರಿಯಲ್ಲಿ ಕೊಳ್ಳಿಗಳನ್ನು ಹಿಡಿದು ಸುತ್ತಿದುದಾಗಿ ಹೇಳಲ್ಪಟ್ಟಿರುವಾಗ, ತಿರುಗಿ ಸೂರ್ಯಾಸ್ತಮಯವನ್ನು ಹೇಳಿದುದು ಹೇಗೆ? ಎಂದರೆ, ಇಲ್ಲಿ ಸೂರ್ಯನು ಅಸ್ತಮಿಸಿದನೆಂದರೆ ಸೂರ್ಯಪ್ರಕಾಶವಿಲ್ಲದಿರುವುದೆಂದೂ, ನಿಶಾಮುಖವೆಂದರೆ ಬೆಳಗಿನಜಾವವೆಂದೂ ಗ್ರಾಹ್ಯವು. ಆಗಿನ ಗಾಢಾಂಧಕಾರವನ್ನು ಸೂಚಿಸುವುದಕ್ಕಾಗಿಯೇ ರೌದ್ರವೆಂಬ ವಿಶೇಷಣವು. ಇದರಿಂದ ಹನುಮಂತನು ಆ ರಾತ್ರಿಯ ಮುಹೂರ್ತಮಾತ್ರದಲ್ಲಿ ಓಷಧಿ ಪರ್ವತವನ್ನು ತಂದು ತನ್ನ ಕಾರ್ಯವನ್ನು ಮುಗಿಸಿ ಅದನ್ನು ತಿರುಗಿ ಸ್ವಸ್ಥಾನದಲ್ಲಿಯೂ ಸೇರಿಸಿ ಬಂದನೆಂದು ಅವನ ಮಹಾದ್ಭುತವಾದ ವೇಗವು ಸೂಚಿತವು.

ಆಯುಧಗಳೂ, ಚಾಮರಗಳೂ, ಚರ್ಮಪದಾರ್ಥಗಳೂ, ಹುಲಿಯುಗುರು ಮೊದಲಾದ ವ್ಯಾಘ್ರಸಂಬಂಧ ವಸ್ತುಗಳೂ, ಕಸ್ತೂರಿ ಮೊದಲಾದ ಅಂಡಜ ಪದಾರ್ಥಗಳೂ, ಮಿತಿಯಿಲ್ಲದೆ ದಗ್ಧವಾದುವು. ಮುತ್ತುಗಳಿಂದಲೂ, ರತ್ನಗಳಿಂದಲೂ ವಿಚಿತ್ರವಾದ ಆ ಲಂಕೆಯ ಪ್ರಾಕಾರಗಳನ್ನೂ, ನಾನಾವಿಧಗಳಾದ ಆಯುಧಸಮೂಹಗಳನ್ನೂ ನಾಲ್ಕು ಕಡೆಗಳಿಂದಲೂ ಅಗ್ನಿಯು ದಹಿಸುತ್ತ ಬಂದಿತು. ಗೃಹಸ್ಥರಾದ ರಾಕ್ಷಸರಿಗೆ ನಿವಾಸ ಸ್ಥಾನವಾಗಿ, ಸ್ವಸ್ತಿಕಾದಿ ವಿಚಿತ್ರ ಸಂಸ್ಥಾನಗಳಿಂದ ಕಟ್ಟಲ್ಪಟ್ಟ ಅನೇಕ ಗೃಹಗಳು ಅಗ್ನಿಗೆ ಆಹುತಿಯಾದುವು. ಆಗ ಅಗ್ನಿಯಲ್ಲಿ ಸಿಕ್ಕಿ ದಗ್ಧರಾಗುತ್ತಿದ್ದ ರಾಕ್ಷಸರಲ್ಲಿ, ಆಗಲೇ ಯುದ್ಧಕ್ಕಾಗಿ ಸುವರ್ಣಕವಚವನ್ನೆತ್ತಿ ಮೈಗೆ ತೊಡುತ್ತಿದ್ದವರು ಕೆಲವರು! ಪುಷ್ಪಹಾರಗಳಿಂದಲೂ, ಉತ್ತಮ ವಸ್ತ್ರಗಳಿಂದಲೂ ದೇಹವನ್ನಲಂಕರಿಸುತ್ತಿದ್ದವರು ಕೆಲವರು! ಆಗಲೇ ಮದ್ಯವನ್ನು ಕುಡಿದು ತೋಳಲುವ ಕಣ್ಣುಳ್ಳವರು ಕೆಲವರು! ಮದ್ಯಮದದಿಂದ ಮೈಮರೆತು ತತ್ತರಿಸಿ ನಡೆಯುತ್ತಿದ್ದವರು ಕೆಲವರು! ರತಿಕೇಳಿಗಾಗಿ ತಮ್ಮ ಪತ್ನಿಯರ ಸೀರೆಯನ್ನು ಹಿಡಿದೆಳೆಯುತ್ತಿದ್ದವರು ಕೆಲವರು! ಶತ್ರುಗಳ ಮೇಲೆ ಕೋಪದಿಂದ ಗದೆಗಳನ್ನೂ, ಶೂಲಗಳನ್ನೂ, ಖಡ್ಗಗಳನ್ನೂ ಹಿಡಿದು ಸಿದ್ಧರಾಗಿದ್ದವರು ಕೆಲವರು! ಮಾಂಸಾದಿಗಳನ್ನು ಭಕ್ಷಿಸುತ್ತಿದ್ದವರು ಕೆಲವರು! ಮದ್ಯಾದಿಗಳನ್ನು ಕುಡಿಯುತ್ತಿದ್ದವರು ಕೆಲವರು! ಬೆಲೆಯುಳ್ಳ ಹಾಸಿಗೆಗಳಲ್ಲಿ ತಮ್ಮ ಪ್ರಿಯಪತ್ನಿಯರೊಡನೆ ಸುಖನಿದ್ರೆಮಾಡುತ್ತಿದ್ದವರು ಕೆಲವರು! ಇವರೆಲ್ಲರೂ ಅಗ್ನಿಭಯದಿಂದ ತಮ್ಮ ಮಕ್ಕಳನ್ನು ಕೈಗೆತ್ತಿಕೊಂಡು ವೇಗದಿಂದ ದಿಕ್ಕುದಿಕ್ಕುಗಳಿಗೆ ಓಡುತ್ತಿದ್ದರು. ಹೀಗೆ ಆ ಲಂಕೆಯಲ್ಲಿದ್ದ ಅನೇಕ ರಾಕ್ಷಸರು, ಅವರವರು ಯಾವ ಯಾವ ಸ್ಥಿತಿಯಲ್ಲಿದ್ದರೋ ಆ ಸ್ಥಿತಿಯಲ್ಲಿಯೇ ಸುಟ್ಟು ಬೂದಿಯಾಗಿ ಬಿದ್ದರು. ರಾಕ್ಷಸರ ದೇಹವನ್ನು ದಹಿಸುತ್ತಿದ್ದಹಾಗೆಲ್ಲಾ ಆ ಅಗ್ನಿಯೂ, ಅವರ ಕೊಬ್ಬು ಮೊದಲಾದ ಜಿಡ್ಡಿನ ಪದಾರ್ಥಗಳಿಂದ ಮೇಲೆ ಮೇಲೆ ಹೆಚ್ಚಿ ಉರಿಯನ್ನು ಕೆದರುತ್ತಿತ್ತು. ಆ ಅಗ್ನಿಯಲ್ಲಿ ಧನಸಮೃದ್ಧಗಳಾಗಿಯೂ, ಬೆಲೆಬಾಳತಕ್ಕವುಗಳಾಗಿಯೂ, ಗಂಭೀರಸ್ವರೂಪವುಳ್ಳವುಗಳಾಗಿಯೂ, ಸೌಂದರ್ಯವಿಶಿಷ್ಟಗಳಾಗಿಯೂ ಇದ್ದ ಎಷ್ಟೋ

ರಾಜಗೃಹಗಳು ದಗ್ಧವಾಗಿ ಬಿದ್ದುವು. ಸುವರ್ಣಮಯಗಳಾಗಿ, ಚಂದ್ರನಂತೆಯೂ, ಅರ್ಧಚಂದ್ರನಂತೆಯೂ ಆಕಾರವುಳ್ಳವುಗಳಾಗಿ, ಮಹೋನ್ನತಗಳಾದ ಮೇಲುಮನೆಯುಳ್ಳವುಗಳಾಗಿ, ರತ್ನಖಚಿತವಾದ ಗವಾಕ್ಷವುಳ್ಳವುಗಳಾಗಿ, ಸುತ್ತಲೂ ಉತ್ತಮಗಳಾದ ಶಯ್ಯಾಸನಗಳಿಂದ ಶೋಭಿತಗಳಾಗಿ, ರತ್ನಗಳಿಂದಲೂ ಹವಳಗಳಿಂದಲೂ ವಿಚಿತ್ರವರ್ಣವುಳ್ಳವುಗಳಾಗಿ, ಸೂರ್ಯನನ್ನು ಮುಟ್ಟುವಂತೆ ಮಹೋನ್ನತಗಳಾಗಿ, ಕ್ರೌಂಚಗಳು, ನವಿಲು, ಮುಂತಾದ ಪಕ್ಷಿಗಳ ಕೂಗಿನಿಂದಲೂ, ವೀಣಾಧ್ವನಿಯಿಂದಲೂ, ಆಭರಣಧ್ವನಿಯಿಂದಲೂ ಕರ್ಣಾನಂದಕರಗಳಾಗಿದ್ದ ಪರ್ವತಾಕಾರವುಳ್ಳ ಅನೇಕ ಗೃಹಗಳು ದಗ್ಧವಾಗಿ ಬಿದ್ದುವು. ಹೀಗೆ ಅಗ್ನಿಜ್ವಾಲೆಯಲ್ಲಿ ಸಿಕ್ಕಿ ಬೇಯುತ್ತಿದ್ದ ಲಂಕಾಪುರದ್ವಾರಗಳೆಲ್ಲವೂ ವರ್ಷಾಕಾಲದಲ್ಲಿ ಮಿಂಚುಗಳಿಂದಾವರಿಸಿದ ಮೇಘಸಮೂಹಗಳಂತೆ ಕಾಣಿಸುತ್ತಿದ್ದುವು. ಅಗ್ನಿದಗ್ಧಗಳಾದ ಉಪ್ಪರಿಗೆಮನೆಗಳು ಇಂದ್ರನ ವಜ್ರಹತಿಯಿಂದ ಮುರಿದು ಬೀಳುವ ಪರ್ವತಶಿಖರಗಳಂತೆ ಕೆಳಗೆ ಬಿದ್ದುವು. ಅಲ್ಲಲ್ಲಿ ಉಪ್ಪರಿಗೆಗಳ ಮೇಲೆ ಸುಖವಾಗಿ ಮಲಗಿದ್ದ ಉತ್ತಮಸ್ತ್ರೀಯರು, ಈ ಅಗ್ನಿಜ್ವಾಲೆಯು ಮೈಗಂಟಿದೊಡನೆ, ತಮ್ಮ ಮೈಮೇಲಿನ ಆಭರಣಗಳೆಲ್ಲವನ್ನೂ ತೆಗೆದು ಬಿಸುಟು "ಹಾ! ಹಾ!" ಎಂದು ಗೋಳಿಟ್ಟು ಕೂಗುತ್ತಿದ್ದರು. ಅಗ್ನಿಜ್ವಾಲೆಗೆ ಸಿಕ್ಕಿ ಬೇಯುತ್ತಿದ್ದ ಉಪ್ಪರಿಗೆಗಳು, ದೂರದಿಂದ ನೋಡಿದವರಿಗೆ ಜ್ಯೋತಿರ್ಲತೆಗಳ ಕಾಡುಗಳಿಂದ ತುಂಬಿದ ಹಿಮವತ್ಪರ್ವತದ ಶಿಖರದಂತೆ ತೋರುತ್ತಿದ್ದುವು. ಆ ರಾತ್ರಿಯಲ್ಲಿ ಬೆಂಕಿಯುರಿಗೆ ಸಿಕ್ಕಿ ಬೇಯುತ್ತಿದ್ದ ಪ್ರಾಸಾದಶಿಖರಗಳೆಲ್ಲವೂ ಪುಷ್ಪಿತಗಳಾದ ಮುತ್ತುಗದ ಮರಗಳಂತೆ ತೋರುತ್ತಿದ್ದುವು. ಆಗ ಈ ಅಗ್ನಿಯ ಭಯಕ್ಕಾಗಿ ಮಾವುತರು ತಮ್ಮ ತಮ್ಮ ಆನೆಗಳನ್ನೂ, ಕಟ್ಟನ್ನು ಕಳಚಿ ಬಿಟ್ಟುಬಿಡಲು, ಭಯದಿಂದ ದಿಕ್ಕುದಿಕ್ಕಿಗೆ ಪಲಾಯನಮಾಡುತ್ತಿದ್ದ ಆ ಆನೆಕುದುರೆಗಳಿಂದ, ಲಂಕಾನಗರವೆಲ್ಲವೂ ಪ್ರಳಯಕಾಲದಲ್ಲಿ ತತ್ತಳಿಸಿ ತಿರುಗುವ ಮಹಾಗ್ರಾಹಗಳಿಂದ ಉಲ್ಲೋಲಕಲ್ಲೋಲವಾದ ಸಮುದ್ರದಂತೆ ಕಾಣುತ್ತಿತ್ತು. ಲಾಯದಿಂದ ಕಳಚಿಬಿಟ್ಟ ಕುದುರೆಗಳನ್ನು ನೋಡಿ ಆನೆಗಳು ಭಯಪಟ್ಟು ಪಲಾಯನ ಮಾಡುವುವು. ಮತ್ತು ಭಯದಿಂದೋಡುವ ಆನೆಗಳನ್ನು ನೋಡಿ ಆ

ಕುದುರೆಗಳು ಮತ್ತಷ್ಟು ಹೆದರಿ, ನಿಂತಲ್ಲಿ ನಿಲ್ಲದೆ ಮತ್ತೊಂದು ಕಡೆಗೆ ಓಡುವುವು. ಲಂಕೆಯು ಅಗ್ನಿಜ್ವಾಲೆಯಿಂದ ದಗ್ಧವಾಗುತ್ತಿರುವಾಗ, ಅದರ ಕೆಂಪಾದ ಉರಿಯ ಕಾಂತಿಯು ಸಮುದ್ರಜಲದಲ್ಲಿ ಪ್ರತಿಬಿಂಬಿಸಿ ಆ ಸಮುದ್ರವು ರಕ್ತಜಲದ ಸಮುದ್ರದಂತೆ ಕಾಣಿಸುತ್ತಿತ್ತು. ಆ ಲಂಕೆಯೆಲ್ಲವೂ ಮುಹೂರ್ತಮಾತ್ರದಲ್ಲಿ ವಾನರರಿಂದ ದಹಿಸಲ್ಪಟ್ಟು, ಪ್ರಳಯ ಕಾಲಾಗ್ನಿ ಜ್ವಾಲೆಯಿಂದ ಬೆಂದ ಭೂಮಿಯಂತಾಯಿತು. ಸುತ್ತಲೂ ದೊಡ್ಡ ಹೊಗೆಯು ಕವಿದು, ಅಗ್ನಿಜ್ವಾಲೆಯ ನಡುವೆ ಸಿಕ್ಕಿ ಕೂಗಿಡುತ್ತಿದ್ದ ರಾಕ್ಷಸಸ್ತ್ರೀಯರ ಗೋಳಾಟದ ಧ್ವನಿಯು ಹತ್ತು ಯೋಜನಗಳ ದೂರಕ್ಕೆ ಕೇಳಿಸುತ್ತಿತ್ತು. ಅಲ್ಲಲ್ಲಿ ಕೆಲವು ರಾಕ್ಷಸರು ಬೆಂದ ದೇಹದೊಡನೆ ಹೇಗೋ ಪ್ರಯತ್ನದಿಂದ ತಲೆತಪ್ಪಿಸಿಕೊಂಡು ಲಂಕೆಯ ಹೊರಗೆ ಬಂದರೂ, ಆಗಾಗಲೇ ವಾನರರು ಯುದ್ಧಾತುರದಿಂದ ಅವರ ಮೇಲೆ ಬಿದ್ದು ಅವರನ್ನಿರಿಸುತ್ತಿದ್ದರು. ಆಗ ವಾನರರ ಕೋಲಾಹಲಧ್ವನಿಯೂ, ರಾಕ್ಷಸರ ಗೋಳಾಟಧ್ವನಿಯೂ ಒಂದಾಗಿ ಸೇರಿ ದಶದಿಕ್ಕುಗಳನ್ನೂ, ಸಮುದ್ರವನ್ನೂ, ಸಮಸ್ತ ಭೂಮಿಯನ್ನೂ ಮೊಳಗಿಸುವಂತೆ ಸುತ್ತಲೂ ವ್ಯಾಪಿಸಿತು. ಇಷ್ಟರಲ್ಲಿ ಅತ್ತಲಾಗಿ ರಾಮಲಕ್ಷ್ಮಣರಿಬ್ಬರೂ ಬ್ರಹ್ಮಾಸ್ತ್ರ ಬಾಧೆಯಿಂದ ಮುಕ್ತರಾಗಿ, ಚೇತರಿಸಿ ಮೇಲೆದ್ದು, ಉತ್ತಮಗಳಾದ ತಮ್ಮ ಧನುಸ್ಸುಗಳನ್ನು ಕೈಗೆತ್ತಿಕೊಂಡರು. ರಾಮನು ತನ್ನ ಬಿಲ್ಲನ್ನೆತ್ತಿ ಅದರ ನಾಣನ್ನು ಮಿಡಿದೊಡನೆ ಅದರಿಂದುಂಟಾದ ಮಹಾಧ್ವನಿಯು, ಲಂಕೆಯಲ್ಲಿ ಸತ್ತುಳಿದ ರಾಕ್ಷಸರ ಎದೆಯನ್ನು ನಡುಗಿಸಿತು. ರಾಮನು ತನ್ನ ಮಹಾಧನುಸ್ಸನ್ನೆತ್ತಿ ಮಿಡಿಯುವಾಗ, ಲೋಕ ಸಂಹಾರಕಾಲದಲ್ಲಿ ವೇದೋಕ್ತ ಲಕ್ಷಣವುಳ್ಳ (ಶಬ್ದಬ್ರಹ್ಮಾತ್ಮಕವಾದ) ಧನುಸ್ಸನ್ನು ಹಿಡಿದು ನಿಂತ ಪೂಜ್ಯನಾದ ಶಿವನಂತೆ ಕಾಣುತ್ತಿದ್ದನು. ವಾನರರ ಉತ್ಸಾಹ ಘೋಷವನ್ನೂ, ರಾಕ್ಷಸರ ಆಕ್ರೋಶ ಧ್ವನಿಯನ್ನೂ ಅಡಗಿಸುವಂತೆ ರಾಮನ ಧನುಷ್ಟಂಕಾರ ಧ್ವನಿಯು ಅವೆರಡನ್ನೂ ಮೀರಿ ಕೇಳಿಸುತ್ತಿತ್ತು. ಒಂದು ಕಡೆಯಲ್ಲಿ ವಾನರರ ಕೋಲಾಹಲ ಧ್ವನಿ! ಇನ್ನೊಂದು ಕಡೆಯಲ್ಲಿ ರಾಕ್ಷಸರ ಆಕ್ರೋಶ ಧ್ವನಿ! ಬೇರೊಂದು ಕಡೆಯಲ್ಲಿ ರಾಮನ ಧನುಷ್ಟಂಕಾರ ಧ್ವನಿ! ಇವು ಮೂರು ಒಂದಾಗಿ ಸೇರಿ ಹತ್ತು ದಿಕ್ಕುಗಳನ್ನೂ ತುಂಬಿ

ದುವು. ಆಗ ರಾಮನು ಯುದ್ಧಾರಂಭ ಸೂಚಕವಾಗಿ ಮೊದಲು ತನ್ನ ಬಿಲ್ಲಿನಿಂದ ಒಂದೆರಡು ಬಾಣಗಳನ್ನು ಪ್ರಯೋಗಿಸಿದೊಡನೆ ಆ ಬಾಣ ಪ್ರಹಾರದಿಂದ ಕೈಲಾಸಶಿಖರದಂತಿದ್ದ ಲಂಕಾಪುರದ್ವಾರವು ಪುಡಿಪುಡಿಯಾಗಿ ಮುರಿದು ಬಿದ್ದಿತು. ಕೂಡಲೇ ಕೆಲವು ರಾಕ್ಷಸಪ್ರಧಾನರು ತಮ್ಮ ವಿಮಾನಗಳಲ್ಲಿಯೂ ಗೃಹಗಳಲ್ಲಿಯೂ, ರಾಮಬಾಣಗಳು ಬಂದು ಬೀಳು ತ್ತಿರುವುದನ್ನು ಕಂಡು, ಕೋಪದಿಂದ ಬೇಗಬೇಗನೆ ಯುದ್ಧಸನ್ನಾಹ ಗಳನ್ನು ಮಾಡುತ್ತಿದ್ದರು. ಹೀಗೆ ರಾಕ್ಷಸರು ಯುದ್ಧಸನ್ನಾಹದೊಡನೆ ಆಗಾಗ ಸಿಂಹನಾದವನ್ನು ಮಾಡುತ್ತಿರಲು, ಆ ರಾತ್ರಿಯು ಪ್ರಳಯ ಕಾಲದ ರಾತ್ರಿಯಂತೆ ಕಾಣಿಸಿತು. ಆಗ ಇತ್ತಲಾಗಿ ಮಹಾತ್ಮನಾದ ಸುಗ್ರೀವನು, ವಾನರ ಪ್ರಧಾನರನ್ನು ನೋಡಿ, "ಎಲೆ ವಾನರಶ್ರೇಷ್ಠರೆ! ಈಗ ನೀವು, ಇದೋ! ಇಲ್ಲಿ ರಾವಣಾಂತಃಪುರಕ್ಕೆ ಸಮೀಪದಲ್ಲಿರುವ ಈ ಮಧ್ಯಕಕ್ಷ್ಯೆಯ ಬಾಗಿಲಲ್ಲಿ ನಿಂತು ಯುದ್ಧವನ್ನಾರಂಭಿಸಬೇಕು. ಯುದ್ಧ ಕ್ಕಾಗಿ ಅಲ್ಲಲ್ಲಿ ನಿಂತಿರತಕ್ಕ ವಾನರರಲ್ಲಿ ಯಾವನೊಬ್ಬನಾದರೂ ಆ ಆಜ್ಞೆಗೆ ವಿರುದ್ಧವಾಗಿ ನಡೆದ ಪಕ್ಷದಲ್ಲಿ, ಅಂತವನನ್ನು ರಾಜಾಜ್ಞೆ ಯನ್ನು ಮೀರಿ ನಡೆದ ದೋಷಕ್ಕಾಗಿ ಆಗಲೇ ಕೊಂದುಬಿಡಬಹುದು" ಎಂದನು. ಅದರಂತೆಯೇ ವಾನರರೆಲ್ಲರೂ ಉರಿಯುವ ಕೊಳ್ಳಿಗಳೊಡನೆ ಆ ಬಾಗಿಲಿಗೆ ಬಂದು ನಿಲ್ಲಲು, ಇದನ್ನು ನೋಡಿ ಆದುವರೆಗೆ ದುಃಖ ದಿಂದ ಕೊರಗುತ್ತಿದ್ದ ರಾವಣನಿಗೆ ಕೋಪವೂ ಅಂಕುರಿಸಿತು. ಇವನು ಮೇಲೆದ್ದು ಮೈಮುರಿಯುತ್ತ ಕೈಕಾಲುಗಳನ್ನೊದರಿದ ಕೂಡಲೇ ದಶ ದಿಕ್ಕುಗಳೂ ವ್ಯಾಕುಲಿಸಿದಂತಾಗಿ, ಕಾಲಾಗ್ನಿರುದ್ರನ ಮೈಯಲ್ಲಿರುವ ಕೋಪವೇ ಹೀಗೆ ಪುರುಷಾಕೃತಿಯಿಂದ ಬಂದಂತೆ ತೋರುತ್ತಿದ್ದನು. ಆಗ ರಾವಣನು ಕುಂಭಕರ್ಣನ ಮಕ್ಕಳಾದ ಕುಂಭನಿಕುಂಭರಿಬ್ಬರನ್ನೂ ಕರೆದು ಇನ್ನೂ ಕೆಲವು ರಾಕ್ಷಸರೊಡನೆ ಸೇರಿಸಿ ಯುದ್ಧಕ್ಕೆ ಹೋಗ ಬೇಕೆಂದು ನಿಯಮಿಸಿದನು. ಈ ರಾವಣಾಜ್ಞೆಯಂತೆ ಯೂಪಾಕ್ಷನೂ, ಶೋಣಿತಾಕ್ಷನೂ, ಪ್ರಜಂಘನೂ, ಕಂಪನನೂ, ಕುಂಭ ನಿಕುಂಭರೊಡನೆ ಹೊರಡುವುದಕ್ಕೆ ಸಿದ್ಧರಾದರು. ಹೀಗೆ ಯುದ್ಧಕ್ಕೆ ಸಿದ್ಧರಾಗಿ ನಿಂತ ಮಹಾಬಲಾಢ್ಯರಾದ ಆ ರಾಕ್ಷಸರೆಲ್ಲರನ್ನೂ ನೋಡಿ ರಾವಣನು "ಎಲೆ

ವೀರರೆ! ನೀವು ಇಲ್ಲಿಂದಲೇ ಸಿಂಹನಾದವನ್ನು ಮಾಡುತ್ತ ಹೊರಡಿರಿ! ಶೀಘ್ರದಲ್ಲಿ ಜಯವನ್ನು ಹೊಂದಿ ಬನ್ನಿರಿ!" ಎಂದನು. ಹೀಗೆ ರಾವಣನಿಂದ ಪ್ರೇರಿತರಾದ ಆ ರಾಕ್ಷಸರೆಲ್ಲರೂ, ಕಾಂತಿಯಿಂದ ಜ್ವಲಿಸುತ್ತಿದ್ದ ಆಯುಧಗಳನ್ನು ಕೈಯಲ್ಲಿ ಹಿಡಿದು, ಆಗಾಗ ಸಿಂಹನಾದವನ್ನು ಮಾಡುತ್ತ ಲಂಕೆಯಿಂದ ಹೊರಟರು. ಆಗ ಅತ್ತಲಾಗಿ ವಾನರರ ಎಣೆಯಿಲ್ಲದ ತೇಜಸ್ಸು! ಅವರ ಕೈಯಲ್ಲಿದ್ದ ಕೊಳ್ಳಿಯ ಕಾಂತಿ! ಇತ್ತಲಾಗಿ ರಾಕ್ಷಸರ ಆಭರಣಕಾಂತಿ! ಇವರ ಕೈಯಲ್ಲಿದ್ದ ಶಸ್ತ್ರಾಸ್ತ್ರಗಳ ಹೊಳಪು! ಅವೆಲ್ಲವೂ ಸೇರಿದುದರಿಂದ ಆ ರಾತ್ರಿಯಲ್ಲಿ ಆಕಾಶವೆಲ್ಲವೂ ಕಾಂತಿವಿಶಿಷ್ಟವಾಗಿ ಕತ್ತಲೆಯಲ್ಲಿ ಬೆಳಗುತ್ತಿತ್ತು. ಮತ್ತು ಆಕಾಶಗತನಾದ ಚಂದ್ರನ ಕಾಂತಿ, ನಕ್ಷತ್ರಗಳ ಕಾಂತಿ, ಉಭಯಸೇನೆಗಳ ಆಭರಣ ಕಾಂತಿ, ಇವೆಲ್ಲವೂ ಆಕಾಶವನ್ನು ಬೆಳಗುತ್ತಿದ್ದುವು. ಈ ಚಂದ್ರಕಾಂತಿಯೊಡನೆಯೂ ವಾನರರಾಕ್ಷಸರ ಆಭರಣಕಾಂತಿಯೊಡನೆಯೂ ಲಂಕೆಯಲ್ಲಿ ಉರಿಯುತ್ತಿದ್ದ ಮನೆಗಳ ಕಾಂತಿಯೂ ಒಂದಾಗಿ ಸೇರಿ ಆ ರಾತ್ರಿಯಲ್ಲಿಯೂ ಕೂಡ ವಾನರ ರಾಕ್ಷಸ ಸೈನ್ಯಗಳು ಚೆನ್ನಾಗಿ ಕಣ್ಣಿಗೆ ಕಾಣಿಸುತ್ತಿದ್ದುವು. ಆಗ ಲಂಕೆಯಲ್ಲಿ ಊರ್ಧ್ವ ಮುಖವಾಗಿ ದೊಡ್ಡ ಜ್ವಾಲೆಗಳನ್ನು ಕೆದರಿ ಮನೆಗಳನ್ನುರಿಸುತ್ತಿದ್ದ ಬೆಂಕಿಯ ಕಾಂತಿಯು ಅಲೆಯಾಡುವ ಸಮುದ್ರದಲ್ಲಿ ಪಾತಾಳದವರೆಗೂ ವ್ಯಾಪಿಸಿ, ಆ ಸಮುದ್ರಜಲಕ್ಕೆ ಒಂದು ಅಪೂರ್ವವಾದ ಕಾಂತಿವಿಶೇಷವನ್ನು ತೋರಿಸುತ್ತಿತ್ತು. ಈ ಸಂದರ್ಭದಲ್ಲಿ ಭಯಂಕರವಾದ ಆ ರಾಕ್ಷಸಸೈನ್ಯವು ಯುದ್ಧೋದ್ಯುಕ್ತವಾಗಿ ಲಂಕೆಯಿಂದ ಹೊರಟಿತು. ಪತಾಕೆಗಳನ್ನೂ, ಧ್ವಜಗಳನ್ನೂ, ಖಡ್ಗಾಕಾರವುಳ್ಳ ಗಂಟುಗೊಡಲಿಗಳನ್ನೂ ಧರಿಸಿ, ಮಹಾಭಯಂಕರವಾದ ರಥಗಜತುರಗ ಪದಾತಿಗಳೆಂಬ ಚತುರಂಗಸೈನ್ಯವೂ ಕ್ರಮವಾಗಿ ಹೊರಟಿತು. ಆ ಸೈನಿಕರಲ್ಲಿ ಕೆಲವರು ಜ್ವಲಿಸುವ ಶೂಲಗಳನ್ನೂ, ಕೆಲವರು ಗದೆಗಳನ್ನೂ, ಕೆಲವರು ಪ್ರಾಸಗಳನ್ನೂ, ಕೆಲವರು ತೋಮರಗಳನ್ನೂ, ಕೆಲವರು ಧನುರ್ಬಾಣಗಳನ್ನೂ ಹಿಡಿದು ಹೊರಟರು. ಎಲ್ಲಿ ನೋಡಿದರೂ, ಭಯಂಕರ ಬಲಪರಾಕ್ರಮಗಳುಳ್ಳ ಘೋರರೂಪಿಗಳಾದ ರಾಕ್ಷಸಸೈನಿಕರೇ ತುಂಬಿದ್ದರು. ಸೈನ್ಯದ ಯಾವ ಕಡೆಯಲ್ಲಿ ನೋಡಿದರೂ ಥಳಥಳಿಸಿ ಹೊಳೆ

ಯುವ ಪ್ರಾಸಗಳೇ ಕಾಣಿಸುತ್ತಿದ್ದುವು. ನಾಲ್ಕುಕಡೆಗಳಿಂದಲೂ ನೂರಾರು ಕಿರುಗೆಜ್ಜೆಗಳ ಧ್ವನಿಯು ಕೇಳಿಸುತ್ತಿತ್ತು. ಸೈನಿಕರೆಲ್ಲರೂ ಸುವರ್ಣ ಭೂಷಣಗಳಿಂದಲಂಕೃತವಾದ ಮೈಯುಳ್ಳವರಾಗಿ, ಮದದ ಕೊಬ್ಬಿನಿಂದ ಕೆಲವರು ತಾವು ಹಿಡಿದಿದ್ದ ಗಂಡುಗೊಡಲಿಗಳನ್ನೂ, ಕೆಲವರು ಬೇರೆ ಬೇರೆ ಶಸ್ತ್ರಾಸ್ತ್ರಗಳನ್ನೂ ತಿರುಗಿಸುತ್ತ ಬರುತ್ತಿದ್ದರು. ಧನುರ್ಧಾರಿ ಗಳೆಲ್ಲರೂ ತಾವು ಕೈಯಲ್ಲಿ ಹಿಡಿದ ಧನುರ್ಬಾಣಗಳಲ್ಲದೆ ಬೇರೆ ಧನುರ್ಬಾ ಣಗಳನ್ನೂ ಬೆನ್ನಿಗೆ ಕಟ್ಟಿಕೊಂಡು ಹೊರಟರು. ಈ ರಾಕ್ಷಸಸೈನಿಕರು ಬರುವಾಗ ಆವರವರ ಅಲಂಕಾರಾರ್ಥವಾಗಿ ಪೂಸಿದ ಚಂದನಗಳಿಂದಲೂ, ಪುಷ್ಪಮಾಲಿಕೆಗಳಿಂದಲೂ, ವೀರಪಾನವಾಗಿ ಕುಡಿದ ಮದ್ಯದಿಂದಲೂ, ಅಲ್ಲಿನ ಗಾಳಿಯೆಲ್ಲವೂ ಸುಗಂಧವಿಶಿಷ್ಟವಾಗಿ ಬೀಸುತ್ತಿತ್ತು. ಅನೇಕ ಶೂರರಿಂದ ತುಂಬಿ, ಮಹಾಮೇಘದಂತೆ ಗರ್ಜಿಸುತ್ತ ಬರುತ್ತಿದ್ದ ಆ ಸೇನೆಯು ಅತಿ ಭಯಂಕರವಾಗಿ ಕಾಣಿಸಿತು. ಹೀಗೆ ಭಯಂಕರವಾದ ರಾಕ್ಷಸಸೈನ್ಯವು ಇದಿರಾಗಿ ಬರುವುದನ್ನು ಕಂಡು, ಇತ್ತಲಾಗಿ ವಾನರ ಸೈನ್ಯವು ಉಚ್ಚಧ್ವನಿಯಿಂದ ಸಿಂಹನಾದಮಾಡುತ್ತ, ಈ ವಾನರರ ಯುದ್ಧೋತ್ಸಾಹವನ್ನು ನೋಡಿ ಕೋಪಗೊಂಡು, ಅಗ್ನಿಜ್ವಾಲೆಯನ್ನಿ ದಿರಿಸುವ ಶಲಭಗಳಂತೆ ವಾನರಸೈನಿಕರೆಲ್ಲರೂ ಒಬ್ಬರನೊಬ್ಬರು ನೂಕಿ ಕೊಂಡು ಮುಂದೆ ಬರುವಾಗ, ವಜ್ರಾಯುಧವನ್ನು ಸಾಣೆಹಿಡಿದಂತೆ ಅವರ ಆಯುಧ ಸಂಘರ್ಷಣದಿಂದುಂಟಾದ ಅಗ್ನಿಕಣಗಳು ಆ ಸೈನ್ಯಕ್ಕೆ ಮತ್ತಷ್ಟು ಶೋಭೆಯನ್ನುಂಟುಮಾಡುತ್ತಿತ್ತು. ಆಗ ವಾನರರೆಲ್ಲರೂ ಯುದ್ಧೋತ್ಸಾಹದಿಂದ ಹುಚ್ಚುಹಿಡಿದವರಂತೆ ಮೈತಿಳಿಯದೆ ರಾಕ್ಷಸರ ಮೇಲೆ ಬಿದ್ದು, ಗಿಡಗಳಿಂದಲೂ, ಬೆಟ್ಟಗಳಿಂದಲೂ, ಮುಷ್ಟಿಗಳಿಂದಲೂ, ಅವರನ್ನು ಹಿಡಿದು ಕೊಲ್ಲುತ್ತಿದ್ದರು. ಹಾಗೆಯೇ ರಾಕ್ಷಸರೂ ಮುಂದೆ ಬಂದ ವಾನರರ ತಲೆಗಳನ್ನು ತಮ್ಮ ಖಡ್ಗಗಳಿಂದ ಆಗಾಗಲೇ ಕೆಡಹುತ್ತ ಬಂದರು. ಆ ಯುದ್ಧದಲ್ಲಿ ವಾನರರು ಕೆಲವು ರಾಕ್ಷಸರ ಕಿವಿಗಳನ್ನು ಹಲ್ಲುಗಳಿಂದ ಕಡಿದರು. ಕೆಲವು ರಾಕ್ಷಸರ ತಲೆಗಳನ್ನು ಛೇದಿಸಿದರು. ಶಿಲಾಪ್ರಹಾರಗಳಿಂದ ಕೆಲವು ರಾಕ್ಷಸರ ಮೈಯನ್ನು ಮುರಿದರು. ಹೀಗೆ ಎಲ್ಲಿ ನೋಡಿದರೂ ವಾನರರ ಪ್ರಹಾರದಿಂದ ನೊಂದ ರಾಕ್ಷಸರೇ ಯುದ್ಧ

ರಂಗದಲ್ಲಿ ಅತ್ತಿತ್ತ ಸುತ್ತುತ್ತಿದ್ದರು. ಬೇರೆ ಕೆಲವು ಪ್ರಸಿದ್ಧ ವಾನರರು ರಾಕ್ಷಸರಲ್ಲಿ ಪ್ರಧಾನ ವೀರರನ್ನೇ ಹುಡುಕಿ ಅವರನ್ನು ಸುತ್ತಲೂ ಬಡಿದು ಕೊಲ್ಲುತ್ತ ಬಂದರು. ಹಾಗೆಯೇ ಕೆಲವು ಘೋರರಾಕ್ಷಸರೂ ಕೂಡ ವಾನರರಲ್ಲಿ ವೀರರಾದವರನ್ನು ಹುಡುಕಿ ಅವರನ್ನು ಕತ್ತಿಗಳಿಂದ ಕತ್ತರಿಸುತ್ತಿದ್ದರು. ಹೀಗೆ ವಾನರರಾಕ್ಷಸರಿಬ್ಬರೂ ಸಮಬಲದಿಂದ, ಹೊಡೆದವರನ್ನು ಹೊಡೆಯುತ್ತ, ನೂಕುವವರನ್ನು ನೂಕುತ್ತ, ನಿಂದಿಸುವವರನ್ನು ನಿಂದಿಸುತ್ತ, ಕಡಿದವರನ್ನು ಕಡಿಯುತ್ತ, ಪರಸ್ಪರಸ್ಪರ್ಧೆಯಿಂದ ಹೋರಾಡಿದರು. ಮತ್ತು ಆ ಯುದ್ಧದಲ್ಲಿ "ನನ್ನನ್ನು ಹೊಡೆ" ಎಂದೊಬ್ಬನೂ "ಇದೋ ಹೊಡೆದೆನು" ಎಂದು ಮತ್ತೊಬ್ಬನೂ "ಸುಮ್ಮನೆ ಶ್ರಮಪಡುವುದೇಕೆ? ನಿಲ್ಲು!" ಎಂದು ಮತ್ತೊಬ್ಬನೂ, ಹೀಗೆ ಒಬ್ಬರಿಗೊಬ್ಬರು ವೀರಾಲಾಪಗಳನ್ನು ಹೇಳಿ ಹೋರಾಡುತ್ತಿದ್ದರು. ಆಗಿನ ಯುದ್ಧದ ಸಂಭ್ರಮದಲ್ಲಿ ಬಟ್ಟೆ ಸಡಿಲಿದವರೊ, ಕವಚ ಹರಿದವರೊ, ಆಯುಧ ಮುರಿದವರೊ, ತಾವು ತಾವು ಇದ್ದ ಸ್ಥಿತಿಯಲ್ಲಿಯೇ ಪ್ರಾಸಗಳನ್ನೂ, ದಂಡಗಳನ್ನೂ, ಕತ್ತಿಗಳನ್ನೂ, ಶೂಲಗಳನ್ನೂ ಸಿಕ್ಕಿದ ಹಾಗೆ ಕೈಗೆತ್ತಿಕೊಂಡು, ಭಯಂಕರವಾದ ತುಮುಲಯುದ್ಧವನ್ನು ನಡೆಸಿದರು. ಆ ಯುದ್ಧದಲ್ಲಿ ವಾನರರು ರಾಕ್ಷಸರನ್ನು ಒಂದೊಂದು ಸಲಕ್ಕೆ ಹತ್ತುಹತ್ತು ಮಂದಿಯಾಗಿಯೂ, ಏಳೇಳು ಮಂದಿಯಾಗಿಯೂ ಹಿಡಿದು ಕೊಲ್ಲುತ್ತಿದ್ದರು. ಹಾಗೆಯೇ ರಾಕ್ಷಸರೂ ವಾನರರನ್ನು ಹತ್ತರಂತೆಯೂ ಏಳರಂತೆಯೂ ಒಟ್ಟಾಗಿ ಹೊಡೆದು ಕೆಡಹುತ್ತಿದ್ದರು. ಇಷ್ಟರಲ್ಲಿ ರಾಕ್ಷಸ ಸೈನ್ಯದಲ್ಲಿ ಕೂದಲು ಕಿತ್ತವರು ಕೆಲವರು! ಬಟ್ಟೆ ಜಾರಿದವರು ಕೆಲವರು! ಕವಚ ಹರಿದವರು ಕೆಲವರು! ಧ್ವಜ ಮುರಿದವರು ಕೆಲವರು! ಹೀಗೆ ಆ ರಾಕ್ಷಸ ಸೈನ್ಯವೆಲ್ಲವೂ ಬಹಳವಾಗಿ ಭಂಗಹೊಂದಲು, ವಾನರರೆಲ್ಲರೂ ಆ ಸೈನ್ಯವನ್ನು ಸುತ್ತಲೂ ಮುತ್ತಿದರು.

ಇಲ್ಲಿಗೆ ಎಪ್ಪತ್ತೈದನೆಯ ಸರ್ಗವು.

ಅಂಗದನು ಕಂಪನಪ್ರಜಂಘರನ್ನೂ, ದ್ವಿವಿದನು ಶೋಣಿತಾಕ್ಷನನ್ನೂ, ಮೈಂದನು ಯೂಪಾಕ್ಷನನ್ನೂ, ಸುಗ್ರೀವನು ಕುಂಭನನ್ನೂ ಕೊಂದುದು.

ಹೀಗೆ ಎಡೆಬಿಡದೆ ಅನೇಕ ವೀರರ ನಾಶಕ್ಕೆ ಹೇತುವಾಗಿ ಭಯಂಕರವಾದ ತುಮುಲಯುದ್ಧವು ನಡೆಯುತ್ತಿರುವಾಗ, ಅಂಗದನು ಯುದ್ಧೋತ್ಸಾಹದಿಂದ ಮುಂದುಬಿದ್ದು ವೀರನಾದ ಕಂಪನನ್ನು ತಡೆದನು. ಇದನ್ನು ನೋಡಿ ಕಂಪನನು ಮಹಾಕೋಪಗೊಂಡು ಅಂಗದನನ್ನು ಮೂದಲಿಸಿ ಕರೆಯುತ್ತ, ವೇಗದಿಂದ ಅವನ ಮೇಲೆ ಬಿದ್ದು ತನ್ನ ಕೈಯಲ್ಲಿದ್ದ ಗದೆಯಿಂದ ಅವನನ್ನು ಹೊಡೆದನು. ಈ ಗದಾಪ್ರಹಾರದಿಂದ ಅಂಗದನ ದೇಹವು ನಡುಗಿಹೋಯಿತು. ಆದರೆ, ಅಂಗದನು ಬಹಳ ವೀರ್ಯಶಾಲಿಯಾದುದರಿಂದ ಸ್ವಲ್ಪಕಾಲದಲ್ಲಿಯೇ ಚೇತರಿಸಿಕೊಂಡು ಒಂದು ದೊಡ್ಡ ಪರ್ವತಶಿಖರವನ್ನು ಕಿತ್ತುತಂದು ಕಂಪನನ ಎದೆಗೆ ಗುರಿಯಿಟ್ಟು ಬೀಸಿದೊಡನೆ ಅದರಿಂದ ಆ ರಾಕ್ಷಸನು ಮೃತನಾಗಿ ಬಿದ್ದನು. ಈ ಕಂಪನನು ಹತನಾಗಿ ಬಿದ್ದುದನ್ನು ಕಂಡೊಡನೆ ಶೋಣಿತಾಕ್ಷನೆಂಬ ರಾಕ್ಷಸ ಯೂಥಪತಿಯು, ತನ್ನ ರಥವನ್ನು ವೇಗದಿಂದ ನಡೆಸಿಕೊಂಡು ಬಂದು, ಧೈರ್ಯದಿಂದ ಅಂಗದನನ್ನಿದಿರಿಸಿ ನಿಂತನು. ಮತ್ತು ಕಾಲಾಗ್ನಿಗೆ ಸಮಾನಗಳಾಗಿ ಶರೀರದಲ್ಲಿ ನಾಟತಕ್ಕ ಬಾಣಗಳನ್ನೂ, ಅರ್ಧಚಂದ್ರಬಾಣಗಳನ್ನೂ, ಉಕ್ಕಿನಮೊನೆಯುಳ್ಳ ಬಾಣಗಳನ್ನೂ, ಕರುವಿನ ಕೊಂಬಿನಂತಿರುವ ಕವಲು ಬಾಣಗಳನ್ನೂ, ಕಂಕಪತ್ರಾಕಾರದ ಬಾಣಗಳನ್ನೂ, ಅಡ್ಡಮೊನೆಯ ಬಾಣಗಳನ್ನೂ, ಇನ್ನೂ ಬಗೆಬಗೆಯ ತೀಕ್ಷ್ಣ ಬಾಣಗಳನ್ನೂ ಪ್ರಯೋಗಿಸಿ, ಅವನ ಸರ್ವಾವಯವಗಳನ್ನೂ ಭೇದಿಸುತ್ತಬಂದನು. ಹೀಗೆ ಶೋಣಿತಾಕ್ಷನು ಬಾಣಗಳಿಂದ ತನ್ನನ್ನು ಎಡೆಬಿಡದೆ ಪ್ರಹರಿಸುವುದನ್ನು ನೋಡಿ ಅಂಗದನು ಅತ್ಯಂತ ಕೋಪಾವಿಷ್ಟನಾಗಿ ಮುಂದೆ ನುಗ್ಗಿ, ಶೋಣಿತಾಕ್ಷನ ಕೈಯಲ್ಲಿದ್ದ ಮಹಾಧನುಸ್ಸನ್ನೂ, ಅವನ ರಥವನ್ನೂ, ಅವನ ಬಾಣಗಳನ್ನೂ, ತನ್ನ ತಲಪ್ರಹಾರದಿಂದ ಮುರಿದು ಕೆಡಹಿದನು. ಇಷ್ಟರಲ್ಲಿಯೇ ಶೋಣಿತಾಕ್ಷನು ಕತ್ತಿಯನ್ನೂ ಗುರಾಣಿಯನ್ನೂ ಕೈಗೆತ್ತಿಕೊಂಡು ಥಟ್ಟನೆ ಅಂತರಿಕ್ಷಕ್ಕೆ ಹಾರಿದನು. ಇದನ್ನು

ನೋಡಿ ಅಂಗದನು ಅವನಿಗಿಂತಲೂ ವೇಗದಿಂದ ಆಕಾಶಕ್ಕೆ ಹಾರಿ, ಅವನನ್ನು ತಡೆದು, ಅವನ ಕೈಯಲ್ಲಿದ್ದ ಖಡ್ಗವನ್ನು ಕಿತ್ತುಕೊಂಡು, ದೊಡ್ಡ ಸಿಂಹನಾದವನ್ನು ಮಾಡುತ್ತ, ಆ ಕತ್ತಿಯಿಂದಲೇ ಶೋಣಿತಾಕ್ಷನ ಭುಜದ ಮೇಲೆ ಜನಿವಾರದೆಳೆಯಂತೆ ಉದ್ದಕ್ಕೆ ಸೀಳಿದನು. ಮತ್ತು ಆ ಖಡ್ಗವನ್ನೇ ಕೈಯಲ್ಲಿ ಹಿಡಿದು ಆಗಾಗ ಸಿಂಹನಾದವನ್ನು ಮಾಡುತ್ತ, ರಣರಂಗದಲ್ಲಿ ಇತರ ರಾಕ್ಷಸರನ್ನಿದಿರಿಸುವುದಕ್ಕೆ ಹೊರಟನು. ಇಷ್ಟರಲ್ಲಿ ಶೋಣಿತಾಕ್ಷನಾದರೋ ಕ್ರೂರವಾದ ಆ ಖಡ್ಗಪ್ರಹಾರಕ್ಕೂ ಸಾಯದೆ ಮುಹೂರ್ತ ಮಾತ್ರದಲ್ಲಿ ಚೇತರಿಸಿಕೊಂಡು, ಸುವರ್ಣಾಂಗದಗಳಿಂದ ಭೂಷಿತವಾದ ತೋಳುಗಳಲ್ಲಿ ಉಕ್ಕಿನ ಗದೆಯನ್ನು ಹಿಡಿದು ತಿರುಗಿಸುತ್ತ ಅಂಗದನನ್ನು ಬೆನ್ನಟ್ಟಿ ಹೋದನು. ಇಷ್ಟರಲ್ಲಿ ಬಲಾಢ್ಯನಾದ ಯೂಪಾಕ್ಷನು ಪ್ರಜಂಘನೊಡನೆ ಸೇರಿ ರಥದಲ್ಲಿ ಕುಳಿತು ಕೋಪದಿಂದ ಅಂಗದನನ್ನಿದಿರಿಸುವುದಕ್ಕೆ ಬಂದನು. ಆಗ ಶೋಣಿತಾಕ್ಷ ಪ್ರಜಂಘರ ನಡುವೆ ಸಿಕ್ಕಿಬಿದ್ದ ಅಂಗದನು ವಿಶಾಖಾನಕ್ಷತ್ರಗಳ ನಡುವೆ ಸೇರಿದ ಪೂರ್ಣಚಂದ್ರನಂತೆ ಕಾಣುತ್ತಿದ್ದನು. ಹೀಗೆ ಅಂಗದನು ಆ ರಾಕ್ಷಸರಿಬ್ಬರ ನಡುವೆ ಸಿಕ್ಕಿಬಿದ್ದಿರುವುದನ್ನು ನೋಡಿದೊಡನೆ ಮೈಂದದ್ವಿವಿದರಿಬ್ಬರೂ ತಮ್ಮ ಮಾವನಾದ ಆ ಅಂಗದನನ್ನು ಅಪಾಯದಿಂದ ತಪ್ಪಿಸುವುದಕ್ಕಾಗಿ ಬೇಗನೆ ಬಂದು ಅವನ ಸಮೀಪದಲ್ಲಿ ನಿಂತು ತಮಗೆ ಪ್ರತಿಭಟರಾರೆಂದು ನಿರೀಕ್ಷಿಸುತ್ತಿದ್ದರು. ಇಷ್ಟರಲ್ಲಿ ಮಹಾಕಾಯವುಳ್ಳವರಾಗಿಯೂ, ಬಲಾಢ್ಯರಾಗಿಯೂ ಇದ್ದ ಆ ಮೂವರು ರಾಕ್ಷಸರೂ, ಕತ್ತಿಗಳನ್ನೂ, ಗುರಾಣಿಗಳನ್ನೂ, ಗದೆಗಳನ್ನೂ ಹಿಡಿದು ಬಹಳ ಸಾಹಸದಿಂದ ಈ ವಾನರರನ್ನಿದಿರಿಸಿ ನಿಂತರು. ಹೀಗೆ ಅಂಗದ ಮೈಂದ ದ್ವಿವಿದರೆಂಬ ಮೂವರು ವಾನರರೊಡನೆ, ಪ್ರಜಂಘ, ಯೂಪಾಕ್ಷ, ಶೋಣಿತಾಕ್ಷರೆಂಬ ಮೂವರು ರಾಕ್ಷಸರೂ ಕೈಕಲೆತು ಯುದ್ಧಕ್ಕೆ ತೊಡಗಿದರು. ನೋಡುವವರಿಗೆ ಮೈಯಲ್ಲಿ ರೋಮಾಂಚವನ್ನು ಹುಟ್ಟಿಸುವಂತೆ ಅವರಿಗೆ ಮಹಾ ಭಯಂಕರವಾದ ಯುದ್ಧವು ನಡೆಯಿತು. ವಾನರರು ತಮ್ಮ ಮೈಗೆ ಗುರಿಯಿಟ್ಟು ಬೀಸಿದ ವೃಕ್ಷಗಳೆಲ್ಲವನ್ನೂ ಪ್ರಜಂಘನು ತನ್ನ ಕತ್ತಿಯಿಂದ ಕತ್ತರಿಸುತ್ತಬಂದನು. ಆ ವಾನರರು ತಮ್ಮ ರಥದ ಮೇಲೆಯೂ, ರಥಾಶ್ವಗಳ ಮೇಲೆಯೂ

ಬೀಸುತ್ತಿದ್ದ ವೃಕ್ಷಗಳನ್ನೂ, ಪರ್ವತಶಿಖರಗಳನ್ನೂ ಯೂಪಾಕ್ಷನು ನಡು ದಾರಿಯಲ್ಲಿಯೇ ತನ್ನ ಬಾಣಗಳಿಂದ ಕತ್ತರಿಸುತ್ತಬಂದನು. ಹಾಗೆಯೇ ಶೋಣಿತಾಕ್ಷನೂ ಕೂಡ ಮೈಂದದ್ವಿವಿದರು ತನ್ನ ಮೇಲೆ ಬೀಸಿದ ವೃಕ್ಷಗಳನ್ನು ತನ್ನ ಗದೆಯಿಂದ ತುಂಡುಮಾಡುತ್ತಬಂದನು. ಈ ನಡುವೆ ಪ್ರಜಂಘನು ಶತ್ರುಗಳ ಮರ್ಮವನ್ನು ಭೇದಿಸತಕ್ಕ ತನ್ನ ದೊಡ್ಡ ಕತ್ತಿಯನ್ನು ಹಿಡಿದು ಅಂಗದನನ್ನು ಕೊಲ್ಲುವುದಕ್ಕಾಗಿ ವೇಗದಿಂದ ಹೊರಟನು. ಇದನ್ನು ನೋಡಿ ಬಲಾಢ್ಯನಾದ ಅಂಗದನು, ಅವನು ತನ್ನ ಮೇಲೆ ಬಂದು ಬೀಳುವಷ್ಟರಲ್ಲಿಯೇ ಒಂದು ದೊಡ್ಡ ಅಶ್ವಕರ್ಣವೃಕ್ಷವನ್ನೆತ್ತಿ ಅವನ ಮೇಲೆ ಬೀಸಿದನು. ಮತ್ತು ತನ್ನ ಮುಷ್ಟಿಯಿಂದ ಪ್ರಜಂಘನ ಖಡ್ಗಸಹಿತವಾದ ತೋಳಿನ ಮೇಲೆ ವೇಗದಿಂದಪ್ಪಳಿಸಿದನು. ಈ ಮುಷ್ಟಿಪ್ರಹಾರಕ್ಕೆ ಪ್ರಜಂಘನು ಹಿಡಿದಿದ್ದ ಕತ್ತಿಯು ಅವನ ಕೈಯಿಂದ ಜಾರಿ ಕೆಳಗೆ ಬಿದ್ದಿತು. ಕನ್ನೈದಿಲೆಯಂತೆ ಕಾಂತಿಯುಳ್ಳ ಆ ಖಡ್ಗವು ಕೈಯಿಂದ ಜಾರಿ ಬಿದ್ದುದನ್ನು ನೋಡಿ ಮಹಾ ಬಲಶಾಲಿಯಾದ ಪ್ರಜಂಘನು ವಜ್ರಸಮಾನವಾದ ಮುಷ್ಟಿಯನ್ನು ಹಿಡಿದು, ವಾನರೋತ್ತಮನಾದ ಅಂಗದನ ಮೇಲೆ ಬಿದ್ದು, ಆ ಮುಷ್ಟಿಯಿಂದ ಅವನ ಹಣೆಯ ಮೇಲೆ ಪ್ರಹರಿಸಿದನು. ಈ ಮುಷ್ಟಿಪ್ರಹಾರಕ್ಕೆ ಅಂಗದನ ದೇಹವು ಮುಹೂರ್ತ ಕಾಲದವರೆಗೆ ನಡುಗಿಹೋಯಿತು. ಆದರೆ ಮಹಾ ಪರಾಕ್ರಮಿಯಾದ ಅಂಗದನು ಕ್ಷಣಮಾತ್ರದಲ್ಲಿಯೇ ಚೇತರಿಸಿಕೊಂಡು, ಕೆಳಗಿದ್ದ ಖಡ್ಗವನ್ನೆತ್ತಿ, ಆ ಕತ್ತಿಯಿಂದಲೇ ಪ್ರಜಂಘನ ತಲೆಯನ್ನು ಕತ್ತರಿಸಿ ಕೆಡಹಿದನು. ಆಗ ಯೂಪಾಕ್ಷನು, ತನ್ನ ಚಿಕ್ಕತಂದೆಯಾದ ಪ್ರಜಂಘನು ಯುದ್ಧದಲ್ಲಿ ಹತನಾದುದನ್ನು ನೋಡಿ, ದುಃಖದಿಂದ ಕಣ್ಣೀರು ತುಂಬಿಕೊಂಡು ತಟ್ಟನೆ ರಥದಿಂದ ಕೆಳಕ್ಕಿಳಿದು, ತನ್ನಲ್ಲಿದ್ದ ಬಾಣವು ತೀರಿಹೋದುದನ್ನು ನೋಡಿ, ಒಂದು ಕತ್ತಿಯನ್ನು ಕೈಗೆತ್ತಿಕೊಂಡನು. ಹೀಗೆ ಯೂಪಾಕ್ಷನು ಕತ್ತಿಯನ್ನು ಹಿಡಿದು ಬರುವುದನ್ನು ನೋಡಿ, ದ್ವಿವಿದನು ವೇಗದಿಂದ ಅವನ ಮೇಲೆ ನುಗ್ಗಿ, ಅವನ ಎದೆಯ ಮೇಲೆ ಹೊಡೆದು, ಅವನನ್ನು ಬಲಾತ್ಕಾರದಿಂದ ತಡೆದು ನಿಲ್ಲಿಸಿದನು. ಆಗ ಶೋಣಿತಾಕ್ಷನು, ತನ್ನ ಸಹೋದರನಾದ ಯೂಪಾಕ್ಷನನ್ನು

ದ್ವಿವಿದನು ಹಿಡಿದುದನ್ನು ನೋಡಿ, ತನ್ನ ಗದೆಯಿಂದ ದ್ವಿವಿದನ ಎದೆಯ ಮೇಲೆ ಹೊಡೆದನು. ಈ ಗದಾಪ್ರಹಾರದಿಂದ ಮಹಾ ಬಲಾಢ್ಯನಾದ ದ್ವಿವಿದನಿಗೂ ಕೂಡ ಸ್ವಲ್ಪಕಾಲದವರೆಗೆ ಮೈತಿಳಿಯದಂತಾಯಿತು. ಆದರೆ ಅವನೂ ಕ್ಷಣಮಾತ್ರದಲ್ಲಿಯೇ ಚೇತರಿಸಿಕೊಂಡು, ಶೋಣಿತಾಕ್ಷನು ತಿರುಗಿ ತನ್ನನ್ನು ಹೊಡೆಯುವುದಕ್ಕಾಗಿ ಗದೆಯೆತ್ತಿರುವುದನ್ನು ನೋಡಿ ತಟ್ಟನೆ ಮುಂದೆ ಹೋಗಿ, ಆ ಗದೆಯನ್ನು ಅವನ ಕೈಯಿಂದ ಕಿತ್ತುಕೊಂಡನು. ಇಷ್ಟರಲ್ಲಿ ಅತ್ತಲಾಗಿ ವಾನರರೋತ್ತಮನಾದ ಮೈಂದನು ತನ್ನ ಅಂಗೈಯಿಂದ ಯೂಪಾಕ್ಷನ ಎದೆಯ ಮೇಲೆ ಪ್ರಹರಿಸಿದನು. ಹೀಗೆ ಬಲಾಢ್ಯರಾದ ಯೂಪಾಕ್ಷಶೋಣಿತಾಕ್ಷರಿಬ್ಬರೂ, ಮೈಂದದ್ವಿವಿದರೊಡನೆ ಕೈಕಲೆತು ಒಬ್ಬರನ್ನೊಬ್ಬರು ಹಿಡಿದೆಳೆದು, ಬಹಳವಾಗಿ ಹೆಣಗಾಡುತ್ತಿದ್ದರು. ಕೊನೆಗೆ ವೀರ್ಯವಂತನಾದ ದ್ವಿವಿದನು ತನ್ನ ಉಗುರುಗಳಿಂದಲೇ ಶೋಣಿತಾಕ್ಷನ ಮುಖವೆಲ್ಲವನ್ನೂ ಪರಚಿ, ಅವನನ್ನು ವೇಗದಿಂದ ಗಿರಗಿರನೆ ತಿರುಗಿಸಿ ನೆಲಕ್ಕೆ ಬಡಿದು ಅವನ ದೇಹವೆಲ್ಲವನ್ನೂ ಹಿಸುಕಿ, ಒಂದೇ ಮಾಂಸದ ಮುದ್ದೆಯಾಗಿ ಮಾಡಿಟ್ಟನು. ಇದೇ ಕಾಲದಲ್ಲಿ ಮೈಂದನೂ ಕೂಡ, ಯೂಪಾಕ್ಷನನ್ನು ತನ್ನ ಎರಡು ತೋಳುಗಳ ನಡುವೆ ಸಿಕ್ಕಿಸಿಕೊಂಡು, ಬಲವಾಗಿ ಹಿಡಿಸಿ ಅವನನ್ನು ನೆಲದಲ್ಲಿ ಕುಕ್ಕಿ ಕೆಡಹಿದನು. ಹೀಗೆ ಆ ಯುದ್ಧದಲ್ಲಿ ಅನೇಕ ವೀರರು ಹತರಾದುದನ್ನು ನೋಡಿ ಅಲ್ಲಿದ್ದ ಇತರ ರಾಕ್ಷಸಸೇನೆಯೆಲ್ಲವೂ ಹೆದರಿ, ಅಲ್ಲಿ ನಿಲ್ಲಲಾರದೆ ಪಲಾಯನಮಾಡಿ, ಕುಂಭಕರ್ಣನ ಮಗನಾದ ಕುಂಭನಲ್ಲಿ ಹೋಗಿ ಮರೆಹೊಕ್ಕಿತು. ಆಗ ಕುಂಭನು ಭಯಾತುರರಾಗಿದ್ದ ಆ ಸೈನಿಕರನ್ನು ಸಮಾಧಾನಪಡಿಸಿ, ಇದಿರಿಲ್ಲದ ವೀರ್ಯವುಳ್ಳ ವಾನರರಿಂದ ಅನೇಕ ರಾಕ್ಷಸವೀರರು ಹತರಾದುದನ್ನೂ ನೋಡಿ, ತಡೆಯಲಾರದ ಕೋಪದಿಂದ ಜ್ವಲಿಸುತ್ತ, ಬೇರೊಬ್ಬರಿಗೆ ಸಾಧ್ಯವಲ್ಲದ ದೊಡ್ಡ ಸಾಹಸವನ್ನು ಆ ಯುದ್ಧದಲ್ಲಿ ತಾನು ನಡೆಸಬೇಕೆಂದು ನಿಶ್ಚಯಿಸಿದನು. ಧನುರ್ಧಾರಿಗಳಲ್ಲಿ ಮೇಲೆನಿಸಿಕೊಂಡ ಆ ಕುಂಭನು, ಕ್ಷಣಮಾತ್ರವೂ ಸಹಿಸಲಾರದೆ, ಆಗಲೇ ತನ್ನ ಬಿಲ್ಲನ್ನೆತ್ತಿ ಹಿಡಿದು, ಕಾಳಸರ್ಪಗಳಿಗೆ ಸಮಾನವಾಗಿ ಮರ್ಮಭೇದಕಗಳಾದ ಬಾಣಗಳನ್ನು ಬಿಡುವುದಕ್ಕೆ ತೊಡಗಿದನು. ಕಾಂತಿವಿಶಿಷ್ಟವಾದ ಸಾಣೆನಿಂ

ದಲೂ ಋಜುವಾದ ಬಾಣದಿಂದಲೂ ಕೂಡಿ ಆತನ ಕೈಯಲ್ಲಿ ಶೋಭಿಸುತ್ತಿದ್ದ ಮಹಾಧನುಸ್ಸು, ಆಕಾಶದಲ್ಲಿ ಬೆಳ್ಳಿಮಿಂಚಿನಿಂದಲೂ, ಐರಾವತವೆಂಬ ಋಜುಧನುಸ್ಸಿನಿಂದಲೂ ಕೂಡಿ ಶೋಭಿಸುವ ಎರಡನೆಯ ಇಂದ್ರಧನುಸ್ಸಿನಂತೆ ಪ್ರಕಾಶಿಸುತ್ತಿತ್ತು. ಆಗ ಕುಂಭನು ಚಿನ್ನದ ಹಿಡಿಯುಳ್ಳ ಗರಿಗಣೆಯನ್ನು ತನ್ನ ಬಿಲ್ಲಿನಲ್ಲಿ ಸಂಧಾನಮಾಡಿ, ಆಕರ್ಣಾಂತವಾಗಿ ಎಳೆದು, ಅದರಿಂದ ದ್ವಿವಿದನನ್ನು ಹೊಡೆದನು. ಪರ್ವತಾಕಾರವುಳ್ಳ ದ್ವಿವಿದನೂ ಕೂಡ ಆ ಬಾಣವು ತಗುಲಿದೊಡನೆ ಮೈಮರೆತು ತತ್ತರಿಸಿ ಕೆಳಗೆ ಬಿದ್ದನು. ಆಗ ಮೈಂದನು ತನ್ನ ತಮ್ಮನಿಗುಂಟಾದ ಈ ಭಂಗವನ್ನು ನೋಡಿ, ಕೋಪದಿಂದ ಒಂದು ದೊಡ್ಡ ಶಿಲೆಯನ್ನೆತ್ತಿಕೊಂಡು, ವೇಗದಿಂದ ಬಂದು ಕುಂಭನನ್ನೆದಿರಿಸಿ ನಿಂತನು. ಬಲಾಢ್ಯನಾದ ಮೈಂದನು ಕುಂಭನ ಮೇಲೆ ಆ ಶಿಲೆಯನ್ನು ಬೀಸುವಾಗಲೇ, ಆ ರಾಕ್ಷಸನು ಐದು ತೀಕ್ಷ್ಣ ಬಾಣಗಳಿಂದ ಆ ಶಿಲೆಯನ್ನು ತುಂಡುಮಾಡಿ ಕೆಡಹಿದನು. ಮತ್ತು ತೀಕ್ಷ್ಣಮುಖವುಳ್ಳ ಸರ್ಪಸಮಾನವಾದ ಬೇರೊಂದು ಬಾಣವನ್ನು ಬಿಲ್ಲಿನಲ್ಲಿ ಸಂಧಿಸಿ, ದ್ವಿವಿದಾಗ್ರಜನಾದ ಮೈಂದನ ಎದೆಗೆ ಗುರಿಯಿಟ್ಟು ಹೊಡೆದನು. ಈ ಬಾಣವು ಮೈಂದನ ಮರ್ಮಸ್ಥಾನಕ್ಕೆ ತಗುಲಿ, ಅದರಿಂದ ಅವನು ಮೂರ್ಛಿತನಾಗಿ ಕೆಳಗೆ ಬಿದ್ದನು. ಆಗ ಅಂಗದನು, ತನ್ನ ಮಾವಂದಿರಾದ ಮೈಂದದ್ವಿವಿದರಿಬ್ಬರೂ ರಾಕ್ಷಸ ಬಾಣದಿಂದ ತಾಡಿತರಾಗಿ ಬಿದ್ದುದನ್ನು ನೋಡಿ, ಧನುರ್ಧಾರಿಯಾಗಿ ನಿಂತಿದ್ದ ಆ ಕುಂಭನ ಮೇಲೆ ವೇಗದಿಂದ ಹೊರಟನು. ಇದನ್ನು ನೋಡಿ ಕುಂಭನು, ಅಂಕುಶದಿಂದ ಆನೆಯನ್ನು ತಿವಿಯುವಂತೆ, ಮೊದಲು ಅವನನ್ನು ಅಯೋಮಯಗಳಾದ ಐದು ಬಾಣಗಳಿಂದ ತಡೆದು, ಆಮೇಲೆ ತಿರುಗಿ ಮೂರು ತೀಕ್ಷ್ಣ ಬಾಣಗಳಿಂದ ಕೂಡಿ ಚೆನ್ನಾಗಿ ಸಾಣೆಯಿಕ್ಕಿ ಮೊನೆಮುರಿಯದ ಬಗೆಬಗೆಯ ತೀಕ್ಷ್ಣಬಾಣಗಳಿಂದ ಅಂಗದನನ್ನು ಮೇಲೆ ಮೇಲೆ ಪ್ರಹರಿಸುತ್ತಲೇ ಇದ್ದನು. ಹೀಗೆ ಅಂಗದನ ಸರ್ವಾವಯವಗಳಲ್ಲಿಯೂ ಬಾಣಗಳು ನಾಟಿದರೂ ಅವನು ಸ್ವಲ್ಪಮಾತ್ರವೂ ಕದಲದೆ, ಶಿಲೆಗಳನ್ನೂ, ವೃಕ್ಷಗಳನ್ನೂ, ಕಿತ್ತು ತಂದು ಕುಂಭನ ನಡುನೆತ್ತಿಗೆ ಗುರಿಯಿಟ್ಟು ಬೀಸುತ್ತಿದ್ದನು. ಜಯಸಂಪತ್ತುಳ್ಳ ಕುಂಭನೂ ಕೂಡ ಅಂಗದನು ಬೀಸಿದ

ವೃಕ್ಷಗಳೆಲ್ಲವನ್ನೂ ತನ್ನ ಬಾಣಗಳಿಂದ ಕತ್ತರಿಸಿ, ಅವನು ಪ್ರಯೋಗಿಸಿದ ಶಿಲೆಗಳನ್ನೂ ಚೂರ್ಣಮಾಡುತ್ತಬಂದನು. ಹೀಗೆ ತನ್ನ ಶಿಲಾವೃಕ್ಷ ವರ್ಷಗಳೆಲ್ಲವೂ ಪ್ರತಿಹತವಾದುದನ್ನು ಕಂಡು ಅಂಗದನು ಕೋಪದಿಂದ ಮುಂದೆ ಹೋದನು. ಇದನ್ನು ನೋಡಿ ಕುಂಭನು ಆನೆಯನ್ನು ಕೋಲ್ಗಳಿಂದ ತಿವಿಯುವಂತೆ ಎರಡು ತೀಕ್ಷ್ಣಬಾಣಗಳನ್ನು ತೆಗೆದು ಅಂಗದನ ಹುಬ್ಬುಗಳಿಗೆ ಗುರಿಯಿಟ್ಟು ಹೊಡೆದನು. ಈ ಬಾಣಗಳು ಬಂದು ಹುಬ್ಬುಗಳಿಗೆ ನಾಟಿದೊಡನೆ ಅಂಗದನ ಕಣ್ಣುಗಳೆರಡೂ ಮುಚ್ಚಿಹೋದುವು. ಎರಡು ಕಣ್ಣುಗಳಲ್ಲಿಯೂ ರಕ್ತವು ಕಿತ್ತುಕೊಂಡಿತು. ಆಗ ಅಂಗದನು ರಕ್ತವು ಸುರಿಯದಂತೆ ಕಣ್ಣುಗಳೆರಡನ್ನೂ ಒಂದು ದೊಡ್ಡ ಮರದಕಡೆಗೆ ಏಡಿ, ಅದಕ್ಕೆ ತೋಳನ್ನು ಕೊಟ್ಟು, ಎದೆಯಿಂದೊತ್ತಿ ಕದಲಿಸಿ, ಮದದಾನೆಯು ಸುಂಡಿಲನ್ನು ಸುತ್ತಿಕೀಳುವಂತೆ ಅದನ್ನು ಕಿತ್ತುಕೊಂಡನು. ಇಂದ್ರಧ್ವಜದಂತೆಯೂ, ಮಂದರಪರ್ವತದಂತೆಯೂ ಮಹತ್ತಾದ ಆ ವೃಕ್ಷವನ್ನು ಅಂಗದನು ಒಂದೇ ಕೈಯಿಂದೆತ್ತಿ, ಸಮಸ್ತ ರಾಕ್ಷಸರೂ ಆಶ್ಚರ್ಯದಿಂದ ನೋಡುತ್ತಿರುವ ಹಾಗೆಯೇ ಕುಂಭನಮೇಲೆ ವೇಗದಿಂದ ಬೀಸುವುದಕ್ಕೆ ಪ್ರಯತ್ನಿಸಿದನು. ಇವನು ಆ ಮರವನ್ನು ಬೀಸುವಷ್ಟರಲ್ಲಿಯೇ ಕುಂಭನು ಶರೀರಭೇದಕಗಳಾದ ಏಳು ತೀಕ್ಷ್ಣಬಾಣಗಳಿಂದ ಅಂಗದನನ್ನು ಪ್ರಹರಿಸಿದನು. ಈ ಬಾಣಪ್ರಹಾರದಿಂದ ಅಂಗದನು ಬಹಳವಾಗಿ ನೊಂದು ಪ್ರಜ್ಞೆತಪ್ಪಿದನು. ಸಮುದ್ರಮಧ್ಯದಲ್ಲಿ ಮುಳುಗಿಹೋದವನಂತೆ, ಅಂಗದನು ಮೂರ್ಛೆಯಿಂದ ಮೈಮರೆತಿರುವುದನ್ನು ನೋಡಿ ಅಲ್ಲಿದ್ದ ಇತರ ವಾನರರೆಲ್ಲರೂ ಭಯದಿಂದೋಡಿಬಂದು ಈ ಸಂಗತಿಯನ್ನು ರಾಮನಲ್ಲಿ ವಿಜ್ಞಾಪಿಸಿದರು. ಅಂಗದನಿಗುಂಟಾದ ಅಪಾಯವನ್ನು ಕೇಳಿದೊಡನೆ ರಾಮನು ಜಾಂಬವಂತನೇ ಮೊದಲಾದ ಕೆಲವು ಯೂಥಪತಿಗಳನ್ನು ಕರೆದು ಅಂಗದನ ಸಹಾಯಕ್ಕಾಗಿ ಹೋಗುವಂತೆ ನಿಯಮಿಸಿದನು. ರಾಮಾಜ್ಞೆಯನ್ನು ಕೇಳಿ ಆ ವಾನರ ಯೂಥಪತಿಗಳೆಲ್ಲರೂ, ಬಹಳ ಕೋಪಗೊಂಡವರಾಗಿ ಧನುರ್ಧಾರಿಯಾದ ಕುಂಭನಿದ್ದ ಕಡೆಗೆ ಹೋದರು. ಈ ವಾನರರೆಲ್ಲರೂ ಅಂಗದನನ್ನು ಅಪಾಯದಿಂದ ತಪ್ಪಿಸಬೇಕೆಂಬ ಆತುರದಿಂದ ವೃಕ್ಷಗಳನ್ನೂ,

ಶಿಲೆಗಳನ್ನೂ ಹಿಡಿದು, ಕೋಪದಿಂದ ಕೆಂಪೇರಿದ ಕಣ್ಣುಳ್ಳವರಾಗಿ, ಕುಂಭನನ್ನಿದಿರಿಸಿ ಹೋದರು. ಜಾಂಬವಂತನೂ, ಸುಷೇಣನೂ, ವೇಗದರ್ಶಿಯೆಂಬ ವಾನರನೂ, ಈ ಮೂವರೂ ಮುಂದಾಗಿ ನಿಂತರು. ಈ ವಾನರರು ಗುಂಪಾಗಿ ಯುದ್ಧಕ್ಕೆ ಬರುವುದನ್ನು ಕಂಡು ಕುಂಭನು, ಗಿಡಗಳನ್ನೊಟ್ಟಿ ಜಲಪ್ರವಾಹವನ್ನು ತಡೆಯುವಂತೆ ಬಾಣಸಮೂಹಗಳಿಂದ ಅವರನ್ನು ತಡೆದನು. ಈ ವಾನರೋತ್ತಮರೆಲ್ಲರೂ ಬಹಳ ಬಲಶಾಲಿಗಳಾಗಿದ್ದರೂ, ಆ ಕುಂಭನ ಬಾಣಗಳಿಂದ ನಿವಾರಿತರಾಗಿ, ಸಮುದ್ರವು ಎಲ್ಲೆಯನ್ನು ಹೇಗೋ ಹಾಗೆ ಆ ಬಾಣಗಳನ್ನು ಮೀರಿ ಬರಲಾರದೆ ಹೋದರು. ಹೀಗೆ ವಾನರರು ಕುಂಭನ ಬಾಣವರ್ಷಗಳಿಂದ ಪೀಡಿತರಾದುದನ್ನು ಕಂಡು ವಾನರೋತ್ತಮನಾದ ಸುಗ್ರೀವನು ಅಂಗದನನ್ನು ಅಪಾಯಕ್ಕೆ ಗುರಿಯಾಗದಂತೆ ತನ್ನ ಹಿಂದೆ ಬಿಟ್ಟುಕೊಂಡು ಸಿಂಹವು ಪರ್ವತಾಗ್ರದಲ್ಲಿ ತಿರುಗುವ ಆನೆಯ ಮೇಲೆ ಬೀಳುವಂತೆ ವೇಗದಿಂದ, ಮುಂದೆ ಹೋಗಿ ಕುಂಭನನ್ನಿದಿರಿಸಿದನು. ಮತ್ತು ಆಗ ಸುಗ್ರೀವನು ದೊಡ್ಡ ದೊಡ್ಡ ಬೆಟ್ಟಗಳನ್ನೂ, ಅಶ್ವಕರ್ಣ, ಆಲ ಮುಂತಾದ ಬಗೆಬಗೆಯ ವೃಕ್ಷಗಳನ್ನೂ ಅವನ ಮೇಲೆ ಬೀಸಿದನು. ಆಕಾಶವೆಲ್ಲವನ್ನೂ ಮರೆಸುವಂತೆ ತಡೆಯಲಸಾಧ್ಯವಾಗಿ ಮೇಲೆ ಮೇಲೆ ಬಂದು ಬೀಳುತ್ತಿದ್ದ ಆ ಶಿಲಾವೃಕ್ಷವರ್ಷಗಳೆಲ್ಲವನ್ನೂ ಕುಂಭನು ತನ್ನ ತೀಕ್ಷ್ಣಬಾಣಗಳಿಂದ ಕ್ಷಣಮಾತ್ರದಲ್ಲಿ ಕತ್ತರಿಸಿ ಕೆಡಹಿದನು. ತೀವ್ರವಾಗಿ ಹೊಡೆಯುತ್ತಿರುವ ಆ ಕುಂಭನ ಬಾಣಗಳೆಲ್ಲವೂ, ಸುಗ್ರೀವಪ್ರಯುಕ್ತಗಳಾದ ಮರಗಳಲ್ಲಿ ಸುತ್ತಲೂ ನಾಟಿನಿಂತಾಗ, ಆ ಮರಗಳೆಲ್ಲವೂ ನೂರಾರು ಮುಳ್ಳುಗಳುಳ್ಳ ಭಯಂಕರಗಳಾದ ಶತಘ್ನಿಗಳಂತೆ ಕಾಣಿಸುತ್ತಿದ್ದುವು. ತಾನು ಪ್ರಯೋಗಿಸಿದ ವೃಕ್ಷವರ್ಷವು ಕುಂಭನಿಂದ ಆಗಾಗ ಕತ್ತರಿಸಲ್ಪಡುತ್ತಿದ್ದರೂ, ಶ್ರೀಮಂತನಾಗಿಯೂ, ಮಹಾಬಲಾಢ್ಯನಾಗಿಯೂ ಇದ್ದ ಸುಗ್ರೀವನು ಸ್ವಲ್ಪಮಾತ್ರವೂ ಎದೆಗುಂದಲಿಲ್ಲ. ಕುಂಭನ ಬಾಣಗಳು ಆಗಾಗ ತನ್ನ ದೇಹದಲ್ಲಿ ನಾಟಿಕೊಳ್ಳುತ್ತಿದ್ದರೂ ಅವೆಲ್ಲವನ್ನೂ ಸಹಿಸಿಕೊಂಡು ಧೈರ್ಯದಿಂದ ಮುಂದೆ ನುಗ್ಗಿ, ಇಂದ್ರಧನುಸ್ಸಿನಂತೆ ಕಾಂತಿವಿಶಿಷ್ಟವಾಗಿದ್ದ ಆ ಕುಂಭನ ಬಿಲ್ಲನ್ನು ಕಿತ್ತುಕೊಂಡು, ಅದನ್ನು ಎರಡು

ತುಂಡಾಗಿ ಮುರಿದು ಹಾಕಿದನು. ಹೀಗೆ ಸುಗ್ರೀವನು ವೇಗದಿಂದ ಆ ಕುಂಭನ ಮೇಲೆ ಹಾರಿ, ಬೇರೊಬ್ಬರಿಗೆ ಸಾಧ್ಯವಲ್ಲದ ಈ ಕಾರ್ಯವನ್ನು ನಡೆಸಿದಮೇಲೆ ಕೆಳಕ್ಕೆ ಧುಮುಕಿ, ಕೊಂಬಿಲ್ಲದ ಆನೆಯಂತೆ ನಿರಾಯುಧನಾಗಿದ್ದ ಆ ಕುಂಭನನ್ನು ಕುರಿತು ಕೋಪದಿಂದ "ಎಲೆ ರಾಕ್ಷಸಾ! ನಿಕುಂಭಾಗ್ರಜಾ! ಭಲೆ! ನೀನು ತೋರಿಸುತ್ತಿರುವ ಈ ವೀರ್ಯವೂ, ಈ ಬಾಣವೇಗವೂ ಮಹಾದ್ಭುತವಾಗಿರುವುದು. ಯುದ್ಧಚಾತುರ್ಯವೂ, ವೀರ್ಯದ ಪ್ರಭಾವವೂ, ರಾವಣನಿಗೂ ನಿನಗೂ ಒಂದೇ ಸಮನೆಂದು ಹೇಳಬಹುದು. ಮತ್ತು ಪ್ರಹ್ಲಾದನನ್ನೂ, ಬಲಿಚಕ್ರವರ್ತಿಯನ್ನೂ, ವೃತ್ರಾಸುರಸಂಹಾರಿಯಾದ ಇಂದ್ರನನ್ನೂ, ಕುಬೇರನನ್ನೂ, ವರುಣನನ್ನೂ ಹೋಲುವ ಅದ್ಭುತಶಕ್ತಿಯು ನಿನ್ನಲ್ಲಿರುವುದು. ಬಲದಲ್ಲಿಯೂ, ಕಾರ್ಯದಲ್ಲಿಯೂ ನೀನೊಬ್ಬನೇ ನಿನ್ನ ತಂದೆಗೆ ತಕ್ಕ ಮಗನೆಂದು ಹೇಳಬಹುದು. ಶತ್ರುಗಳನ್ನಡಗಿಸತಕ್ಕ ಮಹಾಬಾಹುವಾದ ನೀನೊಬ್ಬನು ಮಾತ್ರವೇ ಧನುರ್ಧಾರಿಯಾಗಿ ನಿಂತರೂ, ಜಿತೇಂದ್ರಿಯನನ್ನು ಮನೋವ್ಯಥೆಗಳು ಹೇಗೋ ಹಾಗೆ ದೇವತೆಗಳಾದರೂ ನಿನ್ನನ್ನು ಜಯಿಸಲಾರರು. ನಿನ್ನ ಬುದ್ಧಿಯೂ ಅಸಾಧಾರಣವಾದುದು. ಎಲ್ಲಿ? ನನ್ನಿದಿರಿಗೆ ನಿನ್ನ ಪರಾಕ್ರಮವನ್ನು ಇನ್ನೂ ಚೆನ್ನಾಗಿ ತೋರಿಸು ನೋಡುವೆನು! ನಿನ್ನ ದೊಡ್ಡಪ್ಪನು ವರಬಲದಿಂದ ಕೊಬ್ಬಿ ದೇವದಾನವರನ್ನಾದರೂ ಲಕ್ಷ್ಯ ಮಾಡುವವನಲ್ಲ. ನಿನ್ನ ಚಿಕ್ಕತಂದೆಯಾದ ಕುಂಭಕರ್ಣನಾದರೋ ಸಹಜವಾದ ವೀರ್ಯದಿಂದಲೇ ಸುರಾಸುರರನ್ನೂ ತಡೆಯಬಲ್ಲವನಾಗಿದ್ದನು. ಇವೆರಡೂ ನಿನ್ನಲ್ಲಿ ಕಲೆತಿರುವುವು. ಇನ್ನು ನಿನ್ನ ಸಾಮರ್ಥ್ಯವನ್ನು ಹೇಳಬೇಕಾದುದೇನು? ನೀನು ಧನುರ್ವಿದ್ಯೆಯಲ್ಲಿ ಇಂದ್ರಜಿತ್ತಿಗೂ ವೀರ್ಯದಲ್ಲಿ ರಾವಣನಿಗೂ ಸಮನಾಗಿರುವೆ. ಆದುದರಿಂದ ನೀನೊಬ್ಬನೇ ಸಮಸ್ತ ರಾಕ್ಷಸರಿಗಿಂತಲೂ ಬಲದಲ್ಲಿಯೂ, ವೀರ್ಯದಲ್ಲಿಯೂ ಮೇಲೆನಿಸಿಕೊಂಡಿರುವೆ. ಇಂದ್ರಶಂಬರರಂತೆ ಈಗ ನೀನೂ ನಾನೂ ಕೈಕಲೆತು ನಡೆಸುವ ಮಹಾದ್ಭುತವಾದ ಈ ಯುದ್ಧವನ್ನು ಸಮಸ್ತ ಭೂತಗಳೂ ಕುತೂಹಲದಿಂದ ನೋಡಲಿ. ಮುಂದೆ ಬಂದು ಯುದ್ಧಕ್ಕೆ ನಿಲ್ಲು! ಇದುವರೆಗೆ ನೀನು ಎಣೆಯಿಲ್ಲದ ಎಷ್ಟೋ ವೀರ್ಯಕಾರ್ಯಗಳನ್ನು ನಡೆಸಿದೆ.

ನಿನ್ನ ಅಸ್ತ್ರಚಾತುರ್ಯವನ್ನೂ ತೋರಿಸಿರುವೆ! ಭಯಂಕರಪರಾಕ್ರಮವುಳ್ಳ ಅನೇಕ ವಾನರವೀರರನ್ನೂ ಕೊಂದುಹಾಕಿರುವೆ! ಇಷ್ಟು ಕಾರ್ಯಗಳನ್ನು ನಡೆಸಿ ನೀನು ಬಹಳವಾಗಿ ಬಳಲಿರುವಾಗ ನಿನ್ನನ್ನು ಈಗಲೇ ಯುದ್ಧದಲ್ಲಿ ಕೊಂದರೆ, ಲೋಕಾಪವಾದಕ್ಕೆ ಗುರಿಯಾಗಬೇಕಾಗುವುದೆಂಬ ಭಯದಿಂದ ಇದುವರೆಗೆ ನಿನ್ನನ್ನು ಕೊಲ್ಲದೆ ಬಿಟ್ಟೆನು. ಈಗಲೂ ನೀನು ನಿನ್ನ ಬಳಲಿಕೆಯನ್ನಾರಿಸಿಕೊಂಡು ಬಾ! ಆಮೇಲೆ ನನ್ನ ಬಲವನ್ನು ನಿನಗೆ ಚೆನ್ನಾಗಿ ತೋರಿಸುವೆನು" ಎಂದನು. ಹೀಗೆ ಸುಗ್ರೀವನು ಮರ್ಮಭೇದಕಗಳಾದ ಮಾತುಗಳನ್ನಾಡಿ ಮೂದಲಿಸಲು, ಕುಂಭನಿಗೆ ತಡೆಯುಲಾರದ ಕೋಪವುಂಟಾಯಿತು. ಆಜ್ಯಾಹುತವಾದ ಅಗ್ನಿಯಂತೆ ಅವನ ತೇಜಸ್ಸು ಜ್ವಲಿಸಿತು. ಆಗಲೇ ಆ ರಾಕ್ಷಸನು ವೇಗದಿಂದ ಸುಗ್ರೀವನ ಮೇಲೆ ಬಿದ್ದು ಅವನನ್ನು ಎರಡು ತೋಳುಗಳಿಂದಲೂ ತಬ್ಬಿಹಿಡಿದನು. ಮದದಾನೆಗಳಂತೆ ಇಬ್ಬರೂ ಕೈಕಲೆತು, ಆಗಾಗ ಶ್ರಮದಿಂದ ನಿಟ್ಟುಸಿರು ಬಿಡುತ್ತ, ಒಬ್ಬರನ್ನೊಬ್ಬರು ಹಿಡಿದೆಳೆದು ಬಹಳ ಸಾಹಸದಿಂದ ಹೆಣಗಾಡಿದರು. ಯುದ್ಧಶ್ರಮದಿಂದ ಅವರಿಬ್ಬರ ಬಾಯಿಂದಲೂ, ಹೊಗೆಯೊಡಗೂಡಿದ ಬೆಂಕಿಯುರಿಯಂತೆ ನಿಶ್ವಾಸವು ಹೊರಡುತ್ತಿತ್ತು. ಅವರ ಕಾಲಿನ ತುಳಿತಕ್ಕೆ ನೆಲವು ಕುಗ್ಗಿತು. ಇವರ ಸಂಚಾರವೇಗಕ್ಕೆ ಸಮುದ್ರವು ಉಲ್ಲೋಲಕಲ್ಲೋಲವಾಯಿತು. ಇಷ್ಟರಲ್ಲಿಯೇ ಸುಗ್ರೀವನು ಕುಂಭನನ್ನೆತ್ತಿ ಅವನಿಗೆ ಸಮುದ್ರದ ತಳವನ್ನು ತೋರಿಸಿಕೊಡುವಂತೆ ವೇಗದಿಂದ ಲವಣಸಮುದ್ರದಲ್ಲಿ ಬಿಸುಟನು. ಕುಂಭನು ನೀರಿನಲ್ಲಿ ಬಿದ್ದ ವೇಗಕ್ಕೆ ಆ ಲವಣಸಮುದ್ರದಲ್ಲಿ ಮೇರುಮಂದರಪರ್ವತಗಳಂತೆ ಅಲೆಗಳು ಮೇಲೆದ್ದು ಬರುತ್ತಿದ್ದುವು. ಹೀಗಿದ್ದರೂ, ಕ್ಷಣಮಾತ್ರದಲ್ಲಿಯೇ ಕುಂಭನು ಸಮುದ್ರಮಧ್ಯದಿಂದ ಮೇಲಕ್ಕೆದ್ದು ಬಂದು, ಸುಗ್ರೀವನನ್ನಿದಿರಿಸಿ ವಜ್ರಸಮಾನವಾದ ಮುಷ್ಟಿಯಿಂದ ಅವನ ಎದೆಯ ಮೇಲೆ ಹೊಡೆದನು. ಈ ಮುಷ್ಟಿಪ್ರಹಾರದಿಂದ ಸುಗ್ರೀವನ ಎದೆಯ ಚರ್ಮವು ಕಿತ್ತು ಬಹಳವಾಗಿ ರಕ್ತವು ಸುರಿಯಿತು. ಆದರೆ ಆ ಮುಷ್ಟಿಯು ಮಹಾವೇಗವುಳ್ಳದಾಗಿದ್ದರೂ, ಸುಗ್ರೀವನ ಎದೆಯ ಮೂಳೆಗೆ ತಾಗಿದೊಡನೆ ಪ್ರತಿಹತವಾಯಿತು. ಆ ಮುಷ್ಟಿಯು ಸುಗ್ರೀವನ ಎದೆಯ ಮೂಳೆಗೆ ತಾಗಿದಾಗ,

ಅದರಿಂದುಂಟಾದ ಅಗ್ನಿಜ್ವಾಲೆಯು, ಇಂದ್ರನ ವಜ್ರಪ್ರಹಾರದಿಂದ ಮೇರು ಪರ್ವತದಲ್ಲಿ ಹುಟ್ಟುವ ಅಗ್ನಿಜ್ವಾಲೆಯಂತೆ ಕಾಣಿಸಿತು. ರಾಕ್ಷಸನ ಈ ಮುಷ್ಟಿಪ್ರಹಾರದಿಂದ ನೊಂದ ಸುಗ್ರೀವನು ಬಹಳವಾಗಿ ಕೋಪಗೊಂಡು, ಅವನನ್ನು ನಿಗ್ರಹಿಸುವುದಕ್ಕಾಗಿ ವಜ್ರದಂತೆ ದೃಢವಾದ ಮುಷ್ಟಿಯನ್ನು ಹಿಡಿದನು. ಸೂರ್ಯಮಂಡಲದಂತೆ ಸಹಸ್ರಜ್ವಾಲೆಗಳನ್ನು ಕೆದರುತ್ತ ತೇಜೋವಿಶಿಷ್ಟವಾದ ಆ ಮುಷ್ಟಿಯನ್ನು ವೇಗದಿಂದೆತ್ತಿ ಕುಂಭನ ಎದೆಯ ಮೇಲೆ ಪ್ರಹರಿಸಿದನು. ಈ ಮುಷ್ಟಿಪ್ರಹಾರವು ಬಿದ್ದೊಡನೆ ಕುಂಭನು ಪ್ರಜ್ಞೆತಪ್ಪಿ, ಮೈಯಡಗಿ, ಉರಿಯಡಗಿದ ಬೆಂಕಿಯಂತೆ ನಿಶ್ಚೇಷ್ಟನಾಗಿ ಕೆಳಗೆ ಬಿದ್ದನು. ಈ ಮುಷ್ಟಿಪ್ರಹಾರದಿಂದ ಹತನಾಗಿ ಬಿದ್ದ ಆ ಕುಂಭನು, ತೇಜೋವಿಶಿಷ್ಟವಾದ ಅಂಗಾರಕಗ್ರಹವು ಅಕಸ್ಮಾತ್ತಾಗಿ ಆಕಾಶದಿಂದ ಕೆಳಗೆ ಬಿದ್ದಂತೆ ಕಾಣುತ್ತಿದ್ದನು. ಆ ಮುಷ್ಟಿ ಪ್ರಹಾರದಿಂದ ಮೈಮುರಿದು ಕೆಳಗೆ ಬಿದ್ದ ಆ ರಾಕ್ಷಸನ ರೂಪವು, ದಕ್ಷಯಾಗದಲ್ಲಿ ರುದ್ರನಿಂದ ನಿಗ್ರಹಿಸಲ್ಪಟ್ಟ ಸೂರ್ಯನ ರೂಪದಂತೆ ತೋರುತ್ತಿತ್ತು. ಹೀಗೆ ಭಯಂಕರಪರಾಕ್ರಮವುಳ್ಳ ಸುಗ್ರೀವನು ಕುಂಭನನ್ನು ಕೊಂದು ಕೆಡಹಿದಾಗ, ಪರ್ವತಾರಣ್ಯಗಳೊಡನೆ ಸಮಸ್ತ ಭೂಮಿಯೂ ನಡುಗಿತು. ರಾಕ್ಷಸರಿಗೆ ಮೊದಲಿದ್ದ ಭಯವು ಇನ್ನೂ ಹೆಚ್ಚಿತು.

ಇಲ್ಲಿಗೆ ಎಪ್ಪತ್ತಾರನೆಯ ಸರ್ಗವು.

ನಿಕುಂಭನು ಹನುಮಂತನನ್ನಿದಿರಿಸಿ, ಅವನಿಂದ ಸಂಹೃತನಾದುದು.

ಕುಂಭನು ಸುಗ್ರೀವನಿಂದ ಹತನಾದುದನ್ನು ನೋಡಿ, ಅವನ ತಮ್ಮನಾದ ನಿಕುಂಭನು, ಕೋಪದಿಂದಲೇ ಆ ಸುಗ್ರೀವನನ್ನು ದಹಿಸಿ ಬಿಡುವಂತೆ ದುರದುರನೆ ನೋಡಿದನು. ಒಡನೆಯೇ ವೀರನಾದ ಆ ನಿಕುಂಭನು ಪುಷ್ಪಮಾಲಿಕೆಗಳಿಂದಲಂಕೃತವಾಗಿಯೂ, ಐದು ಕೈಬೆರಳುಗಳಿಂದೊತ್ತಿದ ಚಂದನಕುಂಕುಮಾದಿಗಳ ಗುರುತುಳ್ಳುದಾಗಿಯೂ, ಅಮೋಘವಾಗಿಯೂ, ಪರ್ವತಶಿಖರದಂತೆ ಮಹತ್ತಾಗಿಯೂ, ನಡುನಡುವೆ ವಜ್ರ

ದಿಂದಲೂ, ಹವಳಗಳಿಂದಲೂ ಕೆತ್ತಲ್ಪಟ್ಟ ಚಿನ್ನದ ಕಟ್ಟುಗಳುಳ್ಳುದ
ಗಿಯೂ, ಯಮದಂಡದಂತೆ ಶತ್ರುಭಯಂಕರವಾಗಿ ರಾಕ್ಷಸರ ಭಯವನು
ನೀಗಿಸತಕ್ಕದಾಗಿಯೂ ಇದ್ದ ತನ್ನ ಪರಿಘವನ್ನು ಕೈಗೆತ್ತಿಕೊಂಡನು
ಮಹಾತೇಜಸ್ವಿಯಾದ ಆ ನಿಕುಂಭನು ಇಂದ್ರಧ್ವಜದಂತೆ ಮಹತ್ತಾ
ಆ ಪರಿಘವನ್ನೆತ್ತಿ ಗಿರಗಿರನೆ ತಿರುಗಿಸುತ್ತ, ದೊಡ್ಡದಾಗಿ ಬಾಯನು
ತೆರೆದು ಸಿಂಹನಾದ ಮಾಡಿದನು. ಎದೆಯಲ್ಲಿ ಉತ್ತಮವಾದ ಪದಕದಿ
ದಲೂ, ಭುಜದಲ್ಲಿ ತೋಳ್ಬಳೆಗಳಿಂದಲೂ, ಕಿವಿಯಲ್ಲಿ ಕುಂಡಲಗಳಿಂದಲೂ
ಕಂಠದಲ್ಲಿ ವಿಚಿತ್ರಪುಷ್ಪಮಾಲಿಕೆಯಿಂದಲೂ ಭೂಷಿತನಾದ ಆ ನಿಕುಂಭನು
ಆ ದೊಡ್ಡ ಪರಿಘವನ್ನೆತ್ತಿ ಹಿಡಿದು ಗರ್ಜಿಸುತ್ತ ಬಂದಾಗ, ಇಂ
ಧನುಸ್ಸಿನಿಂದಲೂ ಮಿಂಚಿನಿಂದಲೂ ಕೂಡಿದ ಮಹಾಮೇಘದಂತೆ ತೋ
ಸುತ್ತಿದ್ದನು. ಮಹಾಬಲವುಳ್ಳ ಆ ನಿಕುಂಭನು ತನ್ನ ಪರಿಘವನ್ನೆ
ಗಿರಗಿರನೆ ತಿರುಗಿಸುತ್ತಿರುವಾಗ, ಅದರಿಂದುಂಟಾದ ವಾಯುವಿನ ವೇ
ದಿಂದ ಆವಹನಿವಹಾದಿವಾಯುಪಟಲವೇ ಭೇದಿಸುವಂತಾಯಿತು. ಮತ್ತು
ಆ ಪರಿಘವು ಸುತ್ತುವ ವೇಗಕ್ಕೆ ಮಹಾಧ್ವನಿಯನ್ನು ಹೊರಡಿಸು
ಹೊಗೆಯಿಲ್ಲದ ಬೆಂಕಿಯಂತೆ ಜ್ವಲಿಸುವುದಕ್ಕಾರಂಭಿಸಿತು. ಆ ನಿಕುಂಭನ
ಪರಿಘವನ್ನೆತ್ತಿ ತಿರುಗಿಸಿದಾಗ ಅದರ ವೇಗಕ್ಕೆ ಅಂತರಿಕ್ಷವೆಲ್ಲವೂ, ಗಂಧ
ಗೃಹಗಳಿಂದ ತುಂಬಿದ ಅಲಕಾನಗರಿಯೊಡನೆಯೂ, ದೇವಗೃಹಗಳಿಂ
ತುಂಬಿದ ಅಮರಾವತಿಯೊಡನೆಯೂ, ಗ್ರಹನಕ್ಷತ್ರಗಳೊಡನೆಯೂ, ಅ
ನ್ಯಾದಿತಾರೆಗಳೊಡನೆಯೂ, ಚಂದ್ರಬಿಂಬದೊಡನೆಯೂ, * ಶುಕ್ರಾ
ಮಹಾಗ್ರಹಗಳೊಡನೆಯೂ, ಇನ್ನೂ ಇತರ ಸಮಸ್ತ ಲೋಕಗಳೊ
ನೆಯೂ ಸೇರಿ ಗಿರಗಿರನೆ ತಿರುಗುವಂತೆ ತೋರಿತು. ಪರಿಘದ ಮತ್ತು
ಆಭರಣಗಳ ಕಾಂತಿಯೆಂಬ ಮಹಾಜ್ವಾಲೆಗಳಿಂದ ಕೂಡಿದ ಆ ನಿಕುಂಭ
ಗ್ನಿಯು ಆಕಸ್ಮಿಕವಾಗಿ ಹುಟ್ಟಿದ ಪ್ರಳಯಕಾಲಾಗ್ನಿಯಂತೆ ವಾನ
ಸೈನ್ಯಕ್ಕೆ ತಡೆಯಲಸಾಧ್ಯವಾಯಿತು. ಈ ಮಹಾರ್ಭಟವನ್ನು ನೋ
ವಾನರ ರಾಕ್ಷಸ ಸೈನಿಕರೆಲ್ಲರೂ ಭಯದಿಂದ ಅತ್ತಿತ್ತ ಕದಲಲಾರದೆ ಸ್ತ

* ಇಲ್ಲಿ ರಾತ್ರಿಯಾದುದರಿಂದಲೇ ಸೂರ್ಯನನ್ನು ಮಾತ್ರ ಹೇಳಲಿಲ್ಲವೆಂದ
ಗ್ರಾಹ್ಯ (ಗೋವಿಂದರಾಜರು).

ರಾಗಿ ನಿಂತರು. ಬಲಾಢ್ಯನಾದ ಹನುಮಂತನೊಬ್ಬನು ಮಾತ್ರ ಧೈರ್ಯ ದಿಂದ ಬಂದು ಅವನ ಮುಂದೆ ಎದೆಯನ್ನೊಡ್ಡಿ ನಿಂತನು. ಇದನ್ನು ನೋಡಿ ಬಲಾಢ್ಯನಾದ ಆ ನಿಕುಂಭನು ಕಬ್ಬಿಣದಗಳಿಯಂತೆ ಮಹ ತ್ತಾದ ತನ್ನ ತೋಳನ್ನು ಮೇಲಕ್ಕೆತ್ತಿ, ಸೂರ್ಯನಂತೆ ಥಗಥಗಿಸುತ್ತಿದ್ದ ತನ್ನ ಪರಿಘವನ್ನು ಹನುಮಂತನ ಎದೆಗೆ ಗುರಿಯಿಟ್ಟು ಬೀಸಿದನು. ಆ ಪರಿಘವು ವಿಶಾಲವಾಗಿಯೂ, ದೃಢವಾಗಿಯೂ ಇದ್ದ ಹನುಮಂತನ ಎದೆಗೆ ತಗುಲಿದೊಡನೆ ನೂರಾರು ತುಂಡುಗಳಾಗಿ ಒಡೆದು ಬೆಂಕಿಯ ಕಿಡಿಗಳನ್ನು ಕೆದರುತ್ತ ಆಕಾಶದಿಂದುದುರುವ ಕೊಳ್ಳಿಗಳಂತೆ ಕೆಳಗೆ ಬಿದ್ದಿತು. ಆದರೇನು? ಆ ಪರಿಘದ ಪ್ರಹಾರದಿಂದ ಭೂಕಂಪಕಾಲದಲ್ಲಿ ಪರ್ವತಗಳು ನಡುಗುವಂತೆ ಹನುಮಂತನ ದೇಹವು ನಡುಗಿಹೋಯಿತು. ಇಷ್ಟಾದರೂ ಮಹಾಬಲಾಢ್ಯನಾದ ಹನುಮಂತನು ಎದೆಗುಂದದೆ, ದೃಢ ವಾದ ವಜ್ರಮುಷ್ಟಿಯನ್ನು ಹಿಡಿದು, ನಿಕುಂಭನ ಎದೆಯ ಮೇಲೆ ವೇಗದಿಂದ ಹೊಡೆದನು. ಈ ಮುಷ್ಟಿಪ್ರಹಾರಕ್ಕೆ ಆ ರಾಕ್ಷಸನ ಎದೆಯ ಚರ್ಮವು ಸುಲಿದು, ರಕ್ತವು ಕಿತ್ತುಕೊಂಡಿತು. ಮಿಂಚಿನಂತೆ ಬೆಂಕಿಯ ಕಿಡಿಗಳು ಕೆದರಿದುವು. ಅವನ ದೇಹವು ನಡುಗಿತು. ಆದರೆ ಕ್ಷಣಮಾತ್ರ ದಲ್ಲಿಯೇ ನಿಕುಂಭನು ಚೇತರಿಸಿಕೊಂಡು, ವೇಗದಿಂದ ಬಂದು, ಮಹಾ ಬಲಾಢ್ಯನಾದ ಹನುಮಂತನನ್ನು ಹಿಡಿದು ಕೈಗೆತ್ತಿಕೊಂಡನು. ಇದನ್ನು ನೋಡಿ (ಲಂಕಾವಾಸಿಗಳಾದ) ರಾಕ್ಷಸರೆಲ್ಲರೂ ಸಂತೋಷದಿಂದ ಭಯಂ ಕರವಾಗಿ ಸಿಂಹನಾದವನ್ನು ಮಾಡಿದರು. ಹೀಗೆ ನಿಕುಂಭನ ಕೈಗೆ ಸಿಕ್ಕಿ ಬಿದ್ದಿರುವಾಗಲೂ ಹನುಮಂತನು ತನ್ನ ಧೈರ್ಯವನ್ನು ಬಿಡದೆ, ತನ್ನ ವಜ್ರಮುಷ್ಟಿಯಿಂದ ಅವನನ್ನು ಹೊಡೆದು, ಅವನ ಕೈಯಿಂದ ತಪ್ಪಿಸಿ ಕೊಂಡು ನೆಲಕ್ಕೆ ಧುಮುಕಿ, ತಿರುಗಿ ಯುದ್ಧಸನ್ನದ್ಧನಾಗಿ ಆ ರಾಕ್ಷಸ ನನ್ನಿದಿರಿಸಿ ನಿಂತನು. ಕೂಡಲೇ ವೀರ್ಯವಂತನಾದ ಆ ಹನುಮಂತನು ಮಹಾಪ್ರಯತ್ನದಿಂದ ಆ ರಾಕ್ಷಸನನ್ನು ಹಿಡಿದು, ಅವನ ದೇಹವನ್ನೆತ್ತಿ ನೆಲಕ್ಕೆ ಕುಕ್ಕಿ ಕೆಡಹಿ, ತಟ್ಟನೆ ಹಾರಿ ಅವನ ಎದೆಯನ್ನು ಮೆಟ್ಟಿ ತುಳಿತನು. ಮತ್ತು ಎರಡು ಕೈಗಳಿಂದಲೂ ಅವನ ಕಂಠವನ್ನು ಹಿಡಿದು ಚೆನ್ನಾಗಿ ತಿರುಚಿ, ಆ ರಾಕ್ಷಸನು ನೋವನ್ನು ತಡೆಯಲಾರದೆ ಆರ್ತಸ್ವರ

ದಿಂದ ಭಯಂಕರವಾಗಿ ಆರಚಿಕೊಳ್ಳುತ್ತಿದ್ದರೂ ಬಿಡದೆ, ಅವನ ತಲ
ಯನ್ನು ಕಿತ್ತು ಬಿಸುಟನು. ಇತ್ತಲಾಗಿ ಮಕರಾಕ್ಷನೆಂಬ ಖರಪುತ್ರನು
ಅತ್ಯಂತ ಕುಪಿತನಾಗಿ ಶ್ರೀರಾಮನನ್ನಿದಿರಿಸಿ ಯುದ್ಧಮಾಡಲಾರಂಭಿಸಿ
ದನು. ನಿಕುಂಭನು ಹತನಾದುದನ್ನು ನೋಡಿ ವಾನರರೆಲ್ಲರೂ ಸಂತೋಷ
ದಿಂದ ಸಿಂಹನಾದಮಾಡಿದರು. ಇವರ ಸಿಂಹನಾದಕ್ಕೆ ದಿಕ್ಕುಗಳೆಲ್ಲವೂ
ಮೊಳಗಿದುವು. ಭೂಮಿಯು ನಡುಗಿತು. ಆಕಾಶವು ಭೇದಿಸಿದಂತಾಯಿತು.
ರಾಕ್ಷಸರೆಲ್ಲರಿಗೂ ಮನಸ್ಸಿನಲ್ಲಿ ಬಹಳವಾದ ಭಯಾವೇಶವು ಹುಟ್ಟಿತು.

ಇಲ್ಲಿಗೆ ಎಪ್ಪತ್ತೇಳನೆಯ ಸರ್ಗವು.

ಮಕರಾಕ್ಷನು ಯುದ್ಧಕ್ಕೆ ಹೊರಟುದು.

ಕುಂಭ ನಿಕುಂಭರಿಬ್ಬರೂ ಯುದ್ಧದಲ್ಲಿ ಹತನಾದುದನ್ನು ಕೇಳ
ಅತ್ತಲಾಗಿ ರಾವಣನು ತಡೆಯಲಾರದ ಕೋಪದಿಂದ ಕಾಲಾಗ್ನಿಯಂತೆ
ಜ್ವಲಿಸುತ್ತಿದ್ದನು. ಒಂದು ಕಡೆಯಲ್ಲಿ ದುಃಖವೂ, ಮತ್ತೊಂದು ಕಡೆ
ಯಲ್ಲಿ ಕೋಪವೂ ಅವನಿಗೆ ಮೈಮೇಲೆ ಪ್ರಜ್ಞೆಯಿಲ್ಲದಂತೆ ಮಾಡಿತು.
ಆಗ ರಾವಣನು ಭಯಂಕರವಾದ ದೊಡ್ಡ ಕಣ್ಣುಳ್ಳ ಖರಪುತ್ರನಾದ
ಮಕರಾಕ್ಷನನ್ನು ಕರೆದು, "ಎಲೆ ವತ್ಸನೆ! ಈಗಲೇ ನೀನು ನನ್ನಾಜ್ಞೆ
ಯಿಂದ ದೊಡ್ಡ ಸೈನ್ಯದೊಡನೆ ಹೊರಟು, ಆ ರಾಮಲಕ್ಷ್ಮಣರನ್ನೂ,
ಅವರ ಕಡೆಯ ವಾನರರನ್ನೂ ಪ್ರಯತ್ನದಿಂದ ಕೊಂದುಬರಬೇಕು"
ಎಂದು ನಿಯಮಿಸಿದನು. ಮೊದಲೇ ವೀರ್ಯಗರ್ವದಿಂದ ಕೊಬ್ಬಿದ್ದ
ಮಕರಾಕ್ಷನು, ಈ ರಾವಣಾಜ್ಞೆಯನ್ನು ಕೇಳಿದೊಡನೆ ಪರಮಸಂತುಷ್ಟ
ನಾಗಿ "ಜನಕಾ! ಒಳ್ಳೆಯದು. ಹಾಗೆಯೇ ನಡೆಸಿಬರುವೆನು!" ಎಂದು
ಹೇಳಿ ಆಗಲೇ ರಾವಣನಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ಅವನ
ಆಜ್ಞೆಯನ್ನು ಪಡೆದು ಅರಮನೆಯಿಂದ ಹೊರಟನು. ಹೀಗೆ ಯುದ್ಧೋ
ದ್ಯುಕ್ತನಾಗಿ ಹೊರಟ ಖರಪುತ್ರನು, ಸಮೀಪದಲ್ಲಿದ್ದ ಸೇನಾಪತಿಯನ್ನು
ನೋಡಿ "ಎಲೆ ಬಲಾಧ್ಯಕ್ಷನೆ! ಈಗಲೇ ನನಗಾಗಿ ಒಂದು ಯುದ್ಧರಥ
ವನ್ನು ತರಿಸು! ನಮ್ಮ ಸೈನ್ಯವನ್ನೂ ಬೇಗನೆ ಕರೆಸು!" ಎಂದನು.

ಈ ಮಾತನ್ನು ಕೇಳಿ ಸೇನಾಪತಿಯು ಕೂಡಲೇ ಯುದ್ಧರಥವನ್ನೂ ಸೈನ್ಯವನ್ನೂ ತರಿಸಿದನು. ಮಕರಾಕ್ಷನು ಆ ರಥಕ್ಕೆ ಪ್ರದಕ್ಷಿಣವನ್ನು ಮಾಡಿ ಅದನ್ನೇರಿ ಕುಳಿತು, ಸಾರಥಿಯನ್ನು ನೋಡಿ "ಎಲೆ ಸೂತನೆ! ಶೀಘ್ರದಲ್ಲಿ ರಥವನ್ನು ಬಿಡು" ಎಂದು ಹೇಳಿ, ಅಲ್ಲಿದ್ದ ಸೈನಿಕರೆಲ್ಲರನ್ನೂ ಕರೆದು "ಎಲೆ ರಾಕ್ಷಸರೆ! ಈಗ ನಮ್ಮ ಪ್ರಭುವಾದ ರಾವಣನು, ರಾಮಲಕ್ಷ್ಮಣರಿಬ್ಬರನ್ನೂ ಯುದ್ಧದಲ್ಲಿ ಕೊಂದು ಬರಬೇಕೆಂದು ನನಗೆ ಆಜ್ಞಾಪಿಸಿರುವನು. ಆದುದರಿಂದ ನೀವೆಲ್ಲರೂ ನನಗೆ ಮುಂದಾಗಿ ಸೇನಾಮುಖದಲ್ಲಿ ನಿಂತು ಚೆನ್ನಾಗಿ ಯುದ್ಧಮಾಡಬೇಕು. ಎಲೆ ರಾಕ್ಷಸವೀರರೆ! ಈಗಲೇ ನಾನು ಹೊರಟು ಆ ರಾಮಲಕ್ಷ್ಮಣರನ್ನೂ, ಸುಗ್ರೀವನನ್ನೂ, ಇತರ ವಾನರರನ್ನೂ, ನನ್ನ ಉತ್ತಮ ಬಾಣಗಳಿಂದ ಸಂಹರಿಸುವೆನು. ಮತ್ತು ಅಗ್ನಿಯು ಒಣಗಿದ ಕಟ್ಟಿಗೆಯನ್ನು ದಹಿಸುವಂತೆ, ಈ ನನ್ನ ಶೂಲಪ್ರಹಾರಗಳಿಂದ ಆ ದೊಡ್ಡ ವಾನರಸೇನೆಯನ್ನು ಧ್ವಂಸಮಾಡುವೆನು" ಎಂದನು. ಮಕರಾಕ್ಷನ ಬಾಯಿಂದ ಈ ಮಾತುಗಳು ಹೊರಡುವಷ್ಟರಲ್ಲಿಯೇ ಆ ರಾಕ್ಷಸರೆಲ್ಲರೂ ವಿವಿಧಾಯುಧಗಳನ್ನು ಹಿಡಿದು ಗುಂಪಾಗಿ ಯುದ್ಧಕ್ಕೆ ಹೊರಟರು. ಆ ರಾಕ್ಷಸರಲ್ಲಿಯೋ, ಒಬ್ಬೊಬ್ಬರೂ ಕಾಮರೂಪಿಗಳು! ಒಬ್ಬೊಬ್ಬರೂ ತೀಕ್ಷ್ಣವಾದ ಕೋರೆಯುಳ್ಳವರು! ಒಬ್ಬೊಬ್ಬರೂ ಭಯಂಕರವಾದ ಪಿಂಗಳನೇತ್ರವುಳ್ಳವರು! ಇಂತಹ ರಾಕ್ಷಸರೆಲ್ಲರೂ ಕೆದರಿದ ಕೂದಲುಗಳಿಂದ ಭಯಂಕರಸ್ವರೂಪವುಳ್ಳವರಾಗಿ ಮದದಾನೆಗಳಂತೆ ಆಗಾಗ ಗರ್ಜಿಸುತ್ತ, ಮಹಾಕಾಯವುಳ್ಳ ಆ ಮಕರಾಕ್ಷನ ಸುತ್ತಲೂ ಸೇರಿ ನೆಲವನ್ನು ನಡುಗಿಸುವಂತೆ ಹೆಜ್ಜೆಯಿಡುತ್ತ ಯುದ್ಧೋತ್ಸಾಹದಿಂದ ಹೊರಟರು. ಈ ದೊಡ್ಡ ರಾಕ್ಷಸಸೈನ್ಯದೊಡನೆ ಮಕರಾಕ್ಷನು ಅರಮನೆಯಿಂದ ಹೊರಟಾಗ, ಅವನ ಮುಂದೆ ನುಡಿಸಲ್ಪಡುತ್ತಿದ್ದ ಶಂಖ, ಭೇರಿ ಮೊದಲಾದ ಸಾವಿರಾರು ರಣವಾದ್ಯಗಳಿಂದಲೂ, ರಾಕ್ಷಸಭಟರ ಸಿಂಹನಾದಗಳಿಂದಲೂ, ಅವರ ಭುಜಾಸ್ಫಾಲನಗಳಿಂದಲೂ ಹುಟ್ಟಿದ ಮಹಾಧ್ವನಿಯು ಬಹಳ ಪ್ರಬಲವಾಗಿ ಸಮಸ್ತ ದಿಕ್ಕುಗಳನ್ನೂ ವ್ಯಾಪಿಸಿತು. ಹೀಗೆ ಮಕರಾಕ್ಷನು ಬಹಳ ವೈಭವದಿಂದ ಹೊರಟು ಬರುತ್ತಿರುವಾಗ, ದಾರಿಯಲ್ಲಿಯೇ ಅವನಿಗೆ ಅನೇಕ ದುರ್ನಿಮಿತ್ತಗಳು ತೋರಲಾ

ರಂಭಿಸಿದುವು. ಅವನ ಸಾರಥಿಯ ಕೈಯಲ್ಲಿದ್ದ ಕುದುರೆಯ ಚಾಟಿಯು ಇದ್ದಕ್ಕಿದ್ದ ಹಾಗೆ ಕೈಯಿಂದ ಜಾರಿ ಕೆಳಗೆ ಬಿದ್ದಿತು. ಅವನ ರಥದಲ್ಲಿ ಕಟ್ಟಿದ್ದ ಧ್ವಜದಂಡವು ನಿಷ್ಕಾರಣವಾಗಿ ಕೆಳಗೆ ಬಿದ್ದಿತು. ಅವನ ರಥಾಶ್ವಗಳೂ ಇದ್ದಕ್ಕಿದ್ದ ಹಾಗೆ ಉತ್ಸಾಹ ತಪ್ಪಿ, ತಮ್ಮ ವಿಚಿತ್ರಗತಿಯನ್ನು ಮರೆತು, ದೈನ್ಯದಿಂದ ಕಣ್ಣೀರುಬಿಡುತ್ತಿದ್ದುವು. ದುರಾತ್ಮನಾದ ಆ ಮಕರಾಕ್ಷನು ಬರುವ ದಾರಿಯಲ್ಲಿ ಅದುವರೆಗೂ ಸುಖಸ್ಪರ್ಶವಾಗಿ ಬೀಸುತ್ತಿದ್ದ ತಂಗಾಳಿಯು ವಿಶೇಷವಾಗಿ ನೆಲದ ಧೂಳನ್ನು ಕೆದರುತ್ತ, ಬಹಳ ಭಯಂಕರವಾಗಿ ಬೀಸಲಾರಂಭಿಸಿತು. ಈ ಮಹೋತ್ಪಾತಗಳನ್ನು ನೋಡಿಯೂ, ವೀರ್ಯಮದದಿಂದ ಕೊಬ್ಬಿದ ಆ ರಾಕ್ಷಸರು ಅವುಗಳನ್ನು ಲಕ್ಷ್ಯದಲ್ಲಿಡದೆ, ರಾಮಲಕ್ಷ್ಮಣರಿದ್ದ ಕಡೆಗೆ ಹೊರಟುಬಂದರು. ಮಹಾಗಜಗಳಂತೆಯೂ, ಮದದಾನೆಗಳಂತೆಯೂ, ಕಾಡೆಮ್ಮೆಗಳಂತೆಯೂ ಕರೀಮೈಯುಳ್ಳ ಆ ರಾಕ್ಷಸರೊಬ್ಬೊಬ್ಬರೂ ಇದುವರೆಗೆ ಅನೇಕ ಯುದ್ಧಗಳಲ್ಲಿ ಕತ್ತಿ, ಗದೆ, ಮುಂತಾದ ಅನೇಕ ಶಸ್ತ್ರಾಸ್ತ್ರಗಳ ಪ್ರಹಾರದಿಂದ ಜಿಡ್ಡುಗಟ್ಟಿದ ದೇಹವುಳ್ಳವರು! ಒಬ್ಬೊಬ್ಬರೂ ಯುದ್ಧಕಾರ್ಯದಲ್ಲಿ ಎಣೆಯಿಲ್ಲದ ಚಾತುರ್ಯವುಳ್ಳವರು! ಇಂತಹ ರಾಕ್ಷಸರೆಲ್ಲರೂ ಒಂದಾಗಿ ಸೇರಿ, ಆಗಾಗ ಸಿಂಹನಾದದಿಂದ ಕೂಗುತ್ತ, ನಾನುತಾನೆಂಬ ಯುದ್ಧೋತ್ಸಾಹದಿಂದ ಮುಂದೆ ಸಾಗಿಬಂದರು.

ಇಲ್ಲಿಗೆ ಎಪ್ಪತ್ತೆಂಟನೆಯ ಸರ್ಗವು.

ಶ್ರೀರಾಮನು ಮಕರಾಕ್ಷನನ್ನು ಕೊಂದುದು.

ಹೀಗೆ ಮಕರಾಕ್ಷನು ಯುದ್ಧಕ್ಕಾಗಿ ಬರುತ್ತಿರುವುದನ್ನು ಕಂಡೊಡನೆ ಇತ್ತಲಾಗಿ ವಾನರಯೂಥಪತಿಗಳೆಲ್ಲರೂ ತಟ್ಟನೆ ಮುಂದೆ ಹಾರಿ ಯುದ್ಧಸನ್ನದ್ಧರಾಗಿ ನಿಂತರು. ಈ ಎರಡು ಪಕ್ಷದವರೂ ದೇವದಾನವರಂತೆ ಕೈಕಲೆತು ನಿಂತಾಗ ಅವರಿಬ್ಬರಿಗೂ ನಡೆದ ಮಹಾಯುದ್ಧವು ನೋಡುವವರಿಗೆ ಮೈಯಲ್ಲಿ ರೋಮಾಂಚವು ಹುಟ್ಟುವಂತೆ ಅತಿ ಭಯಂಕರವಾಯಿತು. ವಾನರರಾಕ್ಷಸರಿಬ್ಬರೂ, ತಮ್ಮ ತಮ್ಮ ಕೈಗೆ ಸಿಕ್ಕಿದಂತೆ

ವೃಕ್ಷಗಳನ್ನೂ, ಶಿಲೆಗಳನ್ನೂ, ಶೂಲಗಳನ್ನೂ, ಪರಿಘಗಳನ್ನೂ ಪ್ರಯೋಗಿಸಿ, ಒಬ್ಬರನ್ನೊಬ್ಬರು ಮರ್ದಿಸುತ್ತ ಬಂದರು. ಆಗ ರಾಕ್ಷಸರಲ್ಲಿ ಕೆಲವರು ಪರಿಘಗಳನ್ನೂ, ಈಟಿಗಳನ್ನೂ, ಕತ್ತಿಗಳನ್ನೂ, ಗದೆಗಳನ್ನೂ, ಕುಂತಗಳನ್ನೂ, ತೋಮರಗಳನ್ನೂ, ಪಟ್ಟಸಗಳನ್ನೂ, ಭಿಂಡಿವಾಲಗಳನ್ನೂ, ವಜ್ರಗಳನ್ನೂ, ಕೆಲವರು ಪಾಶಗಳನ್ನೂ, ಬೇರೆ ಕೆಲವರು ದಂಡಮುದ್ಗರಾದ್ಯಾಯುಧಗಳನ್ನೂ ಪ್ರಯೋಗಿಸಿ, ವಾನರರನ್ನು ಧ್ವಂಸಮಾಡುತ್ತ ಬಂದರು. ಇಬ್ಬರಿಗೂ ಮಹಾದ್ಭುತವಾದ ಯುದ್ಧವು ನಡೆಯಿತು. ಇಷ್ಟರಲ್ಲಿ ಅನೇಕ ವಾನರರು ಮಕರಾಕ್ಷನ ಬಾಣಗಳಿಂದ ಚಿಹಳವಾಗಿ ನೊಂದು, ಹಿಂದು ಮುಂದು ತೋರದೆ ಭಯದಿಂದ ಪಲಾಯನಮಾಡುವುದಕ್ಕೆ ತೊಡಗಿದರು. ಹೀಗೆ ವಾನರರು ಭಯದಿಂದೋಡುವುದನ್ನು ನೋಡಿ ರಾಕ್ಷಸರು ಸಂತೋಷದಿಂದ ಸಿಂಹನಾದಮಾಡುತ್ತಿದ್ದರು. ಕ್ರಮಕ್ರಮವಾಗಿ ರಾಕ್ಷಸರ ಕೈ ಮೇಲಾಯಿತು. ವಾನರರು ಭಯದಿಂದೋಡುವಾಗಲೂ ರಾಕ್ಷಸರು ಮೇಲೆ ಮೇಲೆ ಅವರನ್ನು ಬೆನ್ನಟ್ಟಿ ಹೋಗುತ್ತಿದ್ದರು. ಹೀಗೆ ವಾನರರು ಭಯದಿಂದೋಡುವುದನ್ನೂ, ರಾಕ್ಷಸರು ಬೆನ್ನಟ್ಟಿ ಬರುವುದನ್ನೂ ನೋಡಿ ಶ್ರೀರಾಮನು ಆ ರಾಕ್ಷಸರನ್ನು ತನ್ನ ಬಾಣವರ್ಷಗಳಿಂದ ತಡೆದನು. ಇದನ್ನು ನೋಡಿ ಮಕರಾಕ್ಷನು ಕೋಪಾಗ್ನಿಯಿಂದ ಜ್ವಲಿಸುತ್ತ, ರಾಮನನ್ನಿದಿರಿಸಿ ತಡೆದು, ಅವನನ್ನು ಕುರಿತು "ರಾಮಾ! ನಿನಗೆ ಈ ಅಲ್ಪರಾಕ್ಷಸರಿಂದೇನು? ನನ್ನ ಮುಂದೆ ನಿಲ್ಲು! ನಿನಗೆ ತಕ್ಕಂತೆ ನಾನು ದ್ವಂದ್ವಯುದ್ಧವನ್ನು ಕೊಡುವೆನು. ಇದೋ! ಈಗಲೇ ನಾನು ಈ ನನ್ನ ಧನುಸ್ಸಿನಿಂದ ಪ್ರಯುಕ್ತಗಳಾದ ತೀಕ್ಷ್ಣಬಾಣಗಳಿಂದ ನಿನ್ನ ಪ್ರಾಣಗಳನ್ನು ನೀಗಿಸುವುದನ್ನಾದರೂ ನೋಡು! ನೀನು ಮೊದಲು ದಂಡಕಾರಣ್ಯದಲ್ಲಿ ನನ್ನ ತಂದೆಯನ್ನು ಕೊಂದವನಲ್ಲವೇ? ಈಗಲೂ ಅದೇ ಯುದ್ಧಕಾರ್ಯಕ್ಕಾಗಿ ನನ್ನ ಮುಂದೆ ಬಂದು ನಿಂತಿರುವುದನ್ನು ನೋಡಿ ನನಗೆ ಮಹತ್ತಾದ ಕೋಪವು ಉಕ್ಕಿಬರುತ್ತಿರುವುದು. ಎಲೆ ರಾಮಾ! ದುರಾತ್ಮಾ! ಆ ಕಾಲದಲ್ಲಿ ನೀನು ದಂಡಕಾರಣ್ಯದಲ್ಲಿ ನನ್ನ ಕಣ್ಣಿಗೆ ಮಾತ್ರ ಬೀಳದೆ ಹೋದ! ಅದನ್ನು ನೆನೆಸಿಕೊಂಡರೆ ಈಗಲೂ ನನ್ನ ಅಂಗಾಂಗವೆಲ್ಲವೂ ಉರಿಯುತ್ತಿರುವುದು. ಈಗಲೂ

ಚಿಂತೆಯಿಲ್ಲ. ದೈವಯೋಗದಿಂದ ಈಗ ನೀನು ನನ್ನ ಕಣ್ಣಿಗೆ ಗೋಚರಿಸಿದೆ. ಹಸಿದ ಸಿಂಹವು ಇತರ ಮೃಗವನ್ನು ಹೇಗೋ ಹಾಗೆ ನಾನು ಇದುವರೆಗೂ ನಿನ್ನನ್ನೇ ನಿರೀಕ್ಷಿಸುತ್ತಿದ್ದೆನು. ಇದೋ! ಈಗಲೇ ನಾನು ನನ್ನ ಬಾಣವೇಗದಿಂದ ನಿನ್ನನ್ನು ಯಮಪುರಿಗೆ ಕಳುಹಿಸುವೆನು. ಇದುವರೆಗೆ ನಿನ್ನಿಂದ ಯುದ್ಧದಲ್ಲಿ ಹತರಾದ ರಾಕ್ಷಸವೀರರೊಡನೆ ನೀನೂ ಹೋಗಿ ಸೇರು! ರಾಮಾ! ಇನ್ನು ಹೆಚ್ಚಾಗಿ ಹೇಳಿದುದರಿಂದೇನು! ಒಂದೇ ಮಾತನ್ನು ಹೇಳುವೆನು ಕೇಳು! ಈಗ ಯುದ್ಧದಲ್ಲಿ ಸಮಸ್ತ ಲೋಕವೂ ನಮ್ಮಿಬ್ಬರ ಪರಾಕ್ರಮದ ತಾರತಮ್ಯವನ್ನು ಚೆನ್ನಾಗಿ ನೋಡಲಿ! ಈ ನಮ್ಮಿಬ್ಬರ ಮಹಾಯುದ್ಧದಲ್ಲಿ ನೀನು ಅಸ್ತ್ರಗಳಿಂದಲೋ, ಗದೆಯಿಂದಲೋ ಬಾಹುಬಲದಿಂದಲೋ, ಯಾವ ರೀತಿಯಿಂದ ನಿನಗೆ ಚೆನ್ನಾಗಿ ಯುದ್ಧಮಾಡುವುದಕ್ಕೆ ಬಯಕೆಯುಂಟೋ ಆ ರೀತಿಯಿಂದಲೇ ಯುದ್ಧ ಮಾಡಬಹುದು. ಅದನ್ನು ನಿನ್ನಿಷ್ಟದಂತೆಯೇ ಬಿಟ್ಟಿರುವೆನು" ಎಂದನು. ಹೀಗೆ ಹೆಮ್ಮೆಯಿಂದ ಮೇಲೆ ಮೇಲೆ ಹರಟುತ್ತಿರುವ ಮಕರಾಕ್ಷನ ಮಾತನ್ನು ಕೇಳಿ ಶ್ರೀರಾಮನು ಮುಗುಳ್ನಗೆಯಿಂದ ನಗುತ್ತ "ಎಲೆ ರಾಕ್ಷಸಾ! ಇದೇಕೆ ನೀನು ಸಾಗದ ಮಾತುಗಳನ್ನು ಹೇಳಿ ವ್ಯರ್ಥವಾಗಿ ಹೆಮ್ಮೆಯನ್ನು ಕೊಚ್ಚಿಕೊಳ್ಳುವೆ? ಇದರಿಂದ ಫಲವಿಲ್ಲ. ರಣಾಂಗಣಕ್ಕೆ ಬಂದು ನಿಂತ ಮೇಲೆ ಯುದ್ಧ ಮಾಡದೆ ಬರೀಮಾತಿನಿಂದಲೇ ಜಯಿಸುವುದು ಸಾಧ್ಯವಲ್ಲ. ಹಿಂದೆ ದಂಡಕಾರಣ್ಯದಲ್ಲಿ ಹದಿನಾಲ್ಕುಸಾವಿರ ಮಂದಿ ರಾಕ್ಷಸರೊಡನೆ ಸೇರಿಸಿ ನಿನ್ನ ತಂದೆಯಾದ ಖರನನ್ನೂ, ದೂಷಣನನ್ನೂ, ತ್ರಿಶಿರಸ್ಸನನ್ನೂ ಕೊಂದವನು ನಾನೇ ಎಂಬುದನ್ನು ನೀನೂ ಬಲ್ಲೆಯಷ್ಟೆ! ಎಲೆ ದುರಾತ್ಮಾ! ಈಗಲೇ ನಾನು ನಿನ್ನ ದೇಹದ ಮಾಂಸದಿಂದ ತೀಕ್ಷ್ಣ ನಖತುಂಡಗಳುಳ್ಳ ಹದ್ದು, ನರಿ, ಕಾಗೆ ಮುಂತಾದ ಕ್ರೂರಜಂತುಗಳಿಗೆ ತೃಪ್ತಿಯನ್ನುಂಟುಮಾಡುವೆನು ನೋಡು" ಎಂದನು. ಮರ್ಮಭೇದಕಗಳಾದ ರಾಮನ ಈ ಮಾತುಗಳನ್ನು ಕೇಳಿ ಮಕರಾಕ್ಷನಿಗೆ ತಡೆಯಲಾರದ ಕೋಪವುಂಟಾಯಿತು. ಕೂಡಲೇ ಆ ರಾಕ್ಷಸನು ರಾಮನ ಮೇಲೆ ಎಡೆಬಿಡದೆ ಬಾಣಸಮೂಹಗಳನ್ನು ಪ್ರಯೋಗಿಸಿದನು. ರಾಮನು ಆ ಬಾಣಗಳನ್ನು ತನ್ನ ಬಾಣವರ್ಷದಿಂದ ಕತ್ತರಿಸಿ ಕೆಡಹಿದನು. ಚಿನ್ನದ ಹಿಡಿ

ಗಳುಳ್ಳ ಆ ಖರಪುತ್ರನ ಬಾಣಗಳೆಲ್ಲವೂ ರಾಮಬಾಣದಿಂದ ಕತ್ತರಿಸಲ್ಪಟ್ಟು ಸಾವಿರಾರು ತುಂಡುಗಳಾಗಿ ಕೆಳಗೆ ಬಿದ್ದುವು. ಖರಪುತ್ರನಾದ ಮಕರಾಕ್ಷನೂ, ದಶರಥ ಪುತ್ರನಾದ ಶ್ರೀರಾಮನೂ ಒಬ್ಬರಿಗೊಬ್ಬರು ಹಟದಿಂದ ನಡೆಸಿದ ಆ ಮಹಾಯುದ್ಧವು ಅತ್ಯಂತ ಭಯಂಕರವಾಯಿತು. ಆಗ ರಣರಂಗದಲ್ಲಿ ರಾಮ ರಾಕ್ಷಸರಿಬ್ಬರೂ ತಮ್ಮ ತಮ್ಮ ಬಿಲ್ಲಿನ ನಾಣನ್ನು ಮಿಡಿಯುವುದರಿಂದುಂಟಾದ ಮಹಾಧ್ವನಿಯು ಆಕಾಶದಲ್ಲಿ ಮೇಘಗಳ ಸಂಘಟ್ಟನದಿಂದುಂಟಾಗುವ ಮಹಾಧ್ವನಿಯಂತೆ ಕೇಳಿಸುತ್ತಿತ್ತು. ದೇವ ದಾನವ ಗಂಧರ್ವರೂ, ಮಹೋದರರೂ, ಈ ಮಹಾದ್ಭುತವಾದ ಯುದ್ಧವನ್ನು ನೋಡಬೇಕೆಂಬ ಕುತೂಹಲದಿಂದ ಅಂತರಿಕ್ಷದಲ್ಲಿ ನೆರೆದರು. ಈ ವೀರರಿಬ್ಬರೂ ಯುದ್ಧದಲ್ಲಿ ಒಬ್ಬರನ್ನೊಬ್ಬರು ಬಾಣಗಳಿಂದ ಭೇದಿಸಿ ಹೊಡೆಯುವಾಗ, ಅದರಿಂದುಂಟಾಗುವ ಗಾಯಗಳು ಒಮ್ಮೆಗೊಮ್ಮೆ ದ್ವಿಗುಣವಾಗಿ ಹೆಚ್ಚುತ್ತಿತ್ತು. ಅವರಿಬ್ಬರೂ ಆ ಯುದ್ಧದಲ್ಲಿ ಒಬ್ಬರಿಗೊಬ್ಬರು ತಕ್ಕಹಾಗೆ ಪ್ರತಿಕ್ರಿಯೆಗಳನ್ನು ಮಾಡುತ್ತ ಹಟದಿಂದ ಹೋರಾಡಿದರು. ರಾಮನು ಬಿಟ್ಟ ಬಾಣಗಳನ್ನು ಮಕರಾಕ್ಷನು ಆಗಾಗಲೇ ಕತ್ತರಿಸುತ್ತ ಬಂದನು. ರಾಕ್ಷಸನ ಬಾಣಗಳನ್ನು ರಾಮನೂ ತನ್ನ ಬಾಣಗಳಿಂದ ಅನೇಕ ಭಾಗಗಳಾಗಿ ಸೀಳುತ್ತ ಬಂದನು. ಆಗ ದಿಕ್ಕುಗಳೆಲ್ಲವೂ ಬಾಣಗಳಿಂದಲೇ ತುಂಬಿಹೋದುವು. ಸಮಸ್ತ ಭೂಭಾಗವೂ ಆ ಬಾಣಗಳಿಂದಲೇ ಮರೆಸಿ ಸ್ವಲ್ಪಮಾತ್ರವೂ ಪ್ರಕಾಶವಿಲ್ಲದಂತಾಯಿತು. ಇಷ್ಟರಲ್ಲಿ ಮಹಾಬಾಹುವಾದ ರಾಮನು ಕೋಪದಿಂದ ಒಂದು ಬಾಣವನ್ನು ಪ್ರಯೋಗಿಸಿ, ಮೊದಲು ಮಕರಾಕ್ಷನ ಧನುಸ್ಸನ್ನು ಕತ್ತರಿಸಿಬಿಟ್ಟನು. ಆಮೇಲೆ ಎಂಟುಬಾಣಗಳಿಂದ ಅವನ ಸಾರಥಿಯನ್ನು ಕೊಂದನು. ಬೇರೆ ಕೆಲವು ಬಾಣಗಳನ್ನು ಬಿಟ್ಟು ಆ ರಾಕ್ಷಸನ ರಥವನ್ನೂ, ರಥಾಶ್ವಗಳನ್ನೂ ಕತ್ತರಿಸಿ ಕೆಡಹಿದನು. ರಥವು ಮುರಿದೊಡನೆ ಮಕರಾಕ್ಷನು ಅದರಿಂದ ತಟ್ಟನೆ ಕೆಳಕ್ಕೆ ಹಾರಿ, ಸರ್ವಭೂತಭಯಂಕರವಾಗಿ ಕಾಲಾಗ್ನಿಯಂತೆ ಜ್ವಲಿಸುತ್ತಿದ್ದ ಶೂಲವನ್ನೆತ್ತಿಕೊಂಡು ರಾಮನಿಗಿದಿರಾಗಿ ನಿಂತನು. ಮಕರಾಕ್ಷನು ಹೀಗೆ ನೆಲದ ಮೇಲೆ ನಿಂತು ಕೋಪದಿಂದ ಆ ದೊಡ್ಡ ಶೂಲವನ್ನು ತಿರುಗಿಸುತ್ತ ಮುಂದೆ ಬಂದು ಅದನ್ನು ವೇಗದಿಂದ ರಾಮನ

ಮೇಲೆ ಬೀಸಿದನು ಮಕರಾಕ್ಷನ ಭುಜಬಲದಿಂದ ಪ್ರಯುಕ್ತವಾಗಿ, ಮಹಾಜ್ವಾಲೆಯೊಡನೆ ತನಗಿದಿರಾಗಿ ಬರುತ್ತಿದ್ದ ಆ ಶೂಲವನ್ನು ನೋಡಿ ರಾಮನು, ಆಕಾಶದಲ್ಲಿ ಬರುವಾಗಲೇ ಅದನ್ನು ಮೂರು ಬಾಣಗಳಿಂದ ಕತ್ತರಿಸಿಬಿಟ್ಟನು. ಚಿನ್ನದ ಕಟ್ಟುಗಳಿಂದಲಂಕೃತವಾದ ಆ ಮಹಾ ಶೂಲವು ರಾಮಬಾಣಗಳಿಂದ ಪ್ರತಿಹತವಾದೊಡನೆ, ಆಕಾಶದಿಂದ ಕೊಳ್ಳಿ ಗಳುದುರುವಂತೆ ತುಂಡುತುಂಡಾಗಿ ಕೆಳಗೆ ಬಿದ್ದಿತು. ಅಮೋಘಸಾಹಸ ವುಳ್ಳ ರಾಮನಿಂದ ಆ ಮಹಾಶೂಲವು ಪ್ರತಿಹತವಾದುದನ್ನು ನೋಡಿ, ಆಕಾಶದಲ್ಲಿ ನೆರೆದಿದ್ದ ಸಮಸ್ತ ಭೂತಗಳೂ "ಭಲೆ! ಭಲೆ!!" ಎಂದು ಕೊಂಡಾಡುತ್ತಿದ್ದುವು. ಆಗ ಮಕರಾಕ್ಷನು ರಾಮಬಾಣಗಳಿಂದ ತನ್ನ ಶೂಲವು ಮುರಿದು ಬಿದ್ದುದನ್ನು ನೋಡಿ, ಕೋಪದಿಂದ ಮುಷ್ಟಿಯನ್ನೆತ್ತಿ ಕೊಂಡು "ನಿಲ್ಲು! ನಿಲ್ಲು!" ಎಂದು ಕೂಗುತ್ತ ರಾಮನಿಗಿದಿರಾಗಿ ಬಂದನು. ಹೀಗೆ ಮಕರಾಕ್ಷನು ಕೋಪದಿಂದ ಮೈತಿಳಿಯದೆ ಮೇಲೆ ಬೀಳುವುದಕ್ಕೆ ಬರುವುದನ್ನು ನೋಡಿ, ರಾಮನು ಮುಗುಳ್ನಗೆಯಿಂದ ನಗುತ್ತ, ತನ್ನ ಧನುಸ್ಸಿನಲ್ಲಿ ಆಗ್ನೇಯಾಸ್ತ್ರವನ್ನು ಸಂಧಾನಮಾಡಿದನು. ರಾಮನು ಆ ಆಗ್ನೇಯಾಸ್ತ್ರವನ್ನು ಪ್ರಯೋಗಿಸಿದೊಡನೆ, ಆ ಅಸ್ತ್ರಪ್ರಹಾರದಿಂದ ರಾಕ್ಷಸನ ಹೃದಯವು ಭೇದಿಸಿ, ಆಗಲೇ ಅವನು ಸತ್ತು ಬಿದ್ದನು. * ಹೀಗೆ ಮಕರಾಕ್ಷನು ಹತನಾಗಿ ಬಿದ್ದುದನ್ನು ನೋಡಿ ಅಲ್ಲಿ ಸತ್ತುಳಿದ ರಾಕ್ಷಸ ರೆಲ್ಲರೂ, ರಾಮಬಾಣದಿಂದ ಪೀಡಿತರಾಗಿ ಲಂಕೆಯ ಕಡೆಗೆ ಹಿಂತಿರುಗಿ

---

* ಒಂದು ಪಕ್ಷದಿಂದ ಮಕರಾಕ್ಷನು ಯುದ್ಧಕ್ಕೆ ಬಂದುದೂ, ಅವನು ಸಂಹೃತ ನಾದುದೂ ದಶಮಿಯ ಪ್ರಾತಃಕಾಲದಲ್ಲಿ ನಡೆದುದಾಗಿ ಸೂಚಿತವಾಗುವುದು. ಎರಡ ನೆಯ ಪಕ್ಷವನ್ನನುಸರಿಸಿ, ದಶಮೀಪ್ರಾತಃಕಾಲವು ಮೊದಲುಗೊಂಡು, ಅಕಂಪನ ವಧವೂ, ಪ್ರಹಸ್ತವಧವೂ, ರಾವಣನ ಮಕುಟಭಂಗವೂ, ಕುಂಭಕರ್ಣ ಪ್ರಬೋ ಧವೂ, ಕುಂಭಕರ್ಣ ವಧವೂ ನಡೆದು, ಆ ದಿನದ ಅಪರಾಹ್ಣದಲ್ಲಿ ಬ್ರಹ್ಮಾಸ್ತ್ರ ಬಂಧವೂ, ಆ ರಾತ್ರಿಯಲ್ಲಿ ಬ್ರಹ್ಮಾಸ್ತ್ರ ವಿಮೋಚನವೂ, ಲಂಕಾದಹನವೂ, ನಿಕುಂಭ ಕುಂಭ ಯೂಪಾಕ್ಷಶೋಣಿತಾಕ್ಷ ಪ್ರಜಂಘ ಕಂಪನ ಮಕರಾಕ್ಷರ ವಧವೂ ನಡೆದುದಾಗಿ ತಿಳಿಯುವುದು. ಈ ಎರಡು ಪಕ್ಷಗಳಂತೆಯೂ ಮಕರಾಕ್ಷವಧದೊಡನೆ ಹತ್ತನೆಯ ದಿನದ ಹಗಲು ಸಮಾಪ್ತವಾಗುವುದರಿಂದ ವಿರೋಧವೇನೂ ಬಾರದು.

ಪಲಾಯನಮಾಡಿದರು. ಮಕರಾಕ್ಷನು ದಶರಥಕುಮಾರನಾದ ಶ್ರೀರಾಮನ ಬಾಣದಿಂದ ಹತನಾಗಿ, ವಜ್ರಾಹತವಾದ ಪರ್ವತದಂತೆ ರಣರಂಗದಲ್ಲಿ ಬಿದ್ದಿರುವುದನ್ನು ನೋಡಿ ದೇವತೆಗಳೆಲ್ಲರೂ ಪರಮಸಂತೋಷವನ್ನು ಹೊಂದಿದರು.

ಇಲ್ಲಿಗೆ ಎಪ್ಪತ್ತೊಂಬತ್ತನೆಯ ಸರ್ಗವು.

ತಿರುಗಿ ಇಂದ್ರಜಿತ್ತು ಯುದ್ಧರಂಗಕ್ಕೆ ಬಂದು, ಅಭಿಚಾರಿಕ ಹೋಮವನ್ನಾರಂಭಿಸಿ, ರಾಮಾದಿಗಳನ್ನು ಪೀಡಿಸಿದುದು, ಲಕ್ಷ್ಮಣನು ಇಂದ್ರಜಿತ್ತಿನ ಚೇಷ್ಟೆಯನ್ನು ಸಹಿಸಲಾರದೆ, ಸರ್ವರಾಕ್ಷಸವಧಾರ್ಥವಾಗಿ ಬ್ರಹ್ಮಾಸ್ತ್ರವನ್ನುಪಯೋಗಿಸುವುದಕ್ಕೆ ನಿಶ್ಚಯಿಸಿ ಅದಕ್ಕಾಗಿ ರಾಮನ ಅನುಜ್ಞೆಯನ್ನು ಕೇಳಲು, ರಾಮನು ಅವನನ್ನು ನಿವಾರಿಸಿದುದು.

ಮಕರಾಕ್ಷನು ಹತನಾದನೆಂಬ ಸುದ್ದಿಯನ್ನು ಕೇಳಿದೊಡನೆ ರಾವಣನು ಸಹಿಸಲಾರದ ಕೋಪದಿಂದ ಕಟಕಟನೆ ಹಲ್ಲುಗಳನ್ನು ಕಡಿಯುತ್ತ ಮುಂದೆ ಮಾಡಬೇಕಾದ ಕಾರ್ಯವೇನೆಂದು ತನ್ನಲ್ಲಿಯೇ ತಾನು ಚಿಂತಿಸುತ್ತಿದ್ದು, ಕೊನೆಗೆ ಮುಂದಿನ ಯುದ್ಧಕ್ಕಾಗಿ ತನ್ನ ಮಗನಾದ ಇಂದ್ರಜಿತ್ತನ್ನು ನಿಯಮಿಸಿ, ಅವನನ್ನು ಕರೆದು ಹೇಳುವನು. "ಎಲೆ ವೀರನೆ! ಇನ್ನು ಮಹಾವೀರ್ಯಶಾಲಿಗಳಾದ ಆ ರಾಮಲಕ್ಷ್ಮಣರನ್ನು ಕೊಲ್ಲಬೇಕಾದರೆ ನೀನೇ ಹೋಗಬೇಕು. ಮಾಯೆಯಿಂದ ಕಣ್ಮರೆಯಾಗಿ ಯುದ್ಧಮಾಡಿದರೂ, ಇದಿರಾಗಿ ನಿಂತು ಯುದ್ಧಮಾಡಿದರೂ ನೀನು ಬಲಾಧಿಕನು. ಯಾವ ಕಾರ್ಯದಲ್ಲಿಯೂ ಇದಿರಿಲ್ಲದ ದೇವೇಂದ್ರನೂ ಕೂಡ ಯುದ್ಧದಲ್ಲಿ ನಿನ್ನಿಂದ ಪರಾಜಿತನಾಗಿರುವನಲ್ಲವೆ! ಇನ್ನು ನೀನು ಕೇವಲ ಮನುಷ್ಯಮಾತ್ರರಾದ ಆ ರಾಜಕುಮಾರರನ್ನು ಕಂಡಮಾತ್ರಕ್ಕೆ ಕೊಂದು ಬರುವುದರಲ್ಲಿ ಸಂದೇಹವೇನಿದೆ?" ಎಂದನು. ರಾವಣನ ಬಾಯಿಂದ ಈ ಮಾತುಗಳು ಹೊರಟ ಕೂಡಲೆ ಇಂದ್ರಜಿತ್ತು ತಂದೆಯಾಜ್ಞೆಯನ್ನು ಗೌರವಿಸಿ, ಆ ಕ್ಷಣವೇ ಅಲ್ಲಿಂದ ಹೊರಟು ಯಜ್ಞಭೂಮಿಗೆ ಬಂದನು.

ಅಲ್ಲಿ ಇಂದ್ರಜಿತ್ತು ಹೋಮಕಾರ್ಯವನ್ನಾರಂಭಿಸುವುದರೊಳಗಾಗಿ, ಕೆಲವು ರಾಕ್ಷಸಸ್ತ್ರೀಯರು ಆ ಯಜ್ಞದಲ್ಲಿ ಋತ್ವಿಕ್ಕುಗಳು ಧರಿಸುವುದಕ್ಕಾಗಿ ಕೆಂಪಾದ ಶಿರೋವಸ್ತ್ರಗಳನ್ನು ಹಿಡಿದು ಆತುರದಿಂದ ಬಂದು ಸೇರಿದರು. ಆ ಯಜ್ಞವಿಧಿಗೆ ತಕ್ಕಂತೆ ತೋಮರಗಳನ್ನೂ, ನೊದೆಯ ಹುಲ್ಲುಗಳನ್ನೂ ಸೇರಿಸಿ ಮಾಡಿದ ಪರಿಸ್ತರಣಗಳು, ತಾರೆಯ ಮರದ ಸಮಿತ್ತುಗಳು, ಋತ್ವಿಕ್ಕುಗಳು ತಲೆಗೆ ಸುತ್ತಿಕೊಳ್ಳುವುದಕ್ಕಾಗಿ ರಕ್ತವಸ್ತ್ರಗಳು, ಕರೀಕಬ್ಬಿಣದ ಸ್ರುವಗಳು, ಇವೇ ಮೊದಲಾದ ಸಮಸ್ತ ಸಾಮಗ್ರಿಗಳೂ ಸಿದ್ಧವಾದುವು. ಆಮೇಲೆ ಇಂದ್ರಜಿತ್ತು ಶಸ್ತ್ರಸಹಿತಗಳಾದ ನೊದೆಯ ಹುಲ್ಲುಗಳನ್ನು ಅಗ್ನಿವೇದಿಕೆಯ ನಾಲ್ಕುಕಡೆಗಳಿಗೂ ಪರಿಸ್ತರಣವನ್ನಾಗಿ ಮಾಡಿ, ಅಗ್ನಿಯಲ್ಲಿ ಹೋಮಮಾಡುವುದಕ್ಕಾಗಿ ಜೀವಸಹಿತವಾಗಿ ಹಿಡಿದು ತಂದ ಕರೀಮೇಕೆಯ ಕೊರಲನ್ನು ಹಿಡಿದನು. ಆಗ ಇಂದ್ರಜಿತ್ತು ಒಂದಾವೃತ್ತಿ ಅಗ್ನಿಯಲ್ಲಿ ಆಹುತಿಯನ್ನು ಮಾಡಿದೊಡನೆ, ಆ ಅಗ್ನಿಯು ಹೊಗೆಯಿಲ್ಲದೆ ಜಾಜ್ವಲ್ಯಮಾನವಾಗಿ ಉರಿಯುವುದಕ್ಕೆ ತೊಡಗಿತು. ಈ ಶುಭಚಿಹ್ನಗಳೆಲ್ಲವೂ ಆ ಇಂದ್ರಜಿತ್ತಿಗೆ ಕಾರ್ಯಸಿದ್ಧಿಯನ್ನು ಸೂಚಿಸುತ್ತಿದ್ದುವು. ಅಗ್ನಿಯು ಪುಟಹಾಕಿದ ಬಂಗಾರದಂತೆ ಬೆಳಗುತ್ತ ಪ್ರತ್ಯಕ್ಷವಾಗಿ ಸುತ್ತುವ ಜ್ವಾಲೆಗಳನ್ನು ಬಿಡುತ್ತಿತ್ತು. ಅಗ್ನಿಪುರುಷನು ತಾನಾಗಿಯೇ ಪ್ರತ್ಯಕ್ಷವಾಗಿ ಬಂದು ಹವಿಸ್ಸನ್ನು ಗ್ರಹಿಸಿದನು. ಹೀಗೆ ಇಂದ್ರಜಿತ್ತು ತನ್ನ ಹೋಮಕಾರ್ಯವನ್ನು ಮುಗಿಸಿ, ಯಜ್ಞದೇವತೆಗಳಾದ ದೇವದಾನವರಾಕ್ಷಸರಿಗೆ ತೃಪ್ತಿಪಡಿಸಿ (ತರ್ಪಣವನ್ನು ಮಾಡಿ) ದನು. ಈ ಹೋಮಕಾರ್ಯವನ್ನು ಮುಗಿಸಿದಮೇಲೆ, ಆತನು ಯಜ್ಞಸಿದ್ಧಿಯಿಂದ ಅಂತರ್ಧಾನಶಕ್ತಿಯನ್ನು ಹೊಂದಿದ ತನ್ನ ವಿಜಯರಥವನ್ನೇರಿ ಕುಳಿತನು. ನಾಲ್ಕು ಕುದುರೆಗಳನ್ನು ಕಟ್ಟಿ, ತೀಕ್ಷ್ಣಬಾಣಗಳಿಂದಲೂ, ನಾಣೇರಿಸಿದ ದೊಡ್ಡ ಧನುಸ್ಸಿನಿಂದಲೂ ಕೂಡಿದ ಆ ದಿವ್ಯರಥವು ಅತ್ಯಂತ ಕಾಂತಿವಿಶಿಷ್ಟವಾಗಿ ಜ್ವಲಿಸುತ್ತಿತ್ತು. ಮೇಲೆ ಹೊದ್ದಿಸಿದ ಆ ಸರಿಗೆಯ ಬಟ್ಟೆಯಿಂದಲೂ, ಮೃಗಗಳಂತೆಯೂ, ಚಂದ್ರನಂತೆಯೂ, ಅರ್ಧಚಂದ್ರನಂತೆಯೂ ಆಕಾರವುಳ್ಳ ಪ್ರತಿಮೆಗಳಿಂದಲೂ ಅಲಂಕೃತವಾದ ಆ ರಥವು ತನ್ನ ಕಾಂತಿಯಿಂದ ಉರಿಯುವಂತೆ ಕಾಣಿಸುತ್ತಿತ್ತು. ಅದರ ನಡುವೆ

ಹೂಡಿದ ಇಂದ್ರಜಿತ್ತಿನ ಧ್ವಜವು, ದೊಡ್ಡ ದೊಡ್ಡ ಬಂಗಾರದ ಕಟ್ಟು ಗಳಿಂದಲೂ ವೈಡೂರ್ಯರಚನೆಗಳಿಂದಲೂ ಶೋಭಿತವಾಗಿ, ಉರಿಯುವ ಬೆಂಕಿಯಂತೆ ಪ್ರಕಾಶಿಸುತ್ತಿತ್ತು. ಹೀಗೆ ಮಹಾಬಲಾಢ್ಯನಾದ ಆ ಇಂದ್ರ ಜಿತ್ತು ಸೂರ್ಯಸಮಾನವಾದ ಆ ರಥದಿಂದಲೂ, ಅಮೋಘವಾದ ಬ್ರಹ್ಮಾ ಸ್ತ್ರದಿಂದಲೂ ಸುರಕ್ಷಿತನಾಗಿ, ಎಂತವರಿಗೂ ಇದಿರಿಸಲಸಾಧ್ಯವಾದ ದಿವ್ಯ ತೇಜಸ್ಸಿನಿಂದ ಬೆಳಗುತ್ತಿದ್ದನು. ಯುದ್ಧದಲ್ಲಿ ಯಾವಾಗಲೂ ಜಯಶೀಲ ನಾದ ಆ ರಾವಣಪುತ್ರನು, ನಿಋತಿದೇವತಾತ್ಮಗಳಾದ ಮಂತ್ರಗಳಿಂದ ಹೋಮಕಾರ್ಯವನ್ನು ಮುಗಿಸಿ, ಅಂತರ್ಧಾನಶಕ್ತಿಯನ್ನು ಪಡೆದು, ಲಂಕೆಯಿಂದ ಹೊರಟು ಬರುತ್ತ, "ಇದೋ! ಈಗಲೇ ನಾನು ಯುದ್ಧ ರಂಗಕ್ಕೆ ಹೋಗಿ, ಕಪಟತಾಪಸರಾಗಿ ಕಾಡಿನಲ್ಲಿ ತಿರುಗುತ್ತಿರುವ ಆ ರಾಮಲಕ್ಷ್ಮಣರನ್ನು ಕೊಂದು ಲೋಕದಲ್ಲಿ ಕಪಿಗಳ ಹುಟ್ಟೇ ಇಲ್ಲದಂತೆ ಮಾಡುವೆನು. ನನ್ನ ತಂದೆಗೆ ಎಂದಿಗೂ ಕಾಣದ ಪರಮಸಂತೋಷ ವನ್ನುಂಟುಮಾಡುವೆನು" ಎಂದು ಇದ್ದಕ್ಕಿದ್ದ ಹಾಗೆ ತಾನೂ ಕಣ್ಮರೆ ಯಾದನು. ಕ್ರೂರಸ್ವಭಾವವುಳ್ಳ ಆ ಇಂದ್ರಜಿತ್ತು ರಾವಣನಿಂದ ಪ್ರೇರಿತ ನಾಗಿ ಕೋಪದಿಂದ ಹೊರಟು, ಮೇಲಾದ ಧನುರ್ಬಾಣಗಳ ಸಹಾಯದೊಡನೆ ಯುದ್ಧರಂಗವನ್ನು ಕುರಿತು ಬಂದನು. ರಣರಂಗವನ್ನು ಸಮೀಪಿಸಿದೊಡನೆ ಅಲ್ಲಿ, ಉಬ್ಬಿದ ಹೆಗಲುಳ್ಳವರಾಗಿ ಮೂರುಹೆಡೆಯ ಸರ್ಪಗಳಂತೆ ವಾನರಸೇನೆಯ ನಡುವೆ ನಿಂತು ರಾಕ್ಷಸರ ಮೇಲೆ ಬಾಣ ವರ್ಷಗಳನ್ನು ಕರೆಯುತ್ತಿದ್ದ ಮಹಾವೀರ್ಯವುಳ್ಳ ರಾಮಲಕ್ಷ್ಮಣರಿಬ್ಬ ರನ್ನೂ ಕಂಡನು. ಈ ಶುಭಲಕ್ಷಣಗಳಿಂದ ಅವರೇ ರಾಮಲಕ್ಷ್ಮಣರೆಂಬು ದನ್ನು ತಿಳಿದು, ತನ್ನ ಬಿಲ್ಲಿಗೆ ನಾಣೇರಿಸಿ, ಮೇಘವು ಮಳೆಯನ್ನು ಕರೆಯುವಂತೆ ಆಕಾಶದಿಂದ ಬಾಣವರ್ಷಗಳನ್ನು ಕರೆಯಲಾರಂಭಿಸಿದನು. ರಾಮಲಕ್ಷ್ಮಣರ ಕಣ್ಣಿಗೆ ಕಾಣಿಸದಂತೆಯೇ ರಥಾರೂಢನಾಗಿ ಅಂತರಿಕ್ಷ ದಲ್ಲಿ ಸಂಚರಿಸುತ್ತ, ಅವರ ಮೇಲೆ ತೀಕ್ಷ್ಣಬಾಣಗಳನ್ನು ಬಿಡುತ್ತಿದ್ದನು. ಹೀಗೆ ಅಂತರಿಕ್ಷದಿಂದ ಎಡೆಬಿಡದೆ ತಮ್ಮ ಮೇಲೆ ಬಾಣಗಳು ಬೀಳುವು ದನ್ನು ನೋಡಿ ರಾಮಲಕ್ಷ್ಮಣರಿಬ್ಬರೂ ಬಿಲ್ಲಿನಲ್ಲಿ ಬಾಣಗಳನ್ನು ಸಂಧಾನ ಮಾಡಿ, ತಮ್ಮ ದಿವ್ಯಾಸ್ತ್ರವಿದ್ಯೆಯನ್ನು ತೋರಿಸುವುದಕ್ಕೆ ತೊಡಗಿದರು.

ಮಹಾಬಲಾಢ್ಯರಾದ ಆ ರಾಜಕುಮಾರರಿಬ್ಬರೂ ತಮ್ಮ ಬಾಣಗಳಿಂದ ಅಂತರಿಕ್ಷವನ್ನೆಲ್ಲಾ ಎಡೆಬಿಡದೆ ಮುಚ್ಚುತ್ತಬಂದರು. ಆದರೇನು? ಸೂರ್ಯ ಸಮಾನಗಳಾದ ಇವರ ದಿವ್ಯಾಸ್ತ್ರವಾಗಲಿ, ಇವರ ಬಾಣಗಳಾಗಲಿ, ಇಂದ್ರಜಿತ್ತಿನ ಮೈಗೆ ಸೋಕಲೇ ಇಲ್ಲ. ಇಷ್ಟರಲ್ಲಿ ಜಯಲಕ್ಷ್ಮೀ ವಿಶಿಷ್ಟನಾದ ಆ ಇಂದ್ರಜಿತ್ತು, ತನ್ನ ಮಾಯೆಯಿಂದ ಒಂದು ದೊಡ್ಡ ಹೊಗೆಯನ್ನು ಹೊರಡಿಸಿ, ಮೊದಲೇ ಮಂಜುಮುಚ್ಚಿ ಕತ್ತಲೆ ಕವಿದಂತಿದ್ದ ದಿಕ್ಕುಗಳಿಗೆ ಮತ್ತಷ್ಟು ಕತ್ತಲೆಯನ್ನುಂಟುಮಾಡಿದನು. ಇದಲ್ಲದೆ ಆ ರಾಕ್ಷಸನು ಅಂತರಿಕ್ಷದಲ್ಲಿ ಸುತ್ತಿಸುತ್ತಿ ಬಾಣಗಳನ್ನು ವರ್ಷಿಸುತ್ತಿದ್ದರೂ, ಅವನು ನಾಣನ್ನೆಳೆಯುವ ಧ್ವನಿಯಾಗಲಿ, ಅವನ ರಥಚಕ್ರದ ಧ್ವನಿಯಾಗಲಿ ಯಾರ ಕಿವಿಗೂ ಕೇಳಿಸಲಿಲ್ಲ! ಅವನ ರೂಪವು ಮೊದಲೇ ಕಣ್ಣಿಗೆ ಗೋಚರಿಸದು. ಕಗ್ಗತ್ತಲೆಯೊಂದು ಮಾತ್ರವೇ ಸಮಸ್ತ ದಿಕ್ಕುಗಳನ್ನೂ ವ್ಯಾಪಿಸಿತ್ತು. ಈ ಗಾಢಾಂಧಕಾರದಲ್ಲಿ ಮಹಾಬಾಹುವಾದ ಆ ಇಂದ್ರಜಿತ್ತು, ಮೇಘವು ದೊಡ್ಡ ಮಳೆಯನ್ನು ಕರೆಯುವಂತೆ, ನಾರಾಚ (ಮೊನೆಬಾಣ) ಗಳನ್ನೂ, ಅಡ್ಡಲಗಿನ ಬಾಣಗಳನ್ನೂ ಎಡೆಬಿಡದೆ ವರ್ಷಿಸುತ್ತಿದ್ದನು. ಮತ್ತು ಅವನು ವರಬಲದಿಂದುಂಟಾದ ತನ್ನ ಹೆಮ್ಮೆಗೂ, ತನ್ನ ಕೋಪಕ್ಕೂ ಅನುಗುಣವಾಗಿ, ರಾಮನ ಸರ್ವಾವಯವಗಳಲ್ಲಿಯೂ ಬಾಣಗಳನ್ನು ನಾಟುತ್ತಿದ್ದನು. ಪುರುಷಸಿಂಹರಾದ ರಾಮಲಕ್ಷ್ಮಣರಿಬ್ಬರೂ, ವರ್ಷಧಾರೆಯಿಂದ ಮುಚ್ಚಲ್ಪಟ್ಟ ಪರ್ವತಗಳಂತೆ ಬಾಣಪರಂಪರೆಗಳಿಂದ ಮುಚ್ಚಲ್ಪಡುತ್ತಿದ್ದರೂ, ಸ್ವಲ್ಪಮಾತ್ರವೂ ಚಲಿಸದೆ, ಸುವರ್ಣಪುಂಖಗಳುಳ್ಳ ತಮ್ಮ ತೀಕ್ಷ್ಣಬಾಣಗಳನ್ನು ಇಂದ್ರಜಿತ್ತಿನ ಕಡೆಗೆ ಪ್ರಯೋಗಿಸುತ್ತಿದ್ದರು. ಹದ್ದಿನ ಗರಿಗಳುಳ್ಳ ಆ ಬಾಣಗಳು, ಹಕ್ಕಿಗಳಂತೆ ವೇಗದಿಂದ ಆಕಾಶದ ಕಡೆಗೆ ಹಾರಿ, ಇಂದ್ರಜಿತ್ತಿಗೆ ತಾಗಿ, ಅವನ ಮರ್ಮಗಳನ್ನು ಭೇದಿಸಿ, ರಕ್ತದಿಗ್ಧಗಳಾಗಿ ಕೆಳಗೆ ಬೀಳುತ್ತಿದ್ದುವು. ಪುರುಷೋತ್ತಮರಾದ ರಾಮಲಕ್ಷ್ಮಣರಿಬ್ಬರೂ, ಇಂದ್ರಜಿತ್ತಿನ ಬಾಣಗಳಿಂದ ಬಹಳವಾಗಿ ಪೀಡಿತರಾಗಿದ್ದರೂ, ತಮ್ಮಿಂದ ಸಾಧ್ಯವಾದಷ್ಟು ಪ್ರಯತ್ನಿಸಿ, ಆ ಬಾಣಗಳನ್ನು ತಮ್ಮ ಬಾಣಸಮೂಹಗಳಿಂದ ಖಂಡಿಸುತ್ತಬಂದರು. ಮತ್ತು ಆಗ ಇಂದ್ರಜಿತ್ತು ತಮ್ಮ ಕಣ್ಣಿಗೆ

ಗೋಚರಿಸದೆ ಮಾಯೆಯಿಂದ ಮರೆಯಾಗಿದ್ದು ಬಾಣಗಳನ್ನು ಪ್ರಯೋಗಿಸುತ್ತಿದ್ದರೂ, ಅವನ ಬಾಣಗಳು ಯಾವ ಕಡೆಯಿಂದ ಬರುವುವೆಂಬುದನ್ನು ನೋಡಿ ಆ ದಿಕ್ಕಿಗೆ ಗುರಿಹಿಡಿದು ತಮ್ಮ ಉತ್ತಮಾಸ್ತ್ರಗಳನ್ನು ಪ್ರಯೋಗಿಸುತ್ತ ಬಂದರು. ಇಂದ್ರಜಿತ್ತು ಬಾಣಪ್ರಯೋಗದಲ್ಲಿ ಬಹಳ ಚಾತುರ್ಯವುಳ್ಳ ಅತಿರಥಶಾಲಿಯಾದುದರಿಂದ, ನಿಂತ ಕಡೆಯಲ್ಲಿ ನಿಲ್ಲದೆ, ರಥಸಹಿತನಾಗಿ ನಾನಾದಿಕ್ಕುಗಳಿಗೂ ಸುತ್ತಿ, ಇದಿರು ಬಾಣಗಳಿಗೆ ಸಿಕ್ಕದೆ, ತಾನು ಮಾತ್ರ ರಾಮಲಕ್ಷ್ಮಣರ ಮೇಲೆ ತೀಕ್ಷ್ಣಬಾಣಗಳನ್ನು ಪ್ರಯೋಗಿಸುತ್ತಲೇ ಇದ್ದನು. ಹೀಗೆ ಇಂದ್ರಜಿತ್ತು ಸುನಿರ್ಮಿತಗಳಾದ ಮತ್ತು ಸುವರ್ಣಪುಂಖಗಳುಳ್ಳ ಬಾಣಗಳನ್ನು ಎಡೆಬಿಡದೆ ಪ್ರಯೋಗಿಸಿ ರಾಮಲಕ್ಷ್ಮಣರ ಸಮಸ್ತಾವಯವಗಳನ್ನೂ ಭೇದಿಸುತ್ತ ಬಂದನು. ಅವರಿಬ್ಬರ ದೇಹವೂ ರಕ್ತಮಯವಾಯಿತು. ಇಬ್ಬರೂ ಪುಷ್ಪಿಸಿದ ಮುತ್ತುಗದ ಮರಗಳಂತೆ ಕಾಣುತ್ತಿದ್ದರು. ಮೇಘಗಳು ಆಕಾಶವನ್ನು ಮರೆಸಿದಾಗ, ಸೂರ್ಯನ ಗತಿ ಚೇಷ್ಟಾದಿಗಳೊಂದೂ ಬೇರೆಯವರಿಗೆ ಹೇಗೆ ತಿಳಿಯುವುದೋ, ಹಾಗೆ ಮಾಯೆಯಿಂದ ಕಣ್ಮರೆಯಾಗಿದ್ದ ಆ ಇಂದ್ರಜಿತ್ತಿನ ಗತಿಯಾಗಲಿ, ಅವನ ರೂಪವಾಗಲಿ, ಅವನ ಧನುಸ್ಸಾಗಲಿ, ಅವನ ಬಾಣಗಳಾಗಲಿ, ಯಾರೊಬ್ಬರಿಗೂ ತಿಳಿಯಲಿಲ್ಲ. ಅವನ ಬಾಣಹತಿಗೆ ಸಿಕ್ಕಿ ಸತ್ತ ವಾನರಸೈನಿಕರು ಮಾತ್ರ ಆ ಯುದ್ಧಭೂಮಿಯಲ್ಲಿ ತಂಡತಂಡವಾಗಿ ಬೀಳುತ್ತಿದ್ದರು. ಇದನ್ನು ನೋಡಿ ಲಕ್ಷ್ಮಣನಿಗೆ ತಡೆಯಲಾರದ ಕೋಪಾವೇಶವುಂಟಾಯಿತು. ಹೀಗೆ ಕ್ರುದ್ಧನಾದ ಲಕ್ಷ್ಮಣನು ರಾಮನನ್ನು ನೋಡಿ "ಅಣ್ಣಾ! ಇನ್ನು ನಾವು ಉದಾಸೀನರಾಗಿರಬಾರದು. ಈಗಲೇ ನಾನು ಸರ್ವರಾಕ್ಷಸವಧಕ್ಕಾಗಿ ಸಂಕಲ್ಪಿಸಿ, ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿಬಿಡುವೆನು" ಎಂದನು. ಆಗ ರಾಮನು ಲಕ್ಷ್ಮಣನನ್ನು ಕುರಿತು, ವತ್ಸ ಲಕ್ಷ್ಮಣಾ! ಅದು ಸರಿಯಲ್ಲ! ಇವನೊಬ್ಬನಿಗಾಗಿ ರಾಕ್ಷಸರೆಲ್ಲರನ್ನೂ ಕೊಲ್ಲಬೇಕೆಂದೆಣಿಸುವುದು ಸರ್ವಥಾ ಯುಕ್ತವಲ್ಲ! ಕಾಳಗಕ್ಕೆ ಬಾರದವನನ್ನಾಗಲಿ, ಭಯದಿಂದ ಕಣ್ಮರೆಯಾಗಿದ್ದವನನ್ನಾಗಲಿ, ಭಯದಿಂದೋಡಿದವನನ್ನಾಗಲಿ, ಎಚ್ಚರತಪ್ಪಿದವನನ್ನಾಗಲಿ ನಿಷ್ಕಾರಣವಾಗಿ ಕೊಲ್ಲುವುದು ನಮಗೆ ಯುಕ್ತವಲ್ಲ. ವತ್ಸ ಲಕ್ಷ್ಮಣಾ! ನೀನು ಮಹಾಬಲಾಢ್ಯ

ನಾದುದರಿಂದ, ಈ ಇಂದ್ರಜಿತ್ತನ್ನು ನಿನಗೆ ಕೊಲ್ಲುವುದೇನೂ ಅಸಾಧ್ಯ ಕಾರ್ಯವಲ್ಲ. ಆದುದರಿಂದ ಮೊದಲು ನಾವು ಆ ಇಂದ್ರಜಿತ್ತನ್ನೇ ಕೊಲ್ಲುವುದಕ್ಕೆ ತಕ್ಕ ಪ್ರಯತ್ನವನ್ನು ಮಾಡಬೇಕು! ಕ್ರೂರಸರ್ಪಗಳಂತೆ ಮಹಾವೇಗವುಳ್ಳ ನಮ್ಮ ದಿವ್ಯಾಸ್ತ್ರಗಳನ್ನು ಪ್ರಯೋಗಿಸುವೆವು. ಈ ಕ್ಷುದ್ರ ರಾಕ್ಷಸನು ತನ್ನ ಮಾಯಾಬಲದಿಂದ ನಮ್ಮ ಕಣ್ಣಿಗೆ ಬೀಳದೆ ರಥಸಹಿತನಾಗಿ ಅಂತರಿಕ್ಷದಲ್ಲಿ ಸುತ್ತುತ್ತಿದ್ದರೂ, ನಮ್ಮ ವಾನರರು ಹೇಗಾದರೂ ಅವನನ್ನು ಕಂಡು ಹಿಡಿದು ಬಲಾತ್ಕಾರದಿಂದ ಹಿಡಿದು ಕೊಲ್ಲದೆ ಬಿಡರು. ಈ ರಾಕ್ಷಸನು ತನ್ನ ಮಾಯಾಬಲದಿಂದ ಭೂವಿವರವನ್ನು ಪ್ರವೇಶಿಸಿದರೂ, ಸ್ವರ್ಗದಲ್ಲಿ ಸೇರಿದರೂ, ಪಾತಾಳದಲ್ಲಿ ಮರೆಸಿಕೊಂಡರೂ, ಆಕಾಶಕ್ಕೆ ಹಾರಿದರೂ, ಬೇರೆ ಯಾವ ವಿಧದಿಂದ ತಲೆತಪ್ಪಿಸಿಕೊಂಡರೂ, ನಮ್ಮ ದಿವ್ಯಾಸ್ತ್ರಗಳಿಂದ ದಗ್ಧನಾಗಿ ಸತ್ತುಬೀಳುವುದರಲ್ಲಿ ಸಂದೇಹವಿಲ್ಲ" ಎಂದನು. ಮಹಾತ್ಮನಾಗಿಯೂ, ಧೀಮಂತನಾಗಿಯೂ ಇರುವ ರಾಮನು ಹೀಗೆ ಲಕ್ಷ್ಮಣನಿಗೆ ಕೋಪಸಮಾಧಾನವನ್ನು ಮಾಡಿ, ಕ್ರೂರಕರ್ಮಿಯಾದ ಆ ಇಂದ್ರಜಿತ್ತನ್ನು ಕೊಲ್ಲುವುದಕ್ಕೆ ಉಪಾಯವೇನೆಂದು ತನ್ನಲ್ಲಿ ತಾನು ಚಿಂತಿಸುತ್ತಿದ್ದನು.

ಇಲ್ಲಿಗೆ ಎಂಬತ್ತನೆಯ ಸರ್ಗವು.

ಇಂದ್ರಜಿತ್ತು ಹನುಮಂತನು ನೋಡುತ್ತಿರುವಾಗ
ಮಾಯಾಸೀತೆಯನ್ನು ಛೇದಿಸಿದುದು.

* ಇಷ್ಟರಲ್ಲಿ ಇಂದ್ರಜಿತ್ತು, ಮಹಾತ್ಮನಾದ ರಾಮನ ಈ ಸಂಕಲ್ಪವನ್ನು ತಿಳಿದು ಭಯಪಟ್ಟು, ಆ ಯುದ್ಧವನ್ನು ಅಷ್ಟಕ್ಕೆ ನಿಲ್ಲಿಸಿ, ಆಗಲೇ ಅಲ್ಲಿಂದ ಲಂಕೆಗೆ ಹಿಂತಿರುಗಿದನು. ಧೈರ್ಯಲಕ್ಷ್ಮೀವಿರಾಜಿತನಾದ ಅ

* ಇಲ್ಲಿ "ವಿಜ್ಞಾಯ ತು ಮನಸ್ತಸ್ಯ" ಎಂದು ಮೂಲವು. ಈ ಶ್ಲೋಕದಲ್ಲಿ "ವಿಜ್ಞಾಯ" ಎಂಬಲ್ಲಿರುವ ಯಕಾರವು ಗಾಯತ್ರಿಯ ಹತ್ತೊಂಬತ್ತನೆಯ ಅಕ್ಷರವಾದುದರಿಂದ, ಇಲ್ಲಿಗೆ ರಾಮಾಯಣದಲ್ಲಿ ಹದಿನೆಂಟು ಸಹಸ್ರ ಗ್ರಂಥಗಳು ಮುಗಿದು ಹತ್ತೊಂಬತ್ತನೆಯ ಸಹಸ್ರವು ಈ ಶ್ಲೋಕದಿಂದ ಆರಂಭಿಸುವುದಾಗಿ ಗ್ರಾಹ್ಯವು.

ರಾಕ್ಷಸಕುಮಾರನು ಲಂಕೆಯನ್ನು ಪ್ರವೇಶಿಸಿದಮೇಲೆ, ಅನೇಕ ರಾಕ್ಷಸರ ನಾಶದಿಂದ ಹಾಳುಬಿದ್ದಂತಿದ್ದ ಅಲ್ಲಿನ ಬೀದಿಗಳನ್ನು ನೋಡಿದಾಗ, ಕುಂಭಕರ್ಣಾದಿ ರಾಕ್ಷಸರವಧವೂ ಅವನ ನೆನಪಿಗೆ ಬಂದಿತು. ಆಗಲೇ ಅವನು ಕೋಪದಿಂದ ಕೆಂಪೇರಿದ ಕಣ್ಣುಳ್ಳವನಾಗಿ, ತಟ್ಟನೆ ಅಲ್ಲಿಂದ ಹಾಗೆಯೇ ಯುದ್ಧಭೂಮಿಗೆ ಹಿಂತಿರುಗಿದನು. ಮಹಾವೀರ್ಯಶಾಲಿಯಾಗಿಯೂ, ದೇವಕಂಟಕನಾಗಿಯೂ, ಪುಲಸ್ತ್ಯವಂಶ್ಯನಾಗಿಯೂ ಇರುವ ಆ ಇಂದ್ರಜಿತ್ತು, ಅನೇಕ ರಾಕ್ಷಸಸೈನ್ಯವನ್ನು ಸೇರಿಕೊಂಡು ಲಂಕೆಯ * ಪಶ್ಚಿಮದ್ವಾರದಿಂದ ಹೊರಟುಬಂದನು. ಆಗ ಆ ಇಂದ್ರಜಿತ್ತಿಗೆ, ವೀರರಾದ ರಾಮಲಕ್ಷ್ಮಣರನ್ನು ಏನಾದರೂ ಉಪಾಯದಿಂದ ದುಃಖಪರವಶರನ್ನಾಗಿ ಮಾಡಿ, ಅವರ ಯುದ್ಧೋತ್ಸಾಹವನ್ನು ತಪ್ಪಿಸಬೇಕೆಂಬ ದುರಾಲೋಚನೆಯು ಹುಟ್ಟಿತು. ಅದಕ್ಕಾಗಿ ಅವನು ಇತರರನ್ನು ಮೋಸಗೊಳಿಸತಕ್ಕ ಮಾಯಾಶಕ್ತಿಯನ್ನು ಪ್ರಯೋಗಿಸಿ ಒಂದು ಕೃತ್ರಿಮವಾದ ಸೀತಾಪ್ರತಿಮೆಯನ್ನು ನಿರ್ಮಿಸಿದನು. ಪರಮದುರಾತ್ಮನಾದ ಇಂದ್ರಜಿತ್ತು, ತನ್ನ ಶತ್ರುಗಳೆಲ್ಲರನ್ನೂ ಮೋಸಗೊಳಿಸಬೇಕೆಂಬ ದುರ್ಬುದ್ಧಿಯಿಂದ, ಆ ಮಾಯಾಸೀತೆಯನ್ನು ವಾನರರ ಕಣ್ಣೆದಿರಿಗೆ ಕೊಲ್ಲಬೇಕೆಂದೆಣಿಸಿ,

* ಇಂದ್ರಜಿತ್ತು ದುರ್ಜಯಗಳಾದ ಅಸ್ತ್ರಗಳನ್ನು ಪಡೆಯುವುದಕ್ಕಾಗಿ ನಿಕುಂಭಿಲೆಯಲ್ಲಿ ಹೋಮವನ್ನು ಮಾಡಬೇಕೆಂದೆಣಿಸಿ, ಕಾರ್ಯವು ಮುಗಿಯುವವರೆಗೆ ರಾಮಲಕ್ಷ್ಮಣರ ಯುದ್ಧಪ್ರಯತ್ನವನ್ನು ತಪ್ಪಿಸುವುದಕ್ಕಾಗಿ ಈ ಮಾಯೆಯನ್ನಾರಂಭಿಸಿದನು. ಅವರೆ ರಾಮಲಕ್ಷ್ಮಣರಿಬ್ಬರೂ ತನ್ನನ್ನು ಕೊಲ್ಲುವುದಾಗಿ ಸಂಕಲ್ಪಿಸಿರುವುದನ್ನು ನೋಡಿ, ತಾನು ಹಿಡಿದ ಈ ಮಾಯಾಸೀತೆಯ ವಧೋಪಾಯವನ್ನು ಅವರ ಮುಂದೆ ತೋರಿಸಲಾರದೆ ಹೋದನು. ಇತರ ವಾನರರು ಹಿಂದೆ ಯಾವಾಗಲೂ ಸೀತೆಯನ್ನು ನೋಡಿದವರಲ್ಲವಾದುದರಿಂದ ಅವರಿಗೆ ಸೀತೆಯನ್ನು ತೋರಿಸಿದರೂ ಸೀತೆಯೆಂದು ತಿಳಿದುಕೊಳ್ಳಲಾರರು. ಅದಕ್ಕಾಗಿಯೇ ಇಂದ್ರಜಿತ್ತು ರಾಮಲಕ್ಷ್ಮಣರಿದ್ದ ಸ್ಥಳವನ್ನು ಬಿಟ್ಟು, ಪಶ್ಚಿಮದ್ವಾರಕ್ಕೆ ಬಂದು, ಅಲ್ಲಿ ಹನುಮಂತನ ಮುಂದೆ ಈ ಕಾರ್ಯವನ್ನು ನಡೆಸಿದನು. ಹೇಗಿದ್ದರೂ ಹನುಮಂತನ ಮೂಲಕವಾಗಿ ರಾಮಲಕ್ಷ್ಮಣರಿಗೆ ಈ ವೃತ್ತಾಂತವು ತಿಳಿಯಬಹುದೆಂಬ ನಿಶ್ಚಯದಿಂದ ಈ ಉಪಾಯವನ್ನು ಮಾಡಿದುದಾಗಿ ಗ್ರಾಹ್ಯವು.

ಆ ಪ್ರತಿಮೆಯನ್ನು ತನ್ನ ರಥದಲ್ಲಿರಿಸಿಕೊಂಡು, ಅನೇಕ ರಾಕ್ಷಸಸೈನ್ಯದಿಂದ ಪರಿವೃತನಾಗಿ ವಾನರಸೈನ್ಯವು ನೆರೆದಿದ್ದ ಕಡೆಗೆ ಬಂದನು. ಹೀಗೆ ಇಂದ್ರಜಿತ್ತು ಸೇನಾಸನ್ನಾಹದೊಡನೆ ಬರುವುದನ್ನು ಕಂಡು, ಇತ್ತಲಾಗಿ ನೆರೆದಿದ್ದ ವಾನರರೆಲ್ಲರೂ ಕೋಪಾವಿಷ್ಟರಾಗಿ, ದೊಡ್ಡ ದೊಡ್ಡ ಶಿಲೆಗಳನ್ನೆತ್ತಿಕೊಂಡು ಅವನನ್ನಿದಿರಿಸಿ ಬಂದರು. ಈ ವಾನರಸೈನ್ಯಕ್ಕೆ ಹನುಮಂತನೇ ಮುಂದಾಳಾಗಿ ಹೊರಟನು. ಈ ಹನುಮಂತನು ಶತ್ರುಗಳಿಂದ ತಡೆಯಲಸಾಧ್ಯವಾದ ಒಂದು ದೊಡ್ಡ ಪರ್ವತಶಿಖರವನ್ನು ಹಿಡಿದು, ವಾನರರಿಗೆ ಮುಂದಾಗಿ ಬರುವಾಗ, ತನಗಿದಿರಾಗಿ ಇಂದ್ರಜಿತ್ತಿನ ರಥದಲ್ಲಿ ಸೀತೆಯು ಕೇವಲ ದೀನಳಾಗಿ ಕುಳಿತಿದ್ದಹಾಗೆ ಅವನ ಕಣ್ಣಿಗೆ ಕಾಣಿಸಿತು. ಶ್ರೀರಾಮನಿಗೆ ಪ್ರಿಯಪತ್ನಿಯಾದ ಸೀತಾದೇವಿಯು, ತಲೆಯನ್ನು ಒಂದೇ ಜಡೆಯಾಗಿ ಬೆಳೆಬಿಟ್ಟು, ಬಹುಕಾಲದಿಂದ ಧರಿಸಿ ಮಲಿನವಾದ ಒಂದೇ ಬಟ್ಟೆಯನ್ನುಟ್ಟು, ಉಪವಾಸದಿಂದ ಕಂದಿದ ಮುಖವುಳ್ಳವಳಾಗಿ, ಬಹುಕಾಲದಿಂದ ದೇಹಸಂಸ್ಕಾರವೊಂದೂ ಇಲ್ಲದೆ ಕೊಳೆಯೇರಿದ ಮೈಯುಳ್ಳವಳಾಗಿ, ರಥಮಧ್ಯದಲ್ಲಿ ಕುಳಿತಿರುವುದನ್ನು ಕಂಡನು. ಮತ್ತು ಒಂದು ಮುಹೂರ್ತಕಾಲದವರೆಗೆ ಆ ಸ್ತ್ರೀವ್ಯಕ್ತಿಯನ್ನೇ ಚೆನ್ನಾಗಿ ಕಣ್ಣಿಟ್ಟು ನೋಡಿದನು. ಅವನು ಅಶೋಕವನದಲ್ಲಿ ಸೀತೆಯ ಸ್ಥಿತಿಯನ್ನು ನೋಡಿ ಇನ್ನೂ ಬಹುದಿನಗಳಾಗದುದರಿಂದ ಆ ಸೀತೆಯೇ ಇವಳೆಂದು ಅವನ ಮನಸ್ಸಿಗೆ ನಿಶ್ಚಯವು ಹುಟ್ಟಿತು. ಕೊಳೆಮುಚ್ಚಿದ ಮೈಯುಳ್ಳವಳಾಗಿ ದೈನ್ಯದಿಂದ ರಥದಲ್ಲಿ ಕುಳಿತಿದ್ದ ಆ ವ್ಯಕ್ತಿಯನ್ನು ಕಂಡು ಹನುಮಂತನಿಗೆ ಸಹಿಸಲಾರದ ದುಃಖವುಂಟಾಯಿತು. ಅವಳ ಸ್ಥಿತಿಯನ್ನು ನೋಡಿದೊಡನೆ ಇವನ ಕಣ್ಣುಗಳಲ್ಲಿ ಪಳಪಳನೆ ನೀರು ಸುರಿಯಿತು. ಹೀಗೆ ಸೀತೆಯು ಮುಖದಲ್ಲಿ ಸ್ವಲ್ಪವಾದರೂ ಉಲ್ಲಾಸವಿಲ್ಲದೆ, ಅತ್ಯಂತ ದೀನಳಾಗಿ, ಕೃಶಳಾಗಿ, ಆ ಕ್ರೂರರಾಕ್ಷಸನ ಕೈಗೆ ಸಿಕ್ಕಿ ಅವನ ರಥದಲ್ಲಿರುವುದನ್ನು ನೋಡಿ ಹನುಮಂತನು ತನ್ನಲ್ಲಿ ತಾನು "ಆಹಾ! ಈ ದುರಾತ್ಮನು ಹೀಗೆ ಸೀತೆಯನ್ನು ರಥದಲ್ಲಿ ಕುಳ್ಳಿರಿಸಿ ಇಲ್ಲಿಗೆ ಕರೆತಂದ ಉದ್ದೇಶವೇನಿರಬಹುದು?" ಎಂದು ಚಿಂತಿಸುತ್ತ, ಸಮೀಪದಲ್ಲಿದ್ದ ವಾನರರನ್ನೂ ವಿಚಾರಿಸಿದನು. ಯಾರನ್ನು ಕೇಳಿದರೂ,

ಎಷ್ಟೆಷ್ಟು ಚಿಂತಿಸಿದರೂ, ಅವನ ಮನಸ್ಸಿಗೆ ನಿಶ್ಚಯವೇನೂ ಹುಟ್ಟಲಿಲ್ಲ. ಕೊನೆಗೆ ಅವನು ಹಲವು ವಾನರವೀರರೊಡನೆ ಸೇರಿ ಇಂದ್ರಜಿತ್ತಿನ ಮೇಲೆ ಯುದ್ಧಕ್ಕೆ ಹೊರಟನು. ಹೀಗೆ ವಾನರಸೈನ್ಯವು ತನ್ನ ಮೇಲೆ ಬೀಳು ವುದಕ್ಕೆ ಬರುವುದನ್ನು ನೋಡಿ, ಇಂದ್ರಜಿತ್ತು ಬಹಳ ಕೋಪಾವೇಶ ವನ್ನು ತೋರಿಸುತ್ತ, ಆ ವಾನರರು ತನ್ನನ್ನು ಸಮೀಪಿಸುವಷ್ಟರಲ್ಲಿ, ಒರೆಯಿಂದ ಕತ್ತಿಯನ್ನೆಳೆದು ಆ ಮಾಯಾಸೀತೆಯ ತುರುಬಿಗೆ ಕೈ ಯಿಟ್ಟನು. ಇತ್ತಲಾಗಿ ಸಮಸ್ತ ವಾನರರು ನೋಡುತ್ತಿರುವ ಹಾಗೆಯೇ ಇಂದ್ರಜಿತ್ತು ಅತ್ತಲಾಗಿ ರಥದಲ್ಲಿ "ರಾಮಾ! ರಾಮಾ!" ಎಂದು ದೈನ್ಯ ದಿಂದ ಕೂಗಿಡುತ್ತಿದ್ದ ಆ ವ್ಯಕ್ತಿಯ ಕಂಠಕ್ಕೆ ಸರಿಯಾಗಿ ಕತ್ತಿಯನ್ನು ಬೀಸಿದನು. ಇಂದ್ರಜಿತ್ತು ಮೊದಲು ಸೀತೆಯ ತಲೆಯ ತುರುಬಿಗೆ ಕೈ ಯಿಟ್ಟುದನ್ನು ನೋಡಿದಾಗಲೇ ವಾಯುಪುತ್ರನಾದ ಹನುಮಂತನಿಗೆ ಮಹಾದುಃಖವುಂಟಾಯಿತು. ಅವನ ಕಣ್ಣುಗಳಲ್ಲಿ ನೀರು ಉಕ್ಕಿ ಬರು ತ್ತಿತ್ತು. ಇದರ ಮೇಲೆ ಸರ್ವಾಂಗಸುಂದರಿಯಾದ ಆ ರಾಮಪತ್ನಿಯು ಹಾಗೆ ದುರವಸ್ಥೆಯಿಂದ ಕೂಗಿಡುವುದನ್ನು ನೋಡಿ ಸಹಿಸಲಾರದ ಕೋಪವೂ ಹುಟ್ಟಿತು. ಹೀಗೆ ಕ್ರುದ್ಧನಾದ ಹನುಮಂತನು, ಇಂದ್ರ ಜಿತ್ತನ್ನು ಕುರಿತು ಕ್ರೂರವಾಕ್ಯದಿಂದ "ಎಲೆ ದುರಾತ್ಮಾ! ನೀನು ಬ್ರಹ್ಮರ್ಷಿಕುಲದಲ್ಲಿ ಹುಟ್ಟಿದವನಾದರೂ, ರಾಕ್ಷಸಯೋನಿಗೆ ಸೇರಿದವನಾ ದುದರಿಂದ, ಹೀಗೆ ಮಹಾಪತಿವ್ರತೆಯಾದ ಸೀತೆಯ ತಲೆತುರುಬಿಗೆ ಕೈ ಯಿಟ್ಟೆಯಲ್ಲವೆ! ಛೀ ಪಾಪಿ! ಇರಲಿ! ಇದರಿಂದ ನಿನಗೆ ನಾಶವು ತಪ್ಪದು! ಆಹಾ! ಎಲೆ ದುರಾತ್ಮಾ! ನಿನಗೆ ಇಷ್ಟೊಂದು ದುರ್ಬುದ್ಧಿಯೇ! ಛೀ! ಪಾಪಿ! ನಿನ್ನ ಜನ್ಮವನ್ನು ಸುಡಬೇಕು! ಎಲೆ ಘಾತುಕಾ! ಎಲೆ ನೀಚಾ! ಎಲೆ ದುರಾಚಾರಾ! ಎಲೆ ಕ್ಷುದ್ರಾ! ಈ ಪಾಪಕಾರ್ಯದಲ್ಲಿ ನಿನ್ನ ಪರಾ ಕ್ರಮವೆ! ಕೇವಲ ಹೀನನು ಹೊರತು ಬೇರೊಬ್ಬನು ಇಂತಹ ಅಕಾರ್ಯ ವನ್ನು ಮಾಡಲಾರನು ಎಲೆ ನಿರ್ಘೃಣಾ! ನಿನಗೆ ಸ್ವಲ್ಪವಾದರೂ ಮರುಕವಿಲ್ಲವೆ? ಅಯ್ಯೋ ಪಾಪಿ! ಮನೆಯನ್ನೂ, ರಾಜ್ಯವನ್ನೂ ಕಳೆದು ಕೊಂಡು, ಪತಿಯಾದ ರಾಮನ ಕೈಯಿಂದಲೂ ತಪ್ಪಿಬಂದಿರುವ ಅಬಲೆ ಯಾದ ಈ ಹೆಂಗಸು, ನಿನಗೆ ಯಾವ ವಿಧದಲ್ಲಿ ಅಪರಾಧವನ್ನು ಮಾಡಿ

ರುವಳು? ಬಂಧುಮಿತ್ರರ ಬಲವಿಲ್ಲದೆ, ಸೇನಾಬಲವಿಲ್ಲದೆ, ಕೈಹಿಡಿದ ಗಂಡನ ಬಲವೂ ಇಲ್ಲದೆ, ಏಕಾಕಿನಿಯಾದ ಈ ಅಬಲೆಯು ನಿನಗೆ ಯಾವ ರೀತಿಯಿಂದ ಅಪಕಾರಮಾಡಬಲ್ಲಳು? ಆಚಾರಪ್ರಧಾನವಾದ ಮಿಥಿಲರಾಜ ವಂಶದಲ್ಲಿ ಹುಟ್ಟಿ, ಅಪರಾಧವನ್ನೇ ಕಂಡರಿಯದ ಇವಳನ್ನು ನೀನು ಕೊಲ್ಲಬೇಕೆಂದೆಣಿಸಿರುವೆಯಲ್ಲಾ! ಎಲೆ ನೀಚಾ! ಒಂದುವೇಳೆ ಈಗ ನೀನು ಸೀತೆಯನ್ನು ಕೊಂದರೂ ನೀನು ಬಹುಕಾಲದವರೆಗೆ ಬದುಕಲಾರೆ! ಈ ಪಾಪಕಾರ್ಯಕ್ಕೆ ನಿನಗೆ ವಧವೇ ತಕ್ಕ ಶಿಕ್ಷೆಯು! ಹೇಗೂ ನೀನು ಈಗ ನನ್ನ ಕೈಗೆ ಸಿಕ್ಕಿ ಬಿದ್ದಿರುವೆ! ಇನ್ನು ನೀನು ಬದುಕುವುದೆಂದರೇನು? ಲೋಕಕಂಟಕನಾದ ನೀನು ಶತ್ರುಗಳಿಗೆ ಮಾತ್ರವೇ ಅಲ್ಲದೆ ಸಮಸ್ತ ಲೋಕಕ್ಕೂ ವಧ್ಯನು. ಎಲೆ ಪಾಪಿ! ಇಲ್ಲಿ ನೀನು ನನ್ನ ಕೈಯಿಂದ ಸಾಯುವುದು ಹಾಗಿರಲಿ! ನೀನು ಪ್ರೇತರೂಪವನ್ನು ಹೊಂದಿದ ಮೇಲೆಯೂ ಕೂಡ ಸ್ತ್ರೀಹತ್ಯೆಯನ್ನು ಮಾಡಿದ ಪಾಪಿಗಳಿಗೆ ಯೋಗ್ಯಗಳಾದ ಕುತ್ಸಿತ ಲೋಕಗಳಲ್ಲಿ ಸೇರಿ ನರಳಬೇಕಾಗುವುದಲ್ಲವೆ?" ಎಂದನು. ಹೀಗೆ ಹನುಮಂತನು ಇಂದ್ರಜಿತ್ತನ್ನು ಪರುಷವಾಕ್ಯಗಳಿಂದ ಧಿಕ್ಕರಿಸುತ್ತ ಆ ಕ್ರೂರ ಕೃತ್ಯವನ್ನು ತಪ್ಪಿಸುವುದಕ್ಕಾಗಿ ಆಯುಧಪಾಣಿಗಳಾದ ಕೆಲವು ವಾನರರನ್ನೂ ಸಂಗಡ ಕರೆದುಕೊಂಡು ಅವನನ್ನಿದಿರಿಸಿದನು. ಹೀಗೆ ಮಹಾವೀರ್ಯವುಳ್ಳ ವಾನರಸೈನ್ಯವು ಮೇಲೆಬಿದ್ದು ಬರುವುದನ್ನು ನೋಡಿ, ಭಯಂಕರಪರಾಕ್ರಮವುಳ್ಳ ರಾಕ್ಷಸಸೈನ್ಯವು ಎಚ್ಚರದಿಂದ ಮುಂದೆ ಬಂದು ಹನುಮಂತನನ್ನೂ ಈ ವಾನರಸೈನ್ಯವನ್ನೂ ತಡೆಯಿತು. ಇದೇ ಸಮಯದಲ್ಲಿ ಇಂದ್ರಜಿತ್ತೂ ಕೂಡ ಎಡೆಬಿಡದೆ ಸಾವಿರಬಾಣಗಳನ್ನು ಪ್ರಯೋಗಿಸಿ, ವಾನರಸೈನ್ಯವನ್ನು ಚದರಿಸುತ್ತ, ಆ ಸೇನೆಗೆ ಮುಂದಾಳಾಗಿದ್ದ ಹನುಮಂತನನ್ನು ನೋಡಿ, "ಎಲೆ ವಾನರಾ! ಯಾವಳನ್ನು ಬಿಡಿಸುವುದಕ್ಕಾಗಿ ನೀನು ಸುಗ್ರೀವನನ್ನೂ, ರಾಮನನ್ನೂ, ಇಲ್ಲಿಗೆ ಕರೆತಂದೆಯೋ, ಆ ಸೀತೆಯನ್ನು ಈಗಲೇ ನಿನ್ನ ಕಣ್ಣಿದಿರಾಗಿ ಕೊಲ್ಲುವೆನು ನೋಡು. ಮೊದಲು ಆಕೆಯನ್ನು ಕೊಂದು ಆಮೇಲೆ ಕ್ರಮವಾಗಿ ರಾಮನನ್ನೂ, ಲಕ್ಷ್ಮಣನನ್ನೂ, ನಿನ್ನನ್ನೂ, ಸುಗ್ರೀವನನ್ನೂ, ದುರ್ಮಾರ್ಗನಾದ ಆ ವಿಭೀಷಣನನ್ನೂ ಕೊಂದು ಕೆಡಹುವೆನು. ಎಲೆ ಕಪೀ! ನೀನು

ಸ್ತ್ರೀಹತ್ಯೆಯನ್ನು ಮಾಡಬಾರದೆಂದು ನನಗೆ ಉಪದೇಶಿಸಿದೆಯಲ್ಲವೆ! ಅದಕ್ಕೆ ಸಮಾಧಾನವನ್ನು ಹೇಳುವೆನು ಕೇಳು. ಲೋಕದಲ್ಲಿ ಯಾವ ಮನುಷ್ಯನೇ ಆಗಲಿ! ತನ್ನ ಶತ್ರುಗಳಿಗೆ ಸಂಕಟಕರವಾದ ಕಾರ್ಯವು ಎಷ್ಟೇ ಹೇಯವಾಗಿದ್ದರೂ, ಅದನ್ನು ಅವಶ್ಯವಾಗಿ ನಡೆಸಿಯೇ ತೀರಬೇಕು. ಆದುದರಿಂದ ನಿಮ್ಮೆಲ್ಲರಿಗೂ ಸಂಕಟವನ್ನುಂಟುಮಾಡತಕ್ಕ ಈ ಸೀತಾವಧವೆಂಬುದು ನನಗೆ ಅವಶ್ಯಕರ್ತವ್ಯವು" ಎಂದನು. ಇಂದ್ರಜಿತ್ತು ಹನುಮಂತನಿಗೆ ಈ ಮಾತನ್ನು ಹೇಳಿ, ತೀಕ್ಷ್ಣವಾದ ಅಲಗುಳ್ಳ ಖಡ್ಗವನ್ನೆತ್ತಿ ಅತ್ತಲಾಗಿ ತನ್ನ ರಥದಲ್ಲಿ ದುಃಖದಿಂದ ಗೋಳಿಡುತ್ತಿದ್ದ ಮಾಯಾಸೀತೆಯನ್ನು ತನ್ನ ಕೈಯಿಂದಲೇ ಕತ್ತರಿಸಿದನು. ದುರಾತ್ಮನಾದ ಆ ರಾಕ್ಷಸನು ತನ್ನ ತೀಕ್ಷ್ಣಖಡ್ಗದಿಂದ ಜನಿವಾರದೆಳೆಯಂತೆ ಆ ಸ್ತ್ರೀವ್ಯಕ್ತಿಯ ಕೊರಲನ್ನು ಉದ್ದಕ್ಕೆ ಸೀಳಲು, ಪ್ರಿಯದರ್ಶನವುಳ್ಳ ಆ ಸೀತಾಪ್ರಕೃತಿಯು ಬಹಳ ಶೋಚನೀಯಾವಸ್ಥೆಯನ್ನು ಹೊಂದಿ ತುಂಡಾಗಿ ಕೆಳಗೆ ಬಿದ್ದಿತು. ಹೀಗೆ ಇಂದ್ರಜಿತ್ತು ತನ್ನ ಕೈಯಾರೆ ಆಕೆಯನ್ನು ಕೊಂದು, ಆಮೇಲೆ ಹನುಮಂತನನ್ನು ಕುರಿತು "ಎಲೆ ವಾನರಾ! ರಾಮನ ಪ್ರಿಯಪತ್ನಿಯಾದ ಈ ಸೀತೆಯು ನನ್ನ ಕೋಪಕ್ಕೆ ಪಾತ್ರಳಾಗಿ ಯಾವ ಗತಿಯನ್ನು ಹೊಂದಿದಳು ನೋಡಿದೆಯಾ? ಇನ್ನು ಇವಳ ಕಾರ್ಯವು ತೀರಿತು. ನಿಮ್ಮ ಶ್ರಮವೆಲ್ಲವೂ ನಿರರ್ಥಕವಾಯಿತು" ಎಂದನು. ಹೀಗೆ ಇಂದ್ರಜಿತ್ತು, ಆ ಮಾಯಾಸೀತೆಯನ್ನು ತನ್ನ ಕೈಯಿಂದಲೇ ಕಡಿದು, ಉತ್ಸಾಹದಿಂದುಕ್ಕುತ್ತ, ರಥದಲ್ಲಿದ್ದ ಹಾಗೆಯೇ ಮಹಾಧ್ವನಿಯಿಂದ ಸಿಂಹನಾದವನ್ನು ಮಾಡಿದನು. ಹೀಗೆ ಇಂದ್ರಜಿತ್ತು ರಾಕ್ಷಸಸೈನ್ಯವೆಂಬ ದುರ್ಗದ ನಡುವೆ ಸೇರಿ, ದೊಡ್ಡದಾಗಿ ಬಾಯನ್ನು ತೆರೆದು ಕೂಗಿಡಲು, ಅವನ ಮುಂದೆ ಯುದ್ಧೋದ್ಯುಕ್ತರಾಗಿ ನಿಂತಿದ್ದ ವಾನರರೆಲ್ಲರೂ ದುಃಖಿತರಾದರು. ದುರಾತ್ಮನಾದ ಆ ಇಂದ್ರಜಿತ್ತು ತಾನು ಸೀತೆಯನ್ನು ಕೊಂದೆನೆಂಬ ಮಹೋತ್ಸಾಹವನ್ನು ತೋರಿಸುತ್ತ, ಆಗಾಗ ಸಂತೋಷದಿಂದ ಬೊಬ್ಬಿಡುತ್ತಿರುವುದನ್ನು ನೋಡಿ, ವಾನರರೆಲ್ಲರೂ ಭಯದಿಂದಲೂ, ದುಃಖ

ದಿಂದಲೂ ಹಿಂದುಮುಂದು ತೋರದೆ ನಾನಾದಿಕ್ಕುಗಳಿಗೆ ಪಲಾಯನ ಮಾಡುತ್ತಿದ್ದವು.

ಇಲ್ಲಿಗೆ ಎಂಬತ್ತೊಂದನೆಯ ಸರ್ಗವು.

ಹನುಮಂತನು ಭಯದಿಂದೋಡುತ್ತಿದ್ದ ವಾನರರನ್ನು ತಡೆದು ನಿಲ್ಲಿಸಿ, ರಾಕ್ಷಸಸೈನ್ಯವನ್ನು ಧ್ವಂಸಮಾಡಿ ಸೀತಾ ವಧವನ್ನು ರಾಮನಿಗೆ ತಿಳಿಸುವುದಕ್ಕಾಗಿ ವಾನರಸೈನ್ಯದೊಡನೆ ರಾಮನ ಬಳಿಗೆ ಹೋದುದು. ಇತ್ತಲಾಗಿ ಇಂದ್ರಜಿತ್ತು ನಿಕುಂಭಿಳೆಯಲ್ಲಿ ಹೋಮವನ್ನಾರಂಭಿಸಿದುದು.

ಹೀಗೆ ಇಂದ್ರಜಿತ್ತು ಸಿಡಿಲಿನಂತೆ ಭಯಂಕರವಾಗಿ ಕೂಗುವುದನ್ನು ಕೇಳಿ, ವಾನರಶ್ರೇಷ್ಠರೆಲ್ಲರೂ ದಿಕ್ಕುದಿಕ್ಕುಗಳನ್ನು ನೋಡುತ್ತ ಭಯದಿಂದೋಡುತ್ತಿದ್ದರು. ಹೀಗೆ ಕಂದಿದ ಮುಖದಿಂದ ವಾನರರು ಭಯಪಟ್ಟು, ಚೆದರಿ ಕಂಡಕಂಡ ಕಡೆಗೆ ಓಡುತ್ತಿರುವುದನ್ನು ನೋಡಿ, ವಾಯುಪುತ್ರನಾದ ಹನುಮಂತನು ಅವರನ್ನು ಕುರಿತು "ಎಲೆ ವಾನರರೆ! ಇದೇನು? ನೀವೆಲ್ಲರೂ ಹೀಗೆ ಭಯದಿಂದ ಕಂದಿ ರಣರಂಗದಿಂದ ಪಲಾಯನ ಮಾಡುವುದೆಂದರೇನು? ನಿಮ್ಮ ಯುದ್ಧೋತ್ಸಾಹವೆಲ್ಲವೂ ಎಲ್ಲಿ ಹೋಯಿತು? ನಿಮ್ಮ ಶೌರ್ಯವೇನಾಯಿತು? ನಾನು ನಿಮಗೆ ಮುಂದಾಗಿ ಬರುವಾಗ ನಿಮಗೆ ಭಯವೇನು? ನನ್ನ ಹಿಂದೆ ಬನ್ನಿರಿ! ಇದುವರೆಗೆ ಅನೇಕ ಯುದ್ಧಗಳಲ್ಲಿ ಖ್ಯಾತಿಹೊಂದಿದ ನಿಮ್ಮಂತಹ ಶೂರರು ಯುದ್ಧಕ್ಕೆ ಹಿಂಜರಿದು ಹೋಗುವುದು ಎಷ್ಟುಮಾತ್ರವೂ ಯುಕ್ತವಲ್ಲ" ಎಂದನು. ಹನುಮಂತನು ಹೀಗೆ ಧೈರ್ಯವನ್ನು ಹೇಳಿದಮೇಲೆ ಸಮಸ್ತ ವಾನರರಿಗೂ ಮನಸ್ಸಿನಲ್ಲಿ ಉತ್ಸಾಹವು ಹುಟ್ಟಿತು. ಅವರಿಗೆ ಮೇಲೆ ಮೇಲೆ ಸಂತೋಷವೂ ಹೆಚ್ಚಿ ಮೈಯಲ್ಲಿ ರೋಮಾಂಚವು ಹುಟ್ಟಿತು. ಆಗಲೇ ಅವರೆಲ್ಲರೂ ಪರ್ವತಶಿಖರಗಳನ್ನೂ, ವೃಕ್ಷಗಳನ್ನೂ ಹಿಡಿದು ಯುದ್ಧಸನ್ನದ್ಧರಾದರು. ಎಲ್ಲರೂ ಒಂದಾಗಿ ಸೇರಿ ಗರ್ಜಿಸುತ್ತ ಬಂದು ರಾಕ್ಷಸರನ್ನಿದಿರಿಸಿದರು. ಅವರೆಲ್ಲರೂ ಹನುಮಂತನನ್ನು ಮುಂದೆ ಬಿಟ್ಟು

ಕೊಂಡು ಅವನ ಹಿಂದೆ ಹೊರಟರು. ಅಗ್ನಿಯಂತೆ ತೇಜಸ್ವಿಗಳಾದ ಅನೇಕ ವಾನರಸೈನಿಕರಿಂದ ಪರಿವೃತನಾದ ಹನುಮಂತನು, ಜ್ವಾಲೆಗಳಿಂದ ಕೂಡಿದ ಅಗ್ನಿಹೋತ್ರನಂತೆ ಜ್ವಲಿಸುತ್ತ, ಶತ್ರುಸೈನ್ಯವನ್ನು ದಹಿಸುವುದಕ್ಕೆ ತೊಡಗಿದನು. ಹೀಗೆ ವಾನರೋತ್ತಮನಾದ ಹನುಮಂತನು ಪ್ರಳಯಕಾಲದಲ್ಲಿ ಪ್ರಜಾನಾಶಕ್ಕಾಗಿ ಹೊರಟ ಯಮನಂತೆ ಅನೇಕ ವಾನರರೊಡನೆ ರಾಕ್ಷಸಸೈನ್ಯವನ್ನು ಪ್ರವೇಶಿಸಿ ದೊಡ್ಡ ಯುದ್ಧವನ್ನಾರಂಭಿಸಿದನು. ಆಗ ಹನುಮಂತನಿಗೆ ಒಂದು ಕಡೆಯಲ್ಲಿ ಶತ್ರುಗಳ ಮೇಲಿನ ಕೋಪವೂ, ಮತ್ತೊಂದು ಕಡೆಯಲ್ಲಿ ಸೀತಾವಧಭ್ರಾಂತಿಯಿಂದುಂಟಾದ ದುಃಖವೂ ಬಹಳವಾಗಿ ಉದ್ರೇಕಗೊಳಿಸುತ್ತಿರಲು, ಆ ತನ್ನ ದುಃಖ ಕೋಪಗಳೆರಡನ್ನೂ ತೀರಿಸಿಕೊಳ್ಳುವಂತೆ, ಒಂದು ದೊಡ್ಡ ಶಿಲೆಯನ್ನೆತ್ತಿ ತಂದು, ವೇಗದಿಂದ ಇಂದ್ರಜಿತ್ತಿನ ರಥದ ಮೇಲೆ ಬೀಸಿದನು. ಆಗ ರಥವನ್ನು ನಡೆಸುತ್ತಿದ್ದ ಸಾರಥಿಯು, ತನ್ನ ರಥದ ಕಡೆಗೆ ಬರುವ ಆ ಮಹಾಶಿಲೆಯನ್ನು ನೋಡಿದೊಡನೆ, ತನ್ನ ಮನೋನುಸಾರವಾಗಿ ನಡೆಯತಕ್ಕ ಕುದುರೆಗಳನ್ನೆಳೆದು, ರಥವನ್ನು ಬಹುದೂರದವರೆಗೆ ಹಿಂದಕ್ಕೆ ವೇಗದಿಂದ ನಡೆಸಿ, ಆ ಶಿಲೆಯು ಗುರಿತಪ್ಪಿ ಬೀಳುವಂತೆ ಮಾಡಿದನು. ಇದರಿಂದ ಆ ಮಹಾಶಿಲೆಯು, ರಥದಲ್ಲಿದ್ದ ಇಂದ್ರಜಿತ್ತಿನ ಮೇಲಾಗಲಿ, ಅವನ ಸಾರಥಿಯ ಮೇಲಾಗಲಿ ಬೀಳದೆ ನಿರರ್ಥಕವಾಗಿ ಭೂಮಿಯನ್ನು ಭೇದಿಸಿಕೊಂಡು ಪಾತಾಳವನ್ನು ಪ್ರವೇಶಿಸಿತು. ಆದರೆ ಹನುಮಂತನು ಬೀಸಿದ ಆ ಮಹಾಶಿಲೆಯನ್ನು ನೋಡಿದಾಗಲೇ ರಾಕ್ಷಸರ ಹೃದಯವು ನಡುಗಿತು. ಆ ಶಿಲಾಪ್ರಹಾರದ ವೇಗಕ್ಕೆ ಅನೇಕ ರಾಕ್ಷಸರು ನಜ್ಜುಗುಜ್ಜಾಗಿ ಕೆಳಗೆ ಬಿದ್ದರು. ಇಷ್ಟರಲ್ಲಿ ನೂರಾರು ವಾನರರು ವೃಕ್ಷಗಳನ್ನೂ, ಪರ್ವತಶಿಖರಗಳನ್ನೂ ಹೊತ್ತುತಂದು, ಇಂದ್ರಜಿತ್ತನ್ನಿದಿರಿಸುವುದಕ್ಕಾಗಿ ಸಿಂಹನಾದ ಮಾಡುತ್ತ ಹೊರಟು, ಅವನ ರಥದ ಮೇಲೆ ದೊಡ್ಡ ಮಳೆಯನ್ನು ಕರೆಯುವಂತೆ ಎಡೆಬಿಡದೆ ಕಲ್ಲುಮರಗಳನ್ನು ಕರೆಯುತ್ತ, ಅಲ್ಲಲ್ಲಿ ತಮಗಿದಿರಾಗಿ ಬಂದ ರಾಕ್ಷಸರನ್ನೂ ತಡೆದು ಯುದ್ಧಮಾಡುತ್ತಿದ್ದರು. ಮಹಾವೀರ್ಯಶಾಲಿಗಳಾದ ಆ ವಾನರರೆಲ್ಲರೂ ಸೇರಿ, ನಾನಾವಿಧವಾಗಿ ಸಿಂಹನಾದವನ್ನು ಮಾಡುತ್ತ, ತಮ್ಮ ತಮ್ಮ ಶಕ್ತ್ಯನುಸಾರವಾಗಿ ವೃಕ್ಷ

ಗಳಿಂದ ಪ್ರಹರಿಸುತ್ತಿರಲು, ಈ ವೃಕ್ಷಪ್ರಹಾರದಿಂದ ಅನೇಕ ರಾಕ್ಷಸರು ಸತ್ತು ಬಿದ್ದರು. ಹೀಗೆ ತನ್ನ ಸೈನ್ಯವೆಲ್ಲವೂ ವಾನರರಿಂದ ಪೀಡಿತವಾದು ದನ್ನು ನೋಡಿ ಇಂದ್ರಜಿತ್ತು ಕೋಪದಿಂದ ಬಿಲ್ಲನ್ನು ಹಿಡಿದು ಆ ವಾನರ ರನ್ನು ತಡೆಯುವುದಕ್ಕಾಗಿ ಹೊರಟನು. ಇದುವರೆಗೆ ಅನೇಕ ಯುದ್ಧ ಗಳಲ್ಲಿ ತನ್ನ ವೀರ್ಯವನ್ನು ತೋರಿರತಕ್ಕ ಆ ಇಂದ್ರಜಿತ್ತು, ರಾಕ್ಷಸ ಸೈನ್ಯದಿಂದ ಪರಿವೃತನಾಗಿ ಎಡೆಬಿಡದೆ ಬಾಣವರ್ಷವನ್ನು ಕರೆಯುತ್ತ, ಅನೇಕ ಕಪಿವೀರರನ್ನು ಕೊಂದನು. ಇಂದ್ರಜಿತ್ತನ್ನು ಹಿಂಬಾಲಿಸಿ ಬರು ತ್ತಿದ್ದ ರಾಕ್ಷಸರೂ ಕೂಡ, ಶೂಲಗಳಿಂದಲೂ, ಮುಷ್ಟಿಗಳಿಂದಲೂ, ಕತ್ತಿ ಗಳಿಂದಲೂ, ಪಟ್ಟಿಸಗಳಿಂದಲೂ, ಕೂಟಮುದ್ಗರಗಳಿಂದಲೂ, ತಮ್ಮ ತಮ್ಮ ಶಕ್ತ್ಯನುಸಾರವಾಗಿ ವಾನರರನ್ನು ಪ್ರಹರಿಸುತ್ತ ಬಂದರು. ಇದನ್ನು ನೋಡಿ ಮಹಾಬಲಾಢ್ಯನಾದ ಹನುಮಂತನು, ದೊಡ್ಡ ದೊಡ್ಡ ಶಾಖೆ ಗಳಿಂದಲೂ, ತೊಲೆಗಳಿಂದಲೂ, ಕೂಡಿದ ವೃಕ್ಷಗಳನ್ನೂ, ಪರ್ವತಶಿಖರ ಗಳನ್ನೂ ಪ್ರಯೋಗಿಸಿ ಆ ರಾಕ್ಷಸರನು ತಡೆಯುತ್ತಿದ್ದನು. ಹೀಗೆ ಹನುಮಂತನು ತನ್ನ ಸಮಸ್ತ ಪ್ರಯತ್ನದಿಂದ ಶತ್ರುಸೈನ್ಯವನ್ನು ನಿವಾ ರಿಸಿ, ಕೊನೆಗೆ ತನ್ನ ಕಡೆಯ ವಾನರರನ್ನು ನೋಡಿ "ಎಲೆ ವಾನರರೆ! ಇನ್ನು ನಾವು ಹಿಂತಿರುಗುವವು! ಈಗ ಈ ಸೈನ್ಯವನ್ನು ತಡೆಯುವುದಕ್ಕೆ ನಮ್ಮಿಂದ ಸಾಧ್ಯವಲ್ಲ! ಅಥವಾ ಅದನ್ನು ಸಾಧಿಸಿಯೂ ಇನ್ನುಮೇಲೆ ಫಲವಿಲ್ಲ! ನಾವೆಲ್ಲರೂ ಶ್ರೀರಾಮನಿಗೆ ಪ್ರಿಯವನ್ನುಂಟುಮಾಡಬೇಕೆಂಬ ಕೋರಿಕೆಯಿಂದ ಪ್ರಾಣಗಳಲ್ಲಿಯೂ ಆಸೆಯನ್ನು ಬಿಟ್ಟು ಯುದ್ಧಮಾಡು ತ್ತಿದ್ದೆವು ಇದುವರೆಗೆ ಎಷ್ಟೋ ಸಾಹಸಗಳನ್ನೂ ನಡೆಸಿದೆವು. ಆದ ರೇನು? ನಾವು ಯಾವಳ ನಿಮಿತ್ತವಾಗಿ ಇಷ್ಟು ಶ್ರಮಪಟ್ಟು ಯುದ್ಧ ಮಾಡುತ್ತಿದ್ದೆವೋ ಆ ಜನಕಪುತ್ರಿಯೇ ಈಗ ಈ ದುರಾತ್ಮನಿಂದ ವಧಿಸ ಲ್ಪಟ್ಟಮೇಲೆ ಇನ್ನು ನಮ್ಮ ಶ್ರಮಕ್ಕೆ ಫಲವೇನು? ಈಗ ಇಂದ್ರಜಿತ್ತು ಸೀತೆಯನ್ನು ವಧಿಸಿದನೆಂಬ ಈ ವೃತ್ತಾಂತವನ್ನು ಮೊದಲು ರಾಮ ನಿಗೂ, ಸುಗ್ರೀವನಿಗೂ ತಿಳಿಸಿ, ಆಮೇಲೆ ಅವರು ಅದಕ್ಕೆ ಯಾವ ಪ್ರತೀ ಕಾರವನ್ನು ಮಾಡಬೇಕೆಂದು ನಿಯಮಿಸುವರೋ ಅದರಂತೆ ನಡೆಯ ಬೇಕಾದುದೇ ಈಗ ನಮಗೆ ಕಾಲೋಚಿತವು" ಎಂದನು. ಹೀಗೆ ಹನು

ಮಂತನು ಆ ವಾನರರನ್ನು ತಡೆದು ತನ್ನ ಧೈರ್ಯವನ್ನು ಬಿಡದೆ ಮೆಲ್ಲಮೆಲ್ಲಗೆ ಯುದ್ಧವನ್ನು ತಗ್ಗಿಸಿ, ತನ್ನ ಕಡೆಯ ವಾನರರನ್ನು ಕರೆದುಕೊಂಡು ಹಿಂತಿರುಗಿದುದನ್ನು ನೋಡಿ ದುಷ್ಟಾತ್ಮನಾದ ಇಂದ್ರಜಿತ್ತು ತಾನೂ ಅತ್ತಲಾಗಿ ಒಂದು ಹೋಮವನ್ನು ಮಾಡಿ ಬರಬೇಕೆಂದು ನಿಶ್ಚಯಿಸಿ, ಲಂಕೆಗೆ ಹಿಂತಿರುಗಿ ಚೈತ್ಯವೆಂಬ ಪ್ರದೇಶದಲ್ಲಿದ್ದ ನಿಕುಂಭಿಲೆಯೆಂಬ ದೇವಾಲಯಕ್ಕೆ ಹೋದನು. ಅಲ್ಲಿ ಶಾಸ್ತ್ರೋಕ್ತವಾಗಿ ಅಗ್ನಿಯಲ್ಲಿ ಹೋಮವನ್ನಾರಂಭಿಸಿದನು. ಆ ಯಜ್ಞವಿಧಿಗೆ ತಕ್ಕಂತೆ ಇಂದ್ರಜಿತ್ತು ರಕ್ತಮಾಂಸಗಳನ್ನು ಅಗ್ನಿಯಲ್ಲಿ ಹೋಮಮಾಡಲು, ಆ ಹವಿಸ್ಸುಗಳಿಂದ ತೃಪ್ತಿಹೊಂದಿ ಅಗ್ನಿಯು ಬಹಳ ಜ್ವಾಲೆಯೊಡನೆ ಉರಿಯುತ್ತಿತ್ತು. ರಕ್ತರೂಪವಾದ ಹವಿಸ್ಸಿನಿಂದ ಹೊಂದಿದ ಆ ಹೋಮಾಗ್ನಿಯು, ದೊಡ್ಡ ಜ್ವಾಲೆಗಳನ್ನು ಕೆದರುತ್ತ ಅತಿತೀಕ್ಷ್ಣವಾಗಿ ಸಂಧ್ಯಾಕಾಲದ ಸೂರ್ಯನಂತೆ ಕಾಣಿಸುತ್ತಿತ್ತು. ಹೀಗೆ ಇಂದ್ರಜಿತ್ತು ಶಾಸ್ತ್ರೋಕ್ತವಿಧಿಯನ್ನು ಚೆನ್ನಾಗಿ ತಿಳಿದು, ರಾಕ್ಷಸರ ಅಭ್ಯುದಯಕ್ಕಾಗಿ ಯಥೋಕ್ತವಾಗಿ ಹೋಮವನ್ನು ನಡೆಸಿದನು. ಅಲ್ಲಿ ಯಾಗನಿಯಮಗಳನ್ನು ತಿಳಿದ ಕೆಲವು ರಾಕ್ಷಸರೂ ಕೂಡ ಆ ಹೋಮಕಾರ್ಯದಲ್ಲಿ, ವಿಧಿಲೋಪವೇನೂ ಇಲ್ಲದಂತೆ ನೋಡಿಕೊಳ್ಳುತ್ತಿದ್ದರು.

ಇಲ್ಲಿಗೆ ಎಂಬತ್ತೆರಡನೆಯ ಸರ್ಗವು.

ಇಂದ್ರಜಿತ್ತು ಸೀತೆಯನ್ನು ಕೊಂದನೆಂದು ಹನುಮಂತನು ರಾಮನಿಗೆ ತಿಳಿಸಿದುದು. ರಾಮನ ವ್ಯಸನವು. ಲಕ್ಷ್ಮಣನು ರಾಮನಿಗೆ ಸಮಾಧಾನವನ್ನು ಹೇಳಿದುದು.

ಇಷ್ಟರಲ್ಲಿ ಅತ್ತಲಾಗಿ ವಾನರರಾಕ್ಷಸರಿಗೆ ಯುದ್ಧವು ನಡೆಯುತ್ತಿದ್ದಾಗ, ಅದರಿಂದುಂಟಾದ ದೊಡ್ಡ ಕೋಲಾಹಲವು ರಾಮನ ಕಿವಿಗೆ ಮುಟ್ಟಿತು. ಆಗ ರಾಮನು ಜಾಂಬವಂತನನ್ನು ನೋಡಿ "ಎಲೆ ಸೌಮ್ಯನೆ! ಅದೋ! ಅತ್ತಲಾಗಿ ಹನುಮಂತನು ಬಹಳ ಅಸಾಧ್ಯಕಾರ್ಯವನ್ನು ನಡೆಸುವಂತಿದೆ! ಆ ಕಡೆಯಿಂದ ಅತಿಭಯಂಕರವಾದ ಆಯುಧಧ್ವನಿಯು

ಕೇಳಿ ಬರುತ್ತಿರುವುದು ನೋಡು! ಆದುದರಿಂದ ಈಗಲೇ ನೀನೂ ನಿನ್ನ ಸೈನ್ಯದೊಡನೆ ಹೊರಟು, ಹನುಮಂತನಿಗೆ ಯುದ್ಧದಲ್ಲಿ ಸಹಾಯಕನಾಗಿರು! ಬೇಗನೆ ಹೊರಡು!" ಎಂದನು. ರಾಮಾಜ್ಞೆಯಂತೆ ಜಾಂಬವಂತನು ತನ್ನ ಸೈನ್ಯವನ್ನು ಸೇರಿಸಿಕೊಂಡು, ಹನುಮಂತನು ಯುದ್ಧ ಮಾಡುತ್ತಿದ್ದ ಪಶ್ಚಿಮದ್ವಾರದ ಕಡೆಗೆ ಹೊರಟುಬರುತ್ತಿದ್ದನು. ಇಷ್ಟರಲ್ಲಿ ಯುದ್ಧಶ್ರಮದಿಂದ ಆಗಾಗ ನಿಟ್ಟುಸಿರು ಬಿಡುತ್ತಿರುವ ವಾನರಸೇನೆಯೊಡನೆ ಹನುಮುಮಂತನು, ರಣರಂಗದಿಂದ ಹಿಂತಿರುಗಿ ತನಗಿದಿರಾಗಿ ದಾರಿಯಲ್ಲಿ ಬರುವುದನ್ನು ಕಂಡನು. ಹನುಮಂತನೂ ಕೂಡ ನೀಲಮೇಘದಂತೆ ಕಪ್ಪಾಗಿ ಭಯಂಕರವಾದ ದೊಡ್ಡ ಭಲ್ಲೂಕಸೈನ್ಯವು ಯುದ್ಧ ಸಾಧನೆಗಳೊಡನೆ ದಾರಿಯಲ್ಲಿ ತನಗಿದಿರಾಗಿ ಬರುವುದನ್ನು ಕಂಡು, ಆ ಸೈನ್ಯವನ್ನು ಮುಂದಕ್ಕೆ ಹೋಗದಂತೆ ಅಲ್ಲಿಯೇ ತಡೆದು ಹಿಂತಿರುಗಿಸಿಬಿಟ್ಟನು. ಮತ್ತು ಮಹಾಯಶಸ್ವಿಯಾದ ಆ ಹನುಮಂತನು, ತನ್ನ ಸೈನ್ಯದೊಡನೆ ವೇಗದಿಂದ ರಾಮನ ಬಳಿಗೆ ಬಂದು, ದುಃಖಿತನಾಗಿ ಅವನನ್ನು ಕುರಿತು, "ರಾಮಾ! ಈಗ ನಾವು ಅತ್ತಲಾಗಿ ಯುದ್ಧಮಾಡುತ್ತಿರುವಾಗ ರಾವಣಪುತ್ರನಾದ ಇಂದ್ರಜಿತ್ತು ಸೀತೆಯನ್ನು ಯುದ್ಧರಂಗಕ್ಕೆ ಕರೆತಂದು, ಅವಳು ದೈನ್ಯದಿಂದ ಗೋಳಿಡುತ್ತಿದ್ದರೂ ಬಿಡದೆ, ನಮ್ಮ ಕಣ್ಣಿದಿರಿಗೆ ಅವಳನ್ನು ಕಡಿದು ಕೊಂದನು. ಅತಿ ಘೋರವಾದ ಆ ಕೊಲೆಯನ್ನು ನೋಡಿ ನನ್ನ ಮನಸ್ಸು ತತ್ತಳಿಸಿಹೋಯಿತು. ನನ್ನ ದುಃಖಕ್ಕೆ ಪಾರವೇ ಇಲ್ಲದಂತಾಯಿತು! ಆ ವೃತ್ತಾಂತವನ್ನು ನಿನಗೆ ತಿಳಿಸುವುದಕ್ಕಾಗಿಯೇ ಈಗ ನಾನು ಇಲ್ಲಿಗೆ ಬಂದೆನು" ಎಂದನು. ಈ ಮಾತನ್ನು ಕೇಳಿದೊಡನೆ ರಾಮನಿಗೆ ಮೈಮೇಲೆ ಪ್ರಜ್ಞೆ ತಪ್ಪಿತು! ಬುಡಕಡಿದ ಮರದಂತೆ ದುಃಖದಿಂದ ಮೂರ್ಛಿತನಾಗಿ ಕೆಳಗೆ ಬಿದ್ದನು. ದೇವಸಮಾನನಾದ ರಾಮನು ಮೂರ್ಛಿತನಾಗಿ ಬಿದ್ದುದನ್ನು ನೋಡಿ, ಅಲ್ಲಲ್ಲಿದ್ದ ಸಮಸ್ತ ವಾನರರೂ ಭಯದಿಂದ ತತ್ತಳಿಸುತ್ತ ಬಂದು, ಅವನ ಸುತ್ತಲೂ ನೆರೆದು ನಿಂತರು. ಆಗಲೇ ಕೆಲವರು ತಾವರೆನೈದಿಲೆಗಳ ಸುಗಂಧದಿಂದ ಶೀತಲವಾದ ನೀರನ್ನು ತಂದು ಅವನ ಮೇಲೆ ಚಲ್ಲಿದರು. ಆಗ ರಾಮನು ಮೈಮರೆತು ನೆಲದ ಮೇಲೆ ಮಲಗಿದ್ದರೂ, ಉರಿಯನ್ನು

ಕೆದರುವ ಅಗ್ನಿಹೋತ್ರದಂತೆ ಅವಾರ್ಯವಾದ ತನ್ನ ದಿವ್ಯತೇಜಸ್ಸಿನಿಂದ ಜ್ವಲಿಸುತ್ತಿದ್ದನು. ಆಗ ಲಕ್ಷ್ಮಣನು, ರಾಮನ ಸ್ಥಿತಿಯನ್ನು ನೋಡಿ ಅತ್ಯಂತ ದುಃಖಿತನಾಗಿ ಮುಂದು ಬಂದು ತನ್ನ ತೋಳುಗಳನ್ನು ನೀಡಿ ರಾಮನನ್ನಪ್ಪಿಕೊಂಡು, ಯುಕ್ತಿಯುಕ್ತವಾದ ಮಾತಿನಿಂದ ಅವನನ್ನು ಸಮಾಧಾನಪಡಿಸುವನು. "ಅಣ್ಣಾ! ನೀನು ಪಿತೃವಚನಪರಿಪಾಲನವೇ ಮೊದಲಾದ ಸದ್ಧರ್ಮಗಳನ್ನು ದೃಢವಾಗಿ ಹಿಡಿದು, ಆ ಧರ್ಮಸಾಧನೆಗಾಗಿ ರಾಜ್ಯಕೋಶಾದಿಗಳನ್ನೂ ತೊರೆದು, ಆ ಅನರ್ಥಕ್ಕೆ ಮೂಲಭೂತರಾದ ಕೈಕೇಯೀ ದಶರಥರಲ್ಲಿಯೂ ಮನಸ್ಸು ಕಲಗದಷ್ಟು ಇಂದ್ರಿಯ ಜಯವುಳ್ಳವನು. ಇಷ್ಟಾದರೂ ಆ ನಿನ್ನ ಧರ್ಮವು ನಿನ್ನನ್ನು ಕಾಪಾಡಲಾರದೆ ಹೋದಮೇಲೆ, ಧರ್ಮವೆಂಬುದು ಮೊಲದ ಕೊಂಬಿನಂತೆ ಲೋಕದಲ್ಲಿ ಕೇವಲ ವ್ಯವಹಾರಮಾತ್ರಗಮ್ಯವೇ ಹೊರತು ವಾಸ್ತವದಿಂದಿಲ್ಲವೆಂದೇ ಎಣಿಸಬೇಕಲ್ಲವೆ? ಧರ್ಮವೆಂಬುದು ನಿಜವಾಗಿದ್ದರೆ ನಿನ್ನನ್ನು ರಕ್ಷಿಸದೆ ಬಿಡುತ್ತಿತ್ತೆ? ಹಾಗೆಯೇ ಅಧರ್ಮವು ಹಾನಿಯನ್ನು ತರುವುದೆಂಬ ಮಾತಾದರೂ ನಿಜವಾಗಿದ್ದರೆ ರಾವಣನಿಗೆ ಮೇಲೆ ಮೇಲೆ ಕೋರಿಕೆಯು ಕೈಗೂಡಿ ಬರುತ್ತಿದ್ದುದೇಕೆ? ಧರ್ಮಾಧರ್ಮಗಳೆಂಬಿವೆರಡೂ ಸುಳ್ಳು! ಇವುಗಳುಂಟೆಂದು ನಿಶ್ಚಯಿಸುವುದಕ್ಕೆ ಪ್ರತ್ಯಕ್ಷದಿಂದಾಗಲಿ, ಅನುಮಾನದಿಂದಾಗಲಿ, ಶಬ್ದಪ್ರಮಾಣದಿಂದಾಗಲಿ, ಬೇರೆ ಯಾವ ಪ್ರಮಾಣದಿಂದಾಗಲಿ ಸಾಧ್ಯವಲ್ಲ! ಏಕೆಂದರೆ, ಲೋಕದಲ್ಲಿ ಸ್ಥಾವರಜಂಗಮಗಳ ಹಾಗೆ ಧರ್ಮಾಧರ್ಮಗಳು ನಮ್ಮ ಕಣ್ಣಿಗೆ ಕಾಣದುದರಿಂದ ಅವುಗಳಿಲ್ಲವೆಂದೇ ನನಗೆ ತೋರುವುದು. ಧರ್ಮಾಧರ್ಮಗಳಿದ್ದ ಪಕ್ಷದಲ್ಲಿ ಚರಾಚರಗಳಂತೆ ದೃಷ್ಟಿಗೋಚರವಾಗಬೇಕಲ್ಲವೆ? ಹಾಗಿಲ್ಲದುದರಿಂದ ಅವು ಪ್ರತ್ಯಕ್ಷಸಿದ್ಧವಲ್ಲ. ಅಥವಾ ಧರ್ಮಾಧರ್ಮಗಳು ಅತೀಂದ್ರಿಯಗಳಾಗಿರುವುವೆಂದೂ ಹೇಳುವುದಕ್ಕಿಲ್ಲ. ಏಕೆಂದರೆ, ಲೋಕದಲ್ಲಿ ಅಧರ್ಮವೆಂಬುದಿದ್ದ ಪಕ್ಷದಲ್ಲಿ ರಾವಣನಿಗೆ ಎಂದೆಂದಿಗೂ ಸುಖವಿರುತ್ತಿರಲಿಲ್ಲ. ಧರ್ಮವಿದ್ದಲ್ಲಿ ಧಾರ್ಮಿಕನಾದ ನಿನಗೆ ಈ ವ್ಯಸನವೂ ಪ್ರಾಪ್ತವಾಗುತ್ತಿರಲಿಲ್ಲ. ಅಧಾರ್ಮಿಕನೆನಿಸಿದ ರಾವಣನಿಗೆ ವ್ಯಸನವಿಲ್ಲದುದರಿಂದಲೂ, ಧಾರ್ಮಿಕನಾದ ನಿನಗೆ ಈ ವ್ಯಸನವುಂಟಾಗಿರುವುದರಿಂದಲೂ, ಧರ್ಮಾಧರ್ಮಗಳೆರಡೂ ತಮ್ಮತಮಗೆ

ವಿರುದ್ಧಫಲಗಳನ್ನೇ ಕೊಟ್ಟಂತಾಯಿತಲ್ಲವೆ? ಆದುದರಿಂದ ಈ ವ್ಯಸನಾವ್ಯಸನಗಳನ್ನು ನೋಡಿ ಅನುಮಾನದಿಂದಲೂ ಧರ್ಮಾಧರ್ಮಗಳನ್ನು ನಿಶ್ಚಯಿಸುವುದಕ್ಕಿಲ್ಲ. ಇದಲ್ಲದೆ ಧರ್ಮದಿಂದ ಅದಕ್ಕೆ ಫಲರೂಪವಾದ ಸುಖವೂ ಅಧರ್ಮದಿಂದ ತತ್ಫಲರೂಪವಾದ ದುಃಖವೂ ಸಂಭವಿಸುವುವೆಂಬ ನಿಯಮವಾದರೂ ಉಂಟೆ? ಅದೂ ಇಲ್ಲ! ಧಾರ್ಮಿಕರು ಧರ್ಮಫಲವನ್ನೂ, ಅಧಾರ್ಮಿಕರು ಅಧರ್ಮಫಲವನ್ನೂ ಹೊಂದುವುದೇ ನಿಜವಾಗಿದ್ದರೆ, ಧರ್ಮಶೀಲರಿಗೆ ಸುಖವೂ ಅಧರ್ಮನಿರತರಿಗೆ ದುಃಖವೂ ಸಿದ್ಧವಾಗಿರಬೇಕಲ್ಲವೇ? ಲೋಕದೃಷ್ಟಾಂತದಲ್ಲಿಯೂ ಹಾಗೆ ಕಾಣುವುದಿಲ್ಲ! ಅಧಾರ್ಮಿಕರಿಗೆ ಕೋರಿಕೆಗಳು ಕೈಗೂಡಿ ಬರುವುವು. ಧಾರ್ಮಿಕರು ಕಷ್ಟಪಡುತ್ತಿರುವರು. ಹೀಗೆ ಸುಖವೆಂಬುದು ಧರ್ಮಕ್ಕೂ, ದುಃಖವೆಂಬುದು ಅಧರ್ಮಕ್ಕೂ ಫಲವೆಂಬ ನಿಯಮವೂ ಕಾಣದಿರುವುದರಿಂದ, ಸುಖದುಃಖಗಳನ್ನು ನೋಡಿ ಧರ್ಮಾಧರ್ಮಗಳನ್ನು ಅನುಮಾನಿಸುವುದಕ್ಕೂ ಸಾಧ್ಯವಲ್ಲ. ಈ ಧರ್ಮಾಧರ್ಮಗಳನ್ನು ಶಬ್ದಪ್ರಮಾಣದಿಂದಾದರೂ ತಿಳಿಯಬಹುದೆ? ಅದೂ ಸಾಧ್ಯವಲ್ಲ! ಶಬ್ದ ಬುದ್ಧಿ ಕರ್ಮಗಳು ಮೂರೂ * ಕ್ಷಣಧ್ವಂಸಿಗಳು. ಕರ್ಮರೂಪಗಳಾದ ಈ ಧರ್ಮಾಧರ್ಮಗಳೇ ಭಾವಿಸುಖದುಃಖಗಳಿಗೆ ಕಾರಣವೆಂದು ಹೇಳಬೇಕಾದರೆ, ಮೂರು ಕ್ಷಣಗಳವರೆಗೆ ಮಾತ್ರವೇ ಇದ್ದು ಹೋಗತಕ್ಕ ಆ ಕರ್ಮಗಳಿಗೆ ಕಾಲಾಂತರದಲ್ಲಿ ಫಲವನ್ನು ಕೊಡತಕ್ಕ ಶಕ್ತಿಯೆಲ್ಲಿಯದು? ಮೊದಲೇ ಹತವಾಗುವ ಅಧರ್ಮಕ್ಕಾಗಲಿ ಮುಂದೆ ಶುಭಾಶುಭಗಳನ್ನು ಕೊಡಿಸುವ ಶಕ್ತಿಯು ಹೇಗೆ? ಅದರಿಂದ ಧರ್ಮಾಧರ್ಮಗಳುಂಟೆಂದೂ ಅವು ಕಾಲಾಂತರದಲ್ಲಿ ಫಲವನ್ನು ಕೊಡುವುವೆಂದೂ ವೇದಾದಿಗಳು ಹೇಳಿರುವ ಶಬ್ದಪ್ರಮಾಣವೂ ಸರಿಯಲ್ಲ. "ಕರ್ಮಗಳು ಕ್ಷಣಧ್ವಂಸಿಗಳಾದರೂ, ಆ ಕರ್ಮಗಳಿಂದ ಸಾಧಿತವಾದ ದೈವಕ್ಕಾದರೂ ಮುಂದೆ ಅದರ ಫಲವನ್ನು ಕೊಡತಕ್ಕ ಶಕ್ತಿಯಿರಬಾರದೆ?" ಎಂದರೆ, ಅದೂ ಸರಿಯಲ್ಲ!

* ಶಬ್ದಬುದ್ಧಿ ಕರ್ಮಗಳೆಂಬಿವು ಮೂರೂ ಮೂರುಕ್ಷಣಗಳವರೆಗೆ ಮಾತ್ರವೇ ಇದ್ದು ನಾಶಹೊಂದತಕ್ಕುವೆಂದು ಶಾಸ್ತ್ರನಿರ್ಣಯವು.

* ಲೋಕದಲ್ಲಿ ಪುರುಷನು ಇತರರನ್ನು ಬಾಧಿಸುವುದಾಗಲಿ, ಇತರರಿಂದ ಬಾಧಿಸಲ್ಪಡುವುದಾಗಲಿ ದೈವದಿಂದಲೇ ನಡೆಯಬೇಕಾದುದರಿಂದ, ಆ ಪಾಪ ಪುಣ್ಯಗಳಿಗೂ ದೈವವೇ ಭಾಗಿಯಾಗುವುದೇ ಹೊರತು, ಪ್ರಯೋಜ್ಯ ಕರ್ತೃವಾದ ಮನುಷ್ಯನು ಅವುಗಳಿಗೆ ಭಾಗಿಯಾಗಲಾರನು. ರಾಜನು ಮಾಡಿಸಿದ ಕಾರ್ಯದ ಫಲವು ಆ ರಾಜನಿಗೇ ಹೊರತು ಅವನ ಆಜ್ಞಾ ಧೀನರಾಗಿ ನಡೆದ ಸೇವಕರಿಗಲ್ಲ. ಆದುದರಿಂದ ದೈವವು ತಾನೇ ಧರ್ಮಾ ಧರ್ಮಗಳಾಗಿದ್ದು ಸುಖದುಃಖ ಫಲಗಳನ್ನು ಕೊಡುವುದೆಂಬ ಮಾತೂ ಸಮಂಜಸವಲ್ಲ. ಎಲೈ ಪರಂತಪನೆ! † "ಕರ್ಮದಿಂದ ಹೊಸದಾಗಿ ಹುಟ್ಟಿದ

---

* ಮತ್ತೊಬ್ಬರು ಮಾಡಿದ ಶ್ಯೇನಾದ್ಯನುಷ್ಠಾನದಿಂದುಂಟಾದ ಒಂದು ಫಲ ವಿಶೇಷದಿಂದ ತನಗಾಗಲಿ, ತಾನು ನಡೆಸಿದ ಅನುಷ್ಠಾನದಿಂದುಂಟಾದ ಅತಿಶಯದಿಂದ ಇತರರಿಗಾಗಲಿ ಹಾನಿಯುಂಟಾಗುವ ಪಕ್ಷದಲ್ಲಿ, ಆ ಅನುಷ್ಠಾನ ಜನ್ಯವಾದ ಅತಿ ಶಯವೇ ಆ ಪಾಪಕ್ಕೂ ಭಾಗಿಯಾಗಬೇಕಲ್ಲದೆ, ಆ ಕರ್ಮಾನುಷ್ಠಾತೃವಾದ ಪುರುಷ ನಲ್ಲ. ಏಕೆಂದರೆ, ಇವನು ಯಾಗಾದಿ ಕಾರ್ಯವನ್ನು ನಡೆಸಿದವನೇ ಹೊರತು ವಧ ಕಾರ್ಯವನ್ನು ನಡೆಸಿದವನಲ್ಲ. ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನು ಒಂದು ಪಾಪಕಾರ್ಯವನ್ನು ಮಾಡಿದ ಮಾತ್ರಕ್ಕೆ ಅದಕ್ಕೆ ತಂದೆಯು ಭಾಗಿಯಾಗಲಾರ ನಷ್ಟೆ? ಅದರಂತೆಯೇ ಪುರುಷನು ಒಂದು ಕರ್ಮವನ್ನು ನಡೆಸಿದ ಮಾತ್ರಕ್ಕೆ, ಅದ ರಿಂದುಂಟಾದ ಅತಿಶಯವು ಸ್ವತಂತ್ರಿಸಿ ನಡೆಸತಕ್ಕ ಪಾಪಕ್ಕೆ ಆ ಪುರುಷನು ಪಾತ್ರ ನಾಗಲಾರನೆಂದು ಇಲ್ಲಿ ಪಕ್ಷಾಂತರವು.

† ಆದರೆ ಲೋಕದಲ್ಲಿ ರಾಜನೊಬ್ಬನು ತನ್ನ ಇಷ್ಟಾನುಸಾರವಾಗಿ ಒಂದು ನಿಬಂಧನೆಯನ್ನು ಮಾಡಿ, ಅದರಂತೆ ನಡೆಯುವವರನ್ನು ಅನುಗ್ರಹಿಸುವನು. ಅದನ್ನು ಮೀರಿಹೋದವರನ್ನು ದಂಡಿಸುವನಷ್ಟೆ? ಹಾಗೆಯೇ ಈಶ್ವರನೂ ಸ್ವಾಜ್ಞಾ ರೂಪವಾದ ಕರ್ಮವನ್ನು ನಡೆಸಿದ ಪುರುಷರನ್ನು ಅನುಗ್ರಹಿಸಿ, ಅದರಂತೆ ನಡೆಯ ದವರನ್ನೂ, ಅದಕ್ಕೆ ವಿರುದ್ಧವಾಗಿ ನಡೆದವರನ್ನೂ ನಿಗ್ರಹಿಸುವುದಕ್ಕಾಗಿ ಸುಖ ದುಃಖಗಳನ್ನು ಕೊಡಿಸಬಾರದೆ, ಎಂದರೆ ಹಾಗಲ್ಲ; ಅತನು ಹಾಗೆ ಅನುಗ್ರಹಿಸು ವುದು ಸ್ವಪ್ರಯೋಜನಾರ್ಥವಾಗಿಯೇ? ಪರೋಪಕಾರಾರ್ಥವಾಗಿಯೇ? ಅವಾಪ್ತ ಸಮಸ್ತಕಾಮನಾದ ಈಶ್ವರನಿಗೆ ಪಡೆಯಬೇಕಾದುದೊಂದೂ ಇಲ್ಲದುದರಿಂದ ಸ್ವಾರ್ಥ ಕ್ಕಲ್ಲ! ಪರಾರ್ಥಕ್ಕೆಂದೂ ಹೇಳುವುದಕ್ಕಿಲ್ಲ. ಪ್ರಪಂಚದಲ್ಲಿ ಒಬ್ಬನನ್ನು ವಿರಿಂಚ

ಅಪೂರ್ವರೂಪವಾದ ಯಾವುದೋ ಒಂದತಿಶಯವು ಧರ್ಮಾಧರ್ಮಗಳೆನಿಸಿ
ಫಲವನ್ನು ಕೊಡಬಾರದೆ" ಎಂದರೆ, ಅನುಮಾನದಿಂದಲೂ ತಿಳಿಯದೆ,
ಪ್ರತ್ಯಕ್ಷವೂ ಅಲ್ಲದೆ, ಅಗ್ನೀಂದ್ರಾದಿಗಳಂತೆ ಅರ್ಥವಾದ ವಾಕ್ಯಗಳಿಂದ
ಗಮ್ಯವಾದ ಸತ್ತೂ ಅಲ್ಲದಿರುವ ಅಪೂರ್ವವೆಂಬ ಧರ್ಮದಿಂದ ಶ್ರೇಯ
ಸ್ಸನ್ನು ಹೊಂದುವುದಕ್ಕಾದರೂ ಹೇಗೆ ಸಾಧ್ಯವು? ಅಪೂರ್ವಧರ್ಮವೆಂಬ
ವಸ್ತುವು ವಾಸ್ತವದಿಂದ ಸತ್ತೆಯನ್ನು ಹೊಂದಿದ್ದರೆ, ಧಾರ್ಮಿಕನಾದ
ನಿನಗೆ ಅಸತ್ತು (ಅನಿಷ್ಟವು) ಯಾವುದೂ ಉಂಟಾಗದು. ಈಗ ನೀನು
ನಿನ್ನ ಧರ್ಮಕ್ಕೆ ಫಲರೂಪವಾದ ಸುಖವನ್ನು ಹೊಂದದೆ ದುಸ್ಸಹವಾದ
ಈ ದುಃಖವನ್ನೇ ಹೊಂದಿರುವುದರಿಂದ, ಆ ಧರ್ಮವನ್ನು ಅಸತ್ತೆಂದು
ಹೇಳಬೇಕೇ ಹೊರತು ಸತ್ತೆಂದು ಹೇಳುವುದಕ್ಕಿಲ್ಲ. ಹೀಗೆ ಪ್ರತ್ಯ
ದಲ್ಲಿಯೇ ಕಾರ್ಯವು ಕಾಣದುದರಿಂದ, ಆ ಅಪೂರ್ವವೆಂಬ ಧರ್ಮವು
ಟೆಂದು ಕಲ್ಪಿಸುವುದಕ್ಕೇ ಸಾಧ್ಯವಲ್ಲ. ಆದರೆ "ಕಾಣದಮಾತ್ರಕ್ಕೆ ಒಂದು
ವಿಷಯವನ್ನು ಇಲ್ಲವೆಂದು ನಿಶ್ಚಯಿಸಬಹುದೆ? ಇಂದ್ರಿಯಗಳಿಗೆ ಗೋಚರ
ಸದ ವಸ್ತುಗಳೂ ಎಷ್ಟೋ ಉಂಟು. ಅವೆಲ್ಲವನ್ನೂ ಇಲ್ಲವೆಂದು ಹೇಳ
ಬಹುದೆ? ಇದಲ್ಲದೆ ಒಂದೊಂದರ್ಥಕ್ಕೂ ಬೇರೊಂದು ವಸ್ತುವು ಸಹಕಾರಿ
ಯಾಗಿರುವುದುಂಟು. ಆ ಸಹಕಾರಿಯನ್ನೂ ಸರಿಯಾಗಿ ಸಾಧಿಸದಿದ್ದ

ನನ್ನಾಗಿಯೂ, ಬೇರೊಬ್ಬನನ್ನು ಅಂಕಿಚನನ್ನಾಗಿಯೂ ಮಾಡುತ್ತಿರುವುದರಿಂದ
ಅವನಲ್ಲಿ ಪಕ್ಷಪಾತ ನೈರ್ಘೃಣ್ಯಾದಿ ದೋಷಗಳುಂಟಾಗುವುದಲ್ಲವೆ? ಆದರೆ ಈಶ್ವರನು
ಅವರವರ ಕರ್ಮಾನುಗುಣವಾಗಿಯೇ ಸೃಷ್ಟಿಸುವಾಗ ಅವನಿಗೆ ಪಕ್ಷಪಾತದೋಷ
ವೇಕು? ಎಂದರೆ ಆ ಕರ್ಮಗಳಿಗೂ ಅವನೇ ಪ್ರೇರಕವಾದುದರಿಂದ, ಅವರನ್ನು
ಸತ್ಕರ್ಮಗಳಲ್ಲಿ ಪ್ರವರ್ತಿಸುವ ಹಾಗೆ ಮಾಡದುದಕ್ಕಾಗಿ ಆಗಲೂ ಅವನಿಗೆ ನಿರ್ದಯತ್ವ
ರೂಪವಾದ ದೋಷವು ತಪ್ಪದು. ಅಥವಾ ಈಶ್ವರನು ಅನಾದಿಕರ್ಮಪ್ರವಾಹದಿಂದ
ಪೂರ್ವಕರ್ಮಗಳಿಗನುಸಾರವಾಗಿ ಮೇಲೆ ಮೇಲೆ ಮನುಷ್ಯನಿಗೆ ಸದಸತ್ಕಾರ್ಯಗಳ
ಲ್ಲಿಯೇ ಪ್ರವೃತ್ತಿಯುಂಟಾಗುವಂತೆ ಮಾಡಬಾರದೆ? ಎಂದರೆ, ಆಗ ಒಬ್ಬನಿಗೆ
ನಿಯತವಾದ ದುಃಖವೂ, ಮತ್ತೊಬ್ಬನಿಗೆ ನಿಯತವಾದ ಸುಖವೂ ಒದಗುತ್ತಲೇ
ಇರಬೇಕು. ಆ ನಿಯಮವೂ ಕಾಣುವುದಿಲ್ಲ. ಆದುದರಿಂದ ಕರ್ಮಜನ್ಯವಾದ
ಅಪೂರ್ವವೆಂಬ ಧರ್ಮವೇ ಫಲಪ್ರದವೆಂದು ಹೇಳಬಹುದಲ್ಲವೆ ಎಂದರೆ ಈ ಮುಂದಿನ
ಶ್ಲೋಕಾರ್ಥದಿಂದ ಅದನ್ನೂ ಖಂಡಿಸುವರು.

ಪಕ್ಷದಲ್ಲಿ, ಆಯಾ ಅರ್ಥವಿಂದಾಗುವ ಕಾರ್ಯವು ಹುಟ್ಟದು. ಹಾಗೆಯೇ ಇಲ್ಲಿಯೂ ಧರ್ಮಕ್ಕೆ ಪೌರುಷವು ಸಹಕಾರಿಯಾದುದರಿಂದ, ಆ ಪೌರುಷವನ್ನುಪಯೋಗಿಸದ ಹೊರತು, ಧರ್ಮಕ್ಕೆ ಕಾರ್ಯರೂಪವಾದ ಸುಖವು ಹುಟ್ಟದು" ಎಂದು ಹೇಳಬಹುದು. ಹೀಗಿದ್ದರೆ ಧರ್ಮವೆಂಬುದು ಬೇರೊಂದು ಸಹಕಾರಿಯನ್ನಪೇಕ್ಷಿಸದೆ, ತಾನಾಗಿ ಕಾರ್ಯವನ್ನು ನಡೆಸಲಾರದಷ್ಟೆ? ಪೌರುಷದ ಬಲವಿದ್ದ ಹೊರತು, ಆ ಧರ್ಮಕ್ಕೆ ಫಲವನ್ನು ಹುಟ್ಟಿಸತಕ್ಕ ಶಕ್ತಿಯಿಲ್ಲವಷ್ಟೆ? ಹಾಗೆ ಧರ್ಮವು ಸ್ವತಂತ್ರವಾಗಿ ಫಲವನ್ನು ಕೊಡುವುದಕ್ಕೆ ಸಮರ್ಥವಲ್ಲದಿರುವಾಗ ಅದನ್ನು ಸೇವಿಸಿದರೂ ಫಲವೇನು? ತನಗೆ ತಾನೇ ಫಲವನ್ನು ಕೊಡಲಾರದ ಆ ಧರ್ಮವನ್ನು ಸೇವಿಸಬಾರದೆಂಬುದೇ ನನ್ನಭಿಪ್ರಾಯವು. ಅಣ್ಣ! ಕಾರ್ಯವನ್ನು ಸಾಧಿಸುವ ವಿಷಯದಲ್ಲಿ ಧರ್ಮವು ಪೌರುಷಕ್ಕೆ ಅಧೀನವಾಗಿದ್ದ ಪಕ್ಷದಲ್ಲಿ, ನೀನು ಇದುವರೆಗೆ ಧರ್ಮಕ್ಕೆ ಪ್ರಾಧಾನ್ಯವನ್ನು ಕೊಟ್ಟು ಸೇವಿಸುತ್ತಿದ್ದ ಹಾಗೆಯೇ ಇನ್ನುಮೇಲೆ ಅದೇ ಪ್ರಾಧಾನ್ಯವನ್ನು ಪೌರುಷಕ್ಕೂ ಕೊಟ್ಟು ಅದನ್ನನುವರ್ತಿಸಿ ನೋಡು. ಎಲೈ ಪರಂತಪನೆ! ಸತ್ಯವಚನವೇ ಪ್ರಧಾನ ಧರ್ಮವೆಂದು ಹೇಳುವರಷ್ಟೆ? ಹಾಗಿದ್ದ ಪಕ್ಷದಲ್ಲಿ ನಮ್ಮ ತಂದೆಯು ನಿನಗೆ ಪಟ್ಟವನ್ನು ಕಟ್ಟುವುದಾಗಿ ಹೇಳಿ ಕೊನೆಗೆ ಸತ್ಯವನ್ನು ತಪ್ಪಿ ಸಕಲಕಲ್ಯಾಣಗುಣಪರಿಪೂರ್ಣನಾದ ಜ್ಯೇಷ್ಠ ಪುತ್ರನಾದ ನಿನ್ನನ್ನು ರಾಜ್ಯದಿಂದ ಕಾಡಿಗೆ ಹೊರಡಿಸಿದುದರಿಂದ ನಿನ್ನಲ್ಲಿ ಕೇವಲ ದಯಾಶೂನ್ಯನಾದನಲ್ಲವೆ? ಹೀಗೆ ಅವನು ಮಾಡಿದ ಅಕೃತ್ಯಕ್ಕಾಗಿ ಆಗಲೇ ನೀನು ಅವನನ್ನು ಸೆರೆಯಲ್ಲಿ ಬಂಧಿಸದೆ ಬಿಟ್ಟುದೇಕೆ? ಅದೂ ಹಾಗಿರಲಿ! ನೀನೂ ತಂದೆಯ ಆಜ್ಞೆಯಂತೆಯೇ ನಡೆಯುವುದಾಗಿ ಪ್ರತಿಜ್ಞೆಮಾಡಿದವನಲ್ಲವೆ? ಮೊದಲು ದಶರಥನು ಸಮಸ್ತ ಪ್ರಜೆಗಳ ಮುಂದೆ ನಿನಗೆ ಅಭಿಷೇಕವನ್ನು ನಡೆಸುವುದಾಗಿ ಹೇಳಿ, ಕೊನೆಗೆ ವ್ಯಾಜಾಂತರದಿಂದ, ನಿನಗೆ ಕಾಡಿಗೆ ಹೋಗಬೇಕೆಂದು ಹೇಳಿದನಷ್ಟೆ? ತಂದೆಯ ಆಜ್ಞೆಯನ್ನು ತಪ್ಪದೆ ನಡೆಸುವೆನೆಂದು ಪ್ರತಿಜ್ಞೆಮಾಡಿದ ನೀನು ಮೊದಲು ನಿನ್ನ ತಂದೆಯು ಮಾಡಿದ ಆಜ್ಞೆಯನ್ನು ನಡೆಸದೆ ಹೋದುದರಿಂದ, ನೀನೇ ನಿನ್ನ ಸತ್ಯವನ್ನು ಚೆನ್ನಾಗಿ ಕಾಪಾಡಿಕೊಂಡಂತಾಗಲಿಲ್ಲ. ಎಲೈ ಆರ್ಯನೇ! ಇದೂ ಹಾಗಿರಲಿ! ಧರ್ಮಾಧರ್ಮಗಳೆರಡೂ ನಿಜವೆಂಬುದನ್ನೇ ಒಪ್ಪಿಕೊಂಡರೂ, ಧರ್ಮವನ್ನೇ ನಡೆಸಬೇಕೆಂದೂ, ಅಧರ್ಮವನ್ನು ತ್ಯಜಿಸ

ಬೇಕೆಂದೂ ನಿಯಮವೇನೂ ಇಲ್ಲ- ಆಯಾಕಾಲಕ್ಕೆ ತಕ್ಕಂತೆ ಎರಡನ್ನೂ ಅನುಷ್ಠಿಸಬಹುದು. ಹೇಗೆಂದರೆ ಕೇವಲ ಧರ್ಮವನ್ನೇ ಅನುಷ್ಠಿಸುತ್ತಿರ ಬೇಕೆಂಬ ನಿಯಮವಿದ್ದ ಪಕ್ಷದಲ್ಲಿ, ಹಿಂದೆ ವಜ್ರಧಾರಿಯಾದ ಇಂದ್ರನು, ತಪಸ್ವಿಯೂದ ವಿಶ್ವರೂಪನನ್ನು ಕೊಂದು ಯಾಗವನ್ನು ನಡೆಸುತ್ತಿದ್ದನೆ? ಆ ಕೊಲೆಗೆಲಸವನ್ನು ಬಿಟ್ಟು ಯಾಗವನ್ನು ಮಾತ್ರವೇ ನಡೆಸುತ್ತಿದ್ದನು. ಅಥವಾ ಅಧರ್ಮವೊಂದನ್ನೇ ಅನುಷ್ಠಿಸಬಹುದಾಗಿದ್ದ ಪಕ್ಷದಲ್ಲಿ ಮುಂದೆ ಯೂಗಕ್ಕೆ ಪ್ರಯತ್ನಿಸದೆ ಆ ತಪಸ್ವಿಯನ್ನು ವಧಿಸಿ ಅಷ್ಟರಲ್ಲಿಯೇ ಸುಮ್ಮ ನಾಗುತ್ತಿದ್ದನು. ಹೀಗೆ [1]ಕ್ಷತ್ರಧರ್ಮನಿಷ್ಠನಾದ ಇಂದ್ರನೂ ಕೂಡ ಧರ್ಮಾಧರ್ಮಗಳೆರಡನ್ನೂ ಕಾಲೋಚಿತವಾಗಿ ಅನುಷ್ಠಿಸಿರುವುದರಿಂದ ರಾಜನೂ ಕಾಲೋಚಿತವಾಗಿ ಎರಡನ್ನೂ ನಡೆಸಬಹುದು. ಹೀಗಿ ಲ್ಲದೆ ಅವುಗಳಲ್ಲಿ ಒಂದನ್ನೇ ಬೇರೆಬೇರೆಯಾಗಿ ನಡೆಸುವುದಕ್ಕೆ ಪ್ರಯತ್ನಿ ಸಿದರೆ ಅಂತವನಿಗೆ ಹಾನಿಯು ತಪ್ಪದು. ಆದುದರಿಂದ ಪುರುಷರು ಈ ನಿಯಮವಿಲ್ಲದೆ ಆಯಾಕಾಲಾನುಗುಣವಾಗಿ ಸಮಸ್ತ ಕಾರ್ಯಗಳನ್ನೂ ಧರ್ಮ ಯುಕ್ತವಾಗಿಯೋ, ಅಧರ್ಮಯುಕ್ತವಾಗಿಯೋ, ಹೇಗಾದರೂ ನಡೆಸಬಹುದು. ಹೀಗೆ ಕಾಲೋಚಿತವಾಗಿ ಕಾರ್ಯವನ್ನು ನಡೆಸುವುದೇ ಎಲ್ಲಕ್ಕಿಂತಲೂ ಮುಖ್ಯ ಧರ್ಮವೆಂಬುದು ನನ್ನ ಮತವು. ಅಣ್ಣಾ! ಮೊದಲು ಧರ್ಮ ವೆಂಬುದಿಲ್ಲವೆಂದೇ ನಿರ್ಧರಿಸಬಹುದು! ಒಂದುವೇಳೆ ಇರುವುದಾಗಿ ಅರ್ಧಾಂಗೀ ಕಾರದಿಂದೊಪ್ಪಿಕೊಂಡರೂ ಅದು ಪ್ರಧಾನವಲ್ಲ! ಅಪ್ರಧಾನವಾದ ಆ ಧರ್ಮವಾದರೂ ಈಗ ನಿನ್ನ ಭಾಗಕ್ಕೆ ಸಿದ್ಧಿಸದು! ಹೇಗೆಂದರೆ, ಧರ್ಮಕ್ಕೆ ಅರ್ಥವೇ ಮೂಲವು. ನಿನಗೆ ರಾಜ್ಯವು ಬರುವ ಸಂಭವವಿದ್ದಾಗಲೂ ಅದ ನ್ನೊಲ್ಲದೆ ಹೋದುದರಿಂದ ಅರ್ಥಲಾಭವನ್ನು ತಪ್ಪಿಸಿಕೊಂಡಂತಾಯಿತು. ಮೂಲಭೂತವಾದ ಅರ್ಥ ನಿನಗೆ ಕೈತಪ್ಪಿಹೋದಮೇಲೆ ಇನ್ನು ಧರ್ಮವೆಲ್ಲಿ ಯದು? ಆದುದರಿಂದ ನಿನಗೆ ಧರ್ಮವೆಂಬುದು ಅಪ್ರಧಾನವಾಗಿಯೂ ಕೈ ಸೇರದೆ ಹೋಯಿತು. ಪರ್ವತಗಳಿಂದ ನದಿಗಳು ಹೊರಡುವಂತೆ ನಾನಾ ಭಾಗಗಳಿಂದ ಸಂಗ್ರಹಿಸಿ, ನಾನಾ ವ್ಯಾಪಾರಗಳಿಂದ ವೃದ್ಧಿಗೊಳಿಸಿಟ್ಟ

---

[1] "ಯಾನ್ಯೇತಾನಿ ದೇವಕ್ಷತ್ರಾಣೀಂದ್ರೋ ವರುಣಃ ಪರ್ಜನ್ಯೋ ಯಮ ಈಶಾ ನಃ" ಎಂಬು ಇಂದ್ರನು ದೇವತೆಗಳಲ್ಲಿ ಕ್ಷತ್ರಿಯನೆಂಬುದಾಗಿ ಶ್ರುತಿಪ್ರಮಾಣವು.

ಅರ್ಥದಿಂದ, ಮೂಲವ್ಯಯವಿಲ್ಲದ ಹಾಗೆ ಯಾಗಾದಿ ಸಮಸ್ತ ಕ್ರಿಯೆಗಳೂ ಪ್ರವರ್ತಿಸುವುವು ಅರ್ಥಹೀನತೆಯಿಂದ ಅಲ್ಪತೇಜಸಾದ ಪುರುಷನು ಯಾವ ಕಾರ್ಯವನ್ನು ನಡೆಸಿದರೂ, ಅವೆಲ್ಲವೂ ಬೇಸಗೆಯ ಕಾಲದ ಕ್ಷುದ್ರನದಿಗಳಂತೆ ಕ್ಷಯಿಸಿಹೋಗುವುವು. ಅರ್ಥವಿಲ್ಲದವನಿಗೆ ಧರ್ಮಾರ್ಜನವಿಲ್ಲದೆ ಹೋಗುವುದು ಮಾತ್ರವೇ ಅಲ್ಲ. ಅವನಿಗೆ ಅನೇಕ ದೋಷಗಳೂ ಬಂದೊದಗುವುವು. ಏಕೆಂದರೆ, ಹಣವನ್ನು ಕಳೆದುಕೊಂಡವನು, ಮೊದಲು ತಾನು ಹಣವಂತ ನಾಗಿದ್ದಾಗ ಬೇಕುಬೇಕಾದ ಭೋಗಗಳನ್ನನುಭವಿಸಿ, ಆ ಸುಖಕ್ಕೆ ಮುಖ್ಯ ಸಾಧನವಾದ ಧನವನ್ನು ಗಳಿಸುವುದಕ್ಕಾಗಿ, ಕಳವು ಕೊಲೆ ಮುಂತಾದ ಪಾಪ ಕಾರ್ಯಗಳಿಗೆ ಹಿಂಜರಿಯದೆ ಪ್ರವರ್ತಿಸಿ, ಅದರಿಂದ ದೋಷಭಾಗಿಯಾಗುವನು. ಇದಲ್ಲದೆ ಹಣವಿದ್ದವನಿಗೆ ಎಲ್ಲರೂ ಮಿತ್ರರಾಗುವರು. ದರಿದ್ರನಿಗೆ ಮೊದಲಿದ್ದ ಸ್ನೇಹಿತರೂ ಕೈಬಿಡುವರು. ಹಣವುಳ್ಳವನಿಗೆ ಎಲ್ಲರೂ ಬಂಧುಗಳೇ! ದರಿದ್ರ ನನ್ನು ಬಂಧುಗಳೂ ಲಕ್ಷ್ಯಮಾಡರು! ಲೋಕದಲ್ಲಿ ಹಣವಿದ್ದವನೇ ಪುರು ಷನು! ಹಣವುಳ್ಳವನೇ ಪಂಡಿತನು. ಹಣವುಳ್ಳವನೇ ಪರಾಕ್ರಮಿಯು! ಹಣವುಳ್ಳವನೇ ಬುದ್ಧಿವಂತನು! ಹಣವುಳ್ಳವನೇ ಪುಣ್ಯಶಾಲಿಯು! ಹಣವುಳ್ಳವನೇ ಮಹಾಗುಣಾಢ್ಯನು! ಹಣವಿಲ್ಲದಿದ್ದಾಗ ಈ ಗುಣಗಳೇ ಅವುಗಳಿಗೆ ವ್ಯತ್ಯಸ್ತಗಳಾದ ದೋಷಗಳಾಗಿ ಪರಿಣಮಿಸುವುವು. ಅಣ್ಣಾ! ಅರ್ಥನಾಶದಿಂದುಂಟಾದ ದೋಷಗಳನ್ನು ಆಗಲೇ ನಾನು ಸ್ಪಷ್ಟವಾಗಿ ಹೇಳಿ ದ್ದೆನು. ಹಾಗಿದ್ದರೂ ನಿನಗೆ ಯಾವ ಗುಣವನ್ನು ನೋಡಿ ರಾಜ್ಯವನ್ನೂ ಅದಕ್ಕೆ ಮೂಲವಾದ ಅರ್ಥವನ್ನೂ, ತ್ಯಜಿಸಬೇಕೆಂಬ ಬುದ್ಧಿಯು ಹುಟ್ಟಿತೋ ಕಾಣೆನು. ಯಾವನಿಗೆ ಧನವುಂಟೋ ಅವನಿಗೊಬ್ಬನಿಗೇ ಧರ್ಮ ಕಾಮಾದಿ ಪ್ರಯೋಜನಗಳೂ, ಇನ್ನೂ ಇತರ ಶ್ರೇಯಸ್ಸುಗಳೂ ಅನುಕೂಲವಾಗಿ ಸಿದ್ಧಿಸುವುವು. ಹಣವಿಲ್ಲದವನು ತನ್ನ ಶ್ರೇಯಸ್ಸಿಗಾಗಿ ಧನಾರ್ಜನವನ್ನು ಮಾಡಬೇಕೆಂದು ಎಷ್ಟೇ ಪ್ರಯತ್ನಪಟ್ಟರೂ, ಅವನ ಕೋರಿಕೆಯೊಂದೂ ಕೈಗೂಡದು. ಎಲೆ ರಾಜೇಂದ್ರನೇ! ಮನಸ್ಸಂತೋಷವಾಗಲಿ, ಕಾಮ ವಾಗಲಿ, ದರ್ಪವಾಗಲಿ, ಕೋಪವಾಗಲಿ, ಶಮದಮಗಳಾಗಲಿ, ಧನವಿದ್ದಾ ಗಲೇ ಪ್ರಕಾಶಕ್ಕೆ ಬರುವುವು. ಹಣವಿದ್ದರೂ ಅದನ್ನು ಲಕ್ಷಿಸದೆ ಕೇವಲ ಧರ್ಮವನ್ನೇ ಹಿಡಿದವರಿಗೆ ಲೋಕದ ಸುಖವು ಎಷ್ಟುಮಾತ್ರವೂ ಲಭಿ ಸದು. ಅಣ್ಣಾ! ಮೋಡಮುಚ್ಚಿದ ದಿನಗಳಲ್ಲಿ ಸೂರ್ಯಾದಿಗ್ರಹಗಳೊಂದೂ

ಹೊರಕ್ಕೆ ಕಾಣುವುದಿಲ್ಲ! ನೀನು ಪಿತೃವಚನಪರಿಪಾಲನಕ್ಕಾಗಿಯೇ ದೇಶವನ್ನು ಬಿಟ್ಟು ಕಾಡಿಗೆ ಬಂದೆಯಷ್ಟೆ? ಹೀಗೆ ಕೇವಲ ಧರ್ಮವನ್ನೇ ಹಿಡಿದು, ಅರ್ಥಹೇತುವಾದ ರಾಜ್ಯವನ್ನು ತ್ಯಜಿಸಿಬಂದುದರಿಂದಲೇ ನೀನು ಪ್ರಾಣಕ್ಕಿಂತಲೂ ಪ್ರಿಯಳಾದ ಪತ್ನಿಯನ್ನೂ ಕಳೆದುಕೊಳ್ಳಬೇಕಾಯಿತು. ಅಣ್ಣಾ! ಆದುದಾಯಿತು! ಇನ್ನು ಮುಂದೆಯಾದರೂ ಕಾರ್ಯಭಾರವನ್ನು ನನ್ನ ಮೇಲೆ ಹೊರಿಸು! ಹಿಂದೆ ನೀನು ನಿನ್ನ ರಾಜ್ಯವನ್ನಾದರಿಸದೆ ಬಂದುದಕ್ಕಾಗಿಯೇ ನಿನಗೆ ಇಂದ್ರಜಿತ್ತಿನಿಂದ ಇಷ್ಟೊಂದು ದುಃಖವು ಪ್ರಾಪ್ತವಾಯಿತಲ್ಲವೆ? ಈ ನಿನ್ನ ಮಹಾದುಃಖವನ್ನು ತಕ್ಕ ಪ್ರತಿಕ್ರಿಯೆಯಿಂದ ನಿವಾರಿಸುವ ಭಾರವು ನನಗಿರಲಿ! ನೀನು ಇನ್ನು ಚಿಂತಿಸಬೇಕಾದುದಿಲ್ಲ. ಮೇಲಕ್ಕೆದ್ದು ಕುಳ್ಳಿರು! ಅಣ್ಣಾ! ಏಳು! ಎಲೈ ಪುರುಷಶಾರ್ದೂಲನೆ! ಏಳು! ಎಲೆ ಮಹಾಬಾಹೂ! ಎಲೆ ದೃಢವ್ರತಾ! ಏಳೇಳು! ನೀನು ಅಷ್ಟು ಧೀಮಂತನಾಗಿದ್ದರೂ ನಿನ್ನ ನಿಜರೂಪವನ್ನು ಕಾಣದೆ ಹೋದೆಯಾ? ನೀನು ಪರಮಾತ್ಮನೆಂಬುದು ಇನ್ನೂ ನಿನ್ನ ನೆನಪಿಗೆ ಬಾರದೆ ಹೋಯಿತೆ? ಇಲ್ಲಿ ಶೋಕಕ್ಕೆ ಕಾರಣವೇನೂ ಇಲ್ಲ. ಎಲೆ ಮಹಾತ್ಮನೆ! ಎಲೈ ದೋಷರಹಿತನೆ! ನಿನಗೆ ವಿಧೇಯನಾಗಿ, ನಿನಗೆ ಪ್ರಿಯವನ್ನುಂಟುಮಾಡುವುದಕ್ಕಾಗಿಯೇ ನಾನು ಹುಟ್ಟಿದವನಲ್ಲವೆ? ಸೀತೆಯ ವಧವನ್ನು ಕೇಳಿದಂದಿನಿಂದ ನನಗೆ ತಡೆಯಲಾರದ ಕೋಪವು ಉಕ್ಕಿಬರುವುದು. ಇದೋ! ಈಗಲೇ ನಾನು ಈ ನನ್ನ ಬಾಣಗಳಿಂದ ರಥಗಜತುರಗಾದಿಗಳಿಂದ ತುಂಬಿದ ರಾಕ್ಷಸಸೈನ್ಯದೊಡನೆಯೂ, ರಾಕ್ಷಸೇಶ್ವರನಾದ ರಾವಣನೊಡನೆಯೂ ಸೇರಿಸಿ ಈ ಲಂಕೆಯನ್ನುರುಳಿಸುವೆನು ನೋಡು" ಎಂದನು.

ಇಲ್ಲಿಗೆ ಎಂಬತ್ತಮೂರನೆಯ ಸರ್ಗವು.

ವಿಭೀಷಣನು ರಾಮನನ್ನು ಸಮಾಧಾನಪಡಿಸಿ, ಇಂದ್ರಜಿತ್ತಿನ ವಧ
ಕ್ಕಾಗಿ ಲಕ್ಷ್ಮಣನನ್ನು ಕಳುಹಿಸುವಂತೆ ಪ್ರಾರ್ಥಿಸಿದುದು.

ಭ್ರಾತೃವತ್ಸಲನಾದ ಲಕ್ಷ್ಮಣನು ಹೀಗೆ ರಾಮನನ್ನು ಸಮಾಧಾನ ಪಡಿಸುತ್ತಿರುವಷ್ಟರಲ್ಲಿ ವಿಭೀಷಣನು, ಸೇನೆಗಳನ್ನು ಆಯಾಸ್ಥಾನದಲ್ಲಿರಿಸಿ ರಾಮನ ಬಳಿಗೆ ಬಂದನು. ಆಯುಧಪಾಣಿಗಳಾಗಿಯೂ, ಕಾಡಿಗೆಯಂತೆ ಕಪ್ಪು ಬಣ್ಣವುಳ್ಳವರಾಗಿಯೂ, ವೀರರಾಗಿಯೂ ಇದ್ದ ತನ್ನ ನಾಲ್ವರು ಮಂತ್ರಿಗಳೂ ತನ್ನನ್ನು ಸುತ್ತಿಬರುತ್ತಿರಲು, ಆನೆಗಳಿಂದ ಪರಿವೃತವಾದ ಸಲಗದಂತೆ ಮುಂದೆ ಬಂದನು. ಹೀಗೆ ರಾಮನಿದ್ದ ಸ್ಥಳಕ್ಕೆ ಬಂದು, ಅಲ್ಲಿ ದುಃಖದಿಂದ ಕೊರಗುತ್ತಿದ್ದ ಲಕ್ಷ್ಮಣನನ್ನೂ ವ್ಯಸನದಿಂದ ಕಣ್ಣೀರು ಬಿಡುತ್ತಿದ್ದ ವಾನರರನ್ನೂ ಕಂಡನು. ಅವರ ನಡುವೆ ಇಕ್ಷ್ವಾಕುವಂಶಕ್ಕೆ ಆನಂದವರ್ಧಕನಾದ ಮಹಾತ್ಮನಾದ ಶ್ರೀರಾಮನು, ಲಕ್ಷ್ಮಣನ ತೊಡೆಯ ಮೇಲೆ ಮೈಮರೆತು ಮಲಗಿರುವುದನ್ನೂ ಕಂಡನು. ಆಗ ವಿಭೀಷಣನು ರಾಮನು ದುಃಖದಿಂದ ಲಜ್ಜಿತನಾಗಿರುವುದನ್ನು ನೋಡಿ ತನ್ನಲ್ಲಿ ತಾನು ದಿಗ್ಭ್ರಮೆ ಹಿಡಿದವನಂತೆ ಕೊರಗುತ್ತ, ಕಂದಿದ ಮುಖವುಳ್ಳವನಾಗಿ "ಓಹೋ! ಇದೇನು? ನೀವೆಲ್ಲರೂ ಹೀಗೆ ದುಃಖಿಸುವುದಕ್ಕೆ ಕಾರಣವೇನು? ಎಂದನು. ಆಗ ಲಕ್ಷ್ಮಣನು ವಿಭೀಷಣನ ಮುಖವನ್ನು ನೋಡಿ ಕಣ್ಣೀರನ್ನು ಸುರಿಸುತ್ತ, ಸುಗ್ರೀವನನ್ನೂ ಇತರ ವಾನರರನ್ನೂ ಆಗಾಗ ನೋಡುತ್ತ ಹಿಂದೆ ನಡೆದ ವೃತ್ತಾಂತವನ್ನು ಸಂಗ್ರಹವಾಗಿ ಹೇಳತೊಡಗಿದನು. "ಎಲೆ ಸೌಮ್ಯನೆ! ಈಗ ರಾಮನು ಇಂದ್ರಜಿತ್ತಿನಿಂದ ಸೀತೆಯು ಹತಳಾದಳೆಂಬ ವೃತ್ತಾಂತವನ್ನು ಹನುಮಂತನ ಮುಖದಿಂದ ಕೇಳಿ, ದುಃಖವನ್ನು ತಡೆಯಲಾರದೆ ಮೂರ್ಛೆಹೊಂದಿರುವನು" ಎಂದನು. ಹೀಗೆ ಲಕ್ಷ್ಮಣನು ಆ ಮಾತನ್ನು ಹೇಳಿ ಮುಗಿಸುವಷ್ಟರಲ್ಲಿಯೇ ವಿಭೀಷಣನು, ಆ ವೃತ್ತಾಂತಗಳೆಲ್ಲವೂ ತನಗೆ ಚೆನ್ನಾಗಿ ತಿಳಿದಿದ್ದುದರಿಂದ, ಲಕ್ಷ್ಮಣನನ್ನು ಮುಂದೆ ಮಾತಾಡಗೊಡಿಸದೆ "ಓಹೋ! ಸರಿಸರಿ!! ಎಲೆ ರಾಜಕುಮಾರನೆ! ಸಾಕು! ಸಾಕು!! ಅದರ ತತ್ತ್ವವನ್ನು ನಾನು ಬಲ್ಲೆನು. ಹನುಮಂತನು ಯಾವ ವೃತ್ತಾಂತವನ್ನು ನಿಜವೆಂದು ನಂಬಿ ಬಂದಿರುವನೋ ಅವೆಲ್ಲವೂ ಕೇವಲ

ಭ್ರಮವೇ ಹೊರತು ಬೇರೆಯಲ್ಲ! ಲಕ್ಷ್ಮಣಾ! ಇಂದ್ರಜಿತ್ತು ಸೀತೆಯನ್ನು ವಧಿಸುವುದೆಂದರೇನು? ಸಮುದ್ರವನ್ನು ಶೋಷಿಸಬೇಕೆಂದರೆ ಯಾರಿಗೆ ಸಾಧ್ಯವು? ಹನುಮಂತನು ಈ ಮಾತನ್ನು ಬಾಯಿಂದಾಡಿದುದೇ ಯುಕ್ತವಲ್ಲವೆಂದು ನನಗೆ ತೋರುವುದು. ಎಲೆ ಮಹಾಬಾಹೂ! ದುರಾತ್ಮನಾದ ರಾವಣನ ಅಭಿಪ್ರಾಯವನ್ನು ನಾನು ಚೆನ್ನಾಗಿ ಬಲ್ಲೆನು. ಸೀತೆಯನ್ನು ಕೊಲ್ಲಿಸುವುದಕ್ಕೆ ಮಾತ್ರ ರಾವಣನು ಎಂದಿಗೂ ಇಷ್ಟಪಡಲಾರನು. ನಾನು ಮೊದಲೇ ಆ ಸೀತೆಯನ್ನು ರಾಮನಿಗೊಪ್ಪಿಸಿಬಿಡುವಂತೆ ಅನೇಕ ವಿಧದಿಂದ ಪ್ರಾರ್ಥಿಸಿ ಕೇಳಿದೆನು. ರಾವಣನು ಹಿತೈಷಿಯಾದ ನನ್ನ ಮಾತನ್ನೇ ಕೇಳಲಿಲ್ಲ. ಹಾಗೆ ಆ ಸೀತೆಯನ್ನು ಉಪಾಯದಿಂದ ಬಿಡುವುದಕ್ಕೂ ಸಮ್ಮತಿಸದವನು ಅವಳನ್ನು ಕೊಲ್ಲುವುದಕ್ಕೆ ಸಮ್ಮತಿಸುವನೆ! ಸಾಮೋಪಾಯದಿಂದಾಗಲಿ, ದಾನೋಪಾಯದಿಂದಾಗಲಿ, ಭೇದೋಪಾಯದಿಂದಾಗಲಿ, ಆ ಸೀತೆಯನ್ನು ಕಣ್ಣಾರೆ ನೋಡುವುದಕ್ಕೂ ಬೇರೊಬ್ಬರಿಗೆ ಸಾಧ್ಯವಲ್ಲ. ಇನ್ನು ದಂಡೋಪಾಯದಿಂದಾಗಲಿ, ಬೇರೆ ಯಾವ ಮಾಯೋಪಾಯದಿಂದಾಗಲಿ, ಅವಳನ್ನು ನೋಡುವುದಕ್ಕೆ ಸಾಧ್ಯವೆ? ಅಂತಹ ಮಹಾತ್ಮಳಾದ ಸೀತೆಯನ್ನು ಇಂದ್ರಜಿತ್ತು ರಥದಲ್ಲಿರಿಸಿ ತಂದು ಕೊಲ್ಲುವುದೆಂದರೇನು? ತನ್ನ ಮಾಯೆಯಿಂದ ವಾನರರನ್ನು ಮರುಳುಮಾಡಿ, ಅವರ ಯುದ್ಧೋತ್ಸಾಹವನ್ನು ತಪ್ಪಿಸುವುದಕ್ಕಾಗಿಯೇ ಇಂದ್ರಜಿತ್ತು ಈ ಉಪಾಯವನ್ನು ಮಾಡಿರುವನೇ ಹೊರತು ಬೇರೆಯಲ್ಲ. ಹೀಗೆ ವಾನರರನ್ನು ಮೋಸಪಡಿಸಿ, ತಾನೊಂದು ಯಜ್ಞಕಾರ್ಯವನ್ನು ನಡೆಸುವುದಕ್ಕಾಗಿ ಈಗ ನಿಕುಂಭಿಲೆಯೆಂಬ ದೇವಾಲಯಕ್ಕೆ ಹೋಗಿರುವನು. ಇನ್ನು ಮೇಲೆ ಅವನು ಅಲ್ಲಿ ಹೋಮವನ್ನಾರಂಭಿಸುವನು. ಇಂದ್ರಜಿತ್ತು ಆ ಹೋಮಕಾರ್ಯವನ್ನು ನಿರ್ವಿಘ್ನವಾಗಿ ನಡೆಸಿಬಿಟ್ಟ ಪಕ್ಷದಲ್ಲಿ, ದೇವದಾನವರೆಲ್ಲರೂ ಒಂದಾಗಿ ಸೇರಿಬಂದರೂ ಯುದ್ಧದಲ್ಲಿ ಅವನನ್ನಿದಿರಿಸಿ ನಿಲ್ಲಲಾರರು. ಆ ಇಂದ್ರಜಿತ್ತು ನಿಕುಂಭಿಲೆಯಲ್ಲಿ ತಾನು ಹೋಮವನ್ನು ನಡೆಸುವಾಗ, ವಾನರರು, ಬಂದು ಮೇಲೆಬಿದ್ದು ತಮ್ಮ ಪರಾಕ್ರಮವನ್ನು ತೋರಿಸುವುದಕ್ಕೆ ತೊಡಗಿದ ಪಕ್ಷದಲ್ಲಿ, ತನ್ನ ಕಾರ್ಯಸಿದ್ಧಿಗೆ ವಿಘ್ನವುಂಟಾಗಬಾರದೆಂಬುದಕ್ಕಾಗಿಯೇ ಅವರನ್ನು ವಂಚಿಸಬೇಕೆಂದು ಈ ಮಾಯೆಯನ್ನು ಪ್ರಯೋಗಿಸಿರುವನೇ ಹೊರತು ಬೇರೆಯಲ್ಲ. ಆದು

ದರಿಂದ ಆ ಇಂದ್ರಜಿತ್ತು ಈಗ ತೊಡಗಿರುವ ಹೋಮಕಾರ್ಯವು ಸಮಾಪ್ತಿ ಹೊಂದುವುದಕ್ಕೆ ಮೊದಲೇ, ನಾವು ಕೆಲವು ಸೈನ್ಯದೊಡನೆ ಆ ನಿಕುಂಭಿಲೆಗೆ ಹೋಗಬೇಕಾದುದೇ ಈಗ ಮಾಡಬೇಕಾದ ಮೊದಲನೆಯ ಕೆಲಸವು. ಎಲೈ ಪುರುಷಸಿಂಹನೆ! ಈಗ ನಿನಗುಂಟಾಗಿರುವ ಸಂತಾಪವು ಕೇವಲ ಭ್ರಾಂತಿಯಿಂದುಂಟಾದುದೇ ಹೊರತು ವಾಸ್ತವವಲ್ಲ. ಈ ವ್ಯಸನವನ್ನು ಬಿಡು! ನೀನು ಹೀಗೆ ದುಃಖಾಕುಲನಾಗಿರುವುದನ್ನು ನೋಡಿ ನಮ್ಮ ಸೈನ್ಯವೆಲ್ಲವೂ ದುಃಖದಿಂದ ಕೊರಗಿ, ಉತ್ಸಾಹ ತಪ್ಪಿರುವುದು. ನೀನು ಧೈರ್ಯದಿಂದ ಸುಖವಾಗಿ ಇಲ್ಲಿಯೇ ಇರು! ಲಕ್ಷ್ಮಣನನ್ನು ನಮ್ಮೊಡನೆ ಕಳುಹಿಸಿಕೊಡು. ಕೆಲವು ಸೈನ್ಯಗಳನ್ನು ಸೇರಿಸಿಕೊಂಡು ಈಗಲೇ ನಾವೆಲ್ಲರೂ ಹೊರಡುವೆವು. ಪುರುಷಸಿಂಹನಾದ ಈ ನಿನ್ನ ತಮ್ಮನು, ತೀಕ್ಷ್ಣಬಾಣಗಳಿಂದ ಆ ಇಂದ್ರಜಿತ್ತಿನ ಹೋಮಕಾರ್ಯವನ್ನು ತಪ್ಪಿಸಿ, ಕೋಪಗೊಳಿಸಿ ರಣರಂಗಕ್ಕೆ ಕರೆತರುವನು. ಆಮೇಲೆ ಬ್ರಹ್ಮವರವನ್ನನುಸರಿಸಿ ಇಂದ್ರಜಿತ್ತಿಗೆ ಈ ಲಕ್ಷ್ಮಣನ ಕೈಯಿಂದಲೇ ಮರಣವು ಸಿದ್ಧವು. ಚೆನ್ನಾಗಿ ಸಾಣೆಯಿಕ್ಕಿ ತೀಕ್ಷ್ಣಗಳಾಗಿಯೂ, ಗರಿಗಟ್ಟಿ ವೇಗವುಳ್ಳವುಗಳಾಗಿಯೂ ಇರುವ ಈ ಲಕ್ಷ್ಮಣನ ಬಾಣಗಳ ಮಹಿಮೆಯು ಸಾಮಾನ್ಯವಲ್ಲ! ಹದ್ದುಕಾಗೆಗಳು ದೇಹವನ್ನು ಕಿತ್ತು ತಿನ್ನುವಂತೆ, ಕ್ಷಣಮಾತ್ರದಲ್ಲಿ ಆ ಇಂದ್ರಜಿತ್ತಿನ ದೇಹದ ರಕ್ತವನ್ನು ಹೀರುವುವು. ಮಹಾಬಾಹೂ! ತಡಮಾಡಬೇಡ! ಲಕ್ಷ್ಮಣನಿಗೆ ಆಜ್ಞೆಯನ್ನು ಕೊಡು! ಇಂದ್ರನು ನಮುಚಿವಧಾರ್ಥವಾಗಿ ತನ್ನ ವಜ್ರಾಯುಧವನ್ನು ಪ್ರೇರಿಸಿದಂತೆ ನೀನೂ ಈಗ ಆ ರಾವಣಪುತ್ರನ ವಧಕ್ಕಾಗಿ ಶುಭಲಕ್ಷಣಗಳುಳ್ಳ ಈ ಲಕ್ಷ್ಮಣನನ್ನು ಪ್ರೇರಿಸಿ ಕಳುಹಿಸು! ಈಗ ಕಾಲವಿಳಂಬವನ್ನು ಮಾಡಬಾರದು! ಶತ್ರುವಧಕ್ಕಾಗಿ ನೀನು ಶೀಘ್ರದಲ್ಲಿ ಲಕ್ಷ್ಮಣನಿಗೆ ಆಜ್ಞೆಯನ್ನು ಕೊಡು. ಇಂದ್ರಜಿತ್ತು ಈಗ ಆರಂಭಿಸುವ ಹೋಮಕಾರ್ಯವು ಪೂರ್ತಿಹೊಂದಿದ ಪಕ್ಷದಲ್ಲಿ ಅವನು ಯುದ್ಧದಲ್ಲಿ ದೇವಾಸುರರಿಗೂ ಅದೃಶ್ಯನಾಗುವನು. ಆವನು ಆ ಹೋಮವನ್ನು ನಿರ್ವಿಘ್ನವಾಗಿ ಮುಗಿಸಿ ಬಂದುಬಿಟ್ಟರೆ, ದೇವತೆಗಳಿಗಾದರೂ ಪ್ರಾಣಸಂಶಯವು ತಪ್ಪದು!" ಎಂದನು.

ಇಲ್ಲಿಗೆ ಎಂಬತ್ತನಾಲ್ಕನೆಯ ಸರ್ಗವು.

ರಾಮನು ವಿಭೀಷಣನ ವಚನದಿಂದ ಧೈರ್ಯವನ್ನು ಹೊಂದಿ, ಇಂದ್ರ
ಜಿತ್ತನ್ನು ಕೊಲ್ಲುವುದಕ್ಕಾಗಿ ವಿಭೀಷಣಾದಿಗಳೊಡನೆ ಲಕ್ಷ್ಮಣ
ನನ್ನು ನಿಕುಂಭಿಲೆಗೆ ಕಳುಹಿಸಿದುದು.

ರಾಮನು ವಿಭೀಷಣನ ಸಮಾಧಾನವಾಕ್ಯವನ್ನು ಕೇಳುವವರೆಗೂ ಕೇವಲ ದುಃಖಾಕುಲನಾಗಿದ್ದುದರಿಂದ ಅವನು ಹೇಳಿದ ಮಾತುಗಳು ಇವನ ಮನಸ್ಸಿಗೆ ಚೆನ್ನಾಗಿ ಹಿಡಿಯಲಿಲ್ಲ. ಆದರೆ ಕೊನೆಕೊನೆಗೆ ಧೈರ್ಯವನ್ನು ಹೊಂದಿ ಆ ವಿಭೀಷಣನ ಮಾತಿನ ಅರ್ಥವನ್ನು ಗ್ರಹಿಸಿ, ತನಗಿದಿರಾಗಿ ಕಪಿಗಳ ನಡುವೆ ಕುಳಿತಿದ್ದ ವಿಭೀಷಣನನ್ನು ಕುರಿತು ಹೇಳುವನು. "ಎಲೈ ರಾಕ್ಷಸೇಂದ್ರನೆ! ಇದುವರೆಗೆ ನೀನು ಹೇಳಿದ ಮಾತುಗಳೊಂದೂ ನನಗೆ ಚೆನ್ನಾಗಿ ಕಿವಿಗೇರಲಿಲ್ಲ. ನೀನು ಹೇಳಬೇಕಾದುದನ್ನು ಮತ್ತೊಮ್ಮೆ ಹೇಳಿ ತಿಳಿಸುವೆಯೂ?" ಎಂದನು. ಹೀಗೆ ಹೇಳಿದ ರಾಮನ ಮಾತನ್ನು ಕೇಳಿ, ವಾಕ್ಯಕುಶಲನಾದ ವಿಭೀಷಣನು, ತಿರುಗಿ, "ಎಲೆ ಮಹಾಬಾಹೂ! ನಿನ್ನಾಜ್ಞೆಯಂತೆ ನಾನು ನಮ್ಮ ಸೈನ್ಯವನ್ನು ಆಯಾ ಕ್ರಮದಲ್ಲಿ ಸರಿಯಾಗಿ ನಿಲ್ಲಿಸಿ ಬಂದೆನು. ಆ ಸಮಸ್ತ ಸೈನ್ಯಗಳನ್ನೂ ಅಲ್ಲಲ್ಲಿ ವಿಭಾಗಿಸಿಟ್ಟೆನು. ಆಯಾ ಸೈನ್ಯಗಳಿಗೆ ತಕ್ಕಂತೆ ಅಲ್ಲಲ್ಲಿ ಯೂಥಪತಿಗಳನ್ನೂ ಏರ್ಪಡಿಸಿದೆನು. ಈಗ ನನ್ನದೊಂದು ವಿಜ್ಞಾಪನೆಯುಂಟು. ನೀನು ನಿಷ್ಕಾರಣವಾಗಿ ಹೀಗೆ ದುಃಖಿಸಿದರೆ ನಾವೂ ವ್ಯಸನಪಡಬೇಕಾಗುವುದು. ಕೇವಲ ಭ್ರಾಂತಿಯಿಂದುಂಟಾಗಿರುವ ಈ ದುಃಖವನ್ನೂ, ಸಂತಾಪವನ್ನೂ ಬಿಟ್ಟುಬಿಡು. ನೀನು ಹೀಗೆ ಕೊರಗುವುದನ್ನು ನೋಡಿದರೆ ನಮ್ಮ ಶತ್ರುಗಳಿಗೂ ಮೇಲೆ ಮೇಲೆ ಉತ್ಸಾಹವು ಹೆಚ್ಚುವುದು. ಆದುದರಿಂದ ಈ ಚಿಂತೆಯನ್ನು ಬಿಟ್ಟು, ಕಾರ್ಯದಲ್ಲಿ ಉತ್ಸಾಹವನ್ನು ತೋರಿಸು! ಮನಸ್ಸಿನಲ್ಲಿ ಸಂತೋಷದಿಂದಿರು! ನೀನು ರಾಕ್ಷಸರನ್ನು ಕೊಂದು ಸೀತೆಯು ಬೇಕೆಂದಿದ್ದರೆ ನನ್ನ ಹಿತವಾದವನ್ನು ಕೇಳು! ಹೇಳುವೆನು. ಈಗಲೇ ಲಕ್ಷ್ಮಣನಿಗೆ ಇಂದ್ರಜಿತ್ತನ್ನು ಕೊಲ್ಲುವುದಕ್ಕಾಗಿ, ದೊಡ್ಡ ಸೈನ್ಯದೊಡನೆ, ನಿಕುಂಭಿಲೆಗೆ ಹೊರಡುವಂತೆ ನಿಯಮಿಸು. ಅನೇಕ ಯುದ್ಧಗಳಲ್ಲಿ ಖ್ಯಾತಿಹೊಂದಿದ ಮಹಾಧನುರ್ಧಾರಿಯಾದ ಲಕ್ಷ್ಮಣನು, ಬಾಗಿದ್ದ ತನ್ನ ಬಿಲ್ಲಿನಿಂದ ಸರ್ಪಸಮಾನಗಳಾದ ಬಾಣ

ಗಳನ್ನು ಬಿಟ್ಟು, ಆ ಇಂದ್ರಜಿತ್ತನ್ನು ಕೊಂದು ಬರಲಿ! ವೀರನಾದ ಆ ಇಂದ್ರಜಿತ್ತು, ತಪಸ್ಸಿನಿಂದ ಬ್ರಹ್ಮನನ್ನು ಮೆಚ್ಚಿಸಿ ಹೋಮ ಮೂಲಕ ವಾಗಿ ಬ್ರಹ್ಮಶಿರಸ್ಸೆಂಬ ಮಹಾಸ್ತ್ರವನ್ನೂ, ಕಾಮಗಮನವುಳ್ಳ ರಥವನ್ನೂ ಪಡೆದಿರುವನು. ಈಗ ತನ್ನ ಸೇನಾಸಮೇತನಾಗಿ ನಿಕುಂಭಿಲೆಯಲ್ಲಿ ಸೇರಿರು ವನು. ಅವನು ಈಗ ತೊಡಗಿರುವ ಹೋಮಕಾರ್ಯವನ್ನು ಮುಗಿಸಿ ಆ ನಿಕುಂಭಿಲೆಯಿಂದ ಹೊರಟು ಯುದ್ಧರಂಗಕ್ಕೆ ಬಂದ ಪಕ್ಷದಲ್ಲಿ ನಾವೆಲ್ಲರೂ ಹತರಾದಂತೆಯೇ ತಿಳಿ! ಎಲೆ ಮಹಾಬಾಹೂ! ಲೋಕನಾಥನಾದ ಬ್ರಹ್ಮನು ಇಂದ್ರಜಿತ್ತನ್ನು ಕುರಿತು ಮೊದಲು ಹೀಗೆಂದು ಹೇಳಿರುವನು. "ನೀನು ನಿಕುಂಭಿಲಾಹೋಮಕ್ಕೆ ಪ್ರಯತ್ನಿಸಿದಮೇಲೆ, ಆ ಹೋಮವನ್ನು ಪೂರ್ತಿ ಮಾಡದೆಯೂ, ನಿಕುಂಭಿಲೆಯೆಂಬ ನ್ಯಗ್ರೋಧಮೂಲವನ್ನು ಸೇರದೆಯೂ ಇದ್ದಾಗ, ಯಾವ ಶತ್ರುವು ನಿನ್ನನ್ನಿದಿರಿಸಿ ಶಸ್ತ್ರಪಾಣಿಯಾಗಿ ಯುದ್ಧಕ್ಕೆ ನಿಂತು ನಿನ್ನನ್ನು ಶಸ್ತ್ರದಿಂದ ಪ್ರಹರಿಸುವನೋ ಆಗಲೇ ನಿನಗೆ ವಧವು. ಇದು ಹೊರತು ಬೇರೆ ಯಾವಾಗಲೂ, ಯಾರೊಬ್ಬನೂ ನಿನ್ನನ್ನು ಕೊಲ್ಲ ಲಾರನು" ಎಂದು ಹೇಳಿ ವರವನ್ನು ಕೊಟ್ಟಿರುವನು. ರಾಮಾ! ಆದು ದರಿಂದ ಈ ಸಮಯದಲ್ಲಿ ಇಂದ್ರಜಿತ್ತಿನ ಹೋಮಕ್ಕೆ ಯಾವನು ವಿಘ್ನ ವನ್ನು ಮಾಡುವನೋ, ಅವನಿಂದಲೇ ಇಂದ್ರಜಿತ್ತಿಗೆ ಮರಣವೆಂದು ಬ್ರಹ್ಮನ ವಿಧಿಯುಂಟು. ಆದುದರಿಂದ ಈಗಲೇ ನಮ್ಮಲ್ಲಿ ಯಾರನ್ನಾದರೂ ಇಂದ್ರ ಜಿತ್ತಿನ ವಧಕ್ಕಾಗಿ ನಿಯಮಿಸು. ಆ ಇಂದ್ರಜಿತ್ತೊಬ್ಬನು ಸತ್ತರೆ, ರಾವ ಣನು ಸಪರಿವಾರನಾಗಿ ಸತ್ತನೆಂದೇ ತಿಳಿ" ಎಂದನು. ಇದನ್ನು ಕೇಳಿ ರಾಮನು ವಿಭೀಷಣನನ್ನು ಕುರಿತು "ಎಲೈ ಸತ್ಯಪರಾಕ್ರಮನೆ! ಭಯಂಕರನಾದ ಆ ಇಂದ್ರಜಿತ್ತಿನ ಮಾಯಾಬಲವನ್ನು ನಾನು ಬಲ್ಲೆನು. ಇದರಮೇಲೆ ಅವನು ಬ್ರಹ್ಮಾಸ್ತ್ರವನ್ನೂ ಕೂಡ ಬಲ್ಲವನು. ಬಹಳ ಪ್ರಾಜ್ಞನು. ಮಹಾಬಲ ವಂತನು. ಯುದ್ಧದಲ್ಲಿ ವರುಣನೊಡಗೂಡಿ ದೇವತೆಗಳೇ ಬಂದರೂ ಅವ ರನ್ನೂ ಕ್ಷಣಮಾತ್ರದಲ್ಲಿ ಮೂರ್ಛೆಗೊಳಿಸುವನು. ಅವನು ರಥಸ್ಥನಾಗಿ ಆಕಾಶ ದಲ್ಲಿ ತಿರುಗುತ್ತಿದ್ದರೆ, ಮೇಘಗಳಲ್ಲಿ ಮರೆಗೊಂಡ ಸೂರ್ಯನ ಗತಿಯಂತೆ ಅವನ ಗತಿಯು ಬೇರೊಬ್ಬರಿಗೆ ಗೋಚರಿಸದು!" ಎಂದನು. ಹೀಗೆ ಶ್ರೀರಾಮನು ದುರಾತ್ಮನಾದ ಆ ಇಂದ್ರಜಿತ್ತಿನ ಮಾಯಾಬಲವನ್ನೂ, ವೀರಬಲವನ್ನೂ ತಿಳಿದು ಲಕ್ಷ್ಮಣನನ್ನು ನೋಡಿ, "ವತ್ಸ ಲಕ್ಷ್ಮಣಾ!

ಈಗಲೇ ನೀನು ಸುಗ್ರೀವನಲ್ಲಿರುವ ಸಮಸ್ತ ಸೈನ್ಯಗಳನ್ನೂ ಸೇರಿಸಿಕೊಂಡು ಹನುಮಂತನೇ ಮೊದಲಾದ ಕೆಲವು ವಾನರ ಸೇನಾಪತಿಗಳನ್ನೂ, ಭಲ್ಲೂಕ ಸೇನೆಯೊಡಗೂಡಿದ ಜಾಂಬವಂತನನ್ನೂ ನಿನ್ನ ಸಂಗಡ ಕರೆದುಕೊಂಡು ನಿಕುಂಭಿಲೆಗೆ ಹೋಗಿ, ಮಾಯಾವಿಯಾದ ಇಂದ್ರಜಿತ್ತನ್ನು ಕೊಂದು ಬಾ! ಈ ವಿಭೀಷಣನು ಆ ರಾಕ್ಷಸನ ಮಾಯಾತಂತ್ರಗಳನ್ನು ಚೆನ್ನಾಗಿ ಬಲ್ಲನು ಮುಖ್ಯವಾಗಿ ಆ ನಿಕುಂಭಿಲೆಯೆಂಬ ಪ್ರದೇಶವನ್ನು ಈತನು ಚೆನ್ನಾಗಿ ನೋಡಿಬಲ್ಲನು. ಮಹಾತ್ಮನಾದ ವಿಭೀಷಣನು ತನ್ನ ಮಂತ್ರಿಗಳೊಡ ಗೂಡಿ ನಿನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗುವನು" ಎಂದನು. ರಾಮನು ಈ ಮಾತನ್ನು ಹೇಳಿದೊಡನೆ ಅದ್ಭುತಪರಾಕ್ರಮವುಳ್ಳ ಲಕ್ಷ್ಮ ಣನು, ತನ್ನ ಮಹಾಧನುಸ್ಸನ್ನು ಕೈಗೆತ್ತಿಕೊಂಡನು. ವಿಭೀಷಣನೂ ತನ್ನ ಧನುಸ್ಸನ್ನು ಸಿದ್ಧಪಡಿಸಿಕೊಂಡನು. ಹೀಗೆ ಲಕ್ಷ್ಮಣನು ಯುದ್ಧ ಸನ್ನದ್ಧನಾಗಿ, ಯುದ್ಧಕವಚವನ್ನು ತೊಟ್ಟು, ಖಡ್ಗಧಾರಿಯಾಗಿ ಚಿನ್ನದ ಕಟ್ಟುಳ್ಳ ಧನುರ್ಬಾಣಗಳನ್ನೆತ್ತಿಕೊಂಡು ಯುದ್ಧೋತ್ಸಾಹದಿಂದ ಕೂಡಿದವ ನಾಗಿ, ರಾಮನ ಪಾದಗಳಿಗೆ ನಮಸ್ಕರಿಸಿ "ಅಣ್ಣಾ! ಇದೋ! ಈ ಮುಂದಿನ ಯುದ್ಧದಲ್ಲಿ, ಈ ನನ್ನ ಧನುಸ್ಸಿನಿಂದ ಹೊರಡುವ ಬಾಣ ಗಳು ಇಂದ್ರಜಿತ್ತಿನ ದೇಹವನ್ನು ಭೇದಿಸಿಕೊಂಡು ಹೋಗಿ, ತಾವರೆ ಕೊಳಗಳಲ್ಲಿ ಸುಳಿದಾಡುವ ಹಂಸಗಳಂತೆ, ಲಂಕಾ ನಗರಿಯಲ್ಲಿ ಬೀಳುವ ರೀತಿಯನ್ನಾದರೂ ನೋಡು. ಇದೋ! ಈಗ ನನ್ನ ಬಿಲ್ಲಿನ ನಾಣಿನಿಂದ ಪ್ರಯೋಗಿಸಲ್ಪಟ್ಟ ಬಾಣಗಳು ಆ ಕ್ರೂರ ರಾಕ್ಷಸನ ಶರೀರವನ್ನು ಭೇದಿಸಿ ಅವನನ್ನು ಅಂತರಿಕ್ಷಕ್ಕೆ ತೂರಿಬಿಡುವ ರೀತಿಯನ್ನಾದರೂ ನೋಡು" ಎಂದನು. ಹೀಗೆ ಲಕ್ಷ್ಮಣನು ಯುದ್ಧೋತ್ಸಾಹದಿಂದ ರಾಮನ ಮುಂದೆ ಈ ಮಾತನ್ನು ಹೇಳಿ, ಇಂದ್ರಜಿತ್ತನ್ನು ಕೊಲ್ಲಬೇಕೆಂಬ ಆತುರದಿಂದ, ಅತೀವತ್ವರೆಯಾಗಿ ನಿಕುಂಭಿಲೆಯ ಕಡೆಗೆ ಹೊರಟನು. ಹೀಗೆ ಲಕ್ಷ್ಮಣನು ರಾಮನ ಪಾದ ಗಳನ್ನು ಹಿಡಿದು ನಮಸ್ಕರಿಸಿ ಅವನನ್ನು ಪ್ರದಕ್ಷಿಣಮಾಡಿ ಆ ರಾಮನ ಮಂಗಳಾಶೀರ್ವಾದಗಳನ್ನು ಪಡೆದು, ವಿಭೀಷಣನನ್ನೂ ಸಂಗಡ ಕರೆದು ಕೊಂಡು ಇಂದ್ರಜಿತ್ತಿನಿಂದ ರಕ್ಷಿತವಾದ ಆ ನಿಕುಂಭಿಲೆಯ ಕಡೆಗೆ ಬಂದನು. ಲಕ್ಷ್ಮಣನು ಹೊರಟಾಗ ಅನೇಕ ಸಹಸ್ರ ವಾನರಸೈನ್ಯ ದೊಡನೆ ವಿಭೀಷಣನೂ, ಆ ಲಕ್ಷ್ಮಣನನ್ನು ಹಿಂಬಾಲಿಸಿ ಹೊರಟನು.

ಹೀಗೆ ಲಕ್ಷ್ಮಣನು ದೊಡ್ಡ ವಾನರಸೈನ್ಯದಿಂದ ಪರಿವೃತನಾಗಿ ಹೊರಟು ಬರುತ್ತಿರುವಾಗ, ದಾರಿಯಲ್ಲಿ ತನ್ನನ್ನು ಹಿಂಬಾಲಿಸಿರುವುದಕ್ಕೆ ಸಿದ್ಧವಾಗಿ ನಿಂತಿದ್ದ ದೊಡ್ಡ ಭಲ್ಲೂಕಸೈನ್ಯವನ್ನು ಕಂಡನು. ಈ ಸಮಸ್ತ ಸೈನ್ಯಗಳೊಡನೆ ಲಕ್ಷ್ಮಣನು ಬಹುದೂರಕ್ಕೆ ದಾರಿನಡೆದು ಹೋದಮೇಲೆ ಅಲ್ಲಿ ವ್ಯೂಹವಾಗಿ ನಿಲ್ಲಿಸಲ್ಪಟ್ಟಿದ್ದ ದೊಡ್ಡರಾಕ್ಷಸಸೈನ್ಯವನ್ನು ಕಂಡನು. ಆ ಸೈನ್ಯವನ್ನು ಕಂಡೊಡನೆ ಇಂದ್ರಜಿತ್ತು ಮುಂದೆ ಹೋಗಿ, ಧನುಸ್ಸನ್ನು ಸಿದ್ಧಪಡಿಸಿಕೊಂಡು, ಬ್ರಹ್ಮನವಿಧಿಯಂತೆ ನಿಕುಂಭಿಲೆಯನ್ನು ಸೇರುವುದಕ್ಕೆ ಮೊದಲೇ ಅವನನ್ನು ಕೊಲ್ಲುವುದಕ್ಕಾಗಿ ನಿರೀಕ್ಷಿಸುತ್ತ, ವಿಭೀಷಣನನ್ನೂ, ವೀರನಾದ ಅಂಗದನನ್ನೂ, ಹನುಮಂತನನ್ನೂ ಬೆಂಬಲಕ್ಕಿಟ್ಟುಕೊಂಡು ಸಿದ್ಧನಾಗಿದ್ದನು. ಹೀಗೆ ಲಕ್ಷ್ಮಣನು, ನಾನಾವಿಧವಾಗಿಯೂ, ಶಸ್ತ್ರಕಾಂತಿ ವಿಶಿಷ್ಟವಾಗಿಯೂ, ಧ್ವಜಗಳಿಂದಲೂ ಮಹಾರಥಗಳಿಂದಲೂ ತುಂಬಿದುದಾಗಿಯೂ, ಅತ್ಯಂತ ಭಯಂಕರವಾಗಿಯೂ, ಎಣೆಯಿಲ್ಲದ ವೇಗವುಳ್ಳುದಾಗಿಯೂ, ಕತ್ತಲೆಯಂತೆ ಕಪ್ಪಾಗಿಯೂ ಕಾಣುತ್ತಿದ್ದ ಆ ರಾಕ್ಷಸ ಸೈನ್ಯದ ಮಧ್ಯಭಾಗವನ್ನು ಪ್ರವೇಶಿಸಿದನು.

ಇಲ್ಲಿಗೆ ಎಂಬತ್ತೈದನೆಯ ಸರ್ಗವು.

———

ಲಕ್ಷ್ಮಣನೂ ಹನುಮಂತಾದಿ ವಾನರರೂ ನಿಕುಂಭಿಲೆಯ ಸುತ್ತಲೂ ಕಾವಲಾಗಿ ನಿಲ್ಲಿಸಲ್ಪಟ್ಟಿದ್ದ ರಾಕ್ಷಸಸೇನೆಯನ್ನು ನಾಶಮಾಡಿದುದು. ಇದನ್ನು ಕೇಳಿ ಇಂದ್ರಜಿತ್ತು ಕೋಪಗೊಂಡು ತನ್ನ ಹೋಮಕಾರ್ಯವು ಮುಗಿಯುವುದಕ್ಕೆ ಮೊದಲೇ ಯುದ್ಧಕ್ಕೆ ಬಂದುದು.

ಈ ಸ್ಥಿತಿಯಲ್ಲಿ ರಾವಣಾನುಜನಾದ ವಿಭೀಷಣನು ಲಕ್ಷ್ಮಣನನ್ನು ನೋಡಿ ಶತ್ರುಗಳಿಗೆ ಹಾನಿಕರವಾಗಿಯೂ, ತನಗೆ ಕಾರ್ಯಸಾಧಕವಾಗಿಯೂ

ಇರುವ ವಿಷಯಗಳನ್ನು ನಿಶ್ಚಯಿಸಿ ಅವನನ್ನು ಕುರಿತು "ಲಕ್ಷ್ಮಣಾ! ಇದೋ! ಇಲ್ಲಿ ಮೇಘದಂತೆ ಕಪ್ಪಾದ ರಾಕ್ಷಸ ಸೈನ್ಯವು ಕಾಣುವುದಲ್ಲವೇ! ಈ ಸೈನ್ಯವನ್ನು ಈಗಲೇ ನಮ್ಮ ವಾನರರು ಶಿಲಾವೃಕ್ಷಗಳೇ ಮೊದಲಾದ ಆಯುಧಗಳಿಂದ ಧ್ವಂಸಮಾಡುತ್ತ ಬರಬೇಕು. ಇಂದ್ರಜಿತ್ತಿನ ಯಾಗವು ಸಮಾಪ್ತಿ ಹೊಂದುವುದರೊಳಗಾಗಿ ಈ ದೊಡ್ಡ ಸೈನ್ಯವನ್ನು ನಾಶಮಾಡುವು ದಕ್ಕೆ ಪ್ರಯತ್ನಿಸು ! ಈ ಸೈನ್ಯವನ್ನು ನಾವು ಭೇದಿಸಿದ ಪಕ್ಷದಲ್ಲಿ, ಇಂದ್ರಜಿತ್ತು ತಾನಾಗಿ ಬಂದು ನಮಗೆ ಗೋಚರಿಸುವನು. ಆದುದರಿಂದ ಇಂದ್ರನ ವಜ್ರಾಯುಧಕ್ಕೆ ಸಮಾನವಾದ ನಿನ್ನ ಬಾಣಗಳನ್ನು ಪ್ರಯೋಗಿಸಿ ಆ ಇಂದ್ರಜಿತ್ತಿನ ಯಜ್ಞವು ಮುಗಿಯುವುದಕ್ಕೆ ಮೊದಲೇ ಆ ಸೈನ್ಯವನ್ನು ಭೇದಿಸು ! ಆ ಇಂದ್ರಜಿತ್ತು ಬಹಳ ದುರಾತ್ಮನು. ಬಹಳ ಮಾಯಾ ವಿಯು ! ಬಹಳ ಅಧಾರ್ಮಿಕನು ! ಅತಿ ಕ್ರೂರನು ! ಸಮಸ್ತಲೋಕ ಗಳಿಗೂ ಭಯವನ್ನು ಹುಟ್ಟಿಸತಕ್ಕವನು. ಶೀಘ್ರದಲ್ಲಿಯೇ ಅವನನ್ನು ಕೊಂದು ಬಿಡಬೇಕು" ಎಂದನು. ವಿಭೀಷಣನು ಈ ಮಾತನ್ನು ಹೇಳಿದ ಕೂಡಲೇ ಲಕ್ಷ್ಮಣನು ಇಂದ್ರಜಿತ್ತಿನ ಕಡೆಗೆ ಬಾಣಗಳನ್ನು ಕರೆದನು. ಆಗ ವಾನರ ಭಲ್ಲೂಕಸೈನ್ಯಗಳು, ಕಲ್ಲುಮರಗಳನ್ನೂ, ಉಗುರುಗಳನ್ನೂ ಆಯುಧವಾಗಿ ಮಾಡಿಕೊಂಡು, ಗುಂಪುಗುಂಪಾಗಿ ರಾಕ್ಷಸಸೈನ್ಯದ ಮೇಲೆ, ಬಿದ್ದುವು. ಇದನ್ನು ನೋಡಿ ರಾಕ್ಷಸರೂ ಕೂಡ, ತೀಕ್ಷ್ಣಬಾಣ ಗಳನ್ನೂ, ಕತ್ತಿಗಳನ್ನೂ, ಶಕ್ತಿತೋಮರಗಳನ್ನೂ ಹಿಡಿದು, ಕಪಿಸೈನ್ಯ ವನ್ನು ಕೊಲ್ಲುವುದಕ್ಕೆ ಬಂದರು. ವಾನರರಾಕ್ಷಸರಿಬ್ಬರಿಗೂ ದೊಡ್ಡ ತುಮುಲ ಯುದ್ಧವು ನಡೆಯಿತು. ಲಂಕೆಯ ನಾನಾಭಾಗದಲ್ಲಿಯೂ ಪ್ರತಿಧ್ವನಿಸು ವಂತೆ ಮಹಾ ಧ್ವನಿಯು ಹೊರಟಿತು. ಬಗೆಬಗೆಯ ಶಸ್ತ್ರದಿಂದಲೂ ತೀಕ್ಷ್ಣ ಗಳಾದ ಬಾಣಗಳಿಂದಲೂ, ವೃಕ್ಷಗಳಿಂದಲೂ, ಭಯಂಕರಗಳಾದ ಪರ್ವತ ಶಿಖರಗಳಿಂದಲೂ, ಆಕಾಶವೆಲ್ಲವೂ ಮರೆಸಿದಂತಾಯಿತು. ವಿಕೃತವಾಗಿಯೂ ಭಯಂಕರವಾಗಿಯೂ, ಇರುವ ಮುಖದಿಂದಲೂ, ತೋಳುಗಳಿಂದಲೂ ಕೂಡಿದ ಅನೇಕ ರಾಕ್ಷಸರು ವಾನರರ ಮೈಮೇಲೆ ಶಸ್ತ್ರಗಳನ್ನು ಪ್ರಯೋಗಿಸಿ, ಮಹಾಭಯವನ್ನುಂಟುಮಾಡುತ್ತಿದ್ದರು. ಹಾಗೆಯೇ ವಾನರರೂ, ದೊಡ್ಡ ದೊಡ್ಡ ಶಾಖೆಗಳುಳ್ಳ ವೃಕ್ಷಗಳಿಂದಲೂ, ಪರ್ವತಗಳಿಂದಲೂ ರಾಕ್ಷಸ ಪ್ರಮುಖರನ್ನು ಬಡಿದು ಕೊಲ್ಲುತ್ತ ಬಂದರು. ಮಹಾಬಾಹುವುಳ್ಳವರಾ

ಗಿಯೂ, ದೊಡ್ಡ ದೇಹವುಳ್ಳವರಾಗಿಯೂ ಇದ್ದ ವಾನರ ಭಲ್ಲೂಕಸೈನಿಕರು ಹೀಗೆ ಕಂಡ ಕಂಡ ಕಡೆಯಲ್ಲಿ ರಾಕ್ಷಸರನ್ನು ಕೊಲ್ಲುತ್ತಬರಲು, ಆಗ ರಾಕ್ಷಸರ ಮನಸ್ಸಿಗೆ ಭಯವು ತೋರಿತು. ಹೀಗೆ ರಾಕ್ಷಸಸೈನ್ಯವು ಶತ್ರುಗಳಿಂದ ಪೀಡಿತವಾದ ಸಂಗತಿಯು ಅತ್ತಲಾಗಿ ಶತ್ರುದುರ್ಜಯನಾದ ಇಂದ್ರಜಿತ್ತಿನ ಕಿವಿಗೂ ಮುಟ್ಟಿತು. ಇದನ್ನು ಕೇಳಿದೊಡನೆ ರಾವಣಪುತ್ರನು, ತನ್ನ ಹೋಮ ಕಾರ್ಯವನ್ನು ಅರ್ಧದಲ್ಲಿಯೇ ನಿಲ್ಲಿಸಿ, ತನ್ನ ನಿಯಮವನ್ನು ಬಿಟ್ಟು ಮೇಲೆದ್ದನು. ಹೀಗೆ ಇಂದ್ರಜಿತ್ತು ಅತ್ಯಂತಕೋಪಾವಿಷ್ಟನಾಗಿ ದಟ್ಟವಾಗಿ ಬೆಳೆದ ವೃಕ್ಷಗಳಿಂದ ಕತ್ತಲೆಕವಿದಂತಿದ್ದ ದಾರಿಯಿಂದ ಕೆಲವು ರಾಕ್ಷಸರೊಡನೆ ಹೊರಟುಬಂದು, ಮೊದಲೇ ಸಮಸ್ತಾಯುಧಗಳಿಂದ ತುಂಬಿ ಕುದುರೆಗಳನ್ನು ಹೂಡಿ ಸಿದ್ಧವಾಗಿದ್ದ ರಥವನ್ನೇರಿದನು. ಕಾಲಮೇಘದಂತೆ ಕಪ್ಪುಮೈಯುಳ್ಳವನಾದ ಆ ರಾವಣಪುತ್ರನು ಭಯಂಕರವಾದ ಬಿಲ್ಲನ್ನು ಕೈಯಲ್ಲಿ ಹಿಡಿದು, ಕೋಪದಿಂದ ಕೆಂಪೇರಿದ ಕಣ್ಣುಗಳಿಂದಲೂ, ಮುಖದಿಂದಲೂ ಕೂಡಿ ಕಾಲಾಂತಕನಂತೆ ಕಾಣುತ್ತಿದ್ದನು. ಇಂದ್ರಜಿತ್ತು ರಥವನ್ನೇರಿದುದನ್ನು ಕಂಡೊಡನೆ, ರಾಕ್ಷಸಸೇನೆಯೆಲ್ಲವೂ ತಮಗಿದ್ದ ಭಯವನ್ನು ಬಿಟ್ಟು ಲಕ್ಷ್ಮಣನೊಡನೆ ಯುದ್ಧಮಾಡುವ ಕುತೂಹಲದಿಂದ ಅವನ ರಥವನ್ನು ಸುತ್ತಿನಿಂತಿತು. ಅಷ್ಟರಲ್ಲಿ ಹನುಮಂತನು, ಇತರರಿಂದ ತಡೆಯಲಸಾಧ್ಯವಾದ ಒಂದು ದೊಡ್ಡ ವೃಕ್ಷವನ್ನೆತ್ತಿಕೊಂಡು, ತನ್ನ ದೇಹವನ್ನು ಪರ್ವತದಂತೆ ಬೆಳೆಸಿ, ಉರಿಯುವ ಕಾಲಾಗ್ನಿಯಂತೆ ಕಾಣುತ್ತ, ಆ ರಾಕ್ಷಸ ಸೈನ್ಯವನ್ನು ವೃಕ್ಷಗಳಿಂದ ಬಡಿದು, ಅಲ್ಲಲ್ಲಿನ ಸೈನಿಕರಿಗೆ ಪ್ರಜ್ಞೆಯಿಲ್ಲದಂತೆ ಮಾಡುತ್ತಿದ್ದನು. ಹೀಗೆ ಹನುಮಂತನು ರಾಕ್ಷಸಸೈನ್ಯವನ್ನು ತುಂಡತುಂಡವಾಗಿ ಕೊಲ್ಲುತ್ತ ಬರುವುದನ್ನು ಕಂಡು, ರಾಕ್ಷಸರೆಲ್ಲರೂ ಏಕಕಾಲದಲ್ಲಿ ಆತನಮೇಲೆ ತಮ್ಮ ತಮ್ಮ ಕೈಯಲ್ಲಿದ್ದ ಶಸ್ತ್ರಗಳನ್ನು ಬೀಸುವುದಕ್ಕೆ ತೊಡಗಿದರು. ತೀಕ್ಷ್ಣ ಶೂಲವನ್ನು ಹಿಡಿದವರು ಶೂಲಗಳಿಂದ ತಿವಿದರು. ಖಡ್ಗಧಾರಿಗಳು ಕತ್ತಿಯಿಂದ ಹೊಡೆದರು. ಶಕ್ತ್ಯಾಯುಧವನ್ನು ಹಿಡಿದವರು, ಆ ಶಕ್ತಿಗಳಿಂದ ಹೊಡೆದರು. ಪಟ್ಟಸಧಾರಿಗಳು ಪಟ್ಟಸಗಳನ್ನು ಬೀಸಿದರು! ಹಾಗೆಯೇ ಕೆಲವರು ಪರಿಘಗಳಿಂದಲೂ, ಕೆಲವರು ಕಾಂತಿವಿಶಿಷ್ಟಗಳಾದ ಗದೆಗಳಿಂದಲೂ, ಕೆಲವರು ನೂರೇಣುಗಳುಳ್ಳ ಶತಘ್ನಿಗಳಿಂದಲೂ, ಕೆಲವರು ಉಕ್ಕಿನ ಮುದ್ಗರಗಳಿಂದಲೂ, ಕೆಲವರು

ಭಯಂಕರಗಳಾದ ಗಂಡುಗೊಡಲಿಗಳಿಂದಲೂ, ಕೆಲವರು ಭಿಂಡಿವಾಲ ಗಳಿಂದಲೂ, ಹನುಮಂತನನ್ನು ಪ್ರಹರಿಸಿದರು. ಕೆಲವರು ವಜ್ರಮುಷ್ಟಿ ಗಳಿಂದಲೂ, ಕೆಲವರು ಸಿಡಿಲಿನಂತೆ ವೇಗವುಳ್ಳ ಅಂಗೈಗಳಿಂದಲೂ ಪ್ರಹ ರಿಸಿದರು. ಹೀಗೆ ರಾಕ್ಷಸರೆಲ್ಲರೂ ಸೇರಿ ಪರ್ವತಾಕಾರವುಳ್ಳ ಹನುಮಂತ ನನ್ನು ಸುತ್ತಿಮುತ್ತಿ ಪ್ರಹರಿಸುತ್ತಿದ್ದರೂ, ಹನುಮಂತನು ಸ್ವಲ್ಪಮಾತ್ರವೂ ಧೈರ್ಯಗುಂದದೆ, ಅವರೆಲ್ಲರನ್ನೂ ತನ್ನ ಶಕ್ತಿಯಿಂದ ನಿವಾರಿಸಿ ಮಹಾ ಯುದ್ಧವನ್ನು ನಡೆಸಿದನು. ಹೀಗೆ ವಾಯುಪುತ್ರನಾದ ಆ ಹನುಮಂತನು ಅನೇಕ ರಾಕ್ಷಸರನ್ನು ಕೊಲ್ಲುತ್ತಿರಲು, ಇದನ್ನು ನೋಡಿ ಇಂದ್ರಜಿತ್ತಿಗೆ ಸಹಿಸಲಾರದ ಕೋಪವುಂಟಾಯಿತು. ಆಗ ಇಂದ್ರಜಿತ್ತು ತನ್ನ ಸಾರಥಿ ಯನ್ನು ನೋಡಿ, "ಎಲೆ ಸೂತನೆ! ಅದೋ ಆ ಮಹಾಕಪಿಯಿರುವ ಕಡೆಗೆ ರಥವನ್ನು ನಡೆಸು! ಇನ್ನು ನಾವು ಉಪೇಕ್ಷಿಸಿ ತಡಮಾಡಿದ ಪಕ್ಷ ದಲ್ಲಿ ಆ ವಾನರನು ನಮ್ಮ ರಾಕ್ಷಸರ ಹುಟ್ಟೇ ಇಲ್ಲದಂತೆ ನಿಶ್ಶೇಷವಾಗಿ ಕೊಂದು ಬಿಡುವನು" ಎಂದನು. ಅದರಂತೆಯೇ ಸಾರಥಿಯು ರಥವನ್ನು ನಡೆಸಿ ಇಂದ್ರ ಜಿತ್ತನ್ನು ಹನುಮಂತನಿದ್ದ ಕಡೆಗೆ ತಂದು ಬಿಟ್ಟನು. ಹನುಮಂತನನ್ನು ಸಮೀಪಿಸಿದೊಡನೆ ಇಂದ್ರಜಿತ್ತು, ಅವನ ತಲೆಯಮೇಲೆ ತೀಕ್ಷ್ಣಬಾಣ ಗಳನ್ನೂ, ಕತ್ತಿಗಳನ್ನೂ, ಪಟ್ಟಸಗಳನ್ನೂ, ಗಂಡುಗೊಡಲಿಗಳನ್ನೂ ವರ್ಷಿ ಸಿದನು. ಹನುಮಂತನು ಆ ಆಯುಧಪ್ರಹಾರಗಳೆಲ್ಲವನ್ನೂ ಧೈರ್ಯದಿಂದ ತಡೆದುಗೊಂಡು, ರೋಷಾವೇಶದಿಂದ ಇಂದ್ರಜಿತ್ತನ್ನು ಕುರಿತು, ಎಲೆ ದುರಾತ್ಮಾ! ನೀನೇ ಅಲ್ಲವೇ ರಾವಣನ ಮಗನು! ಹಾಗಿದ್ದರೆ ಬಾ! ನೀನು ಹೇಡಿಯಲ್ಲದೆ ಶೂರನಾಗಿದ್ದರೆ ನನ್ನೊಡನೆ ನಿಂತು, ಯುದ್ಧವನ್ನು ಕೊಡು! ವಾಯುಪುತ್ರನಾದ ಹನುಮಂತನ ಕಣ್ಣಿಗೆ ಬಿದ್ದಮೇಲೆ ನೀನು ಬದುಕಿಹೋಗುವುದೆಂದರೇನು? ಎಲೆ ನೀಚಾ! ನಿನಗೆ ನನ್ನೊಡನೆ ದ್ವಂದ್ವ ಯುದ್ಧಮಾಡುವ ಧೈರ್ಯವಿದ್ದರೆ, ಬಾಣಗಳನ್ನು ಮುಟ್ಟದೆ ಬಾಹುಯುದ್ಧ ವನ್ನು ಮಾಡು. ನೋಡುವೆನು. ನನ್ನ ಒಂದೆರಡು ಪ್ರಹಾರವನ್ನಾದರೂ ನೋಡು! ನನ್ನ ಒಂದು ಪ್ರಹಾರವನ್ನುಮಾತ್ರ ತಡೆದುಕೊಂಡರೆ ಆಗ ನೀನು ರಾಕ್ಷಸೋತ್ತಮನೇ ಹೌದು?" ಎಂದನು. ಇಷ್ಟರಲ್ಲಿ ವಿಭೀಷಣನು, ಇಂದ್ರ ಜಿತ್ತು ಬಿಲ್ಲನ್ನು ಹಿಡಿದು ಸಂಚರಿಸಿದ ಸಂಚನ್ನು ನೋಡಿ, ಅವನು ಹನು ಮಂತನನ್ನು ಕೊಲ್ಲುವ ಪ್ರಯತ್ನದಲ್ಲಿರುವುದನ್ನು ತಿಳಿದು, ಆ ವಿಷಯ

ವನ್ನು ಲಕ್ಷ್ಮಣನಿಗೆ ತಿಳಿಸುವುದಕ್ಕಾಗಿ ಅವನನ್ನು ಕುರಿತು, "ಎಲೆ ರಾಜಕುಮಾರನೆ! ಇನ್ನು ನೀನು ಉಪೇಕ್ಷಿಸಬಾರದು. ಅದೋ ಇಂದ್ರನನ್ನು ಜಯಿಸಿ ಪ್ರಖ್ಯಾತನಾದ ಆ ರಾವಣಪುತ್ರನು, ರಥವನ್ನೇರಿ ಹನುಮಂತನನ್ನು ಕೊಲ್ಲುವುದಕ್ಕಾಗಿ ನಿರೀಕ್ಷಿಸುತ್ತಿರುವನು. ಇನ್ನು ತಡಮಾಡಬೇಡ. ಕರವೀರಪತ್ರಗಳೇ ಮೊದಲಾದ ನಾನಾವಿಧಸನ್ನಿವೇಶಗಳಿಂದ ಕೂಡಿ, ಶತ್ರುಗಳ ಮರ್ಮವನ್ನು ಭೇದಿಸಿ, ಒಂದೇ ಸಲಕ್ಕೆ ಅವನ ಪ್ರಾಣವನ್ನು ಕೊನೆಗಾಣಿಸತಕ್ಕ ಘೋರಬಾಣಗಳನ್ನು ಬಿಟ್ಟು ಇಂದ್ರಜಿತ್ತನ್ನು ಕೊಂದುಬಿಡು" ಎಂದನು. ಮಹಾತ್ಮನಾದ ಲಕ್ಷ್ಮಣನು ಶತ್ರುಭಯಂಕರನಾದ ವಿಭೀಷಣನ ಮಾತನ್ನು ಕೇಳಿ ಅವನ ಮಾತಿನಂತೆಯೇ ಧನುರ್ಧಾರಿಯಾಗಿ ಮುಂದೆ ಬಂದು, ಅಲ್ಲಿ ಪರ್ವತಾಕಾರವುಳ್ಳವನಾಗಿಯೂ, ಭಯಂಕರ ಬಲವುಳ್ಳವನಾಗಿಯೂ ಇದ್ದ ಇಂದ್ರಜಿತ್ತು ರಥವನ್ನೇರಿ ಯುದ್ದಸನ್ನದ್ಧನಾಗಿ ನಿಂತು ಆಗಾಗ ಸಿಂಹನಾದ ಮಾಡುತ್ತಿರುವುದನ್ನು ಕಂಡನು.

ಇಲ್ಲಿಗೆ ಎಂಬತ್ತಾರನೆಯ ಸರ್ಗವು.

ವಿಭೀಷಣನು ಲಕ್ಷ್ಮಣನಿಗೆ ನಿಕುಂಭಿಲೆಯೆಂಬ ನ್ಯಗ್ರೋಧ ಮೂಲವನ್ನು ತೋರಿಸಿ, ಇಂದ್ರಜಿತ್ತು ಆ ಸ್ಥಳಕ್ಕೆ ಬರುವುದಕ್ಕೆ ಮೊದಲೇ ಅವನನ್ನು ಕೊಲ್ಲಬೇಕೆಂದು ಹೇಳಿದುದು. ಈ ಮರ್ಮಗಳನ್ನು ಲಕ್ಷ್ಮಣನಿಗೆ ತಿಳಿಸಿದುದಕ್ಕಾಗಿ ಇಂದ್ರಜಿತ್ತು ವಿಭೀಷಣನನ್ನು ನಿಂದಿಸಿದುದು. ವಿಭೀಷಣನ ಪ್ರತ್ಯುತ್ತರವು.

ವಿಭೀಷಣನು ಲಕ್ಷ್ಮಣನಿಗೆ ಹೀಗೆಂದು ಹೇಳಿ, ಆ ಲಕ್ಷ್ಮಣನು ತನ್ನ ಮಾತಿನಂತೆ ಸಿದ್ಧವಾಗಿರುವುದನ್ನು ನೋಡಿ

ಸಂತೋಷಿಸುತ್ತ, ಧನುರ್ಧಾರಿಯಾಗಿದ್ದ ಆ ಲಕ್ಷ್ಮಣನನ್ನು ಕರೆದು ಕೊಂಡು ತೀವ್ರಗತಿಯಿಂದ ಬಂದನು. ಹೀಗೆ ಸ್ವಲ್ಪದೂರದವರೆಗೆ ಹೋಗಿ, ಒಂದು ಮಹಾವನವನ್ನು ಪ್ರವೇಶಿಸಿ, ಅದರ ನಡುವೆ ಇಂದ್ರಜಿತ್ತು ಹೋಮಮಾಡುತ್ತಿದ್ದ ಸ್ಥಾನಕ್ಕೆ ಲಕ್ಷ್ಮಣನನ್ನು ಕರೆತಂದನು. ಮತ್ತು ಅಲ್ಲಿ ಕಾಳಮೇಘದಂತೆ ಕಪ್ಪಾಗಿ ಭಯಂಕರವಾಗಿದ್ದ ನಿಕುಂಭಿಲೆಯೆಂಬ ಆಲದ ಮರವನ್ನು ತೋರಿಸಿ "ಲಕ್ಷ್ಮಣಾ! ಇದೋ ಈ ಸ್ಥಳ ದಲ್ಲಿಯೇ ಬಲಾಢ್ಯನಾದ ಇಂದ್ರಜಿತ್ತು ಭೂತಗಳಿಗೆ ಬಲಿಯನ್ನು ಕೊಟ್ಟು ಆಮೇಲೆ ಯುದ್ಧಕ್ಕೆ ಬರುವನು. ಇವನು ಆ ಕಾರ್ಯವನ್ನು ನಡೆಸಿ ಯುದ್ಧಕ್ಕೆ ಬಂದರೆ, ಸಮಸ್ತಭೂತಗಳಿಗೂ ಅಗೋಚರನಾಗಿ ಶತ್ರು ಗಳನ್ನು ಕೊಲ್ಲುವನು! ಉತ್ತಮಬಾಣಗಳಿಂದ ಬಂಧಿಸಿಯೂ ಬಂಧಿ ಸುವನು. ಆದರೆ ಆ ಇಂದ್ರಜಿತ್ತು ನ್ಯಗ್ರೋಧವೃಕ್ಷದ ಬುಡವನ್ನು ಸೇರಿದ ಮೇಲೆಯೇ, ತನ್ನ ರಥದೊಡನೆಯೂ, ರಥಾಶ್ವಗಳೊಡನೆಯೂ, ಸಾರಥಿ ಯೊಡನೆಯೂ ಅದೃಶ್ಯನಾಗಿಬಿಡುವನಾದುದರಿಂದ, ಅವನು ಆ ಸ್ಥಳವನ್ನು ಮುಟ್ಟುವುದಕ್ಕೆ ಮೊದಲೇ ನೀನು ನಿನ್ನ ತೀಕ್ಷ್ಣಬಾಣಗಳಿಂದ ಅವ ನನ್ನೂ, ಅವನ ರಥ ರಥಾಶ್ವ ಸಾರಥಿಗಳನ್ನೂ ಧ್ವಂಸಮಾಡಬೇಕು" ಎಂದನು. ಇದನ್ನು ಕೇಳಿ ಲಕ್ಷ್ಮಣನು, "ಎಲೆ ಸೌಮ್ಯನೆ! ಹಾಗೆಯೇ ಆಗಲಿ" ಎಂದು ಹೇಳಿ ಮಿತ್ರನಾದ ವಿಭೀಷಣನ ಮಾತನ್ನನುಮೋದಿಸಿ ವಿಚಿತ್ರವಾದ ಧನುಷ್ಟಂಕಾರ ಧ್ವನಿಯನ್ನು ಮಾಡುತ್ತ ಎಚ್ಚರದಿಂದ ನಿರೀಕ್ಷಿಸುತ್ತಿದ್ದನು. ಇಷ್ಟರಲ್ಲಿ ಮಹಾ ಬಲಾಢ್ಯನಾದ ಇಂದ್ರಜಿತ್ತೂ ಕೂಡ, ಯುದ್ಧಕವಚವನ್ನು ತೊಟ್ಟು, ಬಿಲ್ಲನ್ನು ಹಿಡಿದು ಅಗ್ನಿ ಯಂತೆ ಬೆಳಗುತ್ತಿದ್ದ ಧ್ವಜಾಲಂಕೃತವಾದ ರಥವನ್ನೇರಿ ಲಕ್ಷ್ಮಣನಿಗಿದಿ ರಾದನು. ಇದುವರೆಗೆ ಯಾವ ಯುದ್ಧದಲ್ಲಿಯೂ ಪರಾಜಯವೆಂಬುದನ್ನೇ ಕಂಡರಿಯದ ಇಂದ್ರಜಿತ್ತು ತನಗಿದಿರಾಗಿ ಬರುವುದನ್ನು ನೋಡಿ ಲಕ್ಷ್ಮ ಣನು, ಅವನನ್ನು ಕುರಿತು, 'ಎಲೆ ರಾಕ್ಷಸಾ! ಇದೋ! ನಾನು ನಿನ್ನನ್ನು ಯುದ್ಧಕ್ಕಾಗಿ ಕರೆಯುತ್ತಿರುವೆನು. ಮೋಸವಿಲ್ಲದೆ ಸರಿಯಾಗಿ ನನ್ನೊಡನೆ ಯುದ್ಧವನ್ನು ನಡೆಸು" ಎಂದನು. ಇದನ್ನು ಕೇಳಿ ಇಂದ್ರಜಿತ್ತು, ಲಕ್ಷ್ಮಣನು ಹೀಗೆ ಧೈರ್ಯದಿಂದ ಯುದ್ಧಕ್ಕೆ ಕರೆಯುವುದನ್ನೂ, ವಿಭೀಷ ಣನು ಅವನಿಗೆ ಬೆಂಬಲವಾಗಿ ನಿಂತಿರುವುದನ್ನೂ ನೋಡಿ ಸಹಿಸಲಾರದೆ,

ಪರುಷವಾಕ್ಯದಿಂದ ವಿಭೀಷಣನನ್ನು ಕುರಿತು, "ವಿಭೀಷಣಾ! ನೀನು ಬಾಲ್ಯದಿಂದಲೂ ಈ ಲಂಕೆಯಲ್ಲಿಯೇ ಹುಟ್ಟಿ ಬೆಳೆದವನು. ನನ್ನ ತಂದೆಗೆ ಪ್ರಿಯಸಹೋದರನು. ನನಗೆ ಚಿಕ್ಕಪ್ಪನು. ನೀನು ನನಗೆ ತಂದೆಯಂತಿದ್ದರೂ, ಪುತ್ರನಾದ ನನ್ನ ವಿಷಯದಲ್ಲಿಯೇ ಈ ರಾಕ್ಷಸಜಾತಿಯಲ್ಲಿ ಹುಟ್ಟಿದ ನಿನಗೆ ಸ್ವಲ್ಪವಾದರೂ ಸ್ವಜಾತ್ಯಭಿಮಾನವು ಬೇಡವೆ? ಎಲೆ ದುರಾತ್ಮಾ! ಧರ್ಮದೂಷಣಾ! ಬಂಧುತ್ವವಾಗಲಿ, ಸ್ನೇಹವಾಗಲಿ, ಕುಲವಾಗಲಿ, ಒಡಹುಟ್ಟಿದ ಮರುಕವಾಗಲಿ, ಕುಲಧರ್ಮವಾಗಲಿ, ನೀತಿಯಾಗಲಿ, ಯಾವುದೂ ನಿನಗೆ ಪ್ರಮಾಣವಲ್ಲದೆ ಹೋಯಿತೇ? ಅಯ್ಯೋ ಪಾಪಿ! ಕುಲದ್ರೋಹಿಯಾದ ನಿನ್ನ ದುರ್ಬುದ್ಧಿಗಾಗಿ ಎಷ್ಟು ಸಂಕಟಪಟ್ಟರೂ ತೀರದು! ಸ್ವಜನವನ್ನು ತೊರೆದು ಶತ್ರುಗಳಿಗೆ ಭೃತ್ಯನಾದೆಯಲ್ಲಾ? ಸಾಧುಗಳು ನಿನ್ನನ್ನು ನಿಂದಿಸದೆ ಬಿಡುವರೆ! ಅಯ್ಯೋ ಅವಿವೇಕೀ! ಸ್ವಜನರ ಸಹವಾಸವೆಲ್ಲಿ? ನೀನಾಗಿ ಹೋಗಿ ನೀಚರಾದ ಶತ್ರುಗಳನ್ನು ಸೇರಿ ಬದುಕುವುದೆಲ್ಲಿ? ಇವೆರಡಕ್ಕೂ ಎಷ್ಟೋ ತಾರತಮ್ಯವುಂಟು! ನಿನ್ನ ಬುದ್ಧಿಯು ಕೇವಲ ತುಚ್ಛವಾದುದರಿಂದಲೇ ಇದು ನಿನಗೆ ತಿಳಿಯದೆ ಹೋಯಿತು! ಒಂದುವೇಳೆ ಸ್ವಜನರಿಗಿಂತಲೂ, ಶತ್ರುಗಳೇ ಗುಣಾಢ್ಯರಾಗಿರಲಿ! ಗುಣಹೀನರಾಗಿದ್ದರೂ ತಮ್ಮವರೇ ಮೇಲು! ಎಂದಿದ್ದರೂ ಹೆರವರು ಹೆರವರೇ ಹೊರತು ತಮ್ಮವರೆನಿಸುವುದಿಲ್ಲ! ಯಾವನು ಸ್ವಪಕ್ಷವನ್ನು ಬಿಟ್ಟು ಪರಪಕ್ಷವನ್ನು ಸೇರುವನೋ, ಅವನು ಸ್ವಪಕ್ಷವು ನಾಶಹೊಂದಿದ ಮೇಲಾದರೂ ತಾನು ಹೋಗಿ ಸೇರಿದ ಪರಪಕ್ಷದವರಿಂದಲೇ ಹತನಾಗುವನು. ಎಲೆ ದುರಾತ್ಮಾ! ಎಲೆ ಕುಲಾಧಮಾ! ನಾನು ನಿಜವಾದ ತತ್ತ್ವವನ್ನು ತಿಳಿಸುವೆನು ಕೇಳು? ರಾಮನು ಬಹಳ ತಂತ್ರಿಯಾದುದರಿಂದ ನಮ್ಮನ್ನು ಕೊಲ್ಲುವುದಕ್ಕೆ ಬೇಕಾದ ಉಪಾಯಗಳನ್ನೆಲ್ಲಾ ನಿನ್ನಿಂದ ಕೇಳಿ ತಿಳಿದುಕೊಳ್ಳುವುದಕ್ಕಾಗಿ ನಿನ್ನಲ್ಲಿ ಬಂಧುಭಾವನನ್ನು ತೋರಿಸಿ ಒಳಹಾಕಿಕೊಂಡಿರುವನು. ಆದರೇನು? ಯುದ್ಧದಲ್ಲಿ ತನಗೆ ಜಯವು ಕೈಗೂಡಿಬಂದರೆ, ಮೊದಲು ನಮ್ಮನ್ನು ಕೊಂದು, ಆಮೇಲೆ ನಿನ್ನನ್ನೂ ಕೊಲ್ಲದೆ ಬಿಡಲಾರನು. ಇದರ ಮೇಲೆ ನೀನು ರಾವಣನಿಗೆ ಸಾಕ್ಷಾತ್ಸಹೋದರನೆನಿಸಿರುವುದರಿಂದ ಅವನಿಗೆ ಶತ್ರುವೇ ಹೊರತು ಮಿತ್ರನಲ್ಲ. ಎಲೆ ಪಾಪಿ! ಎಲೆ ಘಾತುಕಾ! ನಿನ್ನ ಕಟುಕತನವನ್ನು ನಾನೇನೆಂದು ಹೇಳಲಿ? ನನ್ನ ಕಾರ್ಯಸಿದ್ಧಿಯನ್ನು ಕೆಡಿಸುವ

ದಕ್ಕಾಗಿ, ನನ್ನ ಶತ್ರುಗಳನ್ನು ಕರೆದು ಈ ಸ್ಥಳವನ್ನು ತೋರಿಸಿದೆ ಯಲ್ಲವೆ ? ನೀನೊಬ್ಬನು ಹೊರತು ಬೇರೆ ಯಾವನೂ, ಸ್ವಜನರಲ್ಲಿ ಈ ದ್ರೋಹವನ್ನೆಣಿಸಲಾರನು. ನಿನ್ನೊಬ್ಬನಿಗೆ ಹೊರತು ಬೇರೆ ಯಾರಿಗೂ ಇಂತಹ ಕ್ರೂರಕಾರ್ಯಕ್ಕೆ ಮನಸ್ಸು ಹುಟ್ಟದು" ಎಂದನು. ಇಂದ್ರಜಿತ್ತು ಹೀಗೆ ಪರುಷವಾಕ್ಯಗಳಿಂದ ತನ್ನನ್ನು ಧಿಕ್ಕರಿಸುವುದನ್ನು ನೋಡಿ, ವಿಭೀ ಷಣನು ಅವನ ಮಾತಿಗೆ ಪ್ರತ್ಯುತ್ತರವನ್ನು ಹೇಳುತ್ತ "ನೀನು ನನ್ನ ಸ್ವಭಾವವನ್ನು ಚೆನ್ನಾಗಿ ತಿಳಿದೂ ತಿಳಿಯದವನ ಹಾಗೆ ವ್ಯರ್ಥವಾಗಿ ಹೀಗೇಕೆ ಬೊಗಳುವೆ? ನಾನು ನಿನಗೆ ಚಿಕ್ಕತಂದೆಯಾಗಿರುವಾಗಲೂ, ಸ್ವಲ್ಪ ವಾದರೂ ಗೌರವವನ್ನು ತೋರಿಸದೆ ಹೀಗೆ ನುಡಿಯುವೆಯಲ್ಲಾ ! ಹೀಗೆ ಕ್ರೂರವಾಕ್ಯವನ್ನು ನುಡಿಯಬಾರದು. ನಾನು ರಾಕ್ಷಸ ಕುಲದಲ್ಲಿ ಹುಟ್ಟಿ ದರೂ ಇತರ ರಾಕ್ಷಸರಂತೆ ನನ್ನ ಸ್ವಭಾವವು ಕ್ರೂರವಲ್ಲ ! ಶೀಲ ವೆಂಬುದೇ ಮನುಷ್ಯನಿಗೆ ಪ್ರಧಾನವಾದ ಗುಣವು. ನನಗೆ ಕ್ರೂರಕಾರ್ಯ ವನ್ನು ಮಾಡುವದಕ್ಕಾಗಲಿ, ಅಧರ್ಮದಲ್ಲಿ ವರ್ತಿಸುವುದಕ್ಕಾಗಲಿ ಬುದ್ಧಿಯು ಹುಟ್ಟದು. ಇತರ ರಾಕ್ಷಸರಂತೆ ನಾನು ಅಧರ್ಮದಿಂದಲೂ, ಪರಹಿಂಸೆ ಯಿಂದಲೂ ವಿನೋದಿಸತಕ್ಕವನಲ್ಲ. ಹೀಗೆ ನನ್ನ ನಿಮ್ಮ ಸ್ವಭಾವವೇ ಬೇರೆಯಾದುದರಿಂದ ವಿರುದ್ಧಸ್ವಭಾವವುಳ್ಳ ನಿಮ್ಮನ್ನು ನಾನು ತೊರೆದು ಬರಬೇಕಾಯಿತು. ಇದನ್ನು ನೀನು ದೋಷವೆಂದೆಣಿಸಿದ ಪಕ್ಷದಲ್ಲಿ, ನಿನ್ನ ತಂದೆಯಾದ ರಾವಣನಲ್ಲಿಯೂ ಇದೇ ದೋಷವನ್ನು ಹೇಳಬೇಕಾಗಿರುವುದು. ಅವನ ಸ್ವಭಾವವು ಬೇರೆಯಾದುದರಿಂದಲ್ಲವೇ, ನನ್ನನ್ನು ನಿನ್ನ ತಂದೆಯು, ಒಡಹುಟ್ಟಿದ ಮರುಕವನ್ನೂ ತೋರಿಸದೆ ಛಿ! ಹೋಗೆಂದು ತಿರಸ್ಕರಿಸಿ ನಿರಸ ಮಾಡಿಬಿಟ್ಟನು. ಹಾಗಿಲ್ಲದ ಪಕ್ಷದಲ್ಲಿ ಅವನು ನನ್ನನ್ನು ನಿರಾಕರಿಸುತ್ತಿ ದ್ದನೆ? ನಾನು ರಾವಣನನ್ನು ಬಿಟ್ಟು ಬಂದುದಕ್ಕೆ ಬೇರೊಂದು ಮುಖ್ಯಕಾರಣವನ್ನೂ ಹೇಳುವೆನು ಕೇಳು. ಧರ್ಮವನ್ನತಿಕ್ರಮಿಸುವ ಸ್ವಭಾವ ವುಳ್ಳವನಾಗಿ, ಯಾವಾಗಲೂ ಪಾಪಕಾರ್ಯದಲ್ಲಿಯೇ ನಿಶ್ಚಯವುಳ್ಳ ಪುರು ಷನ ಸಹಾಯದಿಂದ ಇತರರಿಗೂ ಪಾಪವು ಸಂಭವಿಸುವುದು. ಆದು ದರಿಂದ ಯೋಗ್ಯನಾದವನು ಕೈಗೆ ತಾಗಿದ ಸರ್ಪವನ್ನೊದರಿ ತಳ್ಳುವಂತೆ ಅಂತಹ ಪಾಪಬುದ್ಧಿಯುಳ್ಳವನನ್ನು ಆ ಕ್ಷಣವೇ ತ್ಯಜಿಸಿದಲ್ಲದೆ ಸುಖ ವನ್ನು ಹೊಂದನು. ಎಲೆ ಬಾಲಕಾ ! ಪ್ರಾಣಿಹಿಂಸೆ, ಕಳವು, ಪರದಾರ

ಗಮನ, ಈ ದುರಾಚಾರಗಳುಳ್ಳವನನ್ನು ನೋಡಿದಾಗ, ಬೆಂಕಿ ತಗುಲಿದ ಮನೆಯನ್ನು ಬಿಟ್ಟೋಡುವಂತೆ ಆಗಾಗಲೇ ಅವನನ್ನು ತ್ಯಜಿಸಿಬಿಡಬೇಕೆಂದು ಹೇಳುವರು. ಪರಧನವನ್ನಪಹರಿಸುವುದು, ಪರಸ್ತ್ರೀಯರನ್ನು ಮುಟ್ಟುವುದು, ಹಿತೈಷಿಗಳಾದ ಸ್ನೇಹಿತರ ವಿಷಯದಲ್ಲಿ ಸಂದೇಹಪಡುವುದು, ಈ ಮೂರು ದೋಷಗಳೂ ಮನುಷ್ಯನನ್ನು ನಿರ್ಮೂಲವಾಗಿ ಕೆಡಿಸಿ ಬಿಡುವುದು. ಒಂದುವೇಳೆ ನೀನು ನಿನ್ನ ತಂದೆಯಲ್ಲಿ ದೋಷವಿದ್ದರೂ ಗುಣಗಳಿಲ್ಲವೇ ಎಂದು ಕೇಳಬಹುದು. ಯಾವ ಗುಣವಿದ್ದರೇನು? ಅವನಲ್ಲಿರುವ ದೋಷಗಳೆಲ್ಲವೂ ಅತಿಕ್ರೂರಗಳು. ಮಹರ್ಷಿಗಳನ್ನು ಘೋರವಾಗಿ ವಧಿಸುವುದು, ದೇವತೆಗಳನ್ನು ದ್ವೇಷಿಸುವುದು, ಗರ್ವಪಡುವುದು, ದೀರ್ಘಕೋಪವು, ಬದ್ಧವೈರವು, ಪರರ ಶ್ರೇಯಸ್ಸನ್ನು ದ್ವೇಷಿಸುವುದು, ಇವೇ ಮೊದಲಾದ ದೋಷಗಳೆಲ್ಲವೂ, ಐಶ್ವರ್ಯವನ್ನೂ ಕೆಡಿಸುವುವಲ್ಲದೆ, ಮೇಘಗಳು ಮಹಾಪರ್ವತಗಳನ್ನು ಕವಿದು ಮುಚ್ಚುವಂತೆ, ಎಂತಹ ದೊಡ್ಡ ಗುಣಗಳನ್ನಾದರೂ ಹೊರಕ್ಕೆ ಕಾಣಿಸದಂತೆ ಅಡಗಿಸಿ ಬಿಡುವುವು. ನಿನ್ನ ತಂದೆಯೂದ ರಾವಣನಲ್ಲಿ ಈ ದೋಷಗಳೆಲ್ಲ ತುಂಬಿದ್ದುದರಿಂದಲೇ ಒಡಹುಟ್ಟಿದವನಾಗಿದ್ದರೂ ನಾನು ಅವನನ್ನು ಬಿಟ್ಟುಬಂದೆನು. ಎಲೆ ರಾಕ್ಷಸಾ! ಹೆಚ್ಚಾಗಿ ಹೇಳಿದುದರಿಂದೇನು ? ಇನ್ನು ಶೀಘ್ರದಲ್ಲಿಯೇ ಈ ಲಂಕೆಯೂ, ಇಲ್ಲಿನ ರಾಕ್ಷಸರೂ ನಾಶಹೊಂದುವುದರಲ್ಲಿ ಸಂದೇಹವಿಲ್ಲ! ಗರ್ವಿತನಾಗಿಯೂ, ಕೇವಲಬಾಲನಾಗಿಯೂ, ದುಷ್ಟನಾಗಿಯೂ ಇರುವ ನಿನಗೂ ಇನ್ನು ಮೇಲೆ ಉಳಿಗಾಲವಿಲ್ಲ. ನಿನ್ನ ತಂದೆಯೂ ಇನ್ನು ಮೇಲೆ ಬದುಕಲಾರನು. ಈಗ ಮುಖ್ಯವಾಗಿ ಮೊದಲು ನೀನು ಮೃತ್ಯುಪಾಶದಲ್ಲಿ ಸಿಕ್ಕಿಬಿದ್ದಿರುವೆ. ಇಷ್ಟ ಬಂದಹಾಗೆ ಬಾಯಿಗೆ ಬಂದುದನ್ನು ನುಡಿ! ನಿನಗೆ ಮರಣವು ಸಮೀಪಿಸಿರುವಾಗ ಸುಮ್ಮನೆ ನನ್ನನ್ನು ನಿಂದಿಸುವುದರಿಂದ ಪ್ರಯೋಜನವೇನು? ಕೊನೆಗಾಲಕ್ಕೆ ನನ್ನನ್ನು ನಿಂದಿಸಿ, ಸಾಯುವುದೊಂದೇ ಹೊರತು ಇದರಿಂದ ನಿನಗೆ ಕಾರ್ಯಸಾಧನೆಯೇನೂ ಇಲ್ಲವಷ್ಟೆ? ಎಲೆ ರಾಕ್ಷಸಾಧಮಾ! ಇನ್ನು ಆಲದ ಮರದ ಬುಡವನ್ನು ಸೇರುವ ಆಸೆಯೆಲ್ಲಿಯದು? ಕಕುತ್ಸ್ಥಕುಲತಿಲಕರಾದ ಆ ರಾಮಲಕ್ಷ್ಮಣರನ್ನು ಕೆಣಕಿದ ಮೇಲೆ ನೀನು ಬದುಕುವುದೆಂದರೇನು ? ಇದೋ! ಪುರುಷೋತ್ತಮನಾದ ಲಕ್ಷ್ಮಣನು ಯುದ್ಧಸನ್ನದ್ಧನಾಗಿ ಬಂದಿರುವನು.

ಅವನೊಡನೆ ಸರಿಯಾಗಿ ಯುದ್ಧವನ್ನು ಮಾಡು. ಇನ್ನು ಶೀಘ್ರದಲ್ಲಿಯೇ ನೀನು ಹತನಾಗಿ ಯಮಲೋಕವನ್ನು ಸೇರಿ ಅಲ್ಲಿ ಯಮದೂತರಿಗೆ ಭೃತ್ಯನಾಗುವುದರಲ್ಲಿ ಸಂದೇಹವಿಲ್ಲ. ಈಗಲೇ ನಿನ್ನ ಸರ್ವಶಕ್ತಿಯನ್ನೂ ತೋರಿಸಿಬಿಡು ! ನಿನ್ನಲ್ಲಿರುವ ಸಮಸ್ತಾಯುಧಗಳನ್ನೂ ಸರ್ವವಿಧಬಾಣ ಗಳನ್ನೂ ಪ್ರಯೋಗಿಸಿ ತೀರಿಸಿಬಿಡು ! ಏನೇನು ಮಾಡಿದರೂ, ಈಗ ಲಕ್ಷ್ಮಣನ ಬಾಣಗಳಿಗೆ ಸಿಕ್ಕಿದಮೇಲೆ ನೀನಾಗಲಿ ನಿನ್ನ ಸೈನ್ಯವಾ ಗಲಿ ಪ್ರಾಣವನ್ನು ದಕ್ಕಿಸಿಕೊಂಡು ಹಿಂತಿರುಗಿ ಹೋಗುವ ಮಾತು ಸುಳ್ಳು !" ಎಂದನು.

ಇಲ್ಲಿಗೆ ಎಂಬತ್ತೇಳನೆಯ ಸರ್ಗವು.

ಲಕ್ಷ್ಮಣನೂ, ಇಂದ್ರಜಿತ್ತೂ ಪರಸ್ಪರ ವೀರಾಲಾಪಗಳೊಡನೆ
ಒಬ್ಬರ ಮೇಲೊಬ್ಬರು ಬಾಣಗಳನ್ನು ಪ್ರಯೋಗಿಸಿದುದು.

ಇಂದ್ರಜಿತ್ತು ವಿಭೀಷಣನ ಮಾತುಗಳನ್ನು ಕೇಳಿ ಕೋಪಾವಿಷ್ಟ ನಾಗಿ, ಖಡ್ಗಾದ್ಯಾಯುಧಗಳನ್ನು ಹಿಡಿದು, ಸರ್ವಾಲಂಕಾರಭೂಷಿತವಾಗಿ ಕರೀ ಕುದುರೆಗಳ ಮೇಲೆ ಹೂಡಿದ ಒಂದು ಮಹಾರಥವನ್ನೇರಿ ಕುಳಿತು, ವಿಭೀ ಷಣನನ್ನು ಕ್ರೂರವಾಕ್ಯಗಳಿಂದ ಧಿಕ್ಕರಿಸುತ್ತ, ಕಾಲಯಮನಂತೆ ವೇಗ ದಿಂದ ಮುಂದೆ ಹೊರಟನು. ಮತ್ತು ಆಗ ಇಂದ್ರಜಿತ್ತು, ಬಹಳ ದೊಡ್ಡದಾಗಿಯೂ, ಮಹಾವೇಗವುಳ್ಳದಾಗಿಯೂ, ಅತ್ಯಂತ ದೃಢವಾ ಗಿಯೂ, ಭಯಂಕರವಾಗಿಯೂ ಇದ್ದ ತನ್ನ ಧನುಸ್ಸನ್ನು ಹಿಡಿದು, ತೀಕ್ಷ್ಣ ಬಾಣಗಳನ್ನು ಸಂಗ್ರಹಿಸಿಕೊಂಡು, ವಿಭೀಷಣಲಕ್ಷ್ಮಣರಿಗಿದಿರಾಗಿ ಬಂದನು. ಮಹಾ ಧನುರ್ಧಾರಿಯಾದ ಆ ರಾವಣಪುತ್ರನು, ಹೀಗೆ ಸರ್ವಾಲಂಕಾರಭೂಷಿತನಾಗಿ ರಥದಲ್ಲಿ ಕುಳಿತು ಬರುವಷ್ಟರಲ್ಲಿ, ಉದಯ

ಪರ್ವತವನ್ನೇರಿದ ಸೂರ್ಯನಂತೆ ಹನುಮಂತನ ಭುಜದಮೇಲೆ ಕುಳಿತು ಅದ್ಭುತ ತೇಜಸ್ಸಿನಿಂದ ಬೆಳಗುತ್ತಿದ್ದ ರಾಮಾನುಜನಾದ ಲಕ್ಷ್ಮಣ ನನ್ನು ಕಂಡನು. ಆಗ ಇಂದ್ರಜಿತ್ತು ಲಕ್ಷ್ಮಣನನ್ನೂ, ಹನುಮಂತ ನನ್ನೂ ನೋಡಿ ಬೆಜ್ಜರಗೊಂಡು, ಅಲ್ಲಿದ್ದ ಸಮಸ್ತ ವಾನರರೂ ಕೇಳು ವಂತೆ ಅವರನ್ನು ಕುರಿತು, "ಎಲೈ! ಇನ್ನು ನೀವೆಲ್ಲರೂ ನನ್ನ ಪರಾ ಕ್ರಮವನ್ನು ಚೆನ್ನಾಗಿ ನೋಡಬಹುದು! ಇದೋ! ನೀವು ಆಕಾಶ ದಿಂದ ಸುರಿಯುವ ವರ್ಷಧಾರೆಯಂತೆ ಈ ನನ್ನ ಬಿಲ್ಲಿನಿಂದ ಹೊರಡುವ ಬಾಣವರ್ಷವನ್ನು ತಡೆದು ನಿಂತರೆ ಸಾಕು! ಅಗ್ನಿಯು ತೂಲರಾಶಿ ಯನ್ನು ಹೇಗೋಹಾಗೆ, ಈ ನನ್ನ ಬಿಲ್ಲಿನಿಂದ ಹೊರಡುವ ಬಾಣಗಳು ನಿಮ್ಮ ದೇಹಗಳನ್ನು ಕ್ಷಣಮಾತ್ರದಲ್ಲಿ ದಹಿಸಿಬಿಡುವುವು. ಇದೋ! ಈಗಲೇ ನಾನು ನಿಮ್ಮಲ್ಲಿ ಒಬ್ಬೊಬ್ಬರ ದೇಹವನ್ನೂ ನನ್ನ ತೀಕ್ಷ್ಣಬಾಣಗಳಿಂ ದಲೂ, ಶೂಲಗಳಿಂದಲೂ, ಶಕ್ತ್ಯಾಯುಧಗಳಿಂದಲೂ, ಯಷ್ಟಿಗಳಿಂದಲೂ, ತೋಮರಗಳಿಂದಲೂ ಭೇದಿಸಿ, ನಿಮ್ಮನ್ನು ಯಮಲೋಕಕ್ಕೆ ಕಳುಹಿಸು ವೆನು. ಈಗ ನನ್ನ ಹಸ್ತಲಾಘವವನ್ನಾದರೂ ನೋಡಿರಿ! ನಾನು ಮೇಘದಂತೆ ಗರ್ಜಿಸುತ್ತ ಬಾಣವರ್ಷವನ್ನು ಕರೆಯುತ್ತಿದ್ದರೆ, ನನ್ನ ಮುಂದೆ ನಿಲ್ಲುವವನಾವನು? ಹಿಂದೆ ರಾತ್ರಿಯುದ್ಧದಲ್ಲಿಯೇ ನಾನು ರಾಮ ಲಕ್ಷ್ಮಣರೆಂಬ ನಿಮ್ಮಿಬ್ಬರನ್ನೂ ಸಿಡಿಲಿಗೆ ಸಮಾನಗಳಾದ ನನ್ನ ಬಾಣ ಗಳಿಂದ ಮೂರ್ಛಿತರನ್ನಾಗಿ ಮಾಡಿ, ನಿಮ್ಮ ಸಮಸ್ತ ಪರಿವಾರಗಳೊಡನೆ ರಣರಂಗದಲ್ಲಿ ಮಲಗಿಸಿ ಬಂದಿರುವಾಗಲೂ, ತಿರುಗಿ ನೀವು, ಕೋಪ ಗೊಂಡ ಕಾಲಸರ್ಪದಂತಿರುವ ನನ್ನೊಡನೆ ಯುದ್ಧಕ್ಕೆ ಬಂದಿರಾ? ಈ ನಿಮ್ಮ ಪ್ರಯತ್ನವನ್ನು ನೋಡಿದರೆ ಆ ರಾತ್ರಿ ಯುದ್ಧವು ನಿಮಗೆ ಮರೆತುಹೋಯಿತೋ, ಅಥವಾ ನಿಮಗೆ ಮರಣಕಾಲವೇ ಸಮೀಪಿಸಿತೋ ಎಂದು ಸಂದೇಹಿಸಬೇಕಾಗಿದೆ" ಎಂದನು. ಇಂದ್ರಜಿತ್ತು ಹೇಳಿದ ಈ ಪರುಷ ವಾಕ್ಯವನ್ನು ಕೇಳಿ ಲಕ್ಷ್ಮಣನು ಕೋಪಗೊಂಡು, ಅವನನ್ನು ಕುರಿತು, "ನೀನೇನು ಹೇಳಿದೆ? ಓಹೋ! ನಮ್ಮನ್ನು ಯಮಪುರಿಗೆ ಕಳುಹಿಸುವೆಯೂ! ಬಾಯಿಗೆ ಬಂದಂತೆ ಏನೇನೋ ಮಾತುಗಳನ್ನು ಬಗುಳುತ್ತಿರುವೆಯಲ್ಲಾ! ಕೈಯಿಂದ ಕಾರ್ಯವಾಗದಿದ್ದರೂ ನಿನ್ನ ಮನೋರಥಗಳನ್ನೆಲ್ಲಾ ಬಾಯಿ ಮಾತಿನಿಂದಲೇ ಕೊನೆಮುಟ್ಟಿಸುವ ಹಾಗಿದೆ! ನಡೆಸಬೇಕಾದ ಕಾರ್ಯಗಳನ್ನು

ಬಾಯಿಂದಾಡದೆ ಕಾರ್ಯದಲ್ಲಿ ಕೊನೆಮುಟ್ಟಿಸುವವನಲ್ಲವೇ ಬುದ್ಧಿಶಾಲಿಯು! ಎಲೆ ದುರಾತ್ಮಾ! ಯಾವಕಾರ್ಯವೂ ನಿನ್ನಿಂದ ಸಾಗದಿದ್ದರೂ ಎಂತವರಿಗೂ ಸಾಧ್ಯವಲ್ಲದ ಕಾರ್ಯಗಳನ್ನು ಕೂಡ ಬಾಯಿಂದಾಡಿ ಅಷ್ಟು ಮಾತ್ರಕ್ಕೆ ನೀನು ಕೃತಾರ್ಥನೆಂದು ತಿಳಿದುಕೊಂಡಿರುವ ಹಾಗಿದೆ. ಆ ರಾತ್ರಿಯುದ್ಧದಲ್ಲಿ ನೀನು ನಮ್ಮನ್ನು ಜಯಿಸಿಬಿಟ್ಟೆದಾಗಿ ಹೇಳಿದೆಯಷ್ಟೆ? ಎಲೆ ನೀಚಾ! ಆಗ ನೀನು ಕಳ್ಳನಂತೆ ಕಣ್ಮರೆಯಾಗಿ ನಮ್ಮನ್ನು ಮೋಸಮಾಡಿದೆ! ಅದು ವೀರರು ನಡೆಸತಕ್ಕ ದಾರಿಯಲ್ಲ! ಎಲೆ ರಾಕ್ಷಸಾ! ಇದೋ! ಈಗ ನಾನು ನಿನ್ನ ಬಾಣಗಳಿಗೆ ಎದೆಗೊಟ್ಟು ಧೈರ್ಯದಿಂದ ನಿಂತಿರುವಂತೆ ನೀನೂ ನನಗಿದಿರಾಗಿ ನಿಂತು ನಿನ್ನ ವೀರ್ಯವನ್ನು ತೋರಿಸು ನೋಡುವೆನು! ಕೆಲಸಕ್ಕೆ ಬಾರದ ಬರೀ ಮಾತುಗಳಿಂದ ನಿನಗೆ ನೀನೇ ಆತ್ಮ ಸ್ತುತಿಯನ್ನು ಮಾಡಿಕೊಳ್ಳುವುದರಿಂದೇನು?" ಎಂದನು. ಈ ಮಾತನ್ನು ಕೇಳಿದೊಡನೆ ಇಂದ್ರಜಿತ್ತು, ಭಯಂಕರವಾದ ತನ್ನ ಬಿಲ್ಲನ್ನೆಳೆದು, ಲಕ್ಷ್ಮಣನಮೇಲೆ ತೀಕ್ಷ್ಣಬಾಣಗಳನ್ನು ಪ್ರಯೋಗಿಸಿದನು. ಸರ್ಪವಿಷದಂತೆ ಕ್ರೂರವಾಗಿ ಮಹಾವೇಗವುಳ್ಳ ಅನೇಕಬಾಣಗಳು, ಬುಸುಗಟ್ಟುವ ಸರ್ಪಗಳಂತೆ ಹೊರಟು, ಲಕ್ಷ್ಮಣನ ದೇಹವನ್ನು ಭೇದಿಸಿ ನೆಲಕ್ಕೆ ನಾಟಿದುವು. ಲಕ್ಷ್ಮಣನ ಸರ್ವಾವಯವಗಳಲ್ಲಿಯೂ ಬಾಣಗಳು ನಾಟಿ, ಅವನ ಸರ್ವಾಂಗವೂ ರಕ್ತಮಯವಾಯಿತು. ಆಗ ರಕ್ತದಿಂದ ತೊಯ್ದ ಮೈಯುಳ್ಳ ಲಕ್ಷ್ಮಣನು ಹೊಗೆಯಿಲ್ಲದ ಅಗ್ನಿಯಂತೆ ಕಾಣುತ್ತಿದ್ದನು. ಇದನ್ನು ನೋಡಿ ಇಂದ್ರಜಿತ್ತು ತನ್ನ ಪ್ರಯತ್ನವು ಸಫಲವಾಯಿತೆಂಬ ಸಂತೋಷದಿಂದ ದೊಡ್ಡ ಸಿಂಹನಾದವನ್ನು ಮಾಡಿ ಮುಂದಿದ್ದ ಲಕ್ಷ್ಮಣನನ್ನು ಕುರಿತು, "ಲಕ್ಷ್ಮಣಾ! ಮೇಲಾದ ಗರಿಗಳಿಂದ ಕೂಡಿ ಪ್ರಾಣಾಂತಕರಗಳಾದ ಈ ತೀಕ್ಷ್ಣ ಬಾಣಗಳು, ನನ್ನ ಬಿಲ್ಲಿನಿಂದ ಹೊರಟಕೂಡಲೇ ನಿನ್ನ ಪ್ರಾಣಗಳನ್ನು ನೀಗಿಸತಕ್ಕ ಚಮತ್ಕಾರವನ್ನಾದರೂ ನೋಡು! ಇದೋ! ಈಗಲೇ ನನ್ನಿಂದ ಹತನಾದ ನಿನ್ನ ಮೃತದೇಹದ ಮೇಲೆ ಹದ್ದು, ಕಾಗೆ, ನರಿ, ಮುಂತಾದ ಮಾಂಸಾಹಾರಿ ಜಂತುಗಳೆಲ್ಲವೂ ಗುಂಪುಗುಂಪಾಗಿ ಬಂದು ಸೇರಿ ನಿನ್ನ ಮಾಂಸವನ್ನು ಕುಕ್ಕಿ ತಿನ್ನುವುವು. ಎಲೆ ಕ್ಷತ್ರಿಯಾಧಮಾ! ನೀನು ದುರಾತ್ಮ

ನಾದ ಆ ರಾಮನಿಗೆ ಪರಮ ಭಕ್ತನಾದ ಪ್ರಿಯ ಸಹೋದರನಲ್ಲವೆ? ಇರಲಿ! ಇನ್ನು ಕ್ಷಣಮಾತ್ರದಲ್ಲಿಯೇ ಆ ರಾಮನು ನನ್ನಿಂದ ಹತನಾದ ನಿನ್ನನ್ನು ನೋಡಿ ಸಂಕಟಪಟ್ಟು ಸಾಯುವಂತೆ ಮಾಡುವೆನು! ಹರಿದ ಕವಚದಿಂದಲೂ, ಮುರಿದ ಬಿಲ್ಲಿನಿಂದಲೂ ಕೂಡಿದ ತಲೆಯಿಲ್ಲದ ನಿನ್ನ ಮುಂಡವು, ರಣಭೂಮಿಯಲ್ಲಿ ಉರುಳಾಡುವುದನ್ನು ಇನ್ನು ಕ್ಷಣ ಕಾಲದಲ್ಲಿಯೇ ನಿನ್ನಣ್ಣನಾದ ರಾಮನಿಗೆ ತೋರಿಸುವೆನು" ಎಂದನು. ಇಂದ್ರಜಿತ್ತು ಹೇಳಿದ ಈ ಪರುಷವಾಕ್ಯವನ್ನು ಕೇಳಿ ಲಕ್ಷ್ಮಣನು ಅವನನ್ನು ಕುರಿತು ಯುಕ್ತಿಯುಕ್ತವಾದ ಮಾತಿನಿಂದ "ಎಲೆ ದುರಾತ್ಮಾ! ಸಾಕು ಬಾಯಿ ಮುಚ್ಚು! ನೀನು ಕ್ರೂರಕರ್ಮಿಯಾದ ರಾಕ್ಷಸನೆಂಬುವನ್ನು ನಾನು ಬಲ್ಲೆನು! ಈ ವಾಗಾಡಂಬರದಿಂದ ಫಲವಿಲ್ಲ. ನಿನ್ನ ಶಕ್ತಿಯನ್ನು ತೋರಿಸು! ಕಾರ್ಯವನ್ನು ಮಾಡಿ ತೋರಿಸದೆ ನಿನ್ನನ್ನು ನೀನೇ ಹೊಗಳಿಕೊಳ್ಳುವುದರಿಂದ ಫಲವೇನು? ಈ ಬಾಯಿಬಡುಕತನವನ್ನು ನಿಜವೆಂದು ನಂಬುವುದಕ್ಕೆ ತಕ್ಕ ಕಾರ್ಯವನ್ನು ನಿನ್ನ ಕೈಯಿಂದ ಮಾಡಿ ತೋರಿಸು! ಎಲೆ ರಾಕ್ಷಸಾಧಮಾ! ನಿನ್ನಂತೆ ನಾನು ಬಾಯಿಬಡಿಯದೆ, ಕ್ರೂರವಾಕ್ಯವನ್ನಾಡದೆ, ಆತ್ಮಸ್ತುತಿಯನ್ನೂ ಮಾಡಿಕೊಳ್ಳದೆ ನಿನ್ನನ್ನು ಕೊಲ್ಲುವೆನು ನೋಡು" ಎಂದನು. ಲಕ್ಷ್ಮಣನು ಈ ಮಾತುಗಳನ್ನಾಡಿ, ಆಗಲೇ ಮಹಾವೇಗವುಳ್ಳ ಐದು ಬಾಣಗಳನ್ನು ತೆಗೆದು ಬಿಲ್ಲಿನಲ್ಲಿ ಸೇರಿಸಿ ಆಕರ್ಣಾಂತವಾಗಿ ನಾಣನ್ನೆಳೆದು ಇಂದ್ರಜಿತ್ತಿನ ಎದೆಗೆ ಗುರಿಯಿಟ್ಟು ಹೊಡೆದನು. ಮೇಲಾದ ಗರಿಗಳಿಂದ ಕೂಡಿ ಮಹಾವೇಗವುಳ್ಳ ಆ ಬಾಣಗಳು ಸರ್ಪಗಳಂತೆ ಹೊರಟು ಇಂದ್ರಜಿತ್ತಿನ ಎದೆಯಲ್ಲಿ ನಾಟಿ ಸೂರ್ಯಕಿರಣಗಳಂತೆ ಜ್ವಲಿಸುತ್ತಿದ್ದುವು. ಈ ಬಾಣ ಪ್ರಹಾರದಿಂದ ಇಂದ್ರಜಿತ್ತು ಬಹಳ ಕೋಪಾವೇಶವನ್ನು ಹೊಂದಿ ಮೂರು ತೀಕ್ಷ್ಣ ಬಾಣಗಳನ್ನು ವೇಗದಿಂದೆಳೆದು ಲಕ್ಷ್ಮಣನಿಗೆ ಗುರಿಯಿಟ್ಟು ಹೊಡೆದನು. ಆಗ ಲಕ್ಷ್ಮಣನೂ, ಇಂದ್ರಜಿತ್ತೂ, ಒಬ್ಬರನ್ನೊಬ್ಬರು ಜಯಿಸಬೇಕೆಂಬ ಹಟದಿಂದ ನಡೆಸಿದ ಮಹಾಯುದ್ಧವು ಅತಿ ಭಯಂಕರವಾಯಿತು. ಇಬ್ಬರೂ ಬಹಳ ಬಲಾಢ್ಯರು! ಇಬ್ಬರೂ ಬಹಳ ಪರಾಕ್ರಮ ಸಂಪನ್ನರು! ಇಬ್ಬರೂ ಶಸ್ತ್ರಾಸ್ತ್ರವಿಶಾರದರು! ಇಬ್ಬರೂ ಇತರರಿಂದ ಜಯಿಸಲಸಾಧ್ಯವಾದ ಅದ್ಭುತವೀರ್ಯವುಳ್ಳವರು!

ಇಬ್ಬರೂ ಎಣೆಯಿಲ್ಲದ ತೇಜಸ್ಸುಳ್ಳವರು ! ಹೀಗೆ ಸಮಾನಬಲವುಳ್ಳ ಆ ವೀರರಿಬ್ಬರೂ ಆಕಾಶದಲ್ಲಿ ಎರಡು ಗ್ರಹಗಳು ಹೋರಾಡುವಂತೆ ಭಯಂಕರವಾದ ಯುದ್ಧವನ್ನು ನಡೆಸಿದರು. ಎಂತವರಿಗೂ ಯುದ್ಧದಲ್ಲಿ ಇದಿರಿಸಲಸಾಧ್ಯವಾದ ಮಹಾಬಲವುಳ್ಳ ಆ ನರರಾಕ್ಷಸರಿಬ್ಬರೂ, ಸ್ವಲ್ಪಮಾತ್ರವೂ ಎದೆಗುಂದದೆ ಇಂದ್ರ ವೃತ್ರರಂತೆಯೂ, ಸಿಂಹಗಳಂತೆಯೂ, ಒಬ್ಬರನೊಬ್ಬರು ಧೈರ್ಯದಿಂದಿದಿರಿಸಿ ಮೇಲೆ ಮೇಲೆ ಹಟದಿಂದ ಬಾಣಗಳನ್ನು ಪ್ರಯೋಗಿಸುತ್ತ ಮಹೋತ್ಸಾಹದಿಂದ ಹೋರಾಡಿದರು. ಆ ನರರಾಕ್ಷಸ ರಾಜರಿಬ್ಬರೂ ಧನುರ್ಬಾಣಗಳನ್ನು ಹಿಡಿದು, ಹಟದಿಂದ ಒಬ್ಬರನ್ನೊಬ್ಬರು ಜಯಿಸಬೇಕೆಂಬ ಮಹೋತ್ಸಾಹವುಳ್ಳವರಾಗಿ, ಮೇಘವು ಮಳೆಯನ್ನು ಕರೆಯುವಂತೆ ಒಬ್ಬರಮೇಲೊಬ್ಬರು ಎಡೆಬಿಡದೆ ಬಾಣವರ್ಷಗಳನ್ನು ಕರೆದರು. ರಣಪಂಡಿತರಾದ ಆ ವೀರರಿಬ್ಬರೂ ಪ್ರಚಂಡಬಾಣಗಳನ್ನೂ ಖಡ್ಗಗಳನ್ನೂ, ಇನ್ನೂ ಬೇರೆಬೇರೆ ತೀಕ್ಷ್ಣಾಯುಧಗಳನ್ನೂ ಧರಿಸಿ, ವೀರ್ಯದಿಂದುಬ್ಬುತ್ತ, ಶಂಬರವೃತ್ರರಂತೆ ಘೋರ ಯುದ್ಧವನ್ನು ಮಾಡಿ ಒಬ್ಬರನ್ನೊಬ್ಬರು ಪ್ರಬಲವಾಗಿ ಹೊಡೆಯುತ್ತಿದ್ದರು.

ಇಲ್ಲಿಗೆ ಎಂಬತ್ತೆಂಟನೆಯ ಸರ್ಗವು.

ಇಂದ್ರಜಿತ್ತಿಗೂ ಲಕ್ಷ್ಮಣನಿಗೂ ನಡೆದ ಮಹಾಯುದ್ಧವು

ಪರಂತಪನಾದ ಲಕ್ಷ್ಮಣನು ಸರ್ಪದಂತೆ ಬುಸುಗುಟ್ಟುತ್ತ ಒಂದು ಬಾಣವನ್ನು ಹೊಡೆಯುವಾಗ, ಲಕ್ಷ್ಮಣನು ಬಿಲ್ಲಿನ ನಾಣನ್ನು ಮಿಡಿದ ಶಬ್ದವನ್ನು ಕೇಳಿದಾಗಲೇ ಇಂದ್ರಜಿತ್ತಿನ ಮುಖವು ಬಣ್ಣಗೆಟ್ಟಿತು. ಆಶ್ಚರ್ಯದಿಂದ ಲಕ್ಷ್ಮಣನನ್ನು ದುರದುರನೆ ನೋಡುತ್ತಿದ್ದನು. ಈ ಸಮಯ ದಲ್ಲಿ ವಿಭೀಷಣನು, ಇಂದ್ರಜಿತ್ತಿನ ಕಂದಿದ ಮುಖವನ್ನು ನೋಡಿ, ಸಮೀಪದಲ್ಲಿ ಯುದ್ಧಾಸಕ್ತನಾಗಿದ್ದ ಲಕ್ಷ್ಮಣನನ್ನು ಕುರಿತು "ಲಕ್ಷ್ಮಣಾ!

ಆ ಇಂದ್ರಜಿತ್ತಿನ ಮುಖಲಕ್ಷಣವನ್ನು ನೋಡಿದೆಯಾ ? ಈಗಲೇ ಅವನ ಮೋರೆಯು ಬಣ್ಣಗೆಟ್ಟಿರುವುದು. ಈ ಗುರುತುಗಳನ್ನು ನೋಡಿದರೆ ಈಗಾಗಲೇ ಅವನು ಭಂಗಹೊಂದಿದಂತೆಯೇ ತೋರುವುದು. ಎಲೆ ಮಹಾಬಾಹೂ ! ಇನ್ನು ಇವನನ್ನು ಕೊಲ್ಲುವುದಕ್ಕೆ ನೀನು ತ್ವರೆಮಾಡು ! ಉಪೇಕ್ಷಿಸಬೇಡ'' ಎಂದನು. ಈ ಮಾತನ್ನು ಕೇಳಿದೊಡನೆ ಲಕ್ಷ್ಮಣನು, ಅಗ್ನಿಜ್ವಾಲೆಯಂತೆ ದೇದೀಪ್ಯಮಾನಗಳಾಗಿಯೂ ವಿಷಸರ್ಪಗಳಂತೆ ಕ್ರೂರಗಳಾಗಿಯೂ ಇದ್ದ ಕೆಲವು ತೀಕ್ಷ್ಣಬಾಣಗಳನ್ನು ಬಿಲ್ಲಿನಲ್ಲಿ ಸೇರಿಸಿ, ಇಂದ್ರಜಿತ್ತಿನ ಮೇಲೆ ಪ್ರಯೋಗಿಸಿದನು. ಲಕ್ಷ್ಮಣನು ಬಿಟ್ಟ ಬಾಣಗಳು ಸಿಡಿಲಿನಂತೆ ಮೈಗೆ ತಾಗಲು ಇಂದ್ರಜಿತ್ತಿಗೆ ಸರ್ವೇಂದ್ರಿಯಗಳೂ ಕಲಗಿ, ಮುಹೂರ್ತಕಾಲದ ವರೆಗೆ ಮೂರ್ಛೆ ಬಂದಂತಾಯಿತು. ಆದರೆ ವೀರನಾದ ಇಂದ್ರಜಿತ್ತು ಕ್ಷಣಕಾಲದಲ್ಲಿಯೇ ಮೆಲ್ಲಗೆ ಇಂದ್ರಿಯಗಳನ್ನು ವಶಪಡಿಸಿ ಚೇತರಿಸಿಕೊಂಡು, ತನಗಿದಿರಾಗಿ ಯುದ್ಧಕ್ಕೆ ನಿಂತಿದ್ದ ಲಕ್ಷ್ಮಣನನ್ನು ನೋಡಿ ಕೋಪದಿಂದ ಕೆಂಪೇರಿದ ಕಣ್ಣುಳ್ಳವನಾಗಿ, ತಿರುಗಿ ಅವನನ್ನು ಪರುಷವಾಕ್ಯಗಳಿಂದ ಧಿಕ್ಕರಿಸುತ್ತ "ಲಕ್ಷ್ಮಣಾ! ಹಿಂದೆ ನೀನೂ ನಿನ್ನಣ್ಣನೂ ನನ್ನ ಬಾಣಪಾಶಗಳಲ್ಲಿ ಕಟ್ಟುಬಿದ್ದು ನೆಲದಲ್ಲಿ ಹೊರಳಾಡುವಾಗ ನನ್ನ ಪರಾಕ್ರಮದಿಂದ ನಿನಗುಂಟಾದ ಆಗಿನ ಅವಸ್ಥೆಯನ್ನು ಮರೆತೆಯೇನು ? ಆಗಲೇ ನಾನು ನಿಮ್ಮಿಬ್ಬರನ್ನೂ, ನಿಮ್ಮ ಪರಿವಾರವನ್ನೂ, ವಜ್ರಸಮಾನಗಳಾದ, ಬಾಣಗಳಿಂದ ಕಟ್ಟಿ ಕೆಡಹಿದ್ದೆನಲ್ಲವೆ? ಆ ಪರಾಕ್ರಮವನ್ನು ತಿಳಿದೂ ಈಗ ನೀವು ನನ್ನೊಡನೆ ಯುದ್ಧೋದ್ಯುಕ್ತರಾಗಿರುವುದನ್ನು ನೋಡಿದರೆ, ಆ ಅವಸ್ಥೆಯನ್ನು ನೀವು ಮರೆತಿರೆಂದೋ, ಅಥವಾ ಅದು ನೆನಪಿನಲ್ಲಿದ್ದರೂ ನಿಮಗೆ ಮರಣಕಾಲಕ್ಕಾಗಿ ಈ ವಿಪರೀತ ಬುದ್ಧಿಯು ಹುಟ್ಟಿತೆಂದೋ ಎಣಿಸಬೇಕಾಗಿದೆ. ಒಂದುವೇಳೆ ಆಗಿನ ಯುದ್ಧದಲ್ಲಿ ನನ್ನ ಪರಾಕ್ರಮವು ಇನ್ನೂ ನಿನಗೆ ಚೆನ್ನಾಗಿ ತಿಳಿಯದಿದ್ದ ಪಕ್ಷದಲ್ಲಿ, ಈಗ ಸಂಪೂರ್ಣವಾಗಿ ತೋರಿಸಿಬಿಡುವೆನು. ಸ್ವಲ್ಪಕಾಲದವರೆಗೆ ಹಿಂಜರಿಯದೆ ನಿಲ್ಲು'' ಎಂದನು. ಇಂದ್ರಜಿತ್ತು ಈ ಮಾತುಗಳನ್ನು ಹೇಳಿ ಲಕ್ಷ್ಮಣನ ಮೇಲೆ ಏಳುಬಾಣಗಳನ್ನೂ, ಅವನಿಗೆ ವಾಹನವಾಗಿದ್ದ ಹನುಮಂತನ ಮೇಲೆ ಹತ್ತು ಬಾಣಗಳನ್ನೂ ಪ್ರಯೋಗಿಸಿದನು. ಮತ್ತು ವೀರ್ಯವಂತನಾದ ಆ ಇಂದ್ರಜಿತ್ತು ಸ್ವಜಾತಿ

ದ್ರೋಹಿಯಾದ ವಿಭೀಷಣನಮೇಲೆ ತನಗಿದ್ದ ಅತ್ಯಾಕ್ರೋಶವನ್ನು ತೀರಿಸಿ ಕೊಳ್ಳುವುದಕ್ಕಾಗಿ, ಎಡೆಬಿಡದೆ ನೂರುಬಾಣಗಳನ್ನೂ ವೇಗದಿಂದೆಳೆದು ವಿಭೀಷಣನ ಮೇಲೆ ಪ್ರಯೋಗಿಸಿದನು. ಇಂದ್ರಜಿತ್ತು ನಡೆಸಿದ ಈ ಕ್ರೂರ ಕಾರ್ಯಕ್ಕಾಗಿ ಪುರುಷೋತ್ತಮನಾದ ಲಕ್ಷ್ಮಣನು ಅವನನ್ನು ನೋಡಿ ದರ್ಪದಿಂದ ನಗುತ್ತ, ಆ ಬಾಣ ಪ್ರಹಾರಗಳನ್ನೂ ಲಕ್ಷ್ಯಮಾಡದೆ "ಎಲೆ ರಾಕ್ಷಸಾ! ಈ ಪ್ರಯತ್ನಗಳೊಂದೂ ನನ್ನಲ್ಲಿ ಕೆಲಸಕ್ಕೆ ಬಾರವು" ಎಂದು ಅವನನ್ನು ನಿರಾಕರಿಸಿ, ತನ್ನಲ್ಲಿದ್ದ ತೀಕ್ಷ್ಣಬಾಣಗಳನ್ನು ತೆಗೆದು ಅವನ ಮೇಲೆ ಪ್ರಯೋಗಿಸಿದನು. ಮತ್ತು ಆಗ ಮುಖ ದಲ್ಲಿ ಸ್ವಲ್ಪವಾದರೂ ಭಯವನ್ನು ತೋರಿಸದೆ, ಕೋಪದಿಂದಲೂ, ಉತ್ಸಾಹದಿಂದಲೂ ಕೂಡಿದವನಾಗಿ, ತಿರುಗಿ ಇಂದ್ರಜಿತ್ತನ್ನು ಕುರಿತು, "ಎಲೆ ರಾಕ್ಷಸಾಧಮಾ! ಇದು ಯುದ್ಧದಲ್ಲಿ ನಿಂತ ಶೂರರಿಗೆ ಯೋಗ್ಯ ವಾದ ಬಾಣಪ್ರಹಾರಗಳಲ್ಲ! ಈ ನಿನ್ನ ಬಾಣಗಳಲ್ಲಿ ಏನೇನೂ ಸಾರವಿಲ್ಲ! ಈ ನಿನ್ನ ಬಾಣಗಳೆಲ್ಲವೂ ಅತ್ಯಲ್ಪವೀರ್ಯವುಳ್ಳವುಗಳಾಗಿ, ಮೈಗೆ ಮುಟ್ಟಿದರೂ ಸುಖಕರವಾಗಿಯೇ ತೋರುವುದು. ನಿಜವಾಗಿ ಜಯವನ್ನ ಪೇಕ್ಷಿಸತಕ್ಕ ಶೂರರು ಹೀಗೆ ಯುದ್ಧಮಾಡಲಾರರು" ಎಂದು ಹೇಳುತ್ತ ಮೇಲೆಮೇಲೆ ಬಾಣವರ್ಷವನ್ನು ಕರೆಯುತ್ತಿದ್ದನು. ಇಂದ್ರಜಿತ್ತು ಮೈಮೇಲೆ ಧರಿಸಿದ್ದ ಚಿನ್ನದ ಕವಚವು ಲಕ್ಷ್ಮಣನ ಬಾಣಗಳಿಂದ ಛಿನ್ನಭಿನ್ನವಾಗಿ ಹರಿದು, ಆಕಾಶದಿಂದುದುರುವ ನಕ್ಷತ್ರಗಳಂತೆ ಪುಡಿಯಾಗಿ ರಥದ ಮೇಲೆ ಬಿದ್ದಿತು. ಹೀಗೆ ಇಂದ್ರಜಿತ್ತಿಗೆ ಮೈಮೇಲಿನ ಕವಚವು ಹರಿದು ಸರ್ವಾ ವಯವಗಳಲ್ಲಿಯೂ ನಾರಾಚಗಳು ನಾಟಿಕೊಳ್ಳಲು, ಆಗ ಆ ರಾಕ್ಷ ಸನು, ವಿಶೇಷವಾಗಿ ವೃಕ್ಷಗಳು ಬೆಳೆದ ಪರ್ವತದಂತೆ ಕಾಣುತ್ತಿದ್ದನು. ಆಗ ಆ ಇಂದ್ರಜಿತ್ತು ಅತ್ಯಂತ ಕುಪಿತನಾಗಿ, ಲಕ್ಷ್ಮಣನಮೇಲೆ ಏಕಕಾಲ ದಲ್ಲಿ ಸಾವಿರ ಬಾಣಗಳನ್ನು ಪ್ರಯೋಗಿಸಿದನು. ಈ ಬಾಣಹತಿಯಿಂದ ಲಕ್ಷ್ಮಣನ ಮೈಮೇಲಿದ್ದ ದೊಡ್ಡ ದಿವ್ಯಕವಚವು ಹರಿದು ಬಿದ್ದಿತು. ಹೀಗೆ ಅವರಿಬ್ಬರೂ ಒಬ್ಬರಿಗೊಬ್ಬರು ದುಃಯ್ಯಿಗೆ ಮುಯ್ಯಿ ತೀರಿಸುತ್ತ ಹಟದಿಂದ ಹೋರಾಡಿದರು. ಅವರಿಬ್ಬರ ದೇಹದಲ್ಲಿಯೂ ಬಾಣದ ಗಾಯಗಳು ತುಂಬಿ, ಇಬ್ಬರ ದೇಹವೂ ರಕ್ತಮಯವಾಯಿತು. ಇಬ್ಬರೂ ನಿಟ್ಟು ಸಿರುಬಿಡುತ್ತ ಹೋರಾಡಿದರು. ಒಬ್ಬರಿಗೊಬ್ಬರು ಬಾಣಗಳಿಂದ ಭೇದಿಸು

ತ್ತಿದ್ದರು. ಭಯಂಕರಪರಾಕ್ರಮವುಳ್ಳ ಆ ವೀರರಿಬ್ಬರೂ ತಾವು ಜಯಿಸಬೇಕೆಂಬ ಹಟದಿಂದ ತೀಕ್ಷ್ಣಬಾಣಗಳನ್ನು ಬಿಟ್ಟು ಒಬ್ಬರಿಗೊಬ್ಬರು ಮೈಯಲ್ಲಿ ಬಾಣಗಳನ್ನು ನಾಟುತ್ತ, ಕವಚಗಳನ್ನು ಹರಿದು ಧ್ವಜಗಳನ್ನು ಮುರಿದು ಭಯಂಕರವಾದ ಯುದ್ಧವನ್ನು ನಡೆಸಿದರು. ಪರ್ವತಗಳಿಂದ ಹೊರಡುವ ಗಿರಿನದಿಗಳಂತೆ ಅವರಿಬ್ಬರ ಮೈಯಿಂದಲೂ ಬಿಸಿಬಿಸಿಯಾದ ರಕ್ತವು ಕಿತ್ತುಕೊಂಡಿತು. ಆಕಾಶದಲ್ಲಿ ಪ್ರಳಯಕಾಲದ ಕಾಲಮೇಘಗಳು ಜಡಿ ಮಳೆಯನ್ನು ಕರೆಯುವಂತೆ ಅವರಿಬ್ಬರೂ ಭಯಂಕರ ಧ್ವನಿಯಿಂದ ಆರ್ಭಟಿಸುತ್ತ ಒಬ್ಬರಮೇಲೊಬ್ಬರು ಎಡೆಬಿಡದೆ ಬಾಣವರ್ಷವನ್ನು ಕರೆ ಯುತ್ತಿದ್ದರು. ಈ ಹೋರಾಟದಲ್ಲಿಯೇ ಬಹಳ ಹೊತ್ತು ಕಳೆದುಹೋಯಿತು. ಬಹುಕಾಲವಾದರೂ ಅವರಿಬ್ಬರಿಗೂ ಆ ಯುದ್ಧದಲ್ಲಿ ಬೇಸರವಾಗಲಿ, ಬಳಲಿಕೆಯಾಗಲಿ ತೋರಲಿಲ್ಲ. ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸುತ್ತ ಚಿತ್ರವಿಚಿತ್ರ ಗಳಾದ ಬಾಣಗಳಿಂದ ಆಕಾಶವೆಲ್ಲವನ್ನೂ ಮುಚ್ಚಿಬಿಟ್ಟರು. ಆ ನರರಾಕ್ಷಸರಾಜ ರಿಬ್ಬರೂ ಕ್ಷಣಮಾತ್ರವೂ ಎಚ್ಚರತಪ್ಪದೆ, ಬಹಳ ಸೂಟಿಯಿಂದಲೂ, ಚಮತ್ಕಾರದಿಂದಲೂ, ಕ್ರಮದಿಂದಲೂ, ಒಬ್ಬರ ಮೇಲೊಬ್ಬರು ಬಾಣಗಳನ್ನು ಬೀರುತ್ತ ದೊಡ್ಡ ದ್ವಂದಯುದ್ಧವನ್ನು ಮಾಡಿದರು. ಆ ಇಬ್ಬರ ಧನು ಷ್ಟಂಕಾರ ಧ್ವನಿಯೂ ಬೇರೆಬೇರೆಯಾಗಿ ಸಿಡಿಲಿನಂತೆ ಭಯಂಕರವಾಗಿ ಜನರನ್ನು ನಡುಗಿಸುತ್ತಿತ್ತು. ಅವರಿಬ್ಬರೂ ಯುದ್ಧಮಾಡುತ್ತಿರುವಾಗ ಅವರ ಸಿಂಹನಾದ ಧ್ವನಿಯು ಆಕಾಶದಲ್ಲಿ ಗರ್ಜಿಸುತ್ತಿರುವ ಭಯಂ ಕರಗಳಾದ ಎರಡು ಮೇಘಗಳ ಗುಡುಗಿನಂತೆ ಕೇಳಿಸಿತು. ಕೀರ್ತಿಮಂತ ರಾಗಿಯೂ, ಬಲವಂತರಾಗಿಯೂ ಇರುವ ಆ ವೀರರಿಬ್ಬರೂ ಪರಸ್ಪರಜಯಾ ಭಿಲಾಷೆಯಿಂದ ಚಿನ್ನದ ಹಿಡಿಗಳುಳ್ಳ ಬಾಣಗಳನ್ನು ಬಿಟ್ಟು, ಒಬ್ಬರನ್ನೊಬ್ಬರು ಭೇದಿಸುತ್ತಿರಲು, ಇಬ್ಬರ ಮೈಯಿಂದಲೂ ರಕ್ತವು ಕಿತ್ತುಕೊಂಡಿತು. ಅವರು ಪ್ರಯೋಗಿಸಿದ ಬಾಣಗಳಲ್ಲಿ ಒಂದಾದರೂ ಗುರಿತಪ್ಪದೆ ಶತ್ರುವಿನ ಮೈಯನ್ನು ಭೇದಿಸಿ ರಕ್ತದಿಂದ ತೊಯ್ದು ನೆಲದಲ್ಲಿ ನಾಟುತ್ತಿದ್ದುವು. ಅವರು ಪ್ರಯೋಗಿಸಿದ ಕೆಲವು ಬಾಣಗಳು ಅಂತರಿಕ್ಷದಲ್ಲಿ ವೇಗದಿಂದ ಬರು ವಾಗಲೇ ಪ್ರತಿಪಕ್ಷದವನ ಆಯುಧಗಳಿಂದ ಭಿನ್ನವಾಗಿ ಕೆಳಗೆ ಬೀಳುತ್ತಿ ದ್ದುವು. ಬೇರೆ ಕೆಲವು ಬಾಣಗಳು ತಮಗಡ್ಡಲಾಗಿ ಬಂದ ಸಾವಿರಾರು ಬಾಣಗಳನ್ನು ತುಂಡುತುಂಡಾಗಿ ಕತ್ತರಿಸಿ ಮುಂದೆ ಹಾಯುತ್ತಿದ್ದುವು. ಈ

ಯುದ್ಧವು ಅತ್ಯಂತ ಘೋರವಾಯಿತು। ಕೇವಲ ಬಾಣಮಯವಾದ ಆ ರಣರಂಗದಲ್ಲಿ ಆ ವೀರರಿಬ್ಬರೂ ನಿಂತಿರಲು, ಯಜ್ಞಶಾಲೆಯಲ್ಲಿ ದರ್ಭ ಸಮೂಹಗಳ ನಡುವೆ ಜ್ವಲಿಸುವ ಗಾರ್ಹಪತ್ಯಾಹವನೀಯಗಳಂತೆ ಕಾಣು ತ್ತಿದ್ದರು. ಅವರ ಅಂಗಾಂಗಗಳಲ್ಲಿಯೂ ಗಾಯವುಂಟಾಗಿ ರಕ್ತವು ಸುರಿ ಯುತ್ತಿರಲು, ಕಾಡಿನಲ್ಲಿ ಕೆಂಪುಹೂಗಳಿಂದ ತುಂಬಿ ಎಲೆಯಿಲ್ಲದ ಬೂರುಗದ ಮತ್ತು ಮುತ್ತುಗದ ಮರದಂತೆ ಕಾಣಿಸಿದರು- ಇಂದ್ರಜಿತ್ತೂ, ಲಕ್ಷ್ಮ ಣನೂ ಒಬ್ಬರನ್ನೊಬ್ಬರು ಕೊಲ್ಲಬೇಕೆಂಬ ಆತುರದಿಂದ ತಮ್ಮಿಂದಾದಷ್ಟು ಸಾಹಸವನ್ನು ತೋರಿಸಿ ಹೋರಾಡಿದರು. ಲಕ್ಷ್ಮಣನು ಇಂದ್ರಜಿತ್ತನ್ನೂ ಇಂದ್ರಜಿತ್ತು ಲಕ್ಷ್ಮಣನನ್ನೂ ಬಾರಿಬಾರಿಗೂ ಪ್ರಹರಿಸಿ, ಎಷ್ಟೆಷ್ಟು ಹೋರಾಡಿದರೂ, ಒಬ್ಬರಿಗಾದರೂ ದಣಿವು ತೋರಲಿಲ್ಲ! ಇಬ್ಬರೂ ಬಾಣದಿಂದ ನಾಟಿದ ದೇಹವುಳ್ಳವರಾಗಿ, ವೃಕ್ಷಗಳು ಬೆಳೆದ ಪರ್ವತ ಗಳಂತೆ ಕಾಣುತ್ತಿದ್ದರು. ಅವರಿಬ್ಬರ ದೇಹವೂ ರಕ್ತದಿಂದ ಕೆಂಪಾಗಿ ಉರಿಯುವ ಬೆಂಕಿಯಂತೆ ಕಾಣುತ್ತಿತ್ತು. ಬಹಳ ಹೊತ್ತಿನವರೆಗೆ ಹೋರಾಡಿದರೂ ಅವರಲ್ಲಿ ಯಾರೊಬ್ಬರಿಗೂ ಯುದ್ಧದಲ್ಲಿ ಬಳಲಿಕೆ ಯಾಗಲಿ, ಬೇಸರಿಕೆಯಾಗಲಿ ತೋರಲಿಲ್ಲ. ಆಗ ಮಹಾತೇಜಸ್ವಿಯಾದ ವಿಭೀಷಣನು, ಶತ್ರುದುರ್ಜಯನಾದ ಲಕ್ಷ್ಮಣನಿಗೆ ಸ್ವಲ್ಪಕಾಲದವರೆಗೆ ವಿಶ್ರಾಂತಿಯನ್ನು ಕೊಟ್ಟು ಆಗಿನ ಯುದ್ಧದಿಂದುಂಟಾದ ಆಯಾಸವನ್ನು ಪರಿಹರಿಸಬೇಕೆಂದೆಣಿಸಿ, ಅವನಿಗೆ ಪ್ರಿಯವನ್ನೂ, ಹಿತವನ್ನೂ ಉಂಟು ಮಾಡಬೇಕೆಂಬುದಾಗಿ ಯುದ್ಧರಂಗದಲ್ಲಿ ಮುಂದೆ ಬಂದು ನಿಂತನು.

ಇಲ್ಲಿಗೆ ಎಂಭತ್ತೊಂಬತ್ತನೆಯ ಸರ್ಗವು.

ವಿಭೀಷಣನು ಇಂದ್ರಜಿತ್ತಿನ ಪರಿವಾರಗಳನ್ನು ಕೊಲ್ಲುವುದಕ್ಕಾಗಿ ವಾನರವೀರರನ್ನು ಪ್ರೋತ್ಸಾಹಪಡಿಸಿದುದು. ಲಕ್ಷ್ಮಣನು ಇಂದ್ರಜಿತ್ತಿನ ಸಾರಥಿಯನ್ನೂ ಪ್ರಮಾಥಿ ಮೊದಲಾದ ವಾನರರು ಅವನ ರಥಾಶ್ವಗಳನ್ನೂ ಕೊಂದುದು.

ಆಗ ಬಲಾಢ್ಯನಾದ ವಿಭೀಷಣನು, ಮದದಾನೆಗಳಂತೆ ಯುದ್ಧಕ್ಕೆ ನಿಂತು ಒಬ್ಬರನ್ನೊಬ್ಬರು ಕೊಲ್ಲಬೇಕೆಂಬ ಪ್ರಯತ್ನದಿಂದ ಹೋರಾಡುತ್ತಿದ್ದ ಇಂದ್ರಜಿತ್ತು ಲಕ್ಷ್ಮಣರಿಬ್ಬರನ್ನೂ ಸಮೀಪಿಸಿ, ಅವರಲ್ಲಿ ಯಾರು ಬಲಾಧಿಕರೆಂಬುದನ್ನು ತಿಳಿದುಕೊಳ್ಳುವುಕ್ಕಾಗಿ ಸ್ವಲ್ಪಕಾಲದವರೆಗೆ ತಾನು ಸುಮ್ಮನೆ ನಿಂತು ನೋಡುತ್ತಿದ್ದನು. ಅವರಿಬ್ಬರೂ ಸಮಾನಬಲವುಳ್ಳವರೆಂದು ತಿಳಿದಮೇಲೆ, ಕೊನೆಗೆ ತಾನೂ ಯುದ್ಧಮಾಡುವುದಕ್ಕಾಗಿ ರಣಾಗ್ರಕ್ಕೆ ಬಂದು ನಿಂತನು. ಹೀಗೆ ಯುದ್ಧಸನ್ನದ್ಧನಾಗಿ ಬಂದೊಡನೆ ತನ್ನ ದೊಡ್ಡ ಬಿಲ್ಲನ್ನು ಮಹಾಧ್ವನಿಯುಂಟಾಗುವಂತೆ ಮಿಡಿದು, ರಾಕ್ಷಸರಮೇಲೆ ತೀಕ್ಷ್ಣಬಾಣಗಳನ್ನು ಬಿಡಲಾರಂಭಿಸಿದನು. ಈ ವಿಭೀಷಣನ ಬಾಣಗಳು ಅಗ್ನಿಯಂತೆ ಉರಿಯನ್ನು ಕಾರುತ್ತ, ಗುರಿತಪ್ಪದೆ ರಾಕ್ಷಸರ ಮೈಯಲ್ಲಿನಾಟಿ, ಸಿಡಿಲು ಪರ್ವತಗಳನ್ನು ಭೇದಿಸುವಂತೆ ಆ ರಾಕ್ಷಸರನ್ನು ಕತ್ತರಿಸಿ ಕೆಡಹಿದುವು. ಇದೇಕಾಲದಲ್ಲಿ ವಿಭೀಷಣನ ಮಂತ್ರಿಗಳೂ ಕೂಡ, ಶೂಲಗಳಿಂದಲೂ, ಕತ್ತಿಗಳಿಂದಲೂ, ಪಟ್ಟಿಸಗಳಿಂದಲೂ ಅಲ್ಲಲ್ಲಿ ಸಿಕ್ಕಿದ ವೀರರಾಕ್ಷಸರನ್ನು ಭೇದಿಸುತ್ತ ಬಂದರು. ಹೀಗೆ ವಿಭೀಷಣನು ಮದದಾನೆಗಳ ನಡುವೆ ನಿಂತ ಸಲಗದಂತೆ ತನ್ನ ನಾಲ್ವರು ಮಂತ್ರಿಗಳಿಂದ ಪರಿವೃತನಾಗಿ ಯುದ್ಧವನ್ನು ನಡೆಸುತ್ತಿದ್ದನು. ರಾಕ್ಷಸೋತ್ತಮನಾದ ವಿಭೀಷಣನು ಕಾಲೋಚಿತವಾದ ಕಾರ್ಯವನ್ನು ಬಲ್ಲವನಾದುದರಿಂದ, ರಾಕ್ಷಸರೊಡನೆ ಯುದ್ಧಾಸಕ್ತರಾಗಿದ್ದ ವಾನರರನ್ನು ಮತ್ತಷ್ಟು ಪ್ರೋತ್ಸಾಹಪಡಿಸುತ್ತ ಅವರನ್ನು ಕುರಿತು 'ಎಲೈ ವಾನರೋತ್ತಮರೆ! ಇನ್ನೇನು! ನಮಗೆ ಜಯವು ಕೈಗೂಡಿ ಬಂದಿರುವುದು ! ಈಗ ಈ ಇಂದ್ರಜಿತ್ತೊಬ್ಬನೇ ರಾವಣನಿಗೆ ದಿಕ್ಕಾಗಿರುವನು . ರಾವಣನಲ್ಲಿದ್ದ ಸಮಸ್ತಸೈನ್ಯವೂ ಹೋಗಿ, ಇವನೊಬ್ಬನು ಮಾತ್ರ ಅವನಿಗೆ ಬೆಂಬಲವಾಗಿ ನಿಂತಿರುವನು. ಇನ್ನೂ ನೀವು ಸುಮ್ಮನಿರುವುದೇಕೆ? ನಿಮ್ಮ ಸಾಹಸವನ್ನು ತೋರಿಸಿರಿ! ಈ ಯುದ್ಧದಲ್ಲಿ ಪಾಪಾತ್ಮನಾದ ಈರಾಕ್ಷಸನೊಬ್ಬನನ್ನು ತೀರಿಸಿಬಿಟ್ಟರೆ, ಆಮೇಲೆ ರಾವಣನೊಬ್ಬನು ಹೊರತು

ಆತನ ಉಳಿದ ಸೈನ್ಯವೆಲ್ಲವೂ ಹತವಾದಂತೆಯೇ ಆಗುವುದು ! ವೀರನಾದ ಪ್ರಹ ಸ್ತನನ್ನು ಕೊಂದಾಯಿತು ! ಮಹಾಬಲಾಢ್ಯನಾದ ನಿಕುಂಭನನ್ನು ಕೊಂದು ದಾಯಿತು! ಹಾಗೆಯೇ ಕುಂಭಕರ್ಣನೂ, ಕುಂಭನೂ, ಧೂಮ್ರಾಕ್ಷನೂ, ಜಂಬು ಮಾಲಿಯೂ, ಮಹಾಮಾಲಿಯೂ, ತೀಕ್ಷ್ಣವೇಗನೂ ಅಶನಿಪ್ರಭನೂ, ಸುಪ್ತಘ್ನನೂ, ಯಜ್ಞಕೋಪನೂ, ವಜ್ರದಂಷ್ಟ್ರನೂ, ನಿಮ್ಮಿಂದಲೇ ಹತ ರಾಗಿ ಸತ್ತು ಸಂಹ್ರಾದಿ, ವಿಕಟ, ನಿಘ್ನ, ತಪನ, ನಮ, ಪ್ರಘೌಸ, ಪ್ರಘಸ, ಪ್ರಜಂಘ, ಜಂಘ, ಅಗ್ನಿಕೇತು, ರಶ್ಮಿಕೇತು, ವಿದ್ಯುಜ್ಜಿಹ್ವ, ದ್ವಿಜಿಹ್ವ, ಸೂರ್ಯ ಶತ್ರು, ಅಕಂಪನ, ಸುಪಾರ್ಶ್ವ, ಚಕ್ರಮಾಲಿ, ಕಂಪನ ಮೊದಲಾದ ರಾಕ್ಷಸವೀರ ರೆಲ್ಲರೂ ಹತರಾದರು. ಮಹಾಬಲಾಢ್ಯರಾದ ದೇವಾಂತಕ ನರಾಂತಕರನ್ನೂ ಕೊಂದುದಾಯಿತು! ಹೀಗೆ ಅತಿ ಪ್ರಬಲರಾದ ಅನೇಕ ರಾಕ್ಷಸವೀರರನ್ನೂ ಕೊಂದ ನಮ್ಮ ಬಾಹುಬಲಕ್ಕೆ, ಈ ಯುದ್ಧದಲ್ಲಿ ಈ ರಾಕ್ಷಸನೊಬ್ಬನನ್ನು ಕೊಲ್ಲುವುದೊಂದಸಾಧ್ಯವೆ? ತೋಳುಗಳಿಂದಲೇ ಸಮುದ್ರವನ್ನೀಜಿ ಬಂದವರಿಗೆ ಅತ್ಯಲ್ಪವಾದ ಗೋಷ್ಪದವನ್ನು ಹಾರಿ ಹೋಗುವುದೊಂದು ಕಷ್ಟವೆ ? ಈ ಸ್ವಲ್ಪ ಕಾರ್ಯವನ್ನು ಕೂಡ ಶೀಘ್ರದಲ್ಲಿಯೇ ನಡೆಸಿಬಿಡಿರಿ! ಎಲೈ ವಾನರರೆ ! ಈ ಲಂಕೆಯಲ್ಲಿ ಬಲದಿಂದ ಕೊಬ್ಬಿದ ರಾಕ್ಷಸರೆಲ್ಲರೂ ಬಹಳಮಟ್ಟಿಗೆ ನಿಮ್ಮಿಂದ ಹತರಾಗಿರುವರು. ಈಗ ಈ ರಾಕ್ಷಸ ಸೈನ್ಯವೊಂದೇ ಉಳಿದಿರುವುದು. ಇದೊಂದನ್ನೇ ಈಗ ನೀವು ಜಯಿಸಬೇಕಾಗಿರುವುದು- ನೀವು ಇವರನ್ನು ಹೇಗೆ ಕೊಲ್ಲುವುದೆಂಬ ಮರುಕವನ್ನು ಬಿಟ್ಟುಬಿಡಿರಿ ! ಜಾತಿಯಲ್ಲಿ ರಾಕ್ಷಸನಾಗಿದ್ದರೂ ಈಗ ನಾನೇ ರಾಮನ ಕಾರ್ಯಾರ್ಥವಾಗಿ ಅಣ್ಣನ ಮಗನೆಂಬ ಮರುಕವನ್ನೂ ಬಿಟ್ಟು, ಈ ಇಂದ್ರಜಿತ್ತನ್ನು ಕೊಲ್ಲುವುದಕ್ಕೆ ಯತ್ನಿಸುತ್ತಿರುವೆನಲ್ಲವೆ? ತಂದೆಯಾದ ನನಗೆ ಮಗನನ್ನು ಕೊಲ್ಲಿಸುವುದು ಕೇವಲ ಅನುಚಿತ. ಕಾರ್ಯಾರ್ಥವಾಗಿ ನಾನು ಈ ಕಾರ್ಯದಲ್ಲಿ ಪ್ರವರ್ತಿಸಬೇಕಾಗಿದೆ. ನಾನು ಇವನನ್ನು ಕೊಲ್ಲಬೇಕೆಂದುದ್ದೇಶಿಸಿ ಕೈ ಯೆತ್ತಿದಾಗಲೆಲ್ಲಾ ಕಣ್ಣುಗಳಲ್ಲಿ ನೀರು ತುಂಬಿ ನನ್ನ ಕಣ್ಣುಗಳನ್ನು ಮರೆಸುತ್ತಿರು ವುದು. ಆದರೆ ನನ್ನ ಕೈಯಿಂದ ನಾನೇ ಈ ಇಂದ್ರಜಿತ್ತನ್ನು ಕೊಲ್ಲದಿದ್ದರೂ ಮಹಾಬಾಹುವಾದ ಈ ಲಕ್ಷ್ಮಣನು ಅವನನ್ನು ಕೊಲ್ಲದೆ ಬಿಡನು! ಆದುದರಿಂದ ಎಲೈ ವಾನರರೆ ! ನೀವೆಲ್ಲರೂ ಸೇರಿ ರಾಕ್ಷಸಭಟರನ್ನು ಕೊಲ್ಲುತ್ತ ಬನ್ನಿರಿ" ಎಂದನು. ವಿಭೀಷಣನು ಉಬ್ಬಿಸಿ ಹೇಳಿದ ಈ ಪ್ರೋತ್ಸಾಹಕವಾಕ್ಯಗಳನ್ನು ಕೇಳಿ ವಾನರರಿಗೆ ಮಹೋತ್ಸಾಹವುಂಟಾಯಿತು. ಆ ಸಂತೋಷದಿಂದ ಒಬ್ಬೊ

ಬ್ಬರೂ ವಿಧವಿಧವಾದ ಧ್ವನಿಯಿಂದ ಬೊಬ್ಬೆಹಾಕಿ ಬಾರಿಬಾರಿಗೂ ಕೂಗುತ್ತಿದ್ದರು. ಈ ವಾನರರೆಲ್ಲರೂ ಯುದ್ಧಕ್ಕಾಗಿ ಮುಂದುಬಿದ್ದು ಹೊರಟಾಗ ಭಲ್ಲೂಕಾಧಿಪತಿಯೂದ ಜಾಂಬವಂತನೂಕೂಡ, ತನಗೆ ಸೇರಿದ ಕೆಲವು ಕರಡಿಯ ಸೈನ್ಯಗಳನ್ನು ಕಟ್ಟಿಕೊಂಡು, ಆ ವಾನರರೊಡನೆ ಸೇರಿ ಮುಂದೆ ನುಗ್ಗಿ, ಕಲ್ಲುಗಳಿಂದಲೂ, ಉಗುರುಗಳಿಂದಲೂ, ಹಲ್ಲುಗಳಿಂದಲೂ, ಕಂಡಕಂಡ ರಾಕ್ಷಸರನ್ನು ಭೇದಿಸಿ ಕೊಲ್ಲುತ್ತ ಬಂದನು. ಹೀಗೆ ಜಾಂಬವಂತನು ಮೇಲೆಬಿದ್ದು ಹೊಡೆಯುವುದನ್ನು ಕಂಡು, ಮಹಾಬಲವುಳ್ಳ ಕೆಲವು ರಾಕ್ಷಸರು ನಾನಾ ಯುಧಗಳನ್ನು ಹಿಡಿದು, ಅವನನ್ನು ಸುತ್ತಿಮುತ್ತಿ, ಕೆಲವರು ಬಾಣಗಳಿಂದಲೂ ಕೆಲವರು ಕೊಡಲಿಗಳಿಂದಲೂ, ಕೆಲವರು ಪಟ್ಟಸಗಳಿಂದಲೂ, ಕೆಲವರು ದೊಣ್ಣೆಗಳಿಂಧಲೂ, ಕೆಲವರು ತೋಮರಗಳಿಂದಲೂ, ಪ್ರಹರಿಸಿದರು. ಆಗ ವಾನರ ರಾಕ್ಷಸರಿಗೆ ನಡೆದ ದೊಂಬಿಯುದ್ಧವು ದೇವಾಸುರ ಯುದ್ಧದಂತೆ ಮಹಾ ಭಯಂಕರವಾಯಿತು. ಇದನ್ನುನೋಡಿ ವೀರ್ಯಶಾಲಿಯೂದ ಹನುಮಂತನು (ಕ್ಷಣಕಾಲದವರೆಗೆ ಲಕ್ಷ್ಮಣನನ್ನು ಕೆಳಕ್ಕಿಳಿಸಿ) ಒಂದು ದೊಡ್ಡ ಮರವನ್ನು ಕಿತ್ತುತಂದು, ಸಾವಿರಾರುಮಂದಿ ರಾಕ್ಷಸರಮೇಲೆ ಬಿದ್ದು ಮಹಾಯುದ್ಧವನ್ನು ನಡೆಸಿದನು. ಇಷ್ಟರಲ್ಲಿ ಇಂದ್ರಜಿತ್ತು ತನಗಿದಿರಾಗಿದ್ದ ತನ್ನ ಚಿಕ್ಕಪ್ಪನಾದ ವಿಭೀಷಣನೊಡನೆ ದೊಡ್ಡ ಯುದ್ಧವನ್ನು ನಡೆಸಿ, ಅಲ್ಲಿಂದ ತಿರುಗಿ ಪರಂತಪನಾದ ಲಕ್ಷ್ಮಣನನ್ನಿದಿರಿಸಿ ಹೋದನು. ವೀರಾಗ್ರಣಿಗಳೆನಿಸಿ ಯುದ್ಧವಿಶಾರದರಾದ ಆ ಇಂದ್ರಜಿತ್ತು ಲಕ್ಷ್ಮಣರಿಬ್ಬರೂ, ಒಬ್ಬರನ್ನೊಬ್ಬರು ಬಾಣವರ್ಷಗಳಿಂದ ಭೇದಿಸಿದರು. ಮಳೆಗಾಲದಲ್ಲಿ ಚಂದ್ರಸೂರ್ಯರಿಬ್ಬರೂ ಮೇಘಗಳಲ್ಲಿ ಮರೆಸಿ ಹೋಗುವಂತೆ, ಮಹಾಬಲಾಢ್ಯರಾದ ಆ ವೀರರಿಬ್ಬರೂ ಆಗಾಗ ಬಾಣಸಮೂಹಗಳಲ್ಲಿ ಮರೆಯೂಗುತ್ತಿದ್ದರು. ಈ ವೀರರಿಬ್ಬರೂ ತಮ್ಮ ತಮ್ಮ ಹಸ್ತಲಾಘವದಿಂದ ಹೋರಾಡುವಾಗ, ಅವರು ಬತ್ತಳಿಕೆಯಿಂದ ಬಾಣಗಳನ್ನೆತ್ತುವುದಾಗಲಿ, ಅವರ ಬಾಣಸಂಧಾನವಾಗಲಿ, ಅವರು ಆಗಾಗ ತಮ್ಮ ಬಿಲ್ಲನ್ನು ಕೈಯಿಂದ ಕೈಗೆ ಮಾರಿಸಿ ಹಿಡಿಯುವುದಾಗಲಿ, ಅವರ ಬಾಣಪ್ರಯೋಗವಾಗಲಿ, ಅವರು ಕಿವಿಯವರೆಗೆ ನಾಣನ್ನೆಳೆಯುವುದಾಗಲಿ, (ಆಲೀಢಾದಿ ಕ್ರಮದಿಂದ) ಕಾಲನ್ನು ಚಾಚಿನಿಲ್ಲುವುದಾಗಲಿ, ನಾಣನ್ನು ಹಿಡಿಯುವುದಾಗಲಿ, ಗುರಿನೋಡುವುದಾಗಲಿ, ಸ್ವಲ್ಪಮಾತ್ರವೂ ಬೇರೆಯವರಿಗೆ ಗೋಚರಿಸುತ್ತಿರಲಿಲ್ಲ! ಬಿಲ್ಲಿನಿಂದ ಎಡೆಬಿಡದೆ ಹೊರಟು ಬರುವ ಬಾಣಪರಂಪರೆಗಳು

ಮಾತ್ರ ಅಂತರಿಕ್ಷವನ್ನೆಲ್ಲಾ ಮರೆಸಿಬಿಟ್ಟುವು. ಆಗ ಭೂವ್ಯೋಮಾಕಾಶಗಳಲ್ಲಿ ಎಲ್ಲಿನೋಡಿದರೂ ಬಾಣಗಳು ಹೊರತು ಬೇರೆ ಯಾವ ವಸ್ತುವೂ ಕಾಣು ತ್ತಿರಲಿಲ್ಲ. ಆಗ ಲಕ್ಷ್ಮಣನು ಇಂದ್ರಜಿತ್ತನ್ನೂ, ಇಂದ್ರಜಿತ್ತು ಲಕ್ಷ್ಮಣ ನನ್ನೂ, ಕ್ರಮಕ್ರಮವಾಗಿ ಮೇಲೆಬಿದ್ದು ಹೊಡೆಯುತ್ತಿರುವಾಗ, ಯಾರು ಯಾರನ್ನು ಹೊಡೆಯುವರೆಂಬ ನಿಶ್ಚಯವನ್ನು ತಿಳಿಯುವುದೇ ಅಶಕ್ಯವಾಯಿತು. ಇವರಿಬ್ಬರೂ ಪ್ರಯೋಗಿಸಿದ ಬಾಣಸಮೂಹಗಳು ಮಾತ್ರ ಆಕಾಶದಲ್ಲಿ ಎಡೆ ಬಿಡದೆ ದಟ್ಟವಾಗಿ ತುಂಬಿ ಆ ಯುದ್ಧರಂಗದಲ್ಲಿ ಕೇವಲ ಗಾಢಾಂಧಕಾರವು ಕವಿದಂತಾಯಿತು. ಇಬ್ಬರ ಕಡೆಯಿಂದಲೂ ತಂಡತಂಡವಾಗಿ ಬಾಣಗಳು ಹೊರ ಡುತ್ತಿದ್ದುದರಿಂದ, ದಿಕ್ಕುದಿಕ್ಕುಗಳೆಲ್ಲವೂ ಕೇವಲ ಬಾಣಮಯಗಳಾಗಿ ಕಾಣಿ ಸುತ್ತಿದ್ದುವು. ಸೂರ್ಯಾಸ್ತಮಯವಾದ ಮೇಲೆ ಸಮಸ್ತ ವಸ್ತುಗಳನ್ನೂ ಅಂಧ ಕಾರವೊಂದೇ ಆವರಿಸುವಂತೆ, ಎಲ್ಲೆಲ್ಲಿಯೂ ಭಯಂಕರವಾದ ಕತ್ತಲೆಯು ಕವಿಯಿತು. ಎಲ್ಲಿ ನೋಡಿದರೂ ರಕ್ತಪ್ರವಾಹಗಳು ದೊಡ್ಡ ದೊಡ್ಡ ನದಿಗಳ ಹಾಗೆ ಹರಿಯುತ್ತಿದ್ದುವು. ಎಲ್ಲಿ ನೋಡಿದರೂ ಮಾಂಸಾಹಾರಿಗಳಾದ ಕ್ರೂರಜಂ ತುಗಳು ಭಯಂಕರಸ್ವರದಿಂದ ಕೂಗುತ್ತಿದ್ದುವು. ಭಯದಿಂದ ವಾಯುವು ಸ್ತಬ್ಧ ವಾಯಿತು- ಅಗ್ನಿಯು ಜ್ವಲಿಸದೆ ಹೋಯಿತು. ಈ ಮಹೋತ್ಪಾತಗಳನ್ನು ನೋಡಿ ಮಹರ್ಷಿಗಳೆಲ್ಲರೂ ಲೋಕನಾಶವಾಗುವುದೆಂದು ಭಯಪಟ್ಟು "ಲೋಕಕ್ಕೆ ಕ್ಷೇಮವಾಗಲಿ!" ಎಂದು ಸ್ವಸ್ತಿವಾಚನಗಳನ್ನು ಮಾಡುತ್ತಿದ್ದರು. ಯುದ್ಧವನ್ನು ನೋಡಬೇಕೆಂದು ಬಂದಿದ್ದ ಚಾರಣರೂ, ಗಂಧರ್ವರೂ ಈ ಭಯಂಕರವಾದ ಸ್ಥಿತಿಯನ್ನು ನೋಡಿ ಭಯಪಟ್ಟು ಓಡಿಹೋದರು. ಆಗ ಲಕ್ಷ್ಮಣನು ಇಂದ್ರಜಿತ್ತಿನ ರಥಕ್ಕೆ ಹೂಡಿದ್ದ ಶ್ಯಾಮವರ್ಣವುಳ್ಳ ಸುವರ್ಣಾ ಲಂಕೃತಗಳಾದ ನಾಲ್ಕು ಕುದುರೆಗಳನ್ನೂ ನಾಲ್ಕು ಬಾಣಗಳಿಂದ ಹೊಡೆ ದನು- ಆಮೇಲೆ ಶ್ರೀಮಂತನಾದ ಲಕ್ಷ್ಮಣನು ಚೆನ್ನಾಗಿ ಸಾಣೆಯಿಕ್ಕಿ ತೀಕ್ಷ್ಣ ವಾಗಿಯೂ ಉತ್ತಮವಾದ ಗರಿಗಳುಳ್ಳದಾಗಿಯೂ, ಕಾಂತಿವಿಶಿಷ್ಟವಾಗಿಯೂ, ಇಂದ್ರನ ವಜ್ರಾಯುಧದಂತೆ ಕ್ರೂರವಾಗಿಯೂ ಇರುವ ಭಲ್ಲದಂತೆ ಮೊನೆ ಯುಳ್ಳ ಬೇರೊಂದು ಬಾಣವನ್ನು ತೆಗೆದು, ಅದನ್ನು ಆಕರ್ಣಾಂತವಾಗಿ ಎಳೆದು, ಕೈಗೆ ಕಟ್ಟಿದ ನಾಣೊತ್ತಿನ ಘರ್ಷಣದಿಂದ ಸಿಡಿಲಿನಂತೆ ಶಬ್ದಿಸುತ್ತಿದ್ದ ಆ ಬಾಣವನ್ನು ಸೂಟಿಯಿಂದ ಪ್ರಯೋಗಿಸಿ, ಇಂದ್ರಜಿತ್ತಿನ ರಥವನ್ನು ಚಿತ್ರಗತಿಯಿಂದ ನಡೆಸುತ್ತಿದ್ದ ಸಾರಥಿಯ ತಲೆಯನ್ನು ಕತ್ತರಿಸಿ ಕೆಡಹಿದನು.

ಮಹಾತೇಜಸ್ವಿಯೂದ ಮಂಡೋದರಿ ಪುತ್ರನಾದರೋ ಸಾರಥಿಯು ಸತ್ತು ಬಿದ್ದರೂ ಹಿಂಜರಿಯದೆ, ತಾನೇ ರಥವನ್ನು ನಡೆಸುತ್ತ ಬಿಲ್ಲನ್ನು ಹಿಡಿದು ಯುದ್ಧವನ್ನಾರಂಭಿಸಿದನು. ತಾನೇ ಸಾರಥಿಯಾಗಿಯೂ ರಥಿಕನಾಗಿಯೂ ಯುದ್ಧಮಾಡುತ್ತಿದ್ದ ಆ ಇಂದ್ರಜಿತ್ತಿನ ಸಾಮರ್ಥ್ಯವು ನೋಡುವವರಿಗೆ ಅತ್ಯಾಶ್ಚರ್ಯವನ್ನುಂಟುಮಾಡಿತು- ಇತ್ತಲಾಗಿ ಲಕ್ಷ್ಮಣನಾದರೋ, ಇಂದ್ರಜಿತ್ತು ರಥವನ್ನು ನಡೆಸವುದಕ್ಕಾಗಿ ಕುದುರೆಯ ಹಗ್ಗಕ್ಕೆ ಕೈಯಿಟ್ಟಾಗ, ಬಾಣಗಳಿಂದ ಅವನ ಬಿಲ್ಲನ್ನು ಭೇದಿಸುವನು. ಈ ಇಂದ್ರಜಿತ್ತು ಹಗ್ಗವನ್ನು ಬಿಟ್ಟು ಯುದ್ಧಕ್ಕಾಗಿ ಬಿಲ್ಲಿಗೆ ಕೈಯಿಟ್ಟಾಗ ಕುದುರೆಗಳನ್ನು ಭೇದಿಸುವನು. ಅತಿ ಶೀಘ್ರವಾದ ಹಸ್ತಲಾಘವವುಳ್ಳ ಲಕ್ಷ್ಮಣನು, ಹೀಗೆ ಆಯಾ ಸಂಚನ್ನು ನೋಡಿ, ರಥಸ್ಥನಾಗಿ ತಿರುಗುತ್ತಿದ್ದ ಇಂದ್ರಜಿತ್ತನ್ನು ಬಾಣ ಪರಂಪರೆಗಳಿಂದ ಬಹಳವಾಗಿ ಪೀಡಿಸುತ್ತಿದ್ದನು. ಅತ್ತಲಾಗಿ ಇಂದ್ರಜಿತ್ತಿಗೆ ಸಾರಥಿಯು ಸತ್ತುಬಿದ್ದಾಗಲೇ ಅವನ ಕೊಬ್ಬು ಬಹಳ ಮಟ್ಟಿಗೆ ಮುರಿದು ಹೋಯಿತು. ಇದರಮೇಲೆ ಲಕ್ಷ್ಮಣನು ಉಸಿರಾಡುವುದಕ್ಕೂ ಅವಕಾಶವಿಲ್ಲದಂತೆ ಮೇಲೆಮೇಲೆ ಬಾಣ ಪ್ರಯೋಗ ಮಾಡುವುದನ್ನು ನೋಡಿ ಅವನ ಮನಸ್ಸು ಧೈರ್ಯಗೆಟ್ಟಿತು. ಇಂದ್ರಜಿತ್ತಿನ ಮುಖವು ಬಣ್ಣಗುಂದಿದುದನ್ನು ನೋಡಿ ವಾನರರಿಗೆ ಇನ್ನೂ ಉತ್ಸಾಹವು ಹೆಚ್ಚಿತು- ಈ ಸಂತೋಷದಿಂದ ಅವರೆಲ್ಲರೂ ಲಕ್ಷ್ಮಣನನ್ನು ಬಹಳವಾಗಿ ಪೂಜಿಸಿ ಕೊಂಡಾಡುತ್ತಿದ್ದರು. ಇಷ್ಟರಲ್ಲಿ ಪ್ರಮಾಥಿ, ಶಂಭ, ರಭಸ, ಗಂಧಮಾಧನರೆಂಬ ನಾಲ್ಕುಮಂದಿ ವಾನರರೂ ಇಂದ್ರಜಿತ್ತಿನ ಹೆಮ್ಮೆಯನ್ನು ನೋಡಿ ಸಹಿಸಲಾರದೆ, ತಮ್ಮ ವೇಗವನ್ನು ತೋರಿಸುವುದಕ್ಕಾರಂಭಿಸಿದರು. ಮಹಾ ವೀರ್ಯಶಾಲಿಗಳಾಗಿ ಭಯಂಕರ ಪರಾಕ್ರಮವುಳ್ಳ ಈ ನಾಲ್ಕುಮಂದಿ ವಾನರರೂ ಒಂದೇ ನೆಗೆತಕ್ಕೆ ಏಕಕಾಲದಲ್ಲಿ ಇಂದ್ರಜಿತ್ತಿನ ರಥಾಶ್ವಗಳ ಮೇಲೆ ಹಾರಿ, ಒಬ್ಬೊಬ್ಬರು ಒಂದೊಂದು ಕುದುರೆಯನ್ನು ಮೆಟ್ಟಿದರು. ಪರ್ವತಾಕಾರವುಳ್ಳ ಈ ವಾನರರು ಹಾರಿಬಂದು ಮೇಲೆ ಬಿದ್ದೊಡನೆ, ಕುದುರೆಗಳು ಅವರ ಭಾರವನ್ನು ತಡೆಯಲಾರದೆ, ಬಾಯಿಂದ ಕೆಂಪಾದ ರಕ್ತವನ್ನು ಕಕ್ಕುತ್ತ ಮೈಮುರಿದು ನಜ್ಜುಗುಜ್ಜಾಗಿ ಕೆಳಗೆ ಬಿದ್ದು ಸತ್ತುವು. ಹೀಗೆ ನಾಲ್ಕು ಮಂದಿ ವಾನರಯೂಥಪರೂ ಇಂದ್ರಜಿತ್ತಿನ ನಾಲ್ಕು ರಥಾಶ್ವಗಳನ್ನೂ ಕೊಂದು ಲಕ್ಷ್ಮಣನ ಸಮೀಪವನ್ನು ಸೇರಿದರು. ಆಮೇಲೆ ಇಂದ್ರಜಿತ್ತು, ಸಾರಥಿಯೂ ಕುದುರೆಗಳೂ ಸತ್ತುದರಿಂದ ಶೂನ್ಯವಾದ ತನ್ನ ರಥವನ್ನು

ಬಿಟ್ಟು ಕೆಳಕ್ಕಿಳಿದು, ಕಾಲುನಡೆಯಿಂದಲೇ ಲಕ್ಷ್ಮಣನೊಡನೆ ಯುದ್ಧಕ್ಕೆ ನಿಂತು, ಅವನ ಮೇಲೆ ಬಾಣವರ್ಷವನ್ನು ಕರೆಯುತ್ತ ಬಂದನು. ಆಗ ಇಂದ್ರಪರಾಕ್ರಮವುಳ್ಳ ಲಕ್ಷ್ಮಣನೂ ಕೂಡ, ತನ್ನ ಮೇಲೆ ತೀಕ್ಷ್ಣ ಬಾಣಗಳನ್ನು ಬಿಡುತ್ತ ಕಾಲುನಡೆಯಿಂದಲೇ ಮೇಲೆಬಿದ್ದು ಬರುತ್ತಿರುವ ಇಂದ್ರಜಿತ್ತನ್ನು, ತನ್ನ ತೀಕ್ಷ್ಣ ಬಾಣಗಳಿಂದ ತಡೆಯುತ್ತಿದ್ದನು.

ಇಲ್ಲಿಗೆ ತೊಂಬತ್ತನೆಯ ಸರ್ಗವು.

ಇಂದ್ರಜಿತ್ತು ಬೇರೆ ರಥವನ್ನೇರಿ ಬರಲು, ತಿರುಗಿ ಲಕ್ಷ್ಮಣನು
ಅವನ ಸಾರಥಿಯನ್ನೂ, ವಿಭೀಷಣನು ಅವನ ರಥಾಶ್ವ
ಗಳನ್ನೂ ಕೊಂದುದು. ಕೊನೆಗೆ ಲಕ್ಷ್ಮಣನಿಂದ
ಇಂದ್ರಜಿತ್ತು ಹತನಾದುದು.

ರಥಾಶ್ವಗಳು ಸತ್ತುಬಿದ್ದಮೇಲೆ ಇಂದ್ರಜಿತ್ತು ರಥದಿಂದಿಳಿದು ನೆಲದಲ್ಲಿನಿಂತು, ಅತಿಕೋಪಾವಿಷ್ಟನಾಗಿ ತೇಜಸ್ಸಿನಿಂದ ಜ್ವಲಿಸುತ್ತಿದ್ದನು, ಆ ಧನುರ್ಧಾರಿಗಳಿಬ್ಬರೂ ಒಬ್ಬರನ್ನೊಬ್ಬರು ಕೊಲ್ಲಬೇಕೆಂದು ಹಟದಿಂದ ಒಬ್ಬರನ್ನೊಬ್ಬರು ಬಾಣಗಳಿಂದ ಪೀಡಿಸುತ್ತ, ಮದಿಸಿದ ಕಾಡಾನೆಗಳಂತೆ ಹೋರಾಡುತ್ತಿದ್ದರು. ಇವರಿಗೆ ಬೆಂಬಲವಾಗಿ ಬಂದ ವಾನರ ರಾಕ್ಷಸರೂ ಕೂಡ, ಆ ರಣಾಂಗಣದಲ್ಲಿ ನಾನಾಕಡೆಗಳಿಗೂ ಸುತ್ತುತ್ತ, ತಮ್ಮ ತಮ್ಮ ನಾಯಕರನ್ನು ಬಿಟ್ಟುಕೊಡದೆ ಸಾಹಸದಿಂದ ಯುದ್ಧಮಾಡುತ್ತಬಂದರು. ಆಗ ಇಂದ್ರಜಿತ್ತು ತನ್ನ ಕಡೆಯ ರಾಕ್ಷಸರ ಸಾಹಸವನ್ನು ನೋಡಿ ಮೆಚ್ಚಿ, ಅವರನ್ನು ಬಹಳವಾಗಿ ಕೊಂಡಾಡುತ್ತ ಅವರಿಗೆ ಇನ್ನೂ ಪ್ರೋತ್ಸಾಹವನ್ನು ಹುಟ್ಟಿಸುವುದಕ್ಕಾಗಿ ಅವರನ್ನು ಕುರಿತು "ಎಲೈ ರಾಕ್ಷಸೋತ್ತಮರೆ ! ಇದೋ ! ಈಗ ಸಮಸ್ತದಿಕ್ಕುಗಳಲ್ಲಿಯೂ ಕತ್ತಲೆಯು ದಟ್ಟವಾಗಿ ಕವಿದಿರುವುದು. ಈ ಕತ್ತಲೆಯಲ್ಲಿ ನಮ್ಮವರೆಂದೂ ಶತ್ರುಗಳೆಂದೂ ವ್ಯತ್ಯಾಸವೇ ತಿಳಿಯುವುದಿಲ್ಲ. ಆದುದರಿಂದ ಈಗ ನೀವು ಮಾಡಬೇಕಾದ

ಕಾರ್ಯವೇನೆಂದರೆ, ಈ ನಡುವೆ ನಾನು ಲಂಕೆಗೆ ಹೋಗಿ ಬರಬೇಕಾಗಿರುವುದು. ಈ ಸಂಗತಿಯು ವಾನರರಿಗೆ ತಿಳಿಯದಹಾಗೆ ವಂಚಿಸುವುದಕ್ಕಾಗಿ, ಇವರೊಡನೆ ಎಡೆಬಿಡದೆ ಯುದ್ಧವನ್ನು ನಡೆಸುತ್ತ ಇಲ್ಲಿಯೇ ನಿಲ್ಲಿಸಿಟ್ಟುಕೊಳ್ಳಬೇಕು. ನಾನು ಲಂಕೆಗೆ ಹೋದಾಗ, ಹಿಂದಿನಂತೆ ದುರಾತ್ಮರಾದ ಈ ವಾನರರು ಯುದ್ಧಕ್ಕಾಗಿ ನನ್ನನ್ನು ತಡೆಯದಹಾಗೆ ಮಾಡಿರಿ!" ಎಂದನು. ರಾವಣಪುತ್ರನು ಹೀಗೆಂದು ತನ್ನ ಕಡೆಯ ರಾಕ್ಷಸರಿಗೆ ನಿಯಮಿಸಿ, ಯಾರಿಗೂ ತಿಳಿಯದಂತೆ ಆ ಯುದ್ಧರಂಗವನ್ನು ಬಿಟ್ಟು ಹೊರಟು, ರಥವನ್ನು ತರುವುದಕ್ಕಾಗಿ ಲಂಕೆಗೆ ಹೋದನು. ಮಹಾತೇಜಸ್ವಿಯಾದ ಆ ರಾವಣಪುತ್ರನು ಅಲ್ಲಿ ಸುವರ್ಣಾಲಂಕೃತವಾಗಿಯೂ, ನೂರಾರು ಕತ್ತಿಗಳಿಂದಲೂ, ಪ್ರಾಸಗಳಿಂದಲೂ ಪೂರ್ಣವಾಗಿಯೂ, ಉತ್ತಮಾಶ್ವಗಳಿಂದ ಕಟ್ಟಲ್ಪಟ್ಟುದಾಗಿಯೂ, ಇದ್ದ ಒಂದು ರಥವನ್ನು ತರಿಸಿದನು. ಆ ರಥವನ್ನು ನಡೆಸುವುದಕ್ಕಾಗಿ ತನಗೆ ಆಗಾಗ ಹಿತವನ್ನುಪದೇಶಿಸತಕ್ಕವನಾಗಿಯೂ, ಅಶ್ವಲಕ್ಷಣಗಳನ್ನು ಚೆನ್ನಾಗಿ ಬಲ್ಲವನಾಗಿಯೂ ಇದ್ದ ಸಾರಥಿಯೊಬ್ಬನನ್ನು ನಿಯಮಿಸಿ, ಮೊದಲೇ ಕಾಂತಿವಿಶಿಷ್ಟವಾದ ಆ ರಥವನ್ನು ತನ್ನ ತೇಜಸ್ಸಿನಿಂದ ಮತ್ತಷ್ಟು ವಿಶೇಷವಾಗಿ ಬೆಳಗುತ್ತ ರಥವನ್ನೇರಿದನು. ಹೀಗೆ ಇಂದ್ರಜಿತ್ತು ರಥಾರೂಢನಾಗಿ, ಇನ್ನೂ ಕೆಲವು ರಾಕ್ಷಸರನ್ನೂ ಸಂಗಡ ಕರೆದುಕೊಂಡು, ಮೃತ್ಯುವಶನಾದುದರಿಂದ ತಿರುಗಿ ಲಕ್ಷ್ಮಣನೊಡನೆ ಯುದ್ಧಮಾಡಬೇಕೆಂಬ ಬುದ್ಧಿಯಿಂದ, ಅತಿತೀವ್ರವಾಗಿ ಲಂಕೆಯನ್ನು ಬಿಟ್ಟು ಹೊರಟುಬಂದನು. ಯಾವ ಶತ್ರುವನ್ನಾದರೂ ಧ್ವಂಸ ಮಾಡತಕ್ಕ ಮಹಾವೀರ್ಯವುಳ್ಳ ಆ ರಾವಣಪುತ್ರನು, ವೇಗವುಳ್ಳ ಕುದುರೆಗಳ ಮೇಲೆ ಹೂಡಿದ ಆ ರಥವನ್ನು ಅದಷ್ಟು ವೇಗದಿಂದ ನಡೆಸಿಕೊಂಡು, ಲಕ್ಷ್ಮಣ ವಿಭೀಷಣರಿದ್ದ ಕಡೆಗೆ ಬಂದು ಸೇರಿದನು. ಆ ರಣರಂಗದಲ್ಲಿಯೇ ಹೊಸರಥವನ್ನೇರಿ ಬಂದಿರುವ ಆ ಇಂದ್ರಜಿತ್ತಿನ ಚಾತುರ್ಯವನ್ನು ನೋಡಿ ಲಕ್ಷಣನಿಗೂ ವಾನರವಿಭೀಷಣರಿಗೂ ಪರಮಾಶ್ಚರ್ಯವಾಯಿತು. ಇಂದ್ರಜಿತ್ತು ರಥವನ್ನೇರಿ ಬಂದೊಡನೆ ಕೋಪದಿಂದ ಬಾಣವರ್ಷವನ್ನು ಕರೆಯುತ್ತ, ಅಲ್ಲಲ್ಲಿ ವಾನರಪ್ರಮುಖರನ್ನು ಹುಡುಕಿ ತಂಡತಂಡವಾಗಿ ಕೊಂದು ಕೆಡಹುತ್ತ ಬಂದನು. ಹೀಗೆ ಪರಂತಪನಾದ ಆ ಇಂದ್ರಜಿತ್ತು ಬಾಗಿದ್ದ ಬಿಲ್ಲನ್ನು ಕೈಯಲ್ಲಿ ಹಿಡಿದು ವಾನರರ ಮೇಲೆ ತನಗಿದ್ದ ಕೋಪವೆಲ್ಲವೂ ತೀರುವಂತೆ ಅತ್ಯಂತ ಹಸ್ತಲಾಘ

ವದಿಂದ ತಂಡತಂಡವಾಗಿ ಬಾಣಗಳನ್ನು ಸುರಿದು ವಾನರರನ್ನು ಕೊಲ್ಲುತ್ತ ಬಂದನು. ವಾನರರು ಭಯಂಕರಪರಾಕ್ರಮವುಳ್ಳವರಾಗಿದ್ದರೂ, ಆಗ ಆ ಇಂದ್ರಜಿತ್ತಿನ ಬಾಣಹತಿಯನ್ನು ತಡೆದು ನಿಲ್ಲಲಾರದೆ, ಪ್ರಜೆಗಳು ಬ್ರಹ್ಮ ದೇವನನ್ನು ಮರೆಹೊಗುವಂತೆ ಭಯದಿಂದೋಡಿಬಂದು, ಲಕ್ಷ್ಮಣನಲ್ಲಿ ಮರೆಹೊಕ್ಕರು. ಆಗ ಲಕ್ಷ್ಮಣನು ಅತಿ ಕೋಪಾವೇಶದಿಂದ ಜ್ವಲಿಸುತ್ತ ತನ್ನ ಕೈಚಳಕವನ್ನು ತೋರಿಸುವುದಕ್ಕೆ ತೊಡಗಿ ಒಂದೇ ಬಾಣದಿಂದ ಇಂದ್ರ ಜಿತ್ತಿನ ಕೈಯಲಿದ್ದ ಧನುಸ್ಸನ್ನು ಕತ್ತರಿಸಿಬಿಟ್ಟನು. ಇಷ್ಟರಲ್ಲಿಯೇ ಇಂದ್ರ ಜಿತ್ತು ಬೇರೊಂದು ಬಿಲ್ಲನ್ನು ಕೈಗೆತ್ತಿಕೊಂಡು, ಅದಕ್ಕೆ ಅತ್ಯಾತುರದಿಂದ ನಾಣೇರಿಸಿ ಕಟ್ಟುತ್ತಿರುವಷ್ಟರಲ್ಲಿ, ಲಕ್ಷ್ಮಣನು ಮೂರು ಬಾಣಗಳಿಂದ ಆ ಧನುಸ್ಸನ್ನೂ ತುಂಡುಮಾಡಿ ಕೆಡಹಿದನು. ಸರ್ಪವಿಷದಂತೆ ಅತಿ ಕ್ರೂರ ಗಳಾದ ಬೇರೆ ಐದು ಬಾಣಗಳನ್ನು ತೆಗೆದು, ಇಂದ್ರಜಿತ್ತಿನ ಎದೆಗೆ ಗುರಿಯಿಟ್ಟು ಹೊಡೆದನು. ಲಕ್ಷ್ಮಣನ ಮಹಾಧನುಸ್ಸಿನಿಂದ ಹೊರಟ ಈ ಐದು ಬಾಣಗಳೂ, ಇಂದ್ರಜಿತ್ತಿನ ದೇಹವನ್ನು ಭೇದಿಸಿಕೊಂಡು, ಅವನ ರಕ್ತದಿಂದ ತೊಯ್ದು ರಕ್ತಸರ್ಪಗಳಂತೆ ಕಾಣುತ್ತ ಕೆಳಗೆ ಬಿದ್ದುವು. ಈ ಬಾಣಪ್ರಹಾರದಿಂದ ಇಂದ್ರಜಿತ್ತಿನ ಕವಚವು ಹರಿಯಿತು. ಅವನ ಬಾಯಿಂದ ರಕ್ತವು ಸುರಿಯಿತು. ಹಾಗಿದ್ದರೂ ಅವನು ಧೈರ್ಯಗುಂದದೆ ದೃಢವಾದ ನಾಣುಳ್ಳ ಮತ್ತು ಸಾರವತ್ತಾದ ಬೇರೊಂದು ಧನುಸ್ಸನ್ನು ಕೈಗೆತ್ತಿ ಕೊಂಡು, ವಿಶೇಷ ಹಸ್ತಲಾಘವವನ್ನು ತೋರಿಸುತ್ತ, ಇಂದ್ರನು ಮಳೆಯನ್ನು ಕರೆಯುವಂತೆ ಲಕ್ಷ್ಮಣನಮೇಲೆ ಬಾಣವರ್ಷವನ್ನು ಕರೆದನು. ಆ ಇಂದ್ರ ಜಿತ್ತು ಪ್ರಯೋಗಿಸಿದ ಬಾಣವರ್ಷವು ಬೇರೆಯವರಿಂದ ತಡೆಯಲಸಾಧ್ಯ ವಾಗಿದ್ದರೂ, ಪರಂತಪನಾದ ಲಕ್ಷ್ಮಣನು ನಿರ್ಭಯವಾಗಿ ನಿಂತು ಅದನ್ನು ತನ್ನ ಬಾಣಗಳಿಂದ ನಿವಾರಿಸಿ ನಡುನಡುವೆ ತನ್ನ ಹಸ್ತಚಾತುರ್ಯ ವನ್ನು ತೋರಿಸುತ್ತ ಇಂದ್ರಜಿತ್ತನ್ನು ಬಾಣಗಳಿಂದ ಹೊಡೆಯುತ್ತಿದ್ದನು. ಆಗ ಲಕ್ಷ್ಮಣನು ತೋರಿಸಿದ ಕೈಚಳಕವು ನೋಡುವವರಿಗೆ ಅತ್ಯಾಶ್ಚ ರ್ಯವನ್ನುಂಟುಮಾಡಿತು. ಇದಲ್ಲದೆ ಆಗ ಲಕ್ಷ್ಮಣನು ಕೋಪಾವಿಷ್ಟ ನಾಗಿ ಮೇಲೆಮೇಲೆ ತನ್ನ ಹಸ್ತಲಾಘವವನ್ನು ತೋರಿಸುತ್ತ ತನಗಿದಿರಾಗಿದ್ದ ಒಬ್ಬೊಬ್ಬರಾಕ್ಷಸನನ್ನೂ ಮೂರುಮೂರು ಬಾಣಗಳಿಂದ ಭೇದಿಸಿ, ಇಂದ್ರ ಜಿತ್ತಿನ ಮೇಲೆಯೂ ಬಾಣಸಮೂಹಗಳನ್ನು ಕರೆಯುತ್ತ ಬಂದನು. ಇದನ್ನು

ನೋಡಿ ಇಂದ್ರಜಿತ್ತು ಕುಪಿತನಾಗಿ, ಲಕ್ಷ್ಮಣನಿಗೆ ತಕ್ಕಂತೆ ತಾನೂ ತನ್ನ ಕೈಚಳಕವನ್ನು ತೋರಿಸುತ್ತ, ಅವನ ಮೇಲೆ ತಂಡತಂಡವಾಗಿ ಬಾಣಗಳನ್ನು ಬಿಡುತ್ತ ಬಂದನು. ಈ ಬಾಣಗಳು ಸಮೀಪಕ್ಕೆ ಬರುವಷ್ಟರಲ್ಲಿಯೇ ಲಕ್ಷ್ಮಣನು ಅವೆಲ್ಲವನ್ನೂ ತನ್ನ ತೀಕ್ಷ್ಣಬಾಣಗಳಿಂದ ತಡೆದುದಲ್ಲದೆ, ಬಗ್ಗಿದ ಗಿಣ್ಣುಳ್ಳ ಭಲ್ಲಾಕಾರವಾದ ಒಂದು ಬಾಣವನ್ನು ಪ್ರಯೋಗಿಸಿ, ಅದರಿಂದ ಇಂದ್ರಜಿತ್ತಿನ ರಥವನ್ನು ನಡೆಸುತ್ತಿದ್ದ ಸಾರಥಿಯ ತಲೆಯನ್ನು ಕತ್ತರಿಸಿ ಕೆಡಹಿದನು. ಸಾರಥಿಯಿಲ್ಲದಿದ್ದರೂ ರಥದ ಕುದುರೆಗಳು ಅವುಗಳಿಗಿದ್ದ ಪ್ರಬಲವಾದ ಶಿಕ್ಷಾಚಾತುರ್ಯದಿಂದ ಸ್ವಲ್ಪಮಾತ್ರವೂ ಹಿಂಜರಿಯದೆ ರಥವನ್ನೆಳೆದುಕೊಂಡು ಮಂಡಲಗತಿಯಿಂದ ಸುತ್ತುತ್ತಿದ್ದುವು. ಇದು ನೋಡುವವರಿಗೆ ಅತ್ಯಾಶ್ಚರ್ಯವನ್ನುಂಟುಮಾಡಿತು. ಇಷ್ಟರಲ್ಲಿ ದೃಢಪರಾಕ್ರಮಿಯಾದ ಲಕ್ಷ್ಮಣನು ಕೋಪಾವಿಷ್ಟನಾಗಿ, ರಾಕ್ಷಸರೆಲ್ಲರನ್ನೂ ನಡುಗಿಸುವಂತೆ ಕ್ರೂರಬಾಣಗಳಿಂದ ಆ ಇಂದ್ರಜಿತ್ತಿನ ರಥಾಶ್ವಗಳನ್ನು ಪ್ರಹರಿಸಿದನು. ಇಂದ್ರಜಿತ್ತು ಲಕ್ಷ್ಮಣನ ಕಾರ್ಯವನ್ನು ನೋಡಿ ತಡೆಯಲಾರದ ಕೋಪದಿಂದ ಅವನಮೇಲೆ ಹತ್ತು ಬಾಣಗಳನ್ನು ಪ್ರಯೋಗಿಸಿದನು. ವಜ್ರದಂತೆ ದೃಢವಾಗಿಯೂ, ಸರ್ಪವಿಷದಂತೆ ಕ್ರೂರವಾಗಿಯೂ ಇದ್ದ ಈ ಬಾಣಸಮೂಹವು ಲಕ್ಷ್ಮಣನು ಧರಿಸಿದ್ದ ಸುವರ್ಣಮಯವಾದ ಕವಚಕ್ಕೆ ತಾಗಿದೊಡನೆ ಮೊನೆಮುರಿದು ಕೆಳಗೆ ಬಿದ್ದುವು. ಇದನ್ನು ನೋಡಿ ಇಂದ್ರಜಿತ್ತು, ಲಕ್ಷ್ಮಣನು ಅಭೇದ್ಯಕವಚವನ್ನು ಧರಿಸಿರುವನೆಂದೆಣಿಸಿ, ಅತ್ಯಂತ ಕುಪಿತನಾಗಿ ದೃಢವಾದ ಹಿಡಿಗಳುಳ್ಳ ಮೂರುಬಾಣಗಳನ್ನು ತೆಗೆದು ಅವುಗಳನ್ನು ಲಕ್ಷ್ಮಣನ ಹಣೆಯಲ್ಲಿ ನಾಟಿದನು, ಈ ಮೂರು ಬಾಣಗಳೂ ಬಂದು ಹಣೆಯಲ್ಲಿ ನಾಟಿದಾಗ ಲಕ್ಷ್ಮಣನು ಕ್ಷಣಕಾಲದವರೆಗೆ ಮೂರು ಶಿಖರಗಳುಳ್ಳ ಪರ್ವತದಂತೆ ಕಾಣಿಸುತ್ತಿದ್ದನು. ಆ ಮಹಾಯುದ್ಧದಲ್ಲಿ ಇಂದ್ರಜಿತ್ತಿನ ಬಾಣಗಳಿಂದ ಪೀಡಿತನಾದ ಲಕ್ಷ್ಮಣನು, ಬೇಗನೆ ಐದು ಬಾಣಗಳನ್ನು ತೆಗೆದು ಬಿಲ್ಲಿನಲ್ಲಿ ಸೇರಿಸಿ, ಅವುಗಳನ್ನು ವೇಗದಿಂದೆಳೆದು ಕುಂಡಲಾಲಂಕೃತವಾದ ಇಂದ್ರಜಿತ್ತಿನ ಮುಖಕ್ಕೆ ಗುರಿಯಿಟ್ಟು ಹೊಡೆದನು. ಹೀಗೆ ರಣವೀರರಾದ ಇಂದ್ರಜಿತ್ತು ಲಕ್ಷ್ಮಣರಿಬ್ಬರೂ ತಮ್ಮ ತಮ್ಮ ಮಹಾಬಲವನ್ನೂ, ಪರಾಕ್ರಮವನ್ನೂ ತೋರಿಸುತ್ತ, ದೃಢವಾದ ಬಿಲ್ಲುಗಳನ್ನು ಹಿಡಿದು ಬಗೆಬಗೆಯ ಬಾಣಗಳಿಂದ ಒಬ್ಬರನ್ನೊಬ್ಬರು ಭೇದಿಸುತ್ತ

ಬಂದರು. ಅವರಿಬ್ಬರಿಗೂ ಸಮಸ್ತಾವಯವಗಳಲ್ಲಿಯೂ ರಕ್ತವು ಕಿತ್ತು ಕೊಂಡಿತು. ಅವರಿಬ್ಬರೂ ಪುಷ್ಪಿತಗಳಾದ ಮುತ್ತುಗದ ಮರಗಳಂತೆ ಕಾಣುತ್ತಿದ್ದರು. ಅವರಿಬ್ಬರೂ ಒಬ್ಬರನ್ನೊಬ್ಬರು ಜಯಿಸಬೇಕೆಂಬ ಹಟ ದಿಂದ ತಮ್ಮತಮ್ಮ ಮಹಾಧನುಸ್ಸನ್ನು ಹಿಡಿದು ಒಂದೊಂದವಯವಕ್ಕೂ ಗುರಿ ಹಿಡಿದು ಬಾಣವನ್ನು ಹೊಡೆಯುತ್ತ ಬಂದರು. ಈ ನಡುವೆ ಇಂದ್ರ ಜಿತ್ತು ವಿಭೀಷಣನನ್ನು ನೋಡಿ ಕೋಪದಿಂದ ಅವನ ಮುಖಕ್ಕೆ ಗುರಿ ಯಿಟ್ಟು ಮೂರು ಬಾಣಗಳನ್ನು ಹೊಡೆದನು. ಮತ್ತು ಅಲ್ಲಿದ್ದ ಒಬ್ಬೊಬ್ಬ ವಾನರಪ್ರಮುಖನನ್ನೂ ಒಂದೊಂದು ಬಾಣದಿಂದ ಪ್ರಹರಿಸಿದನು- ಆಗ ಮಹಾತೇಜಸ್ವಿಯಾದ ವಿಭೀಷಣನು, ಇಂದ್ರಜಿತ್ತಿನ ಕಾರ್ಯಕ್ಕಾಗಿ ಬಹಳ ಕೋಪಗೊಂಡು, ಇಂದ್ರಜಿತ್ತಿನ ರಥಕ್ಕೆ ಕಟ್ಟಿದ್ದ ಕುದುರೆಗಳನ್ನು ತನ್ನ ಗದೆಯಿಂದ ಬಡಿದು ಕೆಡಹಿದನು. ಆಗ ಇಂದ್ರಜಿತ್ತು ತನ್ನ ಸಾರಥಿಯೂ ಕುದುರೆಗಳೂ ಸತ್ತುದರಿಂದ ಶೂನ್ಯವಾದ ಆ ರಥವನ್ನು ಬಿಟ್ಟು ಕೆಳಕ್ಕೆಹಾರಿ, ಅದರಲ್ಲಿದ್ದ ಒಂದು ಶಕ್ತ್ಯಾಯುಧವನ್ನು ತೆಗೆದುಕೊಂಡು, ಅದನ್ನು ವಿಭೀ ಷಣನಮೇಲೆ ಗುರಿಯಿಟ್ಟು ವೇಗದಿಂದ ಬೀಸಿದನು. ಆ ಶಕ್ತಿಯು ವಿಭೀ ಷಣನನ್ನು ಸಮೀಪಿಸುವಷ್ಟರಲ್ಲಿಯೇ ಲಕ್ಷ್ಮಣನು ತನ್ನ ತೀಕ್ಷ್ಣಬಾಣ ಗಳಿಂದ ನಡುದಾರಿಯಲ್ಲಿಯೇ ಅದನ್ನು ಖಂಡಿಸಲು, ಆ ಶಕ್ತಿಯು ಹತ್ತು ತುಂಡಾಗಿ ಕೆಳಗೆ ಬಿದ್ದಿತು. ಇಷ್ಟರಲ್ಲಿ ವಿಭೀಷಣನು ಧೃಢವಾದ ಬಿಲ್ಲನ್ನು ಹಿಡಿದು, ವಜ್ರಗಳಂತೆ ತೀಕ್ಷ್ಣಗಳಾದ ಐದು ಬಾಣಗಳನ್ನು ಸಂಧಾನಮಾಡಿ, ತನಗಿದಿರಾಗಿ ಕೋಪದಿಂದ ಕಾಲುನಡೆಯಲ್ಲಿ ಬರುತ್ತಿದ್ದ ಇಂದ್ರಜಿತ್ತಿನ ಎದೆಗೆ ಗುರಿಯಿಟ್ಟು ಹೊಡೆದನು. ಚಿನ್ನದ ಹಿಡಿಯುಳ್ಳ ಈ ಐದು ಬಾಣ ಗಳೂ ಗುರಿತಪ್ಪದೆ ಬಂದು, ಇಂದ್ರಜಿತ್ತಿನ ಎದೆಯನ್ನು ಭೇದಿಸಿಕೊಂಡು, ಅವನ ದೇಹದ ರಕ್ತದಿಂದ ತೊಯ್ದು, ಕೆಂಪಾದ ಮಹಾಸರ್ಪಗಳಂತೆ ಕಾಣುತ್ತಿದ್ದುವು. ಇದನ್ನು ನೋಡಿ ಇಂದ್ರಜಿತ್ತಿಗೆ ವಿಭೀಷಣನ ಮೇಲಿದ್ದ ಕೋಪವು ಇನ್ನೂ ಹೆಚ್ಚಿತು- ಪೂರ್ವದಲ್ಲಿ ತನಗೆ ಯಮನಿಂದ ಕೊಡಲ್ಪಟ್ಟ ಒಂದು ಉತ್ತಮ ಬಾಣವನ್ನು ಕೈಗೆತ್ತಿಕೊಂಡನು. ರಾಕ್ಷಸರೆಲ್ಲರೂ ನೋಡುತ್ತಿರುವಾಗ ಇಂದ್ರಜಿತ್ತು ಆ ಬಾಣವನ್ನು ಬಿಲ್ಲಿನಲ್ಲಿ ಸಂಧಾನ ಮಾಡಿದುದನ್ನು ನೋಡಿ ಮಹಾತೇಜಸ್ವಿಯಾಗಿಯೂ ಭಯಂಕರ ಪರಾಕ್ರಮ ವುಳ್ಳವನಾಗಿಯೂ ಇದ್ದ ಲಕ್ಷ್ಮಣನೂ ಕೂಡ ಅದನ್ನು ನಿಗ್ರಹಿಸುವು

ದಕ್ಕಾಗಿ ಬೇರೊಂದು ದಿವ್ಯಾಸ್ತ್ರವನ್ನು ಕೈಗೆತ್ತಿಕೊಂಡನು. ಪೂರ್ವದಲ್ಲಿ ಕುಬೇರನು ತಾನಾಗಿಯೇ ಸ್ವಪ್ನದಲ್ಲಿ ಬಂದು, ಲಕ್ಷ್ಮಣನಿಗೆ ಈ ಬಾಣವನ್ನು ಅನುಗ್ರಹಿಸಿ ಕೊಟ್ಟಿದ್ದುದರಿಂದ ಅದನ್ನು ತಡೆಯುವುದು ಯಾರಿಗೂ ಸಾಧ್ಯವಲ್ಲ. ದೇವಾಸುರರೊಡಗೂಡಿ ದೇವೇಂದ್ರನೇ ಬಂದರೂ ಅದರ ಸ್ಪರ್ಶವನ್ನು ತಡೆಯಲಾರನು. ಇಂದ್ರಜಿತ್ತು ಲಕ್ಷ್ಮಣರಿಬ್ಬರೂ ಹೀಗೆ ತಮತಮಗೆ ವರಪ್ರಾಪ್ತಗಳಾದ ದಿವ್ಯಬಾಣಗಳನ್ನು ಧನುಸ್ಸಿನಲ್ಲಿ ಸೇರಿಸಿ, ತಮ್ಮ ತಮ್ಮ ಶಕ್ತಿಗೆ ತಕ್ಕಂತೆ ಆಕರ್ಣಾಂತವಾಗಿ ಅವುಗಳನ್ನೆಳೆಯುತ್ತಿದ್ದಾಗ, ಆ ಧನುಸ್ಸುಗಳೆರಡೂ ಕ್ರೌಂಚಪಕ್ಷಿಗಳಂತೆ ಧ್ವನಿಮಾಡುತ್ತಿದ್ದುವು. ಆ ವೀರರಿಬ್ಬರೂ ಆ ದಿವ್ಯಬಾಣಗಳನ್ನು ಧನುಸ್ಸಿನಲ್ಲಿ ಸೇರಿಸಿ ನಾಣನ್ನೆಳೆಯುವುದಕ್ಕೆ ಮೊದಲೇ ಆ ಬಾಣಗಳೆರಡೂ ಕಾಂತಿಯಿಂದ ಜ್ವಲಿಸಲಾರಂಭಿಸಿದುವು. ಅವರಿಬ್ಬರೂ ಒಂದೇಕಾಲದಲ್ಲಿ ಈ ಬಾಣಗಳನ್ನು ಪ್ರಯೋಗಿಸಲು, ಅವೆರಡೂ ತಮ್ಮ ತಮ್ಮ ಕಾಂತಿಯಿಂದ ಆಕಾಶವನ್ನು ಬೆಳಗುತ್ತ, ಇದಿರಿದಿರಾಗಿ ಒಂದು ಒಂದನ್ನೊಂದು ಮುಖದಿಂದ ಮುಖಕ್ಕೆ ಬಡಿದು, ಎರಡೂ ಭಿನ್ನವಾಗಿ ಕೆಳಗೆ ಬಿದ್ದುವು. ಘೋರರೂಪವುಳ್ಳ ಆ ಬಾಣಗಳೆರಡೂ ಒಂದಕ್ಕೊಂದು ಘಟ್ಟಿಸಿದಾಗ, ಅದರಿಂದುಂಟಾದ ಬೆಂಕಿಯು, ಹೊಗೆಯನ್ನೂ, ಕಿಡಿಗಳನ್ನೂ ಕೆದರಿ ಅತಿ ಭಯಂಕರವಾಯಿತು. ಆಕಾಶದಲ್ಲಿ ಮಹಾಗ್ರಹಗಳಂತೆ ಆ ಬಾಣಗಳೆರಡೂ ಒಂದಕ್ಕೊಂದು ತಾಗಿ ನೂರಾರು ತುಂಡುಗಳಾಗಿ ಕೆಳಗೆ ಬಿದ್ದವು. ತಮ್ಮ ತಮ್ಮ ಬಾಣಗಳೆರಡೂ ವಿಫಲವಾದುದನ್ನು ನೋಡಿ ಇಂದ್ರಜಿತ್ತು ಲಕ್ಷ್ಮಣರಿಬ್ಬರಿಗೂ ಮನಸ್ಸಿನಲ್ಲಿ ನಾಚಿಕೆಯೂ, ರೋಷವೂ ಉಂಟಾಯಿತು- ಆಗ ಲಕ್ಷ್ಮಣನು ಕೋಪಾವೇಶವನ್ನು ತಡೆಯಲಾರದೆ ವಾರುಣಾಸ್ತ್ರವನ್ನು ಕೈಗೆತ್ತಿಕೊಂಡು ಬಿಲ್ಲಿನಲ್ಲಿ ಹೂಡಿದನು. ಇದನ್ನು ನೋಡಿ ಇಂದ್ರಜಿತ್ತು ಧೈರ್ಯಗೆಡದೆ ರೌದ್ರಾಸ್ತ್ರವನ್ನು ತೆಗೆದು ಪ್ರಯೋಗಿಸಲು. ಮಹಾದ್ಭುತವಾದ ಈ ಅಸ್ತ್ರದಿಂದ ಆ ವಾರುಣಾಸ್ತ್ರವು ಪ್ರತಿಹತವಾಗಿ ಬಿದ್ದಿತು. ಆ ಮೇಲೆ ಮಹಾತೇಜಸ್ವಿಯಾದ ಇಂದ್ರಜಿತ್ತು ಕೋಪಾವಿಷ್ಟನಾಗಿ, ಲೋಕವನ್ನೇ ದಹಿಸಿಬಿಡುವಂತೆ ಅತಿ ಜಾಜ್ವಲ್ಯಮಾನವಾದ ಆಗ್ನೇಯಾಸ್ತ್ರವನ್ನು ಪ್ರಯೋಗಿಸಿದನು. ವೀರನಾದ ಲಕ್ಷ್ಮಣನು ಅದನ್ನು ಸೌರಾಸ್ತ್ರದಿಂದ ನಿವಾರಿಸಿದನು. ಆಗ ಇಂದ್ರಜಿತ್ತು ತನ್ನ ಆಗ್ನೇಯಾಸ್ತ್ರವು ವಿಫಲವಾದುದನ್ನು ನೋಡಿ ಕೋಪ

ಗೊಂಡು, ಶತ್ರುನಾಶಕ್ಕಾಗಿ ಭಯಂಕರವಾದ ಅಸುರಾಸ್ತ್ರವನ್ನು ಬಿಲ್ಲಿನಲ್ಲಿ ಸಂಧಿಸಿದನು. ಇಂದ್ರಜಿತ್ತು ಈ ಅಸ್ತ್ರವನ್ನು ಸಂಧಾನಮಾಡಿದೊಡನೆ ಅವನ ಬಿಲ್ಲಿನಿಂದ ಕೂಟಮುದ್ಗರಗಳೆಂಬ ಆಯುಧಗಳೂ, ಶೂಲಗಳೂ ಮುಸುಂಡಿಗಳೆಂಬ ಕಬ್ಬಿಣದೊನಕೆಗಳೂ, ಗದೆಗಳೂ, ಕತ್ತಿಗಳೂ, ಗಂಡು ಗೊಡಲಿಗಳೂ ಪರಂಪರೆಯಾಗಿ ಹೊರಡಲಾರಂಭಿಸಿದುವು. ಸಮಸ್ತಭೂತ ಗಳಿಗೆ ತಡೆಯಲಸಾಧ್ಯವಾಗಿ, ಸರ್ವಶತ್ರುವಿನಾಶಕವಾದ ಆ ಅಸುರಾಸ್ತ್ರದ ಉರವಣೆಯನ್ನು ನೋಡಿ ಲಕ್ಷ್ಮಣನು ಮಾಹೇಶ್ವರಾಸ್ತ್ರದಿಂದ ಅದನ್ನು ನಿವಾರಿಸಿದನು. ಇಂದ್ರಜಿತ್ತಿಗೂ, ಲಕ್ಷ್ಮಣನಿಗೂ ಆಗ ನಡೆದ ಈ ಮಂತ್ರಾಸ್ತ್ರಯುದ್ಧವು ಮಹಾದ್ಭುತವಾಯಿತು. ಆಕಾಶದಲ್ಲಿದ್ದ ಸಮಸ್ತಭೂತ ಗಳೂ ಲಕ್ಷ್ಮಣನನ್ನು ಸುತ್ತಿ ನಿಂತು ನೋಡುತ್ತಿದ್ದುವು. ವಾನರರಾಕ್ಷಸ ರಿಬ್ಬರೂ ಪ್ರಚಂಡ ಧ್ವನಿಯೊಡನೆ ಭಯಂಕರವಾಗಿ ಯುದ್ಧವನ್ನು ಮಾಡು ತ್ತಿರಲು, ಆಕಾಶವೆಲ್ಲವೂ ಆಶ್ಚರ್ಯದಿಂದ ನೆರೆದುನೋಡುತ್ತಿದ್ದ ಅನೇ ಭೂತಗಳಿಂದ ತುಂಬಿ ಶೋಭಿಸುತ್ತಿತ್ತು. ಮಹರ್ಷಿಗಳೂ, ಪಿತೃದೇವತೆ ಗಳೂ, ದೇವತೆಗಳೂ, ಗರುಡ ಗಂಧರ್ವ ಪನ್ನಗಾದಿಗಳೂ ಇಂದ್ರನನ್ನು ಮುಂದಿಟ್ಟುಕೊಂಡು ಬಂದು, ಲಕ್ಷ್ಮಣನನ್ನು ಜಯಾಶೀರ್ವಾದಗಳಿಂದ ರಕ್ಷಿಸುತ್ತಿದ್ದರು. ಆಗ ಲಕ್ಷ್ಮಣನು ಅಗ್ನಿಗೆಣೆಯಾಗಿ ಇಂದ್ರಜಿತ್ತನ್ನು ಕೊನೆ ಗಾಣಿಸತಕ್ಕ ಒಂದು ಉತ್ತಮಾಸ್ತ್ರವನ್ನು ತೆಗೆದು, ಅದನ್ನು ಬಿಲ್ಲಿನಲ್ಲಿ ಸಂಧಾನಮಾಡಿದನು. ಉತ್ತಮವಾದ ಗರಿಗಳಿಂದಲೂ, ನಯವಾದ ಗಿಣ್ಣು ಗಳಿಂದಲೂ, ದೃಢವಾದ ಕಟ್ಟುಗಳಿಂದಲೂ ಕೂಡಿ, ನಡುನಡುವೆ ಚಿನ್ನದ ರೇಕುಗಳಿಂದ ಚಿತ್ರವಾಗಿ, ವೃತ್ರಾಕಾರವಾಗಿದ್ದ ಆ ಮಹಾಸ್ತ್ರವು, ಎಂತಹ ಶರೀರವನ್ನಾದರೂ ಭೇದಿಸಿ ಪ್ರಾಣವನ್ನು ನೀಗಿಸದೆ ಬಿಡದು. ಅದರ ವೇಗವನ್ನು ತಡೆದು ನಿಲ್ಲಿಸುವುದಕ್ಕಾಗಲಿ, ಆ ವೇಗವನ್ನು ಸಹಿಸಿಕೊಳ್ಳು ವುದಕ್ಕಾಗಲಿ ಯಾರೊಬ್ಬರಿಗೂ ಸಾಧ್ಯವಲ್ಲ. ಸರ್ಪವಿಷದಂತೆ ಕ್ರೂರವಾಗಿ ನೋಡುವಾಗಲೇ ರಾಕ್ಷಸರಿಗೆ ಭಯವನ್ನು ಹುಟ್ಟಿಸುವುದು. ಸಮಸ್ತ ದೇವತೆಗಳಿಂದಲೂ ದೇವಾಸುರ ಯುದ್ಧದಲ್ಲಿ ಮಹಾತೇಜಸ್ವಿಯಾಗಿಯೂ ವೀರ್ಯವಂತನಾಗಿಯೂ, ಹೊಂಬಣ್ಣದ ಕುದುರೆಗಳುಳ್ಳವನಾಗಿಯೂ, ಸರ್ವ ಸಮರ್ಥನಾಗಿಯೂ, ಇರುವ ದೇವೇಂದ್ರನು, ಇದರಿಂದಲೇ ಸಮಸ್ತ ದಾನ ವರನ್ನೂ ನಿಗ್ರಹಿಸಿ ಜಯವನ್ನು ಹೊಂದಿರುವನು. ಪುರುಷೋತ್ತಮನಾದ

ಲಕ್ಷ್ಮಣನು ಯಾವ ಯುದ್ಧಗಳಲ್ಲಿಯೂ ಭಂಗಹೊಂದದ ಸರ್ವೋತ್ತಮವಾದ ಆ ಬಾಣವನ್ನು ತನ್ನ ಧನುಸ್ಸಿನಲ್ಲಿ ಹೂಡಿದನು. ಹೀಗೆ ಲಕ್ಷ್ಮಣನು ನಾಣೇರಿಸಿದ ತನ್ನ ಧನುಸ್ಸಿನಲ್ಲಿ ಆ ದಿವ್ಯಾಸ್ತ್ರವನ್ನು ಸೇರಿಸಿ, ಪ್ರಳಯ ಕಾಲದಲ್ಲಿ ಲೋಕನಾಶಕ್ಕಾಗಿ ನಿಂತ ಯಮನಂತೆ ರಣರಂಗದಲ್ಲಿ ನಿಂತು ನಾಣನ್ನೆಳೆಯುತ್ತ, ತನ್ನ ಕಾರ್ಯದಿಂದ ಆ ಬಾಣವನ್ನು ನೋಡಿ "ಎಲೆ ಬಾಣವೆ! ದಶರಥಕುಮಾರನಾದ ಆ ಶ್ರೀರಾಮನು ಧರ್ಮಸ್ವರೂಪನಾಗಿಯೂ ಸತ್ಯವಂತನಾಗಿಯೂ ಇದ್ದಪಕ್ಷದಲ್ಲಿ, ಈ ಒಂದೇ ಪ್ರಹಾರಕ್ಕೆ ನೀನು ಇಂದ್ರಜಿತ್ತನ್ನು ಕೊಲ್ಲಬೇಕು" ಎಂದನು. ಹೀಗೆಂದು ಹೇಳಿ ವೀರನಾದ ಲಕ್ಷ್ಮಣನು, ಋಜುಗತಿಯುಳ್ಳ ಆ ಬಾಣವನ್ನು ಆಕರ್ಣಾಂತವಾಗಿ ಹಿಂದ ಕ್ಕೆಳೆದು, ಐಂದ್ರಾಸ್ತ್ರ ಮಂತ್ರದಿಂದಭಿಮಂತ್ರಿಸಿ, ಇಂದ್ರಜಿತ್ತಿನ ಮೇಲೆ ಪ್ರಯೋಗಿಸಿದನು. ಈ ಬಾಣವು ಲಕ್ಷ್ಮಣನ ಧನುಸ್ಸಿನಿಂದ ಪ್ರಯುಕ್ತ ವಾದೊಡನೆ ವೇಗದಿಂದ ಹೊರಟು ಕಿರೀಟದಿಂದಲೂ, ಜ್ವಲಿಸುವ ಕುಂಡಲ ಗಳಿಂದಲೂ ಶೋಭಿತವಾಗಿ ಕಾಂತಿವಿಶಿಷ್ಟವಾಗಿದ್ದ ಇಂದ್ರಜಿತ್ತಿನ ತಲೆಯನ್ನು ಹಾರಿಸಿ ಕೆಳಕ್ಕೆ ಕೆಡಹಿತು. ದೇಹದಿಂದ ಬೇರ್ಪಟ್ಟ ಆ ಇಂದ್ರಜಿತ್ತಿನ ತಲೆಯು, ರಕ್ತದಿಂದ ತೊಯ್ದು ನೆಲದಲ್ಲಿ ಬಿದ್ದು, ಸುವರ್ಣಕಾಂತಿಯಿಂದ ಹೊಳೆಯುತ್ತಿತ್ತು. ಲಕ್ಷ್ಮಣನಿಂದ ಹತನಾದ ಆ ರಾವಣಪುತ್ರನು, ಕವಚ ವನ್ನೂ, ಕಿರೀಟವನ್ನೂ, ಧನುಸ್ಸನ್ನೂ ಧರಿಸಿ ಹಾಗೆಯೇ ಎರಡು ತುಂಡಾಗಿ ಕೆಳಗೆ ಬಿದ್ದನು. ಇಂದ್ರಜಿತ್ತು ಹತನಾಗಿ ಬಿದ್ದುದನ್ನು ನೋಡಿ ವಿಭೀಷಣನೂ, ಅಲ್ಲಿದ್ದ ವಾನರರೂ, ವೃತ್ರವಧವನ್ನು ನೋಡಿ ದೇವತೆಗಳು ಹೇಗೋಹಾಗೆ ಸಂತೋಷದಿಂದ ಕೋಲಾಹಲವನ್ನು ಮಾಡಿದರು. ಇಂದ್ರ ಜಿತ್ತಿನ ವಧೆಯನ್ನು ನೋಡಿ ಮಹೋತ್ಸಾಹಗೊಂಡ ವಾನರರೆಲ್ಲರೂ ಅಲ್ಲಲ್ಲಿ ರಾಕ್ಷಸರನ್ನು ಬೆನ್ನಟ್ಟಿ ಹಿಡಿದು ಕೊಲ್ಲುತ್ತಿರಲು ಆ ರಾಕ್ಷಸ ರೆಲ್ಲರೂ ಕಪಿಗಳ ಬಾಧೆಯನ್ನು ತಡೆಯಲಾರದೆ, ಭಯದಿಂದ ತಮ್ಮ ದೇಹವನ್ನೇ ಮರೆತು, ತಾವು ಹಿಡಿದಿದ್ದ ಆಯುಧಗಳನ್ನೂ ಅಲ್ಲಲ್ಲಿಯೇ ಬಿಸುಟು ಲಂಕೆಗೆ ಪಲಾಯನಮಾಡಿದರು. ಆ ರಾಕ್ಷಸ ಸೇನೆಯೆಲ್ಲವೂ ವಾನರರ ಭಯದಿಂದ ತಮ್ಮಲ್ಲಿದ್ದ ಕತ್ತಿ, ಕೊಡಲಿ, ಪಟ್ಟಸ, ಮುಂತಾದ ಆಯುಧಗಳನ್ನು ಬಿಸುಟು, ನೂರಾರು ಮಂದಿ ಗುಂಪು ಗುಂಪಾಗಿ ನಾನಾದಿಕ್ಕುಗಳಿಗೆ ಓಡಿದರು. ಇಂದ್ರಜಿತ್ತು ಯುದ್ಧದಲ್ಲಿ ಹತನಾಗಿ ಬಿದ್ದೊ

ಡನೆ, ವಾನರರ ಬಾಧೆಯನ್ನು ತಡೆಯಲಾರದೆ ಕೆಲವರು ಲಂಕೆಯನ್ನು ಪ್ರವೇಶಿಸಿದರು. ಕೆಲವರು ಸಮುದ್ರದಲ್ಲಿ ಬಿದ್ದರು. ಕೆಲವರು ಬೆಟ್ಟಗಳಲ್ಲಿ ಅವಿತುಕೊಂಡರು. ಸೂರ್ಯನು ಅಸ್ತಂಗತನಾದಮೇಲೆ ಅವನ ಸಾವಿರಾರು ಕಿರಣಗಳಲ್ಲಿ ಒಂದಾದರೂ ಕಣ್ಣಿಗೆ ಕಾಣಿಸದಂತೆ, ಇಂದ್ರಜಿತ್ತು ಹತ ನಾಗಿದ್ದಮೇಲೆ ಅಲ್ಲಿದ್ದ ಸಾವಿರಾರು ಮಂದಿ ರಾಕ್ಷಸರಲ್ಲಿ ಒಬ್ಬನ ತಲೆಯೊದರೂ ಕಾಣಿಸಲಿಲ್ಲ. ಇಂದ್ರಜಿತ್ತು ಸ್ವಲ್ಪಕಾಲದವರೆಗೆ ಕೈಕಾಲುಗಳನ್ನೊದರುತ್ತಿದ್ದು ಕೊನೆಗೆ ಗತಪ್ರಾಣನಾಗಿ, ಕಾಂತಿಗುಂದಿದ ಬೆಂಕಿಯಂತೆ ನಿಸ್ತೇಜಸ್ಕ ನಾದನು. ರಾವಣಪುತ್ರನಾದ ಇಂದ್ರಜಿತ್ತು ಹತನಾಗಿ ಬಿದ್ದಕೂಡಲೆ ಸಮಸ್ತ ಲೋಕವೂ ನಿರುಪದ್ರವವಾಯಿತು. ಲೋಕದ ಅರಿಷ್ಟಗಳೆಲ್ಲವೂ ಅಡಗಿದಂತಾಯಿತು. ಅದುವರೆಗೂ ಇವನ ಭಯದಿಂದ ಕಾಂತಿಗುಂದಿದ್ದ ಸೂರ್ಯನು ಆಗ ಚೆನ್ನಾಗಿ ಪ್ರಕಾಶಿಸಿ ಲೋಕವನ್ನು ಬೆಳಗುತ್ತಿದ್ದನು. ಪಾಪಿಯೊದ ಆ ರಾಕ್ಷಸನು ಹತನಾದಕೂಡಲೆ, ಪೂಜ್ಯನಾದ ದೇವೇಂದ್ರನು, ಸಮಸ್ತ ದೇವಸಮೂಹಗಳೊಡನೆ ಸಂತೋಷದಿಂದಿದ್ದನು. ಆಕಾಶದಲ್ಲಿ ದೇವದುಂದುಭಿಗಳು ಮೊಳಗಿದುವು. ಅಪ್ಸರಸ್ಸುಗಳು ಮಹಾತ್ಮರಾದ ಗಂಧರ್ವರ ಗಾನಧ್ವನಿಯೊಡನೆ ನರ್ತಿಸುತ್ತಿದ್ದರು. ದೇವತೆಗಳೆಲ್ಲರೂ ಆಕಾಶ ದಿಂದ ಪುಷ್ಪವರ್ಷವನ್ನು ಕರೆದರು. ಒಬ್ಬೊಬ್ಬರೂ ಲಕ್ಷ್ಮಣನನ್ನು ಕೊಂಡಾ ಡುತ್ತಿದ್ದರು. ಆಗ ಇಂದ್ರಜಿತ್ತಿನ ವಧದಿಂದುಂಟಾದ ಸಂತೋಷಸಂಭ್ರಮ ಗಳು ಮಹಾದ್ಭುತವಾದುವು. ನೀರೆಲ್ಲವೂ ಪ್ರಸನ್ನವಾಯಿತು. ದಿಕ್ಕು ಗಳೆಲ್ಲವೂ ಸ್ವಚ್ಛವಾದುವು. ದೈತ್ಯದಾನವರೂ ಕೂಡ ಲೋಕಕಂಟಕನಾದ ಇಂದ್ರಜಿತ್ತಿನ ಸಾವನ್ನು ನೋಡಿ ಸಂತೋಷಗೊಂಡರು. ಲೋಕಭಯಂಕರ ನಾದ ಇಂದ್ರಜಿತ್ತು ಹತನಾಗಿ ಬಿದ್ದಕೂಡಲೆ, ದೇವಗಂಧರ್ವದಾನವರೆಲ್ಲರೂ ಗುಂಪಾಗಿ ಸೇರಿ ಬಂದು "ಇನ್ನುಮೇಲೆ ಬ್ರಾಹ್ಮಣರೆಲ್ಲರೂ ನಿರ್ಭಯರಾಗಿ ನೆಮ್ಮದಿಯಿಂದ ವಿಹರಿಸುತ್ತಿರಲಿ" ಎಂದು ಶುಭಾಶಂಸನವನ್ನು ಮಾಡಿದರು. ಎಣೆಯಿಲ್ಲದ ವೀರ್ಯವುಳ್ಳ ಆ ರಾಕ್ಷಸನು ಸತ್ತುದನ್ನು ನೋಡಿ ವಾನರ ರೆಲ್ಲರೂ ಪರಮ ಸಂತೋಷದಿಂದ ಲಕ್ಷ್ಮಣನನ್ನು ಕೊಂಡಾಡಿದರು. ವಿಭೀ ಷಣನೂ, ಹನುಮಂತನೂ, ಭಲ್ಲೂಕಾಧಿಪತಿಯಾದ ಜಾಂಬವಂತನೂ ಜಯ ಶೀಲನಾದ ಲಕ್ಷ್ಮಣನನ್ನು ಸಂತೋಷದಿಂದ ಸ್ತುತಿಸಿದರು. ವಾನರರು ತಮ್ಮ ಕೋರಿಕೆ ಈಡೇರಿತೆಂಬ ಸಂತೋಷದಿಂದ ಕೇಕೆಹಾಕಿ ಕೂಗಿ ಗರ್ಜಿಸುತ್ತ, ಲಕ್ಷ್ಮಣನನ್ನು ಸುತ್ತಿ ಸೇವಿಸುತ್ತಿದ್ದರು. ಮತ್ತು ಆಗ

ಅವರೆಲ್ಲರೂ ಉತ್ಸಾಹದಿಂದ ಬಾಲವನ್ನಾಡಿಸಿ, ಭುಜವನ್ನಪ್ಪಳಿಸುತ್ತ "ಲಕ್ಷ್ಮಣನಿಗೆ ಜಯವು" ಎಂದು ಕೂಗಿ ಒಬ್ಬರನ್ನೊಬ್ಬರು ಪ್ರೀತಿಯಿಂದಪ್ಪಿಕೊಂಡು, ಅಲ್ಲಲ್ಲಿ ಸೇರಿ ಲಕ್ಷ್ಮಣನ ಕಥೆಯನ್ನೇ ಹೇಳಿ ಹೇಳಿ ಸ್ತುತಿಸುತ್ತಿದ್ದರು. ದೇವಶತ್ರುವಾದ ಇಂದ್ರಜಿತ್ತು ಹತನಾದನೆಂಬ ಸುದ್ದಿಯನ್ನು, ದೇವತೆಗಳು ಚಾರಣರ ಮೂಲಕವಾಗಿ ಕೇಳಿದೊಡನೆ ಪರಮ ಹರ್ಷವನ್ನು ಹೊಂದಿ, ಇಂದ್ರಜಿತ್ತನ್ನು ಕೊಲ್ಲುವುದು ಲೋಕದಲ್ಲಿ ಯಾರೊಬ್ಬರಿಗೂ ಅಸಾಧ್ಯವಾದುದರಿಂದ, ಅದು ನಿಜವೋ ಸುಳ್ಳೋ ಎಂಬುದನ್ನು ತಿಳಿಯುವುದಕ್ಕಾಗಿ ಯುದ್ಧಭೂಮಿಗೆ ಬಂದು, ಸರ್ವಪ್ರಿಯಸುಹೃತ್ತಾದ ಲಕ್ಷ್ಮಣನ ದುಷ್ಕರಕಾರ್ಯವನ್ನು ಪ್ರತ್ಯಕ್ಷವಾಗಿ ನೋಡಿ ವಿಸ್ಮಯವನ್ನು ಹೊಂದಿದರು.

ಇಲ್ಲಿಗೆ ತೊಂಬತ್ತೊಂದನೆಯ ಸರ್ಗವು.

ಲಕ್ಷ್ಮಣನು ವಿಭೀಷಣಾದಿಗಳೊಡನೆ ರಾಮನ ಬಳಿಗೆ ಬಂದು ಅವನಿಗೆ ಇಂದ್ರಜಿದ್ವಧವನ್ನು ತಿಳಿಸಿದುದು. ರಾಮನು ಲಕ್ಷ್ಮಣನನ್ನಾಲಿಂಗಿಸಿ ವಾನರರೆಲ್ಲರನ್ನೂ ಶ್ಲಾಘಿಸಿದುದು. ರಾಮಾಜ್ಞೆಯಿಂದ ಸುಷೇಣನು, ಲಕ್ಷ್ಮಣಾದಿಗಳ ದೇಹದಲ್ಲಿ ನಾಟಿದ್ದ ಬಾಣಗಳನ್ನು ಕಿತ್ತು ಅವರ ನೋವನ್ನಾರಿಸಿ ಉಪಚರಿಸಿದುದು.

ಆಗ ವೀರ್ಯಯೋಗ್ಯವಾದ ಶುಭಲಕ್ಷ್ಮಣವನ್ನು ಸೂಚಿಸುವಂತೆ ರಕ್ತದಿಂದ ತೊಯ್ದ ಮೈಯುಳ್ಳ ಲಕ್ಷ್ಮಣನು, ಇಂದ್ರನನ್ನು ಜಯಿಸಿದ ಪ್ರಬಲ ರಾಕ್ಷಸನನ್ನೇ ತಾನು ಕೊಂದೆನೆಂಬ ಸಂತೋಷದಿಂದುಬ್ಬಿದ್ದನು. ವೀರ್ಯವಂತನಾಗಿಯೂ, ಮಹಾತೇಜಸ್ವಿಯೂಗಿಯೂ ಇದ್ದ ಆ ಲಕ್ಷ್ಮಣನು ಜಾಂಬವಂತನನ್ನೂ, ಹನುಮಂತನನ್ನೂ, ಇನ್ನೂ ಉಳಿದ ವಾನರಪ್ರಮುಖರನ್ನೂ ಸಮೀಪಕ್ಕೆ ಕರೆದು ಯುದ್ಧಶ್ರಮದಿಂದ ಹನುಮದ್ವಿಭೀ

ಷಣರ ಹೆಗಲಿನಮೇಲೆ ಕೈಹಾಕಿಕೊಂಡು, ರಾಮಸುಗ್ರೀವರಿದ್ದ ಕಡೆಗೆ ಹೊರಟನು. ಲಕ್ಷ್ಮಣನು ರಾಮನಬಳಿಗೆ ಬಂದೊಡನೆ, ಅವನಿಗೆ ಪ್ರದಕ್ಷಿಣಮಾಡಿ ನಮಸ್ಕರಿಸಿ, ಪ್ರಭುವಾದ ಇಂದ್ರನ ಬಳಿಯಲ್ಲಿ ನಿಂತಿರುವ ಬೃಹಸ್ಪತಿಯಂತೆ ಅಣ್ಣನ ಸಮೀಪದಲ್ಲಿ ನಿಂತನು. ವೀರನಾದ ಆ ಲಕ್ಷ್ಮಣನು ರಾಮನ ಬಳಿಯಲ್ಲಿ ನಿಂತು ಭಕ್ತಿಯಿಂದಲೂ ಅವ್ಯಕ್ತಾಕ್ಷರವುಳ್ಳ ಮಾತಿನಿಂದಲೂ, ರಾಮನಿಗೆ ಇಂದ್ರಜಿತ್ತು ಸತ್ತ ಸಂಗತಿಯನ್ನು ಮಾತ್ರ ಸೂಕ್ಷ್ಮವಾಗಿ ತಿಳಿಸಿ ಸುಮ್ಮನಿದ್ದನು. ಆಗೆ ವಿಭೀಷಣನು ರಾಮನನ್ನು ಕುರಿತು, “ರಾಮಾ! ಮುಚ್ಚುಮರೆಯೇಕೆ? ಮಹಾತ್ಮನಾದ ಈ ನಿನ್ನ ತಮ್ಮನೇ ಆ ಇಂದ್ರಜಿತ್ತಿನ ತಲೆಯನ್ನು ಕತ್ತರಿಸಿ ಕೆಡಹಿದನು” ಎಂದು ವಿಜ್ಞಾಪಿಸಿದನು. ಈ ಮಾತನ್ನು ಕೇಳಿದೊಡನೆ ರಾಮನು, ಪರಮ ಸಂತೋಷಗೊಂಡವನಾಗಿ “ವತ್ಸ ಲಕ್ಷ್ಮಣಾ! ಭಲೆ! ಶಹಬಾಸ್! ಪರಮ ಸಂತೋಷವಾಯಿತು! ಬಹಳ ದೊಡ್ಡ ಕಾರ್ಯವನ್ನು ನಡೆಸಿ ಮುಗಿಸಿದೆ! ಇಂದ್ರಜಿತ್ತು ಸತ್ತಮೇಲೆ ನಾವು ರಾವಣನನ್ನೂ ಕೊಂದು ಜಯವನ್ನು ಹೊಂದಿದಂತೆಯೇ ಹೊರತು ಬೇರೆಯಲ್ಲ”, ಎಂದನು. ಹೀಗೆಂದು ಹೇಳಿ ರಾಮನು, ತನಗೆ ಜಯಲಕ್ಷ್ಮಿಯನ್ನು ಕೈಗೂಡಿಸಿ ಕೊಟ್ಟ ಲಕ್ಷ್ಮಣನ ತಲೆಯನ್ನು ಪ್ರೀತಿಯಿಂದಾಘ್ರಾಣಿಸಿ ನಾಚಿಕೆಯಿಂದ ನಿಂತಿದ್ದ ಆ ಲಕ್ಷ್ಮಣನನ್ನು ಬಲಾತ್ಕಾರದಿಂದ ಕರೆದು ತೊಡೆಯಮೇಲೆ ಕುಳ್ಳಿರಿಸಿ, ಅವನನ್ನು ಪ್ರೀತಿಯಿಂದ ಬಿಗಿದಪ್ಪಿಕೊಂಡು, ಅವನನ್ನು ಬಾರಿಬಾರಿಗೂ ಸ್ನೇಹಪೂರ್ವಕವಾಗಿ ನೋಡುತ್ತಿದ್ದನು. ಆಗ ಪುರುಷಶ್ರೇಷ್ಠನಾದ ರಾಮನು, ತನ್ನ ಪ್ರಿಯಸಹೋದರನ ಮೈಯಲ್ಲಿ ಅಲ್ಲಲ್ಲಿ ಬಾಣದಲಗುಗಳು ನಾಟಿರುವುದನ್ನೂ, ಆ ಬಾಧೆಯಿಂದ ಅವನು ಆಗಾಗ ನಿಟ್ಟುಸಿರುಬಿಡುತ್ತಿರುವುದನ್ನೂ ನೋಡಿ ತಾನೂ ಕನಿಕರದಿಂದ ನಿಟ್ಟುಸಿರುಬಿಡುತ್ತ, ಬಾರಿಬಾರಿಗೂ ಅವನ ತಲೆಯನ್ನಾಘ್ರಾಣಿಸಿ, ಅವನ ಬಾಧೆಯನ್ನು ನಿವಾರಿಸಬೇಕೆಂಬ ಆತುರದಿಂದ, ಅವನ ಮೈಯನ್ನು ಸವರಿ ಸಮಾಧಾನಪಡಿಸುತ್ತ “ವತ್ಸ ಲಕ್ಷ್ಮಣಾ! ಈಗ ನೀನು ಬೇರೊಬ್ಬರಿಗೆ ಸಾಧ್ಯವಲ್ಲದ ದೊಡ್ಡ ಕಾರ್ಯವನ್ನು ನಡೆಸಿ, ನನಗೆ ಸರ್ವೋತ್ತಮವಾದ ಶ್ರೇಯಸ್ಸನ್ನು ಕೈಗೂಡಿಸಿ ಕೊಟ್ಟಿರುವೆ! ಅಂತಹ ವೀರನಾದ ಪುತ್ರನೇ ಹತನಾದಮೇಲೆ, ಇನ್ನು ರಾವಣನು ಹತಪ್ರಾಯನೇ

ಹೊರತು ಬೇರೆಯಲ್ಲ! ಹಿಂದೆ ನಾವು ಅನೇಕ ಶತ್ರುಗಳನ್ನು ಕೊಂದಿದ್ದರೂ ನಮಗೆ ಜಯವುಂಟಾದಂತೆ ತೋರಲಿಲ್ಲ! ದುರಾತ್ಮನಾದ ಆ ಇಂದ್ರಜಿತ್ತನ್ನು ಕೊಂದಮೇಲೆ ಈಗಲೇ ನಮಗೆ ಜಯವು ಕೈಗೂಡಿತೆಂದು ನಿಶ್ಚಯಿಸಬಹುದು.! ಈಗ ನೀನು ನನ್ನ ಭಾಗ್ಯವಶದಿಂದ ಇಂದ್ರಜಿತ್ತನ್ನು ಕೊಂದುದು, ಕ್ರೂರನಾದ ಆರಾವಣನ ಬಲದೋಳನ್ನೇ ಕತ್ತರಿಸಿದಂತಾಯಿತು. ಇವನೊಬ್ಬನೇ ರಾವಣನಿಗೆ ಮುಖ್ಯಬಲವಾಗಿದ್ದನು. ಈಗಿನ ಯುದ್ಧದಲ್ಲಿ ಈ ವಿಭೀಷಣನೂ, ಈ ಹನುಮಂತನೂ ಬಹಳ ದೊಡ್ಡ ಪರಾಕ್ರಮ ಕಾರ್ಯಗಳನ್ನು, ನಡೆಸಿರಬೇಕು.! ಪೂರ್ಣವಾಗಿ ಮೂರು ದಿನಗಳವರೆಗೆ, ಹಗಲೂ, ರಾತ್ರಿಯೂ, ಯುದ್ಧಮಾಡಿ, ಹೇಗೋ ಬಹಳ ಪ್ರಯಾಸದಿಂದ ಆ ದುರಾತ್ಮನನ್ನು ಕೆಡಹಿದುದಾಯಿತು! ಮುಖ್ಯವಾಗಿ ಈಗ ನಿನ್ನಿಂದಲೇ ನನ್ನ ಸಮಸ್ತ ಶತ್ರುಗಳೂ ಹತರಾದಂತಾಯಿತು! ಈಗ ರಾವಣನೂ ಕೂಡ ತನ್ನ ಪುತ್ರನ ಮರಣವನ್ನು ಕೇಳಿದೊಡನೆ, ದೊಡ್ಡಸೈನ್ಯವನ್ನು ಸೇರಿಸಿಕೊಂಡು ತಾನಾಗಿಯೇ ಯುದ್ಧಕ್ಕೆ ಬರುವುದರಲ್ಲಿ ಸಂದೇಹವಿಲ್ಲ. ಆದರೇನು! ಇರಲಿ. ಪುತ್ರಮರಣದಿಂದ ದುಃಖಿತನಾದ ಆ ರಾವಣನು ಎಷ್ಟೇ ದುರ್ಜಯನಾಗಿದ್ದರೂ, ಸೈನ್ಯಗಳನ್ನು ಸೇರಿಸಿ ಕರೆತಂದರೂ, ಅವನನ್ನು ನಾನು ಕೊಲ್ಲಬಲ್ಲೆನು. ಲಕ್ಷ್ಮಣಾ! ಮುಖ್ಯವಾಗಿ ನೀನು ವಿಧೇಯನಾಗಿ ದಿಕ್ಕಾಗಿರುವಾಗ ನನಗೆ ಯಾವ ವಿಧದಲ್ಲಿ ಕೊರತೆಯುಂಟು? ಈಗ ನೀನು ಯುದ್ಧದಲ್ಲಿ ಆ ಇಂದ್ರಜಿತ್ತನ್ನು ಕೊಂದುದರಿಂದ ಇನ್ನು ನನಗೆ ಸೀತೆಯನ್ನೂ, ಭೂಮಿಯನ್ನೂ ಪಡೆಯುವುದು ಎಷ್ಟು ಮಾತ್ರವೂ ದುಷ್ಕರವಲ್ಲ" ಎಂದನು. ಹೀಗೆ ರಾಮನು ಲಕ್ಷ್ಮಣನನ್ನಾಶ್ವಾಸಿಸಿ, ಅವನನ್ನು ಬಾರಿಬಾರಿಗೂ ಆಲಿಂಗಿಸುತ್ತ, ಸಮೀಪದಲ್ಲಿದ್ದ ಸುಷೇಣನನ್ನು ನೋಡಿ, "ಎಲೈ ವಾನರೋತ್ತಮನೇ! ನೀನು ಚಿಕಿತ್ಸೆಮಾಡುವುದರಲ್ಲಿ ಬಹಳ ಪ್ರಾಜ್ಞನಲ್ಲವೆ? ಇದೋ! ಮಿತ್ರವತ್ಸಲನಾದ ಈ ಲಕ್ಷ್ಮಣನು, ದೇಹದಲ್ಲಿ ಬಾಣಗಳು ನಾಟಿರುವುದರಿಂದ ಬಹಳವಾಗಿ ಬಾಧೆಪಡುತ್ತಿರುವನು. ಇವನಿಗೆ ಬಾಧೆಯು ತಪ್ಪಿ ಗುಣವಾಗುವಂತೆ ಮಾಡು! ಶೀಘ್ರದಲ್ಲಿಯೇ ಈ ಲಕ್ಷ್ಮಣ ವಿಭೀಷಣರ ಮೈಯಲ್ಲಿ ನಾಟಿರುವ ಶಲ್ಯಗಳನ್ನು ಕಿತ್ತುಬಿಡು! ಮತ್ತು ಈ ವಾನರ ಭಲ್ಲೂಕಸೈನಿಕರಲ್ಲಿ ಯಾರಯಾರ ದೇಹದಲ್ಲಿ ಬಾಣಗಳು ನಾಟಿರುವುವೋ, ಅವರೆಲ್ಲರಿಗೂ ನೀನು ತಕ್ಕ ಚಿಕಿತ್ಸೆಯನ್ನು ಮಾಡಿ ಸುಖಪಡಿಸು!" ಎಂದನು. ರಾಮನು ಈ ಮಾತನ್ನು ಹೇಳಿ

ದೊಡನೆ, ಮಹಾತ್ಮನಾದ ಸುಷೇಣನು ಒಂದು ಮಹೌಷಧಿಯನ್ನು ಕಿತ್ತು ತಂದು ಲಕ್ಷ್ಮಣನ ಮೂಗಿಗೆ ಹಿಡಿದು ಅದನ್ನು ಮೂಸಿಸಿದನು. ಲಕ್ಷ್ಮಣನು ಆ ಮೂಲಿಕೆಯನ್ನಾಘ್ರಾಣಿಸಿದಕೂಡಲೆ, ಅವನ ದೇಹದಲ್ಲಿ ನಾಟಿದ್ದ ಬಾಣದಲಗುಗಳೆಲ್ಲವೂ ಹೊರಗೆ ಬಿದ್ದು, ಅವನ ಬಾಧೆಯು ತಗ್ಗಿತು. ಕ್ಷಣಮಾತ್ರದಲ್ಲಿ ಅವನ ಮೈಗಾಯಗಳೆಲ್ಲವೂ ಆರಿಹೋದುವು. ಇದರಂತೆಯೇ ಸುಷೇಣನು, ರಾಮಾಜ್ಞೆಯನ್ನನುಸರಿಸಿ ವಿಭೀಷಣನೇ ಮೊದಲಾದ ತನ್ನ ಮಿತ್ರರಿಗೂ, ಇತರ ಸಮಸ್ತವಾನರರಿಗೂ ಚಿಕಿತ್ಸೆ ಮಾಡಿದನು. ಲಕ್ಷ್ಮಣನೂ ಕ್ಷಣಮಾತ್ರದಲ್ಲಿಯೇ ಶಲ್ಯ ಬಾಧೆಯಿಂದ ನಿವೃತ್ತ ನಾಗಿ, ಮೊದಲಿನಂತೆ ಗುಣಹೊಂದಿ ಸಂತೋಷದಿಂದಿದ್ದನು. ಆಗ ರಾಮನೂ ಸುಗ್ರೀವನೂ, ವಿಭೀಷಣನೂ, ಭಲ್ಲೂಕಪತಿಯಾದ ಜಾಂಬವಂತನೂ, ಇತರ ವಾನರಸೈನಿಕರೆಲ್ಲರೂ, ಲಕ್ಷ್ಮಣನು ಸುಖದಿಂದ ಮೇಲೆದ್ದುದನ್ನು ಕಂಡು ಪರಮಸಂತೋಷವನ್ನು ಹೊಂದಿದರು. ಮಹಾತ್ಮನಾದ ರಾಮನೂ ಕೂಡ ಲಕ್ಷ್ಮಣನು ನಡೆಸಿದ ದುಷ್ಕರಕಾರ್ಯಕ್ಕಾಗಿ ಅವನನ್ನು ಬಾರಿ ಬಾರಿಗೂ ಬಹಳವಾಗಿ ಮನ್ನಿಸಿ ಕೊಂಡಾಡುತ್ತಿದ್ದನು. ರಾಮನ ಸಮೀಪ ದಲ್ಲಿದ್ದ ವಾನರಯೂಥಪತಿಗಳೂ ಕೂಡ ಇಂದ್ರಜಿತ್ತು ಲಕ್ಷ್ಮಣನಿಂದ ಹತ ನಾದುದನ್ನು ಕೇಳಿ ಪರಮ ಸಂತೋಷಗೊಂಡಿದ್ದರು.

ಇಲ್ಲಿಗೆ ತೊಂಬತ್ತೆರಡನೆಯ ಸರ್ಗವು

ರಾವಣನು ಪುತ್ರಶೋಕದಿಂದ ವಿಲಪಿಸುತ್ತ, ಕೋಪದಿಂದ
ಸೀತೆಯನ್ನು ಕೊಲ್ಲುವುದಾಗಿ ನಿಶ್ಚಯಿಸಿ ಅಶೋಕ
ವನಕ್ಕೆ ಹೊರಟುದು. ಸುಪಾರ್ಶ್ವನೆಂಬ ಮಂತ್ರಿಯು
ಯುಕ್ತಿಯುಕ್ತವಾದ ಮಾತಿನಿಂದ
ಅವನನ್ನು ತಡೆದುದು.

ಇಂದ್ರಜಿತ್ತು ಸತ್ತನೆಂಬ ಸುದ್ದಿಯು ಅತ್ತಲಾಗಿ ಮೊದಲು ರಾವ ಣನ ಮನೆಯಲ್ಲಿ ಅವನಿಗೆ ಸಹಾಯಕರಾಗಿದ್ದ ಮಂತ್ರಿಗಳ ಕಿವಿಗೆ ಮುಟ್ಟಿತು. ಅವರೆಲ್ಲರೂ ಅದರ ನಿಜಾಂಶವನ್ನು ತಿಳಿದು ಬಂದು, ದುಃಖ

ದಿಂದ ರಾವಣನ ಬಳಿಗೆ ಹೋಗಿ, ಅವನಿಗೆ ಅದರ ವೃತ್ತಾಂತವನ್ನು ತಿಳಿಸುವರು. "ಎಲೈ ಮಹಾರಾಜನೇ ! ಈಗಿನ ಯುದ್ಧದಲ್ಲಿ ಲಕ್ಷ್ಮಣನು ವಿಭೀಷಣನ ಸಹಾಯದಿಂದ, ಮಹಾತೇಜಸ್ವಿಯಾದ ನಿನ್ನ ಮಗನನ್ನು ನಮ್ಮ ರಾಕ್ಷಸರ ಕಣ್ಣೆದಿರಾಗಿಯೇ ಕೊಂದುಬಿಟ್ಟನು. ನಿನ್ನ ಮಗನು ಯಾವ ಯುದ್ಧಗಳಲ್ಲಿಯೂ ಪರಾಜಯವನ್ನು ಹೊಂದದ ಶೂರನೆನಿಸಿದ್ದರೂ ಲಕ್ಷ್ಮಣನಿಂದ ಹತನಾದನು. ಯುದ್ಧದಲ್ಲಿ ದೇವೇಂದ್ರನನ್ನೂ ಜಯಿಸಿ ಬಂದ ಶೂರನಾದ ಆ ನಿನ್ನ ಮಗನು, ತನ್ನಿಂದಾದ ಉತ್ತಮಲೋಕವನ್ನು ಹೊಂದಿಬಿಟ್ಟನು." ಎಂದರು. ಅತಿಭಯಂಕರವಾಗಿಯೂ, ಸಂತಾಪಕರವಾಗಿಯೂ, ಕ್ರೂರವಾಗಿಯೂ ಇರುವ ಈ ಪುತ್ರವಧವೃತ್ತಾಂತವನ್ನು ಕೇಳಿದೊಡನೆ, ರಾವಣನಿಗೆ ದೇಹದಮೇಲೆ ಪ್ರಜ್ಞೆಯು ತಪ್ಪಿತು. ಬಹುಕಾಲದಮೇಲೆ ಮೆಲ್ಲಗೆ ಮೂರ್ಛೆತಿಳಿದು, ಪುತ್ರಶೋಕವನ್ನು ತಡೆಯಲಾರದೆ, ದುಃಖದಿಂದ ಕಲಗಿದ ಇಂದ್ರಿಯಗಳುಳ್ಳವನಾಗಿ ವಿಲಪಿಸುವನು. " ಹಾ ರಾಕ್ಷಸಸೇನಾಗ್ರಣೀ ! ಹಾ ಮಹಾರಥಾ ! ದೇವೇಂದ್ರನನ್ನೇ ಜಯಿಸಿಬಂದ ನೀನು ಕೊನೆಗೆ ಕೇವಲ ಮನುಷ್ಯಮಾತ್ರನಾದ ಲಕ್ಷ್ಮಣನ ಕೈಗೆ ಸಿಕ್ಕಿಬಿದ್ದೆ! ಹಾ ವತ್ಸನೇ ! ನೀನು ಕೋಪಗೊಂಡರೆ, ಯಮನ ಮೂರ್ತಿಭೇದವುಳ್ಳ ಕಾಲಾಂತಕರನ್ನಾಗಲಿ, ಮಂದರಪರ್ವತದ ಶಿಖರಗಳನ್ನಾಗಲಿ ಬಾಣಗಳಿಂದ ಭೇದಿಸಬಲ್ಲೆಯಲ್ಲವೆ? ಇನ್ನು ಕೇವಲ ಮನುಷ್ಯಮಾತ್ರನಾದ ಲಕ್ಷ್ಮಣನು ನಿನ್ನ ವೀರ್ಯಕ್ಕೆ ಎಷ್ಟುಮಾತ್ರದವನು? ಮಹಾಬಾಹೂ ! ಈಗ ನೀನು ಮರಣವನ್ನು ಹೊಂದಿ ಯಮನೊಡನೆ ಸೇರಿದುದರಿಂದ, ನಿನ್ನ ಸಹವಾಸ ಸೌಖ್ಯವೆಂಬ ಮಹಾಭಾಗ್ಯವನ್ನು ಪಡೆದ ಆ ಯಮನೂ ಈಗ ನನಗೆ ಬಹಳ ಪರಮಪ್ರಿಯನಾದನು. ಲೋಕದಲ್ಲಿ ಹೀಗೆ ಯುದ್ಧದಲ್ಲಿ ಮೃತಿಹೊಂದುವುದೇ ಶೂರರಿಗೆ ಯೋಗ್ಯವಾದ ದಾರಿಯು ! ದೇವಗಣಗಳಿಗೂ ಇದೇ ಅತ್ಯಾದರಣೀಯವಾದ ಮಾರ್ಗವು ! ಯಾವನು ತನ್ನ ಸ್ವಾಮಿಕಾರ್ಯಕ್ಕಾಗಿ ಪ್ರಾಣವನ್ನೊಪ್ಪಿಸುವನೋ ಅವನಿಗೆ ಸ್ವರ್ಗವೆಂಬುದು ಸಿದ್ಧವು. ನಿನಗೆ ಇಂತಹ ಸರ್ವೋತ್ತಮಪದವಿಯುಂಟಾದುದರಿಂದ ನಾನು ನಿನ್ನ ಮರಣಕ್ಕಾಗಿ ಶೋಕಿಸಬೇಕಾದುದಿಲ್ಲ. ಆದರೆ ಇಂದ್ರಜಿತ್ತು ಹತನಾದನೆಂಬ ಸದ್ದಿಯನ್ನು ಕೇಳಿದೊಡನೆ, ದೇವಗಣಗಳೂ, ದಿಕ್ಪಾಲಕರೂ, ಋಷಿಗಳೂ ನಿರ್ಭಯ

ವಾಗಿ ಸುಖದಿಂದ ನಿದ್ರೆಹೋಗುವರಲ್ಲವೆ? ಅವರ ಸಂತೋಷವನ್ನು ನೋಡಿ ನಾನು ಹೇಗೆ ಸಹಿಸಲಿ! ಅಯ್ಯೋ! ನಾನೇನು ಮಾಡಲಿ! ಆ ಇಂದ್ರಜಿತ್ತೊಬ್ಬನಿಲ್ಲದುದರಿಂದ, ಈಗ ನನಗೆ ಈ ಮೂರುಲೋಕಗಳೂ ಅರಣ್ಯಸಹಿತವಾದ ಈ ಸಮಸ್ತ ಭೂಮಂಡಲವೂ ಕೇವಲ ಶೂನ್ಯವಾಗಿ ತೋರುತ್ತಿರುವುವಲ್ಲಾ! ಇನ್ನು ಈ ಇಂದ್ರಜಿದ್ವಧವನ್ನು ಕೇಳಿ ಅಂತಃಪುರದಲ್ಲಿ ದುಃಖದಿಂದ ವಿಲಪಿಸುವ ರಾಕ್ಷಸ ಕನ್ಯೆಯರ ಗೋಳಾಟದ ಧ್ವನಿಯು, ಕಾಡಿನಲ್ಲಿ ಯೂಥಪತಿಯ ವಧಕ್ಕಾಗಿ ಪರ್ವತಗುಹೆಗಳಲ್ಲಿ ಸೇರಿ ಕೂಗಿಡುತ್ತಿರುವ ಹೆಣ್ಣಾನೆಗಳ ಆರ್ತಧ್ವನಿಯಂತೆ ಕಿವಿಗೆ ಬೀಳುತ್ತಿರುವುದಲ್ಲಾ! ಹಾ ವತ್ಸಾ! ಹಾ ಪರಂತಪಾ! ನೀನು ಈ ನಿನ್ನ ಯೌವರಾಜ್ಯವನ್ನೂ, ಈ ಲಂಕೆಯನ್ನೂ, ಈ ರಾಕ್ಷಸರನ್ನೂ, ಈ ನಿನ್ನ ತಾಯಿಯನ್ನೂ, ನನ್ನನ್ನೂ, ನಿನ್ನ ಭಾರ್ಯೆಯರನ್ನೂ, ಈ ನಮ್ಮೆಲ್ಲರನ್ನೂ ಏಕಕಾಲದಲ್ಲಿ ತೊರೆದು ಇನ್ನೆಲ್ಲಿಗೆ ಹೋಗಿರುವೆ? ಹಾ ವೀರನೇ! ಮುಂದೆ ನಾನು ಯಮಪುರಿಗೆ ಹೋದಮೇಲೆ ನೀನಲ್ಲವೇ ನನಗೆ ಪ್ರೇತಕಾರ್ಯವನ್ನು ನಡೆಸಬೇಕು! ಹಾಗಿಲ್ಲದೆ ಈಗ ಅದಕ್ಕೆ ವಿಪರೀತವಾಗಿ, ನಾನೇ ನಿನಗೆ ಅಪರಕ್ರಿಯೆಗಳನ್ನು ಮಾಡಬೇಕಾಗಿ ಬಂದೊದಗಿತೆ? ಅಯ್ಯೋ! ಇದುವರೆಗೆ ನನ್ನ ಮನಸ್ಸಿಗುಂಟಾಗುತ್ತಿದ್ದ ಕೊರತೆಗಳನ್ನು ಆಗಾಗಲೇ ನೀಗಿಸುತ್ತಿದ್ದ ನೀನು, ಈಗ ಆ ಸುಗ್ರೀವನೂ, ಆ ರಾಮನೂ, ಆ ಲಕ್ಷ್ಮಣನೂ, ನನಗೆ ಮನಶ್ಶಲ್ಯಪ್ರಾಯರಾಗಿ ಬದುಕಿರುವಾಗ, ಆ ಶಲ್ಯವನ್ನು ಕಳೆಯದೆಯೇ ನಮ್ಮೆಲ್ಲರನ್ನೂ ತೊರೆದು ಎಲ್ಲಿಗೆ ಹೋಗುವೆ?" ಎಂದು ವಿಲಪಿಸುತ್ತಿದ್ದನು. ರಾವಣನು ಹೀಗೆ ಪುತ್ರ ವ್ಯಸನದಿಂದ ವಿಲಪಿಸುತ್ತಿರುವಾಗಲೇ, ಅವನಿಗೆ ಕ್ರಮಕ್ರಮವಾಗಿ ಮನಸ್ಸಿನಲ್ಲಿ ಒಂದು ವಿಧವಾದ ಕೋಪಾವೇಶವು ಹುಟ್ಟಿತು. ಸ್ವಭಾವದಿಂದ ತೀಕ್ಷ್ಣವಾದ ಸೂರ್ಯನಿಗೆ, ಬೇಸಗೆಯ ಕಾಲವು ಮತ್ತಷ್ಟು ತಾಪವನ್ನು ಹೆಚ್ಚಿಸುವಂತೆ, ಸಹಜವಾದ ಕೋಪ ಸ್ವಭಾವವುಳ್ಳ ಆ ರಾವಣನಿಗೆ, ಪುತ್ರಮರಣದಿಂದುಂಟಾದ ಸಂಕಟವು ಮತ್ತಷ್ಟು ಕೋಪಾವೇಶವನ್ನು ಹೆಚ್ಚಿಸಿತು. ಆಗ ರಾವಣನ ಹತ್ತು ಮುಖಗಳಲ್ಲಿಯೂ, ಪ್ರಳಯಕಾಲದಲ್ಲಿ ದೊಡ್ಡ ದೊಡ್ಡ ತರಂಗಗಳಿಂದ ತುಂಬಿದ ಮಹಾ ಸಮುದ್ರದಲ್ಲಿ ಮೇಲೆ ಮೇಲೆ ತಲೆಯೆತ್ತಿಬರುವ ಮೊಸಳೆಗಳಂತೆ ಕೋಪದಿಂದುಬ್ಬಿದ ಹುಬ್ಬುಗಂಟುಗಳು, ಭಯಂ

ಕರಗಳಾಗಿದ್ದವು. ರಾವಣನು ಕೋಪದಿಂದಾಕಳಿಸುವಾಗ, ಪೂರ್ವದಲ್ಲಿ ವೃತ್ರನ ಮುಖದಿಂದ ಹೇಗೋ ಹಾಗೆ ಆಗಾಗ ಅವನ ಮುಖದಿಂದ ಹೊಗೆಯೊಡಗೂಡಿ ಬಹಳ ಪ್ರಕಾಶವಿಶಿಷ್ಟವಾದ ಅಗ್ನಿ ಜ್ವಾಲೆಯು ಹೊರಟಿತು. ಪುತ್ರವಧಕ್ಕಾಗಿ ಕುದಿದು ಕೋಪಗೊಂಡ ಆ ರಾವಣನು, ರಾಮಲಕ್ಷ್ಮಣರ ಮೇಲೆ ತನ್ನ ಮಗನನ್ನು ಕೊಂದ ಕೋಪವನ್ನು ಯಾವ ರೀತಿಯಲ್ಲಿ ತೀರಿಸಿಕೊಳ್ಳಬೇಕೆಂದು ತನ್ನಲ್ಲಿ ತಾನೇ ಚಿಂತಿಸಿ, ಕೊನೆಗೆ ಸೀತೆಯನ್ನು ಕೊಂದುಬಿಡುವುದಾಗಿ ನಿಶ್ಚಯಿಸಿಬಿಟ್ಟನು. ಸ್ವಭಾವದಿಂದಲೇ ಕೆಂಪಾದ ಆ ರಾವಣನ ಕಣ್ಣುಗಳು ಕೋಪದುರಿಯಿಂದ ಮತ್ತಷ್ಟು ಕೆಂಪೇರಿ, ಘೋರ ರೂಪದಿಂದ ಜ್ವಲಿಸಲಾರಂಭಿಸಿದುವು. ಮೊದಲೇ ಮಹಾ ಘೋರವಾದ ಆ ರಾಕ್ಷಸನ ಆಕಾರವು ಆಗಿನ ಕೋಪಾಗ್ನಿಯಿಂದ ಮತ್ತಷ್ಟು ಘೋರವಾಗಿ, ಕೋಪಗೊಂಡ ಕಾಲರುದ್ರನ ಸ್ವರೂಪದಂತೆ ನೋಡಿ ಸಹಿಸುವುದಕ್ಕೂ ಅಸಾಧ್ಯವಾಯಿತು. ಆಗ ಕೋಪದಿಂದುರಿಯುತ್ತಿದ್ದ ಅವನ ಕಣ್ಣುಗಳಿಂದ ಬೀಳುವ ಬಾಷ್ಪಬಿಂದುಗಳು, ಉರಿಯುವ ದೀಪಗಳಿಂದ ಉರಿಯೊಡಗೂಡಿ ತೊಟ್ಟಿಕ್ಕುವ ತೈಲಬಿಂದುಗಳಂತೆ ಕಾಣುತ್ತಿದ್ದುವು. ಅವನು ಕೋಪದಿಂದ ಕಟಕಟನೆ ಹಲ್ಲುಗಳನ್ನು ಕಡಿಯುವಾಗ, ಅದರಿಂದುಂಟಾದ ಶಬ್ದವು, ಬಲಾಢ್ಯರಾದ ದಾನವರಿಂದ ಅರೆಯಲ್ಪಡುವ ಎಣ್ಣೆಯಗಾಣದ ಧ್ವನಿಯಂತೆ ಕೇಳಿಸುತ್ತಿತ್ತು. ಆ ರಾಕ್ಷಸನು ಕಾಲಾಗ್ನಿಯಂತೆ ಕೋಪದಿಂದುರಿಯುತ್ತಾ, ಯಾವ ಯಾವ ದಿಕ್ಕುಗಳಿಗೆ ತಿರುಗಿ ನೋಡುವನೋ ಆಯಾ ದಿಕ್ಕಿನಲ್ಲಿ ನಿಂತಿದ್ದ ರಾಕ್ಷಸರೆಲ್ಲರೂ ಭಯದಿಂದ ಅಲ್ಲಲ್ಲಿಯೇ ಕಣ್ಮರೆಯಾಗಿ ಅಡಗಿಕೊಳ್ಳುತ್ತಿದ್ದರು. ಪ್ರಳಯಕಾಲದಲ್ಲಿ ಚರಾಚರಾತ್ಮಕವಾದ ಸಮಸ್ತ ಪ್ರಪಂಚಗಳನ್ನು ನುಂಗುವುದಕ್ಕಾಗಿ ನಿರೀಕ್ಷಿಸುತ್ತಿರುವ ಕಾಲಾಂತಕನಂತಿದ್ದ ಆ ರಾವಣನು, ಕೋಪದಿಂದ ನಾನಾಕಡೆಗಳಿಗೆ ಕಣ್ಣಿಟ್ಟು ನೋಡುವಾಗ, ಭಯದಿಂದ ರಾಕ್ಷಸನೊಬ್ಬನಾದರೂ ಅವನ ಸಮೀಪಕ್ಕೆ ಸುಳಿಯಲಿಲ್ಲ. ಹೀಗೆ ಕೋಪಾವಿಷ್ಟನಾದ ರಾವಣನು, ಮುಂದಿನ ಯುದ್ಧಕ್ಕೆ ಭಯಪಟ್ಟು ನಿಂತಿದ್ದ ರಾಕ್ಷಸರನ್ನು ಪ್ರೋತ್ಸಾಹಗೊಳಿಸುವುದಕ್ಕಾಗಿ, ಅವರನ್ನು ಕುರಿತು "ಎಲೈ ರಾಕ್ಷಸರೇ ! ನಾನು ಹಿಂದೆ ಸಾವಿರ ವರ್ಷಗಳವರೆಗೆ ದುಷ್ಕರವಾದ ತಪಸ್ಸನ್ನು ಮಾಡಿ, ಆಗಾಗ ಅವಕಾಶವು ಸಿಕ್ಕಿದಹಾಗೆಲ್ಲಾ ಬ್ರಹ್ಮನನ್ನು ಸಂತೋಷಪಡಿಸಿದೆನು. ಆ ನನ್ನ ತಪೋಬಲ

ದಿಂದಲೂ, ಬ್ರಹ್ಮನ ವರಪ್ರಸಾದದ ಬಲದಿಂದಲೂ, ದೇವತೆಗಳಿಂದಾಗಲಿ, ದಾನವರಿಂದಾಗಲಿ ನನಗೆ ಯಾವಾಗಲೂ ಭಯವೆಂಬುದೇ ಇಲ್ಲ! ಏಕೆಂದರೆ, ನನಗೆ ಬ್ರಹ್ಮಾನುಗ್ರಹದಿಂದ ಬಂದ ಕವಚವೊಂದುಂಟು. ಸೂರ್ಯನಂತೆ ಮಹಾದ್ಭುತಕಾಂತಿಯಿಂದ ದೇದೀಪ್ಯಮಾನವಾದ ಆ ಕವಚವನ್ನು, ಹಿಂದೆ ದೇವಾಸುರ ಯುದ್ಧಗಳಲ್ಲಿ ದೇವೇಂದ್ರನು ತನ್ನ ವಜ್ರಾಯುಧದ ಸರ್ವ ಶಕ್ತಿಯನ್ನುಪಯೋಗಿಸಿದರೂ ಭೇದಿಸುವುದಕ್ಕಾಗಲಿಲ್ಲ! ಈಗಲೂ ನಾನು ಅದೇ ಕವಚವನ್ನು ಧರಿಸಿ ರಥವನ್ನೇರಿ ಯುದ್ಧಕ್ಕೆ ನಿಂತ ಪಕ್ಷದಲ್ಲಿ ನನ್ನನ್ನು ಇದಿರಿಸಬಲ್ಲವನಾವನು! ಸಾಕ್ಷಾದ್ದೇವೇಂದ್ರನಾದರೂ ನನ್ನ ಮುಂದೆ ನಿಲ್ಲಲಾರನು! ಇದಲ್ಲದೆ ನಾನು ದೇವಾಸುರರೊಡನೆ ಯುದ್ಧಮಾಡಿದಾಗ, ಬ್ರಹ್ಮನು ನನ್ನಲ್ಲಿ ಪ್ರಸನ್ನನಾಗಿ, ನನಗೆ ಬಾಣಸಹಿತವಾದ ಒಂದು ದೊಡ್ಡ ಬಿಲ್ಲನ್ನು ಅನುಗ್ರಹಿಸಿಕೊಟ್ಟಿರುವನಷ್ಟೆ! ಈಗ ನಾನೇ ಆ ರಾಮಲಕ್ಷ್ಮಣರನ್ನು ಯುದ್ಧದಲ್ಲಿ ಕೊಲ್ಲುವುದಕ್ಕಾಗಿ ಹೊರಡುವೆನಾದುದರಿಂದ, ನೀವೆಲ್ಲರೂ ಸೇರಿ, [1]ಅನೇಕ ವಾದ್ಯಧ್ವನಿಗಳೊಡನೆ ಆ ನನ್ನ ಮಹಾ ಧನುಸ್ಸನ್ನು ಇಲ್ಲಿಗೆ ಸಾಗಿಸಿಕೊಂಡು ಬನ್ನಿರಿ!" ಎಂದನು. ಹೀಗೆಂದು ಹೇಳಿ, ಕೋಪವಶನಾದ ರಾವಣನು, ತನ್ನ ಪುತ್ರ ಮರಣವನ್ನೇ ಆಗಾಗ ಚಿಂತಿಸಿ ಕೊರಗುತ್ತ, ಸೀತೆಯನ್ನು ಕೊಲ್ಲಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿ, ಅದಕ್ಕೆ ತಕ್ಕ ಪ್ರಯತ್ನದಲ್ಲಿದ್ದನು- ಸ್ವಭಾವದಿಂದಲೂ, ಆಕಾರದಿಂದಲೂ ಭಯಂಕರನಾದ ಆ ರಾಕ್ಷಸನು, ಕ್ರೂರವಾದ ಕೋಪದಿಂದ ಕೆಂಪೇರಿದ ಕಣ್ಣುಳ್ಳವನಾಗಿದ್ದರೂ, ಪುತ್ರ ಶೋಕದಿಂದ ಕುಗ್ಗಿದ ಸ್ವರವುಳ್ಳವನಾಗಿ, ತನ್ನಂತೆಯೇ ದುಃಖಿತರಾಗಿ ಮುಂದೆ ನಿಂತಿದ್ದ ರಾಕ್ಷಸರೆಲ್ಲರನ್ನೂ ನೋಡಿ "ಎಲೈ ರಾಕ್ಷಸರೇ! ಹಿಂದೆ ನನ್ನ ಮಗನಾದ ಇಂದ್ರಜಿತ್ತು, ವಾನರರನ್ನು ವಂಚಿಸುವುದಕ್ಕಾಗಿ, ಮಾಯೆಯಿಂದ ಯಾವುದೋ ಒಂದನ್ನು ಸೀತೆಯೆಂದು ತೋರಿಸಿ, ಅವರ ಮುಂದೆ ಅದನ್ನು ಭೇದಿಸಿ ಬಂದನಷ್ಟೆ? ಅವನು ಆಗ ಸುಳ್ಳಾಗಿ ಮಾಡಿ ತೋರಿಸಿದುದನ್ನು ಈಗ ನಾನು ನಿಜವಾಗಿಯೇ ನಡೆಸಿಬಿಡು

[1] ಇಲ್ಲಿ ವಾದ್ಯಧ್ವನಿಗಳೊಡನೆ ತನ್ನ ಬಿಲ್ಲನ್ನು ತರಬೇಕೆಂದು ರಾವಣನು ಆಜ್ಞೆ ಮಾಡಿರುವುದರಿಂದ ಹಿಂದಿನ ಯುದ್ಧದಲ್ಲಿ ಅವನು ಆ ಬಿಲ್ಲನ್ನು ಉಪಯೋಗಿಸಲಿಲ್ಲವೆಂದು ಸೂಚಿತವು.

ವೆನು ! ಆಗಲೇ ನನ್ನ ಮನಸ್ಸಿಗೆ ತೃಪ್ತಿಯುಂಟಾಗುವುದು ! ಆ ಕ್ಷತ್ರಿಯಾಧಮನನ್ನೇ ನಂಬಿ ನಿಂತಿರುವ ಸೀತೆಯನ್ನು ಕೊಂದುಬಿಡುವೆನು” ಎಂದನು. ರಾವಣನು ಹೀಗೆಂದು ತನ್ನ ಮಂತ್ರಿಗಳಿಗೆ ಹೇಳಿ, ಆ ಕ್ಷಣವೇ ತನ್ನ ಕತ್ತಿಯನ್ನು ಕೈಗೆತ್ತಿಕೊಂಡನು. ಪುತ್ರಮರಣದಿಂದುಂಟಾದ ದುಃಖದಿಂದಲೂ, ಕೋಪದಿಂದಲೂ ಮೈಮರೆತ ಆ ರಾಕ್ಷಸ ರಾಜನು, ಗಂಧಪುಷ್ಪಾದಿಗಳಿಂದಲಂಕೃತವಾಗಿ, ಆಕಾಶದಂತೆ ನಿರ್ಮಲವಾಗಿದ್ದ ತನ್ನ ಕತ್ತಿಯನ್ನು ಕೈಗೆತ್ತಿಕೊಂಡು, ತನ್ನ ಪತ್ನಿಯರಿಂದಲೂ ಸಚಿವರಿಂದಲೂ ಪರಿವೃತನಾಗಿ, ಸೀತೆಯಿದ್ದ ಸ್ಥಳಕ್ಕೆ ವೇಗದಿಂದ ಹೊರಟನು. ಇವನು ಅಲ್ಲಿಂದ ಹೊರಟಾಗ, ಇವನ ಮಹಾರ್ಭಟವನ್ನೂ, ಅವನಿಗಿದ್ದ ಕೋಪಾವೇಶವನ್ನೂ ನೋಡಿ ಹಿಂಬಾಲಿಸಿ ಬರುತ್ತಿದ್ದ ರಾಕ್ಷಸರೆಲ್ಲರಿಗೂ ಇನ್ನು ತಮಗೆ ಜಯವು ಕೈಗೂಡಿತೆಂಬ ನಂಬಿಕೆಯೇ ಹುಟ್ಟಿತು. ಎಲ್ಲರೂ ಉತ್ಸಾಹದಿಂದ ಸಿಂಹನಾದ ಮಾಡಿದರು. ಒಬ್ಬರನ್ನೊಬ್ಬರು ಸಂತೋಷದಿಂದ ತಬ್ಬಿ ಕುಣಿದಾಡುತ್ತ, ಒಬ್ಬರನ್ನೊಬ್ಬರು ತಮ್ಮಲ್ಲಿ ಮಾತಾಡಿಕೊಳ್ಳುವರು! “ಭಲೆ! ಭಲೆ ! ಇನು ನಮಗೆ ಜಯವು ಸಿದ್ಧವು. ರಾವಣನ ಈ ಭಯಂಕರಾಕಾರವನ್ನು ನೋಡಿದ ಮಾತ್ರದಲ್ಲಿಯೇ, ರಾಮಲಕ್ಷ್ಮಣರೆಂಬ ಆ ಅಣ್ಣತಮ್ಮಂದಿರಿಬ್ಬರೂ ಭಯಪಟ್ಟು ನಡುಗುವರು. ಹಿಂದೆ ಇವನು ಪ್ರಮುಖರಾದ ನಾಲ್ಕುಮಂದಿ ದಿಕ್ಪಾಲಕರನ್ನೇ ಜಯಿಸಿ ಬಂದವನು. ಇದಲ್ಲದೆ ಹಿಂದೆ ಅನೇಕ ಯುದ್ಧಗಳಲ್ಲಿ ತನ್ನ ಶತ್ರುಗಳೆಲ್ಲರನ್ನೂ ಕೊಂದು ಕೆಡಹಿದವನು. ಹೀಗಿರುವಾಗ ಇವನಿಗೆ ಮನುಷ್ಯ ಮಾತ್ರನಾದ ಆ ರಾಮಲಕ್ಷ್ಮಣರಿಬ್ಬರೂ ಎಷ್ಟು ಮಾತ್ರದವರು? ಮತ್ತು ಈ ನಮ್ಮ ರಾಕ್ಷಸೇಂದ್ರನು, ಮೂರು ಲೋಕಗಳಲ್ಲಿರುವ ಉತ್ತಮ ವಸ್ತುಗಳನ್ನೆಲ್ಲಾ ತಾನೊಬ್ಬನೇ ಅನುಭವಿಸತಕ್ಕವನು. ಪರಾಕ್ರಮದಲ್ಲಿಯಾಗಲಿ, ಬಲದಲ್ಲಿಯಾಗಲಿ, ಇವನಿಗೆ ಸಾಟಿಯಾದವನು ಲೋಕದಲ್ಲಿ ಯಾವನೂ ಇಲ್ಲ.” ಎಂದು ಹೇಳಿ ಆ ರಾಕ್ಷಸರೆಲ್ಲರೂ ರಾವಣನ ಪರಾಕ್ರಮ ಕಾರ್ಯಗಳನ್ನೇ ಕೊಂಡಾಡುತ್ತ ಬಂದರು. ಹೀಗೆ ಆ ರಾಕ್ಷಸರೆಲ್ಲರೂ ಒಬ್ಬರಿಗೊಬ್ಬರು ಮಾತಾಡುತ್ತಿರುವಾಗಲೇ, ರಾವಣನು ಕೋಪದಿಂದ ಮೈಮರೆತು ವೇಗದಿಂದ ನಡೆದು. ಅಶೋಕವನದಲ್ಲಿ ಸೀತೆಯಿದ್ದ ಸ್ಥಳಕ್ಕೆ ಬಂದನು.

ಕೋಪ ಪರವಶನಾದ ಆ ರಾವಣನು, ತನಗೆ ಹಿತೈಷಿಗಳಾದ ಮಿತ್ರರು ಅನೇಕ ವಿಧದಲ್ಲಿ ತನ್ನನ್ನು ತಡೆಯುತ್ತಿದ್ದರೂ ಕೇಳದೆ, ಆಕಾಶದಲ್ಲಿ ಅಂಗಾರಕ ಗ್ರಹವು ಕೋಪದಿಂದ ರೋಹಿಣಿಯನ್ನಿದಿರಿಸಿ ಹೋಗುವಂತೆ ನೆಟ್ಟಗೆ ಸೀತೆಯಿದ್ದಕಡೆಗೆ ಬಂದನು. ಅತ್ತಲಾಗಿ ಘೋರ ರಾಕ್ಷಸಿಯರ ಸೆರೆಯಲ್ಲಿ ಸಿಕ್ಕಿಯೂ, ನಿಷ್ಕಲ್ಮಷವಾದ ಮನಸ್ಸಿನಿಂದ ಪತಿಯನ್ನೇ ಧ್ಯಾನಿಸುತ್ತಿದ್ದ ಆ ಸೀತೆಯು, ಇತ್ತಲಾಗಿ ರಾವಣನು ಕೋಪದಿಂದ ಕತ್ತಿಯನ್ನು ಹಿಡಿದು ತನ್ನ ಕಡೆಗೆ ಬರುತ್ತಿರುವುದನ್ನು ಕಂಡಳು. ಹೀಗೆ ಖಡ್ಗಧಾರಿಯಾಗಿ, ಆಗಾಗ ಮಿತ್ರರು ಬೇಡವೆಂದು ಅನೇಕ ವಿಧದಿಂದ ತಡೆಯುತ್ತಿದ್ದರೂ ನಿಲ್ಲದೆ ವೇಗದಿಂದ ತನ್ನ ಕಡೆಗೆ ಬರುತ್ತಿದ್ದ ರಾವಣನನ್ನು ನೋಡಿದೊಡನೆ ಜನಕ ಪುತ್ರಿಯಾದ ಸೀತೆಗೆ ಮನಸ್ಸಿನಲ್ಲಿ ಭಯವು ಹುಟ್ಟಿತು. ಹೀಗೆ ಭಯಾರ್ತೆಯಾದ ಆ ಸೀತೆಯು, ದುಃಖಾವೇಶದಿಂದ ವಿಲಪಿಸುತ್ತ "ಅಯ್ಯೋ! ದುರಾತ್ಮನಾದ ರಾವಣನು ಕೋಪದಿಂದ ಈ ಕಡೆಗೇ ಬರುತ್ತಿರುವನಲ್ಲಾ! ಇನ್ನು ಇವನು ನನ್ನನ್ನು ಕೊಲ್ಲುವುದರಲ್ಲಿ ಸಂದೇಹವಿಲ್ಲ. ಆಹಾ! ನಾನು ಅನಾಥೆಯಾಗಿರುವಾಗಲೂ ಈ ದುರಾತ್ಮನು ನನ್ನನ್ನು ದಿಕ್ಕಿಲ್ಲದಂತೆ ಮಾಡಿ ಕೊಲ್ಲುತ್ತಿರುವನಲ್ಲಾ! ನಾನೇನು ಮಾಡಲಿ? ಈ ನೀಚನು, ಪತಿಪರಾಯಣೆಯಾದ ನನ್ನನ್ನು ತನಗೆ ಭಾರ್ಯೆಯಾಗಿ ತನ್ನೊಡನೆ ರಮಿಸಬೇಕೆಂದು ಹಿಂದೆ ಆಗಾಗ ಬಹಳವಾಗಿ ನಿರ್ಬಂಧಿಸಿ ನೋಡಿದನು. ಆದರೇನು! ನಾನು ಸ್ವಲ್ಪ ಮಾತ್ರವೂ ಹೆದರದೆ ಸ್ಪಷ್ಟವಾಗಿ ಅವನನ್ನು ನಿರಾಕರಿಸಿಬಿಟ್ಟೆನು. ಹೀಗೆ ನಾನು ತಿರಸ್ಕರಿಸಿದುದರಿಂದ, ಈ ನೀಚನು ನನ್ನ ಮೇಲಿನ ಆಸೆಯನ್ನು ಬಿಟ್ಟು, ಕೋಪದಿಂದಲೂ, ಮೋಹದಿಂದಲೂ ಮೈಮರೆತು ಈಗ ನನ್ನನ್ನು ಕೊಲ್ಲುವುದಕ್ಕಾಗಿಯೇ ಬರುವಂತಿದೆ! ಅಥವಾ ಇವನು ಹೀಗೆ ಖಡ್ಗಪಾಣಿಯಾಗಿ ಇಲ್ಲಿಗೆ ಬರುವುದನ್ನು ನೋಡಿದರೆ, ಪುರುಷಸಿಂಹರಾದ ಆ ರಾಮಲಕ್ಷ್ಮಣರಿಬ್ಬರನ್ನೂ ಈ ದುರಾತ್ಮನು ನನ್ನ ನಿಮಿತ್ತವಾಗಿ ಈಗಿನ ಯುದ್ಧದಲ್ಲಿ ಈ ಕತ್ತಿಯಿಂದಲೇ ಕೊಂದುಬರುತ್ತಿರಬಹುದೆ? (ರಾಕ್ಷಸರು ಸಂತೋಷದಿಂದ ಸಿಂಹನಾದಮಾಡಿ ಕೂಗುತ್ತಿರುವ ಕೋಲಾಹಲಧ್ವನಿಯು ಈಗೀಗ ನನ್ನ ಕಿವಿಗೆ ಬಹಳವಾಗಿ ಬೀಳುತ್ತಿರುವುದು.) ಈ ಪಾಪಿಯು ನನ್ನ ನಿಮಿತ್ತವಾಗಿ ಆ ರಾಜಪುತ್ರರನ್ನೇ ಕೊಂದಿರಬಹುದೆ? ಇದ್ದರೂ ಇರ

ಬಹುದು. ಇದರಲ್ಲಿ ಸಂದೇಹವಿಲ್ಲ! ಹಾ ಕಷ್ಟವೆ! ನಾನು ಎಂತಹ ಮಹಾಪಾಪಿನಿಯು? ಛೀ! ನನ್ನ ಜನ್ಮವನ್ನೇ ಸುಡಬೇಕು! ನನಗಾಗಿ ಆ ಮಹಾತ್ಮರಾದ ರಾಜಕುಮಾರರಿಗೂ ವಿನಾಶವೆ? ಹಾಗೆ ನಡೆದಿರ ಲಾರದು! ಈ ದುರಾತ್ಮನು ಇಂದ್ರಜಿತ್ತಿನ ಮರಣವನ್ನು ಕೇಳಿ, ಪುತ್ರ ಶೋಕಪೀಡಿತನಾಗಿ, ಆ ಶೋಕವನ್ನು ರಾಮಲಕ್ಷ್ಮಣರಮೇಲೆ ತೀರಿಸಲಾರದೆ ನನ್ನನ್ನು ಕೊಲ್ಲುವುದಕ್ಕಾಗಿ ಬರುತ್ತಿದ್ದರೂ ಇರಬಹುದು! ಏನಾದರೇನು? ಮುಖ್ಯವಾಗಿ ಮುಂದಾಲೋಚನೆಯಿಲ್ಲದ ನಾನು ಆಗಲೆ ಹನುಮಂತನು ಹೇಳಿದಂತೆ ನಡೆಸದೆಹೋದೆನು! ಅವನು ಹೇಳಿದಂತೆ ಆಗಲೆ ನಾನು ಆತನ ಭುಜದಮೇಲೇರಿ ಹೋಗಿದ್ದರೆ, ಇಷ್ಟರಲ್ಲಿಯೇ ನಾನು ನನ್ನ ಪತಿಯೊಡನೆ ಸೇರಿ ಸುಖವಾಗಿರಬಹುದಾಗಿದ್ದಿತು. ಆಗ ನನಗೆ ಈ ದುಃಖವೇ ಇರುತ್ತಿರಲಿಲ್ಲ. ಈಗ ರಾಮಲಕ್ಷ್ಮಣರು ನಿಜವಾಗಿಯೂ ಕೊಲ್ಲಲ್ಪಟ್ಟಿದ್ದ ಪಕ್ಷದಲ್ಲಿ, ಬಹುಕಾಲಕ್ಕೆ ಈ ಒಬ್ಬ ಮಗನನ್ನು ಪಡೆದ ಆ ಕೌಸಲ್ಯೆಗೆ, ಆ ಒಬ್ಬ ಮಗನೂ ರಾಕ್ಷಸನಿಂದ ಹತನಾದನೆಂಬ ಸುದ್ದಿಯನ್ನು ಕೇಳಿ ದೊಡನೆ ಅವಳ ಹೃದಯವು ಭೇದಿಸಿ ಹೋಗುವುದೆಂದೇ ನನಗೆ ತೋರು ವುದು! ಆಕೆಗೆ ರಾಮನಲ್ಲಿರುವ ಪ್ರೇಮವೂ ಸಾಮಾನ್ಯವಲ್ಲ! ಆಕೆಯು ಯಾವಾಗಲೂ, ಆ ರಾಮನ ಜನನ, ಅವನ ಬಾಲಕ್ರೀಡೆಗಳು, ಅವನ ಯೌವನ ವಿಲಾಸಗಳು, ಧರ್ಮ ಕಾರ್ಯಗಳನ್ನೇ ಅನುವರ್ತಿಸಿಹೋಗತಕ್ಕ ಅವನ ಶೀಲಸ್ವಭಾವಗಳು, ಅವನ ರೂಪಸಂಪತ್ತಿ, ಇವುಗಳನ್ನೇ ಅನವರ ತವೂ ಹೇಳಿ ಹೇಳಿ ಹಂಬಲಿಸುವಳು. ಪುತ್ರ ಮರಣವನ್ನು ಕೇಳಿದ ಕ್ಷಣವೇ ಆಕೆಯು, ಮೈಮೇಲೆ ಪ್ರಜ್ಞೆಯಿಲ್ಲದೆ. ಹೇಗೋ ಪ್ರಯತ್ನ ದಿಂದ ಅವನಿಗೆ ಶ್ರಾದ್ಧಾದಿಕ್ರಿಯೆಗಳನ್ನು ನಡೆಸಿ, ಈ ಪ್ರಪಂಚದ ಆಸೆಯನ್ನೇ ಬಿಟ್ಟು, ಬೆಂಕಿಯಲ್ಲಿಯೋ, ನೀರಿನಲ್ಲಿಯೋ ಬಿದ್ದು, ಪ್ರಾಣ ವನ್ನು ಬಿಡುವುದರಲ್ಲಿ ಸಂದೇಹವಿಲ್ಲ. ಛೀ! ಆ ಗೂನಿಯು ಹಾಳಾಗ ಬೇಕು! ಆಹಾ! ಆ ಮಂಥರೆಯು ಎಂತಹ ಪರಮನೀಚಳು? ಅವಳಿಂ ದಲ್ಲವೇ ಕೌಸಲ್ಯೆಗೆ ಇಷ್ಟೊಂದು ದುಃಖವು ಸಂಭವಿಸಿತು!" ಎಂದಳು. ಹೀಗೆ ಸೀತೆಯು ಭಯದಿಂದಲೂ, ದೈನ್ಯದಿಂದಲೂ ವಿಲಪಿಸುತ್ತ ಚಂದ್ರ ನನ್ನಗಲಿ, ಅಂಗಾರಕ ಗ್ರಹಪೀಡೆಗೆ ಸಿಕ್ಕಿಬಿದ್ದ ರೋಹಿಣಿಯಂತೆ ಬಹಳ ಶೋಚನೀಯಾವಸ್ಥೆಯಲ್ಲಿದ್ದಳು. ಇಷ್ಟರಲ್ಲಿಯೇ ರಾವಣನ ಮಂತ್ರಿಗಳಲ್ಲಿ

ಬಹಳ ಶುದ್ಧಾತ್ಮನಾಗಿಯೂ, ಬುದ್ಧಿಮಂತನಾಗಿಯೂ, ವಿವೇಕಶಾಲಿಯಾಗಿಯೂ ಇದ್ದ ಸುಪಾರ್ಶ್ವನೆಂಬವನೊಬ್ಬನು, ಸೀತೆಯ ದುಃಖಸ್ಥಿತಿಯನ್ನು ಕಂಡು ಮರುಕಗೊಂಡು, ಇತ್ತಲಾಗಿ ತನ್ನ ಮಂತ್ರಿಗಳ ಮಾತನ್ನು ಮೀರಿ ಸೀತಾವಧೋದ್ಯುಕ್ತನಾಗಿ ಬರುತ್ತಿರುವ ರಾವಣನನ್ನು ಕುರಿತು "ಮಹಾಪ್ರಭೂ! ನೀನು ಸಾಕ್ಷಾತ್ತು ಕುಬೇರನ ತಮ್ಮನು! ಮಹಾಕುಲ ಪ್ರಸೂತನು! ಇಂತಹ ನೀನೂ ಹೀಗೆ ಧರ್ಮವನ್ನು ತೊರೆದು, ಕೇವಲ ಕೋಪವಶನಾಗಿ ಸೀತೆಯನ್ನು ಕೊಲ್ಲುವುದೆಂದರೇನು? ಎಲೈ ವೀರನೆ! ನಿನ್ನ ಕುಲೋನ್ನತಿಯೂ ಹಾಗಿರಲಿ! ನೀನು ವೇದಗಳೆಲ್ಲವನ್ನೂ ಅಧ್ಯಯನಮಾಡಿ, ಸಮಸ್ತ ವಿದ್ಯೆಗಳನ್ನೂ ಓದಿ, ವ್ರತಸ್ನಾತನೆನಿಸಿಕೊಂಡವನು! ವಿಹಿತಕರ್ಮಗಳನ್ನು ಯಾವಾಗಲೂ ತಪ್ಪದೆ ನಡೆಸುವವನು! ಇಂತಹ ನಿನಗೆ ಈ ಘೋರವಾದ ಸ್ತ್ರೀ ವಧದಲ್ಲಿ ಹೇಗೆ ಮನಸ್ಸು ಹುಟ್ಟಿತು? ಎಲೆ ರಾಜನೆ! ಈ ಸೀತೆಯೋ ಬಹಳ ರೂಪವತಿ! ನೀನು ಇವಳನ್ನು ಕೊಲ್ಲದ ಹಾಗೆ ವಶಪಡಿಸಿಕೊಳ್ಳುವ ದಾರಿಯನ್ನು ನೋಡಬೇಕಲ್ಲವೆ? ಇವಳನ್ನು ಕೊಂದಮೇಲೆ ಇಂತಹ ರೂಪವತಿಯು ಸಿಕ್ಕುವುದೆಲ್ಲಿ! ಆದುದರಿಂದ ಈ ನಿನ್ನ ಕೋಪವನ್ನು ರಾಮನಲ್ಲಿ ತೋರಿಸು! ನಾವೂ ನಿನಗೆ ಸಹಾಯಕರಾಗಿರುವೆವು. [1]ಈಗ ಈ ಕೃಷ್ಣಪಕ್ಷ ಚತುರ್ದಶಿಯಲ್ಲಿಯೇ ಯುದ್ಧ ಪ್ರಯಾಣಕ್ಕೆ ಸನ್ನಾಹಮಾಡಿ,

---

1 ಇಲ್ಲಿ ಆದಿನದ ಚತುರ್ದಶಿಯಲ್ಲಿ ಪ್ರಯಾಣಸನ್ನಾಹವನ್ನು ಹೇಳಿರುವುದರಿಂದ, ತ್ರಯೋದಶಿಯುವರೆಗೆ ಯುದ್ಧದಿನಗಳು ಕಳೆದುಹೋದುವೆಂದು ಗ್ರಾಹ್ಯವು. "ಪೂರ್ಣ ಚಂದ್ರಪ್ರದೀಪಾಚ" ಎಂಬುದಕ್ಕೆ ಪೂರ್ಣಚಂದ್ರಪ್ರಕಾಶವುಳ್ಳುದೆಂದು ಹೇಳುವವರ ಪಕ್ಷದಲ್ಲಿ, ಸುವೇಲಾರೋಹಣವು ಹುಣ್ಣಿಮೆಯ ರಾತ್ರಿಯಾಗುವುದು. ಅದಕ್ಕೆ ಮರುದಿನದ ಪಾಡ್ಯದಲ್ಲಿ ಯುದ್ಧಾರಂಭವು. ಅ ರಾತ್ರಿಯೇ ನಾಗಪಾಶ ಬಂಧಮೋಕ್ಷಗಳು. ಬಿದಿಗೆಯಿಂದ ಪಂಚಮಿಯುವರೆಗೆ ನಾಲ್ಕುದಿನಗಳಲ್ಲಿಯೂ ಕ್ರಮವಾಗಿ, ಧೂಮ್ರಾಕ್ಷ. ವಜ್ರದಂಷ್ಟ್ರ, ಅಕಂಪನ, ಪ್ರಹಸ್ತರ ವಧವು. ಷಷ್ಠಿಯಲ್ಲಿ ರಾವಣನ ಮಕುಟಭಂಗವು. ಸಪ್ತಮಿಯಲ್ಲಿ ಕುಂಭಕರ್ಣವಧವು. ಅಷ್ಟಮಿಯಲ್ಲಿ ಅತಿಕಾಯಾದಿಗಳವಧವು. ನವಮಿಯಲ್ಲಿ ತಿರುಗಿ ಇಂದ್ರಜಿದ್ಯುದ್ಧವು. ಆ ರಾತ್ರಿಯೇ ಕುಂಭನಿಕುಂಭಾದಿಗಳವಧವು. ದಶಮಿಯಲ್ಲಿ ಮಕರಾಕ್ಷವಧವು. ಏಕಾದಶಿಯಿಂದ ತ್ರಯೋದಶಿ ಕೊನೆಗೆ ಇಂದ್ರಜಿದ್ವಧವೆಂದು ದಿನಸಂಖ್ಯಾಕ್ರಮವು. ವಾಸ್ತವಕ್ಕೆ ನವಮಿಯಲ್ಲಿ ಯುದ್ಧಾರಂಭವಾದುದರಿಂದ ನವಮಿ ಮತ್ತು ದಶಮಿ ಈ ಎರಡು ದಿನಗಳಲ್ಲಿ

ನಾಳೆ ಅಮಾವಾಸ್ಯೆಯಲ್ಲಿ ಸಮಸ್ತ ಸೈನ್ಯಗಳೊಡನೆ ಜಯಕ್ಕಾಗಿ ಹೊರಡು. ರಾಜೇಂದ್ರನೇ ! ನಿನಗೆ ಯಾವ ವಿಧದಲ್ಲಿ ಕೊರತೆಯುಂಟು ? ಸಹಜವಾಗಿಯೇ ನೀನು ಶೂರನು! ಬುದ್ಧಿವಂತನು ! ಮಹಾರಥನು ! ಇಂತಹ ನೀನು ಖಡ್ಗವನ್ನು ಹಿಡಿದು ಉತ್ತಮ ರಥವನ್ನೇರಿ ಹೊರಟು, ರಾಮನನ್ನು ಕೊಂದು ಬಿಟ್ಟರೆ, ಸುಲಭವಾಗಿ ಸೀತೆಯನ್ನು ಪಡೆಯಬಹುದು. ಹಾಗಿಲ್ಲದೆ, ಈಗ ವ್ಯರ್ಥವಾಗಿ ಸೀತೆಯನ್ನು ಕೊಂದು ಫಲವೇನು?" ಎಂದನು. ದುರಾತ್ಮನಾದ ರಾವಣನು, ಸುಪಾರ್ಶ್ವನು ಧರ್ಮಯುಕ್ತವಾಗಿ ಹೇಳಿದ ಮಾತನ್ನೇ ಪಥ್ಯವೆಂದು ನಂಬಿ, ಅಲ್ಲಿಂದ ಹಾಗೆಯೇ ಅರಮನೆಗೆ ಹಿಂತಿರುಗಿ, ಮಿತ್ರರೊಡಗೂಡಿ ತಿರುಗಿ ತನ್ನ ಸಭಾ ಮಂದಿರಕ್ಕೆ ಹೋದನು.

ಇಲ್ಲಿಗೆ ತೊಂಬತ್ತಮೂರನೆಯ ಸರ್ಗವು

ಶ್ರೀರಾಮನು ಯುದ್ಧಕ್ಕೆ ಬಂದ ರಾವಣನ ಮೂಲ ಬಲವನ್ನು ಕೊಂದುದು.

ರಾಕ್ಷಸ ರಾಜನಾದ ಆ ರಾವಣನು ಸಭಾಮಂಟಪವನ್ನು ಪ್ರವೇಶಿಸಿ, ಬಹಳ ದೈನ್ಯದಿಂದ ದುಃಖಿಸುತ್ತ, ಕೋಪಗೊಂಡ ಹಾವಿನಂತೆ ಆಗಾಗ ನಿಟ್ಟುಸಿರನ್ನು ಬಿಡುತ್ತ, ತನ್ನ ರಾಜಸಿಂಹಾಸನದಮೇಲೆ ಕುಳಿತನು. ಮಹಾ ಬಲಾಢ್ಯನಾದ ಆ ರಾವಣನು ಪುತ್ರಶೋಕಪರವಶನಾಗಿದ್ದುದರಿಂದ, ಹಿಂದುಮುಂದು ತೋರದೆ, ಮುಂದಿನ ಯುದ್ಧಕ್ಕೆ ತನ್ನ ಮೂಲಬಲವನ್ನೇ ಪ್ರೋತ್ಸಾಹಿಸಿ ಕಳುಹಿಸಬೇಕೆಂದೆಣಿಸಿ, ಅದರಲ್ಲಿ ಪ್ರಮುಖರಾದ ಸೇನಾಪತಿಗಳೆಲ್ಲರನ್ನೂ ನೋಡಿ, ಅವರಿಗೆ ಕೈಮುಗಿದು ಸಾಮವಾಕ್ಯ

ರಾವಣನು, ಇಂದ್ರಜಿತ್ತು, ಮೂಲಬಲ ಇವು ಹೊರತು ಉಳಿದ ರಾಕ್ಷಸರೆಲ್ಲರೂ ಹತರಾಗಿ ಅದರಿಂದಾಚೆಗೆ ಮೂರುದಿನಗಳ ಮೇಲೆ ಇಂದ್ರಜಿದ್ವಧವಾದುದರಿಂದ ಚತುರ್ದಶಿಯಲ್ಲಿ ಯುದ್ಧಪ್ರಯಾಣವೆಂಬುದು ಸಮಂಜಸವು. ಹಿಂದೆ ಇದೇ ಯುದ್ಧಕಾಂಡದ 60 ನೆಯ ಸರ್ಗದಲ್ಲಿ ಈ ವಿಚಾರವು ವಿವರವಾಗಿ ಚರ್ಚಿಸಲ್ಪಟ್ಟಿದೆ.

ದಿಂದ ಹೇಳುವನು. [1]"ಎಲೆ ಬಲಾಧ್ಯಕ್ಷರೇ! ಇನ್ನು ನೀವೆಲ್ಲರೂ ನಿಮ್ಮ ರಥಗಜತುರಗಪದಾತಿಗಳೆಂಬ ಚತುರಂಗ ಸೈನ್ಯದೊಡನೆ ಯುದ್ಧಕ್ಕೆ ಹೊರಡಬೇಕು! ಮುಖ್ಯವಾಗಿ ನೀವೆಲ್ಲರೂ ಸೇರಿ ಈ ಯುದ್ಧದಲ್ಲಿ ಆ ರಾಮನೊಬ್ಬನನ್ನು ನಿಮ್ಮ ನಡುವೆ ಸಿಕ್ಕಿಸಿಕೊಂಡು, ಮೇಘವು ಮಳೆಯನ್ನು ಕರೆಯುವಂತೆ ಅವನ ಮೇಲೆ ಎಡೆಬಿಡದೆ ಬಾಣವರ್ಷವನ್ನು ಕರೆದು, ಅವನನ್ನು ಕೊಲ್ಲಬೇಕು. ಹಾಗೆ ನಿಮ್ಮಿಂದ ಅವನನ್ನು ಕೊಲ್ಲುವುದು ಸಾಧ್ಯವಾಗದ ಪಕ್ಷದಲ್ಲಿ, ಈ ಯುದ್ಧದಲ್ಲಿ ನೀವು ನಿಮ್ಮ ತೀಕ್ಷ್ಣಬಾಣಗಳಿಂದ ಅವನ ಸರ್ವಾವಯವಗಳನ್ನೂ ಭೇದಿಸಿ ಚೆನ್ನಾಗಿ ಗಾಯಪಡಿಸಿ ಬಂದರೂ ಸಾಕು! ಬಲಹೀನನಾದ ರಾಮನನ್ನು ನಾಳೆ ನಾನು ಸಮಸ್ತ ಜನವೂ ನೋಡುತ್ತಿರುವ ಹಾಗೆಯೇ ಯುದ್ಧದಲ್ಲಿ ಕೊಂದು ಬರುವೆನು" ಎಂದನು. ಬಲಾಧ್ಯಕ್ಷರೆಲ್ಲರೂ ರಾವಣನ ಮಾತನ್ನಂಗೀಕರಿಸಿ, ವೇಗವುಳ್ಳ ರಥಗಳನ್ನೇರಿ, ನಾನಾವಿಧ ಸೈನ್ಯಗಳಿಂದ ಪರಿವೃತರಾಗಿ ಹೊರಟರು. ಈ ರಾಕ್ಷಸರೆಲ್ಲರೂ ಸೇರಿ ಬಂದು, ವಾನರ ಸೈನ್ಯವನ್ನಿದಿರಿಸಿ, ಅವರ ಮೇಲೆ ಪರಿಘಗಳನ್ನೂ, ಪಟ್ಟಸಗಳನ್ನೂ, ಶರೀರಭೇದಕಗಳಾದ ಬಾಣಗಳನ್ನೂ, ಕತ್ತಿಗಳನ್ನೂ ಗಂಡುಗೊಡಲಿಗಳನ್ನೂ ಪ್ರಯೋಗಿಸುತ್ತ ಬಂದರು. ಹಾಗೆಯೇ ವಾನರರೂ ರಾಕ್ಷಸರಮೇಲೆ ಗಿಡಗಳನ್ನೂ ಬೆಟ್ಟಗಳನ್ನೂ ಬೀಸಿಬಡಿಯುತ್ತಿದ್ದರು. ಹೀಗೆ ವಾನರರಾಕ್ಷಸರಿಬ್ಬರಿಗೂ ಸೂರ್ಯೋದಯದಿಂದ ಹಿಡಿದು ಅತಿ ಭಯಂಕರವಾದ ದೊಡ್ಡ ತುಮುಲ ಯುದ್ಧವು ನಡೆಯಿತು. ಆ ಯುದ್ಧದಲ್ಲಿ ವಾನರ ರಾಕ್ಷಸರಿಬ್ಬರೂ ತಮ್ಮ ತಮ್ಮ ಕೈಗೆ ಸಿಕ್ಕಿದ ಹಾಗೆ ವಿಚಿತ್ರಗಳಾದ ಗದೆಗಳನ್ನೂ, ಪ್ರಾಸಗಳನ್ನೂ, ಕತ್ತಿಗಳನ್ನೂ, ಗಂಡುಗೊಡಲಿಗಳನ್ನೂ, ಕಲ್ಲು ಮರಗಳನ್ನೂ ಬೀಸಿ, ಒಬ್ಬರನ್ನೊಬ್ಬರು ಕೊಲ್ಲುತ್ತ ಬಂದರು. ಹೀಗೆ ಅವರಿಬ್ಬರಿಗೂ ಮಹಾ ಯುದ್ಧವು ನಡೆಯುತ್ತಿದ್ದಾಗ, ಆ ರಣಭೂಮಿಯಿಂದ ದೊಡ್ಡ ಧೂಳಿಯು ಮೇಲಕ್ಕೆದ್ದು ಅವರ ರಕ್ತ ಪ್ರವಾಹದಿಂದಲೇ ಅಡಗುತ್ತಿತ್ತು. ಅಲ್ಲಲ್ಲಿ ರಕ್ತನದಿಗಳು ಹರಿಯಲಾರಂಬಿಸಿ, ಅವುಗಳ ಉಭಯ ಪಾರ್ಶ್ವಗಳಲ್ಲಿಯೂ ಮುರಿದು

---

1 ಇಲ್ಲಿ ರಾವಣನ ವಾಕ್ಯಗಳಿಗೆ ಅಲ್ಲಲ್ಲಿ ಯಥೋಚಿತವಾಗಿ ರಾಮಭಕ್ತಿ ಪರವಾದ ಶಾಸ್ತ್ರಾರ್ಥವನ್ನು ಊಹಿಸಿಕೊಳ್ಳಬಹುದು.

ಬಿದ್ದ ರಥಗಜಗಳು ತೀರಗಳಂತೆಯೂ, ಕುದುರೆಗಳು ಮೀನುಗಳಂತೆಯೂ ಸಂತು ಕಳೇಬರಗಳು ತೆಪ್ಪಗಳಂತೆಯೂ ಕಾಣುತ್ತಿದ್ದುವು. ವಾನರರು ಈ ರಕ್ತ ಪ್ರವಾಹಗಳಲ್ಲಿ ಮುಳುಗಿ ತೇಲುತ್ತ, ಹಾರಿ ಹಾರಿ ಬಂದು ರಾಕ್ಷಸರಮೇಲೆ ಬಿದ್ದು, ಅವರ ಧ್ವಜಗಳನ್ನೂ, ಕವಚಗಳನ್ನೂ, ರಥಗಳನ್ನೂ, ಕುದುರೆಗಳನ್ನೂ, ಅವರ ವಿವಿಧಾಯುಧಗಳನ್ನೂ ಮೆಟ್ಟಿ ಮುರಿಯುತ್ತಬಂದರು. ಬೇರೆ ಕೆಲವು ವಾನರರು, ರಾಕ್ಷಸರ ತಲೆಕೂದಲುಗಳನ್ನೂ ಕಿವಿಮೂಗುಗಳನ್ನೂ ಹಣೆಗಳನ್ನೂ ತಮ್ಮ ತೀಕ್ಷ್ಣನಖಗಳಿಂದಲೂ, ಹಲ್ಲುಗಳಿಂದಲೂ ಕಿತ್ತು ಕೊಲ್ಲು ತ್ತಿದ್ದರು. ಫಲ ಸಮೃದ್ಧಗಳಾದ ಮರಗಳಿಗೆ ಹಕ್ಕಿಗಳು ಬಂದು ಮುತ್ತುವಂತೆ, ಒಬ್ಬೊಬ್ಬ ರಾಕ್ಷಸನಿಗೆ ನೂರಾರು ಮಂದಿ ವಾನರರು ಸುತ್ತಿ ಮುತ್ತಿ ಹಿಡಿದು ಬಡಿಯುತ್ತಿದ್ದರು. ಹೀಗೆಯೇ ಪರ್ವತಾಕಾರವುಳ್ಳ ಕೆಲವು ರಾಕ್ಷ ಸರೂ ಕೂಡ ಅಲ್ಲಲ್ಲಿ ಭಯಂಕರಾಕಾರವುಳ್ಳ ವಾನರರನ್ನು ಹಿಡಿದು ದೊಡ್ಡ ದೊಡ್ಡ ಗದೆಗಳಿಂದಲೂ, ಈಟಿಗಳಿಂದಲೂ, ಕತ್ತಿಗಳಿಂದಲೂ, ಗಂಡು ಗೊಡಲಿಗಳಿಂದಲೂ ಬಡಿದು ಕೊಲ್ಲುತ್ತ ಬಂದರು. ಹೀಗೆ ರಾಕ್ಷ ಸರು ವಾನರರನ್ನು ನಾನಾ ದಿಕ್ಕುಗಳಿಂದಲೂ, ಹೊಡೆದು ಬಡಿದು ಕೊಲ್ಲುತ್ತಾಬರಲು, ಅವರ ಬಾಧೆಯನ್ನು ತಡೆಯಲಾರದೆ ವಾನರ ಸೇನೆಯು ಸರ್ವಲೋಕಶರಣ್ಯನಾದ ರಾಮನ ಬಳಿಗೆ ಬಂದು ಅವನಲ್ಲಿ ಮರೆ ಹೊಕ್ಕಿತು. ಇದನ್ನು ನೋಡಿ ಮಹಾ ತೇಜಸ್ವಿಯಾದ ಶ್ರೀ ರಾಮನು, ತನ್ನ ದೊಡ್ಡ ಧನುಸ್ಸನ್ನು ಕೈಗೆತ್ತಿಕೊಂಡು, ರಾಕ್ಷಸ ಸೈನ್ಯವನ್ನು ಪ್ರವೇಶಿಸಿ ಬಾಣವರ್ಷವನ್ನು ಕರೆದನು. ಹೀಗೆ ರಾಮನು ರಾಕ್ಷಸ ಸೈನ್ಯವನ್ನು ಪ್ರವೇಶಿಸಿ ತನ್ನ ಬಾಣಾಗ್ನಿಯಿಂದ ಅದನ್ನು ದಹಿಸುತ್ತ ಬಂದಾಗ, ಬೇಸಗೆಯಲ್ಲಿ ಆಕಾಶ ಗತನಾದ ಸೂರ್ಯನನ್ನು ಮೇಘಗಳು ಹೇಗೋ ಹಾಗೆ ರಾಕ್ಷಸರು ಆತನ ವೀರ್ಯವನ್ನು ತಡೆಯಲಾರದೆ ಹೋದರು. ಆ ಯುದ್ಧದಲ್ಲಿ ರಾಮನು ಹಸ್ತಲಾಘವದಿಂದ ಬೇರೊಬ್ಬರಿಗೂ ಸಾಧ್ಯ ವಲ್ಲದ ಭಯಂಕರ ಕಾರ್ಯಗಳನ್ನು ನಡೆಸುತ್ತಿರಲು ಅವನು ಆಯಾ ಕಾರ್ಯಗಳನ್ನು ನಡೆಸಿದಮೇಲೆ ಅವು ರಾಕ್ಷಸರಿಗೆ ತಿಳಿಯುತ್ತಿತ್ತೇ ಹೊರತು ಅದಕ್ಕೆ ಮೊದಲು ಯಾರಿಗೂ ತಿಳಿಯುತ್ತಿರಲಿಲ್ಲ. ಮತ್ತು ಆಗ ರಾಮನು ರಾಕ್ಷಸ ಸೇನೆಯಲ್ಲಿ ಪ್ರವೇಶಿಸಿ ಆ ಸೈನ್ಯವನ್ನು ಕದಲಿಸಿ, ಮಹಾರಥ ರನ್ನು ಕೊಲ್ಲುತ್ತ, ತನ್ನ ಸಂಚಾರ ಲಾಘವದಿಂದ ತಿರುಗುವಾಗ,

ಕಾಡಿನಲ್ಲಿ ವೃಕ್ಷಚಲನದಿಂದಲೇ ಅಲ್ಲಿನ ವಾಯು ಸಂಚಾರವು ತಿಳಿಯು ವಂತೆ, ಆಯಾ ಕಾರ್ಯಗಳು ಮಾತ್ರವೇ ತಿಳಿಯುತ್ತಿತ್ತೇ ಹೊರತು, ಅಲ್ಲಿ ರಾಮನಿರುವನೆಂದು ಯಾರಿಗೂ ತಿಳಿಯುತ್ತಿರಲಿಲ್ಲ. ಆಗ ರಾಕ್ಷಸರು ತಮ್ಮ ಸೇನೆಯಲ್ಲಿ ರಾಮಬಾಣದಿಂದ ಅಲ್ಲಲ್ಲಿ ಮೈಮುರಿದವರನ್ನೂ, ಸೀಳಿಬಿದ್ದವರನ್ನೂ, ಸುಟ್ಟುಹೋದವರನ್ನೂ, ಗಾಯಹೊಂದಿದವರನ್ನೂ ಶಸ್ತ್ರ ಪೀಡಿತರಾದವರನ್ನೂ ನೋಡುತ್ತಿದ್ದರೇ ಹೊರತು, ಶೀಘ್ರಕಾರಿಯಾದ ರಾಮನನ್ನು ಮಾತ್ರ ಯಾರೂ ಕಾಣಲಿಲ್ಲ. ಪ್ರಜೆಗಳು ಪಂಚ ಭೂತಾತ್ಮಕವಾದ ತಮ್ಮ ದೇಹದಲ್ಲಿ ಸೇರಿರುವ ಜೀವಾತ್ಮನನ್ನು ಪ್ರತ್ಯಕ್ಷವಾಗಿ ಕಾಣಲಾರದೆ, ಇಂದ್ರಿಯಾರ್ಥಾನುಭವದಿಂದ ಆ ಜೀವನಿರುವನೆಂಬುದನ್ನು ಅನುಮಾನಿಸಿ ತಿಳಿಯುವಂತೆ ರಾಕ್ಷಸರು ತಮ್ಮ ದೇಹದಲ್ಲಿ ರಾಮ ಬಾಣಗಳು ನಾಟುವುದನ್ನು ನೋಡಿ, ರಾಮನಿರುವನೆಂದು ಅನುಮಾನದಿಂದ ತಿಳಿಯುತ್ತಿದ್ದರೇ ಹೊರತು, ರಾಮನನ್ನು ಯಾರೊಬ್ಬರೂ ಕಣ್ಣಾರೆ ನೋಡಲಿಲ್ಲ. ಮತ್ತು ರಾಮನು ತನ್ನ ಸಂಚಾರ ಲಾಘವದಿಂದ ನಿಂತ ಕಡೆಯಲ್ಲಿ ನಿಲ್ಲದೆ ರಾಕ್ಷಸ ಸೇನೆಯನ್ನು ಸುತ್ತಿ ಸುತ್ತ ಕೊಲ್ಲುತ್ತ ಬರುವಾಗ ಅವನು ಮಿಂಚಿನಂತೆ ಎಲ್ಲೆಲ್ಲಿ ಕಾಣುತ್ತಿದ್ದನೋ ಅಲ್ಲಿದ್ದ ರಾಕ್ಷಸರು ಸಮೀಪದಲ್ಲಿದ್ದ ರಾಕ್ಷಸನನ್ನೇ ರಾಮಚಂದ್ರನೆಂದು ಭ್ರಮಿಸಿ, "ಇದೋ! ಇಲ್ಲಿ ರಾಮನು ಗಜಸೈನ್ಯವನ್ನು ಕೊಲ್ಲುತ್ತಿರುವನು! ಇದೋ ಇಲ್ಲಿ ಮಹಾರಥರನ್ನು ಧ್ವಂಸಮಾಡುತ್ತಿರುವನು! ಇದೋ ಇಲ್ಲಿ ತನ್ನ ತೀಕ್ಷ್ಣ ಬಾಣಗಳಿಂದ ಅಶ್ವಸೈನ್ಯಗಳೊಡನೆ ಕಾಲಾಳುಗಳನ್ನು ಕೊಲ್ಲುತ್ತಿರುವನು!"ಎಂದು ಕೂಗಾಡುತ್ತ, ತಮ್ಮ ಕಡೆಯ ರಾಕ್ಷಸರನ್ನೇ ತಾವು ಕೋಪದಿಂದ ಬಡಿದು ಕೊಲ್ಲುತ್ತಿದ್ದರು. ಹೀಗೆ ರಾಕ್ಷಸರು ಶ್ರೀರಾಮನಿಂದ ಪ್ರಯೋಗಿಸಲ್ಪಟ್ಟ ಸರ್ವೋತ್ತಮವಾದ [1]ಗಾಂಧರ್ವಾಸ್ತ್ರದಿಂದ ಮೋಹಿತರಾಗಿ, ನಾನಾ ದಿಕ್ಕುಗಳಿಂದಲೂ ತಮ್ಮ ಸೈನ್ಯವನ್ನು

---

1 ಇಲ್ಲಿ ರಾಮನು ಗಾಂಧರ್ವಾಸ್ತ್ರದಿಂದ ರಾಕ್ಷಸರನ್ನು ಮೋಸಗೊಳಿಸಿದನೆಂದು ಗ್ರಹಿಸಕೂಡದು. ಹಾಗೆ ಹೇಳಿದಪಕ್ಷದಲ್ಲಿ ಇಂದ್ರಜಿತ್ತಿನಂತೆ ಇವನೂ ಅಧರ್ಮದಿಂದ ಕೊಂದಂತಾಗುವುದಲ್ಲದೆ, ಆ ಇಂದ್ರಜಿತ್ತಿಗಿಂತಲೂ ರಾಮನಲ್ಲಿ ವಿಶೇಷವೇನೂ ತೋರದು. ಇಲ್ಲಿ ರಾಕ್ಷಸರು ರಾಮನ ಗಾಂಧರ್ವಾಸ್ತ್ರದಿಂದ ಮೋಹಿತರಾದರೆಂದರೆ, ಅದರ ವೇಗಾತಿಶಯದಿಂದ ದಿಗ್ಭ್ರಮೆಹಿಡಿದಂತಾಗಿ ತಮ್ಮವರೆಂದೂ ಶತ್ರುಗಳೆಂದೂ

ದಹಿಸುತ್ತಿದ್ದ ಆ ರಾಮನನ್ನು ಕಾಣಲಾರದೆ ಹೋದರು. ಆಗಿನ ಯುದ್ಧದಲ್ಲಿ ರಾಕ್ಷಸರಿಗುಂಟಾದ ಭಯಾತಿಶಯವನ್ನು ಕೇಳಬೇಕೆ? ಒಮ್ಮೊಮ್ಮೆ ಆ ರಣರಂಗದಲ್ಲಿ ಸಾವಿರಾರು ಮಂದಿ ರಾಮರು ನಿಂತಿರುವಂತೆ ಅವರ ಕಣ್ಣಿಗೆ ಕಾಣುವುದು. ಮತ್ತೊಮ್ಮೆ ನೋಡುವಾಗ ರಾಮನೊಬ್ಬನೇ ನಿಂತಿರುವಂತೆ ತೋರುವುದು. ಮತ್ತು ಮಹಾತ್ಮನಾದ ರಾಮನು ರಣರಂಗದಲ್ಲಿ ತನ್ನ ಮಹಾ ಧನುಸ್ಸನ್ನು ಹಿಡಿದು, ಮಂಡಲಾಕಾರವಾದ ಗತಿವಿಶೇಷದಿಂದ ಸುತ್ತಿ ಸುತ್ತಿ ತಿರುಗುವಾಗ ಅವನ ಬಿಲ್ಲಿನ ಚಿನ್ನದ ಕೊಪ್ಪು ಕೊಳ್ಳಿಯನ್ನು ಸುತ್ತಿಸಿದಂತೆ ಒಂದೇ ರೇಖೆಯಾಗಿ ಸುತ್ತುವುದೊಂದು ಮಾತ್ರವೇ ರಾಕ್ಷಸರ ಕಣ್ಣಿಗೆ ಗೋಚರಿಸುತ್ತಿತ್ತೇ ಹೊರತು ರಾಮನನ್ನು ಯಾರೂ ಕಾಣಲಿಲ್ಲ. ಮಂಡಲಾಕಾರವಾದ ಬಿಲ್ಲನ್ನು ಹಿಡಿದು ರಾಕ್ಷಸ ಸೇನೆಯನ್ನು ಧ್ವಂಸಮಾಡುತ್ತಿದ್ದ ಆ ರಾಮನು ತನ್ನ ದೇಹವೆಂಬ ನಾಭಿ (ಮಧ್ಯದ ಗುಂಬ) ಯಿಂದಲೂ, ದೇಹಬಲವೆಂಬ ಜ್ವಾಲೆಯಿಂದಲೂ, ಬಾಣಗಳೆಂಬ ಅರ (ಅಡ್ಡ ಕಡ್ಡಿ) ಗಳಿಂದಲೂ ಧನುರ್ದಂಡವೆಂಬ ನೇಮಿ (ಪಟ್ಟೆ) ಯಿಂದಲೂ ಜ್ಯಾತಲಘೋಷವೆಂಬ ಮಹಾ ಧ್ವನಿಯಿಂದಲೂ, ಪರಾಕ್ರಮವೆಂಬ ಅಚ್ಚಿನಿಂದಲೂ, ದೇಹಕಾಂತಿಯೆಂಬ ಪ್ರಭೆಯಿಂದಲೂ, ದಿವ್ಯಾಸ್ತ್ರಗಳ ಮಹಿಮೆಯೆಂಬ ಧಾರೆ (ಅಲಗು)ಗಳಿಂದಲೂ ಕೂಡಿ, ಸುದರ್ಶನ ಚಕ್ರದಂತೆ ಕಾಣುತ್ತಿರಲು, ಪ್ರಜೆಗಳಿಗೆ ಜ್ಯೋತಿಶ್ಚಕ್ರವು ಹೇಗೋಹಾಗೆ ರಾಕ್ಷಸರ ಕಣ್ಣಿಗೆ ಮಹಾ ಭಯಂಕರನಾಗಿ ತೋರುತ್ತಿದ್ದನು. ಹೀಗೆ ಮಹಾ ಧನುರ್ಧಾರಿಯಾಗಿ ಯುದ್ಧಕ್ಕೆ ನಿಂತ ರಾಮನು, ಹಗಲಿನ ಎಂಟನೆಯ ಭಾಗದೊಳಗಾಗಿ (ಮೂರೂ ಮುಕ್ಕಾಲು ಗಳಿಗೆಯ ಕಾಲದೊಳಗಾಗಿ) [1] ಏಳು ಕೋಟಿಯೂ ಇಪ್ಪತ್ತೊಂಬತ್ತು ಲಕ್ಷದಷ್ಟು ವಾಯುವೇಗವುಳ್ಳ

ತಿಳಿಯಲಾರದೆ ತಮಗೆ ತಾವೇ ಕೈಗೆ ಸಿಕ್ಕಿದವರನ್ನು ಕೊಲ್ಲುತ್ತ ಬಂದರೆಂದು ಗ್ರಾಹ್ಯವು. ರಾಮನು ಪ್ರಯೋಗಿಸಿದ ಗಂಧರ್ವಾಸ್ತ್ರದಿಂದ ಅವರಿಗೆ ಭಯಸಂತಾಪಗಳೇ ಹೊರತು ದಹನವಲ್ಲ. ಇದರಿಂದಲೇ ಮುಂದೆ ರಾಮನು ಸುಗ್ರೀವಾದಿಗಳನ್ನು ಕುರಿತು ಮಾತಾಡುವಾಗ ಅವರು ತನ್ನ ಅಸ್ತ್ರಪ್ರಯೋಗವನ್ನು ಮಾಯಾಬಲವೆಂದು ಶಂಕಿಸುವರೋ ಎಂದೆಣಿಸಿ, ಇದು ಅಸ್ತ್ರಪ್ರಯೋಗಚಾತುರ್ಯದ ಮಹಿಮೆಯೇ ಹೊರತು ಅಸ್ತ್ರದ ಸ್ವಾಭಾವಿಕಬಲವಲ್ಲವೆಂದು ಹೇಳಿರುವನು.

[1] ಇಲ್ಲಿ ಅನೀಕಂ ದಶಸಾಹಸ್ರಂ ರಥಾನಾಂ ವಾತರಂಹಸಾಮ್ । ಅಷ್ಟಾದಶ ಸಹಸ್ರಾಣಿ ಕುಂಜರಾಣಾಂ ತರಸ್ವಿನಾಮ್॥ ಚತುರ್ದಶ ಸಹಸ್ರಾಣಿ ಸಾರೋಹಾಣಾಂ ಚ

ರಥಗಳನ್ನೂ, ಹದಿಮೂರುಕೋಟಿಯೂ ಹನ್ನೆರಡು ಲಕ್ಷದ ಇಪ್ಪತ್ತು ಸಾವಿರದಷ್ಟು ಮಹಾ ಬಲವುಳ್ಳ ಆನೆಗಳನ್ನೂ, ಹತ್ತು ಕೋಟಿಯೂ ಇಪ್ಪತ್ತು ಲಕ್ಷದ ಅರುವತ್ತು ಸಾವಿರದಷ್ಟು ರಾವುತರಿಂದ ಕೂಡಿದ ಕುದುರೆಗಳನ್ನೂ, ನೂರ ನಾಲ್ವತ್ತೈದು ಕೋಟಿಯೂ ಎಂಬತ್ತು ಲಕ್ಷದಷ್ಟು ಕಾಮರೂಪಿಗಳಾದ ರಾಕ್ಷಸ ಪದಾತಿಗಳನ್ನೂ ತಾನೊಬ್ಬನೇ ಇದಿರಿಸಿ, ಅಗ್ನಿ ಜ್ವಾಲೆಗಳಿಗೆ ಸಮಾನಗಳಾದ ತನ್ನ ಬಾಣಗಳಿಂದ ವಧಿಸಿಬಿಟ್ಟನು. ಇಷ್ಟರಲ್ಲಿ ಆ ಯುದ್ಧದಲ್ಲಿ ಸತ್ತುಳಿದ ಕೆಲವು ರಾಕ್ಷಸ ರಥಿಕರು, ತಮ್ಮ ರಥಾಶ್ವಗಳು ಸತ್ತು, ರಥವು ಪುಡಿ ಪುಡಿಯಾಗಿ, ಧ್ವಜವು ಮುರಿದು ದರಿಂದ ಉತ್ಸಾಹಭಂಗವನ್ನು ಹೊಂದಿ ಲಂಕೆಗೆ ಹಿಂತಿರುಗಿಬಿಟ್ಟರು. ಆಗ ಆ ಯುದ್ಧದಲ್ಲಿ ಸತ್ತುಬಿದ್ದ ಆನೆ ಕುದುರೆ ಕಾಲಾಳುಗಳಿಂದ ಆ ರಣರಂಗವೆಲ್ಲವೂ ಕೋಪಗೊಂಡ ಕಾಲರುದ್ರನ ಕ್ರೀಡಾಸ್ಥಾನದಂತೆ (ಶ್ಮಶಾನದಂತೆ) ಕಾಣಿಸಿತು. ಈ ಯುದ್ಧವನ್ನು ನೋಡುವುದಕ್ಕಾಗಿ ಆಕಾಶದಲ್ಲಿ ನೆರೆದಿದ್ದ ದೇವ ಗಂಧರ್ವ ಸಿದ್ಧ ಮಹರ್ಷಿಗಳೆಲ್ಲರೂ, ರಾಮನ ದುಷ್ಕರ ಕಾರ್ಯವನ್ನು ನೋಡಿ "ಭಲೆ ! ಭಲೆ" ಎಂದು ಕೊಂಡಾಡಿ ದರು. ಆಗ ಧರ್ಮಾತ್ಮನಾದ ರಾಮನು ಸನ್ನ ಸಮೀಪದಲ್ಲಿದ್ದ ಸುಗ್ರೀವ ನನ್ನೂ, ವಿಭೀಷಣನನ್ನೂ, ಹನುಮಂತನನ್ನೂ, ಜಾಂಬವಂತನನ್ನೂ, ವಾನರೋತ್ತಮನಾದ ಮೈಂದನನ್ನೂ, ದ್ವಿವಿದನನ್ನೂ ನೋಡಿ "ಎಲೈ ಮಿತ್ರರೆ ! ಅಷ್ಟೊಂದು ಮೂಲಬಲವನ್ನೂ ಕ್ಷಣಮಾತ್ರದಲ್ಲಿ ನಿರ್ಮೂಲ

ವಾಜಿನಾಮ್ । ಪೂರ್ಣೇ ಶತಸಹಸ್ರೇದ್ವೇ ರಾಕ್ಷಸಾನಾಂ ಪದಾತಿನಾಮ್" ಎಂದು ಮೂಲವು. "ಏಕೇಭೈಕರಥಾತ್ರ್ಯಶ್ವಾ ಪತ್ತಿಃ ಪಂಚಪದಾತಿಕಾ । ಪತ್ತ್ಯಂಗೈಸ್ತ್ರಿಗುಣೈಸ್ಸರ್ವೈಃ ಕ್ರಮಾದಾಖ್ಯಾಂ ಯಥೋತ್ತರಮ್ । ಸೇನಾಮುಖಂ ಗುಲ್ಮಗಣೌ ವಾಹಿನೀ ಪೃತನಾ ಚಮೂಃ" ಎಂಬಂತೆ ಒಂದಾನೆ, ಒಂದು ರಥ, ಮೂರುಕುದುರೆಗಳು ಐದು ಪದಾತಿಗಳು ! ಇವಿಷ್ಟೂ ಸೇರಿ ಮೊತ್ತಕ್ಕೆ ಹತ್ತು ಆಕೃತಿಗಳುಳ್ಳ ಸೈನ್ಯಕ್ಕೆ ಪತ್ತಿಯೆಂದು ಹೆಸರು. ಮೂರುಪತ್ತಿಗಳು ಸೇನಾಮುಖವೆನಿಸುವುದು. ಮೂರು ಸೇನಾಮುಖಗಳು ಗುಲ್ಮವು. ಮೂರು ಗುಲ್ಮಗಳು ಗಣವು. ಮೂರು ಗಣಗಳು ವಾಹಿನಿ. ಮೂರು ವಾಹಿನಿಗಳು ಪೃತನೆ. ಮೂರು ಪೃತನೆಗಳು ಚಮುವೆನಿಸುವುದು. ಇಲ್ಲಿ ಚಮೂಪರ್ಯಾಯವಾಗಿಯೇ ಅನೀಕಶಬ್ದವು ಉಪಯೋಗಿಸಲ್ಪಟ್ಟಿರುವುದರಿಂದ [7260] ಆಕೃತಿಗಳುಳ್ಳ ಸೇನೆಯು ಅನೀಕವೆನಿಸುವುದು. ಅಂತಹ ಹತ್ತು ಸಾವಿರದಷ್ಟು ಅನೀಕಗಳೆಂದು ಗ್ರಾಹ್ಯವು. ಈ ಸಂಖ್ಯಾಕ್ರಮದಿಂದಲೇ ಮೇಲಿನ ಸೇನಾಸಂಖ್ಯೆಗಳನ್ನು ತಿಳಿಯಬೇಕು.

ಮಾಡಿದುದು ಮಾಯೆಯಿಂದಾಗಲಿ, ಮಂತ್ರದಿಂದಾಗಲಿ ಆದುದಲ್ಲ. ಈ ವಿಧವಾದ ಅಸ್ತ್ರಪ್ರಯೋಗದ ಶಕ್ತಿಯು ನನಗೊಬ್ಬನಿಗೆ ಮತ್ತು ಸಂಹಾರ ಕಾಲದಲ್ಲಿ ರುದ್ರನೊಬ್ಬನಿಗೆ, ನಮ್ಮಿಬ್ಬರಿಗೆ ಮಾತ್ರವೇ ಹೊರತು ಬೇರೊಬ್ಬರಿಗೆ ಬಾರದು" ಎಂದನು. ಹೀಗೆ ಶಸ್ತ್ರಾಸ್ತ್ರಗಳಲ್ಲಿ ಪೂರ್ಣ ಪರಾಕ್ರಮವುಳ್ಳವನಾಗಿಯೂ, ಮಹಾತ್ಮನಾಗಿಯೂ, ಮಹೇಂದ್ರ ಸಮಾನನಾಗಿಯೂ ಇದ್ದ ರಾಮನು ಆ ರಾಕ್ಷಸ ಸೇನೆಯನ್ನು ಕೊಂದಮೇಲೆ ದೇವತೆಗಳೆಲ್ಲರೂ ಪರಮಸಂತುಷ್ಟರಾಗಿ, ಬಹಳವಾಗಿ ಕೊಂಡಾಡುತ್ತಿದ್ದರು.

ಇಲ್ಲಿಗೆ ತೊಂಬತ್ತನಾಲ್ಕನೆಯ ಸರ್ಗವು

ಬಂಧು ಮರಣಕ್ಕಾಗಿ ರಾಕ್ಷಸಸ್ತ್ರೀಯರ ವಿಲಾಪವು.

ಹೀಗೆ ರಾವಣನಿಂದ ಪ್ರೇರಿತವಾದ ಅನೇಕ ರಾಕ್ಷಸಸೈನ್ಯಗಳನ್ನು ರಾಮನು ಸುವರ್ಣಾಲಂಕೃತಗಳಾದ ತನ್ನ ತೀಕ್ಷ್ಣ ಬಾಣಗಳಿಂದ ಕೊಂದು ಕೆಡಹಿದನು. ರಾವುತರಿಂದ ಕೂಡಿದ ಸಾವಿರಾರು ಅಶ್ವಸೈನ್ಯಗಳೂ, ಸುವರ್ಣಧ್ವಜಗಳಿಂದ ಶೋಭಿತಗಳಾದ ರಥವನ್ನೇರಿ ಗದೆಗಳನ್ನೂ, ಪರಿಘಗಳನ್ನೂ ಹಿಡಿದು ಶೌರ್ಯದಿಂದ ಹೋರಾಡತಕ್ಕ ಕಾಮರೂಪಿಗಳಾದ ಸಾವಿರಾರುಮಂದಿ ರಾಕ್ಷಸರೂ ರಾಮಬಾಣದಿಂದ ಹತರಾಗಿ ಬಿದ್ದರು. ಆ ಯುದ್ಧದಲ್ಲಿ ಸತ್ತುಳಿದ ಕೆಲವು ರಾಕ್ಷಸರು ಮಾತ್ರ, ಭಯಂಕರವಾದ ಈ ಕೊಲೆಯನ್ನು ನೋಡಿಯೂ, ಕೇಳಿಯೂ ಅತ್ಯಂತ ಭಯಾತುರರಾಗಿ, ಹಿಂತಿರುಗಿ ಲಂಕೆಗೆ ಪಲಾಯನ ಮಾಡಿ, ಅಲ್ಲಿ ರಾಕ್ಷಸಸ್ತ್ರೀಯರೊಡನೆ ಸೇರಿ ಬಹಳ ದೈನ್ಯದಿಂದ ಚಿಂತಿಸಿ ಕೊರಗುತ್ತಿದ್ದರು. ಆ ರಾಕ್ಷಸಸ್ತ್ರೀಯರಲ್ಲಿ ಪತಿಯನ್ನು ಕಳೆದುಕೊಂಡವರೂ, ಪುತ್ರನನ್ನು ಕಳೆದುಕೊಂಡವರೂ, ಪತ್ನಿಯನ್ನು ಕಳೆದುಕೊಂಡವರೂ, ಅಲ್ಲಲ್ಲಿ ಗುಂಪುಕೂಡಿ ದುಃಖಾರ್ತರಾಗಿ ನಾನಾತರದಿಂದ ವಿಲಪಿಸುವುದಕ್ಕೆ ತೊಡಗಿದರು. "ಅಯ್ಯೋ ! ಜೋಲು ಹೊಟ್ಟೆಯಿಂದ ಮಹಾ ಘೋರಸ್ವರೂಪವುಳ್ಳ ಆ ಮುದಿಮುಂಡೆ ಶೂರ್ಪನಖಿಯು, ಕಾಡಿನಲ್ಲಿ ರೂಪುಗೊಂಡ

ಮನ್ಮಥನಂತೆ ಸುಂದರಾಕಾರನಾಗಿಯೂ, ಸುಕುಮಾರನಾಗಿಯೂ, ಮಹಾ ಬಲಾಢ್ಯನಾಗಿಯೂ, ಸರ್ವ ಭೂತಹಿತಕರನಾಗಿಯೂ ಇರುವ ಆ ಶ್ರೀರಾಮ ನನ್ನು ಹೇಗೆ ಸಂಧಿಸಿದಳು ! ಲೇಶಮಾತ್ರವೂ ಉತ್ತಮ ಗುಣವಿಲ್ಲದೆ ಲೋಕ ನಿಂದಿತೆಯಾಗಿ, ವಿಕೃತಾಕಾರವುಳ್ಳ ಆ ರಾಕ್ಷಸಿಗೆ, ಗುಣಾಢ್ಯನಾಗಿಯೂ ಮಹಾತೇಜಸ್ವಿಯಾಗಿಯೂ ಇದ್ದ ಆ ರಾಮನನ್ನು ನೋಡಿ ಹೇಗೆ [1]ಮೋಹವುಂಟಾಯಿತು? ದುರ್ಮುಖಿಯಾದ ಆ ರಾಕ್ಷಸಿಗೆ, ಸುಮುಖನಾದ ಆ ಪುರುಷೋತ್ತಮನಲ್ಲಿ ಹೇಗೆ ಅನುರಾಗವು ಹುಟ್ಟಿತು? ಮುಪ್ಪಿನಿಂದ ಮೈಮುದಿರಿ, ನರೆತ ಕೂದಲುಳ್ಳ ಆ ರಾಕ್ಷಸಿಯು, ಯಾವವಿಧದಲ್ಲಿಯೂ ತನಗನುರೂಪನಲ್ಲದ ಲೋಕಾಭಿರಾಮನನ್ನೇಕೆ ಕಾಮಿಸಿದಳು? ನಮ್ಮೆಲ್ಲರ ದೌರ್ಭಾಗ್ಯದಿಂದಲೇ ಅವಳಿಗೆ ಹೀಗೆ ಸರ್ವಲೋಕನಿಂದಿತವಾಗಿಯೂ, ಹಾಸ್ಯಾ ಸ್ಪದವಾಗಿಯೂ ಇರುವ ಈ ಅಕಾರ್ಯದಲ್ಲಿ ಬುದ್ಧಿಯು ಹುಟ್ಟಿರಬೇಕು! ಖರದೂಷಣರ ಮತ್ತು ಇತರ ರಾಕ್ಷಸರ ವಿನಾಶಕ್ಕಾಗಿಯೇ ಅವಳು ಯಾವ ವಿಧದಲ್ಲಿಯೂ ತನಗನುರೂಪನಲ್ಲದ ರಾಮನನ್ನು ಕೆಣಕಿಬಂದಿರಬೇಕು. ಇವಳ ನಿಮಿತ್ತವಾಗಿಯೇ ಅಲ್ಲವೇ ರಾವಣನಿಗೆ ರಾಮನಲ್ಲಿ ಅಷ್ಟೊಂದು ವೈರವುಂಟಾಯಿತು ! ಹೀಗೆಯೇ ರಾವಣನೂ ಕೂಡ ತನ್ನ ವಿನಾಶ ಕ್ಕಾಗಿಯೇ ಸೀತೆಯನ್ನು ತಂದು ಮನೆಯಲ್ಲಿಟ್ಟುಕೊಂಡಂತಾಯಿತೇ ಹೊರತು ಆ ಸೀತೆಯೇನೋ ಇವನಿಗೆ ವಶಳಾಗಲಿಲ್ಲ ! ಅವನಿಗೆ ರಾಮನೊಡನೆ ತೀರದ ವೈರವೇನೋ ಪೂರ್ಣವಾಗಿ ಬೆಳೆದು ಹೋಯಿತು ! ಇದೂ ಹಾಗಿರಲಿ! ಇದಕ್ಕೆ ಮೊದಲು ಸೀತೆಯನ್ನು ಕಾಮಿಸಿ ಬಂದ ವಿರಾಧನೆಂಬ ರಾಕ್ಷಸ ನನ್ನು ಆ ರಾಮನೊಬ್ಬನೇ ಕೊಂದನಲ್ಲವೆ? ಆ ವಿರಾಧನನ್ನು ನೋಡಿದ ಮೇಲೆ ರಾಮನ ಪರಾಕ್ರಮದ ವಿಷಯದಲ್ಲಿ ನಮಗೆ ಬೇರೆ ನಿದರ್ಶನವೇಕೆ? ರಾಮನು ಎಂತಹ ಪ್ರಬಲ ಶತ್ರುಗಳನ್ನಾದರೂ ತಾನೊಬ್ಬನೇ ಅಡಗಿಸಬಲ್ಲ ನೆಂಬುದಕ್ಕೆ ಅದೊಂದೇ ನಿದರ್ಶನವು ಸಾಕು ! ಇದರಮೇಲೆ ಜನಸ್ಥಾನದಲ್ಲಿ

---

1 ಹಿಂದೆ ಶೂರ್ಪಣಖಿಯು ರಾವಣಾದಿಗಳೊಡನೆ ರಾಮನಮೇಲೆ ದೂರು ಹೇಳುವಾಗ, ನಿಜಸ್ಥಿತಿಯನ್ನು ಮರೆಸಿ ಬೇರೆ ವಿಧವಾಗಿ ಹೇಳಿದ್ದರೂ, ಆಕೆಯ ಅಂಗಕಂಪನಾದಿಗಳಿಂದ, ಅವಳು ರಾಮನನ್ನು ಕಾಮಿಸಿ ಆವನಿಂದ ತಿರಸ್ಕೃತೆ ಯಾಗಿಯೇ ಬಂದಿರಬೇಕೆಂದು ಅಲ್ಲಿನ ರಾಕ್ಷಸಿಯರಿಗೆ ತಿಳಿಯಿತೆಂದೂಹ್ಯವು.

ನಡೆದ ಕಾರ್ಯವಾದರೂ ಸಾಮಾನ್ಯವೆ? ಭಯಂಕರ ಪರಾಕ್ರಮವುಳ್ಳ ಹದಿನಾಲ್ಕು ಸಾವಿರಮಂದಿ ರಾಕ್ಷಸರನ್ನೂ ಆ ರಾಮನೊಬ್ಬನೇ ಅಗ್ನಿಜ್ವಾಲೆಗಳಿಗೆ ಸಮಾನಗಳಾದ ತನ್ನ ಬಾಣಗಳಿಂದ ಕೊಂದು ಕೆಡಹಿದನು. ಮತ್ತು ಸೂರ್ಯನಿಗೆಣೆಯಾದ ತನ್ನ ಬಾಣಗಳಿಂದ ಖರ ದೂಷಣ ತ್ರಿಶಿರರೆಂಬ ಲೋಕೈಕ ವೀರರಾದ ರಾಕ್ಷಸ ಪ್ರಧಾನರನ್ನೂ ವಧಿಸಿಬಿಟ್ಟನು. ರಾಮನು ಬೇರೆಯವರಿಗೆ ದುರ್ಜಯನೆಂಬುದಕ್ಕೆ ಅದೊಂದು ನಿದರ್ಶನವೇ ಸಾಕು! ರಕ್ತಪಾಯಿಯಾದ ಕಬಂಧನೆಂಬ ರಾಕ್ಷಸನು, ಒಂದೊಂದು ಯೋಜನದುದ್ದಕ್ಕೆ ತೋಳುಗಳನ್ನು ನೀಡಿ, ಕೋಪದಿಂದ ಗರ್ಜಿಸುತ್ತ ಬಂದಾಗ ರಾಮನು ಅವನನ್ನು ಕೊಂದನಲ್ಲವೆ? ಈ ನಿದರ್ಶನವೊಂದೇ ಸಾಕು! ಮತ್ತು ಬಹಳ ಬಲಾಢ್ಯನಾಗಿ, ಮೇರು ಪರ್ವತದಂತೆ ಮಹಾಕಾಯವುಳ್ಳವನಾಗಿದ್ದ ಇಂದ್ರಪುತ್ರನಾದ ವಾಲಿಯನ್ನು, ರಾಮನು ಒಂದೇ ಬಾಣದಿಂದ ಕೊಂದನಲ್ಲವೆ? ಈ ನಿದರ್ಶನವೇ ಸಾಕು! ಮತ್ತು ಆಶಾಭಂಗವನ್ನು ಹೊಂದಿ ಬಹಳ ದೈನ್ಯದಿಂದ ಋಷ್ಯಮೂಕದಲ್ಲಿ ವಾಸಿಸುತ್ತಿದ್ದ ಸುಗ್ರೀವನಿಗೆ ವಾನರ ರಾಜ್ಯಾಧಿಪತ್ಯವನ್ನು ವಹಿಸಿಕೊಟ್ಟುದೊಂದೇ ರಾಮನ ಪರಾಕ್ರಮಕ್ಕೆ ಸಾಕಾದ ನಿದರ್ಶನವು. ಆ ರಾಮನ ವಿಷಯವೂ ಹಾಗಿರಲಿ! ಆತನಿಗೆ ದೂತನಾಗಿ ಬಂದ ವಾಯುಪುತ್ರನಾದ ಹನುಮಂತನು, ತಾನೊಬ್ಬನೇ ಸಮುದ್ರವನ್ನು ಲಂಘಿಸಿ ಲಂಕೆಗೆ ಬಂದು, ಅನೇಕ ರಾಕ್ಷಸರನ್ನು ಕೊಂದು ಲಂಕೆಯನ್ನು ಸುಟ್ಟು ಹಿಂತಿರುಗಿ ಬಂದನು. ಈ ದೃಷ್ಟಾಂತವೊಂದೇ ಸಾಕಲ್ಲವೆ? ಮತ್ತು ರಾಮನು ತನ್ನ ವೀರ್ಯದಿಂದ ಸಮುದ್ರವನ್ನಡಗಿಸಿ, ಸೇತುವನ್ನು ಕಟ್ಟಿ, ಅನೇಕ ವಾನರರೊಡನೆ ಆ ಮಹಾ ಸಮುದ್ರವನ್ನು ದಾಟಿ ಬಂದುದೊಂದು ನಿದರ್ಶನವೇ ಸಾಕು. ನಮ್ಮ ಶತ್ರುಗಳಾದ ಆ ರಾಮಾದಿಗಳ ಪರಾಕ್ರಮವೂ ಹಾಗಿರಲಿ! ಮೊದಲು ವಿಭೀಷಣನು ಸಮಸ್ತ ರಾಕ್ಷಸರಿಗೂ ಹಿತಕರವಾಗಿ, ಧರ್ಮಾರ್ಥಯುಕ್ತವಾಗಿ, ಯುಕ್ತಿಯುಕ್ತವಾಗಿದ್ದ ಎಷ್ಟೋ ಬುದ್ಧಿವಾದಗಳನ್ನು ಹೇಳಿದರೂ, ಅಜ್ಞಾನವಶನಾದ ರಾವಣನಿಗೆ ಅದೊಂದೂ ರುಚಿಸದೆ ಹೋಯಿತು. ಆಗಮಾತ್ರ ರಾವಣನು ವಿಭೀಷಣನ ಮಾತಿನಂತೆ ನಡೆದಿದ್ದರೆ, ನಮ್ಮ ಲಂಕಾನಗರಿಯು ಹೀಗೆ ಶ್ಮಶಾನ ಪ್ರಾಯವಾಗಿ ದುಃಖಧ್ವನಿಯಿಂದ ತುಂಬುತ್ತಿರಲಿಲ್ಲ. ಆ ಸಂಗತಿಗಳೂ ಹಾಗಿರಲಿ! ಈಚೀಚೆಗೆ ರಾಮನಿಂದ ಮಹಾಬಲಾಢ್ಯನಾದ ಕುಂಭಕರ್ಣನು ಹತನಾದನು. ಶತ್ರುದುರ್ಜಯನಾದ

ಅತಿಕಾಯನನ್ನು ಲಕ್ಷ್ಮಣನು ಕೊಂದು ಕೆಡಹಿದನು. ಇಂದ್ರನನ್ನು ಜಯಿಸಿ ಪ್ರಖ್ಯಾತಿಹೊಂದಿದ ತನ್ನ ಪ್ರಿಯಪುತ್ರನಾದ ಇಂದ್ರಜಿತ್ತೂ ಕೂಡ ಈಗಿನ ಯುದ್ಧದಲ್ಲಿ ಅದೇ ಶತ್ರುಗಳಿಂದ ಸಂಹೃತನಾದನು. ಇವೆಲ್ಲವನ್ನೂ ತಾನು ಕಣ್ಣಾರೆ ನೋಡಿಯೂ ರಾವಣನಿಗೆ ರಾಮನ ಮಹಿಮೆಯು ತಿಳಿಯದಿರುವು ದಲ್ಲಾ! ಇದಕ್ಕೆ ಮೊದಲು ಕೇವಲ ದೂತನಾಗಿ ಬಂದ ಹನುಮಂತನೆಂಬ ವಾನರನು ತನ್ನ ಬಾಲದ ಬೆಂಕಿಯಿಂದಲೇ ಈ ಲಂಕೆಯನ್ನು ಸುಟ್ಟು, ಅಕ್ಷಕುಮಾರನನ್ನು ಕೊಂದು ಹೋದುದನ್ನು ಕಂಡೂ ರಾವಣನಿಗೆ ಆ ಶತ್ರು ಗಳ ಮಹಿಮೆಯು ತಿಳಿಯದೆ ಹೋಯಿತು!" ಎಂದು ಒಬ್ಬರಿಗೊಬ್ಬರು ಹೇಳಿ ಗೋಳಿಡುತ್ತಿದ್ದರು. ರಾಕ್ಷಸರ ಮನೆಮನೆಗಳಲ್ಲಿಯೂ 'ಅಯ್ಯೋ! ನನ್ನ ಮಗನು ಸತ್ತನು! ಅಯ್ಯೋ! ನನ್ನ ಸಹೋದರನು ಸತ್ತನು! ಅಯ್ಯೋ! ನನ್ನ ಪತಿಯು ಸತ್ತನು!" ಎಂದು ಬಂಧುವ್ಯಸನದಿಂದ ಕೂಗಿಡುವ ಆರ್ತಧ್ವನಿ ಯೊಂದೇ ಕೇಳಿಸುತ್ತಿತ್ತು. ಮತ್ತು ಅಲ್ಲಲ್ಲಿ ಕೆಲವರು "ಆಹಾ! ಶೂರನಾದ ರಾಮನು ಈ ಯುದ್ಧದಲ್ಲಿ ರಥಗಳನ್ನೂ, ಆನೆಗಳನ್ನೂ, ಪದಾತಿಗಳನ್ನೂ, ಲಕ್ಷೋಪಲಕ್ಷವಾಗಿ ಕೊಂದು ಕೆಡಹಿಬಿಟ್ಟನು. ವಾಸ್ತವದಿಂದ ಅವನು ಮನುಷ್ಯಮಾತ್ರನಲ್ಲ! ರುದ್ರನೋ, ವಿಷ್ಣುವೋ, ಶತಕ್ರತುವಾದ ಮಹೇಂದ್ರನೋ ಇಲ್ಲವೇ ಯಮನೋ ರಾಮರೂಪದಿಂದ ಬಂದು ನಮ್ಮನ್ನು ಕೊಲ್ಲುತ್ತಿರು ವನೇ ಹೊರತು ಬೇರೆಯಲ್ಲ! ನಮ್ಮಲ್ಲಿದ್ದ ಮಹಾವೀರರೆಲ್ಲರೂ ಹತರಾದರು! ಇನ್ನು ನಮಗೂ ಬದುಕುವ ಆಸೆಯಿಲ್ಲ! ಕೊನೆಗೆ ಬಾಣದ ಭಯದಿಂದ ನಾವು ದಿಕ್ಕಿಲ್ಲದೆ ವಿಲಪಿಸುವಂತಾಯಿತಲ್ಲಾ! ರಾವಣನು ಬ್ರಹ್ಮನಿಂದ ತಾನು ಮಹಾವರಗಳನ್ನು ಪಡೆದಿರುವೆನೆಂಬ ಹೆಮ್ಮೆಯಿಂದ, ಹಿಂದುಮುಂದು ನೋಡದೆ ಅಕೃತ್ಯಗಳಿಗೆ ಪ್ರವರ್ತಿಸಿ, ಈಗ ತನಗೆ ರಾಮನಿಂದುಂಟಾಗಿ ರುವ ಮಹಾ ಘೋರಭಯವನ್ನು ತಿಳಿಯದಿರುವನು. ದೇವತೆಗಳಾಗಲಿ, ಗಂಧರ್ವರಾಗಲಿ, ಪಿಶಾಚರಾಗಲಿ, ರಾಕ್ಷಸರಾಗಲಿ, ಯುದ್ಧದಲ್ಲಿ ರಾಮನ ಕೈಗೆ ಸಿಕ್ಕಿಬಿದ್ದವರನ್ನು ರಕ್ಷಿಸಿಕೊಳ್ಳಲಾರರು! ಇದಲ್ಲದೆ ಒಂದೊಂದು ಯುದ್ಧ ದಲ್ಲಿಯೂ ರಾವಣನಿಗೆ ಉತ್ಪಾತಗಳೇ ಕಂಡು ಬರುತ್ತಿರುವುವು. ಆ ಉತ್ಪಾತ ಗಳಾದರೂ ಸಾಮಾನ್ಯವೆ? ರಾವಣನಿಗೆ ಮರಣವನ್ನೇ ಸೂಚಿಸುತ್ತಿರುವುವು. ಪೂರ್ವದಲ್ಲಿ ಬ್ರಹ್ಮನು ರಾವಣನ ತಪಸ್ಸಿಗೆ ಮೆಚ್ಚಿ, ಅವನಿಗೆ ದೇವತೆಗಳಿಂ ದಾಗಲಿ, ದಾನವರಿಂದಾಗಲಿ, ರಾಕ್ಷಸರಿಂದಾಗಲಿ ಭಯವಿಲ್ಲದಂತೆ ವರವನ್ನು

ಕೊಟ್ಟನು. ಆಗ ರಾವಣನು ತನಗೆ ಮನುಷ್ಯರಿಂದ ಮಾತ್ರ ಆ ಭಯವನ್ನು ಯಾಚಿಸದೆ ಹೋದನು. ಆದುದರಿಂದಲೇ ಈಗ ರಾವಣನಿಗೂ ರಾಕ್ಷಸರಿಗೂ ಪ್ರಾಣಾಂತಕವಾದ ಮಹಾಭಯವು ಮನುಷ್ಯರಿಂದಲೇ ಪ್ರಾಪ್ತವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಇದಕ್ಕೆ ತಕ್ಕಂತೆ ಹಿಂದೆ ದೇವತೆಗಳೂ ಕೂಡ ಬ್ರಹ್ಮವರದಿಂದ ಕೊಬ್ಬಿದ ರಾವಣನ ಬಾಧೆಯನ್ನು ತಡೆಯಲಾರದೆ, ಆ ಬ್ರಹ್ಮನನ್ನು ಕುರಿತು ಕ್ರೂರ ತಪಸ್ಸನ್ನು ಮಾಡಿದರು. ಮಹಾತ್ಮನಾದ ಬ್ರಹ್ಮನು ಅವರ ತಪಸ್ಸಿಗೆ ಮೆಚ್ಚಿ, ಅವರ ಕ್ಷೇಮಕ್ಕಾಗಿ ಅವರನ್ನು ಕುರಿತು "ಎಲೈ ದೇವತೆಗಳಿರಾ! ಇದುಮೊದಲು ಸಮಸ್ತ ರಾಕ್ಷಸರೂ, ಮಂಡೋದರಿಯ ಸಂಬಂಧದಿಂದ ಅವರೊಡನೆ ಸೇರಿದ ದಾನವರೂ, ನಿಮ್ಮ ವಿಷಯದಲ್ಲಿ ಯಾವಾಗಲೂ ಭಯಪೀಡಿತರಾಗಿಯೇ ಮೂರು ಲೋಕಗಳನ್ನೂ ಸುತ್ತುತ್ತಿರಲಿ!" ಎಂದು ಸಮಾಧಾನಮಾಡಿ ಕಳುಹಿಸಿ ಬಿಟ್ಟನು. ಇಂದ್ರಾದಿ ದೇವತೆಗಳು ಈ ಬ್ರಹ್ಮನ ಸಮಾಧಾನವಾಕ್ಯದಿಂದ ತೃಪ್ತರಾಗದೆ, ಎಲ್ಲರೂ ಒಂದಾಗಿ ಸೇರಿ ತ್ರಿಪುರಸಂಹಾರಿಯಾದ ಶಿವನಲ್ಲಿ ಹೋಗಿ ಪ್ರಾರ್ಥಿಸಿ ಅವನನ್ನು ಪ್ರಸನ್ನನಾಗಿ ಮಾಡಿದರು. ಆಗ ಶಿವನು ಅವರಿಗೆ ಪ್ರಸನ್ನನಾಗಿ, "ಎಲೈ ದೇವತೆಗಳಿರಾ! ರಾಕ್ಷಸರಿಗೆ ನಾಶವನ್ನುಂಟುಮಾಡತಕ್ಕ ಹೆಂಗಸೊಬ್ಬಳು ಹುಟ್ಟುವಳು. ಅವಳಿಂದ ನಿಮಗೆ ಕ್ಷೇಮವುಂಟಾಗುವುದು" ಎಂದು ಹೇಳಿದನು. ಈಗ ನಮ್ಮ ರಾವಣನು ಕದ್ದು ತಂದಿಟ್ಟಿರುವ ಸೀತೆಯೆಂಬವಳೇ, ರಾವಣನನ್ನೂ, ರಾಕ್ಷಸರನ್ನೂ, ನಿರ್ಮೂಲವಾಗಿ ಭಕ್ಷಿಸುವುದಕ್ಕಾಗಿ ದೇವತೆಗಳು ಕಳುಹಿಸಿರುವ ಸ್ತ್ರೀ ವ್ಯಕ್ತಿಯೆಂಬುದರಲ್ಲಿ ಸಂದೇಹವಿಲ್ಲ. ಮೊದಲು ಅಮೃತಮಥನ ಕಾಲದಲ್ಲಿ ದೇವತೆಗಳು ಅಮೃತಪಾನವನ್ನು ಮಾಡಿದಮೇಲೆ, ಕ್ಷುದ್ಬಾಧೆಯು ತಲೆದೋರಿ ದಾನವರನ್ನು ನಿರ್ಮೂಲಮಾಡಿದಂತೆ, ಆ ಸೀತೆಯೆಂಬವಳೇ ರಾವಣನೊಡನೆ ಸೇರಿಸಿ ನಮ್ಮೆಲ್ಲರನ್ನೂ ಭಕ್ಷಿಸದೆ ಬಿಡಳು. ಆಹಾ! ದುರಾತ್ಮನಾಗಿಯೂ, ದುರ್ವಿನೀತನಾಗಿಯೂ ಇರುವ ಆ ರಾವಣನ ದುಷ್ಕಾರ್ಯದಿಂದಲ್ಲವೇ ನಮ್ಮೆಲ್ಲರಿಗೂ ಇಂತಹ ಮಹಾ ವ್ಯಸನವೂ, ಭಯಂಕರವಾದ ಕೊಲೆಯೂ ಪ್ರಾಪ್ತವಾಯಿತು. ಕಾಲಯಮನ ಕೈಗೆ ಸಿಕ್ಕಿಬಿದ್ದ ಪ್ರಜೆಗಳಂತೆ, ಈಗ ರಾಮನ ಕೈ ಕೊಲೆಗೆ ಪಾತ್ರರಾದ ನಮಗೆ ಅಭಯವನ್ನು ಕೊಟ್ಟು ರಕ್ಷಿಸಬೇಕೆಂದರೆ, ಮೂರು ಲೋಕದಲ್ಲಿಯೂ ಯಾವನಿಂದಲೂ ಸಾಧ್ಯವಲ್ಲ. ಕಾಡಿನಲ್ಲಿ ಕಾಡುಗಿಚ್ಚಿನ

ಜ್ವಾಲೆಯ ನಡುವೆ ಸಿಕ್ಕಿಬಿದ್ದ ಹೆಣ್ಣಾನೆಗಳಂತೆ, ಮಹಾವಿಪತ್ತಿಗೆ ಸಿಕ್ಕಿಬಿದ್ದ ನಮ್ಮನ್ನು ಈ ವಿಪತ್ತಿನಿಂದ ತಪ್ಪಿಸುವವನೊಬ್ಬನೂ ಇಲ್ಲ. ಆಹಾ ! ಪುಲಸ್ತ್ಯ ಕುಲತಿಲಕನಾದ ಮಹಾತ್ಮನಾದ ವಿಭೀಷಣನು, ಮುಂದೆತನಗೆ ಯಾರಿಂದ ಭಯ ವುಂಟಾಗಬಹುದೆಂದು ತೋರಿತೋ, ಅವನಲ್ಲಿಯೇ ಮರೆಬಿದ್ದು ಬಹಳ ಮೇಲಾದ ಕಾರ್ಯವನ್ನು ಮಾಡಿದನು" ಎಂದು ಪಶ್ಚಾತ್ತಾಪಗೊಂಡು ವಿಲಪಿಸುತ್ತಿದ್ದರು. ಹೀಗೆ [1]ರಾಕ್ಷಸರ ಸ್ತ್ರೀಯರೆಲ್ಲರೂ ಒಬ್ಬರ ಮೇಲೊಬ್ಬರು ಕೈಹಾಕಿಕೊಂಡು ಭಯಪೀಡಿತರಾಗಿ ಬಹುದೈನ್ಯದಿಂದ ಕೊರಗುತ್ತ ಅತ್ಯಂತದಾರುಣ ಧ್ವನಿ ಯಿಂದ ಕೂಗಿ ಗೋಳಿಡುತ್ತಿದ್ದರು.

ಇಲ್ಲಿಗೆ ತೊಂಬತ್ತೈದನೆಯ ಸರ್ಗವು.

ರಾವಣನು ಮಹೋದರ ಮಹಾಪಾರ್ಶ್ವ ವಿರೂಪಾಕ್ಷರೆಂಬ
ಮೂವರು ಮಂತ್ರಿಗಳೊಡಗೂಡಿ ಲಂಕೆಯ ಉತ್ತರ
ದ್ವಾರದಿಂದ ಯುದ್ಧಕ್ಕೆ ಹೊರಟುದು. ರಾವಣನಿಗೆ
ದಾರಿಯಲ್ಲಿ ದುರ್ನಿಮಿತ್ತಗಳು ಕಂಡುಬಂದುದು.
ರಾವಣನು ವಾನರ ಸೇನೆಯೊಡನೆ
ಯುದ್ಧಮಾಡಿದುದು.

ಹೀಗೆ ಲಂಕೆಯ ಮನೆಮನೆಗಳಲ್ಲಿಯೂ ರಾಕ್ಷಸ ಸ್ತ್ರೀಯರು ಬಹಳ ದೈನ್ಯದಿಂದ ಕೂಗಿಡುತ್ತಿದ್ದ ದೊಡ್ಡ ರೋದನಧ್ವನಿಯು ರಾವಣನ ಕಿವಿಗೆ ಬಿದ್ದಿತು. ಆಗ ರಾವಣನು ಸಂಕಟದಿಂದ ನಿಟ್ಟುಸಿರನ್ನು ಬಿಡುತ್ತ ಮುಹೂರ್ತ ಕಾಲದವರೆಗೆ ಏನೂ ತೋರದಂತೆ ಚಿಂತಾಮಗ್ನನಾಗಿದ್ದು, ಆ ಮೇಲೆ ಮಿತಿ ಮೀರಿದ ಕೋಪಾವೇಶದಿಂದ ಕೆಂಪೇರಿದ ಕಣ್ಣುಳ್ಳವನಾಗಿ, ಹಲ್ಲುಗಳಿಂದ

---

[1] ಇಲ್ಲಿ ರಾಕ್ಷಸವಿನಾಶಕ್ಕಾಗಿ ಬ್ರಹ್ಮರುದ್ರಾದಿಗಳು ವರವನ್ನು ಕೊಟ್ಟ ವೃತ್ತಾಂತವು ಮಂಡೋದರಿಗೆ ಜ್ಞಾನವೃದ್ಧರಮೂಲಕವಾಗಿ ತಿಳಿದು, ಅವಳಿಂದ ರಾಕ್ಷಸಸ್ತ್ರೀಯರಿಗೂ ತಿಳಿದಿತ್ತೆಂದು ತಿಳಿಯಬೇಕು.

ತುಟಿಯನ್ನು ಕಚ್ಚುತ್ತ, ತನ್ನ ಮುಂದಿದ್ದ ರಾಕ್ಷಸರಿಗೂ ನೋಡಲ ಸಾಧ್ಯವಾಗುವಂತೆ ಭಯಂಕರ ಸ್ವರೂಪವನ್ನು ತಾಳಿ, ಕೆದರಿದ ಕಾಲಾಗ್ನಿ ಯಂತೆ ತೋರುತ್ತಿದ್ದನು. ಆಗ ಪ್ರಭುವಾದ ಆ ರಾವಣನಿಗೆ ಮನಸ್ಸಿ ನಲ್ಲಿರುವ ಭಯದಿಂದ ಮಾತುಗಳು ತಡಬಡಿಸುತ್ತಿದ್ದರೂ, ಹೊರಗೆ ಮಾತ್ರ ಕೋಪಾವೇಶವನ್ನು ತೋರಿಸುತ್ತ, ತನ್ನ ದೃಷ್ಟಿಯಿಂದಲೇ ದಹಿಸುವಂತೆ ತನ್ನ ಮುಂದಿದ್ದ ಮಹೋದರ ಮಹಾಪಾರ್ಶ್ವ ವಿರೂಪಾಕ್ಷರೆಂಬ ಮೂರು ಮಂದಿ ಮಂತ್ರಿಗಳನ್ನೂ ನೋಡಿ, "ಎಲೈ ಅಮಾತ್ಯರೆ! ಈಗಲೇ ನೀವು ನಮ್ಮ ಸೈನ್ಯಗಳಿಗೆ ಯುದ್ಧಕ್ಕಾಗಿ ಹೊರಡುವಂತೆ ನನ್ನಾಜ್ಞೆಯಿಂದ ತಿಳಿಸಬೇಕು" ಎಂದನು. ಇದನ್ನು ಕೇಳಿ ಆ ರಾಕ್ಷಸರೆಲ್ಲರೂ ಭಯಪೀಡಿತ ರಾಗಿ ರಾಜಾಜ್ಞೆಯಂತೆ ರಾಕ್ಷಸ ಸೈನ್ಯಗಳನ್ನು ಯುದ್ಧಕ್ಕಾಗಿ ಪ್ರೇರಿಸಿ ದರು. ಭಯಂಕರಾಕಾರವುಳ್ಳ ರಾಕ್ಷಸರೆಲ್ಲರೂ ಈ ರಾಜಾಜ್ಞೆಯನ್ನು ಕೇಳಿ "ಹಾಗೆಯೇ ಆಗಲಿ" ಎಂದು ಹೇಳಿ, ಮಂಗಳಾಶೀರ್ವಾದಗಳನ್ನು ಪಡೆದು ಯುದ್ಧಾಭಿಮುಖರಾಗಿ ಹೊರಟರು. ಆ ರಾಕ್ಷಸರೆಲ್ಲರೂ ತಮ್ಮ ತಮ್ಮ ಪದವಿಗೆ ತಕ್ಕಂತೆ ಪ್ರಭುವಾದ ರಾವಣನನ್ನು ನಮಸ್ಕಾರಾದಿಗಳಿಂದ ಗೌರವಿಸಿ, ಆತನಿಗೆ ಜಯವನ್ನು ಕೋರುತ್ತ ಬದ್ಧಾಂಜಲಿಗಳಾಗಿ ಅವನ ಮುಂದೆ ನಿಂತರು. ಆಗ ರಾವಣನು ಅತ್ಯಂತ ಕೋಪಾವೇಶದಿಂದ ಜ್ವಲಿ ಸುತ್ತ, ಶತ್ರುಗಳಲ್ಲಿ ಕೇವಲ ತಿರಸ್ಕಾರಭಾವವನ್ನು ತೋರಿಸುವಂತೆ ಮುಗು ಳ್ನಗೆ ನಕ್ಕು, ತನ್ನ ಮುಂದಿದ್ದ ಮೂರು ಮಂದಿ ಪ್ರಧಾನ ಮಂತ್ರಿಗಳನ್ನು ನೋಡಿ, "ಎಲೈ ಸಚಿವೋತ್ತಮರೆ! ಈಗ ನಾನು ನನ್ನ ಬಿಲ್ಲಿನಿಂದ ಪ್ರಳಯ ಕಾಲದ ಸೂರ್ಯನಂತೆ ಅತಿ ತೀಕ್ಷ್ಣಗಳಾದ ಬಾಣಗಳನ್ನು ಪ್ರಯೋಗಿಸಿ ಆ ರಾಮಲಕ್ಷ್ಮಣರಿಬ್ಬರನ್ನೂ ಯಮಪುರಿಗೆ ಕಳುಹಿಸದೆ ಬಿಡುವವನಲ್ಲ! ಈಗಿನ ಯುದ್ಧದಲ್ಲಿಯೇ ನಾನು ಆ ನನ್ನ ಸಮಸ್ತ ಶತ್ರುಗಳನ್ನೂ ವಧಿಸಿ ಇದಕ್ಕೆ ಮೊದಲು ಅವರು ಖರನನ್ನೂ, ಕುಂಭಕರ್ಣನನ್ನೂ, ಪ್ರಹಸ ನನ್ನೂ, ಇಂದ್ರಜಿತ್ತನ್ನೂ ಕೊಂದುದಕ್ಕೆ ತಕ್ಕ ಪ್ರತೀಕಾರವನ್ನು ಮಾಡಿ ತೋರಿಸುವೆನು. ಇನ್ನು ಕ್ಷಣಕಾಲದಲ್ಲಿಯೇ ಅಂತರಿಕ್ಷವಾಗಲಿ, ನದಿಗಳಾ ಗಲಿ, ಸಮುದ್ರಗಳಾಗಲಿ, ಯಾವುದೊಂದೂ ಕಣ್ಣಿಗೆ ಕಾಣದಂತೆ ನನ್ನ ಬಾಣ ಸಮೂಹಗಳೆಂಬ ಮೇಘಗಳಿಂದ ಲೋಕವೆಲ್ಲವನ್ನೂ ಮರೆಸಿ ಕತ್ತಲೆ ಕವಿದಂತೆ ಮಾಡುವೆನು. ಈಗ ನಾನು ನನ್ನ ಮಹಾಧನುಸ್ಸಿನಿಂದ

ಗರಿಗಟ್ಟಿದ ಬಾಣಗಳನ್ನು ಪರಂಪರೆಯಾಗಿ ವರ್ಷಿಸಿ ಆ ವಾನರ ಸೈನ್ಯವನ್ನು ಗುಂಪುಗುಂಪಾಗಿ ಧ್ವಂಸಮಾಡಿ ಬರುವೆನು! ಈಗ, ಈ ನನ್ನ ಧನುಸ್ಸೆಂಬ ಸಮುದ್ರದಲ್ಲಿ, ರಥವೇಗವೆಂಬ ವಾಯುವೇಗದಿಂದ ಪ್ರೇರಿತಗಳಾಗಿ ಹೊರಟುಬರುವ ಬಾಣ ಪರಂಪರೆಗಳೆಂಬ ತರಂಗತತಿಗಳಲ್ಲಿ, ಆ ವಾನರ ಸೈನ್ಯವೆಲ್ಲವನ್ನೂ ಕ್ಷಣಮಾತ್ರದಲ್ಲಿ ಕೊಚ್ಚಿಸಿ ಬಿಡುವೆನು! ಈಗಲೇ ನಾನು ಕಮಲದ ಕುಸುರಿಯಂತೆ ಮೈ ಬಣ್ಣವುಳ್ಳ ಮತ್ತು ಅರ್ಧವಿಕಸಿತವಾದ ತಾವರೆ ಹೂವಿನಂತೆ ಮುಖವುಳ್ಳ ಆ ವಾನರ ಸೈನ್ಯವೆಂಬ ಕೆರೆಯನ್ನು ಪ್ರವೇಶಿಸಿ ಕಾಡಾನೆಯಂತೆ ಕಲಕಿ ಬರುವೆನು. ಈ ಮುಂದಿನ ಯುದ್ಧದಲ್ಲಿ ವಾನರ ಯೂಥಪರು ನನ್ನ ಬಾಣಗಳಿಂದ ನಾಟಿದ ಮುಖವುಳ್ಳವರಾಗಿ ಕಾವಿನಿಂದ ಕೂಡಿದ ಕಮಲದಂತೆ ಕಾಣುವರು. ಯುದ್ಧದಲ್ಲಿ ಅತಿ ಪ್ರಚಂಡರಾಗಿ ವೃಕ್ಷಗಳನ್ನು ಆಯುಧವಾಗಿ ಹಿಡಿದು ಹೋರಾಡತಕ್ಕ ಮಹಾವೀರ ವಾನರರನ್ನೂ ಕೂಡ ಈಗ ನಾನು ನನ್ನ ಒಂದೊಂದು ಬಾಣಕ್ಕೆ ನೂರು ನೂರು ಮಂದಿಯಂತೆ ಕೊಂದು ಕೆಡಹುವೆನು. ಹಿಂದಿನ ಯುದ್ಧದಲ್ಲಿ ನಮ್ಮ ಲಂಕಾ ನಿವಾಸಿಗಳಾದ ಯಾವ ಯಾವ ರಾಕ್ಷಸ ಸ್ತ್ರೀಯರು ಗಂಡಂದಿರನ್ನೂ ಸಹೋದರರನ್ನೂ ಮಕ್ಕಳನ್ನೂ ಕಳೆದುಕೊಂಡು ದುಃಖಿಸುತ್ತಿರುವರೋ, ಆ ರಾಕ್ಷಸ ಸ್ತ್ರೀಯರೆಲ್ಲರಿಗೂ ಈಗ ನಾನು ಶತ್ರುವಧದಿಂದ ಕಣ್ಣೀರನ್ನೊರಸುವೆನು. ಈಗಿನ ಯುದ್ಧದಲ್ಲಿ ನನ್ನ ಬಾಣಗಳಿಂದ ವಾನರರೆಲ್ಲರನ್ನೂ ಭೇದಿಸಿ, ಅವರ ಪ್ರಾಣಗಳನ್ನು ನೀಗಿಸಿ ಅವರ ಕಳೇಬರಗಳನ್ನು ರಣರಂಗದ ಸುತ್ತಲೂ ಚಲ್ಲಾಡಿ, ಅಲ್ಲಿನ ನೆಲವನ್ನು ನೋಡುವುದೇ ಕಷ್ಟಸಾಧ್ಯವಾಗುವಂತೆ ಮಾಡುವೆನು. ಈಗಿನ ಯುದ್ಧದಲ್ಲಿಯೇ ನಾನು ನರಿ, ಹದ್ದು, ಮುಂತಾದ ಮಾಂಸಾಹಾರಿ ಜಂತುಗಳೆಲ್ಲಕ್ಕೂ ನನ್ನ ಬಾಣಗಳಿಂದ ಶತ್ರು ಮಾಂಸವನ್ನೊದಗಿಸಿ ತೃಪ್ತಿ ಪಡಿಸುವೆನು. ಎಲೈ ರಾಕ್ಷಸರೆ! ಶೀಘ್ರದಲ್ಲಿ ನನ್ನ ರಥವನ್ನಲಂಕರಿಸಿರಿ! ಈಗಲೇ ನನ್ನ ಬಿಲ್ಲನ್ನು ತಂದುಕೊಡಿರಿ! ಈಗ ಸತ್ತುಳಿದಿರುವ ರಾಕ್ಷಸರಲ್ಲಿ ಒಬ್ಬರಾದರೂ ನಿಲ್ಲದೆ ಎಲ್ಲರೂ ನನ್ನನ್ನು ಹಿಂಬಾಲಿಸಿ ಬರಬೇಕು" ಎಂದನು. ರಾವಣನು ಹೇಳಿದ ಈ ಮಾತನ್ನು ಕೇಳಿ ಮಹಾಪಾರ್ಶ್ವನೆಂಬ ಮಂತ್ರಿಯು, ಅಲ್ಲಿದ್ದ ಸೇನಾಧ್ಯಕ್ಷರನ್ನು ನೋಡಿ "ರಾಜಾಜ್ಞೆಯಂತೆ ಈಗಲೇ ಸೈನ್ಯವು ಸಿದ್ಧವಾಗಲಿ" ಎಂದು ಆಜ್ಞಾಪಿಸಿದನು. ಒಡನೆಯೇ ಬಲಾಢ್ಯರಾದ ಸೇನಾಪತಿಗಳೆಲ್ಲರೂ ಲಂಕಾ

ಪುರಿಯಲ್ಲಿ ಮನೆಮನೆಗೆ ಹೋಗಿ ಕರೆದರೂ ಆ ರಾಕ್ಷಸರು ಭಯದಿಂದ ಹಿಂಜರಿದು ಬೇಗನೆ ಬಾರದಿದ್ದುದನ್ನು ನೋಡಿ ಆ ಸೇನಾಧ್ಯಕ್ಷರೆಲ್ಲರೂ ಪ್ರಚಂಡ ಕೋಪಾವೇಶವನ್ನು ಹೊಂದಿ, ಬೀದಿ ಬೀದಿಗಳಲ್ಲಿ ಆರ್ಭಟಿಸಿ ಕೂಗುತ್ತ ಬಂದರು- ಆ ಮೇಲೆ ಮುಹೂರ್ತ ಮಾತ್ರದಲ್ಲಿಯೇ ಭಯಂಕರ ಮುಖವುಳ್ಳ ಅನೇಕ ರಾಕ್ಷಸರು ಸಿಂಹನಾದಗಳನ್ನು ಮಾಡುತ್ತಾ, ತಮ್ಮ ತಮ್ಮ ಕೈಗೆ ಸಿಕ್ಕಿದಂತೆ ಕತ್ತಿಗಳನ್ನೂ, ಪಟ್ಟಸಗಳನ್ನೂ, ಶೂಲಗಳನ್ನೂ, ಗದೆಗಳನ್ನೂ, ತೀಕ್ಷ್ಣಧಾರೆಗಳುಳ್ಳ ಶಕ್ತ್ಯಾಯುಧಗಳನ್ನೂ, ದೊಡ್ಡ ದೊಡ್ಡ ಕೂಟ ಮುದ್ಗರಗಳನ್ನೂ, ದಂಡಗಳನ್ನೂ, ಶುದ್ಧವಾಗಿ ಸಾಣೆಯಿಕ್ಕಿದ ಚಕ್ರಗಳನ್ನೂ, ಗಂಡುಗೊಡಲಿಗಳನ್ನೂ, ಭಿಂಡಿವಾಲಗಳನ್ನೂ, ಶತಘ್ನಿಗಳೆಂಬ ನೂರೇಣಿನ ಆಯುಧಗಳನ್ನೂ, ಇನ್ನೂ ಬಗೆಬಗೆಯ ಉತ್ತಮಾಯುಧಗಳನ್ನೂ ಹಿಡಿದು, ನೋಡುವವರಿಗೆ ಭಯವನ್ನು ಹುಟ್ಟಿಸುವಂತೆ ವೇಗದಿಂದ ಬಂದರು. ಇಷ್ಟರಲ್ಲಿ ರಾವಣಾಜ್ಞೆಯಂತೆ ಸೇನಾಧ್ಯಕ್ಷನು, ಎಂಟು ಕುದುರೆಗಳಿಂದಲೂ, ಸಮರ್ಥನಾದ ಸಾರಥಿಯಿಂದಲೂ ಕೂಡಿದ ಒಂದು ಯುದ್ಧರಥವನ್ನು ತರಿಸಿ ಬಿಟ್ಟನು. ಒಡನೆಯೇ ಭಯಂಕರ ಸ್ವರೂಪವುಳ್ಳ ರಾವಣನೂ, ತನ್ನ ತೇಜಸ್ಸಿನಿಂದ ರಥವನ್ನು ಬೆಳಗುತ್ತ, ಆ ರಥವನ್ನೇರಿ, ಅನೇಕ ರಾಕ್ಷಸರಿಂದ ಪರಿವೃತನಾಗಿ, ತನ್ನ ದೇಹಬಲದಿಂದಲೇ ಭೂಮಿಯನ್ನು ಭೇದಿಸುವಂತೆ ವೇಗದಿಂದ ಹೊರಟನು. ಆ ಮೇಲೆ ಮಹಾಪಾರ್ಶ್ವ, ಮಹೋದರ, ವಿರೂಪಾಕ್ಷರೆಂಬ ಮೂರು ಮಂದಿ ರಾಕ್ಷಸ ಪ್ರಧಾನರೂ ಕೂಡ, ರಾವಣನ ಅನುಮತಿಯನ್ನು ಪಡೆದು, ತಮ್ಮ ತಮ್ಮ ರಥಗಳನ್ನೇರಿದರು. ಈ ರಾಕ್ಷಸರೆಲ್ಲರೂ ಬಹಳವಾದ ಯುದ್ಧೋತ್ಸಾಹದಿಂದ ಭೂಮಿಯನ್ನು ಭೇದಿಸುವಂತೆ ಭಯಂಕರವಾದ ಸಿಂಹನಾದಧ್ವನಿಯನ್ನು ತೋರಿಸುತ್ತಾ ಶತ್ರುಜಯಾಕಾಂಕ್ಷಿಗಳಾಗಿ ಹೊರಟರು. ಹೀಗೆ ಅನೇಕ ರಾಕ್ಷಸಸೈನ್ಯದಿಂದ ಪರಿವೃತನಾಗಿ ಕೈಯಲ್ಲಿ ಮಹಾಧನುಸ್ಸನ್ನು ಹಿಡಿದು, ಅದ್ಭುತ ತೇಜಸ್ಸಿನಿಂದ ಬೆಳಗುತ್ತಿದ್ದ ಆ ರಾವಣನು ಪ್ರಳಯ ಕಾಲದಲ್ಲಿ ಪ್ರಜಾನಾಶಕ್ಕಾಗಿ ಹೊರಟು ಬರುವ ಯಮನಂತೆ ಮುಂದೆ ಸಾಗಿಬಂದನು. ಮಹಾರಥನಾದ ಆ ರಾವಣನು ವೇಗಶಾಲಿಗಳಾದ ಕುದುರೆಗಳಮೇಲೆ ಹೂಡಿದ ರಥವನ್ನೇರಿ ಲಂಕೆಯ ಉತ್ತರ ದ್ವಾರದಿಂದ ಹೊರಟು ರಾಮಲಕ್ಷ್ಮಣರಿದ್ದ ಸ್ಥಳಕ್ಕೆ

ಬಂದನು. ಈ ರಾವಣನು ಯುದ್ಧೋದ್ಯುಕ್ತನಾಗಿ ಹೊರಟ ಕೂಡಲೇ ಸೂರ್ಯನ ಕಾಂತಿಯೂ ಕುಂದಿತು. ದಿಕ್ಕುಗಳೆಲ್ಲವೂ ಅಂಧಕಾರದಿಂದ ಮರೆಸಿದುವು. ಪಕ್ಷಿಗಳು ಭಯಂಕರ ಧ್ವನಿಯಿಂದ ಕೂಗತೊಡಗಿದುವು. ಭೂಮಿಯೂ ನಡುಗಿದಂತಾಯಿತು. ಪರ್ಜನ್ಯನು ರಕ್ತವರ್ಷಗಳನ್ನು ಕರೆದನು. ಕುದುರೆಗಳು ದಾರಿಯಲ್ಲಿ ಕಾಲೆಡವಿ ಮುಗ್ಗರಿಸುತ್ತಿದ್ದುವು. ರಾವಣನ ಧ್ವಜಾಗ್ರದಲ್ಲಿ ಹದ್ದುಗಳು ಬಂದೆರಗಿದುವು. ಅಲ್ಲಲ್ಲಿ ನರಿಗಳು ಅಮಂಗಳ ಧ್ವನಿಯಿಂದ ಊಳಿಡುತ್ತಿದ್ದುವು. ರಾವಣನ ಎಡಗಣ್ಣು ಅದಿರಿತು. ಅವನ ಎಡದ ತೋಳು ನಡುಗಿತು. ಅವನ ಮುಖವು ಬಣ್ಣಗೆಟ್ಟಿತು. ಅವನ ಕಂಠಸ್ವರವು ಕುಗ್ಗಿತು. ಆ ಉತ್ತರ ದ್ವಾರದಿಂದ ರಾವಣನು ಯುದ್ಧೋದ್ಯುಕ್ತನಾಗಿ ಹೊರಟಾಗಲೇ ಯುದ್ಧದಲ್ಲಿ ಅತನಿಗೆ ಮರಣ ಸೂಚಕಗಳಾದ ಈ ದುರ್ನಿಮಿತ್ತಗಳೆಲ್ಲವೂ ಕಾಣಿಸಿದುವು. ಸಿಡಿಲು ಬಡಿದಂತೆ ಮಹಾಧ್ವನಿಯೊಡನೆ ಆಕಾಶದಿಂದ ಕೊಳ್ಳಿಗಳುದಿರಿದುವು. ಅಲ್ಲಲ್ಲಿ ಹದ್ದುಗಳು ಅಮಂಗಳ ಧ್ವನಿಯಿಂದ ಕೂಗಿಡುತ್ತಿರುವಾಗ ಆ ಧ್ವನಿಯನ್ನನುಸರಿಸಿ, ಅಲ್ಲಲ್ಲಿ ಕಾಗೆಗಳೂ ಗುಂಪುಗುಂಪಾಗಿ ಸೇರಿ ದೀನಸ್ವರದಿಂದ ಅರಚುತ್ತಿದ್ದುವು. ಹೀಗಿದ್ದರೂ ರಾವಣನು ಭಯಂಕರಗಳಾದ ಈ ದುರ್ನಿಮಿತ್ತಗಳನ್ನೂ ಲಕ್ಷ್ಯಮಾಡದೆ, ಮೃತ್ಯುಪ್ರೇರಿತನಾದುದರಿಂದ ಅಜ್ಞಾನವಶನಾಗಿ, ರಾಮನ ಕೈಯಿಂದ ವಧವನ್ನು ಹೊಂದುವುದಕ್ಕಾಗಿ ರಣರಂಗಕ್ಕೆ ಹೊರಟನು. ಮಹಾಬಲಾಢ್ಯರಾದ ಆ ರಾಕ್ಷಸರೆಲ್ಲರೂ ಹೊರಟು ಬರುವಾಗ, ಇವರ ರಥಧ್ವನಿಯನ್ನು ಕೇಳಿದೊಡನೆ, ಇತ್ತಲಾಗಿ ವಾನರ ಸೇನೆಯೆಲ್ಲವೂ ಯುದ್ಧಸನ್ನದ್ಧವಾಗಿ ನಿಂತಿತು. ನಿಮಿಷ ಮಾತ್ರದಲ್ಲಿಯೇ ವಾನರ ರಾಕ್ಷಸರಿಬ್ಬರೂ ಒಂದಾಗಿ ಸೇರಿ ಜಯಿಸಬೇಕೆಂಬ ಹಟದಿಂದ ಒಬ್ಬರನ್ನೊಬ್ಬರು ಕೂಗಿಕರೆಯುತ್ತಾ ತುಮುಲಯುದ್ಧವನ್ನಾರಂಭಿಸಿದರು. ರಾಕ್ಷಸ ರಾಜನಾದ ರಾವಣನೂ ಕೂಡ ಕೋಪೋದ್ರಿಕ್ತನಾಗಿ, ವಾನರ ಸೇನೆಯನ್ನು ಪ್ರವೇಶಿಸಿ ಸುವರ್ಣಾಲಂಕೃತವಾದ ತನ್ನ ಬಾಣವನ್ನು ಪ್ರಯೋಗಿಸಿ ದೊಡ್ಡ ಯುದ್ಧವನ್ನು ನಡೆಸಿದನು. ಕ್ಷಣಮಾತ್ರದಲ್ಲಿಯೇ ಆ ರಾವಣನು ತನ್ನ ಬಾಣಗಳಿಂದ ಕೆಲವು ವಾನರರ ತಲೆಯನ್ನು ಖಂಡಿಸಿದನು. ಕೆಲವರ ಎದೆಯನ್ನು ಸೀಳಿದನು. ಕೆಲವರ ಕಿವಿಗಳನ್ನು ಕತ್ತರಿಸಿದನು. ಕೆಲವು ವಾನರರು ರಾವಣನ ಬಾಣಪ್ರಹಾರಗಳಲ್ಲಿ ಸಿಕ್ಕಿ ಉಸಿರಾಡುವುದಕ್ಕೂ ಅವಕಾಶವಿಲ್ಲದೆ ಸತ್ತು ಕೆಳಗೆ ಬಿದ್ದರು. ಮತ್ತು ರಾವ

ಣನ ಬಾಣಪ್ರಹಾರದಿಂದ ಆ ವಾನರರಲ್ಲಿ ಅಳ್ಳೆಮುರಿದವರೂ, ತಲೆಕಡಿದವರೂ, ಕಣ್ಣುಕಳಚೆದವರೂ, ರಣರಂಗದಸುತ್ತಲೂ ತಂಡತಂಡವಾಗಿ ಬಿದ್ದಿದ್ದರು. ರಾವಣನು ರಥದಮೇಲೆಕುಳಿತು ಕೋಪದಿಂದ ಕಣ್ಣಾಲಿಗಳನ್ನು ತಿರುಗಿಸುತ್ತ ಯುದ್ಧ ಭೂಮಿಯಯಾವಯಾವ ಕಡೆಗೆ ಹೋಗುತ್ತಿದ್ದನೋ, ಅಲ್ಲಲ್ಲಿದ್ದ ವಾನರರೆಲ್ಲರೂ ಅವನ ಬಾಣವೇಗವನ್ನು ತಡೆದು ನಿಲ್ಲಲಾರದೆ ಭಯದಿಂದ ದಿಕ್ಕುದಿಕ್ಕಿಗೆ ಪಲಾಯನಮಾಡುತ್ತಿದ್ದರು.

ಇಲ್ಲಿಗೆ ತೊಂಬತ್ತಾರನೆಯ ಸರ್ಗವು.

ಸುಗ್ರೀವನು ವಿರೂಪಾಕ್ಷನನ್ನು ಕೊಂದುದು.

ಹೀಗೆ ಯುದ್ಧಭೂಮಿಯೆಲ್ಲವೂ ರಾವಣನ ಬಾಣದಿಂದ ಭಿನ್ನವಾಗಿ ಬಿದ್ದ ವಾನರರ ಮೃತದೇಹಗಳಿಂದಲೇ ದಟ್ಟವಾಗಿ ತುಂಬಿಹೋಯಿತು. ಉರಿಯುವ ಬೆಂಕಿಯನ್ನು ಪತಂಗಗಳು ಹೇಗೋ ಹಾಗೆ ವಾನರರು ರಾವಣನ ಬಾಣಪ್ರಹಾರ ವೇಗವನ್ನು ಸಹಿಸಲಾರದೆ ಹೋದರು. ಆ ವಾನರರು ರಾವಣನ ಬಾಣಹತಿಯನ್ನು ತಡೆಯಲಾರದೆ, ಕಾಡುಗಿಚ್ಚಿನ ಜ್ವಾಲೆಯ ನಡುವೆ ಸಿಕ್ಕಿಬಿದ್ದ ಕಾಡಾನೆಗಳಂತೆ ಕೂಗಿಡುತ್ತ, ನಾನಾದಿಕ್ಕುಗಳಿಗೆ ಓಡುತ್ತಿದ್ದರು. ವಾಯುವು ಮಹಾಮೇಘಗಳನ್ನು ಚದರಿಸುವಂತೆ ಆ ಯುದ್ಧದಲ್ಲಿ ರಾವಣನು ವಾನರಸೇನೆಯನ್ನು ತನ್ನ ಬಾಣಗಳಿಂದ ನಾನಾಕಡೆಗಳಿಗೆ ಚದರಿಸುತ್ತಿದ್ದನು. ಹೀಗೆ ರಾವಣನು ವಾನರಸೈನ್ಯದೊಡನೆ ಅತಿ ಪ್ರಬಲವಾದ ಯುದ್ಧವನ್ನು ನಡೆಸಿ ಆ ವಾನರ ಸೈನ್ಯವನ್ನು ಚದರಿಸಿದಮೇಲೆ, ಮಹಾ ವೇಗದಿಂದ ರಾಮನಿದ್ದಕಡೆಗೆ ಬಂದು, ಅವನೊಡನೆ ಯುದ್ಧಕ್ಕೆ ನಿಂತನು. ಇಷ್ಟರಲ್ಲಿ ಸುಗ್ರೀವನು, ಅಲ್ಲಲ್ಲಿ ವಾನರಸೈನ್ಯವು ರಾವಣನ ಬಾಣಪ್ರಹಾರದಿಂದ ಭಂಗಹೊಂದಿ ಪಲಾಯಮಾಡುತ್ತಿರುವುದನ್ನು ಕಂಡು, ಸೇನಾರಕ್ಷಣೆಗಾಗಿ ಸುಷೇಣನನ್ನು ನಿಯಮಿಸಿ, ರಾವಣಸೈನ್ಯದೊಡನೆ ಮಹಾದ್ಭುತವಾದ ಯುದ್ಧವನ್ನು ಮಾಡಬೇಕೆಂದು ನಿಶ್ಚಯಿಸಿ ಹೊರಟನು.

ವೀರನಾದ ಆ ಸುಗ್ರೀವನು ಬಲಪರಾಕ್ರಮಗಳಲ್ಲಿ ತನಗೆಣೆಯಾದ ಸುಷೇಣ ನನ್ನು ಸೇನಾರಕ್ಷಣೆಗಾಗಿ ನಿಯಮಿಸಿದಮೇಲೆ, ದೊಡ್ಡ ವೃಕ್ಷವನ್ನೆತ್ತಿ ಕೊಂಡು, ಶತ್ರುವಿಗೆ ಎದುರಾಗಿ ಹೋದನು. ಸುಗ್ರೀವನು ಯುದ್ಧೋ ದ್ಯುಕ್ತನಾಗಿ ಹೊರಟುದನ್ನು ಕಂಡು ಅಲ್ಲಲ್ಲಿದ್ದ ದೊಡ್ಡ ದೊಡ್ಡ ವಾನರ ಯೂಥಪತಿಗಳೆಲ್ಲರೂ ಆ ಸುಗ್ರೀವನಿಗೆ ಆಗಾಗ ಯುದ್ಧೋಪಕರಣಗಳನ್ನು ತಂದೊದಗಿಸಿಕೊಡುವುದಕ್ಕಾಗಿ ದೊಡ್ಡ ಪರ್ವತಗಳನ್ನೂ, ದೊಡ್ಡ ದೊಡ್ಡ ವೃಕ್ಷಗಳನ್ನೂ ಕಿತ್ತುತಂದು, ಅವನನ್ನು ಸುತ್ತಿಮುತ್ತಿ ಹಿಂಬಾಲಿಸಿ ಬರುತ್ತಿ ದ್ದರು. ಸುಗ್ರೀವನು ಮಹಾಧ್ವನಿಯಿಂದ ಗರ್ಜಿಸುತ್ತ ಮುಂದೆಸಾಗಿ, ದಾರಿ ಯಲ್ಲಿ ತನಗಿದಿರಾದ ಅನೇಕ ರಾಕ್ಷಸರನ್ನು ಕೊಂದು ಕೆಡಹಿ ಬೇರೆ ಕೆಲವು ರಾಕ್ಷಸಪ್ರಧಾನರನ್ನಿದಿರಿಸಿ ನಿಂತನು. ಮಹಾಕಾಯವುಳ್ಳ ಆ ಸುಗ್ರೀವನು, ಪ್ರಳಯಕಾಲದ ಗಾಳಿಯು ಮಹಾವೃಕ್ಷಗಳನ್ನು ಮುರಿದು ಕೆಡಹುವಂತೆ ತನ್ನ ವೇಗದಿಂದ ಅನೇಕ ರಾಕ್ಷಸಪ್ರಧಾನರನ್ನು ಕೊಂದು ಕೆಡಹಿದನು. ಮೇಘವು ಕಾಡಿನಲ್ಲಿ ಪಕ್ಷಿ ಸಮೂಹಗಳಮೇಲೆ ಕಲ್ಮಳೆಯನ್ನು ಕರೆವಂತೆ, ಸುಗ್ರೀವನು ರಾಕ್ಷಸಸೇನೆಯಮೇಲೆ ಎಡೆಬಿಡದೆ ಪರ್ವತವರ್ಷವನ್ನು ಕರೆ ಯುತ್ತ ಬಂದನು. ಸುಗ್ರೀವಪ್ರಯುಕ್ತವಾದ ಈ ಪರ್ವತವರ್ಷದಿಂದ ಅನೇಕ ರಾಕ್ಷಸರ ತಲೆಗಳು ಭಿನ್ನಭಿನ್ನಗಳಾಗಿ, ಇಂದ್ರನ ವಜ್ರಪ್ರಹಾರದಿಂದ ಭೇದಿ ಸಲ್ಪಟ್ಟ ಪರ್ವತಗಳಂತೆ ತುಮುರುತುಮುರಾಗಿ ಕೆಳಗೆ ಬಿದ್ದುವು. ಹೀಗೆ ಸುಗ್ರೀವನಿಂದ ಅನೇಕ ರಾಕ್ಷಸರು ಭಂಗಹೊಂದಿ ಭಯದಿಂದ ಕೂಗುತ್ತ ಬದುಕಿದುದೇ ಸಾಕೆಂದು ನಾನಾದಿಕ್ಕುಗಳಿಗೆ ಬಿದ್ದೋಡುತ್ತಿರುವುದನ್ನು ಕಂಡು ಶತ್ರುದುರ್ಜಯನಾದ ವಿರೂಪಾಕ್ಷನು ಕೋಪಾವಿಷ್ಟನಾಗಿ ಬಿಲ್ಲನ್ನು ಹಿಡಿದು, ತನ್ನ ಹೆಸರನ್ನು ಹೇಳಿಕೊಳ್ಳುತ್ತ, ಮೊದಲು ತಾನು ಕುಳಿತಿದ್ದ ರಥದಿಂದ ಧುಮುಕಿ ಒಂದಾನೊಂದು ಮದದಾನೆಯ ಹೆಗಲಮೇಲೆ ಹಾರಿ ಕುಳಿತನು. ಹೀಗೆ ಮಹಾರಥನಾದ ಆ ವಿರೂಪಾಕ್ಷನು ಮದದಾನೆಯ ಹೆಗಲನ್ನೇರಿ ಕುಳಿತಮೇಲೆ, ಭಯಂಕರ ಧ್ವನಿಯಿಂದ ಸಿಂಹನಾದ ಮಾಡುತ್ತ ಮುಂದೆ ಬಂದು, ವಾನರಸೇನೆಯನ್ನಿದಿರಿಸಿ ನಿಂತನು. ಆ ವಿರೂಪಾಕ್ಷನು ಮುಂದೆ ಬಂದೊಡನೆ ವಾನರ ಸೈನ್ಯದ ಮುಂಭಾಗದಲ್ಲಿದ್ದ, ಸುಗ್ರೀವನ ಮೇಲೆ ಕ್ರೂರಬಾಣಗಳನ್ನು ಪ್ರಯೋಗಿಸಿ, ಭಯದಿಂದೋಡುತ್ತಿದ್ದ ಆ ರಾಕ್ಷ ಸರ ಭಯವನ್ನು ನೀಗಿಸಿ, ಅವರಿಗೆ ಪ್ರೋತ್ಸಾಹವನ್ನು ಹುಟ್ಟಿಸುತ್ತಿದ್ದನು.

ಆಗ ಕಪಿರಾಜನಾದ ಸುಗ್ರೀವನು, ವಿರೂಪಾಕ್ಷನು ತನ್ನನ್ನು ಬಾಣಗಳಿಂದ ಪೀಡಿಸಿದುದಕ್ಕಾಗಿ ಕೋಪಗೊಂಡು, ಆಗಲೇ ಅವನನ್ನು ಕೊಲ್ಲಬೇಕೆಂದು ನಿಶ್ಚಯಿಸಿ ಒಂದು ದೊಡ್ಡ ಮರವನ್ನು ಕಿತ್ತುಕೊಂಡು ಮುಂದೆ ಬಂದು ಆ ವೃಕ್ಷದಿಂದ ಆ ರಾಕ್ಷಸನು ಏರಿ ಕುಳಿತಿದ್ದ ಮಹಾಗಜದ ಮೋರೆಯ ಮೇಲೆ ಹೊಡೆದನು. ಸುಗ್ರೀವನು ವೃಕ್ಷದಿಂದ ಪ್ರಹರಿಸಿದ ವೇಗಕ್ಕೆ, ಆ ಮಹಾಗಜವು ಒಂದು ಬಿಲ್ಲಳತೆಯ ದೂರಕ್ಕೆ ಹಿಂದಕ್ಕೆಸರಿದು, ದೀನಧ್ವನಿ ಯಿಂದರಚುತ್ತ ಸತ್ತು ಬಿದ್ದಿತು. ಅಷ್ಟರಲ್ಲಿ ವೀರ್ಯಶಾಲಿಯಾದ ವಿರೂಪಾಕ್ಷನು ತಾನೇರಿದ್ದ ಮಹಾಗಜವು ಹತವಾಗಿ ಬಿದ್ದುದನ್ನು ನೋಡಿ, ಆನೆಯ ಮೇಲಿಂದ ತಟ್ಟನೆ ಕೆಳಗೆ ಹಾರಿ ನಿಂತು, ಒಂದು ಕೈಯಲ್ಲಿ ಕತ್ತಿಯನ್ನೂ ಮತ್ತೊಂದು ಕೈಯಲ್ಲಿ ಎತ್ತಿನ ಚರ್ಮದಿಂದ ಮಾಡಿದ ಗುರಾಣಿಯನ್ನೂ ಹಿಡಿದು, ಧೈರ್ಯದಿಂದ ಮುಂದೆ ನಿಂತಿದ್ದ ಆ ಸುಗ್ರೀವನನ್ನು ತನ್ನ ಗಮನ ವೇಗದಿಂದಲೇ ಹೆದರಿಸುವಂತೆ ಮುಂದೆ ನುಗ್ಗಿ ಬಂದನು. ಇದನ್ನು ನೋಡಿ ಸುಗ್ರೀವನು ಕೋಪಗೊಂಡು, ಮೇಘದಂತೆ ವಿಶಾಲವಾದ ಒಂದು ದೊಡ್ಡ ಶಿಲೆಯನ್ನು ತಂದು, ಅದನ್ನು ಆ ವಿರೂಪಾಕ್ಷನ ಮೇಲೆ ಬೀಸಿದನು. ಅದನ್ನು ಕಂಡು ವಿರೂಪಾಕ್ಷನು ಆ ಶಿಲಾಪ್ರಹಾರವನ್ನು ತಪ್ಪಿಸಿಕೊಳ್ಳುವು ದಕ್ಕಾಗಿ ಬೇರೊಂದು ಪಕ್ಕಕ್ಕೆ ಸರಿದು, ಆಮೇಲೆ ತನ್ನ ಕೈಯಲ್ಲಿದ್ದ ಖಡ್ಗ ದಿಂದ ಸುಗ್ರೀವನನ್ನು ಪ್ರಹರಿಸಿದನು ಈ ಖಡ್ಗಪ್ರಹಾರದಿಂದ ಸುಗ್ರೀ ವನು ಮುಹೂರ್ತ ಮಾತ್ರದವರೆಗೆ ಮೂರ್ಛಿತನಾದಂತೆ ಮೈಮರೆತಿದ್ದು, ಒಡನೆಯೇ ಚೇತರಿಸಿಕೊಂಡು ಮೇಲೆದ್ದು, ವೇಗದಿಂದ ದೃಢವಾದ ಮುಷ್ಟಿ ಯನ್ನು ಹಿಡಿದು ಬಂದು, ಅದರಿಂದ ವಿರೂಪಾಕ್ಷನ ಎದೆಯ ಮೇಲೆ ಹೊಡೆದನು. ಈ ಮುಷ್ಟಿಘಾತಕ್ಕೆ ವಿರೂಪಾಕ್ಷನು ಅತ್ಯಂತ ಕೋಪಾ ವೇಶವನ್ನು ಹೊಂದಿ, ವೇಗದಿಂದ ತನ್ನ ಖಡ್ಗವನ್ನು ಬೀಸಿ [1] ಸುಗ್ರೀ ವನ ಕವಚವನ್ನು ಛಿನ್ನಭಿನ್ನವಾಗಿ ಮಾಡಿದನು. ಈ ಪ್ರಹಾರದಿಂದ ಸುಗ್ರೀ ವನು ಬಹಳವಾಗಿ ನೊಂದು, ಕ್ಷಣಮಾತ್ರದವರೆಗೆ ಕಾಲುಗಳನ್ನು ಚಾಚಿ ಕೆಳಗೆಬಿದ್ದು, ಕೂಡಲೇ ಮೇಲೆದ್ದು ನಿಂತು, ವಜ್ರದಂತೆ ದೃಢವಾದ ತನ್ನ ಅಂಗೈಯನ್ನೆತ್ತಿ ಮಹಾಧ್ವನಿಯುಂಟಾಗುವಂತೆ ಆ ವಿರೂಪಾಕ್ಷನನ್ನು ಪ್ರಹ ರಿಸುವುದಕ್ಕೆ ಹೋದನು. ಸುಗ್ರೀವನು ಅಂಗೈಯನ್ನು ಮೇಲಕ್ಕೆತ್ತಿ ಪ್ರಹ

1 ಇದರಿಂದ ಸುಗ್ರೀವನಿಗೂ ಕವಚಧಾರಣವಿತ್ತೆಂದು ಸೂಚಿತವು.

ರಿಸುವುದರೊಳಗಾಗಿ, ವಿರೂಪಾಕ್ಷನು ತನ್ನ ಸಂಚಾರ ಚಾತುರ್ಯದಿಂದ
ಅದನ್ನು ತಪ್ಪಿಸಿಕೊಂಡು, ತನ್ನ ಮುಷ್ಟಿಯಿಂದ ಸುಗ್ರೀವನ ಎದೆಯಮೇಲೆ
ಹೊಡೆದನು. ಹೀಗೆ ಸುಗ್ರೀವನ ಪ್ರಹಾರವನ್ನು ವಿರೂಪಾಕ್ಷನು ಉಪಾಯ
ದಿಂದ ತಪ್ಪಿಸಿಕೊಂಡುದಲ್ಲದೆ, ಮುಷ್ಟಿಯಿಂದ ಅವನನ್ನೇ ಹೊಡೆದುದಕ್ಕಾಗಿ
ಸುಗ್ರೀವನು ಅತಿ ಕ್ರುದ್ಧನಾಗಿ ಆ ರಾಕ್ಷಸನು ಎಚ್ಚರ ತಪ್ಪುವ ಅವಕಾಶ
ವನ್ನು ನೋಡಿ, ಸ್ವಲ್ಪ ಹೊತ್ತಿನಮೇಲೆ ತನ್ನ ಅಂಗೈಯನ್ನೆತ್ತಿ ವಿರೂ
ಪಾಕ್ಷನ ಹಣೆಯಮೂಳೆಯಮೇಲೆ ಹೊಡೆದನು. ಇಂದ್ರನ ವಜ್ರಹತಿಗೆ
ಸಮಾನವಾದ ಆ ಸುಗ್ರೀವನ ತಲಪ್ರಹಾರದಿಂದ ವಿರೂಪಾಕ್ಷನ ದೇಹವು
ನಜ್ಜುಗುಜ್ಜಾಯಿತು. ಪ್ರಸ್ರವಣ ಪರ್ವತದಿಂದ ಗಿರಿನದಿಗಳು ಪ್ರವಿಸುವಂತೆ
ಆ ರಾಕ್ಷಸನು ರಕ್ತದಿಂದ ತೊಯ್ದ ಸರ್ವಾವಯವವುಳ್ಳವನಾಗಿ ಕೆಳಗೆ
ಬಿದ್ದನು. ಆಗ ಆ ವಿರೂಪಾಕ್ಷನಿಗಾದರೋ ಕೋಪದಿಂದ ತೊಳಲುವ ಕಣ್ಣು
ಗಳು! ಬಾಯಲ್ಲಿ ನೊರೆ! ಸರ್ವಾಂಗಗಳಲ್ಲಿಯೂ ರಕ್ತಧಾರೆಗಳು! ಸ್ವಭಾವ
ದಿಂದಲೇ ವಿಕೃತಗಳಾದ ಅವನ ಕಣ್ಣುಗಳಲ್ಲಿ ಕರೀಗುಡ್ಡೆಗಳು ಹೊರಕ್ಕೆ
ಕಿತ್ತು ಬಂದುದರಿಂದ, ಮತ್ತಷ್ಟು ಘೋರಾಕೃತಿ! ಹೀಗೆ ಅತಿ ವಿಕೃತಾ
ಕಾರದಿಂದ ಬಿದ್ದ ಆ ರಾಕ್ಷಸನನ್ನು ವಾನರರಾಕ್ಷಸರಿಬ್ಬರೂ ವಿಸ್ಮಯದಿಂದ
ನೋಡುತ್ತಿದ್ದರು. ಆ ರಾಕ್ಷಸನಿಗೆ ಸುಗ್ರೀವನ ತಲಪ್ರಹಾರದಿಂದುಂಟಾದ
ನೋವು ಸಹಿಸಲಸಾಧ್ಯವಾಯಿತು! ಅದರಿಂದ ಅವನೇ ಮೇಲಕ್ಕೆ ಹಾರಿಹಾರಿ
ಕೆಳಗೆ ಬೀಳುವನು! ಅತ್ತಿತ್ತ ನಾನಾ ಕಡೆಗಳಿಗೂ ಹೊರಳಾಡುವನು!
ಸರ್ವಾಂಗಗಳಿಂದಲೂ ರಕ್ತವನ್ನು ಸುರಿಸುತ್ತ ಕೇಳುವವರಿಗೆ ಕರುಣೆ ಹುಟ್ಟು
ವಂತೆ ಆರ್ತಧ್ವನಿಯಿಂದ ಅರಚುತ್ತಿರುವನು! ಹೀಗೆ ಆ ಶತ್ರುವು ಹತ
ನಾಗಿ ಬಿದ್ದುದನ್ನು ವಾನರರೆಲ್ಲರೂ ಉತ್ಸಾಹದಿಂದ ನೋಡುತ್ತಿದ್ದರು.
ಮಹಾಬಲವುಳ್ಳ ವಾನರರಾಕ್ಷಸ ಸೇನಾಸಮುದ್ರಗಳೆರಡೂ ಒಂದಕ್ಕೊಂದು
ಮೇಲೆ ಬಿದ್ದು, ಮೇರೆಯನ್ನೊಡೆದು ಬಂದ ಎರಡು ಮಹಾ ಸಮುದ್ರ
ಗಳಂತೆ ಭಯಂಕರ ಧ್ವನಿಯಿಂದ ಕೂಗಿ ಬೊಬ್ಬೆಯಿಡುತ್ತಿದ್ದುವು. ಸುಗ್ರೀವನಿಂದ
ವಿರೂಪಾಕ್ಷನು ಹತನಾದುದನ್ನು ಕಂಡು, ಕಪಿಸೈನ್ಯವು ಸಂತೋಷದಿಂದಲೂ
ರಾಕ್ಷಸಸೈನ್ಯವು ದುಃಖ ಕೋಪಗಳಿಂದಲೂ ಮೈಮರೆತು ತಡಿಯನ್ನು ಮೀರಿ
ಬಂದ ಗಂಗಾಪ್ರವಾಹದಂತೆ ಒಂದರ ಮೇಲೊಂದು ಬಿದ್ದು ಹೋರಾಡಿದುವು.

ಇಲ್ಲಿಗೆ ತೊಂಬತ್ತೇಳನೆಯ ಸರ್ಗವು.

ಮಹೋದರನು ಸುಗ್ರೀವನಿಂದ ಹತನಾದುದು.

ಆ ಮಹಾ ಯುದ್ಧದಲ್ಲಿ ವಾನರರಾಕ್ಷಸಸೈನ್ಯಗಳೆರಡೂ ಒಂದನ್ನೊಂದು ಕೊಂದು ಕೆಡಹುತ್ತ ಬರಲು, ಬೇಸಗೆಯಲ್ಲಿ ಕೆರೆಯೊಳಗಿ ಕ್ರಮಕ್ರಮವಾಗಿ ನೀರು ತಗ್ಗುವಂತೆ ಎರಡು ಸೈನ್ಯಗಳೂ ಕ್ರಮಕ್ರಮವಾಗಿ ಕ್ಷೀಣಿಸುತ್ತ ಬಂದುವು. ಆಗ ರಾಕ್ಷಸಾಧಿಪತಿಯಾದ ರಾವಣನು ತನ್ನ ರಾಕ್ಷಸ ಸೈನ್ಯವು ಹತವಾದುದನ್ನೂ, ವಿರೂಪಾಕ್ಷನ ಮರಣವನ್ನೂ ಕೇಳಿ ಮೊದಲಿಗಿಂತಲೂ ಇಮ್ಮಡಿಯಾದ ಕೋಪದಿಂದ ಜ್ವಲಿಸಿದನು. ವಾನರರ ಕೊಲೆಗೆ ಸಿಕ್ಕಿ ರಾಕ್ಷಸ ಸೈನ್ಯವು ಕ್ರಮವಾಗಿ ಕ್ಷೀಣಿಸುತ್ತ ಬಂದುದನ್ನು ನೋಡಿದ ಮೇಲೆ, ರಾವಣನಿಗೆ ಯುದ್ಧದಲ್ಲಿ ತನಗೆ ದೈವವು ಕೇವಲ ವಿಪರೀತವಾಗಿರುವುದಕ್ಕಾಗಿ ಮಹಾವ್ಯಥೆಯುಂಟಾಯಿತು. ಹೀಗೆ ವ್ಯಸನಗ್ರಸ್ತನಾದ ರಾವಣನು, ಆಗ ತನ್ನ ಸಮೀಪದಲ್ಲಿದ್ದ ಶತ್ರುಂತಪನಾದ ಮಹೋದರನೆಂಬ ಮಂತ್ರಿಯನ್ನು ನೋಡಿ, “ಎಲೈ ಮಹಾವೀರನೇ! ಎಲೆ ಮಹಾಬಾಹೂ! ಈಗ ನನಗೆ ಬಂದೊದಗಿರುವ ಇಂತಹ ಸಂಕಟ ಕಾಲದಲ್ಲಿ ನಿನ್ನೊಬ್ಬನನ್ನು ನಂಬಿಯೇ ನಾನು ಇನ್ನೂ ಶತ್ರುಜಯಾಶೆಯನ್ನಿಡಬೇಕಾಗಿದೆ ! ಆದುದರಿಂದ ಈಗಲೇ ನೀನು ಶತ್ರುಸೇನೆಯನ್ನು ಕೊಂದು ನಿನ್ನ ಪರಾಕ್ರಮವನ್ನು ತೋರಿಸಬೇಕು ! ಇದುವರೆಗೆ ನೀನು ನನ್ನೊಡೆಯನಲ್ಲಿ ಉಪ್ಪುತಿಂದ ಋಣವನ್ನು ತೀರಿಸುವುದಕ್ಕೆ ಇದೇ ತಕ್ಕ ಕಾಲವು ! ಆದುದರಿಂದ ನಿನ್ನಿಂದಾದ ಮಟ್ಟಿಗೆ ಚೆನ್ನಾಗಿ ಯುದ್ಧಮಾಡಿ ಬಾ !” ಎಂದನು. ಇದನ್ನು ಕೇಳಿ ರಾಕ್ಷಸ ಶ್ರೇಷ್ಠನಾದ ಮಹೋದರನು, “ಮಹಾಪ್ರಭೂ ! ಹಾಗೆಯೇ ಆಗಲಿ !”ಎಂದು ಹೇಳಿ, ಬೆಂಕಿಯಲ್ಲಿ ಬೀಳುವ ಪತಂಗದಂತೆ ಶತ್ರುಸೈನ್ಯದಲ್ಲಿ ಪ್ರವೇಶಿಸಿದನು. ಬಲಾಢ್ಯನಾಗಿಯೂ, ತೇಜೋವಂತನಾಗಿಯೂ ಇರುವ ಆ ಮಹೋದರನು, ರಾಜಾಜ್ಞೆಯಿಂದಲೂ, ತನ್ನ ಸಹಜ ವೀರ್ಯದಿಂದಲೂ ಪ್ರೇರಿತನಾಗಿ, ವಾನರರೊಡನೆ, ದೊಡ್ಡ ಯುದ್ಧವನ್ನಾರಂಭಿಸಿದನು. ಮಹಾಬಲವುಳ್ಳ ವಾನರರೂ ಕೂಡ, ದೊಡ್ಡ ದೊಡ್ಡ ಶಿಲೆಗಳನ್ನು ಹಿಡಿದು ಭಯಂಕರವಾದ ರಾಕ್ಷಸಸೈನ್ಯವನ್ನು ಪ್ರವೇಶಿಸಿ, ಕಂಡ ಕಂಡ ಕಡೆಯಲ್ಲಿ ಶತ್ರುಗಳನ್ನು ಕೊಲ್ಲುತ್ತ ಬಂದರು. ಇದನ್ನು ನೋಡಿ ಮಹೋದರನು ಮಹತ್ತಾದ ಕೋಪಾವೇಶವನ್ನು ಹೊಂದಿ, ಸುವರ್ಣಾಲಂಕೃತಗಳಾದ ಬಾಣಗಳನ್ನು

ಬಿಟ್ಟು, ಅಲ್ಲಲ್ಲಿ ಕಂಡ ಕಂಡ ವಾನರರ ಕೈ, ಕಾಲು, ತೊಡೆ, ಮುಂತಾದ ಅವಯವಗಳನ್ನು ಛೇದಿಸುತ್ತ ಬಂದನು. ಅನೇಕ ವಾನರರು ರಾಕ್ಷಸರ ಪ್ರಹಾರದಿಂದ ಬಹಳವಾಗಿ ನೊಂದು, ಅವರ ಮುಂದೆ ನಿಲ್ಲಲಾರದೆ ಭಯ ದಿಂದ ದಿಕ್ಕುದಿಕ್ಕಿಗೆ ಪಲಾಯನ ಮಾಡಿದರು. ಕೆಲವರು ಸುಗ್ರೀವನ ಬಳಿಗೆ ಬಂದು ಮರೆಹೊಕ್ಕರು. ಮಹಾ ತೇಜಸ್ವಿಯಾದ ಸುಗ್ರೀವನು, ವಾನರ ಸೈನ್ಯವು ರಾಕ್ಷಸರಿಂದ ಭಂಗಹೊಂದಿದುದನ್ನು ನೋಡಿ, ಕೋಪ ಗೊಂಡು, ಮಹೋದರನನ್ನು ಕೊಲ್ಲುವುದಕ್ಕಾಗಿ, ಪರ್ವತ ಸಮಾನವಾಗಿ ಭಯಂಕರವಾದ ಒಂದು ದೊಡ್ಡ ಶಿಲೆಯನ್ನು ತಂದು ಆ ರಾಕ್ಷಸನಮೇಲೆ ಬೀಸಿದನು. ಶತ್ರುಗಳಿಂದ ತಡೆಯಲಸಾಧ್ಯವಾದ ಆ ಶಿಲೆಯು ತನಗಿದಿರಾಗಿ ವೇಗದಿಂದ ಬರುವುದನ್ನು ನೋಡಿಯೂ ಮಹೋದರನು ಸ್ವಲ್ಪಮಾತ್ರವೂ ಧೈರ್ಯಗೆಡದೆ, ನಡುದಾರಿಯಲ್ಲಿಯೇ ಅದನ್ನು ತನ್ನ ಬಾಣಗಳಿಂದ ಛೇದಿಸಿ ದನು. ಆ ರಾಕ್ಷಸನ ಬಾಣಸಮೂಹಗಳಿಂದ ಆ ಮಹಾ ಶಿಲೆಯು ಸಹಸ್ರ ಭಾಗವಾಗಿ ಭೇದಿಸಲ್ಪಟ್ಟು, ಆಕಾಶದಲ್ಲಿ ಗುಂಪುಗೂಡಿದ್ದ ಗೃಧ್ರಸಮೂ ಹವು ನಾನಾ ಕಡೆಗಳಿಗೆ ಚದರಿ ಭೂಮಿಗಿಳಿದಂತೆ ಪುಡಿಪುಡಿಯಾಗಿ ಕೆಳಗೆ ಬಿದ್ದಿತು. ಆಗ ಸುಗ್ರೀವನು ತಾನು ಪ್ರಯೋಗಿಸಿದ ಮಹಾಶಿಲೆಯು ಶತ್ರು ಬಾಣಗಳಿಂದ ಚೂರ್ಣವಾಗಿ ಬಿದ್ದುದನ್ನು ನೋಡಿ ಕುಪಿತನಾಗಿ, ಆ ರಣಾಂಗಣ ದಲ್ಲಿ ಒಂದು ದೊಡ್ಡ ಮರವನ್ನು ಕಿತ್ತು ತಂದು ಮಹೋದರನಮೇಲೆ ಬೀಸಿ ದನು. ಶತ್ರುಪುರವನ್ನು ಸಾಧಿಸತಕ್ಕ ಮಹಾವೀರ್ಯವುಳ್ಳ ಮಹೋದರನು ತನ್ನ ಬಾಣಗಳಿಂದ ಆ ವೃಕ್ಷವನ್ನೂ ಭೇದಿಸಿ ಕೆಡಹಿದನು. ಆಗ ಸುಗ್ರೀ ವನು, ತಾನು ಪ್ರಯೋಗಿಸಿದ ವೃಕ್ಷವೂ ವಿಫಲವಾಗಿ ಬಿದ್ದುದನ್ನು ನೋಡಿ ಕೋಪಗೊಂಡು, ತನ್ನ ಮುಂದೆ ರಣಾಂಗಣದಲ್ಲಿ ಬಿದ್ದಿದ್ದ ಒಂದು ದೊಡ್ಡ ಪರಿಘವನ್ನು ನೋಡಿ ಅದನ್ನು ಕೈಗೆತ್ತಿಕೊಂಡು ತನ್ನ ಹಸ್ತಲಾಘವವನ್ನು ಮಹೋದರನಿಗೆ ತೋರಿಸುವಂತೆ ಅದನ್ನು ಗಿರಗಿರನೆ ತಿರುಗಿಸಿ, ಆ ಪರಿ ಘಾಗ್ರದಿಂದ ಮಹೋದರನ ರಥಕ್ಕೆ ಕಟ್ಟಿದ್ದ ಉತ್ತಮಾಶ್ವವನ್ನು ಬಡಿದು ಕೊಂದನು- ಕುದುರೆಯು ಸತ್ತುಬಿದ್ದೊಡನೆ, ವೀರನಾದ ಮಹೋದರನು ತನ್ನ ಮಹಾರಥದಿಂದ ತಟ್ಟನೆ ಕೆಳಕ್ಕೆ ಹಾರಿ ನಿಂತು, ಕೋಪದಿಂದ ಒಂದು ಗದೆಯನ್ನು ಕೈಗೆತ್ತಿಕೊಂಡು ಮುಂದೆಬಂದನು. ಹೀಗೆ ಆ ವಾನರರಾಕ್ಷಸ ವೀರರಿಬ್ಬರೂ ಕ್ರಮವಾಗಿ ಕಾಂತಿಯಿಂದ ಹೊಳೆಯುತ್ತಿರುವ ಪರಿಘ

ಗಳಂತೆ ಕಾಣುತ್ತ, ಕೊಬ್ಬಿದ ವೃಷಭಗಳಂತೆ ಗರ್ಜಿಸುತ್ತ ಒಬ್ಬರನ್ನೊಬ್ಬರು ವೇಗದಿಂದಿದಿರಿಸಿ ಬಂದರು. ಒಡನೆಯೇ ಮಹೋದರನು ಕೋಪಾವಿಷ್ಟನಾಗಿ, ಸೂರ್ಯಕಾಂತಿಯಂತೆ ಜ್ವಲಿಸುತ್ತಿದ್ದ ತನ್ನ ಗದೆಯನ್ನು ಸುಗ್ರೀವನಮೇಲೆ ಬೀಸಿದನು. ಇದನ್ನು ನೋಡಿ ಸುಗ್ರೀವನು ಕೋಪದಿಂದ ಕೆದರಿ ಕೆಂಪೇರಿದ ಕಣ್ಣುಳ್ಳವನಾಗಿ, ಭಯಂಕರವಾದ ಆ ಗದೆಯು ತನ್ನ ಸಮೀಪಕ್ಕೆ ಬರುವುದರೊಳಗಾಗಿಯೇ ಅದನ್ನು ತನ್ನ ಪರಿಘದಿಂದ ಬೀಸಿ ಹೊಡೆದನು. ಆ ಮಹಾಯುಧಗಳೆರಡೂ ಒಂದಕ್ಕೊಂದು ವೇಗದಿಂದ ತಗುಲಿ ಅವೆರಡೂ ಏಕಕಾಲದಲ್ಲಿ ಭಿನ್ನಗಳಾಗಿ ಕೆಳಗೆ ಬಿದ್ದುವು. ಆಗ ಸುಗ್ರೀವನು ತನ್ನ ಮುಂದೆ ನೆಲದಲ್ಲಿ ಚಿನ್ನದ ಕಟ್ಟುಗಳಿಂದಲಂಕೃತವಾಗಿ ಮಹಾ ಭಯಂಕರವಾದ ಒಂದು ಕಬ್ಬಿಣದೊನಕೆಯು ಬಿದ್ದಿರುವುದನ್ನು ಕಂಡು, ಅದನ್ನು ಕೈಗೆತ್ತಿಕೊಂಡು ಅತಿ ವೇಗದಿಂದ ಮಹೋದರನ ಮೇಲೆ ಬೀಸಿದನು. ಇದನ್ನು ನೋಡಿ ಮಹೋದರನು ಬೇರೊಂದು ಗದೆಯನ್ನೆತ್ತಿ ಸುಗ್ರೀವನ ಮೇಲೆ ಪ್ರಯೋಗಿಸಿದನು. ಈ ಆಯುಧಗಳೆರಡೂ ಒಂದಕ್ಕೊಂದುತಾಗಿ, ಎರಡೂ ಭಿನ್ನಗಳಾಗಿ ಕೆಳಗೆ ಬಿದ್ದುವು. ತೇಜಸ್ಸಿನಿಂದಲೂ, ಬಲದಿಂದಲೂ ಉಬ್ಬಿ, ಉರಿಯುವ ಬೆಂಕಿಯಂತೆ ತೋರುತ್ತಿದ್ದ ಆ ವೀರರಿಬ್ಬರೂ, ಯುದ್ಧದಲ್ಲಿ ತಮ್ಮ ತಮ್ಮ ಆಯುಧಗಳೆಲ್ಲವೂ ಭಿನ್ನವಾಗಿ ಬಿದ್ದುದನ್ನು ಕಂಡು ಮುಷ್ಟಿಯುದ್ಧವನ್ನಾರಂಭಿಸಿದರು. ಯುದ್ಧದಲ್ಲಿ ಪರಾಜಯವೆಂಬುದನ್ನೇ ಕಂಡರಿಯದ ಆ ವೀರರಿಬ್ಬರೂ ಒಬ್ಬರನ್ನೊಬ್ಬರು ವೇಗದಿಂದ ಅಪ್ಪಳಿಸಿ ಹೊಡೆಯುವರು! ಬಾರಿಬಾರಿಗೂ ಮಹಾಧ್ವನಿಯಿಂದ ಸಿಂಹನಾದ ಮಾಡುವರು! ಒಬ್ಬರನ್ನೊಬ್ಬರು ಅಂಗೈಯಿಂದ ಹೊಡೆದು ಇಬ್ಬರೂ ಕೆಳಗೆ ಬೀಳುವರು! ಕ್ಷಣಮಾತ್ರದಲ್ಲಿಯೇ ತಿರುಗಿ ಚೇತರಿಸಿಕೊಂಡು ಹಾರಿ ನಿಲ್ಲುವರು! ತಿರುಗಿ ಒಬ್ಬರನ್ನೊಬ್ಬರು ಅಪ್ಪಳಿಸಿ ಹೊಡೆಯುವರು. ಆಗಾಗ ತೋಳುಗಳಿಂದ ಹಿಡಿದು ಮೇಲಕ್ಕೆತ್ತಿ ದೂರಕ್ಕೊಗೆಯುವರು! ಹೀಗೆ ವಾನರ ರಾಕ್ಷಸವೀರರಿಬ್ಬರೂ ಬಹಳ ಹೊತ್ತಿನವರೆಗೆ ಬಾಹುಯುದ್ಧವನ್ನು ಮಾಡಿ ಬಹಳವಾಗಿ ಬಳಲಿ ಹೋದರು. ಕೊನೆಗೆ ಮಹಾವೇಗಶಾಲಿಯಾದ ಮಹೋದರನು ಸಮೀಪದಲ್ಲಿ ಬಿದ್ದಿದ್ದ ಒಂದು ದೊಡ್ಡ ಕತ್ತಿಯನ್ನೂ, ಗುರಾಣಿಯನ್ನೂ ಕೈಗೆತ್ತಿಕೊಂಡನು. ಇದನ್ನು ನೋಡಿದೊಡನೆ ಅವನಿಗಿಂತಲೂ ಮೇಲಾದ ಹಸ್ತಲಾಘವವುಳ್ಳ ಸುಗ್ರೀವನೂ

ಕೂಡ, ತನ್ನ ಸಮೀಪದಲ್ಲಿ ಬಿದ್ದಿದ್ದ ಬೇರೊಂದು ದೊಡ್ಡ ಕತ್ತಿಯನ್ನೂ ಗುರಾಣಿಯನ್ನೂ ಹಿಡಿದು ನಿಂತನು. ಆಯುಧ ವಿದ್ಯೆಯಲ್ಲಿ ನಿಪುಣರಾದ ಆ ವೀರರಿಬ್ಬರೂ ಹೀಗೆ ಕೋಪದಿಂದ ಖಡ್ಗಧಾರಿಗಳಾಗಿ, ಮಹೋತ್ಸಾಹದಿಂದ ಗರ್ಜಿಸುತ್ತ ಯುದ್ಧಕ್ಕೆ ನಿಂತರು- ಅವರಿಬ್ಬರೂ ಅತಿ ಕುಪಿತರಾಗಿ ಒಬ್ಬರನ್ನೊಬ್ಬರು ಜಯಿಸುವ ಆತುರದಿಂದ, ಎಡಕ್ಕೂ, ಬಲಕ್ಕೂ ಮಂಡಲ ಗತಿಗಳಿಂದ ತಿರುಗುತ್ತ ಶೀಘ್ರಗತಿಯಿಂದ ಬರುತ್ತಿದ್ದರು. ಶೂರನಾಗಿಯೂ ಮಹಾವೇಗಶಾಲಿಯೂ ಆದ ಮಹೋದರನು ಪರಾಕ್ರಮದಿಂದ ಕೇವಲ ಗರ್ವಿತನಾಗಿದ್ದರೂ, ಸುಗ್ರೀವನಂತೆ ಸೂಕ್ಷ್ಮಬುದ್ಧಿಯಿಲ್ಲದವನಾದುದರಿಂದ ತನ್ನ ಕತ್ತಿಯನ್ನು ಸುಗ್ರೀವನಮೇಲೆ ಬೀಸುವುದಕ್ಕೆ ಪ್ರಯತ್ನಿಸಿದಾಗ, ಆ ಕತ್ತಿಯು ಗುರಿತಪ್ಪಿ, ಸುಗ್ರೀವನ ಕೈಯಲ್ಲಿದ್ದ ದೊಡ್ಡ ಗುರಾಣಿಯಲ್ಲಿ ಬಲವಾಗಿ ನಾಟಿಕೊಂಡಿತು. ಆಗ ಮಹೋದರನು ಗುರಾಣಿಯಲ್ಲಿ ನಾಟಿದ ಆ ಕತ್ತಿಯನ್ನು ಬಿಡಿಸಿಕೊಳ್ಳುವುದಕ್ಕಾಗಿ ಅದನ್ನೆಳೆಯುತ್ತಿರುವಷ್ಟರಲ್ಲಿ, ಕಪಿಶ್ರೇಷ್ಠನಾದ ಸುಗ್ರೀವನು, ಶಿರಸ್ತ್ರಾಣದಿಂದ ಕೂಡಿ ಕುಂಡಲಾಲಂಕೃತವಾಗಿದ್ದ ಆ ರಾಕ್ಷಸನ ತಲೆಯನ್ನು ಕತ್ತಿಯಿಂದ ಕತ್ತರಿಸಿ ಕೆಡಹಿದನು. ಹೀಗೆ ಮಹೋದರನ ತಲೆಯು ಕತ್ತರಿಸಿ ಕೆಳಗೆ ಬಿದ್ದುದನ್ನು ಕಂಡೊಡನೆ, ಅಲ್ಲಿದ್ದ ಸಮಸ್ತ ರಾಕ್ಷಸಸೇನೆಯೂ ಅಲ್ಲಿ ನಿಲ್ಲದೆ ಭಯದಿಂದ ಪಲಾಯನ ಮಾಡಿತು. ತಾನು ಮಹೋದರನನ್ನು ಕೊಂದ ಸಂತೋಷದಿಂದ ಸುಗ್ರೀವನು ಸಮಸ್ತ ವಾನರರೊಡನೆ ಸಿಂಹನಾದ ಮಾಡಿದನು. ಈ ವೃತ್ತಾಂತವನ್ನು ಕೇಳಿ ರಾವಣನಿಗೆ ತಡೆಯಲಾರದ ಕೋಪವುಂಟಾಯಿತು. ಶ್ರೀರಾಮನು ಶತ್ರುವಧವನ್ನು ಕೇಳಿ ಸಂತೋಷದಿಂದುಬ್ಬಿದನು. ರಾಕ್ಷಸರೆಲ್ಲರೂ ಕಂದಿದ ಮುಖದಿಂದ ಮನಸ್ಸಿನಲ್ಲಿ ಉತ್ಸಾಹತಪ್ಪಿ ಭಯಗ್ರಸ್ತರಾಗಿ ಪಲಾಯನ ಮಾಡಿದರು. ಮಹಾ ಪರ್ವತದಲ್ಲಿ ಸ್ವಲ್ಪ ಭಾಗವನ್ನು ಮುರಿದು ಕೆಡಹಿದಂತೆ, ಸೂರ್ಯಕುಮಾರನಾದ ಸುಗ್ರೀವನು ಮಹೋದರನನ್ನು ಕೊಂದು ಕೆಳಕ್ಕೆ ಕೆಡಹಿದಮೇಲೆ, ಸೂರ್ಯನು ನಿಜ ತೇಜಸ್ಸಿನಿಂದ ದುರ್ಧರ್ಷನಾಗಿ ಬೆಳಗುವಂತೆ ತಾನೂ ಶತ್ರುದುರ್ಜಯನಾಗಿ ಜಯಲಕ್ಷ್ಮಿಯೊಡಗೂಡಿ ವಾನರಸೇನಾಮಧ್ಯದಲ್ಲಿ ಶೋಭಿಸುತ್ತಿದ್ದನು. ಹೀಗೆ ವಾನರೇಂದ್ರನಾದ ಸುಗ್ರೀವನು ರಣಾಗ್ರದಲ್ಲಿ ಜಯವನ್ನು ಹೊಂದಿ, ಆಕಾಶದಲ್ಲಿ ಸಂತುಷ್ಟ

ರಾದ ದೇವತೆಗಳಿಂದಲೂ, ಯಕ್ಷರಿಂದಲೂ, ಸಿದ್ಧಸಮೂಹಗಳಿಂದಲೂ, ಭೂಮಿಯಲ್ಲಿರುವ ಇತರ ಸಮಸ್ತಭೂತಗಳಿಂದಲೂ ಬಹಳವಾಗಿ ಸ್ತುತಿಸಲ್ಪಡುತ್ತಿದ್ದನು.

ಇಲ್ಲಿಗೆ ತೊಂಬತ್ತೆಂಟನೆಯ ಸರ್ಗವು.

ಅಂಗದನು ರಾವಣನ ಮಂತ್ರಿಯಾದ ಮಹಾಪಾರ್ಶ್ವ
ನನ್ನು ಕೊಂದುದು.

ಮಹೋದರನು ಸುಗ್ರೀವನಿಂದ ಹತನಾದುದನ್ನು ನೋಡಿ, ಬಲಾಢ್ಯನಾದ ಮಹಾಪಾರ್ಶ್ವನು, ಕೋಪದಿಂದ ಕೆಂಪೇರಿದ ಕಣ್ಣುಳ್ಳವನಾಗಿ ವೇಗದಿಂದ ಹೊರಟು, ಭಯಂಕರವಾದ ಅಂಗದನ ಸೈನ್ಯವನ್ನು ಪ್ರವೇಶಿಸಿ, ಅದನ್ನು ಹೆದರಿಸುವುದಕ್ಕೆ ತೊಡಗಿದನು. ಕಾಡಿನಲ್ಲಿ ಬಿರುಗಾಳಿಯು ಮರದ ಕೊನೆಗಳಿಂದ ಹಣ್ಣುಗಳನ್ನುದಿರಿಸುವಂತೆ ತನ್ನ ಬಾಣಗಳಿಂದ ಅನೇಕ ವಾನರವೀರರ ತಲೆಗಳನ್ನು ದೇಹದಿಂದ ಬೇರ್ಪಡಿಸಿ ಕೆಳಕ್ಕೆ ಕೆಡಹುತ್ತ ಬಂದನು. ಮಿತಿಮೀರಿ ಕೋಪಗೊಂಡ ಮಹಾಪಾರ್ಶ್ವನು, ಆಗ ಕೆಲವು ವಾನರರ ತೋಳುಗಳನ್ನೂ, ಕೆಲವರ ಭುಜದ ಕೀಲುಗಳನ್ನೂ, ಕೆಲವರ ಪಾರ್ಶ್ವಭಾಗಗಳನ್ನೂ ತನ್ನ ಬಾಣಗಳಿಂದ ಕಡಿದುಹಾಕಿದನು. ಆಗ ಈ ರಾಕ್ಷಸನ ಬಾಣವರ್ಷವನ್ನು ತಡೆದು ನಿಲ್ಲಲಾರದೆ, ಅನೇಕ ವಾನರರು ಯುದ್ಧವನ್ನು ಬಿಟ್ಟು ಭಯದಿಂದ ಹಿಂದುಮುಂದು ತೋರದೆ ಮೈಮರೆತಹಾಗಿದ್ದರು- ಹೀಗೆ ವಾನರಸೈನ್ಯವು ಭಯಪೀಡಿತ ವಾಗಿರುವುದನ್ನು ನೋಡಿ, ಮಹಾಬಾಹುವಾದ ಅಂಗದನು ಕೋಪಗೊಂಡು, ಪರ್ವಕಾಲದ ಸಮುದ್ರದಂತೆ ತನ್ನ ಮಹಾರ್ಭಟವನ್ನು ತೋರಿಸಲಾರಂಭಿಸಿದನು. ಒಡನೆಯೇ ವಾನರ ಶ್ರೇಷ್ಠನಾದ ಆ ಅಂಗದನು, ಸೂರ್ಯಕಿರಣಗಳಿಗೆ ಸಮಾನವಾದ ಕಾಂತಿಯುಳ್ಳ ಒಂದು ಉಕ್ಕಿನ ಪರಿಘಾಯುಧವನ್ನೆತ್ತಿ ತಂದು, ಅದನ್ನು ಮಹಾಪಾರ್ಶ್ವನ ಮೇಲೆ ಬೀಸಿದನು. ಈ ಪ್ರಹಾರವು

ಮೈಗೆ ತಗುಲಿದೊಡನೆ ಮಹಾಪಾರ್ಶ್ವನು ದೇಹದಮೇಲೆ ಪ್ರಜ್ಞೆತಪ್ಪಿ, ತನ್ನ ಸಾರಥಿಯೊಡನೆ ರಥದಿಂದ ಕೆಳಗೆ ಬಿದ್ದನು. ಆಗ ಬಲಾಢ್ಯನಾಗಿಯೂ, ವೀರ್ಯಶಾಲಿಯಾಗಿಯೂ, ಕಾಡಿಗೆಯ ರಾಶಿಯಂತೆ ಕಪ್ಪುಮೈಯುಳ್ಳವನಾಗಿಯೂ ಇದ್ದ ಜಾಂಬವಂತನೂ, ಗವಾಕ್ಷನೂ ಇವರಿಬ್ಬರೂ ಸೇರಿ, ಮೇಘಸಮೂಹದಂತಿದ್ದ ತಮ್ಮ ದೊಡ್ಡ ಭಲ್ಲೂಕಸೈನ್ಯದೊಡನೆ ವೇಗದಿಂದ ಮುಂದೆಬಂದು, ಪರ್ವತಶಿಖರಗಳಂತಿದ್ದ ದೊಡ್ಡ ದೊಡ್ಡ ಶಿಲೆಗಳನ್ನು ಬೀಸಿಬಡಿದು, ಆ ಮಹಾಪಾರ್ಶ್ವನ ರಥಾಶ್ವಗಳನ್ನು ಕೊಂದು ಅವನ ರಥವನ್ನು ಮುರಿದು ಚೂರ್ಣಮಾಡಿದರು. ಇಷ್ಟರಲ್ಲಿ ಬಲಾಢ್ಯನಾದ ಮಹಾಪಾರ್ಶ್ವನು ಮೂರ್ಛೆ ತಿಳಿದು ಮೇಲೆದ್ದು ಬಂದು, ಅಂಗದನಮೇಲೆ ಎಡೆಬಿಡದ ಬಾಣವರ್ಷವನ್ನು ಕರೆದು, ಅವನನ್ನು ಬಹಳವಾಗಿ ಪೀಡಿಸಿದನು. ಮತ್ತು ಭಲ್ಲೂಕಪತಿಯಾದ ಜಾಂಬವಂತನ ಎದೆಗೆ ಗುರಿಯಿಟ್ಟು ಮೂರು ಬಾಣಗಳನ್ನು ಪ್ರಯೋಗಿಸಿ, ಗವಾಕ್ಷನನ್ನು ಅನೇಕ ಬಾಣಗಳಿಂದ ಹೊಡೆದನು. ಹೀಗೆ ಗವಾಕ್ಷನೂ, ಜಾಂಬವಂತನೂ ಬಾಣಪೀಡಿತರಾದುದನ್ನು ಕಂಡು ಅಂಗದನು ಬಹಳ ಕೋಪಾವಿಷ್ಟನಾಗಿ, ತಿರುಗಿ ತನ್ನ ಭಯಂಕರವಾದ ಪರಿಘವನ್ನೆತ್ತಿಕೊಂಡು ಮುಂದೆ ಬಂದನು. ಹೀಗೆ ವಾಲಿಪುತ್ರನಾದ ಅಂಗದನು, ಮಹಾಪಾರ್ಶ್ವನ ವಧಾರ್ಥವಾಗಿ, ಚಿನ್ನದಕಟ್ಟುಗಳಿಂದಕೂಡಿ ಸೂರ್ಯಕಿರಣದಂತೆ ಧಗಧಗಿಸುತ್ತಿದ್ದ ಆ ಉಕ್ಕಿನ ಪರಿಘವನ್ನು ಹಿಡಿದು ಮುಂದೆ ಬಂದು, ತನ್ನ ವೈರಿಯಾದ ಆ ರಾಕ್ಷಸನು ತನಗಿದಿರಾಗಿ ಬಹಳ ದೂರದಲ್ಲಿದ್ದುದನ್ನು ಕಂಡು, ಆ ಪರಿಘವನ್ನು ತನ್ನ ಎರಡು ಕೈಗಳಿಂದಲೂ ಗಿರಗಿರನೆ ತಿರುಗಿಸಿ ವೇಗದಿಂದ ಬೀಸಿದನು. ಬಲಾಢ್ಯನಾದ ಅಂಗದನು, ತನ್ನ ಸರ್ವಶಕ್ತಿಯನ್ನು ಉಪಯೋಗಿಸಿ ಆ ಪರಿಘವನ್ನು ಬೀಸಿದೊಡನೆ, ಅದರ ಪ್ರಹಾರದಿಂದ ಮಹಾಪಾರ್ಶ್ವನು ಹಿಡಿದಿದ್ದ ಬಾಣಸಹಿತವಾದ ಧನುಸ್ಸು ಅವನ ಕೈಯಿಂದ ಜಾರಿ ಕೆಳಗೆ ಬಿದ್ದಿತು. ಆ ಮಹಾಪಾರ್ಶ್ವನು ಧರಿಸಿದ್ದ ಯುದ್ಧಕಿರೀಟವು ಅವನ ತಲೆಯಿಂದ ಹಾರಿ ಕೆಳಕ್ಕುರುಳಿತು. ಒಡನೆಯೇ ಮಹಾ ವೇಗಶಾಲಿಯಾದ ಅಂಗದನು ತಟ್ಟನೆ ಹಾರಿ ಮುಂದೆ ಬಂದು, ವೇಗದಿಂದ ಕೈಯನ್ನೆತ್ತಿ, ಕುಂಡಲಕಾಂತಿಯಿಂದ ಶೋಭಿಸುತ್ತಿದ್ದ ಆ ರಾಕ್ಷಸನ ಕರ್ಣಮೂಲವನ್ನು ತನ್ನ ಅಂಗೈಯಿಂದ ಅಪ್ಪಳಿಸಿ ಬಡಿದನು. ಆಗ ಮಹಾಪಾರ್ಶ್ವನು ಅಂಗದನ

ಕಾರ್ಯಕ್ಕಾಗಿ ಮಿತಿಮೀರಿ ಕೋಪಗೊಂಡು ಒಂದು ದೊಡ್ಡ ಕೊಡಲಿಯನ್ನು ಕೈಗೆತ್ತಿಕೊಂಡನು. ಆಗಾಗ ತೈಲಸಂಸ್ಕಾರಾದಿಗಳಿಂದ ಬಹಳ ಸ್ವಚ್ಛವಾಗಿಯೂ, ದೃಢವಾಗಿಯೂ ಇದ್ದ ಆ ಕೊಡಲಿಯನ್ನು ವೇಗದಿಂದೆತ್ತಿ ಅಂಗದನನ್ನು ಪ್ರಹರಿಸಿದನು. ಹೀಗೆ ಮಹಾಪಾರ್ಶ್ವನು ಅಂಗದನನ್ನು ಎಡಪಕ್ಕದ, ಭುಜದ, ನೆತ್ತಿಯಮೇಲೆ ಆ ಕೊಡಲಿಯನ್ನು ಬೀಸಿ ಹೊಡೆಯುವಷ್ಟರಲ್ಲಿ, ಅಂಗದನು ತನ್ನ ಲಂಘನದಿಂದ ಹಾರಿ ಅದರ ಪ್ರಹಾರವನ್ನು ತಪ್ಪಿಸಿಕೊಂಡನು. ಇಷ್ಟರಲ್ಲಿ ಅಂಗದನಿಗೆ ಕೋಪವು ಮಿತಿಮೀರಿಹೋಯಿತು. ಆಗ ಅವನು ಒಂದೇ ಪ್ರಹಾರಕ್ಕೆ ಆ ಮಹಾಪಾರ್ಶ್ವನನ್ನು ಕೊಲ್ಲಬೇಕೆಂದು ನಿಶ್ಚಯಿಸಿ, ವಜ್ರಸಮಾನವಾದ ತನ್ನ ಮುಷ್ಟಿಯನ್ನು ತಿರುಗಿಸಿ ಹಿಡಿದನು. ಅಂಗದನು ಪರಾಕ್ರಮದಲ್ಲಿ ತನ್ನ ತಂದೆಗೆ ಸಮಾನವಾಗಿಯೂ ಇದ್ದುದರಿಂದ, ತಾನು ಮೇಲೆತ್ತಿ ಹಿಡಿದ ಆ ವಜ್ರಮುಷ್ಟಿಯನ್ನು ಮಹಾಪಾರ್ಶ್ವನ ಎದೆಗೆ ಸರಿಯಾಗಿ ಗುರಿಹಿಡಿದು ಹೊಡೆದನು. ಅಂಗದನ ಈ ಒಂದೇ ಮುಷ್ಟಿಪ್ರಹಾರಕ್ಕೆ ಮಹಾಪಾರ್ಶ್ವನ ಎದೆಯು ತಟ್ಟನೆ ಸೀಳಿಹೋಯಿತು. ಒಡನೆಯೇ ಆ ರಾಕ್ಷಸನು ಗತಪ್ರಾಣನಾಗಿ ಕೆಳಗೆ ಬಿದ್ದನು. ಮಹಾಪಾರ್ಶ್ವನು ಕೆಳಗೆ ಬಿದ್ದುದನ್ನು ನೋಡಿದೊಡನೆ ರಾಕ್ಷಸಸೈನ್ಯವೆಲ್ಲವೂ ಭಯದಿಂದ ಚದರಿದುವು. ಅತ್ತಲಾಗಿ ರಾವಣನಿಗೆ ಸಹಿಸಲಾರದ ಕೋಪವುಂಟಾಯಿತು. ಇತ್ತಲಾಗಿ ವಾನರರೆಲ್ಲರೂ ಮಹೋತ್ಸಾಹಗೊಡು ಲಂಕಾನಗರದ ಕೋಟೆಕೊತ್ತಲಗಳೂ, ಅದರ ಪುರದ್ವಾರಗಳೂ ಭೇದಿಸಿಹೋಗುವಂತೆ ದೊಡ್ಡ ಸಿಂಹನಾದವನ್ನು ಮಾಡಿದರು. ಆಕಾಶದಲ್ಲಿ ದೇವೇಂದ್ರನೂ ಕೂಡ ದೇವತೆಗಳೊಡಗೂಡಿ ಸಂತೋಷ ಕೋಲಾಹಲಗಳನ್ನು ಮಾಡಿದನು. ಹೀಗೆ ದೇವತೆಗಳೂ, ವಾನರರೂ ನಡೆಸುತ್ತಿದ್ದ ಸಂತೋಷ ಕೋಲಾಹಲವನ್ನು ಕೇಳಿ, ರಾವಣನಿಗೆ ಮೇಲೆ ಮೇಲೆ ಮಹತ್ತಾದ ಕೋಪವು ಹೆಚ್ಚಿತು. ದುರಾತ್ಮನಾದ ಆ ರಾವಣನು ತಿರುಗಿ ಯುದ್ಧೋನ್ಮುಖನಾಗಿ ನಿಂತನು.

ಇಲ್ಲಿಗೆ ತೊಂಬತ್ತೊಂಬತ್ತನೆಯ ಸರ್ಗವು.

ರಾಮರಾವಣರ ಯುದ್ಧಾರಂಭವು

ಆಗಿನ ಮಹಾಯುದ್ಧದಲ್ಲಿ ಬಲಾಢ್ಯನಾದ ವಿರೂಪಾಕ್ಷನು ಸತ್ತು ದನ್ನೂ, ಮಹೋದರ ಮಹಾಪಾರ್ಶ್ವರೆಂಬ ಮಂತ್ರಿಗಳಿಬ್ಬರೂ ಹತರಾದು ದನ್ನೂ ನೋಡಿ ರಾವಣನಿಗೆ ಕೊನೆಮೊದಲಿಲ್ಲದ ಕೋಪಾವೇಶವುಂಟಾ ಯಿತು. ಆ ಕ್ಷಣವೇ ರಾವಣನು ರಥವನ್ನು ತರಿಸುವಂತೆ ಸಾರಥಿಗೆ ನಿಯ ಮಿಸಿ, ಅವನನ್ನು ಕುರಿತು "ಎಲೆ ಸೂತನೆ! ಇದೋ! ಈಗಲೇ ನಾನು ಹೋಗಿ, ರಾಮಲಕ್ಷ್ಮಣರನ್ನು ಕೊಂದು, ಇದುವರೆಗೆ ಅವರಿಂದ ಹತರಾದ ನಮ್ಮ ಮಂತ್ರಿಗಳಿಗೂ, ವಾನರರಿಂದ ಮುತ್ತಿಗೆ ಹಾಕಲ್ಪಟ್ಟಿರುವ ಈ ನಮ್ಮ ಲಂಕಾನಿವಾಸಿಗಳಿಗೂ ದುಃಖಶಾಂತಿಯನ್ನುಂಟುಮಾಡುವೆನು. ಇದೋ! ಕ್ಷಣ ಕಾಲದಲ್ಲಿಯೇ ನಾನು, ಸೀತೆಯೆಂಬ ಪುಷ್ಪದಿಂದಕೂಡಿ ಫಲಪ್ರದವಾಗಿಯೂ ಸುಗ್ರೀವ, ಜಾಂಬವಂತ, ನಲ, ಕುಮುದ, ಮೈಂದ, ದ್ವಿವಿದ, ಅಂಗದ, ಗಂಧಮಾದನ, ಸುಷೇಣರೇ ಮೊದಲಾದ ವಾನರ ಯೂಥಪತಿಗಳೆಂಬ ಶಾಖೋಪಶಾಖೆಗಳುಳ್ಳವನಾಗಿಯೂ ಇರುವ ಆ ರಾಮನೆಂಬ ವೃಕ್ಷವನ್ನು ಬುಡಸಹಿತವಾಗಿ ಕತ್ತರಿಸಿಬರುವೆನು" ಎಂದನು. ಅತಿರಥೋತ್ತಮನಾದ ರಾವಣನು ಈ ಮಾತುಗಳನ್ನು ಹೇಳುತ್ತ, ಹತ್ತು ದಿಕ್ಕುಗಳನ್ನು ತನ್ನ ರಥಘೋಷದಿಂದ ಮೊಳಗಿಸುವಂತೆ, ಮಹಾವೇಗದಿಂದ ಹೊರಟು, ರಾಮ ನಿದ್ದ ಕಡೆಗೆ ಬಂದನು. ರಾವಣನು ಯುದ್ಧಕ್ಕಾಗಿ ಹೊರಟುಬರುವಾಗ ಹುಟ್ಟಿದ ಆ ರಥಘೋಷದಿಂದ ಈ ಸಮಸ್ತ ಭೂಮಿಯೂ ಅದರಲ್ಲಿರುವ ನದೀನದಗಳೊಡನೆಯೂ, ಪರ್ವತಾರಣ್ಯಗಳೊಡನೆಯೂ, ಗಜವರಾಹಾದಿ ಮೃಗಗಳೊಡನೆಯೂ, ಚಲಿಸಿಹೋದಂತಾಯಿತು. ರಾವಣನು ರಣರಂಗ ವನ್ನು ಮುಟ್ಟಿದೊಡನೆಯೇ, ಅತಿ ತೀಕ್ಷ್ಣವಾಗಿಯೂ, ಮಹಾಭಯಂಕರ ವಾಗಿಯೂ ಇದ್ದ ತಾಮಸಾಸ್ತ್ರವನ್ನು ಹೂಡಿ ವಾನರರ ಮೇಲೆ ಪ್ರಯೋಗಿ ಸಿದನು. ರಣರಂಗದಲ್ಲಿದ್ದ ಸಮಸ್ತ ವಾನರರೂ, ಆ ಮಹಾಸ್ತ್ರದ ಬೇಗೆ ಯನ್ನು ತಡೆಯಲಾರದೆ ಅದರಿಂದ ದಗ್ಧರಾಗಿ, ದಿಕ್ಕುದಿಕ್ಕಿಗೆ ಪಲಾಯನ ಮಾಡಿದರು. ಆ ಅಸ್ತ್ರವು ಬ್ರಹ್ಮದೇವನಿಂದ ಸ್ವಯವಾಗಿ ನಿರ್ಮಿತವಾದು ದರಿಂದ, ವಾನರರು ಅದರ ತಾಪವನ್ನು ತಡೆದು ನಿಲ್ಲಲಾರದೆ ನಾನಾ ಕಡೆಗಳಿಗೆ ಬಿದ್ದೋಡುವಾಗ, ಅವರ ಕಾಲಿನ ತುಳಿತದಿಂದ ಆ ರಣರಂಗ

ದಲ್ಲಿ ದೊಡ್ಡಧೂಳಿಯು ಮೇಲಕ್ಕೆದ್ದಿತು. ಹೀಗೆ ವಾನರಸೇನೆಯೆಲ್ಲವೂ ರಾವಣಬಾಣದಿಂದ ಪೀಡಿತವಾಗಿ ಸಾವಿರಾರು ಮಂದಿ ಗುಂಪು ಗುಂಪಾಗಿ ಭಯ ದಿಂದ ಪಲಾಯನಮಾಡುವುದನ್ನು ನೋಡಿ ರಾಮನು ಯುದ್ಧಕ್ಕೆ ಸಿದ್ಧ ನಾದನು. ರಾವಣನು ತನ್ನ ಮಹಾಸ್ತ್ರದಿಂದ ವಾನರಸೈನ್ಯವನ್ನು ಭಂಗ ಪಡಿಸಿ ಮುಂದೆಬರುವಷ್ಟರಲ್ಲಿ ಇತ್ತಲಾಗಿ [1]ಉಪೇಂದ್ರನೊಡಗೂಡಿ ಬಂದ ಇಂದ್ರನಂತೆ ಶತ್ರುದುರ್ಜಯನಾದ ರಾಮನು ತನ್ನ ತಮ್ಮನಾದ ಲಕ್ಷ್ಮಣ ನೊಡಗೂಡಿ ತನ್ನಿದಿರಿಗೆ ನಿಂತಿರುವುದನ್ನು ಕಂಡನು. ಕಮಲದಂತೆ ವಿಶಾಲ ವಾದ ಕಣ್ಣುಳ್ಳವನಾಗಿಯೂ, ನೀಡಿದ ತೋಳುಗಳುಳ್ಳವನಾಗಿಯೂ, ಪರಂತಪನಾಗಿಯೂ ಇರುವ ರಾಮನು, ಆಕಾಶವನ್ನಳೆಯುವಂತೆ ತನ್ನ ದೊಡ್ಡ ಧನುಸ್ಸನ್ನು ಕೈಯಲ್ಲಿ ಹಿಡಿದು, ಗಂಭೀರಸ್ವರೂಪದಿಂದ ನಿಂತಿರು ವುದನ್ನು ಕಂಡನು. ಇತ್ತಲಾಗಿ ಮಹಾ ತೇಜಸ್ವಿಯಾಗಿ ಲಕ್ಷ್ಮಣನೊಡ ಗೂಡಿ ನಿಂತಿದ್ದ ಬಲಾಢ್ಯನಾದ ರಾಮನೂ ಕೂಡ, ವಾನರರು ಅಲ್ಲಲ್ಲಿ ಭಯದಿಂದ ಪಲಾಯನಮಾಡುವುದನ್ನೂ ರಾವಣನು ಹೆಮ್ಮೆಯಿಂದ ತನ ಗಿದಿರಾಗಿ ಬರುತ್ತಿರುವುದನ್ನೂ ನೋಡಿ, ಯುದ್ಧೋತ್ಸಾಹದಿಂದುಬ್ಬುತ್ತ, ತನ್ನ ಧನುಸ್ಸಿನ ಮಧ್ಯಕ್ಕೆ [2]ಕೈಯಿಟ್ಟನು. ಎಣೆಯಿಲ್ಲದ ಮಹಾವೀರ್ಯ ವುಳ್ಳ ಆ ರಾಮನು, ಮಹಾವೇಗದಿಂದಲೂ, ಮಹಾಧ್ವನಿಯಿಂದಲೂ ಕೂಡಿದ ಆ ತನ್ನ ದಿವ್ಯಧನುಸ್ಸನ್ನು ಮೇಲಕ್ಕೆತ್ತಿ ಹಿಡಿದು ಭೂಮಿಯೆಲ್ಲವೂ ಭೇದಿಸುವಂತೆ ಅದರ ನಾಣನ್ನು ಮಿಡಿದು ಧನುಷ್ಟಂಕಾರವನ್ನು ಮಾಡಿ ದನು. ಆ ಕಾಲದಲ್ಲಿ ಅತ್ತಲಾಗಿ ರಾವಣನು ಪ್ರಯೋಗಿಸುತ್ತಿದ್ದ ಬಾಣ ಸಮೂಹಗಳಿಂದಲೂ, ಇತ್ತಲಾಗಿ ರಾವಣನು ಆಗಾಗ ನಾಣನ್ನು ತಟ್ಟುವ

---

[1] ಈ ವಾಕ್ಯಗಳಿಂದ ರಾಮನ ಅಪರಾಜಿತತ್ವವೂ, ನಿರವಧಿಕಸೌಂದರ್ಯನಿಧಿ ಯೆಂಬುದರಿಂದ, ಅವನ ಸೌಂದರ್ಯವು ವೈರಬುದ್ಧಿಯಿಲ್ಲದೆ ನಿರಂತರಾನುಭವಯೋಗ್ಯ ವೆಂಬುದೂ, ರಾವಣನ ದುರ್ಬುದ್ಧಿಯೂ, ಶ್ರೀರಾಮಸೌಂದರ್ಯವನ್ನನುಭವಿಸ ಲಾರದ ಆತನ ದೌರ್ಭಾಗ್ಯವೂ ಸೂಚಿಸಲ್ಪಡುವುವು.

[2] ರಾಮನು ಇಲ್ಲಿ ಧನುಸ್ಸಿನ ನಡುವೆ ಕೈಯಿಟ್ಟು ನಿಂತು, ಆಮೇಲೆ ನಾಣನ್ನು ಮಿಡಿದುದಾಗಿ ಕಾಲವಿಳಂಬವು ಸೂಚಿಸಲ್ಪಟ್ಟಿರುವುದರಿಂದ "ಈಗಲಾದರೂ ರಾವ ಣನು ನಮ್ರನಾಗಿ ಬರುವನೇನೋ" ಎಂದು ನಿರೀಕ್ಷಿಸುತ್ತಿದ್ದನೆಂದು ಆತನ ಪರಮ ದಯಾಳುತ್ವವು ವ್ಯಕ್ತವಾಗುವುದು.

ದರಿಂದಲೂ, ಉಂಟಾದ ಮಹಾಧ್ವನಿಯು ಅತಿ ಭಯಂಕರವಾಗಿ ವ್ಯಾಪಿಸಿ, ಅವುಗಳಿಂದಲೇ ಅನೇಕ ರಾಕ್ಷಸರೂ, ವಾನರರೂ ಮೂರ್ಛಿತರಾಗಿ ಕೆಳಗೆ ಬಿದ್ದರು. ಆಗ ರಾಜಕುಮಾರರಾದ ಈ ರಾಮಲಕ್ಷ್ಮಣರ ಬಾಣದ ದಾರಿಗೆ ಸರಿಯಾಗಿ ಬಂದು ನಿಂತಿದ್ದ ರಾವಣನು, ಅಮಾವಾಸ್ಯೆಯಲ್ಲಿ ಚಂದ್ರ ಸೂರ್ಯರ ಸಮೀಪದಲ್ಲಿ ಬಂದು ನಿಂತ ರಾಹುವಿನಂತೆ ಕಾಣುತ್ತಿದ್ದನು. ಇಷ್ಟ ರಲ್ಲಿ ಲಕ್ಷ್ಮಣನು ಮೊದಲು ತಾನೇ ಮುಂದಾಗಿನಿಂತು ಆ ರಾವಣನೊಡನೆ ಯುದ್ಧಮಾಡಬೇಕೆಂದೆಣಿಸಿ ತನ್ನ ಬಿಲ್ಲನ್ನೆಳೆದು, ಅಗ್ನಿ ಜ್ವಾಲೆಗಳಿಗೆ ಸಮಾನಗಳಾದ ಬಾಣಗಳನ್ನು ಪ್ರಯೋಗಿಸಿದನು. ಲಕ್ಷ್ಮಣನು ಆ ಬಾಣ ಗಳನ್ನು ಪ್ರಯೋಗಿಸುತ್ತಿರುವಾಗಲೇ ಮಹಾತೇಜಸ್ವಿಯಾದ ರಾವಣನು ಅವುಗಳನ್ನು ಆಕಾಶದಲ್ಲಿಯೇ ತನ್ನ ಬಾಣಗಳಿಂದ ನಿವಾರಿಸುತ್ತ ಬಂದನು. ಆಗ ರಾವಣನು ತನ್ನ ಹಸ್ತಲಾಘವದಿಂದ, ಲಕ್ಷ್ಮಣನು ಬಿಟ್ಟ ಬಾಣ ಗಳಲ್ಲಿ ಒಂದು ಬಾಣವನ್ನು ಒಂದೇ ಬಾಣದಿಂದಲೂ, ಮೂರು ಬಾಣ ಗಳನ್ನು ಮೂರು ಬಾಣಗಳಿಂದಲೂ, ಹತ್ತುಬಾಣಗಳನ್ನು ಹತ್ತುಬಾಣಗ ಳಿಂದಲೂ ಭೇದಿಸಿ, ಆ ಬಾಣಗಳೆಷ್ಟನ್ನೂ ಅಷ್ಟಷ್ಟೇ ಬಾಣಗಳಿಂದ ನಿಗ್ರ ಹಿಸುತ್ತ ಬಂದನು. ಹೀಗೆ ಜಯಶೀಲನಾದ ರಾವಣನು ಲಕ್ಷ್ಮಣನ ಬಾಣಗಳಲ್ಲಿ ಒಂದಾದರೂ ತನ್ನ ಮೈಗೆ ಮುಟ್ಟದಂತೆ ತನ್ನ ಬಾಣಗಳಿಂದ ತಡೆದು, ಆ ಲಕ್ಷ್ಮಣನು ತನ್ನ ಮುಂದೆ ನಿಂತಿದ್ದರೂ ಅವನನ್ನು ಲಕ್ಷ್ಯಮಾಡದೇ ದಾಟಿ ಬಂದು ಪರ್ವತದಂತೆ ತನಗಿದಿರಾಗಿ ಸ್ಥಿರವಾಗಿ ನಿಂತಿದ್ದ ರಾಮನನ್ನಿದಿರಿಸಿ, ಕೋಪದಿಂದ ಕೆಂಪೇರಿದ ಕಣ್ಣುಳ್ಳವನಾಗಿ ಆತನಮೇಲೆ ಬಾಣವರ್ಷವನ್ನು ಕರೆದನು. ಆಗ ರಾಮನು, ರಾವಣನ ಬಿಲ್ಲಿನಿಂದ ಮಳೆಯು ಸುರಿಯುವಂತೆ ಎಡೆಬಿಡದೆ ಬಾಣಗಳು ಬರುವು ದನ್ನು ನೋಡಿ, ತನ್ನ ಬತ್ತಳಿಕೆಗೆ ಕೈನೀಡಿ, ಕತ್ತಿಯಂತೆ ಅಲಗುಳ್ಳ ಬಾಣಗಳನ್ನು ಕೈಗೆತ್ತಿಕೊಂಡು, ದೇದೀಪ್ಯಮಾನಗಳಾಗಿಯೂ, ಕೋಪ ಗೊಂಡ ಸರ್ಪಗಳಂತೆ ಮಹಾಭಯಂಕರಗಳಾಗಿಯೂ ತನಗಿದಿರಾಗಿ ಬರು ತ್ತಿದ್ದ ರಾವಣ ಬಾಣಗಳನ್ನು ತನ್ನ ತೀಕ್ಷ್ಣ ಬಾಣಗಳಿಂದ ಕತ್ತರಿಸುತ್ತ ಬಂದನು. ಹೀಗೆ ರಾಮನು ರಾವಣನನ್ನೂ, ರಾವಣನು ರಾಮನನ್ನೂ ವೇಗದಿಂದಿ ರಿಸಿ, ಒಬ್ಬರ ಮೇಲೊಬ್ಬರು ಬಗೆಬಗೆಯ ತೀಕ್ಷ್ಣ ಬಾಣಗಳನ್ನು ಕರೆಯುತ್ತಿ ದ್ದರು. ಇದುವರೆಗೆ ಹಿಂದೆ ಯಾವ ಯುದ್ಧದಲ್ಲಿಯೂ ಭಂಗವೆಂಬುದನ್ನೇ

ಕಂಡರಿಯದ ಆ ಮಹಾವೀರರಿಬ್ಬರೂ, ಒಬ್ಬರ ಬಾಣಗಳನ್ನೊಬ್ಬರು ನಿವಾರಿಸುತ್ತ ಬಹಳಹೊತ್ತಿನವರೆಗೆ ಅತಿವಿಚಿತ್ರವಾಗಿ, ಎಡದಿಂದ ಬಲಕ್ಕೂ ಬಲದಿಂದ ಎಡಕ್ಕೂ, ಚಕ್ರಾಕಾರವಾಗಿಯೂ, ವಿಚಿತ್ರಗತಿಯಿಂದ ಸುತ್ತುತ್ತ ಹಟದಿಂದ ಹೋರಾಡಿದರು. ಯಮನೂ, ರುದ್ರನೂ ಯುದ್ಧಕ್ಕೆ ನಿಂತಂತೆ ಅವರಿಬ್ಬರೂ, ಭಯಂಕರಸ್ವರೂಪವುಳ್ಳವರಾಗಿ ಮೇಲೆಮೇಲೆ ಬಾಣಗಳನ್ನು ಪ್ರಯೋಗಿಸುತ್ತ ಎಡೆಬಿಡದೆ ಹೋರಾಡುವುದನ್ನು ನೋಡಿ, ಸಮಸ್ತಭೂತಗಳೂ ಭಯದಿಂದ ನಡುಗಿದುವು. ಮಳೆಗಾಲದಲ್ಲಿ ಮಿಂಚಿನಿಂದ ಕೂಡಿದ ಮೇಘಗಳು ಹೇಗೋಹಾಗೆ ಚಿತ್ರ ವಿಚಿತ್ರಗಳಾದ ಬಾಣಗಳು ದಟ್ಟವಾಗಿ ತುಂಬಿ ಆಕಾಶವನ್ನು ಮರೆಸಿದುವು. ಹೀಗೆ ಬಾಣಗಳು ಆಕಾಶದಲ್ಲಿ ದಟ್ಟವಾಗಿ ತುಂಬಿದ್ದರೂ, ಅಲ್ಲಲ್ಲಿ ನಡುನಡುವೆ ರಂಧ್ರಗಳು ಕಾಣುತ್ತಿದ್ದುದರಿಂದ, ಅಂತರಿಕ್ಷಕ್ಕೆ ಗವಾಕ್ಷಗಳನ್ನಿಟ್ಟಂತೆ ತೋರುತ್ತಿತ್ತು. ಸೂರ್ಯನು ಅಸ್ತಂಗತನಾದಮೇಲೆ ಮಹಾಮೇಘಗಳು ಸೇರಿಬಂದು ದೊಡ್ಡ ಮಳೆಯನ್ನು ಕರೆದು ಕತ್ತಲೆಕವಿಸುವಂತೆ, ರಾಮರಾವಣರಿಬ್ಬರೂ ಹಟದಿಂದ ಯುದ್ಧಮಾಡುತ್ತ ಮಹಾವೇಗವುಳ್ಳವುಗಳಾಗಿಯೂ, ಅತಿ ತೀಕ್ಷ್ಣಗಳಾಗಿಯೂ, ಹದ್ದಿನ ಗರಿಗಳುಳ್ಳದಾಗಿಯೂ, ಕ್ರೂರವಾದ ಅಲಗುಳ್ಳದಾಗಿಯೂ ಇರುವ ಬಾಣಗಳನ್ನು ಎಡೆಬಿಡದೆ ಪ್ರಯೋಗಿಸಿ, ಆ ಯುದ್ಧ ಭೂಮಿಯೆಲ್ಲವೂ ಕೇವಲ ಗಾಢಾಂಧಕಾರದಿಂದ ಭಯಂಕರವಾಗುವಂತೆ ಮಾಡಿದರು. ಪೂರ್ವದಲ್ಲಿ ಇಂದ್ರವೃತ್ರರುಹೇಗೋಹಾಗೆ, ಆರಾಮರಾವಣರಿಬ್ಬರೂ ಒಬ್ಬರನ್ನೊಬ್ಬರು ಕೊಲ್ಲಬೇಕೆಂಬ ಹಟದಿಂದ ಮಹಾಭಯಂಕರವಾದ ಯುದ್ಧವನ್ನು ನಡೆಸಿದರು. ಈಗ ಆ ರಾಮರಾವಣರಿಬ್ಬರೂ ನಡೆಸಿದ ಯುದ್ಧವು ಬೇರೆಯಾರಿಗೂ ಸಾಧ್ಯವಾದುದಲ್ಲ. ಆ ಯುದ್ಧದ ರೀತಿಯು ಹೀಗೆಂದು ಚಿಂತಿಸುವುದಕ್ಕೂ ಬೇರೊಬ್ಬರಿಗೆ ಸಾಧ್ಯವಿಲ್ಲ. ಇಬ್ಬರೂ ಶಸ್ತ್ರವಿಶಾರದರು! ಬ್ಬರೂ ಮಹಾಸ್ತ್ರಗಳನ್ನು ಬಲ್ಲವರು! ಆದುದರಿಂದಅವರಿಬ್ಬರೂ ಸಮಬಲದಿಂದಲೇ ಹೋರಾಡಿದರು. ಸಮುದ್ರದಲ್ಲಿ ವಾಯುವೇಗವನ್ನನು ಸರಿಸಿ ತರಂಗಗಳು ಹೊರಡುವಂತೆ, ಅವರಿಬ್ಬರೂ ಯಾವ ಯಾವ ಮಂಡಲಗತಿಯಿಂದ ತಿರುಗುತ್ತಿದ್ದರೋ ಆಯಾ ಗತಿಗಳನ್ನನುಸರಿಸಿ ಆಯಾ ಕಡೆಗಳಿಂದಲೇ ಬಾಣಪರಂಪರೆಗಳು ಹೊರಡುತ್ತಿದ್ದುವು. ಈ ನಡುವೆ ಲೋಕ ರಾವಣನಾದ ರಾವಣನು, ತನ್ನ ಹಸ್ತಲಾಘವದಿಂದ ಬಾಣ ಪ್ರಯೋಗಮಾಡುತ್ತಿದ್ದ ಹಾಗೆಯೇ ರಾಮನ ಲಲಾಟದಲ್ಲಿ ಕೆಲವು ಬಾಣ

ಗಳನ್ನು ನಾಟಿದನು. ಕರೀನ್ನೈದಿಲೆಯ ದಳದಂತೆ ಕಾಂತಿವಿಶಿಷ್ಟಗಳಾಗಿ, ಭಯಂಕರವಾದ ರಾವಣನ ಧನುಸ್ಸಿನಿಂದ ಹೊರಟುಬಂದ ಆ ತೀಕ್ಷ್ಣ ಬಾಣಗಳು ತನ್ನ ಹಣೆಯಲ್ಲಿ ನಾಟಿದರೂ, ರಾಮನು ಅದರಿಂದ ಸ್ವಲ್ಪ ಮಾತ್ರವೂ ಧೈರ್ಯಗೆಡದೆ, ರೌದ್ರಾಸ್ತ್ರಮಂತ್ರವನ್ನು ಜಪಿಸಿ, ಅದಕ್ಕೆ ತಕ್ಕ ಬಾಣಗಳನ್ನು ಸಂಧಾನಮಾಡಿ ಪ್ರಯೋಗಿಸಲು, ಅವು ವೇಗದಿಂದ ಹೊರಟು, ಮೇಘದಂತೆ ಕಪ್ಪಾದ ರಾವಣನ ಅಭೇದ್ಯಕವಚಕ್ಕೆ ತಾಗಿ ಆ ಕವಚ ಪ್ರಭಾವದಿಂದ ಅವನ ಮೈಗೆ ಸ್ವಲ್ಪಮಾತ್ರವೂ ನೋವನ್ನುಂಟುಮಾಡ ಲಾರದೆ, ವಿಫಲವಾಗಿ ಕೆಳಗೆ ಬಿದ್ದುವು. ಇದನ್ನುನೋಡಿ, ಸರ್ವಾಸ್ತ್ರ ವಿಶಾರದನಾದ ರಾಮನು, ತಿರುಗಿ ಬೇರೆ ಬಾಣಗಳನ್ನು ತೆಗೆದು, ಮಹಾಸ್ತ್ರ ಮಂತ್ರದಿಂದಭಿಮಂತ್ರಿಸಿ, ರಥದಲ್ಲಿದ್ದ ರಾವಣನಮೇಲೆ ಪ್ರಯೋಗಿಸಿದನು. ಅಸ್ತ್ರರೂಪಗಳಾದ ಆ ಬಾಣಗಳೆಲ್ಲವೂ ರಾವಣನ ಬಾಣಗಳನ್ನು ಭೇದಿಸಿ, ಐದುಹೆಡೆಯ ಸರ್ಪಗಳಂತೆ ಬುಸುಗುಟ್ಟುತ್ತ ಮುಂದೆ ಬರುವಷ್ಟರಲ್ಲಿ ರಾವಣನಿಂದ ನಿವಾರಿಸಲ್ಪಟ್ಟು ಭೂಮಿಯಲ್ಲಿ ನಾಟಿದುವು. ಆ ಮೇಲೆ ರಾವಣನು ರಾಮನಕಾರ್ಯಕ್ಕಾಗಿ ಕೋಪಗೊಂಡು, ಭಯಂಕರವಾದ ಅಸು ರಾಸ್ತ್ರವನ್ನು ಪ್ರಯೋಗಿಸಿದನು. ಈ ಅಸ್ತ್ರವನ್ನು ಪ್ರಯೋಗಿಸಿದೊಡನೆ ಅದರಿಂದ ಚಿತ್ರವಿಚಿತ್ರಗಳಾದ ಅನೇಕ ಘೋರಬಾಣಗಳು ಶಾಖೆಗಳಾಗಿ ಹೊರಡಲಾರಂಭಿಸಿದುವು. ಅವುಗಳಲ್ಲಿಯೋ ಸಿಂಹದಂತೆ ಮುಖವುಳ್ಳವು ಕೆಲವು! ಹುಲಿಯಂತೆ ಮುಖವುಳ್ಳವು ಕೆಲವು! ಹಾಗೆಯೇ ರಣಹದ್ದು, ಹದ್ದು, ಕಾಗೆ, ಡೇಗೆ, ನರಿ, ತೋಳ ಮುಂತಾದ ಬಗೆಬಗೆಯ ಕ್ರೂರ ಜಂತುಗಳ ಮುಖವುಳ್ಳವು ಕೆಲವು! ಭಯಂಕರವಾಗಿ ಬಾಯನ್ನು ತೆರೆದು ಬರುತ್ತಿ ರುವ ಐದುಹೆಡೆಯ ಸರ್ಪಗಳಂತೆ ಆಕಾರವುಳ್ಳವು ಕೆಲವು! ಹೀಗೆ ಇನ್ನೂ ಬೇರೆ ಬೇರೆ ಆಕಾರವುಳ್ಳ ಅನೇಕ ಬಾಣಗಳು ಹೊರಟುವು. ಮಾಯಾವಿಯಾದ ಆ ರಾವಣನು, ಕೋಪದಿಂದ ಸರ್ಪದಂತೆಬುಸುಗುಟ್ಟುತ್ತ, ತನ್ನ ಅಸುರಾಸ್ತ್ರ ಪ್ರಭಾ ವದಿಂದ, ಕತ್ತೆಗಳಂತೆಯೂ, ನಾಯಿಗಳತೆಂಯೂ, ತೋಳಗಳಂತೆಯೂ, ಮೊಸಳೆ ಗಳಂತೆಯೂ, ಮುಖವುಳ್ಳ ಬೇರೆಬೇರೆ ಬಾಣಗಳನ್ನೂ, ಸರ್ಪಮುಖವುಳ್ಳವು ಗಳನ್ನೂ, ಇನ್ನೂನಾನಾವಿಧ ತೀಕ್ಷ್ಣ ಬಾಣಗಳನ್ನೂ ರಾಮನಮೇಲೆ ಪ್ರಯೋ ಗಿಸಿದನು. ಇದನ್ನುನೋಡಿದೊಡನೆ ಶ್ರೀರಾಮನು ಮೊದಲಿಗಿಂತಲೂ ಹೆಚ್ಚಿದ ಯುದ್ಧೋತ್ಸಾಹವುಳ್ಳವನಾಗಿ ಆಗ್ನೇಯಾಸ್ತ್ರವನ್ನು ಪ್ರಯೋಗಿಸಿದನು. ಈರಾಮನ

ಆಗ್ನೇಯಾಸ್ತ್ರಪ್ರಭಾವದಿಂದ ಮೊದಲಿಗಿಂತಲೂ ವಿಚಿತ್ರಗಳಾದ ಬಗೆಬಗೆಯ ಬಾಣಗಳು ಹೊರಡಲಾರಂಭಿಸಿದುವು. ರಾಮನು ಆ ಅಸ್ತ್ರವನ್ನು ಪ್ರಯೋಗಿಸಿದೊಡನೆ, ಅಗ್ನಿಯಂತೆ ಧಗಧಗಿಸಿ ಜ್ವಲಿಸುವ ಮುಖವುಳ್ಳವುಗಳೂ, ಸೂರ್ಯಚಂದ್ರ ಮುಖವುಳ್ಳವುಗಳೂ, ಅರ್ಧಚಂದ್ರಮುಖವುಳ್ಳವುಗಳೂ, ಧೂಮಕೇತುಗಳಂತೆಯೂ, ಗ್ರಹನಕ್ಷತ್ರಗಳಂತೆಯೂ, ಮಹೋಲ್ಕೆಗಳಂತೆಯೂ ಮುಖವುಳ್ಳ ಬಾಣಗಳೂ, ಮಿಂಚಿನುರಿಯಂತಿರುವ ಬಾಣಗಳೂ, ಇನ್ನೂ ಬಗೆಬಗೆಯ ತೀಕ್ಷ್ಣ ಬಾಣಗಳೂ ಹೊರಟುವು. ರಾಮನ ಈ ಆಗ್ನೇಯಾಸ್ತ್ರವು ಬಂದು ತಾಗಿದೊಡನೆ ರಾವಣನ ಅಸುರಾಸ್ತ್ರದಿಂದ ಹುಟ್ಟಿದ ಬಾಣಗಳೆಲ್ಲವೂ ಆಕಾಶದಲ್ಲಿಯೇ ಭಂಗಹೊಂದಿ ಸಾವಿರಾರು ತುಂಡುಗಳಾಗಿ ಬಿದ್ದುವು. ಹೀಗೆ ಮಹಾಮಹಿಮೆಯುಳ್ಳ ರಾಮನಿಂದ ರಾವಣನ ಅಸುರಾಸ್ತ್ರವು ಪ್ರತಿಹತವಾದುದನ್ನು ನೋಡಿ, ಕಾಮರೂಪಿಗಳಾದ ಸುಗ್ರೀವಾದಿ ವಾನರರೆಲ್ಲರೂ ರಾಮನನ್ನು ಸುತ್ತಿ ಮುತ್ತಿ ಸಂತೋಷದಿಂದ ಸಿಂಹನಾದಮಾಡಿದರು. ಆಗ ರಾಮನಿಗೆ ಕೂಡ ರಾವಣನ ಅಸುರಾಸ್ತ್ರವು ಭಗ್ನವಾದುದನ್ನು ನೋಡಿ ಸಂತೋಷವುಂಟಾಯಿತು ! ವಾನರರೆಲ್ಲರೂ ಸಂತೋಷಗೊಂಡು ಮಹಾಧ್ವನಿಯಿಂದ ಕೂಗಿ ಕುಣಿದಾಡುತ್ತಿದ್ದರು.

ಇಲ್ಲಿಗೆ ನೂರನೆಯ ಸರ್ಗವು.

ರಾಮನು ಸ್ವಲ್ಪ ವಿಶ್ರಾಂತಿಯನ್ನು ಹೊಂದಿದಾಗ ಲಕ್ಷ್ಮಣವಿಭೀಷಣರಿಬ್ಬರೂ ರಾವಣನ ರಥರಥಾಶ್ವಸಾರಥಿಗಳನ್ನು ಧ್ವಂಸಮಾಡಿದುದು. ರಾವಣನು ವಿಭೀಷಣನ ಮೇಲೆ ಪ್ರಯೋಗಿಸಿದ ಶಕ್ತಿಯನ್ನು ಲಕ್ಷ್ಮಣನು ಖಂಡಿಸಿದುದು. ರಾವಣನು ಮಯನಿರ್ಮಿತವಾದ ಅಮೋಘಶಕ್ತಿಯಿಂದ ಲಕ್ಷ್ಮಣನನ್ನು ಮೂರ್ಛೆಹೊಂದಿಸಿದುದು. ರಾಮನು ಲಕ್ಷ್ಮಣನ ಉಪಚಾರಕ್ಕಾಗಿ ಹನುಮದಾದಿಗಳನ್ನು ನಿಯೋಗಿಸಿ, ರಾವಣನನ್ನು ಬಾಣಗಳಿಂದ ಹೊಡೆದುದು. ರಾವಣನ ಪಲಾಯನವು.

ಆಗ ರಾಕ್ಷಸರಾಜನಾದ ರಾವಣನು, ತನ್ನ ಅಸುರಾಸ್ತ್ರವು ಪ್ರತಿಹತವಾದುದನ್ನು ನೋಡಿ ಮೊದಲಿಗಿಂತಲೂ ಇಮ್ಮಡಿಯಾದ ಕೋಪ

ವನ್ನು ಹೊಂದಿ, ಬೇರೊಂದು ಮಹಾಸ್ತ್ರವನ್ನು ಹೂಡುವುದಕ್ಕೆ ನಿಶ್ಚಯಿಸಿ, ಮಯನಿಂದ ನಿರ್ಮಿತವಾಗಿ, ರುದ್ರದೇವತಾತ್ಮಕವಾದ ಬೇರೊಂದು ಭಯಂಕರಾಸ್ತ್ರವನ್ನು ರಾಮನ ಮೇಲೆ ಪ್ರಯೋಗಿಸುವುದಕ್ಕಾಗಿ ಧನುಸ್ಸಿನಲ್ಲಿ ಬಾಣ ಸಂಧಾನಮಾಡಿದನು. ಆಗಲೇ ಅವನ ಧನುಸ್ಸಿನಿಂದ ಅತ್ಯಂತ ದೇದೀಪ್ಯಮಾನಗಳಾಗಿ ವಜ್ರಸಾರವುಳ್ಳ ಶೂಲಗಳೂ, ಮುಸಲಗಳೂ, ಪರಂಪರೆಯಾಗಿ ಹೊರಡಲಾರಂಭಿಸಿದುವು. ಪ್ರಳಯ ಕಾಲದಲ್ಲಿ ಮಹಾವಾತಗಳು ಹೊರಡುವಂತೆ ಅತಿತೀಕ್ಷ್ಣಗಳಾಗಿಯೂ, ನಾನಾವಿಧಗಳಾಗಿಯೂ ಇರುವ ವಜ್ರಕೂಟ ಮುದ್ಗರಾದ್ಯಾಯುಧಗಳು ಮಹಾವೇಗದಿಂದ ಹೊರಟುವು. ಆಗ ಶ್ರೀಮಂತನಾಗಿಯೂ ದಿವ್ಯಾಸ್ತ್ರವಿಶಾರದನಾಗಿಯೂ ಇರುವ ರಾಮನು, ಮಹತ್ತಾದ ಗಾಂಧರ್ವಾಸ್ತ್ರವನ್ನು ಬಿಟ್ಟು ಅದರಿಂದ ಆ ರೌದ್ರಾಸ್ತ್ರವನ್ನು ಭಂಗಪಡಿಸಿದನು. ಮಹಾತ್ಮನಾದ ರಾಮನಿಂದ ತನ್ನ ರೌದ್ರಾಸ್ತ್ರವು ಪ್ರತಿಹತವಾದುದನ್ನು ನೋಡಿ ರಾವಣನು ಕೋಪದಿಂದ ಸೌರಾಸ್ತ್ರವನ್ನು ಪ್ರಯೋಗಿಸಿದನು. ಇದನ್ನು ಪ್ರಯೋಗಿಸಿದೊಡನೆ, ಭಯಂಕರವಾದ ಆ ರಾವಣನ ಬಿಲ್ಲಿನಿಂದ ಧಗಧಗಿಸಿ ಜ್ವಲಿಸುತ್ತಿರುವ ದೊಡ್ಡ ದೊಡ್ಡ ಚಕ್ರಾಯುಧಗಳು ಹೊರಟುವು. ದೇದೀಪ್ಯಮಾನಗಳಾಗಿಯೂ, ಚಂದ್ರಸೂರ್ಯಾದಿಗ್ರಹಗಳಿಗೆ ಸಮಾನಗಳಾಗಿಯೂ ಇರುವ ಆ ಚಕ್ರಾಯುಧಗಳು ಆಕಾಶದ ನಾನಾಭಾಗಗಳಿಗೂ ಹರಡಿಕೊಂಡು, ಅಂತರಿಕ್ಷದಿಂದುದಿರಿದ ಚಂದ್ರಸೂರ್ಯಾದಿಗ್ರಹಗಳಿಂದ, ದಿಕ್ಕುಗಳೆಲ್ಲವೂ ಧಗಧಗಿಸಿ ಮೆರೆಯುವಂತೆ ತೋರಿತು. ಆಗ ರಾಮನು ಸೇನಾಮುಖದಲ್ಲಿ ನಿಂತು, ರಾವಣನಿಂದ ಪ್ರಯುಕ್ತಗಳಾದ ಆ ಚಕ್ರಗಳನ್ನೂ ಮತ್ತು ಚಿತ್ರವಿಚಿತ್ರಗಳಾದ ಇತರಾಯುಧಗಳನ್ನೂ ತನ್ನ ಬಾಣಸಮೂಹಗಳಿಂದ ಖಂಡಿಸಿದನು ಹೀಗೆ ಸೌರಾಸ್ತ್ರವೂ ರಾಮನಿಂದ ಪ್ರತಿಹತವಾದುದನ್ನು ನೋಡಿ ರಾವಣನು, ಬೇರೆ ಹತ್ತು ತೀಕ್ಷ್ಣ ಬಾಣಗಳನ್ನು ತೆಗೆದು, ಅವುಗಳನ್ನು ರಾಮನ ಒಂದೊಂದು ಮರ್ಮಸ್ಥಾನಕ್ಕೂ ಗುರಿಹಿಡಿದು ವೇಗದಿಂದ ಪ್ರಯೋಗಿಸಿದನು. ರಾವಣನ ಮಹಾ ಧನುಸ್ಸಿನಿಂದ ಹೊರಟ ಈ ಹತ್ತು ಬಾಣಗಳೂ ಬಂದು ತನ್ನ ಮರ್ಮಸ್ಥಾನಗಳಲ್ಲಿ ನಾಟಿದರೂ, ಮಹಾತೇಜಸ್ವಿಯಾದ ರಾಮನು ಸ್ವಲ್ಪಮಾತ್ರವೂ ಚಲಿಸದೆ, ಅತ್ಯಂತ ಕುಪಿತನಾಗಿ, ರಾವಣನ ಒಂದೊಂದವಯವವನ್ನೂ ಅನೇಕ ಬಾಣಗಳಿಂದ ಭೇದಿಸಿದನು. ಹೀಗೆ ರಾಮನು ರಾವ

ಣನನ್ನು ತನ್ನ ಬಾಣಗಳಿಂದ ಬಹಳವಾಗಿ ನೋಯಿಸಿ, ಕ್ಷಣಕಾಲದ ವರೆಗೆ ವಿಶ್ರಾಂತಿಗಾಗಿ ಸುಮ್ಮನೆ ನಿಂತಿರುವಷ್ಟರಲ್ಲಿ, ಪರಂತಪನಾದ ಲಕ್ಷ್ಮ ಣನು ಮಹಾ ವೇಗವುಳ್ಳ ಏಳು ಬಾಣಗಳನ್ನು ತನ್ನ ಬತ್ತಳಿಕೆಯಿಂದ ತೆಗೆದು, ಅವುಗಳಿಂದ ಮನುಷ್ಯನ ತಲೆಯ ಗುರುತುಳ್ಳ ರಾವಣನ ಧ್ವಜವನ್ನು ನೂರಾರುತುಂಡುಗಳಾಗಿ ಕತ್ತರಿಸಿ ಕೆಡಹಿದನು. ಮತ್ತೊಂದು ಬಾಣವನ್ನು ರಾವಣನ ಸಾರಥಿಗೆ ಗುರಿಯಿಟ್ಟು, ಅದರಿಂದ ಕುಂಡಲಾ ಲಂಕೃತವಾದ ಆತನ ತಲೆಯನ್ನು ಕಡಿದನು. ತಿರುಗಿ ಐದು ತೀಕ್ಷ್ಣ ಬಾಣಗಳನ್ನು ತೆಗೆದು ಆನೆಯ ಸುಂಡಿಲಿನಂತೆ ಪೃಥುಲವಾದ ರಾವಣನ ಮಹಾಧನುಸ್ಸನ್ನು ತುಂಡುಮಾಡಿದನು. ಇಷ್ಟರಲ್ಲಿ ವಿಭೀಷಣನೂ ಮುಂದೆ ಬಂದು, ಕಾಲಮೇಘದಂತೆ ಕಪ್ಪಾಗಿಯೂ, ಪರ್ವತಸಮಾನಗಳಾಗಿಯೂ ಇದ್ದ ರಾವಣನ ರಥದ ಕುದುರೆಗಳನ್ನು ತನ್ನ ಗದೆಯಿಂದ ಬಡಿದು ಕೊಂದನು. ರಥಾಶ್ವಗಳು ಸತ್ತು ಬಿದ್ದೊಡನೆ ಮಹಾ ವೇಗಶಾಲಿಯಾದ ರಾವಣನು, ತನ್ನ ಮಹಾರಥದಿಂದ ತಟ್ಟನೆ ಹಾರಿ ಕೆಳಗಿಳಿದು ತನ್ನ ತಮ್ಮನಾದ ವಿಭೀಷಣನ ಮೇಲೆ ತೀವ್ರ ಕೋಪವನ್ನು ತೋರಿಸುತ್ತ, ವಜ್ರ ದಂತೆ ದೇದೀಪ್ಯಮಾನವಾಗಿ ಉರಿಯುತ್ತಿದ್ದ ಒಂದು ದೊಡ್ಡ ಶಕ್ತ್ಯಾ ಯುಧವನ್ನು ತೆಗೆದು, ಆ ವಿಭೀಷಣನ ಮೇಲೆ ಬೀಸಿದನು. ಈ ಮಹಾ ಶಕ್ತಿಯು ವಿಭೀಷಣನನ್ನು ಸಮೀಪಿಸುವಷ್ಟರಲ್ಲಿಯೇ, ಲಕ್ಷ್ಮಣನು ಅದನ್ನು ತನ್ನ ಮೂರು ಬಾಣಗಳಿಂದ ಭೇದಿಸಿಬಿಟ್ಟನು. ಇದನ್ನು ನೋಡಿ ವಾನರರೆಲ್ಲರೂ ಸಂತೋಷದಿಂದ ಸಿಂಹನಾದ ಮಾಡಿದರು. ಲಕ್ಷ್ಮಣನ ಬಾಣಗಳು ತಾಗಿದೊಡನೆ ಸುವರ್ಣಮಾಲಿಕೆಯಿಂದಲಂಕೃತವಾದ ಆ ಶಕ್ತಿಯು, ಮೂರು ತುಂಡಾಗಿ ಮುರಿದು, ಬೆಂಕಿಯ ಕಿಡಿಗಳನ್ನು ಕೆದ ರುತ್ತ ಆಕಾಶದಿಂದ ಕೊಳ್ಳಿಗಳುದಿರಿದಂತೆ ಕೆಳಗೆ ಬಿದ್ದಿತು. ಆಗ ರಾವ ಣನು ಮೀತಿಮೀರಿ ಕೋಪಗೊಂಡು, ಚಂದನಾದಿಗಳಿಂದಲಂಕೃತವಾಗಿಯೂ ಯಮನಿಂದಲೂ ತಡೆಯಲಸಾಧ್ಯವಾಗಿಯೂ, ಸಹಜವಾದ ತೇಜಸ್ಸಿನಿಂದ ಜಾಜ್ವಲ್ಯಮಾನವಾಗಿಯೂ ಇದ್ದ ಬೇರೊಂದು ಮಹಾಶಕ್ತಿಯನ್ನು ಕೈಗೆ ತೆಗೆದುಕೊಂಡನು. ಎಂತವರಿಗೂ ತಡೆಯಲಸಾಧ್ಯವಾಗಿ, ದೇವೇಂದ್ರನ ವಜ್ರಾಯುಧದಂತೆ ಕಾಂತಿಯುಕ್ತವಾದ ಆ ಶಕ್ತಿಯನ್ನು ರಾವಣನು ತನ್ನ ಶಕ್ತಿಮೀರಿ ವೇಗದಿಂದ ತಿರುಗಿಸುತ್ತಿರುವಾಗಲೇ, ಅದರಿಂದ ಮಹಾಜ್ವಾಲೆ

ಗಳು ಹೊರಟು ಅತಿಭಯಂಕರವಾಗಿ ಕಾಣಿಸಿತು. ಇಷ್ಟರಲ್ಲಿ ವೀರನಾದ ಲಕ್ಷ್ಮಣನು ಅದರಿಂದ ವಿಭೀಷಣನಿಗೆ ಪ್ರಾಣಸಂಶಯವುಂಟಾಗಬಹುದೆಂದೆಣಿಸಿ ವೇಗದಿಂದ ಮುಂದೆ ಬಂದು, ವಿಭೀಷಣನಿಗಡ್ಡಲಾಗಿ ನಿಂತನು. ಮತ್ತು ವಿಭೀಷಣನಿಗೆ ಆ ಮಹಾಪಾಯವನ್ನು ತಪ್ಪಿಸುವುದಕ್ಕಾಗಿ ತನ್ನ ಬಿಲ್ಲನ್ನೆಳೆದು, ಶಕ್ತಿಯನ್ನು ಹಿಡಿದು ನಿಂತಿದ್ದ ರಾವಣನಮೇಲೆ ಎಡೆಬಿಡದೆ ಬಾಣಗಳನ್ನು ಕರೆಯುತ್ತಿದ್ದುದರಿಂದ ರಾವಣನಿಗೆ ವಿಭೀಷಣನ ಮೇಲೆ ತನ್ನ ಕೋಪವನ್ನು ತೀರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲದೆ ಹೋಯಿತು. ಅದರಿಂದ ರಾವಣನು ವಿಭೀಷಣನನ್ನು ಕೊಲ್ಲಬೇಕೆಂಬ ಪ್ರಯತ್ನವನ್ನು ಅಷ್ಟಕ್ಕೇ ನಿಲ್ಲಿಸಿ ಆತನನ್ನು ಅಪಾಯದಿಂದ ತಪ್ಪಿಸುವುದಕ್ಕಾಗಿ ಮುಂದೆ ಬಂದು ನಿಂತಿದ್ದ ಲಕ್ಷ್ಮಣನನ್ನು ನೋಡಿ ಕೋಪದಿಂದ, "ಲಕ್ಷ್ಮಣಾ! ಶಹಬಾಸ್! ನಿನ್ನ ಶಕ್ತಿಗೆ ಮೆಚ್ಚಿದೆನು! ಆದರೇನು! ಈಗ ನಿನ್ನಷ್ಟಕ್ಕೆ ನೀನು ತಟಸ್ಥನಾಗಿರದೆ, ಬಲದಿಂದ ಕೊಬ್ಬಿ ವಿಭೀಷಣನನ್ನು ಅಪಾಯದಿಂದ ತಪ್ಪಿಸುವುದಕ್ಕಾಗಿ ಬಂದೆಯಲ್ಲವೇ? ಆ ರಾಕ್ಷಸನನ್ನು ಬಿಟ್ಟಿರುವೆನು. ಈಗ ಅದೇ ಶಕ್ತಿಯನ್ನು ನಿನ್ನ ಮೇಲೆ ಪ್ರಯೋಗಿಸುವೆನು. ಇದುವರೆಗೆ ಎಷ್ಟೋ ಶತ್ರುಗಳನ್ನು ಕೊಂದು ಅವರ ರಕ್ತಚಿಹ್ನಗಳಿಂದ ಕೂಡಿದ ಈ ಮಹಾ ಶಕ್ತಿಯು, ಕಬ್ಬಿಣದ ಗಳಿಯಂತಿರುವ ಈ ನನ್ನ ತೋಳಿನಿಂದ ಪ್ರಯೋಗಿಸಲ್ಪಟ್ಟೊಡನೆ, ನಿನ್ನ ಹೃದಯವನ್ನು ಭೇದಿಸಿ, ರಕ್ತದಿಂದ ತೊಯ್ದು ನಿನ್ನ ಪ್ರಾಣಗಣನ್ನು ನೀಗಿಸುವುದು" ಎಂದನು. ರಾವಣನು ಈ ಮಾತುಗಳನ್ನು ಹೇಳಿ ಮುಗಿಸುವಷ್ಟರಲ್ಲಿಯೇ ಕೋಪದಿಂದುಕ್ಕುತ್ತ, ಎಂಟುಗಂಟೆಗಳಿಂದ ಕೂಡಿ ಮಹಾಧ್ವನಿಯಿಂದ ಮೊಳಗುತ್ತಿರುವ ಆ ಶಕ್ತಿಯನ್ನು ತಿರುಗಿಸಿ ಲಕ್ಷ್ಮಣನಮೇಲೆ ಪ್ರಯೋಗಿಸಿ ಸಿಂಹನಾದಮಾಡಿದನು. ಆ ಶಕ್ತಿಯನ್ನು ಮಯನು ತನ್ನ ಮಾಯೆಯಿಂದ ತಾನೇ ನಿರ್ಮಿಸಿದ್ದುದರಿಂದ, ಅದು ಎಂತಹ ಶತ್ರುಗಳಲ್ಲಿಯೂ ವಿಫಲವಾಗದೆ ಅವರನ್ನು ಧ್ವಂಸಮಾಡುವ ಸಹಜವಾದ ತೇಜಸ್ಸಿನಿಂದ ಜ್ವಲಿಸುತ್ತಿರುವುದು. ಇಂತಹ ಮಹಾಘೋರ ಶಕ್ತಿಯನ್ನು ರಾವಣನು ತನ್ನ ಪೂರ್ಣಶಕ್ತಿಯಿಂದ ಬೀಸಿದೊಡನೆ, ಅದು ಸಿಡಿಲಿನಂತೆ ಮಹಾಧ್ವನಿಯಿಂದ ಮೊಳಗುತ್ತ, ನೆಟ್ಟಗೆ ಲಕ್ಷ್ಮಣನಿಗಿದಿರಾಗಿ ಬಂದಿತು. ಅದು ಬರುತ್ತಿರುವಾಗಲೇ ಶ್ರೀರಾಮನು ಅತಿ ಭಯಾ

ಕರವಾದ ಅದರ ಆರ್ಭಟವನ್ನು ನೋಡಿ ಶಂಕಿತನಾಗಿ "ಲಕ್ಷ್ಮಣನಿಗೆ ಶುಭವಾಗಲಿ" ಎಂದು ತನ್ನ ತಮ್ಮನಿಗೆ ಮಂಗಳಾಶಾಸನವನ್ನು ಮಾಡಿ ಇತ್ತಲಾಗಿ ಆ ಶಕ್ತಿಯನ್ನು ನೋಡಿ, "ಈಗ ಕೊಲ್ಲಬೇಕೆಂದು ಬಂದಿರುವ ನಿನ್ನ ಪ್ರಯತ್ನವು ವಿಫಲವಾಗಲಿ" ಎಂದು ಹೇಳಿದನು. ರಾವಣನು ಕ್ರುದ್ಧನಾಗಿ ಸರ್ಪದಂತಿರುವ ಆ ಶಕ್ತಿಯನ್ನು ಬಿಟ್ಟಾಗ, ಆ ಶಕ್ತಿಯು ಎಂತಹ ಶತ್ರುವನ್ನಾದರೂ ಕ್ಷಣಮಾತ್ರದಲ್ಲಿ ಸುಟ್ಟುಭಸ್ಮಮಾಡಬಲ್ಲು ದಾಗಿದ್ದರೂ, ರಾಮನು ತನ್ನ ಶಾಪವಾಕ್ಯದಿಂದ ಅದನ್ನು ವ್ಯರ್ಥವಾಗಿ ಮಾಡಿದುದರಿಂದ ಅದು ಲಕ್ಷ್ಮಣನನ್ನು ಪೂರ್ಣವಾಗಿ ದಹಿಸಲಾರದೆ, ಅವನ ಎದೆಯಲ್ಲಿ ನಾಟಿತು. ರಾವಣನ ಬಾಹುಬಲದಿಂದ ಪ್ರಯುಕ್ತವಾಗಿ ವಾಸುಕಿಯ ನಾಲಗೆಯಂತೆ ಉರಿಯುತ್ತಿದ್ದ ಆ ಶಕ್ತಿಯು ಲಕ್ಷ್ಮಣನ ಎದೆಯಲ್ಲಿ ಬಹಳ ಆಳಕ್ಕಿಳಿದು ನಾಟಿದೊಡನೆ ಅವನ ವಕ್ಷಸ್ಥಳವು ಭೇದಿಸಿದಂತಾಯಿತು. ಆಗಲೇ ಮೈಮರೆತು ಕೆಳಗೆಬಿದ್ದನು. ಆಗ ರಾಮನೂ ಲಕ್ಷ್ಮಣನ ಪಕ್ಕದಲ್ಲಿ ನಿಂತಿದ್ದುದರಿಂದ, ಲಕ್ಷ್ಮಣನಿಗುಂಟಾದ ಆ ಅವ ಸ್ಥೆಯನ್ನು ನೋಡಿ ಭ್ರಾತೃವಾತ್ಸಲ್ಯದಿಂದ ಅವನ ಮನಸ್ಸಿಗೆ ಮಹಾ ವ್ಯಸನವುಂಟಾಯಿತು. ಅವನ ಕಣ್ಣುಗಳಲ್ಲಿ ಪಳಪಳನೆ ನೀರು ಸುರಿ ಯಿತು. ಸ್ವಲ್ಪ ಹೊತ್ತಿನವರೆಗೆ ಮುಂದೆ ಮಾಡಬೇಕಾದ ಕಾರ್ಯವೇ ನೆಂದು ತನಗೆ ತಾನೇ ಚಿಂತಿಸುತ್ತಿದ್ದು, ಕೊನೆಗೆ ಪ್ರಳಯಕಾಲಾಗ್ನಿ ಯಂತೆ ಮಹಾಕೋಪವನ್ನು, ತೋರಿಸಲಾರಂಭಿಸಿದನು. ಆಗ ರಾಮನು ತನ್ನಲ್ಲಿ ತಾನು "ಹೇಗಿದ್ದರೂ ಇದು ದುಃಖಿಸುವುದಕ್ಕೆ ಸಮಯವಲ್ಲ" ವೆಂದು ನಿಶ್ಚಯಿಸಿದನು. ರಾವಣನು ಮೊದಲು ತನ್ನ ಪ್ರಿಯಪತ್ನಿಯಾದ ಸೀತೆಯನ್ನು ಕದ್ದುತಂದುದೊಂದು; ಈಗ ಶಕ್ತಿಯಿಂದ ತನ್ನ ತಮ್ಮನಾದ ಲಕ್ಷ್ಮಣನನ್ನು ಮೂರ್ಛೆಗೊಳಿಸಿದುದೊಂದು; ಇವೆರಡನ್ನು ನೆನೆಸಿ ಕೊಂಡ ಮೇಲೆ ಸರ್ವವಿಧಗಳಿಂದಲೂ ಹೇಗಾದರೂ ಪ್ರಯತ್ನಪಟ್ಟು ಆ ರಾವಣನನ್ನು ಕೊಂದೇ ತೀರಬೇಕೆಂದು ಅವನೊಡನೆ ಪ್ರಬಲವಾದ ಯುದ್ಧಕ್ಕೆ ನಿರ್ಧರಿಸಿಬಿಟ್ಟನು. ಆ ಯುದ್ಧದಲ್ಲಿ ಲಕ್ಷ್ಮಣನು ರಾವಣನ ಶಕ್ತಿಯಿಂದ ಭಿನ್ನವಾಗಿ, ಸರ್ಪದಿಂದ ಕೂಡಿದ ಪರ್ವತದಂತೆ ಮುಂದೆ ಬಿದ್ದಿರುವುದನ್ನು ನೋಡಿದ ಹಾಗೆಲ್ಲಾ ರಾಮನಿಗೆ ರಾವಣನನ್ನು ಕೊಂದೇ ಬಿಡಬೇಕೆಂಬ ನಿಶ್ಚಯವು ಹುಟ್ಟಿತು. ಅಲ್ಲಿದ್ದ ವಾನರರೆಲ್ಲರೂ ರಾವ

ಣನಿಂದ ಪ್ರಯುಕ್ತವಾದ ಆ ಶಕ್ತಿಯನ್ನು ತಡೆಯುವುದಕ್ಕಾಗಿ ಎಷ್ಟೆಷ್ಟೋ ಪ್ರಯತ್ನವನ್ನು ಮಾಡಿದರು. ಆ ಮಹಾಶಕ್ತಿಗೆ ಸ್ವಭಾವಸಿದ್ಧವಾಗಿದ್ದ ದಾರ್ಢ್ಯದಿಂದಲೂ, ರಾವಣನು ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿ ಪ್ರಯೋಗಿಸಿದುದರಿಂದಲೂ ಇದರ ಮೇಲೆ ಆ ರಾವಣನು ತನ್ನ ಹಸ್ತ ಲಾಘವದಿಂದ ಎಡೆಬಿಡದೆ ಅವರನ್ನು ಬಾಣಸಮೂಹಗಳಿಂದ ಹೊಡೆ ಯುತ್ತಿದ್ದುದರಿಂದಲೂ, ಅಲ್ಲಿದ್ದ ವಾನರರಲ್ಲಿ ಯಾರೊಬ್ಬರಿಗೂ ಅದನ್ನು ತಡೆಯುವುದಕ್ಕೆ ಸಾಧ್ಯವಾಗಲಿಲ್ಲ! ಇಷ್ಟರಲ್ಲಿ ಮಹಾಬಲಾಢ್ಯನಾದ ರಾಮನು ಅತಿ ಕೋಪಾವಿಷ್ಟನಾಗಿ ಬಂದು, ಭಯಂಕರವಾದ ಆ ಶಕ್ತಿ ಯನ್ನು ಎರಡು ಕೈಗಳಿಂದಲೂ ಹಿಡಿದು ಮೆಟ್ಟಿ ಮುರಿದನು. ರಾಮನು ಆ ಶಕ್ತಿಯನ್ನು ಹಿಡಿದು ಮುರಿಯುತ್ತಿರುವಾಗಲೇ, ಬಲಾಢ್ಯನಾದ ರಾವಣನು ರಾಮನ ಸಮಸ್ತಾವಯವಗಳಲ್ಲಿಯೂ ಮರ್ಮಭೇದಕಗಳಾದ ತೀಕ್ಷ್ಣ ಬಾಣಗಳನ್ನು ಪ್ರಯೋಗಿಸಿದನು. ರಾಮನು ಆ ಬಾಣಗಳನ್ನು ಲಕ್ಷ್ಯ ಮಾಡದೆ, ಲಕ್ಷ್ಮಣನನ್ನಾಲಿಂಗಿಸಿಕೊಂಡು, ಹನುಮಂತನನ್ನೂ, ಸುಗ್ರೀ ವನನ್ನೂ, ಇತರ ವಾನರ ವೀರರನ್ನೂ ನೋಡಿ, “ಎಲೈವಾನರೋತ್ತಮರೆ! ಇಲ್ಲಿಯೇ ನೀವು ಲಕ್ಷ್ಮಣನನ್ನು ಸುತ್ತಿಮುತ್ತಿ ಕಾವಲಾಗಿ ರಕ್ಷಿಸುತ್ತಿರಿ! ಬಹುಕಾಲದಿಂದ ಕಾದಿರುವ ಚಾತಕಪಕ್ಷಿಗೆ ಮಳೆಗಾಲದಲ್ಲಿ ಮೇಘವು ಕಾಣಿಸಿದಂತೆ ಬಹುಕಾಲದಿಂದ ನಿರೀಕ್ಷಿಸುತ್ತಿದ್ದ ನನಗೆ ಪರಾಕ್ರಮವನ್ನು ತೋರಿಸುವುದಕ್ಕೆ ತಕ್ಕ ಕಾಲವು ಸಿಕ್ಕಿರುವುದು! ಪಾಪಾತ್ಮನಾಗಿಯೂ, ಪಾಪನಿಶ್ಚಯನಾಗಿಯೂ ಇರುವ ರಾವಣನನ್ನು ಇದೋ! ಈಗಲೇ ನಾನು ತಪ್ಪದೆ ಕೊಂದು ಬರಬೇಕಾಗಿದೆ! ಎಲೆ ವಾನರರೆ! ಕೇಳಿರಿ! ನಿಮ್ಮೆದಿರಿಗೆ ಸತ್ಯವಾಗಿ ಪ್ರತಿಜ್ಞೆ ಮಾಡುವೆನು. ಇದೋ! ಈ ಮುಹೂರ್ತ ದಲ್ಲಿಯೇ—ಬಹಳ ಹೊತ್ತು ಬೇಕಾದುದಿಲ್ಲ. ಬಹು ಶೀಘ್ರದಲ್ಲಿಯೇ ನೀವು ಈ ಲೋಕದಲ್ಲಿ, ರಾವಣನಾಗಲಿ, ರಾಮನಾಗಲಿ ಇವರಿಬ್ಬರಲ್ಲಿ ಯಾವನೋ ಒಬ್ಬನು ಇಲ್ಲದೇ ಹೋಗುವುದನ್ನು ನೋಡುವಿರಿ. ಇದು ನಿಜವು. ಆಹಾ! ಹಿಂದಿನಿಂದಲೂ ನನಗೆ ರಾಜ್ಯವು ಕೈತಪ್ಪಿದುದು! ಕಾಡಿನಲ್ಲಿ ವಾಸ ಮಾಡಿದುದು! ದಂಡಕಾರಣ್ಯದಲ್ಲಿ ಅಲೆದಾಡಿದುದು! ಕೈಹಿಡಿದ ಹೆಂಡತಿ ಯನ್ನು ಪರಪುರುಷನು ಬಂದು ಮುಟ್ಟಿದುದು! ರಾಕ್ಷಸರ ಕೈಗೆ ಸಿಕ್ಕಿ ದುದು! ಇನ್ನೂ ಪಂಪಾತೀರವೇ ಮೊದಲಾದ ಅನೇಕ ಸ್ಥಳಗಳಲ್ಲಿ

ಎಷ್ಟೆಷ್ಟೋ ಕಷ್ಟಕ್ಕೆ ಗುರಿಯಾದುದು! ನರಕದಂತೆ ಮಹಾ ಘೋರ ವಾದ ಈ ಲಕ್ಷ್ಮಣನ ದುಸ್ಥಿತಿಯನ್ನು ನೋಡುವುದು! ಇವೆಲ್ಲವನ್ನೂ ಈಗ ನಾನು ಈ ಯುದ್ಧದಲ್ಲಿ ರಾವಣನನ್ನು ಕೊಂದು ತೀರಿಸಿಕೊಳ್ಳಬೇಕಾಗಿದೆ! ಯಾವನಿಗಾಗಿ ನಾನು ಯುದ್ಧದಲ್ಲಿ ವಾಲಿಯನ್ನು ಕೊಂದು, ಸುಗ್ರೀವ ನನ್ನು ವಾನರರಾಜನನ್ನಾಗಿ ಮಾಡಿ, ವಾನರ ಸೇನೆಯನ್ನು ಇಲ್ಲಿಗೆ ಕರೆತಂ ದೆನೋ, ಯಾವನಿಗಾಗಿ ಸಮುದ್ರದಲ್ಲಿ ಸೇತುವನ್ನು ಕಟ್ಟಿ ಅದನ್ನು ದಾಟಿ ಇಷ್ಟುದೂರಕ್ಕೆ ಬಂದೆನೋ, ಅಂತಹ ಪಾಪಾತ್ಮನಾದ ರಾವಣನು ಈಗ ನನ್ನ ಕಣ್ಣಿಗೆ ಸಿಕ್ಕಿಬಿದ್ದಿರುವನು. ದೃಷ್ಟಿಯಲ್ಲಿ ವಿಷವುಳ್ಳ ಸರ್ಪಗಳ ಕಣ್ಣಿಗೆ ಬಿದ್ದವನು [1]ನೋಟದಿಂದಲೇ ಸಾಯುವಂತೆ, ನನ್ನ ಕಣ್ಣಿಗೆ ಬಿದ್ದಮೇಲೆ ರಾವಣನು ಬದುಕಿಹೋಗುವನೆಂಬ ಮಾತು ಸುಳ್ಳು! ಎಲೈ ವಾನರೋತ್ತಮರೇ! ಇದೋ ನೀವು ಇಲ್ಲಿಯೇ ಪರ್ವತಾಗ್ರದಲ್ಲಿ ಕುಳಿತು. ನನಗೂ, ರಾವಣನಿಗೂ ಈಗ ಜರುಗುವ ಯುದ್ಧವನ್ನು ನೋಡು ತ್ತಿರಿ! ದೇವತೆಗಳೂ, ಋಷಿಗಳೂ, ಗಂಧರ್ವರೂ. ಚಾರಣರೂ ಇನ್ನೂ ಮೂರು ಲೋಕದಲ್ಲಿರುವವರೆಲ್ಲರೂ, ಈ ಯುದ್ಧದಲ್ಲಿ ಈ ರಾಮನ [2]ರಾಮತ್ವ ವನ್ನು (ಜಗದೇಕ ವೀರತ್ವವನ್ನು) ಚೆನ್ನಾಗಿ ನೋಡಲಿ! ತ್ರೈಲೋಕ್ಯ ದಲ್ಲಿರುವ ಸಮಸ್ತ ಚರಾಚರಗಳೂ, ದೇವತೆಗಳೂ, ಗುಂಪುಗುಂಪಾಗಿ ಸೇರಿ ಬಂದು ಈಗ ನಡೆಯುವ ಯುದ್ಧದ ರೀತಿಯನ್ನು ಈ ಪ್ರಪಂಚ ವಿರುವವರೆಗೂ ಪ್ರತಿದಿನವೂ ಬಾಯಿಂದಾಡುತ್ತಿರುವ ಹಾಗೆ ಈಗ ನಾನು ನನ್ನ ಪರಾಕ್ರಮಕಾರ್ಯವನ್ನು ತೋರಿಸುವೆನು ನೋಡಿರಿ!" ಎಂದನು, ಈ ಮಾತನ್ನು ಹೇಳಿ ಮುಗಿಸಿದೊಡನೆ, ರಾಮನು ಸುವರ್ಣಾಲಂಕೃತ ಗಳಾದ ಬಾಣಗಳನ್ನು ತೆಗೆದು ರಾವಣನಮೇಲೆ ಪ್ರಯೋಗಿಸಿದನು. ಅತ್ತ ಲಾಗಿ ರಾವಣನೂ ಕೂಡ, ಮೇಘವು ಮಳೆಯನ್ನು ಕರೆಯುವಂತೆ ರಾಮನ ಮೇಲೆ ಜ್ವಲಿಸುವ ಬಾಣಗಳನ್ನೂ, ಮುಸಲಾದ್ಯಾಯುಧಗಳನ್ನೂ ಎಡೆಬಿಡದೆ ವರ್ಷಿಸಿದನು. ಆಗ ರಾಮರಾವಣರಿಬ್ಬರೂ ಇದಿರಿದಿರಾಗಿ ಪ್ರಯೋಗಿಸುತ್ತಿದ್ದ ಬಾಣಗಳು ಒಂದಕ್ಕೊಂದು ತಾಡಿಸಿ, ಅದರಿಂದ ಹುಟ್ಟಿದ ಮಹಾಧ್ವನಿಯು ಬಹಳ ಪ್ರಬಲವಾಗಿ ಕೇಳಿಸಿತು. ಚಿನ್ನದ ಹಿಡಿ

---

1 ಕೆಲವು ಸರ್ಪಗಳು ತಮ್ಮ ನೋಟದಿಂದಲೇ ಇತರರ ಪ್ರಾಣಗಳನ್ನು ಕೊಲ್ಲುವುವೆಂದು ಪ್ರಸಿದ್ಧಿಯುಂಟು.

2 ರಾಮತ್ವವೆಂದರೆ ರಾಮಾವತಾರಪ್ರಯೋಜನವೆಂದು ಪೂರ್ವಾಚಾರ್ಯರು,

ಗಳಿಂದ ಹೊಳೆಯುತ್ತಿದ್ದ ಅವರಿಬ್ಬರ ಬಾಣಗಳೂ ಒಂದನ್ನೊಂದು ಭೇದಿಸಿ ಪುಡಿಪುಡಿಯಾಗಿ ಉದಿರುತ್ತಿದ್ದುವು. ಇವರಿಬ್ಬರ ಧನುಷ್ಟಂಕಾರಧ್ವನಿಯೂ ಸಮಸ್ತಭೂತಗಳಿಗೂ ಭಯವನ್ನು ಹುಟ್ಟಿಸುವಂತೆ ಮಹಾದ್ಭುತವಾಯಿತು! ಇಷ್ಟರಲ್ಲಿ ಮಹಾತ್ಮನಾದ ರಾಮನು, ಕಾಂತಿ ಥಳಿಸುತ್ತಿದ್ದ ತನ್ನ ಮಹಾ ಧನುಸ್ಸನ್ನು ಹಿಡಿದು, ಎಡೆಬಿಡದೆ ರಾವಣನ ಮೇಲೆ ಬಾಣವರ್ಷಗಳನ್ನು ಕರೆಯುತ್ತಿರಲು, ಈ ರಾಮ ಬಾಣಗಳ ಬಾಧೆಯನ್ನು ತಡೆಯಲಾರದೆ ರಾವಣನು, ಬಿರುಗಾಳಿಯಿಂದ ತೂರಿಸಲ್ಪಟ್ಟ ಮೇಘದಂತೆ, ಭಯದಿಂದ ಯುದ್ಧ ರಂಗವನ್ನು ಬಿಟ್ಟು ಪಲಾಯನವಮಾಡಿದನು.

ಇಲ್ಲಿಗೆ ನೂರೊಂದನೆಯ ಸರ್ಗವು

ರಾಮನು ಲಕ್ಷ್ಮಣನನ್ನು ಕುರಿತು ವಿಲಪಿಸಿದುದು. ಸುಷೇಣನ
ಮಾತಿನಿಂದ ಹನುಮಂತನು ಓಷಧಿಪರ್ವತವನ್ನು ತಂದುದು.
ಸುಷೇಣನು ದಿವ್ಯೌಷಧಿರಸವನ್ನು ಲಕ್ಷ್ಮಣನ ಮೂಗಿಗೆ
ಹಿಂಡಲು, ಲಕ್ಷ್ಮಣನು ವಿಶಲ್ಯನಾಗಿ ಸುಖದಿಂದೆದ್ದುದು.

ಬಲಾಢ್ಯನಾದ ರಾವಣನ ಶಕ್ತಿಯಿಂದ ಲಕ್ಷ್ಮಣನು ರಕ್ತದಿಂದ ತೊಯ್ದ ಮೈಯುಳ್ಳವನಾಗಿ ಮೂರ್ಛೆಹೊಂದಿ ಮಲಗಿರುವುದನ್ನು ನೋಡಿ ಶ್ರೀರಾಮನು ತಡೆಯಲಾರದ ಕೋಪವನ್ನುಹೊಂದಿ, ದುರಾತ್ಮನಾದ ರಾವಣನೊಡನೆ ಪ್ರಬಲವಾದ ಯುದ್ಧವನ್ನು ಮಾಡಿದನು. ಹೀಗೆ ರಾಮನು ಇತ್ತಲಾಗಿ ರಾವಣನ ಮೇಲೆ ಬಾಣಗಳ ಪ್ರಯೋಗವನ್ನು ಮಾಡುತ್ತಿರುವಾಗಲೇ, ಸಮೀಪದಲ್ಲಿದ್ದ ಸುಷೇಣನನ್ನು ಕುರಿತು "ಎಲೈ ವಾನರೋತ್ತಮನೆ! ಇದೋ! ವೀರನಾದ ಈ ಲಕ್ಷ್ಮಣನು ರಾವಣನ ಪ್ರಹಾರದಿಂದ ಬಹಳವಾಗಿ ನೊಂದು, ನೆಲದಲ್ಲಿ ಬಿದ್ದು, ಹಾವಿನಂತೆ ಹೊರಳುತ್ತಿರುವನು. ಇವನ ಸ್ಥಿತಿಯನ್ನು ನೋಡಿ ನಾನು ವ್ಯಸನವನ್ನು ತಡೆಯಲಾರೆನು! ನನಗೆ ಪ್ರಾಣಕ್ಕಿಂತಲೂ ಪ್ರಿಯತಮನಾದ ಈ ಲಕ್ಷ್ಮಣನು,

ಹೀಗೆ ರಕ್ತದಿಂದ ತೊಯ್ದು ನೆಲದಲ್ಲಿ ಬಿದ್ದಿರುವುದನ್ನು ಕಂಡು, ನನ್ನ ಮನಸ್ಸು ಬಹಳವಾಗಿ ತತ್ತಳಿಸುತ್ತಿರುವುದು! ಈ ಸ್ಥಿತಿಯಲ್ಲಿ ನನಗೆ ಯುದ್ಧಮಾಡುವುದಕ್ಕೆ ತಾನೇ ಶಕ್ತಿಯು ಹೇಗೆ ಹುಟ್ಟುವುದು! ಯಾವಾಗಲೂ ಯುದ್ಧೋತ್ಸಾಹವುಳ್ಳವನಾಗಿ, ಶುಭಲಕ್ಷಣಲಕ್ಷಿತನಾದ ಈ ನನ್ನ ತಮ್ಮನು ಹೀಗೆಯೇ ಮೃತಿಯನ್ನು ಹೊಂದಿದ ಪಕ್ಷದಲ್ಲಿ ಇನ್ನು ನನಗೆ ಪ್ರಾಣಗಳಿಂದೇನು? ಸುಖದಿಂದೇನು? ದುರಾತ್ಮನಾದ ರಾವಣನಿಂದ ನನ್ನ ಕಣ್ಣೆದಿರಾಗಿಯೇ ನನ್ನ ತಮ್ಮನು ಹತನಾಗಿ ಬಿದ್ದಿರುವುದನ್ನು ನೋಡಿ ನನ್ನ ಪರಾಕ್ರಮವೇ ನಾಚಿಕೆಗೊಂಡಂತೆ ಹಿಂತೆಗೆಯುತ್ತಿರುವುದು! ಈ ನನ್ನ ಬಿಲ್ಲು ನನ್ನ ಕೈಯಲ್ಲಿ ನಿಲ್ಲದೆ ಜಾರಿ ಬೀಳುವಂತಿರುವುದು! ಬಾಣಗಳು ವಶ ತಪ್ಪುತ್ತಿರುವುವು! ಕಣ್ಣುಗಳಲ್ಲಿ ನೀರು ತುಂಬಿ, ದೃಷ್ಟಿಯನ್ನು ಮರೆಸುತ್ತಿರುವುದು! ಕನಸಿನಲ್ಲಿ ಆತುರದಿಂದೋಡುವಾಗ ಕಾಲುಗಳು ಹಿಂದಕ್ಕೆಳೆಯುವಂತೆ, ನನ್ನ ಅವಯವಗಳೆಲ್ಲವೂ ವಶತಪ್ಪಿ, ಯಾವಕಾರ್ಯವೂ ಸಾಗದಂತೆ, ಮನಸ್ಸಿನ ಚಿಂತೆಯು ಅತಿ ತೀವ್ರವಾಗಿ ಹೆಚ್ಚುತ್ತಿರುವುದು. ನನ್ನ ಪ್ರಾಣಗಳ ಮೇಲೆಯೇ ನನಗೆ ಆಸೆಯು ತಗ್ಗುತ್ತಿರುವುದು! ಸುಷೇಣಾ! ನಾನೇನು ಮಾಡಲಿ?" ಎಂದನು. ಆಗ ರಾಮನು, ತನ್ನ ಹೊರಗಿನ ಪ್ರಾಣದಂತಿದ್ದ ಪ್ರಿಯಸಹೋದರನಾದ ಲಕ್ಷ್ಮಣನಿಗೆ, ಮರ್ಮಸ್ಥಾನಗಳಲ್ಲಿ ಬಾಣಗಳು ನಾಟಿದುದರಿಂದ ಅವನು ಆ ವೇದನೆಯನ್ನು ತಡೆಯಲಾರದೆ ನಿಟ್ಟುಸಿರುಬಿಡುತ್ತಿರುವುದನ್ನು ನೋಡಿ, ಮನಸ್ಸಂಕಟದಲ್ಲಿಯೂ, ದುಃಖದಲ್ಲಿಯೂ ಮುಳುಗಿದವನಾಗಿ, ಏನೊಂದೂ ತೋರದೆ ಚಿಂತಾಕುಲನಾಗಿ ನಿಂತಿದ್ದನು. ಆಗ ರಾಮನು ಲಕ್ಷ್ಮಣನ ದುಸ್ಥಿತಿಯನ್ನು ನೋಡಿದ ಹಾಗೆಲ್ಲಾ ದುಃಖದಿಂದ ಕದಲಿದ ಇಂದ್ರಿಯಗಳುಳ್ಳವನಾಗಿ ದೈನ್ಯದಿಂದ ವಿಲಪಿಸುತ್ತ, "ಆಹಾ! ನನ್ನ ಪ್ರಿಯಸಹೋದರನಾದ ಲಕ್ಷ್ಮಣನು ಬಾಣಹತಿಯಿಂದ ನೊಂದು, ನಿಶ್ಚೇಷ್ಟನಾಗಿ ಹೀಗೆ ನೆಲದ ಮಣ್ಣಿನ ಮೇಲೆ ಮಲಗಿರುವುದನ್ನು ನಾನು ನನ್ನ ಕಣ್ಣಾರೆ ನೋಡುವಂತಾಯಿತಲ್ಲಾ! ಇನ್ನು ನನಗೆ ಈ ಯುದ್ಧದಿಂದಾಗಲಿ, ಈ ನನ್ನ ಪ್ರಾಣಗಳಿಂದಾಗಲಿ, ಆ ಸೀತೆಯಿಂದಾಗಲಿ ಆಗಬೇಕಾದುದೇನು? ಲಕ್ಷ್ಮಣನು ಹೀಗೆ ಯುದ್ಧಾಗ್ರದಲ್ಲಿ ಶತ್ರುವಿನಿಂದ ಹತನಾಗಿ ಬಿದ್ದಿರುವಾಗ ನನಗೆ ರಾಜ್ಯದಿಂದೇನು? ಈ ಪ್ರಾಣಗಳೇಕೆ? ಇನ್ನು ನಾನು ಯುದ್ಧಮಾಡಿ ಸಾಧಿಸಬೇಕಾದ ಕಾರ

ವೇನು? ದೇಶದೇಶಗಳಲ್ಲಿಯೂ ಬೇಕುಬೇಕಾದ ಪತ್ನಿಯರನ್ನು ಪಡೆಯ ಬಹುದು! ದೇಶದೇಶಗಳಲ್ಲಿಯೂ ಬೇಕುಬೇಕಾದ ಬಂಧುಗಳನ್ನು ಸಂಪಾ ದಿಸಬಹುದು! ಇಂತಹ ಒಡಹುಟ್ಟಿದ ತಮ್ಮನು ಯಾವಯಾವ ದೇಶ ವನ್ನು ಸುತ್ತಿ ಹುಡುಕಿದರೆ ತಾನೇ ಸಿಕ್ಕುವನು? ಎಲ್ಲಿಯೂ ಸಿಕ್ಕ ಲಾರನು! ಆಹಾ! ಶತ್ರುದುರ್ಜಯನಾದ ಈ ಲಕ್ಷ್ಮಣನೇ ಹೋದ ಮೇಲೆ ನನಗೆ ರಾಜ್ಯದಿಂದೇನು? ನಾನು ಅಯೋಧ್ಯೆಗೆ ಹಿಂತಿರುಗಿ ಹೋದ ಮೇಲೆ, ಪುತ್ರವತ್ಸಲೆಯಾದ ನನ್ನ ತಾಯಿ ಸುಮಿತ್ರೆಗೆ ನಾನೇನೆಂದು ಹೇಳಲಿ! ಅವಳು ನನ್ನನ್ನು ನಿಂದಿಸಿದರೆ ನಾನು ಅದನ್ನು ಕೇಳಿ ಹೇಗೆ ಸಹಿಸಲಿ! ನನ್ನ ಹೆತ್ತ ತಾಯಿಯಾದ ಕೌಸಲ್ಯೆಯಾಗಲಿ, ಕೈಕೇಯಿ ಯಾಗಲಿ, ಭರತಶತ್ರುಘ್ನರಾಗಲಿ, ನನ್ನನ್ನು ನೋಡಿ "ನೀನು ಲಕ್ಷ್ಮಣ ನನ್ನು ನಿನ್ನ ಸಂಗಡ ಕಾಡಿಗೆ ಕರೆದುಕೊಂಡುಹೋದವನಲ್ಲವೆ? ಈಗ ಅವ ನನ್ನೆಲ್ಲಿ ಬಿಟ್ಟುಬಂದೆ?" ಎಂದು ಕೇಳಿದರೆ ಅವರಿಗೆ ನಾನು ಯಾವ ಸಮಾಧಾನವನ್ನು ಹೇಳಲಿ? ಅವರ ನಿಂದೆಗೆ ಪಾತ್ರನಾಗುವುದಕ್ಕಿಂತಲೂ ನನಗೆ ಇಲ್ಲಿಯೇ ಮರಣವು ಮೇಲು! ಧಾರ್ಮಿಕನಾದ ಲಕ್ಷ್ಮಣನು ನನ್ನ ಕಣ್ಣೆದಿರಿಗೆ ಹತನಾಗಿ ಬಿದ್ದಿರುವುದನ್ನು ನಾನೇ ನೋಡುತ್ತಿರುವೆನಲ್ಲಾ! ಆಹಾ! ಪೂರ್ವಜನ್ಮದಲ್ಲಿ ನಾನು ಎಂತಹ ಘೋರಪಾಪವನ್ನು ಮಾಡಿರ ಬೇಕು? ಹಾ! ವತ್ಸ ಲಕ್ಷ್ಮಣಾ! ಹಾ ಪ್ರಿಯಸಹೋದರಾ! ಹಾ ಪುರುಷಶ್ರೇಷ್ಠಾ! ಹಾ ಶೂರಾಗ್ರಣೀ! ಹಾ ಪ್ರಭೂ! ಇಲ್ಲಿ ನನ್ನನ್ನು ಬಿಟ್ಟು ನೀನೊಬ್ಬನೇ ಪರಲೋಕಕ್ಕೆ ಹೋಗುವೆಯಾ? ದೈನ್ಯದಿಂದ ಗೋಳಿ ಡುತ್ತಿರುವ ನನ್ನೊಡನೆ ನೀನೇಕೆ ಮಾತಾಡುವುದಿಲ್ಲ! ಲಕ್ಷ್ಮಣಾ! ಏಳು! ಇದೇಕೆ ಮಲಗಿರುವೆ! ದುಃಖಿತನಾಗಿರುವ ನನ್ನನ್ನು ಕಣ್ಣು ತೆರೆದು ನೋಡು! ಹಿಂದೆ ನಾನು ಆಗಾಗ ದುಃಖಿಸುತ್ತಿದ್ದಾಗಲೂ, ಎಚ್ಚರ ತಪ್ಪಿದಾಗಲೂ, ಪರ್ವತಗಳಲ್ಲಿಯೂ ಅರಣ್ಯಗಳಲ್ಲಿಯೂ ಕಷ್ಟಪಡುತ್ತಿರು ವಾಗಲೂ ನೀನು ನನ್ನನ್ನು ಸಮಾಧಾನಪಡಿಸುತ್ತಿದ್ದವನಲ್ಲವೆ? ಈಗೇನು ಸುಮ್ಮನಿರುವೆ?" ಎಂದು ವಿಲಪಿಸುತ್ತಿದ್ದನು. ಹೀಗೆ ಕರುಣೆಹುಟ್ಟುವಂತೆ ವಿಲಪಿಸಿ, ಆಗಾಗ ನಿಟ್ಟುಸಿರುಬಿಡುತ್ತ, ಸಂಕಟವನ್ನು ತಡೆಯಲಾರದೆ ಬಾರಿಬಾರಿಗೂ ನೆಲದಲ್ಲಿ ಬಿದ್ದು ಹೊರಳುತ್ತಿದ್ದ ರಾಮನನ್ನು ನೋಡಿ, ವೀರನಾದ ಸುಷೇಣನು ಉಚಿತವಾಕ್ಯಗಳಿಂದ ಅವನನ್ನು ಸಮಾಧಾನ

ಗೊಳಿಸುತ್ತ "ಎಲೆ ಮಹಾಬಾಹೂ! ಇದೇಕೆ ಹೀಗೆ ಚಿಂತಿಸುವೆ? ಲಕ್ಷ್ಮೀ ವರ್ಧನನಾದ ಈ ಲಕ್ಷ್ಮಣನು ಈಗ ಮೃತನೆಂದು ತಿಳಿಯುವೆಯಾ! ಎಂದಿಗೂ ಇಲ್ಲ! ಅವನ ಮುಖಲಕ್ಷಣವನ್ನು ನೋಡು! ಮುಖದಲ್ಲಿ ವಿಕಾರವಿಲ್ಲ! ಅದರ ಬಣ್ಣವಾದರೂ ಕೆಟ್ಟಿಲ್ಲ! ಮುಖದ ಕಳೆಯಾದರೂ ಕುಂದಲಿಲ್ಲ! ಇವನ ಮುಖವು ಉತ್ತಮಕಾಂತಿಯಿಂದ ಕೂಡಿ ಪ್ರಸನ್ನ ವಾಗಿ ಕಾಣುತ್ತಿರುವುದು! ಇವನ ಅಂಗೈಗಳೆರಡೂ ಕಮಲದಂತೆ ಕೆಂಪಾ ಗಿರುವುವು. ಕಣ್ಣುಗಳೆರಡೂ ಅತಿ ಪ್ರಸನ್ನಗಳಾಗಿರುವುವು. ಎಲೈ ಕ್ಷತ್ರಿ ಯೋತ್ತಮನೆ! ಪ್ರಾಣವಿಲ್ಲದವರಿಗೆ ಎಂದಿಗೂ ಈ ವಿಧವಾದ ಲಕ್ಷಣ ಗಳಿರುವುದಿಲ್ಲ! ದೀರ್ಘಾಯುಷ್ಮಂತರಾದ ಮನುಷ್ಯರಿಗೆ ಮಾತ್ರವೇ ಮುಖ ಲಕ್ಷಣವು ಈ ವಿಧವಾಗಿರುವುದು! ರಾಮಾ! ಈಗ ಲಕ್ಷ್ಮಣನು ಜೀವಿತ ನಾಗಿಯೇ ಇರುವನೇ ಹೊರತು ಮೃತನಾಗಿಲ್ಲ! ನಿಷ್ಕಾರಣವಾಗಿ ನೀನು ದುಃಖಿಸಬಾರದು! ಎಲೆ ವೀರನೆ! ಈಗ ಲಕ್ಷ್ಮಣನು ಮೂರ್ಛಿತನಾದಂತೆ ಕೈಕಾಲುಗಳನ್ನು ಚಾಚಿ ನೆಲದಲ್ಲಿ ಮಲಗಿದ್ದರೂ, ಉಸಿರಾಡುವುದರಿಂದ ಇವನ ಹೃದಯವು ಆಗಾಗ ಹೊಡೆದುಕೊಳ್ಳುವುದನ್ನು ನೋಡು! ಇದ ರಿಂದಲೇ ಇವನು ಬದುಕಿರುವನೆಂದು ಸ್ಪಷ್ಟವಾಗಿ ತಿಳಿಯಬಹುದು" ಎಂದನು. ವಾಕ್ಯವಿಶಾರದನಾದ ಸುಷೇಣನು ಈ ಮಾತುಗಳಿಂದ ಸಮಾ ಧಾನಪಡಿಸಿ, ಉಬ್ಬಿದ ಗಲ್ಲಗಳಿಂದ ಮುಂದೆ ನಿಂತಿದ್ದ ಹನುಮಂತ ನನ್ನು ನೋಡಿ "ಎಲೈ ಸೌಮ್ಯನೆ! ನೀನು ಈ ಕ್ಷಣವೇ ಇಲ್ಲಿಂದ ಹೊರಟು, ಮೊದಲು ನಿನಗೆ ಜಾಂಬವಂತನು ಹೇಳಿದ್ದ ಓಷಧಿಪರ್ವತಕ್ಕೆ ಹೋಗು. ಅದರ ದಕ್ಷಿಣಶಿಖರದಲ್ಲಿ ಕೆಲವು ದಿವ್ಯೌಷಧಿಗಳುಂಟು! ಅವುಗಳಲ್ಲಿ ಶಲ್ಯ ಬಾಧೆ ನೀಗಿಸತಕ್ಕ ವಿಶಲ್ಯಕರಣಿಯೆಂಬ ಮಹೌಷಧಿಯನ್ನೂ, ಸಾವರ್ಣ್ಯ ಕರಣಿ, ಸಂಜೀವಕರಣಿ, ಸಂಧಾನಕರಣಿಗಳೆಂಬ ಬೇರೆ ಮೂರು ಮಹೌಷಧಿಗಳನ್ನೂ ಶೀಘ್ರದಲ್ಲಿಯೇ ಇಲ್ಲಿಗೆ ತರಬೇಕು! ಮಹಾತ್ಮನಾದ ಈ ಲಕ್ಷ್ಮಣನನ್ನು ಆ ಮಹೌಷಧಿಗಳಿಂದಲೇ ಬದುಕಿಸಬೇಕಾಗಿದೆ!" ಎಂದನು. ಈ ಮಾತನ್ನು ಕೇಳಿದೊಡನೆ ಹನುಮಂತನು, ಅಲ್ಲಿಂದ ಹಾಗೆಯೇ ಹಾರಿ, ಓಷಧಿ ಪರ್ವತಸಮೀಪಕ್ಕೆ ಬಂದು ನೋಡಿದನು. ಅಲ್ಲಿ ಆ ಮಹೌ ಷಧಿಗಳ ಸ್ವರೂಪವೊಂದೂ ಅವನಿಗೆ ಸ್ಪಷ್ಟವಾಗಿ ತಿಳಿಯದೆಹೋದುದರಿಂದ ಚಿಂತಿಸುತ್ತಿದ್ದನು. ಎಣೆಯಿಲ್ಲದ ತೇಜಸ್ಸುಳ್ಳ ಆ ಹನುಮಂತನಿಗೆ ಕೊನೆಗೆ

ಒಂದಾಲೋಚನೆಯು ತೋರಿತು! ಆಗ ತನ್ನಲ್ಲಿ ತಾನು "ಇಲ್ಲಿ ನಾನು ಆ ಓಷಧಿಗಳನ್ನು ಹುಡುಕುತ್ತ ಕಾಲವನ್ನು ಕಳೆದರೆ ಕಾರ್ಯವು ಕೆಡುವುದು. ಆ ಶಿಖರವನ್ನೇ ಕಿತ್ತು ಅಲ್ಲಿಗೆ ಸಾಗಿಸಿಬಿಡುವೆನು. ಮನಃಪ್ರಸಾದಾದ್ಯನು ಮಾನಗಳಿಂದ, ಲಕ್ಷ್ಮಣನಿಗೆ ಸುಖವನ್ನುಂಟುಮಾಡತಕ್ಕ ಆ ಮಹೌಷಧಿಗಳು ಈ ಶಿಖರದಲ್ಲಿಯೇ ಹುಟ್ಟಿರಬೇಕೆಂದು ತೋರುವುದು. ಸುಷೇಣನೂ ಈ ದಕ್ಷಿಣಶಿಖರವನ್ನೇ ಗುರುತಾಗಿ ಹೇಳಿರುವನು. ಈಗ ನಾನು ಆ ಮೂಲಿಕೆಯನ್ನು ತಿಳಿಯಲಾರದುದಕ್ಕಾಗಿ, ತಿರುಗಿ ಸುಷೇಣನನ್ನು ಕೇಳಿ ಬರಬೇಕೆಂದು ಪರೀಕ್ಷೆಯಿಂದ ಹೋದಪಕ್ಷದಲ್ಲಿಯೂ ಕಾಲವು ಮೀರಿ ಹೋಗುವುದು. ಲಕ್ಷ್ಮಣನಿಗೆ ಪ್ರಾಣಹಾನಿಯನ್ನುಂಟುಮಾಡಿದ ದೋಷವು ನನ್ನ ಮೇಲೆಯೇ ಬೀಳುವುದು! ವಾನರರೆಲ್ಲರೂ ನನ್ನನ್ನು ಕೈಲಾಗದವನೆಂದು ಹೀಗಳೆಯುವರು" ಎಂದು ನಿಶ್ಚಯಿಸಿಕೊಂಡನು. ಕೂಡಲೇ ಬಲಾಢ್ಯನಾದ ಹನುಮಂತನು, ಆ ಪರ್ವತಶಿಖರದ ಬಳಿಗೆ ಬಂದು, ಅದರ ತಲೆಯನ್ನು ಹಿಡಿದು ಮೂರಾವರ್ತಿ ಕದಲಿಸಿ, ಪುಷ್ಪಿತಗಳಾದ ಬಗೆಬಗೆಯ ವೃಕ್ಷಸಮೂಹಗಳೊಡನೆ ಆ ಪರ್ವತವನ್ನು ಮೊಟಕಿತೆಗೆದು ಎರಡು ಕೈಗಳಿಂದಲೂ ಅದನ್ನು ಮೇಲಕ್ಕೆತ್ತಿಕೊಂಡನು. ಆಕಾಲದಲ್ಲಿ ಜಲಪೂರ್ಣವಾದ ಕಾಳಮೇಘದಂತೆ ಹನುಮಂತನು ಆ ಪರ್ವತವನ್ನೆತ್ತಿಕೊಂಡು ಮಹಾವೇಗದಿಂದ ಹಾರಿ ಬಂದು, ರಾಮಾದಿಗಳ ಸಮೀಪವನ್ನು ಸೇರಿ, ಅಲ್ಲಿ ವಾನರಸೈನ್ಯದ ನಡುವೆ ಆ ಪರ್ವತವನ್ನು ತಂದಿಟ್ಟನು. ಆ ಮೇಲೆ ಆಯಾಸಪರಿಹಾರಾರ್ಥವಾಗಿ ಸ್ವಲ್ಪ ವಿಶ್ರಾಂತಿಹೊಂದಿ, ಸುಷೇಣನನ್ನು ಕುರಿತು, "ಎಲೆ ವಾನರಶ್ರೇಷ್ಠನೆ! ನೀನು ಹೇಳಿದ ಮೂಲಿಕೆಗಳ ಗುರುತು ನನಗೆ ತಿಳಿಯದೆ ಹೋಯಿತು. ಅದಕ್ಕಾಗಿ ನಾನು ಆ ಪರ್ವತದ ದಕ್ಷಿಣ ಶಿಖರವನ್ನೇ ಮೊತ್ತಕ್ಕೆ ಕಿತ್ತು ತಂದಿಟ್ಟಿರುವೆನು" ಎಂದನು. ಇದನ್ನು ಕೇಳಿ ಸುಷೇಣನು ವಾನರೋತ್ತಮನಾದ ಆ ಹನುಮಂತನನ್ನು ಬಹಳವಾಗಿ ಕೊಂಡಾಡುತ್ತ, ಅದರಲ್ಲಿ ಬೇಕಾದ ಮೂಲಿಕೆಗಳನ್ನು ಕಿತ್ತುಕೊಂಡನು. ದೇವತೆಗಳಿಗೂ ಸಾಧ್ಯವಲ್ಲದ ಹನುಮಂತನ ಕಾರ್ಯವನ್ನು ನೋಡಿ ಆ ಯುದ್ಧಭೂಮಿಯಲ್ಲಿದ್ದ ರಾಕ್ಷಸರೂ ಕೂಡ ಆಶ್ಚರ್ಯದಿಂದ ಸ್ತಬ್ಧರಾಗಿದ್ದರು. ಇಷ್ಟರಲ್ಲಿ ಸುಷೇಣನು ಆ ಓಷಧಿಯ ರಸವನ್ನು ಲಕ್ಷ್ಮಣನ ಮೂಗಿನಲ್ಲಿ ಹಿಂಡಿದನು. ಶಲ್ಯಬಾಧೆಯಿಂದ ಪೀಡಿತನಾಗಿದ್ದ

ಲಕ್ಷ್ಮಣನು ಆ ಓಷಧಿಗಂಧವನ್ನು ಮೂಸಿದೊಡನೆ ವಿಶಲ್ಯನಾಗಿ, ದೇಹ ದಲ್ಲಿ ಯಾವ ಬಾಧೆಯೂ ಇಲ್ಲದೆ ಗುಣಹೊಂದಿ, ತಟ್ಟನೆ ನೆಲದಿಂದ ಮೇಲಕ್ಕೆದ್ದು ನಿಂತನು. ಮೇಲೆದ್ದು ನಿಂತ ಲಕ್ಷ್ಮಣನ್ನು ನೋಡಿ ಅಲ್ಲಿದ್ದ ವಾನರರೆಲ್ಲರೂ ಸುಷೇಣನನ್ನು "ಭಲೆ! ಭಲೆ!" ಎಂದು ಕೊಂಡಾಡಿದರು. ಆಗ ಪರಂತಪನಾದ ರಾಮನು ಸಂತೋಷದಿಂದ ಲಕ್ಷ್ಮಣನನ್ನು "ಬಾ! ಬಾ!" ರೆಂದು ಕರೆದು ಆನಂದಬಾಷ್ಪವನ್ನು ಸುರಿಸುತ್ತ ಅವನನ್ನು ಪ್ರೀತಿಯಿಂದಪ್ಪಿಕೊಂಡು "ವತ್ಸ ಲಕ್ಷ್ಮಣಾ! ವೀರಾಗ್ರಣೀ! ಸತ್ತು ಬದುಕಿಬಂದ ನಿನ್ನನ್ನು ನಾನು ನನ್ನ ಮಹಾ ಭಾಗ್ಯವಶದಿಂದ ಪುನಃ ನೋಡುವಂತಾಯಿತು! ಎಲೆ ವತ್ಸನೆ! ನೀನು ಹೀಗೆಯೇ ಮೃತಿಹೊಂದಿದ್ದ ಪಕ್ಷದಲ್ಲಿ ನನ್ನ ಗತಿಯೇನು! ಆಗ ನನಗೆ ಈ ನನ್ನ ಪ್ರಾಣಗಳಿದ್ದು ಫಲವೇನು? ಆ ಸೀತೆಯಿಂದೇನು? ನಾನು ಯುದ್ಧದಲ್ಲಿ ಜಯಿಸಿ ಮಾಡ ಬೇಕಾದುದೇನು?" ಎಂದನು. ಮಹಾತ್ಮನಾದ ರಾಮನು ಈ ಮಾತನ್ನು ಹೇಳುತ್ತಿರುವಾಗಲೇ ಲಕ್ಷ್ಮಣನು ತನ್ನಣ್ಣನ ಮನೋವ್ಯಥೆಯನ್ನು ನೋಡಿ ತಾನೂ ದುಃಖಿಸುತ್ತ ತೊದಲುಮಾತುಗಳಿಂದ ಅವನನ್ನು ಕುರಿತು, "ಅಣ್ಣಾ! ನಿನ್ನ ಪರಾಕ್ರಮವು ಯಾವಾಗಲೂ ವ್ಯರ್ಥವಾಗತಕ್ಕುದಲ್ಲ? ಅಂತಹ ಅಮೋಘವೀರ್ಯವುಳ್ಳ ನೀನು, ರಾವಣನನ್ನು ಕೊಂದು ವಿಭೀ ಷಣನಿಗೆ ಲಂಕಾರಾಜ್ಯವನ್ನೊಪ್ಪಿಸಿಕೊಡುವುದಾಗಿ ಮೊದಲೇ ಪ್ರತಿಜ್ಞೆ ಮಾಡಿರುವೆಯಲ್ಲವೆ? ಈಗ ಕೇವಲ ಬಲಹೀನರಾದ ಅಲ್ಪಜನರಂತೆ ನೀನು ಈ ಮಾತನ್ನು ಹೇಳುವುದು ಯುಕ್ತವೆ? ಸತ್ಪುರುಷರು ಎಷ್ಟೇ ಮಹಾವಿಪತ್ತುಬಂದರೂ ಮಾಡಿದ ಪ್ರತಿಜ್ಞೆಯನ್ನು ತಪ್ಪಿ ನಡೆಯಲಾರರು. ಮಾಡಿದ ಪ್ರತಿಜ್ಞೆಯನ್ನು ನೆರವೇರಿಸುವುದೇ ಮಹತ್ತ್ವಕ್ಕೆ ಲಕ್ಷಣವು! ಹೀಗಿರುವಾಗ ನೀನು ನನಗಾಗಿ ಸೀತೆಯಲ್ಲಿಯೂ, ಜಯದಲ್ಲಿಯೂ ನಿರಾಶೆ ಯನ್ನು ತೋರಿಸಬಹುದೆ? ಇದು ಯುಕ್ತವಲ್ಲ! ರಾವಣನನ್ನು ಕೊಂದು ನಿನ್ನ ಪ್ರತಿಜ್ಞೆಯನ್ನು ಕೊನೆಮುಟ್ಟಿಸು! ಹರಿತವಾದ ಕೋರೆಹಲ್ಲುಗಳಿಂದ ಕೂಡಿ ಗರ್ಜಿಸುತ್ತಿರುವ ಸಿಂಹದ ಮುಂದೆ ಸಿಕ್ಕಿಬಿದ್ದ ಮಹಾಗಜದಂತೆ, ನಿನ್ನ ಬಾಣಗಳಿಗೆ ಸಿಕ್ಕಿಬಿದ್ದ ಶತ್ರುವು ಬದುಕಿ ಹೋಗುವ ಮಾತು ಸುಳ್ಳು! ಅಣ್ಣಾ! ಈಗ ಮುಖ್ಯವಾಗಿ ನನಗೆ, ಈ ಸೂರ್ಯನು ತನ್ನ ಸಂಚಾರಕಾರ್ಯವನ್ನು ಮುಗಿಸಿಕೊಂಡು ಅಸ್ತಮಿಸುವುದರೊಳಗಾಗಿಯೇ,

ದುರಾತ್ಮನಾದ ರಾವಣನನ್ನು ಕೊಲ್ಲಬೇಕೆಂಬ ಆತುರವು ಹುಟ್ಟಿರುವುದು. ರಾಮಾ! ಇನ್ನು ಹೆಚ್ಚು ಮಾತಿನಿಂದೇನು? ಯುದ್ಧದಲ್ಲಿ ರಾವಣನನ್ನು ಕೊಲ್ಲಬೇಕೆಂಬ ಕೋರಿಕೆಯಿದ್ದರೆ, ನೀನು ಹಿಂದೆ ವಿಭೀಷಣನಿಗೆ ಮಾಡಿ ಕೊಟ್ಟ ಪ್ರತಿಜ್ಞೆಯನ್ನು ತಪ್ಪಬಾರದೆಂದೂ ಅಭಿಪ್ರಾಯವಿದ್ದರೆ, ಮತ್ತು ಜನಕಪುತ್ರಿಯಾದ ಆ ಸೀತೆಯಲ್ಲಿಯೂ ನಿಜವಾಗಿ ನಿನಗೆ ಪ್ರೀತಿಯಿದ್ದರೆ, ನಾನು ಹೇಳಿದ ಈ ಕಾರ್ಯವನ್ನು ಶೀಘ್ರದಲ್ಲಿಯೇ ಕೊನೆಮುಟ್ಟಿಸು" ಎಂದನು.

ಇಲ್ಲಿಗೆ ನೂರೆರಡನೆಯ ಸರ್ಗವು.

ರಾವಣನು ಬೇರೆ ರಥವನ್ನೇರಿ ಯುದ್ಧಕ್ಕೆ ಬಂದುದನ್ನು
ನೋಡಿ, ಇಂದ್ರನು ರಾಮನಿಗಾಗಿ ಮಾತಲಿಯೊಡನೆ
ತನ್ನ ರಥವನ್ನು ಕಳುಹಿಸಿಕೊಡಲು, ರಾಮನು ಆ
ರಥವನ್ನೇರಿ ಕುಳಿತು ಯುದ್ಧವನ್ನಾರಂಭಿಸಿದುದು.
ಆಗ ಲೋಕಭಯಂಕರಗಳಾದ ಮಹೋ
ತ್ಪಾತಗಳು ತಲೆದೋರಿದುದು.

ಲಕ್ಷ್ಮಣನು ಈ ಮಾತುಗಳನ್ನು ಹೇಳಿದೊಡನೆ ರಾಮನು ತನ್ನ ಮಹಾಧನುಸ್ಸನ್ನೆಳೆದು ಕಟ್ಟಿ, ಸೇನಾಗ್ರದಲ್ಲಿ ನಿಂತು ರಾವಣನ ಮೇಲೆ ಭಯಂಕರವಾದ ಬಾಣವರ್ಷವನ್ನು ಕರೆದನು. ಇಷ್ಟರಲ್ಲಿ ರಾವಣನು ಬೇರೊಂದು ರಥವನ್ನೇರಿ, ರಾಹುವು ಸೂರ್ಯನನ್ನಿದಿರಿಸಿ ಬರುವಂತೆ ರಾಮನಿಗಿದಿರಾಗಿ ಬಂದು ನಿಂತನು. ಹೀಗೆ ರಥಸ್ಥನಾಗಿ ಬಂದ ರಾವಣನು, ಮೇಘವು ಜಲಧಾರೆಯನ್ನು ಕರೆಯುವಂತೆ ರಾಮನಮೇಲೆ ಮಹಾಭಯಂಕರಗಳಾಗಿ ವಜ್ರಸಮಾನಗಳಾದ ಬಾಣಗಳನ್ನು ಕರೆದನು. ಆಗ ಶ್ರೀರಾಮನೂ ಕೂಡ ಉರಿಯುವ ಬೆಂಕಿಗೆ ಸಮಾನಗಳಾಗಿಯೂ, ಸುವರ್ಣಾಲಂಕೃತ

ಗಳಾಗಿಯೂ ಇರುವ ಬಾಣಗಳನ್ನು ತೆಗೆದು, ಯುದ್ಧೋದ್ಯುಕ್ತನಾಗಿ ನಿಂತಿದ್ದ ರಾವಣನಮೇಲೆ ಎಡೆಬಿಡದೆ ವರ್ಷಿಸುತ್ತಿದ್ದನು. ಆಗ ರಾಮನು ಪಾದಚಾರಿಯಾಗಿಯೂ, ರಾವಣನು ರಥಸ್ಥನಾಗಿಯೂ ಯುದ್ಧಮಾಡು ತ್ತಿರುವುದನ್ನು ನೋಡಿ, ಆಕಾಶದಲ್ಲಿದ್ದ ದೇವದಾನವಗಂಧರ್ವರೆಲ್ಲರೂ ತಮ್ಮೊ ಳಗೆ ತಾವು "ಇದು ಸರಿಯಾದ ಯುದ್ಧವಲ್ಲ" ವೆಂದು ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಿದ್ದರು. ಇಷ್ಟರಲ್ಲಿಯೇ ದೇವೇಂದ್ರ ಸಾರಥಿಯಾದ ಮಾತ ಲಿಯು ಇಂದ್ರನ ಪ್ರೇರಣೆಯಿಂದ, ಸುವರ್ಣದಿಂದ ಚಿತ್ರಿತವಾಗಿಯೂ, ನೂರಾರು ಕಿರುಗಂಟೆಗಳಿಂದ ಶೋಭಿತವಾಗಿಯೂ, ಬಾಲಸೂರ್ಯನಿಗೆ ಸಮಾನವಾಗಿಯೂ, ವೈಡೂರ್ಯರತ್ನಖಚಿತವಾದ ಮೂಕಿಯುಳ್ಳುದಾಗಿಯೂ ಇದ್ದ ಮಹೇಂದ್ರನ ಉತ್ತಮರಥದೊಡನೆ ಸ್ವರ್ಗದಿಂದಿಳಿದು, ರಾಮನ ಸಮೀಪಕ್ಕೆ ಬಂದನು. ಆ ರಥದ ಮುಂದೆ ಸುವರ್ಣಾಭರಣಗಳಿಂದಲೂ ಬಿಳೀಚಾಮರಗಳಿಂದಲೂ ಅಲಂಕೃತಗಳಾಗಿ, ಸೂರ್ಯಕಾಂತಿಯಿಂದ ಹೊಳೆಯು ತ್ತಿದ್ದ ಹಸುರುಬಣ್ಣವುಳ್ಳ ನಾಲ್ಕು ಉತ್ತಮಾಶ್ವಗಳು ಕಟ್ಟಲ್ಪಟ್ಟಿದ್ದುವು. ಆ ರಥದ ನಡುವೆ ಸುವರ್ಣಾಲಂಕೃತವಾದ ವೇಣುಧ್ವಜವು ಶೋಭಿಸುತ್ತಿತ್ತು. ಇಂದ್ರಸಾರಥಿಯಾದ ಮಾತಲಿಯು ಇಂತಹ ಕಾಂತಿವಿಶಿಷ್ಟವಾದ ರಥ ವನ್ನೇರಿ ಬಂದು, ಕೈಯಲ್ಲಿ ಕುದುರೆಯ ಚಾಟಿಯನ್ನು ಹಿಡಿದಿದ್ದಹಾಗೆಯೇ ರಾಮನಮುಂದೆ ಬದ್ಧಾಂಜಲಿಯಾಗಿ ನಿಂತು ವಿಜ್ಞಾಪಿಸುವನು. "ರಾಮಾ! ಮಹಾಬಲಾಢ್ಯನಾಗಿಯೂ, ಶ್ರೀಮಂತನಾಗಿಯೂ, ಪರಂತಪನಾಗಿಯೂ ಇರುವ ನಿನಗೆ ಜಯವನ್ನು ಕೋರಿ, ನಮ್ಮ ಪ್ರಭುವಾದ ದೇವೇಂದ್ರನು ಈ ರಥವನ್ನು ನಿನಗಾಗಿ ಕಳುಹಿಸಿ ಕೊಟ್ಟಿರುವನು. ಇದಲ್ಲದೆ ತನಗೆ ಸ್ವಕೀಯವಾದ ಈ ಮಹಾಧನುಸ್ಸನ್ನೂ, ಅಗ್ನಿಗೆಣೆಯಾದ ಈ ಕವಚ ವನ್ನೂ, ಸೂರ್ಯಸಮಾನಗಳಾದ ಈ ಬಾಣಗಳನ್ನೂ, ಸ್ವಚ್ಛವಾಗಿಯೂ ತೀಕ್ಷ್ಣವಾಗಿಯೂ ಇರುವ ಈ ಶಕ್ತ್ಯಾಯುಧವನ್ನೂ ಕಳುಹಿಸಿ ಕೊಟ್ಟಿರು ವನು. ಎಲೆ ವೀರಾಗ್ರಣಿ! ಮೊದಲು ದೇವೇಂದ್ರನು ಇದೇ ರಥವನ್ನೇರಿ, ನನ್ನ ಸಾರಥ್ಯದ ಕೆಳಗೆ ದಾನವರನ್ನು ನಿಗ್ರಹಿಸಿದಂತೆ, ನೀನೂ ಈಗ ಈ ರಥವನ್ನೇರಿ ನನ್ನ ಸಾರಥ್ಯದಲ್ಲಿ ರಾವಣನನ್ನು ವಧಿಸಬೇಕು!" ಎಂದನು. ಇದನ್ನು ಕೇಳಿ ರಾಮನು, ಆ ಮಹಾರಥಕ್ಕೆ ಪ್ರದಕ್ಷಿಣನಮಸ ಗಳನ್ನುಮಾಡಿ, ಚಂದ್ರಕಾಂತಿಯಿಂದ ಹೇಗೋ ಹಾಗೆ ತನ್ನಕಾಂತಿ

ಯಿಂದ ಲೋಕವನ್ನು ಬೆಳಗುತ್ತ ಆ ರಥವನ್ನೇರಿ ಕುಳಿತನು. ಕೂಡಲೇ ಮಹಾಬಾಹುವಾದ ರಾಮನಿಗೂ, ಆ ರಾವಣನಿಗೂ ನೋಡುವವರಿಗೆ ರೋಮಾಂಚವು ಹುಟ್ಟುವಂತೆ ಅದ್ಭುತವಾದ ತುಮುಲಯುದ್ಧವು ಮೊದಲಾಯಿತು. ಆಗ ಸಮಸ್ತದಿವ್ಯಾಸ್ತ್ರಗಳನ್ನೂ ಚೆನ್ನಾಗಿ ಬಲ್ಲ ರಾಮನು, ಆಗಾಗ ರಾವಣನು ತನ್ನಮೇಲೆ ಪ್ರಯೋಗಿಸುತ್ತಿದ್ದ ಗಾಂಧರ್ವಾಸ್ತ್ರವನ್ನು ಗಾಂಧರ್ವಾಸ್ತ್ರದಿಂದಲೂ, ದೈವಾಸ್ತ್ರವನ್ನು ದೈವಾಸ್ತ್ರದಿಂದಲೂ ನಿಗ್ರಹಿಸುತ್ತ ಬಂದನು. ತನ್ನ ಅಸ್ತ್ರಗಳೆಲ್ಲವೂ ವಿಫಲವಾದುದನ್ನು ನೋಡಿ ರಾವಣನು ಬಹಳ ಕೋಪಾವಿಷ್ಟನಾಗಿ, ಅತಿ ಭಯಂಕರವಾದ ರಾಕ್ಷಸಾಸ್ತ್ರವನ್ನು ರಾಮನ ಮೇಲೆ ಪ್ರಯೋಗಿಸಿದನು. ಸುವರ್ಣಾಲಂಕೃತಗಳಾದ ಆ ಬಾಣಗಳು ರಾಕ್ಷಸಾಸ್ತ್ರಮಂತ್ರದಿಂದ ಮಂತ್ರಿತಗಳಾಗಿ ರಾವಣನ ಧನುಸ್ಸಿನಿಂದ ಹೊರಟಕೂಡಲೆ, ಮಹಾವಿಷವುಳ್ಳ ಕ್ರೂರಸರ್ಪಗಳಾಗಿ ರಾಮನನ್ನಿದಿರಿಸಿ ಬಂದುವು. ಈ ಸರ್ಪಗಳು ಜಾಜ್ವಲ್ಯಮಾನಗಳಾದ ತಮ್ಮ ಮುಖಗಳಿಂದ ಉರಿಯನ್ನು ಕಕ್ಕುತ್ತ, ಭಯಂಕರವಾಗಿ ಬಾಯನ್ನು ತೆರೆದು ನೆಟ್ಟಗೆ ರಾಮನಿಗಿದಿರಾಗಿಯೇ ಬಂದುವು. ವಾಸುಕಿಯಂತೆ ಕ್ರೂರಸ್ಪರ್ಶವುಳ್ಳವುಗಳಾಗಿ ಜಾಜ್ವಲ್ಯಮಾನವಾಗಿ ಉರಿಯುವಂತೆ ತೋರುವ ಹೆಡೆಗಳಿಂದಲೂ, ಕ್ರೂರವಿಷದಿಂದಲೂ ಭಯಂಕರಗಳಾದ ಆ ಸರ್ಪಸಮೂಹಗಳೇ ಎಲ್ಲೆಲ್ಲಿಯೂ ಹರಡಿ, ದಿಕ್ಕುವಿದಿಕ್ಕುಗಳೆಲ್ಲವನ್ನೂ ದಟ್ಟವಾಗಿ ಮರೆಸುವಂತೆ ವ್ಯಾಪಿಸಿ, ದುವು. ಹೀಗೆ ರಣರಂಗದಲ್ಲಿ ತನಗಿದಿರಾಗಿ ಬರುತ್ತಿರುವ ಸರ್ಪಸಮೂಹಗಳನ್ನು ನೋಡಿದೊಡನೆ, ರಾಮನು ಅವುಗಳನ್ನು ನಿಗ್ರಹಿಸುವುದಕ್ಕಾಗಿ, ಭಯಂಕರವಾದ ಗಾರುಡಮಂತ್ರವನ್ನಭಿಮಂತ್ರಿಸಿ, ತನ್ನ ಧನುಸ್ಸಿನಲ್ಲಿ ಬಾಣಗಳನ್ನು ಹೂಡಿದನು, ಚಿನ್ನದ ಹಿಡಿಗಳಿಂದ ಕೂಡಿ, ಅಗ್ನಿಯಂತೆ ಜ್ವಲಿಸುತ್ತಿದ್ದ ಆ ರಾಮಬಾಣಗಳು ಧನುಸ್ಸಿನಿಂದ ಹೊರಟಕೂಡಲೆ, ಆ ಸರ್ಪಗಳನ್ನು ನುಂಗತಕ್ಕ ಸುವರ್ಣಮಯಗಳಾದ ಗರುಡಪಕ್ಷಿಗಳಾಗಿ ಅಂತರಿಸಲಾರಂಭಿಸಿದುವು- ಕಾಮರೂಪಿಗಳಾದ ಆ ರಾಮಬಾಣಗಳೆಲ್ಲವೂ ಹೀಗೆ ಗರುಡಾಕಾರವನ್ನು ಹೊಂದಿ ಬಂದು, ತಮಗಿದಿರಾಗಿ ಮಹಾವೇಗದಿಂದ ಸರ್ಪರೂಪಗಳಾಗಿ ಬರುತ್ತಿದ್ದ ಬಾಣಗಳೆಲ್ಲವನ್ನೂ ಧ್ವಂಸ ಮಾಡಿದುವು. ಆಗ ರಾವಣನು ತನ್ನ ಮಹಾಸ್ತ್ರವು ಪ್ರತಿಹತವಾದುದನ್ನು ನೋಡಿ ಬಹಳಕೋಪಾವಿಷ್ಟನಾಗಿ, ರಾಮನಮೇಲೆ ಸಾವಿರಾರು ಬಾಣಗಳನ್ನು ಪ್ರಯೋಗಿಸಿದ ಮೇಲೆ ಬೇರೆ ಕೆಲವು ಬಾಣಗಳನ್ನು

ತೆಗೆದು ಮಾತಲಿಯನ್ನು ಪ್ರಹರಿಸಿದನು. ಮತ್ತು ಆಗ ರಾವಣನು, ರಾಮನು ಕುಳಿತಿದ್ದ ಇಂದ್ರರಥದ ಮಧ್ಯದಲ್ಲಿದ್ದ ಧ್ವಜಪಟಕ್ಕೆ ಗುರಿಯಿಟ್ಟು ಒಂದು ಬಾಣವನ್ನು ಪ್ರಯೋಗಿಸಿ, ಅದನ್ನು ಭೇದಿಸಿದನು. ಆ ರಥಕ್ಕೆ ಕಟ್ಟಿದ ದೇವೇಂದ್ರನ ಕುದುರೆಗಳನ್ನೂ ಬಾಣದಿಂದ ಭೇದಿಸಿದನು. ದುರಾತ್ಮನಾದ ರಾವಣನು ಮಾಡಿದ ಈ ಅಸಾಧ್ಯಕಾರ್ಯವನ್ನು ನೋಡಿ ದೇವದಾನವಗಂಧರ್ವಚಾರಣಾದಿಗಳೆಲ್ಲರೂ ಬಹಳ ವಿಷಾದವನ್ನು ಹೊಂದಿದರು. ರಾವಣನ ಬಾಣಗಳಿಂದ ರಾಮನು ನೊಂದುದನ್ನು ನೋಡಿ, ಸಿದ್ಧರೂ, ಮಹರ್ಷಿಗಳೂ, ವಿಭೀಷಣಸಹಿತವಾಗಿ ಸಮಸ್ತವಾನರರೂ ಬಹಳ ವ್ಯಥೆಗೊಂಡಿದ್ದರು. ರಾಹುವು ಚಂದ್ರನನ್ನು ಹಿಡಿದಂತೆ ರಾವಣನಿಂದ ರಾಮನು ತಡೆಯಲ್ಪಟ್ಟುದನ್ನು ನೋಡಿ ಬುಧನು [1]ಪ್ರಜಾನಾಶಸೂಚಕನಾಗಿ ಪ್ರಜಾಪತಿದೇವತಾತ್ಮಕಳಾಗಿಯೂ, ಚಂದ್ರನಿಗೆ ಪ್ರಿಯೆಯಾಗಿಯೂ ಇರುವ ರೋಹಿಣಿಯನ್ನು ಆಕ್ರಮಿಸಿ ನಿಂತನು. ಸಮುದ್ರವು ಹೊಗೆಯಾಡುವ ಅಲೆಗಳಿಂದ ಕೂಡಿ ಜ್ವಲಿಸುವಂತೆ ಕಾಣುತ್ತ, ಕೋಪದಿಂದ ಹಾರಿ ಸೂರ್ಯನನ್ನು ಮುಟ್ಟುವಹಾಗೆ ವೇಗದಿಂದ ಮೇಲೆ ಮೇಲೆ ಉಕ್ಕಿಬರುತ್ತಿತ್ತು. ಸೂರ್ಯನು ಕಾಂತಿಗುಂದಿ, ಕತ್ತಿಯಂತೆ ನೀಲವರ್ಣವುಳ್ಳವನಾಗಿ ತಲೆಯಿಲ್ಲದ ಕಬಂಧಾಕಾರವಾದ ಧೂಮಕೇತುವಿನೊಡಗೂಡಿ ಮಹಾಭಯಂಕರನಾಗಿ ಕಾಣುತ್ತಿದ್ದನು. ಆಕಾಶದಲ್ಲಿ ಇಕ್ಷ್ವಾಕುರಾಜರಿಗೆ ಪ್ರಧಾನವೆನಿಸಿದ ಇಂದ್ರಾಗ್ನಿ ದೇವತಾತ್ಮಕವಾದ ವಿಶಾಖಾನಕ್ಷತ್ರವನ್ನು ಅಂಗಾರಕನು ಬಂದು ಮುತ್ತಿದನು. ಆಗ ಆ ಯುದ್ಧಭೂಮಿಯಲ್ಲಿ, ಹತ್ತು ತಲೆಗಳಿಂದಲೂ, ಇಪ್ಪತ್ತು ಭುಜಗಳಿಂದಲೂಕೂಡಿ ಧನುರ್ಧಾರಿಯಾಗಿ ನಿಂತಿದ್ದ ರಾವಣನು ನೋಡುವವರಿಗೆ ಮೈನಾಕಪರ್ವತದಂತೆ ಕಾಣುತ್ತಿದ್ದನು. ಹೀಗೆ ಮಹಾಭಯಂಕರನಾದ ರಾವಣನು ಮೇಲೆ ಮೇಲೆ ವೀರ್ಯದಿಂದುಬ್ಬಿ, ರಾಮನನ್ನು ಬಾಣಗಳಿಂದ ಪೀಡಿಸುತ್ತಿರಲು, ಆಗ ರಾಮನಿಗೆ ತನ್ನಬಾಣಗಳನ್ನು ಬಿಲ್ಲಿನಲ್ಲಿ ಸಂಧಾನಮಾಡುವುದಕೂ ಸಾಧ್ಯವಿಲ್ಲದಂತಾಯಿತು. ಮೊದಲೇ ರಕ್ತಾಂತಲೋಚನನಾದ ರಾಮನು ರಾವಣನ ಕಾರ್ಯಕ್ಕಾಗಿ ಕೋಪಗೊಂಡು ಮತ್ತಷ್ಟು ಕೆಂಪೇರಿದ ಕಣ್ಣು

---

[1] ಬುಧನು ರೋಹಿಣೀ ನಕ್ಷತ್ರವನ್ನು ಸಮೀಪಿಸಿದಾಗ ಜಗತ್ಪೀಡೆಯುಂಟಾಗುವುದೆಂದು ಜ್ಯೋತಿಶ್ಶಾಸ್ತ್ರವಿಧಿಯು.

ಗಳುಳ್ಳವನಾಗಿ ಮುಖದಲ್ಲಿ ಹುಬ್ಬುಗಳನ್ನು ಗಂಟಿಕ್ಕಿ, ತನ್ನ ನೋಟದಿಂದಲೇ ಸಮಸ್ತ ಶತ್ರುಗಳನ್ನೂ ದಹಿಸುವಂತೆ ತೋರುತ್ತಿದ್ದನು.

ಇಲ್ಲಿಗೆ ನೂರಮೂರನೆಯ ಸರ್ಗವು

ರಾಮನು ತನಗೆ ಇಂದ್ರದತ್ತವಾದ ಶಕ್ತಿಯಿಂದ ರಾವಣನು ಪ್ರಯೋಗಿಸಿದ ಶೂಲವನ್ನು ಮುರಿದುದು. ಆತನ ರಥಾಶ್ವಗಳನ್ನು ಪ್ರಹರಿಸಿದುದು.

ಕೋಪೋದ್ರಿಕ್ತನಾಗಿದ್ದ ರಾಮನ ಮುಖವನ್ನು ನೋಡಿದ ಮಾತ್ರಕ್ಕೆ ಸಮಸ್ತ ಭೂತಗಳೂ ಭಯಪಟ್ಟುವು. ಭೂಮಿಯು ಕಂಪಿಸಿತು. ಸಮೀಪದಲ್ಲಿ ಸಿಂಹಶಾರ್ದೂಲಗಳಿಂದ ತುಂಬಿದ್ದ ಪರ್ವತವೂ ಕೂಡ, ತನ್ನ ಮೇಲಿನ ಸಮಸ್ತ ವೃಕ್ಷಗಳೊಡನೆ ಚಲಿಸಿಹೋಯಿತು. ನದೀಪತಿಯಾದ ಸಮುದ್ರನೂ ಬಹಳವಾಗಿ ಕ್ಷೋಭೆಹೊಂದಿದಂತಾದನು. ಆಕಾಶದಲ್ಲಿ ಹಕ್ಕಿಗಳು ಪರುಷಧ್ವನಿಯಿಂದ ಕೂಗಿದುವು. ಕ್ರೂರಸ್ವರೂಪವುಳ್ಳ ಮೇಘಗಳು ಮಹೋತ್ಪಾತಸೂಚಕಗಳಾದ ಧ್ವನಿಗಳಿಂದ ಗರ್ಜಿಸುತ್ತ ಸುತ್ತುತ್ತಿದ್ದುವು. ರಾಮನು ಹೀಗೆ ಮಿತಿಮೀರಿ ಕೋಪಗೊಂಡಿರುವುದನ್ನೂ, ಅಲ್ಲಲ್ಲಿ ಭಯಂಕರಗಳಾದ ಈ ಮಹೋತ್ಪಾತಗಳನ್ನೂ ನೋಡಿ ಸಮಸ್ತಪ್ರಾಣಿಗಳೂ ಹೆದರಿದುವು. ರಾವಣನಿಗೂ ಭಯವುಂಟಾಯಿತು. ಶೂರರಾದ ರಾಮರಾವಣರಿಬ್ಬರೂ ಭಯಂಕರಗಳಾದ ವಿವಿಧಾಯುಧಗಳನ್ನು ಹಿಡಿದು, ಚಿತ್ರವಿಚಿತ್ರವಾಗಿ ಯುದ್ಧಮಾಡುತ್ತಿರುವಾಗ, ಜಗತ್ಪ್ರಳಯದಂತಿರುವ ಆ ಯುದ್ಧವನ್ನು, ದೇವತೆಗಳೂ, ಗಂಧರ್ವರೂ, ಮಹೋರಗರೂ, ಋಷಿಗಳೂ, ದೈತ್ಯದಾನವರೂ, ಗರುಡರೂ ಆಕಾಶದಲ್ಲಿ ವಿಮಾನಾರೂಢರಾಗಿ ಆಶ್ಚರ್ಯದಿಂದ ನೋಡುತ್ತಿದ್ದರು. ಆಗ ಆ ಯುದ್ಧವನ್ನು ನೋಡುವುದಕ್ಕಾಗಿ ಬಂದ ದೇವಾಸುರರೆಂಬ ಉಭಯಪಕ್ಷದವರೂ, ರಾಮರಾವಣರಿಗೆ

ನಡೆಯುತ್ತಿದ್ದ ಆ ಮಹಾಯುದ್ಧವನ್ನು ನೋಡುವಾಗ, ತಮತಮಗಿರುವ ಪಕ್ಷಪಾತದಿಂದ ಒಬ್ಬರಿಗೊಬ್ಬರು ವಾದಿಸುತ್ತಾ, ತಮ್ಮತಮ್ಮ ವೀರರಲ್ಲಿ ತಮಗಿರುವ ಭಕ್ತಿಯನ್ನು ಸೂಚಿಸುವಂತೆ ಉತ್ಸಾಹಸೂಚಕಗಳಾದ ಮಾತು ಗಳನ್ನಾಡತೊಡಗಿದರು. ಅಸುರರೆಲ್ಲರೂ ಒಂದಾಗಿ "ರಾವಣಾ !ಜಯಿಸು!" ಎಂದು ಕೂಗುತ್ತಿದ್ದರು. ಹಾಗೆಯೇ, ದೇವತೆಗಳೂ "ರಾಮಾ! ನೀನು ಜಯಿಸು !" ಎಂದು ಕೂಗುತ್ತಿದ್ದರು. ಈ ನಡುವೆ ದುಷ್ಟಾತ್ಮನಾದ ರಾವಣನೂ ರಾಮನ ಮೇಲೆ ಕೋಪಗೊಂಡು, ಅವನನ್ನು ಪ್ರಹರಿಸುವು ದಕ್ಕೆ ತಕ್ಕ ಆಯುಧವಾವುದೆಂದು ಕ್ಷಣಕಾಲದವರೆಗೆ ಚಿಂತಿಸಿ, ಕೊನೆಗೆ ವಜ್ರಾಯುಧದಂತೆ ಸಾರವುಳ್ಳುದಾಗಿಯೂ, ಮಹಾಧ್ವನಿಯಿಂದ ಕೂಡಿದು ದಾಗಿಯೂ, ಸಮಸ್ತಶತ್ರುಗಳನ್ನೂ ಕ್ಷಣಕಾಲದಲ್ಲಿ ಧ್ವಂಸಮಾಡತಕ್ಕು ದಾಗಿಯೂ ಇದ್ದ ಒಂದು ಶೂಲವನ್ನು ಕೈಗೆತ್ತಿಕೊಂಡು, ಕೋಪದಿಂದ ಜ್ವಲಿಸುತ್ತ ಮುಂದೆ ಬಂದನು. ಪರ್ವತಶಿಖರಗಳಂತಿರುವ ದೊಡ್ಡದೊಡ್ಡ ಕಬ್ಬಿಣದ ಮುಳ್ಳುಗಳಿಂದ ಭಯಂಕರವಾಗಿಯೂ, ಹರಿತವಾದ ಬಾಯುಳ್ಳು ದಾಗಿಯೂ, ಹೊಗೆಯೊಡಗೂಡಿದ ಅಗ್ನಿಜ್ವಾಲೆಯಂತೆ ಕರೀಬಣ್ಣದಿಂದ ಕೂಡಿ ಧಗಧಗಿಸುವ ಅಲಗುಳ್ಳುದಾಗಿಯೂ, ಕಾಲಾಗ್ನಿಸಮೂಹಕ್ಕೆ ಸಮಾನವಾಗಿಯೂ, ರುದ್ರನ ಶೂಲವನ್ನು ಮೀರಿಸಿದುದಾಗಿಯೂ, ಎಂತ ವರಿಗೂ ತಡೆಯಲಶಕ್ಯವಾಗಿಯೂ, ಯಮನಿಗೂ ಸಮೀಪಿಸಲಸಾಧ್ಯ ವಾಗಿಯೂ, ಸಮಸ್ತಭೂತಗಳನ್ನೂ ನಡುಗಿಸತಕ್ಕುದಾಗಿಯೂ, ಶತ್ರು ಶರೀರಗಳನ್ನು ಗರಗಸದಂತೆ ಕುಯ್ದು ಕತ್ತಿಯಂತೆ ಭೇದಿಸತಕ್ಕುದಾಗಿಯೂ ಇದ್ದ ಆ ಶೂಲವನ್ನು ರಾವಣನು ಅತಿಕೋಪಾವೇಶದಿಂದ ಕೈಯಲ್ಲಿ ಹಿಡಿದನು. ಅನೇಕ ರಾಕ್ಷಸರಿಂದ ಪರಿವೇಷ್ಟಿತನಾದ ರಾವಣನು, ಆ ಮಹಾಶೂಲವನ್ನು ಅದರ ಮಧ್ಯಭಾಗಕ್ಕೆ ಸರಿಯಾಗಿ ಕೈಯಿಟ್ಟು ಮೇಲ ಕ್ಕೆತ್ತಿ ಹಿಡಿದು, ಕೋಪದಿಂದ ಕೆಂಪೇರಿದ ಕಣ್ಣುಳ್ಳವನಾಗಿ ನಿಂತು ತನ್ನ ಸೈನ್ಯವೆಲ್ಲವೂ ಸಂತೋಷಿಸುವಂತೆ ಒಂದು ದೊಡ್ಡ ಸಿಂಹನಾದವನ್ನು ಮಾಡಿ, ದನು. ಭಯಂಕರವಾದ ಈ ರಾವಣನ ಸಿಂಹನಾದಧ್ವನಿಗೆ ಭೂಮಿಯೂ ಆಕಾಶವೂ, ದಿಕ್ಕುವಿದಿಕ್ಕುಗಳೂ ಅದಿರಿದುವು. ಸ್ವಭಾವದಿಂದಲೇ ಮಹಾ ಧ್ವನಿಯುಳ್ಳ ಆ ರಾವಣನ ಗರ್ಜನವನ್ನು ಕೇಳಿ ಸಮಸ್ತ ಭೂತಗಳೂ ಭೀತಿಗೊಂಡುವು. ಸಮುದ್ರವು ಕ್ಷೋಭಿಸಿತು. ಮಹಾವೀರ್ಯವುಳ್ಳ ರಾವಣನು

ಹೀಗೆ ಶೂಲವನ್ನು ಹಿಡಿದು ದೊಡ್ಡಧ್ವನಿಯಿಂದ ಸಿಂಹನಾದವನ್ನುಮಾಡಿ, ಮುಂದಿದ್ದರಾಮನನ್ನು ಕುರಿತು ಪರುಷವಾಕ್ಯದಿಂದ "ರಾಮಾ! ಇದೋ! ಈಗ ನಿನಗಾಗಿ ನಾನು ಕೋಪದಿಂದ ಮೇಲಕ್ಕೆತ್ತಿ ಹಿಡಿದಿರುವ ವಜ್ರ ಸಾರವಾದ ಈ ಶೂಲವು, ನಿನ್ನನ್ನೂ, ನಿನ್ನ ತಮ್ಮನನ್ನೂ ಈ ಕ್ಷಣವೇ ತೀರಿಸಿ ಬಿಡುವುದರಲ್ಲಿ ಸಂದೇಹವಿಲ್ಲ! ರಾಮಾ! ಇನ್ನು ನೀನು ನಿನ್ನ ಹೆಮ್ಮೆಯನ್ನಡಗಿಸಿಡು! ಇದೋ! ಈಗಲೇ ನಿನ್ನನ್ನೂ, ಇದುವರೆಗೆ ಯುದ್ಧದಲ್ಲಿ ನಿನ್ನಿಂದ ಹತರಾದ ರಾಕ್ಷಸರ ಜತೆಯಲ್ಲಿ ಸೇರಿಸಿಬಿಡುವೆನು. ರಾಮಾ! ಮುಂದೆನಿಲ್ಲು! ಈ ಶೂಲದಿಂದಲೇ ನಿನ್ನನ್ನು ಕೊಲ್ಲುವೆನು ನೋಡು?" ಎಂದನು. ರಾವಣನು ಈ ಮಾತನ್ನು ಹೇಳಿ ಆ ಶೂಲವನ್ನು ರಾಮನ ಮೇಲೆ ಬೀಸಿದನು. ರಾವಣನ ಕೈಯಿಂದ ಪ್ರಯೋಗಿಸಲ್ಪಟ್ಟ ಆ ಶೂಲವು, ಮಿಂಚಿನಂತಿರುವ ಜ್ವಾಲೆಗಳಿಂದ ಕೂಡಿ ಧಗಧಗಿಸುತ್ತ ಹೊರಟಿತು. ಎಂಟುಘಂಟೆಗಳಿಂದ ಕೂಡಿ ಮಹಾಧ್ವನಿಯಿಂದ ಮೊಳ ಗುತ್ತಿದ್ದ ಆ ಶೂಲವು, ಆಕಾಶದಲ್ಲಿ ಬರುವಾಗಲೇ ಮಹತ್ತಾದ ಕಾಂತಿ ವಿಶೇಷದಿಂದ ಶೋಭಿಸುತ್ತಿತ್ತು. ಹೀಗೆ ಭಯಂಕರವಾಗಿ ಜ್ವಲಿಸುತ್ತ ತನ ಗಿದಿರಾಗಿ ಬರುತ್ತಿದ್ದ ಆ ಶೂಲವನ್ನು ನೋಡಿ ವೀರ್ಯವಂತನಾದ ರಾಮನು ಅದನ್ನು ನಿಗ್ರಹಿಸುವುದಕ್ಕಾಗಿ ತನ್ನ ಬಿಲ್ಲನ್ನೆಳೆದು ಬಾಣಗಳನ್ನು ಪ್ರಯೋಗಿಸಿ ದನು. ಪ್ರಳಯಕಾಲದಲ್ಲಿ ಪ್ರಜ್ವಲಿಸುತ್ತಿರುವ ಅಗ್ನಿಯನ್ನು ಇಂದ್ರನು ಜಲ ಪ್ರವಾಹಗಳಿಂದ ನಂದಿಸುವಂತೆ ರಾಮನು ತನ್ನ ಮೇಲೆ ಬರುತ್ತಿದ್ದ ಆ ಶೂಲ ವನ್ನು ಬಾಣಸಮೂಹಗಳಿಂದ ನಿವಾರಿಸುತ್ತಿದ್ದರೂ, ಈ ಬಾಣಗಳೆಲ್ಲವೂ ಆ ಶೂಲವನ್ನು ಮುಟ್ಟಿದೊಡನೆ ಬೆಂಕಿಯಲ್ಲಿ ಬಿದ್ದ ಮಿಡಿತೆಗಳಂತೆ ದಗ್ಧಗಳಾಗಿ ಬಿದ್ದುವು. ಆಗ ರಾಮನು, ತನ್ನ ಬಾಣಗಳೆಲ್ಲವೂ ರಾವ ಣನ ಶೂಲದಿಂದ ಪ್ರತಿಹತವಾಗಿ ಅಂತರಿಕ್ಷದಲ್ಲಿಯೇ ಸುಟ್ಟು ಪುಡಿಪುಡಿ ಯಾಗಿ ಬೀಳುವುದನ್ನು ನೋಡಿ, ಮಹತ್ತಾದ ಕೋಪವನ್ನು ಹೊಂದಿ ತನಗೆ ಮಾತಲಿಯು ತಂದು ಕೊಟ್ಟಿದ್ದ ದೇವೇಂದ್ರ ನಿರ್ಮಿತವಾದ ಮಹಾ ಶಕ್ತಿಯನ್ನೆತ್ತಿ ಗಿರಗಿರನೆ ತಿರುಗಿಸಿದಾಗ, ಆ ಶಕ್ತಿಯು ಘಂಟಾಧ್ವನಿ ಗಳಿಂದ ಮೊಳಗುತ್ತ ಪ್ರಳಯಕಾಲದಲ್ಲಿ ಕಾಣುವ ಮಹತ್ತಾದ ಕೊಳ್ಳಿ ಯಂತೆ ದೇದೀಪ್ಯಮಾನವಾಗಿ, ಗಗನ ಪ್ರದೇಶವನ್ನೂ ತನ್ನ ಕಾಂತಿ ಯಿಂದ ಬೆಳಗುತ್ತಿತ್ತು. ರಾಮನು ಆ ಮಹಾಶಕ್ತಿಯನ್ನು ಬೀಸಿದೊಡನೆ,

ಅದರಿಂದ ರಾವಣನ ಶೂಲವು ಭಿನ್ನವಾಗಿ, ಕಾಂತಿಗುಂದಿ ಕೆಳಗೆ ಬಿದ್ದಿತು. ಇಷ್ಟರಲ್ಲಿ ತಿರುಗಿ ರಾಮನು, ಮಹಾವೇಗವುಳ್ಳವುಗಳಾಗಿಯೂ ಸಿಡಿಲಿನಂತೆ ಧ್ವನಿಯುಳ್ಳವುಗಳಾಗಿಯೂ, ಅತಿ ತೀಕ್ಷ್ಣಗಳಾಗಿಯೂ ಇರುವ ಕೆಲವು ಕ್ರೂರಬಾಣಗಳನ್ನು ಪ್ರಯೋಗಿಸಿ ರಾವಣನ ರಥಾಶ್ವಗಳನ್ನು ಪ್ರಹರಿಸಿದನು. ಮತ್ತು ಮೊದಲಿಗಿಂತಲೂ ಹೆಚ್ಚಾದ ಹಸ್ತಲಾಘವವನ್ನು ತೋರಿಸುತ್ತ, ರಾವಣನ ಎದೆಗೆ ಗುರಿಯಿಟ್ಟು ಅನೇಕ ತೀಕ್ಷ್ಣಬಾಣಗಳನ್ನು ಹೊಡೆದನು. ಅವನ ಹಣೆಯಲ್ಲಿ ಮೂರುಬಾಣಗಳನ್ನು ನಾಟಿದನು. ರಾವಣನ ಸಮಸ್ತಾವಯವಗಳಲ್ಲಿಯೂ ರಾಮ ಬಾಣಗಳು ನಾಟಿ, ಅವನ ಸರ್ವಾಂಗಗಳಲ್ಲಿಯೂ ರಕ್ತವು ಕಿತ್ತುಕೊಂಡುದರಿಂದ, ಅವನು ಪುಷ್ಪಿತವಾದ ಅಶೋಕವೃಕ್ಷದಂತೆ ಕಾಣಿಸುತ್ತಿದ್ದನು. ಆಗ ರಾವಣನು, ತನ್ನ ಅಂಗಾಂಗಗಳಲ್ಲಿಯೂ ರಾಮ ಬಾಣಗಳು ನಾಟಿ, ಮೈಯೆಲ್ಲವೂ ರಕ್ತಮಯವಾಗಿರುವುದನ್ನು ನೋಡಿ, ಮನಸ್ಸಿನಲ್ಲಿ ಸ್ವಲ್ಪಖೇದವನ್ನು ಹೊಂದಿದ್ದು, ಕೂಡಲೇ ಮಿತಿಮೀರಿದ ಕೋಪದಿಂದುಕ್ಕಿದನು.

ಇಲ್ಲಿಗೆ ನೂರನಾಲ್ಕನೆಯ ಸರ್ಗವು

ರಾಮನು ರಾವಣನ ಬಾಣಗಳನ್ನು ನಿವಾರಿಸಿ, ಅವನನ್ನು
ನಿಂದಿಸುತ್ತ, ಆತನಮೇಲೆ ಪರಂಪರೆಯಾಗಿ ಬಾಣಗಳನ್ನು
ವರ್ಷಿಸಿದುದು. ರಾಮಬಾಣಗಳಿಂದ ರಾವಣನು
ಮೈಮರೆತಿದ್ದುದನ್ನು ನೋಡಿ, ಅವನ ಸಾರಥಿಯು
ರಥವನ್ನು ಹಿಂತಿರುಗಿಸಿ ಬೇರೊಂದು
ಕಡೆಗೆ ತಂದುದು.

ಆಗ ಯುದ್ಧಗರ್ವಿತನಾದ ರಾವಣನು ರಾಮನು ತನ್ನನ್ನು ಹೊಡೆದುದಕ್ಕಾಗಿ ಮಹತ್ತಾದ ಕೋಪವನ್ನು ಹೊಂದಿ, ಕಣ್ಣುಗಳಿಂದ ಕಿಡಿಗಳನ್ನು ಕೆದರುತ್ತ, ಬಿಲ್ಲನ್ನೆಳೆದು ರಾಮನಮೇಲೆ ಅನೇಕ ಬಾಣಗಳನ್ನು ಪ್ರಯೋಗಿಸಿದನು. ಆಕಾಶದಿಂದ ಮೇಘಗಳು ಮಳೆಯನ್ನು ಕರೆದು ಕೆರೆಯನ್ನು

ತುಂಬುವಂತೆ, ರಾವಣನು ಪರಂಪರೆಯಾಗಿ ಸಾವಿರಾರು ಬಾಣಗಳನ್ನು ವರ್ಷಿಸಿ, ರಾಮನ ದೇಹವನ್ನು ಪೂರ್ಣವಾಗಿ ಆ ಬಾಣಗಳಿಂದಲೇ ಮುಚ್ಚಿಬಿಟ್ಟನು. ಹೀಗೆ ರಾವಣನೂ ಎಡೆಬಿಡದೆ ಬಾಣಗಳಿಂದ ಮುಚ್ಚಿದರೂ, ರಾಮನು ನಿಶ್ಚಲವಾದ ಮಹಾ ಪರ್ವತದಂತೆ ಸ್ವಲ್ಪಮಾತ್ರವೂ ಕದಲದೆ ಧೈರ್ಯದಿಂದ ನಿಂತಿದ್ದನು. ಮತ್ತು ರಾವಣನ ಬಾಣಗಳನ್ನು ತನ್ನ ಬಾಣಗಳಿಂದ ನಿವಾರಿಸಿ, ಅದಕ್ಕೂ ಮಿಂಚಿಬಂದ ಬಾಣಗಳನ್ನು ಮಾತ್ರ ಬಿಸಿಲಿಗೆ ಮೈಯೊಡ್ಡಿದಂತೆ ತನ್ನ ದೇಹದಿಂದಲೇ ತಡೆದು ನಿಂತಿದ್ದನು. ಆಗ ರಾವಣನು ರಾಮನ ಧೈರ್ಯವನ್ನು ನೋಡಿ ಸಹಿಸಲಾರದೆ ತನ್ನ ಪೂರ್ಣವಾದ ಹಸ್ತಲಾಘವದಿಂದ ಸಾವಿರಾರು ಬಾಣಗಳನ್ನು ಪ್ರಯೋಗಿಸಿ, ರಾಮನ ಎದೆಯಲ್ಲಿ ನಾಟಿದನು. ಆ ಬಾಣಗಳಿಂದ ರಾಮನು ರತ್ನಮಯವಾದ ಮೈಯುಳ್ಳವನಾಗಿ, ಕಾಡಿನಲ್ಲಿ ಪುಷ್ಪಿತವಾದ ಒಂದು ದೊಡ್ಡ ಕಿಂಶುಕವೃಕ್ಷದಂತೆ ಶೋಭಿಸುತ್ತಿದ್ದನು. ಹೀಗೆ ರಾವಣನ ಬಾಣಗಳು ಮೈಗೆ ತಾಗಿದೊಡನೆ ರಾಮನು ಅತ್ಯಂತಕೋಪಾವಿಷ್ಟನಾಗಿ, ಪ್ರಳಯಕಾಲದ ಸೂರ್ಯನಂತೆ ಅತ್ಯುಗ್ರಗಳಾದ ಕೆಲವು ಬಾಣಗಳನ್ನು ನೋಡಿ, ಮುಗುಳ್ನಗೆ ನಗುತ್ತ ಕ್ರೂರವಾಕ್ಯದಿಂದ ಅವನನ್ನು ಕುರಿತು "ಎಲೆ ರಾಕ್ಷಸಾಧಮಾ ! ನಾನಿಲ್ಲದ ಕಾಲದಲ್ಲಿ ನನ್ನ ಪತ್ನಿಯು ಚಿಂತೆಯಿಂದ ಪರವಶೆಯಾಗಿದ್ದಾಗ ನೀನು ನನಗೆ ತಿಳಿಯದ ಹಾಗೆ ಕಳ್ಳನಂತೆ ಬಂದು, ಜನಸ್ಥಾನದಿಂದ ಅವಳನ್ನು ಕದ್ದು ತಂದೆಯಲ್ಲವೆ? ಇಂತಹ ನೀಚವಾದ ನಿನ್ನ ವೀರ್ಯವೊಂದು ವೀರ್ಯವೆ? ಘೋರಾರಣ್ಯದಲ್ಲಿ ನನ್ನನ್ನಗಲಿ ದುಃಖಿತೆಯಾಗಿದ್ದ ಸೀತೆಯನ್ನು ಬಲಾತ್ಕಾರದಿಂದ ಹಿಡಿದು ಕದ್ದು ತಂದ ನೀನು ಈಗ ನನ್ನ ಮುಂದೆಯೇ "ನಾನು ಶೂರ" ನೆಂದು ಹೇಳಿಕೊಳ್ಳುವೆಯಾ ? ಛೀ ! ನೀನೆಂತಹ ಶೂರನು? ಪತಿಯಿಲ್ಲದ ಪರಸ್ತ್ರೀಯರ ಮುಂದೆ ನಿನ್ನ ಶೌರ್ಯವೇ ಹೊರತು, ಯುದ್ಧಕ್ಕೆ ಯೋಗ್ಯವಾದುದಲ್ಲ ! ಎಲೆ ಪಾಪಿ ! ಪತಿಯು ಸಮೀಪದಲ್ಲಿಲ್ಲದ ಕಾಲದಲ್ಲಿ ಪರಸ್ತ್ರೀಯರ ವಿಷಯದಲ್ಲಿ ಕುತ್ಸಿತರಿಗೆ ಯೋಗ್ಯವಾದ ಕಾರ್ಯವನ್ನು ನಡೆಸುವುದಕ್ಕೆ ಹೋದ ನೀನು, ಈಗ ಶೂರನೆಂದು ಹೇಳಿಕೊಳ್ಳುವೆಯಲ್ಲಾ! ಎಲೆ ದುರಾತ್ಮಾ ! ನಿನಗೆ ಸ್ವಲ್ಪವಾದರೂ ಮರ್ಯಾದೆಯೆಂಬುದಿಲ್ಲ ! ನಿನಗೆ ನಾಚಿಕೆಯೂ ಇಲ್ಲ! ನಿನ್ನ ನಡವಡಿಕೆಗಳೂ ಒಂದುವಿಧವಾದುದಲ್ಲ ! ಈಗ ನಿನಗೆ ನೀನೇ ಮೃತ್ಯುವನ್ನು ತಂದುಕೊಂಡು ಮೃತಪ್ರಾಯನಾಗಿದ್ದರೂ,

ನೀನೇ ಶೂರನೆಂದು ತಿಳಿದಿರುವೆಯಾ? ಆಹಾ! ನಾನು ಶೂರನೆಂದೂ ಕುಬೇರನಿಗೆ ಸಾಕ್ಷಾತ್ಸಹೋದರನೆಂದೂ, ಬಲದಲ್ಲಿ ಹೆಚ್ಚಿದವನೆಂದೂ ಹೇಳಿಕೊಳ್ಳುವ ನೀನು, ಈ ನಿನ್ನ ಗೌರವಗಳಿಗೆ ತಕ್ಕಂತೆ ಬಹಳ ಶ್ಲಾಘ್ಯವಾಗಿಯೂ, ಕೀರ್ತಿಕರವಾಗಿಯೂ ಇರುವ ಕಾರ್ಯವನ್ನೇ ನಡೆಸಿದಂತಾಯಿತು! ಎಲೆ ದುರಾತ್ಮಾ! ನೀನು ಇದುವರೆಗೆ ಕೇವಲ ಗರ್ವದಿಂದ ಮಿತಿಮೀರಿ, ನಿಂದಿತವಾಗಿಯೂ, ಅಹಿತವಾಗಿಯೂ ಇರುವ ಯಾವಯಾವ ದುಷ್ಕಾರ್ಯಗಳನ್ನು ನಡೆಸಿದೆಯೋ, ಅವುಗಳಿಗೆಲ್ಲವೂ ತಕ್ಕ ಫಲವನ್ನು ಅನುಭವಿಸುವ ಕಾಲವು ಇದೋ! ಈಗ ಸನ್ನಿಹಿತವಾಗಿದೆ! ಎಲೆ ದುರ್ಬುದ್ಧೀ! ನಿನಗೆ ನೀನೇ ಶೂರನೆಂದು ಹೇಳಿಕೊಳ್ಳುವೆಯಲ್ಲಾ! ಕಳ್ಳನಂತೆ ಸೀತೆಯನ್ನು ಕದ್ದುತಂದ ನಿನಗೆ ನಾಚಿಕೆಯಿಲ್ಲವೆ? ಎಲೆ ರಾವಣಾ! ನನ್ನ ಕಣ್ಣೆದಿರಿಗೆ ಮಾತ್ರ ನೀನು ಈ ಸೀತೆಯನ್ನು ಕೆಣಕಿದ್ದ ಪಕ್ಷದಲ್ಲಿ, ಇಷ್ಟರಲ್ಲಿಯೇ ನೀನು ನನ್ನ ಬಾಣಗಳಿಂದ ಹತನಾಗಿ ನಿನ್ನ ತಮ್ಮನಾದ ಖರನೊಡನೆ ಸೇರುತ್ತಿದ್ದೆ! ಎಲೆ ದುರಾತ್ಮಾ! ಈಗಲೂ ನೀನು ದೈವಯೋಗದಿಂದ ನನ್ನ ಕಣ್ಣಿಗೆ ಬಿದ್ದಿರುವೆಯಷ್ಟೆ! ಇನ್ನು ನಾನು ತೀಕ್ಷ್ಣಬಾಣಗಳಿಂದ ನಿನ್ನನ್ನು ಯಮಪುರಿಗೆ ಕಳುಹಿಸದೆ ಬಿಡುವವನಲ್ಲ! ಈಗ ನನ್ನ ಬಾಣಗಳಿಂದ ಭಿನ್ನವಾಗಿ, ಜ್ವಲಿಸುವ ಕರ್ಣಕುಂಡಲಗಳೊಡನೆ ಕೆಳಗೆಬಿದ್ದು, ನೆಲದ ಮಣ್ಣಿನಿಂದ ಮಲಿನವಾದ ಈ ನಿನ್ನ ಶಿರಸ್ಸನ್ನು, ನರಿ ಮೊದಲಾದ ಮಾಂಸಾಹಾರಿ ಮೃಗಗಳೆಲ್ಲವೂ ಯುದ್ಧಭೂಮಿಯಲ್ಲಿ ಅತ್ತಿತ್ತ ಎಳೆದಾಡಲಿ! ರಾವಣಾ! ಈಗ ನನ್ನ ಬಾಣಗಳಿಂದ ಹತನಾಗಿ ನೆಲದಲ್ಲಿ ಬಿದ್ದ ನಿನ್ನ ಎದೆಯಮೇಲೆ ಹದ್ದುಗಳು ಬಂದು ಬಿದ್ದು ಆ ಬಾಣದಲಗುಗಳು ನಾಟಿದ ಗಾಯದಿಂದ ಹೊರಟ ರಕ್ತಜಲವನ್ನು ದಾಹವಡಗುವಂತೆ ಸಮೃದ್ಧವಾಗಿ ಕುಡಿಯಲಿ! ಇದೋ! ಈಗ ನೀನು ನನ್ನ ಬಾಣದಿಂದ ಹತನಾಗಿ ಸತ್ತು ಬಿದ್ದ ಮೇಲೆ, ಗರುಡಪಕ್ಷಿಗಳು ಹಾವನ್ನೆಳೆಯುವಂತೆ, ಮಾಂಸಾಹಾರಿಪಕ್ಷಿಗಳೆಲ್ಲವೂ ಬಂದು ನಿನ್ನ ನರಗಳನ್ನು ಕಿತ್ತು ತಿನ್ನಲಿ!" ಎಂದನು. ಪರಂತಪನಾದ ರಾಮನು ಈ ಮಾತುಗಳನ್ನು ಬಾಯಿಂದಾಡುತ್ತಿರುವಾಗಲೆ, ಮುಂದಿದ್ದ ರಾಕ್ಷಸರಾಜನಾದ ರಾವಣನ ಮೇಲೆ ಅನೇಕ ಬಾಣವರ್ಷವನ್ನು ಕರೆದನು. ಹೀಗೆ ಶತ್ರುವಧೋದ್ಯುಕ್ತನಾಗಿ ನಿಂತ ಆ ಶ್ರೀರಾಮನಿಗೆ, ಆಗ ಕ್ರಮಕ್ರಮವಾಗಿ ವೀರ್ಯವೂ, ದೇಹಬಲವೂ, ಧೈರ್ಯವೂ, ಅಸ್ತ್ರಬಲವೂ

ಮೇಲೆ ಮೇಲೆ ಹೆಚ್ಚಿ ಇಮ್ಮಡಿಯಾಗಿ ಬೆಳೆಯಿತು. ಸಮಸ್ತ ದಿವ್ಯಾಸ್ತ್ರಗಳೂ, ಪ್ರತ್ಯಕ್ಷವಾದಂತೆ ಸ್ಫುರಿಸಿದುವು. ಆತನಿಗೆ ಮೇಲೆ ಮೇಲೆ ಉತ್ಸಾಹವೂ ಹೆಚ್ಚಿತು! ಅವನ ಹಸ್ತಲಾಘವವೂ ಮೊದಲಿಗಿಂತಲೂ ಅತಿಶಯಿಸಿತು. ರಾಕ್ಷಸಕುಲನಾಶಕನಾದ ಆ ಶ್ರೀರಾಮನು, ಆಗ ತನಗುಂಟಾದ ಈ ಶುಭ ಸೂಚನೆಗಳೆಲ್ಲವನ್ನೂ ನೋಡಿ, ಮನಸ್ಸಿನಲ್ಲಿ ಮತ್ತಷ್ಟು ಉತ್ಸಾಹಗೊಂಡು, ತಿರುಗಿ ರಾವಣನನ್ನು ಬಾಣಗಳಿಂದ ಭೇದಿಸುವುದಕ್ಕೆ ತೊಡಗಿದನು. ಅಲ್ಲಲ್ಲಿ ವಾನರರು ನಾನಾ ದಿಕ್ಕುಗಳಿಂದಲೂ ಬೀಸಿ ಬಡಿಯುತ್ತಿದ್ದ ಶಿಲಾಸಮೂಹಗಳಿಂದಲೂ ರಾಮನ ಬಾಣದಿಂದಲೂ ರಾವಣನಿಗೆ ಹಿಂದುಮುಂದುತೋರದೆ ದಿಗ್ಭ್ರಮೆಹಿಡಿದಂತಾಯಿತು! ಅವನಿಗೆ ಮೃತ್ಯುಕಾಲವೂ ಸನ್ನಿಹಿತವಾದುದರಿಂದ, ಸಮಯೋಚಿತಗಳಾದ ಬಾಣಗಳನ್ನೆತ್ತಿ ಸಂಧಾನ ಮಾಡುವುದಕ್ಕಾಗಲಿ, ಬಿಲ್ಲನ್ನೆಳೆಯುವುದಕ್ಕಾಗಲಿ ಅವನಿಗೆ ಬುದ್ಧಿಯೇ ತೋರಲಿಲ್ಲ! ಅವನಿಗೆ ತನ್ನ ಮನಸ್ಸೇ ತನ್ನ ಸ್ವಾಧೀನವಿಲ್ಲದೆ ವಶತಪ್ಪಿದುದರಿಂದ, ರಾಮನ ವೀರ್ಯಕ್ಕೆ ತಕ್ಕ ಪ್ರತಿಕ್ರಿಯೆಯನ್ನು ಮಾಡುವುದಕ್ಕೂ ತೋರಲಿಲ್ಲ! ಅವನು ಪ್ರಯತ್ನ ಪೂರ್ವಕವಾಗಿ ಬಿಟ್ಟ ಬಾಣಗಳಾಗಲಿ, ಇತರ ಶಸ್ತ್ರಗಳಾಗಲಿ, ಯುದ್ಧದಲ್ಲಿ ಯಾವ ಪ್ರಯೋಜನಕ್ಕೂ ಬಾರದೆ ನಿಷ್ಫಲಗಳಾಗಿ ಬೀಳುತ್ತಿದ್ದುವು. ರಾವಣನು ಈ ದುರವಸ್ಥೆಯಲ್ಲಿರುವುದನ್ನು ಕಂಡಾಗಲೂ, ಅವನ ರಥವನ್ನು ನಡೆಸುತ್ತಿದ್ದ ಸಾರಥಿಯು ಮನಸ್ಸಿನಲ್ಲಿ ಧೈರ್ಯಗುಂದದೆ, ಆ ರಥವನ್ನು ಮೆಲ್ಲಗೆ ಹಿಂತಿರುಗಿಸಿ, ಯುದ್ಧಭೂಮಿಯಿಂದ ಬೇರೆ ಕಡೆಗೆ ಸಾಗಿಸಿಬಿಟ್ಟನು.

ಇಲ್ಲಿಗೆ ನೂರೈದನೆಯ ಸರ್ಗವು.

ರಾವಣನು ಕ್ಷಣಕಾಲದಮೇಲೆ ಚೇತರಿಸಿಕೊಂಡು, ರಥವನ್ನು ಹಿಂತಿರುಗಿಸಿ ತಂದುದಕ್ಕಾಗಿ ಸಾರಥಿಯಮೇಲೆ ಕೋಪಗೊಂಡು ಅವನನ್ನು ಹೆದರಿಸಿದುದು. ಸಾರಥಿಯು ತಕ್ಕಕಾರಣವನ್ನು ತಿಳಿಸಿ, ರಾವಣನನ್ನು ಸಮಾಧಾನಪಡಿಸಿ ತಿರುಗಿ ರಾವಣಾಜ್ಞೆಯಿಂದ ರಥವನ್ನು ರಣಾಗ್ರಕ್ಕೆ ತಂದುದು.

ಇಷ್ಟರಲ್ಲಿ ರಾವಣನಿಗೆ ಮೆಲ್ಲಮೆಲ್ಲಗೆ ಬುದ್ಧಿಯು ಸ್ವಾಧೀನವಾಯಿತು. ಆಗ ತನ್ನ ರಥವು ಯುದ್ಧಮುಖದಿಂದ ಹೊರಗೆ ಬಂದಿರುವುದನ್ನು ನೋಡಿದನು. ಆ ಸ್ಥಿತಿಯನ್ನು ನೋಡಿದೊಡನೆ ಅವನಿಗೆ ಮಹತ್ತಾದ ಕೋಪವುಂಟಾಯಿತು. ಆತನು ಮೃತ್ಯುಪ್ರೇರಿತನಾದುದರಿಂದ ವಿವೇಕಶೂನ್ಯನಾಗಿ, ಕೋಪದಿಂದ ಕೆಂಪೇರಿದ ಕಣ್ಣುಗಳೊಡನೆ, ತನ್ನ ಮುಂದಿದ್ದ ಸಾರಥಿಯನ್ನು ನೋಡಿ "ಸೂತಾ ! ಛೀ! ಏನು ಕಾರ್ಯವನ್ನು ಮಾಡಿದೆ ! ನೀನು ನನ್ನನ್ನು ಕೇವಲ ಬಲಹೀನನಂತೆಯೂ, ಅಶಕ್ತನಂತೆಯೂ, ಪೌರುಷವಿಲ್ಲದವನಂತೆಯೂ, ಹೇಡಿಯಂತೆಯೂ, ಅಲ್ಪನಂತೆಯೂ, ಧೈರ್ಯವಿಲ್ಲದವನಂತೆಯೂ, ತೇಜೋಹೀನನಂತೆಯೂ, ಮಾಯೆಗಳನ್ನು ತಿಳಿಯದವನಂತೆಯೂ, ದಿವ್ಯಾಸ್ತ್ರಗಳಿಂದ ಹೊರಗಾದವನಂತೆಯೂ, ಅವಮಾನಪಡಿಸಿ, ನಿನ್ನ ಬುದ್ಧಿಗೆ ತೋರಿದಂತೆ ನಡೆಸಿದೆಯಾ! ಎಲೆ ಅವಿವೇಕೀ ! ನನ್ನ ಅಭಿಪ್ರಾಯವೇನೆಂದೂ ತಿಳಿದುಕೊಳ್ಳದೆ, ನನ್ನನ್ನು ಅಲಕ್ಷ್ಯಮಾಡಿ ನೀನು ಈ ರಥವನ್ನು ಹಿಂದಕ್ಕೆ ತಂದ ಕಾರಣವೇನು? ಶತ್ರುಗಳಿದಿರಿಗೆ ನನ್ನನ್ನವಮಾನಪಡಿಸುವುದಕ್ಕಾಗಿಯೇ ಈ ಕಾರ್ಯವನ್ನು ಮಾಡಿದೆಯಾ? ಛೀ! ನೀನು ಮಾನಗೆಟ್ಟವನು ! ನಾನು ಬಹುಕಾಲದಿಂದ ಇದುವರೆಗೆ ಗಳಿಸಿಟ್ಟ ನನ್ನ ಕೀರ್ತಿಯನ್ನೂ, ನನ್ನ ವೀರ್ಯವನ್ನೂ, ನನ್ನ ತೇಜಸ್ಸನ್ನೂ, ರಾವಣನು ಎಂದಿಗೂ ಯುದ್ಧದಲ್ಲಿ ಪಲಾಯಿತನಾಗುವುದಿಲ್ಲವೆಂದು ಸಮಸ್ತಜನಗಳಿಗೂ ನನ್ನಲ್ಲಿದ್ದ ನಂಬಿಕೆಯನ್ನೂ, ಈಗ ನೀನು ಕ್ಷಣಮಾತ್ರದಲ್ಲಿ ಕೆಡಿಸಿಬಿಟ್ಟೆಯಲ್ಲಾ! ಆ ನಮ್ಮ ವೈರಿಯು ವೀರ್ಯದಲ್ಲಿ ಬಹಳ ಖ್ಯಾತಿಹೊಂದಿದವನಾದುದರಿಂದ, ನನ್ನ ಪರಾಕ್ರಮಗಳನ್ನು ತೋರಿಸಿ ಸಂತೋಷಪಡಿಸುವುದಕ್ಕೆ ತಕ್ಕ ಪಾತ್ರವಾಗಿರುವನು. ಅಂತಹ ಶತ್ರುವು ಭಾಗ್ಯದಿಂದ ಇದಿರಾಗಿ ಬಂದು ನೋಡುತ್ತಿರುವಾಗ, ಯಾವಾಗಲೂ ಯುದ್ಧದಲ್ಲಿ ಮಹೋ

ತ್ಸಾಹವುಳ್ಳ ನನ್ನನ್ನು ನೀನು ಕೆಲಸಕ್ಕೆ ಬಾರದ ಕೇವಲ ತುಚ್ಛ ಮನುಷ್ಯನಂತೆ ಮಾಡಿಬಿಟ್ಟೆಯಲ್ಲಾ! ಎಲೆ ದುರಾತ್ಮಾ! ಈಗ ನೀನು ನನಗೆ ತಿಳಿಯದ ಹಾಗೆ, ಈ ರಥವನ್ನು ಶತ್ರುಗಳ ಸಮ್ಮುಖದಿಂದ ಹಿಂತಿರುಗಿಸಿ ತಂದುದನ್ನು ನೋಡಿದರೆ, ಆ ಶತ್ರುಗಳೇ ನಿನಗೇನೋ ಲಂಚವನ್ನು ಕೊಟ್ಟು ನಿನ್ನನ್ನು ಕೈವಶ ಮಾಡಿಕೊಂಡಿರಬಹುದೆಂದು ನನಗೆ ಸಂದೇಹವು ಹುಟ್ಟಿ ರುವುದು! ಸಂದೇಹವೇಕೆ? ಇದು ಸತ್ಯವಾಗಿಯೇ ಇರಬೇಕು! ಇದು ಶತ್ರು ಗಳು ಮಾಡತಕ್ಕ ಕೆಲಸವೇ ಹೊರತು, ಹಿತೈಷಿಗಳಾದ ಮಿತ್ರರು ಮಾಡ ತಕ್ಕ ಕೆಲಸವಲ್ಲ. ನೀನು ಈಗ ಮಾಡಿದ ಕಾರ್ಯವು ಸರಿಯಾದ ಕಾರ್ಯ ವಲ್ಲ! ಎಲೆ ಸೂತನೇ! ಈಗಲೂ ನೀನು ನನ್ನಲ್ಲಿ ಬಹುಕಾಲದಿಂದ ಕೆಲಸದಲ್ಲಿದ್ದು ಬಳಕೆಯುಳ್ಳವನಾಗಿದ್ದರೆ, ಆವಾಗ ನಾನು ನಿನಗೆ ಮಾಡಿದ ಸತ್ಕಾರಾದಿಗಳೆಲ್ಲವೂ ನಿನ್ನ ಸ್ಮರಣೆಯಲ್ಲಿದ್ದರೆ, ಈಗಲೂ ಶತ್ರುಗಳು ನನ್ನನ್ನು ಹುಡುಕಿಕೊಂಡು ಬಂದು ನನ್ನ ಮೇಲೆ ಬೀಳುವುದಕ್ಕೆ ಮೊದಲೇ ಬೇಗನೇ ಈ ರಥವನ್ನು ಹಿಂತಿರುಗಿಸಿ ಯುದ್ಧಾಭಿಮುಖವಾಗಿ ನಿಲ್ಲಿಸು" ಎಂದನು. ರಾವಣನು ಬುದ್ಧಿಯಿಲ್ಲದೆ ಹೇಳಿದ ಈ ಪರುಷವಾಕ್ಯವನ್ನು ಕೇಳಿ, ಅವ ನಿಗೆ ಮನಃಪೂರ್ವಕವಾಗಿ ಹಿತವನ್ನು ಕೋರತಕ್ಕವನಾದ ಆ ಸಾರಥಿಯು ನಯವಾಕ್ಯದಿಂದ ಅವನನ್ನು ಸಮಾಧಾನಪಡಿಸುತ್ತ, "ಎಲೈ ರಾಕ್ಷಸರಾಜನೆ! ಈಗ ನಾನು ಯುದ್ಧದಲ್ಲಿ ಭಯದಿಂದಾಗಲಿ, ಅಜ್ಞಾನದಿಂದಾಗಲಿ ಹಿಂತಿ ರುಗಿ ಬಂದವನಲ್ಲ! ಲಂಚದಾಸೆಯಿಂದಲೂ ಈ ಕೆಲಸವನ್ನು ಮಾಡಿದವ ನಲ್ಲ! ಎಚ್ಚರತಪ್ಪಿಯೂ ಹೀಗೆ ನಡೆಸಿದವನಲ್ಲ! ನಾನು ನಿನ್ನಲ್ಲಿ ಸ್ನೇಹವಿಲ್ಲದವನೂ ಅಲ್ಲ! ನೀನು ನನಗೆ ಮಾಡಿದ ಸತ್ಕಾರಗಳನ್ನು ಮರೆ ತವನೂ ಅಲ್ಲ! ರಾಜಾ! ಆದರೆ ಈಗ ನಾನು ನಿನ್ನ ಹಿತವನ್ನು ಕೋರಿಯೇ, ನಿನ್ನ ಕೀರ್ತಿಯನ್ನೂ ಸುರಕ್ಷಿತವಾಗಿ ಕಾಪಾಡಬೇಕೆಂಬ ಭಾವದಿಂದ, ಈ ಕಾರ್ಯವನ್ನು ಮಾಡಿದೆನು. ನಿನ್ನಲ್ಲಿ ನನಗಿರುವ ಪ್ರೀತಿ ವಿಶೇಷದಿಂದ ಇದು ನಿನಗೆ ಪ್ರಿಯವಾಗಿರಬಹುದೆಂದೇ ನಾನು ಭಾವಿಸಿದ್ದೆನು. ನಾನು ಹಿತಬುದ್ಧಿಯಿಂದ ಮಾಡಿದ ಈ ಕಾರ್ಯವು ನಿನಗೆ ಅಹಿತವಾಗಿ ತೋರಿತು! ಮಹಾರಾಜನೆ! ಕೇವಲ ದುಷ್ಕುಲದಲ್ಲಿ ಹುಟ್ಟಿ, ದುಷ್ಟ ಹೃದಯವುಳ್ಳ ತುಚ್ಛಮನುಷ್ಯನಂತೆ ನೀನು ಯಾವಾಗಲೂ ನಿನಗೆ ಹಿತ ಪರನಾದ ನನ್ನಲ್ಲಿ ಈ ವಿಷಯವಾಗಿ ದೋಷವನ್ನಾರೋಪಿಸುವುದು ಯುಕ್ತ

ವಲ್ಲ. ಉನ್ನತ ಪ್ರದೇಶದಿಂದ ಅತಿವೇಗದೊಡನೆ ಹರಿಯುವ ಪ್ರವಾಹವನ್ನು ಹಿಂತಿರುಗಿಸುವಂತೆ, ನಾನು ಎಷ್ಟೋ ಪ್ರಯತ್ನಪಟ್ಟು ಈ ರಥವನ್ನು ಯುದ್ಧ ರಂಗದಿಂದ ತಿರುಗಿಸಿ ತಂದುದಕ್ಕೆ ಕಾರಣವನ್ನು ಕೇಳು! ಆ ಯುದ್ಧ ದಲ್ಲಿ ನೀನು ಬಹಳವಾಗಿ ಬಳಲಿ ವೈಮರೆತಿರುವಹಾಗೆ ನನಗೆ ತಿಳಿಯಿತು! ಆಗ ನಿನಗೆ ಯುದ್ಧದಲ್ಲಿ ಸ್ವಲ್ಪವಾದರೂ ಸೌಮುಖ್ಯವಿರುವಂತೆಯೂ ನನಗೆ ತೋರಲಿಲ್ಲ! ಈ ರಥಾಶ್ವಗಳೂ ಕೂಡ, ಆಗ ರಥವನ್ನು ಅಲ್ಲಿಂ ದಲ್ಲಿಗೆ ಎಳೆದೆಳೆದು, ಬಿಸಿಲಿನಿಂದ ಬಹಳವಾಗಿ ಬಳಲಿ, ಸತ್ತುಸುಣ್ಣವಾಗಿ, ಅಂಗಾಂಗಗಳಲ್ಲಿಯೂ ಬೆವರು ಕಿತ್ತುಕೊಂಡು, ಮಳೆಯಬಡಿತಕ್ಕೆ ಸಿಕ್ಕಿದ ಗೋವು ಗಳಂತಿದ್ದುವು. ಮತ್ತು ಆಗ ಯಾವಯಾವ ಶಕುನಗಳು ನನ್ನ ಕಣ್ಣಿಗೆ ಬೀಳುತ್ತಿ ದ್ದುವೋ ಅವೆಲ್ಲವೂ ನನುಗೆ ಪ್ರತಿಕೂಲಗಳಾಗಿಯೇ ತೋರಿ ಬಂದುವು. ಸಾರಥಿ ಯಾದವನು ಯುದ್ಧಕಾಲಗಳಲ್ಲಿ ದೇಶಕಾಲಸ್ಥಿತಿಯನ್ನೂ, ಶುಭಾಶುಭ ನಿಮಿತ್ತಗಳನ್ನೂ, ತನ್ನ ಪ್ರಭುವಿನ ಮತ್ತು ಶತ್ರುವಿನ ಮುಖವಿಕಾಸ ಸಂಕೋಚಗಳೇ ಮೊದಲಾದ ಇಂಗಿತಗಳನ್ನೂ, ಅವರ ಹರ್ಷ ದುಃಖ ಗಳನ್ನೂ, ಅವರ ಬಲಾಬಲಗಳನ್ನೂ, ರಥವನ್ನು ನಡೆಸುವ ದಾರಿಯಲ್ಲಿ ರುವ ಹಳ್ಳತಿಟ್ಟುಗಳನ್ನೂ, ಸಮವಿಷಮಪ್ರದೇಶಗಳನ್ನೂ, ಯುದ್ಧಕಾರ್ಯಕ್ಕೆ ಸಮಯಾಸಮಯಗಳನ್ನೂ ಚೆನ್ನಾಗಿ ಗಮನಿಸಬೇಕು. ಮತ್ತು ಪ್ರತಿಪಕ್ಷ ದವರಲ್ಲಿ ಕಂಡುಕೊಳ್ಳಬೇಕಾದ ಛಿದ್ರಗಳನ್ನೂ ಗಮನಿಸುತ್ತಿರಬೇಕು. ರಥ ವನ್ನು ನಡೆಸುವುದರಲ್ಲಿಯೂ ಕೂಡ, ಆಯಾ ಸಮಯಕ್ಕೆ ತಕ್ಕಂತೆ ಶತ್ರು ವಿನ ಸಮೀಪಕ್ಕೆ ಬಿಡುವುದು, ಪಕ್ಕಕ್ಕೆ ಬಿಡುವುದು, ಪಕ್ಕಕ್ಕೆ ನಡೆಸು ವುದು, ಕದಲದಹಾಗೆ ಸ್ಥಿರವಾಗಿ ನಿಲ್ಲಿಸಿಡುವುದು, ಶತ್ರುವಿಗಿದಿರಾದ ಹಾಗೆಯೇ ಹಿಂದಕ್ಕೆ ಸರಿಸುವುದು, ಇವೇ ಮೊದಲಾದ ಗತಿವಿಶೇಷಗಳೆಲ್ಲ ವನ್ನೂ ಚೆನ್ನಾಗಿ ತಿಳಿದು ರಥವನ್ನು ನಡೆಸಬೇಕು. ಆದುದರಿಂದ ಎಲೆ ವೀರಾಗ್ರಣೀ! ಆ ಯುದ್ಧದಲ್ಲಿ ನಾನು ಅವೆಲ್ಲವನ್ನೂ ಚೆನ್ನಾಗಿ ಗಮನಿ ಸುತ್ತಿದ್ದು, ಕೊನೆಗೆ ನಿನ್ನ ಸ್ಥಿತಿಯನ್ನು ನೋಡಿ, ನಿನಗೂ ಈ ರಥಾಶ್ವ ಗಳಿಗೂ ವಿಶ್ರಾಂತಿಯನ್ನು ಕೊಡುವುದಕ್ಕಾಗಿಯೂ ನಿನಗೆ ದುಸ್ಸಹ ವಾದ ದುಃಖವೇನೂ ಸಂಭವಿಸದಂತೆ ತಪ್ಪಿಸುವುದಕ್ಕಾಗಿಯೂ, ಆಗ ರಥವನ್ನು ಹಿಂದಕ್ಕೆ ಬಿಡುವುದೇ ಯುಕ್ತವೆಂದೆಣಿಸಿ, ಈ ಕಾರ್ಯವನ್ನು ಮಾಡಿದೆನೇ ಹೊರತು ಕಾರಣವಿಲ್ಲದೆ ನನ್ನ ಸ್ವೇಚ್ಛೆಯಿಂದ ಮಾಡಿದವ ನಲ್ಲ. ಮಹಾಪ್ರಭೂ! ಈಗ ನಾನು ಮಾಡಿದ ಕಾರ್ಯವು ನಿನ್ನಲ್ಲಿ ನನ

ಗಿರುವ ಸ್ನೇಹಾತಿಶಯದಿಂದಲ್ಲದೆ ಬೇರೆಯಲ್ಲ! ಇದೋ! ಈಗಲೂ ನಾನು ನಿನ್ನಾಜ್ಞೆಯಂತೆ ನಡೆಸುವುದಕ್ಕೆ ಸಿದ್ಧನಾಗಿರುವೆನು! ಆಜ್ಞೆಯನ್ನು ಕೊಡು! ನಿನ್ನಲ್ಲಿ ಇದುವರೆಗೆ ನಾನು ಉಪ್ಪುತಿಂದ ಋಣವನ್ನು ತೀರಿಸಿಕೊಳ್ಳ ಬೇಕೆಂಬುದೇ ನನ್ನ ದೃಢವಾದ ಸಂಕಲ್ಪವು! ನೀನು ಹೇಳಿದಂತೆ ನಡೆ ಯುವುದರಲ್ಲಿ ಏನೂ ಸಂದೇಹವಿಲ್ಲ!" ಎಂದನು. ಈ ಮಾತನ್ನು ಕೇಳಿ ರಾವಣನು ಪರಮ ಸಂತುಷ್ಟನಾಗಿ, ಆ ಸಾರಥಿಯನ್ನು ಕುರಿತು "ಎಲೆ ಸೂತನೆ! ಒಳ್ಳೆಯದು! ಈಗಲೂ ನೀನು ಶೀಘ್ರದಲ್ಲಿ ರಥವನ್ನು ರಾಮನಿ ಗಭಿಮುಖವಾಗಿ ಬಿಡು! ರಾವಣನು ಶತ್ರುಗಳನ್ನು ಜಯಿಸದೆ ಹಿಂತಿರು ಗುವವನಲ್ಲವೆಂದು ಕಾಣೆಯಾ?" ಎಂದನು. ಈ ಮಾತನ್ನು ಹೇಳಿ ರಾವ ಣನು ಆ ಸಾ ಥಿಯ ವಿಷಯದಲ್ಲಿ ಬಹಳ ಸಂತುಷ್ಟನಾಗಿ, ತನ್ನ ಬೆರಳಿ ನಲ್ಲಿದ್ದ ಉತ್ತಮವಾದ ಒಂದುಂಗುರವನ್ನು ತೆಗೆದು ಪಾರಿತೋಷಿಕವಾಗಿ ಅವನ ಕೈಯಲ್ಲಿಟ್ಟನು. ರಾಜಾಜ್ಞೆಯಿಂದ ಸಾರಥಿಯು ರಥವನ್ನು ಯುದ್ಧಾಭಿ ಮುಖವಾಗಿ ತಿರುಗಿಸಿ, ರಾವಣನ ಪ್ರೇರಣೆಯಿಂದ ಬೇಗಬೇಗನೆ ಕುದುರೆ ಗಳನ್ನು ನಡೆಸಿಕೊಂಡು ಬಂದನು. ಕ್ಷಣಮಾತ್ರದಲ್ಲಿಯೇ ರಾವಣನ ಮಹಾ ರಥವು ಯುದ್ಧಾಗ್ರದಲ್ಲಿ ರಾಮನಿಗಿದಿರಾಗಿ ನಿಂತಿತು.

ಇಲ್ಲಿಗೆ ನೂರಾರನೆಯ ಸರ್ಗವು.

———

ಅಗಸ್ತ್ಯ ಮಹಾಮುನಿಯು ರಾಮನಿಗೆ ಆದಿತ್ಯಹೃದಯವನ್ನುಪದೇ ಶಿಸಿದುದು. ರಾಮನು ಆ ಸ್ತೋತ್ರವನ್ನು ಜಪಿಸಲು, ಸೂರ್ಯನು ರಾಮನನ್ನನುಗ್ರಹಿಸಿದುದು.

ಆಗ ಆ ಮಹಾಯುದ್ಧವನ್ನು ನೋಡುವುದಕ್ಕಾಗಿ ದೇವತೆಗಳೊಡನೆ ಸೇರಿ ಬಂದಿದ್ದ ಪೂಜ್ಯನಾದ ಅಗಸ್ತ್ಯ ಮಹಾಮುನಿಯು, ಯುದ್ಧದಲ್ಲಿ ರಾಮನು ಬಹಳ ಶ್ರಮಹೊಂದಿ, ತನ್ನ ಅಮಾನುಷ ಶಕ್ತಿಯನ್ನು ಪ್ರಕಟಿ

ಸದ ಹಾಗೆ ರಾವಣನನ್ನು ಕೊಲ್ಲುವ ಉಪಾಯವೇನೆಂದು ಚಿಂತಿಸುತ್ತಿರುವುದನ್ನೂ, ರಾವಣನು ಮುಂದೆ ಯುದ್ಧಾತುರನಾಗಿ ನಿಂತಿರುವುದನ್ನೂ ನೋಡಿ, ತಟ್ಟನೆ ರಾಮನ ಸಮೀಪಕ್ಕೆ ಬಂದು, "ರಾಮಾ! ರಾಮಾ! ಮಹಾಬಾಹೂ! ಈಗ ನಿನಗೆ ವೇದಗಳಂತೆ ನಿತ್ಯವಾಗಿಯೂ, ರಹಸ್ಯವಾಗಿಯೂ ಇರುವ [1] ಆದಿತ್ಯಹೃದಯಮಂತ್ರವನ್ನುಪದೇಶಿಸುವುದಕ್ಕಾಗಿ ನಾನ ಬಂದಿರುವೆನು. ಈ ಸ್ತೋತ್ರವು ಪಠಿಸಿದವರಿಗೆ ಪುಣ್ಯವನ್ನು ವೃದ್ಧಿಗೊಳಿಸುವುದು. ಯುದ್ಧದಲ್ಲಿ ಸಮಸ್ತ ಶತ್ರುಗಳನ್ನು ನಾಶಗೊಳಿಸಿ ಜಯವನ್ನು ಕೈಗೂಡಿಸುವುದು. ಅಕ್ಷಯವಾದ ಫಲವನ್ನು ಕೊಡುವುದು. ಪರಮಪಾವನವಾಗಿ ಸಮಸ್ತ ಮಂಗಳಗಳಿಗೂ ಮಂಗಳವಾಗಿರುವುದು. ಸಮಸ್ತ ಶ್ರೇಯಸ್ಸುಗಳಿಗೂ ಸಾಧಕವಾಗಿರುವುದು. ಸಮಸ್ತ ಪಾಪಗಳನ್ನು ನಿವಾರಿಸುವುದು. ಆಗಾಗ ಮನಸ್ಸಿನಲ್ಲಿ ಹುಟ್ಟುವ ವ್ಯಥೆಗಳನ್ನೂ, ದೇಹದಲ್ಲಿ ಹುಟ್ಟುವ ವ್ಯಾಧಿಗಳನ್ನೂ ನೀಗಿಸುವುದು. ಆಯುಸ್ಸನ್ನು ಹೆಚ್ಚಿಸುವುದು. ಜಪಿಸತಕ್ಕ ಮಂತ್ರಗಳಲ್ಲಿ ಸರ್ವೋತ್ತಮವೆನಿಸಿಕೊಂಡಿರುವುದು. ಈಗ ನೀನು

---

1 ಆದಿತ್ಯಹೃದಯವೆಂದರೆ ಸೂರ್ಯನ ಮನಸ್ಸನ್ನು ಪ್ರಸನ್ನವಾಗಿಸತಕ್ಕ ಸ್ತೋತ್ರವೆಂದು ಸಾಮಾನ್ಯಾರ್ಥವಾದರೂ, ತತ್ತ್ವಾರ್ಥದಲ್ಲಿ ಆದಿತ್ಯಶಬ್ದದಿಂದ ಆದಿತ್ಯಮಂಡಲವು ಹೇಳಲ್ಪಡುವುದು. ಹೃದಯವೆಂದರೆ ತದಂಶರ್ಭಾಗವು. "ಯ" ಏಷೋSO ತರಾದಿತ್ಯೇ ಹಿರಣ್ಮಯಃ ಪುರುಷೋದೃಶ್ಯತೇ' ಎಂಬ ಶ್ರುತಿಯನ್ನನುಸರಿಸಿ ಆದಿತ್ಯಮಂಡಲ ಮಧ್ಯವರ್ತಿಯಾದ ಪರಮಪುರುಷನೆಂದು ಗ್ರಹಿಸಬೇಕು, ಅಥವಾ ಆದಿತನೆದರೆ ಸೂರ್ಯನು. ಅವನ (ಹೃತ್ ಅಯ) ವೆಂದರೆ "ಅಯಪಯಗತೌ" ಎಂಬ ಧಾತ್ವರ್ಥದಂತೆ ತದ್ಗತನೆಂದರ್ಥವು. "ಯ ಆದಿತ್ಯೇ ತಿಷ್ಠನ್" "ಯ ಆದಿತ್ಯಮಂತರೋಯಮಯತಿ" ಎಂಬತೆ ಸೂರ್ಯಹೃದ್ಗತನಾದ ಪರಮಪುರುಷನಾದುದರಿಂದ ಆದಿತ್ಯಹೃದಯವೆಂದರೆ ಪರಮ ಪುರುಷನನ್ನು ಪ್ರತಿಪಾದಿಸತಕ್ಕ ಸ್ತೋತ್ರವೆಂದರ್ಥವು. ಇಲ್ಲಿರಾಮನು ಚಿಂತೆಯನ್ನು ನಟಿಸಿದುದೂ, ಅಗಸ್ತ್ಯರಿಂದ ಮಂತ್ರೋಪದೇಶವನ್ನು ಹೊಂದಿ ಅದನ್ನು ಜಪಿಸಿದುದೂ, ಲೋಕದ ಜನರಿಗೆ ಜಯಸಾಧಕವಾದ ಮಾರ್ಗವನ್ನು ತೋರಿಸಿ ಅವರನ್ನು ಅನುಗ್ರಹಿಸುವುದಕ್ಕಾಗಿಯೇ ಹೊರತು, ಬೇರೆಯಲ್ಲವೆಂದು ರಹಸ್ಯವು. ಇಲ್ಲಿನ ವಿಶೇಷಣಗಳಿಗೆ ಬೇರೆಬೇರೆ ವ್ಯಾಖ್ಯಾನಾನುಸಾರವಾಗಿ ಪರಮಪುರುಷಪರವಾದ ಅರ್ಥವು ಅಲ್ಲಲ್ಲಿ ಶ್ರುತಿ ಪ್ರಮಾಣಗಳೊಡನೆ ನಿರೂಪಿಸಲ್ಪಡುವುವು.

ಈ ಆದಿತ್ಯಹೃದಯವೆಂಬ ಸ್ತೋತ್ರವನ್ನು ಜಪಿಸು. [1]ಸುವರ್ಣದಿಂದ ಕೂಡಿದ ಪ್ರಶಸ್ತವಾದ ಕಿರಣವುಳ್ಳವನಾಗಿಯೂ, ಇತರ ತೇಜಸ್ಸನ್ನು ಅಡಗಿಸತಕ್ಕ ಮಹಾ ತೇಜಸ್ಸುಳ್ಳವನಾಗಿಯೂ, ನಿತ್ಯವೂ ಪೂರ್ಣೋದಯವುಳ್ಳವನಾಗಿಯೂ, [2]ದೇವಾಸುರರಿಂದ ಪೂಜಿತನಾಗಿಯೂ, [3]ಸಮಸ್ತ ಪ್ರಪಂಚಕ್ಕೂ ಕಾಂತಿಯನ್ನುಂಟು ಮಾಡತಕ್ಕವನಾಗಿಯೂ, [4]ಮಳೆಬಿಸಿಲುಗಳನ್ನು ಕೊಟ್ಟು [5]ಸಮಸ್ತ ಲೋಕಗಳನ್ನೂ ನಡೆಸತಕ್ಕವನಾಗಿಯೂ ಇರುವ ಸೂರ್ಯದೇವನನ್ನು ನೀನು ಭಕ್ತಿಯುಕ್ತನಾಗಿ ಪೂಜಿಸು! ಇತರ ದೇವತೆಗಳೆಷ್ಟೋ ಮುಂದಿಯಿರುವಾಗ, ಇವನನ್ನು ಮಾತ್ರ ಪೂಜಿಸಬೇಕಾದುದೇನೆಂದು ಶಂಕಿಸಬೇಡ! [6]ಇವನೇ ಸಮಸ್ತ ದೇವತೆಗಳಿಗೂ ಆತ್ಮರೂಪ

1(ರಶ್ಮಿಮಂತಂ) ಇಲ್ಲಿ ರಶ್ಮಿಶಬ್ದವು ಪರಮಾಂತರಂಗಭಕ್ತಪರವು. ಆದುದರಿಂದ ರಶ್ಮಿಮಂತನೆಂದರೆ ಅಂತಹ ಭಕ್ತರ ನಡುವೆ ಪ್ರಕಾಶಿಸುವವನು. "ರಶ್ಮಿಗ್ಂ ರಶ್ಮೀನಾಂ ಮಧ್ಯೇತಪನ್ತಮ್" ಎಂಬ ಸುವರ್ಣಘರ್ಮಾನುವಾಕ್ಯೋಕ್ತಿಯು. ಅಥವಾ (ರಶ್ಮಿಮಂತಂ) ಜ್ಞಾನರೂಪಗಳಾಗಿಯೂ, ಪ್ರಕಾಶರೂಪಗಳಾಗಿಯೂ ಇರುವ ರಶ್ಮಿಗಳುಳ್ಳವನು. ಅಥವಾ (ರಶ್ಮಿಮಂತಂ) ಪಂಚೇಂದ್ರಿಯದ್ವಾರದಿಂದ ಅನೇಕ ಜ್ಞಾನರೂಪ ರಶ್ಮಿಗಳುಳ್ಳವನು.

2(ಸಮುದ್ಯಂತಂ) ಸೃಷ್ಟಿಪಾಲನಾದಿಗಳಲ್ಲಿ ಉದ್ಯೋಗವುಳ್ಳವನು. ಅಥವಾ ನಿತ್ಯೋದಿತದಶೆಯುಳ್ಳವನು. ಅಥವಾ "ಯಃ ಪೂರ್ವ್ಯಾಯ ವೇಧಸೇ ನವೀಯಸೇ" ಎಂಬತೆ ಆಗಾಗ ಹೊಸದಾಗಿ ಹುಟ್ಟಿದಂತೆ ಕಾಣುವವನು.

3(ದೇವಾಸುರನಮಸ್ಕೃತಂ) ಸತ್ತ್ವಪ್ರಧಾನರಾದ ದೇವತೆಗಳಿಂದಲೂ ತಮಃಪ್ರಧಾನರಾದ ಅಸುರರಿಂದಲೂ, ಉಪಲಕ್ಷಣೆಯಿಂದ ರಜಃ ಪ್ರಧಾನರಾದ ಮನುಷ್ಯರಿಂದಲೂ ನಮಸ್ಕೃತನು. ಅಥವಾ ಇಲ್ಲಿ ದೇವಾಸುರಶಬ್ದವು "ದೈವೀ ಸಂಪದ್ವಿಮೋಕ್ಷಾಯ ನಿಬಂಧಾಯಾಸುರೀ ಮತಾ" ಎಂಬ ಗೀತೋಕ್ತಿಯನ್ನನುಸರಿಸಿ ತತ್ತತ್ಪ್ರಕೃತಿ ಪರವೆಂದು ಗ್ರಾಹ್ಯವು. ಆ ಪ್ರಕೃತಿಗಳಿಂದ ಸೇವಿತನೆಂದರ್ಥವು.

4(ಭಾಸ್ಕರಂ) "ತಸ್ಯ ಭಾಸಾ ಸರ್ವಮಿದಂ ವಿಭಾತಿ" ಎಂಬತೆ ಪ್ರಕಾಶಕರ್ತನು.

5(ಭುವನೇಶ್ವರಂ) ಮೂಲಾದಿಬ್ರಹ್ಮರಂಧ್ರಾಂತಗಳಾದ ಯೋಗಾಧಾರ ಭೂಮಿಗಳಿಗೆಲ್ಲಾ ಅಧಿಷ್ಠಾತನು,

6 ಸರ್ವದೇವಾತ್ಮಕಃ 'ಯಸ್ಸರ್ವದೇವೇಷು ತಿಷ್ಠನ್' ಎಂಬಂತೆ ಸರ್ವದೇವಶರೀರನೆಂದರ್ಥವು,

ನಾಗಿರುವನು. [2]ಪ್ರಶಸ್ತವಾದ ತೇಜಸ್ಸುಳ್ಳವನು. [3]ಇವನೇ ತನ್ನ ಕಿರಣಗಳಿಂದ ಸಮಸ್ತ ಲೋಕಗಳನ್ನೂ [4]ದೇವಾಸುರಗಳನ್ನೂ ಪೋಷಿಸುತ್ತಿರುವನು. [5]ಆದಿತ್ಯಮಂಡಲಾಂತರ್ವರ್ತಿಯಾದ ಈತನೇ ಸಮಸ್ತ ದೇವತಾಶರೀರಿಗಳಲ್ಲಿಯೂ ವರ್ತಿಸುವ ಪರಮಾತ್ಮನಾದುದರಿಂದ, ಈತನೇ ಬ್ರಹ್ಮನು! ಈತನೇ ವಿಷ್ಣುವು! ಈತನೇ ಶಿವನು! ಇವನೇ ಕುಮಾರಸ್ವಾಮಿಯು! ಈತನೇ ನವಪ್ರಜಾಪತಿಗಳ ಶರೀರದಲ್ಲಿಯೂ ವರ್ತಿಸತಕ್ಕವನು! ಇವನೇ ದೇವೇಂದ್ರನು! ಇವನೇ ಕುಬೇರನು! ಇವನೇ ಮೃತ್ಯುವು! ಇವನೇ ಯಮನಾಗಿಯೂ, ಚಂದ್ರನಾಗಿಯೂ, ವರುಣನಾಗಿಯೂ, ಪಿತೃದೇವತೆಗಳಾಗಿಯೂ, ಅಷ್ಟವಸುಗಳಾಗಿಯೂ ಮೆರೆವನು. ಈತನೇ ಸಾಧ್ಯರಲ್ಲಿಯೂ, ಅಶ್ವಿನೀದೇವತೆಗಳಲ್ಲಿಯೂ, ಆಹ

2(ತೇಜಸ್ವೀ) ಪರಾಭಿಭವನಸಾಮರ್ಥ್ಯವುಳ್ಳವನು.

3(ರಶ್ಮಿಭಾವನಃ) ರಶ್ಮಿಗಳೆಂದರೆ ನಿತ್ಯಮುಕ್ತರು. ಅವರನ್ನು ಭಾವಿಸುವವನೆಂದರೆ ಅವರಿಗೆ ನಿರ್ವಾಹಕನು. "ನಿತ್ಯಂ ಪ್ರಿಯಾಸ್ತವ ತು ಕೇಚನ ತೇಹಿ ನಿತ್ಯಾಃ" ಎಂಬಂತೆ ಅವರೆಲ್ಲರೂ ಭಗವಂತನ ನಿತ್ಯೇಚ್ಛಾಧೀನವಾದ ಸತ್ತೆಯುಳ್ಳವರೆಂದು ಭಾವವು.

4(ಏಷದೇವಾಸುರಗಣಾಂಲ್ಲೋಕಾನ್ಪಾತಿ ಗಭಸ್ತಿಭಿಃ) "ಅಗ್ನೌಪ್ರಾಸ್ತಾಹುತಿಸ್ಸಮ್ಯಗಾದಿತ್ಯಮುಪತಿಷ್ಠತೇ। ಆದಿತ್ಯಾಜ್ಜಾಯತೇ ವೃಷ್ಟಿರ್ವೃಷ್ಟೇರನ್ನಂ ತತಃ ಪ್ರಜಾಃ" ಎಂಬಂತೆ ವರ್ಷದಿಂದುದ್ಭವಿಸುವ ಅನ್ನದಾನದಿಂದಲೂ "ದೇವಾನ್ಭಾವಯತಾನೇನ ತೇದೇವಾ ಭಾವಯನ್ತು ನಃ" ಎಂಬಂತೆ ಪುರೋಡಾಶಾದಿ ದಾನದಿಂದಲೂ ಸರ್ವವನ್ನೂ ರಕ್ಷಿಸುವವನು. ಇದಕ್ಕೆ "ಯಾಭಿರಾದಿತ್ಯಸ್ತಪತಿರಶ್ಮಿಭಿಸ್ತಾಭಿಃ ಪರ್ಜನ್ಯೋ ವರ್ಷತಿ" ಇತ್ಯಾದಿ ಶ್ರುತಿಗಳಂತೆ ಕಿರಣಗಳಿಂದ ವರ್ಷವನ್ನು ಕೊಟ್ಟು, ಅದರಿಂದ ಅನ್ನವನ್ನುಂಟುಮಾಡಿ ರಕ್ಷಿಸುವನೆಂದರ್ಥವು.

5 (ಏಷ ಬ್ರಹ್ಮಾಚ ವಿಷ್ಣುಶ್ಚ ಶಿವಃ ಸ್ಕಂದಃ ಪ್ರಜಾಪತಿಃ। ಮಹೇಂದ್ರೋಧನದಃ ಕಾಲೋ ಯಮಸ್ಸೋಮೋಹ್ಯಪಾಂಪತಿಃ॥ ಪಿತರೋ ವಸವಸ್ಸಾಧ್ಯಾ ಅಶ್ವಿನೌ ಮರುತೋ ಮನುಃ॥ ವಾಯುರ್ವಹ್ನಿಃ ಪ್ರಜಾಪ್ರಾಣೋಋತುಕರ್ತಾ ಪ್ರಭಾಕರ:) ಇಲ್ಲಿ "ಯಏಷೋಽಂತರಾದಿತ್ಯೇ ಹಿರಣ್ಮಯಃ ಪುರುಷೋದೃಶ್ಯತೇ" ಎಂದು ಹೇಳಲ್ಪಟ್ಟಿರುವ ಯೋಗಿಜನಸಾಕ್ಷಾತ್ಕಾರದಿಂದ (ಏಷಃ) ಎಂದರೆ, ಇದೋ! ಇವನೆಂದು ಪುರೋನಿರ್ದೇಶವು. (ಬ್ರಹ್ಮಾ) ಚತುರ್ಮುಖ ಶರೀರನು. "ತವ ಚಾಂತರಾತ್ಮಾ ಮಮಚ ಯೇಚಾನ್ಯೇ ದೇಹಿ ಸಂಜ್ಞಿತಾಃ" ಎಂದು ಶಿವನನ್ನು ಕುರಿತು ಚತುರ್ಮುಖವಚನವು. (ಶಿವಃ) ಶಿವ ಶರೀರನು. "ಸಬ್ರಹ್ಮಾಸ

ವಾದಿ ಮರುದ್ಗಣಗಳಲ್ಲಿಯೂ ವರ್ತಿಸುವನು. ಇವನೇ ಮನುವಾಗಿಯೂ, ಭೂತಲೋಕಸಂಚಾರಿಯಾದ ವಾಯುವಾಗಿಯೂ, ಅಗ್ನಿಯಾಗಿಯೂ, ಪ್ರಜೆಗಳ ಶರೀರದಲ್ಲಿ ಪ್ರಾಣವಾಯುವಾಗಿಯೂ, ವಸಂತಾದಿ ಋತುಕರ್ತನಾದ ಪ್ರಭಾಕರನಾಗಿಯೂ ಇರುವನು. ಆದುದರಿಂದ ವತ್ಸ ರಾಮಾ! ಈಗ ನೀನು ನನ್ನಿಂದುಪದೇಶಿಸಲ್ಪಡುವ ಈ ಆದಿತ್ಯಹೃದಯಸ್ತೋತ್ರದಿಂದ ಆತನನ್ನಾರಾಧಿಸು.

ಶಿವಃ" ಎಂದು ಇವೆರಡಕ್ಕೂ ಶ್ರುತಿಯು. (ಸ್ಕಂದಃ) ಸಂಸಾರ ದುಃಖವನ್ನು ಶೋಷಿಸತಕ್ಕವನು. (ಪ್ರಜಾಪತಿಶ್ಚರತಿ) ''ಗರ್ಭೇ ಅಂತಃ" ಎಂದು ಹೇಳಲ್ಪಡುವ ಪ್ರಜಾಪತಿ ಶಬ್ದವಾಚ್ಯನು. (ಮಹೇನ್ದ್ರ) "ಇಂದ್ರಂ ನಿಚಿಕ್ಯ ಪರಮೇವ್ಯೋಮನ್; ಇಂದ್ರೋಮಾಭಿಃ ಪುರುರೂಪ ಈಯತೇ'' ಎಂಬ ಶ್ರುತಿಯಂತೆ ಸ್ವರೂಪದಿಂದಲೂ, ಐಶ್ವರ್ಯದಿಂದಲೂ ನಿರವಧಿಕನು. (ಧನದಃ) "ಅನ್ನಾದೋ ವಸುದಾನಃ" ಎಂಬ ಶ್ರುತಿಪ್ರಸಿದ್ಧನಾದ ಸಕಲಫಲಪ್ರದನು. (ಕಾಲಃ) ''ಕಾಲಾಯ ಮಹಾ ಗ್ರಾಸಾಯ ವೈ ನಮಃ ಆತ್ಮಾಚರಾನರಗ್ರಹಣಾತ್" ಎಂಬ ಶ್ರುತಿ ಸೂತ್ರಗಳಿಂದಲೂ, 'ಅನಾದಿರ್ಭಗವಾನ್ ಕಾಲಃ' ಎಂಬ ಪರಾಶರಸ್ಮರಣದಿಂದಲೂ ಜಗತ್ಸಂಹಾರಕನು. (ಯಮಃ) ''ಯಮೋ ವೈವಸ್ವತೋ ರಾಜಾ ಯಸ್ತವೈಷ ಹೃದಿಸ್ಥಿತಃ" ಎಂಬ ಮನುವಚನಾನುಸಾರವಾಗಿ ಯಮನೆಂದರೆ ಶಿಕ್ಷಕನು. ''(ಸೋಮಃ) ಪವತೇ ಜನಿತಾ ಮತೀನಾಂ ಜನಿತಾ ದಿವಃ' ಇತ್ಯಾದಿಗಳಲ್ಲಿ ಹೇಳಲ್ಪಟ್ಟ ಸಕಲ ಕಾರಣಸೋಮಶಬ್ದ ವಾಚ್ಯನೆಂದರ್ಥವು. (ಅಪಾಂಪತಿಃ) "ಅಪೋ ನಾರಾ ಇತಿ ಪ್ರೋಕ್ತಾ ಅಪೋವೈನರ ಸೂನವಃ | ಅಯನಂ ತಸ್ಯತಾಃ ಪೂರ್ವಂ ತೇನ ನಾರಾಯಣ ಸ್ಮೃತಃ" ಎಂಬಂತೆ ನಾರಾಯಣನೆಂದರ್ಥವು. "ಅಪಏವ ಸಸರ್ಜಾದೌ" ಎಂಬುದರಿಂದ ಅಪ್ಛಬ್ದವಾಚ್ಯಗಳಿಗೆ ಸ್ವಾಮಿಯು. (ಪಿತರಃ) ಅಗ್ನಿಷ್ವಾತ್ತ ಮೊದಲಾದ ಪಿತೃಸ್ವರೂಪನು. ಅಥವಾ ಪಿತರರೆಂದರೆ ಬೀಜಪ್ರದರು. 'ತಾಸಾಂ ಬ್ರಹ್ಮ ಮಹದ್ಯೋನಿರಹಂ ಬೀಜಪ್ರದಃ ಪಿತಾ' ಎಂಬಂತೆ ಸರ್ವಕ್ಕೂ ಬೀಜಪ್ರದನೆಂದರ್ಥವು. ಇಲ್ಲಿನ ಬಹುವಚನವು ಪೂಜಾರ್ಥಕವು. (ವಸವಃ) ಸದಾವಾಸಿಗಳಾದ ಅಷ್ಟವಸುಗಳು. "ಧ್ರುವೋಽ ಧರಸ್ತಥಾಸೋಮ ಆಪೋ ವೈಶ್ವಾನರೋಽನಿಲಃ। ಪ್ರತ್ಯೂಷಶ್ಚ ಪ್ರಭಾವಶ್ಚ ವಸವೋಽಷ್ಟೌ ಪ್ರಕೀರ್ತಿತಾಃ" ಎಂದು ಹೇಳಲ್ಪಡುವ ಅಷ್ಟವಸುಗಳೆಂದು ಗ್ರಾಹ್ಯವು. ಅಥವಾ (ವಸವಃ) ಎಂದರೆ ''ಅಗ್ನಿಶ್ಚ ಪೃಥಿವೀ ಚಾಂತರಿಕ್ಷಂಚ ಆದಿತ್ಯಶ್ಚದ್ಯೌಶ್ಚಚಂದ್ರಮಾಶ್ಚನಕ್ಷತ್ರಾಣಿ ಚೈತೇವೈವಸವಃ ಎಂಬ ಶ್ರುತಿಪ್ರೋಕ್ತರಾದ ವಸುಗಳು. (ಸಾಧ್ಯಾಃ) ಸಿದ್ಧಿಯುಳ್ಳವರು. ಇವರು

ಆದಿತ್ಯಹೃದಯಸ್ತೋತ್ರವು

ಶ್ಲೋ || 1ಆದಿತ್ಯಸ್ಸವಿತಾಸೂರ್ಯ, ಖಗಃ ಪೂಷಾ ಗಭಸ್ತಿಮಾನ್ ।
ಸುವರ್ಣಸದೃಶೋ ಭಾನುಸ್ಸ್ವರ್ಣರೇತಾ ದಿವಾಕರಃ ||

"ದೇವಾ! ನೀನು ಅದಿತಿದೇವಿಗೆ ಪುತ್ರರೂಪದಿಂದವತರಿಸಿದವನು. (ಅಖಂಡಿತವಾದ ಭೂಮಿಗೆ ಪತಿಯೆನಿಸಿಕೊಂಡವನು). ಜಗತ್ತಿಗೆ ಉತ್ಪತ್ತಿ ಸ್ಥಾನವು. ಜನಗಳನ್ನು ಆಯಾ ಕರ್ಮಗಳಲ್ಲಿ ಪ್ರೇರಿಸತಕ್ಕವನು. ಲೋಕೋಪಕಾರಾರ್ಥವಾಗಿ ಅನವರತವೂ ಆಕಾಶದಲ್ಲಿ ಸುತ್ತುತ್ತಿರುವವನು. ವೃಷ್ಟಿಯಿಂದ ಲೋಕವನ್ನು ಪೋಷಿಸತಕ್ಕವನು. ಪ್ರಶಸ್ತವಾದ ಕಿರಣವುಳ್ಳವನು. ಸುವರ್ಣವರ್ಣವುಳ್ಳವನು. ಯಾವಾಗಲೂ ಪ್ರಕಾಶಿಸತಕ್ಕವನು. ಹಿರಣ್ಯಮಯವಾದ ಬ್ರಹ್ಮಾಂಡವನ್ನು ಸೃಜಿಸಿದವನು. ಹಗಲನ್ನುಂಟುಮಾಡುವವನು.

ಹನ್ನೆರಡು ಮಂದಿಗಳುಂಟು. "ಬ್ರಹ್ಮಣೋ ವೈಮುಖಾತ್ಸೃಷ್ಟ್ವಾಯೇತು ದೇವಾ ಪ್ರಜೇಪ್ಸಯಾ । ಸಾಧ್ಯಾ ಮಂತ್ರಶರೀರಾಸ್ತೇ ಸ್ಥಿತಾ ಮನ್ವಂತರೇಷ್ವಪಿ। ಧರ್ಮಪುತ್ರಾ ಮಹಾ ಭಾಗಾ ವಿಜ್ಞೇಯಾ ದ್ವಾದಶಾಮರಾ: 1 ಮನುರ್ಮಂತ್ರ ಪ್ರಾಣದಶ್ಚ ಚೇತಯಾವಶ್ಚ ವೀರ್ಯವಾನ್ । ವಿತ್ತಿರ್ಜಯೋ ನಮುಶ್ಚೈವ ಹಂಸೋ ನಾರಾಯಣಸ್ತಥಾ । ಪ್ರಭವೋಥ ವಿಭುಶ್ಚೈವ ಸಾಧ್ಯಾದ್ವಾದಶ ಜಜ್ಞಿರೇ" ಎಂದು ವಾಯುಪುರಾಣೋಕ್ತಿಯು. (ಅಶ್ವಿನೌ) ಆದಿತ್ಯಮಹಿಷಿಯಾದ ಸಂಜ್ಞಾದೇವಿಯು ಹೆಣ್ಣು ಕುದುರೆಯ ರೂಪದಿಂದಿದ್ದಾಗ, ಆದಿತ್ಯನು ಅವಳಲ್ಲಿ ಹುಟ್ಟಿಸಿದ ಕುದುರೆಯ ರೂಪದವರಿಬ್ಬರು ಅಶ್ವಗಳೆನಿಸುವರು. (ಮರುತಃ) ಮ್ರಿಯನ್ತೇ ನಕದಾಚಿದಿತಿಮರುತಃ" ಎಂದೆಂದಿಗೂ ಸಾವಿಲ್ಲದವರು. ಇವರು ಶುಕ್ರಜ್ಯೋತಿಮೊದಲಾದ ನಾಲ್ವತ್ತೊಂಬತ್ತು ಮರುತ್ತುಗಳುಂಟು. (ಮನಃ) "ಮನು ಅವಬೋಧನೇ" ಎಂಬ ಧಾತ್ವರ್ಥದಂತೆ ಸರ್ವಜ್ಞನೆಂದರ್ಥವು. ಅಥವಾ ಮನುವೆಂದರೆ, ಮನನ ಮಾಡತಕ್ಕವನು. "ನಾನ್ಯತೋಽಸ್ತಿಮಂತಾ" ಇವನಿಗಿಂತಲೂ ಮನನವೆಂದರೆ, ಮನನ ಮಾಡತಕ್ಕವನು ಬೇರೊಬ್ಬರಿಲ್ಲವೆಂಬ ಶ್ರುತಿಯಂತೆ, ಸೃಷ್ಟಿಗೆ ಮೊದಲು ಪ್ರಪಂಚವಿಷಯಕವಾದ ಮನನವುಳ್ಳವನು. (ವಾಯುಃ) "ವಾಗವ ಗಂಧನಯೋಃ" ಎಂಬ ಧಾತ್ವರ್ಥದಂತೆ ಸಮಸ್ತ ಸುವಾಸಿತವಾಗಿ ಮಾಡುವವನು. "ಸರ್ವಕರ್ಮಾ ಸರ್ವಕಾಮಸ್ಸರ್ವಗಂಧಸ್ಸರ್ವರಸಃ" ಎಂದು ಶ್ರುತಿಯು.

ಶ್ಲೋ || 2 ಹರಿದಶ್ವಸ್ಸಹಸ್ರಾರ್ಚಿಸ್ಸಪ್ತಸಪ್ತಿರ್ಮರೀಚಿಮಾನ್ ।
ತಿಮಿರೋನ್ಮಥನಃಶ್ಶಂಭು ಸ್ತ್ವಷ್ಟಾ ಮಾರ್ತಾಂಡ ಅಂಶುಮಾನ್ ॥

ಹಸುರುಬಣ್ಣದ ಕುದುರೆಗಳುಳ್ಳವನು. ಸಹಸ್ರಕಿರಣಗಳಿಂದ ಶೋಭಿಸುವವನು. ಸಪ್ತನಾಮಗಳುಳ್ಳ ರಥಾಶ್ವವುಳ್ಳವನು. (ಸಪ್ತವಿಧಕಿರಣವುಳ್ಳವನು.) ಪ್ರಕಾಶವಿಶಿಷ್ಟನು. ಅಂಧಕಾರವನ್ನು ಸಂಹರಿಸತಕ್ಕವನು. ಲೋಕದ ಸುಖಕ್ಕೆ ಆಧಾರಭೂತನು. ಸಮಸ್ತ ಪ್ರಪಂಚವನ್ನೂ ಸಂಹರಿಸತಕ್ಕವನು. ಸರ್ವಸಂಹಾರರೂಪವಾದ ಪ್ರಳಯವಾದ ಮೇಲೆ, ಮೃತವಾದ ಬ್ರಹ್ಮಾಂಡದಲ್ಲಿ ತಿರುಗಿ ಜಗತ್ಸೃಷ್ಟಿಗಾಗಿ ಮೊದಲು ಪ್ರಾದುರ್ಭವಿಸಿದವನು. ಪ್ರಶಸ್ತಕಾಂತಿಯುಳ್ಳವನು.

(ವಹ್ನಿ:) ದೇವತೆಗಳಿಗೆ ಹವಿಸ್ಸನ್ನು ಸಾಗಿಸತಕ್ಕವನು. "ಇಷ್ಟಾ ಪೂರ್ತಂ ಬಹುಧಾ ಜಾತಂ ಜಾಯಮಾನಂ ವಿಶ್ವಂ ಬಿಭರ್ತಿ ಭುವನಸ್ಯ ನಾಭಿ: ತದೇವಾಗ್ನಿಸ್ತದ್ವಾಯುಸ್ತತ್ಸೂರ್ಯಸ್ತದುಚಂಪ್ರಮಾ:" ಎಂದು ಶ್ರುತಿಯು. (ಪ್ರಜಾಪ್ರಾಣ:) ಇಲ್ಲಿ "ಕೋಹ್ಯೇವಾನ್ಯಾತ್ ಕ: ಪ್ರಾಣ್ಯಾತ್ ಯದೇಷ ಆಕಾಶ ಆನಂದೋನಸ್ಯಾತ್'' ಎಂದು ಶ್ರುತಿಯು. ಆನಂದ ರೂಪವಾದ ಆಕಾಶವು ಎಂದರೆ ಬ್ರಹ್ಮವಿಲ್ಲದ ಪಕ್ಷದಲ್ಲಿ, ಯಾವನು ಪ್ರಾಣದಿಂದುಳಿಯುವನು ? ಎಂದು ಭಾವವು, (ಋತು:) ಜ್ಞಾನಗಮ್ಯನು. 'ಋತುಸ್ಸುದರ್ಶನ:' ಎಂದು ಸಹಸ್ರನಾಮವಚನವು. (ಕರ್ತಾ) "ಅಂತ: ಪ್ರವಿಷ್ಟಶ್ಯಾಸ್ತಾ'' ಎಂಬಂತೆ ಸಮುಸ್ತಭೂತಗಳಲ್ಲಿಯೂ ಅಂತರ್ಯಾಮಿಯಾಗಿದ್ದು ಸಕಲಕರ್ಮಪ್ರವರ್ತಕನೆಂದು ಭಾವವು. (ಪ್ರಭಾಕರ:)"ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್ । ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾಂತಿ ತೇ'' ಎಂಬಂತೆ ಭಕ್ತರಿಗೆ ಪ್ರಕಾಶ ರೂಪವಾದ ಜ್ಞಾನವನ್ನು ಕೊಡತಕ್ಕವನು.

ಹೀಗೆ ಆದಿತ್ಯದೇವತಾಸ್ವರೂಪವನ್ನು ನಿರೂಪಿಸಿ, ಇಲ್ಲಿಂದ ಮುಂದೆ ಆದಿತ್ಯಹೃದಯ ಸ್ತೋತ್ರವನ್ನುಪದೇಶಿಸುವರು.

1 (ಆದಿತ್ಯ) "ಯಸ್ಮಾತ್ಸರ್ವಮಾದತ್ತೇ ತಸ್ಮಾದಾದಿತ್ಯ:'' ಎಂಬ ಶ್ರುತಿಯಂತೆ ಅಖಿಲವಿಷಯ ಭೋಕ್ತೃವೆಂದರ್ಥವು. (ಸವಿತಾ) ಜಗತ್ತನ್ನು ಹಡೆದವನು. (ಸೂರ್ಯ:) ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ'' ಎಂಬ ಶ್ರುತಿಯಂತೆ ಸರ್ವಾಂತರ್ಯಾಮಿಯಾಗಿ ಜಗತ್ತನ್ನು ಆಯಾ ಕರ್ಮಗಳಲ್ಲಿ ಪ್ರೇರಿಸುವವನು. "ಅಂತಪ್ರವಿಷ್ಟ ಶ್ಯಾಸ್ತಾ ಜನಾನಾಂ ಸರ್ವಾತ್ಮಾ: ಯಸ್ಸರ್ವಾಣಿ ಭೂಮ್ಯಂತರೋಯ

ಶ್ಲೋ || ೩ ಹಿರಣ್ಯಗರ್ಭಶ್ಶಿಶಿರ ಸ್ತಪನೋ ಭಾಸ್ಕರೋ ರವಿ: |
ಅಗ್ನಿಗರ್ಭೋಽದಿತೇ: ಪುತ್ರಶ್ಶಂಖ ಶ್ಶಿಶಿರನಾಶನ: ||

ಸುವರ್ಣಮಯವಾದ ಅಂಡವನ್ನು ಗರ್ಭದಲ್ಲಿ ಉಳ್ಳವನು. (ಬ್ರಹ್ಮಾಂಡೋದರದಲ್ಲಿ ವರ್ತಿಸುವವನು. ತಾಪತ್ರಯದಲ್ಲಿ ಸಿಕ್ಕಿ ಬೇಯುವವರಿಗೆ ವಿಶ್ರಮಸ್ಥಾನವಾಗಿ ತಂಪೇರಿಸತಕ್ಕವನು. ಲೋಕಕ್ಕೆ ಉಷ್ಣವನ್ನೊದಗಿಸತಕ್ಕವನು. ಕಿರಣಗಳನ್ನುಂಟುಮಾಡತಕ್ಕವನು. ಸಮಸ್ತಜನಗಳಿಂದಲೂ ಸ್ತುತಿಸಲ್ಪಡುವವನು. ಹಗಲಿನಲ್ಲಿ ಅಗ್ನಿಗರ್ಭದಲ್ಲಿರುವವನು. ಅದಿತಿಪುತ್ರರೂಪದಿಂದವತರಿಸಿದವನು. ಸಾಯಂಕಾಲಗಳಲ್ಲಿ ತಾನೇ ಸ್ವೇಚ್ಛೆಯಿಂದ ಶಾಂತನಾಗುವವನು. ಮಂಜನ್ನು ನೀಗಿಸತಕ್ಕವನು.

ಮಯತಿ'' ಎಂಬ ಶ್ರುತ್ಯರ್ಥಗಳೂ ಇಲ್ಲಿ ಅನುಸಂಧೇಯಗಳು. (ಪೂಷಾ) ಪೋಷಿಸುವವನು. ಅಥವಾ ಸ್ಥಿತಿಕರ್ತನು. (ಗಭಸ್ತಿಮಾನ್) ''ಗಾಂ ದಿಶಂ ವ್ಯಾಪ್ಯ ಭಾಸ್ತಿ ಪ್ರಕಾಶಯತೀತಿ ಗಭಸ್ತಿ:" ಎಂಬ ವ್ಯುತ್ಪತ್ತಿಯಿಂದ ಗಭಸ್ತಿಮಂತನೆಂದರೆ ಲಕ್ಷ್ಮೀಯುಕ್ತನು. ''ಯಥಾ ಸರ್ವಗತೋ ವಿಷ್ಣು ಸ್ತಥೈವೇಯಂದ್ವಿಜೋತ್ತಮ'' ಎಂಬ ಪರಾಶರಸ್ಮೃತಿಯಿಂದ ಲಕ್ಷ್ಮಿಯೂ ಸರ್ವಗತೆಯೆಂಬುದು ಸಿದ್ಧವು. (ಸುವರ್ಣ ಸದೃಶ:) ''ಹಿರಣ್ಯಶ್ಮಶ್ರುರ್ಹಿರಣ್ಯಕೇಶ ಆಪ್ರಣಖಾತ್ಸರ್ವ ಏವ ಸುವರ್ಣ:'' ಎಂಬ ಶ್ರುತಿಯಂತೆ ಬಂಗಾರದಂತೆ ಬಣ್ಣವುಳ್ಳವನೆಂದರ್ಥವು. (ಸುವರ್ಣ ಸದೃಶ:) ಎಂಬ ಪಾಠಾಂತರದಲ್ಲಿ ''ದ್ವಾಸುಪರ್ಣಾ ಸಯುಜಾ ಸಖಾಯಾ'' ಎಂಬ ಬೇರೊಂದು ಪಾಠದಲ್ಲಿಯೂ ಸುವರ್ಣಶಬ್ದಕ್ಕೆ ಅದೇ ಅರ್ಥವು. (ತಪನ:) ವಿರೋಧಿಗಳನ್ನು ತಪಿಸತಕ್ಕವನು. (ಭಾನು: ''ತಮೇವ ಭಾಂತಮನುಭಾತಿ ಸರ್ವಂ'' ಎಂಬಂತೆ ಸಮಸ್ತವನ್ನೂ ಪ್ರಕಾಶಪಡಿಸತಕ್ಕವನು. (ಹಿರಣ್ಯರೇತಾ:) ಹಿರಣ್ಯಮಯವಾದ ರೇತಸ್ಸುಳ್ಳವನು. ''ಅಪಏವ ಸಸರ್ಜಾದೌ ತಾಸು ವೀರ್ಯಮಪಾಸೃಜತ್ | ತದಂಡಮಭವದ್ಧೈಮಂ ಸಹಸ್ರಾಂಶುಸಮಪ್ರಭಮ್'' ಎಂದು ಮನುವಚನವು. (ದಿವಾಕರ:) ಹಗಲಿನಂತೆ ಪ್ರಕಾಶವಿಶಿಷ್ಟವಾದ ಜ್ಞಾನವನ್ನುಂಟುಮಾಡುವವನು.

2 (ಹರಿದಶ್ವ:) "ಹರತಿ ಮನ ಇತಿ ಹರಿತ್" ಮನಸ್ಸನ್ನು ಹರಿಸತಕ್ಕ (ಅಶ್ವ:) ವಾಹನವುಳ್ಳವನು. ಗರುಡವಾಹನನೆಂದರ್ಥವು. (ಸಹಸ್ರಾರ್ಚಿ:) (ಅರ್ಚಿ:) ಎಂದರೆ ಅರ್ಚನೀಯಗಳಾದ ಗುಣಗಳು. ಸಹಸ್ರಾರ್ಚಿಯೆಂದರೆ ಅನಂತಕಲ್ಯಾಣಗುಣಗಳುಳ್ಳವನೆಂದರ್ಥವು. (ಸಪ್ತಸಪ್ತಿ:) ಮೇಲಿನ ಅರ್ಥದಲ್ಲಿ ''ಏಕೋ ಅಶ್ವೋ ವಹತಿ ಸಪ್ತನಾಮಾ" ಎಂದುಶ್ರುತಿ. ಇದರಿಂದ ಕಲ್ಕ್ಯವತಾರವು ಸೂಚಿತವು.

ಶ್ಲೋ ॥ 4 ವ್ಯೋಮನಾಥಸ್ತಮೋಭೇದೀ ಋಗ್ಯಜುಸ್ಸಾಮಪಾರಗಃ ।
ಘನವೃಷ್ಟಿರಪಾಂ ಮಿತ್ರೋ ವಿಂಧ್ಯವೀಥಿ; ಪ್ಲವಂಗಮಃ ॥

ಪರಮಾಕಾಶಕ್ಕೆ ಮುಖ್ಯಪ್ರಭುವು. (ಪರಮಪದನಾಥನು). ರಾಹುವನ್ನು ನಿಗ್ರಹಿಸತಕ್ಕ ಸಹಜಶೀಲವುಳ್ಳವನು. ಋಗ್ವೇದ ಯಜುರ್ವೇದ ಸಾಮವೇದಗಳಲ್ಲಿ ಕೊನೆಮುಟ್ಟಿದವನು. ಮಹಾವೃಷ್ಟಿಯನ್ನು ಕೊಡತಕ್ಕವನು. ಜಲಕ್ಕೆ ಮಿತ್ರನೆನಿಸಿದವನು. ದಕ್ಷಿಣಾಯನದಲ್ಲಿ ವಿಂಧ್ಯಮಾರ್ಗದಿಂದ ನಡೆಯತಕ್ಕವನು. ತೆಪ್ಪದಂತೆ ಗಂಭೀರವಾಗಿ ಸಂಚರಿಸತಕ್ಕವನು. (ಆಕಾಶಮಾರ್ಗದಲ್ಲಿ ವೇಗದಿಂದ ನಡೆಯತಕ್ಕವನು).

(ಮರೀಚಿಮಾನ್) "ಮ್ರಿಯಂತೇ ಶತ್ರವೋಽ ನೇನೇತಿ ಮರೀಚಿಃ" ಎಂಬ ವ್ಯುತ್ಪತ್ತಿಯಿಂದ ಮರೀಚಿಯೆಂದರೆ ಸುದರ್ಶನಚಕ್ರವು. (ಮಾರೀಚಿಮಾನ್)ಎಂದರೆ ಚಕ್ರಧಾರಿಯೆಂದರ್ಥವು. (ತಿಮಿರೋನ್ಮಥನಃ) "ಹೃದ್ಯಂತಸ್ಥೋಹ್ಯಭದ್ರಾಣಿ ವಿಧುನೋತಿ ಸುಹೃತ್ಸತಾಮ್" ಎಂಬ ಸ್ಮೃತಿಯಂತೆ ಜ್ಞಾನೋತ್ಪತ್ತಿಗೆ ಪ್ರತಿಬಂಧಕವಾದ ದೋಷವನ್ನು ನಿವರ್ತಿಸತಕ್ಕವನು. (ಶಂಭುಃ) "ವಿಶ್ವಾತ್ಮಂ ವಿಶ್ವಶಂಭುವಮ್" ಎಂಬ ಶ್ರುತಿಯಂತೆ ಸುಖಕರನು. (ತ್ವಷ್ಟಾ) "ತ್ವಷ್ಟೋತಿ ತ್ರಿಸ್ಸಪ್ತಕೃತ್ಯಃ ಸಕ್ಷತ್ರಿಯಾಣಾಂ ಭೂಮಿಮಿತಿ ತ್ವಷ್ಟಾ" ಎಂಬ ವ್ಯುತ್ಪತ್ತ್ಯರ್ಥದಿಂದ ಪರಶುರಾಮಾವತಾರವು ಸೂಚಿತವು. (ಮಾರ್ತಾಂಡಃ) ಮೃತಪ್ರಾಯವಾದ ಬ್ರಹ್ಮಾಂಡಕ್ಕೆ ಜೀವವನ್ನು ಕೊಡಿಸುವವನು. 'ಜೀವಾಜೀವಮಜೀವಯತ್' ಎಂದು ಭಾಗವತ ವಚನವು. (ಅಂಶುಮಾನ್) 'ಅಶುವ್ಯಾಪ್ತಾ' ಎಂಬ ವ್ಯುತ್ಪತ್ತಿಯಿಂದ ಅಂತರ್ಬಹಿರ್ವ್ಯಾಪ್ತಿಯುಳ್ಳವನು. 'ಅಂತರ್ಬಹಿಶ್ಚ ತತ್ಸರ್ವಂವ್ಯಾಪ್ಯ ನಾರಾಯಣ; ಸ್ಥಿತಃ "ಎಂದು ಶ್ರುತಿ.

3 (ಹಿರಣ್ಯ ಗರ್ಭಃ) ಹಿರಣ್ಯವೆಂದರೆ ಸಕಲಜಗದುತ್ಪಾದಕ ಸಮಷ್ಟಿ ಬೀಜಜಾತವು, ಇದನ್ನು ಗರ್ಭದಲ್ಲಿ ಉಳ್ಳವನು. 'ಹಿರಣ್ಯಗರ್ಭಸ್ಸಮವರ್ತತಾಗ್ರೇ' ಎಂದುಶ್ರುತಿಯು. ಅಥವಾ (ಹಿರಣ್ಯಗರ್ಭಃ) ಎಂದರೆ ಹಿರಣ್ಮಯವಾದ ಅಂಡವುಳ್ಳವನು. 'ತದಂಡಮಭವನ್ಧೈಮಂ ಸಹಸ್ರಾಂಶುಸಮಪ್ರಭಮ್" ಎಂದು ಸ್ಮೃತಿಯು. (ಶಿಶಿರಃ) ತಪನಃ (ಭಾಸ್ಕರಃ) ಇವಕ್ಕೆ ಹಿಂದಿನಂತೆಯೇ ತಾತ್ಪರ್ಯವು. (ರವಿ) ರಾತಿ ಉಪದಿಶತಿ ದೇವಾನಿತಿರವಿ" ವೇದಗಳನ್ನುಪದೇಶಿಸುವವನು. "ಯೋವೈ ವೇದಾಂಶ್ಚಪ್ರಹಿಣೋತಿ ತಸ್ಮೈ" ಎಂದು ಶ್ರುತಿ. (ಅಗ್ನಿಗರ್ಭಃ) ಕಾಲಾಗ್ನಿರುದ್ರನನ್ನು ಗರ್ಭದಲ್ಲಿ ಪಡೆದವನು. "ನಾರಾಯಣಾ ದ್ರುದ್ರೋ

ಶ್ಲೋ || 5ಆತಪೀ ಮಂಡಲೀ ಮೃತ್ಯುಃ ಪಿಂಗಳಸ್ಸರ್ವತಾಪನಃ |
ಕವಿರ್ವಿಶ್ವೋ ಮಹಾತೇಜಾ ರಕ್ತಸ್ಸರ್ವಭವೋದ್ಭವಃ ||

ಪ್ರಶಸ್ತವಾದ ಉಷ್ಣವುಳ್ಳವನು. ಬಟ್ಟವಾದ ಬಿಂಬವುಳ್ಳವನು. ವಿರೋಧಿಗಳಿಗೆ ಮೃತ್ಯುರೂಪನು. ಉದಯಕಾಲದಲ್ಲಿ ಪಿಂಗಳವರ್ಣದಿಂದ ಶೋಭಿಸುವವನು. ಮಧ್ಯಾಹ್ನಕಾಲದಲ್ಲಿ ಸಮಸ್ತವಸ್ತುವನ್ನೂ ತಪಿಸುವವನು. ವ್ಯಾಕರಣಾದಿ ಸರ್ವಶಾಸ್ತ್ರಪ್ರವರ್ತಕನು. ಸರ್ವಪ್ರಪಂಚವನ್ನೂ ನಿರ್ವಹಿಸತಕ್ಕವನು. ಮಹಾತೇಜಸ್ಸುಳ್ಳವನು. ಎಲ್ಲರಲ್ಲಿಯೂ ಅನುರಾಗವುಳ್ಳವನು. ಸಮಸ್ತಪ್ರಪಂಚದ ಸಂಸಾರಕ್ಕೂ ಉತ್ಪತ್ತಿಸ್ಥಾನವೆನಿಸಿದವನು.

ಜಾಯತೇ" ಎಂದು ಶ್ರುತಿ. (ಅದಿತೇಃ ಪುತ್ರ) ಉಪೇಂದ್ರಾವತಾರನೆಂದರ್ಥವು. (ಶಂಖಃ) ಶಂಖೇಯಸ್ಯಸ" ಎಂಬ ವ್ಯುತ್ಪತ್ತಿಯಿಂದ ಹೃದಯಾಕಾಶದಲ್ಲಿ ಸುಖವುಳ್ಳವನು. ನಿರವಧಿಕಾನಂದನೆಂದರ್ಥವು. (ಶಿಶಿರನಾಶನಃ) ಸೂರ್ಯರೂಪದಿಂದ ಮಂಜನ್ನು ನೀಗಿಸತಕ್ಕವನು.

4 (ವ್ಯೋಮನಾಥಃ) ಪರಮಾಕಾಶಕ್ಕೆ ನಾಥನು ಎಂದರೆ ಪರಮಪದನಾಥನೆಂದರ್ಥವು. ಅಥವಾ ತಾಮಸಾಹಂಕಾರರೂಪದಿಂದ ಆಕಾಶವನ್ನು ಸೃಷ್ಟಿಸಿದವನು. "ಆತ್ಮನ ಆಕಾಶಸ್ಸಂಭೂತಃ" ಎಂಬು ಶ್ರುತಿ. (ತಮೋಭೇದೀ) ರಾಹುವನ್ನು ಭೇದಿಸತಕ್ಕ ಸ್ವಭಾವವುಳ್ಳವನು. (ಋಗ್ಯಜುಸ್ಸಾಮಪಾರಗಃ) ಋಗ್ಭಿಃ ಪೂರ್ವಾಹ್ನೇ ದಿವಿ ದೇವ ಈಯತೇ" "ಯಜುರ್ವೇದೇ ತಿಷ್ಠತಿ ಮಧ್ಯೇ ಅಹ್ನಃ" "ಸಾಮವೇದೇನಾಸ್ತಮಯೇ ಮಹೀಯತೇ" "ವೇದೈರಶೂನ್ಯಸ್ತ್ರಿಭಿರೇತಿ ಸೂರ್ಯಃ" ಇತ್ಯಾದಿ ಶ್ರುತಿಗಳಂತೆ ತ್ರಯೀಪಾರಂಗತನು. (ಘನವೃಷ್ಟಿಃ) ದೊಡ್ಡ ವರ್ಷವನ್ನು ಕರೆಯುತಕ್ಕವನು. "ಅಗ್ನೌಪ್ರಾಸ್ತಾಹುತಿಸ್ಸಮ್ಯಗಾದಿತ್ಯಮುಪತಿಷ್ಠತೇ | ಆದಿತ್ಯಾಜ್ಜಾಯತೇ ವೃಷ್ಟಿರ್ವೃಷ್ಟೇರನ್ನಂತತಃ ಪ್ರಜಾಃ" ಎಂದು ಸ್ಮೃತಿವಾಕ್ಯವು. (ಘನವೃಷ್ಟಿ) ಎಂದರೆ ಸಕಲಕರ್ಮಫಲರೂಪವಾದ ವೃಷ್ಟಿಯುಳ್ಳವನು. "ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾಚ ಪ್ರಭುರೇವಚ" "ಫಲಮತ ಉಪಪತ್ತೇ" ಇತ್ಯಾದಿ ವಚನಪ್ರಮಾಣಗಳಿಂದ ಸಕಲಕರ್ಮಫಲಪ್ರದನೆಂದರ್ಥವು. (ಅಪಾಂಮಿತ್ರ) "ಯಮಂತಸ್ಸಮುದ್ರೇ ಕವಯೋವಯಂತಿ" ಇತ್ಯಾದಿ ಶ್ರುತಿಗಳಂತೆ ಮಹಾರ್ಣವಶಾಯಿಯೆಂದರ್ಥವು. (ವಿಂಧ್ಯ ವೀಥೀಪ್ಲವಂಗಮಃ) ವಿಂಧ್ಯದಂತೆ ದುರ್ಗಮವಾದ ದಾರಿಯಲ್ಲಿ ಎಂದರೆ ಸುಷುಮ್ನಾಮಾರ್ಗದಲ್ಲಿ ಶೀಘ್ರವಾಗಿ ನಡೆಸ

ಶ್ಲೋ ॥ [6] ನಕ್ಷತ್ರಗ್ರಹತಾರಾಣಾಮಧಿಪೋ ವಿಶ್ವಭಾವನಃ ।
ತೇಜಸಾಮಪಿ ತೇಜಸ್ವೀ ದ್ವಾದಶಾತ್ಮನ್ನಮೋಽಸ್ತು ತೇ ॥

ನಕ್ಷತ್ರಗ್ರಹತಾರೆಗಳೆಲ್ಲಕ್ಕೂ ಅಧಿಪತಿಯು. ಸಮಸ್ತವನ್ನೂ ಸ್ಥಾಪಿಸತಕ್ಕವನು. ಅಗ್ನಿಮೊದಲಾದ ತೇಜಸ್ಸುಗಳಿಗಿಂತಲೂ ಪ್ರಶಸ್ತತೇಜಸ್ಸುಳ್ಳವನು. ಇಂದ್ರಾದಿ ನಾಮಕಗಳಾದ ದ್ವಾದಶಮೂರ್ತಿಗಳುಳ್ಳವನು. ಇಂತಹ ನಿನಗೆ ನಮಸ್ಕಾರವು.

ತಕ್ಕವನು. ಮುಕ್ತರಿಗೆ ಪ್ರಾಪಕನೆಂದರ್ಥವು. "ಸವಿತಾನ್ ಬ್ರಹ್ಮ ಗಮಯತಿ ಹಾರ್ದಾನುಗೃಹೀತಶ್ಶತಾಧಿಕಯಾ" ಇತ್ಯಾದಿಗಳು ಇಲ್ಲಿ ಶ್ರುತಿವಚನಗಳು.

[5] (ಆತಪೀ) "ತಪ ಆಲೇಖನೇ" ಎಂಬ ಧಾತ್ವರ್ಥದಂತೆ ಯೂಪಾಗಲೂ ಜಗನ್ನಿರ್ಮಾಣಸಂಕಲ್ಪವುಳ್ಳವನು. "ಯಸ್ಯಜ್ಞಾನಮಯಂ ತಪಃ" ಎಂದು ಶ್ರುತಿ. (ಮಂಡಲೀ) "ಮಂಡತೇ ಅನೇನೇತಿ ಮಂಡಂ" ಎಂಬ ವ್ಯುತ್ಪತ್ತಿಯಿಂದ, ಮಂಡಲವೆಂದರೆ ಅಲಂಕಾರಕಗಳಾದ ಕೌಸ್ತುಭಾದಿಗಳು. ಅದನ್ನುಳ್ಳವನು ಮಂಡಲಿಯು. (ಮೃತ್ಯುಃ) "ಯಸ್ಯ ಮೃತ್ಯುಶ್ಶರೀರಮ್" ಎಂಬ ಶ್ರುತಿಯಂತೆ ಮೃತ್ಯುಶರೀರಕನು. (ಪಿಂಗಳಃ) ಪಿಂಗಳನಾಡಿ ಪ್ರವರ್ತನದಿಂದ ಕರ್ಮಮಾರ್ಗ ಪ್ರವರ್ತಕನೆಂದರ್ಥವು (ಸರ್ವದಾತಪನಃ) ಒಂದೇಸಲಕ್ಕೆ ಸಮಸ್ತಾಂಡಗಳನ್ನೂ ಸಂಹರಿಸತಕ್ಕವನು, (ಕವಿಃ) ವೇದಾರ್ಥಂಶಗಳೆಲ್ಲವನ್ನೂ ತಿಳಿದವನು. "ಯಸ್ಸರ್ವಜ್ಞಸ್ಸರ್ವವಿತ್" ಎಂದು ಶ್ರುತಿಯು. (ವಿಶ್ವಃ) 'ವಿಶ್ವಮೇವೇದಂ ಪುರುಷಃ' ಎಂಬಂತೆ ವಿಶ್ವಶರೀರಕನು. (ಮಹಾತೇಜಾಃ) ನಿರವಧಿಕ ತೇಜಸ್ಸುಳ್ಳವನು. (ರಕ್ತಃ) ಸರ್ವರಂಜಕನು. (ಸರ್ವಭವೋದ್ಭವಃ) ಸಮಸ್ತ ಕಾರ್ಯವರ್ಗಗಳಿಗೂ ಹೇತುವಾದವನು. ಸರ್ವೋತ್ಪತ್ತಿಹೇತುಭೂತನೆಂದರ್ಥವು. ಅಥವಾ ಸಮಸ್ತಪ್ರಪಂಚದ ಸಂಸಾರಕ್ಕೂ ಪ್ರಥಮಜನ್ಮಭೂಮಿಯು.

[6] (ನಕ್ಷತ್ರಗ್ರಹತಾರಾಣಾಮಧಿಪಃ) 'ಯಶ್ಚಂದ್ರತಾರಕಮಂತರೋಽಯಮಯತಿ' ಎಂಬಂತೆ ನಕ್ಷತ್ರಗ್ರಹತಾರೆಗಳಿಗೆ ಅಂತರ್ಯಾಮಿಯಾದವನು. (ವಿಶ್ವಭಾವನಃ) 'ದ್ಯೌಸ್ಸಚಂದ್ರಾರ್ಕನಕ್ಷತ್ರಂ ಖಂ ದಿಶೋ ಭೂರ್ಮಹೋದಧೀ । ವಾಸುದೇವಸ್ಯ ವೀರ್ಯೇಣ ವಿಧೃತಾನಿ ಮಹಾತ್ಮನಃ' ಎಂಬಂತೆ ವಿಶ್ವಸ್ಥಿತಿಹೇತುವೆಂದರ್ಥವು. (ತೇಜಸಾಮಪಿತೇಜಸ್ವೀ) 'ಯೇನ ಸೂರ್ಯಸ್ತಪತಿ ತೇಜಸೇದ್ಧಃ' 'ಸೂರ್ಯಸ್ಯಾಪಿ ಭವೇತ್ಸೂರ್ಯಃ' ಎಂಬಂತೆ ಸಮಸ್ತ ತೇಜಸ್ಸುಗಳಿಗಿಂತಲೂ ಮೇಲಾದ ತೇಜಸ್ಸುಳ್ಳವನು. (ದ್ವಾದಶಾತ್ಮನ್) ಇಂದ್ರೋಧಾತಾ ಭಗಃ ಪೂಷಾ ಮಿತ್ರೋಥ ವರು

ಶ್ಲೋ || 1ನಮಃ ಪೂರ್ವಾಯ ಗಿರಯೇ ಪಶ್ಚಿಮೇ ಗಿರಯೇ ನಮಃ
ಜ್ಯೋತಿರ್ಗಣಾನಾಂ ಪತಯೇ ದಿನಾಧಿಪತಯೇ ನಮಃ

ಪೂರ್ವಪರ್ವತೋಪಲಕ್ಷಿತನಾದ ನಿನಗೆ ನಮಸ್ಕಾರವು. ಪಶ್ಚಿಮಪರ್ವತೋಪಲಕ್ಷಿತನಾದ ನಿನಗೆ ನಮಸ್ಕಾರವು. ಉಪಾಸಕರಿಗೆ ಜಯಪ್ರದನಾದ ನಿನಗೆ ನಮಸ್ಕಾರವು. ಜ್ಯೋತಿರ್ಗಣಾಧಿಪತಿಯಾದ ನಿನಗೆ ನಮಸ್ಕಾರವು. ಹಗಲೊಡೆಯನಾದ ನಿನಗೆ ನಮಸ್ಕಾರವು.

ಶ್ಲೋ 2ಜಯಾಯ ಜಯಭದ್ರಾಯ ಹರ್ಯಶ್ವಾಯ ನಮೋನಮಃ ।
ನಮೋನಮಸ್ಸಹಸ್ರಾಂಶೋ ಆದಿತ್ಯಾಯ ನಮೋನಮಃ ।

ಜಯಶೀಲನನಾದ ನಿನಗೆ ನಮಸ್ಕಾರವು. ಜಯವನ್ನೂ ಮಂಗಳವನ್ನೂ ಕೊಡತಕ್ಕ ನಿನಗೆ ನಮಸ್ಕಾರವು. ಶ್ಯಾಮವರ್ಣದ ಕುದುರೆಗಳುಳ್ಳ ನಿನಗೆ ನಮಸ್ಕಾರವು. ಸಹಸ್ರಕಿರಣಗಳಿಂದ ಶೋಭಿಸುವ ನಿನಗೆ ನಮಸ್ಕಾರವು. ಅದಿತಿಪುತ್ರನಾದ ನಿನಗೆ ನಮಸ್ಕಾರವು.

ಹೋSರ್ಥಮೂ : ಅರ್ಚಿರ್ವಿವಸ್ವಾನ್ತ್ವಷ್ಟಾಚಸವಿತಾ ವಿಷ್ಣುರೇವಚ' ಎಂದು ಹೇಳಲ್ಪಡುವ ಹನ್ನೆರಡು ಮೂರ್ತಿಗಳುಳ್ಳವನು. ದ್ವಾದಶ ಮಂಡಲಾಂತರ್ವರ್ತಿಯಾದ ನಿನಗೆ ನಮಸ್ಕಾರವೆಂಡನ್ವಯವು.

1 (ನಮಃ ಪೂರ್ವಾಯ ಗಿರಯೇ ನಮಃ) ಶ್ರೀವಿಷ್ಣುಪುರಾಣದಲ್ಲಿ ಹೇಳಲ್ಪಟ್ಟಂತೆ ಆಯಾಪರ್ವತಗಳಿಗೆ ಅಂತರ್ಯಾಮಿಯೆಂದರ್ಥವು. (ಜ್ಯೋತಿರ್ಗಣಾನಾಂ ಪತಯೇ) ಜ್ಯೋತಿರ್ಗಣಗಳೆಂದರೆ ಮುಕ್ತರು. ಮುಕ್ತರಿಗೆ ಸ್ವಾಮಿಯೆಂದರ್ಥವು. (ದಿನಾಧಿಪತಯೇ) ಸೂರ್ಯ ಪರ್ಯಾಯಗಳಾದ ನಾಮಗಳೆಲ್ಲವೂ ತದಂತರ್ಯಾಮಿಯಾದ ಪರಮಾತ್ಮನಲ್ಲಿಯೇ ಪರ್ಯವಸಿತಗಳಾಗುವುವೆಂಬ ಅಭಿಪ್ರಾಯದಿಂದ ಇಲ್ಲಿ ದಿನಾಧಿಪತಿ ಮೊದಲಾದ ಈ ವಿಶೇಷಣಗಳೆಲ್ಲವೂ ಹೇಳಲ್ಪಟ್ಟಿರುವುದಾಗಿ ಗ್ರಹಿಸಬೇಕು.

2 (ಜಯಾಯ) "ಜಯತೀತಿ ಜಯಃ" ಎಂಬ ವ್ಯುತ್ಪತ್ತಿಯಿಂದ ಅಪ್ರತಿಹತಪರಾಕ್ರಮನೆಂದರ್ಥವು. ಅಥವಾ "ಜಯತ್ಯನೇನ ಸದ್ಭಕ್ತಾಸ್ಸಂಸಾರಮಿತಿ ವಾಜಯ" ಎಂಬಂತೆ ಭಕ್ತರಿಗೆ ಸಂಸಾರ ಜಯವನ್ನುಂಟುಮಾಡತಕ್ಕವನು. (ಜಯಭದ್ರಾಯ) ಆಶ್ರಿತರಿಗೆ ಜಯವನ್ನೂ, ಕಲ್ಯಾಣವನ್ನೂ ಕೊಡತಕ್ಕವನು. (ಹರ್ಯಶ್ವಾಯ) ಹರಿಯೆಂದರೆ ಕಪಿಯು. ಕಪಿಯಾದ ಹನುಮಂತನನ್ನು ವಾಹನನಾಗಿ ಉಳ್ಳವನು.

ಶ್ಲೋ॥ ನಮಃ ಉಗ್ರಾಯ ದೇವಾಯ 3ಸಾರಂಗಾಯ ನಮೋನಮಃ ।
ನಮಃ ಪದ್ಮ ಪ್ರಬೋಧಾಯ ಮಾರ್ತಾಂಡಾಯ ನಮೋನಮಃ ॥

ಉಪಾಸನ ಮಾಡದವರಿಗೆ ಉಗ್ರಸ್ವರೂಪನಾದ ನಿನಗೆ ನಮಸ್ಕಾರವು. ಪ್ರಾಣಿಗಳ ಸಮಸ್ತವ್ಯಾಪಾರಕ್ಕೂ ಪ್ರೇರಕನಾದ ನಿನಗೆ ನಮಸ್ಕಾರವು. ಶೀಘ್ರಸಂಚಾರಿಯಾದ ನಿನಗೆ ನಮಸ್ಕಾರವು. ತಾವರೆಗಳನ್ನು ವಿಕಾಸಗೊಳಿಸತಕ್ಕ ನಿನಗೆ ನಮಸ್ಕಾರವು. ಮಾರ್ತಾಂಡನಿಗೆ ನಮಸ್ಕಾರವು.

ಶ್ಲೋ॥ 4ಬ್ರಹ್ಮೇಶಾನಾಚ್ಯುತೇಶಾಯ ಸೂರ್ಯಾದಿತ್ಯವರ್ಚಸೇ ।
ಭಾಸ್ವತೇ ಸರ್ವಭಕ್ಷಾಯ ರೌದ್ರಾಯ ವಪುಷೇ ನಮಃ ॥

ಸೃಷ್ಟಿ ಸಂಹಾರ ಸ್ಥಿತಿ ಕರ್ತೃಗಳಾದ ಮೂವರು ದೇವತೆಗಳಿಗೂ ಪರಬ್ರಹ್ಮರೂಪದಿಂದ ಪ್ರಭುವಾಗಿರುವ ನಿನಗೆ ನಮಸ್ಕಾರವು. ಬ್ರಹ್ಮರುದ್ರರಿಗೂ ಕೂಡ ಅಪಾಯವಿಲ್ಲದೆ ರಕ್ಷಿಸತಕ್ಕ ನಿನಗೆ ನಮಸ್ಕಾರವು. ಸೂರ್ಯದೇವನಾದ ನಿನಗೆ ನಮಸ್ಕಾರವು. ಆದಿತ್ಯರೂಪವಾದ ವರ್ಚಸ್ಸುಳ್ಳ ನಿನಗೆ ನಮಸ್ಕಾರವು. ಕಾಂತಿಮಂತನಾದ ನಿನಗೆ ನಮಸ್ಕಾರವು. ಸರ್ವಸಂಹಾರಕನಾದ ನಿನಗೆ ನಮಸ್ಕಾರವು. ಆ ಸರ್ವಸಂಹಾರಕಾರ್ಯಕ್ಕಾಗಿ ರೌದ್ರಮೂರ್ತಿಯುಳ್ಳ ನಿನಗೆ ನಮಸ್ಕಾರವು.

ಇದರಿಂದ ರಾಮಾವತಾರವು ಸೂಚಿತವು. (ಸಹಸ್ರಾಂಶೋ) ಇಲ್ಲಿ ಅಂಶುವೆಂದರೆ ಜೀವನಗಳು. "ಮಮೈವಾಂಶೋ ಜೀವಲೋಕೇ ಜೀವಭೂತಃ" ಎಂಬ ಸ್ಮೃತಿಯಂತೆ ಅನೇಕ ಜೀವಗಳುಳ್ಳವನೆಂದರ್ಥವು.

3(ಸಾರಂಗಾಯ) ಸಾರಗ್ರಾಹಿಯೆಂದರ್ಥವು. ಅಥವಾ ಸಾರಂಗವೆಂದರೆ ಹಂಸವೆನಿಸುವುದರಿಂದ ಹಂಸಾವತಾರನು. ಅಥವಾ ಸಾರವೆಂದರೆ ಪ್ರಣವವು. ಅದರಿಂದ ಪ್ರತಿಪಾದಿತನೆಂದೂ ಗ್ರಹಿಸಬಹುದು.

4(ಬ್ರಹ್ಮೇಶಾನಾಚ್ಯುತೇಶಾಯ) "ಸೃಷ್ಟಿಸ್ಥಿತ್ಯಂತಕರಣೀಂ ಬ್ರಹ್ಮ ವಿಷ್ಣು ಶಿವಾತ್ಮಿಕಾಮ್ । ಸಂಜ್ಞಾಂ ಸ ಯಾತಿ ಭಗವಾನೇಕ ಏವ ಜನಾರ್ದನಃ" ಎಂಬ ಸ್ಮೃತಿಯಂತೆ ಸೃಷ್ಟಿಸ್ಥಿತಿಲಯಕಾರಿಗಳಾದ ತ್ರಿಮೂರ್ತಿಗಳಿಗೆ ಸ್ವಾಮಿಯು. (ಸರ್ವಭಕ್ಷಾಯ) ಸರ್ವಯಜ್ಞ ಭೋಕ್ತೃವೆಂದರ್ಥವು.

5(ಶತ್ರುಘ್ನಾಯ) ಶತ್ರುಭೂತಗಳಾದ ಇಂದ್ರಿಯಗಳನ್ನು ನಿಗ್ರಹಿಸಿದವನು. (ಅಮಿತಾತ್ಮನೇ) ಅಮಿತಮಹಿಮೆಯುಳ್ಳವನು. ಇತರ ವಿಶೇಷಣಗಳಿಗೆಲ್ಲಾ ಹಿಂದಿ

ಶ್ಲೋ। ತಮೋಘ್ನಾಯ ಹಿಮಘ್ನಾಯ ಶತ್ರುಘ್ನಾಯಾಮಿತಾತ್ಮನೇ ।
ಕೃತಘ್ನಘ್ನಾಯ ದೇವಾಯ ಜ್ಯೋತಿಷಾಂ ಪತಯೇ ನಮಃ ।

ಅಂಧಕಾರವಿನಾಶಕನಾದ ನಿನಗೆ ನಮಸ್ಕಾರವು. ಹಿಮನಿವಾರಕನಾದ ನಿನಗೆ ನಮಸ್ಕಾರವು. ಆಶ್ರಿತರ ವೈರಿಗಳನ್ನು ನಿರಸನಮಾಡತಕ್ಕ ನಿನಗೆ ನಮಸ್ಕಾರವು. ಅಪ್ರಮೇಯಸ್ವರೂಪವುಳ್ಳ ನಿನಗೆ ನಮಸ್ಕಾರವು. ಕೃತಘ್ನರನ್ನು ನಿಗ್ರಹಿಸತಕ್ಕ ನಿನಗೆ ನಮಸ್ಕಾರವು. ದೀಪ್ತಿವಿಶಿಷ್ಟನಾದ ನಿನಗೆ ನಮಸ್ಕಾರವು. ತೇಜಸ್ಸುಗಳಿಗೆ ಮುಖ್ಯಾಧಿಪತಿಯಾದ ನಿನಗೆ ನಮಸ್ಕಾರವು.

ಶ್ಲೋ। ತಪ್ತಚಾಮೀಕರಾಭಾಯ ವಹ್ನಯೇ ವಿಶ್ವಕರ್ಮಣೇ ।
ನಮಸ್ತಮೋಽಭಿನಿಘ್ನಾಯ ರುಚಯೇ ಲೋಕಸಾಕ್ಷಿಣೇ ॥

ಸುವರ್ಣಕಾಂತಿಯುಳ್ಳ ನಿನಗೆ ನಮಸ್ಕಾರವು. ಅಗ್ನಿರೂಪನಾದ ನಿನಗೆ ನಮಸ್ಕಾರವು. ತಮೋನಿವಾರಕನಾದ ನಿನಗೆ ನಮಸ್ಕಾರವು. ಕಾಂತಿಸ್ವರೂಪನಾದ ನಿನಗೆ ನಮಸ್ಕಾರವು. ಸಮಸ್ತಲೋಕದ ಪಾಪಪುಣ್ಯಗಳಿಗೆ ಸಾಕ್ಷಿಯಾಗಿರುವ ನಿನಗೆ ನಮಸ್ಕಾರವು.

[1]ಹೀಗೆಂದು ನೀನು ಈ ಸ್ತೋತ್ರದಿಂದ ಸೂರ್ಯನನ್ನಾರಾಧಿಸು! [2]ಇವನೇ ಸಮಸ್ತಜಗತ್ತನ್ನೂ ನಾಶಹೊಂದಿಸಿ ತಿರುಗಿ ಅದನ್ನೇ ಸೃಷ್ಟಿಸಿ, ತಾನೇ ಪ್ರಭುವಾಗಿ ರಕ್ಷಿಸುವನು. ತನ್ನ ಕಿರಣಗಳಿಂದಲೇ ಅದನ್ನು ಶೋಷಿಸುವನು. ತನ್ನ ಕಿರಣಗಳಿಂದಲೇ ತಪಿಸುವನು. ತನ್ನ ಕಿರಣಗಳಿಂದಲೇ ವರ್ಷಿಸುವನು. ಇವನು ನಿದ್ರಾವಸ್ಥೆಯಲ್ಲಿರುವ ಭೂತಗಳಲ್ಲಿ ಅಂತರ್ಯಾಮಿಯಾಗಿ ಎಚ್ಚರಗೊಂಡಿರುವನು. [3]ಇವನೇ ಯಜ್ಞಕರ್ತನು. ಯಜ್ಞಕರ್ತೃಗಳಿಗೆ ಫಲಪ್ರದನೂ ಇವನೇ.

ನಂತೆಯೇ ತತ್ತ್ವಾರ್ಥವನ್ನು ಗ್ರಹಿಸಬೇಕು. ಸ್ತೋತ್ರವಾದುದರಿಂದ ಅಲ್ಲಲ್ಲಿ ದ್ವಿರುಕ್ತಿಗಳುಂಟು.

1 ಹೀಗೆ ಮೇಲಿನ ಹನ್ನೆರಡು ಶ್ಲೋಕಗಳಿಂದ ಆದಿತ್ಯಹೃದಯಸ್ತೋತ್ರವನ್ನುಪದೇಶಿಸಿ, ಇಲ್ಲಿಂದ ಮುಂದೆ ತತ್ಪ್ರತಿಪಾದ್ಯದೇವತೆಯ ಸ್ವರೂಪವನ್ನು ತಿಳಿಸುವರು.

2 ಇದರಿಂದ ಲೋಕರಕ್ಷಣರೀತಿಯು ತಿಳಿಸಲ್ಪಡುವುದು.

3 ಇದರಿಂದ ಅವನೇ ಸಕಲಯಜ್ಞಕರ್ತನೆಂದೂ, ಫಲಪ್ರದನೆಂದೂ ತಿಳಿಸಲ್ಪಡುವುದು.

ಈತನೇ ಸರ್ವವೇದಸ್ವರೂಪನು. ಇವನೇ ಸಮಸ್ತ ಯಜ್ಞಸ್ವರೂಪನು. ಆ ಯಜ್ಞಗಳಿಗೂ ಇವನೇ ಫಲಭೂತನು. [4]ಲೋಕದಲ್ಲಿ ವೈದಿಕ ಲೌಕಿಕ ಕರ್ಮಗಳು ಯಾವಯಾವುವುಂಟೋ, ಅವೆಲ್ಲಕ್ಕೂ ಸರ್ವಾತ್ಮಕನಾದ ಈ ಸೂರ್ಯನೇ ನಿಯಾಮಕನು. ವತ್ಸ ರಾಮಾ! [5]ಮಹಾ ವಿಪತ್ತುಗಳಲ್ಲಿಯಾಗಲಿ, ಕಷ್ಟಕಾಲಗಳಲ್ಲಿಯಾಗಲಿ, ನಟ್ಟಡವಿಯಲ್ಲಿಯಾಗಲಿ, ಮಹಾಭಯಗಳಲ್ಲಿಯಾಗಲಿ, ಇವನನ್ನು ಭಕ್ತಿಯಿಂದ ಭಜಿಸತಕ್ಕ ಯಾವ ಮನುಷ್ಯನಾದರೂ ಅಪಾಯವಿಲ್ಲದೆ ಸುಖವನ್ನು ಹೊಂದುವನು. ಆದುದರಿಂದ ಎಲೈ ವತ್ಸನೇ! ಈಗ ನೀನು ಏಕಾಗ್ರಚಿತ್ತನಾಗಿ ನಿಂತು, ದೇವದೇವನಾಗಿಯೂ, ಜಗನ್ನಾಯಕನಾಗಿಯೂ ಇರುವ ಸೂರ್ಯನನ್ನು ಕುರಿತು ಈ ಸ್ತೋತ್ರವನ್ನು ಮೂರಾವರ್ತಿ ಜಪಿಸಿದ ಪಕ್ಷದಲ್ಲಿ, ನಿನಗೆ ಯುದ್ಧದಲ್ಲಿ ಜಯವೆಂಬುದೇ ಸಿದ್ಧವು. ಎಲೆ ಮಹಾಬಾಹೂ! ಈ ಕ್ಷಣವೇ ನೀನು ರಾವಣನನ್ನು ಕೊಲ್ಲುವುದರಲ್ಲಿ ಸಂದೇಹವಿಲ್ಲ" ಎಂದನು. ಅಗಸ್ತ್ಯ ಮುನಿಯು ರಾಮನಿಗೆ ಈ ಮಂತ್ರವನ್ನುಪದೇಶಿಸಿ ತಾನು ಬಂದ ದಾರಿಯಿಂದ ಹೊರಟುಹೋದನು. ಈ ಸ್ತೋತ್ರವನ್ನು ಕೇಳಿದೊಡನೆ ಮಹಾತೇಜಸ್ವಿಯಾದ ರಾಮನಿಗೆ ಮೊದಲಿದ್ದ ವ್ಯಾಕುಲತೆಯೆಲ್ಲವೂ ನೀಗಿ ಮನಸ್ಸಿನಲ್ಲಿ ಸಂತೋಷವು ಹುಟ್ಟಿತು. ಸ್ಥಿರಮನಸ್ಸಿನಿಂದ ಆ ಮಂತ್ರವನ್ನು ಧಾರಣಮಾಡಿಕೊಂಡು, ಆಚಮನಮಾಡಿ ಶುಚಿಯಾಗಿ ಬಂದು, ಸೂರ್ಯನಿಗಭಿಮುಖವಾಗಿ ನಿಂತು ಜಪಿಸಿದನು. ಆಮೇಲೆ ಮೂರಾವರ್ತಿ ಉತ್ತರಾಚಮನಮಾಡಿ ಬಂದು, ವೀರೋತ್ಸಾಹದಿಂದ ತನ್ನ ಧನುಸ್ಸನ್ನು ಕೈಗೆತ್ತಿಕೊಂಡನು. ಹೀಗೆ ರಾಮನು ಧನುರ್ಧಾರಿಯಾಗಿ ಬಂದು, ತನಗಿದಿರಾಗಿದ್ದ ರಾವಣನನ್ನು ನೋಡಿದೊಡನೆ ಮಹೋತ್ಸಾಹಗೊಂಡವನಾಗಿ, ಸರ್ವಪ್ರಯತ್ನದಿಂದಲೂ ಅವನನ್ನು ಕೊಲ್ಲಬೇಕೆಂದು ದೃಢನಿಶ್ಚಯವನ್ನು ಮಾಡಿ ಯುದ್ಧಕ್ಕೆ ನಿಂತನು. ಇಷ್ಟರಲ್ಲಿ ಈ ಸ್ತೋತ್ರದಿಂದ ಪ್ರಸನ್ನನಾದ ಸೂರ್ಯನು ಸಂತೋಷದಿಂದ ಪುಲಕಿತಗಾತ್ರನಾಗಿ, ತನ್ನ ಬಿಂಬದಿಂದ

---

4 ಇವುಗಳಿಂದ ಇವನೇ ವೇದೋಕ್ತಗಳಾದ ಸಮಸ್ತ ಕರ್ಮಗಳಿಂದಲೂ ಸಮಾರಾಧ್ಯನೆಂದೂ, ಇವನೇ ಸಮಸ್ತಯಜ್ಞಗಳಿಗೂ ಲೌಕಿಕ ಕರ್ಮಗಳಿಗೂ ಫಲಪ್ರದನೆಂದೂ ಸೂಚಿತವು.

5 ಇಲ್ಲಿಂದ ಮುಂದೆ ಫಲಶ್ರುತಿಯು ಹೇಳಲ್ಪಡುವುದು.

ಹೊರಗೆ ಬಂದು, [1]ದೇವ ಸಮೂಹದ ನಡುವೆ ನಿಂತು ರಾಮನನ್ನು ನೋಡಿ, ರಾವಣನನ್ನು ವಧಿಸುವಂತೆ ಆತನಿಗೆ ಅನುಗ್ರಹಿಸಿ, "ರಾಮಾ! ಇನ್ನು ತ್ವರೆಮಾಡು!" ಎಂದು ಪ್ರೋತ್ಸಾಹಿಸಿದನು.

[2]ಇಲ್ಲಿಗೆ ನೂರೇಳನೆಯ ಸರ್ಗವು.

---

1 ಇಲ್ಲಿ ಸುರಗಣಮಧ್ಯಗತನೆಂಬ ವಿಶೇಷಣವಿರುವುದರಿಂದಲೇ ಸೂರ್ಯನು ಯುದ್ಧ ದರ್ಶನಕ್ಕಾಗಿ ತನ್ನ ಮಂಡಲದಿಂದ ಹೊರಟುಬಂದು, ರಾಮನಿಗೆ ಸಮೀಪವಾಗಿ ಗಗನದಲ್ಲಿ ನಿಂತು, ಅವನಿಗೆ ಸ್ತೋತ್ರಫಲವನ್ನನುಗ್ರಹಿಸಿ ಹೋದನೆಂಬುದಾಗಿ ಊಹ್ಯವು.

2 ಮುಂದೆ ಬ್ರಹ್ಮರುದ್ರಾದಿ ಸಮಸ್ತದೇವತೆಗಳೂ ಒಂದೇ ವಾಕ್ಯದಿಂದ "ಭವಾನ್ನಾರಾಯಣೋದೇವ' ಇತ್ಯಾದಿ ರೀತಿಯಲ್ಲಿ ವಿಷ್ಣುವನ್ನೇ ಎಲ್ಲಕ್ಕಿಂತಲೂ ಮೇಲಾದವನನ್ನಾಗಿ ಮಹಾಗ್ರಂಥಸಂದರ್ಭಗಳಿಂದ ಪ್ರತಿಪಾದಿಸಿರುವಾಗ, ಇಲ್ಲಿ ಸೂರ್ಯನಿಗೆ ಸರ್ವೋತ್ತಮತ್ವವು ಹೇಗೆ ಯುಕ್ತವೆಂದು ಶಂಕೆಯುಂಟಾಗಬಹುದು. ಆದರೆ ಮಧುವಿದ್ಯೆಯಲ್ಲಿ ಆದಿತ್ಯನಿಗೇ ಪರತ್ವವನ್ನು ಹೇಳಿದ್ದರೂ, ಆ ಪರತ್ವವು ತದಂತರ್ಯಾಮಿಯಾದ ಪರಮಾತ್ಮನಿಗೇ ಸಂಬಂಧಿಸುವುದೆಂದು ಆ ಮಧುವಿದ್ಯೆಯ ತಾತ್ಪರ್ಯವೆಂಬುದಾಗಿ ಬ್ರಹ್ಮಮೀಮಾಂಸೆಯಲ್ಲಿ ಬಾದರಾಯಣವಚನವುಂಟು. ಅದರಂತೆಯೇ ಇವೆಲ್ಲವೂ ಪರಮಪುರುಷನಲ್ಲಿಯೇ ಪರ್ಯವಸಿತವೆಂದು ಗ್ರಾಹ್ಯವು. ಇದಲ್ಲದೆ ಇಲ್ಲಿನ ವಿಶೇಷಣಗಳೆಲ್ಲವೂ ನಾರಾಯಣಪರವಾದ ಅರ್ಥವನ್ನೇ ಸೂಚಿಸುವುವೆಂಬುದು ಮೊದಲಿಂದಲೂ ಕಾಣಿಸಲ್ಪಟ್ಟಿದೆ.

ಈ ಸರ್ಗವು ಕೆಲವು ಶ್ಲೋಕಗಳಲ್ಲಿಯೂ ಉದಾರಿವ್ಯಾಖ್ಯಾನದಲ್ಲಿಯೂ ಕಾಣುವುದಿಲ್ಲ. ಇದಲ್ಲದೆ ಈ ಗ್ರಂಥಾರಂಭದಿಂದ ಕೊನೆಯವರೆಗೂ ಪ್ರತಿಪಾದಿತವಾದ ನಾರಾಯಣಪರತ್ವಕ್ಕೆ ಸೂರ್ಯಪರತ್ವಪ್ರತಿಪಾದಕವಾದ ಈ ಸರ್ಗವು ಮಾತ್ರ ಕೇವಲ ವಿರುದ್ಧವಾಗಿಯೂ ತೋರುತ್ತಿದೆ. ಇದರಮೇಲೆ ಈ ಕಾಂಡದಲ್ಲಿ ನೂರಮೂವತ್ತು ಸರ್ಗಗಳೆಂದು ಉದಾರಿವ್ಯಾಖ್ಯಾನದಿಂದ ತಿಳಿದುಬರುತ್ತಿದೆ. ಈ ಸರ್ಗವನ್ನೂ ಸೇರಿಸಿದರೆ ನೂರಮೂವತ್ತೊಂದು ಸರ್ಗಗಳಾಗುವುವು. ಆದುದರಿಂದ ಇದರ ನಿಜಾಂಶವು ಚಿಂತ್ಯವು.

ಇತ್ತಲಾಗಿ ರಾವಣನಿಗೆ ಮರಣಸೂಚಕಗಳಾದ ದುರ್ನಿಮಿತ್ತಗಳು ತೋರಿದುದು.

ಇಷ್ಟರಲ್ಲಿ ಅತ್ತಲಾಗಿ ರಾವಣನು ತನ್ನಲ್ಲಿ ಪ್ರಸನ್ನನಾದುದಕ್ಕಾಗಿ ಅವನ ಸಾರಥಿಯು ಸಂತೋಷಗೊಂಡು, ರಾಜಾಜ್ಞೆಯಂತೆ ರಥವನ್ನು ವೇಗದಿಂದ ನಡೆಸಿ ಯುದ್ಧರಂಗಕ್ಕೆ ತಂದುಬಿಟ್ಟನು. ಶತ್ರುಸೈನ್ಯವನ್ನು ನಿಗ್ರಹಿಸತಕ್ಕ ಆ ಮಹಾರಥವಾದರೋ, ಎತ್ತಿ ಕಟ್ಟಿದ ಪತಾಕೆಗಳಿಂದಲೂ, *ಗಂಧರ್ವನಗರದಂತಿರುವ ಚಿತ್ರವಿಚಿತ್ರಾಕೃತಿಗಳಿಂದಲೂ ಶೋಭಿತವಾಗಿ ನೋಡುವವರಿಗೆ ಅತ್ಯಾಶ್ಚರ್ಯವನ್ನುಂಟುಮಾಡುತ್ತಿರುವುದು! ಆ ರಥದ ಮುಂದೆ ಸುವರ್ಣಮಾಲಿಕೆಗಳಿಂದಲಂಕೃತಗಳಾಗಿ ಮಹಾವೇಗಸಂಪನ್ನಗಳಾದ ದಿವ್ಯಾಶ್ವಗಳು ಕಟ್ಟಲ್ಪಟ್ಟಿರುವುವು! ರಥದ ನಡುವೆ ಪೀಠದ ಸುತ್ತಲೂ, ಖಡ್ಗಕವಚಗಳೇ ಮೊದಲಾದ ಯುದ್ಧ ಸಾಮಾಗ್ರಿಗಳೆಲ್ಲವೂ ಸಮೃದ್ಧವಾಗಿ ತುಂಬಿರುವುವು! ಮಧ್ಯ ಭಾಗದಲ್ಲಿ ಪತಾಕೆಗಳಿಂದ ಕೂಡಿದ ಧ್ವಜದಂಡಗಳು ಕಾಣುತ್ತಿರುವುವು! ಆ ರಥವು ತನ್ನ ಔನ್ನತ್ಯದಿಂದ ಆಕಾಶವನ್ನೇ ನುಂಗುವಂತೆ ತೋರುತ್ತಿರುವುದು. ಚಕ್ರಧ್ವನಿಯಿಂದ ಸಮಸ್ತ ಭೂಮಿಯನ್ನೂ ಬೆಳಗಿಸುವಂತಿರುವುದು. ನೋಡಿದ ಮಾತ್ರದಲ್ಲಿಯೇ ಶತ್ರುಸೈನ್ಯಕ್ಕೆ ನಾಶವನ್ನೂ ಸ್ವಸೈನ್ಯಕ್ಕೆ ಉಲ್ಲಾಸವನ್ನೂ ಉಂಟುಮಾಡುತ್ತಿರುವುದು! ಇಂತಹಮಹಾರಥದಲ್ಲಿ ಕುಳಿತು ರಾಕ್ಷಸರಾಜನಾದ ರಾವಣನು ದಿಕ್ಕುಗಳೆಲ್ಲವೂ ಪ್ರತಿಧ್ವನಿಸುವಂತೆ, ಮಹಾಘೋಷದೊಡನೆ ರಾಮನಿಗಿದಿರಾಗಿ ವೇಗದಿಂದ ಬಂದನು. ರಾವಣನ ಮಹಾರಥವು ತನಗಿದಿರಾಗಿ ಬರುವುದನ್ನು ಶ್ರೀರಾಮನು ನೋಡುತ್ತಿರುವಾಗಲೇ, ಕರೀಕುದುರೆಗಳಿಂದ ಕಟ್ಟಲ್ಪಟ್ಟ, ಅತ್ಯುಗ್ರವಾದ ತೇಜಸ್ಸಿನಿಂದ ಬೆಳಗುತ್ತಿದ್ದ ಆ ಮಹಾರಥವು

---

*ಗಂಧರ್ವನಗರವೆಂದರೆ "ಚಿತ್ರವರ್ಣಂ ಚಿತ್ರರೂಪಪ್ರಾಕಾರಗೃಹ ಗೋಪುರಮ್ । ಅಲಂಕೃತಮನೇಕಾಭೈರ್ವಿತಾನಧ್ವಜತೋರಣೈಃ। ಗಂಧರ್ವನಗರಂ ದನ್ತಿ ಸ್ವವಾಜಿಕ್ಷಯಯುದ್ಧಕೃತ್। ದೃಶ್ಯತೇಚೇನ್ಮಹದ್ಯುದ್ಧಮನ್ಯೋನ್ಯಂ ಧರಣೀಭುಜಾಮ್" ಎಂಬಂತೆ ಆಕಾಶದಲ್ಲಿ ಕಾಣುವ ಗೃಹಗೋಪುರಾದಿಗಳಾದ ನಾನಾಬಗೆಯ ಆಕೃತಿಗಳು. ಇದನ್ನು ಕಂಡಾಗ ಅನೇಕ ಗಜತುರಗಮನುಷ್ಯಾದಿಗಳಿಗೆ ವಿನಾಶಕರವಾದ ದೊಡ್ಡ ಯುದ್ಧವು ಪ್ರಾಪ್ತವಾಗುವುದೆಂದು ಹೇಳುವರು.

ಆಕಾಶದಲ್ಲಿ ಸೂರ್ಯವರ್ಚಸ್ಸುಳ್ಳ ವಿಮಾನವು ಸಾಗಿಬರುವಂತೆ ಅತಿವೇಗದಿಂದ ಬಂದು ಮುಂದೆ ನಿಂತಿತು. ರಥದಮೇಲೆ ಕಟ್ಟಿದ ಪತಾಕೆಗಳು ಮಿಂಚಿನಂತೆಯೂ, ನಡುವೆ ನಿಲ್ಲಿಸಿದ ಮಹಾಧನುಸ್ಸು ಇಂದ್ರಧನುಸ್ಸಿನಂತೆಯೂ ಕಾಣುತ್ತಿರಲು, ಜಲಧಾರೆಯನ್ನು ಕರೆಯುವ ಮೇಘದಂತೆ ಶರಧಾರೆಯನ್ನು ಕರೆಯುತ್ತ, ಆ ರಾವಣನ ರಥವು ತನಗಿದಿರಾಗಿ ಬರುವುದನ್ನು ನೋಡಿದೊಡನೆ, ರಾಮನೂ ಕೂಡ ತನ್ನ ಧನುಸ್ಸನ್ನು ಬಾಲಚಂದ್ರನಂತೆ ಮಂಡಲಾಕಾರವಾಗಿ ಬಗ್ಗಿಸಿ, ಅದಕ್ಕೆ ನಾಣೆಳೆದು ಕಟ್ಟಿ, ವಜ್ರಾಹತವಾದ ಪರ್ವತವು ಸಿಡಿಯುವಾಗ, ಅದರಿಂದುಂಟಾದ ಮಹಾಧ್ವನಿಯಂತೆ, ಧನುಷ್ಟಂಕಾರಧ್ವನಿಯನ್ನು ತೋರಿಸುತ್ತ, ಮುಂದಿದ್ದ ಮಾತಲಿಯನ್ನು ನೋಡಿ "ಮಾತಲೀ! ಅದೋ! ನಮ್ಮ ಶತ್ರುವಿನ ರಥವು ಎಷ್ಟು ವೇಗದಿಂದ ಬರುವುದು ನೋಡು! ದುರಾತ್ಮನಾದ ರಾವಣನು, ತಾನು ಮಹಾವೇಗದಿಂದ ಬರುವ ಆತುರದಲ್ಲಿ ಅಪಸವ್ಯವಾಗಿ ಸುತ್ತಿಬರುವುದನ್ನು ನೋಡಿದೆಯಾ? ಅವನಿಗೆ ಈ ಯುದ್ಧದಲ್ಲಿ ಸಾಯಬೇಕೆಂಬ ಬುದ್ಧಿಯೇ ಹುಟ್ಟಿರುವಂತಿದೆ! ಅದರಿಂದಲೇ ಹೀಗೆ ಅಪ್ರದಕ್ಷಿಣವಾಗಿ ಬರುತ್ತಿರುವನು. ಮಾತಲೀ! ನೀನು ಮಾತ್ರ ಈಗ ಎಚ್ಚರತಪ್ಪದೆ ಕ್ರಮವಾದ ರೀತಿಯಿಂದ ರಥವನ್ನು ನಡೆಸಬೇಕು! ಜೋಕೆ! ಪ್ರಮಾದವಶದಿಂದಾದರೂ ಅಪ್ರದಕ್ಷಿಣಗತಿಯಿಲ್ಲದಂತೆ ನಮ್ಮ ರಥವನ್ನು ಶತ್ರುವಿನ ರಥಕ್ಕಿದಿರಾಗಿ ನಡೆಸು! ಬಿರುಗಾಳಿಯು ಆಕಾಶದಲ್ಲಿರುವ ಮೇಘಗಳನ್ನು ತೂರಿಸುವಂತೆ ಈ ಶತ್ರುವನ್ನು ನಾನು ಕ್ಷಣಮಾತ್ರದಲ್ಲಿ ಧ್ವಂಸಮಾಡುವೆನು. ನೀನು ಮಾತ್ರ ಮುಂದಿನ ಯುದ್ಧದಲ್ಲಿ ಕ್ಷಣಮಾತ್ರವೂ ಎಚ್ಚರತಪ್ಪದೆ ಸ್ವಲ್ಪವೂ ದೈನ್ಯವನ್ನಾಗಲಿ, ಭಯವನ್ನಾಗಲಿ ತೋರಿಸದೆ, ಮನಸ್ಸಿನಲ್ಲಿ ಕಳವಳಿಸದೆ, ಅತ್ತಿತ್ತ ದೃಷ್ಟಿಯನ್ನಿಡದೆ, ಒಂದೇ ಗಮನದಿಂದ ಹಗ್ಗಗಳನ್ನು ಕ್ರಮವಾಗಿ ಹಿಡಿದು ತ್ವರೆಯಿಂದ ರಥವನ್ನು ನಡೆಸು. ಸಾಕ್ಷಾನ್ಮಹೇಂದ್ರನ ರಥವನ್ನೇ ನಡೆಸಿ ಶಿಕ್ಷಿತನಾದ ನಿನಗೆ, ನಾನು ಹೊಸದಾಗಿ ತಿಳಿಸಬೇಕಾದ ವಿಷಯವೇನೂ ಇಲ್ಲ! ಹಾಗಿದ್ದರೂ ಈಗ ಯುದ್ಧವನ್ನು ನಡೆಸತಕ್ಕವನು ನಾನಾದುದರಿಂದ, ನನ್ನ ಧೈರ್ಯಕ್ಕಾಗಿ ನಾನು ನಿನ್ನನ್ನು ಜ್ಞಾಪಿಸುವೆನೇ ಹೊರತು ನಿನ್ನನ್ನು ಶಿಕ್ಷಿಸುವೆನೆಂದು ತಿಳಿಯಬೇಡ" ಎಂದನು. ರಾಮನ ಬಾಯಿಂದ ಈ

ಮಾತನ್ನು ಕೇಳಿದೊಡನೆ ಇಂದ್ರಸಾರಥಿಯಾದ ಮಾತಲಿಗೆ ಮಹತ್ತಾದ ಸಂತೋಷವುಂಟಾಯಿತು. ಉತ್ಸಾಹದಿಂದ ಕುದುರೆಗಳನ್ನು ತಟ್ಟಿ, ರಥವನ್ನು ಮುಂದೆಬಿಟ್ಟನು. ರಥವು ಅಪ್ರದಕ್ಷಿಣವಾಗದಹಾಗೆ ಎಚ್ಚರದಿಂದ ಮುಂದೆ ನಡೆಸಿದನು. ಆಗ ಆ ರಥಚಕ್ರದಿಂದೆದ್ದ ದೊಡ್ಡ ಧೂಳಿಯು, ರಾಮರಾವಣರಿಗೆ ನಡುವೆ ಮಹತ್ತಾಗಿ ವ್ಯಾಪಿಸಿತು. ಇದನ್ನು ನೋಡಿ ರಾವಣನು ಕೋಪದಿಂದ ಕೆಂಪೇರಿ ತೊಳಲುವ ಕಣ್ಣಾಲೆಗಳುಳ್ಳವನಾಗಿ ತನಗಿದಿರಾಗಿದ್ದ ರಾಮನ ಮೇಲೆ ಆಗಲೇ ಬಾಣಗಳನ್ನು ಬಿಡುವುದಕ್ಕೆ ತೊಡಗಿದನು. ಇದನ್ನು ನೋಡಿ ರಾಮನೂ ಅತಿ ಕೋಪಾವಿಷ್ಟನಾಗಿ ಆ ಕೋಪದಿಂದ, ತನ್ನ ಧೈರ್ಯವನ್ನು ಮತ್ತಷ್ಟು ದೃಢಪಡಿಸುತ್ತ, ಹಿಂದೆ ಮಾತಲಿಯು ತಂದುಕೊಟ್ಟ ಮಹಾವೇಗವುಳ್ಳ ಇಂದ್ರಧನುಸ್ಸನ್ನೂ, ಸೂರ್ಯ ಕಿರಣಗಳಂತೆ ದೇದೀಪ್ಯಮಾನಗಳಾದ ಬಾಣಗಳನ್ನೂ, ಕೈಗೆತ್ತಿಕೊಂಡನು. ರಾಮರಾವಣರಿಬ್ಬರೂ ಧೈರ್ಯದಿಂದಿರಿಸಿ ಒಬ್ಬರನ್ನೊಬ್ಬರು ಕೊಲ್ಲಬೇಕೆಂಬ ಹಟದಿಂದ, ಕೊಬ್ಬಿದ ಸಿಂಹಗಳಂತೆ ಮಹಾಯುದ್ಧವನ್ನಾರಂಭಿಸಿದರು. ಇಷ್ಟರಲ್ಲಿಯೇ ಬಹುಕಾಲದಿಂದ ರಾವಣನ ವಿನಾಶವನ್ನೇ ಕೋರುತ್ತಿದ್ದ ದೇವಗಂಧರ್ವಸಿದ್ಧವಿದ್ಯಾಧರಮಹರ್ಷಿಗಳೆಲ್ಲರೂ, ಮಹಾರಥಿಕರಾದ ಇವ ರಿಬ್ಬರ ಯುದ್ಧವನ್ನು ನೋಡುವುದಕ್ಕಾಗಿ ಆಕಾಶದಲ್ಲಿ ನೆರೆದರು. ಈ ಸಮಯಕ್ಕೆ ಸರಿಯಾಗಿ ರಾವಣನಿಗೆ ವಧವನ್ನೂ, ರಾಮನಿಗೆ ಜಯವನ್ನೂ ಸೂಚಿಸುತ್ತ, ಮೈಯಲ್ಲಿ ರೋಮಾಂಚವನ್ನು ಹುಟ್ಟಿಸುವಷ್ಟು ಭಯಂ ಕರಗಳಾದ ಮಹೋತ್ಪಾತಗಳು ಅಲ್ಲಲ್ಲಿ ಕಾಣಿಸಿದುವು. ರಾವಣನ ರಥದ ಮೇಲೆ ಪರ್ಜನ್ಯನು ರಕ್ತವರ್ಷವನ್ನು ಕರೆದನು. ಕ್ರೂರವಾದ ಸುಳಿ ಗಾಳಿಯು ಅಲ್ಲಲ್ಲಿ ಅಪ್ರದಕ್ಷಿಣವಾಗಿ ಸುತ್ತಿ ಬಡಿಯುತ್ತಿತ್ತು. ರಾವ ಣನ ರಥವು ಯಾವಯಾವ ಕಡೆಗೆ ತಿರುಗುತ್ತಿತ್ತೋ, ಆಯಾಕಡೆಗಳಲ್ಲಿ ದೊಡ್ಡ ಗೃಧ್ರಸಮೂಹವು ಚಕ್ರಾಕಾರವಾಗಿ ಸುತ್ತಿಬರುತ್ತಿತ್ತು. ಹಗಲಿ ನಲ್ಲಿಯೂ ಕೂಡ, ಲಂಕೆಯ ಸುತ್ತಲೂ ದಾಸವಾಳದ ಹೂವಿನಂತೆ, ಕೆಂಪಾದ ಸಂಧ್ಯಾರಾಗವು ಬಂದು ಕವಿದುದರಿಂದ, ಅಲ್ಲಲ್ಲಿ ಸಿಡಿಲು ಗಳಿಂದ ಕೂಡಿದ ಆಕಾಶದ ಕೊಳ್ಳಿಗಳು ಮಹಾಧ್ವನಿಯಿಂದ ಕೆಳಕ್ಕೆ ಬೀಳುತ್ತಿದ್ದುವು. ರಾವಣನಿಗೆ ಪ್ರತಿಕೂಲಗಳಾದ ಈ ಮಹೋ ತ್ಪಾತಗಳೆಲ್ಲವೂ ರಾಕ್ಷಸರಿಗೆ ಬಹಳ ವಿಷಾದವನ್ನುಂಟುಮಾಡಿದುವು.

ರಾವಣನು ಹೋದಕಡೆಯಲ್ಲೆಲ್ಲಾ ಭೂಮಿಯು ನಡುಗುತ್ತಿತ್ತು. ಆ ಯುದ್ಧದಲ್ಲಿ ರಾಕ್ಷಸರು ತಮ್ಮ ಶತ್ರುಗಳಮೇಲೆ ಕೈಯೆತ್ತಿದಾಗಲೆಲ್ಲಾ, ಅವರ ತೋಳುಗಳನ್ನು ಯಾರೋಬಂದು ತಡೆದು ನಿಲ್ಲಿಸಿದಂತೆ ತೋರುತ್ತಿತ್ತು. ಆಗ ರಾವಣನ ದೇಹದಮೇಲೆ ಕೆಂಪು, ಹಳದಿ, ಬಿಳುಪು, ಕಪ್ಪು ಮುಂತಾದ ಬಗೆಬಗೆಯ ಬಣ್ಣಗಳಿಂದ ಸೂರ್ಯಕಿರಣಗಳು, ವ್ಯಾಪಿಸಿ, ಪರ್ವತದಮೇಲೆ ನಾನಾಬಣ್ಣದ ಗೈರಿಕಾದಿಧಾತುಗಳಂತೆ ಕಾಣಿಸಿದುವು. ಅಲ್ಲಲ್ಲಿ ನರಿಗಳೂ, ಅವುಗಳ ಹಿಂದೆ ಹದ್ದುಗಳೂ, ಗುಂಪುಗುಂಪಾಗಿ ಸೇರಿ, ಬಾಯಿಂದ ಉರಿಯನ್ನು ಕಕ್ಕುತ್ತ, ರಾವಣನ ಮುಖವನ್ನೇ ನೋಡಿ ಅತ್ಯಾತುರದೊಡನೆ ಅಮಂಗಳಧ್ವನಿಯಿಂದ ಕೂಗುತ್ತಿದ್ದುವು. ಆ ರಣರಂಗದಲ್ಲಿ ಬಿರುಗಾಳಿಯು ರಾವಣನಿಗೆ ಕಣ್ಣೇ ಕಾಣದಂತೆ ದೊಡ್ಡ ಧೂಳಿಯನ್ನೆಬ್ಬಿಸಿ ಪ್ರತಿಕೂಲವಾಗಿ ಬೀಸುತ್ತಿತ್ತು. ಆಕಾಶದಲ್ಲಿ ಮೇಘಗಳ ಸುಳಿವೇ ಇಲ್ಲದೆ, ಭಯಂಕರ ಧ್ವನಿಯಿಂದ ಕೂಡಿದ [1]ಉಲ್ಕಾಶನಿಗಳು ಮಾತ್ರ ರಾವಣನ ಸೈನ್ಯದಲ್ಲಿ ಪರಂಪರೆಯಾಗಿ ಬೀಳುತ್ತಿದ್ದುವು. ದಿಕ್ಕುಗಳೆಲ್ಲವೂ ಕತ್ತಲು ಕವಿದಂತಾದುವು. ಎಲ್ಲಿ ನೋಡಿದರೂ ದೊಡ್ಡಧೂಳಿಯು ತುಂಬಿ ಅಂತರಿಕ್ಷವೇ ಕಣ್ಣಿಗೆ ಕಾಣದಂತಾಯಿತು. ಆಕಾಶದಲ್ಲಿ ಶಾರಿಕೆಗಳೆಂಬ ಪಕ್ಷಿಗಳು, ಅಲ್ಲಲ್ಲಿ ಕ್ರೂರವಾದ ಕಲಹವನ್ನಾರಂಭಿಸಿ, ಭಯಂಕರಧ್ವನಿಯಿಂದ ಕೂಗುತ್ತ, ಗುಂಪುಗುಂಪಾಗಿ ರಾವಣನ ರಥದಮೇಲೆ ಬಿದ್ದುವು. ರಾವಣನ ರಥದ ಕುದುರೆಗಳು ಹಿಂದೆ ತಮ್ಮ ಮಲದ್ವಾರಗಳಿಂದ ಅಗ್ನಿಕಣಗಳನ್ನೂ, ಮುಂದೆ ತಮ್ಮ ಕಣ್ಣುಗಳಿಂದ ಕಣ್ಣೀರನ್ನೂ ಎಡೆಬಿಡದೆ ಸುರಿಸುತ್ತ, ಬೆಂಕಿಯನ್ನೂ ನೀರನ್ನೂ ಸಮವಾಗಿ ಕಕ್ಕುತ್ತಿದ್ದುವು. ಹೀಗೆ ಮಹಾಭಯಂ

ಉಲ್ಕಾಶನಿಗಳು :—ಉಲ್ಕಾ ಶಿರಸಿ ವಿಶಾಲಾ ನಿಪತನ್ತೀ ವರ್ಧತೇಚ ತನುಪುಚ್ಛಾ । ಅಶನಿಸ್ಸ್ವನೇನ ಮಹತಾ ಯುಕ್ತಾ ನೃಗಜಾಶ್ವತರು ಮುಖೇಷು । ನಿಪತತಿ ವಿದಾರಯನ್ತೀ ಧರಾತಲಂ ಚಕ್ರಸಂಸ್ಥಾನಾ" ಎಂಬಂತೆ ಉಲ್ಕೆಯೆಂದರೆ ಮುಂದೆ ತಲೆಯುಕಡೆಗೆ ವಿಶಾಲವಾಗಿಯೂ, ಹಿಂದೆ ಬಾಲದಕಡೆಗೆ ಸಣ್ಣದಾಗಿಯೂ ಕಾಣುತ್ತ, ಮೇಲೆ ಉದ್ದಕ್ಕೆ ಬೆಳೆದು ಕೆಳಗೆ ಬೀಳತಕ್ಕ ನಕ್ಷತ್ರಗಳು. ಅಶನಿಯೆಂದರೆ ಮಹಾಧ್ವನಿಯೊಡನೆ ಹೊರಟು, ಆನೆ, ಕುದುರೆ, ಮನುಷ್ಯರು, ಹಸೀಗಿಡಗಳು ಮುಂತಾದುವುಗಳಮೇಲೆ ಬಿದ್ದು ಭೂಮಿಯನ್ನು ಭೇದಿಸಿಕೊಂಡು ಹೋಗತಕ್ಕುದು (ಸಿಡಿಲು).

ಕರಗಳಾಗಿಯೂ ಅತಿಕ್ರೂರಗಳಾಗಿಯೂ ಇದ್ದ ಅನೇಕ ದುರ್ನಿಮಿತ್ತ ಗಳು, ರಾವಣನಿಗೆ ವಿನಾಶವನ್ನು ಸೂಚಿಸುತ್ತಿದ್ದುವು. ಈ ಕಾಲಕ್ಕೆ ಸರಿಯಾಗಿ ಇತ್ತಲಾಗಿ ರಾಮನಿಗೂ ಕೂಡ ಮನೋಹರಗಳಾಗಿಯೂ ಶುಭಕರಗಳಾಗಿಯೂ, ಜಯಸೂಚಕಗಳಾಗಿಯೂ ಇರುವ ಅನೇಕ ಶುಭ ನಿಮಿತ್ತಗಳು ಸುತ್ತಲೂ ಕಾಣಿಸುತ್ತಿದ್ದುವು. ಆಗ ರಾಮನು ತನಗೆ ಅನುಕೂಲಗಳಾದ ಆ ಶುಭನಿಮಿತ್ತಗಳನ್ನು ನೋಡಿ ಅತ್ಯಂತ ಸಂತುಷ್ಟ ನಾಗಿ, ರಾವಣನು ಹತನಾದಂತೆಯೇ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡನು. ನಿಮಿತ್ತಶಾಸ್ತ್ರದಲ್ಲಿ ನಿಪುಣನಾದ ರಾಮನು, ಯುದ್ಧದಲ್ಲಿ ತನಗೆ ಜಯ ಸೂಚಕಗಳಾದ ಈ ಶುಭನಿಮಿತ್ತಗಳನ್ನು ನೋಡಿ, ಸಂತೋಷದಿಂದ ಪುಲಕಿತವಾದ ಮೈಯುಳ್ಳವನಾಗಿ, ಮೊದಲಿಗಿಂತಲೂ ಅಧಿಕವಾದ ಉತ್ಸಾಹದಿಂದ ಪರಾಕ್ರಮವನ್ನು ತೋರಿಸಲಾರಂಭಿಸಿದನು.

ಇಲ್ಲಿಗೆ ನೂರೆಂಟನೆಯ ಸರ್ಗವು.

ರಾವಣನು ರಾಮನ ರಥವನ್ನು ಛೇದಿಸುವುದಕ್ಕಾಗಿ ಬಿಟ್ಟ ಬಾಣವು
ನಿರರ್ಥಕವಾಗಿ ಕೆಳಗೆ ಬಿದ್ದುದು. ರಾಮನು ರಾವಣನ ರಥಧ್ವಜ
ವನ್ನು ಛೇದಿಸಿದುದು.

ಆಗ ರಥಾರೂಢರಾಗಿದ್ದ ರಾಮರಾವಣರಿಬ್ಬರಿಗೂ ಸರ್ವಲೋಕಭಯಂ ಕರವಾದ ಕ್ರೂರಯುದ್ಧವು ಅತಿತೀವ್ರವಾಗಿ ಜರಗಿತು. ಆಗ ಅವರಿಬ್ಬರ ಯುದ್ಧವನ್ನು ನೋಡುವ ಕುತೂಹಲದಲ್ಲಿ ವಾನರರಾಕ್ಷಸಸೈನ್ಯಗಳೆರಡೂ ಮೈಮರೆತು, ತಾವುತಾವು ಕೈಯಲ್ಲಿ ಯುದ್ಧಸಾಧನಗಳನ್ನು ಹಿಡಿದಿದ್ದ ಹಾಗೆಯೇ ನಿಶ್ಚೇಷ್ಟವಾಗಿ ನಿಂತು ನೋಡುತ್ತಿದ್ದುವು. ರಾಮರಾವಣ ರಿಬ್ಬರೂ ಅತಿಕ್ರೂರವಾದ ಯುದ್ಧಕ್ಕೆ ನಿಂತಿರುವುದನ್ನು ನೋಡಿ ಎರಡು ಕಡೆಯ ಸೈನಿಕರೂ, ಆ ಯುದ್ಧವನ್ನು ನೋಡುವುದರಲ್ಲಿಯೇ ನಟ್ಟ ಮನಸ್ಸುಳ್ಳವರಾಗಿ ಪರಮಾಶ್ಚರ್ಯಭರಿತರಾಗಿದ್ದರು. ಈ ಉಭಯಪಕ್ಷದ ಸೈನಿಕರೂ, ತಮ್ಮ ಕೈಗಳಿಂದ ನಾನಾಯುಧಗಳನ್ನೆತ್ತಿ ಹಿಡಿದು ಯುದ್ಧ ಸನ್ನದ್ಧರಾಗಿದ್ದರೂ, ಆಗ ರಾಮರಾವಣರಿಗೆ ನಡೆಯುತ್ತಿದ್ದ ಮಹಾ

ಯುದ್ಧವನ್ನು ನೋಡುವ ಕುತೂಹಲದಲ್ಲಿ, ತಮ್ಮ ಯುದ್ಧದಾತುರವನ್ನೂ ಬಿಟ್ಟು, ಕದಲದೆ ನಿಂತುಬಿಟ್ಟರು. ರಾಕ್ಷಸಸೈನಿಕರು ರಾವಣನನ್ನೂ, ವಾನರರು ರಾಮನನ್ನೂ ನಟ್ಟ ಕಣ್ಣಿನಿಂದ ನೋಡುತ್ತ ಆಶ್ಚರ್ಯದಿಂದ ಸ್ತಬ್ಧರಾಗಿ ನಿಂತಿದ್ದಾಗ, ಈ ಉಭಯಪಕ್ಷದವರೂ ಚಿತ್ರದ ಬೊಂಬೆಗಳಂತೆ ಕಾಣುತ್ತಿದ್ದರು. ರಾಮರಾವಣರಿಬ್ಬರೂ ತಮತಮಗೆ ತೋರಿದ ಶುಭಾಶುಭನಿಮಿತ್ತಗಳನ್ನು ನೋಡಿದಮೇಲೆ, ತಮ್ಮ ತಮ್ಮ ಜಯಾಪಜಯಗಳನ್ನು ಮನಸ್ಸಿನಲ್ಲಿ ನಿಶ್ಚಯಮಾಡಿಕೊಂಡು ನಿರ್ಭಯವಾಗಿ ಹೋರಾಡಿದರು. ರಾಮನಿಗೆ ಜಯದಲ್ಲಿಯೂ, ರಾವಣನಿಗೆ ಮರಣದಲ್ಲಿಯೂ ನಿಶ್ಚಿತವಾದ ಬುದ್ಧಿಯು ಹುಟ್ಟಿತು. ಇಬ್ಬರೂ ಈ ನಿಸ್ಸಂದೇಹವಾದ ಬುದ್ಧಿಯಿಂದ ಧೈರ್ಯವನ್ನವಲಂಬಿಸಿ, ತಮ್ಮ ತಮ್ಮ ಪರಾಕ್ರಮದ ಸರ್ವಸ್ವವನ್ನೂ ತೋರಿಸುತ್ತಿದ್ದರು. ಈ ನಡುವೆ ವೀರ್ಯವಂತನಾದ ರಾವಣನು, ಬಿಲ್ಲಿನಲ್ಲಿ ಬಾಣಗಳನ್ನು ಸೇರಿಸಿ ರಾಮನ ರಥಧ್ವಜದ ಮೇಲೆ ಪ್ರಯೋಗಿಸಿದನು. ರಾವಣನು ಬಿಟ್ಟ ಬಾಣಗಳು ಆ ಧ್ವಜಕ್ಕೆ ತಾಗದೆ ರಥದಲ್ಲಿದ್ದ ಶಕ್ತ್ಯಾಯುಧಕ್ಕೆ ತಗುಲಿ ಅದರಿಂದ ಪ್ರತಿಹತವಾಗಿ ಕೆಳಗೆ ಬಿದ್ದರೂ, ಇದರಿಂದ ರಾಮನಿಗೆ ಮಹತ್ತಾದ ಕೋಪವುಂಟಾಯಿತು. ಆಗ ರಾಮನು ಇದಕ್ಕೆ ತಕ್ಕ ಪ್ರತಿಕ್ರಿಯೆಯನ್ನು ಮಾಡಬೇಕೆಂದು ಸಂಕಲ್ಪಿಸಿ, ತನ್ನ ಬಿಲ್ಲನ್ನೆಳೆದು, ಸರ್ಪದಂತೆ ಸಹಿಸಲಸಾಧ್ಯವಾಗಿ ತೇಜಸ್ಸಿನಿಂದ ಜ್ವಲಿಸುತ್ತಿದ್ದ ಒಂದು ತೀಕ್ಷ್ಣಬಾಣವನ್ನು ತೆಗೆದು, ರಾವಣನ ಧ್ವಜಕ್ಕೆ ಗುರಿಯಿಟ್ಟು ಪ್ರಯೋಗಿಸಿದನು. ಈ ಬಾಣವು ಧನುಸ್ಸಿನಿಂದ ಹೊರಟುದೇ ತಡ! ರಾವಣನ ಧ್ವಜವನ್ನು ಭೇದಿಸಿ ನೆಲಕ್ಕೆ ನಾಟಿತು! ತನ್ನ ಧ್ವಜವು ಮುರಿದು ಬಿದ್ದುದನ್ನು ನೋಡಿ ರಾವಣನಿಗೆ ತಡೆಯಲಾರದ ಕೋಪವುಂಟಾಯಿತು. ರಾಮನ ಈ ಆಟೋಪವನ್ನು ಸಹಿಸಲಾರದೆ ರಾವಣನು ಜ್ವಲಿಸುವ ಬೆಂಕಿಯಂತೆ ಕೋಪದಿಂದುರಿಯುತ್ತಿದ್ದನು. ಹೀಗೆ ಕೋಪಪರವಶನಾದ ರಾವಣನು, ಕೆಲವು ಕ್ರೂರಬಾಣಗಳನ್ನು ತೆಗೆದು ರಾಮನ ರಥಾಶ್ವಗಳಿಗೆ ಗುರಿಯಿಟ್ಟು ಹೊಡೆದನು. ರಾವಣನ ಕ್ರೂರಬಾಣಗಳು ಮೈಯಲ್ಲಿ ನಾಟಿದರೂ ಕೂಡ, ಆ ಕುದುರೆಗಳು ಸ್ವಲ್ಪ ಮಾತ್ರವೂ ಕದಲದೆ, ಸ್ವಲ್ಪವೂ ಗತಿಭಂಗವಿಲ್ಲದೆ, ಸ್ಥಿರವಾಗಿ ನಿಂತಿದ್ದುವು. ಕಮಲದ ಕಾವಿನಿಂದ ಹೊಡೆದಂತೆ, ಅವುಗಳ ಮೈಗೆ ಸ್ವಲ್ಪ

ವಾದರೂ ನೋವಿಲ್ಲದೆ ನೆಮ್ಮದಿಯಿಂದಿದ್ದುವು. ಇದನ್ನು ನೋಡಿ ರಾವಣನಿಗೆ ಇನ್ನೂ ಕೋಪವು ಹೆಚ್ಚಿತು. ತಿರುಗಿ ಬಾಣಗಳನ್ನು ವರ್ಷಿಸುವುದಕ್ಕೆ ತೊಡಗಿದನು. ಗದೆಗಳನ್ನೂ, ಕಬ್ಬಿಣದ ಗುದಿಗೆಗಳನ್ನೂ, ಚಕ್ರಗಳನ್ನೂ, ಒನಕೆಗಳನ್ನೂ, ಪರ್ವತಶಿಖರಗಳನ್ನೂ, ವೃಕ್ಷಗಳನ್ನೂ, ಶೂಲಗಳನ್ನೂ, ಗಂಡುಗೊಡಲಿಗಳನ್ನೂ, ರಾಮನಮೇಲೆ ಎಡೆಬಿಡದೆ ಪ್ರಯೋಗಿಸುತ್ತಾ ಬಂದನು. ಆಗ ರಾವಣನು ಸುರಿಸಿದ ಈ ಆಯುಧವರ್ಷವು, ಅತ್ಯಾಶ್ಚರ್ಯಕರವಾದ ಶಕ್ತಿಯಿಂದ ಪ್ರಯೋಗಿಸಲ್ಪಟ್ಟು, ಮಾಯಾಬಲದಿಂದ ಹೊರಟಂತೆ ಅತಿಭಯಂಕರವಾಗಿಯೂ, ವಿಧವಿಧವಾಗಿಯೂ, ಕ್ರೂರವಾಗಿಯೂ, ಘೋರವಾದ ಪ್ರತಿಧ್ವನಿಯುಳ್ಳುದಾಗಿಯೂ ಬಂದು ಬೀಳುತ್ತಿತ್ತು. ಅನೇಕ ಶಸ್ತ್ರಾಸ್ತ್ರಮಯವಾದ ಈ ಮಹಾವರ್ಷವನ್ನು ರಾವಣನು, ರಾಮನ ರಥಕ್ಕೆ ಸರಿಯಾಗಿ ಗುರಿಯಿಟ್ಟು ಪ್ರಯೋಗಿಸಿದರೂ, ಆಗಾಗಲೇ ಅವು ರಾಮನ ಬಾಣಗಳಿಂದ ನಿವಾರಿತಗಳಾಗಿ, ಆ ರಥಕ್ಕೆ ತಗುಲದಂತೆ ಅದರ ಸುತ್ತಲೂ ಅಲ್ಲಲ್ಲಿ ನಿಂತಿದ್ದ ವಾನರಸೈನ್ಯದಮೇಲೆ ಬೀಳುತ್ತಿತ್ತು. ಇಷ್ಟಾದರೂ ರಾವಣನು ಮನಸ್ಸಿನಲ್ಲಿ ಸ್ವಲ್ಪಮಾತ್ರವೂ ಉತ್ಸಾಹಗೆಡದೆ, ತನ್ನ ಪ್ರಯತ್ನದಲ್ಲಿಯೂ ಹಿಂಜರಿಯದೆ, ಎಡೆಬಿಡದೆ ಸಾವಿರಾರು ಬಾಣಗಳನ್ನು ಪ್ರಯೋಗಿಸಿ, ಅಂತರಿಕ್ಷವೆಲ್ಲವನ್ನೂ ದಟ್ಟವಾಗಿ ತುಂಬಿಬಿಟ್ಟನು. ರಾವಣನು ಹೀಗೆ ತನ್ನಿಂದಾದಷ್ಟು ಸಾಹಸವನ್ನು ತೋರಿಸಿ ಹೋರಾಡುತ್ತಿರುವುದನ್ನು ನೋಡಿ, ರಾಮನು ಮುಗುಳ್ನಗೆ ನಗುವಂತೆ, ಲೀಲಾಮಾತ್ರದಿಂದಲೇ ಕೆಲವು ಬಾಣಗಳನ್ನು ತೆಗೆದು, ಬಿಲ್ಲಿನಲ್ಲಿ ಸಂಧಿಸಿ, ಕ್ರಮಕ್ರಮವಾಗಿ ಲಕ್ಷೋಪಲಕ್ಷ ಬಾಣಗಳನ್ನು ರಾವಣನಮೇಲೆ ವರ್ಷಿಸಿದನು. ಇದನ್ನು ನೋಡಿ ರಾವಣನೂ ಮತ್ತಷ್ಟು ಬಾಣಗಳನ್ನು ಪ್ರಯೋಗಿಸಿ, ಅವುಗಳಿಂದ ಆಕಾಶವೆಲ್ಲವನ್ನೂ ಎಡೆಬಿಡದೆ ತುಂಬಿಬಿಟ್ಟನು. ಹೀಗೆ ರಾಮರಾವಣರಿಬ್ಬರೂ ಮೇಲೆ ಮೇಲೆ ಹಟದಿಂದ ಬಾಣವರ್ಷವನ್ನು ಕರೆಯುತ್ತಿದ್ದಾಗ, ಅಂತರಿಕ್ಷವೆಲ್ಲವೂ ಕೇವಲ ಬಾಣಗಳಿಂದ ತುಂಬಿ ಬಾಣಮಯವಾದ ಬೇರೊಂದಾಕಾಶವೋ ಎಂಬಂತೆ ಕಾಣಿಸಿತು. ಅವರಿಬ್ಬರೂ ತಮ್ಮ ಬಾಣಸಮೂಹಗಳಿಂದ ಆಕಾಶದಲ್ಲಿ ಉಸಿರಾಡುವುದಕ್ಕೂ ಅವಕಾಶವಿಲ್ಲದಂತೆ ಮಾಡಿಬಿಟ್ಟರು. ಅವರು ಬಿಟ್ಟ ಬಾಣಗಳಲ್ಲಿ ಗುರಿತಪ್ಪಿ ಪ್ರಯೋಗಿಸಿದುದಾಗಲಿ, ಗುರಿಯನ್ನು ಮೀರಿ

ಭೇದಿಸಿದುದಾಗಲಿ, ಗುರಿಗೆ ತಗುಲಿ ನಿಷ್ಫಲವಾದುದಾಗಲಿ, ಒಂದಾದರೂ ಆಗಲಿಲ್ಲ. ಇದಿರಿದಿರಾಗಿ ಬಂದ ರಾಮರಾವಣರ ಬಾಣಗಳು ಒಂದಕ್ಕೊಂದು ತಗುಲಿ, ಎರಡೂ ಮೊನೆಮುರಿದು ಕೆಳಗೆ ಬೀಳುತ್ತಿದ್ದುವು. ಅವರಿಬ್ಬರೂ ಎಡಬಲಗಳನ್ನು ನೋಡಿ, ಎಡೆಬಿಡದೆ ಬಾಣವರ್ಷವನ್ನು ಕರೆದು, ಆಕಾಶದಲ್ಲಿ ಉಸಿರಾಡುವುದಕ್ಕೂ ಅವಕಾಶವಿಲ್ಲದಂತೆ ಮರೆಸಿಬಿಟ್ಟರು. ರಾಮನು ರಾವಣನ ರಥಾಶ್ವಗಳನ್ನು ಹೊಡೆಯುವನು! ಇದನ್ನು ನೋಡಿದೊಡನೆ ರಾವಣನು ರಾಮನ ರಥಾಶ್ವಗಳನ್ನು ಪ್ರಹರಿಸುವನು! ಹೀಗೆ ಒಬ್ಬರಿಗೊಬ್ಬರು ಮುಯ್ಯಿಗೆ ಮುಯ್ಯಿ ತೀರಿಸುತ್ತಾ, ಸಮಯುದ್ಧವನ್ನು ಮಾಡಿದರು. ಇವರಿಬ್ಬರಿಗೂ ಮಹಾದ್ಭುತವಾದ ಯುದ್ಧವು ಜರುಗಿತು. ಮುಹೂರ್ತಕಾಲದೊಳಗಾಗಿಯೇ ಆ ಯುದ್ಧವು ಅತಿ ತುಮುಲವಾಗಿ, ನೋಡುವವರಿಗೆ ರೋಮಾಂಚವು ಹುಟ್ಟುವಂತೆ ಮೇಲೆಮೇಲೆ ಪ್ರಬಲವಾಗಿ ಬೆಳೆಯಿತು. ಹೀಗೆ ರಾಮರಾವಣರಿಬ್ಬರೂ ಪರಸ್ಪರಹಟದಿಂದ ಬಾಣಪ್ರಯೋಗವನ್ನು ಮಾಡುತ್ತಿದ್ದಾಗ, ರಾಕ್ಷಸರಾಜನಾದ ರಾವಣನು ತನ್ನ ಧ್ವಜವನ್ನು ಮುರಿದುದಕ್ಕಾಗಿ ರಾಮನಮೇಲೆ ಬಹಳವಾಗಿ ಕೋಪಗೊಂಡಿದ್ದನು.

ಇಲ್ಲಿಗೆ ನೂರೊಂಬತ್ತನೆಯ ಸರ್ಗವು.

ಶ್ರೀರಾಮನು ರಾವಣನ ಒಂದೊಂದು ತಲೆಯನ್ನು ಕತ್ತರಿಸುತ್ತ ಬಂದಹಾಗೆಲ್ಲಾ, ತಿರುತಿರುಗಿ ಅದೇ ಸ್ಥಾನದಲ್ಲಿ ಹೊಸತಲೆಯು ಮೊಳೆಯುತ್ತಿದ್ದುದು. ಇದೇರೀತಿಯಲ್ಲಿ ರಾಮನು ನೂರೊಂದಾವೃತ್ತಿ ರಾವಣನ ತಲೆಗಳನ್ನು ಖಂಡಿಸಿದುದು.

ಹೀಗೆ ರಾಮರಾವಣರಿಬ್ಬರೂ ಘೋರವಾದ ಯುದ್ಧವನ್ನು ನಡೆಸುತ್ತಿದ್ದಾಗ, ಸಮಸ್ತಭೂತಗಳೂ ಆಶ್ಚರ್ಯಭರಿತವಾದ ಮನಸ್ಸಿನಿಂದ ಆ ಯುದ್ಧವನ್ನೇ ನೋಡುತ್ತಿದ್ದುವು. ಅವರಿಬ್ಬರೂ ತಮ್ಮ ತಮ್ಮ ಮಹಾರಥವನ್ನೇರಿ ಇದಿರಿದಿರಾಗಿ ನಿಂತು, ಒಬ್ಬರನ್ನೊಬ್ಬರು ಕೋಪದಿಂದ ನೋಡುವುದು,

ಒಬ್ಬರನ್ನೊಬ್ಬರು ವೇಗದಿಂದಿರಿಸುವುದು, ಒಬ್ಬರನ್ನೊಬ್ಬರು ಕೊಲ್ಲಬೇಕೆಂದು ಯತ್ನಿಸಿ ವೇಗದಿಂದ ಬಾಣಗಳನ್ನು ಬಿಡುವುದು, ಹೀಗೆ ಪರಸ್ಪರಸ್ಪರ್ಧೆ ಯಿಂದ ಒಬ್ಬರಿಗೊಬ್ಬರು ರಥಾರೂಢರಾಗಿ ಹೋರಾಡಿದರು. ಅವರಿಬ್ಬರ ರಥಗಳೂ ಆಯಾ ಸಾರಥಿಗಳ ಚಾತುರ್ಯದಿಂದ, ಮಂಡಲಗತಿಗಳನ್ನೂ, ವೀಥಿಗತಿಗಳನ್ನೂ, ಗತಪ್ರತ್ಯಾಗತಗಳನ್ನೂ, ಇನ್ನೂ ಬಗೆಬಗೆಯ ಗತಿ ವಿಶೇಷಗಳನ್ನೂ ತೋರಿಸುತ್ತ ಭಯಂಕರಾಕಾರದಿಂದ ಕಾಣಿಸಿದುವು. ಒಮ್ಮೆ ರಾಮನು ರಾವಣನನ್ನು ಹೊಡೆಯುವನು. ಮತ್ತೊಮ್ಮೆ ರಾವ ಣನು ರಾಮನನ್ನು ಹೊಡೆಯುವನು. ಹೀಗೆ ಅವರಿಬ್ಬರೂ ಒಬ್ಬರ ನ್ನೊಬ್ಬರು ಮೇಲೆಬಿದ್ದು ಹೊಡೆಯುವುದರಲ್ಲಿಯೂ, ಪ್ರತಿಪ್ರಹಾರವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಹಿಂದೆ ಸರಿಯುವುದರಲ್ಲಿಯೂ, ಅತಿಶಯವಾದ ತಮ್ಮ ಶೀಘ್ರಗತಿಯನ್ನು ಕಾಣಿಸುತ್ತಿದ್ದರು. ಇಬ್ಬರೂ ಎಡೆಬಿಡದೆ ಬಾಣ ಗಳನ್ನು ಸುರಿಸುತ್ತಿದ್ದುದರಿಂದ, ಅವರಿಬ್ಬರ ರಥಗಳೂ ಜಡಿಮಳೆಯನ್ನು ಕರೆಯುವ ಮಹಾಮೇಘಗಳಂತೆ ಕಾಣುತ್ತಿದ್ದುವು. ಹೀಗೆ ಇವರಿಬ್ಬರೂ ತಮ್ಮ ತಮ್ಮ ರಥಗಳನ್ನು ವಿಚಿತ್ರಗತಿಗಳಿಂದ ನಡೆಸುತ್ತ ಬಂದು, ತಿರುಗಿ ಅವುಗಳನ್ನು ಒಂದಕ್ಕೊಂದು ಅಭಿಮುಖವಾಗುವಂತೆ ನಿಲ್ಲಿಸಿದರು. ಹೀಗೆ ಇದಿರಿದಿರಾಗಿ ನಿಂತ ರಥಗಳೆರಡೂ ಒಂದಕ್ಕೊಂದು ನೊಗದಿಂದ ನೊಗಕ್ಕೂ, ಕುದುರೆಗಳು ಮುಖದಿಂದ ಮುಖಕ್ಕೂ, ಪತಾಕೆಗಳಿಂದ ಪತಾಕೆ ಗಳಿಗೂ ಘರ್ಷಣವಾಗುವಂತೆ ಸಮೀಪಿಸುದುವು. ಆಗ ರಾಮನು ತನ್ನ ಬಿಲ್ಲಿನಿಂದ ನಾಲ್ಕು ತೀಕ್ಷ್ಣ ಬಾಣಗಳನ್ನು ಪ್ರಯೋಗಿಸಿ, ರಾವಣನ ನಾಲ್ಕು ರಥಾಶ್ವಗಳನ್ನೂ ಹೊಡೆದು ಹಿಂದಕ್ಕಟ್ಟಿದನು. ಆಗ ರಾವಣನು, ತನ್ನ ಕುದುರೆಗಳು ರಾಮಬಾಣಗಳಿಂದ ನೊಂದು ಹಿಂದಕ್ಕೆ ಸರಿದುದನ್ನು ನೋಡಿ, ಬಹಳ ಕುಪಿತನಾಗಿ, ರಾಮನ ಮೇಲೆ ತೀಕ್ಷ್ಣಬಾಣಗಳನ್ನು ಪ್ರಯೋಗಿಸಿದನು. ರಾವಣಬಾಣಗಳು ವೇಗದಿಂದ ಬಂದು ತಾಗಿದರೂ, ರಾಮನಿಗೆ ಅವರಿಂದ ಸ್ವಲ್ಪಮಾತ್ರವೂ ವ್ಯಥೆಯಾಗಲಿ, ವೇದನೆಯನ್ನು ಸೂಚಿಸತಕ್ಕ ಮುಖವಿಕಾರವಾಗಲಿ ಉಂಟಾಗಲಿಲ್ಲ. ಇಷ್ಟರಲ್ಲಿ ರಾವಣನು ತಿರುಗಿ ಸಿಡಿಲಿನಂತೆ ಮಹಾಧ್ವನಿಯುಳ್ಳ ಕೆಲವು ಬಾಣಗಳನ್ನು ತೆಗೆದು, ಅವುಗಳನ್ನು ಇಂದ್ರಸಾರಥಿಯಾದ ಮಾತಲಿಯ ಮೇಲೆ ಪ್ರಯೋಗಿಸಿದನು. ಈ ಬಾಣಗಳು ಅತಿವೇಗದಿಂದ ಬಂದು ಮಾತಲಿಯ ದೇಹದಲ್ಲಿ ನಾಟ

ದರೂಕೂಡ, ಅವನಿಗೂ ಅದರಿಂದ ಸ್ವಲ್ಪಮಾತ್ರವೂ ವ್ಯಥೆಯಾಗಲಿ, ಮೂರ್ಛೆಯಾಗಲಿ ತೋರಲಿಲ್ಲ. ಇದಕ್ಕೆ ಮೊದಲು ರಾವಣನು ತನ್ನ ಮೇಲೆ ಬಾಣಗಳನ್ನು ಬಿಟ್ಟಾಗಲೂ ಅಷ್ಟಾಗಿ ಕೋಪಹೊಂದದ ರಾಮ ನಿಗೆ ಈಗ ಮಾತಲಿಯನ್ನು ಹೊಡೆದುದಕ್ಕಾಗಿ ಬಹಳ ಕೋಪವುಂಟಾ ಯಿತು. ಆ ಕ್ಷಣವೇ ರಾಮನು ಅತಿತೀಕ್ಷ್ಣಗಳಾದ ಕೆಲವು ಬಾಣ ಗಳನ್ನು ಪ್ರಯೋಗಿಸಿ, ಆ ಬಾಣವೇಗದಿಂದ ರಾವಣನ ರಥವು ತನ್ನಿ ದಿರಿಗೆ ನಿಲ್ಲದೆ ಸ್ವಲ್ಪವಾಗಿ ಹಿಂದೆ ಸರಿಯುವಹಾಗೆ ಮಾಡಿದನು. ಮತ್ತು ಆಗ ತನ್ನ ಮಿತಿಮೀರಿದ ಹಸ್ತಲಾಘವವನ್ನು ತೋರಿಸುತ್ತ, ಒಂದೊಂದು ಸಲಕ್ಕೆ ಇಪ್ಪತ್ತು! ಮೂವತ್ತು! ಅರುವತ್ತು! ನೂರು! ಸಾವಿರಗ ಳಂತೆ ಅನೇಕಾನೇಕ ಬಾಣಗಳನ್ನು ರಾವಣನ ರಥದಮೇಲೆ ಪ್ರಯೋ ಗಿಸಿದನು. ಇದಕ್ಕೆ ಪ್ರತಿಯಾಗಿ ರಾವಣನೂ ಕೂಡ, ರಥದಲ್ಲಿ ತಾನು ನಿಶ್ಚಲನಾಗಿ ಕುಳಿತಿದ್ದ ಹಾಗೆಯೇ, ಕೋಪದಿಂದ ಗದೆಗಳನ್ನೂ ಮುಸಲ ಗಳನ್ನೂ ರಾಮನಮೇಲೆ ವರ್ಷಿಸಿದನು. ಆಗಿನ ಯುದ್ಧವು ಮೇಲೆಮೇಲೆ ಅತಿಪ್ರಬಲವಾಗಿ, ನೋಡುವವರಿಗೆ ಮೈಯಲ್ಲಿ ರೋಮಾಂಚವು ಹುಟ್ಟುವಂತೆ ಭಯಂಕರವಾಯಿತು. ಗದೆಗಳು, ಮುಸಲಗಳು, ಪರಿಘಗಳು, ಇವೇ ಮೊದಲಾದ ಆಯುಧ ಧ್ವನಿಗಳಿಂದಲೂ ಬಾಣದ ಹಿಡಿಗಳು ಮುರಿದು ಬೀಳುವುದರಿಂದಲೂ, ಸಪ್ತಸಮುದ್ರಗಳೂ ಕ್ಷೋಭೆಹೊಂದಿದಂತಾದುವು. ಈ ಸಮುದ್ರಕ್ಷೋಭವನ್ನುನೋಡಿ, ಪಾತಾಳವಾಸಿಗಳಾದ ಸಮಸ್ತ ಪನ್ನ ಗರೂ, ಅನೇಕ ದಾನವರೂ, ಭಯದಿಂದ ವ್ಯಥೆಗೊಂಡರು. ಪರ್ವತಾರಣ್ಯ ಗಳೊಡನೆ ಸಮಸ್ತಭೂಮಿಯೂ ಚಲನಹೊಂದಿತು. ಸೂರ್ಯನು ಕಂದಿ ಕಾಂತಿಗುಂದಿದನು. ವಾಯುಚಲನವು ನಿಂತುಹೋಯಿತು. ದೇವಗಂಧರ್ವ ಸಿದ್ಧಕಿನ್ನರ ಮಹೋದರರೂ, ಮಹರ್ಷಿಗಳೂ, ಚಿಂತೆಗೊಂಡಿದ್ದರು. ದೇವತೆ ಗಳೂ, ಋಷಿಗಣಗಳೂ, "ಗೋಬ್ರಾಹ್ಮಣರಿಗೆ ಕ್ಷೇಮವಾಗಲಿ! ಸಮಸ್ತ ಲೋಕಗಳೂ ಶಾಶ್ವತವಾಗಿರಲಿ! ರಾಮನು ಈಯುದ್ಧದಲ್ಲಿ ರಾವಣನನ್ನು ನಿಗ್ರಹಿಸಿ ಜಯಶೀಲನಾಗಲಿ!" ಎಂದು ಸ್ವಸ್ತಿವಾಚನಗಳನ್ನು ಜಪಿಸುತ್ತ, ಭಯಂಕರವಾದ ಆ ರಾಮರಾವಣರ ಯುದ್ಧವನ್ನು ಅತ್ಯಾತುರದಿಂದ ಕಣ್ಣಿಟ್ಟು ನೋಡುತ್ತಿದ್ದರು. ಆಕಾಶದಲ್ಲಿ ಗಂಧರ್ವರೂ, ಅಪ್ಸರಸ್ಸುಗಳೂ ಅಲ್ಲಲ್ಲಿ ಗುಂಪುಗೂಡಿ, ಇದುವರೆಗೆ ಹಿಂದೆ ಯಾವಾಗಲೂ ತಾವು ಕಂಡು

ಕೇಳಿಲ್ಲದ ಆ ಮಹಾದ್ಭುತಯುದ್ಧವನ್ನು ನೋಡಿ ಅತ್ಯಾಶ್ಚರ್ಯಭರಿತರಾಗಿ, "ಆಕಾಶಕ್ಕೆ ಆಕಾಶವೇ ಸಾಟಿ! ಸಾಗರಕ್ಕೆ ಸಾಗರವೇ ಸಾಟಿ! ಈ ರಾಮರಾವಣ ಯುದ್ಧಕ್ಕೆ ರಾಮರಾವಣಯುದ್ಧವೇ ಸಾಟಿಯಲ್ಲದೆ ಬೇರೆಯಲ್ಲ" ಎಂದು ಹೇಳುತ್ತ ಕುತೂಹಲದಿಂದ ಆ ಯುದ್ಧವನ್ನೇ ನೊಡುತ್ತಿದ್ದರು. ಇಷ್ಟರಲ್ಲಿ ರಘುಕುಲಕೀರ್ತಿವರ್ಧನನಾದ ಮಹಾಬಾಹುವಾದ ಶ್ರೀರಾಮನು, ರಾವಣನಮೇಲೆ ಬಹಳ ಕೋಪಗೊಂಡವನಾಗಿ, ಕ್ರೂರಸರ್ಪದಂತಿರುವ ಕತ್ತಿಯಲಗಿನ ಬಾಣವೊಂದನ್ನು ತೆಗೆದು, ಬಿಲ್ಲಿನಲ್ಲಿ ಸಂಧಾನಮಾಡಿ, ಕಾಂತಿಯುಕ್ತವಾಗಿಯೂ, ಜ್ವಲಿಸುವ ಕುಂಡಲಗಳಿಂದ ಶೋಭಿತವಾಗಿಯೂ ಇರುವ ರಾವಣನ ಒಂದು ತಲೆಯನ್ನು ಹಾರಿಸಿ ಬಿಟ್ಟನು! ಆಗ ರಾವಣನ ಶಿರಸ್ಸು ಕೆಳಗೆ ಬೀಳುವುದನ್ನು ತ್ರೈಲೋಕ್ಯವೂ ಅತಿ ಕುತೂಹಲದಿಂದ ನೋಡಿದುವು. ಆದರೇನು? ಸಮಸ್ತ ಭೂತಗಳೂ ನೋಡುತ್ತಿರುವ ಹಾಗೆಯೇ, ರಾವಣನ ಕಂಠದಲ್ಲಿ ಅದೇ ಸ್ಥಳದಲ್ಲಿ ಮೊದಲಿದ್ದಂತೆಯೇ ಮತ್ತೊಂದು ತಲೆಯು ಮೊಳೆತು ಮೇಲೆ ಕಾಣಿಸಿತು! ಶೀಘ್ರಕಾರಿಯಾದ ರಾಮನು ತನ್ನ ಹಸ್ತಲಾಘವದಿಂದ ಆ ಎರಡನೆಯ ತಲೆಯನ್ನೂ ಕ್ಷಣಮಾತ್ರದಲ್ಲಿ ಕತ್ತರಿಸಿ ಕೆಡಹಿದನು. ಆ ಶಿರಸ್ಸು ಕೆಳಗೆ ಬಿದ್ದೊಡನೆ ಅದೇ ಸ್ಥಳದಲ್ಲಿ ತಿರುಗಿ ಮತ್ತೊಂದು ಶಿರಸ್ಸು ಬೆಳೆಯಿತು! ಆ ಮೂರನೆಯ ಶಿರಸ್ಸನ್ನೂ ರಾಮನು ವಜ್ರಸಮಾನವಾದ ತನ್ನ ಬಾಣದಿಂದ ಆ ಕ್ಷಣವೇ ಕತ್ತರಿಸಿ ಕೆಡಹಿದನು! ಅದೇ ಸ್ಥಳದಲ್ಲಿ ತಿರುಗಿ ಮತ್ತೊಂದು ಹೊಸತಲೆಯು ಕಾಣಿಸಿತು! ಹೀಗೆ ಆ ರಾವಣನ ಶಿರಸ್ಸುಗಳಲ್ಲಿ ಒಂದನ್ನು ಕತ್ತರಿಸಿದೊಡನೆ ಅದೇ ಆಕಾರದಿಂದ ಮತ್ತೊಂದು ತಲೆಯು ಅದೇ ಸ್ಥಳದಲ್ಲಿ ಹೊಸದಾಗಿ ಹುಟ್ಟುತ್ತಿತ್ತು. ರಾಮನು ನೂರೊಂದಾವೃತ್ತಿ ಬಾಣಗಳನ್ನು ಬಿಟ್ಟು ನೂರೊಂದು ಶಿರಸ್ಸುಗಳನ್ನು ಕತ್ತರಿಸುತ್ತ ಬಂದನು. ಇಷ್ಟಾದರೂ ರಾವಣನ ಪ್ರಾಣಗಳನ್ನು ನೀಗಿಸಿ ಅವನನ್ನು ಕೊನೆಮುಟ್ಟಿಸುವುದಕ್ಕಾಗಲಿಲ್ಲ. ಅವನು ಸಾಯುವನೆಂಬ ನಿಶ್ಚಯವೂ ತೋರಲಿಲ್ಲ. ಆಗ ಸರ್ವಾಸ್ತ್ರವಿಶಾರದನಾಗಿಯೂ, ವೀರಾಗ್ರಣಿಯಾಗಿಯೂ, ಕೌಸಲ್ಯಾನಂದವರ್ಧಕನಾಗಿಯೂ. ರಘುಕುಲೋತ್ತಮನಾಗಿಯೂ ಇರುವ ರಾಮನು, ತನ್ನಲ್ಲಿ ತಾನು "ಆಹಾ! ಮೊದಲು ನಾನು ಯಾವಬಾಣದಿಂದ ಮಾರೀಚನನ್ನು ಕೊಂದೆನೋ, ಯಾವ ಬಾಣಗಳಿಂದ

ಖರದೂಷಣರನ್ನು ಕೊನೆಮುಟ್ಟಿಸಿದೆನೋ, ಯಾವ ಬಾಣಗಳಿಂದ ಕ್ರೌಂಚಾರಣ್ಯದಲ್ಲಿ ಕಬಂಧನನ್ನೂ, ದಂಡಕಾರಣ್ಯದಲ್ಲಿ ವಿರಾಧನನ್ನೂ ವಧಿಸಿದೆನೋ, ಯಾವ ಬಾಣಗಳಿಂದ ಸಪ್ತಸಾಲಗಳನ್ನೂ, ಅದರಿಂದಾಚೆಗಿದ್ದ ಪರ್ವತಗಳನ್ನೂ ಖಂಡಿಸಿದೆನೋ, ಯಾವ ನನ್ನ ಬಾಣದಿಂದ ವಾಲಿಯೂ ಹತನಾದನೋ ಯಾವ ಬಾಣದಿಂದ ಸಮುದ್ರವನ್ನು ಕುದಿಸಿದೆನೋ, ಆ ಬಾಣಗಳೆಲ್ಲವೂ ಇದುವರೆಗೆ ಯಾವ ಯುದ್ಧದಲ್ಲಿಯೂ ವ್ಯರ್ಥವಾಗದೆ, ಶತ್ರುಗಳನ್ನು ತಪ್ಪದೆ ವಧಿಸುವುವೆಂದು ನನಗೆ ನಂಬಿಕೆಯನ್ನುಂಟುಮಾಡಿದ್ದುವು. ಅಂತಹ ಬಾಣಗಳೆಲ್ಲವೂ ಈಗ ಈ ರಾವಣನ ವಿಷಯದಲ್ಲಿ ಮಾತ್ರ ನಿರ್ವೀರ್ಯಗಳಾಗಿ ವ್ಯರ್ಥವಾಗುವುದಕ್ಕೆ ಕಾರಣವೇನೋ ತಿಳಿಯಲಿಲ್ಲವಲ್ಲಾ" ಎಂದು ಚಿಂತಾಕುಲನಾಗಿದ್ದನು. ಹೀಗೆ ರಾಮನೂ ತನ್ನಲ್ಲಿ ತಾನು ಚಿಂತಿಸುತ್ತಿದ್ದರೂ, ಯುದ್ಧಕಾರ್ಯಗಲ್ಲಿಮಾತ್ರ ಸ್ವಲ್ಪಮಾತ್ರವೂ ಎಚ್ಚರತಪ್ಪದೆ ರಾವಣನ ಎದೆಗೆ ಗುರಿಯಟ್ಟು ಎಡೆಬಿಡದೆ ಬಾಣವರ್ಷವನ್ನು ಕರೆಯುತ್ತಲೇ, ಇದ್ದನು. ಹಾಗೆಯೇ ರಾವಣನೂ ರಾಮನಮೇಲೆ ಕೋಪಗೊಂಡು, ನಿಶ್ಚಲನಾಗಿ ರಥದಲ್ಲಿ ಕುಳಿತು, ಆ ರಾಮನಮೇಲೆ ಗದೆಗಳನ್ನೂ, ಮುಸಲಗಳನ್ನೂ ವರ್ಷಿಸುತ್ತಿದ್ದನು. ನೋಡುವವರಿಗೆ ಮೈಯಲ್ಲಿರೋಮಾಂಚವನ್ನು ಹುಟ್ಟಿಸುವಂತೆ ಆಗ ರಾಮರಾವಣರಿಬ್ಬರಿಗೂ ದೊಡ್ಡತುಮುಲಯುದ್ಧವು ಜರಗಿತು. ಅವರಿಬ್ಬರೂ ಒಮ್ಮೊಮ್ಮೆ ಕೋಪಾವೇಶದಿಂದ ತ್ರಿಕೂಟಪರ್ವತಕ್ಕೆ ಹಾರಿನಿಂತು ಯುದ್ಧಮಾಡುವರು! ಒಮ್ಮೆಮ್ಮೆ ತಮ್ಮ ತಮ್ಮ ರಥದೊಡನೆ ಮೇಲೆ ಹಾರಿ ಅಂತರಿಕ್ಷದಲ್ಲಿಯೇ ಹೋರಾಡುವರು! ತಿರುಗಿ ಮೊದಲಿನಂತೆ ಭೂಮಿಗಿಳಿದು ಯುದ್ಧಮಾಡುವರು! ತಿರುಗಿ ಪರ್ವತಶಿಖರಕ್ಕೆ ಹಾರಿ ಅಲ್ಲಿ ಯುದ್ಧವನ್ನಾರಂಭಿಸುವರು! ಹೀಗೆ ಅವರಿಬ್ಬರಿಗೂ ಬಹಳ ದೊಡ್ಡ ಯುದ್ಧವು ನಡೆಯಿತು. ದೇವತೆಗಳೂ, ದಾನವರೂ, ಪಿಶಾಚರೂ, ಉರಗರೂ, ರಾಕ್ಷಸರೂ ನಟ್ಟಕಣ್ಣಿನಿಂದ ಆ ಯುದ್ಧವನ್ನೇ ನೋಡುತ್ತಿದ್ದರು. ಆ ಮಹಾಯುದ್ಧವು [1] ಹಗಲೂ ರಾತ್ರಿಯೂ

1 ಇಲ್ಲಿ "ಸರ್ವರಾತ್ರಮವರ್ತತ" ಎಂದು ಮೂಲವು. "ಸಪ್ತರಾತ್ರಮವರ್ತತ" ಎಂಬ ಪಾಠಾಂತರವನ್ನೂ ಹೇಳುವರು. ಸಪ್ತರಾತ್ರಿಗಳೆಂದರೆ ರಾಮರಾವಣರಿಗೆ ಮೊದಲು ಯುದ್ಧಾರಂಭವಾದ ದಿನದಿಂದ, ಎಂದರೆ ನವಮಿಯಿಂದ ಮೊದಲು ಮಾಡಿಕೊಂಡು, ಇದುವರೆಗೆ ಏಳುದಿನಗಳ ಯುದ್ಧವು ನಡೆದುದಾಗಿ ಲೆಕ್ಕಮಾಡಬೇಕು. ಇದರಿಂದ ಮೇಲಿನ ಎರಡುಪಾಠಗಳಿಗೂ ದಿನಸಂಖ್ಯೆಯಲ್ಲಿ ಐಕಕಂಠ್ಯವನ್ನು ನಿರೂಪಿಸಬಹುದು.

ವಿಚ್ಛಿತ್ತಿಯಿಲ್ಲದೆ ನಡೆಯಿತು. ರಾತ್ರಿಯಲ್ಲಿಯಾಗಲಿ, ಹಗಲಲ್ಲಿಯಾಗಲಿ, ಮುಹೂರ್ತವಾಗಲಿ, ಕ್ಷಣಮಾತ್ರವಾಗಲಿ ಅವರ ಯುದ್ಧಕ್ಕೆ ವಿರಾಮವೆಂಬುದೇ ಇರಲಿಲ್ಲ. ಇತ್ತಲಾಗಿ ದಶರಥಪುತ್ರನಾದ ರಾಮನೂ, ಅತ್ತಲಾಗಿ ರಾಕ್ಷಸಚಕ್ರವರ್ತಿಯಾದ ರಾವಣನೂ ವಿರಾಮವಿಲ್ಲದೆ ಬಹಳ ಹೊತ್ತಿನಿಂದ ಯುದ್ಧಮಾಡಿದಾಗಲೂ, ರಾಮನಿಗೆ ಇನ್ನೂ ಜಯವು ಕೈಗೂಡಿ ಬಾರದಿರುವುದನ್ನು ನೋಡಿ, ಕಾಲೋಚಿತಬುದ್ಧಿಯುಳ್ಳವನಾಗಿಯೂ, ಇಂದ್ರಸಾರಥಿಯಾಗಿಯೂ ಇರುವ ಮಾತಲಿಯು, ಯುದ್ಧಮಾಡುತ್ತಿದ್ದ ರಾಮನನ್ನು ಕುರಿತು ಆತುರದಿಂದ ಹೀಗೆಂದು ಹೇಳಿದನು.

ಇಲ್ಲಿಗೆ ನೂರಹತ್ತನೆಯ ಸರ್ಗವು.

ರಾಮನು ಬ್ರಹ್ಮಾಸ್ತ್ರದಿಂದ ರಾವಣನನ್ನು ವಧಿಸಿದುದು.

ಆಗ ಮಾತಲಿಯು ರಾಮನನ್ನು ನೋಡಿ ವಿನಯದಿಂದ, "ಎಲೈ ವೀರಾಗ್ರಣೀ ! ಇದೇನು ? ನೀನು ಸರ್ವಜ್ಞನಾಗಿದ್ದರೂ ಏನೂ ತಿಳಿಯದವನಂತೆ ಹೀಗೆ ರಾವಣನನ್ನು ಸರಿಗಟ್ಟಿಕೊಂಡು ಅವನಂತೆಯೇ ಅಸ್ತ್ರಕ್ಕೆ ಪ್ರತ್ಯಸ್ತ್ರವನ್ನು ಬಿಡುತ್ತ, ವ್ಯರ್ಥವಾಗಿ ಹೀಗೇಕೆ ಕಾಲವನ್ನು ಕಳೆಯುತ್ತಿರುವೆ ? ಮಹಾಪ್ರಭೂ ! ಈತನಿಗೆ ಮನುಷ್ಯನಿಂದಲೇ ಸಾವು ಸಿದ್ಧವೆಂದು ದೇವತೆಗಳು ಹೇಳಿದ ಕಾಲವು ಇದೋ! ಈಗ ಪ್ರಾಪ್ತವಾಗಿರುವುದು ! ಆದುದರಿಂದ ಈಗಲೇ ನೀನು ಇವನ ವಧಕ್ಕಾಗಿ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿಬಿಡು !" ಎಂದನು. ಹೀಗೆ ಮಾತಲಿಯು ರಾವಣನ ವಧಕ್ಕಾಗಿ ಬ್ರಹ್ಮಾಸ್ತ್ರವನ್ನು ಬಿಡುವಂತೆ ರಾಮನನ್ನು ಜ್ಞಾಪಿಸಿದೊಡನೆ, ಮಹಾವೀರ್ಯಶಾಲಿಯಾದ ರಾಮನು ತಾನೂ ಪೂರ್ವವೃತ್ತಾಂತವನ್ನು ಸ್ಮರಣಕ್ಕೆ ತಂದು ಕೊಂಡು, ಬುಸುಗುಟ್ಟುವ ಸರ್ಪದಂತೆ ಕ್ರೂರವಾಗಿಯೂ, ತೇಜಸ್ಸಿನಿಂದ ದೇದೀಪ್ಯಮಾನವಾಗಿಯೂ ಇರುವ ಒಂದು ದಿವ್ಯಾಸ್ತ್ರವನ್ನು ಕೈಗೆತ್ತಿಕೊಂಡನು. ಪೂರ್ವದಲ್ಲಿ ತನಗೆ ಪೂಜ್ಯನಾಗಿ ತಪೋವೀರ್ಯಸಂಪನ್ನನಾಗಿರುವ ಅಗಸ್ತ್ಯಮಹಾಮುನಿಯು ಬ್ರಹ್ಮದತ್ತವಾದ ಮತ್ತು ಅಮೋಘವಾದ ಯಾವ ಮಹಾಸ್ತ್ರವನ್ನು ಅನುಗ್ರಹಿಸಿ ಕೊಟ್ಟಿದ್ದನೋ, ಅದಿತ

ತೇಜಸ್ವಿಯಾದ ಬ್ರಹ್ಮದೇವನೂ ಕೂಡ ಯಾವ ಮಹಾಸ್ತ್ರವನ್ನು ತಾನಾಗಿಯೇ ನಿರ್ಮಿಸಿ, ತ್ರೈಲೋಕ್ಯಜಯಾಕಾಂಕ್ಷಿಯಾದ ಇಂದ್ರನಿಗಾಗಿ ಅನುಗ್ರಹಿಸಿ ಕೊಟ್ಟಿದ್ದನೋ, ಆ ದಿವ್ಯಾಸ್ತ್ರವನ್ನೇ ಈಗ ರಾಮನು ಕೈಯಲ್ಲಿ ಹಿಡಿದು ನಿಂತನು! ಆ ಮಹಾಸ್ತ್ರದ ಮಹಿಮೆಯನ್ನು ಕೇಳಬೇಕೆ? ಅದರ ಗರಿಗಳಲ್ಲಿ ವಾಯುದೇವನೂ, ಅಲಗಿನಲ್ಲಿ ಸೂರ್ಯಾಗ್ನಿಗಳೂ, ಅಧಿದೇವತೆಗಳಾಗಿ ನೆಲೆಗೊಂಡಿರುವರು! ಅದರ ಶರೀರವು ಆಕಾಶಮಯವಾಗಿ ಸರ್ವವ್ಯಾಪ್ತಿ ಸಮರ್ಥವಾಗಿರುವುದು! ಗುರುತ್ವದಲ್ಲಿ ಮೇರು ಮಂದರಪರ್ವತಗಳನ್ನು ಹೋಲುತ್ತಿರುವುದು! ತನ್ನ ಸಹಜನಾದ ಆಕಾರದಿಂದಲೇ ಜ್ವಲಿಸುತ್ತಿರುವುದು! ಸಮಸ್ತಭೂತಗಳ ಸಾರಾಂಶವನ್ನೂ ಸೇರಿಸಿ ನಿರ್ಮಿಸಲ್ಪಟ್ಟಿರುವುದು! ಸೂರ್ಯನಂತೆ ಧಗಧಗಿಸುತ್ತಿರುವುದು! ಹೊಗೆಯೊಡಗೂಡಿದ ಪ್ರಳಯಕಾಲಾಗ್ನಿಯಂತೆ ಕಾಣುತ್ತಿರುವುದು. ಜ್ವಲಿಸುವ ಕ್ರೂರ ಸರ್ಪದಂತೆ ತೋರುವುದು. ಶತ್ರುಸೈನ್ಯದಲ್ಲಿರುವ ಗಜಾಶ್ವಸೈನ್ಯಗಳೆಲ್ಲವನ್ನೂ ಒಂದೇ ಪ್ರಹಾರದಿಂದ ನಿರ್ಮೂಲಮಾಡುವಷ್ಟು ಶೀಘ್ರವೇಗವುಳ್ಳುದಾಗಿರುವುದು! ಶತ್ರುಗಳ ಪುರದ್ವಾರವನ್ನಾಗಲಿ, ಅಗುಳಿಗಳನ್ನಾಗಲಿ, ಕೊನೆಗೆ ಪರ್ವತಗಳನ್ನಾಗಲಿ ಭೇದಿಸಲು ಸಮರ್ಥವಾಗಿರುವುದು. ಇದುವರೆಗೆ ಅನೇಕ ರಾಕ್ಷಸರ ರಕ್ತದಲ್ಲಿ ತೊಯ್ದು, ಅವರ ಮೇದಸ್ಸಿನಲ್ಲಿ ಮುಳುಗಿ, ಭಯಂಕರಸ್ವರೂಪದಿಂದ ಕಾಣುತ್ತಿರುವುದು. ವಜ್ರದಂತೆ ದೃಢವಾಗಿರುವುದು! ಮಹಾಧ್ವನಿಯಿಂದ ಮೊಳಗುತ್ತಿರುವುದು! ನಾನಾವಿಧಗಳಾದ ಕಪಟಯುದ್ಧಗಳನ್ನೂ ತನ್ನ ಶಕ್ತಿಯಿಂದ ಅಡಗಿಸತಕ್ಕುದಾಗಿರುವುದು. ನೋಡುವಾಗಲೇ ಸಮಸ್ತ ಜಗತ್ತನ್ನೂ ನಡುಗಿಸುವುದು! ಬುಸುಗುಟ್ಟುವ ಸರ್ಪದಂತೆ ಮಹಾಭಯಂಕರವಾಗಿರುವುದು. ಇದುವರೆಗೆ ಎಷ್ಟೋ ಯುದ್ಧಗಳಲ್ಲಿ ಹದ್ದುಗಳು, ರಣಹದ್ದುಗಳು, ನರಿಗಳು, ರಕ್ಷೋಗಣಗಳು, ಮುಂತಾದ ಮಾಂಸಭಕ್ಷಕಗಳಿಗೆಲ್ಲಾ ರಕ್ತ ಮಾಂಸರೂಪಗಳಾದ ಭಕ್ಷ್ಯಾದಿಗಳನ್ನೊದಗಿಸಿಕೊಟ್ಟು ಔತಣವನ್ನು ಮಾಡಿಸಿರುವುದು. ಯುದ್ಧಕಾಲದಲ್ಲಿ ಮೃತ್ಯುದೇವತೆಯಂತೆ ಭಯಂಕರವಾಗಿರುವುದು. ಇತ್ತಲಾಗಿ ವಾನರವೀರರ ಸಂತೋಷಕ್ಕೂ, ಅತ್ತಲಾಗಿ ರಾಕ್ಷಸವಿನಾಶಕ್ಕೂ ಕಾರಣವಾಗಿ, ಅಂದವಾಗಿಯೂ, ಚಿತ್ರವಿಚಿತ್ರಗಳಾಗಿಯೂ, ಇರುವ ಗರುತ್ಮಂತನ ರೆಕ್ಕೆಗಳೊಡಗೂಡಿ ಶೋಭಿಸುವುದು. ಸಮಸ್ತಲೋಕಗಳಲ್ಲಿಯೂ ತಾನೇ ಮೇಲಾದ ಮಹಾಸ್ತ್ರವೆನಿಸಿಕೊಂಡಿರುವುದು. ಇಕ್ಷ್ವಾಕು ವಂಶವನ

ರೆಲ್ಲರಿಗೂ ಭಯನಿವಾರಕವೆನಿಸಿಕೊಂಡಿರುವುದು! ಶತ್ರುಗಳ ಕೀರ್ತಿಯನ್ನಡಗಿಸಿ ತನಗೆ ಸಂತೋಷವರ್ಧಕವಾದ ಆ ಮಹಾಸ್ತ್ರವನ್ನು ರಾಮನು ಕೈಗೆತ್ತಿಕೊಂಡು ವೇದೋಕ್ತವಿಧಿಯಿಂದ. ಅದನ್ನಭಿಮಂತ್ರಿಸಿ, ಬಿಲ್ಲಿನಲ್ಲಿ ಸಂಧಾನಮಾಡುತ್ತಿರುವಾಗಲೇ, ಸಮಸ್ತ ಭೂತಗಳೂ ಭಯದಿಂದ ನಡುಗಿದುವು! ಭೂಮಿಯೂ ಕಂಪಿಸಿತು. ಆಗ ರಾಮನೂ ಬಹಳ ಕೋಪಾವಿಷ್ಟನಾಗಿ, ತನ್ನ ಸರ್ವಶಕ್ತಿಯನ್ನೂ ಉಪಯೋಗಿಸಿ, ಬಿಲ್ಲಿನ ನಾಣನ್ನು ಆಕರ್ಣಾಂತವಾಗಿ ಎಳೆದು, ಮಹಾಭೇದಕವಾದ ಆ ಮಹಾ ಬಾಣವನ್ನು ಬಹಳ ಎಚ್ಚರಿಕೆಯಿಂದ ಗುರಿಯಿಟ್ಟು, ರಾವಣನ ಕಡೆಗೆ ಪ್ರಯೋಗಿಸಿದನು. ಆ ಮಹಾಸ್ತ್ರವು ಶ್ರೀರಾಮನ ಬಾಹುಬಲದಿಂದ ಪ್ರಯೋಗಿಸಲ್ಪಟ್ಟೊಡನೆ, ಇಂದ್ರನ ಭುಜದಿಂದ ಪ್ರಯೋಗಿಸಲ್ಪಟ್ಟ ವಜ್ರಾಯುಧದಂತೆ ತಡೆಯಲಸಾಧ್ಯವಾಗಿಯೂ, ಕಾಲಯಮನಂತೆ ದುರ್ನಿವಾರವಾಗಿಯೂ ಹೊರಟುಬಂದು, ನೆಟ್ಟಗೆ ರಾವಣನ ಎದೆಯಲ್ಲಿ ನಾಟಿತು. ಪ್ರಾಣಾಂತಕರವಾದ ಆ ಬಾಣವು ವೇಗದಿಂದ ಬಂದು ನಾಟಿದೊಡನೆ, ದುರಾತ್ಮನಾದ [1]ರಾವಣನ ಎದೆಯನ್ನು ಎರಡುತುಂಡಾಗಿ ಭೇದಿಸಿ, ಅವನ ಪ್ರಾಣಗಳನ್ನು ಕೊನೆಮುಟ್ಟಿಸಿ, ಅವನ ದೇಹದ ರಕ್ತದಿಂದ ತೊಯ್ದು ಅಲ್ಲಿಂದ ಮುಂದೆ ಹೊರಟು ವೇಗದಿಂದ ಭೂಮಿಯಲ್ಲಿ ನಾಟಿತು. ಹೀಗೆ ಆ ಬಾಣವು ರಾವಣನನ್ನು ಕೊಂದು ಅವನ ರಕ್ತದ ಕಾಂತಿಯಿಂದ ಕೂಡಿ, ತಾನು ನಡೆಸಬೇಕಾದ ಕಾರ್ಯವು ನೆರವೇರಿದುದರಿಂದ ಮನಸ್ಸಿನಲ್ಲಿ ನೆಮ್ಮದಿಯನ್ನು ಹೊಂದಿದಂತೆ ತಿರುಗಿಬಂದು ತಾನು ಮೊದಲಿದ್ದ ರಾಮನ ಬತ್ತಳಿಕೆಯಲ್ಲಿಯೇ ಪ್ರವೇಶಿಸಿತು. ರಾವಣನು ಹತನಾಗಿ ತನ್ನ ಪ್ರಾಣಗಳನ್ನೂ, ಜೀವವನ್ನೂ ತೊರೆಯುವಷ್ಟರಲ್ಲಿ, ಅವನು ಹಿಡಿದಿದ್ದ ಧನುಸ್ಸು ಕೈಯಿಂದ ಜಾರಿ, ಬಾಣಸಹಿತವಾಗಿ ಕೆಳಗೆ ಬಿದ್ದಿತು. ಭಯಂಕರವಾದ ವೇಗದಿಂದಲೂ, ಮಹಾತೇಜಸ್ಸಿನಿಂದಲೂ ಬೆಳಗುತ್ತಿದ್ದ ರಾಕ್ಷಸೇಂದ್ರನಾದ ಆ ರಾವಣನು ಪ್ರಾಣಗಳನ್ನೂ ನೀಗಿದೊಡನೆ, ವಜ್ರಾಹತನಾದ

[1] ಫಾಲ್ಗುನಾಮಾವಾಸ್ಯೆಯಲ್ಲಿ ರಾವಣವಧವು. ಅಥವಾ "ಸರ್ವರಾತ್ರಮವರ್ತತ" ಎಂದು ಹಿಂದೆ ರಾಮರಾವಣರಿಗೆ ರಾತ್ರಿಯೆಲ್ಲವೂ ಎಡೆಬಿಡದೆ ಯುದ್ಧವು ನಡೆದುದಾಗಿ ಹೇಳಿರುವುದರಿಂದ, ಆ ಅಮಾವಾಸ್ಯೆಗೆ ಮರುದಿನದಲ್ಲಿ ಪುಜ್ಯಾ ಅಮಾವಾಸ್ಯೆಯಿಂದ ಕೂಡಿದ ಚೈತ್ರಶುದ್ಧಪಾಡ್ಯದ ಪ್ರಾತಃಕಾಲದಲ್ಲಿ ರಾವಣವಧವೆಂದೂ ಗ್ರಹಿಸಬಹುದು. (ಗೋವಿಂದರಾಜರು).

ವೃತ್ರನಂತೆ ರಥದಿಂದ ಕೆಳಗೆ ಬಿದ್ದನು. ಅಲ್ಲಿ ಸತ್ತುಳಿದ ರಾಕ್ಷಸರೆಲ್ಲರೂ ತಮ್ಮ ಪ್ರಭುವಾದ ರಾವಣನು ಹತನಾಗಿ ಬಿದ್ದುದನ್ನು ನೋಡಿ ಭಯದಿಂದ ನಡುಗುತ್ತ, ದಿಕ್ಕುದಿಕ್ಕಿಗೆ ಪಲಾಯನಮಾಡತೊಡಗಿದರು! ಇದೇ ಸಮಯವೆಂದು ವಾನರರೆಲ್ಲರೂ ಕಲ್ಲುಮರಗಳನ್ನು ಕೈಯಲ್ಲಿ ಹಿಡಿದು ಸಿಂಹನಾದಮಾಡುತ್ತ ಆ ರಾಕ್ಷಸರನ್ನು ಬೆನ್ನಟ್ಟಿ ಓಡಿಸುತ್ತಿದ್ದರು. ಆಗ ರಾಕ್ಷಸರೂ, ಅತ್ತಲಾಗಿ ರಾವಣನ ವಧವನ್ನೂ, ಇತ್ತಲಾಗಿ ಶ್ರೀರಾಮನ ಜಯವನ್ನೂ, ವಾನರರ ಮಹೋತ್ಸಾಹವನ್ನೂ ನೋಡಿ ಭಯದಿಂದ ಕಣ್ಣೀರುಬಿಡುತ್ತ ತಮಗೆ ಬೇರೆ ದಿಕ್ಕಿಲ್ಲದುದಕ್ಕಾಗಿ ನೋಡುವವರಿಗೆ ಕರುಣೆ ಹುಟ್ಟುವಂತೆ ಕೂಗುತ್ತ ಲಂಕೆಯನ್ನು ಪ್ರವೇಶಿಸಿದರು. ಜಯಶೀಲರಾದ ವಾನರರೆಲ್ಲರೂ ಮಹೋತ್ಸಾಹಗೊಂಡು ಶ್ರೀರಾಮನ ಜಯವನ್ನೂ, ರಾವಣನ ವಧವನ್ನೂ ಬಾರಿಬಾರಿಗೂ ಉದ್ಘೋಷಿಸಿ ಸಿಂಹನಾದ ಮಾಡಿದರು. ಆಕಾಶದಲ್ಲಿ ಮಂಗಳಕರವಾದ ಧ್ವನಿಯಿಂದ ದೇವದುಂದುಭಿಗಳು ಮೊಳಗಿದುವು. ವಾಯುವು ದಿವ್ಯಗಂಧದಿಂದಕೂಡಿ ಸುಖಸ್ಪರ್ಶವಾಗಿ ಬೀಸಿತು. ಆಗ ಅಂತರಿಕ್ಷದಿಂದ ರಾಮನ ರಥದಮೇಲೆ ಬೇರೆಯವರಿಗೆ ದುರ್ಲಭವಾದ ಪುಷ್ಪವರ್ಷವು ಮನೋಹರವಾಗಿ ಬೀಳುತ್ತಿತ್ತು. ಇತ್ತಲಾಗಿ ರಣರಂಗದಲ್ಲಿ ವಾನರರೂ, ಆಕಾಶದಲ್ಲಿ ಮಹಾತ್ಮರಾದ ದೇವತೆಗಳೂ, ರಾಮನನ್ನು ನಾನಾ ವಿಧವಾಗಿ ಸ್ತುತಿಸುತ್ತ "ಭಲೆ ಭಲೆ" ಎಂದು ಕೊಂಡಾಡುತ್ತಿರಲು, ಈ ಅಭಿನಂದನ ವಾಕ್ಯಗಳೇ ಸಮಸ್ತಭಾಗಗಳನ್ನೂ ವ್ಯಾಪಿಸಿತು. ಕ್ರೂರನಾಗಿಯೂ ಸರ್ವಲೋಕಭಯಂಕರನಾಗಿಯೂ ಇದ್ದ ರಾವಣನ ವಧವನ್ನು ನೋಡಿ, ದೇವತೆಗಳೂ, ಚಾರಣರೂ ಮಹತ್ತಾದ ಸಂತೋಷಾವೇಶದಿಂದ ಉಬ್ಬುತ್ತಿದ್ದರು. ಶ್ರೀರಾಮನೂ ಕೂಡ, ರಾವಣವಧದಿಂದ ತಾನೂ ಸಂತುಷ್ಟನಾಗಿ, ಹಿಂದೆ ತನ್ನಿಂದ ಉಪಕಾರವನ್ನು ಹೊಂದಿದ ಸುಗ್ರೀವನಿಗೂ, ಮಹಾ ಬಲಾಢ್ಯನಾದ ಅಂಗದನಿಗೂ, ಈ ರಾವಣವಧವೆಂಬ ಕೋರಿಕೆಯನ್ನೀಡೇರಿಸಿ ಮನಸ್ತೃಪ್ತಿಯನ್ನುಂಟುಮಾಡಿದನು. ದೇವತೆಗಳೆಲ್ಲರೂ ತಮಗಿದ್ದ ಮನೋವ್ಯಾಕುಲತೆಯನ್ನು ಬಿಟ್ಟು ಪ್ರಸನ್ನತೆಯನ್ನು ಹೊಂದಿದರು. ದಿಕ್ಕುವಿದಿಕ್ಕುಗಳೆಲ್ಲವೂ ಪ್ರಕಾಶಹೊಂದಿದುವು, ಆಕಾಶವು ನಿರ್ಮಲವಾಯಿತು. ಭೂಮಿಯು ತನಗಿದ್ದ ನಡುಕವನ್ನು ಬಿಟ್ಟು ನಿಶ್ಚಲವಾಯಿತು. ಅದುವರೆಗೂ ರಾವಣನ ಭಯದಿಂದ ನಿಶ್ಚಲವಾಗಿದ್ದ

ವಾಯುವು ಬೀಸತೊಡಗಿತು. ಸೂರ್ಯನು ಸ್ಥಿರವಾದ ಕಾಂತಿಯಿಂದ ಬೆಳಗಿದನು. ಆಗ ಸುಗ್ರೀವ ವಿಭೀಷಣಾದಿಗಳೂ ಜಾಂಬವಂತನೇ ಮೊದಲಾದ ಸುಹೃತ್ತುಗಳೂ, ಲಕ್ಷ್ಮಣನೊಡಗೂಡಿ, ಶ್ರೀರಾಮನಿಗೆ ಯುದ್ಧದಲ್ಲಿ ಜಯವುಂಟಾದುದಕ್ಕಾಗಿ ಪರಮಸಂತೋಷವನ್ನು ಹೊಂದಿ, ಎಲ್ಲರೂ ಸೇರಿಬಂದು, ಜಯಲಕ್ಷ್ಮೀ ವಿಶಿಷ್ಟನಾಗಿ ಬೆಳಗುತ್ತಿದ್ದ ರಾಮನನ್ನು ಯಥೋಕ್ತವಾಗಿ ಮನ್ನಿಸಿ ಪೂಜಿಸಿದರು. ಹೀಗೆ ಮಹಾತೇಜಸ್ವಿಯಾಗಿಯೂ, ರಘುವಂಶರಾಜರಿಗೆ ಆನಂದವರ್ಧಕನಾಗಿಯೂ ಇರುವ ಶ್ರೀರಾಮನು, ಯುದ್ಧದಲ್ಲಿ ಶತ್ರುವನ್ನು ಕೊಂದು, ತನ್ನ ಪ್ರತಿಜ್ಞೆಯನ್ನು ನೆರವೇರಿಸಿ, ತನ್ನ ಸ್ವಜನರಿಂದಲೂ, ಸೈನಿಕರಿಂದಲೂ ಪರಿವೃತನಾಗಿ, ದೇವಗಣಗಳಿಂದ ಪರಿವೇಷ್ಟಿತನಾಗಿ ದೇವೇಂದ್ರನಂತೆ ಪ್ರಕಾಶಿಸುತ್ತಿದ್ದನು.

ಇಲ್ಲಿಗೆ ನೂರಹನ್ನೊಂದನೆಯ ಸರ್ಗವು.

ವಿಭೀಷಣನು ತನ್ನಣ್ಣನ ವಧಕ್ಕಾಗಿ ದುಃಖಿಸಿ ವಿಲಪಿಸುವುದನ್ನು ನೋಡಿ ರಾಮನು ಆ ವಿಭೀಷಣನಿಗೆ ಪ್ರಕೃತಿ ಸಂಬಂಧದಿಂದುಂಟಾದ ಆ ದುಃಖವನ್ನು ನಿವಾರಿಸುವುದಕ್ಕಾಗಿ ಹಿತವಾಕ್ಯಗಳನ್ನು ಹೇಳಿದುದು.

ಹೀಗೆ ರಾವಣನು ರಾಮನಿಂದ ಪರಾಜಿತನಾಗಿ ರಣರಂಗದಲ್ಲಿ ಸತ್ತು ಬಿದ್ದಿರುವುದನ್ನು ವಿಭೀಷಣನೂ ನೋಡಿದನು. ಆ ಸ್ಥಿತಿಯನ್ನು ನೋಡಿದೊಡನೆ ಆಗ ವಿಭೀಷಣನಿಗೂಕೂಡ ಮನಸ್ಸಿನಲ್ಲಿ ಪ್ರಕೃತಿ ಸಂಬಂಧದಿಂದುಂಟಾದ ದುಃಖಾವೇಶವು ತೋರಿತು. ಆ ದುಃಖವನ್ನು ತಡೆಯಲಾರದೆ, ವಿಲಪಿಸುವನು. "ಹಾ ವೀರನೆ! ನೀನೋ! ಪರಾಕ್ರಮದಲ್ಲಿ ಬಹಳ ಪ್ರಸಿದ್ಧನಾದವನು! ಸಮಸ್ತ ಶಾಸ್ತ್ರಗಳಲ್ಲಿಯೂ ಶಿಕ್ಷಿತನು! ರಾಜನೀತಿಯಲ್ಲಿ ನಿಪುಣನು. ನಿನಗೂ ಹೀಗೊಂದು ದುರವಸ್ಥೆಯೇ? ಸರ್ವೋತ್ತಮವಾದ ಹಾಸಿಗೆಯಲ್ಲಿ ಸುಖವಾಗಿ ಮಲಗತಕ್ಕ ನೀನು ಹೀಗೆ ಬಾಣದಿಂದ ಹತನಾಗಿ ನೆಲದಮೇಲೆ ಮಲಗುವುದುಂಟೆ? ಅಣ್ಣಾ! ಇದೇನು

ನಿನ್ನ ಸ್ಥಿತಿಯು ? ತೋಳ್ಬಳೆಗಳಿಂದಲಂಕೃತವಾದ ಈ ನಿನ್ನ ದೀರ್ಘ ಭುಜಗಳೆರಡನ್ನೂ ಕದಲದಹಾಗೆ ಅತ್ತಿತ್ತ ಚಾಚಿ, ಸೂರ್ಯಕಾಂತಿಯಿಂದ ಜ್ವಲಿಸುವ ಕದಲಿದ ಕಿರೀಟದೊಡನೆ ಹೀಗೇಕೆ ಮಲಗಿರುವೆ? ಹಾ ವೀರಾಗ್ರಣೀ ! ಮುಂದೆ ನಿನಗೆ ಯಾವ ಅಪಾಯವು ಬರುವುದೆಂದು ಮೊದಲೇ ನಾನು ಹೇಳಿದ್ದೆನೋ, ಆ ಮಾತು ಹಾಗೆಯೇ ನಡೆಯಿತು. ಆಗ ಕೇವಲ ಕಾಮಮೋಹದಿಂದ ವೈಮರೆತಿದ್ದ ನಿನಗೆ ನನ್ನ ಹಿತವಾದವು ರುಚಿಸದೆ ಹೋಯಿತು. ನನ್ನ ಮಾತಿನಂತೆಯೇ ಈಗ ನೀನು ಈ ಫಲವನ್ನನುಭವಿಸಬೇಕಾಯಿತು. ನೀನು ಹಿಂದೆ ಸೀತಾಪಹಾರವೆಂಬ ಮಹಾ ಪಾಪಕರ್ಮವನ್ನು ಮಾಡುವಾಗ, ಮುಂದೆ ಅದರ ಪರಿಣಾಮವೇನೆಂಬುದನ್ನು ಪ್ರಹಸ್ತನಾಗಲಿ, ಇಂದ್ರಜಿತ್ತಾಗಲಿ , ಇತರ ರಾಕ್ಷಸರಾಗಲಿ, ಕುಂಭಕರ್ಣನಾಗಲಿ, ಅತಿರಥನಾದ ಅತಿಕಾಯನಾಗಲಿ, ನರಾಂತಕನಾಗಲಿ, ನಿನ್ನಪ್ಪಕ್ಕೆ ನೀನೆಯಾಗಲಿ, ಕೇವಲ ದರ್ಪೋದ್ರೇಕದಿಂದ ಸ್ವಲ್ಪಮಾತ್ರವೂ ವಿಚಾರಿಸದೆ ಹೋದಿರಿ. ಅದಕ್ಕೆ ತಕ್ಕ ಫಲವು ಇದೋ ಈಗ ಚೆನ್ನಾಗಿ ಕಾಣಿಸಿತು. ಅಯ್ಯೋ ! ಈ ಸ್ಥಿತಿಯನ್ನು ನೋಡಿ ನಾನು ಹೀಗೆ ಸಹಿಸಲಿ? ಸಮಸ್ತರಾಜನೀತಿಗಳಿಗೂ ಸೇತು ಪ್ರಾಯನಾಗಿದ್ದವನು ಗತಿಸಿದನು ! ಧರ್ಮಕ್ಕೆ ಮೂರ್ತಿಭೂತನಾಗಿದ್ದವನು ಗತಿಸಿದನು ! ಸಮಸ್ತ ಬಲಗಳಿಗೂ ಮುಖ್ಯಾಶ್ರಯನಾದವನು ಗತಿಸಿದನು ! ಸಕಲ ಸ್ತೋತ್ರಗಳಿಗೂ ಮುಖ್ಯ ಗತಿಯಾದವನು ಗತಿಸಿದನು ! ಆಯುಧಧಾರಿಗಳಿಗೆಲ್ಲಾ ಮೇಲೆನಿಸಿದ ಈ ಮಹಾವೀರನು ಹತನಾಗಿ ಬಿದ್ದುದರಿಂದ ಸೂರ್ಯನೇ ಆಕಾಶದಿಂದ ಕೆಳಗೆ ಬಿದ್ದಂತಾಯಿತು. ಚಂದ್ರನು ಕತ್ತಲೆಯಲ್ಲಿ ಮುಳುಗಿದಂತಾಯಿತು. ಅಗ್ನಿಗೆ ಉರಿಯಡಗಿದಂತಾಯಿತು. ಇನ್ನು ಲೋಕದಲ್ಲಿ ಉತ್ಸಾಹಶಕ್ತಿಯೇ ಆಶ್ರಯ ತಪ್ಪಿಹೋದಂತಾಯಿತು. ಆಹಾ ! ರಾಕ್ಷಸಸಿಂಹನಾದ ಈ ನಮ್ಮಣ್ಣನು ಯುದ್ಧದಲ್ಲಿ ಹತನಾಗಿ ನೆಲದ ಮಣ್ಣಿನಲ್ಲಿ ನಿದ್ರಿಸುವಂತೆ ಬಿದ್ದಿರುವಾಗ, ಇನ್ನು ಪ್ರಪಂಚದಲ್ಲಿ ಏನಿದ್ದರೇನು ! ಈಗ ಈ ಪ್ರಪಂಚವು ಕೇವಲ ಶೂನ್ಯಪ್ರಾಯವೇ ಹೊರತು ಬೇರೆಯಲ್ಲ ! ಅಯ್ಯೋ ! ಧೈರ್ಯವೆಂಬ ಚಿಗುರುಗಳಿಂದಲೂ, ತಪಸ್ಸೆಂಬ ದಾರ್ಢ್ಯದಿಂದಲೂ, ಶೌರ್ಯವೆಂಬ ದೃಢವಾದ ಬೇರಿನಿಂದಲೂ ಕೂಡಿ ಬಹಳ ಪ್ರಬಲವಾಗಿ ಬೆಳೆದಿದ್ದ ರಾವಣನೆಂಬ ವೃಕ್ಷವನ್ನು ಯುದ್ಧದಲ್ಲಿ ರಾಮನೆಂಬ ಬಿರುಗಾಳಿಯು ಕ್ಷಣಮಾತ್ರದಲ್ಲಿ

ಮುರಿದುಹಾಕಿತಲ್ಲಾ ! ಪರಾಕ್ರಮವೆಂಬ ಕೊಂಬಿನಿಂದಲೂ, ಪಿತೃಪಿತಾಮಹಾದಿವರ್ಗಗಳೆಂಬ ಪೃಷ್ಠಾವಯವದಿಂದಲೂ, ಕೋಪವೆಂಬ ಹಿಂದಿನ ಶರೀರದಿಂದಲೂ ಅನುಗ್ರಹವೆಂಬ ಸುಂಡಿಲಿನಿಂದಲೂ ಕೂಡಿದ ರಾವಣನೆಂಬ ಮದದಾನೆಯು, ರಾಮನೆಂಬ ಮಹಾ ಸಿಂಹದ ಕೈಗೆ ಸಿಕ್ಕಿ ಹತವಾಗಿ ಕೆಳಗೆ ಬಿದ್ದಿತು ! ಪರಾಕ್ರಮೋತ್ಸಾಹಗಳೆಂಬ ಉಬ್ಬಿದ ಜ್ವಾಲೆಗಳಿಂದಲೂ, ನಿಟ್ಟುಸಿರೆಂಬ ಹೊಗೆಯಿಂದಲೂ, ಬಲವೆಂಬ ಬೇಗೆಯಿಂದಲೂ ಕೂಡಿದ ರಾವಣನೆಂಬ ಬೆಂಕಿಯನ್ನು ರಾಮನೆಂಬ ಮಹಾಮೇಘವು ಕ್ಷಣಮಾತ್ರದಲ್ಲಿ ನಂದಿಸಿತು. [1]ರಾಕ್ಷಸ ಸೈನ್ಯಗಳೆಂಬ, ಬಾಲ, ಹಿರಳು, ಕೊಂಬುಗಳೆಂಬ ಅವಯವಭೇದಗಳಿಂದ ಕೂಡಿ ಶತ್ರುಗಳನ್ನು ಜಯಿಸುವುದರಲ್ಲಿ ಪ್ರಧಾನವಾಗಿ, ವಿಷಯ ಚಾಪಲ್ಯವೆಂಬ ಕಿವಿಗಳಿಂದಲೂ, ಕಣ್ಣುಗಳಿಂದಲೂ ಕೂಡಿದ ರಾವಣನೆಂಬ ಈ ವೃಷಭವು ರಾಮನೆಂಬ ಹುಲಿಯಿಂದ ಹತವಾಗಿ ಬಿದ್ದಿತು !" ಹೀಗೆಂದು ಹೇಳಿ, ನಾನಾವಿಧವಾಗಿ ವಿಲಪಿಸಿದನು. ಹೀಗೆ ಯುಕ್ತಿಯುಕ್ತವಾಕ್ಯಗಳಿಂದ ಅರ್ಥತತ್ವವನ್ನು ಪರಾಮರ್ಶಿಸಿ ವಿಲಪಿಸುತ್ತಿರುವ ವಿಭೀಷಣನನ್ನು ನೋಡಿ, ರಾಮನು ಅವನನ್ನು ಸಮಾಧಾನಪಡಿಸುವುದಕ್ಕಾಗಿ ಈ ಮಾತುಗಳನ್ನಾಡುವನು. "ವಿಭೀಷಣಾ ! ದುಃಖಿಸಬೇಡ ! ಈ ನಿನ್ನಣ್ಣನು ತನ್ನ ಪರಾಕ್ರಮವನ್ನು ತೋರಿಸದೆ ಹೇಡಿಯಂತೆ ಸತ್ತವನಲ್ಲ ! ಯುದ್ಧದಲ್ಲಿ ಅತ್ಯುತ್ಸಾಹದಿಂದ ನಿರ್ಭಯವಾಗಿ ನಿಂತು, ತನ್ನ ಪ್ರಚಂಡ ವೀರ್ಯವನ್ನು ತೋರಿಸಿದ ಮೇಲೆಯೇ ತನ್ನ ಪ್ರಾಣವನ್ನು ಕೊಟ್ಟಿರುವನು ! ಹೀಗೆ ಪರಲೋಕವೃದ್ಧಿಯನ್ನು ಕೋರಿ, ಶೂರಧರ್ಮವನ್ನವಲಂಬಿಸಿ ಯುದ್ಧದಲ್ಲಿ ನಿರ್ಭಯವಾಗಿ ನಿಂತು ಹೋರಾಡಿ ಸತ್ತವರನ್ನು ಕುರಿತು ದುಃಖಿಸಬಾರದು. ವಿಭೀಷಣಾ! ನಿನ್ನಣನಾದ ಈ ರಾವಣನೇನು ಸಾಮಾನ್ಯನಲ್ಲ ! ದೇವೇಂದ್ರ ಸಹಿತವಾಗಿ

---

[1] ಇಲ್ಲಿ "ಸಿಂಹರ್ಕ್ಷಲಾಂಗೂಲಕಕುದ್ವಿಹಾಃ" ಎಂದು ಮೂಲವು. ಸಿಂಹರ್ಕ್ಷರೆಂದರೆ ರಾಕ್ಷಸರು. "ಸಿಂಹರ್ಕ್ಷಾ ರಾಕ್ಷಸಾಃ ಪ್ರೋಕ್ತಾ ಯಕ್ಷಾ ಉಪ್ಲೀಷಿಷೋಮತಾಃ" ಎಂದು ನಿಘಂಟುವಚನವು. ಅಥವಾ ಸಿಂಹರ್ಕ್ಷವೆಂದರೆ ಮೂಲಾನಕ್ಷತ್ರವು. ಇದು ರಾಕ್ಷಸ ನಕ್ಷತ್ರವೆನಿಸುವುದು. ಆ ಸಂಬಂಧದಿಂದ ರಾಕ್ಷಸರಿಗೂ ಅದೇ ಶಬ್ದವು ಉಪಯೋಗಿಸಲ್ಪಟ್ಟದಾಗಿ ಗ್ರಹಿಸಬೇಕು. "ಅಗ್ನಿರ್ಮಖಾ ವಿಶಾಖಾಚ ಆಶ್ಲೇಷಾ ಶತತಾರಕಾ । ಧನಿಷ್ಠಾ ಚಿತ್ರಯಾ ಯುಕ್ತಾ ಜ್ಯೇಷ್ಠಾ ಮೂಲಾಚ ರಾಕ್ಷಸಾಃ" ಎಂದು ಜ್ಯೋತಿಷದಲ್ಲಿ ಕಾಶ್ಯಪವಚನವು.

ಮೂರು ಲೋಕಗಳೂ ಯಾವನಿಗೆ ಹೆದರುತ್ತಿದ್ದುವೋ, ಅಂತಹ ಪರಾಕ್ರಮಬುದ್ಧಿಸಂಪನ್ನನಾದ ಈ ರಾವಣನು ಕಾಲಧರ್ಮವನ್ನು ಹೊಂದಿ ವೀರಸ್ವರ್ಗವನ್ನು ಸೇರಿರುವಾಗ, ಅದಕ್ಕಾಗಿ ನೀನು ದುಃಖಿಸುವುದು ಯುಕ್ತವಲ್ಲ. ಮರಣವೆಂದರೆ ಹೇಗೆ ದುಃಖಿಸದಿರುವುದು" ಎಂದು ಕೇಳುವೆಯಾ? ಯಾರಿಗಾದರೂ ಯುದ್ಧದಲ್ಲಿ ಜಯವೇ ನಿಶ್ಚಯವೆಂಬುದನ್ನು ಹಿಂದೆ ಯಾವಾಗಲೂ ಕಂಡು ಕೇಳಿದುದಿಲ್ಲ। ವೀರನಾದವನು ಯುದ್ಧದಲ್ಲಿ ತಾನಾದರೂ ಶತ್ರುಗಳಿಂದ ಹತನಾಗಬೇಕು! ಶತ್ರುಗಳನ್ನಾದರೂ ತಾನು ಕೊಲ್ಲಬೇಕು। ವೀರನಾದವನಿಗೆ ಇವೆರಡೂ ಸಮಾನಗಳೇ ಹೊರತು ಇವುಗಳಲ್ಲಿ ತಾರತಮ್ಯವಿಲ್ಲ. ಕ್ಷತ್ರಧರ್ಮವನ್ನಾಲೋಚಿಸಿದರೂ ಕೂಡ ಹೀಗೆ ಯುದ್ಧದಲ್ಲಿ ಹತನಾಗಿ ವೀರಸ್ವರ್ಗವನ್ನು ಹೊಂದುವುದು, ಪೂರ್ವಿಕರಾದ ಆರ್ಯರಿಂದ ಉಪದೇಶಿಸಲ್ಪಟ್ಟಿದೇ ಹೊರತು ನಿಷೇಧಿಸಲ್ಪಡಲಿಲ್ಲ। ಇದು ಕ್ಷತ್ರಿಯರಿಗೂ ಅಭಿಮತವಾದ ಧರ್ಮವು. ಯುದ್ಧದಲ್ಲಿ ಹತನಾದ ಶೂರನನ್ನು ಕುರಿತು ದುಃಖಿಸಬಾರದೆಂಬುದೇ ಶಾಸ್ತ್ರನಿರ್ಣಯವು। ಈ ಶಾಸ್ತ್ರನಿರ್ಣಯವನ್ನು ನೀನೂ ಚೆನ್ನಾಗಿ ಪರ್ಯಾಲೋಚಿಸು। ಹುಟ್ಟಿದವರಿಗೆ ಮರಣವು ತಪ್ಪದೆಂಬ ಪರಮಾರ್ಥವನ್ನೂ ಬುದ್ಧಿಯಲ್ಲಿ ಪರಿಶೀಲಿಸು। ನಿನ್ನ ದುಃಖವನ್ನು ಬಿಟ್ಟುಬಿಡು। ಮುಂದೆ ನಡೆಸಬೇಕಾದ ಕಾರ್ಯವೆನೆಂಬುದನ್ನು ಕುರಿತು ಯೋಚಿಸು" ಎಂದನು. ಹೀಗೆ ವೀರ್ಯಶಾಲಿಯಾಗಿಯೂ, ರಾಜಕುಮಾರನಾಗಿಯೂ ಇರುವ ರಾಮನು, ನೀತಿಯುಕ್ತವಾಗಿ ಹೇಳಿದ ಮಾತನ್ನು ಕೇಳಿ ವಿಭೀಷಣನು ಅವನ ಮಾತಿನಂತೆಯೇ ಮುಂದೆ ತನ್ನಣ್ಣನಿಗೆ ಶ್ರೇಯಸ್ಸಾಧಕವಾದ ಕಾರ್ಯವನ್ನು ಮಾಡುವುದಕ್ಕೆ ನಿರ್ಧರಿಸಿ, ತಿರುಗಿ ದುಃಖದಿಂದ ಪರಿತಪಿಸುತ್ತ ರಾಮನನ್ನು ಕುರಿತು "ರಾಮಾ। ದೇವತೆಗಳೆಲ್ಲರೂ ಒಂದಾಗಿ ಇಂದ್ರನೊಡಗೂಡಿ ಬಂದರೂ, ಯಾವನು ಯುದ್ಧದಲ್ಲಿ ಪರಾಜಯವೆಂಬುದನ್ನೇ ಕಂಡರಿಯನೋ, ಆ ನನ್ನಣ್ಣನು, ಈಗ ಯುದ್ಧದಲ್ಲಿ ನಿನ್ನನ್ನಿದಿರಿಸಿ ಸಮುದ್ರವು ತನ್ನ ವೇಲೆಯನ್ನಿದಿರಿಸಿ ಭಂಗವಾದಂತೆ ನಿನ್ನಿಂದ ಭಂಗಹೊಂದಿದನು. ಆದರೇನು? ಇದುವರೆಗೆ ಇವನು ಎಷ್ಟೋ ದಾನಗಳನ್ನು ಮಾಡಿರುವನು. ಎಷ್ಟೋ ವಿಧದಿಂದ ಗುರುದೇವತೆಗಳನ್ನು ಚೆನ್ನಾಗಿ ಸತ್ಕರಿಸಿರುವನು. ಬೇಕುಬೇಕಾದ ಭೋಗಗಳೆಲ್ಲವನ್ನೂ ಅನುಭವಿಸಿರುವನು. ಭೃತ್ಯರನ್ನು ಚೆನ್ನಾಗಿ ಪೋಷಿಸಿರುವನು. ಮಿತ್ರರಿಗೆ

ಯಥೇಷ್ಟವಾದ ಧನವನ್ನು ಕೊಟ್ಟು ತೃಪ್ತಿಪಡಿಸಿರುವನು. ತನ್ನ ಶತ್ರುಗಳಲ್ಲಿಯೂ ತನಗಿದ್ದ ವೈರವನ್ನು ಸಂಪೂರ್ಣವಾಗಿ ತೀರಿಸಿಕೊಂಡಿರುವನು. ಮತ್ತು ಇವನು ಆಹಿತಾಗ್ನಿಯಾಗಿ, ಅಗ್ನಿಹೋತ್ರಕಾರ್ಯಗಳನ್ನು ತಪ್ಪದೆ ನಡೆಸುತ್ತಿದ್ದವನು. ಮಹಾತಪಸ್ಸಂಪನ್ನನು. ವೇದಾಂತಜ್ಞಾನವನ್ನು ಪಡೆದವನು. ಕರ್ಮಗಳಲ್ಲಿಯೂ, ಮೇಲಾದ ಶೂರನೆನಿಸಿಕೊಂಡಿರುವನು- ಹೀಗೆ ಧರ್ಮಶೀಲನಾಗಿಯೂ, ಕರ್ಮಶೂರನಾಗಿಯೂ, ಮಹಾಶೂರತ್ವಾದಿಲಕ್ಷಣಗಳಿಂದ ಕೂಡಿದವನಾಗಿಯೂ ಇರುವ ಈತನು, ಈಗ ಪ್ರೇತತ್ವವನ್ನು ಹೊಂದಿದಮೇಲೆ ಇವನ ಯೋಗ್ಯತೆಗೆ ತಕ್ಕಂತೆ ಯಾವ ಕ್ರಮದಿಂದ ಅಪರಸಂಸ್ಕಾರಗಳನ್ನು ನಡೆಸಬೇಕೋ, ಅದನ್ನಾದರೂ ನಿನ್ನನುಗ್ರಹದಿಂದ ಈಗಲೇ ನಡೆಸಬೇಕೆಂದು ಕೋರುವೆನು" ಎಂದನು. ಹೀಗೆ ವಿಭೀಷಣನು ದುಃಖಯುಕ್ತವಾದ ಮಾತುಗಳನ್ನಾಡಿ, ರಾಮನನ್ನು ಪ್ರಾರ್ಥಿಸಿದಮೇಲೆ ಮಹಾತ್ಮನಾದ ರಾಮನು, ರಾವಣನಿಗಾಗಿ ಸ್ವರ್ಗಕ್ಕೆ ಹಿತಕರವಾದ ಅಂತ್ಯೇಷ್ಟಿಯೆಂಬ ಕರ್ಮವನ್ನು ನಡೆಸುವುದಕ್ಕಾಗಿ ಆ ವಿಭೀಷಣನನ್ನೇ ನಿಯೋಗಿಸುತ್ತ ''ವಿಭೀಷಣಾ! ಇದೇನು ಹೀಗೆ ಹೇಳುವೆ? ಇನ್ನೂ ನಾನು ಇವನಲ್ಲಿ ವೈರವನ್ನಿಟ್ಟು ಇವನ ಸಂಸ್ಕಾರಕ್ಕೆ ದ್ವೇಷಿಸುವೆನೆಂದೆಣಿಸುವೆಯಾ? ಹಾಗೆಣಿಸಬೇಡ. [1]ಎಷ್ಟೇ ವೈರವಿದ್ದರೂ ವೈರಕ್ಕೆ ಮರಣವೇ ಕೊನೆ! ಸತ್ತಮೇಲೆ ವೈರವೆಲ್ಲಿಯದು? ಮುಖ್ಯ

---

[1] ಇಲ್ಲಿ "ಮರಣಾಂತಾನಿ ವೈರಾಣಿ ನಿರ್ವೃತ್ತಂ ನಃ ಪ್ರಯೋಜನಂ ॥ ಕ್ರಿಯತಾಮಸ್ಯ ಸಂಸ್ಕಾರೋ ಮಮಾಪ್ಯೇಷ ಯಥಾತವ" ಎಂದು ಮೂಲವು. (ವಿಶೇಷಾರ್ಥವು) (ಮರಣಾಂತಾನಿ ವೈರಾಣಿ) ರಾವಣನು ನನ್ನಲ್ಲಿ ದ್ವೇಷಿಸುವುದನ್ನು ನೋಡಿ ಹೇಗಾದರೂ ಅವನನ್ನು ಸ್ವಾಶ್ರಿತನನ್ನಾಗಿಮಾಡಿಕೊಂಡು ಉದ್ಧರಿಸಬೇಕೆಂದು ಪ್ರಯತ್ನಿಸಿದೆನು. ಹಾಗಿದ್ದರೂ ಅವನು ತನ್ನ ಮೂರ್ಖಸ್ವಭಾವವನ್ನು ಬಿಡದೆ ತಾನು ಸಾಯುವವರೆಗೂ ನಮ್ಮಲ್ಲಿ ವೈರವನ್ನೇ ಬಿಡಲಿಲ್ಲವೆಂದು ರಾಮನು ಪಶ್ಚಾತ್ತಾಪದಿಂದ ಹೇಳಿದುದಾಗಿ ಭಾವವು. (ನಿರ್ವೃತ್ತಂ ನಃ ಪ್ರಯೋಜನಂ) ಇನ್ನುಮೇಲೆ ಆ ರಾವಣನು ತನ್ನ ಮೂರ್ಖಸ್ವಭಾವವನ್ನು ತೋರಿಸಲಾರನಾದುದರಿಂದ, ಈಗ ನನ್ನ ಉದ್ದೇಶವು ನೆರವೇರುವುದರಲ್ಲಿ ಸಂದೇಹವಿಲ್ಲವೆಂದು ಭಾವವು. ಹಿಂದೆ ನಾನು "ಯದಿವಾ ರಾವಣಸ್ಸ್ವಯಂ'' ಎಂದು ರಾವಣನೇ ಬಂದಿದ್ದರೂ ಕರೆತರುವಂತೆ ಹೇಳಿದೆನು. ಕೋಪದಿಂದ ಯುದ್ಧಮಾಡುವಾಗಲೂ ಕೂಡ "ಗಚ್ಛಾನುಜಾನಾಮಿ ರಣಾರ್ದಿತಸ್ತ್ವಂ" ಎಂದು ಹಿತವಾದವನ್ನು ಹೇಳಿ ಹಿಂದಕ್ಕೆ ಕಳುಹಿಸಿ

ವಾಗಿ, ಸೀತಾಲಾಭರೂಪವಾದ ನಮ್ಮ ಕಾರ್ಯವು ನೆರವೇರಿತು. ಇನ್ನು ನೀನು ಬೇಕಾದಹಾಗೆ ಇವನಿಗೆ ಸಂಸ್ಕಾರಗಳನ್ನು ನಡೆಸಬಹುದು. ಇವನು ನಿನಗೆ ಒಡಹುಟ್ಟಿದಹಾಗೆಯೇ ನನಗೂ ಒಡಹುಟ್ಟಿದವನಂತೆಯೇ ಹೊರತು ಬೇರೆಯಲ್ಲ. ಒಂದುವೇಳೆ ನೀನು ಇವನಲ್ಲಿ ಹಿಂದಿನ ದೋಷವನ್ನೆಣಿಸಿ ಸಂಸ್ಕಾರವನ್ನು ನಡೆಸದೆಹೋದಪಕ್ಷದಲ್ಲಿ, ನಾನೇಯಾದರೂ ಭ್ರಾತೃಭಾವವನ್ನಿಟ್ಟು ಅದನ್ನು ನಡೆಸದೆ ಬಿಡುವುದಕ್ಕಿಲ್ಲ" ಎಂದನು.

ಇಲ್ಲಿಗೆ ನೂರಹನ್ನೆರಡನೆಯ ಸರ್ಗವು.

ದೆನು. ಹೀಗೆ ಇವನ ವಿಷಯದಲ್ಲಿ ಹೇಗಾದರೂ ಹಿತವನ್ನುಂಟುಮಾಡಬೇಕೆಂದು ನಾನು ಸಂಕಲ್ಪಿಸಿದ್ದರೂ ಅವನು ಮಾತ್ರ "ದ್ವಿಧಾ ಭಜ್ಯೇಯಮಪ್ಯೇವಂ ನನಮೇಯಂ" ಎರಡು ತುಂಡಾಗಿ ಬೀಳುವಾಗಲೂ ಹಿಂದಕ್ಕೆ ಬೀಳುವೆನೇ ಹೊರತು ಹೀಗೆ ಮತ್ತೊಬ್ಬರಿಗೆ ತಲೆಬಗ್ಗಿಸುವಂತೆ ಮುಂದಕ್ಕೆ ಬೀಳುವವನಲ್ಲ'' ವೆಂದು ಸಾಯುವವರೆಗೂ ಛಲವನ್ನೇ ಹಿಡಿಯುತ್ತಿದ್ದುದರಿಂದ, ಇದುವರೆಗೂ ನನ್ನ ಉದ್ದೇಶವನ್ನು ನೆರವೇರಿಸುವುದಕ್ಕಿಲ್ಲದೆ ಹೋಯಿತು. ಈಗ ಅದನ್ನು ನಡೆಸುವುದಕ್ಕೆ ಸಮಯವು ದೊರಕಿತು. ಇವನು ಮೃತನಾಗಿರುವುದರಿಂದ ನಾನು ನಡೆಸತಕ್ಕ ಕಾರ್ಯಕ್ಕೆ ಅಡ್ಡಿಮಾಡಲಾರದ ಸ್ಥಿತಿಯಲ್ಲಿರುವನು. ಈ ಅವಸ್ಥೆಯಲ್ಲಿಯಾದರೂ ಇವನಿಗೆ ಸದ್ಗತಿಯನ್ನುಂಟುಮಾಡಬೇಕು. ಆದುದರಿಂದ ವಿಭೀಷಣಾ! (ಕ್ರಿಯತಾಮಸ್ಯ ಸಂಸ್ಕಾರಃ) ಇವನಿಗೆ ತಕ್ಕಹಾಗೆ ಸಂಸ್ಕಾರವನ್ನು ನಡೆಸು! (ಮಮಾಪ್ಯೇಷ ಯಥಾ ತವ) "ಏಷಮೇ ಯಥಾತದಾ ತವಾಪಿ" ಇವನು ನನಗೆ ಹೇಗೋ ನಿನಗೂ ಹಾಗೆಯೇ! ಎಷ್ಟುದೋಷಿಯಾಗಿದ್ದರೂ ನನ್ನಂತೆಯೇ ನೀನೂ ಇವನಿಗೆ ಹಿತವನ್ನೇ ಕೋರಬೇಕೆಂದು ಭಾವವು. ಅಥವಾ "ಏಷತವ ಯಥಾ ತಥಾ ಮಮಾಪಿ" ಇವನು ನಿನಗೆ ಹೇಗೋ ಹಾಗೆಯೇ ನನಗೂ, ಎಂದರೆ, ಇವನ ಸಂಸ್ಕಾರವು ನಿನಗೆ ಹೇಗೆ ಪ್ರಾಪ್ತವೋ ಹಾಗೆಯೇ ನನಗೂ, ಪ್ರಾಪ್ತವೆಂದು ಭಾವವು. ಒಂದುವೇಳೆ ಇವನಲ್ಲಿ ನೀನು ಮೊದಲಿನ ಕೋಪವನ್ನು ಮನಸ್ಸಿನಲ್ಲಿಟ್ಟುಕೊಂಡು, ಸಂಸ್ಕಾರಕಾರ್ಯವನ್ನು ನಡೆಸದಿದ್ದರೂ ನಾನೇಯಾದರೂ ನಡೆಸದೆ ಬಿಡುವವನಲ್ಲವೆಂದು ಭಾವವು. ಮೇಲಿನ ಮೂಲ ಶ್ಲೋಕದಲ್ಲಿ "ನಃ" ಎಂಬಲ್ಲಿರುವ ನಕಾರವು ಗಾಯತ್ರಿಯ ಇಪ್ಪತ್ತನೆಯ ವರ್ಣವಾದುದರಿಂದ, ರಾಮಾಯಣದಲ್ಲಿ ಈ ಶ್ಲೋಕದಿಂದ ಇಪ್ಪತ್ತನೆಯ ಗ್ರಂಥಸಹಸ್ರವು ಆರಂಭಿಸಲ್ಪಡುವುದಾಗಿ ಗ್ರಾಹ್ಯವು.

ರಾವಣಪತ್ನಿಯರು ಪತಿಮರಣಕ್ಕಾಗಿ ವಿಲಪಿಸಿದುದು.

ಮಹಾತ್ಮನಾದ ರಾಮನಿಂದ ರಾವಣನು ಹತನಾದನೆಂಬ ಸುದ್ದಿಯನ್ನು ಕೇಳಿ ರಾವಣಪತ್ನಿಯರಾದ ರಾಕ್ಷಸಸ್ತ್ರೀಯರೆಲ್ಲರೂ ದುಃಖದಿಂದ ಕೊರಗುತ್ತ, ಯಾರು ಯಾರು ಎಷ್ಟೆಷ್ಟು ವಿಧದಿಂದ ತಡೆದರೂ ನಿಲ್ಲದೆ, ತಲೆಯನ್ನು ಬಿಚ್ಚಿ ನೆಲದ ಮಣ್ಣಿನಲ್ಲಿ ಬಿದ್ದು ಹೊರಳಿ, ಕರುವನ್ನಗಲಿದ ಗೋವಂತೆ ದುಃಖದಿಂದ ಕೂಗಿಡುತ್ತ ಅಂತಃಪುರವನ್ನು ಬಿಟ್ಟು ಹೊರಟುಬಂದರು. ರಾವಣವಧವನ್ನು ಕೇಳಿದೊಡನೆ ಆ ರಾಕ್ಷಸಸ್ತ್ರೀಯರೆಲ್ಲರೂ ತಮ್ಮ ಬಂಧುಗಳಾದ ರಾಕ್ಷಸರೊಡಗೂಡಿ ಲಂಕೆಯ ಉತ್ತರ ದ್ವಾರದಿಂದ ಹೊರಟು ಭಯಂಕರವಾದ ಯುದ್ಧಭೂಮಿಯನ್ನು ಪ್ರವೇಶಿಸಿದರು. ಅಲ್ಲಿ ತಮ್ಮ ಪತಿಯು ಸತ್ತುಬಿದ್ದ ಸ್ಥಳವನ್ನು ಹುಡುಕುತ್ತ, ಒಮ್ಮೊಮ್ಮೆ "ಹೇ ರಾಜಪುತ್ರಾ" ಎಂದು ರಾಮನನ್ನೂ, ಮತ್ತೊಮ್ಮೆ "ಹಾ ನಾಥಾ" ಎಂದು ರಾವಣನನ್ನೂ ಹೆಸರುಹಿಡಿದು ಕೂಗುತ್ತ, ಅಲ್ಲಲ್ಲಿ ತಲೆಯಿಲ್ಲದ ಮುಂಡಗಳಿಂದಲೂ, ರಕ್ತದ ಕೆಸರಿನಿಂದಲೂ ಭಯಂಕರವಾದ ಯುದ್ಧ ಭೂಮಿಯನ್ನು ಸುತ್ತಿಬರುತ್ತಿದ್ದರು. ಪತಿಮರಣದಿಂದುಂಟಾದ ದುಃಖದಿಂದ ಒಬ್ಬೊಬ್ಬರ ಕಣ್ಣುಗಳಲ್ಲಿಯೂ ಧಾರೆಧಾರೆಯಾಗಿ ನೀರು ಸುರಿಯುತ್ತಿತ್ತು. ಒಬ್ಬೊಬ್ಬರೂ ಸಲಗವನ್ನು ಕಳೆದುಕೊಂಡ ಹೆಣ್ಣಾನೆಯಂತೆ ಆರ್ತಸ್ವರ ದಿಂದ ಕೂಗುತ್ತಿದ್ದರು. ಕೊನೆಗೆ ಆ ಸ್ತ್ರೀಯರೆಲ್ಲರೂ ಸೇರಿ ಬಂದು, ಮಹಾ ವೀರ್ಯಶಾಲಿಯಾಗಿಯೂ, ಮಹಾಕಾಯನಾಗಿಯೂ, ಮಹಾತೇಜಸ್ವಿಯಾ ಗಿಯೂ ಇದ್ದ ತಮ್ಮ ಪತಿಯು, ಕಾಡಿಗೆಯ ರಾಶಿಯಂತೆ ನೆಲದಮೇಲೆ ಬಿದ್ದಿ ರುವುದನ್ನು ನೋಡಿದರು. ಆ ಯುದ್ಧಭೂಮಿಯಲ್ಲಿ, ನೆಲದ ಧೂಳಿನಿಂದ ಮಲಿನವಾದ ಮೈಯುಳ್ಳವನಾಗಿ ಮಲಗಿದ್ದ ಪತಿಯನ್ನು ನೋಡಿದೊಡನೆ, ಅವರಿಗೆ ದುಃಖಾವೇಶದಿಂದ ಮೈಮೇಲೆ ಪ್ರಜ್ಞೆಯು ತಪ್ಪಿತು. ಕಡಿದು ಹಾಕಿದ ವನಲತೆಗಳಂತೆ ಅವರೆಲ್ಲರೂ ರಾವಣನ ಮೈಮೇಲೆ ಬಿದ್ದು ಗೋಳಿ ಡುವುದಕ್ಕೆ ತೊಡಗಿದರು. ಅವರಲ್ಲಿ ಒಬ್ಬಳು, ತನಗೆ ರಾವಣನಲ್ಲಿದ್ದ ಪ್ರೇಮಾ ತಿಶಯದಿಂದ ಆತನನ್ನು ಬಿಗಿಯಾಗಿ ಆಲಿಂಗಿಸಿಕೊಂಡು ರೋದಿಸತೊಡ ಗಿದಳು. ಬೇರೊಬ್ಬಳು ಭಕ್ತಿಯಿಂದ ಅವನ ಪಾದಗಳನ್ನು ಹಿಡಿದಳು. ಮತ್ತೊಬ್ಬಳು ಅವನ ಕಂಠವನ್ನಪ್ಪಿಕೊಂಡು ಅಳುವುದಕ್ಕೆ ತೊಡಗಿದಳು. ಇನ್ನೊಬ್ಬಳು ಉದ್ದಕ್ಕೆ ಚಾಚಿದ ಆ ರಾವಣನ ಭುಜಗಳೆರಡನ್ನೂ ಮೇಲ

ಕೈಕ್ತಿ ಅದನ್ನು ತನ್ನ ಮೈಗೆತ್ತಿಕೊಂಡು ನೆಲದಮೇಲೆ ಬಿದ್ದು ಹೊರಳು ತ್ತಿದ್ದಳು. ಒಬ್ಬ ತರುಣೀಮಣಿಯು ಸತ್ತು ಬಿದ್ದಿದ್ದ ಪತಿಯ ಮುಖವನ್ನು ನೋಡಿದೊಡನೆ ತಾನೂ ಪ್ರಜ್ಞೆ ತಪ್ಪಿ ಬಿದ್ದಳು. ಬೇರೊಬ್ಬ ರಮಣಿಯು ಅವನ ತಲೆಯನ್ನೆತ್ತಿ ತನ್ನ ತೊಡೆಯ ಮೇಲಿಟ್ಟುಕೊಂಡು, ಅವನ ಮುಖ ವನ್ನೇ ನೋಡಿ ನೋಡಿ ರೋದಿಸುತ್ತ, ತಾವರೆಹೂವಿನಲ್ಲಿ ಹಿಮವನ್ನು ಚೆಲ್ಲಿದಂತೆ ತನ್ನ ಕಣ್ಣೀರುಗಳಿಂದ ಅವನ ಮುಖವನ್ನು ನೆನೆಸುತ್ತಿದ್ದಳು. ಹೀಗೆ ಆ ಸ್ತ್ರೀಯರೆಲ್ಲರೂ ಯುದ್ಧರಂಗದಲ್ಲಿ ಹತನಾಗಿಬಿದ್ದ ತಮ್ಮ ಪತಿ ಯನ್ನು ನೋಡಿ ಮಹಾ ವ್ಯಸನದಿಂದ ರೋದಿಸಿದರು. ಒಬ್ಬೊಬ್ಬರೂ ತಮ್ಮ ದುಃಖವನ್ನು ತಡೆಯಲಾರದೆ ಪರವಶರಾಗಿ, ಅವನನ್ನು ಕುರಿತು “ಅಯ್ಯೋ! ಯಾವನಿಗೆ ಇಂದ್ರನೂ ಭಯಪಡುತ್ತಿದ್ದನೋ, ಯಾವನನ್ನು ನೋಡಿ ಯಮನೂ ನಡುಗುತ್ತಿದ್ದನೋ, ಯಾವನು ಕುಬೇರನನ್ನು ಜಯಿಸಿ ಪುಷ್ಪಕ ವನ್ನು ತನ್ನ ವಶಪಡಿಸಿಕೊಂಡನೋ, ಯಾವನ ಹೆಸರನ್ನು ಕೇಳಿದಮಾತ್ರಕ್ಕೆ ಗಂಧರ್ವರೂ, ಋಷಿಗಳೂ, ಮಹಾತ್ಮರಾದ ದೇವತೆಗಳೂ, ಭಯದಿಂದ ನಡು ಗುತ್ತಿದ್ದರೋ, ಅಂತಹ ಲೋಕಕ್ಕೆ ಶೂರನಾದ ಈ ರಾವಣನಿಗೂ ಯುದ್ಧ ದಲ್ಲಿ ಇತರರಿಂದ ಮರಣವೆಂದರೇನು ? ಆಹಾ! ಇದೇನಾಶ್ಚರ್ಯವು ! ಯಾ ವನು ಅಸುರರಿಂದಾಗಲಿ ಪನ್ನಗರಿಂದಾಗಲಿ ಎಷ್ಟುಮಾತ್ರವೂ ಭಯವೆಂಬ ಮಾತನ್ನೇ ಕಂಡರಿಯನೋ, ಅಂತಹ ಮಹಾಶೂರನಿಗೂ ಈಗ ಒಬ್ಬ ಮನುಷ್ಯಮಾತ್ರನಿಂದ ಈ ಭಯವುಂಟಾಯಿತೇ ? ಆಹಾ ! ಇದೇನು ? ಯಾವನನ್ನು ದೇವತೆಗಳಿಂದಾಗಲಿ, ದಾನವರಿಂದಾಗಲಿ, ರಾಕ್ಷಸರಿಂದಾಗಲಿ ವಧಿಸುವುದಕ್ಕೆ ಸಾಧ್ಯವಲ್ಲವೋ, ಅಂತಹ ರಾಕ್ಷಸಚಕ್ರವರ್ತಿಯು ಈಗ ಈ ಯುದ್ಧದಲ್ಲಿ ರಥಾದಿಗಳೊಂದೂ ಇಲ್ಲದೆ ಬರೀ ಕಾಲುನಡೆಯಿಂದ ಬಂದ ಒಬ್ಬ ಮನುಷ್ಯಮಾತ್ರನಿಂದ ಹತನಾಗಿ ಬಿದ್ದಿರುವನಲ್ಲಾ ! ದೇವಾಸುರ ಯಕ್ಷರಲ್ಲಿ ಯಾರೊಬ್ಬರಿಗೂ ಅವಧ್ಯನಾದ ರಾವಣನು ಈಗ ಕೇವಲ ಬಲ ಹೀನನಂತೆ ಒಬ್ಬ ಮನುಷ್ಯಮಾತ್ರನಿಂದ ವಧಿಸಲ್ಪಟ್ಟನಲ್ಲಾ ! ಎಂದು ಅನೇಕ ವಿಧವಾಗಿ ವಿಲಪಿಸಿದರು. ಆ ಸ್ತ್ರೀಯರೆಲ್ಲರೂ ಹೀಗೆ ತಮ್ಮ ಪತಿಯ ಪರಾಕ್ರಮಾದಿಗಳನ್ನು ಬಾರಿಬಾರಿಗೂ ಹೇಳಿಹೇಳಿ ರೋದಿಸುತ್ತ, ಮೇಲೆ ಮೇಲೆ ಹೆಚ್ಚಿಬರುವ ದುಃಖವನ್ನು ತಡೆಯಲಾರದೆ, ಅವನನ್ನು ಕುರಿತು “ನಾಥಾ ! ನೀನು ನಿನ್ನ ಹಿತೈಷಿಗಳಾದ ಮಿತ್ರರಮಾತನ್ನೂ ಗಮನಿಸದೆ,

ಅವರು ಎಷ್ಟೆಷ್ಟು ವಿಧದಿಂದ ತಡೆದರೂ ಕೇಳದೆ ಆ ಸೀತೆಯನ್ನು ಕದ್ದು ತಂದುದು ನಿನ್ನ ಮರಣಕ್ಕಾಗಿ ನೀನೇ ಮೃತ್ಯುದೇವತೆಯನ್ನು ಕರೆದಂತಾಯಿತು. ಅನೇಕ ರಾಕ್ಷಸರು ಹತರಾದರು. ಈಗ ನಾವೆಲ್ಲರೂ, ಇನ್ನೂ ಅನೇಕ ರಾಕ್ಷಸರೂ ನಿನ್ನೊಡನೆ ಏಕಕಾಲದಲ್ಲಿ ಸಾಯುವಹೊತ್ತು ಬಂದಿತು. ನಿನ್ನಲ್ಲಿ ನಿಜವಾದ ಪ್ರೀತಿಯುಳ್ಳ ತಮ್ಮನಾದ ವಿಭೀಷಣನು ಎಷ್ಟೋ ವಿಧದಿಂದ ನಿನಗೆ ಹಿತವನ್ನೇ ಬೋಧಿಸುತ್ತಿದ್ದರೂ, ನೀನು ಅವನ ಮಾತನ್ನೂ ಕೇಳದೆ, ಅಜ್ಞಾನವಶದಿಂದ ಹಿಂದುಮುಂದುನೋಡದೆ, ಅವನನ್ನು ಪರುಷವಾಕ್ಯಗಳಿಂದ ಪರಿಭವಿಸಿದೆ! ಇವೆಲ್ಲವೂ ನೀನಾಗಿ ನಿನ್ನ ಮರಣವನ್ನು ಕೋರಿ ನಡೆಸಿದ ಕಾರ್ಯವೇ ಹೊರತು ಬೇರೆಯಲ್ಲ. ಕೊನೆಗಾದರೂ ನೀನು ಮಿಥಿಲರಾಜಪುತ್ರಿಯಾದ ಆ ಸೀತೆಯನ್ನು ರಾಮನಿಗೆ ಹಿಂತಿರುಗಿಸಿದ್ದಪಕ್ಷದಲ್ಲಿ, ನಮ್ಮೆಲ್ಲರಿಗೂ ಮೂಲಹಾನಿಕರವಾದ ಇಂತಹ ಮಹಾಘೋರವ್ಯಸನವು ಪ್ರಾಪ್ತವಾಗುತ್ತಿರಲಿಲ್ಲ! ನಿನ್ನ ತಮ್ಮನಾದ ವಿಭೀಷಣನ ಕೋರಿಕೆಯನ್ನೂ ನಡೆಸಿದಂತಾಗುತ್ತಿತ್ತು! ಶ್ರೀರಾಮನೂ ನಮ್ಮ ವಂಶಕ್ಕೆ ಮಿತ್ರನಾಗುತ್ತಿದ್ದನು! ನಮ್ಮೆಲ್ಲರಿಗೂ ಹೀಗೆ ವೈಧವ್ಯವೂ ಪ್ರಾಪ್ತವಾಗುತ್ತಿರಲಿಲ್ಲ! ಇವೆಲ್ಲವನ್ನೂ ನೀನು ಚಿಂತಿಸದೆ, ಕೇವಲ ಕ್ರೂರಸ್ವಭಾವದಿಂದ ಸೀತೆಯನ್ನು ಬಲಾತ್ಕರಿಸಿ ತಂದು ಸೆರೆಯಲ್ಲಿಟ್ಟುದರಿಂದಲ್ಲವೇ ಈ ಸಮಸ್ತ ರಾಕ್ಷಸರೂ, ನೀನೂ, ನಾವೂ ಈ ಮೂವರೂ ಏಕಕಾಲದಲ್ಲಿ ನಿರ್ಮೂಲವಾಗುವಂತಾಯಿತು! ರಾಕ್ಷಸೋತ್ತಮಾ! ಇವೆಲ್ಲವೂ ನೀನು ಸ್ವೇಚ್ಛೆಯಿಂದ ತಂದುಕೊಂಡಂತೆಯೂ ಹೇಳುವುದಕ್ಕಿಲ್ಲ! ಎಲ್ಲವೂ ದೈವಾಧೀನವು! ಮೊದಲು, ದೈವವು ಕೆಡಿಸಿದ ಮೇಲೆಯೇ ಶತ್ರುಗಳು ಕೆಡಿಸಬಲ್ಲರು! ವಾನರರಿಗೂ, ರಾಕ್ಷಸರಿಗೂ, ನಿನಗೂ, ಈ ಮಹಾಯುದ್ಧದಲ್ಲಿ ಹೀಗೆ ದೊಡ್ಡ ವಿನಾಶವು ದೈವಸಂಕಲ್ಪದಿಂದ ಬಂದುದೇ ಹೊರತು ಇದಕ್ಕೆ ಬೇರೆ ಕಾರಣವಿಲ್ಲ. ದೈವಗತಿಯಿಂದ ನಡೆಯತಕ್ಕ ವ್ಯಾಪಾರವನ್ನು, ಅರ್ಥಬಲದಿಂದಾಗಲಿ, ಇಚ್ಛೆಯಿಂದಾಗಲಿ, ಪರಾಕ್ರಮದಿಂದಾಗಲಿ, ಆಜ್ಞೆಯಿಂದಾಗಲಿ, ಎಷ್ಟುಮಾತ್ರವೂ ತಪ್ಪಿಸುವುದಕ್ಕೆ ಸಾಧ್ಯವಲ್ಲ! ಇದಕ್ಕಾಗಿ ಯಾರೇನು ಮಾಡಬಲ್ಲರು!" ಎಂದು ಬಹಳವಾಗಿ ವಿಲಪಿಸುತ್ತಿದ್ದರು. ಹೀಗೆ ರಾವಣಭಾರ್ಯೆಯರೆಲ್ಲರೂ ದುಃಖಾರ್ತ

ರಾಗಿ ದೈನ್ಯದಿಂದ ಕಣ್ಣೀರುಬಿಡುತ್ತ, ಕುರರಪಕ್ಷಿಗಳಂತೆ ಆರ್ತಸ್ವರದಿಂದ ರೋದಿಸಿದರು.

ಇಲ್ಲಿಗೆ ನೂರಹದಿಮೂರನೆಯ ಸರ್ಗವು.

ಮಂಡೋದರಿಯ ವಿಲಾಪವು. ವಿಭೀಷಣನು ರಾಮಾಜ್ಞೆಯಿಂದ ರಾವಣನಿಗೆ ಅಪರ ಸಂಸ್ಕಾರಗಳನ್ನು ನಡೆಸಿದುದು.

ಹೀಗೆ ರಾಕ್ಷಸಸ್ತ್ರೀಯರೆಲ್ಲರೂ ಪತಿಮರಣಕ್ಕಾಗಿ ದುಃಖಿಸುತ್ತಿರುವಾಗ, ಅವರಲ್ಲಿ ರಾವಣನಿಗೆ ವಿಶೇಷ ಪ್ರಿಯತಮಳಾಗಿಯೂ, ಅವನ ಪಟ್ಟದ ರಾಣಿಯಾಗಿಯೂ ಆದ ಮಂಡೋದರಿಯು, ದೈನ್ಯದಿಂದ ಮುಂದೆ ಬಂದು ತನ್ನ ಪತಿಯಾದ ದಶಗ್ರೀವನು ಹತನಾಗಿ ಬಿದ್ದಿರುವುದನ್ನು ನೋಡಿ, ಅವಳೂ ದೈನ್ಯದಿಂದ ವಿಲಪಿಸತೊಡಗಿದಳು. "ಹಾ ಮಹಾಭಾಗಾ! ಕುಬೇರಾನುಜಾ! ನೀನು ಕೋಪಗೊಂಡಾಗ ನಿನ್ನಮುಂದೆ ನಿಲ್ಲುವುದಕ್ಕೆ ದೇವೇಂದ್ರನೂ ಹೆದರುತ್ತಿದ್ದನಲ್ಲವೆ! ಮಹಾಮಹಿಮೆಯುಳ್ಳ ಋಷಿಗಳೂ ಬ್ರಾಹ್ಮಣರೂ ಯಶಸ್ವಿಗಳಾದ ಗಂಧರ್ವರೂ ನಿನಗಾಗಿ ಭಯಪಡುತ್ತಿದ್ದರು. ನಿನ್ನ ಭಯದಿಂದ ಚಾರಣರೂ ಕೂಡ ನಾನಾ ದಿಕ್ಕುಗಳಿಗೆ ಪಲಾಯನಮಾಡಿದರು! ಅಂತಹ ವೀರಾಗ್ರಣಿಯಾದ ನೀನು ಕೇವಲ ಮನುಷ್ಯಮಾತ್ರನಾದ ರಾಮನಿಂದ ಯುದ್ಧದಲ್ಲಿ ಸೋಲಿಸಲ್ಪಟ್ಟೆಯಾ ? ರಾಜೇಂದ್ರಾ ! ಇದೇನು ? ಈ ಸ್ಥಿತಿಯಲ್ಲಿಯೂ ನೀನು ನಾಚಿಕೆಯಿಲ್ಲದೆ ಸುಮ್ಮನೆ ಮಲಗಿರುವುದೆಂದರೇನು ? ತ್ರೈಲೋಕ್ಯವನ್ನೂ ವಶಪಡಿಸಿಕೊಂಡು ಮಹಾಭಾಗ್ಯದಿಂದಲೂ, ಮೇಲೆನಿಸಿ, ಎಂತವರಿಗೂ ಸಹಿಸಲಸಾಧ್ಯವಾದ ಬಲವುಳ್ಳ ನಿನ್ನನ್ನು ಕೇವಲ ಮನುಷ್ಯನೊಬ್ಬನು—ಅವರಲ್ಲಿಯೂ ಕಾಡುಕಾಡಾಗಿ ತಿರುಗುತ್ತಿದ್ದವನು—ಯುದ್ಧದಲ್ಲಿ ಕೊಂದನೆಂದರೆ ಇದಕ್ಕಿಂತಲೂ ಇನ್ನು ಆಶ್ಚರ್ಯವೇನುಂಟು? ಇಷ್ಟುಮಾತ್ರವಲ್ಲ ! ಮನುಷ್ಯರಿಂದ ಪ್ರವೇಶಿಸುವುದಕ್ಕೂ ಸಾಧ್ಯವಿಲ್ಲದ ಈ ಪ್ರದೇಶದಲ್ಲಿ, ಕಾಮರೂಪಿಯಾಗಿ ಸಂಚರಿಸತಕ್ಕ ನಿನ್ನನ್ನು ಮನುಷ್ಯಮಾತ್ರನು ಯುದ್ಧದಲ್ಲಿ ಕೊಂದನೆಂದರೆ, ಎಷ್ಟುಮಾತ್ರವೂ ಒಪ್ಪ

ತಕ್ಕುದಲ್ಲ! ಸಮಸ್ತ ಯುದ್ಧೋಪಕರಣಗಳಿಂದಲೂ ಪೂರ್ಣನಾದ ನಿನ್ನನ್ನು ಮನುಷ್ಯನೊಬ್ಬನು ಯುದ್ಧಾಗ್ರದಲ್ಲಿ ನಿಗ್ರಹಿಸಿದನೆಂದರೆ ನನಗೆ ಎಷ್ಟುಮಾತ್ರವೂ ಅದರಲ್ಲಿ ನಂಬಿಕೆಯಿಲ್ಲ. ಇದು ಮನುಷ್ಯಮಾತ್ರರಿಂದ ನಡೆಯತಕ್ಕ ಕಾರ್ಯವಾಗಿಯೂ ತೋರಲಿಲ್ಲ! ಹಿಂದೆ ಜನಸ್ಥಾನದಲ್ಲಿ, ಇದೇ ರಾಮನು ಅನೇಕ ರಾಕ್ಷಸಸೈನ್ಯದೊಡನೆ ಸೇರಿಸಿ ನಿನ್ನ ತಮ್ಮನಾದ ಖರನನ್ನು ಕೊಂದಾಗಲೇ ಆತನು ಸಾಮಾನ್ಯ ಮನುಷ್ಯನಲ್ಲವೆಂಬುದು ಸ್ಪಷ್ಟವಾಯಿತು. ಇದರಮೇಲೆ ದೇವತೆಗಳಿಗೂ ಪ್ರವೇಶಿಸುವುದಕ್ಕೆ ಸಾಧ್ಯವಲ್ಲದ ಈ ಲಂಕೆಯನ್ನು, ಹನುಮಂತನೆಂಬ ಕಾಡುಕಪಿಯೊಂದು ತನ್ನ ವೀರ್ಯದಿಂದ ಪ್ರವೇಶಿಸಿಬಂದಾಗ, ನಮಗೆ ರಾಮನ ವಿಷಯದಲ್ಲಿ ಸ್ವಲ್ಪ ಭಯವೂ ತಲೆದೋರಿತು. ಅದಕ್ಕೂಮೇಲೆ ಭಯಂಕರಾಕಾರವುಳ್ಳ ಅನೇಕ ವಾನರರೂ ಸೇರಿ, ಈ ಮಹಾಸಮುದ್ರಕ್ಕೆ ಸೇತುವನ್ನು ಕಟ್ಟಿದರೆಂಬ ಸುದ್ದಿಯನ್ನು ಕೇಳಿದಮೇಲೆ, ರಾಮನು ಮನುಷ್ಯನಲ್ಲವೆಂದೇ ನನ್ನ ಮನಸ್ಸಿನಲ್ಲಿ ಚೆನ್ನಾಗಿ ನಿರ್ಧರಿಸಿಬಿಟ್ಟೆನು! ಆದುದರಿಂದ, ಮುಖ್ಯವಾಗಿ, ಯಮನೇ ನಿನ್ನನ್ನು ಕೊಲ್ಲುವುದಕ್ಕಾಗಿ, ಅಪರಿಮೇಯವಾದ ಮಹಿಮೆಯುಳ್ಳ ಸೀತಾರೂಪವಾದ ಒಂದು ಮಾಯೆಯನ್ನು ನಿರ್ಮಿಸಿ ತಾನೂ ರಾಮರೂಪವನ್ನು ಧರಿಸಿ, ಈ ಲಂಕೆಗೆ ಬಂದಿರಬೇಕು! ಹಾಗಿಲ್ಲವೇ ಒಂದುವೇಳೆ ಇಂದ್ರನೇ ನಿನ್ನಲ್ಲಿ ಹಗೆ ತೀರಿಸಿಕೊಳ್ಳುವುದಕ್ಕಾಗಿ ಈ ವ್ಯಾಜದಿಂದ ಬಂದಿರಬೇಕಲ್ಲದೆ ಬೇರೆಯಲ್ಲ! ಅಥವಾ ಹಾಗೂ ನಂಬತಕ್ಕುದಲ್ಲ! ಯುದ್ಧದಲ್ಲಿ ನಿನ್ನನ್ನು ಕಣ್ಣೆತ್ತಿ ನೋಡುವುದಕ್ಕಾದರೂ ಆ ಇಂದ್ರನಿಗೆ ಧೈರ್ಯವೆಲ್ಲಿಯದು! ಇವೆಲ್ಲವೂ ಕೇವಲ ಭ್ರಮವು! ಮುಖ್ಯವಾದ ತತ್ತ್ವವೇನೆಂದರೆ; [1]ಅನವರತವೂ

---

[1] ಇಲ್ಲಿ "ವ್ಯಕ್ತಮೇಷ ಮಹಾಯೋಗೀ ಪರಮಾತ್ಮಾ ಸನಾತನಃ । ಅನಾದಿಮಧ್ಯನಿಧನೋ ಮಹತಃ ಪರಮೋ ಮಹಾನ್ ॥ ತಮಸಃ ಪರಮೋ ಧಾತಾ ಶಂಖಚಕ್ರಗದಾಧರಃ । ಶ್ರೀವತ್ಸವಕ್ಷಾ ನಿತ್ಯಶ್ರೀರಜಯ್ಯಶ್ಶಾಶ್ವತೋಧ್ರುವಃ ॥" ಎಂದು ಮೂಲವು. ವಿಶೇಷಾರ್ಥವು:—ವಿಷ್ಣುವೆಂದೂ, ಭಗವಂತನಾದ ವಾಲ್ಮೀಕಿಯು ಸ್ತ್ರೀಮುಖದಿಂದ ವ್ಯವಸ್ಥಾಪಿಸುವರು. (ವ್ಯಕ್ತಮೇಷಃ) ಸ್ಪಷ್ಟವಾಗಿ ಈತನು ಎಂದರೆ ಪರಿಶೇಷದಿಂದಲೂ, ಪ್ರಮಾಣದಿಂದಲೂ ನಿಶ್ಚಯಿಸಲ್ಪಟ್ಟ ರಾವಣಹಂತೃವಾದ ಈತನು (ಮಹಾಯೋಗೀ) ಲೋಕರಕ್ಷಣೋಪಾಯವನ್ನು ಕುರಿತು ದೊಡ್ಡ ಚಿಂತೆಯುಳ್ಳವನು. (ಪರಮಾತ್ಮಾ) ಸಮಸ್ತ ಜೀವಾತ್ಮಗಳಿಗಿಂತಲೂ ಮೇಲೆನಿಸಿದವನು.

ಲೋಕರಕ್ಷಣೋಪಾಯಚಿಂತೆಯೆಂಬ ಮಹಾತಪಸ್ಸಿನಲ್ಲಿ ನಿರತನಾಗಿ,

ಆ ಪರತ್ವವೆಂಬುದು ಹೇಗೆಂದರೆ:— "ಅಪಕ್ಷಯ ವಿನಾಶಾಭ್ಯಾಂ ಪರಿಣಾಮರ್ದ್ಧಿ ಜನ್ಮಭಿ: । ವರ್ಜಿತಶ್ಶಕ್ಯತೇ ವಸ್ತುಂ ಯಸ್ಸದಾಸ್ತೀತಿ ಕೇವಲಮ್" ಎಂಬ ವಿಷ್ಣುಪುರಾಣೋಕ್ತಿಯಂತೆ, ಷಡ್ಭಾವವಿಕಾರ ಶೂನ್ಯತ್ವವೇ ಪರತ್ವವು. ಇಲ್ಲಿ ಸನಾತನ: ಅನಾದಿಮಧ್ಯನಿಧನ:ಧ್ರುವ: ಎಂಬೀ ವಿಶೇಷಣಗಳಿಂದ "ಜಾಯತೇ, ಅಸ್ತಿ, ವರ್ಧತೇ, ಪರಿಣಮತಿ, ಅಪಕ್ಷೀಯತೇ, ವಿನಶ್ಯತಿ" ಎಂಬ ಆರು ಬಗೆಯ ಭಾವ ವಿಕಾರಗಳಿಂದಲೂ ಶೂನ್ಯವೆಂಬುದನ್ನು ಸೂಚಿತವಾಗುವುವು. ಈ ಭಾವವಿಕಾರ ಗಳಿಲ್ಲದುದರಿಂದಲೇ ಜೀವಾತ್ಮನಿಗಿಂತಲೂ ಪರತ್ವವೇರ್ಪಡುವುದೆಂದು ಗ್ರಾಹ್ಯವು. ಹೀಗೆ ಸ್ವಭಾವದಿಂದ ಮಾತ್ರವಲ್ಲದೆ ಅಧಿಕಾರದಿಂದಲೂ ಪರತ್ವವನ್ನು ಹೇಳು ವರು. (ಮಮತ: ಪರಮೋ,ಮಹಾ) ಇಂದ್ರಾದಿಗಳಿಗಿಂತಲೂ ಮೇಲೆನಿಸಿದ ಬ್ರಹ್ಮಾದಿಗಳಿಗಿಂತಲೂ ಮಹನೀಯನು. ಇದರಮೇಲೆ ಸ್ಥಾನವಿಶೇಷದಿಂದಲೂ ಇವ ನಿಗೆ ಪರತ್ವವುಂಟು. ಹೇಗೆಂದರೆ (ತಮಸ: ಪರಮ:) "ಆದಿತ್ಯವರ್ಣಂ ತಮಸ: ಪರಸ್ತಾತ್" ಆದಿತ್ಯವರ್ಣಂ ತಮಸಸ್ತು ಪಾರೇ" ಎಂಬ ಶ್ರುತಿವಾಕ್ಯಗಳಂತೆ ಪ್ರಾಕೃತಮಂಡಲದಿಂದಾಚೆಗೆ ಅಪ್ರಾಕೃತಮಂಡಲವೆನಿಸಿದ ಪರಮಪದದಲ್ಲಿ ನೆಲೆ ಗೊಂಡವನು. ಆದರೆ "ಸರ್ವವ್ಯಾಪಕನೆನಿಸಿದವನು ವೈಕುಂಠದಲ್ಲಿ ಮಾತ್ರವೇ ಇರುವ ನೆಂಬುದು ಹೇಗೆ?" ಎಂದರೆ ವಿಗ್ರಹದ್ವಾರಾ ವೈಕುಂಠದಲ್ಲಿದ್ದು ಸ್ವರೂಪದಿಂದ ಸರ್ವಗತನೆಂದು ಹೇಳುವರು. (ಶಂಖಚಕ್ರಗದಾಧರ:) "ಪಾತು । ಪ್ರಣತ ರಕ್ಷಾ ಯಾಂ ವಿಲಂಬಮಸಹನ್ನಿವ । ಸದಾ ಪಂಚಾಯುಧೀಶ ಬಿಭ್ರತ" ಎಂಬಂತೆ ಆಶ್ರಿತರಕ್ಷಣಾರ್ಥವಾಗಿ ಸದಾ ದಿವ್ಯಾಯುಧಗಳನ್ನು ಧರಿಸಿದವನು. ಈ ಆಯುಧ ಧಾರಣಕ್ಕೆ ಪ್ರಯೋಜನವೇನೆಂದರೆ (ಧಾತಾ) ಪೋಷಕನು. (ಶ್ರೀವತ್ಸವಕ್ಷಾ:) ರಕ್ತ ವರ್ಣವಾಗಿ ಮತ್ಸ್ಯಾಕಾರದಿಂದಿರುವ ಮಚ್ಚೆಯನು. ಎದೆಯಬಲಭಾಗದಲ್ಲಿ ಧರಿಸಿದ ವನು. ಇನ್ನು ಜಗದ ರಕ್ಷಣೋಪಯುಕ್ತವಾದ ಪುರುಷಕಾರ ಸಂಬಂಧವನ್ನು ತಿಳಿ ಸುವುದಕ್ಕಾಗಿ (ನಿತ್ಯಶ್ರೀ:) "ವಿಷ್ಣೋ: ಶ್ರೀರನಪಾಯಿನೀ" ಎಂಬಂತೆ ನಿತ್ಯಾನ ಪಾಯಿನಿಯಾದ ಲಕ್ಷ್ಮಿಯುಳ್ಳವನು. ಇದರಿಂದಲೇ (ಅಜಯ್ಯ:) ಇತರರಿಂದ ಜಯಿ ಸಲಶಕ್ಯನಾದವನು. ಇಂತಹ ಪರಮಾತ್ಮನೇ ಈ ರಾಮನೆಂಬುದು (ವ್ಯಕ್ತಂ) ನಿಶ್ಚಿ ತವು. (ಗೋವಿಂದರಾಜರು).

ಅಥವಾ (ಮಹಾಯೋಗೀ) "ಯೋಗಸ್ಸನ್ನಹನೋಪಾಯಧ್ಯಾನ ಸಂಗತಿ ಯುಕ್ತಿಷು" ಎಂಬಂತೆ ಯೋಗವೆಂದರೆ ಸನ್ನಾಹವು. ಮಹಾಯೋಗವುಳ್ಳವ ನೆಂದರೆ ಆಶ್ರಿತ ರಕ್ಷಣಸನ್ನಾಹವುಳ್ಳವನು. ಅಥವಾ (ಮಹಾಯೋಗೀ) ಯೋಗ ವೆಂದರೆ ಉಪಾಯವೆಂದರ್ಥವು. ವಿವಿಧಜಗನ್ನಿರ್ಮಾಣೋಪಾಯ ಚತುರನೆನಿಸಿದವನು.

ಅಥವಾ ಯೋಗವೆಂದರೆ ಧ್ಯಾನಜನ್ಯವಾದ ಸಂಕಲ್ಪವು. ಬಹುಸ್ಯಾಂ | ಪ್ರಜಾಯೇಯೇತಿ" ಎಂಬಂತೆ ಮೊದಲು ತಾನೊಬ್ಬನಾಗಿಯೇ ಇದ್ದು ಆಮೇಲೆ ತಾನೇ ಬಹುತ್ವವನ್ನು ಹೊಂದಬೇಕೆಂದು ಸಂಕಲ್ಪಿಸಿದವನು. ಯೋಗವೆಂದರೆ ಸಂಗತಿಯೆಂಬರ್ಥದಲ್ಲಿ ಸರ್ವವ್ಯಾಪನ ಶೀಲನೆಂದರ್ಥವು. ಅಥವಾ ಯೋಗವೆಂದರೆ ಯುಕ್ತಿಯು. ಆಶ್ರಿತರಕ್ಷಣಾದಿಗಳಲ್ಲಿ ಇತರರಿಂದ (ಪೂರ್ವಪಕ್ಷಿಗಳಿಂದ) ಚಲನಹೊಂದಿಸಲ ಶಕ್ಯವಾದ ಯುಕ್ತಿಯುಳ್ಳವನೆಂದರ್ಥವು. (ಪರಮಾತ್ಮಾ) ಚೇತನಾ ಚೇತನಗಳನ್ನು ಶರೀರವಾಗಿಹೊಂದಿ, ಅವುಗಳೊಳಗೆಲ್ಲಾ ಆತ್ಮರೂಪದಿಂದಿರುವವನು. ಹೀಗೆ ಸಮಸ್ತ ಶರೀರಗಳೊಡನೆ ಸಂಬಂಧಿಸಿದ್ದರೂ, ತದ್ದೋಷಸಂಬಂಧವಿಲ್ಲದವನೆಂಬುದಕ್ಕಾಗಿ (ಸನಾತನಃ) ಎಂಬ ಪದವು. (ಅನಾದಿಮಧ್ಯನಿಧನ:) ಆದಿಮಧ್ಯಾಂತರಹಿತನು. (ಮಹತ: ಪರಮೋ ಮಹಾನ್) "ಅಣೋರಣೀಯಾನ್ ಮಹತೋ ಮಹೀಯಾನ್" ಎಂಬಂತೆ ಪರಮಮಹತ್ವವುಳ್ಳವನು. (ತಮಸ: ಪರಮ:) "ಅಕ್ಷರಾತ್ಪರತ: ಪರ:" "ಯಸ್ಮಾತ್ ಕ್ಷರಮತೀತೋಽಹಮಕ್ಷರಾದಪಿಚೋತ್ತಮ:'' ಎಂಬ ಶ್ರುತಿಸ್ಮೃತಿ ವಾಕ್ಯಗಳಂತೆ ಕ್ಷರಾಕ್ಷರಗಳಿಗಿಂತಲೂ ಪರನು. (ಧಾತಾ) ''ಸೂರ್ಯಾಚಂದ್ರಮಸೌ ಧಾತಾ ಯಥಾಪೂರ್ವಮಕಲ್ಪಯತ'' ಎಂಬ ಶ್ರುತಿಯಂತೆ ಸಕಲಜಗತ್ತಿಗೂ ನಿರ್ಮಾತನು ಅಥವಾ (ದಾತಾ) ಧರಿಸತಕ್ಕವನು. ಏತಸ್ಯವಾ ಅಕ್ಷರಸ್ಯ ಪ್ರಶಾಸನೇ" ಎಂಬ ಶ್ರುತಿಯಂತೆ ಪ್ರಶಾಸನದಿಂದ ತನಗಧೀನವಾಗಿ ಮಾಡಿದ ಸಮಸ್ತ ಲೋಕಗಳುಳ್ಳವನು. ಹೀಗೆ ಕಾರಣಸ್ವರೂಪವನ್ನೂ, ತದುಪಯುಕ್ತಗಳಾದ ಗುಣಗಳನ್ನೂ ತಿಳಿಸಿ, ಇನ್ನು ದಿವ್ಯಮಂಗಳವಿಗ್ರಹಸ್ವರೂಪವನ್ನು ಹೇಳುವರು. (ಶಂಖಚಕ್ರಗದಾಧರ:) ಆಶ್ರಿತವಿರೋಧಿಗಳ ನಿರಸನಕ್ಕಾಗಿ ದಿವ್ಯಾಯುಧಗಳನ್ನು ಧರಿಸಿದವನು. (ಶ್ರೀವತ್ಸವಕ್ಷಾ) ಶ್ರೀವತ್ಸಕೌಸ್ತುಭಾದಿಗಳು ನಿತ್ಯವಾದುದರಿಂದ, ರುದ್ರಾದಿಗಳಿಗಿಂತಲೂ ವೈಲಕ್ಷಣ್ಯವು ಸೂಚಿತವು. (ನಿತ್ಯಶ್ರೀ:) ನಿತ್ಯಾನಪಾಯಿನಿಯಾಗಿ ತನ್ನೊಡನೆ ಯಾವಾಗಲೂ ಎಡೆಬಿಡದೆ ಸೇರಿರುವ ಲಕ್ಷ್ಮಿಯುಳ್ಳವನು. ಸ್ವರೂಪನಿತ್ಯತ್ವವು ಸಾಧಾರಣವಾಗಿಯೇ ಪ್ರಾಪ್ತವಾಗುವುದರಿಂದ, ಇಲ್ಲಿ ವಿಗ್ರಹನಿತ್ಯತ್ವವು ಹೇಳಲ್ಪಡುವುದು. ಇದರಿಂದ ಶ್ರೀವಿಶಿಷ್ಟದಿವ್ಯವಿಗ್ರಹವು ನಿತ್ಯವೆಂದೇ ಗ್ರಾಹ್ಯವು. ಈ ಶ್ರೀ ಸಂಬಂಧದಿಂದಲೇ ''ಅಪ್ರಮೇಯಂಹಿ ತತ್ತೇಜೋಯಸ್ಯಸಾಜನಕಾತ್ಮಜಾ" ಎಂದು ಹೇಳಲ್ಪಟ್ಟಿರುವಂತೆ (ಅಜಯ್ಯ) ಅವಾರ್ಯತೇಜಸ್ಸುಳ್ಳವನು. (ಶಾಶ್ವತ:) ಮೂರುಬಗೆಯ ಪರಿಛೇದಗಳಿಲ್ಲದವನು ಎಂದರೆ ವಿಕಾರಶೂನ್ಯನು. (ಧ್ರುವ:) ಕಂಪಿಸಲಶಕ್ಯನು. ಸಹಸ್ರನಾಮಪಾಠದಲ್ಲಿ ''ಅನಾದಿನಿಧನೋ ಧಾತಾ'' ಎಂದೂ ಇರುವುದರಿಂದ, ಧಾತನೆಂಬುದೂ ನಿತ್ಯಶ್ರೀಯೆಂಬುದೂ ರೂಢಿಯಿಂದಲೇ ಸಲ್ಲುವುದೆಂದು ಗ್ರಾಹ್ಯವು. (ತನಿಶ್ಲೋಕಿ).

ರಿಂದಲೂ, ಕ್ಷಯ ಪರಿಣಾಮಶೂನ್ಯನಾದುದರಿಂದಲೂ, ಸರ್ವಜೀವಾತ್ಮಗಳಿಂದಲೂ ಮೇಲೆಷಡ್ಭಾವ ವಿಕಾರಶೂನ್ಯನಾದ ಪರಮಾತ್ಮನೆನಿಸಿಕೊಂಡು, ಇಂದ್ರಾದಿ ದೇವತೆಗಳಲ್ಲಿ ಮೇಲೆನಿಸಿಕೊಂಡ ಬ್ರಹ್ಮಾದಿಗಳಿಗಿಂತಲೂ ಉತ್ಕೃಷ್ಟನಾಗಿ ಪ್ರಾಕೃತ ಮಂಡಲದಿಂದಾಚೆಗೆ ಅಪ್ರಾಕೃತವಾದ ವೈಕುಂಠದಲ್ಲಿ ದಿವ್ಯ ವಿಗ್ರಹದಿಂದ ಬೆಳಗುವವನಾಗಿ, ಆಶ್ರಿತರಕ್ಷಣಾರ್ಥವಾಗಿ ಅನವರತವೂ ಶಂಖ ಚಕ್ರಗದಾಯುಧಗಳನ್ನು ಧರಿಸಿದವನಾಗಿ, ಶ್ರೀವತ್ಸವೆಂಬ ಮತ್ಸ್ಯಾಕಾರವಾದ ಮಚ್ಚೆಯುಳ್ಳವನಾಗಿ, ನಿತ್ಯಾನಪಾಯಿನಿಯಾದ ಮಹಾಲಕ್ಷ್ಮಿಯೊಡಗೂಡಿದವನಾಗಿ ಎಂತವರಿಗೂ ದುರ್ಜಯನೆನಿಸಿದ ಶ್ರೀಮನ್ನಾರಾಯಣನೇ ಈ ರೂಪದಿಂದ ಬಂದಿರುವನೆಂಬುದರಲ್ಲಿ ಸಂದೇಹವೇ ಇಲ್ಲ! ಇದು ನಿಜವು! ಸತ್ಯಪರಾಕ್ರಮನಾಗಿ, ಸರ್ವಲೋಕೇಶ್ವರನಾಗಿ, ಮಹಾ ತೇಜಸ್ಸಂಪನ್ನನಾಗಿರುವ ಆ ಮಹಾ ವಿಷ್ಣುವೇ, ಸರ್ವಲೋಕಗಳಿಗೂ ಹಿತವನ್ನುಂಟುಮಾಡಬೇಕೆಂಬ ಕೋರಿಕೆಯಿಂದ, ಹೀಗೆ ಮನುಷ್ಯರೂಪವನ್ನು ಹೊಂದಿ, ವಾನರರೂಪದಿಂದಿರುವ ಸಮಸ್ತ ದೇವತೆಗಳೊಡಗೂಡಿ ಬಂದು, ಲೋಕವಿರೋಧಿಯಾದ ನಿನ್ನನ್ನೂ, ನಿನಗೆ ಸೇರಿದ ಸಮಸ್ತ ರಾಕ್ಷಸಪರಿವಾರವನ್ನೂ ಕೊಂದಿರುವನೆಂಬುದು ಸ್ಪಷ್ಟವು! ನಾಥಾ! ನೀನು ಮೊದಲು ನಿನ್ನ ಸರ್ವೇಂದ್ರಿಯಗಳನ್ನೂ ತಲೆಯೆತ್ತದ ಹಾಗೆ ಅಡಗಿಸಿ ಮಹಾತಪಸ್ಸನ್ನು ಮಾಡಿ ಮೂರುಲೋಕವನ್ನೂ ಜಯಿಸಿಬಂದೆಯಷ್ಟೆ? ಆ ಇಂದ್ರಿಯಗಳೇ ಈಗ ಪೂರ್ವವೈರವನ್ನಿಟ್ಟು, ನಿನ್ನಲ್ಲಿ ಹಗೆತೀರಿಸಿ ಕೊಳ್ಳುವುದಕ್ಕಾಗಿ ನಿನ್ನನ್ನು ಕಾಮಪರವಶನನ್ನಾಗಿ ಮಾಡಿ ಕೆಡಿಸದಂತೆ; ಹಿಂದೆ ನಾನು ಮಾತುಮಾತಿಗೂ "ರಾಮನಲ್ಲಿ ದ್ವೇಷವನ್ನು ಬಿಟ್ಟು ಸಂಧಿಯನ್ನುಮಾಡು!" ಎಂದು ಎಷ್ಟೆಷ್ಟೋ ವಿಧದಿಂದ ನಿನಗೆ ಹಿತವನ್ನು ಹೇಳುತ್ತಿದ್ದರೂ ನೀನು ಕೇಳದೆ ಹೋದೆಯಲ್ಲಾ! ಅದರ ಫಲವು ಈಗ ನಿನ್ನ ಅನುಭವಕ್ಕೆ ಚೆನ್ನಾಗಿ ಬಂದಿತೇ? ರಾಕ್ಷಸ ರಾಜೇಂದ್ರ! ನೀನು ಸೀತೆಯ ವಿಷಯದಲ್ಲಿ ಹೀಗೇಕೆ ಅಕಸ್ಮಾತ್ತಾಗಿ ಆಶೆಯನ್ನು ಮಾಡಿದೆ? ಆ ರಮಣಿಯ ವಿಷಯದಲ್ಲಿ ನೀನು ಹೀಗೆ ಆಶೆಪಟ್ಟುದು ಕೇವಲ ಅಯುಕ್ತವು! ಇದರಿಂದ ನಿನ್ನ ಮಹಾಭಾಗ್ಯವೂ, ನಿನ್ನ ನಂಟರಿಷ್ಟರೂ, ನೀನೂ ಏಕಕಾಲದಲ್ಲಿ ನಾಶಹೊಂದುವುದು ಮಾತ್ರವೇ ಫಲಿಸಿತು. ಆಹಾ! ಅರುಂಧತಿಗಿಂತಲೂ ರೋಹಿಣಿಗಿಂತಲೂ ಪೂಜ್ಯತಮ

ಳಾಗಿರುವ ಆ ಸೀತಾದೇವಿಯನ್ನು ಸೆರೆಹಿಡಿದ ನಿನ್ನ ದುರ್ಬುದ್ಧಿಗಾಗಿ ನಾನು ಎಷ್ಟೆಷ್ಟು ಸಂಕಟಪಟ್ಟರೂ ತೀರದು! ಆ ಪತಿವ್ರತಾ ಶಿರೋಮಣಿಯಲ್ಲಿ ನೀನು ಬಹಳ ಅನುಚಿತಕಾರ್ಯವನ್ನು ನಡೆಸಿದೆ। ನಾಥಾ! ಆ ಸೀತೆಯನ್ನು ಕೇವಲ ಸಾಮಾನ್ಯ ಸ್ತ್ರೀಯೆಂದೆಣಿಸಿದೆಯಾ? ಆಕೆಯು ತಾಳ್ಮೆಯಲ್ಲಿ ಭೂದೇವಿಗೂ ಭೂದೇವಿಯೆನಿಸಿರುವಳು! ಸಂಪತ್ತಿನಲ್ಲಿ ಲಕ್ಷ್ಮಿಗೂ ಲಕ್ಷ್ಮಿಯೆನಿಸಿರುವಳು! ಪತಿಯಲ್ಲಿ ಪರಮವಾತ್ಸಲ್ಯವುಳ್ಳವಳು! ಸರ್ವಾಂಗಸುಂದರಿ! ಸಮಸ್ತಮಂಗಳಗಳಿಗೂ ಮುಖ್ಯಸ್ಥಾನಳಾಗಿರುವಳು! ಅಂತಹ ಸೀತಾದೇವಿಯು ನಿರ್ಜನವಾದ ಕಾಡಿನಲ್ಲಿರುವಾಗ, ನೀನು ಕಪಟದಿಂದ ಆಕೆಯನ್ನು ಬಲಾತ್ಕರಿಸಿ ತಂದೆಯಲ್ಲವೇ! ಇಷ್ಟಾದರೂ ಅವಳನ್ನು ಕೈವಶಪಡಿಸಿಕೊಳ್ಳಬೇಕೆಂಬ ನಿನ್ನ ಕೋರಿಕೆಯಾದರೂ ಈಡೇರಿತೇ? ಅದೂ ಇಲ್ಲ! ಕಾಂತಾ! ನಿನ್ನ ಸರ್ವಸ್ವಾಧೀನಳಾದ ನನ್ನನ್ನೂ ಹೀನವಾಗಿ ಭಾವಿಸಿ, ಆ ಪತಿವ್ರತಾಶಿರೋಮಣಿಯನ್ನು ಸೆರೆಹಿಡಿದು ಫಲವೇನಾಯಿತು? ಅವಳ ತಪಃಪ್ರಭಾವದಿಂದ ನೀನು ದಗ್ಧನಾದುದೊಂದು ಹೊರತು ಬೇರೆಯಲ್ಲ. ಆ ರಮಣೀಮಣಿಯನ್ನು ಸೆರೆಹಿಡಿಯುವುದಕ್ಕೆ ಕೈನೀಡಿದಾಗಲೇ ನೀನು ದಗ್ಧನಾಗಬೇಕಾಗಿದ್ದರೂ, ನಿನ್ನಲ್ಲಿ ಯಾವುದೋ ಒಂದು ಅಸಾಧಾರಣಮಾಹಾತ್ಮ್ಯವಿದ್ದುದರಿಂದಲೇ ಇಷ್ಟುದೂರದವರೆಗೆ ತಡೆದು ಬಂದಿತು! ಆ ನಿನ್ನ ಮಹತ್ವದಿಂದಲ್ಲವೇ ಇಂದ್ರಾಗ್ನಿಗಳೇ ಮೊದಲಾದ ದೇವತೆಗಳೆಲ್ಲರೂ ಭಯಪಡುತ್ತಿದ್ದರು! ಆದರೇನು? ಪಾಪಕರ್ಮವನ್ನು ಮಾಡಿದವನು, ಫಲಸಮಯವು ಬಂದಾಗ, ತಾನುಮಾಡಿದ ಪಾಪಕ್ಕೆ ತಕ್ಕಂತೆ ಘೋರವಾದ ಫಲವನ್ನು ಅನುಭವಿಸಿಯೇ ತೀರಬೇಕೆಂಬುದರಲ್ಲಿ ಸಂದೇಹವಿಲ್ಲ! ಸತ್ಕಾರ್ಯವನ್ನು ನಡೆಸಿದವನು ಉತ್ತಮಫಲವನ್ನೇ ಹೊಂದುವನು! ಪಾಪಿಗೆ ಪಾಪಫಲವೇ ಲಭಿಸುವುದು। ಇದಕ್ಕಾಗಿ ನಮಗೆ ಬೇರೆ ನಿದರ್ಶನವೇಕೆ? ನಿನ್ನ ತಮ್ಮನಾದ ವಿಭೀಷಣನು ಲೋಕನಾಥನಾದ ರಾಮನಲ್ಲಿ ಮರೆಹೊಕ್ಕು ಮೇಲಾದ ಸುಖವನ್ನು ಪಡೆದನು. ನೀನೋ ನಿನ್ನ ಪಾಪಕ್ಕೆ ಈ ಸ್ಥಿತಿಯನ್ನು ಹೊಂದಿದೆ! ಪ್ರಾಣನಾಥಾ! ಆ ಸೀತೆಗಿಂತಲೂ ರೂಪವತಿಯಾದ ಬೇರೆ ಎಷ್ಟೋಮಂದಿ ಸ್ತ್ರೀಯರು ನಿನ್ನ ವಶಲ್ಲಿದ್ದರೂ, ಕಾಮಪರವಶನಾದ ನಿನಗೆ ಅವರಲ್ಲಿ ಮನಸ್ಸು ತಿರುಗಲಿಲ್ಲ! ನಾಥಾ! ನಿನ್ನನ್ನು ಮೋಹಗೊಳಿಸುವಂತೆ, ಕುಲದಲ್ಲಿಯಾಗಲಿ, ರೂಪ

ದಲ್ಲಿಯಾಗಲಿ, ವಿದ್ಯಾಸಾಮರ್ಥ್ಯದಲ್ಲಿಯಾಗಲಿ, ಸೀತೆಯು ನನ್ನನ್ನು ಮೀರಿಸಿದವಳಲ್ಲ! ಕೊನೆಗೆ ನನಗೆ ಸಾಟಿಯೂ ಅಲ್ಲ! ಹಾಗಿದ್ದರೂ ಮೋಹಾಂಧನಾದ ನೀನು ಇದನ್ನು ತಿಳಿಯದೇ ಹೋದೆಯಲ್ಲಾ! ಹೇಗಿದ್ದರೂ ಲೋಕದಲ್ಲಿ ಯಾವ ಪ್ರಾಣಿಗಾದರೂ ನಿಮಿತ್ತವಿಲ್ಲದೆ ಮೃತ್ಯುವು ಸಂಭವಿಸದು. ನೀನು ಎಷ್ಟೋ ಪ್ರಯತ್ನಪಟ್ಟು ಬಹುದೂರದಿಂದ ಆ ಸ್ತ್ರೀಯನ್ನು ತಂದುದು ನಿನಗೆ ನೀನೇ ಪ್ರಯತ್ನಪಟ್ಟು ಮೃತ್ಯುವನ್ನು ತಂದುಕೊಂಡಂತಾಯಿತು. ಆಕೆಯ ದುಃಖವೂ ಇಂದಿಗೆ ತೀರಿತು! ಇನ್ನು ರಾಮನೊಡನೆ ಸೇರಿ ಆಕೆಯು ಸುಖದಿಂದ ವಿಹರಿಸುವಳು. ಭಾಗ್ಯಹೀನೆಯಾದ ನಾನು ಮಾತ್ರ ಹೀಗೆ ಭಯಂಕರವಾದ ದುಃಖಸಮುದ್ರದಲ್ಲಿ ಮುಳುಗಿಹೋದೆನು. ವೀರಾಗ್ರಣೀ! ಇದುವರೆಗೆ ನಾನು ನಿನ್ನೊಡನೆ ಸೇರಿ ಚಿತ್ರವಿಚಿತ್ರಗಳಾದ ಎಷ್ಟೋ ಪುಷ್ಪಮಾಲಿಕೆಗಳನ್ನು ಧರಿಸಿದೆನು. ಎಣೆಯಿಲ್ಲದ ಭಾಗ್ಯವನ್ನನುಭವಿಸಿದೆನು! ಆ ಭಾಗ್ಯಕ್ಕನುರೂಪವಾಗಿ ನಿನ್ನೊಡನೆ ಪುಷ್ಪಕವಿಮಾನವನ್ನೇರಿ ಕೈಲಾಸದಲ್ಲಿಯೂ, ಮಂದರಪರ್ವತದಲ್ಲಿಯೂ, ಮಹಾಮೇರುವಿನಲ್ಲಿಯೂ, ಚೈತ್ರರಥವನದಲ್ಲಿಯೂ, ಇನ್ನೂ ಅನೇಕ ದೇವೋದ್ಯಾನಗಳಲ್ಲಿಯೂ ಅನವರತವೂ ವಿಹರಿಸುತ್ತಿದ್ದೆನು. ನಾನಾವಿಧಗಳಾದ ಪ್ರದೇಶಗಳನ್ನು ನೋಡುತ್ತ, ಎಣೆಯಿಲ್ಲದ ಸುಖವನ್ನನುಭವಿಸಿದೆನು. ಹಾಗಿದ್ದ ನನಗೆ ಈಗ ನಿನ್ನ ಮರಣದಿಂದ ಸಮಸ್ತಕಾಮೋಪಭೋಗಗಳೂ ಕೈಬಿಟ್ಟು ಹೋದುವು! ಅಷ್ಟೊಂದು ಭೋಗಗಳನ್ನನುಭವಿಸುತ್ತಿದ್ದ ನಾನು, ಈಗ ಹುಟ್ಟಿದುದು ಮೊದಲು ಸುಖವೆಂಬುದನ್ನೇ ಕಾಣದ ಕೇವಲ ಸಾಮಾನ್ಯಸ್ತ್ರೀಯಂತೆ ದೀನದಶೆಯನ್ನು ಹೊಂದಿದೆನಲ್ಲಾ! ಛಿ! ಈ ರಾಜಸಂಪತ್ತುಗಳೆಲ್ಲವನ್ನೂ ಸುಡಬೇಕು! ಇವೆಲ್ಲವೂ ಚಂಚಲಗಳು! ಹಾ ರಾಜನೆ! ಅತಿಸುಕುಮಾರನಾಗಿ, ಅಂದವಾದ ಹುಬ್ಬುಗಳಿಂದಲೂ, ನುಣುಪಾದ ಚರ್ಮದಿಂದಲೂ, ಉಬ್ಬಿದ ಮೂಗಿನಿಂದಲೂ ಸೊಂಪೇರಿದ ಈ ನಿನ್ನ ಮುಖಸೌಂದರ್ಯವನ್ನು ನೋಡಿ ನಾನು ಹೇಗೆ ಸಹಿಸಲಿ? ಕಾಂತಿಯಲ್ಲಿ ಚಂದ್ರನಿಗೂ, ಸೌಂದರ್ಯದಲ್ಲಿ ಕಮಲಕ್ಕೂ, ತೇಜಸ್ಸಿನಲ್ಲಿ ಸೂರ್ಯನಿಗೂ ಸಾಟಿಯಾಗಿ, ಉತ್ತಮಾಂಗದಲ್ಲಿ ಪರ್ವತಶಿಖರದಂತಿರುವ ಕಿರೀಟದಿಂದ ಶೋಭಿತವಾಗಿ, ಕೆಂಪಾದ ಹಣೆಯಿಂದಲೂ, ಜ್ವಲಿಸುವ ಕುಂಡಲಗಳಿಂದಲೂ ಮನೋಹರವಾದ ನಿನ್ನ ಮುಖವು ಮೊದಲು ಆಗಾಗ ಪಾನಮದದಿಂದ

ತಿರುಗುವ ಕಣ್ಣಾಲೆಗಳಿಂದಲೂ, ಬಗೆಬಗೆಯ ಪುಷ್ಪಮಾಲಿಕೆಗಳಿಂದಲೂ, ಅಂದವಾದ ಕಿರುನಗೆಗಳಿಂದ ಕೂಡಿದ ಸವಿನುಡಿಗಳಿಂದಲೂ, ಎಷ್ಟೋ ಶುಭ ಕರವಾಗಿತ್ತಲ್ಲವೆ! ಆ ನಿನ್ನ ಮುಖವೇ ಈಗ ರಾಮಬಾಣಗಳಿಂದ ಭಿನ್ನ ವಾಗಿ ರಕ್ತಧಾರೆಗಳಿಂದ ತೊಯ್ದು ಹೊರಕ್ಕೆ ಕಿತ್ತುಬಂದ ಮೇದೋಮಾಂಸ ಗಳಿಂದಲೂ, ರಥದ ಧೂಳಿನಿಂದಲೂ ತುಂಬಿ ಕೇವಲ ಕಾಂತಿಹೀನವಾಗಿ ರುವುದಲ್ಲಾ! ಆಹಾ! ನನಗೂ ಈ ವೈಧವ್ಯದಶೆಯು ಪ್ರಾಪ್ತವಾಯಿತೇ? ಮೂಢೆಯಾದ ನಾನು ಈ ಅವಸ್ಥೆಯುಂಟಾಗುವುದೆಂದು ಎಂದೆಂದಿಗೂ ಎಣಿಸಿರಲಿಲ್ಲ! ನನ್ನ ತಂದೆಯಾದರೋ ದಾನವರಾಜನಾದ ಮಯನು! ರಾಕ್ಷಸಚಕ್ರವರ್ತಿಯೇ ನನ್ನ ಪತಿಯು! ಇಂದ್ರನನ್ನು ಜಯಿಸಿ ವೀರ್ಯ ದಲ್ಲಿ ಖ್ಯಾತಿಗೊಂಡ ಇಂದ್ರಜಿತ್ತೇ ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನು. ಈ ಭಾಗ್ಯಗಳೆಲ್ಲವನ್ನೂ ನೋಡಿ ನಾನು ಹಿಂದುಮುಂದು ತೋರದೆ ಗರ್ವ ಪಡುತ್ತಿದ್ದೆನು. ನನಗೆ ದಿಕ್ಕಾಗಿದ್ದ ಈ ನನ್ನ ಬಂಧುವರ್ಗಗಳೆಲ್ಲವೂ ಎಂತಹ ಶತ್ರುಗಳನ್ನಾದರೂ ಧ್ವಂಸಮಾಡತಕ್ಕ ಮಹಾಶೂರರೆಂದೂ, ಅನೇಕ ಯುದ್ಧಗಳಲ್ಲಿ ಪ್ರಖ್ಯಾತಿಹೊಂದಿದ ಬಲಪರಾಕ್ರಮವುಳ್ಳವರೆಂದೂ, ಇವ ರಿಗೆ ಎಲ್ಲಿಯೂ, ಯಾರಿಂದಲೂ ಭಯವಿಲ್ಲವೆಂದೂ ದೃಢವಾಗಿ ನಂಬಿ ದ್ದೆನು! ಕೊನೆಗೆ ನನಗೂ ಈ ಸ್ಥಿತಿಯು ಬಂದೊದಗಿತೆ? ರಾಕ್ಷಸತಿಲಕಾ! ಹಾಗೆ ಲೋಕವಿಖ್ಯಾತನೆನಿಸಿ, ಎಣೆಯಿಲ್ಲದ ಮಹಾಪ್ರಭಾವದಿಂದ ಕೂಡಿದ ನಿನಗೆ, ಮನಸ್ಸಿನಿಂದಲೂ ಬೇರೊಬ್ಬರಿಂದ ಯೋಚಿಸುವುದಕ್ಕೆ ಸಾಧ್ಯ ವಲ್ಲದ ಇಂತಹ ಭಯವು ಕೇವಲ ಮನುಷ್ಯನೊಬ್ಬನಿಂದ ಸಂಭವಿಸಿ ತೆಂದರೆ ಇದಕ್ಕಿಂತಲೂ ಆಶ್ಚರ್ಯವೇನುಂಟು! ರಾಜೇಂದ್ರಾ! ನುಣುಪಾದ ಇಂದ್ರನೀಲಮಣಿಯಂತೆ ನೀಲವಾಗಿ, ಮಹೋನ್ನತವಾದ ಪರ್ವತದಂತೆ ಮಹತ್ತಾಗಿ, ಕೈಬಳೆ ಮೊದಲಾದ ವೈಡೂರ್ಯಾಭರಣಗಳಿಂದಲೂ, ಮುಕ್ತಾ ಹಾರಗಳಿಂದಲೂ, ಪುಷ್ಪಮಾಲಿಕೆಗಳಿಂದಲೂ ಶೋಭಿತವಾಗಿ, ವಿಹಾರ ಕಾಲಗಳಲ್ಲಿ ಮತ್ತಷ್ಟು ಮನೋಜ್ಞವಾಗಿ, ಯುದ್ಧಭೂಮಿಗಳಲ್ಲಿ ವೀರ್ಯೋ ತ್ಸಾಹಯುಕ್ತವಾದ ತೇಜಸ್ಸಿನಿಂದ ದೇದೀಪ್ಯಮಾನವಾಗಿದ್ದ ನಿನ್ನ ದೇಹವು, ಮೊದಲು ಮಿಂಚುಗಳಿಂದ ಕೂಡಿದ ಮೇಘದಂತೆ ಆಭರಣಕಾಂತಿಗಳಿಂದ ಬೆಳಗುತ್ತಿತ್ತಲ್ಲವೆ! ಆ ನಿನ್ನ ಶರೀರವೇ ಈಗ ಸರ್ವಾವಯವಗಳಲ್ಲಿಯೂ ಅನೇಕ ತೀಕ್ಷ್ಣಬಾಣಗಳು ನಾಟಿರುವುದರಿಂದ ಕೈಯಿಂದ ಸ್ಪರ್ಶಿಸುವು

ದಕ್ಕೂ ಸಾಧ್ಯವಿಲ್ಲದಿರುವುದಲ್ಲಾ! ಇನ್ನು ನಿನ್ನ ಸುಕುಮಾರಾಂಗವನ್ನು ಹೇಗೆ ನಾನು ಆಲಿಂಗಿಸಿಕೊಳ್ಳಲಿ! ಹಂದಿಯ ಮುಳ್ಳುಗಳಂತೆ ಸರ್ವಾವಯವಗಳಲ್ಲಿಯೂ ವ್ಯಾಪಿಸಿ, ಮರ್ಮಗಳಲ್ಲಿ ಚೆನ್ನಾಗಿ ನಾಟಿದ ಈ ಬಾಣಗಳಿಂದ ನರಗಳ ಕಟ್ಟೆಲ್ಲವೂ ಕಿತ್ತು, ರಕ್ತದಿಂದ ತೊಯ್ದು, ಧೂಳಿನಿಂದ ಮಲಿನವಾಗಿ ಬಿದ್ದಿರುವ ಈ ನಿನ್ನ ದೇಹವು, ವಜ್ರಾಹತವಾಗಿ ಮುರಿದು ಬಿದ್ದ ಪರ್ವತದಂತೆ ಕಾಣುತ್ತಿರುವುದಲ್ಲಾ! ಆಹಾ! ನೀನು ಮೃತನಾದೆಯೆಂಬುದೇನು ಸ್ವಪ್ನವೋ! ನಿಜವಾಗಿಯೂ ಸ್ವಪ್ನವಾಗಿಯೇ ಇರಬೇಕು. ನಿನ್ನಂತಹ ಶೂರನನ್ನು ರಾಮನು ಕೊಲ್ಲುವುದೆಂದರೇನು? "ಮೃತ್ಯುವೇ ಈ ರೂಪದಿಂದ ಬಂದು ಕೊಂದಿರಬಾರದೆ?" ಎಂದರೆ ನಿನ್ನ ವಿಷಯದಲ್ಲಿ ಅದಕ್ಕೂ ಸಂಭವವಿಲ್ಲ. ಮೃತ್ಯುವಿಗೂ ನೀನೇ ಮೃತ್ಯುವಾಗಿರುವಾಗ ಆ ಮೃತ್ಯುವಿಗೆ ನೀನು ವಶನಾಗುವುದೆಂದರೇನು! ಆದುದರಿಂದ ನೀನು ಮೃತನಾದೆಯೆಂಬುದು ಸ್ವಪ್ನವಲ್ಲದೆ ಬೇರೆಯಲ್ಲ! ಹಾ ನಾಥಾ! ನೀನು ತ್ರೈಲೋಕ್ಯದಲ್ಲಿರುವ ರತ್ನಗಳೆಲ್ಲವನ್ನೂ ಅನುಭವಿಸಿದವನು! ವೀರ್ಯದಿಂದ ತ್ರೈಲೋಕ್ಯವನ್ನೂ ನಡುಗಿಸಿದವನು! ಸಮಸ್ತದಿಕ್ಪಾಲಕರನ್ನು ಜಯಿಸಿ ಬಂದವನು. ಕೈಲಾಸವನ್ನು ಕದಲಿಸಿ ಶಿವನನ್ನು ನಡುಗಿಸಿದವನು. ಬಲಗರ್ವಿತರನ್ನಡಗಿಸಿ ದಶದಿಶೆಗಳಲ್ಲಿಯೂ ಪರಾಕ್ರಮವನ್ನು ಪ್ರಕಟಿಸಿದವನು. ಸಮಸ್ತಲೋಕಗಳನ್ನೂ ಕ್ಷೋಭೆಹೊಂದಿಸಿದವನು! ಸಿಂಹನಾದ ಧ್ವನಿಗಳಿಂದಲೇ ಸಮಸ್ತಭೂತಗಳನ್ನೂ ಗೋಳುಗುಟ್ಟಿಸಿದವನು! ಶತ್ರುಸಾನ್ನಿಧ್ಯದಲ್ಲಿ ಗರ್ವೋಕ್ತಿಗಳನ್ನಾಡುವುದರಿಂದಲೇ ಅವರನ್ನು ನಿರಾಕರಿಸಿದವನು! ಭಯಂಕರಕರ್ಮವುಳ್ಳ ನಿಜಸೈನಿಕರನ್ನೂ. ಭೃತ್ಯವರ್ಗಗಳನ್ನೂ ಅಪಾಯವಿಲ್ಲದೆ ರಕ್ಷಿಸಿದವನು! ಅನೇಕ ದಾನವವೀರರನ್ನೂ, ಯಕ್ಷರನ್ನೂ ಕೊಂದವನು! ನಿವಾತಕವಚರೆಂಬ ಮಹಾಸುರರೂ ಭಯದಿಂದ ತನಗೆ ವಶರಾಗುವಹಾಗೆ ಮಾಡಿದವನು. ತ್ರೈಲೋಕ್ಯಕ್ಕೂ ನಿಯಾಮಕನು! ಅನೇಕ ಯಜ್ಞಗಳನ್ನು ಕೆಡಿಸಿದವನು! ಸ್ವಜನರನ್ನು ಪ್ರೇಮದಿಂದ ಪೋಷಿಸಿದವನು. ಧರ್ಮದ ಎಲ್ಲೆಕಟ್ಟುಗಳನ್ನು ಕದಲಿಸಿ ಸ್ವಕಾರ್ಯವನ್ನು ಸಾಧಿಸಿದವನು. ಯುದ್ಧದಲ್ಲಿ ಬಗೆಬಗೆಯ ಮಾಯೆಗಳನ್ನು ಪ್ರಯೋಗಿಸಿದವನು. ಅಲ್ಲಲ್ಲಿಂದ ಯಥೇಚ್ಛವಾಗಿ ದೇವಾಸುರ ಮನುಷ್ಯಕನ್ನಿಕೆಯರನ್ನು ತಂದು ಭೋಗಿಸಿದವನು. ಶತ್ರುಸ್ತ್ರೀಯರಿಗೆ ನಿತ್ಯದುಃಖವನ್ನುಂಟುಮಾಡಿದವನು. ಸ್ವಜರನ್ನು ಸರಿಯಾಗಿ

ನಡೆಸುವವನು. ಲಂಕಾದ್ವೀಪವನ್ನಾಳುವವನು. ಭಯಂಕರ ಕಾರ್ಯಗಳನ್ನು ನಡೆಸಿದವನು. ನಮ್ಮಂತಹ ಪತ್ನೀವರ್ಗಗಳಿಗೆಲ್ಲಾ ಬೇಕಾದ ಕಾಮಭೋಗಗಳನ್ನು ಕೊಡಿಸಿದವನು. ರಥಿಕರಲ್ಲಿ ಶಿರೋರತ್ನಪ್ರಾಯನು. ಇಂತಹ ಮಹಾ ಮಹಿಮೆಯುಳ್ಳ ಪತಿಯಾದ ನೀನು, ರಾಮನಿಂದ ಹತನಾಗಿ ಬಿದ್ದಿರುವುದನ್ನು ನೋಡಿಯೂ ನಾನು, ಇನ್ನೂ ಈ ದೇಹವನ್ನಿಟ್ಟುಕೊಂಡು ವಿಧವೆಯಾಗಿ ಬದುಕಿರುವೆನಲ್ಲಾ! ಇದನ್ನು ನೋಡಿದರೆ ನನಗೆ ಎಂದೆಂದಿಗೂ ಸಾವಿಲ್ಲವೆಂದೇ ಎಣಿಸಬೇಕಾಗಿದೆ! ಹಾ! ರಾಕ್ಷಸೇಶ್ವರಾ! ಬಹಳ ಬೆಲೆಬಾಳುವ ಶಯನಗಳಲ್ಲಿ ಮಲಗುತ್ತಿದ್ದ ನೀನೇ, ಈಗ ನೆಲದ ಮಣ್ಣಿನಿಂದ ಮಲಿನನಾಗಿ ಹೀಗೇಕೆ ಮಲಗಿರುವೆ? ಹಿಂದೆ ನಮ್ಮ ಕುಮಾರನಾದ ಇಂದ್ರಜಿತ್ತನ್ನು ಲಕ್ಷ್ಮಣನು ಯುದ್ಧದಲ್ಲಿ ಕೊಂದಾಗಲೇ ನಾನು ತೀವ್ರವಾದ ದುಃಖದಿಂದ ಹತಳಾಗಿದ್ದೆನು. ಈಗಲೋ ಈ ದುಃಖದಲ್ಲಿ ಸಂಪೂರ್ಣವಾಗಿ ಮುಳುಗಿಯೇ ಹೋದೆನು. ನಾಥಾ! ಇನ್ನು ನನಗೆ ಬದುಕುವ ದಾರಿಯೇನು? ನನ್ನ ಸಮಸ್ತ ಬಂಧುಗಳು ಹತರಾಗಿದ್ದರೂ ನೀನೊಬ್ಬನು ಮಾತ್ರ ಬದುಕಿದ್ದಪಕ್ಷದಲ್ಲಿ ಆ ಬಂಧು ಮರಣದಿಂದುಂಟಾದ ದುಃಖವೂ ನನಗೆ ತೋರುತ್ತಿರಲಿಲ್ಲ! ನಾಥನಾದ ನೀನು ನನ್ನನ್ನು ಕೈಬಿಟ್ಟು ಹೋದುದರಿಂದ ಇಂದಿಗೆ ನನ್ನ ಕಾಮುಭೋಗಗಳೆಲ್ಲವೂ ತೀರಿದುವು! ಇನ್ನು ನನ್ನ ಪ್ರಾಣವಿರುವವರೆಗೂ ನಾನು ದುಃಖವನ್ನೇ ಅನುಭವಿಸಬೇಕಾಯಿತು! ರಾಜೇಂದ್ರಾ! ಯಾರಿಗೂ ಹೊಂದಲಸಾಧ್ಯವಾದ ಬಹಳ ದೂರದೇಶಕ್ಕೆ ಹೋಗಿ ಸೇರಿ ಬಿಟ್ಟೆಯಲ್ಲಾ! ದುಃಖಾರ್ತೆಯಾದ ನನ್ನನ್ನೂ ಸಂಗಡ ಕರೆದುಕೊಂಡು ಹೋಗಬಾರದೆ? ನಿನ್ನನ್ನಗಲಿ ನಾನು ಬದುಕಿರಲಾರೆನು. ಭಾಗ್ಯಹೀನಳಾಗಿ, ಬಾರಿಬಾರಿಗೂ ದೈನ್ಯದಿಂದ ವಿಲಪಿಸಿ ದುಃಖಿಸುತ್ತ, ಬಹಳವಾಗಿ ಬಳಲಿರುವ ನನ್ನನ್ನು ಇಲ್ಲಿಯೇ ಏಕಾಕಿನಿಯನ್ನಾಗಿ ಮಾಡಿಬಿಟ್ಟು ಹೋಗುವೆಯೇಕೆ? ನೀನೇಕೆ ನನ್ನೊಡನೆ ಮಾತನಾಡುವುದಿಲ್ಲ? ಪ್ರಾಣಕಾಂತಾ! ಹಾ ಪ್ರಭೂ! ಅಂತಃಪುರಸ್ತ್ರೀಯರಿಗೆ ಯೋಗ್ಯವಾದ ಮುಸುಕಿಲ್ಲದೆ, ಪುರದ್ವಾರದಿಂದ ಕಾಲುನಡೆಯಿಂದಲೇ ಈ ಯುದ್ಧರಂಗಕ್ಕೆ ಬಂದಿರುವ ನನ್ನನ್ನು ನೋಡಿ ಇನ್ನೂ ನೀನು ಕೋಪಿಸದಿರುವೆಯೇಕೆ? ನಾಥಾ! ನಿನಗೆ ಪತ್ನಿಯರನ್ನು ಕಂಡರೆ ವಿಶೇಷಪ್ರೇಮವಲ್ಲವೆ? ಸ್ವಭಾವಸಿದ್ಧವಾದ ಲಜ್ಜೆಯನ್ನೂ ಬಿಟ್ಟು, ತಲೆಗೆ ಮುಸುಕೂ

ಇಲ್ಲದೆ ಹೊರಗೆ ಬಂದುನಿಂತಿರುವ ಈ ನಿನ್ನ ಪತ್ನಿಯರೆಲ್ಲರನ್ನೂ ನೋಡಿಯೂ ನೀನು ಕೋಪಿಸದಿರುವುದೇಕೆ? ಇದೋ! ನಿನ್ನ ಪತ್ನಿಯರ ದುಸ್ಥಿತಿಯನ್ನು ನೋಡು! ನಿನಗೆ ಸಮಸ್ತ ಕ್ರೀಡೆಗಳಲ್ಲಿಯೂ ಸಹಾಯಕವಾಗಿದ್ದ ಈ ಅಂತಃಪುರಜನವೆಲ್ಲವೂ ಬಹಳವಾಗಿ ದುಃಖಿಸಿ ವಿಲಪಿಸುತ್ತಿರುವುದಲ್ಲಾ! ನೀನೇಕೆ ಸಮಾಧಾನಪಡಿಸುವುದಿಲ್ಲ! ಏಕೆ ಮನ್ನಿಸಿ ಕರೆಯುವುದಿಲ್ಲ? ರಾಜಾ! ಹಿಂದೆ ನೀನು ಪತಿವ್ರತೆಯರಾಗಿಯೂ ಧರ್ಮಪರಾಯಣೆಯರಾಗಿಯೂ, ಗುರುಶುಶ್ರೂಷಾತತ್ಪರೆಯರಾಗಿಯೂ ಇದ್ದ ಎಷ್ಟೋಮಂದಿ ಕುಲಸ್ತ್ರೀಯರನ್ನು ವಿಧವೆಯರನ್ನಾಗಿ ಮಾಡಿದೆಯಲ್ಲವೆ? ದುಃಖದಿಂದ ಬೇಯುತ್ತಿರುವ ಅವರ ಶಾಪವಾಕ್ಯಗಳಿಗೆಲ್ಲವೂ ಫಲವಾಗಿಯೋ ನೀನು ಶತ್ರುಗಳ ಕೈಗೆಸಿಕ್ಕಿ ಸಾಯಬೇಕಾಯಿತು? ಹಾಗಿರದಿದ್ದರೆ ಶತ್ರುಗಳಿಂದ ನಿನಗೆ ಪರಾಭವವೆಂದರೇನು? ನಿನ್ನಿಂದ ಭಂಗಹೊಂದಿದ ಕುಲಾಂಗನೆಯರು, ನೀನು ಅವರ ಪತಿಯನ್ನು ಕೊಲ್ಲುವಾಗ ಯಾವ ಶಾಪವಾಕ್ಯಗಳನ್ನಾಡಿದರೋ ಅದರ ಫಲವೇ ಇದು! ರಾಜೇಂದ್ರಾ! "ತಕ್ಕಕಾರಣವಿಲ್ಲದೆ ಪತಿವ್ರತೆಯರ ಕಣ್ಣಿನಿಂದ ನೀರು ಕೆಳಗೆ ಬೀಳದು! ಹಾಗೆ ಅವರ ಕಣ್ಣಿಂದ ಒಂದು ಬಾಷ್ಪಬಿಂದುವಾದರೂ ಕೆಳಗೆ ಬಿದ್ದಪಕ್ಷದಲ್ಲಿ ಏನೋ ಒಂದು ಮಹಾನರ್ಥವು ನಡೆದೇ ತೀರಬೇಕು" ಎಂದು ಲೋಕದಲ್ಲಿ ಜನಗಳು ವಿಶೇಷವಾಗಿ ಹೇಳುವ ಈ ನಾಣ್ಣುಡಿಯು ನಿನ್ನ ವಿಷಯದಲ್ಲಿ ಈಗ ಸತ್ಯವೇ ಆಯಿತು! ತೇಜಸ್ಸಿನಿಂದ ತ್ರೈಲೋಕ್ಯವನ್ನೂ ವಶಪಡಿಸಿ, ಮಹಾವೀರಾಗ್ರಣಿಯೆಂದು ಗರ್ವಪಡುತ್ತಿದ್ದ ನೀನು ನೀಚವಾದ ಪರದಾರಾಪಹರಣಕಾರ್ಯಕ್ಕೆ ಹೇಗೆ ತಾನೇ ಪ್ರಯತ್ನಿಸಿದೆ? ಹಾ! ನಾಥಾ! ಹಿಂದೆ ನೀನು ಕಪಟೋಪಾಯದಿಂದ ಮಾಯಾಮೃಗವನ್ನು ಕಳುಹಿಸಿ, ರಾಮನನ್ನು ಆಶ್ರಮದಿಂದ ತೊಲಗಿಸಿ, ಅವನ ಪತ್ನಿಯನ್ನು ಕದ್ದುತಂದೆಯಲ್ಲಾ! ಇದರಿಂದ ನಿನಗೆ ಬಂದ ಲಾಭವೇನು? ನಿನ್ನ ಹೇಡಿತನಕ್ಕೆ ಇದೊಂದು ದೊಡ್ಡ ಗುರುತಾಯಿತು. ಇದುಹೊರತು ಬೇರೆಲ್ಲಿಯೂ ನೀನು ಯುದ್ಧದಲ್ಲಿ ಇಷ್ಟೊಂದು ಹೇಡಿತನವನ್ನು ತೋರಿಸಿದುದಾಗಿ ನನಗೆ ತಿಳಿಯಲಿಲ್ಲ. ಅಂತಹ ಧೀರಪ್ರಕೃತಿಯಾದ ನೀನು ಈಗ ನಿನ್ನ ಭಾಗ್ಯವು ವಿಪರೀತವಾದುದರಿಂದಲೇ ಸೀತೆಯನ್ನಪಹರಿಸಿದಂತಿದೆ. ನೀನು ಹೇಡಿಯೆನಿಸಿಕೊಳ್ಳುವುದಕ್ಕೂ, ನಿನ್ನ ವಿನಾಶಕಾಲಕ್ಕೂ ಇದು ಲಕ್ಷಣವಲ್ಲದೆ ಬೇರೆಯಲ್ಲ. ಭೂತಭವಿಷ್ಯತ್ಕಾಲಾರ್ಥ

ಗಳನ್ನು ತಿಳಿದು, ವರ್ತಮಾನಾರ್ಥಗಳಲ್ಲಿಯೂ ಪ್ರಾಜ್ಞನೆನಿಸಿ, ಸತ್ಯವಾದಿಯೆಂದೂ ಮಹಾಭಾಗನೆಂದೂ ಹೆಸರುಗೊಂಡ ನನ್ನ ಮೈದುನನಾದ ವಿಭೀಷಣನು, ಹಿಂದೆ ನೀನು ಸೀತೆಯನ್ನು ಕದ್ದುತಂದ ವೃತ್ತಾಂತವನ್ನು ಕೇಳಿದೊಡನೆ, ಸ್ವಲ್ಪಕಾಲದವರೆಗೆ ಚಿಂತಿಸಿ ವ್ಯಸನದಿಂದ ನಿಟ್ಟುಸಿರನ್ನು ಬಿಟ್ಟು, ನನ್ನೊಡನೆ ಯಾವಮಾತನ್ನು ಹೇಳಿದ್ದನೋ, ಆ ಮಾತಿನಂತೆಯೇ ಈಗ ನಿನ್ನ ಕಾಮ ಕ್ರೋಧಗಳಿಗೆ ಫಲವಾದ ಈ ವ್ಯಸನದಿಂದ, ಸಮಸ್ತ ರಾಕ್ಷಸವೀರರಿಗೂ ಈ ವಿಧವಾದ ವಿನಾಶವು ಪ್ರಾಪ್ತವಾಯಿತು. ನಿನ್ನ ದಶೆಯಿಂದಲೇ ಮೂಲನಾಶಕ್ಕೆ ಹೇತುವಾದ ಈ ಮಹಾನರ್ಥವು ಸಂಭವಿಸಿತು. ನಿನ್ನಿಂದಲೇ ಈ ಸಮಸ್ತರಾಕ್ಷಸಕುಲವೂ ದಿಕ್ಕಿಲ್ಲದಂತಾಯಿತು. ಬಲಪೌರುಷಗಳಲ್ಲಿ ಪ್ರಖ್ಯಾತಿಹೊಂದಿ, ಮಹಾಶೂರನೆನಿಸಿದ ನೀನು ಯುದ್ಧದಲ್ಲಿ ಮೃತಿಹೊಂದಿದುದಕ್ಕಾಗಿ ನಾನು ದುಃಖಿಸಬೇಕಾದುದಿಲ್ಲ. ಹಾಗಿದ್ದರೂ ಸ್ತ್ರೀಯರಿಗೆ ಸಹಜವಾದ ಚಾಪಲ್ಯದಿಂದ ನನ್ನ ಬುದ್ಧಿಯು ಹೀಗೆ ದೈನ್ಯದಿಂದ ತತ್ತಳಿಸುವುದು. ನೀನಾದರೋ ನಿನ್ನ ಪಾಪಪುಣ್ಯಗಳಿಗೆ ತಕ್ಕಂತೆ ಹೊಂದಬೇಕಾದ ಗತಿಯನ್ನು ಹೊಂದಿದೆ! ಆದುದರಿಂದ ನಿನ್ನನ್ನು ಕುರಿತು ದುಃಖಿಸಬೇಕಾದುದಿಲ್ಲ. ಆದರೆ ನಿನ್ನನ್ನಗಲಿದ ನನ್ನ ಸ್ಥಿತಿಗಾಗಿಯೇ ನಾನು ದುಃಖಿಸುತ್ತಿರುವೆನು. ನಾಥಾ! ನಿನ್ನ ಮಿತ್ರರು ನಿನ್ನ ಹಿತಕ್ಕಾಗಿ ಹೇಳಿದ ಮಾತುಗಳನ್ನೂ ನೀನು ಕೇಳದೆ ಹೋದೆ! ಮಿತ್ರರ ಮಾತೂ ಹಾಗಿರಲಿ. ಒಡಹುಟ್ಟಿದ ತಮ್ಮಂದಿರೆಲ್ಲರೂ ನಿನಗೆ ಎಷ್ಟೋವಿಧದಿಂದ ಹಿತವನ್ನು ಹೇಳಿದರಲ್ಲವೆ? ಅದನ್ನಾದರೂ ನೀನು ಕೇಳಬಾರದಾಗಿತ್ತೇ? ಅದನ್ನೂ ಕೇಳಲಿಲ್ಲ! ಹಿಂದೆ ವಿಭೀಷಣನು ಯುಕ್ತಿಯುಕ್ತವಾಗಿಯೂ, ಸಾರವತ್ತಾಗಿಯೂ, ನೀತಿಶಾಸ್ತ್ರಾನುಸಾರವಾಗಿಯೂ ಇರುವ ಎಷ್ಟೋ ಹಿತವಾಕ್ಯಗಳನ್ನು ಬಹಳ ನಯದಿಂದ ಹೇಳಿದರೂ, ನೀನು ಅದನ್ನು ನಿರಾಕಾರಿಸಿದುದಲ್ಲದೆ, ಹಿತೈಷಿಯಾದ ಆ ನಿನ್ನ ತಮ್ಮನಲ್ಲಿಯೂ ಭೇದಬುದ್ಧಿಯನ್ನು ತೋರಿಸಿ, ಅವನನ್ನೂ ರಾಜ್ಯದಿಂದ ಹೊರಡಿಸಿದೆ. ಇದಲ್ಲದೆ, ಹಿಂದೆ ಮಾರೀಚನೂ, ಕುಂಭಕರ್ಣನೂ, ನನ್ನ ತಂದೆಯಾದ ಮಯನೂ, ನಿನಗೆ ಎಷ್ಟೋವಿಧದಿಂದ ಹಿತೋಪದೇಶವನ್ನು ಮಾಡಿದರು. ವೀರ್ಯಮದದಿಂದ ಕೊಬ್ಬಿದ ನೀನು ಅವರ ಮಾತುಗಳಿಗೂ ಕಿವಿಗುಡಲಿಲ್ಲ. ಆ ನಿನ್ನ ಮೂರ್ಖಸ್ವಭಾವಕ್ಕೆ ತಕ್ಕಫಲವು ಇದೋ ಈಗ ಚೆನ್ನಾಗಿ ಕಾಣಿಸಿತು. ಯಾರೇನು

ಮಾಡಬಲ್ಲರು? ಹಾ! ಪ್ರಾಣನಾಥಾ ! ನೀಲಮೇಘದಂತೆ ಮನೋಹರವಾದ ಈ ಮೈಮೇಲೆ ಪೀತಾಂಬರವನ್ನು ಧರಿಸಿ, ಅಂದವಾದ ತೋಳ್ಬಳೆಗಳಿಂದ ಶೋಭಿಸುತ್ತಿದ್ದ ನೀನು ಹೀಗೆ ರಕ್ತದಿಂದ ತೊಯ್ದು, ಕೈಕಾಲುಗಳನ್ನು ಚಾಚಿ ನೆಲದಲ್ಲಿ ಮಲಗಿರುವೆಯಲ್ಲಾ ! ನಾನು ಹೀಗೆ ದುಃಖದಿಂದ ಕೊರಗುತ್ತಿದ್ದರೂ ನನಗೇಕೆ ಪ್ರತ್ಯುತ್ತರವನ್ನು ಕೊಡುವುದಿಲ್ಲ? ಮಹಾಪರಾಕ್ರಮಶಾಲಿಯಾಗಿ, ಯಾವ ಯುದ್ಧದಲ್ಲಿಯೂ ಹಿಂಜರಿಯದಷ್ಟು ಸಮರ್ಥನಾಗಿ, ಗುಣಾಢ್ಯನಾಗಿ, ಆ ಮಾಲ್ಯವಂತನ ದೌಹಿತ್ರನೆನಿಸಿಯೂ ನೀನು, ಕೈಹಿಡಿದ ಹೆಂಡತಿಯಾದ ನನ್ನನ್ನು ಕಣ್ಣೆತ್ತಿಯೂ ನೋಡದಿರುವುದೇಕೆ? ವೀರಾಗ್ರಣೀ! ಹೀಗೆ ನೀನು ಮೈಮರೆತು ಮಲಗಿರುವುದರಿಂದಲ್ಲವೇ ಸೂರ್ಯನೂ ನಿರ್ಭಯವಾಗಿ ಈಗ ತನ್ನ ಪಾದ (ಕಿರಣ) ಗಳನ್ನು ಮೆಲ್ಲಮೆಲ್ಲಗೆ ಲಂಕೆಯ ಕಡೆಗೆ ನೀಡುತ್ತಿರುವನು ! ನಮಗೆ ಅಭೂತಪೂರ್ವವಾದ ಈ ಅಪಮಾನವು ಪ್ರಾಪ್ತವಾಗಿರುವಾಗಲೂ ನೀನು ಸುಮ್ಮನೆ ಮಲಗಿರುವುದೇಕೆ? ನಾಥಾ ! ಏಳೇಳು ! ರಾಕ್ಷಸೇಂದ್ರಾ ! ಸೂರ್ಯವರ್ಚಸ್ಸುಳ್ಳ ಯಾವ ಮಹಾಯುಧದಿಂದ ನೀನು ಯುದ್ಧದಲ್ಲಿ ಶತ್ರುಗಳನ್ನು ಧ್ವಂಸಮಾಡುತ್ತಿದ್ದೆಯೋ, ಈಗಲೂ ಯಾವುದು ಮಹೇಂದ್ರನ ವಜ್ರಾಯುಧದಂತೆ ಶೋಭಿಸುತ್ತಿರುವುದೋ, ಯಾವುದನ್ನು ನೀನು ನಿನ್ನ ಕೈಗಳಿಂದಲೇ ಯಾವಾಗಲೂ ಪೂಜಿಸುತ್ತಿದ್ದೆಯೋ, ಯಾವ ದಿವ್ಯಾಯುಧವು ಸಮಸ್ತ ಶತ್ರುಗಳನ್ನೂ ನಿರ್ಮೂಲ ಮಾಡುತ್ತಿತ್ತೋ, ಸುವರ್ಣಾಲಂಕೃತವಾದ ಆ ನಿನ್ನ ಪರಿಘವು ರಾಮಬಾಣಗಳಿಂದ ಸಹಸ್ರಭಾಗವಾಗಿ ಭೇದಿಸಿ ಕೆಳಗೆ ಬಿದ್ದಿರುವುದನ್ನಾದರೂ ಕಾಣೆಯಾ? ನಾಥಾ! ಪ್ರಿಯಪತ್ನಿಯನ್ನಾಲಿಂಗಿಸುವಂತೆ ಈಗ ನೀನು ಈ ಯುದ್ಧಭೂಮಿಯನ್ನೇ ಬಿಗಿದಪ್ಪಿ ಮಲಗಿರುವೆಯಲ್ಲಾ ? ನನ್ನನ್ನು ಮಾತ್ರ ನಿನಗೆ ಪ್ರಿಯೆಯಲ್ಲದಂತೆ ಮಾಡಿ ನನಗೆ ಪ್ರತ್ಯುತ್ತರವನ್ನು ಕೊಡದಿರುವುದೇಕೆ ? ನೀನು ಹೀಗೆ ಮರಣವನ್ನು ಹೊಂದಿರುವಾಗಲೂ ನನ್ನ ಹೃದಯವು ದುಃಖದಿಂದ ಸಹಸ್ರಭಾಗವಾಗಿ ಒಡೆದು ಹೋಗದಿರುವುದಲ್ಲಾ ! ಛಿ ! ಕಲ್ಲಿನಂತೆ ಕಠಿನವಾದ ಈ ನನ್ನ ಹೃದಯವನ್ನು ಸುಡಬೇಕು !" ಎಂದು ನಾನಾವಿಧವಾಗಿ ವಿಲಪಿಸಿದಳು, ರಾವಣನಿಗೆ ಪಟ್ಟದ ರಾಣಿಯಾದ ಆ ಮಂಡೋದರಿಯು, ಹೀಗೆ ಕಣ್ಣೀರುಬಿಟ್ಟು ವಿಲಪಿಸುತ್ತ, ಪತಿಯಲ್ಲಿರುವ ಪ್ರೇಮಾತಿಶಯದಿಂದ ಮೈಮರೆತು, ಮನಸ್ಸಂಕಟವನ್ನು ತಡೆಯಲಾರದೆ ಹಾಗೆಯೇ ಪ್ರಜ್ಞೆತಪ್ಪಿ

ರಾವಣನ ಎದೆಯಮೇಲೆ ಬಿದ್ದಳು. ಸಹಜವಾದ ನೀಲವರ್ಣದಿಂದ ಕೂಡಿ, ಅದರಮೇಲೆ ರಕ್ತಸ್ರಾವದಿಂದ ನೆನೆದ ರಾವಣನ ಮೈಮೇಲೆ ಬಿದ್ದು ಮಂಡೋದರಿಯು ಹೀಗೆ ಸಂಕಟದಿಂದ ಹೊರಳುತ್ತಿರುವಾಗ, ಸಂಧ್ಯಾರಾಗದಿಂದ ಕೆಂಪೇರಿ ಕಾಳಮೇಘದಲ್ಲಿ ತಲೆದೋರಿದ ಮಿಂಚಿನಂತೆ ಕಾಣುತ್ತಿದ್ದಳು. ಮಂಡೋದರಿಯು ಹೀಗೆ ರೋದನಮಾಡುತ್ತ ಮೂರ್ಛಿತಳಾಗಿ, ರಾವಣನ ಎದೆಯಮೇಲೆ ಬಿದ್ದುದನ್ನು ನೋಡಿ, ಆಕೆಯ ಸವತಿಯರೆಲ್ಲರೂ ಆತುರದಿಂದ ಬಂದು, ತಾವೂ ಕಣ್ಣೀರುಬಿಟ್ಟು, ರೋದಿಸುತ್ತ ಆಕೆಯನ್ನು ಕೈಹಿಡಿದು ಮೇಲಕ್ಕೆತ್ತಿ "ದೇವಿ! ಈ ರಾಜಸಂಪತ್ತುಗಳೆಲ್ಲವೂ ಚಂಚಲಗಳೆಂದು ನಿನಗೂ ಚೆನ್ನಾಗಿ ತಿಳಿದೇ ಇರುವುದಲ್ಲವೆ? ಬಾಲ್ಯಯೌವನ ಜರಾಮರಣಗಳೆಂಬ ಬೇರೆಬೇರೆ ಅವಸ್ಥೆಗಳು ಆಗಾಗ ಮಾಡುತ್ತಿರುವುದರಿಂದ, ಜನಗಳ ಸ್ಥಿತಿಯೇ ಸ್ಥಿರವಲ್ಲವೆಂಬುದನ್ನು ನೀನೂ ಚೆನ್ನಾಗಿ ತಿಳಿದೇ ಇರುವೆ! ಹೀಗಿರುವಾಗಲೂ ನೀನು ದುಃಖಿಸುವುದೇಕೆ?" ಎಂದು ಸಮಾಧಾನಪಡಿಸಿದರು. ಹೀಗೆ ಸವತಿಯರೆಲ್ಲರೂ ಸುತ್ತುಮುತ್ತಿ, ತನ್ನನ್ನು ಸಂತೈಸುತ್ತಿದ್ದರೂ, ಮಂಡೋದರಿಯು ದುಃಖವನ್ನು ತಡೆಯಲಾರದೆ, ಕಣ್ಣೀರಿನ ಪ್ರವಾಹಗಳಿಂದ ತನ್ನ ಸ್ತನಾಗ್ರಗಳನ್ನು ತೋಯಿಸುತ್ತ ಬಹಳ ದೀನಧ್ವನಿಯಿಂದ ಗಟ್ಟಿಯಾಗಿ ರೋದಿಸುತ್ತಿದ್ದಳು. ಹೀಗೆ ರಾವಣಪತ್ನಿಯರೆಲ್ಲರೂ ರೋದಿಸುತ್ತಿರುವಾಗ, ರಾಮನು ವಿಭೀಷಣನನ್ನು ನೋಡಿ "ವಿಭೀಷಣಾ! ನೀನು ಈ ಸ್ತ್ರೀಯರೆಲ್ಲರನ್ನೂ ಸಮಾಧಾನಪಡಿಸಿ ನಿನ್ನ ಪಟ್ಟಣಕ್ಕೆ ಹಿಂತಿರುಗಿಸಿ, ನಿನ್ನಣ್ಣನಿಗೆ ಉತ್ತರಕ್ರಿಯೆಗಳನ್ನಾರಂಭಿಸು! ಎಂದನು. ರಾಮನು ಹೇಳಿದ ಈ ವಾಕ್ಯವನ್ನು ಕೇಳಿದಮೇಲೆ ಧರ್ಮಜ್ಞನಾದ ವಿಭೀಷಣನಿಗೆ ಮನಸ್ಸಿನಲ್ಲಿ ಒಂದುವಿಧವಾದ ಶಂಕೆಯು ಹುಟ್ಟಿತು. ಹಿಂದೆ ತನ್ನಣ್ಣನಾದ ರಾವಣನಿಗೆ ಉತ್ತರಕ್ರಿಯೆಗಳನ್ನು ಮಾಡಬೇಕೆಂದು ತಾನಾಗಿ ಸೂಚಿಸಿದುದರ ಮೇಲೆ, ತನ್ನಮಾತನ್ನು ತೆಗೆಯಲಾರದೆ ನಿರ್ಬಂಧಕ್ಕಾಗಿ ರಾಮನು ಹೀಗೆ ಹೇಳಿರುವನೋ ಎಂಬ ಸಂದೇಹವು ಹುಟ್ಟಿತು. ಈ ವಿಷಯದಲ್ಲಿ ಮತ್ತೊಮ್ಮೆ ರಾಮನ ನಿಜವಾದ ಮನೋಭಿಪ್ರಾಯವೇನೆಂಬುದನ್ನು ತಿಳಿದು, ಅವನ ಅನುಮತಿಯನ್ನು ಮುಂದಿಟ್ಟುಕೊಂಡೇ ಆ ಕಾರ್ಯವನ್ನು ನಡೆಸಬೇಕೆಂಬ ಬುದ್ಧಿಯು ಹುಟ್ಟಿತು. ಸ್ವಲ್ಪಹೊತ್ತಿನವರೆಗೆ ತನ್ನಲ್ಲಿ ತಾನೇ ಚಿಂತಿಸಿ, ಆ ಮೇಲೆ ಧರ್ಮಾರ್ಥಯುಕ್ತವಾದ ಮಾತಿನಿಂದ ವಿನಯ

ಪೂರ್ವಕವಾಗಿ ರಾಮುನನ್ನು ಕುರಿತು ವಿಜ್ಞಾಪಿಸುವನು. "ರಾವಾ ! ಈ ರಾವಣನು ಧರ್ಮಗಳನ್ನು ನೀಗಿದವನು ! ವ್ರತಗಳನ್ನು ತ್ಯಜಿಸಿದವನು ! ಕ್ರೂರನು ! ಪ್ರಾಣಿಹಿಂಸಕನು ! ಸತ್ಯವನ್ನು ಮೀರಿದವನು ! ಪರಪತ್ನಿಯ ರನ್ನು ಮುಟ್ಟಿದ ಮಹಾಪಾಪಿಯು ! ಇಂತವನಿಗೆ ಸಂಸ್ಕಾರವನ್ನು ನಡೆಸುವುದು ನನಗೆ ಯೋಗ್ಯವಾದ ಕಾರ್ಯವಲ್ಲ ! ಇವನು ನನಗೆ ಸಹೋದರರೂಪದಿಂದ ಶತ್ರುವೇ ಹೊರತು ಬೇರೆಯಲ್ಲ ! ಸರ್ವವಿಧದಲ್ಲಿಯೂ ಇವನು ನನ್ನ ಕೇಡನ್ನೇ ಕೋರುತ್ತಿದ್ದವನು! ಹಿರಿಯಣ್ಣನೆಂಬುದಕ್ಕಾಗಿ ನಾನು ಇವನನ್ನು ಗೌರವಿಸಬೇಕಾಗಿದ್ದರೂ, ಅವನ ಕೃತ್ಯಗಳನ್ನು ನೋಡಿದರೆ ಸರ್ವಥಾ ಪೂಜಾರ್ಹವಲ್ಲ. ಆದರೆ ಒಂದುವೇಳೆ ಈಗ ನಾನು ನನ್ನಣ್ಣನಾದ ಈತನಿಗೆ ಸಂಸ್ಕಾರವನ್ನು ಮಾಡದಪಕ್ಷದಲ್ಲಿ, ಲೋಕವು ನನ್ನನ್ನು ಕ್ರೂರನೆಂದು ನಿಂದಿಸಬಹುದು ! ಆದರೇನು? ಅವರೇ ಈಗ ಇವನು ಇದುವರೆಗೂ ನಡೆಸಿದ ಅಕೃತ್ಯಗಳನ್ನು ಕೇಳಿದ ಪಕ್ಷದಲ್ಲಿ ನಾನು ಈತನಿಗೆ ಸಂಸ್ಕಾರವನ್ನು ಮಾಡದೆ ಬಿಟ್ಟುದೇ ಉತ್ತಮ ಕಾರ್ಯವೆಂದು ಹೇಳುವರು" ಎಂದನು. ಈ ಮಾತನ್ನು ಕೇಳಿ ಧರ್ಮಜ್ಞರಲ್ಲಿ ಮೇಲೆನಿಸಿಕೊಂಡ ರಾಮನು, ಆ ವಿಭೀಷಣನ ಮಾತಿಗಾಗಿ ಬಹಳ ಅತೃಪ್ತಿಯನ್ನು ತೋರಿಸುತ್ತ, ತಿರುಗಿ ಆತನನ್ನು ಕುರಿತು, "ರಾಕ್ಷಸೇಶ್ವರಾ ! ನೀನಾದರೋ ಯಾವಾಗಲೂ ನನಗೆ ಹಿತವನ್ನೇ ಬಯಸತಕ್ಕವನು. ನನಗೆ ಈ ಜಯವುಂಟಾದುದೂ ನಿನ್ನ ಪ್ರಭಾವದಿಂದಲೇ. ಆದುದರಿಂದ ನಾನೂ ನಿನಗೆ ಸರ್ವವಿಧದಿಂದಲೂ ಹಿತವನ್ನು ಹೇಳಬೇಕಾದುದೇ ಅತ್ಯವಶ್ಯವು. ರಾವಣನಿಗೆ ಸಂಸ್ಕಾರವನ್ನು ನಡೆಸುವುದು ನನಗೆ ಅತಿಪ್ರಿಯವಾದ ಕಾರ್ಯವಾದುದರಿಂದ, ನೀನು ಅವಶ್ಯವಾಗಿ ಅದನ್ನು ನಡೆಸಿಯೇ ತೀರಬೇಕು. ನಿನಗೂ ಈ ಕಾರ್ಯವು ಬಹಳ ಶ್ರೇಯಸ್ಕರವಾದುದರಿಂದ, ಈ ಕಾರ್ಯದಲ್ಲಿ ನಿನ್ನನ್ನು ನಿಯೋಗಿಸಬೇಕಾದುದು ನನಗೂ ಅವಶ್ಯ ಕರ್ತವ್ಯವು. ಆದುದರಿಂದ ಈಗ ನೀನು ಈ ಸಂಸ್ಕಾರವನ್ನು ನಡೆಸಬೇಕು ! ಈ ರಾವಣನು ಅಧರ್ಮದಲ್ಲಿಯೂ, ಅಸತ್ಯದಲ್ಲಿಯೂ ಪ್ರವರ್ತಿಸಿದನೆಂಬುದೇನೋ ವಾಸ್ತವವು ! ಈ ವಿಷಯದಲ್ಲಿ ಅವನು ದೋಷಿಯಾಗಿದ್ದರೂ ಅವನಲ್ಲಿ ಇತರ ಗುಣಭಾಗಗಳು ಹೆಚ್ಚಾಗಿರುವುವು. ಇವನು ಬಹಳ ತೇಜಸ್ವಿಯು ! ಬಲಾಢ್ಯನು ! ಯಾವಾಗಲೂ ಯುದ್ಧದಲ್ಲಿ ಪರಾಜಯವನ್ನು ಹೊಂದದ ಮಹಾ ಶೂರ

ನೆನೆಸಿಕೊಂಡಿರುವನು ! ಇಂದ್ರಾದಿ ದೇವತೆಗಳಿಂದಲೂ ಅವನಿಗೆ ಪರಾಜಯ ವಿಲ್ಲವೆಂದು ನಾವು ಕೇಳಿರುವೆವು ! ಮತ್ತು ಅವನಲ್ಲಿ ಎಣೆಯಿಲ್ಲದ ಮಹಾ ಮಹಿಮೆಯುಂಟು ! ಬಲಸಂಪನ್ನನು ! ಸಮಸ್ತ ಲೋಕಗಳನ್ನೂ ತನ್ನ ವೀರ್ಯದಿಂದ ಗೋಳಾಡಿಸಿ ರಾವಣನೆಂಬ ಖ್ಯಾತಿಯನ್ನು ಪಡೆದಿರುವನು! "ಎಷ್ಟು ಗುಣಗಳಿದ್ದರೂ ವೈರಿಯಾದವನಿಗೆ ಶ್ರೇಯಸ್ಸನ್ನು ಕೋರ ಬಹುದೆ?" ಎಂದರೆ,. ಈ ವೈರವೆಂಬುದೆಲ್ಲವೂ ಸಾಯದಿರುವವರೆಗೆ ಮಾತ್ರವೇ ಹೊರತು, ಸತ್ತಮೇಲೆ ಯೂರಲ್ಲಿ ಯಾರಿಗೆ ವೈರವು? ಈ ರಾವಣನು ತಾನು ಸಾಯುವವರೆಗೂ ನಮ್ಮಲ್ಲಿ ಅವಿಚ್ಛಿನ್ನವಾದ ವೈರವನ್ನೇ ಬೆಳೆಸಿ ದರೂ, ಇನ್ನು ಮೇಲೆ ಆ ವೈರವು ತೀರಿಹೋಯಿತಷ್ಟೆ? ಇನ್ನು ನಮ ನಮಗೆ ವೈರವೇನು? ಮುಖ್ಯವಾಗಿ ನಾವು ನಡೆಸಬೇಕಾದ ಕಾರ್ಯವು ತೀರಿತು! ಇನ್ನು ಇವನಿಗೆ ನೀನು ಸಂಸ್ಕಾರವನ್ನು ನಡೆಸು! ಇವನು ನಿನಗೆ ಹೇಗೋ, ನನಗೂ ಹಾಗೆಯೇ ಹೊರತು ಬೇರೆಯಲ್ಲ! ವಿಭೀ ಷಣಾ! ನೀನು ಸಮಸ್ತ ಧರ್ಮಗಳನ್ನೂ ಬಲ್ಲವನಾದುದರಿಂದ, ನಿನಗೆ ನಾನು ಹೇಳಿ ತಿಳಿಸಬೇಕಾದುದೇನೂ ಇಲ್ಲ. ಈ ರಾವಣನು ಈಗ ನಿನ್ನ ಕೈಯಿಂದಲೇ ಶಾಸ್ತ್ರೋಕ್ತವಾದ ಸಂಸ್ಕಾರವನ್ನು ಹೊಂದುವುದಕ್ಕೆ ತಕ್ಕವನೆಂಬುದರಲ್ಲಿ ಸಂದೇಹವಿಲ್ಲ. ಇದರಿಂದ ನಿನಗೂ ಶಾಶ್ವತವಾದ ಕೀರ್ತಿಯುಂಟು! ಆದುದರಿಂದ ಶೀಘ್ರದಲ್ಲಿ ಆ ಕಾರ್ಯಕ್ಕೆ ತ್ವರೆಮಾಡು" ಎಂದನು. ರಾಮನು ಈ ಮಾತನ್ನು ಹೇಳಿದೊಡನೆ ವಿಭೀಷಣನು ರಾಕ್ಷಸ ಸ್ತ್ರೀಯರೆಲ್ಲರನ್ನೂ ಲಂಕೆಗೆ ಕಳುಹಿಸಿ, ಯಜ್ಞಶೀಲರಿಗೆ ತಕ್ಕಂತೆ ರಾವಣ ನಿಗೆ ಸಂಸ್ಕಾರಗಳನ್ನು ನಡೆಸುವುದಕ್ಕಾಗಿ ಆತುರಪಡುತ್ತಿದ್ದನು. ಒಡನೆಯೇ ಋತ್ವಿಕ್ಕುಗಳೆಲ್ಲರೂ ಸೇರಿ, ಪದ್ಮಕ, ಲಾಮಂಚ ಮೊದಲಾದ ಸುಗಂಧ ದ್ರವ್ಯಗಳೊಡನೆ ಚಂದನಕಾಷ್ಠಗಳಿಂದ ಚಿತೆಯನ್ನೊಡ್ಡಿ, ಅದರಮೇಲೆ ಬೀಳರೋಮವುಳ್ಳ ಕೃಷ್ಣಾಜಿನವನ್ನು ಹಾಸಿ, ವೇದೋಕ್ತವಿಧಿಯಿಂದ ರಾವ ಣನನ್ನು ತಂದು ಅದರಮೇಲೆ ಮಲಗಿಸಿದರು. ಆ ಮೇಲೆ ಶಾಸ್ತ್ರೋಕ್ತ ವಾದ ಅಂತ್ಯೇಷ್ಟಿಕರ್ಮವು ನಡೆಸಲ್ಪಟ್ಟಿತು. ಕ್ರಮವಾಗಿ ಪಿತೃಮೇಧ ಸಂಸ್ಕಾರ ವನ್ನೂ ನಡೆಸುವುದಕ್ಕೆ ತೊಡಗಿದರು. ಇದಕ್ಕಾಗಿ ಚಿತೆಯ ಆಗ್ನೇಯಭಾಗ ದಲ್ಲಿ ವೇದಿಕೆಯನ್ನು ಕಲ್ಪಿಸಿ, ಅದರ ಪಶ್ಚಿಮಕ್ಕೆ ಗಾರ್ಹಪತ್ಯಾಗ್ನಿಯನ್ನೂ, ಪೂರ್ವಕ್ಕೆ ಆಹವನೀಯಾಗ್ನಿಯನ್ನೂ, ದಕ್ಷಿಣದಲ್ಲಿ ದಕ್ಷಿಣಾಗ್ನಿಯನ್ನೂ, ಹೀಗೆ

ಆಯಾಸ್ಥಾನಗಳಲ್ಲಿ ತ್ರೇತಾಗ್ನಿಗಳನ್ನೂ ಸ್ಥಾಪಿಸಿದರು. ಮೊಸರಿನಿಂದ ಮಿಶ್ರವಾದ ತುಪ್ಪವನ್ನು ಹೋಮಪಾತ್ರದಲ್ಲಿ ತುಂಬಿ, ಅಲ್ಲಿದ್ದವರೆಲ್ಲರೂ ತಮ್ಮತಮ್ಮ ಪ್ರತಿಪತ್ತಿಗಾಗಿ ಮುಂದೆಬಂದು ಚಿತೆಯಲ್ಲಿ ಹೋಮಮಾಡಿದರು. ಕರ್ಮಜ್ಞರಾದ ಋತ್ವಿಕ್ಕುಗಳು ರಾವಣನ ಪಾದದ ಕಡೆಗೆ ಸೋಮ ರಾಜ ವಾಹಕವಾದ ಶಕಟವನ್ನೂ, ಅವನ ತೊಡೆಗಳ ನಡುವೆ ಆತನ ಯಜ್ಞ ಕಾರ್ಯಕ್ಕೆ ಸಾಧನವಾಗಿದ್ದ ಒರಳನ್ನೂ, ಹಾಗೆಯೇ ಅವನ ನಾರುಪಾತ್ರೆ ಗಳು, ಅರಣಿ, ಉತ್ತರಾರಣಿ, ಒನಕೆ, ಮುಂತಾದ ಬೇರೆಬೇರೆ ಯಜ್ಞ ಸಾಧನವನ್ನೂ ಶಾಸ್ತ್ರೋಕ್ತರೀತಿಯಿಂದ ಆಯಾಸ್ಥಾನಗಳಲ್ಲಿರಿಸಿದರು. ಶ್ರುತಿ ಸ್ಮೃತಿಗಳಲ್ಲಿ ವಿಧಿಸಲ್ಪಟ್ಟ ನಿಯಮವನ್ನನುಸರಿಸಿ, ಆ ಚಿತೆಗೆ ಸಮೀಪದಲ್ಲಿ ಪರಿಶುದ್ಧವಾದ ಯಾಗಪಶುವನ್ನು (ಮೇಕೆ) ವಧಿಸಿ, ಹೋಮಮಾಡಿದರು. [1]ಪರಿಸ್ತರಣಾದಿಗಳೆಲ್ಲವನ್ನೂ ತುಪ್ಪದಲ್ಲಿ ನೆನೆಸಿ ರಾವಣನ ಮೇಲೆ ಹರಡಿದರು. ಆಗ ರಾಕ್ಷಸರೆಲ್ಲರೂ ವಿಭೀಷಣಸಹಿತರಾಗಿ ಮುಂದೆ ಬಂದು, ರಾವಣ ನನ್ನು ಗಂಧಮಾಲ್ಯಗಳಿಂದಲೂ, ವಿವಿಧ ವಸ್ತ್ರಗಳಿಂದಲೂ ಅಲಂಕರಿಸಿ, ವ್ಯಸನದಿಂದ ಕಣ್ಣೀರು ಬಿಡುತ್ತ ಆ ಚಿತೆಯಮೇಲೆ ನೆಲ್ಲರಳುಗಳನ್ನು ಚೆಲ್ಲಿದರು. ವಿಭೀಷಣನು ಮಂತ್ರಯುಕ್ತವಾಗಿ ತನ್ನಣ್ಣನಾದ ರಾವಣನಿಗೆ ಅಗ್ನಿಯನ್ನಿಟ್ಟನು. ಆ ಮೇಲೆ ಸ್ನಾನಮಾಡಿ ಆರ್ದ್ರವಸ್ತ್ರದೊಡನೆ ಬಂದು, ಎಳಗರಿಕೆಗಳಿಂದ ಮಿಶ್ರಿತಗಳಾದ ತಿಲಗಳನ್ನೂ ನೀರನ್ನೂ ಸೇರಿಸಿ, ಶಾಸ್ತ್ರೋಕ್ತವಾಗಿ ಪ್ರೇತವಾಹನವನ್ನು ಮಾಡಿ, ರಾವಣನಿಗೆ ಉದಕದಾನವನ್ನು ನಡೆಸಿ, ತಲೆಬಗ್ಗಿ ನಮಸ್ಕರಿಸಿದನು. ಆಮೇಲೆ ಅಲ್ಲಿದ್ದ ರಾವಣಸ್ತ್ರೀಯರಿಗೆ ಬಾರಿಬಾರಿಗೂ ಸಾಂತ್ವ ವಚನಗಳನ್ನು ಹೇಳಿ ಅವರನ್ನು ಪಟ್ಟಣಕ್ಕೆ ಹಿಂತಿರುಗಿಸಿ ಕರೆದುಕೊಂಡು ಹೋದನು. ಅವರೆಲ್ಲರೂ ಪಟ್ಟಣ ವನ್ನು ಪ್ರವೇಶಿಸಿದ ಮೇಲೆ, ವಿಭೀಷಣನು ಹಿಂತಿರುಗಿ ಬಂದು, ವಿನಯ

---

1 ಇಲ್ಲಿ "ಪರಿಸ್ತರಣಿಕಾಂ ರಾಜ್ಞೋ ಘೃತಾಕ್ತಾಂ ಸಮವೇಶಯನ್" ಎಂದು ಮೂಲವು. ಮಾಹೇಶ್ವರತೀರ್ಥವ್ಯಾಖ್ಯಾನದಲ್ಲಿ "ಅನುಸ್ತರಣಿಕಾಂ" ಇತ್ಯಾದಿ ಪಾಠಾಂತರವನ್ನನುಸರಿಸಿ, ಅನುಸ್ತರಣಿಕೆಯೆಂದರೆ ರಾಜಗವಿಯ ಚರ್ಮವೆಂದು ಅರ್ಥಮಾಡಲ್ಪಟ್ಟಿರುವುದು. "ಯಥಾಮೃತಾಯಾನುಸ್ತರಣೀಂ ಘ್ನಂತಿ" ಎಂಬ ಶ್ರುತಿಪ್ರಮಾಣದಿಂದ ರಾಜಗವಿಯನ್ನು ಕೊಂದು ಅದರ ಚರ್ಮವನ್ನು ತುಪ್ಪದಲ್ಲಿ ಅದ್ದಿ, ಮೃತಶರೀರದಮೇಲೆ ಹೊಂದಿಸಬೇಕೆಂಬುದು ವಿಧಿಯು.

ದಿಂದ ರಾಮನ ಪಕ್ಕದಲ್ಲಿ ನಿಂತನು. ಆಗ ರಾಮನು ವೃತ್ರನನ್ನು ಕೊಂದ ದೇವೇಂದ್ರನಂತೆ ಶತ್ರುಜಯದಿಂದುಂಟಾದ ಕಾಂತಿವಿಶೇಷದಿಂದ ಬೆಳಗುತ್ತ ಸಮಸ್ತ ವಾನರ ಸೈನ್ಯಗಳಿಂದ ಪರಿವೃತನಾಗಿ, ಸುಗ್ರೀವಲಕ್ಷ್ಮಣರೊಡ ಗೂಡಿ ಪರಮಾನಂದದಿಂದಿದ್ದನು.

ಇಲ್ಲಿಗೆ ನೂರಹದಿನಾಲ್ಕನೆಯ ಸರ್ಗವು.

ರಾಮಾಜ್ಞೆಯಿಂದ ಲಕ್ಷ್ಮಣನು ಲಂಕೆಯಲ್ಲಿ ವಿಭೀಷಣನಿಗೆ ರಾವಣನ ಸಿಂಹಾಸನದಮೇಲೆ ಪಟ್ಟವನ್ನು ಕಟ್ಟಿದುದು. ಪಟ್ಟಾಭಿಷಿಕ್ತ ನಾದ ವಿಭೀಷಣನು ಪ್ರಜೆಗಳನ್ನು ಸಂತೋಷಪಡಿಸಿ ಹಿಂತಿರುಗಿ ರಾಮನಸಬಳಿಗೆ ಬಂದುದು. ರಾಮನು ಸೀತೆಗೆ ತನ್ನ ಜಯ ವನ್ನು ತಿಳಿಸುವುದಕ್ಕಾಗಿ ಹನುಮಂತನನ್ನು ಕಳುಹಿಸಿದುದು.

ಆಗ ಯುದ್ಧವನ್ನು ನೋಡುವುದಕ್ಕಾಗಿ ಬಂದಿದ್ದ ದೇವಗಂಧರ್ವ ದಾನವಾದಿಗಳೆಲ್ಲರೂ ರಾವಣವಧವನ್ನು ನೋಡಿ ಸಂತೋಷಗೊಂಡು, ತಮ್ಮ ತಮ್ಮ ವಿಮಾನಗಳನ್ನೇರಿ ತಮ್ಮ ತಮ್ಮೊಳಗೆ ಶುಭಸಲ್ಲಾಪಗಳನ್ನು ಮಾಡುತ್ತ ಸ್ವಸ್ಥಾನಗಳಿಗೆ ಹೋದರು. ಈ ಮಹಾತ್ಮರೆಲ್ಲರೂ ಭಯಂಕರವಾದ ಆ ರಾವಣನ ವಧವನ್ನೂ, ಶ್ರೀರಾಮನ ಮಹಾದ್ಭುತ ಪರಾಕ್ರಮವನ್ನೂ, ವಾನರರ ಸಾಹಸವನ್ನೂ, ಸುಗ್ರೀವನ ಮಂತ್ರಶಕ್ತಿಯನ್ನೂ, ಲಕ್ಷ್ಮಣನಿಗೆ ರಾಮನಲ್ಲಿರುವ ಭಕ್ತಿವಿಶೇಷವನ್ನೂ, ಆ ಲಕ್ಷ್ಮಣನ ಪರಾಕ್ರಮವನ್ನೂ, ಅಂತಹ ಪುತ್ರರತ್ನವನ್ನು ಪಡೆದ ಸುಮಿತ್ರೆಯ ಭಾಗ್ಯ ವಿಶೇಷವನ್ನೂ, ಸಂತೋಷದಿಂದ ಸಲ್ಲಪಿಸುತ್ತ, ತಾವು ಬಂದದಾರಿಯನ್ನು ಹಿಡಿದು ಹೊರಟು ಹೋದರು. ಇತ್ತಲಾಗಿ ಮಹಾತ್ಮನಾದ ಶ್ರೀರಾಮನು, ಮಾತಲಿಯನ್ನು ಬಹಳವಾಗಿ ಮನ್ನಿಸಿ, ದೇವೇಂದ್ರನು ತನಗಾಗಿ ಕಳುಹಿಸಿ ಕೊಟ್ಟಿದ್ದ ಅಗ್ನಿ ಯಂತೆ ದೇದೀಪ್ಯಮಾನವಾದ ದಿವ್ಯರಥವನ್ನು ಹಿಂತಿರುಗಿ ತೆಗೆದುಕೊಂಡು ಹೋಗುವಂತೆ ಅನುಮತಿಯನ್ನು ಕೊಟ್ಟನು. ಇಂದ್ರಸಾರಥಿಯಾದ ಮಾತ ಲಿಯು ರಾಮಾಜ್ಞೆಯಂತೆ ಆ ದಿವ್ಯರಥವನ್ನೇರಿ ಇಂದ್ರಲೋಕಕ್ಕೆ ಹೊರಟು

ಹೋದನು. ಮಾತಲಿಯು ಅತ್ತಲಾಗಿ ಸ್ವರ್ಗಲೋಕದಕಡೆಗೆ ಹೋದ ಮೇಲೆ, ಇತ್ತಲಾಗಿ ರಾಮನು ಸುಗ್ರೀವನು ತನಗೆ ಮಾಡಿದ ಸಹಾಯಕ್ಕಾಗಿ ಅವನನ್ನು ಪ್ರೇಮದಿಂದಾಲಿಂಗಿಸಿಕೊಂಡನು. ಹೀಗೆ ಶ್ರೀರಾಮನು ಸುಗ್ರೀವನನ್ನಾಲಿಂಗಿಸಿಕೊಂಡು, ಅವನನ್ನು ವಿಶೇಷವಾಗಿ ಮನ್ನಿಸಿ ಅನೇಕ ವಾನರರಿಂದ ಪೂಜಿಸಲ್ಪಡುತ್ತ ಲಕ್ಷ್ಮಣನಿಂದ ಪ್ರೇರಿತನಾಗಿ ತನ್ನ ಸೇನಾನಿವೇಶಸ್ಥಳಕ್ಕೆ ಹೊರಟು ಬಂದನು. ಅಲ್ಲಿ ಶ್ರೀರಾಮನು ತನ್ನ ಸಮೀಪದಲ್ಲಿ ನಿಂತಿದ್ದ ಸತ್ಯಸಂಪನ್ನನಾದ ಲಕ್ಷ್ಮಣನನ್ನು ನೋಡಿ [1]"ಎಲೈ ಸೌಮ್ಯನೆ! ನೀನು ಈಗಲೇ ಹೋಗಿ ಈ ವಿಭೀಷಣನಿಗೆ ಲಂಕಾರಾಜ್ಯದಲ್ಲಿ ಅಭಿಷೇಕವನ್ನು ನಡೆಸಿ ಬರಬೇಕು! ಇವನು ನಮ್ಮಲ್ಲಿ ನಿಜವಾದ ಅನುರಾಗವುಳ್ಳವನು. ವಿಶೇಷಭಕ್ತಿಯುಳ್ಳವನು! ಇದುವರೆಗೆ ನಮಗೆ ಬಹಳವಾದ ಉಪಕಾರವನ್ನೂ ಮಾಡಿರುವನು. ರಾವಣಾನುಜನಾದ ಈ ವಿಭೀಷಣನು ಲಂಕಾರಾಜ್ಯಾಭಿಷಿಕ್ತನಾಗುವುದನ್ನು ನೋಡಬೇಕೆಂಬುದೇ ನನ್ನ ಮುಖ್ಯವಾದ ಕೋರಿಕೆಯು. ಆದುದರಿಂದ ನೀನು ಮೊದಲು ಈ ಕಾರ್ಯವನ್ನು ನಡೆಸಬೇಕು" ಎಂದನು. ಮಹಾತ್ಮನಾದ ರಾಮನು ಈ ಮಾತನ್ನು ಹೇಳಿದೊಡನೆ ಲಕ್ಷ್ಮಣನು "ಆರ್ಯನಪ್ಪಣೆ!" ಎಂದು ಹೇಳಿ, ಪರಮಸಂತುಷ್ಟನಾಗಿ, ಆಗಲೇ ಕೆಲವು ಸುವರ್ಣಕಲಶಗಳನ್ನು ತರಿಸಿ ಎಲ್ಲವನ್ನೂ ಮಹಾವೇಗಶಾಲಿಗಳಾದ ವಾನರರ ಕೈಗೆಕೊಟ್ಟು, ಸಮುದ್ರಜಲವನ್ನು ತರುವಂತೆ ಆಜ್ಞಾಪಿಸಿದನು. ಲಕ್ಷ್ಮಣಾಜ್ಞೆಯಂತೆ ಬಲಾಢ್ಯರಾದ ಆ ವಾನರೋತ್ತಮರೆಲ್ಲರೂ ವೇಗದಿಂದ ಸಮುದ್ರಕ್ಕೆ ಹೋಗಿ, ಅಲ್ಲಿಂದ ಪುಣ್ಯತೀರ್ಥವನ್ನು ತಂದಿರಿಸಿದರು. ಆಮೇಲೆ ಲಕ್ಷ್ಮಣನು ವಿಭೀಷಣನನ್ನು ಕರೆತಂದು ಸಿಂಹಾಸನದಲ್ಲಿ ಕುಳ್ಳಿರಿಸಿ, ತನ್ನ ಕೈಯಿಂದಲೇ ಒಂದು ಕಲಶ

1 ಮೊದಲು ಸಮುದ್ರತೀರದಲ್ಲಿಯೇ ವಿಭೀಷಣನಿಗೆ ರಾಜ್ಯಾಭಿಷೇಕವು ನಡೆದಿದ್ದರೂ, ಆ ವಿಭೀಷಣನಿಗೆ ರಾವಣನ ಸಿಂಹಾಸನದಲ್ಲಿಯೇ ಅಭಿಷೇಕವನ್ನು ನಡೆಸಬೇಕೆಂಬ ಉದ್ದೇಶದಿಂದ ತಿರುಗಿ ಇಲ್ಲಿ ಮತ್ತೊಮ್ಮೆ ಅದನ್ನು ವಿಧಿಸಿದುದಾಗಿ ಗ್ರಾಹ್ಯವು. ಇಲ್ಲಿ ರಾಮನು ವಿಭೀಷಣನು ಪಟ್ಟಾಭಿಷಿಕ್ತನಾಗುವುದನ್ನು ನೋಡಬೇಕೆಂಬುದೇ ತನ್ನ ಪರಮೋದ್ದೇಶವೆಂದು ಹೇಳಿರುವುದರಿಂದ, ಸೀತಾಲಾಭಕ್ಕಿಂತಲೂ ಶರಣಾಗತನಾದ ವಿಭೀಷಣನ ಅಭಿಮತವನ್ನು ಪೂರಯಿಸುವುದೇ ತನ್ನ ಜಯಕ್ಕೆ ಮುಖ್ಯಪ್ರಯೋಜನವೆಂದು, ಭಗವಂತನಲ್ಲಿರುವ ಅಸಾಧಾರಣವಾದ ಆಶ್ರಿತವಾತ್ಸಲ್ಯವು ಸೂಚಿತವಾಗುವುದು.

ವನ್ನೆತ್ತಿ, [1]ಶುದ್ಧಾತ್ಮನಾದ ವಿಭೀಷಣನಿಗೆ ಇದರಿಂದ ಅಭಿಷೇಕವನ್ನು ನಡೆಸಿದನು. ಧರ್ಮಾತ್ಮನಾದ ಲಕ್ಷ್ಮಣನು ಲಂಕೆಯಲ್ಲಿ ಸಮಸ್ತ ಬಂಧು ಮಿತ್ರರಿಂದ ಪರಿವೃತನಾದ ಆ ವಿಭೀಷಣನಿಗೆ ರಾಮಾಜ್ಞೆಯಂತೆ ಸಮಸ್ತ ರಾಕ್ಷಸರ ಮಧ್ಯದಲ್ಲಿ ವೇದೋಕ್ತವಿಧಿಯಿಂದ ಪಟ್ಟಾಭಿಷೇಕವನ್ನು ನಡೆಸಿ ದನು. ಹೀಗೆ ವಿಭೀಷಣನು ಲಂಕೆಯಲ್ಲಿ ಪಟ್ಟಾಭಿಷಿಕ್ತನಾಗಿ, ಅಲ್ಲಿನ ರಾಕ್ಷಸರಿಗೆ ಪ್ರಭುವಾದುದನ್ನು ನೋಡಿ, ವಿಭೀಷಣನ ನಾಲ್ಕುಮಂದಿ ಮಂತ್ರಿಗಳೂ, ಅವನಲ್ಲಿ ಭಕ್ತಿಯುಳ್ಳ ಇತರ ರಾಕ್ಷಸರೂ ಪರಮಸಂತೋಷ ವನ್ನು ಹೊಂದಿದರು. ಹೀಗೆ ವಿಭೀಷಣನು ರಾಮಾನುಗ್ರಹದಿಂದ ತನಗೆ ಲಭಿಸಿದ ರಾಕ್ಷಸ ಸಾಮ್ರಾಜ್ಯವನ್ನು ಪಡೆದು, ಅಲ್ಲಿನ ಪ್ರಜೆಗಳೆಲ್ಲರನ್ನೂ ಪ್ರಿಯವಾಕ್ಯಗಳಿಂದ ಮನ್ನಿಸಿ ಸಂತೋಷಪಡಿಸಿ, ಆಗಲೇ ಅಲ್ಲಿಂದ ಹಿಂತಿ ರುಗಿ ರಾಮನ ಸಾನ್ನಿಧ್ಯಕ್ಕೆ ಹೊರಟನು. ಆಗ ಲಂಕಾಪುರನಿವಾಸಿಗಳೂ, ರಾಕ್ಷಸ ಪ್ರಧಾನರೂ, ಅಕ್ಷತೆಗಳನ್ನೂ ಹೂರಣಗಡುಬುಗಳನ್ನೂ, ಅರಳು ಗಳನ್ನೂ, ದಿವ್ಯಪುಷ್ಪಗಳನ್ನೂ ಮಂಗಳಾರ್ಥವಾಗಿ ತಂದು ವಿಭೀಷಣನಿಗೆ ಸಮರ್ಪಿಸಿದರು. ವೀರ್ಯಶಾಲಿಯಾಗಿಯೂ, ಶತ್ರುದುರ್ಜಯನಾಗಿಯೂ ಇರುವ ವಿಭೀಷಣನು, ಆ ಮಂಗಳವಸ್ತುಗಳೆಲ್ಲವನ್ನೂ ಸಂತೋಷದಿಂದ ಸ್ವೀಕರಿಸಿ, ತಾನೂ ರಾಮಲಕ್ಷ್ಮಣರಿಗಾಗಿ ಶುಭದ್ರವ್ಯಗಳನ್ನು ತಂದು ಭಕ್ತಿಯಿಂದ ಸಮರ್ಪಿಸಿದನು. ಹೀಗೆ ಕೃತಾರ್ಥನಾಗಿ ಪರಿಪೂರ್ಣ ಮನೋರಥನಾಗಿ ಬಂದ ವಿಭೀಷಣನನ್ನು ನೋಡಿ ರಾಮನು, ಆತನ ಮನಸ್ಸಂತೋಷಾರ್ಥ ವಾಗಿ ಅವನು ಕೊಟ್ಟ ವಸ್ತುಗಳೆಲ್ಲವನ್ನೂ ಪ್ರೀತಿಯಿಂದ ಪರಿಗ್ರಹಿಸಿದನು. ಆ ಮೇಲೆ ರಘುಕುಲೋತ್ತಮನಾದ ಶ್ರೀರಾಮನು, ತನ್ನ ಪಕ್ಕದಲ್ಲಿ ಬದ್ಧಾಂಜಲಿಯಾಗಿ ಪರ್ವತದಂತೆ ನಿಂತಿದ್ದ ವೀರಾಗ್ರಣಿಯಾದ ಹನುಮಂತ ನನ್ನು ನೋಡಿ, "ಎಲೈ ಸೌಮ್ಯನೇ! ಜಯಶೀಲಾಗ್ರಗಣ್ಯನೆ! ಮಹಾ ರಾಜ ನಾದ ಈ ವಿಭೀಷಣನ ಅನುಮತಿಯಿಂದ ರಾವಣನ ಗೃಹವನ್ನು ಪ್ರವೇಶಿಸಿ, ಮೊದಲು ಸೀತೆಗೆ ನಮ್ಮ ವಿಜಯವಾರ್ತೆಯನ್ನು ಹೇಳಿ ಸಂತೋಷಪಡಿಸು! ನಾನು ಸುಗ್ರೀವ ಲಕ್ಷ್ಮಣರೊಡನೆ ಕ್ಷೇಮದಿಂದಿರುವ ವೃತ್ತಾಂತವನ್ನೂ, ನನ್ನಿಂದ ರಾವಣನು ಹತನಾದ ಸಂಗತಿಯನ್ನೂ ಆ ವಿದೇಹರಾಜಪುತ್ರಿಗೆ

---

[1] ಇಲ್ಲಿ ಶುದ್ಧಾತ್ಮನೆಂಬುದರಿಂದ ವಿಭೀಷಣನು ರಾಮಾಜ್ಞಾರೂಪವಾದ ಕೈಂಕರ್ಯ ವನ್ನು ನಡೆಸದೆ ಬಿಡಬಾರದೆಂಬುದಕ್ಕಾಗಿಯೇ ಆ ರಾಜ್ಯವನ್ನು ಕೈಕೊಂಡನೇ ಹೊರತು ರಾಜ್ಯಾಭಿಲಾಷೆಯಿಂದಲ್ಲವೆಂದು ಸೂಚಿತವು.

ತಿಳಿಸು! ಎಲೈ ವಾನರೇಂದ್ರನೆ! ನೀನು ಈ ಶುಭವೃತ್ತಾಂತವನ್ನು ಸೀತೆಗೆ ತಿಳಿಸು. ಅಲ್ಲಿಂದ ಆಕೆಯ ಪ್ರತಿಸಂದೇಶವನ್ನು ತೆಗೆದುಕೊಂಡು ಶೀಘ್ರದಲ್ಲಿ ಹಿಂತಿರುಗಿ ಬರಬೇಕು!" ಎಂದನು.

ಇಲ್ಲಿಗೆ ನೂರಹದಿನೈದನೆಯ ಸರ್ಗವು.

ಹನುಮಂತನು ಸೀತೆಗೆ ರಾಮನ ಜಯವನ್ನು ತಿಳಿಸಿ ಅವಳ ಸಂದೇಶ
ವನ್ನು ತೆಗೆದುಕೊಂಡು ಹಿಂತಿರುಗಿ ರಾಮನ ಬಳಿಗೆ ಬಂದುದು.

ಶ್ರೀರಾಮನು ಹೀಗೆಂದು ಆಜ್ಞಾಪಿಸಿದಕೂಡಲೆ, ವಾಯುಪುತ್ರನಾದ ಹನುಮಂತನು ಅಲ್ಲಿಂದ ಹೊರಟು, ಅನೇಕ ರಾಕ್ಷಸರಿಂದ ಪೂಜಿಸಲ್ಪಡುತ್ತ ಲಂಕೆಯನ್ನು ಪ್ರವೇಶಿಸಿದನು. ಮಹಾತೇಜಸ್ವಿಯಾದ ಆ ಹನುಮಂತನು ರಾವಣ ಗೃಹಕ್ಕೆ ಸೇರಿದ ವಿಹಾರೋದ್ಯಾನಕ್ಕೆಹೋದನು. ಅಲ್ಲಿ ಒಂದಾನೊಂದು ವೃಕ್ಷದ ಕೆಳಗೆ ಸೀತೆಯು ಅನೇಕ ಘೋರರಾಕ್ಷಸಿಯರಿಂದ ಪರಿವೃತೆಯಾಗಿ ಮನಸ್ಸಿನಲ್ಲಿ ಸ್ವಲ್ಪವೂ ಹರ್ಷವಿಲ್ಲದೆ, ದೇಹಸಂಸ್ಕಾರವೂ ಇಲ್ಲದೆ, ಕ್ರೂರ ಗ್ರಹಪೀಡಿತೆಯಾದ ರೋಹಿಣಿಯಂತೆ ದೀನದಶೆಯಲ್ಲಿರುವುದನ್ನು ಕಂಡನು. ಅವಳನ್ನು ಕಂಡೊಡನೆ ಸಮೀಪಕ್ಕೆ ಹೋಗಿ, ತನ್ನ ಹೆಸರನ್ನು ಹೇಳಿ ಭಕ್ತಿಯಿಂದ ಪ್ರಣಾಮಮಾಡಿ, ವಿನಯದಿಂದ ಕುಗ್ಗಿದ ಮೈಯುಳ್ಳವನಾಗಿ, ನಿಶ್ಚಲವಾಗಿ ನಿಂತಿದ್ದನು. ಬಲಾಢ್ಯನಾದ ಈ ಮಹಾಕಪಿಯು ಸಮೀಪಕ್ಕೆ ಬಂದು ನಿಂತಾಗಲೂ ಸೀತೆಯು, ಸ್ವಲ್ಪ ಹೊತ್ತಿನವರೆಗೆ ಗುರುತು ಹಿಡಿಯಲಾರದೆ, ಸುಮ್ಮನಿದ್ದು, ಆಮೇಲೆ ತನ್ನಲ್ಲಿ ತಾನೇ ಜ್ಞಾಪಿಸಿಕೊಂಡು, ತಿರುಗಿ ಅವನನ್ನು ಚೆನ್ನಾಗಿ ನೋಡಿ, "ಓಹೋ! ಹಿಂದೆ ಬಂದಿದ್ದ ವಾನರೋತ್ತಮನೇ ಇವನು!" ಎಂದು ಪರಮ ಸಂತೋಷದಿಂದುಬ್ಬಿದಳು. ಆಗ ವಾನರೋತ್ತಮನಾದ ಹನುಮಂತನು, ತನ್ನನ್ನು ನೋಡಿದಮೇಲೆ ಸೀತೆಗುಂಟಾದ ಮುಖವಿಕಾರವನ್ನು ನೋಡಿ, ತಾನೂ ಧೈರ್ಯವನ್ನು ತಂದುಕೊಂಡು, ರಾಮನು ಹೇಳಿ ಕಳುಹಿಸಿದ್ದ ಮಾತುಗಳನ್ನು ಹೇಳತೊಡಗಿದನು. "ಎಲೈ ದೇವಿ ವೈದೇಹಿ! ಸುಗ್ರೀವ ಲಕ್ಷ್ಮಣರೊಡನೆ ನಿನ್ನ ಪತಿಯಾದ ರಾಮನು ಕ್ಷೇಮದಿಂದಿರುವನು! ವಿಭೀಷಣನೂ, ನಮ್ಮಲ್ಲಿರುವ ಸಮಸ್ತವಾನರಸೈನಿಕರೂ ಕ್ಷೇಮದಿಂದಿರುವನು.

ಪರಂತಪನಾದ ಶ್ರೀರಾಮನು ಶತ್ರುವನ್ನಡಗಿಸಿ ಕೃತಕೃತ್ಯನಾಗಿ, ತನ್ನ ಕ್ಷೇಮ ವನ್ನು ನಿನಗೆ ಹೇಳಿ ಕಳುಹಿಸಿರುವನು. ಅಮ್ಮಾ! ವಿಭೀಷಣನ ಉಪಕಾರ ದಿಂದಲೂ ವಾನರರ ಸಹಾಯದಿಂದಲೂ, ಲಕ್ಷ್ಮಣನ ನೀತಿಬಲದಿಂದಲೂ ನಿನ್ನ ಪತಿಯಾದ ಶ್ರೀರಾಮನು, ಶತ್ರುವಾದ ರಾವಣನನ್ನು ಕೊಂದು ಜಯಶೀಲ ನಾಗಿರುವನು. ಹೀಗೆ ತಾನು ಶತ್ರುವನ್ನು ಕೊಂದು ಕೃತಾರ್ಥನಾದುದ ರಿಂದ, ಸಂತೋಷಪೂರ್ವಕವಾಗಿ ನಿನಗೆ ತನ್ನ ಮಾತಿನಿಂದ ಹೀಗೆ ಹೇಳಿ ಕಳುಹಿಸಿರುವನು. "ದೇವಿ! ಮೊದಲು ಪ್ರಿಯವಾರ್ತೆಯನ್ನು ತಿಳಿಸಿ ನಿನ್ನನ್ನು ವಿಶೇಷವಾಗಿ ಸಂತೋಷಪಡಿಸುವೆನು. ಪಾತಿವ್ರತ್ಯಧರ್ಮವನ್ನು ತಿಳಿದ ನೀನು ಇದುವರೆಗೂ ಬದುಕಿದ್ದುದು ನನ್ನ ಭಾಗ್ಯವು! ನೀನಿಲ್ಲದಪಕ್ಷದಲ್ಲಿ ನಾನು ಜಯಿಸಿದುದೂ ನಿರರ್ಥಕವಾಗುತ್ತಿತ್ತು. ಎಲೆ ಸೀತೆ! ಯುದ್ಧದಲ್ಲಿ ನಮ್ಮ ಪರಾಕ್ರಮದಿಂದಲೇ ನಮಗೆ ಜಯವು ಕೈಗೂಡಿತ್ತು. ಇನ್ನು ನಿನ್ನ ಮನಸ್ಸಿನ ವ್ಯಥೆಯನ್ನು ಬಿಟ್ಟು ನೆಮ್ಮದಿಯಿಂದಿರು! ನಿನ್ನ ಶತ್ರುವಾದ ರಾವಣನು ಹತನಾದನು. ಈಗ ಲಂಕೆಯು ನಮ್ಮ ವಶವಾಗಿರುವುದು. ನಿನ್ನನ್ನು ಶತ್ರು ವಿನ ಸೆರೆಯಿಂದ ಬಿಡಿಸಬೇಕೆಂಬುದರಲ್ಲಿಯೇ ದೃಢವಾದ ಮನಸ್ಸನ್ನು ಮಾಡಿ, ಅದರಿಂದ ನಿದ್ರಾಹಾರಗಳಲ್ಲಿಯೂ ಅಭಿರುಚಿಯಿಲ್ಲದೆ, ಈ ಮಹಾಸಮು ದ್ರಕ್ಕೆ ಸೇತುವನ್ನು ಕಟ್ಟಿ ಇಲ್ಲಿಗೆ ಬಂದೆನು. ನೀನು ಲಂಕೆಯಲ್ಲಿರುವುದಕ್ಕಾಗಿ ಇನ್ನುಮೇಲೆ ಎಷ್ಟುಮಾತ್ರವೂ ಮನಸ್ಸಿನಲ್ಲಿ ಕೊರಗಬೇಕಾದುದಿಲ್ಲ. ರಾವ ಣನು ಸತ್ತು ಈ ಲಂಕಾರಾಜ್ಯವೆಲ್ಲವೂ ಈಗ ನಮ್ಮ ವಿಭೀಷಣನ ಕೈವಶ ವಾಗಿರುವುದರಿಂದ, ಈಗ ನೀನು ಸ್ವಂತಮನೆಯಲ್ಲಿರುವಂತೆಯೇ ಹೊರತು ಬೇರೆಯಲ್ಲ! ಇನ್ನು ನಿನಗೆ ಯಾವ ಭಯವೂ ಇಲ್ಲವೆಂದು ನಂಬಿ ಸಮಾ ಧಾನದಿಂದಿರು. ಆ ವಿಭೀಷಣನು ನಿನ್ನ ದರ್ಶನಕ್ಕಾಗಿ ತವಕಿಸುತ್ತಿರುವುದ ರಿಂದ, ಇದೋ ಈಗಲೇ ಬಂದು ನಿನ್ನನ್ನು ನೋಡುವನು!" ಎಂದು ತನ್ನ ಮಾತಿನಿಂದಲೇ ನಿನಗೆ ಹೇಳುವಂತೆ ವಿಜ್ಞಾಪಿಸಿ ಕಳುಹಿಸಿರುವನು" ಎಂದನು. ಹನುಮಂತನು ಈ ಮಾತುಗಳನ್ನು ಹೇಳಿದೊಡನೆ ಚಂದ್ರಮುಖಿಯಾದ ಆ ರಮಣೀಮಣಿಯು ಸಂತೋಷವನ್ನು ತಡೆಯಲಾರದೆ, ತಟ್ಟನೆ ಮೇಲೆದ್ದು ನಿಂತು, ಆ ಸಂತೋಷಾತಿಶಯದಿಂದ ಮುಂದೆ ಯಾವ ಮಾತನ್ನೂ ಆಡಲಾರದೆ ಸುಮ್ಮನಿದ್ದಳು. ಹೀಗೆ ಸೀತೆಯು ತನ್ನ ಮಾತಿಗೆ ಪ್ರತ್ಯುತ್ತರವನ್ನೂ ಕೊಡದೆ ಮೌನದಿಂದಿರುವುದನ್ನು ನೋಡಿ ಹನುಮಂತನು ತಿರುಗಿ ಅವಳನ್ನು ಕುರಿತು,

"ಅಮ್ಮಾ ಇದೇನು? ಏನನ್ನಾಲೋಚಿಸುತ್ತಿರುವೆ? ನನಗೇಕೆ ಪ್ರತ್ಯುತ್ತರವನ್ನು ಕೊಡುವುದಿಲ್ಲ?" ಎಂದು ಕೇಳಿದನು. ಪಾತಿವ್ರತ್ಯ ಧರ್ಮದಲ್ಲಿ ನೆಲೆಗೊಂಡ ಆ ಸೀತೆಯು, ಹನುಮಂತನ ಮಾತನ್ನು ಕೇಳಿ, ತನ್ನ ಪತಿಯಾದ ರಾಮನು ತನಗೆ ಕಳುಹಿಸಿದ ಸಂದೇಶವಾರ್ತೆಗಾಗಿ ಪರಮಸಂತೋಷದಿಂದುಕ್ಕುತ್ತ, ಆ ಸಂತೋಷದಿಂದ ಗದ್ಗದಸ್ವರವುಳ್ಳವಳಾಗಿ, "ವಾನರೋತ್ತಮ! ನನ್ನ ಪತಿಯು ಜಯಶೀಲನಾದನೆಂಬ ಈ ಪ್ರಿಯವಾರ್ತೆಯನ್ನು ಕೇಳಿ ಈಗ ನನಗುಂಟಾದ ಸಂತೋಷವು, ನನ್ನನ್ನು ನೈಮರೆಯುವಂತೆ ಮಾಡಿತು. ಕ್ಷಣಮಾತ್ರದವರೆಗೆ ಯಾವ ಮಾತಾಡುವುದಕ್ಕೂ ನನಗೆ ಸಾಧ್ಯವಿಲ್ಲದೆ ಹೋಯಿತು. ಎಲೈ ಹನುಮಂತನೆ, ನನಗೆ ಈ ವಿಧವಾದ ಪ್ರಿಯವಾರ್ತೆಯನ್ನು ತಿಳಿಸಿ ಮಹೋಪಕಾರವನ್ನು ಮಾಡಿದ ನಿನಗೆ, ಪ್ರತ್ಯುಪಕಾರರೂಪವಾಗಿ ನಾನು ಯಾವ ಪ್ರಿಯವಚನವನ್ನು ಹೇಳಬೇಕೆಂದು ಎಷ್ಟೆಷ್ಟು ವಿಧದಿಂದ ಆಲೋಚನೆ ಮಾಡಿದರೂ ನನಗೆ ತೋರದಿರುವುದು! ಈ ನಿನ್ನ ಪ್ರಿಯವಾರ್ತೆಗೆ ತಕ್ಕಂತೆ ಪ್ರತಿವಾಕ್ಯವನ್ನು ಹೇಳಬೇಕೆಂದರೆ, ಈ ತ್ರೈಲೋಕ್ಯವನ್ನು ಹುಡುಕಿದರೂ ತಕ್ಕವಾಕ್ಯವು ದುರ್ಲಭವಾಗಿರುವುದು. ಈಗ ನಾನು ಯಾವ ವಿಧವಾದ ಪ್ರಿಯವಚನವನ್ನು ಹೇಳಹೋದರೂ, ಅದು, ಈಗ ನೀನು ತಂದಿರುವ ಪ್ರಿಯವಾರ್ತೆಗೆ ಸರಿ ಹೋಲದೆಂದು ತೋರುವುದು. ಎಲೆ ಸೌಮ್ಯನೆ! ನೀನು ಹೇಳಿದ ಪ್ರಿಯವಾರ್ತೆಗೆ ತಕ್ಕಂತೆ ಪ್ರತ್ಯುತ್ತರವನ್ನು ಹೇಳುವುದಕ್ಕೆ ಸರಿಯಾದ ಪ್ರಿಯವಚನವು ಈ ಲೋಕದಲ್ಲಿಲ್ಲವೆಂಬ ಮಾತೂ ಹಾಗಿರಲಿ ! ಈ ಪ್ರಿಯಸಂದೇಶವನ್ನು ತಂದ ನಿನಗೆ ತಕ್ಕ ಪ್ರಿಯವಸ್ತುವನ್ನು ಕೊಟ್ಟು ಸತ್ಕರಿಸಬೇಕೆಂದರೂ ಅಂತಹ ವಸ್ತುವೂ ಕೂಡ ಈ ಭೂಮಿಯಲ್ಲಿಯಾಗಲಿ, ಸ್ವರ್ಗಪಾತಾಳಗಳಲ್ಲಿಯಾಗಲಿ, ನನಗೆ ಕಾಣದಿರುವುದು. ಚಿನ್ನಬೆಳ್ಳಿಗಳನ್ನಾಗಲಿ, ವಿವಿಧ ರತ್ನಗಳನ್ನಾಗಲಿ, ತ್ರೈಲೋಕ್ಯರಾಜ್ಯಾಧಿಪತ್ಯವನ್ನಾಗಲಿ, ಕೊನೆಗೆ ಇವೆಲ್ಲವನ್ನೂ ಸೇರಿಸಿ ಕೊಟ್ಟರೂ, ನೀನು ಹೇಳಿದ ಪ್ರಿಯವಾರ್ತೆಗೆ ಸಾಟಿಯೆಂದು ಹೇಳಿಸಿಕೊಳ್ಳಲಾರದು" ಎಂದಳು. ಸೀತೆಯು ಹೇಳಿದ ಮಾತನ್ನು ಕೇಳಿ ಹನುಮಂತನು ಅವಳಮುಂದೆ ಬದ್ಧಾಂಜಲಿಯಾಗಿ ನಿಂತು "ಅಮ್ಮಾ! ಯಾವಾಗಲೂ ಪತಿಗೆ ಪ್ರಿಯವನ್ನೂ, ಹಿತವನ್ನೂ ಕೋರುವುದರಲ್ಲಿಯೇ ನಿರತಳಾಗಿ, ಪತಿಯ ಜಯವನ್ನೇ ಹಾರೈಸುತ್ತಿರುವ ಈ ನಿನ್ನ ಪ್ರಿಯವಚನವೇ ಸಾಕು ! ವಾತ್ಸಲ್ಯಸೂಚಕವಾದ ಇಂತಹ ವಾಕ್ಯವನ್ನು ಹೇಳುವುದು ನಿನಗೊಬ್ಬಳಿಗೆ ಹೊರತು ಲೋಕದಲ್ಲಿ ಬೇರೊಬ್ಬರಿಗೆ ಸಲ್ಲದು. ಅಮ್ಮಾ !

ನೀನು ಇದಕ್ಕಿಂತಲೂ ನನ್ನಲ್ಲಿ ತೋರಿಸಬೇಕಾದ ಪ್ರಿಯವೇನಿರುವುದು? ನನಗೆ ನೀನು ಪ್ರತ್ಯುತ್ತರವಾಗಿ ಹೇಳಬೇಕಾದ ಪ್ರಿಯವಚನವೇ ನಿನಗೆ ತೋರಲಿಲ್ಲವೆಂದು ಹೇಳಿದೆಯಲ್ಲವೆ? ಇದೊಂದು ಮಾತೇ ನನಗೆ ಸಾಕಾಗಿರುವುದು· ಸಾರವತ್ತಾಗಿಯೂ, ಸ್ನೇಹಪೂರ್ವಕವಾಗಿಯೂ ಇರುವ ನಿನ್ನ ಆ ವಾಕ್ಯವೊಂದೇ ವಿವಿಧ ರತ್ನಸಮೂಹಗಳಿಗಿಂತಲೂ, ಕೊನೆಗೆ ದೇವೇಂದ್ರ ಪದವಿಗಿಂತಲೂ ಮೇಲೆನಿಸಿಕೊಳ್ಳುವುದು. ನಿನ್ನ ಬಾಯಿಂದ ಆ ಮಾತನ್ನು ನಾನು ಕೇಳಿದ ಮಾತ್ರದಿಂದಲೇ ನನಗೆ ನೀನು ಕೊಡಬೇಕೆಂದು ಕೋರಿದ ದುರ್ಲಭವಸ್ತುಗಳೆಲ್ಲವೂ ಲಭಿಸಿದಂತಾದುವು! ಇದಲ್ಲದೆ ಎಲೆ ದೇವಿ! ಆ ಶ್ರೀರಾಮನು ಶತ್ರುವನ್ನು ಕೊಂದು ಜಯವನ್ನು ಹೊಂದಿ ಕೃತಾರ್ಥನಾಗಿ ಸಂತೋಷದಿಂದಿರುವುದನ್ನು ಈಗ ನಾನು ಈ ನನ್ನ ಕಣ್ಣಾರೆ ನೋಡುತ್ತಿರುವೆನಲ್ಲವೆ! ಇದಕ್ಕಿಂತಲೂ ನನಗೆ ಬೇರೆ ಪ್ರಿಯವೇನುಂಟು? ಈ ಒಂದು ಪ್ರಯೋಜನದಿಂದಲೇ ನನಗೆ ದೇವರಾಜ್ಯಾಧಿಪತ್ಯವೇ ಮೊದಲಾದ ಸಮಸ್ತ ಪ್ರಯೋಜನಗಳೂ ಕೈಸೇರಿದಂತಾಯಿತು. ರಾಮವಿಜಯವನ್ನು ಕಣ್ಣಾರೆ ನೋಡುವುದೊಂದೇ ನನಗೆ ಸಮಸ್ತ ಸೌಭಾಗ್ಯವು!" ಎಂದನು. ಇದನ್ನು ಕೇಳಿ ಸೀತೆಯು, ಆ ವಾಯುಪುತ್ರನನ್ನು ನೋಡಿ, ಮೊದಲಿಗಿಂತಲೂ ಮತ್ತಷ್ಟು ಪ್ರಿಯತಮವಾದ ಮಾತಿನಿಂದ "ವಾನರೋತ್ತಮಾ! ಸಮಸ್ತ ವಾಕ್ಯಲಕ್ಷಣಗಳಿಂದಲೂ ಪೂರ್ಣವಾಗಿ, [1]ಕೇಳಿದ ಮಾತ್ರದಿಂದಲೇ ಆತ್ಮಾನಂದವನ್ನುಂಟುಮಾಡತಕ್ಕ ಮಾಧುರ್ಯಗುಣದಿಂದ ಕೂಡಿ, ಗ್ರಹಣ ಧಾರಣಗಳೇ ಮೊದಲಾದ ಅಷ್ಟಾಂಗಗಳೊಡಗೂಡಿದ ಬುದ್ಧಿಯಿಂದ ವಿಮರ್ಶಿಸಿ ನುಡಿಯತಕ್ಕ ಇಂತಹ ವಾಕ್ಯಗಳನ್ನಾಡುವುದಕ್ಕೆ ನೀನೊಬ್ಬನು ಹೊರತು ಬೇರೆ ಸಮರ್ಥರಿಲ್ಲ. ಆನೃಶಂಸ್ಯವೆಂಬ ಧರ್ಮಕ್ಕೆ ನೀನೇ ಮುಖ್ಯಾಶ್ರಯವಾಗಿರುವೆ. ಆ ಧರ್ಮದಿಂದಲೇ ನೀನು ವಾಯುದೇವನಿಗೆ ತಕ್ಕ

---

1 ಆಕಾಂಕ್ಷೆ, ಯೋಗ್ಯತೆ, ಸನ್ನಿಧಿ; ಎಂಬಿವು ವಾಕ್ಯಲಕ್ಷಣಗಳು, "ಗ್ರಹಣಂ ಧಾರಣಂ ಚೈವ ಸ್ಮರಣಂ ಪ್ರತಿಪಾದನಮ್ । ಊಹಾಪೋಹೋರ್ಥ ವಿಜ್ಞಾನಂ ತತ್ತ್ವಜ್ಞಾನಂ ಚ ಧೀಗುಣಾಃ" ಎಂಬಂತೆ ಗ್ರಹಣಧಾರಣಾದಿಗಳೆಂಟೂ ಬುದ್ಧಿಯ ಗುಣಗಳು. ಇವೆಲ್ಲವೂ ಹನುಮಂತನಲ್ಲಿರುವುದಾಗಿ ಸೀತೆಯು ಅವನನ್ನು ಪ್ರಶಂಸೆ ಮಾಡುವಳು. ಹಿಂದೆ ಕಿಷ್ಕಿಂಧಾಕಾಂಡದಲ್ಲಿ ರಾಮನು "ನಾನೃಗ್ವೇದವಿನೀತಸ್ಯ" ಇತ್ಯಾದಿವಾಕ್ಯಗಳಿಂದ ಹನುಮಂತನ ವಾಕ್ಯಸೌಷ್ಠವವನ್ನು ಪ್ರಶಂಸಿಸಿದಂತೆ ಇಲ್ಲಿ ಸೀತೆಯೂ ಪ್ರಶಂಸಿಸುವುದಾಗಿ ತಿಳಿಯಬೇಕು.

ಪುತ್ರನೆನಿಸಿಕೊಂಡಿರುವೆ. ಆ ಧರ್ಮದಿಂದಲೇ ನೀನು ವಾಯುವಿಗಿಂತಲೂ ಹೆಚ್ಚಾಗಿ ನನ್ನಂತವರೆಲ್ಲರಿಗೂ ಜೀವನಹೇತುವಾಗಿರುವೆ. ವಿಶೇಷವಾಗಿ ಶ್ರಮವನ್ನು ಸಹಿಸತಕ್ಕ ಶಕ್ತಿಯೂ, ಶೌರ್ಯವೂ, ಶಾಸ್ತ್ರಜ್ಞಾನವೂ, ದೇಹದಾರ್ಢ್ಯವೂ ಪರಾಕ್ರಮವೂ, ಸಾಮರ್ಥ್ಯವೂ, ಪರರನ್ನು ನಿಗ್ರಹಿಸತಕ್ಕ ತೇಜಸ್ಸೂ, ಇತರರ ತಪ್ಪನ್ನು ಮನ್ನಿಸತಕ್ಕ ತಾಳ್ಮೆಯೂ, ಮಹಿಮೆಯೂ, ಯಾವ ಕಾರಣಗಳಿಂದಲೂ ಮನಸ್ಸು ಕದಲದ ಧೈರ್ಯವೂ, ವಿನಯವೂ, ನೀತಿಯೂ ಇವೇ ಮೊದಲಾದ ಇನ್ನೂ ಅನೇಕ ಮಂಗಳಗುಣಗಳೆಲ್ಲವೂ ನಿನ್ನನ್ನಾಶ್ರಯಿಸಿಯೇ ಲೋಕದಲ್ಲಿ ವಿಶೇಷವಾಗಿ ಶೋಭಿಸುತ್ತಿರುವುವು. ಇದರಲ್ಲಿ ಸಂದೇಹವಿಲ್ಲ. ಎಲೈ ಸೌಮ್ಯನೇ ! ಈಗ ನಾನು ನಿನ್ನ ಸಂತೋಷಕ್ಕಾಗಿ ನಿನ್ನಲ್ಲಿಲ್ಲದ ಗುಣಗಳನ್ನಾರೋಪಿಸಿ ಮುಖಸ್ತುತಿಮಾಡುವೆನೆಂದೆಣಿಸಬೇಡ ! ಇದು ನನ್ನ ಮನಃಪೂರ್ವಕವಾದ ಅಭಿಪ್ರಾಯವು" ಎಂದಳು. ಈ ಸ್ತುತಿವಾಕ್ಯಗಳನ್ನು ಕೇಳಿದಾಗಲೂ, ಆಂಜನೇಯನು ಮನಸ್ಸಿನಲ್ಲಿ ಸಂತೋಷಸಂಭ್ರಮಗಳನ್ನು ತಾಳದೆ, ತಿರುಗಿ ಸೀತೆಯ ಮುಂದೆ ಕೈಜೋಡಿಸಿ ವಿನಯದಿಂದ ಪ್ರಾರ್ಥಿಸುವನು. "ಅಮ್ಮಾ ! ಅನವರತವೂ ಪತಿಯನ್ನೇ ಪರದೈವವೆಂದು ನಂಬಿದ ನೀನು, ಆತನ ವಿರಹದುಃಖದಿಂದ ಕೊರಗುತ್ತ ಅಶೋಕವನದಲ್ಲಿ ಎಷ್ಟೋ ಕಷ್ಟದಿಂದ ಕಾಲವನ್ನು ಕಳೆಯುತ್ತಿದ್ದೆಯಲ್ಲವೆ? ಈ ಸ್ಥಿತಿಯಲ್ಲಿ ನಿನ್ನನ್ನು, ಭಯಂಕರರೂಪದಿಂದಲೂ, ಭಯಂಕರವಾದ ನಡೆನುಡಿಗಳಿಂದಲೂ ಅದಕ್ಕಿಂತಲೂ ಅತಿಭಯಂಕರವಾದ ದೃಷ್ಟಿಯಿಂದಲೂ ಕೂಡಿದ ಈ ಕ್ರೂರರಾಕ್ಷಸಿಯರೆಲ್ಲರೂ ನಾನಾವಿಧಗಳಾದ ಪರುಷವಾಕ್ಯಗಳನ್ನಾಡಿ ಆಗಾಗ ಬಹಳವಾಗಿ ಹೆದರಿಸಿರುವರಷ್ಟೆ? ಈಗ ನೀನು ಅನುಮತಿಯನ್ನು ಕೊಟ್ಟ ಪಕ್ಷದಲ್ಲಿ ನಾನು ಇವರೆಲ್ಲರನ್ನೂ ಹಿಡಿದು ಕೊಲ್ಲಬೇಕೆಂದಿರುವೆನು ! ಎಲೆ ! ದೇವಿ ! ನಿನಗೆ ನಾನು ಪ್ರಿಯವಾರ್ತೆಯನ್ನು ಹೇಳಿದುದಕ್ಕೆ ಪಾರಿತೋಷಕವಾಗಿ ನನಗೆ ಈ ವರವನ್ನು ಕೊಟ್ಟರೆ ಸಾಕು ! ಎಲೆ ಕಲ್ಯಾಣಿ ! ನಿನಗೆ ಅಪ್ರಿಯವನ್ನು ಮಾಡಿದ ಈ ಘೋರರಾಕ್ಷಸಿಯರೆಲ್ಲರನ್ನೂ ನಿಮಿಷಮಾತ್ರದಲ್ಲಿ ಧ್ವಂಸಮಾಡಿಬಿಡುವೆನು. ಇವರೆಲ್ಲರನ್ನೂ ನೆಲದಲ್ಲಿ ಕುಕ್ಕಿಬಡಿಯುತ್ತ, ಮುಷ್ಟಿಗಳಿಂದ ಹೊಡೆದು, ಅಂಗೈಯ್ಯಿಂದಪ್ಪಳಿಸಿ, ಕಾಲುಗಳಿಂದೊದೆದು, ಮೊಳಕಾಲುಗಳಿಂದ ಗುದ್ದಿ, ಚಿತ್ರಹಿಂಸೆಮಾಡಿ ಕೊಲ್ಲುವೆನು. ಅವರ ಹಲ್ಲುಗಳನ್ನು ದಿರಿಸಿ, ಕಿವಿಮೂಗುಗಳನ್ನು ಕತ್ತರಿಸಿ, ತಲೆಕೂದಲುಗಳನ್ನು ಕಿತ್ತು

ಹರಿತವಾದ ಮೊನೆಯುಳ್ಳ ಈ ಉಗುರುಗಳಿಂದ ಪರಚಿ ಕೊಲ್ಲುವೆನು. ಒಂದೇ ನೆಗೆತಕ್ಕೆ ಮೇಲಿಂದ ಹಾರಿಬಿದ್ದು ಕೈಗಳಿಂದ ಗುದ್ದಿ ಪ್ರಾಣಗಳನ್ನು ನೀಗಿಸು ವೆನು. ಅಮ್ಮಾ! ಅವರನ್ನು ಹೀಗೆ ಚಿತ್ರವಧೆಮಾಡಿ ನನ್ನ ಕೋಪವನ್ನು ತೀರಿಸಿಕೊಳ್ಳಬೇಕೆಂದಿರುವೆನು. ನಿನಗೆ ಅಪರಾಧವನ್ನು ಮಾಡಿದ ಈ ದುಷ್ಟ ರಾಕ್ಷಸಿಯರನ್ನು ಕೊಲ್ಲದೆ ಬಿಡುವುದೇನೋ ನನಗೆ ಸರ್ವಥಾ ಸಮ್ಮತವಿಲ್ಲ" ಎಂದನು. ಅದಕ್ಕಾ ಸೀತೆಯು ಹನುಮಂತನನ್ನು ಕುರಿತು, "ಸೌಮ್ಯಾ! ಇದು ನಮಗೆ ಧರ್ಮವಲ್ಲ. ಇವರೆಲ್ಲರೂ ರಾಜಾಶ್ರಯದಿಂದ ಬದುಕತಕ್ಕ ವರು. ರಾಜಾಜ್ಞೆಯನ್ನು ಮೀರಿ ನಡೆದರೆ ದಂಡನೆಗೆ ಪಾತ್ರರಾಗುವರು. ದಾಸ್ಯವೃತ್ತಿಯಲ್ಲಿರುವ ಇವರಮೇಲೆ ಕೋಪಿಸುವವರುಂಟೆ? ವಾನರೋ ತ್ತಮಾ! ಇವರ ವಿಷಯದಲ್ಲಿ ಕೋಪಿಸುವುದು ನಿನ್ನಂತವನಿಗೆ ಯುಕ್ತ ವಲ್ಲ. ಮುಖ್ಯವಾಗಿ ನನ್ನ ಭಾಗ್ಯವು ಅದುವರೆಗೆ ಪರಿಣಮಿಸದಿದ್ದುದರಿಂದಲೂ, ಈ ಕಷ್ಟಗಳೆಲ್ಲವೂ ನನಗೆ ಬಂದೊದಗಿದುವೇ ಹೊರತು ಬೇರೆಯಲ್ಲ. ಯಾರಿ ಗಾದರೇನು? ಪೂರ್ವದಲ್ಲಿ ಮಾಡಿದ ಕರ್ಮಕ್ಕೆ ಈಗ ಫಲವನ್ನನುಭವಿಸದೆ ತೀರದಲ್ಲವೆ? ನನ್ನ ಕರ್ಮಾನುಗುಣವಾಗಿ ಈ ಕಷ್ಟಗಳನ್ನನುಭವಿಸಬೇಕಾದ ಕಾಲವು ಬಂದೊದಗಿದುದರಿಂದ, ಅವುಗಳನ್ನನುಭವಿಸದೆ ತೀರದೆಂದು ಮೊದಲು ನಾನೇ ನಿಶ್ಚಯಿಸಿಬಿಟ್ಟಿದ್ದೆನು. ದೈವಬಲವಿಲ್ಲದ ನಾನು ಆ ನಿಶ್ಚಯದಿಂದಲೇ ಇದುವರೆಗೆ ಈ ರಾವಣದೂತಿಯರ ಚೇಷ್ಟೆಗಳನ್ನೂ ಸಹಿಸಿಕೊಂಡು ಸುಮ್ಮ ನಿದ್ದೆನು. (ಈಗ ರಾವಣನು ಸತ್ತುದರಿಂದ ಬೇರೆ ಯಾವ ವಿಧದಲ್ಲಿಯೂ ನನಗೆ ದೌರ್ಬಲ್ಯವಿಲ್ಲದಿದ್ದರೂ, ಕೃಪಾಪಾರವಶ್ಯದಿಂದ ನಾನು ಇವರನ್ನು ಮನ್ನಿಸುತ್ತಿರುವೆನು.) ಇವರೆಲ್ಲರೂ ರಾವಣಾಜ್ಞೆಯಿಂದಲೇ ನನ್ನನ್ನು ಹೆದರಿ ಸುತ್ತಿದ್ದರು. ಆ ರಾವಣನು ಹತನಾದುದರಿಂದಲೇ, ಇವರೆಲ್ಲರೂ ಈಗ ಸುಮ್ಮನಿರುವರು. ಇವರು ರಾಜಾಜ್ಞೆಗೆ ಅಧೀನರಾಗಿಯೇ ಆ ಕಷ್ಟಕಾರ್ಯ ವನ್ನು ನಡೆಸುತ್ತಿದ್ದರೆಂಬುದು ಇದರಿಂದಲೇ ಸ್ಪಷ್ಟವಾಗುವುದಲ್ಲವೆ? ಈ ಕಾರಣ ದಿಂದ ಇವರಲ್ಲಿ ನಾವು ತಪ್ಪನ್ನೆಣಿಸಬಾರದು. ಒಂದು ವೇಳೆ ಸ್ವಬುದ್ಧಿ ಯಿಂದಲೇ ಇವರು ಈ ಅಪರಾಧವನ್ನು ನಡೆಸಿದ್ದರೂ ಇರಲಿ! ಆಗಲೂ ಇವರನ್ನು ಮನ್ನಿಸಬೇಕಾದುದೇ ಯುಕ್ತವು. ಈ ವಿಷಯದಲ್ಲಿ ಹಿಂದೆ [1] ಒಂದು

---

[1] ಇಲ್ಲಿನ ಪೂರ್ವಕಥೆಯೇನೆಂದರೆ :—ಹಿಂದೆ ಒಂದು ಹುಲಿಯು ಒಬ್ಬ ಬೇಡನನ್ನು ಬೆನ್ನಟ್ಟಿಬಂದಾಗ, ಆ ಬೇಡನು ಒಂದು ಮರವನ್ನೇರಿದನು. ಕೆಳಗಿದ್ದ ಹುಲಿಯು ಆಗ

ಕರಡಿಯು ಅತಿ ಪುರಾತನವಾಗಿಯೂ, ಧರ್ಮಯುಕ್ತವಾಗಿಯೂ ಇರುವ ಒಂದು ಶ್ಲೋಕವನ್ನು ಒಂದು ಹುಲಿಗೆ ಹೇಳಿರುವುದು. ಆ ಶ್ಲೋಕಾರ್ಥವನ್ನು ಹೇಳುವೆನು ಕೇಳು. "ಪ್ರಾಜ್ಞನಾದವನು ತನಗೆ ಅಪಕಾರವನ್ನು ಮಾಡಿದವನಿಗೆ ಪ್ರತ್ಯಪಕಾರವನ್ನು ಮಾಡಬಾರದೆಂಬುದೇ ಸದಾಚಾರವು. ಅದನ್ನು ಅವಶ್ಯವಾಗಿ ರಕ್ಷಿಸಬೇಕು. ಸತ್ಪುರುಷರಿಗೆ ಸಚ್ಚರಿತ್ರವೇ ಭೂಷಣವು" ಇದು ಆ ಶ್ಲೋಕಾರ್ಥವು. ಇನ್ನು ಹೆಚ್ಚಾಗಿ ಹೇಳಿದುದರಿಂದೇನು ? [2]ಒಳ್ಳೆಯವರಾಗಲಿ, ಕೆಟ್ಟವರಾಗಲಿ ವಧಾರ್ಹರಾದವರಲ್ಲಿಯೂ ಉತ್ತಮಪುರುಷರು

ಮರದಮೇಲೆ ಕುಳಿತಿದ್ದ ಒಂದು ಕರಡಿಯನ್ನು ನೋಡಿ, ತಮ್ಮ ಮೃಗಜಾತಿಗೆ ವೈರಿಯಾದ ಬೇಡನನ್ನು ಕೆಳಕ್ಕೆ ತಳ್ಳುವಂತೆ ಪ್ರಾರ್ಥಿಸಿತು. ಅದಕ್ಕಾ ಕರಡಿಯು ತನ್ನ ಮರೆಹೊಕ್ಕವನನ್ನು ಬಿಟ್ಟುಕೊಡುವುದು ಧರ್ಮವಿರುದ್ಧವೆಂದು ಹೇಳಿ ಹುಲಿಯ ಮಾತನ್ನು ಕೇಳದೆ ನಿದ್ರಿಸುತ್ತಿತ್ತು. ಈ ಸಂದರ್ಭದಲ್ಲಿ ಹುಲಿಯು ಆ ಬೇಡನನ್ನು ನೋಡಿ, ಕರಡಿಯನ್ನು ಕೆಳಕ್ಕೆ ತಳ್ಳಿದರೆ ಅದನ್ನು ತಿಂದು ತಾನು ತೃಪ್ತಿಹೊಂದಿ ಹೊರಟುಹೋಗುವುದಾಗಿ ಪ್ರೋತ್ಸಾಹಿಸಿತು. ಕೃತಘ್ನನಾದ ಬೇಡನು ನಿದ್ರಿಸುತ್ತಿದ್ದ ಕರಡಿಯನ್ನು ಕೆಳಗೆ ತಳ್ಳಿಬಿಟ್ಟನು. ಇಷ್ಟರಲ್ಲಿ ಕರಡಿಯು ತನ್ನ ಲಂಘನಶಕ್ತಿಯಿಂದ ಕೆಳಗೆ ಬೀಳದೆ ಬೇರೊಂದು ಕೊಂಬೆಯನ್ನು ಹಿಡಿದು ಅಪಾಯವನ್ನು ತಪ್ಪಿಸಿಕೊಂಡಿತು. ತಿರುಗಿ ಹುಲಿಯು ಕರಡಿಯನ್ನು ನೋಡಿ, ಈಗಲಾದರೂ ಮಹಾಪರಾಧಿಯಾದ ಆ ಬೇಡನನ್ನು ಕೆಳಗೆ ತಳ್ಳೆಂದು ಕೇಳಿಕೊಂಡಿತು. ಆಗಲೂ ಕರಡಿಯು ಇದೊಂದಪರಾಧವೇ ಅಲ್ಲದೆ ಇನ್ನೂ ಅನೇಕಾಪರಾಧಗಳನ್ನು ಮಾಡಿದರೂ, ಮರೆಹೊಕ್ಕವನನ್ನು ನಾನು ಬಿಟ್ಟುಕೊಡಲಾರೆನೆಂದು ಹೇಳಿ ತಿರಸ್ಕರಿಸಿದುದಾಗಿ ಪುರಾಣ ಕಥೆಯು.

ಇಲ್ಲಿ "ನಪರಃ ಪಾಪಮಾದತ್ತೇ ಪರೇಷಾಂ ಪಾಪಕರ್ಮಣಾಮ್ । ಸಮಯೋ ರಕ್ಷಿತವ್ಯಸ್ತು ಸಂತಶ್ಚಾರಿತ್ರಭೂಷಣಾಃ" ಎಂಬುದೇ ಮೂಲಶ್ಲೋಕವು. ವಿಭೀಷಣಶರಣಾಗತಪ್ರಕರಣದಲ್ಲಿ ರಾಮನು ಸುಗ್ರೀವನಿಗೆ ಕಪೋತಾಖ್ಯಾನವನ್ನು ಹೇಳಿದಂತೆ ಇಲ್ಲಿ ಸೀತಾದೇವಿಯು ಹನುಮಂತನಿಗೆ ಋಕ್ಷಗೀತವನ್ನು ಪ್ರಮಾಣೀಕರಿಸಿ ಈ ಧರ್ಮವನ್ನುಪದೇಶಿಸಿದುದಾಗಿ ತಿಳಿಯಬೇಕು.

2 ಇಲ್ಲಿ "ಪಾಪಾನಾಂ ವಾ ವಧಾರ್ಹಾಣಾಂ ಪ್ಲವಂಗಮ । ಕಾರ್ಯಂ ಕರುಣಮಾರ್ಯೇಣ ನ ಕಶ್ಚಿನ್ನಾಪರಾಧ್ಯತಿ" ಎಂದು ಮೂಲವು. ಹಿಂದೆ ರಾಮನು ವಿಭೀಷಣನ ವಿಷಯದಲ್ಲಿ ಹೇಳಿದ ಅಭಯಪ್ರಧಾನಶ್ಲೋಕದಂತೆ, ಇದು ಸೀತಾದೇವಿಯ ಅಭಯಪ್ರಧಾನ ಶ್ಲೋಕವೆಂದು ತಿಳಿಯಬೇಕು. ವಿಶೇಷಾರ್ಥವು:— (ಪಾಪಾನಾಂ

ಕರುಣೆಯನ್ನೇ ತೋರಿಸಬೇಕು. ಲೋಕದಲ್ಲಿ ತಪ್ಪಿನಡೆಯದವನೊಬ್ಬನಾದರೂ ಇಲ್ಲ! ಈ ಲೋಕನೀತಿಯೂ ಹಾಗಿರಲಿ! ಈ ರಾಕ್ಷಸಸ್ತ್ರೀಯರ ವಿಷಯದಲ್ಲಿ, ಶಾಸ್ತ್ರರೀತಿಯಿಂದ ದಂಡವು ಯೋಗ್ಯವಲ್ಲ! ರಾಕ್ಷಸರು ಕಾಮರೂಪಿಗಳಾಗಿ, ಯಾವಾಗಲೂ ಲೋಕಹಿಂಸೆಯನ್ನೇ ವಿನೋದವಾಗಿಟ್ಟುಕೊಂಡು ವಿಹರಿಸುತ್ತಿರುವರು. ಅವರು ಈ ಕಾರ್ಯದಲ್ಲಿ ಅನೇಕ ಪಾಪಕೃತ್ಯಗಳನ್ನು ನಡೆಸಿದರೂ, ಇದು ಅವರಿಗೆ ಜಾತಿಪ್ರಯುಕ್ತವಾದುದರಿಂದ, ಈ ವಿಷಯದಲ್ಲಿ ಅವರನ್ನು ದಂಡಿಸುವುದು ಯುಕ್ತವಲ್ಲ" ಎಂದಳು. ಹನುಮಂತನು ಸೀತೆಯ ಮಾತನ್ನು ಕೇಳಿ ಪರಮಾಶ್ಚರ್ಯಭರಿತನಾಗಿ, "ಅಮ್ಮಾ! ಶರಣಾ

ಪಾ ಶುಭಾನಾಂ ವಾ) "ನಿನ್ನಭಿಪ್ರಾಯದಂತೆ ಅವರು ಪಾಪಾತ್ಮರಾಗಿಯೂ ನನ್ನಭಿಪ್ರಾಯದಂತೆ ಸಾಧುಗಳಾಗಿಯೂ ಇರುವುದರಿಂದ, ನಮ್ಮಿಬ್ಬರಲ್ಲಿ ಇದನ್ನು ತೀರ್ಮಾನಿಸುವುದು ಸಾಧ್ಯವಲ್ಲವಷ್ಟೆ? ನಿನ್ನ ಮತದಂತೆ ಅವರು ಪಾಪಾತ್ಮರಾಗಿಯೇ ಇದ್ದರೂ ಆ ದೋಷವೇ ನನಗೆ ಮುಖ್ಯೋದ್ದೇಶವು. ಅಶುಚಿಯಾಗಿದ್ದರಲ್ಲವೇ ಸ್ನಾನಮಾಡಬೇಕು. ಅವರು ಪಾಪಿಗಳಾಗಿದ್ದರೆ ಮಾತ್ರವೇ ನನ್ನ ಸಹಾಯವನ್ನಪೇಕ್ಷಿಸಬೇಕು. ಸಾಧುಗಳಿಗಾದರೋ ಅವರ ಪುಣ್ಯವೇ ಅವರನ್ನು ರಕ್ಷಿಸಬಲ್ಲುದಾದುದರಿಂದ, ಅವರಿಗೆ ನಮ್ಮಿಂದಾಗಬೇಕಾದ ಕಾರ್ಯವಿಲ್ಲ" ವೆಂದು ಭಾವವು. ಹಿಂದೆ ರಾಮನು "ದೋಷೋಯದ್ಯಪಿ ತಸ್ಯ ಸ್ಯಾತ್" ಎಂದು ಹೇಳಿದ ಅಭಿಪ್ರಾಯವನ್ನನುಸರಿಸಿಯೇ ಸೀತೆಯು ಈ ವಾಕ್ಯವನ್ನು ಹೇಳಿದುದಾಗಿ ಗ್ರಾಹ್ಯವು. ಆದರೆ "ಅದಂಡ್ಯಾನ್ ದಂಡಯನ್ ರಾಜಾದಂಡ್ಯಾಂಶ್ಚೈವಾಪ್ಯ ದಣ್ಡಯನ್" ಎಂಬಂತೆ, "ಶಿಕ್ಷಾರ್ಹರನ್ನು ಶಿಕ್ಷಿಸದಿರುವುದು ತಪ್ಪಲ್ಲವೆ?" ಎಂದರೆ, ಈ ಸಾಮಾನ್ಯಶಾಸ್ತ್ರವು ನನ್ನಿಂದ ಭಂಗಹೊಂದಿದರೂ ಎಷ್ಟುದುಷ್ಟನಾಗಿದ್ದರೂ ಶರಣಾಗತನನ್ನು ರಕ್ಷಿಸಿಯೇತೀರಬೇಕೆಂಬ ವಿಶೇಷಶಾಸ್ತ್ರಕ್ಕೆ ನಿನ್ನಿಂದ ಭಂಗವುಂಟಾಗುವುದಲ್ಲವೆ?" ಎಂಬುದನ್ನು ಸೀತೆಯು ಆಂಜನೇಯನಿಗೆ ತೋರಿಸುವಳು. (ವಧಾರ್ಹಾಣಾಂ) ವಧಾರ್ಹನಾಗಿದ್ದರೂ ಶರಣಾಗತನಲ್ಲಿ ಕರುಣೆಯನ್ನೇ ತೋರಿಸಬೇಕೆಂದು ಭಾವವು. (ಪ್ಲವಂಗಮ) ನೀನು ಕಪಿಯಾದುದರಿಂದ ನಿನಗೆ ಈ ವಿಧವಾದ ಚಾಪಲ್ಯವುಂಟಾಗಿರಬಹುದು, (ಆರ್ಯೇಣ) ಮಹಾಪುರುಷನೆನಿಸಿಕೊಳ್ಳುವವನಿಂದಲಾದರೋ (ಕರುಣಂ ಕಾರ್ಯಂ) ದಯೆಯೇ ತೋರಿಸಲ್ಪಡಬೇಕಲ್ಲದೆ ಬೇರೆಯಲ್ಲವೆಂದು ಭಾವವು. ಅಥವಾ (ಶುಭಾನಾಂ ವಧಾರ್ಹಾಣಾಂ ಯಥಾ ಕರುಣಂ ಕಾರ್ಯಂ, ತಥಾ ಪಾಪಾನಾಂ ವಧಾರ್ಹಾಣಾಮಪಿ ಕರುಣಮೇವ ಕಾರ್ಯಂ) ವಧಾರ್ಹರಾದ ಸಾಧುಗಳಲ್ಲಿ ಹೇಗೆ ಕರುಣೆಯನ್ನು ತೋರಿಸಬೇಕೋ, ಪಾಪಿಗಳಲ್ಲಿಯೂ, ದಯೆಯನ್ನೇ ತೋರಿಸಬೇಕೆಂದೂ ಭಾವವು.

ಗತರಕ್ಷಣವೇ ದೃಢವ್ರತವಾಗಿ ಉಳ್ಳ ಆ ರಾಮಚಂದ್ರನಿಗೆ ನೀನೇ ತಕ್ಕ ಧರ್ಮಪತ್ನಿಯು. ಪಾತಿವ್ರತ್ಯಾದಿಗುಣಗಳಲ್ಲಿ ನೀನೊಬ್ಬಳೇ ವಿಶೇಷಕೀರ್ತಿಯನ್ನು ಪಡೆದವಳು. ಎಲೆ ದೇವಿ! ಇನ್ನು ನೀನು ನಿನ್ನ ಪತಿಗೆ ಹೇಳಿ ಕಳುಹಿಸಬೇಕಾದ ಪ್ರತಿಸಂದೇಶವನ್ನು ತಿಳಿಸಿದರೆ, ನಾನು ಶ್ರೀರಾಮನ ಸನ್ನಿಧಿಗೆ ಹೊರಡುವೆನು” ಎಂದನು. ಅದಕ್ಕಾ ಸೀತೆಯು, ಎಲೆ ವಾನರೋತ್ತಮ! ನನ್ನ ಪ್ರಾಣನಾಥನನ್ನು ನಾನು ಕಣ್ಣಾರೆ ನೋಡುವುದೊಂದು ಹೊರತು ಈಗ ಬೇರೆ ಸಂದೇಶವೇನಿರುವುದು” ಎಂದಳು. ಮಹಾತೇಜಸ್ವಿಯಾದ ಹನುಮಂತನು, ಮತ್ತಷ್ಟು ಪ್ರಿಯವಾಕ್ಯಗಳಿಂದ ಸೀತೆಯನ್ನು ಸಂತೋಷಪಡಿಸುತ್ತ “ಎಲಾ ಪೂಜ್ಯಳೆ! ಅಸುರರನ್ನು ಕೊಂದು ಬಂದ ದೇವೇಂದ್ರನನ್ನು ಶಚೀದೇವಿಯು ನೋಡಿದಂತೆ, ಶತ್ರುಗಳನ್ನು ಕೊಂದು ಮಿತ್ರವರ್ಗಗಳೊಡನೆಯೂ, ತಮ್ಮನಾದ ಲಕ್ಷ್ಮಣನೊಡನೆಯೂ ಸೇರಿ ಕ್ಷೇಮದಿಂದಿರುವ ಪೂರ್ಣಚಂದ್ರಾನನನಾದ ಶ್ರೀರಾಮನನ್ನು ಶೀಘ್ರದಲ್ಲಿಯೇ ನೀನು ಅತ್ಯವಶ್ಯವಾಗಿ ನೋಡುವೆ” ಎಂದನು. ಸಾಕ್ಷಾನ್ಮಹಾಲಕ್ಷ್ಮಿಯಂತೆ ಶೋಭಿಸುತ್ತಿದ್ದ ಸೀತೆಯೊಡನೆ ಹನುಮಂತನು ಈ ಮಾತನ್ನು ಹೇಳಿ, ಆಗಲೇ ಅಲ್ಲಿಂದ ಹಿಂತಿರುಗಿ, ಅತಿವೇಗದಿಂದ ರಾಮನಿದ್ದ ಸ್ಥಳಕ್ಕೆ ಬಂದನು.

ಇಲ್ಲಿಗೆ ನೂರಹದಿನಾರನೆಯ ಸರ್ಗವು.

ರಾಮನಿಯೋಗದಿಂದ ವಿಭೀಷಣನು ಸೀತೆಗೆ ಸ್ನಾನಾಲಂಕಾರಾದಿಗಳನ್ನು ಮಾಡಿಸಿ, ರಾಮನ ಬಳಿಗೆ ಕರೆತಂದುದು. ಸೀತೆಯು ಸ್ನೇಹಸಂತೋಷಗಳಿಂದ ಶ್ರೀರಾಮನ ಮುಖಕಮಲವನ್ನು ನೋಡಿದುದು.

ಹೀಗೆ ಕಾರ್ಯಜ್ಞನಾದ ಹನುಮಂತನು ಸೀತೆಯ ಅನುಜ್ಞೆಯನ್ನು ಪಡೆದು ಹಿಂತಿರುಗಿ ಬಂದು, ಮಹಾಪ್ರಾಜ್ಞನಾಗಿಯೂ, ಧನುರ್ಧಾರಿಗಳಲ್ಲಿ ಮೇಲೆನಿಸಿದವನಾಗಿಯೂ ಇರುವ ರಾಮನ ಮುಂದೆ ಬದ್ಧಾಂಜಲಿಯಾಗಿ ನಿಂತು ವಿಜ್ಞಾಪಿಸುವನು. “ರಾಮಭದ್ರ! ಯಾವಳ ನಿಮಿತ್ತವಾಗಿ ನಾವು ಸೇತುಬಂಧಾದಿಕಾರ್ಯಗಳನ್ನು ತೊಡಗಿ ನಿರ್ವಹಿಸಿದೆವೋ, ಯಾವಳನ್ನು ಪಡೆ

ಯುವುದಕ್ಕಾಗಿಯೇ ರಾವಣವಧರೂಪವಾದ ಫಲೋದಯವನ್ನೂ ಹೊಂದಿದೆವೋ, ಆ ಸೀತಾದೇವಿಯು ಈಗಲೂ ನಿನ್ನ ವಿರಹವ್ಯಸನದಿಂದ ತತ್ತಳಿಸುತ್ತಿರುವಳು. ಆದುದರಿಂದ ಈಗಲೇ ನೀನು ಅವಳನ್ನು ಕರೆಸಿ ನೋಡಬೇಕು. ಇದುವರೆಗೆ ಅವಿಚ್ಛಿನ್ನವಾದ ದುಃಖದಲ್ಲಿ ಮುಳುಗಿ ಕಣ್ಣೀರುಬಿಡುತ್ತಿದ್ದ ಆ ಸೀತಾದೇವಿಯು ನಿನ್ನ ವಿಜಯವಾರ್ತೆಯನ್ನು ಕೇಳಿದೊಡನೆ ಪರಮ ಹರ್ಷವನ್ನು ಹೊಂದಿದಳು. ನಿನ್ನ ಪ್ರಿಯಪತ್ನಿಯು ಇದಕ್ಕೆ ಮೊದಲೇ ನನ್ನನ್ನು ನೋಡಿಬಲ್ಲವಳಾದುದರಿಂದ, ನನ್ನಲ್ಲಿ ಪೂರ್ಣವಾದ ನಂಬಿಕೆಯನ್ನಿಟ್ಟು, ಶತ್ರುವಧದಿಂದ ಕೃತಕೃತ್ಯನಾದ ನಿನ್ನನ್ನೂ ಲಕ್ಷ್ಮಣನನ್ನೂ ನೋಡಬೇಕೆಂದು ನಿಸ್ಸಂಕೋಚವಾಗಿ ಹೇಳಿ ಕಳುಹಿಸಿರುವಳು" ಎಂದನು. ಹನುಮಂತನು ಹೇಳಿದ ಈ ಮಾತನ್ನು ಕೇಳಿ ಧಾರ್ಮಿಕೋತ್ತಮನಾದ ಶ್ರೀರಾಮನು, ಸೀತೆಯ ದುಃಸ್ಥಿತಿಯನ್ನು ಸೆನೆಸಿಕೊಂಡು ದುಃಖದಿಂದ ಸ್ವಲ್ಪವಾಗಿ ಕಣ್ಣೀರುಬಿಡುತ್ತ, ತನ್ನಲ್ಲಿ ತಾನು "ಆಹಾ! ಚಿರಕಾಲದಿಂದ ರಾವಣಗೃಹದಲ್ಲಿದ್ದ ಆ ತರುಣಿಯನ್ನು ಈಗ ನಿರ್ವಿಚಾರವಾಗಿ ಪರಿಗ್ರಹಿಸಿದಪಕ್ಷದಲ್ಲಿ ಲೋಕಾಪವಾದಕ್ಕೆ ಗುರಿಯಾಗಬೇಕಾಗುವುದು! ನಿರ್ದೋಷೆಯಾದ ಆಕೆಯನ್ನು ನಿಷ್ಕಾರಣವಾಗಿ ಪರಿತ್ಯಜಿಸಿದ ಪಕ್ಷದಲ್ಲಿಯೂ ಪಾಪಕ್ಕೆ ಗುರಿಯಾಗುವೆನು. ಈಗ ಮಾಡುವುದೇನು?" ಎಂದು ಚಿಂತಾಕುಲನಾಗಿ ಸ್ವಲ್ಪ ಹೊತ್ತಿನವರೆಗೆ ಸುಮ್ಮನೆ ಧ್ಯಾನಿಸುತ್ತಿದ್ದನು. ಕೊನೆಗೆ ಆ ಚಿಂತೆಯಿಂದ ಬಿಸಿಬಿಸಿಯಾಗಿ ನಿಟ್ಟುಸಿರನ್ನು ಬಿಟ್ಟು, ತಲೆಯೆತ್ತದೆ ಹಾಗೆಯೇ ನಿಂತು ನೆಲವನ್ನು ನೋಡುತ್ತ ತನ್ನ ಸಮೀಪದಲ್ಲಿ ಮೇಘದಂತೆ ಶ್ಯಾಮಗಾತ್ರನಾಗಿ ನಿಂತಿದ್ದ ವಿಭೀಷಣನನ್ನು ನೋಡಿ "ರಾಕ್ಷಸೇಂದ್ರಾ! ಈಗಲೇ ನೀನು ಹೋಗಿ [1] ಸೀತೆಗೆ ಅಭ್ಯಂಗನಸ್ನಾನವನ್ನು ಮಾಡಿಸಿ, ದಿವ್ಯಾನುಲೇಪನಗಳಿಂದಲೂ, ದಿವ್ಯಭೂಷಣಗಳಿಂದಲೂ ಅಲಂಕರಿಸಿ ಇಲ್ಲಿಗೆ ಕರೆತರಬೇಕು.

[1] ರಾಮನು ಮುಂದೆ ಸೀತೆಯೊಡನೆ ಪರುಷವಾಕ್ಯವನ್ನಾಡಬೇಕೆಂದು ಮೊದಲೇ ನಿಶ್ಚಯಿಸಿದ್ದುದರಿಂದ, ದೇಹ ಸಂಸ್ಕಾರಾದಿಗಳೊಂದೂ ಇಲ್ಲದೆ ಮೊದಲಿನಂತೆ ದೀನದಶೆಯಲ್ಲಿರುವಾಗ ಅವಳನ್ನು ಮತ್ತಷ್ಟು ನೋಯಿಸಬಾರದೆಂಬುದಕ್ಕಾಗಿ, ಸ್ನಾನಮಾಡಿಸಿ ಕರೆತರಬೇಕೆಂದು ಹೇಳಿದುದಾಗಿ ಗ್ರಾಹ್ಯವು. ಇದರಿಂದ ರಾಮನು ಸೀತೆಯನ್ನು ನಿರಾಕರಿಸಿದುದು ಬ್ರಹ್ಮಾದಿದೇವತೆಗಳಮುಂದೆ ಅವಳ ಶುಚಿತ್ವವನ್ನು ಪ್ರಕಟಿಸುವುದಕ್ಕಾಗಿಯೇ ಹೊರತು ಮನಃಪೂರ್ವಕವಾದ ಜಿಹಾಸೆಯಿಂದಲ್ಲವೆಂಬುದು ಸ್ಪಷ್ಟವು.

ತಡಮಾಡಬೇಡ! ಬೇಗನೆ ಹೋಗು" ಎಂದನು. ಸೀತಾರಾಮರಿಗೆ ಸಮಾಗಮವನ್ನು ಮಾಡಿಸಬೇಕೆಂದು ಮೊದಲೇ ಆತುರತಪಡುತ್ತಿದ್ದ ವಿಭೀಷಣನು ರಾಮನ ಬಾಯಿಂದ ಈ ಮಾತನ್ನು ಕೇಳಿದೊಡನೆ ಅತ್ಯಾತುರದಿಂದ ಲಂಕೆಗೆ ಹೊರಟನು. ಅಲ್ಲಿ ನಿಜಾಂತಃಪುರವನ್ನು ಪ್ರವೇಶಿಸಿ, ತನ್ನ ಸ್ತ್ರೀಯರಮೂಲಕವಾಗಿ, ಸೀತಾದೇವಿಗೆ "ಎಲೆ ದೇವಿ! ಈಗಲೇ ನೀನು ಸ್ನಾನವನ್ನು ಮಾಡಿ ದಿವ್ಯಾನುಲೇಪನಗಳಿಂದಲೂ ದಿವ್ಯಾಭರಣಗಳಿಂದಲೂ ಅಲಂಕೃತಳಾಗಿ ವಾಹನವನ್ನೇರಬೇಕು! ನಿನಗೆ ಮಂಗಳವಾಗಲಿ! ನಿನ್ನಪತಿಯು ನಿನ್ನನ್ನು ನೋಡಬೇಕೆಂದಿರುವನು" ಎಂದು ಹೇಳಿ ಕಳುಹಿಸಿದನು. ಈ ಮಾತನ್ನು ಕೇಳಿ ಸೀತೆಯು ವಿಭೀಷಣನ ಮಾತಿಗೆ ಪ್ರತ್ಯುತ್ತರವಾಗಿ, ರಾಕ್ಷಸೇಂದ್ರಾ! ನಾನು ಸ್ನಾನಮಾಡುವುದಕ್ಕೆ ಮೊದಲು ಈ ಸ್ಥಿತಿಯಲ್ಲಿಯೇ ನನ್ನ ಪತಿಯನ್ನು ನೋಡಬೇಕೆಂದು ಕೋರುವೆನು" ಎಂದು ಹೇಳಿ ಕಳುಹಿಸಿದಳು. ಅದಕ್ಕಾ ವಿಭೀಷಣನು, "ದೇವಿ! ಹಾಗಲ್ಲ! ರಾಮನು ನಿನಗೆ ಪತಿಯಾಗಿಯೂ, ನಮಗೆ ಪ್ರಭುವಾಗಿಯೂ ಇರುವುದರಿಂದ, ಅವನ ಆಜ್ಞೆಯಂತೆ ನಡೆಯುಬೇಕಾದುದೇ ನಮ್ಮಿಬ್ಬರಿಗೂ ಕರ್ತವ್ಯವು" ಎಂದನು. ಇದನ್ನು ಕೇಳಿ ಪರಮಪತಿವ್ರತೆಯಾದ ಸೀತೆಯು, ವಿಭೀಷಣನ ಮಾತಿಗೆ "ಹಾಗೆಯೇ ಆಗಲೆ"ಂದು ಪ್ರತ್ಯುತ್ತರವನ್ನು ಹೇಳಿಕಳುಹಿಸಿದಳು. ಆಮೇಲೆ ವಿಭೀಷಣನು ತನ್ನ ಸ್ತ್ರೀಯರಮೂಲಕವಾಗಿ ಸೀತೆಗೆ ಸ್ನಾನಮಾಡಿಸಿ, ಗಂಧಪುಷ್ಪಾದಿಗಳಿಂದಲಂಕರಿಸಿ, ಬೆಲೆಯುಳ್ಳ ಭೂಷಣಗಳನ್ನು ತೊಡಿಸಿ, ದಿವ್ಯವಾದ ಪಟ್ಟೆಮಡಿಯನ್ನುಡಿಸಿ, ಆಕೆಯನ್ನು ಪಲ್ಲಕಿಯ ಮೇಲೆ ಕುಳ್ಳಿರಿಸಿದನು. ಸೀತೆಯು ಕಾಂತಿಯಿಂದ ದೇದೀಪ್ಯಮಾನವಾಗಿ ದಿವ್ಯದುಕೂಲದಿಂದ ಹೊದೆಸಲ್ಪಟ್ಟ ಆ ಪಲ್ಲಕಿಯನ್ನೇರಿ ಕುಳಿತಮೇಲೆ, ಅಂಗರಕ್ಷಕರಾದ ಅನೇಕ ರಾಕ್ಷಸಸೈನಿಕರೊಡನೆ ಅವಳನ್ನು ರಾಮನಬಳಿಗೆ ಕರೆತಂದನು. ವಿಭೀಷಣನು ಸೀತೆಯನ್ನು ಕರೆತಂದಿರುವುದನ್ನು ನೋಡಿಯೂ, ಮಹಾತ್ಮನಾದ ರಾಮನು ತಲೆಯನ್ನು ತಗ್ಗಿಸಿ ಯಾವಮಾತನ್ನೂ ಆಡದೆ ಚಿಂತಿಸುತ್ತ ನಿಂತಿದ್ದನು. ಆಗ ವಿಭೀಷಣನು ಮುಂದೆ ಬಂದು ವಿನಯದಿಂದ ರಾಮನಿಗೆ ನಮಸ್ಕರಿಸಿ, "ಮಹಾಪ್ರಭೂ! ಸೀತೆಯನ್ನು ಕರೆತಂದಿರುವೆನು" ಎಂದು ವಿಜ್ಞಾಪಿಸಿದನು. ಈ ಮಾತನ್ನು ಕೇಳಿದೊಡನೆ ರಾಮನಿಗೆ ಮನಸ್ಸಿನಲ್ಲಿ ಸೀತಾಲಾಭದಿಂದುಂಟಾದ ಸಂತೋಷವೊಂದು; ಆ ಸೀತೆಯು ಚಿರಕಾಲದಿಂದ ರಾವ

ಣನ ಸೆರೆಯಲ್ಲಿ ಸಿಕ್ಕಿ ಕಷ್ಟಪಡುತ್ತಿದ್ದಳೆಂಬ ಅನುತಾಪವೊಂದು! ಬಹು ಕಾಲದಿಂದ ಪರಗೃಹದಲ್ಲಿದ್ದು ಬಂದವಳನ್ನು ಹೇಗೆ ಪರಿಗ್ರಹಿಸುವುದೆಂಬ ರೋಷವೊಂದು; ಇವು ಮೂರೂ ಏಕಕಾಲದಲ್ಲಿ ನೆಲೆಗೊಂಡುವು. ಈ ಕಳ ವಳದಿಂದ ರಾಮನು ಸ್ವಲ್ಪಕಾಲದವರೆಗೆ ತನ್ನಲ್ಲಿಯೇ ತಾನು ಯುಕ್ತಾ ಯುಕ್ತಗಳನ್ನು ವಿಚಾರಿಸುತ್ತಿದ್ದು, ಕೊನೆಗೆ ಸಂತೋಷಪೂರ್ವಕವಾಗಿ ಸಮೀಪ ದಲ್ಲಿದ್ದ ವಿಭೀಷಣನನ್ನು ನೋಡಿ "ಸೌಮ್ಯ! ರಾಕ್ಷಸರಾಜಾ! ನೀನು ಯಾವಾಗಲೂ ನನ್ನ ಹಿತದಲ್ಲಿಯೇ ಆಸಕ್ತಿಯುಳ್ಳವನಲ್ಲವೆ? ಆಕೆಯನ್ನು ಶೀಘ್ರದಲ್ಲಿ, ಕರೆತಂದು ನನ್ನ ಸಮೀಪದಲ್ಲಿ ನಿಲ್ಲಿಸು" ಎಂದನು. ಈ ಮಾತನ್ನು ಕೇಳಿದೊಡನೆ ವಿಭೀಷಣನು, ಸೀತೆಯು ರಾಜಮಹಿಷಿಯಾದುದರಿಂದ ಪರ ಪುರುಷರ ಕಣ್ಣಿಗೆ ಬೀಳಿಸದೆ ಅವಳನ್ನು ರಾಮನ ಬಳಿಗೆ ಕರೆತರುವುದಕ್ಕಾಗಿ ಅಲ್ಲಿ ನೆರೆದಿದ್ದ ಸಮಸ್ತ ಜನರನ್ನೂ ಹೊರಗೆ ಕಳುಹಿಸುವಂತೆ ಸೇವಕ ರಿಗೆ ನಿಯಮಿಸಿದನು ಆಗ ಅಂತಃಪುರಪರಿಚರ್ಯೆಗೆ ಯೋಗ್ಯವಾದ ಕಂಚುಕ ಗಳನ್ನೂ, ಶಿರೋವೇಷ್ಟನಗಳನ್ನೂ ಧರಿಸಿ, ಯಾವಾಗಲೂ ಬೆತ್ತವನ್ನು ಹಿಡಿದು ಜಿಡ್ಡುಗಟ್ಟಿದ ಕೈಯುಳ್ಳ ಕೆಲವು ಸೇವಕರು ಅಲ್ಲಲ್ಲಿ ನಿಂತಿದ್ದ ಜನರನ್ನೋಡಿಸುವುದಕ್ಕಾಗಿ ಬೆತ್ತಗಳನ್ನಾಡಿಸುತ್ತಬಂದರು. ವಾನರ ಭಲ್ಲೂಕ ಸೈನ್ಯಗಳೂ, ರಾಕ್ಷಸರೂ, ಈ ಕಂಚುಕಿಗಳ ನಿರ್ಬಂಧಕ್ಕೆ ಹೆದರಿ ದೂರ ದೂರಕ್ಕೆ ಗುಂಪುಗುಂಪಾಗಿ ಓಡುತ್ತಿದ್ದರು, ಸೀತೆಯನ್ನು ನೋಡಬೇಕೆಂದು ಆತುರಪಡುತ್ತಿದ್ದ ಆ ಜನರೆಲ್ಲರೂ ಆಶಾಭಂಗವನ್ನು ಹೊಂದಿ ಕಂಚುಕಿ ಗಳ ನಿರ್ಬಂಧಕ್ಕಾಗಿ ಹೀಗೆ ನಾನಾ ದಿಕ್ಕುಗಳಿಗೆ ಓಡುತ್ತಿರುವಾಗ, ಬಿರುಗಾಳಿಯಿಂದುಂಟಾದ ಸಮುದ್ರದ ಮೊರೆತದಂತೆ ದೊಡ್ಡ ಗದ್ದಲವುಂಟಾ ಯಿತು. ಆಗ ರಾಮನು ಜನರೆಲ್ಲರೂ ಆ ಸ್ಥಳವನ್ನು ಬಿಟ್ಟು ಹೋಗ ಲಾರದೆ ಕಂಚುಕಿಗಳ ನಿರ್ಬಂಧಕ್ಕಾಗಿ ಕಷ್ಟಪಡುತ್ತಿರುವುದನ್ನು ನೋಡಿ ಸಹಿಸಲಾರದೆ ಅವರಲ್ಲಿ ದಾಕ್ಷಿಣ್ಯಬುದ್ಧಿಯಿಂದ, ಸೇವಕರನ್ನು ಬೇಡವೆಂದು ತಡೆದನು. ಆ ಜನದಲ್ಲಿ ತನಗಿದ್ದ ವಾತ್ಸಲ್ಯಕ್ಕಾಗಿ ವಿಭೀಷಣನನ್ನು ತೀಕ್ಷ್ಣ ದೃಷ್ಟಿಯಿಂದ ನೋಡಿ "ವಿಭೀಷಣಾ! ಆಃ! ಏನು ಕೆಲಸವನ್ನು ಮಾಡಿದೆ? ನನ್ನ ಅಭಿಪ್ರಾಯವೇನೆಂದು ತಿಳಿಯದೆ ಈ ಜನವೆಲ್ಲವನ್ನೂ ಹೀಗೆ ಕಷ್ಟ ಪಡಿಸುತ್ತಿರುವೆಯಲ್ಲಾ! ಸಾಕು! ಈ ಪ್ರಯತ್ನವನ್ನು ನಿಲ್ಲಿಸು. ಇಲ್ಲಿರುವವ ರೆಲ್ಲರೂ ನನಗೆ ಸ್ವಜನವೇ ಹೊರತು ಬೇರೆಯಲ್ಲ! ಇದಲ್ಲದೆ ಲೋಕದಲ್ಲಿ

ಸ್ತ್ರೀಯರಿಗೆ ಅವರವರ ಆಚಾರವೇ ಅವರಿಗೆ ಆಭರಣವೆನಿಸಿಕೊಳ್ಳಬೇಕೇ ಹೊರತು, ಈ ಮೇಲುಮುಸುಕುಗಳಾಗಲಿ, ತೆರೆಗಳಾಗಲಿ, ಪ್ರಾಕಾರಗಳಾಗಲಿ, ಸಮೀಪದಲ್ಲಿದ್ದವರನ್ನು ದೂರಕ್ಕಟ್ಟುವ ಈ ರಾಜಮರ್ಯಾದೆಗಳಾಗಲಿ, ಇವೊಂದೂ ಅವರಿಗೆ ಮರೆಯಾಗಲಾರವು. ಇದಲ್ಲದೆ ಇಷ್ಟಜನ ವಿಯೋಗವೇ ಮೊದಲಾದ ವ್ಯಸನಗಳಲ್ಲಿಯೂ, ರಾಜ್ಯಕ್ಷೋಭವೇ ಮೊದಲಾದ ವಿಪತ್ತುಗಳಲ್ಲಿಯೂ, ಯುದ್ಧಭೂಮಿಗಳಲ್ಲಿಯೂ, ಸ್ವಯಂವರಗಳಲ್ಲಿಯೂ, ಯಜ್ಞದಲ್ಲಿಯೂ, ವಿವಾಹದಲ್ಲಿಯೂ, ಸ್ತ್ರೀಯರು ಪರಪುರುಷರ ಕಣ್ಣಿಗೆ ಬಿದ್ದರೂ ದೋಷವಿಲ್ಲ. ಈಗ ಸೀತೆಯು ಯುದ್ಧಭೂಮಿಯಲ್ಲಿರುವುದಲ್ಲದೆ ಬಹಳ [1]ಕಷ್ಟದಶೆಗೂ ಸಿಕ್ಕಿರುವಳು. ಈ ಸ್ಥಿತಿಯಲ್ಲಿ ಇವಳನ್ನು ಬೇರೆಯವರು ನೋಡಿದರೂ ದೋಷವಿಲ್ಲ. ಅದರಲ್ಲಿಯೂ ಮುಖ್ಯವಾಗಿ ನಾನು ಸಮೀಪದಲ್ಲಿರುವಾಗ ದೋಷಪ್ರಸಕ್ತಿಯೇ ಇರದು! ಆದುದರಿಂದ ಶೀಘ್ರದಲ್ಲಿ ಅವಳನ್ನು ನನ್ನ ಸಮೀಪಕ್ಕೆ ತಂದುಬಿಡು. ಹೀಗೆ ಸಮಸ್ತಮಿತ್ರಮಂಡಲಿಯಿಂದ ಪರಿವೃತನಾದ ನನ್ನನ್ನು ಸೀತೆಯು ಸಂತೋಷದಿಂದ ನೋಡಲಿ!" ಎಂದನು. ರಾಮನು ಈ ಮಾತುಗಳನ್ನು ಹೇಳಿದೊಡನೆ ವಿಭೀಷಣನು ತನ್ನಲ್ಲಿ ತಾನು "ಆಹಾ! ಸೀತೆಯು ತನ್ನ ಪತಿಸಮಾಗಮದಿಂದ ಸಂತೋಷಹೊಂದಿರುವ ಕಾಲದಲ್ಲಿಯೂ ರಾಮನು, ಆಕೆಯು ಇನ್ನೂ ಕಷ್ಟದಲ್ಲಿ ಸಿಕ್ಕಿರುವಳೆಂದು ಹೇಳಿದ ಕಾರಣವೇನು?" ಎಂದು ಆ ವಾಕ್ಯಾರ್ಥವನ್ನು ತನ್ನಲ್ಲಿ ತಾನೇ ವಿಮರ್ಶಿಸುತ್ತಿದ್ದು, ಕೊನೆಗೆ ವಿನಯದಿಂದ ಸೀತೆಯ ಬಳಿಗೆ ಹೋಗಿ ಆಕೆಯನ್ನು ರಾಮನ ಬಳಿಗೆ ಕರೆತಂದು ಬಿಟ್ಟನು. ಆಗ ಲಕ್ಷ್ಮಣನೂ, ಸುಗ್ರೀವನೂ, ಹನುಮಂತನೂ, ರಾಮನು ಹೇಳಿದ ಮಾತಿನಿಂದಲೂ, ಅವನ ಇಂಗಿತಗಳಿಂದಲೂ ಆತನಿಗೆ ಸೀತೆಯ ಮೇಲಿನ ಅನುರಾಗವು ತಗ್ಗಿರುವುದನ್ನು ನೋಡಿ ಬಹಳ ದುಃಖಿತರಾಗಿದ್ದರು. ಇಷ್ಟರಲ್ಲಿ ಸೀತೆಯು ವಿಭೀಷಣನಿಂದ ಹಿಂಬಾಲಿಸಲ್ಪಡುತ್ತ, ತನ್ನದೇಹದಲ್ಲಿಯೇ ತಾನು ಹುದುಗಿಕೊಳ್ಳುವಂತೆ ಲಜ್ಜೆಯಿಂದ ಕುಗ್ಗಿದವಳಾಗಿ ಮೆಲ್ಲಗೆ ಪತಿಸಾನ್ನಿಧ್ಯಕ್ಕೆ ಬಂದಳು. ಹೀಗೆ ಮೆಲ್ಲಗೆ ಬಂದು ಪತಿ ಸನ್ನಿಧಿಯನ್ನು ಸೇರಿದೊಡನೆ, ಸೀತಾದೇವಿಯು ಸುತ್ತಲೂ ನೆರೆದಿದ್ದ ಜನಸಮೂಹವನ್ನು ನೋಡಿ ನಾಚಿಕೆ

---

[1] ಮುಂದೆ ಸೀತೆಯನ್ನು ಅಗ್ನಿಪ್ರವೇಶಮಾಡಿಸಬೇಕಾಗಿರುವುದರಿಂದ, ಇಲ್ಲಿ ರಾಮನು ಅವಳ ಭಾವಿಕಷ್ಟವನ್ನು ಮೊದಲೇ ಸೂಚಿಸಿರುವುದಾಗಿ ತಿಳಿಯಬೇಕು.

ಯಿಂದ ತಾನು ಹೊದೆದಿದ್ದ ಸೀರೆಯ ಸೆರಗನ್ನು ಮುಖಕ್ಕೆ ಮರೆಸಿ ಕೊಂಡು "ಆರ್ಯಪುತ್ರ !" ಎಂಬ ಇದೊಂದು ಮಾತನ್ನು ಮಾತ್ರವೇ ಹೇಳಿ ರೋದಿಸುವುದಕ್ಕೆ ತೊಡಗಿದಳು. ಪತಿಯೇ ಪರದೈವವೆಂದು ನಂಬಿದ ಆ ರಮಣೀಮಣಿಯು, ತನ್ನ ಪ್ರಾಣೇಶ್ವರನ ಬದಿಯಲ್ಲಿ ನಿಂತು, ಆನಂದದಿಂದ ರಳಿದ ಮುಖವುಳ್ಳವಳಾಗಿ ಅವನನ್ನು ನೋಡಿದಾಗ, ಅವಳ ಮನಸ್ಸಿನಲ್ಲಿ ಅಷ್ಟು ಕಷ್ಟದಶೆಯಲ್ಲಿದ್ದು ತನಗೆ ತಿರುಗಿ ತನ್ನ ಪತಿಯ ಮುಖವನ್ನು ನೋಡತಕ್ಕ ಮಹಾಭಾಗ್ಯವುಂಟಾಯಿತೆಂಬ ಆಶ್ಚರ್ಯವೊಂದು ! ಬಹುಕಾಲ ದಿಂದಗಲಿದ ತನ್ನ ಪ್ರಿಯನನ್ನು ನೋಡಿದ ಸಂತೋಷವೊಂದು ! ತನ್ನ ಪ್ರಾಣಕಾಂತನಲ್ಲಿ ತನಗಿರತಕ್ಕ ಸಹಜವಾದ ಪ್ರೇಮವೊಂದು! ಈ ಮೂರು ಬಗೆಯ ಮನೋವಿಕಾರಗಳೂ ಏಕಕಾಲದಲ್ಲಿ ನೆಲೆಗೊಂಡವು. ಶುದ್ಧ ಪೂರ್ಣ ಚಂದ್ರನಿಗೆಣೆಯಾದ ಮುಖವುಳ್ಳ ಆ ಸಾಧ್ವೀಮಣಿಯು, ಸಂಧ್ಯಾರಾಗ ದಿಂದ ಕೂಡಿದ ಪೂರ್ಣಚಂದ್ರನಂತೆ ರಾಮನ ಮುಖವು ಆಗ ಸ್ವಲ್ಪವಾಗಿ ಕೋಪದಿಂದ ಕೆಂಪೇರಿದ್ದರೂ, ಆಹ್ಲಾದಕರವಾದ ಆ ಮುಖ ಸೌಂದರ್ಯವನ್ನು ನೋಡಿ, ತಾನು ಬಹುಕಾಲದಿಂದ ಅನುಭವಿಸುತ್ತಿದ್ದ ಮನಃಕ್ಲೇಶವನ್ನು ನೀಗಿ ಪರಮಾನಂದಭರಿತಳಾಗಿ ನಿಂತಿದ್ದಳು.

ಇಲ್ಲಿಗೆ ನೂರಹದಿನೇಳನೆಯ ಸರ್ಗವು.

ರಾಮನು ಸೀತೆಯನ್ನು ನೋಡಿ ಬಹುಕಾಲದಿಂದ ಆಕೆಯು ರಾವಣ
ಗೃಹದಲ್ಲಿದ್ದುದಕ್ಕಾಗಿ ಪರುಷವಾಕ್ಯವನ್ನಾಡಿ ನಿಂದಿಸಿದುದು.

ಆಗ ರಾಮನೂಕೂಡ, ತನ್ನ ಪಾರ್ಶ್ವದಲ್ಲಿ ಲಜ್ಜೆಯಿಂದ ನಮ್ರಳಾಗಿ ನಿಂತಿದ್ದ ಸೀತೆಯನ್ನು ನೋಡಿದನು. ಅವಳನ್ನು ನೋಡಿದೊಡನೆ ಅವನ ಮನಸ್ಸಿನಲ್ಲಿ ಒಳಗೊಳಗೆ ಒಂದು ವಿಧವಾದ ಕೋಪಾವೇಶವು ಹುಟ್ಟಿತು. ಆ ಕೋಪದಿಂದ ಆಕೆಯನ್ನು ಕುರಿತು "ಕಲ್ಯಾಣಿ ! ಇದೋ ! ಯುದ್ಧ ದಲ್ಲಿ ಶತ್ರುವನ್ನು ಜಯಿಸಿ ನಿನ್ನನ್ನು ಸಾಧಿಸಿದೆನು. ಇವೆಲ್ಲವೂ ನನ್ನ ಪೌರುಷ ವನ್ನುಳಿಸಿಕೊಳ್ಳುವುದಕ್ಕಾಗಿ ಮಾಡಬೇಕಾದ ಕಾರ್ಯವೆಂದು ಮಾಡಿದೆನೇ

ಹೊರತು, ಹೇಗಾದರೂ ನಿನ್ನನ್ನು ಪಡೆಯಬೇಕೆಂಬ ಕೋರಿಕೆಯಿಂದ ಮಾಡಿದ ಪ್ರಯತ್ನಗಳಲ್ಲ! ಮುಖ್ಯವಾಗಿ ನನ್ನ ಕೋಪವನ್ನು ನಾನು ತೀರಿಸಿಕೊಂಡುದಾಯಿತು! ಆ ಕೋಪಕ್ಕೆ ಫಲವನ್ನೂ ಸಾಧಿಸಿದುದಾಯಿತು. ವೈರಿಯು ನನಗೆ ಮಾಡಿದ ತಿರಸ್ಕಾರಕ್ಕೆ ಪ್ರತಿಯನ್ನು ಮಾಡಿ ಹಗೆ ತೀರಿಸಿಕೊಂಡೂ ಬಿಟ್ಟೆನು. ಇದುವರೆಗೆ ನನಗುಂಟಾಗಿದ್ದ ಅವಮಾನವನ್ನೂ, ನನಗೆ ಆ ಅವಮಾನವನ್ನುಂಟುಮಾಡಿದ ವೈರಿಯನ್ನೂ ಏಕಕಾಲದಲ್ಲಿ ನಿರ್ಮೂಲಮಾಡಿದೆನು. ಇದರಿಂದ ನನ್ನ ಪೌರುಷವನ್ನೂ ತೋರಿಸಿದುದಾಯಿತು. ಇದುವರೆಗೆ ನಾನು ಪಟ್ಟ ಶ್ರಮವೂ ಸಫಲವಾಯಿತು. ನನ್ನ ಪ್ರತಿಜ್ಞೆಯನ್ನು ನಾನು ತೀರಿಸಿಕೊಂಡುದರಿಂದ, ಇನ್ನು ನಾನು ಸ್ವತಂತ್ರನು! ಹಿಂದೆ ನಾನಿಲ್ಲದ ಕಾಲದಲ್ಲಿ ಚಪಲಚಿತ್ತನಾದ ಆ ರಾಕ್ಷಸನು ಜನಸ್ಥಾನದಿಂದ ನಿನ್ನನ್ನು ಅಪಹರಿಸಿಕೊಂಡು ಹೋದನಷ್ಟೆ? ಹೀಗೆ ದೈವಿಕವಾಗಿ ನಿನ್ನ ದಶೆಯಿಂದ ನನಗೆ ಪ್ರಾಪ್ತವಾದ ಅವಮಾನವನ್ನು ಪುರುಷಪ್ರಯತ್ನದಿಂದ ನಾನು ಇಷ್ಟು ಶ್ರಮಪಟ್ಟು ತಪ್ಪಿಸಿಕೊಳ್ಳಬೇಕಾಯಿತು. ಏನಾದರೂ ಒಂದು ಅವಮಾನವು ಬಂದಾಗ ಅದನ್ನು ತನ್ನ ಪೌರುಷದಿಂದ ಯಾವನು ತಪ್ಪಿಸಿಕೊಳ್ಳಲಾರನೋ ಅಂತವನು ಕೇವಲ ಅಲ್ಪ ತೇಜನೆನಿಸಿಕೊಳ್ಳುವನು. ಅವನಿಗೆ ಯಾವ ಪುರುಷಾರ್ಥವೂ ಕೈಸೇರದು. ಹಿಂದೆ ಈ ಹನುಮಂತನು ಆ ಮಹಾಸಮುದ್ರವನ್ನು ಹಾರಿದುದು, ಲಂಕೆಯನ್ನು ಮರ್ದಿಸಿದುದು, ಇವೇ ಮೊದಲಾಗಿ ಪರಮಶ್ಲಾಘ್ಯಗಳಾದ ಎಷ್ಟೋ ಕಾರ್ಯಗಳನ್ನು ನಡೆಸಿದನಷ್ಟೆ? ಅವನ ಈ ಪ್ರಯತ್ನಗಳೆಲ್ಲವೂ ಈಗ ನನ್ನವಮಾನವನ್ನು ತಪ್ಪಿಸಿದುದರಿಂದ ಸಾರ್ಥಕಗಳಾದುವು. ಈ ಸುಗ್ರೀವನೂ ಕೂಡ ನನಗಾಗಿಯೇ ಯುದ್ಧದಲ್ಲಿ ದೊಡ್ಡ ಪರಾಕ್ರಮವನ್ನು ತೋರಿಸಿದನು. ಯಾವಾಗಲೂ ಇವನು ನನ್ನ ಹಿತವನ್ನೇ ಹಾರೈಸತಕ್ಕವನು. ಈಗ ನನಗಾಗಿ ಈ ಸುಗ್ರೀವನೂ ಇವನ ಕಡೆಯ ವಾನರಸೈನಿಕರೂ ಪಟ್ಟ ಪ್ರಯಾಸಗಳೆಲ್ಲವೂ ಈಗ ಸಫಲಗಳಾದುವು. ಈ ವಿಭೀಷಣನೂ ಕೂಡ ತನ್ನ ಸಹೋದರನಲ್ಲಿ ದುರ್ಗುಣವನ್ನು ಕಂಡೊಡನೆ ಅವನನ್ನು ಬಿಟ್ಟು ತಾನಾಗಿಯೇ ಬಂದು ನನ್ನಲ್ಲಿ ಸೇರಿ ನನಗೆ ಪರಮಭಕ್ತನೆನಿಸಿಕೊಂಡನು. ಇವನು ನನಗಾಗಿ ಪಟ್ಟ ಪ್ರಯಾಸವೂ ಈಗ ಸಫಲವಾಯಿತು. ಮುಖ್ಯವಾಗಿ ನಿನ್ನ ದಶೆಯಿಂದ ನನಗೆ ಪ್ರಾಪ್ತವಾದ ದೊಡ್ಡ ತಿರಸ್ಕಾರವನ್ನು

ತಪ್ಪಿಸುವುದಕ್ಕಾಗಿ ಇವರೆಲ್ಲರೂ ಇಷ್ಟು ಶ್ರಮವನ್ನು ವಹಿಸಬೇಕಾಯಿತು. ಹೇಗಾದರೂ ಆಗಲಿ! ಮುಖ್ಯವಾಗಿ ಇವರ ಪ್ರಯಾಸಗಳೆಲ್ಲವೂ ಸಾಫಲ್ಯವನ್ನು ಹೊಂದಿದುವು" ಎಂದನು. ರಾಮನು ಹೀಗೆ ನಿರಾಶೆಯಿಂದ ಅತಿ ಕಠಿನವಾಗಿ ಮಾತುಗಳನ್ನಾಡುತ್ತಿರುವಾಗಲೇ, ಸೀತೆಗೆ ಮನಸ್ಸಿನಲ್ಲಿ ಬಹಳವಾದ ವ್ಯಸನವು ಉಕ್ಕಿಬರುತ್ತಿತ್ತು. ಭಯಪಟ್ಟ ಹೆಣ್ಣು ಜಿಂಕೆಯಂತೆ ಬಿಚ್ಚಿದ ಕಣ್ಣುಗಳಿಂದ ತನ್ನ ಪ್ರಿಯನನ್ನೇ ನೋಡುತ್ತ ಕಣ್ಣುಗಳಲ್ಲಿ ನೀರನ್ನು ತುಳುಕಿಸುತ್ತಿದ್ದಳು. ಉರಿಯುವ ಬೆಂಕಿಯಲ್ಲಿ ತುಪ್ಪವನ್ನು ಸುರಿದಂತೆ ಮೊದಲೇ ಕುಪಿತನಾಗಿದ್ದ ರಾಮನಿಗೆ, ತನ್ನ ಮುಂದೆ ದುಃಖದಿಂದ ನಿಂತಿದ್ದ ಸೀತೆಯನ್ನು ನೋಡಿದೊಡನೆ ಕೋಪವು ಮತ್ತಷ್ಟು ಹೆಚ್ಚಿತು. ಈ ಕೋಪದಿಂದ ರಾಮನು ಮುಖದಲ್ಲಿ ಹುಬ್ಬುಗಳನ್ನು ಗಂಟಿಕ್ಕಿ, ಸೀತೆಯನ್ನು ಸರಿಯಾಗಿ ದೃಷ್ಟಿಯಿಟ್ಟು ನೋಡುವುದಕ್ಕೂ ಇಷ್ಟವಿಲ್ಲದವನಂತೆ ಓರೆನೋಟದಿಂದ ನೋಡುತ್ತ, ಸಮಸ್ತವಾನರ ರಾಕ್ಷಸರ ನಡುವೆ ಅವಳನ್ನು ಕುರಿತು, ಮತ್ತಷ್ಟು ಪರುಷವಾಕ್ಯವನ್ನಾಡುವನು. "ಎಲೆ ಸೀತೆ! ಮುಖ್ಯವಾಗಿ ಮೇಲೆಬಿದ್ದ ಅವಮಾನವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಮನುಷ್ಯನು ಯಾವ ಕಾರ್ಯವನ್ನು ಮಾಡಬೇಕೋ ಅವೆಲ್ಲವನ್ನೂ ನಾನು ಮಾಡಿ ಮುಗಿಸಿದುದಾಯಿತು. ಪೂರ್ವದಲ್ಲಿ ಇಲ್ವಲವಾತಾಪಿಗಳೆಂಬ ರಾಕ್ಷಸರಿಬ್ಬರು ದಕ್ಷಿಣದಿಕ್ಕನ್ನಾಕ್ರಮಿಸಿ, ಅಲ್ಲಿ ಯಾವ ಪ್ರಾಣಿಯೂ ತಲೆಯಿಕ್ಕದಂತೆ ಬಾಧಿಸುತ್ತಿದ್ದುದಕ್ಕಾಗಿ, ಆತ್ಮಧ್ಯಾನಪರನಾದ ಅಗಸ್ತ್ಯಮಹಾಮುನಿಯು, ತನ್ನ ತಪೋಬಲದಿಂದ ಅವರನ್ನು ನಿಗ್ರಹಿಸಿ ಆ ದಕ್ಷಿಣ ದಿಕ್ಕನ್ನು ಸಾಧಿಸಿದನಷ್ಟೆ? ಅದರಂತೆ ನಾನೂ ಈಗ,ರಾವಣನು ನಿನ್ನನ್ನು ಕದ್ದುಯ್ದ ಕೋಪವನ್ನು ತೀರಿಸಿಕೊಳ್ಳುವುದಕ್ಕಾಗಿ, ಆ ಶತ್ರುವನ್ನು ಕೊಂದು ನಿನ್ನನ್ನು ಸಾಧಿಸಬೇಕಾಯಿತು. ನಾನು ಈ ಯುದ್ಧವನ್ನು ನಿರ್ವಹಿಸಿದುದೂ ನನ್ನ ಮಿತ್ರರ ಪರಾಕ್ರಮಬಲದಿಂದಲೇ! ನಾನು ನಡೆಸಿದ ಈ ಪ್ರಯಾಸವೆಲ್ಲವೂ ಆ ಶತ್ರುವಿನ ಮೇಲಿದ್ದ ವೈರವನ್ನು ತೀರಿಸಿಕೊಳ್ಳುವುದಕ್ಕಾಗಿಯೇ ಹೊರತು ನಿನ್ನನ್ನು ಸಾಧಿಸಬೇಕೆಂಬ ಉದ್ದೇಶದಿಂದಲ್ಲ. ಈ ವಿಷಯವು ನಿನಗೆ ಚೆನ್ನಾಗಿ ತಿಳಿದಿರಲಿ! ಮುಖ್ಯವಾಗಿ ನನ್ನ ಕುಲಾಚಾರವನ್ನು ಕಾಪಾಡಿಕೊಳ್ಳುವುದಕ್ಕೂ ನನ್ನ ಮೇಲೆ ಬಿದ್ದ ಅಪವಾದವನ್ನು ತಪ್ಪಿಸುವುದಕ್ಕೂ ಲೋಕವಿಖ್ಯಾತವೆನಿಸಿಕೊಂಡ ನಮ್ಮ ವಂಶಕ್ಕೆ ಸಂಭವಿಸಬಹುದಾದ ಅಪಕೀರ್ತಿಯನ್ನು ಪರಿಹರಿಸುವುದಕ್ಕೂ ನಾನು ಇಷ್ಟು ಶ್ರಮವನ್ನು ವಹಿಸಬೇಕಾಯಿತೇ ಹೊರತು ಬೇರೆ

ಯಲ್ಲ. ಆದರೆ ಇದುವರೆಗೆ ನೀನು ಪರಗೃಹವಾಸವಲ್ಲಿದ್ದುದರಿಂದ, ನಿನ್ನ ನಡತೆಯ ವಿಷಯದಲ್ಲಿ ನನಗೇನೋ ಸಂಪೂರ್ಣವಾದ ಸಂದೇಹವು ಹುಟ್ಟಿರುವುದು. ಈಗ ನೀನು ನನ್ನ ಮುಂದೆ ನಿಂತಿರುವುದೂ ಕೂಡ [1]ಕಣ್ಣು ಬೇನೆಯುಳ್ಳವನ ಮುಂದೆ ಉರಿಯುವ ದೀಪವನ್ನು ತಂದಿಟ್ಟಂತೆ ನನಗೆ ಬಹಳ ಕಷ್ಟವಾಗಿರುವುದು! ಆದುದರಿಂದ ಎಲೆ ಜನಕಪುತ್ರಿ! ಇನ್ನು ನಾನು ಅನುಜ್ಞೆಯನ್ನು ಕೊಟ್ಟಿರುವೆನು! ಈ ಹತ್ತು ದಿಕ್ಕುಗಳಲ್ಲಿ ನಿನ್ನಿಷ್ಟ ಬಂದ ಕಡೆಗೆ ಹೋಗಬಹುದು! ಇನ್ನು ನಿನ್ನಿಂದ ನನಗೇನೂ ಕೆಲಸವಿಲ್ಲ. ಉತ್ತಮಕುಲದಲ್ಲಿ ಹುಟ್ಟಿ, ಅದರಲ್ಲಿಯೂ ಮಹಾತೇಜಸ್ವಿಯಾದ ಯಾವ ಪುರುಷನು ತಾನೇ, ಬಹುಕಾಲದಿಂದ ಪರಗೃಹದಲ್ಲಿ ಸೇರಿದ್ದ ತನ್ನ ಪತ್ನಿಯಲ್ಲಿ ನಿಸ್ಸಂದೇಹವಾದ ಪ್ರೀತಿಯನ್ನಿಟ್ಟು ತಿರುಗಿ ಕರೆದಿಟ್ಟುಕೊಳ್ಳುವನು? ಎಲೆ ಸೀತೆ! ನೀನಾದರೋ ಇಷ್ಟು ದೀರ್ಘಕಾಲದವರೆಗೆ ರಾವಣನ ಮಡಿಲಲ್ಲಿದ್ದು ಈಗಲೇ ಅಲ್ಲಿಂದ ಜಾರಿ ಬಂದವಳು. ಕಾಮವಿಕಾರದಿಂದ ದೂಷಿತವಾದ ಆ ದುರಾತ್ಮನ ಕಣ್ಣಿನಲ್ಲಿ ಬಿದ್ದವಳು. ಹೀಗಿರುವಾಗ ಮಹಾಕುಲದಲ್ಲಿ ಹುಟ್ಟಿದವನೆಂದು ಹೇಳಿಸಿಕೊಳ್ಳುವ ನಾನು, ತಿರುಗಿ ನಿನ್ನನ್ನು ಹೇಗೆ ಕೈಹಿಡಿದು ಸೇರಿಸಿಕೊಳ್ಳಲಿ! ನಮ್ಮ ವಂಶದ ಕೀರ್ತಿಯನ್ನುಳಿಸುವುದಕ್ಕಾಗಿ ನಿನ್ನನ್ನು ಸಾಧಿಸಿದೆನೇ ಹೊರತು ಬೇರೆಯಲ್ಲ! ಹೋಗಿದ್ದ ಕೀರ್ತಿಯನ್ನುಳಿಸುವುದಕ್ಕಾಗಿ ನಿನ್ನನ್ನು ತಿರುಗಿ ಸಾಧಿಸಿಬಿಟ್ಟೆನು! ಇನ್ನು ನನಗೆ ನಿನ್ನಲ್ಲಿ ಆಶೆಗೆ ಕಾರಣವೇನೂ ಇಲ್ಲ! ನೀನು ಬೇಕಾದಕಡೆಗೆ ಹೋಗಬಹುದು ಇದು ನಾನು ಬುದ್ಧಿಯಲ್ಲಿ ಚೆನ್ನಾಗಿ ನಿಶ್ಚಯಿಸಿ ಹೇಳಿದ ಮಾತೇ ಹೊರತು ಬೇರೆಯಲ್ಲ. ಇನ್ನು ನಿನಗೆ ಹೇಗೆ ಸುಖವೆಂದು ತೋರುವುದೋ ಹಾಗೆ ನಡೆಸು. [2]ಲಕ್ಷ್ಮಣನಲ್ಲಿಯೋ, ಭರತನಲ್ಲಿಯೋ ಇಲ್ಲವೇ ವಾನರರಾಜನಾದ ಈ ಸುಗ್ರೀವನಲ್ಲಿಯೋ, ರಾಕ್ಷಸರಾಜನಾದ ಈ ವಿಭೀಷಣನಲ್ಲಿಯೊ

---

1 ನೇತ್ರರೋಗಿಗೆ ದೀಪಪ್ರಭೆಯು ಪ್ರತಿಕೂಲವಾಗಿರುವುದಕ್ಕೆ ಅವನ ನೇತ್ರದೋಷವು ಕಾರಣವೇ ಹೊರತು ದೀಪದ ದೋಷವಲ್ಲವಷ್ಟೆ? ಅದರಂತೆಯೇ ಇಲ್ಲಿಯೂ ರಾಮನು, ತನಗೆ ಸೀತೆಯು ಪ್ರತಿಕೂಲೆಯಾದುದು ತನ್ನ ಮನಸ್ಸಿನಲ್ಲಿ ಹುಟ್ಟಿದ ಸಂದೇಹರೂಪವಾದ ದೋಷದಿಂದಲೇ ಹೊರತು, ಸೀತೆಯಲ್ಲಿ ಯಾವ ದೋಷವೂ ಇಲ್ಲವೆಂಬುದನ್ನು ಸೂಚಿಸಿರುವುದಾಗಿ ಭಾವವು.

2 ಇಲ್ಲಿ ಸೀತೆಗೆ ಲಕ್ಷ್ಮಣಾದಿಗಳೊಡನೆ ಸೇರಿ ಅವರ ಪೋಷಣೆಯಲ್ಲಿರಬಹುದೆಂದು ಅನುಮತಿಕೊಟ್ಟಿರುವುದರಿಂದ, ಪತಿಯಿಂದ ಪರಿತ್ಯಜಿಸಲ್ಪಟ್ಟ ಹೆಂಗಸಿಗೂ ತದ್ಬಂಧುಗೃಹವಾಸವು ವಿಧಿಸಲ್ಪಟ್ಟಿರುವುದೇ ಹೊರತು ಹೇಗಿದ್ದರೂ ಸ್ತ್ರೀಯರಿಗೆ

ಅಥವಾ ಬೇರೆ ಯಾರ ಪೋಷಣೆಯಲ್ಲಿದ್ದರೆ ಸುಖವೆಂದು ನಿನ್ನ ಬುದ್ಧಿಗೆ ತೋರುವುದೋ ಅವರಲ್ಲಿ ಹೋಗಿ ಸೇರಬಹುದು. ಎಲೆ ವೈದೇಹಿ! ಇಷ್ಟೊಂದು ಮಹಾದ್ಭುತವಾದ ದಿವ್ಯರೂಪದಿಂದ ಲೋಕಮೋಹಕಳಾದ ನೀನು, ದುರಾತ್ಮನಾದ ಮತ್ತು ಕೇವಲ ಚಪಲಚಿತ್ತನಾದ ಆ ರಾವಣನ ಮನೆಯಲ್ಲಿ ಇಷ್ಟು ದೀರ್ಘಕಾಲದವರೆಗೆ ಬೇರೆ ದಿಕ್ಕಿಲ್ಲದೆ ಒಂಟಿಯಾಗಿ ಸಿಕ್ಕಿಬಿದ್ದಿರುವಾಗ, ಅವನು ನಿನ್ನನ್ನು ನೋಡಿ ಇದುವರೆಗೂ ಮನಸ್ಸನ್ನು ತಡೆದುಕೊಂಡು ಸುಮ್ಮನಿರುವನೆ? ಇದನ್ನು ಯಾರೂ ನಂಬಲಾರರು" ಎಂದು ಪರುಷವಾಕ್ಯದಿಂದ ತಿರಸ್ಕರಿಸಿದನು. ಹುಟ್ಟಿದುದು ಮೊದಲು ಅಪ್ರಿಯವಾದ ಮಾತೆಂಬುದನ್ನೇ ಕಂಡರಿಯದ ಸೀತಾದೇವಿಯು, ತನ್ನ ಪ್ರಾಣೇಶ್ವರನ ಬಾಯಿಂದ ಈ ವಿಧವಾದ ಅಪ್ರಿಯವಾಕ್ಯವು ಹೊರಟುದನ್ನು ಕೇಳಿ, ಮದದಾನೆಯು ಕೋಪದಿಂದ ಕದಲಿಸಿದ ಆನೆಬೀಲದ ಬಳ್ಳಿಯಂತೆ, ಭಯದಿಂದಲೂ ದುಃಖದಿಂದಲೂ ನಡುಗುತ್ತ ಧಾರೆ ಧಾರೆಯಾಗಿ ಕಣ್ಣೀರನ್ನು ಬಿಡುತ್ತಿದ್ದಳು.

ಇಲ್ಲಿಗೆ ನೂರಹದಿನೆಂಟನೆಯ ಸರ್ಗವು.

ಸೀತೆಯು ರಾಮನ ಮಾತಿಗೆ ಪ್ರತ್ಯುತ್ತರವನ್ನು ಹೇಳಿ, ಆತನಿಗೆ ತನ್ನ ನಡತೆಯಲ್ಲಿ ನಂಬಿಕೆಯನ್ನು ಹುಟ್ಟಿಸುವುದಕ್ಕಾಗಿ ಅಗ್ನಿಪ್ರವೇಶಮಾಡಿದುದು.

ಹೀಗೆ ರಾಮನು ಆಕಸ್ಮಿಕ ಕೋಪಾವೇಶವುಳ್ಳವನಾಗಿ, ಮೈಯಲ್ಲಿ ರೋಮಾಂಚವನ್ನು ಹುಟ್ಟಿಸುವಷ್ಟು ಭಯಂಕರವಾದ ಈ ಪರುಷವಾಕ್ಯವನ್ನಾಡಲು, ಅದನ್ನು ಕೇಳಿ ಸೀತೆಗೆ ಸಹಿಸಲಾರದ ಸಂಕಟವುಂಟಾಯಿತು. ಆಗ ಸೀತೆಯು ಹಿಂದೆ ತಾನು ಯಾವಾಗಲೂ ಕೇಳಿ ತಿಳಿಯದ ಅಂತಹ ಪರುಷವಾಕ್ಯವನ್ನು ತನ್ನ ಪ್ರಿಯನ ಬಾಯಿಂದ, ಆ ಮಹಾರಾಜ ಸಮೂಹದ ಮಧ್ಯದಲ್ಲಿ ಕೇಳಿ ಮೊದಲೇ ಲಜ್ಜೆಯಿಂದ ಬಗ್ಗಿದ್ದ ತಲೆಯನ್ನು ಮತ್ತಷ್ಟು

ಸ್ವಾತಂತ್ರ್ಯವಿಲ್ಲವೆಂದರ್ಥವು ಸೂಚಿತವಾಗುವುದು. ಇಲ್ಲಿ ಸೀತೆಯು ಪುತ್ರಸಮಾನರಾದ ಲಕ್ಷ್ಮಣಾದಿಗಳ ಪೋಷಣೆಗೊಳಪಟ್ಟು ಜೀವಿತಕಾಲವನು ಕಳೆಯಬಹುದೆಂದು ಭಾವವು

ಬಗ್ಗಿಸಿದಳು- ತನ್ನ ದೇಹದಲ್ಲಿಯೇ ತಾನು ಹುದುಗಿಕೊಳ್ಳುವಂತೆ ಕುಗ್ಗಿದ ಮೈಯುಳ್ಳವಳಾಗಿ, ರಾಮನ ವಾಗ್ಬಾಣಗಳು ತನ್ನ ಸರ್ವಾವಯವಗಳಲ್ಲಿಯೂ ನಾಟಿದಂತಾಗಲು, ಸಂಕಟವನ್ನು ಸಹಿಸಲಾರದೆ ಧಾರೆಧಾರೆಯಾಗಿ ಕಣ್ಣೀರನ್ನು ಸುರಿಸಿದಳು. ಆ ಮೇಲೆ ತನ್ನ ಮುಖದಲ್ಲಿ ತುಂಬಿದ್ದ ಕಣ್ಣೀರನ್ನು ವಸ್ತ್ರದ ಸೆರಗಿನಿಂದೊರೆಸಿಕೊಂಡು, ವ್ಯಸನದಿಂದ ಕುಗ್ಗಿದ ಕಂಠವುಳ್ಳವಳಾಗಿ, ಪತಿಯನ್ನು ಕುರಿತು ದೀನಧ್ವನಿಯಿಂದ "ವೀರಾಗ್ರಣೀ! ಇದೇಕೆ ನೀನು ನನ್ನನ್ನು ಕುರಿತು ಇಂತಹ ಮಾತುಗಳನ್ನಾಡುವೆ? ನಾಥಾ! ಈ ಮಾತು ನೀನು ಬಾಯಿಂದಾಡುವುದಕ್ಕಾಗಲಿ, ನಾನು ಕಿವಿಯಿಂದ ಕೇಳುವುದಕ್ಕಾಗಲಿ ಯೋಗ್ಯವಲ್ಲ! ಆರ್ಯಪುತ್ರ! ಕರ್ಣಭೇದಕಗಳಾದ ಈ ಮಾತುಗಳೂ ನಿನ್ನ ಬಾಯಿಂದ ಬರಬಹುದೆ? ಕೇವಲ ಪ್ರಾಕೃತಮನುಷ್ಯನು ಪ್ರಾಕೃತಸ್ತ್ರೀಯನ್ನು ಕುರಿತು ಹೇಳುವಂತಹ ಮಾತುಗಳನ್ನು ನಿನ್ನಂತವನು ಹೇಳಬಹುದೆ? ಮಹಾಬಾಹೂ! ನೀನು ನನ್ನನ್ನು ಎಂತವಳೆಂದು ಭಾವಿಸಿರುವೆಯೋ ನಾನಂತವಳಲ್ಲ! ನನ್ನ ಮಾತನ್ನು ನಂಬು. ನನ್ನ ಸಚ್ಚರಿತ್ರದಮೇಲೆ ಆಣೆಯಿಟ್ಟು ಹೇಳುವೆನು. ಅಲ್ಪಬುದ್ಧಿಯುಳ್ಳ ಕೆಲವು ಸ್ತ್ರೀಯರ ದುರಾಚಾರವನ್ನು ನೋಡಿ, ಸ್ತ್ರೀಜಾತಿಯಲ್ಲಿಯೇ ಆ ಶಂಕೆಯನ್ನಿಡಬಹುದೆ? ನೀನು ನನ್ನ ಸ್ವಭಾವವನ್ನು ಇದುವರೆಗೆ ಚೆನ್ನಾಗಿ ಪರೀಕ್ಷಿಸಿ ತಿಳಿದವನಾಗಿದ್ದರೆ, ಈ ಸಂದೇಹವನ್ನು ಬಿಟ್ಟು ಬಿಡು! ರಾಮಾ! ನಾನು ದುಃಖದಿಂದ ಮೈಮರೆತಿದ್ದಾಗ ಒಂದುವೇಳೆ ರಾವಣನು ನನ್ನನ್ನು ಕೈಯಿಂದ ಮುಟ್ಟಿದರೂ ಅದು ನನ್ನ ದೋಷವೆ? ಅದು ನನ್ನ ಬುದ್ಧಿಪೂರ್ವಕವಾದ ತಪ್ಪಲ್ಲ! ದೈವದ ತಪ್ಪು. ಈ ವಿಷಯದಲ್ಲಿ ದೈವವನ್ನು ನಿಂದಿಸಬೇಕೇ ಹೊರತು ನನ್ನಲ್ಲಿ ಶಂಕಿಸುವುದು ಯುಕ್ತವಲ್ಲ! ಕಾಂತಾ! ಆಗ ನನ್ನ ಮನಸ್ಸಾಗಲಿ, ನನ್ನ ದೇಹವಾಗಲಿ, ನನಗೆ ಸ್ವಾಧೀನವಾಗಿದ್ದರಲ್ಲವೇ ನಾನು ಆ ಅಪಾಯದಿಂದ ತಪ್ಪಿಸಿಕೊಳ್ಳಬಹುದಾಗಿತ್ತು. ಆಗೆ ನನ್ನ ಮನಸ್ಸು ನಿನ್ನಲ್ಲಿ ನೆಲೆಸಿತ್ತು. ನೀನು ಹೊರತು ಈ ಮನಸ್ಸನ್ನು ಗ್ರಹಿಸಬೇಕೆಂದರೆ ಸಾಧ್ಯವೂ ಅಲ್ಲ! ಈ ಕಾರಣದಿಂದಲೇ ನನ್ನ ಅವಯವಗಳೂ ರಾವಣನಿಗೆ ಸುಲಭಗ್ರಾಹ್ಯಗಳಾದುವು. ಅದನ್ನು ಬಿಡಿಸಿಕೊಳ್ಳುವುದಕ್ಕೆ ನನ್ನಿಂದ ಸಾಧ್ಯವಿಲ್ಲದೆ ಹೋಯಿತು. ಆಗ ನಾನೇನು ಮಾಡಬಲ್ಲೆನು? ನಾಥಾ! ಮುಖ್ಯವಾಗಿ ನನ್ನ ಮಾನವಾಗಲಿ ಅವಮಾನವಾಗಲಿ ನಿನ್ನಧೀನವು. ನಾವಿಬ್ಬರೂ ಬಹುಕಾಲದಿಂದ ಒಬ್ಬರಿಗೊಬ್ಬರು ಕೂಡಾಡಿ ಬಳೆದೆವು. ನಮ್ಮ

ಬ್ಬರಿಗೂ ಬಹಳ ವರ್ಷಗಳ ಸಹವಾಸವುಂಟು. ಇವೆರಡರಿಂದಲೇ ನನ್ನ ಸ್ವಭಾವವು ನಿನಗೆ ತಿಳಿದಿರಬೇಕು. ಇಷ್ಟಾದರೂ ನನ್ನ ಸ್ವಭಾವವು ನಿನಗೆ ತಿಳಿಯದೆ ಹೋಗಿದ್ದ ಪಕ್ಷದಲ್ಲಿ ಇನ್ನು ಯಾವ ವಿಧದಿಂದ ನಾನು ನಿನಗೆ ನಂಬಿಕೆಯನ್ನುಂಟುಮಾಡಬಲ್ಲೆನು? ಬೇರೆ ಯಾವ ನಿದರ್ಶನವನ್ನೂ ಕೊಡಲಾರೆನು. ಇನ್ನುಜೀವಾವಧಿ ನಾನು ಕೆಟ್ಟೆನೇ ಹೊರತು ಬೇರೆಯಲ್ಲ. ವೀರಾಗ್ರಣೀ! ಮೊದಲು ನೀನು ನನ್ನನ್ನು ಹುಡುಕುವುದಕ್ಕಾಗಿ ವೀರನಾದ ಹನುಮಂತನನ್ನು ಕಳುಹಿಸಿದೆಯಲ್ಲವೆ? ಆಗ ನಾನು ಲಂಕೆಯಲ್ಲಿರುವಾಗಲೇ ನೀನು ನನ್ನನ್ನು ತ್ಯಜಿಸಿಬಿಡಬಾರದಾಗಿತ್ತೆ? ಆಗಲೇ ನೀನು ನನ್ನನ್ನು ಪರಿತ್ಯಜಿಸಿದ ಪಕ್ಷದಲ್ಲಿ ನಾನು ಆ ಸಂಗತಿಯನ್ನು ಕಿವಿಯಲ್ಲಿ ಕೇಳಿದೊಡನೆ ಆ ಹನುಮಂತನ ಮುಂದೆಯೇ ಪ್ರಾಣವನ್ನು ಬಿಡುತ್ತಿದ್ದೆನು. ಇಷ್ಟು ದಿನಗಳವರೆಗೆ ನಿನ್ನನ್ನಗಲಿದ ವ್ಯಥೆಯೂ ನನಗಿರುತ್ತಿರಲಿಲ್ಲ. ಪ್ರಾಣಸಂಶಯಾಸ್ಪದವಾದ ಈ ಮಹಾಯುದ್ಧದಲ್ಲಿ ನೀನು ಇಷ್ಟುಶ್ರಮಪಡಬೇಕಾದ ಆವಶ್ಯಕವೂ ಇರಲಿಲ್ಲ. ನಿನ್ನ ಮಿತ್ರರೂ ನಿಷ್ಫಲವಾಗಿ ಇಷ್ಟುದೂರದವರೆಗೆ ಕಷ್ಟಪಡಬೇಕಾದ ಸಂಭವವಿರಲಿಲ್ಲ. ಪುರುಷಸಿಂಹಾ! ನೀನು ಕೇವಲ ಪ್ರಾಕೃತಮನುಷ್ಯನಂತೆ ಕೋಪವಶನಾಗಿ, ನನ್ನ ಸ್ತ್ರೀಸ್ವಭಾವವೊಂದನ್ನು ಮಾತ್ರವೇ ಮುಂದಿಟ್ಟುಕೊಂಡು ಈ ಮಾತನ್ನು ಹೇಳಿಬಿಟ್ಟೆಯೇ ಹೊರತು, ನನ್ನ ಶೀಲಸ್ವಭಾವಾದಿಗಳೇನೆಂಬುದನ್ನು ಪರೀಕ್ಷಿಸಿ ತಿಳಿಯಲಿಲ್ಲ. ನಾಥಾ! ನೀನು ಪೂರ್ವವೃತ್ತಾಂತಗಳೆಲ್ಲವನ್ನೂ ತಿಳಿದವನಲ್ಲವೇ? ನಾನು ಜನಕರಾಜನಿಗೆ ಹುಟ್ಟಿದುದು ಕೇವಲ ವ್ಯಾಜವೇ ಹೊರತು ವಾಸ್ತವಕ್ಕೆ ಈ ಭೂದೇವಿಯಲ್ಲಿಯೇ ಹುಟ್ಟಿದವಳೆಂದು ಕಾಣೆಯಾ? ಈ ನನ್ನ ಜನ್ಮವನ್ನಾಗಲಿ, ಬಹುಕಾಲದಿಂದ ನೀನು ಅನುಭವಿಸಿ ತಿಳಿದ ನನ್ನ ಆಚಾರವನ್ನಾಗಲಿ, ನೀನು ಮನಸ್ಸಿಗೆ ತಂದುಕೊಳ್ಳಲಿಲ್ಲ. ನೀನು ಇನ್ನೂ ಬಾಲ್ಯದಲ್ಲಿದ್ದಾಗಲೇ ಅಗ್ನಿಸಾಕ್ಷಿಕವಾಗಿ ಬಾಲೆಯಾದ ನನ್ನನ್ನು ಕೈಹಿಡಿದವನಲ್ಲವೆ? ಆಗ ಹಿಡಿದ ಕೈಯೂ, ನನ್ನ ಶೀಲವೂ ಈಗ ನಿನ್ನ ಮನಸ್ಸಿಗೆ ಹೊರಗಾಯಿತು" ಎಂದು ಹೇಳಿ, ಸೀತೆಯು ಕಣ್ಣೀರನ್ನು ಸುರಿಸಿ ಗದ್ಗದಸ್ವರದಿಂದ ರೋದಿಸಿದಳು. ಆಮೇಲೆ ಸಮೀಪದಲ್ಲಿ ಚಿಂತಾಕುಲನಾಗಿ ನಿಂತಿದ್ದ ಲಕ್ಷ್ಮಣನನ್ನು ಕುರಿತು "ಲಕ್ಷ್ಮಣಾ! ನನಗಾಗಿ ಒಂದು ಚಿತೆಯನ್ನು ಮಾಡಿಕೊಡು! ಇದು ಹೊರತು ಈಗ ನನ್ನ ವ್ಯಸನಕ್ಕೆ ಬೇರೆ ಚಿಕಿತ್ಸೆಯಿಲ್ಲ! ಆ ಚಿತೆಯಲ್ಲಿ ಪ್ರವೇಶಿಸಿ ಪ್ರಾಣವನ್ನು ಬಿಟ್ಟುಬಿಡುವೆನು. ವೃಥಾಪವಾದವನ್ನು ಹೊತ್ತು

ಇನ್ನು ನಾನು ಭೂಮಿಯಲ್ಲಿ ಬದುಕಲಾರೆನು ! ನನ್ನ ಪತಿಯು ನನ್ನ ಪಾತಿವ್ರತ್ಯಾದಿಗುಣಗಳಲ್ಲಿಯೂ ಪ್ರೀತನಾಗದೆ, ಈ ಮಹಾಸಭೆಯ ಮಧ್ಯ ದಲ್ಲಿ ನನ್ನನ್ನು ಪರಿತ್ಯಜಿಸಿದ ಮೇಲೆ, ಅವನಿಗೆ ನಂಬಿಕೆಯನ್ನು ಹುಟ್ಟಿಸ ಬೇಕೆಂದರೆ ಈ ಅಗ್ನಿಪ್ರವೇಶವೊಂದು ಹೊರತು ಬೇರೆ ಗತಿಯಿಲ್ಲ" ಎಂದಳು. ಈ ಮಾತನ್ನು ಕೇಳಿ ಲಕ್ಷ್ಮಣನಿಗೆ ಮಿತಿಮೀರಿದ ವ್ಯಸನವುಂಟಾಯಿತು. ಧೈನ್ಯದಿಂದ ತನ್ನಣ್ಣನಾದ ರಾಮನ ಮುಖವನ್ನು ನೋಡಿದನು. ರಾಮನ ಭ್ರೂಸಂಜ್ಞೆ ಮೊದಲಾದ ಗುರುತುಗಳಿಂದ, ರಾಮನಿಗೂ ಆ ಕಾರ್ಯವು ಅಭಿ ಮತವೆಂದೇ ಲಕ್ಷ್ಮಣನಿಗೆ ತೋರಿತು. ರಾಮಾನುಮತದಿಂದ ಲಕ್ಷ್ಮಣನು ಚಿತೆಯನ್ನು ಬೆಳೆಸಿದನು. ಆಗ ರಾಮನು "ಪತಿವ್ರತೆಯಾದ ಈ ಸೀತೆಯನ್ನು ಹೀಗೆ ನಿರ್ವ್ಯಾಜವಾಗಿ ಪರೀಕ್ಷಿಸಬೇಕಾಯಿತಲ್ಲಾ !" ಎಂದು ಲಜ್ಜೆಯಿಂದ ನಿಂತಿದ್ದನು. ಹೀಗೆ ತಲೆಬಗ್ಗಿ ನಿಂತಿದ್ದ ರಾಮನನ್ನು, ಸೀತೆಯು ಮೆಲ್ಲಗೆ ಪ್ರದಕ್ಷಿಣೆಮಾಡಿ ಬಂದು, ಉರಿಯುತ್ತಿರುವ ಚಿತೆಯಬಳಿಗೆ ಹೋದಳು. ಆ ಚಿತೆಯ ಬಳಿಯಲ್ಲಿ ನಿಂತು ದೇವತೆಗಳಿಗೂ, ಬ್ರಾಹ್ಮಣರಿಗೂ ನಮಸ್ಕ ರಿಸಿ, ಅಗ್ನಿಯಮುಂದೆ ಕೈಮುಗಿದು ಪ್ರಾರ್ಥಿಸುವಳು. "ನನ್ನ ಹೃದಯವು ರಾಮನನ್ನು ಬಿಟ್ಟು ಬೇರೆಕಡೆಗೆ ಯಾವಾಗಲೂ ಕದಲದಿರುವುದು ನಿಜವಾ ದರೆ, ಲೋಕಸಾಕ್ಷಿಯಾದ ಈ ಅಗ್ನಿದೇವನು ನನ್ನನ್ನು ಸರ್ವವಿಧದಿಂದಲೂ ರಕ್ಷಿಸಲಿ. ನಾನು ಶುದ್ಧವಾದ ನಡತೆಯುಳ್ಳವಳೆಂಬುದೇ ನಿಜವಾಗಿ, ರಾಮನು ನನ್ನನ್ನು ದುಷ್ಟೆಯೆಂದು ಭಾವಿಸಿದುದು ಅನ್ಯಾಯವಾಗಿದ್ದ ಪಕ್ಷದಲ್ಲಿ, ಲೋಕ ಸಾಕ್ಷಿಯಾಗಿ ಈ ಅಗ್ನಿದೇವನು ಸರ್ವವಿಧದಿಂದಲೂ ನನ್ನನ್ನು ರಕ್ಷಿಸಲಿ. ಮನೋವಾಕ್ಕಾಯಗಳೆಂಬ ತ್ರಿಕರಣಗಳಿಂದಲೂ, ನಾನು ಧರ್ಮಜ್ಞನಾದ ಈ ರಾಮನನ್ನತಿಕ್ರಮಿಸಿ ನಡೆಯದಿರುವುದು ಸತ್ಯವಾದರೆ, ಲೋಕಸಾಕ್ಷಿಯೂದ ಈ ಅಗ್ನಿದೇವನು ನನ್ನನ್ನು ಸರ್ವವಿಧದಿಂದಲೂ ಕಾಪಾಡಲಿ. ಭಗವಂತನಾದ ಸೂರ್ಯನೂ, ವಾಯುದೇವನೂ, ದಿಕ್ಕುಗಳೂ, ಚಂದ್ರನೂ, ಹಗಲೂ, ರಾತ್ರಿಯೂ, ಪ್ರಾತಸ್ಸಾಯಂಸಂಧ್ಯೆಗಳೆರಡೂ, ಭೂದೇವಿಯೂ, ಇನ್ನೂ ಇತರ ದೇವತೆಗಳೆಲ್ಲರೂ ನನ್ನನ್ನು ಸಚ್ಚರಿತ್ರವುಳ್ಳವಳನ್ನಾಗಿಯೇ ಭಾವಿಸಿದ ಪಕ್ಷದಲ್ಲಿ ಈ ಅಗ್ನಿದೇವನು ಸರ್ವವಿಧದಿಂದಲೂ ರಕ್ಷಿಸಲಿ!" ಎಂದಳು. ಹೀಗೆಂದು ಹೇಳಿ ಸೀತಾದೇವಿಯು ಅಗ್ನಿಗೆ ಪ್ರದಕ್ಷಿಣವನ್ನುಮಾಡಿ, ದೇಹದ ಮೇಲೆ ಸ್ವಲ್ಪಮಾತ್ರವೂ ಅಭಿಮಾನವಿಲ್ಲದೆ, ಆ ಅಗ್ನಿಜ್ವಾಲೆಯಲ್ಲಿ ಪ್ರವೇಶಿಸಿ

ಬಿಟ್ಟಳು. ಅಲ್ಲಿ ನೆರೆದಿದ್ದ ಮಹಾಜನಸಮೂಹದಲ್ಲಿ, ಸ್ತ್ರೀಬಾಲವೃದ್ಧರೂ ಭಯಗ್ರಸ್ತರಾಗಿ, ಸೀತೆಯು ಅಗ್ನಿಪ್ರವೇಶಮಾಡುವುದನ್ನು ನೋಡುತ್ತಿದ್ದರು. ದಿವ್ಯಾಭರಣಭೂಷಿತಳಾಗಿ ಸುವರ್ಣಕಾಂತಿಯಿಂದ ಶೋಭಿಸುತ್ತಿದ್ದ ಆ ಸೀತೆಯು ಅಲ್ಲಿದ್ದ ಸಮಸ್ತಜನರೂ ನೋಡುತ್ತಿದ್ದ ಹಾಗೆಯೇ ಉರಿಯುವ ಬೆಂಕಿಯಲ್ಲಿ ಪ್ರವೇಶಿಸಿದಳು. ಪವಿತ್ರವಾದ ಆಜ್ಯಾಹುತಿಯಂತೆ, ಮಹಾಭಾಗ್ಯವತಿಯಾದ ಆ ಸೀತೆಯು ಅಗ್ನಿಯಲ್ಲಿ ಬಿದ್ದುದನ್ನು ಮೂರುಲೋಕಗಳೂ ಭಯಾಶ್ಚರ್ಯ ದಿಂದ ನೋಡುತ್ತಿದ್ದುವು. ಯಾಗದಲ್ಲಿ ಮಂತ್ರಪೂತವಾದ ಹವಿಸ್ಸನ್ನು ಅಗ್ನಿ ಕುಂಡದಲ್ಲಿ ಹೋಮಮಾಡಿದಂತೆ ಮಹಾ ಜ್ವಾಲೆಯಿಂದುರಿಯುತ್ತಿರುವ ಆ ಬೆಂಕಿಯಲ್ಲಿ ಸೀತೆಯು ಪ್ರವೇಶಿಸುವಾಗ, ಅಲ್ಲಿದ್ದ ಸ್ತ್ರೀಯರೆಲ್ಲರೂ, "ಹಾ! ಹಾ!" ಎಂದು ಕೂಗತೊಡಗಿದರು. ಸ್ವರ್ಗಮರ್ತ್ಯಪಾತಾಳಗಳೆಂಬ ಮೂರುಲೋಕ ಗಳಲ್ಲಿರುವ ದೇವಗಂಧರ್ವದಾನವಾದಿಗಳೆಲ್ಲರೂ, [1] ಶಾಪಗ್ರಸ್ತಳಾಗಿ ಸ್ವರ್ಗದಿಂದ ನರಕಕ್ಕಿಳಿಯುವ ದೇವತಾ ಸ್ತ್ರೀಯಂತೆ ಅಗ್ನಿಯಲ್ಲಿ ಬೀಳುತ್ತಿದ್ದ ಸೀತಾದೇವಿ ಯನ್ನು ನೋಡಿದರು. ಆ ಸೀತೆಯು ಅಗ್ನಿಪ್ರವೇಶವನ್ನು ಮಾಡು ವಾಗ ಅಲ್ಲಿದ್ದ ವಾನರರೂ ರಾಕ್ಷಸರೂ ಮಹಾಧ್ವನಿಯಿಂದ ಹಾಹಾ ಕಾರವನ್ನು ಮಾಡಿ ಕೂಗಿದರು.

ಇಲ್ಲಿಗೆ ನೂರಹತ್ತೊಂಬತ್ತನೆಯ ಸರ್ಗವು.

ಬ್ರಹ್ಮಾದಿದೇವತೆಗಳು ವಿಮಾನಾರೂಢರಾಗಿ ಶ್ರೀರಾಮನ ಸನ್ನಿಧಿಗೆ ಬಂದು, ರಾಮನನ್ನು ಸ್ತುತಿಸಿದುದು.

ಆಗ ಧರ್ಮಾತ್ಮನಾದ ರಾಮನು ನಾನಾ ಕಡೆಗಳಿಂದ ಹೊರಡುತ್ತಿದ್ದ ಹಾಹಾಕಾರಧ್ವನಿಯನ್ನೂ, ಅಲ್ಲಲ್ಲಿ ಜನರು ಆಡಿಕೊಳ್ಳುತ್ತಿದ್ದ ಮಾತನ್ನೂ ಕಿವಿಯಿಂದ ಕೇಳಿ, ತನ್ನ ಮನಸ್ಸಿನಲ್ಲಿ ತಾನೇ ಬಹಳವಾಗಿ ದುಃಖಿಸುತ್ತ, ಕಣ್ಣುಗಳಲ್ಲಿ ನೀರನ್ನು ತುಳುಕಿಸಿ, ತಲೆಯನ್ನು ತಗ್ಗಿಸಿ ಮುಹೂರ್ತಕಾಲ

---

1 ದೇವತಾಸ್ತ್ರೀಯು ನರಕದಲ್ಲಿ ಬೀಳುವುದು ಹೇಗೆ ಅನರ್ಹವೋ ಹಾಗೆಯೇ ಭೋಗಾರ್ಹವಾದ ದಿವ್ಯರೂಪವುಳ್ಳ ಸೀತೆಗೆ ಈ ಕಾರ್ಯವು ಅನರ್ಹವೆಂದು ದೃಷ್ಟಾಂತಾ ರ್ಥವು.

ದವರೆಗೆ ಕೇವಲ ಧ್ಯಾನಪರನಾಗಿ ನಿಂತಿದ್ದನು. ಇಷ್ಟರಲ್ಲಿ ರಾಜರಾಜನಾದ ಕುಬೇರನೂ, ಪರಂತಪನಾದ ಧರ್ಮದೇವನೂ, ಸಹಸ್ರಾಕ್ಷನಾದ ದೇವೇಂದ್ರನೂ, ಶತ್ರುಂತಪನಾದ ವರುಣನೂ, ತ್ರಿನೇತ್ರನಾಗಿಯೂ, ವೃಷಭಧ್ವಜನಾಗಿಯೂ ಇರುವ ಶಿವನೂ, ಸೃಷ್ಟಿಕರ್ತನಾಗಿಯೂ, ಬ್ರಹ್ಮವಿದರಲ್ಲಿ .ಮೇಲೆನಿಸಿದವನಾಗಿಯೂ ಇರುವ ಪಿತಾಮಹನೂ, ಇನ್ನೂ ಇತರ ದೇವತೆಗಳೂ ಸೂರ್ಯತೇಜಸ್ಸುಳ್ಳ ವಿಮಾನಗಳನ್ನೇರಿ ಲಂಕೆಯಲ್ಲಿ ರಾಮನಿದ್ದ ಸ್ಥಳಕ್ಕೆ ಬಂದರು. ಇವರನ್ನು ಕಂಡೊಡನೆ ರಾಮನು ಬದ್ಧಾಂಜಲಿಯಾಗಿ ನಿಂತನು. ಅವರೂ ಶ್ರೀರಾಮನನ್ನು ಕಂಡೊಡನೆ ಹಸ್ತಾಭರಣಗಳಿಂದ ಭೂಷಿತಗಳಾದ ತಮ್ಮ ನೀಡಿದ ಬಾಹುಗಳನ್ನು ಮೇಲಕ್ಕೆತ್ತಿ ಅವನನ್ನು ಸ್ತುತಿಸುವರು. “ಪುರುಷೋತ್ತಮಾ! ನೀನೇ ಸಮಸ್ತ ಲೋಕಗಳಿಗೂ ಕರ್ತನು! ಸರ್ವೋತ್ತಮನು! ಜ್ಞಾನಿಗಳಲ್ಲಿ ಮೇಲೆನಿಸಿದವನು! ಇಂತಹ ಸರ್ವಜ್ಞನಾದ ನೀನು, ನಿನ್ನ ಧರ್ಮಪತ್ನಿಯಾದ ಸೀತೆಯು ಅಗ್ನಿಕುಂಡದಲ್ಲಿ ಪ್ರವೇಶಿಸುವಾಗಲೂ ಏನೂ ತಿಳಿಯದವನಂತೆ ಹೀಗೇಕೆ ಉಪೇಕ್ಷಿಸುತ್ತಿರುವೆ? ಬ್ರಹ್ಮಾದಿ ಸಮಸ್ತ ದೇವತೆಗಳಲ್ಲಿಯೂ ನೀನೇ ಶ್ರೇಷ್ಠನೆಂಬ ನಿನ್ನ ಮಹಿಮೆಯನ್ನು ನೀನೇಕೆ ತಿಳಿಯದೆ ಹೋದೆ? ನೀನಲ್ಲವೇ ಮೊದಲು ಅಷ್ಟವಸುಗಳಲ್ಲಿ ಪ್ರಜಾಧಿಪತಿಯಾದ ಋತಧಾಮನೆಂಬ ವಸುವಾಗಿದ್ದವನು? ನೀನಲ್ಲವೇ ಮೊದಲು ಅಂಡಾಧಿಪತಿಪರ್ಯಂತವಾಗಿ ಈ ತ್ರೈಲೋಕ್ಯವನ್ನೂ ಸೃಷ್ಟಿಸಿದ ಜಗತ್ಕರ್ತನು? ನಿನಗೆ ನೀನೇ ಸ್ವತಂತ್ರನಲ್ಲದೆ ನಿನಗೆ ಬೇರೆ ಯಾರೂ ನಿಯಾಮಕರಿಲ್ಲ! ನೀನಲ್ಲವೇ ಅಷ್ಟರುದ್ರರಲ್ಲಿ ಎಂಟನೆಯವನಾದ ಮಹಾದೇವನು? ನೀನಲ್ಲವೇ ಹನ್ನೆರಡುಮಂದಿ ಸಾಧ್ಯರಲ್ಲಿ ಐದನೆಯವನಾದ ವೀರ್ಯವಂತನು? ಪರಂತಪಾ! ಅಶ್ವಿನೀದೇವತೆಗಳೇ ನಿನ್ನ ಕಿವಿಗಳು. ಚಂದ್ರಸೂರ್ಯರಿಬ್ಬರೂ ನಿನ್ನ ಕಣ್ಣುಗಳು. ಲೋಕಸೃಷ್ಟಿಗೆ ಮೊದಲೂ, ಪ್ರಳಯಾನಂತರದಲ್ಲಿಯೂ, ನೀನೊಬ್ಬನಲ್ಲವೇ ಉತ್ಪತ್ತಿವಿನಾಶರಹಿತನಾಗಿ ಕಾಣಿಸಿಕೊಳ್ಳುವವನು! ಹೀಗೆ ಸರ್ವಜ್ಞನಾಗಿಯೂ, ಸರ್ವಶಕ್ತನಾಗಿಯೂ, ಸರ್ವೇಶ್ವರನಾಗಿಯೂ, ಸರ್ವಗತನಾಗಿಯೂ ಸರ್ವಾಂತರ್ಯಾಮಿಯಾಗಿಯೂ ಇರುವ ನೀನೇ ಹೀಗೆ ಕೇವಲ ಪ್ರಾಕೃತಮನುಷ್ಯನಂತೆ ಸೀತೆಯು ಅಗ್ನಿಪ್ರವೇಶಮಾಡುತ್ತಿರುವಾಗಲೂ ಉಪೇಕ್ಷಿಸುವುದೆಂದರೇನು?” ಎಂದು ಕೇಳಿದರು. ಲೋಕರಕ್ಷಕರಾದ ಬ್ರಹ್ಮಾದಿದೇವತೆಗಳೆಲ್ಲರೂ ಹೀಗೆ ಪ್ರಾರ್ಥಿಸಿ ಕೇಳುತ್ತಿರುವುದನ್ನು ನೋಡಿ, ಧಾರ್ಮಿಕ ಶಿರೋಮಣಿಯಾಗಿಯೂ

ರಘುಕುಲೋತ್ತಮನಾಗಿಯೂ ಇರುವ ರಾಮನು ಆ ದೇವಶ್ರೇಷ್ಠರನ್ನು ಕುರಿತು, "ಎಲೈ ದೇವವರ್ಯರೆ! ಇದೇನು? ನೀವು ಇಷ್ಟು ದೂರದವರೆಗೆ ನನ್ನನ್ನು ಸ್ತುತಿಸುವ ಕಾರಣವೇನು ? ನನ್ನನ್ನು ನಾನು ದಶರಥರಾಜಕುಮಾರನಾದ ರಾಮನೆಂಬ ಮನುಷ್ಯನೆಂದು ತಿಳಿದಿರುವೆನೇ ಹೊರತು ಬೇರೆಯಲ್ಲ. ಆದರೆ ಇದುವರೆಗೆ ನೀವು ಹೇಳಿದ ಮಾತುಗಳೆಲ್ಲವೂ ಆ ನನ್ನಭಿಪ್ರಾಯಕ್ಕೆ ಕೇವಲ ವಿರುದ್ಧವಾಗಿ ತೋರುತ್ತಿವೆ ? ಈ ವಿವರಗಳನ್ನೂ, ನೀವು ಇಲ್ಲಿಗೆ ಬಂದ ಕಾರಣವೇನೆಂಬುದನ್ನೂ, ಪೂಜ್ಯನಾದ ಈ ಬ್ರಹ್ಮದೇವನಿಂದ ಕೇಳಬೇಕೆಂದಿರುವೆನು !" ಎಂದನು. ಆಗ ಬ್ರಹ್ಮದೇವನು ರಾಮನನ್ನು ನೋಡಿ, "ರಾಮಾ!

ಇಲ್ಲಿ ರಾಮನು ದೇವಶ್ರೇಷ್ಠನಾದ ಬ್ರಹ್ಮನ ಮುಖದಿಂದ ಲೋಕದಲ್ಲಿ ತನ್ನ ಪರತ್ವವನ್ನು ಪ್ರಕಟಿಸುವನು. ಇಲ್ಲಿ "ಆತ್ಮಾನಂ ಮಾನುಷಂ ಮನ್ಯೇ ರಾಮಂ ದಶರಥಾತ್ಮಜಮ್ । ಯೋಽಹಂ ಯಸ್ಯ ಯತಶ್ಚಾಹಂ ಭಗವಾಂಸ್ತದ್ಬ್ರವೀತುಮೇ" ಎಂದು ಮೂಲವು. ವಿಶೇಷಾರ್ಥವು—(ಆತ್ಮಾನಂ ಮಾನುಷಂ ಮನ್ಯೇ) "ನನ್ನನ್ನು ನಾನು ಮನುಷ್ಯನೆಂದೇ ಭಾವಿಸಿರುವೆನು'' ಎಂಬುದರಿಂದ ಆ ಪರತ್ವಕ್ಕಿಂತಲೂ ಈ ಮನುಷ್ಯತ್ವವನ್ನು ನಡೆಸುವುದೇ ತನಗೆ ಅಭಿಮತವೆಂದು ಭಾವವು. ಅದರಲ್ಲಿಯೂ (ರಾಮಂ) ರಾಮನಾಮವುಳ್ಳ ಮನುಷ್ಯನೆಂದೆಣಿಸುವೆನು. ಅದಕ್ಕಿಂತಲೂ ವಿಶೇಷವೇನೆಂದರೆ, (ದಶರಥಾತ್ಮಜಂ) ದಶರಥನ ಹೊಟ್ಟೆಯಲ್ಲಿ ಹುಟ್ಟಿದವನು ಅವತಾರಗಳೊಳಗೆಲ್ಲಾ ಹೀಗೆ ದಶರಥಚಕ್ರವರ್ತಿಯ ಪುತ್ರನೆಂದೆನಿಸಿಕೊಳ್ಳುವುದೇ ತನಗೆ ಬಹಳ ಪ್ರಿಯವೆಂದರ್ಥವು. ಈ ವಿಷಯದಲ್ಲಿ ಸಂಪ್ರದಾಯಾರ್ಥಸಿದ್ಧವಾದ ಒಂದು ನಿದರ್ಶನವುಂಟು. ಏನೆಂದರೆ, ಭಾರತದಲ್ಲಿ ದುರ್ಯೋಧನನ ಸಭೆಯಲ್ಲಿ ದ್ರೌಪದಿಯು. ಕೃಷ್ಣನನ್ನು ಕುರಿತು "ಶಂಖಚಕ್ರಗದಾಪಾಣೇ ದ್ವಾರಕಾನಿಲಯಾಚ್ಯುತ ! ಗೋವಿಂದ ಪುಂಡರೀಕಾಕ್ಷ ರಕ್ಷಮಾಂ ಶರಣಾಗತಾಮ್'' ಎಂದು ಕೂಗಿ ಮೊರೆಯಿಟ್ಟಳಷ್ಟೆ ? ಅವಳು ಮೊದಲು "ಶಂಖಚಕ್ರಗದಾಪಾಣೇ" ಎಂದು ಕೇವಲ ಪರತ್ವವ್ಯಂಜಕವಾದ ಶಂಖಚಕ್ರಾದಿ ಚಿಹ್ನೆಗಳನ್ನು ಹೇಳಿ ಕೂಗಿದಾಗ, ಕೃಷ್ಣನು ಅವಳ ಮಾತಿಗೆ ಲಕ್ಷ್ಯಕೊಡದೆ ಉದಾಸೀನನಾಗಿ ತಲೆಯನ್ನು ತಗ್ಗಿಸಿದನೆಂದೂ, (ದ್ವಾರಕಾನಿಲಯ) ಎಂದು ಕೃಷ್ಣಾವತಾರವನ್ನು ಹೇಳಿದಾಗ, ಮುಖವನ್ನು ಸ್ವಲ್ಪವಾಗಿ ಮೇಲಕ್ಕೆತ್ತಿದನೆಂದೂ, (ಗೋವಿಂದ) ಎಂಬುದಾಗಿ ಗೋಪಾಲನಾರ್ಥಸೂಚಕವಾದ ಗೋವಿಂದಶಬ್ದವನ್ನು ಹೇಳಿದಮೇಲೆಯೇ ಪ್ರಸನ್ನನಾಗಿ ನೋಡಿದನೆಂದೂ ವ್ಯಾಖ್ಯಾನ ಚಮತ್ಕಾರವುಂಟು. ಅದರಂತೆ ಇಲ್ಲಿಯೂ ಪರತ್ವಕ್ಕಿಂತಲೂ ಹೀಗೆ ಸರ್ವಸುಲಭವಾದ ಮನುಷ್ಯತ್ವನಟನವೇ ತನಗೆ ಮುಖ್ಯಾಭಿಮತವೆಂದು ಸೂಚಿಸಿದುದಾಗಿ ತಿಳಿಯಬೇಕು. ಹೀಗೆ ತಾನು ಸರ್ವಸುಲಭನೆಂಬುದನ್ನು

ಸತ್ಯಪರಾಕ್ರಮಾ! ಇದರ ಯಥಾರ್ಥವನ್ನು ಹೇಳುವೆನು ಕೇಳು. [1]ನೀನೇ ಸೃಷ್ಟಿಗೆ ಮೊದಲು ಮಹಾ ಸಮುದ್ರದಲ್ಲಿ ಏಕಾಕಿಯಾಗಿ ಮಲಗಿದ್ದ ಜಗತ್ಕಾರಣನಾದ ನಾರಾಯಣನು. ಅವಾಪ್ತ ಸಮಸ್ತ ಕಾಮನಾಗಿದ್ದರೂ ಕ್ರೀಡಾಪ್ರವೃತ್ತನಾದುದರಿಂದ ಲೀಲಾರ್ಥವಾಗಿ ಜಗತ್ಸೃಷ್ಟಿ ಮೊದಲಾದ

ತನ್ನ ಮಾತಿನಿಂದಲೇ ಸುಗ್ರೀವಾದಿಗಳಿಗೆ ತಿಳಿಸಿ ಬ್ರಹ್ಮನ ಬಾಯಿಂದ ತನ್ನ ಪರತ್ವವನ್ನು ಪ್ರಕಟಿಸುವುದಕ್ಕಾಗಿ ಪ್ರಶ್ನೆಮಾಡುವನೆಂದು ಭಾವವು,

1 ಇಲ್ಲಿ "ಭವಾನ್ನಾರಾಯಣೋ ದೇವಃ ಶ್ರೀಮಾಂಶ್ಚಕ್ರಾಯುಧೋ ವಿಭುಃ। ಏಕಶೃಂಗೋವರಾಹಸ್ತ್ವಂ ಭೂತಭವ್ಯಸಪತ್ನಜಿತ್'' ಎಂದು ಮೂಲವು. ವಿಶೇಷಾರ್ಥವು:—(ನಾರಾಯಣಃ) ಆಪೋನಾರಾ ಇತಿ ಪ್ರೋಕ್ತಾ ಆಪೋವೈ ನರಸೂನವಃ! ತಾ ಯದಸ್ಯಾಯನಂ ಪೂರ್ವಂ ತೇನ ನಾರಾಯಣಸ್ಮೃತಃ। ಎಂಬ ಮನುವಾಕ್ಯದಿಂದ ನರನೆಂದರೆ ಪರಮಾತ್ಮನು. ಮೊದಲು ಜಲವನ್ನು ಸೃಷ್ಟಿಸಿ ಇತರ ಪ್ರಪಂಚವನ್ನು ಸೃಷ್ಟಿಸುವುದಕ್ಕೆ ಮೊದಲು ತಾನೊಬ್ಬನೇ ಅದರಲ್ಲಿ ಮಲಗಿದ್ದನೆಂದರ್ಥವು. ಇದರಿಂದ ಜಗತ್ಕಾರಣತ್ವವು ಸೂಚಿತವು. ಇದಕ್ಕೆ ಏಕೋಹವೈನಾರಾಯಣ ಆಸೀನ್ನ ಬ್ರಹ್ಮಾನೇಶಾನೋ, ನೇಮೇದ್ಯಾವಾಪೃಥವೀ" ಎಂದು ಶ್ರುತಿವಚನವು. ಅವಾಪ್ತ ಸಮಸ್ತಕಾಮನಿಗೆ ಸೃಷ್ಟಿಮೊದಲಾದ ಈ ವ್ಯಾಪಾರಗಳೇಕೆ? ಎಂದರೆ (ದೇವಃ) "ದೀವ್ಯತೀತಿ ದೇವಃ'' ಕ್ರೀಡಾಪ್ರವೃತ್ತನಾದುದರಿಂದ ಲೀಲಾರ್ಥವಾಗಿ ಜಗತ್ಸೃಷ್ಟಿ ಮೊದಲಾದ ವ್ಯಾಪಾರಗಳನ್ನು ನಡೆಸುವವನು. ಹೀಗೆ ಪರತ್ವಾಸಾಧಾರಣವಾದ ನಾಮಧೇಯವನ್ನು ಹೇಳಿ ಪತ್ನೀವೈಶಿಷ್ಟ್ಯವನ್ನು ಹೇಳುವರು. (ಶ್ರೀಮಾನ್) ಶ್ರೀಯೊಡನೆ ನಿತ್ಯಯೋಗವುಳ್ಳವನು. ಇದರಮೇಲೆ ಅಸಾಧಾರಣವಾದ ಆಯುಧವನ್ನು ಹೇಳುವರು. (ಚಕ್ರಾಯುಧಃ) ಅದಕ್ಕೂಮೇಲೆ ಸ್ವರೂಪ ವೈಲಕ್ಷಣ್ಯವನ್ನು ಸೂಚಿಸುವರು. (ವಿಭುಃ) ವ್ಯಾಪಕನೆಂದರ್ಥವು. ಅಣುಸ್ವರೂಪಗಳಾಗದ ಆತ್ಮಗಳಿಗೆ ಸ್ವರೂಪವ್ಯಾಪ್ತಿಯಿಲ್ಲವು. ಪರಮಾತ್ಮನಿಗೆ ಸ್ವರೂಪದಿಂದ ಸರ್ವವ್ಯಾಪ್ತಿಯಿರುವುದರಿಂದ ಇತರಾತ್ಮಗಳಿಗಿಂತಲೂ ವೈಲಕ್ಷಣ್ಯವು ಸೂಚಿತವು. ಇನ್ನು ಇದರಿಂದ ಫಲಿತವಾದ ರಕ್ಷಕತ್ವವನ್ನು ಹೇಳುವರು. (ಏಕಶೃಂಗೋವರಾಹಃ) ಒಂದೇ ಕೊಂಬುಳ್ಳ ಆದಿವರಾಹವಾಗಿ ಭೂಮಿಯನ್ನುದ್ಧರಿಸಿದವನು. "ಉದ್ಧೃತಾಸಿವರಾಹೇಣ" ಎಂದು ಶ್ರುತಿಯು. "ದಂಷ್ಟ್ರಯಾ ಪರ್ವತೇಂದ್ರಾಣಾಂ ಚಾಲನಂ ಕೃತವಾನ್ಮಹತ್। ತತಸ್ತಂ ತುಷ್ಟುವುರ್ದೇವಾ ಏಕಶೃಂಗತ್ವಸಿದ್ಧಯೇ। ಏಕಶೃಂಗವರಾಹೋಽಭೂತ್ತದಾಪ್ರಭೃತಿಮಾಧವಃ'' ಎಂಬ ಸ್ಕಾಂದವಚನದಂತೆ ಪೂರ್ವದಲ್ಲಿ ವರಾಹಮೂರ್ತಿಯು ಒಂದು ಕೋರೆಯಿಂದ ಭೂಮಿ

ವ್ಯಾಪಾರಗಳನ್ನು ನಡೆಸುವವನು! ನಿತ್ಯಾನಪಾಯಿನಿಯಾದ ಲಕ್ಷ್ಮೀದೇವಿಯೊಡಗೂಡಿದವನು! ಸರ್ವವ್ಯಾಪಕನು! ಪೂರ್ವದಲ್ಲಿ ಒಂದೇ ಕೊಂಬುಳ್ಳ ಆದಿವರಾಹರೂಪವನ್ನು ಧರಿಸಿ ಭೂಮಿಯನ್ನುದ್ಧರಿಸಿದ ಮಹಾತ್ಮನು! ಇದಕ್ಕೆ ಮೊದಲೂ ಇನ್ನು ಮುಂದೆಯೂ ಶತ್ರುನಾಶಕನು! ಮತ್ತು [1]ವಿನಾಶರಹಿತನಾಗಿ ಅಕ್ಷರವೆನಿಸಿಕೊಂಡವನು! ನೀನೇ ಬ್ರಹ್ಮಶಬ್ದವಾಚ್ಯನು! ಉತ್ಪತ್ತಿಸ್ಥಿತಿ ಮೊದಲಾದ ಷಡ್ಭಾವವಿಕಾರಗಳಿಲ್ಲದವನು! ಆದಿಮಧ್ಯಾಂತಗಳಲ್ಲಿ ವರ್ತಿಸುವ ನಿತ್ಯಾತ್ಮನು! ನೀನೇ ಧರ್ಮರೂಪದಿಂದ ಸಮಸ್ತಲೋಕಗಳ ಶ್ರೇಯಸ್ಸಿಗೂ ಸಾಧನಭೂತನು! ನೀನೇ ಸರ್ವಸ್ವಾಮಿಯು! ಏಕಕಾಲದಲ್ಲಿ ಚತುರ್ವಿಧಪುರುಷಾರ್ಥಗಳನ್ನೂ ನೀಡುವುದಕ್ಕೆ ತಕ್ಕಂತೆ ಚತುರ್ಭುಜವುಳ್ಳವನು! [2]ಶಾರ್ಙ್ಗವೆಂಬ ಶೃಂಗವಿಕಾರವಾದ ದಿವ್ಯಧನುಸ್ಸನ್ನು ಧರಿಸಿದವನು! ಸಮಸ್ತೇಂ

ಯನ್ನೆತ್ತಿ ಹಿಡಿದು ಮತ್ತೊಂದು ಕೋರೆಯಿಂದ ಪರ್ವತಗಳನ್ನು ಭೇದಿಸತೊಡಗಿದಾಗ ದೇವತೆಗಳೆಲ್ಲರೂ ಆ ಪ್ರಯತ್ನವನ್ನು ತಪ್ಪಿಸುವುದಕ್ಕಾಗಿ, ಏಕ ಶೃಂಗನಾಗಿರಬೇಕೆಂದು ಭಗವಂತನನ್ನು ಪ್ರಾರ್ಥಿಸಿದುದರಮೇಲೆ, ಏಕಶೃಂಗತ್ವವನ್ನು ವಹಿಸಿದುದುದಾಗಿ ಪುರಾಣಕಥೆಯು. ಇನ್ನು ಅನಿಷ್ಟನಿವರ್ತಕತ್ವವನ್ನು ಹೇಳುವರು. (ಭೂತ ಭವ್ಯಸಪತ್ನಜಿತ್) ಹಿಂದಿದ್ದ ಮಧುಕೈಟಭಾದಿಗಳನ್ನೂ, ಮುಂದೆ ಹುಟ್ಟುವ ಶಿಶುಪಾಲಾದಿಗಳನ್ನೂ ನಾಶಹೊಂದಿಸತಕ್ಕವನೆಂದು ಗ್ರಾಹ್ಯವು.

1 ಇಲ್ಲಿ ‘‘ಅಕ್ಷರಂ ಬ್ರಹ್ಮ ಸತ್ಯಂಚ ಮಧ್ಯೇಚಾನ್ತೇಚ ರಾಘವ। ಲೋಕಾನಾಂತ್ವಂ ಪರೋಧರ್ಮೋ ವಿಷ್ವಕ್ಸೇನಶ್ಚತುರ್ಭುಜಃ” ಎಂದು ಮೂಲವು. ವಿಶೇಷಾರ್ಥವು— (ಅಕ್ಷರಂ) “ನಕ್ಷರತೀತ್ಯಕ್ಷರಂ’’ ಎಂಬ ವ್ಯುತ್ಪತ್ತಿಯಿಂದ ನಾಶರಹಿತನೆಂದರ್ಥವು. ‘‘ಏಕವ್ವೈತದಕ್ಷರಂಗಾರ್ಗಿಬ್ರಾಹ್ಮಣಾ ಅಭಿವದನ್ತಿ’’ ಎಂದು ಶ್ರುತಿಯು. (ಬ್ರಹ್ಮ) “ಬೃಹತಿಬ್ರಂಹಯತೀತಿ ಬ್ರಹ್ಮ” ಎಂಬ ವ್ಯುತ್ಪತ್ತಿಯಿಂದ ಜಗದಾಕಾರರೂಪವಾಗಿ ಬೃಂಹವನ್ನು ಎಂದರೆ ಉಬ್ಬುವಿಕೆಯನ್ನು ಹೊಂದುವವನು. ಬೃಹತಿ ಬೃಂಹಯತಿ ತಸ್ಮಾದುಚ್ಯತೇ ಪರಂಬ್ರಹ್ಮ” ಎಂದು ಶ್ರುತಿ ವಚನವು. (ಸತ್ಯಂ) ಷಡ್ಭಾವವಿಕಾರ ಶೂನ್ಯನು. ಈ ವಾಕ್ಯಗಳಿಂದ ಭಗವಂತನ ನಿತ್ಯತ್ವವು ಸೂಚಿತವು.

2 ಇಲ್ಲಿ “ಶಾರ್ಙ್ಗಧನ್ವಾ ಹೃಷೀಕೇಶಃ ಪುರುಷಃ ಪುರುಷೋತ್ತಮಃ। ಅಜಿತ ಖಡ್ಗಧೃದ್ವಿಷ್ಣುಃ ಕೃಷ್ಣಶ್ಚೈವ ಬೃಹದ್ಬಲಃ।” ಎಂದು ಮೂಲವು. ವಿಶೇಷಾರ್ಥವು— (ಶಾರ್ಙ್ಗಧನ್ವಾ) ಇದರಿಂದ ಆಶ್ರಿತರಕ್ಷಣೋಪಕರಣವುಳ್ಳವನೆಂದು ಸೂಚಿತವು. (ಹೃಷೀಕೇಶಃ) ಹೃಷೀಕಗಳೆಂದರೆ ಇಂದ್ರಿಯಗಳು. ಅವುಗಳಿಗೆ ಸ್ವಾಮಿಯೆಂದರೆ ನಿಯಾಮಕನು. ಅಥವಾ ಸರ್ವೇಂದ್ರಿಯಗಳನ್ನೂ ಆಕರ್ಷಿಸತಕ್ಕ ದಿವ್ಯವಿಗ್ರಹ

ದ್ರಿಯಗಳಿಗೂ ನಿಯಾಮಕನು! ಪುರುಷಶಬ್ದವಾಚ್ಯನು ! ಪುರುಷೋತ್ತಮನು ! ನಂದಕವೆಂಬ ಖಡ್ಗವನ್ನು ಧರಿಸಿದವನು! ಸರ್ವವ್ಯಾಪಕನೆನಿಸಿದ ಮಹಾವಿಷ್ಣುವು! ಭೂನಿರ್ವೃತಿ ಹೇತುವಾದ ಕೃಷ್ಣಶಬ್ದವಾಚ್ಯನು! ಬೃಹದ್ಬಲನು ! [1] ಸೇನಾನಿಯೆಂದೂ, ಗ್ರಾಮಣಿಯೆಂದೂ ಪ್ರಸಿದ್ಧ ನಾಮವುಳ್ಳ

ವುಳ್ಳವನು. (ಪುರುಷಃ) "ಪುರು ಸನೋತೀತಿ ಪುರುಷಃ" ಎಂಬ ವ್ಯುತ್ಪತ್ತಿಯಿಂದ ಬಹುಪ್ರದನೆಂದರ್ಥವು. ಅಥವಾ ಪುರಿ ಶೇತ ಇತಿ ಪುರುಷಃ" ಎಂದರೆ ಹೃದಯ ಗುಹೆಯಲ್ಲಿರುವವನೆಂದರ್ಥವು. "ಪುರಿಶಯಂ ಪುರುಷಮೀಕ್ಷತೇ" ಎಂದು ನಿರ್ವಚನಶ್ರುತಿಯು. ಅಥವಾ 'ತೇನೇದಂ ಪೂರ್ಣಂ ಪುರುಷೇಣಸರ್ವಮ್' ಎಂಬ ಶ್ರುತಿಯಂತೆ ಯಾವನಿಂದ ಜಗತ್ತೆಲ್ಲವೂ ಪೂರ್ಣವಾಗಿದೆಯೋ ಆ ಪುರುಷನೆಂದರ್ಥವು. "ಪೂರ್ವಮೇವಾಹಮಿಹಾಸಮಿತಿ ತತ್ಪುರುಷಸ್ಯ ಪುರುಷತ್ವಂ' ಎಂಬ ಶ್ರುತಿಯಂತೆ ಪುರಾತನನೆಂದರ್ಥವು. (ಪುರುಷೋತ್ತಮಃ) ಪುರುಷಶಬ್ದವಾಚ್ಯಗಳಾದ ಕ್ಷರಾಕ್ಷರಗಳಿಗಿಂತಲೂ ಉತ್ತಮನೆಂದರೆ ಚಿದಚಿತ್ತುಗಳಿಗಿಂತಲೂ ಉತ್ಕೃಷ್ಟನೆಂದರ್ಥವು. "ಯಸ್ಮಾತ್ ಕ್ಷರಮತೀತೋಽಹಮಕ್ಷರಾದಪಿಚೋತ್ತಮಃ ಅತೋಽಸ್ಮಿ ಲೋಕೇ ವೇದೇಚ ಪ್ರಥಿತಃ ಪುರುಷೋತ್ತಮಃ"ಎಂದು ಗೀತಾವಾಕ್ಯವು. (ವಿಷ್ಣುಃ) ಸರ್ವವ್ಯಾಪಕನೆಂಬುದರಿಂದ, ಯಾವನು ತನ್ನ ದಯೆಗೆ ಪಾತ್ರನೋ, ಅವನನ್ನು ಅಲ್ಲಿಯೇ ಇದ್ದು ಆಗಲೇ ರಕ್ಷಿಸತಕ್ಕವನೆಂದು ಭಾವವು. (ಕೃಷ್ಣಃ) "ಕೃಷಿರ್ಭೂವಾಚಕಶ್ಶಬ್ದೋಣಶ್ಚ ನಿರ್ವೃತಿವಾಚಕಃ" ಎಂದು ನಿರ್ವಚನದಿಂದ ಭೂಮಿಗೆ ಭಾರವನ್ನು ನೀಗಿಸಿ ನಿರ್ವೃತಿಯನ್ನುಂಟು ಮಾಡುವವನು. (ಬೃಹದ್ಬಲಃ) ವಿಶೇಷವಾದ ಧಾರಣಶಕ್ತಿಯುಳ್ಳವನೆಂದರ್ಥವು.

[1] ಇಲ್ಲಿ "ಸೇನಾನೀಗ್ರಾಮಣೀಶ್ಚತ್ವಂ ಬುದ್ಧಿಸತ್ತ್ವಂಕ್ಷಮಾದಮಃ । ಪ್ರಭವಶ್ಚಾಪ್ಯಯಶ್ಚತ್ವಮುಪೇಂದ್ರೋ ಮಧುಸೂದನಃ" ಎಂದು ಮೂಲವು. (ಸೇನಾನೀಃ) ದೇವಸೇನಾ ನಿರ್ವಾಹಕನು. (ಗ್ರಾಮಣೀಃ) ಗ್ರಾಮಗಳನ್ನು ನಡೆಸತಕ್ಕವನೆಂದರೆ ದಿವ್ಯಜನಪದಾದಿಪಾಲಕನೆಂದರ್ಥವು. (ಬುದ್ಧಿಸ್ಸತ್ವಕ್ಷಮಾದಮು) ಬುದ್ಧ್ಯಾದಿಗಳಿಗೆ ಪ್ರವರ್ತಕನೆಂದರ್ಥವು. 'ನದೇವಾ ಯಷ್ಟಿಮಾದಾಯ ರಕ್ಷಂತಿ ಪಶುಪಾಲವತ್ । ಯಂಹಿ ರಕ್ಷಿತುಮಿಚ್ಛಂತಿ ಬುದ್ಧ್ಯಾಶಿ ಸಂಯೋಜಯನ್ತಿ ತಮ್" "ದೇವತೆಗಳು ಪಶುಪಾಲಕರಂತೆ ದಂಡವನ್ನು ಹಿಡಿದು

ವನು! ನೀನೇ ಬುದ್ಧಿಯು! ನೀನೇ ಸತ್ತ್ವವು! ನೀನೇ ಕ್ಷಮೆಯು! ನೀನೇ ದಮವು! ಜಗದುತ್ಪತ್ತಿವಿನಾಶಗಳಿಗೂ ನೀನೇ ಸ್ಥಾನಭೂತನು! ನೀನೇ ಉಪೇಂದ್ರಾವತಾರನು! ನೀನೇ ಮೊದಲು ವೇದಾಪಹಾರಿಯಾದ ಮಧುವೆಂಬ ದೈತ್ಯನನ್ನು ಕೊಂದವನು! [1]ಮತ್ತು ನೀನು ಇಂದ್ರಕರ್ಮನು. ನಿರತಿಶಯೈಶ್ವರ್ಯ ಸಂಪನ್ನನು. ನಾಭಿಯಲ್ಲಿ ಕಮಲವುಳ್ಳವನು. ಯುದ್ಧಗಳಲ್ಲಿ ಶತ್ರುಗಳನ್ನು

ಆಶ್ರಿತರನ್ನು ರಕ್ಷಿಸಬೇಕಾದುದಿಲ್ಲ. ಯಾರನ್ನು ಕಾಪಾಡಬೇಕೆಂದಪೇಕ್ಷಿಸುವರೋ ಅವರಿಗೆ ಅನುಕೂಲವಾದ ಬುದ್ಧಿಯನ್ನುಂಟುಮಾಡುವರು" ಎಂಬಂತೆ ಈಶ್ವರನು ಬುದ್ಧ್ಯಾದಿಗಳನ್ನುಂಟುಮಾಡಿ ಜಗದ್ರಕ್ಷಣವನ್ನು ನಡೆಸುವನೆಂದು ಗ್ರಾಹ್ಯವು. "ಮಹಾನ್ಪ್ರಭುರ್ವೈಪುರುಷಸ್ಸತ್ತ್ವಸ್ಯೈಷ ಪ್ರವರ್ತಕಃ" ಎಂದು ಗ್ರಾಹ್ಯವು. (ಪ್ರಭವಃ, ಅಪ್ಯಯಃ) "ಕೃಷ್ಣ ಏವಹಿ ಭೂತಾನಾಮುತ್ಪತ್ತಿರಪಿ ಚಾಪ್ಯಯ" ಎಂಬ ಶ್ರುತಿಯಂತೆ ಜಗದುತ್ಪತ್ತಿವಿನಾಶಹೇತುವೆಂದರ್ಥವು.

[1]ಇಲ್ಲಿ "ಇಂದ್ರಕರ್ಮಾ ಮಹೇಂದ್ರಸ್ತ್ವಂ ಪದ್ಮನಾಭೋ ರಣಾಂತಕೃತ್ | ಶರಣ್ಯಂ ಶರಣಂಚ ತ್ವಾಮಾಹುರ್ದಿವ್ಯಾ ಮಹರ್ಷಯ" ಎಂದು ಮೂಲವು. ವಿಶೇಷಾರ್ಥವು:—(ಇಂದ್ರಕರ್ಮಾ) ಇಂದ್ರನ ಕಾರ್ಯದಂತೆ ಕಾರ್ಯವುಳ್ಳವನು. 'ತಂವಿಷ್ಣುರನ್ವತಿಷ್ಠತ' ಎಂಬ ಶ್ರುತಿಯನ್ನನುಸರಿಸಿ ಕೆಲವು ಕಾರ್ಯಗಳಲ್ಲಿ ಇಂದ್ರನನ್ನನುಸರಿಸಿ ನಡೆಯುವವನೆಂದರ್ಥವು. ವೃತ್ರಾದಿ ವಧಗಳೆಲ್ಲವೂ ಇಂದ್ರನಲ್ಲಿ ಅಂತರ್ಯಾಮಿಯಾದ ಪರಮಾತ್ಮನ ಕರ್ಮವೇ ಆಗಿರುವುದರಿಂದ, ಹೊರಕ್ಕೆಮಾತ್ರ ಇಂದ್ರನ ಕರ್ಮದಂತೆ ತೋರುವುದೆಂದರ್ಥವು. (ಮಹೇಂದ್ರಃ) ನಿರತಿಶಯೈಶ್ವರ್ಯಸಂಪನ್ನನು, (ಪದ್ಮನಾಭಃ) ಕಮಲವನ್ನು ನಾಭಿಯಲ್ಲಿ ಪಡೆದವನು. ಇದರಿಂದ ಬ್ರಹ್ಮನು,ತನಗೂ ಆತನೇ ಜನಕನೆಂದು ಸೂಚಿಸಿದುದಾಗಿ ಗ್ರಾಹ್ಯವು. ಪದ್ಮೇದಿವ್ಯೇಽರ್ಕಸಂಕಾಶೇ ನಾಭ್ಯಾಮುತ್ಪಾದ್ಯ ಮಾಮಪಿ | ಪ್ರಾಜಾಪತ್ಯಂ ತ್ವಯಾ ಕರ್ಮಮಯಿ ಸರ್ವ ನಿವೇಶಿತಮ್" ಎಂದು ಇದೇ ಅರ್ಥವು ಮುಂದೆ ಹೇಳಲ್ಪಡುವುದು. (ಶರಣಂ) "ಸರ್ವಸ್ಯ ಶರಣಂ ಸುಹೃತ್", ಎಂಬ ಶ್ರುತಿವಚನದಂತೆ ರಕ್ಷಣೋಪಾಯವೆಂದರ್ಥವು. (ದಿವ್ಯಾಃ ಮಹರ್ಷಯಃ) ಇಲ್ಲಿ ಮಹರ್ಷಿಗಳೆಂದರೆ ಅಲೌಕಿಕತತ್ತ್ವಸಾಕ್ಷಾತ್ಕಾರ ಸಮರ್ಥರೆನಿಸಿದ ಸನಕಾದಿಗಳೆಂದೂ, ದಿವ್ಯರೆಂದರೆ ಅವತಾರರಹಸ್ಯಾದಿ ವಿಶೇಷ ಜ್ಞಾನವಂತರಾದ ವಾಲ್ಮೀಕ್ಯಾದಿಗಳು, ಅಥವಾ "ಯತ್ರರ್ಷಯಃ ಪ್ರಥಮಜಾ ಯೇ ಪುರಾಣಾಃ" ಎಂದು ಹೇಳಲ್ಪಡುವ ನಿತ್ಯಸೂರಿಗಳೆಂದೂ ಗ್ರಾಹ್ಯವು.

ನಾಶಹೊಂದಿಸತಕ್ಕವನು. ಶರಣಾರ್ಹನೆಂದೂ, ರಕ್ಷಣೋಪಾಯಭೂತನೆಂದೂ ಮಹರ್ಷಿಗಳಿಂದ ಸ್ತುತಿಸಲ್ಪಡುವವನು. [1]ಸಹಸ್ರಶಾಖಾರೂಪಗಳಾದ ಶೃಂಗ ಗಳಿಂದಲೂ ಕೂಡಿ, ಮಹತ್ತಾದ ಕರ್ಮಾಲೋಚನೆಯಲ್ಲಿ ನೆಲೆಗೊಂಡ ವೇದ ಸ್ವರೂಪನು. ಮೂರುಲೋಕಗಳಿಗೂ ನೀನೇ ಸಮಷ್ಟಿಕರ್ತನು! ಸ್ವಯಂ ಪ್ರಭುವೆನಿಸಿರುವುದರಿಂದ ಇತರ ಪ್ರೇರಣೆಯಿಲ್ಲದೆ ತನಗೆ ತಾನೇ ಪ್ರೇರಕನು. ಸಿದ್ಧನಾಮಕವಾದ ಮುಕ್ತರಿಗೂ, ಸಾಧ್ಯರೆನಿಸಿದ ನಿತ್ಯರಿಗೂ, ನೀನೇ ಮುಖ್ಯಾ ಶ್ರಯನಾಗಿದ್ದು ಅವರಿಗೆ ತನ್ನೊಡನೆ ಸಮಾನಭೋಗವನ್ನು ಕೊಡತಕ್ಕ ವನು. ಆಶ್ರಿತರು ಕೋರುವುದಕ್ಕೆ ಮೊದಲೇ ಅವರ ರಕ್ಷಣಕಾರ್ಯಕ್ಕಾಗಿ ಅವತರಿ ಸುವವನು. [2]ನೀನೇ ಯಜ್ಞರೂಪನು. ನೀನೇ ವಷಟ್ಕಾರನು! ನೀನೇ ಓಂಕಾರ ರೂಪನು! ಉತ್ಕೃಷ್ಟವಾದ ತಪಸ್ಸಿನಿಂದ ಸಮಾರಾಧ್ಯನು. ವೇದಗಳಾಗಲಿ,

---

[1]"ಸಹಸ್ರಶೃಂಗೋ ವೇದಾತ್ಮಾ ಶತಜಿಹ್ವೋ ಮಹರ್ಷಭಃ। ತ್ವಂ ತ್ರಯಾ ಣಾಂಹಿ ಲೋಕಾನಾಮಾದಿಕರ್ತಾ ಸ್ವಯಂಪ್ರಭುಃ! ಸಿದ್ಧಾನಾಮಪಿ ಸಾಧ್ಯಾ ನಾಮಾಶ್ರಯಶ್ಚಾಪಿಪೂರ್ವಜಃ"ಎಂದು ಇಲ್ಲಿನ ಮೂಲವು. ಇದರಲ್ಲಿ (ಆದಿ ಕರ್ತಾ) "ನೀನು ಸಮಷ್ಟಿಕರ್ತ" ನೆಂದು ಹೇಳಿರುವುದರಿಂದ, ಬ್ರಹ್ಮನು ಸೃಷ್ಟಿಕರ್ತನಾದ ತನಗೆ ವ್ಯಾವೃತ್ತಿಯನ್ನು ತೋರಿಸಿಕೊಳ್ಳುವನೆಂದು ತಿಳಿಯ ಬೇಕು. (ಸ್ವಯಪ್ರಭುಃ)। 'ನತಸ್ಯೇಶೇಕಶ್ಚನ' ಎಂಬ ಶ್ರುತಿಯಂತೆ ತಾನೇ ಸರ್ವ ನಿಯಾಮಕನೇ ಹೊರತು ತನಗೆ ಬೇರೆ ಪ್ರೇರಕರಿಲ್ಲವೆಂದು ಭಾವವು. (ಸಿದ್ಧಾ ನಾಮಪಿ ಸಾಧ್ಯಾನಾಮಾಶ್ರಯಃ) ಸಿದ್ಧರೆಂದರೆ ಮುಕ್ತರು. ಸಾಧ್ಯರೆಂದರೆ "ಯತ್ರಪೂರ್ವೇಸಾಧ್ಯಾಸ್ಸಂತಿ ದೇವಾಃ" ಎಂದು ಹೇಳಲ್ಪಡುವ ನಿತ್ಯರು. ಇವ ರೆಲ್ಲರಿಗೂ ತನ್ನೊಡನೆ ಸಾಮ್ಯಭೋಗವನ್ನು ಕೊಡುವವನೆಂದರ್ಥವು.

[2]ಇಲ್ಲಿ "ತ್ವಂ ಯಜ್ಞಸ್ತ್ವಂವಷಟ್ಕಾರಸ್ತ್ವಮೋಂಕಾರಃ ಪರಂತಪಃ। ಪ್ರಭವಂ ನಿಧನಂ ವಾ ತೇ ನವಿದುಃ ಕೋಭವಾನಿತಿ" ಎಂದು ಮೂಲವು. (ತ್ವಂಯಜ್ಞಃ ಯಜ್ಞೋವೈವಿಷ್ಣುಃ" ಎಂಬ ಶ್ರುತಿಯಂತೆ ಯಜ್ಞನಿರ್ವಾಹಕ ಗಳಾದ ಪಶು, ಹವಿಸ್ಸು, ಆಜ್ಯ, ಸ್ರುಕ್ಕು, ಸ್ರುವೆ ಮೊದಲಾದುವುಗಳನ್ನು ಶರೀರವಾಗಿ ಉಳ್ಳವನು. ಯಜ್ಞಾರಾಧ್ಯರಾದ ಇಂದ್ರಾದಿಗಳನ್ನು ಶರೀರ ವಾಗಿ ಉಳ್ಳವನೆಂದೂ ಹೇಳಬಹುದು. ಇಲ್ಲಿ "ಬ್ರಹ್ಮಾರ್ಪಣಂ ಬ್ರಹ್ಮಹವಿ ರ್ಬ್ರಹ್ಮಾಗ್ನೌ ಬ್ರಹ್ಮಣಾಹುತಮ್" ಎಂದು ಗೀತಾವಚನವು. (ತ್ವಂವಷ ಟ್ಕಾರಃ) ನೀನೇ ವಷಟ್ಕಾರನು. ಇದೇ ಬೇರೆಯವುಗಳಿಗೂ ಉಪಲಕ್ಷಕವು.

ವೈದಿಕರಾಗಲಿ ನಿನ್ನ ಉತ್ಪತ್ತಿವಿನಾಶಗಳನ್ನು ಕಂಡರಿಯರು. ನೀನು ಯಾರೆಂಬು ದನ್ನೂ ಬೇರೊಬ್ಬರು ಕಾಣರು! [1]ಯೋಗಿಗಳಿಗೆ ಮಾತ್ರ ನೀನು ಸರ್ವಭೂತಗಳ ಲ್ಲಿಯೂ, ವಿಶೇಷವಾಗಿ ಬ್ರಾಹ್ಮಣರಲ್ಲಿಯೂ, ಗೋವುಗಳಲ್ಲಿಯೂ, ಸಮಸ್ತ ದಿಕ್ಕುಗಳಲ್ಲಿಯೂ, ಆಕಾಶಗಳಲ್ಲಿಯೂ, ಪರ್ವತಗಳಲ್ಲಿಯೂ, ವನಗಳ ಲ್ಲಿಯೂ ಗೋಚರಿಸಿ, ನಿನ್ನ ಸರ್ವಾಂತರ್ಯಾಮಿತ್ವವನ್ನು ಪ್ರಕಟಿಸುವೆ. [2]ನೀನು ಸಹಸ್ರಶೀರ್ಷನು. ಸಹಸ್ರಾಕ್ಷನು, ಸಹಸ್ರಪಾದನು. ಶ್ರೀ

ಎಂದರೆ "ಚತುರ್ಭಿಶ್ಚ ಚತುರ್ಭಿಶ್ಚ ದ್ವಾಭ್ಯಾಂ ಪಂಚಭಿರೇವಚ ! ಹೂಯ ತೇಚ ಪುನರ್ದ್ವಾಭ್ಯಾಂ ಸ.ನೋವಿಷ್ಣುಃ ಪ್ರಸೀದತು' ಎಂಬ ವಚನದಂತೆ "ಆಶ್ರಾವಯ" ಎಂಬ ನಾಲ್ಕಕ್ಷರಗಳು, "ಅಸ್ತುಶ್ರೌಷಟ್' ಎಂಬ ನಾಲ್ಕ ಕ್ಷರಗಳು, "ಯಜ" ಎಂಬ ಎರಡಕ್ಷರಗಳು, "ಯೇ ಯಜಾಮಹೇ" ಎಂಬ ಐದಕ್ಷರಗಳು, "ವಷಟ್" ಎಂಬ ಎರಡಕ್ಷರಗಳು, ಹೀಗೆ ಮೊತ್ತಕ್ಕೆ ಹದಿ ನೇಳಕ್ಷರಗಳಿಂದ ಸಮಾರಾಧ್ಯನಾದವನೆಂದರ್ಥವು. (ಓಂಕಾರಃ) "ಓಮಿತ್ಯೇ ಕಾಕ್ಷರಂ ಬ್ರಹ್ಮ" ಎಂಬಂತೆ ಪ್ರಣವಶಬ್ದವಾಚ್ಯನು. (ನವಿದುಃಕೋಭವಾ ನಿತಿ) ನೀನು ಯಾರೆಂದು ಬೇರೊಬ್ಬರಿಗೆ ತಿಳಿಯದು. "ಕ ಇತ್ಥಾವೇದ ಯತ್ರಸಃ' ಎಂದು ಶ್ರುತಿವಚನವು.

[1]ಇದುವರೆಗೆ ಹಿಂದೆ ರಾಮನು "ಯೋಹಂ" ಎಂದು ಕೇಳಿದ ಸ್ವರೂಪ ಪ್ರಶ್ನೆಗೆ ಉತ್ತರವನ್ನು ಹೇಳಿದುದಾಯಿತು. ಇಲ್ಲಿಂದ ಮುಂದೆ 'ಯಸ್ಯ' ಎಂದು ಕೇಳಿದ ಸಂಬಂಧಪ್ರಶ್ನೆಗೆ ಉತ್ತರವನ್ನು ಹೇಳುವನು. "ದೃಶಸೇ ಸರ್ವಭೂತೇಷು ಬ್ರಾಹ್ಮಣೇಷುಚ ಗೋಷುಚ। ದಿಕ್ಷು ಸರ್ವಾಸು ಗಗನೇ ಪರ್ವತೇಷು ವನೇಷುಚ" ಎಂದು ಮೂಲವು. ಇದರಲ್ಲಿ ಸರ್ವಾಂತರ್ಯಾಮಿತ್ವವು ಹೇಳಲ್ಪಡುವುದು. "ಭೂತಾನಿ ವಿಷ್ಣುರ್ಭುವನಾನಿ ವಿಷ್ಣುರ್ವನಾನಿ ವಿಷ್ಣುರ್ಗಿರಯೋ ದಿಶಶ್ಚ । ನದ್ಯಸ್ಸಮುದ್ರಾ ಶ್ಚ ಸ ಏವಸರ್ವಂ ಯದಸ್ತಿಯನ್ನಾಸ್ತಿಚ ವಿಪ್ರವರ್ಯ" ಎಂಬ ಸ್ಮೃತಿವಾಕ್ಯವು ಇಲ್ಲಿ ಅನುಸಂಧೇಯವು.

[2]ಇಲ್ಲಿ 'ಸಹಸ್ರಚರಣಶ್ರೀಮಾನ್ ಶತಶೀರ್ಷಸ್ಸಹಸ್ರದೃಕ್ । ತ್ವಂ ಧಾರ ಯಸಿ ಭೂತಾನಿ ವಸುಧಾಂಚ ಸಪರ್ವತಾಮ್" ಎಂದು ಮೂಲವು. ಇಲ್ಲಿನ ಶತಶಬ್ದವು ಸಹಸ್ರವಾಚಕವು. ಶತಶೀರ್ಷ ಎಂದರೆ ಸಹಸ್ರ ಶೀರ್ಷನೆಂದರ್ಥವು. "ಸಹಸ್ರಶೀರ್ಷಾ ಪುರುಷಸ್ಸಹಸ್ರಾಕ್ಷಸ್ಸಹಸ್ರಪಾತ್" ಎಂಬ ಪುರುಷಸೂಕ್ತಾ

ಭೂದೇವಿಯು[1]ರಿಗೆ ಪತಿಯೆನಿಸಿದವನು, ಪರ್ವತವಿಶಿಷ್ಟವಾದ ಸಮಸ್ತ ಭೂಮಿಯನ್ನೂ, ಇತರ ಮಹಾಭೂತಗಳನ್ನೂ ಧರಿಸಿ ನಿಂತವನು. ರಾಮಾ! [2]ಪ್ರಳಯಕಾಲದಲ್ಲಿ ಭೂಮಿನಾಶಹೊಂದಿದ ಮೇಲೆ, ನೀನೊಬ್ಬನು ಮಾತ್ರ ಜಲಮಧ್ಯದಲ್ಲಿ ಶೇಷಶಾಯಿಯಾಗಿದ್ದು, .ದೇವಗಂಧರ್ವದಾನವರಿಗೆ ನಿವಾಸಭೂತಗಳಾದ ಸ್ವರ್ಗಮರ್ತ್ಯಪಾತಾಳಗಳೆಂಬ ಮೂರು ಲೋಕಗಳನ್ನೂ ಕುಕ್ಷಿಯಲ್ಲಿ ಧರಿಸುತ್ತ, ಮಾರ್ಕಂಡೇಯಾದಿಗಳಿಗೆ ಗೋಚರಿಸುವೆ. ರಾಮಾ! ನಾನೇ ನಿನ್ನ ಹೃದಯವು. ಸರಸ್ವತಿಯೇ ನಿನ್ನ ನಾಲಗೆ! ಸಮಸ್ತ ದೇವತೆಗಳೂ ಪರಬ್ರಹ್ಮರೂಪವಾದ ನಿನ್ನ ದೇಹದಲ್ಲಿ ರೋಮಗಳಂತೆ ಬಿಡದೆ ಸೇರಿಕೊಂಡಿರುವರು. ನೀನು ಎವೆಮುಚ್ಚುವುದೇ ರಾತ್ರಿಯೆನಿಸುವುದು. ನೀನು ಎವೆಯನ್ನು ತೆರೆಯುವುದೇ ಹಗಲೆನಿಸುವುದು. [3]ನಿನ್ನ ಉಸಿರುಗಳೇ ವೇದಗಳೆನಿಸುವುವು. ಪ್ರಪಂಚದಲ್ಲಿ ನೀನಿಲ್ಲದುದೊಂದೂ ಇಲ್ಲವು. [4]ಜಗತ್ತೆಲ್ಲವೂ ನಿನ್ನ ಶರೀರವು.! ಈ ಭೂತನೆಂಬುದು ನಿನ್ನ ಸ್ಥೈರ್ಯವು. ನಿನ್ನ ಕೋಪವೇ

ರ್ಥವು ಇಲ್ಲಿ ಹೇಳಲ್ಪಟ್ಟಿವೆ. (ಶ್ರೀವರ್ಗ) ಶ್ರೀಪತಿಯೆಂಬರ್ಥವು. ಇದು ಭೂಪತಿತ್ವಕ್ಕೂ ಉಪಲಕ್ಷಣವು. "ಹ್ರೀಶ್ಚತೇಲಕ್ಷ್ಮೀಶ್ಚಪತ್ನ್ಯೌ" ಎಂದು ಉತ್ತರನಾರಾಯಣೋಕ್ತಿಯು.

1 ಇದರಿಂದ ಸರ್ವಾಧಾರತ್ವವೂ, ಆಧಾರಾಧೇಯಭಾವಸಂಬಂಧವೂ ಹೇಳಲ್ಪಡುವುದು.

2 ಇಲ್ಲಿ "ಅಂಗಾನ್ಯನ್ಯಾದೇವತಾ:" ಎಂಬ ಶ್ರುತಿವಚನದಂತೆ ಸರ್ವ ದೇವತಾತ್ಮತ್ವವು ಹೇಳಲ್ಪಡುವುದು.

3 ಇಲ್ಲಿ "ತಸ್ಯಹ ವಾ ಏತಸ್ಯ ಮಹತೋ ಭೂತಸ್ಯ ನಿಶ್ವಸಿತಮೇತದ್ಯದೃಗ್ವೇದಃ" ಎಂಬ ಶ್ರುತಿಯಂತೆ ಭಗವಂತನ ಉಸಿರುಗಳೇ ವೇದಗಳೆಂದೆನಿಸುವುವು.

4 ಇದರ ಹಿಂದೆ "ನ ತದಸ್ತಿ ತ್ವಯಾ ವಿನಾ' ಎಂಬ ನಿಷೇಧಶ್ರುತ್ಯರ್ಥವನ್ನು ಹೇಳಿ, ಇಲ್ಲಿ 'ಸರ್ವಂ ಖಲ್ವಿದಂ ತತ್ವಮಸಿ' ಇತ್ಯಾದಿ ಸಮಾನಾಧಿಕರಣ್ಯಶ್ರುತ್ಯರ್ಥವನ್ನು ಹೇಳುವರು. "ಜಗತ್ಸರ್ವಂ ಶರೀರಂ ತೇ ಸ್ಥೈರ್ಯಂ ತೇ ವಸುಧಾತಲಮ್ | ಅಗ್ನಿ:ಕೋಪ: ಪ್ರಸಾದಸ್ತೇಸೋಮಶ್ಶ್ರೀವತ್ಸಲಕ್ಷಣ:' ಎಂದು ಮೂಲವು. ಸಮಸ್ತ ಜಗತ್ತೂ ನಿನ್ನ ಶರೀರವೆಂದರೆ, ನಿನ್ನ ನಿಯಮದಿಂದ ಸಮಸ್ತ ಜಗತ್ತೂ ನಿನಗೆ ಆಧೇಯವಾಗಿಯೂ ವಿಧೇಯವಾಗಿಯೂ ಶೇಷಭೂತವಾಗಿಯೂ ಆಗುವುದೆಂದರ್ಥವು. ಇದೇ ಅಲ್ಲವೇ ಶರೀರಲಕ್ಷಣವು? ಹೀಗೆ ಜಗತ್ತು ನಿನ್ನ ಶರೀರವಾದುದರಿಂದ ಶರೀರಗತಗಳಾಗುವ ವಿಶೇಷಣಗಳೆಲ್ಲವೂ ನಿನ್ನ ವಿಶೇಷಣಗಳೇ" ಎಂದು ಹೇಳು

ಅಗ್ನಿಯು. ನಿನ್ನ ಪ್ರಸಾದವೇ ಚಂದ್ರನು! ಶ್ರೀವತ್ಸವೆಂಬುದು ನಿನ್ನ ಅಸಾಧಾರಣಚಿಹ್ನವು! [1]ಪೂರ್ವದಲ್ಲಿ ನೀನೇ ತ್ರಿವಿಕ್ರಮರೂಪದಿಂದ ಮೂರಡಿಗಳನ್ನಿಟ್ಟು ಮೂರುಲೋಕವನ್ನಳೆದವನು! ಆ ವಿಧದಿಂದ ತ್ರೈಲೋಕ್ಯವನ್ನೂ ವಶಪಡಿಸಿಕೊಂಡು, ಬಲಿಯೆಂಬ ಮಹಾದಾನವನನ್ನು ಬಂಧಿಸಿ ಆ ತ್ರೈಲೋಕ್ಯರಾಜ್ಯವನ್ನೂ ಇಂದ್ರನಿಗೆ ಕೊಡಿಸಿದವನೂ ನೀನಲ್ಲದೆ ಬೇರೆಯಲ್ಲ. ರಾಮಾ! ಇನ್ನು ಹೆಚ್ಚಾಗಿ ಹೇಳಿದುದರಿಂದೇನು? [2]ಈ ಸೀತೆಯೇ ಮಹಾಲಕ್ಷ್ಮಿಯು! ನೀನೇ ಮಹಾವಿಷ್ಣುವು. ನೀನೇ ಸಮಸ್ತ ಚರಾಚರಗಳಿಗೂ ನಾಥನು! ಮುಂದೆಯೂ ನೀನೇ ಕೃಷ್ಣನಾಗಿ ಅವತರಿಸತಕ್ಕವನು! ಪ್ರಜಾಪತಿ ಶಬ್ದವಾಚ್ಯನೂ ನೀನೇ! ಆದರೆ ಈಗ ನೀನು ರಾವಣವಧಾರ್ಥವಾಗಿ ಈ ಮನುಷ್ಯದೇಹವನ್ನು ಪ್ರವೇಶಿಸಿರುವೆ! ಎಲೈ ಧಾರ್ಮಿಕ ಶಿರೋಮಣೀ! ನೀನು ನಮಗಾಗಿ ಸಂಕಲ್ಪಿಸಿದ ಕಾರ್ಯವನ್ನು ನೆರವೇರಿಸಿದುದಾಯಿತು. ರಾವಣನು ಹತನಾದನು. ಇನ್ನು ನೀನು ಸಂತುಷ್ಟನಾಗಿ ನಿನ್ನ ನಿಜಸ್ಥಾನವಾದ ವೈಕುಂಠದಲ್ಲಿ ನೆಲೆಗೊಳ್ಳಬಹುದು. ನಿನ್ನ ಬಲವೂ, ನಿನ್ನ ವೀರ್ಯವೂ ಅಮೋಘವಾದುದು. ನಿನ್ನ ಪರಾಕ್ರಮವೂ ಅಮೋಘವು. ನಿನ್ನ ದರ್ಶನವಾಗಲಿ, ನಿನ್ನ ಸ್ತೋತ್ರವಾಗಲಿ ಮಹಾ ಫಲಪ್ರದವಲ್ಲದೆ ನಿರರ್ಥಕವಾದುದಲ್ಲ, ನಿನ್ನಲ್ಲಿ ಭಕ್ತಿಯುಳ್ಳ ಮನುಷ್ಯರು ವಿಲಂಬವಿಲ್ಲದೆ ಸ್ವಾಭಿಮತವನ್ನು ಪಡೆಯುವರು- ಪುರಾತನನಾಗಿಯೂ, ಪುರು

ವರು. (ವಸುಧಾತಲಂ ಸ್ಥೈರ್ಯಂ) ಭೂಮಿಯು ದೃಢತ್ವವು. "ಕಾಠಿನ್ಯವಾನ್ಯೋ ಬಿಭರ್ತಿ ತಸ್ಮೈಭೂಮ್ಯಾತ್ಮನೇ ನಮಃ" ಎಂಬ ವಿಷ್ಣುಪುರಾಣೋಕ್ತಿಯಂತೆ ಭೂರೂಪದಿಂದ ಕಾಠಿನ್ಯವುಳ್ಳವನಾಗಿ ಸಮಸ್ತವನ್ನೂ ಭರಿಸುತ್ತಿರುವವನೆಂದರ್ಥವು.

1 ಇದರಲ್ಲಿ "ಇದಂ ವಿಷ್ಣುರ್ವಿಚಕ್ರಮೇ ತ್ರೇಧಾನಿದಧೇ ಪದಮ್" ಎಂಬ ಶ್ರುತ್ಯುಕ್ತವಾದ ವಾಮನತ್ರಿವಿಕ್ರಮಾವತಾರಗಳು ವ್ಯಂಜಿತವಾಗುವುವು.

2 ಇಲ್ಲಿಂದ ಮುಂದೆ "ಯತ" ಎಂದು ರಾಮನು ಕೇಳಿದ ಪ್ರಯೋಜನ ಪ್ರಶ್ನೆಗೆ ಉತ್ತರವನ್ನು ಹೇಳುವರು."ಸೀತಾ ಲಕ್ಷ್ಮೀರ್ಭವಾನ್ ವಿಷ್ಣುರ್ದೇವಃ ಕೃಷ್ಣಃ ಪ್ರಜಾಪತಿಃ ವಧಾರ್ಥಂ ರಾವಣಸ್ಯೇಹ ಪ್ರವಿಷ್ಟೋ ಮಾನುಷೀಂ ತನುಮ್" ಎಂದು ಮೂಲವು. ಇದರಿಂದ ಭಗವದವತಾರಗಳಲ್ಲೆಲ್ಲಾ ಲಕ್ಷ್ಮಿಯು ಅನುವರ್ತಿಸಿರುವಳೆಂದು ಸೂಚಿತವಾಗುವುದು. ಮತ್ತು ಇದರಿಂದ 'ಅವನ ರೂಪವು ಮನುಷ್ಯಸಂಬಂಧಿಯಾಗಿದ್ದರೂ ದೇಹವು ಅಪ್ರಾಕೃತ'ವೆಂದೂ ಹೇಳಲ್ಪಡುವುದು.

ಷೋತ್ತಮನಾಗಿಯೂ ಇರುವ ನಿನ್ನಲ್ಲಿ ಭಕ್ತಿಯಿಟ್ಟವರು, ದೇಹವಿರುವ ವರೆಗೂ ಈ ಲೋಕದಲ್ಲಿ ಬೇಕುಬೇಕಾದ ಭೋಗಗಳನ್ನನುಭವಿಸಿ, ದೇಹಾವಸಾನದಲ್ಲಿ ಪರಲೋಕಗಳಲ್ಲಿಯೂ ಕೂಡ ಪೂರ್ಣಕಾಮರಾಗಿ ನಿಲ್ಲುವರು. ವೇದಸಿದ್ಧವಾಗಿಯೂ, ಪುರಾತನವಾಗಿಯೂ, ಇತಿಹಾಸರೂಪವಾಗಿಯೂ ಇರುವ ಈ ಸ್ತೋತ್ರವನ್ನು ನಿತ್ಯವೂ ಯಾರು ಕೀರ್ತಿಸುವರೋ ಅವರಿಗೆ ಪುನರಾವೃತ್ತಿಯೆಂಬುದೇ ಇಲ್ಲವು.

ಇಲ್ಲಿಗೆ ನೂರಿಪ್ಪತ್ತನೆಯ ಸರ್ಗವು.

ಅಗ್ನಿಪುರುಷನು ಚಿತೆಯ ಮಧ್ಯದಿಂದ ಸೀತೆಯನ್ನೆತ್ತಿ ತಂದು ರಾಮುನಿಗೊಪ್ಪಿಸಿ, ಆಕೆಯ ಪಾತಿವ್ರತ್ಯವನ್ನು ಶ್ಲಾಘಿಸಿದುದು. ಶ್ರೀರಾಮನೂಕೂಡ, ಸೀತೆಯ ಚರಿತ್ರವನ್ನು ಕೊಂಡಾಡಿ, ಆಕೆಯನ್ನು ಸ್ವೀಕರಿಸಿದುದು. ಸೀತಾರಾಮರಿಬ್ಬರಿಗೂ ಪರಸ್ಪರಸಮಾಗಮದಿಂದುಂಟಾದ ನಿರತಿಶಯಾನಂದವು.

ಬ್ರಹ್ಮದೇವನು ರಾಮನಿಗೆ ಹೇಳಿದ ಈ ಶುಭವಾಕ್ಯವನ್ನು ಕೇಳಿದೊಡನೆ ಅತ್ತಲಾಗಿ ಚಿತಾಮಧ್ಯದಲ್ಲಿದ್ದ ಅಗ್ನಿಪುರುಷನು, ಸೀತಾದೇವಿಯ ತೊಡೆಗೆ ಕೈಕೊಟ್ಟು [2] ಮೇಲಕ್ಕೆತ್ತಿಕೊಂಡು ಅಗ್ನಿಮಧ್ಯದಿಂದೆದ್ದು ಬಂದನು. ಹೀಗೆ

ಇದರಿಂದ ತಪಸ್ಸು ಮೊದಲಾದವುಗಳಿಗಿಂತಲೂ ರಾಮಭಕ್ತಿಯೇ ಪರಮಧರ್ಮವೆಂದೂ, ಆ ರಾಮಭಕ್ತಿಯನ್ನು ದೃಢವಾಗಿ ಅನುಸರಿಸಿದವರಿಗೆ ಈ ಸ್ತೋತ್ರವೇ ಅಂತಹ ಫಲವನ್ನು ಕೊಡುವುದೆಂದೂ ಸೂಚಿತವಾಗುವುದು.

2 ಸೀತೆಯು ರಾವಣನ ಕೈಗೆ ಸಿಕ್ಕಿದುದುಮೊದಲು, ಇದುವರೆಗೆ ಅವಳಿಗುಂಟಾದ ಕಷ್ಟಗಳೆಲ್ಲವೂ, ಅವಳು, ಪರಮಭಾಗವತೋತ್ತಮನಾದ ಲಕ್ಷ್ಮಣನಲ್ಲಿ ದುರ್ಭಾಷೆಗಳನ್ನಾಡಿ ಅವನಲ್ಲಿ ನಡೆಸಿದ ಅಪಚಾರಕ್ಕಾಗಿ ಅನುಭವಿಸಿದ ಫಲಗಳೆಂದು ಗ್ರಾಹ್ಯವು. ಕೆಲವರು ಈ ಸೀತೆಯು ರಾವಣನು ತನ್ನನ್ನಪಹರಿಸುವುದಕ್ಕೆ ಬಂದಾಗಲೇ ಅಗ್ನಿಪ್ರವೇಶವನ್ನು ಮಾಡಿದಳೆಂದೂ, ರಾವಣನಿಂದ ಅಪಹೃತಳಾದವಳು ಮಾಯಾಸೀತೆಯೆಂದೂ ಆ ನಿಜವಾದ ಸೀತೆಯು ಅಗ್ನಿಯಿಂದೆದ್ದು ಬರುವುದಕ್ಕಾಗಿಯೇ ಮಾಯಾ ಸೀತೆಯು ಅಗ್ನಿಪ್ರವೇಶಮಾಡಿದಳೆಂದೂ ಹೇಳುವರು.

ಅಗ್ನಿಹೋತ್ರನು ಜನಕಪುತ್ರಿಯಾದ ಸೀತೆಯನ್ನೆತ್ತಿಕೊಂಡು, ಒಡ್ಡಿದ ಆ ಚಿತೆಯನ್ನು ಅತ್ತಿತ್ತ ಕದಲಿಸಿ, ಮನುಷ್ಯರೂಪದಿಂದ ಮೇಲಕ್ಕೆದ್ದನು. ಆಗ ಆ ಸೀತೆಗಾದರೋ, ಬಾಲಸೂರ್ಯನಂತೆ ದೇದೀಪ್ಯಮಾನವಾದ ದೇಹ ಕಾಂತಿ ! ಸರ್ವಾವಯವಗಳಲ್ಲಿಯೂ ಸುವರ್ಣಾಭರಣಗಳು ! ಮೈಮೇಲೆ ಕೆಂಪಾದ ಪಟ್ಟೆಮಡಿ ! ಎಳೆಯೌವನದ ಸೊಬಗು ! ಸುರುಳಿಗೊಂಡ ಕಪ್ಪಾದ ಮುಂಗುರುಳುಗಳು ! ಕಂದಿ ಕುಂದದ ಪುಷ್ಪಾಭರಣಗಳು ! ಹೀಗೆ ಆಕೆಯು ಅಗ್ನಿಪ್ರವೇಶಕ್ಕೆ ಮೊದಲಿದ್ದ ದಿವ್ಯರೂಪದಿಂದಲೇ ಬೆಳಗುತ್ತ ಮನಸ್ಸಿನಲ್ಲಿ ಸ್ವಲ್ಪವಾದರೂ ಕಳವಳವಿಲ್ಲದೆ ಧೀರಸ್ವಭಾವದಿಂದಿದ್ದಳು. ಲೋಕಸಾಕ್ಷಿಯಾದ ಅಗ್ನಿದೇವನು, ಹೀಗೆ ಆ ಸೀತೆಯನ್ನು ತೊಡೆಯಲ್ಲಿ ಹಿಡಿದು, ಅಗ್ನಿಮಧ್ಯ ದಿಂದ ಮೇಲಕ್ಕೆತ್ತಿ ತಂದು, ರಾಮನ ವಶಕ್ಕೊಪ್ಪಿಸುತ್ತ, ಈ ಮಾತನ್ನು ಹೇಳುವನು. "ರಾಮಾ ! ಇದೋ ! ಇದಕ್ಕೆ ಮೊದಲು ನನ್ನ ಜ್ವಾಲೆಯಲ್ಲಿ ಪ್ರವೇಶಿಸಿದ ಈ ನಿನ್ನ ಸೀತೆಯನ್ನು ಪರಿಗ್ರಹಿಸು ! ಇವಳಲ್ಲಿ ಸ್ವಲ್ಪ ಮಾತ್ರವೂ ಪಾಪವೆಂಬುದಿಲ್ಲ ! ರಾಮಭದ್ರಾ ! ನಿರ್ದೋಷೆಯಾಗಿ ನಿನ್ನನ್ನು ಮನಃಪೂರ್ವಕವಾಗಿ ಪ್ರೀತಿಸುತ್ತಿದ್ದ ಈಕೆಯಲ್ಲಿಯೂ ನೀನು ಸಂದೇಹ ವನ್ನು ನಟಿಸಿ ಅಗ್ನಿಪ್ರವೇಶಮಾಡಿಸಿದೆಯಲ್ಲಾ ! ಇದೆಂತಹ ಆಚಾರ ಶೌರ್ಯವು ? ಸುಶೀಲೆಯಾದ ಈಕೆಯು, ಮಾತಿನಿಂದಾಗಲಿ, ಮನಸ್ಸಿ ನಿಂದಾಗಲಿ, ಸಂಕಲ್ಪದಿಂದಾಗಲಿ, ಕಣ್ಣಿನಿಂದಾಗಲಿ ನಿನ್ನನ್ನು ಮೀರಿ ನಡೆದವಳಲ್ಲ. ನೀನಿಲ್ಲದ ಕಾಲದಲ್ಲಿ ಈ ಬಾಲೆಯು ದುಃಖದಿಂದ ಮೈಮರೆತಿದ್ದಾಗ, ದರ್ಪೋದ್ರಿಕ್ತನಾದ ರಾವಣನು ನಿರ್ಜನವಾದ ಆ ವನದಲ್ಲಿ ಇವಳನ್ನು ಬಲಾತ್ಕರಿಸಿ ಕದ್ದುಯ್ದನು. ಆತನು ತನ್ನ ಅಂತಃಪುರದಲ್ಲಿ ಈಕೆಯನ್ನು ಘೋರರಾಕ್ಷಸಿಯರ ಕಾವಲಿನಲ್ಲಿ ಸೆರೆಯಿರಿಸಿದ್ದನು. ಆ ದುರಾತ್ಮನು ಅನೇಕ ವಿಧದಿಂದ ನಿರ್ಬಂಧಿಸಿದರೂ ಪರಮಪತಿವ್ರತೆಯಾದ ಈಕೆಯು ನಿನ್ನಲ್ಲಿಯೇ ನಟ್ಟ ಮನಸ್ಸುಳ್ಳವಳಾಗಿ, ನೀನೇ ತನಗೆ ಗತಿಯೆಂದು ನಂಬಿಕೊಂಡಿದ್ದಳು. ಆ ರಾವಣನು ಧನಕನಕವಸ್ತುವಾಹನಾದಿಗಳೆಲ್ಲವನ್ನೂ ಕೊಡುವುದಾಗಿ ಹೇಳಿ ಎಷ್ಟೆಷ್ಟೋ ವಿಧದಿಂದ ಇವಳಿಗೆ ಆಸೆಯನ್ನು ತೋರಿಸಿ, ಎಷ್ಟೆಷ್ಟೋ ವಿಧದಿಂದ ಇವಳನ್ನು ಹೆದರಿಸಿದನು. ಆಗಲೂ ಈ ಸೀತೆಯು ಅದೊಂ ದನ್ನೂ ಲಕ್ಷ್ಯಮಾಡದೆ, ನಿನ್ನಲ್ಲಿಯೇ ನಟ್ಟಮನಸ್ಸುಳ್ಳವಳಾಗಿ, ಅನವರ ತವೂ ನಿನ್ನನ್ನೇ ಧ್ಯಾನಿಸುತ್ತಿದ್ದಳು ! ರಾಮಾ ! ಶುದ್ಧಸ್ವಭಾವವುಳ್ಳವ

ಳಾಗಿ, ಪಾಪವೆಂಬುದನ್ನೇ ಕಾಣದ ಈ ಸಾಧ್ವೀಮಣಿಯನ್ನು ಪರಿಗ್ರಹಿಸು ನನ್ನ ಮಾತಿಗೆ ಇದಿರಾಡಬೇಡ! ಇದನ್ನು ನನ್ನಾಜ್ಞೆಯೆಂದು ತಿಳಿ !" ಎಂದನು. ವಾಕ್ಯವಿಶಾರದನಾಗಿಯೂ ! ಧರ್ಮಾತ್ಮನಾಗಿಯೂ ಇರುವ ರಾಮನು, ಅಗ್ನಿಪುರುಷನು ಹೇಳಿದ ಆ ಮಾತನ್ನು ಹೇಳಿ, ತನ್ನ ಪತ್ನಿಯ ಪಾತಿವ್ರತ್ಯಮಹಿಮೆಗಾಗಿ ತನ್ನಲ್ಲಿ ತಾನೇ ಸಂತೋಷದಿಂದುಕ್ಕುತ್ತ, ತನಗಾಗಿ ಸೀತೆಯು ಅಗ್ನಿಪ್ರವೇಶಮಾಡಿ ಬಂದುದನ್ನು ನೆನೆಸಿಕೊಂಡು ಪಶ್ಚಾತ್ತಾಪದಿಂದ ಕಣ್ಣೀರುಬಿಟ್ಟು, ಸ್ವಲ್ಪಕಾಲದವರೆಗೆ ಧ್ಯಾನವಶನಾಗಿ ನಿಂತಿದ್ದನು. ಧಾರ್ಮಿಕಶಿರೋಮಣಿಯಾಗಿಯೂ, ದೃಢಪರಾಕ್ರಮನಾಗಿಯೂ ಇರುವ ಆ ರಾಮನು, ಅಗ್ನಿದೇವನು ಹೇಳಿದ ಮಾತನ್ನು ಕೇಳಿ ಸ್ವಲ್ಪಹೊತ್ತಿನವರೆಗೆ ಚಿಂತಿಸುತ್ತಿದ್ದು, ಆ ಮೇಲೆ ದೇವಶ್ರೇಷ್ಠನಾದ ಬ್ರಹ್ಮನನ್ನು ಕುರಿತು, ಎಲೈ ಸುರಶ್ರೇಷ್ಠನೆ! ಮೂರುಲೊಕಗಳಲ್ಲಿಯೂ ಸೀತೆಯಮೇಲೆ ಪಾಪವನ್ನು ಶಂಕಿಸುವುದು ಯುಕ್ತವಲ್ಲವೆಂಬುದೇನೋ ನಿಜವು ! ಆ ವಿಷಯವನ್ನು ನಾನೂ ಚೆನ್ನಾಗಿ ಬಲ್ಲೆನು. ಆದರೆ ಇವಳು ಬಹುಕಾಲದಿಂದ ರಾವಣನ ಅಂತಃಪುರದಲ್ಲಿದ್ದವಳಲ್ಲವೆ ? ಇದರಿಂದ ಇವಳಿಗೆ ಲೋಕದಲ್ಲಿ ಅಪವಾದವುಂಟಾಗದಿರದು. ಹೀಗಿರುವಾಗ ನಾನು ಈಕೆಯನ್ನು ಪರೀಕ್ಷಿಸದೆ ಹಾಗೆಯೇ ಪರಿಗ್ರಹಿಸಿದ ಪಕ್ಷದಲ್ಲಿ, ಲೋಕವು ನನ್ನನ್ನೂ ನಿಂದಿಸದೆ ಬಿಡುತ್ತಿರಲಿಲ್ಲ. "ದಶರಥನ ಹೊಟ್ಟೆಯಲ್ಲಿ ಹುಟ್ಟಿಯೂ ರಾಮನು ಕೇವಲ ಮೂಢನಾಗಿಯೂ ಕಾಮುಕನಾಗಿಯೂ ಇರುವನೇ ಹೊರತು ಮಾನವಂತನಲ್ಲ" ವೆಂದು ಸಜ್ಜನನಾದರೂ ನನ್ನನ್ನು ನಿಂದಿಸದೆ ಬಿಡುತ್ತಿರಲಿಲ್ಲ. ಈ ಅಪವಾದವನ್ನು ತಪ್ಪಿಸಿಕೊಳ್ಳುವುದಕ್ಕಾಗಿಯೇ ನಾನು ಹೀಗೆ ನಡೆಸಬೇಕಾಗಿ ಬಂದಿತು. ಜನಕಮಹಾರಾಜಕುಮಾರಿಯಾದ ಈಕೆಗೂ ಮತ್ತೊಬ್ಬರು ಸದಾಚಾರವನ್ನು ತಿಳಿಸಬೇಕೇನು ? ಎಂದಿಗೂ ಇಲ್ಲ! ಈ ಸೀತೆಯು ನನ್ನಲ್ಲಿಯೇ ಮನಸ್ಸಿಟ್ಟು, ನನ್ನ ಮನೋನುಕೂಲೆಯಾಗಿಯೇ ವರ್ತಿಸುವಳಲ್ಲದೆ ತಾನೇ ಸ್ವತಂತ್ರಿಸಿ ಯಾವ ಕಾರ್ಯವನ್ನೂ ನಡೆಸಲಾರಳೆಂಬುದನ್ನೂ ನಾನು ಚೆನ್ನಾಗಿ ಬಲ್ಲೆನು. ಹಾಗಿದ್ದರೂ ಸತ್ಯವನ್ನೇ ದೃಢವಾಗಿ ಹಿಡಿದಿರುವ ನಾನು, ಆ ಸತ್ಯವನ್ನು ಹೊರಬೀಳಿಸುವುದಕ್ಕಾಗಿಯೂ, ಲೋಕದ ಜನಗಳ ನಂಬಿಕೆಗಾಗಿಯೂ, ಸೀತೆಯ ಅಗ್ನಿಪ್ರವೇಶಕ್ಕೆ ಸಮ್ಮತಿಸಿ ಸುಮ್ಮನಿದ್ದೆನು. ವಿಶಾಲಾಕ್ಷಿಯಾದ ಈಕೆಯ ರೂಪವು ಲೋಕಮೋಹಕವಾಗಿ

ದ್ದರೂ, ಇವಳ ಸಹಜವಾದ ತೇಜಸ್ಸೇ ಇವಳನ್ನು ಸುರಕ್ಷಿತವಾಗಿ ಕಾಪಾಡು ತ್ತಿರುವುದು. ಸಮುದ್ರವು ತನ್ನ ವೇಲೆಯನ್ನು ಹೇಗೆ ಮೀರಿ ಬರಲಾ ರದೋ, ಹಾಗೆ ರಾವಣನೂ ಇವಳನ್ನತಿಕ್ರಮಿಸಲಾರನೆಂಬುದನ್ನೂ ನಾನು ಬಲ್ಲೆನು. ದುಷ್ಟಾತ್ಮನಾದ ಆ ರಾವಣನು ಮನಸ್ಸಿನಿಂದಲೂ ಈಕೆಯನ್ನು ಮೀರಿ ಬದುಕಲಾರನು. ಉರಿಯುವ ಅಗ್ನಿಜ್ವಾಲೆಯನ್ನು ಮುಟ್ಟಿ ಬದುಕಿ ದವನುಂಟೇ ? ಶುಭಾಂಗಿಯೂದ ಈಕೆಯು ರಾವಣಾಂತಃಪುರದ ಐಶ್ವರ್ಯಕ್ಕೂ ಬಯಸತಕ್ಕವಳಲ್ಲ ! ಸೂರ್ಯನಿಗೆ ಪ್ರಭೆಯು ಹೇಗೋ ಹಾಗೆ ಈಕೆಯು ನನಗೆ ನಿತ್ಯಾನಪಾಯಿನಿಯು. ಬುದ್ಧಿಮಂತನು ಕೀರ್ತಿಯನ್ನು ಹೇಗೋ ಹಾಗೆ ಮೂರುಲೋಕಗಳಲ್ಲಿಯೂ ಪರಮ ಶುದ್ಧಾತ್ಮಳೆನಿಸಿದ ಈ ಸೀತೆಯನ್ನು ಬಿಟ್ಟಿರುವುದಕ್ಕೂ ನಾನು ಶಕ್ತನಲ್ಲ. ಎಲೈ ಪೂಜ್ಯರೆ ! ಇವೆಲ್ಲವೂ ಹಾಗಿ ರಲಿ. ಮುಖ್ಯವಾಗಿ ನೀವೆಲ್ಲರೂ ನನ್ನಲ್ಲಿ ನಿಜವಾದ ಪ್ರೇಮವುಳ್ಳವರು. ಲೋಕ ಪೂಜ್ಯರು. ಯಾವಾಗಲೂ ನನಗೆ ಹಿತವನ್ನು ಹೇಳತಕ್ಕವರು! ನೀವೆ ಲ್ಲರೂ ಹೀಗೆ ನನಗೆ ಹಿತವನ್ನು ಹೇಳುತ್ತಿರುವಾಗ, ನಿಮ್ಮ ಶುಭವಾಕ್ಯ ವನ್ನನುಸರಿಸಿ ನಡೆಯುವುದೇ ನನ್ನ ಮುಖ್ಯಕರ್ತವ್ಯವಲ್ಲವೆ! ಅವಶ್ಯವಾಗಿ ನಿಮ್ಮ ಮಾತಿನಂತೆಯೇ ನಡೆಸುವೆನು!" ಎಂದನು. ಮಹಾಬಲವಂತನಾದ ರಾಮನು, ಹೀಗೆ ತನ್ನ ಮನಸ್ಸಿನಲ್ಲಿದ್ದ ಭಾವವನ್ನು ಅಲ್ಲಿದ್ದವರೆಲ್ಲರಿಗೂ ತಿಳಿಸಿ, ತಾನು ನಡೆಸಿದ ಕಾರ್ಯಕ್ಕಾಗಿ ಅಲ್ಲಿ ನೆರೆದಿದ್ದ ಬ್ರಹ್ಮಾದಿ ಸಮಸ್ತ ದೇವತೆಗಳಿಂದಲೂ ಸ್ತುತಿಸಲ್ಪಡುತ್ತ, ಸೀತಾದೇವಿಯನ್ನು ಕೈಹಿಡಿದು ಕರೆದು, ತನ್ನ ಸಮೀಪದಲ್ಲಿರಿಸಿಕೊಂಡು, ಪತ್ನೀಸಮೇತನಾಗಿ ಪರಮ ಸಂತೋಷದಿಂದಿದ್ದನು.

ಇಲ್ಲಿಗೆ ನೂರಿಪ್ಪತ್ತೊಂದನೆಯ ಸರ್ಗವು.

———

ರುದ್ರನು ರಾಮನನ್ನು ಸ್ತುತಿಸಿ, ಸ್ವರ್ಗದಲ್ಲಿ ದಿವ್ಯ ಶರೀರದಿಂದಿದ್ದ ದಶರಥನನ್ನು ಕರೆಸಿ ತೋರಿಸಿದುದು. ರಾಮಾದಿಗಳೆಲ್ಲರೂ ದಶರಥನಿಗೆ ನಮಸ್ಕರಿಸಿದುದು. ದಶರಥನು ಸ್ವಸ್ಥಾನಕ್ಕೆ ಹಿಂತಿರುಗಿ ಹೋದುದು.

ರಾಮನು ಹೇಳಿದ ಈ ಶುಭವಾಕ್ಯವನ್ನು ಕೇಳಿ, ದೇವತೆಗಳ ಮಧ್ಯದಲ್ಲಿದ್ದ ಶಿವನು, ಇನ್ನೂ ಶುಭಕರವಾಕ್ಯದಿಂದ ಅವನನ್ನು ಕುರಿತು, [1]"ಪುಂಡರೀಕಾಕ್ಷಾ! ಎಲೆ ಮಹಾಬಾಹೂ! ಪರಂತಪಾ! ರಾಮಾ! ಶಸ್ತ್ರಧಾರಿಗಳಿಗೆ ಶಿರೋಮಣಿಯಾದ ನೀನು, ನಮ್ಮ ಭಾಗ್ಯವಶದಿಂದ ರಾವಣನನ್ನು ವಧಿಸಿದೆ! ನಮ್ಮ ಭಾಗ್ಯದಿಂದಲೇ ನೀನು, ರಾವಣನಿಂದ ಲೋಕಕ್ಕುಂಟಾದ ಮಹಾಭಯವೆಂಬ ಅಂಧಕಾರವನ್ನೂ ನೀಗಿಸಿದೆ! ಎಲೈ ಬಲಾಢ್ಯನೆ! ಇನ್ನು ನೀನು ಶೀಘ್ರದಲ್ಲಿಯೇ ಅಯೋಧ್ಯೆಗೆ ಹೊರಟು, ಪ್ರೀತಿಯಿಂದ ನಿನ್ನನ್ನೇ ಇದಿರು ನೋಡುತ್ತಿರುವ ಭರತನನ್ನು ಸಮಾಧಾನಪಡಿಸು. ನಿನ್ನ ತಾಯಿಯಾದ ಕೌಸಲ್ಯೆಯನ್ನೂ ಈ ಮಹಾಕಾರ್ಯಕ್ಕೆ ಮೂಲಕಾರಣಳಾಗಿ ಲೋಕವಿಖ್ಯಾತವಾದ ಕೀರ್ತಿಯನ್ನು ಪಡೆದ ಕೈಕೇಯಿಯನ್ನೂ, ಲಕ್ಷ್ಮಣನ ತಾಯಿಯಾದ ಸುಮಿತ್ರೆಯನ್ನೂ ನೋಡಿ ಸಮಾಧಾನಪಡಿಸು. ರಾಮಾ! ಇನ್ನು ನೀನು ನಿನ್ನ ಅಯೋಧ್ಯಾರಾಜ್ಯವನ್ನು ಸ್ವೀಕರಿಸಿ ನಿನ್ನ ಮಿತ್ರವರ್ಗಗಳೆಲ್ಲವನ್ನೂ ಸಂತೋಷಪಡಿಸು. ಪುತ್ರಪೌತ್ರಾದಿಗಳನ್ನು ಪಡೆದು ಇಕ್ಷ್ವಾಕು ವಂಶವನ್ನು ಶಾಶ್ವತವಾಗಿ ನೆಲೆಗೊಳಿಸು! ಅನೇಕಾಶ್ವಮೇಧಗಳನ್ನು ನಡೆಸಿ ಎಣೆಯಿಲ್ಲದ ಕೀರ್ತಿಯನ್ನು ಹೊಂದು! ಬ್ರಾಹ್ಮಣರಿಗೆ ಸಮೃದ್ಧವಾದ ಧನವನ್ನು ಕೊಟ್ಟು ಸಂತೋಷಪಡಿಸು! [1]ಈ ಕಾರ್ಯಗಳೆಲ್ಲವನ್ನೂ ನಡೆಸಿ ಕೃತಕೃತ್ಯನಾದಮೇಲೆ, ನೀನು ನಿನ್ನ ಸ್ವಸ್ಥಾನವಾದ ವೈಕುಂಠವನ್ನು ಸೇರಬಹುದು. ಹೀಗೆ ನೀನು ರಾಜ್ಯವನ್ನಾಳಿ ಧರ್ಮಸಂಸ್ಥಾಪನವನ್ನು ಮಾಡಿದ ಹೊರತು ಈ ಲೋಕವನ್ನು ಬಿಡಬಾರದು

---

1 ಇದಕ್ಕೆ ಮೊದಲು ಬ್ರಹ್ಮನು ರಾಮನನ್ನು ಕುರಿತು "ದೇವತೆಗಳ ಕೋರಿಕೆಯು ನೆರವೇರಿದುದರಿಂದ ಇನ್ನು ನೀನು ನಿಜಸ್ಥಾನವಾದ ವೈಕುಂಠಕ್ಕೆ ತೆರಳಬಹು" ದೆಂದು ಹೇಳಿದ್ದನಷ್ಟೆ? ಶಿವನು ಇಷ್ಟರಲ್ಲಿ ತೃಪ್ತನಾಗದೆ ಭೂಲೋಕದಲ್ಲಿ ಧರ್ಮಸಂಸ್ಥಾಪನವನ್ನು ಮಾಡಿ ಆಮೇಲೆ ವೈಕುಂಠವನ್ನು ಸೇರಬೇಕೆಂದು ಇಲ್ಲಿ ರಾಮನನ್ನು ನಿರ್ಬಂಧಿಸುವುದಾಗಿ ಗ್ರಾಹ್ಯವು.

ರಾಮಾ! ಇದೋ ಇಲ್ಲಿ ನಿನಗೆ ಗುರುವಾಗಿಯೂ, ಮಹಾಯಶಸ್ವಿಯಾಗಿಯೂ ಇರುವ ನಿನ್ನ ತಂದೆ ದಶರಥಮಹಾರಾಜನು, ನಿನ್ನನ್ನು ನೋಡುವುದಕ್ಕಾಗಿ ವಿಮಾನವನ್ನೇರಿ ಮನುಷ್ಯಲೋಕಕ್ಕೆ ಬಂದಿರುವನು ನೋಡು ಶ್ರೀಮಂತನಾದ ಈತನು, ಸುಪುತ್ರನಾದ ನಿನ್ನಿಂದ, ಸತ್ಯಪ್ರತಿಜ್ಞನೆನಿಸಿಕೊಂಡು, ಇಂದ್ರಲೋಕವನ್ನು ಸೇರಿರುವನು. ನೀನು ನಿನ್ನ ತಮ್ಮನಾದ ಲಕ್ಷ್ಮಣನೊಡನೆ ಅವನಿಗೆ ನಮಸ್ಕಾರವನ್ನು ಮಾಡು" ಎಂದನು. ರುದ್ರನು ಹೇಳಿದ ಮಾತಿನಂತೆಯೇ ರಾಮಲಕ್ಷ್ಮಣರಿಬ್ಬರೂ, ವಿಮಾನಾರೂಢನಾಗಿದ್ದ ತಮ್ಮ ತಂದೆಗೆ ಪ್ರಣಾಮವನ್ನು ಮಾಡಿದರು. ಲೋಕಪ್ರಭುವಾದ ರಾಮನೂ ಲಕ್ಷ್ಮಣನೂ, ತಮ್ಮ ಮುಂದೆ ದಿವ್ಯವಸ್ತ್ರಧಾರಿಯಾಗಿ, ದಿವ್ಯಕಾಂತಿಯಿಂದ ಬೆಳಗುತ್ತಿದ್ದ ತಂದೆಯಾದ ದಶರಥನನ್ನು ಸಂತೋಷದಿಂದ ನೋಡಿದರು. ವಿಮಾನದಲ್ಲಿ ಉತ್ತಮಾಸನದ ಮೇಲೆ ಕುಳಿತಿದ್ದ ಮಹಾಬಾಹುವಾದ ದಶರಥನು, ತನಗೆ ಪ್ರಾಣಕ್ಕಿಂತಲೂ ಪ್ರಿಯತಮನಾದ ರಾಮನನ್ನು ನೋಡಿ ಸಂತೋಷದಿಂದುಕ್ಕುತ್ತ, ಮುಂದೆ ಬಂದು, ಆ ಪುತ್ರನನ್ನು ಕರೆದು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು, ಎರಡು ತೋಳುಗಳನ್ನೂ ನೀಡಿ ಪ್ರೀತಿಯಿಂದಾಲಿಂಗಿಸಿ ಈ ಮಾತನ್ನು ಹೇಳುವನು. "ವತ್ಸ ರಾಮಾ! ನಿನ್ನನ್ನಗಲಿದ ನನಗೆ ಆ ಸ್ವರ್ಗ ಭೋಗವಾಗಲಿ, ಈ ದೇವರ್ಷಿಗಳು ನಡೆಸತಕ್ಕ ಸನ್ಮಾನವಾಗಲಿ, ಅಷ್ಟಾಗಿ ತೃಪ್ತಿಯನ್ನುಂಟುಮಾಡುವುದಿಲ್ಲ! ಇದು ಸತ್ಯವಾದ ಮಾತು. ಆಣೆಯಿಟ್ಟು ಹೇಳುವೆನು. ಶತ್ರುಗಳನ್ನು ಕೊಂದು ವನವಾಸಪ್ರತಿಜ್ಞೆಯನ್ನು ತೀರಿಸಿ, ಕೃತಾರ್ಥನಾಗಿರುವ ನಿನ್ನನ್ನು ನೋಡಿ ನನಗೆ ಮೇಲೆಮೇಲೆ ಪ್ರೀತಿಯು ಉಕ್ಕಿ ಬರುತ್ತಿರುವುದು. ವತ್ಸಾ! ಕೈಕೇಯಿಯು ಹಿಂದೆ ನಿನ್ನನ್ನು ರಾಜ್ಯದಿಂದ ಹೊರಡಿಸುವುದಕ್ಕಾಗಿ ಯಾವಯಾವ ಮಾತುಗಳನ್ನಾಡಿದ್ದಳೋ, ಅವೆಲ್ಲವೂ ಇದುವರೆಗೆ ನನ್ನ ಮನಸ್ಸಿನಲ್ಲಿ ನಾಟಿ, ಶಲ್ಯದಂತೆ ಬಾಧಿಸುತ್ತಿದ್ದುವು. ಈಗ ನೀನು ಲಕ್ಷ್ಮಣಸಹಿತನಾಗಿ ಕ್ಷೇಮದಿಂದಿರುವುದನ್ನು ನೋಡಿ, ನಿಮ್ಮಿಬ್ಬರನ್ನೂ ಆಲಿಂಗಿಸಿಕೊಂಡಮೇಲೆ ಮಂಜಿನಿಂದ ಮುಕ್ತನಾದ ಸೂರ್ಯನಂತೆ, ಆ ಮಹಾದುಃಖದಿಂದ ನಾನು ನಿವೃತ್ತನಾದೆನು. ವತ್ಸ ರಾಮಾ! ಪೂರ್ವದಲ್ಲಿ ಅಷ್ಟಾವಕ್ರನು, ಜನಕಸಭೆಯಲ್ಲಿ ಕಹೋಳನೆಂಬ ಧರ್ಮಾತ್ಮನಾದ ಬ್ರಾಹ್ಮಣನಿಗೆ ತನ್ನ ವಾದದಿಂದ ಜಯವನ್ನು ಕೈಗೂಡಿಸಿ, ಆತನನ್ನುದ್ಧರಿಸಿದಂತೆ,

ಮಹಾತ್ಮನಾಗಿಯೂ ಸುಪುತ್ರನಾಗಿಯೂ ಇರುವ ನೀನು ಸತ್ಯಪಾಶಬದ್ಧನಾಗಿದ್ದ ನನ್ನನ್ನು, ಅಸತ್ಯದೋಷದಿಂದ ತಪ್ಪಿಸಿ ಕಾಪಾಡಿದೆ! ಎಲೆ ಸೌಮ್ಯನೆ! ಹಿಂದೆ ಈ ದೇವತೆಗಳೇ ರಾವಣವಧಕ್ಕಾಗಿ ಅಭಿಷೇಕವಿಘ್ನಾದಿಗಳನ್ನು ನಡೆಸಿದರೆಂಬುದು ಈಗಲೇ ನನಗೆ ತಿಳಿಯಿತು. ಪುರುಷೋತ್ತಮಾ! ಇನ್ನು ವನವಾಸದಿಂದ ಹಿಂತಿರುಗಿ ಮನೆಗೆ ಬಂದ ನಿನ್ನನ್ನು ಕೌಸಲ್ಯೆಯು ಪರಮಸಂತೋಷದಿಂದ ನೋಡುವುದರಿಂದ ಆಕೆಯು ಧನ್ಯಳು. ನೀನು ಇಲ್ಲಿಂದ ಅಯೋಧ್ಯೆಗೆ ಹೋಗಿ ಪಟ್ಟಾಭಿಷಿಕ್ತನಾದ ಮೇಲೆ, ಆ ಅಭಿಷೇಕಜಲದಲ್ಲಿ ನೆನೆದು ಸಾಮ್ರಾಜ್ಯ ತೇಜಸ್ಸಿನಿಂದ ಬೆಳಗುತ್ತಿರುವ ನಿನ್ನನ್ನು ನೋಡತಕ್ಕ ಜನರೆಲ್ಲರೂ ಭಾಗ್ಯಶಾಲಿಗಳು. ನಿನ್ನಲ್ಲಿ ಅತ್ಯಂತಾನುರಾಗವುಳ್ಳವನಾಗಿಯೂ, ಬಲಾಢ್ಯನಾಗಿಯೂ, ಶುಚಿಯಾಗಿಯೂ, ಧರ್ಮರತನಾಗಿಯೂ ಇರುವ ಆ ಭರತನೊಡನೆ ನೀನು ಕಲೆತಿರುವುದನ್ನು ನೋಡಬೇಕೆಂದು ನನಗೂ ಬಹಳ ಕುತೂಹಲವಿರುವುದು. ಆದುದರಿಂದ ಈಗಲೇ ನೀನು ಅತ್ಯವಶ್ಯವಾಗಿ ಹೋಗಿ ಆ ಭರತನೊಡನೆ ಸೇರಬೇಕು. ಎಲೈ ಸೌಮ್ಯನೇ! ನಿನ್ನ ಪ್ರಿಯಪತ್ನಿಯಾದ ಈ ಸೀತೆಯೊಡನೆಯೂ, ಧೀಮಂತನಾದ ಈ ಲಕ್ಷ್ಮಣನೊಡನೆಯೂ ಸೇರಿ, ಹದಿನಾಲ್ಕುವರ್ಷಗಳ ಅರಣ್ಯವಾಸಗಳನ್ನೂ ತೀರಿಸಿದೆ! ನಿನ್ನ ಪ್ರತಿಜ್ಞೆಯನ್ನೂ ಸಫಲಗೊಳಿಸಿದೆ! ಯುದ್ಧದಲ್ಲಿ ರಾವಣನನ್ನು ಕೊಂದು ದೇವತೆಗಳೆಲ್ಲರನ್ನೂ ಸಂತೋಷಪಡಿಸಿದೆ! ನಡೆಸಬೇಕಾದ ಕಾರ್ಯಗಳೆಲ್ಲವನ್ನೂ ನಡೆಸಿದಂತಾಯಿತು. ಇದರಿಂದ ಲೋಕವಿಖ್ಯಾತವಾದ ಕೀರ್ತಿಗೂ ನೀನು ಪಾತ್ರನಾದೆ! ಇನ್ನು ನಿನ್ನ ರಾಜ್ಯದಲ್ಲಿ ನೀನು ಪಟ್ಟಾಭಿಷಿಕ್ತನಾಗಿ, ನಿನ್ನ ತಮ್ಮಂದಿರೊಡಗೂಡಿ ಸುಖದಿಂದಿರು. ನೀವೆಲ್ಲರೂ ದೀರ್ಘಾಯುಷ್ಮಂತರಾಗಿ ರಾಜ್ಯಸುಖವನ್ನನುಭವಿಸಿರಿ" ಎಂದನು. ಆಗ ಶ್ರೀರಾಮನು ತನ್ನ ತಂದೆಯಾದ ದಶರಥಮಹಾರಾಜನ ಮುಂದೆ ಬದ್ಧಾಂಜಲಿಯಾಗಿ ನಿಂತು, "ಜನಕಾ! ನೀನು ಸಮಸ್ತ ಧರ್ಮಗಳನ್ನೂ ತಿಳಿದವನು. ಆದರೆ ಹಿಂದೆ ನೀನು ಕೈಕೇಯಿಯೊಡನೆ "ರಾಮನನ್ನು ಕಾಡಿಗೆ ಕಳುಹಿಸಿದ ಪಕ್ಷದಲ್ಲಿ, ನಿನ್ನನ್ನೂ ನಿನ್ನ ಪುತ್ರನಾದ ಭರತನನ್ನೂ ಏಕಕಾಲದಲ್ಲಿ ಪರಿತ್ಯಜಿಸುವೆನು'' ಎಂದು ಶಪಥಮಾಡಿದ್ದೆಯಲ್ಲವೆ? ಈಗಲಾದರೂ ಆ ವೈಮನಸ್ಯವನ್ನು ಬಿಟ್ಟು, ಕೈಕೇಯಿಯಲ್ಲಿಯೂ, ಭರತನಲ್ಲಿಯೂ ಅನುಗ್ರಹವನ್ನು ತೋರಿಸು. ಆ ನಿನ್ನ ಘೋರ

ವಾದ ಶಾಪವು, ಕೈಕೇಯಿಗೂ ಆಕೆಯ ಪುತ್ರನಾದ ಭರತನಿಗೂ ತಾಗದಂತೆ ಕೃಪೆಮಾಡು" ಎಂದನು. ಆಗ ದಶರಥರಾಜನು, ತನ್ನಮುಂದೆ ಕೈಜೋಡಿಸಿ ನಿಂತು ಹೀಗೆ ಪ್ರಾರ್ಥಿಸುತ್ತಿರುವ ರಾಮನನ್ನು ನೋಡಿ, 'ವತ್ಸಾ ರಾಮಾ! ನಿನ್ನಿಷ್ಟದಂತೆಯೇ ಆಗಲಿ' ಎಂದು ಹೇಳಿ, ಲಕ್ಷ್ಮಣನನ್ನು ಕರೆದು, ಪ್ರೀತಿಯಿಂದಾಲಿಂಗಿಸಿಕೊಂಡು, "ವತ್ಸ ಲಕ್ಷ್ಮಣಾ! ನಿನ್ನ ಜ್ಯೇಷ್ಠ ಸಹೋದರನಾದ ಈ ರಾಮನಿಗೂ, ವಿದೇಹಪುತ್ರಿಯಾದ ಈ ಸೀತೆಗೂ ಇದುವರೆಗೆ ಭಕ್ತಿಯಿಂದ ಶುಶ್ರೂಷೆಮಾಡಿ, ನನಗೆ ಪರಮಸಂತೋಷವನ್ನುಂಟುಮಾಡಿದೆ. ಇದರಿಂದ ನೀನೂ ಧರ್ಮಫಲವನ್ನು ಸಂಪಾದಿಸಿದೆ. ವತ್ಸನೆ! ಹೆಚ್ಚುಮಾತಿನಿಂದೇನು? ಈ ರಾಮನು ಪ್ರಸನ್ನನಾದ ಪಕ್ಷದಲ್ಲಿ, ನಿನಗೆ ಸಮಸ್ತ ಧರ್ಮಗಳೂ, ಲೋಕದಲ್ಲಿ ವಿಶಾಲವಾದ ಕೀರ್ತಿಯೂ, ಸ್ವರ್ಗವೂ, ಗೌರವವೂ, ಕೈಗೂಡಿಬರುವುವು. ಆದುದರಿಂದ, ಮುಂದೆಯೂ ನೀನು ಶಾಶ್ವತವಾಗಿ ಈ ರಾಮಶುಶ್ರೂಷೆಯೆಂಬ ಧರ್ಮದಲ್ಲಿಯೇ ನೆಲಸಿರಬೇಕು. ಇದರಿಂದ ನಿನಗೆ ಸರ್ವವಿಧದಿಂದಲೂ ಶುಭವುಂಟು! ಈ ರಾಮನು ಸಮಸ್ತಲೋಕಗಳಿಗೂ, ಯಾವಾಗಲೂ ಶುಭವನ್ನಾಚರಿಸುವುದರಲ್ಲಿಯೇ ಆಸಕ್ತಿಯುಳ್ಳವನು. ದೇವೇಂದ್ರನೊಡಗೂಡಿದ ಈ ಮೂರುಲೋಕಗಳೂ, ಸಿದ್ಧರೂ, ಮಹರ್ಷಿಗಳೂ, ತಾವಾಗಿ ಬಂದು ಮಹಾತ್ಮನಾಗಿಯೂ ಪುರುಷೋತ್ತಮನಾಗಿಯೂ ಇರುವ ಈ ರಾಮನನ್ನು ಸೇವಿಸಿ ಪೂಜಿಸುತ್ತಿರುವರು. ಸಮಸ್ತ ದೇವತಾಂತರ್ಯಾಮಿಯಾಗಿ ಅಗ್ನೀಂದ್ರಾದಿರೂಪದಿಂದ ಸರ್ವಕರ್ಮಾರಾಧ್ಯನಾಗಿಯೂ, ವೇದಾಂತವೇದ್ಯನಾಗಿಯೂ, ಭಕ್ತಿಶೂನ್ಯರಿಗೆ ಅಗೋಚರನಾಗಿಯೂ ಷಡ್ಭಾವ ವಿಕಾರರಹಿತನಾಗಿಯೂ ಒಪ್ಪುವ ಆ ಪರಬ್ರಹ್ಮವೇ ಈ ರಾಮರೂಪದಿಂದವತರಿಸಿರುವನೆಂದು ಈ ಬ್ರಹ್ಮಾದಿಗಳೇ ಹೇಳುವರಷ್ಟೆ? ಅಂತಹ ಈ ರಾಮನಿಗೂ, ಈ ಸೀತೆಗೂ, ನೀನು ಭಕ್ತಿಯಿಂದ ಶುಶ್ರೂಷೆಯನ್ನು ಮಾಡಿ, ಸರ್ವೋತ್ತಮವಾದ ಧರ್ಮವನ್ನೂ, ವಿಶಾಲವಾದ ಕೀರ್ತಿಯನ್ನೂ ಹೊಂದಿದೆ" ಎಂದನು. ತನ್ನ ಮುಂದೆ ಕೈಜೋಡಿಸಿ ನಿಂತಿದ್ದ ಲಕ್ಷ್ಮಣನನ್ನು ಪ್ರಶಂಸೆಮಾಡಿ, ಆ ಮೇಲೆ ಸೀತೆಯನ್ನು ಕರೆದು, "ವತ್ಸೆ! ಇದಕ್ಕೆ ಮೊದಲು ರಾಮನು ನಿನ್ನನ್ನು ಪರಿತ್ಯಜಿಸಿದುದಾಗಿ ಹೇಳಿದುದಕ್ಕಾಗಿ ನೀನು ಮನಸ್ಸಿನಲ್ಲಿ ಕೋಪವನ್ನಿಡಬಾರದು. ನಿನ್ನ ಚರಿತ್ರವು ಲೋಕದಲ್ಲಿ ನಿಷ್ಕಳಂಕವಾಗಿರಬೇಕೆಂಬುದಕ್ಕಾಗಿ, ಈ ನೆವದಿಂದ ನಿನ್ನ ಪಾರಿಶುದ್ಧ್ಯವನ್ನು

ಹೊರಪಡಿಸಿರುವನು. ಇದು ನಿನ್ನ ಪ್ರೀತಿಗಾಗಿಯೇ ಹೊರತು ಬೇರೆಯಲ್ಲ! ಎಲೆ ಸುಭ್ರು ! ಪತಿಶುಶ್ರೂಷೆಯ ವಿಷಯದಲ್ಲಿ ನಿನಗೆ ಬೇರೊಬ್ಬರು ಉಪದೇಶಿಸಬೇಕಾದುದೇನೂ ಇಲ್ಲ. ಹಾಗಿದ್ದರೂ ನಾನು ನಿನಗೆ ಮಾವನಾದುದರಿಂದ, ಒಂದೆರಡು ಮಾತುಗಳನ್ನು ಹೇಳಬೇಕಾದುದು ಲೋಕಮರ್ಯಾದೆಯು. ಮುಖ್ಯವಾಗಿ ಈ ರಾಮನೇ ನಿನಗೆ ಪರದೈವವು' ಎಂದನು. ಹೀಗೆ ದಶರಥರಾಜನು ತನ್ನ ಪುತ್ರರಾದ ರಾಮಲಕ್ಷ್ಮಣರಿಗೂ, ತನ್ನ ಸೊಸೆಯಾದ ಸೀತೆಗೂ ಹಿತವಾದವನ್ನು ಹೇಳಿ, ದಿವ್ಯಕಾಂತಿಯಿಂದ ಬೆಳಗುತ್ತ, ತನ್ನ ವಿಮಾನದೊಡನೆ ಇಂದ್ರಲೋಕವನ್ನು ಸೇರಿದನು.

ಇಲ್ಲಿಗೆ ನೂರಿಪ್ಪತ್ತೆರಡನೆಯ ಸರ್ಗವು.

ಯುದ್ಧದಲ್ಲಿ ಹತರಾದ ವಾನರಭಲ್ಲೂಕಾದಿ ಸೈನಿಕರೆಲ್ಲರೂ ಇಂದ್ರಾನುಗ್ರಹದಿಂದ ಪುನರ್ಜೀವವನ್ನು ಹೊಂದಿದುದು. ದೇವತೆಗಳು ರಾಮಾನುಮತಿಯಿಂದ ತಮ್ಮ ತಮ್ಮ ಸ್ಥಾನಗಳಿಗೆ ಹೋದುದು.

ಅತ್ತಲಾಗಿ ದಶರಥನು ಹಿಂತಿರುಗಿ ದೇವಲೋಕಕ್ಕೆ ಪ್ರಯಾಣಮಾಡಿದೊಡನೆ, ಇತ್ತಲಾಗಿ ದೇವೇಂದ್ರನು, ತನ್ನ ಮುಂದೆ ಬದ್ಧಾಂಜಲಿಯಾಗಿ ನಿಂತಿದ್ದ ರಾಮನನ್ನು ನೋಡಿ ಸಂತೋಷದಿಂದ "ರಾಮಾ ! ಪರಂತಪಾ ! ಮೊದಲು ದಶರಥನು ಪುತ್ರಕಾಮೇಷ್ಟಿಯನ್ನು ಮಾಡಿದಾಗ [1]ನಿನ್ನನ್ನು ನಾವು ದರ್ಶನಮಾಡಿ ಪ್ರಾರ್ಥಿಸಿಕೊಂಡುದು ಇಂದಿಗೆ ಸಫಲವಾಯಿತು. ನಾವು ಸಂತುಷ್ಟರಾದೆವು. ಈಗ ನಿನ್ನ ಮನಸ್ಸಿಗೆ ತೋರಿದುದನ್ನು ಕೇಳು. ನಿನ್ನ ಕೋರಿಕೆಯನ್ನು ನಾನು ನಡೆಸಿಕೊಡುವೆನು'' ಎಂದನು. ಆಗ ರಾಮನು, ಸೀತಾಲಕ್ಷ್ಮಣಸಹಿತನಾಗಿ ದೇವೇಂದ್ರನ ಮುಂದೆ ಕೈಜೋಡಿಸಿ ನಿಂತು, "ದೇವೇಂದ್ರಾ ! ಹಾಗೆ ನಿನಗೆ ನಮ್ಮಲ್ಲಿ ಪ್ರೀತಿಯಿದ್ದ ಪಕ್ಷದಲ್ಲಿ ನನ್ನ ಕೋರಿಕೆಯನ್ನು ತಿಳಿಸುವೆನು. ನನ್ನ ಪ್ರಾರ್ಥನೆಯಂತೆ ನಡೆಸಿ, ನೀನು ಕೊಟ್ಟ,

---

[1] "ಈಗ ನೀನು ನಮ್ಮನ್ನು ನೋಡಿದುದು ವ್ಯರ್ಥವಾಗಬಾರದು. ಇದರ ಗುರುತಿಗಾಗಿ ನಿನಗೆ ಬೇಕಾದ ವರವನ್ನು ಕೇಳು | ಕೊಡುವೆವು" ಎಂದು ಇಲ್ಲಿ ಅರ್ಥಾಂತರವನ್ನೂ ಗ್ರಹಿಸಬಹುದು.

ಮಾತನ್ನು ಕಾಪಾಡಿಕೊಳ್ಳುವನಾಗು! ನನಗಾಗಿ ಈ ಯುದ್ಧದಲ್ಲಿ ತಮ್ಮ ಪರಾಕ್ರಮವನ್ನು ತೋರಿಸಿ ಮೃತಿಯನ್ನು ಹೊಂದಿ ಲೋಕಾಂತರಗತರಾದ ಈ ವಾನರರೆಲ್ಲರೂ ತಿರುಗಿ ಬದುಕಿಕೊಳ್ಳುವಂತೆ ಅನುಗ್ರಹಿಸು! ಈ ವಾನರರೆಲ್ಲರೂ ನನಗಾಗಿ ತಮ್ಮ ದೇಹದಾಸೆಯನ್ನೂ ಬಿಟ್ಟು ಯುದ್ಧಮಾಡಿದವರು! ನನಗಾಗಿ ತಮ್ಮ ಪತ್ನಿ ಪುತ್ರಾದಿಗಳನ್ನೂ ತ್ಯಜಿಸಿ ಬಂದವರು. ನನ್ನ ಕಾರ್ಯಕ್ಕಾಗಿಯೇ ಈಗ ತಮ್ಮ ಪ್ರಾಣಗಳನ್ನೂ ಒಪ್ಪಿಸಿರುವರು. ಆದುದರಿಂದ ನನ್ನ ಪ್ರಿಯಕ್ಕಾಗಿ ತಮ್ಮ ಪ್ರಾಣವನ್ನೊಪ್ಪಿಸಿರುವ ಈ ವಾನರರೆಲ್ಲರೂ, ತಿರುಗಿ ಜೀವವನ್ನು ಹೊಂದಿ ತಮ್ಮ ಪುತ್ರಮಿತ್ರಕಳತ್ರಾದಿಗಳೊಡನೆ ಸೇರಿ ಸುಖದಿಂದಿರುವಂತೆ ಅನುಗ್ರಹಿಸಬೇಕು! ಇದೇ ನಾನು ನಿನ್ನಿಂದ ಪಡೆಯಬೇಕಾದ ವರವು. ಮತ್ತು ಎಲೆ ಮಹಾತ್ಮಾ! ಈ ವಾನರರಿಗೆ ದೇಹದಲ್ಲಿ ಸ್ವಲ್ಪವಾದರೂ ಬಾಧೆಯಾಗಲಿ ಗಾಯಗಳಾಗಲಿ ಇಲ್ಲದೆ, ಮೊದಲಿನಂತೆ ಇವರೆಲ್ಲರೂ ಬಲಪರಾಕ್ರಮಸಂಪನ್ನರಾಗಿರುವುದನ್ನು ನೋಡಬೇಕೆಂಬುದೇ ನನ್ನ ಕೋರಿಕೆ. ಇದಲ್ಲದೆ ಈ ವಾನರರಿರತಕ್ಕ ಸ್ಥಳಗಳೆಲ್ಲವೂ ಅಕಾಲಗಳಲ್ಲಿಯೂ ಫಲಮೂಲಗಳಿಂದ ಸಮೃದ್ಧವಾಗಿ, ಇವರು ವಾಸಮಾಡತಕ್ಕ ಸ್ಥಳಗಳಲ್ಲಿ ನದಿಗಳು ಯಾವಾಗಲೂ ನಿರ್ಮಲ ಜಲದಿಂದ ಶೋಭಿಸುತ್ತಿರಬೇಕು" ಎಂದನು. ಇದನ್ನು ಕೇಳಿ ದೇವೇಂದ್ರನು ಪ್ರೀತಿಸೂಚಕವಾದ ಮಾತಿನಿಂದ ರಾಮನನ್ನು ಕುರಿತು, "ವತ್ಸ ರಾಮಾ! ಕೈಕಾಲುಗಳೆಲ್ಲವೂ ಭಿನ್ನ ಭಿನ್ನವಾಗಿ, ಅವಯವಭೇದಗಳೇ ಕಾಣದಂತೆ ನಾನಾಕಡೆಗಳಿಗೆ ಚದರಿಬಿದ್ದಿರುವ ಈ ವಾನರರ ದೇಹವನ್ನು ಮೊದಲಿನಂತೆ ಕೂಡಿಸಿ, ಲೋಕಾಂತರಗತವಾದ ಅವರ ಜೀವವನ್ನು ತಿರುಗಿ ತಂದು ಸೇರಿಸುವುದೇನೋ ಸುಲಭಕಾರ್ಯವಲ್ಲ! ನೀನು ಕೇಳಿದ ಈ ವರವೇನೋ ಬಹಳ ದೊಡ್ಡದು! ಹಾಗಿದ್ದರೂ ನಾನು ಇದುವರೆಗೆ ಹಿಂದೆ ಯಾವಾಗಲೂ ಎರಡು ಮಾತನ್ನಾಡಿದವನಲ್ಲ. ಆದುದರಿಂದ ನಿನ್ನ ಕೋರಿಕೆಯಂತೆಯೇ ಆಗಲಿ. ಈ ಯುದ್ಧದಲ್ಲಿ ರಾಕ್ಷಸರಿಂದ ಹತರಾಗಿ ಕೈಕಾಲುಗಳು ಮುರಿದು ಬಿದ್ದಿರುವ ಈ ಭಲ್ಲೂಕಗಳೂ, ಈ ಗೋಲಾಂಗೂಲಗಳೂ, ಪುನರ್ಜೀವವನ್ನು ಹೊಂದಲಿ. ಇಲ್ಲಿ ಹತರಾದ ವಾನರರೆಲ್ಲರೂ ದೇಹದಲ್ಲಿ ಯಾವ ಬಾಧೆಯೂ ಇಲ್ಲದೆ, ನಿದ್ರೆತಿಳಿದೆದ್ದವರಂತೆ ಮೇಲಕ್ಕೇಳಲಿ! ಮೊದಲಿನಂತೆಯೇ ಇವರು ಬಲಪರಾಕ್ರಮ ಸಂಪನ್ನರಾಗಲಿ! ಈ ವಾನರರೆಲ್ಲರೂ ಪರಮಸಂತುಷ್ಟರಾಗಿ ತಮ್ಮ ತಮ್ಮ ಬಂಧುಮಿತ್ರರೊಡನೆಯೂ,

ಜ್ಞಾತಿಗಳೊಡನೆಯೂ ಸೇರಿ ಸುಖಿಸಲಿ! ಈ ವಾನರರು ವಾಸಮಾಡ ತಕ್ಕ ಸ್ಥಳಗಳೆಲ್ಲವೂ ಅಕಾಲದಲ್ಲಿಯೂ ಬಗೆಬಗೆಯ ಪುಷ್ಪಫಲಗಳಿಂದ ಸಮೃದ್ಧವಾಗಿ, ಅಲ್ಲಿನ ನದಿಗಳೆಲ್ಲವೂ ನಿರ್ಮಲಜಲದಿಂದ ತುಂಬಿರಲಿ! ಅವರ ದೇಹದಲ್ಲಿರುವ ಗಾಯಗಳೆಲ್ಲವೂ ನಿವೃತ್ತವಾಗಲಿ" ಎಂದನು. ಇಂದ್ರನ ಬಾಯಿಂದ ಈ ಮಾತು ಹೊರಡುತ್ತಿರುವಾಗಲೇ, ಅಲ್ಲಿ ಸತ್ತುಬಿದ್ದಿದ್ದ ಸಮಸ್ತ ವಾನರರೂ ಬದುಕಿ ನಿದ್ರೆಯಿಂದೆದ್ದಂತೆ ಮೇಲೆದ್ದರು. ಹೀಗೆ ಮೃತರಾಗಿ ಬಿದ್ದ ವಾನರರು ಮೇಲೆದ್ದು ನಿಂತುದನ್ನು ನೋಡಿ, ಅಲ್ಲಿದ್ದ ಇತರ ವಾನರ ರೆಲ್ಲರೂ ಅತ್ಯಾಶ್ಚರ್ಯಗೊಂಡರು. ಇತ್ತಲಾಗಿ ಇಂದ್ರಾನುಗ್ರಹದಿಂದ ಜೀವಿತ ರಾದ ವಾನರರೆಲ್ಲರೂ ಮುಂದೆ ಬಂದು, ರಾಮನಿಗೆ ನಮಸ್ಕರಿಸಿದರು. ರಾಮನು ಹೀಗೆ ತನ್ನ ಸರ್ವಾಭೀಷ್ಟಗಳನ್ನೂ, ಹೊಂದಿ ಸಂತುಷ್ಟನಾದು ದನ್ನು ನೋಡಿ, ದೇವತೆಗಳೆಲ್ಲರೂ ಸೇರಿ ಅವನನ್ನು ಮೊದಲು ನಾನಾ ವಿಧವಾಗಿ ಸ್ತುತಿಸಿ, ಆ ಮೇಲೆ ಲಕ್ಷ್ಮಣನೂ ಕೇಳುತ್ತಿರುವಹಾಗೆ ರಾಮ ನನ್ನು ಕುರಿತು, "ಎಲೆ ವೀರಾಗ್ರಣೀ! ಇನ್ನು ನೀನು ಶೀಘ್ರದಲ್ಲಿಯೇ ಅಯೋಧ್ಯೆಗೆ ಹೊರಡು! ಈ ವಾನರರನ್ನು ಅವರವರ ಸ್ಥಳಕ್ಕೆ ಕಳು ಹಿಸಿಬಿಡು! ರಾಮಾ! ನಿನ್ನಲ್ಲಿ ಪೂರ್ಣಾನುರಾಗವುಳ್ಳವಳಾಗಿರುವ ಈ ಜನಕಪುತ್ರಿಯು ಈಗ ನಡೆಸಿದ ಅಗ್ನಿಪ್ರವೇಶರೂಪವಾದ ಕಾರ್ಯವನ್ನು ನೋಡಿ ನಮಗೆ ಮಹತ್ತಾದ ಅನುತಾಪವುಂಟಾಗಿರುವುದು. ಇದುವರೆಗೆ ಬಹಳ ಕಷ್ಟದಲ್ಲಿ ಸಿಕ್ಕಿ ನೊಂದಿರುವ ಈ ಸೀತೆಯನ್ನು ನೀನೇ ಸಮಾಧಾನ ಪಡಿಸಬೇಕಲ್ಲದೆ ಈಗಲೇ ಅಯೋಧ್ಯೆಗೆ ಹೋಗಿ ನಿನ್ನ ಮಾತೆಯರನ್ನೂ, ಮಹಾತ್ಮನಾದ ಶತ್ರುಘ್ನನನ್ನೂ, ನಿನ್ನ ವಿರಹದುಃಖದಿಂದ ತಾಪಸವ್ರತ ವನ್ನು ಧರಿಸಿ ನಿನ್ನ ಪ್ರತ್ಯಾಗಮನವನ್ನೇ ನಿರೀಕ್ಷಿಸುತ್ತಿರುವ ನಿನ್ನ ತಮ್ಮ ನಾದ ಭರತನನ್ನೂ ನೋಡಿ ಅವರನ್ನೂ ಸಂತೋಷಪಡಿಸಬೇಕು. ಮತ್ತು ನೀನು ಅಯೋಧ್ಯೆಯಲ್ಲಿ ಪಟ್ಟಾಭಿಷಿಕ್ತನಾಗಿ ಪುರಜನರೆಲ್ಲರನ್ನೂ ಆನಂದ ಪಡಿಸು" ಎಂದನು. ಆಮೇಲೆ ಅಲ್ಲಿ ನೆರೆದಿದ್ದ ಸಮಸ್ತದೇವತೆಗಳೂ, ರಾಮ ಲಕ್ಷ್ಮಣರ ಅನುಜ್ಞೆಯನ್ನು ಪಡೆದು, ಪರಮಸಂತುಷ್ಟರಾಗಿ, ಸೂರ್ಯವರ್ಚ ಸ್ಸುಳ್ಳ ತಮ್ಮ ತಮ್ಮ ವಿಮಾನಗಳನ್ನೇರಿ [1] ದೇವಲೋಕದಕಡೆಗೆ ಹೊರ

[1] ಇಲ್ಲಿ ಪ್ರಥಮೆಯಲ್ಲಿ ರಾವಣಸಂಸ್ಕಾರವಾದಮೇಲೆ, ದ್ವಿತೀಯೆಯಲ್ಲಿ ವಿಭೀಷ ಣಾಭಿಷೇಕವೂ ಸೀತಾಪ್ರಾಪ್ತಿಯೂ ನಡೆದು, ಆ ದಿನವೇ ದೇವತೆಗಳನ್ನು ಹಿಂದಕ್ಕೆ ಕಳುಹಿಸಿದುದಾಗಿ ಗ್ರಾಹ್ಯವು.

ಟರು. ರಾಮನೂ ಕೂಡ ಲಕ್ಷ್ಮಣ ಸಹಿತನಾಗಿ ಆ ದೇವಶ್ರೇಷ್ಠರೆಲ್ಲರಿಗೂ ನಮಸ್ಕರಿಸಿ, ಅವರೆಲ್ಲರನ್ನೂ ಕಳುಹಿಸಿದಮೇಲೆ, ಇತ್ತಲಾಗಿ ತನ್ನ ಕಡೆಯ ವಾನರಸೈನ್ಯವನ್ನು ನೋಡಿ, ವಿಶ್ರಾಂತಿಯನ್ನು ತೆಗೆದುಕೊಳ್ಳುವಂತೆ ಆಜ್ಞಾ ಪಿಸಿದನು. ಜಯವನ್ನು ಹೊಂದಿ ಕೀರ್ತಿಯನ್ನು ಪಡೆದ ಆ ವಾನರಸೈನ್ಯ ವೆಲ್ಲವೂ ಪರಮಸಂತೋಷಗೊಂಡು, ಚಂದ್ರನಿಂದ ಪ್ರಕಾಶಿಸುವ ಶುಕ್ಲಪಕ್ಷ ರಾತ್ರಿಯಂತೆ ರಾಮಲಕ್ಷ್ಮಣರಿಂದ ಪಾಲಿತವಾಗಿ ಶೋಭಿಸುತ್ತಿತ್ತು.

ಇಲ್ಲಿಗೆ ನೂರಿಪ್ಪತ್ತಮೂರನೆಯ ಸರ್ಗವು.

ವಿಭೀಷಣನು ರಾಮನಿಗೆ ಮಂಗಳಸ್ನಾನಮಾಡಿಸುವುದಾಗಿ ಪ್ರಾರ್ಥಿ ಸಲು, ರಾಮನು ಭರತನನ್ನುಬಿಟ್ಟು ತಾನು ಅದನ್ನು ನಡೆಸಲಾರೆ ನೆಂದು ಹೇಳಿದುದು. ತಿರುಗಿ ವಿಭೀಷಣನು ರಾಮನನ್ನು ಲಂಕೆಯಲ್ಲಿ ಎರಡು ಮೂರು ದಿನಗಳಿದ್ದು ಹೋಗಬೇಕೆಂದು ಪ್ರಾರ್ಥಿಸಲು ರಾಮನು ಅದಕ್ಕೂ ಒಪ್ಪದೆ, ಭರತನನ್ನು ನೋಡುವ ಆತುರದಿಂದ ಪ್ರಯಾಣಕ್ಕಾಗಿ ಪುಷ್ಪಕವಿಮಾನವನ್ನು ತರುವಂತೆ ಹೇಳಿದುದು.

ಬ್ರಹ್ಮಾದಿದೇವತೆಗಳು ತಮ್ಮತಮ್ಮ ಸ್ಥಾನಗಳಿಗೆ ಹೋದಮೇಲೆ, ಆ ರಾತ್ರಿಯೆಲ್ಲವೂ ರಾಮನು ಲಂಕೆಯಲ್ಲಿಯೇ ಸುಖವಾಗಿ ನಿದ್ರಿಸುತ್ತಿದ್ದು, ಬೆಳಗಾದಮೇಲೆ ಎಚ್ಚರಗೊಂಡನು. ಈ ಸಮಯದಲ್ಲಿ ವಿಭೀಷಣನು ಬದ್ಧಾಂ ಜಲಿಯಾಗಿ ಬಂದು ಜಯಶಬ್ದವನ್ನು ಹೇಳಿ, "ಮಹಾಪ್ರಭೂ! ನಿನಗಾಗಿ ಸ್ನಾನಯೋಗ್ಯವಾದ ಜಲವನ್ನು ತರಿಸಿರುವೆನು. ಕುಂಕುಮಕೇಸರಿ ಮೊದ ಲಾದ ಅನುಲೇಪನಗಳನ್ನೂ ಸಿದ್ಧಪಡಿಸಿರುವೆನು. ವಸ್ತ್ರಭೂಷಣಗಳನ್ನೂ, ದಿವ್ಯಚಂದನಗಳನ್ನೂ ನಾನಾವಿಧ ಪುಷ್ಪಮಾಲಿಕೆಗಳನ್ನೂ ತರಿಸಿರುವೆನು ಅಲಂಕರಿಸುವುದರಲ್ಲಿ ಸಮರ್ಥರಾದ ಸ್ತ್ರೀಯರನ್ನೂ ಕರೆಸಿರುವೆನು. ಕಮಲ ನೇತ್ರೆಯರಾದ ಈ ಸ್ತ್ರೀಯರೆಲ್ಲರೂ ಉಪಚಾರಪೂರ್ವಕವಾಗಿ ನಿನ್ನನ್ನು ಸ್ನಾನಮಾಡಿಸುವರು. ನೀನಾಗಿ ಇವುಗಳನ್ನಿಷ್ಟಪಡದಿದ್ದರೂ, ನನ್ನಲ್ಲಿ ಅನು ಗ್ರಹಬುದ್ಧಿಯಿಂದಾದರೂ ಇವುಗಳನ್ನು ಪ್ರತಿಗ್ರಹಿಸಬೇಕು" ಎಂದನು. ಆಗ

ರಾಮನು ವಿಭೀಷಣನನ್ನು ಕುರಿತು, 'ವಿಭೀಷಣಾ! ನನ್ನ ಸಂಗತಿಗಳು ಹಾಗಿರಲಿ! ಮೊದಲು ಈ ಸುಗ್ರೀವಾದಿ ವಾನರರನ್ನು ಸ್ನಾನಾರ್ಥವಾಗಿ ಕರೆದುಕೊಂಡು ಹೋಗು! ಈಗ ನನಗೆ ಇವೊಂದರಲ್ಲಿಯೂ ಅಪೇಕ್ಷೆಯಿಲ್ಲ. ಅಲ್ಲಿ ಮಹಾಬಾಹುವಾದ ಆ ಭರತನು ಬಹಳವಾಗಿ ಕಷ್ಟಪಡುತ್ತಿರುವನು. ಬಹಳ ಸುಕುಮಾರನಾಗಿಯೂ, ಬಾಲನಾಗಿಯೂ ಇರುವ ಆ ನನ್ನ ಪ್ರಿಯಸಹೋದರನು ಬಾಲ್ಯದಿಂದ ಸುಖದಲ್ಲಿಯೇ ಬೆಳೆದವನಾಗಿದ್ದರೂ ಈಗ ನನಗಾಗಿ ತಾಪಸ ಧರ್ಮವನ್ನು ಹಿಡಿದು ಹದಿನಾಲ್ಕುವರ್ಷಗಳಿಂದಲೂ ಕಷ್ಟಪಡುತ್ತಿರುವನು. ಈ ಹದಿನಾಲ್ಕುವರ್ಷಗಳು ಮುಗಿಯುವಷ್ಟರಲ್ಲಿ ನನ್ನನ್ನು ಕಾಣದಿದ್ದರೆ ಅಗ್ನಿಪ್ರವೇಶಮಾಡುವುದಾಗಿಯೂ ಪ್ರತಿಜ್ಞೆ ಮಾಡಿರುವನು. ಮಾಡಿದಪ್ರತಿಜ್ಞೆಯನ್ನು ಅವನು ಎಂದಿಗೂ ತಪ್ಪುವವನಲ್ಲ. ಧರ್ಮನಿರತನಾದ ಆ ಕೈಕೇಯಿಪುತ್ರನೇ ಈಗ ನನ್ನ ಸ್ನಾನಕ್ಕೆ ಪ್ರಥಮೋಪಕರಣದಂತಿರುವಾಗ, ಅವನಿಲ್ಲದೆ ನಾನು ಹೇಗೆ ಸ್ನಾನಮಾಡಬಲ್ಲೆನು? ಅವನನ್ನು ಬಿಟ್ಟು ನನಗೆ ಸ್ನಾನವಾಗಲಿ, ವಸ್ತ್ರಾಭರಣಗಳಾಗಲಿ ಯಾವುದೂ ರುಚಿಸವು. ನನ್ನನ್ನಗಲಿದದುಕ್ಕಾಗಿ ಅವನು ಎಷ್ಟೋ ದೃಢವ್ರತವನ್ನು ಹಿಡಿದಿರುವಾಗ ನಾನು ಮಾತ್ರ ಆ ವ್ರತವನ್ನು ಬಿಡುವುದು ಯುಕ್ತವೆ? ವಿಭೀಷಣಾ! ಇದೇ ಅಲ್ಲವೇ ಅಯೋಧ್ಯೆಗೆ ಹೋಗುವ ಮಾರ್ಗವು! ಇದು ಬಹಳದೂರವಾದುದರಿಂದ ಹೋಗಿ ಸೇರುವುದಕ್ಕೆ ಬಹಳ ಕಷ್ಟವಾಗುವುದು. ಆದುದರಿಂದ ಶೀಘ್ರದಲ್ಲಿಯೇ ಹೊರಟು ಅಯೋಧ್ಯೆಯನ್ನು ಸೇರುವೆನು" ಎಂದನು. ಅದಕ್ಕಾ ವಿಭೀಷಣನು "ರಾಜೇಂದ್ರಾ! ಅದರ ಚಿಂತೆ ನಿನಗೇಕೆ ? ಮಾರ್ಗವು ಎಷ್ಟೇ ದುರ್ಗಮವಾಗಿದ್ದರೂ ಒಂದೇ ದಿನಕ್ಕೆ ನಿನ್ನನ್ನು ಅಯೋಧ್ಯೆಗೆ ಸೇರಿಸುವೆನು. ಸೂರ್ಯಪ್ರಕಾಶವುಳ್ಳ ಪುಷ್ಪಕವಿಮಾನವು ಈಗ ನನ್ನಲ್ಲಿರುವುದು. ಅದು ನನ್ನಣ್ಣನಾದ ಕುಬೇರನಿಗೆ ಸೇರಿದುದು. ಅದನ್ನು ರಾವಣನು ಕುಬೇರನಿಂದ ತಂದಿಟ್ಟುಕೊಂಡಿರುವನು. ಆದರೆ ಮೋಸದಿಂದಪಹರಿಸಿ ತಂದುದಲ್ಲ. ಕುಬೇರನನ್ನು ಯುದ್ಧದಲ್ಲಿ ಜಯಿಸಿಯೇ ತಂದಿರುವನು. ರಾಮಾ! ನಿನಗೆ ಮಂಗಳವಾಗಲಿ! ಸರ್ವೋತ್ತಮವಾದ ಆ ವಿಮಾನವು ದಿವ್ಯಶಕ್ತಿಯುಳ್ಳದಾದುದರಿಂದ, ಮನಸ್ಸಿನಲ್ಲಿ ಉದ್ದೇಶಿಸಿದ ಸ್ಥಳಕ್ಕೆ ನಿಮಿಷಮಾತ್ರದಲ್ಲಿ ತಂದು ಬಿಡುವುದು. ಒಂದುವೇಳೆ ಈ ಸಮಯದಲ್ಲಿ ನನ್ನಣ್ಣನಾದ ಕುಬೇರನೇ ಬಂದು ನನ್ನನ್ನು ನಿರ್ಬಂಧಪಡಿಸಿದರೂ, ನಾನು ಅದನ್ನು ಕೊಡು

ವವನಲ್ಲ. ನನ್ನ ಸ್ವೋಪಯೋಗಕ್ಕಾಗಿ ಅದನ್ನು ನಾನು ನಿಲ್ಲಿಸಿಕೊಂಡವನಲ್ಲ. ನಿನ್ನನ್ನು ಅಯೋಧ್ಯೆಗೆ ಕಳುಹಿಸಿಕೊಡುವುದಕ್ಕಾಗಿಯೇ ಅದನ್ನು ನನ್ನಲ್ಲಿ ರಿಸಿಕೊಂಡಿರುವೆನು. ಮೇಘದಂತೆ ಆಕಾಶದಲ್ಲಿ ಮಹಾವೇಗದಿಂದ ಸಂಚರಿಸ ತಕ್ಕ ಆ ಪುಷ್ಪಕವಿಮಾನವು, ಅದೋ! ಅಲ್ಲಿರುವುದು. ನೀನು ಅದನ್ನೇರಿ ನಿಶ್ಚಿಂತನಾಗಿ ಅಯೋಧ್ಯೆಗೆ ಸೇರಬಹುದು. ರಾಮಾ! ನೀನು ಸ್ನಾನಾದಿ ಗಳನ್ನು ಪ್ರತಿಗ್ರಹಿಸದಿದ್ದರೂ ಹೋಗಲಿ! ನೀನೋ ಮಹಾಪ್ರಾಜ್ಞನು. ಲೋಕದಲ್ಲಿ ನಿನಗೆ ತಿಳಿಯದುದಿಲ್ಲ. ಈಗ ನೀನು ನನ್ನಲ್ಲಿ ಅನುಗ್ರಹ ವನ್ನು ತೋರಿಸಬಹುದಾದರೆ, ನನ್ನ ಭಕ್ತ್ಯಾದಿಗುಣಗಳೆಲ್ಲವೂ ನಿನ್ನ ಮನ ಸ್ಸಿಗೆ ಒಪ್ಪಿದ್ದರೆ, ನನ್ನಲ್ಲಿ ನಿನಗೆ ಪ್ರೀತಿಯೂ ಇದ್ದರೆ, ನಿನ್ನ ತಮ್ಮ ನಾದ ಲಕ್ಷ್ಮಣನೂ, ನಿನ್ನ ಪತ್ನಿಯಾದ ಸೀತೆಯೂ, ಈ ಲಂಕೆಯಲ್ಲಿದ್ದು ಹೋಗಬೇಕು. ನಾನು ಮನಸ್ತೃಪ್ತಿಯಿಂದ ಮಾಡತಕ್ಕ ಸತ್ಕಾರಗ ಳನ್ನು ಸ್ವೀಕರಿಸಿ, ಆ ಮೇಲೆ ನಿಮ್ಮ ಪಟ್ಟಣಕ್ಕೆ ಹೊರಡ ಬಹುದು. ಬೇಕಾದ ಸಾಮಗ್ರಿಗಳೆಲ್ಲವನ್ನೂ ಇಷ್ಟರಲ್ಲಿಯೇ ಸಿದ್ಧಪಡಿ ಸಿರುವೆನು. ಅದಕ್ಕಾಗಿಯೂ ಕಾಲನಿರೀಕ್ಷಣೆಯು ಬೇಕಾದುದಿಲ್ಲ. ಆದು ದರಿಂದ ಈಗ ನಾನು ಪ್ರೀತಿಯಿಂದ ಸಿದ್ಧಪಡಿಸಿರುವ ಸತ್ಕಾರಗಳನ್ನು ನೀನು ನಿನ್ನ ಸಮಸ್ತ ಸೈನಿಕರೊಡನೆಯೂ, ನಿನ್ನ ಮಿತ್ರರೊಡನೆಯೂ ಬಂದು ಪ್ರತಿಗ್ರಹಿಸಬೇಕು! ನೀನು ನನ್ನ ಪ್ರಾರ್ಥನೆಯನ್ನು ತಪ್ಪದೆ ನಡೆಸುವೆಯೆಂಬ ನಂಬಿಕೆಯಿಂದಲೂ, ನೀನು ತೋರಿಸುತ್ತಿರುವ ಸಲಿಗೆ ಯಿಂದಲೂ, ನನಗೆ ನಿನ್ನಲ್ಲಿರುವ ಭಕ್ತಿಬಲದಿಂದಲೂ, ನಿನ್ನ ಭೃತ್ಯನಾದ ನಾನು ಈ ಕಾರ್ಯಕ್ಕಾಗಿ ನಿನ್ನನ್ನು ಪ್ರಾರ್ಥಿಸಿಕೊಳ್ಳುವೆನೇ ಹೊರತು ನಿರ್ಬಂ ಧಿಸಿ ಆಜ್ಞಾಪಿಸುವೆನೆಂದು ತಿಳಿಯಬೇಡ!" ಎಂದನು. ಈ ಮಾತನ್ನು ಕೇಳಿ ರಾಮನು ಆ ವಾನರರಾಕ್ಷಸರೆಲ್ಲರೂ ಕೇಳುವಹಾಗೆ ವಿಭೀಷಣನನ್ನು ಕುರಿತು "ಎಲೆ ಸೌಮ್ಯ! ಇದುವರೆಗೆ ನೀನು ನನಗೆ ಮಾಡಿದ ಸಾಹಾಯ್ಯಗಳು, ನನಗಾಗಿ ಯುದ್ಧದಲ್ಲಿ ನೀನು ತೋರಿಸಿದ ಪೌರುಷಕಾರ್ಯಗಳು, ನನ್ನಲ್ಲಿ ನಿನಗಿರುವ ಅಸಾಧಾರಣವಾದ ಭಕ್ತಿ, ಇವುಗಳಿಂದಲೇ ನಾನು ಸರ್ವವಿಧ ದಲ್ಲಿಯೂ, ನಿನ್ನಸತ್ಕಾರವನ್ನು ಹೊಂದಿದಂತಾಯಿತು. ನಿನ್ನ ಮಾತುಗಳನ್ನು ನಾನು ಎಂದೆಂದಿಗೂ ತೆಗೆಯತಕ್ಕವನಲ್ಲ! ಹಾಗಿದ್ದರೂ ಪ್ರಕೃತಸ್ಥಿತಿಯು ನನ್ನನ್ನು ನಿರೋಧಿಸುವುದು. ರಾಕ್ಷಸೇಶ್ವರಾ! ಹಿಂದೆ ನಾನು ಒಂದೇ ಸಂಕಲ್ಪ

ದಿಂದ ಅಯೋಧ್ಯೆಯನ್ನು ಬಿಟ್ಟು ವನವಾಸಕ್ಕಾಗಿ ಹೊರಟುಬಂದಮೇಲೆಯೂ, ಯಾವನು ನನ್ನನ್ನು ಕಾಡಿನಿಂದ ಹಿಂತಿರುಗಿಸಿ ಪಟ್ಟಣಕ್ಕೆ ಕರೆದುಕೊಂಡು ಹೋಗುವುದಕ್ಕಾಗಿ ಚಿತ್ರಕೂಟದವರೆಗೆ ಹಿಂಬಾಲಿಸಿ ಬಂದನೋ, ಯಾವನು ಪಟ್ಟಾಭಿಷಿಕ್ತನಾಗೆಂದು ನನಗೆ ಬಾರಿಬಾರಿಗೂ ತಲೆ ಬಗ್ಗಿಸಿ ಪ್ರಾರ್ಥಿಸಿದನೋ, ಆ ಸ್ಥಿತಿಯಲ್ಲಿಯೂ ನಾನು ಯಾವನ ಮಾತನ್ನು ನಿರಾಕರಿಸಿ ಹೊರಟುಬಂದೆನೋ, ಅಂತಹ ಪರಮಭಕ್ತನಾದ ಪ್ರಿಯಸಹೋದರನಾದ ಆ ಭರತನನ್ನು ನೋಡಬೇಕೆಂದು ನನ್ನ ಮನಸ್ಸು ಬಹಳವಾಗಿ ತವಕಪಡುತ್ತಿರುವುದು. ಇದಲ್ಲದೆ ಅಯೋಧ್ಯೆಯಲ್ಲಿ ಅನವರತವೂ ನನ್ನ ವಿಷಯವಾಗಿ ಚಿಂತಿಸುತ್ತಿರುವ ನನ್ನ ತಾಯಿಯಾದ ಕೌಸಲ್ಯೆಯನ್ನೂ ಸುಮಿತ್ರೆಯನ್ನೂ, ಯಶಸ್ವಿನಿಯಾದ ಕೈಕೇಯಿಯನ್ನೂ, ಗುರುಗಳನ್ನೂ, ಮಿತ್ರರನ್ನೂ ಪುರಜನವನ್ನೂ ನೋಡಬೇಕೆಂಬ ಆತುರವು ನನಗೆ ಬಹಳವಾಗಿರುವುದು. ಆದುದರಿಂದ ನನಗಾಗಿ ನೀನು ಈಗಲೇ ಪುಷ್ಪಕವಿಮಾನವನ್ನು ಕರೆತರಿಸಬೇಕು. ನಡೆಸಬೇಕಾದ ಕಾರ್ಯವನ್ನು ನಡೆಸಿದ ಮೇಲೆ ಇಲ್ಲಿರುವುದಕ್ಕೆ ಹೇಗೆತಾನೇ ನನಗೆ ಮನಸ್ಸು ತಡೆಯುವುದು. ವಿಭೀಷಣಾ! ನನಗೆ ಅನುಮತಿಯನ್ನು ಕೊಡು! ಈಗ ನೀನು ವಿಮಾನವನ್ನು ಕಳುಹಿಸಿಕೊಟ್ಟರೆ ನನಗೆ ಸರ್ವವಿಧದಿಂದಲೂ ಸತ್ಕರಿಸಿದಂತಾಯಿತು. ಇದಕ್ಕಾಗಿ ನೀನು ಕೋಪಿಸಕೂಡದು. ಬೇಗನೆ ಹೊರಡುವುದಕ್ಕೆ ಅನುಮತಿಯನ್ನು ಕೊಡು!" ಎಂದನು. ರಾಮಾಜ್ಞೆಗೆ ಬದ್ಧನಾಗಿ ವಿಭೀಷಣನು, ಆಗಲೇ ಹೋಗಿ ವಿಮಾನವನ್ನು ತರಿಸಿಕೊಂಡು ಹಿಂತಿರುಗಿ ಬಂದನು. ಆ ಪುಷ್ಪಕ ವಿಮಾನದ ಮಹಾದ್ಭುತವಾದ ದಿವ್ಯಸೌಂದರ್ಯವನ್ನು ಕೇಳಬೇಕೆ? ಸರ್ವಾವಯವಗಳಲ್ಲಿಯೂ ಸುವರ್ಣಮಯಗಳಾದ ಚಿತ್ರಕಾರ್ಯಗಳು! ನಡುವೆ ವೈಡೂರ್ಯಮಯವಾದ ವೇದಿಕೆ! ಅದರ ಸುತ್ತಲೂ ಅನೇಕಾನೇಕ ರತ್ನಮಂಟಪಗಳು! ಬುಡದಿಂದ ಕೊನೆಯವರೆಗೂ ಬೆಳ್ಳಿಯಂತೆ ಅತಿ ಶುಭ್ರವಾದ ದಿವ್ಯಕಾಂತಿ! ಮೇಲೆತ್ತಿಕಟ್ಟಿದ ಬಿಳೀಬಣ್ಣದ ಧ್ವಜಪತಾಕೆಗಳು. ನಡುನಡುವೆ ಅಲ್ಲಲ್ಲಿ ಸುವರ್ಣಮಯಗಳಾದ ಒಳಮನೆಗಳು! ಸುತ್ತಲೂ ತೂಗಾಡುತ್ತಿರುವ ಸುವರ್ಣಕಮಲಮಾಲಿಕೆಗಳು! ಅಲ್ಲಲ್ಲಿ, ಮುತ್ತಿನ ಕಿಟಿಕಿಗಳು! ಮೂಲೆಮೂಲೆಗಳಲ್ಲಿ ಘಣಘಣಿಸುತ್ತಿರುವ ಮಹಾ ಘಂಟೆಗಳು! ಹೀಗೆ ಸರ್ವಶೋಭಾಸ್ಪದವಾಗಿ, ಶ್ರಾವ್ಯವಾದ ಘಂಟಾಧ್ವನಿಗಳಿಂದೊಪ್ಪುವ ವಿಮಾನವು

ಬಂದು ನಿಂತಿತು. ವಿಶ್ವಕರ್ಮನಿರ್ಮಿತವಾಗಿ, ಮೇರುಶಿರಾಕಾರವಾದ ಆ ವಿಮಾನದ ಯಾವಕಡೆಯಲ್ಲಿ ನೋಡಿದರೂ ಚಿನ್ನ ಬೆಳ್ಳಿಯ ಉಪ್ಪರಿಗೆಗಳು! ಸ್ಫಟಿಕದ ಚಿತ್ರಾವಯವಗಳು! ವೈಡೂರ್ಯದ ಚಿತ್ರಾಸನಗಳಿಂದಲಂಕೃತಗಳಾದ ದೊಡ್ಡ ದೊಡ್ಡ ಉತ್ತಮ ಪೀಠಗಳು! ಹೀಗೆ ಸರ್ವಾಲಂಕಾರಭೂಷಿತವಾಗಿ, ಎಂತವರಿಗೂ ದುರ್ಭೇದ್ಯವಾಗಿ, ಮನೋವೇಗದಿಂದೊಪ್ಪುತ್ತಿದ್ದ ಪುಷ್ಪಕವಿಮಾನವು ಸಿದ್ಧವಾಗಿರುವ ಸಂಗತಿಯನ್ನು ವಿಭೀಷಣನು ರಾಮನಲ್ಲಿ ವಿಜ್ಞಾಪಿಸಿ ಅದರ ಮೇಲೆ ರಾಮಾಜ್ಞೆಯೇನೆಂದು ನಿರೀಕ್ಷಿಸುತ್ತ ಅಲ್ಲಿಯೇ ನಿಂತಿದ್ದನು.

ಇಲ್ಲಿಗೆ ನೂರಿಪ್ಪತ್ತನಾಲ್ಕನೆಯ ಸರ್ಗವು.

ರಾಮಾಜ್ಞೆಯಿಂದ ವಿಭೀಷಣನು ಸಮಸ್ತ ವಾನರರನ್ನೂ ಬಹುಮಾನಿಸಿದುದು. ಶ್ರೀರಾಮನು ತನ್ನೊಡನೆ ಬರಬೇಕೆಂದಪೇಕ್ಷಿಸಿದ ಸುಗ್ರೀವಾದಿ ವಾನರರೊಡನೆಯೂ ವಿಭೀಷಣನೊಡನೆಯೂ, ಆತನ ಮಂತ್ರಿಗಳೊಡನೆಯೂ ಸೇರಿ, ಸೀತಾಲಕ್ಷ್ಮಣ ಸಹಿತನಾಗಿ ಪುಷ್ಪಕವನ್ನೇರಿ ಅಯೋಧ್ಯೆಗೆ ಪ್ರಯಾಣಮಾಡಿದುದು.

ವಿಭೀಷಣನು, ಪುಷ್ಪಮಾಲಿಕೆಗಳಿಂದಲಂಕೃತವಾದ ಆ ಪುಷ್ಪಕವಿಮಾನವು ಬಂದು ನಿಂತಿರುವುದನ್ನು ರಾಮನಿಗೆ ತೋರಿಸಿ ಅವನ ಸಮೀಪದಲ್ಲಿ ಬದ್ಧಾಂಜಲಿಯಾಗಿ ವಿನಯದಿಂದ ಬಗ್ಗಿನಿಂತು, ಆತುರದಿಂದ ಆ ರಾಮನನ್ನು ಕುರಿತು, "ರಾಜೇಂದ್ರಾ! ಇನ್ನು ನನಗೇನಪ್ಪಣೆ?" ಎಂದನು. ಇದನ್ನು ಕೇಳಿ ಮಹಾ ತೇಜಸ್ವಿಯಾದ ರಾಮನು, ತನಗೆ ತಾನೇ ಮನಸ್ಸಿನಲ್ಲಿ ಸ್ವಲ್ಪಹೊತ್ತಿನವರೆಗೆ ಆಲೋಚಿಸಿ, ಲಕ್ಷ್ಮಣನ ಕಿವಿಗೂ ಬೀಳುವಂತೆ ಆತನನ್ನು ಕುರಿತು 'ವಿಭೀಷಣಾ! ಈ ವಾನರರು ಕಷ್ಟಸಾಧ್ಯವಾದ ಅನೇಕ ಕಾರ್ಯಗಳನ್ನು ತಮ್ಮಿಂದ ಸಾಧ್ಯವಾದಷ್ಟು ಪ್ರಯತ್ನಪಟ್ಟು ನಿರ್ವಹಿಸಿರುವರು. ಆದುದರಿಂದ ನೀನು ನಾನಾವಿಧ ರತ್ನಗಳನ್ನೂ, ವಸ್ತ್ರಾಭರಣಗಳನ್ನೂ ಕೊಟ್ಟು, ಇವರನ್ನು ಮೊದಲು ಸತ್ಕರಿಸಬೇಕು. ರಾಕ್ಷಸೇಶ್ವರಾ! ಈ ವಾನರರು ಯುದ್ಧಕ್ಕೆ ಹಿಂಜರಿಯದೆ, ತಮ್ಮ ಪ್ರಾಣದಮೇಲೆಯೂ ಆಸೆಯಿಡದೆ

ಇದುವರೆಗೆ ದೇವತೆಗಳಿಂದಲೂ ಜಯಿಸಲಸಾಧ್ಯವಾಗಿದ್ದ ಈ ಲಂಕೆಯನ್ನು ಪ್ರಯತ್ನದಿಂದ ಸಾಧಿಸಿರುವರು. ಇವರ ಸಾಹಾಯ್ಯದಿಂದಲೇ ನಾವು ಜಯಿಸಿದೆವೇ ಹೊರತು ಬೇರೆಯಲ್ಲ. ನಿನಗೂ ಇವರಿಂದಲೇ ಆ ಲಂಕಾರಾಜ್ಯವು ಕೈಸೇರಿತೆಂದು ಹೇಳಬಹುದು. ಹೀಗೆ ದೊಡ್ಡಕಾರ್ಯವನ್ನು ಸಾಧಿಸಿದ ಈ ವಾನರರೆಲ್ಲರನ್ನೂ ನೀನು ಅವಶ್ಯವಾಗಿ ಸತ್ಕರಿಸಿ ಪೂಜಿಸಬೇಕು. ಧನಗಳನ್ನೂ ರತ್ನಗಳನ್ನೂ ಕೊಟ್ಟು ಇವರ ಪ್ರಯಾಸಕ್ಕೆ ತಕ್ಕ ಪ್ರತಿಫಲವನ್ನು ತೋರಿಸಬೇಕು. ನೀನು ಆ ಕೃತಜ್ಞತೆಯನ್ನಿಟ್ಟು ಸಮ್ಮಾನಾರ್ಹರಾದ ಈ ವಾನರವೀರರೆಲ್ಲರನ್ನೂ ಅವರ ಪ್ರಯಾಸಕ್ಕೆ ತಕ್ಕಂತೆ ಸಮ್ಮಾನಿಸಿದ ಪಕ್ಷದಲ್ಲಿ, ಇವರೆಲ್ಲರೂ ಪೂರ್ಣಮನೋರಥರಾಗಿ ಸಂತೋಷದಿಂದಿರುವರು. ನೀನು ಈ ಕಾರ್ಯವನ್ನು ನಡೆಸಿದ ಪಕ್ಷದಲ್ಲಿ ಲೋಕದ ಜನವೆಲ್ಲವೂ ನಿನ್ನನ್ನು ಬಹಳ ಉದಾರನೆಂದೂ, ತ್ಯಾಗದಿಂದ ಮಿತ್ರರನ್ನು ಸಂಗ್ರಹಿಸತಕ್ಕವನೆಂದೂ ದಯಾಳುವೆಂದೂ, ಬಹಳ ಯಶಸ್ವಿಯೆಂದೂ ಎಣಿಸುವರು. ಈ ವಿಷಯದಲ್ಲಿ ನಿನ್ನನ್ನು ನಾನು ನಿರ್ಬಂಧಿಸುವುದಾಗಿ ತಿಳಿಯಬೇಡ. ನಾನು ನಿನಗೆ ಇದನ್ನು ಜ್ಞಾಪಿಸುವೆನೇ ಹೊರತು ಆಜ್ಞಾಪಿಸುವವನಲ್ಲ. ಸೇವಕರಲ್ಲಿ ತಕ್ಕಷ್ಟು ಅನುರಾಗಾದಿಗುಣಗಳಿಲ್ಲದೆ, ಕೇವಲ ದಯಾಶೂನ್ಯನಾಗಿ, ಕೋಪವನ್ನೇ ಹಿಡಿದು ಅವರನ್ನು ಹಿಂಸಿಸತಕ್ಕ ರಾಜರನ್ನು ಭೃತ್ಯವರ್ಗಗಳೆಲ್ಲವೂ ಸಮಯದಲ್ಲಿ ಕೈಬಿಡುವುವು. ಅವನ ದುರ್ಗುಣಕ್ಕಾಗಿ ಯಾವಾಗಲೂ ಮನಸ್ಸಿನಲ್ಲಿ ಕೊರಗುತ್ತಿರುವುವು. ಆದುದರಿಂದ ರಾಜನಾದವನು ಸೇವಕರನ್ನು ಕಾಲೋಚಿತವಾಗಿ ಸತ್ಕರಿಸುತ್ತಿರುವುದೇ ಮೇಲು" ಎಂದನು. ರಾಮನು ಈ ಮಾತನ್ನು ಹೇಳಿದೊಡನೆ ವಿಭೀಷಣನು ಸಮಸ್ತ ವಾನರರನ್ನೂ ಕರೆದು, ಅವರವರ ಯೋಗ್ಯತೆಗೆ ತಕ್ಕಂತೆ ರತ್ನಗಳನ್ನೂ, ಧನಗಳನ್ನೂ ವಿಭಾಗಿಸಿಕೊಟ್ಟು ಅವರನ್ನು ಸತ್ಕರಿಸಿದನು. ಹೀಗೆ ವಾನರಸೈನಿಕರೆಲ್ಲರೂ ಧನರತ್ನಾದಿಗಳಿಂದ ಸತ್ಕೃತರಾದುದನ್ನು ನೋಡಿ ರಾಮನು ಪರಮಸಂತುಷ್ಟನಾಗಿ, ಪುಷ್ಪಕವಿಮಾನವನ್ನೇರಿದನು. ಲಜ್ಜೆಯಿಂದ ಸಮೀಪದಲ್ಲಿ ನಿಂತಿದ್ದ ಸೀತೆಯನ್ನೂ ತಾನೇ ತೊಡೆಗೆ ಕೈಕೊಟ್ಟು ಮೇಲಕ್ಕೆತ್ತಿ ಕುಳ್ಳಿರಿಸಿಕೊಂಡನು. ತನ್ನ ಬಿಲ್ಲನ್ನು ಹಿಡಿದು ನಿಂತಿದ್ದ ವೀರಶಾಲಿಯಾದ ಲಕ್ಷ್ಮಣನನ್ನೂ ಕರೆದು ಆ ವಿಮಾನದಲ್ಲಿ ಕುಳ್ಳಿರಿಸಿಕೊಂಡನು. ಹೀಗೆ ಈ ಮೂವರೂ ಪುಷ್ಪಕವಿಮಾನವನ್ನೇರಿ ಕುಳಿತಮೇಲೆ, ರಾಮನು ಅಲ್ಲಲ್ಲಿ ನಿಂತಿದ್ದ ಸಮಸ್ತ ವಾನ

ರರನ್ನೂ ಉಪಚಾರವಾಕ್ಯದಿಂದ ಮನ್ನಿಸುತ್ತ, ವೀರ್ಯಶಾಲಿಯಾದ ಸುಗ್ರೀವನನ್ನೂ, ವಿಭೀಷಣನನ್ನೂ ಬಹುಮಾನಪುರಸ್ಕರವಾಗಿ ನೋಡಿ, ಮುಂದಿದ್ದ ಸಮಸ್ತ ಸೈನಿಕರನ್ನೂ ಸಂಬೋಧಿಸಿ, ಈ ಮಾತನ್ನು ಹೇಳುವನು. 'ಎಲೈ ವಾನರೋತ್ತಮರೆ! ನೀವು ಮಿತ್ರನಾದ ನನ್ನಲ್ಲಿ ತೋರಿಸಬೇಕಾದ ಪ್ರೀತಿಗೆ ತಕ್ಕಂತೆ ನನಗಾಗಿ ಈ ಅಸಾಧ್ಯಕಾರ್ಯವನ್ನು ನಡೆಸಿದಿರಿ! ಇನ್ನು ನಿಮ್ಮೆಲ್ಲರಿಗೂ ಅನುಜ್ಞೆಯನ್ನು ಕೊಟ್ಟಿರುವೆನು! ನಿಮ್ಮಿಷ್ಟದಂತೆ ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ ಸುಖದಿಂದಿರಬಹುದು. ಪರಂತಪಾ! ಸುಗ್ರೀವಾ! ನೀನು ಅಧರ್ಮಭೀರುವಾಗಿ, ಹಿತೈಷಿಯಾದ ಮಿತ್ರನು ಯಾವಕಾರ್ಯವನ್ನು ನಡೆಸಬೇಕೋ ಅವೆಲ್ಲವನ್ನೂ ತಪ್ಪದೆ ನಡೆಸಿದೆ. ಇನ್ನು ನೀನು ನಿನ್ನ ಸೈನ್ಯಗಳೊಡನೆ ಕಿಷ್ಕಿಂಧೆಗೆ ಹೋಗಿ, ಸುಖದಿಂದಿರಬಹುದು. ವಿಭೀಷಣಾ! ಈಗ ನಿನಗಾಗಿ ನಾವು ಸಾಧಿಸಿಕೊಟ್ಟಿರುವ ಈ ನಿನ್ನ ಸ್ವರಾಜ್ಯದಲ್ಲಿಯೇ ತೃಪ್ತನಾಗಿ ಆ ರಾವಣನಂತೆ ದುರಾಸೆಯಿಂದ ಇತರ ರಾಜ್ಯಗಳನ್ನಾಕ್ರಮಿಸುವುದಕ್ಕೆ ಹೋಗದೆ ಈ ಲಂಕೆಯಲ್ಲಿಯೇ ಸುಖದಿಂದಿರು. ಹಾಗಿದ್ದ ಪಕ್ಷದಲ್ಲಿ ದೇವೇಂದ್ರನೊಡಗೂಡಿ ದೇವತೆಗಳೇ ದಂಡೆತ್ತಿ ಬಂದರೂ ನಿನ್ನನ್ನು ಕದಲಿಸಲಾರರು. ಇನ್ನು ನಾನೂ ನನ್ನ ತಂದೆಯ ರಾಜಧಾನಿಯಾದ ಅಯೋಧ್ಯೆಗೆ ಹೋಗಿ ಸೇರುವೆನು. ಇನ್ನು ನೀವೆಲ್ಲರೂ ನನಗೆ ಅನುಜ್ಞೆಯನ್ನು ಕೊಟ್ಟು ಕಳುಹಿಸಬೇಕು' ಎಂದನು. ರಾಮನು ಈ ಮಾತನ್ನು ಹೇಳಿದ ಮೇಲೆ ಬಲಾಢ್ಯರಾದ ಸುಗ್ರೀವಾದಿ ವಾನರರೂ, ವಿಭೀಷಣನೂ, ರಾಮನ ಮುಂದೆ ಕೈಜೋಡಿಸಿ ನಿಂತು, 'ರಾಮಾ! ಈ ಸ್ಥಿತಿಯಲ್ಲಿ ನಾವು ನಿನ್ನನ್ನು ಬಿಟ್ಟು ಹೋಗಲಾರೆವು. ನಾವೂ ನಿನ್ನೊಡನೆ ಅಯೋಧ್ಯೆಗೆ ಬರುವೆವು. ಕೃಪೆಯಿಟ್ಟು ನಮ್ಮನ್ನೂ ಕರೆದುಕೊಂಡು ಹೋಗಬೇಕು. ನಾವು ಅಯೋಧ್ಯೆಗೆ ಬಂದಮಾತ್ರಕ್ಕೆ ನಮ್ಮಿಂದ ಅಲ್ಲಿನ ಜನಪದಾದಿಗಳಿಗೆ ಬಾಧೆಯಾಗುವುದೆಂದೆಣಿಸಬೇಡ. ಯಾರಿಗೂ ಯಾವಬಾಧೆಯೂ ಇಲ್ಲದಂತೆ ಮನೆಗಳಲ್ಲಿಯೂ ನಗರಗಳಲ್ಲಿಯೂ ಎಚ್ಚರಿಕೆಯಿಂದ ನಡೆದುಕೊಳ್ಳುವೆವು. ರಾಜಕುಮಾರಾ! ನಿನಗೆ ಅಭಿಷೇಕಸ್ನಾನವಾಗುವುದನ್ನು ನಮ್ಮ ಕಣ್ಣಾರೆ ನೋಡಿ ಸಂತೋಷಪಟ್ಟು, ನಿನ್ನ ತಾಯಿಯಾದ ಕೌಸಲ್ಯೆಗೂ ನಮಸ್ಕರಿಸಿ, ಒಡನೆಯೇ ನಾವು ಹಿಂತಿರುಗಿ ನಮ್ಮ ನಮ್ಮ ಮನೆಗಳಿಗೆ ಹೋಗಿ ಸೇರುವೆವು" ಎಂದರು. ವಿಭೀಷಣ ಸುಗ್ರೀವಾದಿಗಳೆಲ್ಲರೂ ಹೀಗೆ ಪ್ರಾರ್ಥಿಸಲು, ಧರ್ಮಾತ್ಮ

ನಾದ ಶ್ರೀರಾಮನು ಅವರ ಮಾತಿಗೆ ಸಂತೋಷಪಟ್ಟು 'ಎಲೆ ವೀರರೆ! ಸರಿ! ಹಾಗೆಯೇ ಆಗಲಿ! ಇದುವರೆಗೆ ನೀವು ನನಗೆ ನಡೆಸಿದ ಪ್ರಿಯಕ್ಕಿಂತಲೂ, ಈಗ ನೀವು ಹೇಳಿದ ಮಾತು ನನಗೆ ಇನ್ನೂ ವಿಶೇಷ ಪ್ರಿಯತಮವಾಗಿದೆ. ನಿಮ್ಮೆಲ್ಲರೊಡನೆ ಕಲೆತು ಭರತನೇ ಮೊದಲಾದ ನಮ್ಮ ಬಂಧುಗಳನ್ನೂ ಸಂಗಡ ಕರೆದುಕೊಂಡು, ಅಯೋಧ್ಯಾಪುರಕ್ಕೆ ಪ್ರವೇಶಿಸ ತಕ್ಕ ಸಂತೋಷವನ್ನು ಅನುಭವಿಸಬೇಕೆಂಬುದೇ ನನಗೂ ಉದ್ದೇಶವು. ಶೀಘ್ರದಲ್ಲಿ ನೀವೂ ನಿಮ್ಮ ಕಡೆಯ ವಾನರರೊಡನೆ ಪುಷ್ಪಕವನ್ನೇರಿರಿ. ವಿಭೀಷಣಾ! ನೀನೂ ನಿನ್ನ ಮಂತ್ರಿಗಳೊಡನೆ ವಿಮಾನವನ್ನೇರು!" ಎಂದನು. ರಾಮನ ಬಾಯಿಂದ ಈ ಮಾತುಗಳು ಹೊರಟೊಡನೆ, ವಾನರರೆಲ್ಲರೂ ಬೇಗನೆ ಪುಷ್ಪಕವನ್ನೇರಿದರು. ವಿಭೀಷಣನೂ ತನ್ನ ಮಂತ್ರಿಗಳೊಡನೆ ವಿಮಾನವನ್ನೇರಿ ಕುಳಿತನು. ಇವರೆಲ್ಲರೂ ಕುಳಿತು ಸಿದ್ಧವಾದ ಮೇಲೆ, ಕುಬೇರನ ವಿಮಾನವಾದ ಆ ಪುಷ್ಪಕವು, ರಾಮಾಜ್ಞೆಯಿಂದ ಥಟ್ಟನೆ ಅಂತರಿಕ್ಷಕ್ಕೆ ಹಾರಿತು. ಶ್ರೀರಾಮನು ಪರಮಸಂತುಷ್ಟಾಂತರಂಗನಾಗಿ ಹಂಸ ಪ್ರತಿಮೆಗಳಿಂದ ಶೋಭಿತವಾದ ಆ ವಿಮಾನದಲ್ಲಿ ಕುಳಿತು, ದೇವಸಮೂಹದಿಂದ ಪರಿವೃತನಾದ ಕುಬೇರನಂತೆ ಶೋಭಿಸುತ್ತಿದ್ದನು. ಆ ಪುಷ್ಪಕವು ದೇವನಿರ್ಮಿತವಾದುದರಿಂದ ಎಷ್ಟೆಷ್ಟು ಜನರು ಕುಳಿತರೂ ಸಂಕೋಚವಿಲ್ಲದೆ ಆಯಾ ಜನಗಳ ಸೌಖ್ಯಕ್ಕೆ ತಕ್ಕಂತೆ ವಿಸ್ತಾರವನ್ನು ಹೊಂದುತ್ತಿದ್ದುದರಿಂದ, ಬಲಾಢ್ಯರಾದ ಆ ವಾನರ ರಾಕ್ಷಸರೆಲ್ಲರೂ ಅದರಲ್ಲಿ ಸ್ವಲ್ಪಮಾತ್ರವೂ ಇಕ್ಕಟ್ಟಿಲ್ಲದೆ ಸುಖವಾಗಿ ಕುಳಿತು ಪ್ರಯಾಣಮಾಡಿದರು.

ಇಲ್ಲಿಗೆ ನೂರಿಪ್ಪತ್ತೈದನೆಯ ಸರ್ಗವು.

ರಾಮನು ವಿಮಾನವನ್ನೇರಿ ಬರುವಾಗ ದಾರಿಯಲ್ಲಿ ಲಂಕೆಯಿಂದ ಅಯೋಧ್ಯೆಯವರೆಗೆ ಅಲ್ಲಲ್ಲಿನ ವಿಶೇಷಗಳನ್ನು ಸೀತೆಗೆ ತಿಳಿಸುತ್ತ ಬಂದುದು. ಕಿಷ್ಕಿಂಧೆಯ ಸಮೀಪದಲ್ಲಿ ಸೀತಾ ಪ್ರಾರ್ಥನೆಯಿಂದ ಸುಗ್ರೀವಾದಿ ವಾನರ ಪತ್ನಿಯರನ್ನೂ ಪುಷ್ಪಕದಲ್ಲಿ ಏರಿಸಿಕೊಂಡು ಎಲ್ಲರೊಡನೆ ಭರದ್ವಾಜಾಶ್ರಮವನ್ನು ಸೇರಿದುದು.

ರಾಮನು ಅನುಜ್ಞೆಯನ್ನು ಕೊಟ್ಟೊಡನೆ, ಸರ್ವೋತ್ತಮವಾದ ಆ ಪುಷ್ಪಕ ವಿಮಾನವು ಬಿರುಗಾಳಿಯಿಂದ ಹಾರಿಸಲ್ಪಟ್ಟ ಮಹಾಮೇಘದಂತೆ

ಅತಿವೇಗದಿಂದ ಆಕಾಶಕ್ಕೆ ಹಾರಿತು. ಆಗ ಶ್ರೀರಾಮನು ನಾಲ್ಕುದಿಕ್ಕುಗಳಿಗೂ ದೃಷ್ಟಿಯನ್ನಿಟ್ಟು ನೋಡುತ್ತ, ಚಂದ್ರಮುಖಿಯಾದ ಸೀತೆಯನ್ನು ಕುರಿತು "ದೇವಿ ! ಇದೋ ! ಕೈಲಾಸ ಶಿಖರವನ್ನು ಹೋಲುವ ಈ ತ್ರಿಕೂಟ ಶಿಖರದ ಮೇಲಿರುವ ಲಂಕಾಪಟ್ಟಣವನ್ನು ನೋಡು. ಇದು ವಿಶ್ವಕರ್ಮನಿಂದ ನಿರ್ಮಿತವಾದುದು. ಇದೋ ಇಲ್ಲಿ ರಕ್ತಮಾಂಸಗಳಿಂದ ತುಂಬಿದ ಈ ಪ್ರದೇಶವೇ ಯುದ್ಧಭೂಮಿಯು. ಅಲ್ಲಿ ಅನೇಕ ವಾನರರಾಕ್ಷಸರು ಹತರಾದರು. ಬ್ರಹ್ಮವರದಿಂದ ಕೊಬ್ಬಿ ಸಮಸ್ತಲೋಕಗಳನ್ನೂ ಗೋಳಾಡಿಸುತ್ತಿದ್ದ ರಾಕ್ಷಸರಾಜನಾದ ರಾವಣನು ನಿನ್ನ ದಶೆಯಿಂದ ನನ್ನಿಂದ ಹತನಾಗಿ ಇದೋ ಇಲ್ಲಿ ಸತ್ತು ಬಿದ್ದಿರುವನು ನೋಡು ! ಇದೋ ಈ ಸ್ಥಳದಲ್ಲಿ ನಾನು ಕುಂಭಕರ್ಣನನ್ನು ಕೊಂದೆನು. ಇಲ್ಲಿ ಪ್ರಹಸ್ತನನ್ನು ಕೊಂದೆನು. ಇಲ್ಲಿ ಹನುಮಂತನಿಂದ ಧೂಮ್ರಾಕ್ಷನೆಂಬ ರಾಕ್ಷಸನು ಹತನಾದನು. ಇದೋ ಇಲ್ಲಿ ಚೆನ್ನಾಗಿ ಕಣ್ಣಿಟ್ಟು ನೋಡು- ಮಹಾತ್ಮನಾದ ಸುಷೇಣನು ಈ ಸ್ಥಳದಲ್ಲಿ ವಿದ್ಯುನ್ಮಾಲಿಯೆಂಬ ರಾಕ್ಷಸನನ್ನು ಕೊಂದನು. ಇದೋ ಈ ಸ್ಥಳದಲ್ಲಿ ರಾವಣಪುತ್ರನಾದ ಇಂದ್ರಜಿತ್ತು ಲಕ್ಷ್ಮಣನಿಂದ ಹತನಾದನು. ಈ ಸ್ಥಳದಲ್ಲಿ ಅಂಗದನು ವಿಕಟನೆಂಬ ರಾಕ್ಷಸನನ್ನು ಕೊಂದನು. ಇದೋ ! ಇಲ್ಲಿ ವಿರೂಪಾಕ್ಷನೂ, ಇಲ್ಲಿ ದುರ್ಧರ್ಷನೂ, ಇಲ್ಲಿ ಮಹಾಪಾರ್ಶ್ವನೂ, ಇತ್ತಲಾಗಿ ಮಹೋದರನೂ. ಅದೋ ಅಲ್ಲಿ ಅಕಂಪನನೂ ಹತರಾದರು. ಇನ್ನೂ ಬಲಾಢ್ಯರಾದ ಅನೇಕರಾಕ್ಷಸರು ಇಲ್ಲಿ ವಧಿಸಲ್ಪಟ್ಟರು. ದೇವಿ ! ಇದೋ ನೋಡು ! ಇತ್ತಲಾಗಿ ರಾವಣನ ಪಟ್ಟಮಹಿಷಿಯಾದ ಮಂಡೋದರಿಯು, ತನ್ನ ಸಾವಿರಾರು ಸವತಿಯರೊಡನೆ ಸೇರಿ, ತನ್ನ ಪತಿಮರಣಕ್ಕಾಗಿ ಬಹಳವಾಗಿ ಕಣ್ಣೀರುಬಿಟ್ಟು ವಿಲಪಿಸುತ್ತಿದ್ದಳು. ಸುಂದರಾಂಗಿ ! ಇದೋ ! ಈ ಸಮುದ್ರತೀರಪ್ರದೇಶವನ್ನು ನೋಡು. ನಾವು ಸಮುದ್ರವನ್ನು ದಾಟಿದಮೇಲೆ ಇಲ್ಲಿಯೇ ಆ ದಿನ ರಾತ್ರಿಯೆಲ್ಲವನ್ನೂ ಕಳೆದೆವು. ವಿಶಾಲಾಕ್ಷಿ ! ನಿನಗಾಗಿ ನಾನು ಈ ಮಹಾಸಮುದ್ರದಲ್ಲಿ ಈ ನಳನ ಕೈಯಿಂದ ಕಟ್ಟಿಸಿದ ದುರ್ಭೇದ್ಯವಾದ ದೊಡ್ಡ ಸೇತುವು ಇದೋ ಕಾಣುತ್ತಿರುವುದು ನೋಡು. ವೈದೇಹಿ ! ವರುಣನಿಗೆ ನಿವಾಸವಾಗಿರುವ ಅಕ್ಷೋಭ್ಯವಾದ ಈ ಮಹಾಸಮುದ್ರವನ್ನು ನೋಡಿದೆಯಾ ? ಕೊನೆಮೊದಲಿಲ್ಲದ ಅದರ ವಿಸ್ತಾರವನ್ನು ನೋಡು ! ಅದರಲ್ಲಿರುವ ಶಂಖಗಳನ್ನೂ, ಮುತ್ತಿನ

ಚಿಪ್ಪುಗಳನ್ನೂ ನೋಡು! ಸೀತೆ! ಮೊದಲು ಹನುಮಂತನು ಈ ಸಮುದ್ರವನ್ನು ಹಾರಿಬರುವಾಗ, ಅವನಿಗೆ ವಿಶ್ರಾಂತಿಯನ್ನು ಕೊಡುವುದಕ್ಕಾಗಿ, ಸಮುದ್ರಮಧ್ಯದಿಂದ ಮೇಲೆದ್ದು ಬಂದ ಸುವರ್ಣಮಯವಾದ ಮೇನಕಾಪರ್ವತವು ಇದೋ! ಇನ್ನೂ ಅಲ್ಲಿ ಕಾಣುತ್ತಿರುವುದು ನೋಡು. ಇದೋ ಇಲ್ಲಿ ಸಮುದ್ರಮಧ್ಯದಲ್ಲಿ ಸೇತುವಿನಮೇಲೆ ಈ ಸ್ಥಳದಲ್ಲಿಯೇ ನಮ್ಮ ವಾನರಸೇನೆಯನ್ನು ನಿಲ್ಲಿಸಿದ್ದೆವು. ಮಹಾಮಹಿಮೆಯುಳ್ಳ ಈ ಸಮುದ್ರದಲ್ಲಿ ಸೇತುಬಂಧವೆಂಬ ಪರಿಶುದ್ಧವಾದ ಕ್ಷೇತ್ರವು ಇದೋ ಕಾಣುವುದು ನೋಡು. ಮೂರುಲೋಕಗಳಿಗೂ ಇದು ಪೂಜ್ಯವೆನಿಸಿರುವುದು. ಮುಂದಕ್ಕೂ ಇದು ಎಂದೆಂದಿಗೂ ಪರಮಪಾವನವಾಗಿ, ಸಮಸ್ತ ಪಾಪನಿವಾರಕವೆನಿಸಿಕೊಳ್ಳುವುದು. ಇದೋ! ಇಲ್ಲಿ [1]ಜಲಾದಿಷ್ಠಾತನಾದ ಸಮುದ್ರರಾಜನು ಹಿಂದೆ

---

[1] ಇಲ್ಲಿ "ಅತ್ರ ಪೂರ್ವಂ ಮಹಾದೇವಃ ಪ್ರಸಾದಮಕರೋತ್ಪ್ರಭುಃ" ಎಂದು ಮೂಲವು. ಪುರಾಣಾಂತರ ಪ್ರಮಾಣಗಳನ್ನನುಸರಿಸಿ, ಇಲ್ಲಿ ರುದ್ರನು ರಾಮನನ್ನನುಗ್ರಹಿಸಿದುದಾಗಿ ವ್ಯಕ್ತವಾಗುವುದು. ಈ ವಿಷಯವಾಗಿ ಆಗ್ನೇಯಪುರಾಣದ 18ನೇ ಅಧ್ಯಾಯದಲ್ಲಿ:—ರುದ್ರನು ರಾಮನನ್ನು ಕುರಿತು "ಧನ್ಯೋಽಸ್ಮ್ಯನುಗೃಹೀತೋಽಸ್ಮಿ ಕೃತಕೃತ್ಯೋಽಸ್ಮಿ ಪೂಜ್ಯೋಽಸ್ಮಿ ಪುರುಷೋತ್ತಮ। ಯದದ್ರಾಕ್ಷಂ ಸುದುರ್ದರ್ಶಂ ತ್ವದ್ರೂಪಂ ಯೋಗಿಪುಂಗವೈಃ॥ ತ್ವದಾಜ್ಞಯಾ ಮಯಾ ಪೂರ್ವಂ ತ್ವದ್ಭಕ್ತಿವಿಮುಖಂ ಹರೇ। ಶೈವಂ ಪಾಶುಪತಂ ಲೈಂಗಮಸಚ್ಛಾಸ್ತ್ರಂ ಪ್ರವರ್ತಿತಮ್। ತದಿದಾನೀಂ ಮಹಾಪಾಪಂ ದಿವ್ಯರೂಪಸ್ಯ ದರ್ಶನಾತ್। ಸರ್ವಂ ವಿನಷ್ಟಮೇವೇಶ ತವ ರಾಮ ಪ್ರಸಾದತಃ। ತರೇಯಮೇವತ್ವನ್ನಾಮ್ನಾ ತ್ವನ್ನಾಮಸ್ಮರಣಾದಹಮ್। ತಥಾ ಅನುಗ್ರಹಾಣತ್ವಂ ಯಥಾಸ್ಯಾತ್ಸತತಂ ಸ್ಮೃತಿಃ" ಎಂಬುದಾಗಿ, ತನಗೆ ಯಾವಾಗಲೂ ಆತನ ಸ್ಮರಣವಿರುವಂತೆ ಅನುಗ್ರಹಿಸಬೇಕೆಂದು ಪ್ರಾರ್ಥಿಸಲು, ಅದಕ್ಕಾಗಿ ರಾಮನು ಶಿವನನ್ನು ಕುರಿತು "ತ್ಯಜೇದ್ದೇಶಂ ಕೃತಯುಗೇ ತ್ರೇತಾಯಾಂ ಗ್ರಹಮೇವ ಚ। ದ್ವಾಪರೇ ಕುಲಮೇಕಂ ತು ಕರ್ತಾರಂ ತು ಕಲೌಯುಗೇ। ಏತದ್ದೇಶವಿಶುದ್ಧ್ಯರ್ಥಮತ್ರ ಸಂನಿಹಿತಸ್ಸದಾ। ಮಯಾತ್ರ ಸ್ಥಾಪಿತೇಲಿಂಗೇ ಭುಕ್ತಿಮುಕ್ತಿ ಪ್ರದೋಭವ" ಎಂದು ರಾವಣನಿಗೆ ಸೇರಿದ ಪ್ರದೇಶದ ಶುದ್ಧಿಗಾಗಿ ಸೇತುಮಧ್ಯದಲ್ಲಿ ಲಿಂಗಪ್ರತಿಷ್ಠೆಮಾಡುವುದಾಗಿ ಹೇಳಿರುವನು. ಇದೇ ವಿಷಯವು ಕೂರ್ಮಪುರಾಣದಲ್ಲಿಯೂ ಹೇಳಲ್ಪಟ್ಟಿದೆ. ಹೇಗೆಂದರೆ, "ಸೇತುಮಧ್ಯೇ ಮಹಾದೇವ ಮೀಶಾನಂ ಕೃತ್ತಿವಾಸಸಂ। ಸ್ಥಾಪಯಾಮಾಸ ವೈ ಲಿಂಗಂ ಪೂಜಯಾಮಾಸ ರಾಘವಃ। ತಸ್ಯದೇವೋ ಮಹಾದೇವಃ ಪಾರ್ವತ್ಯಾಸಹಶಂಕರಃ। ಪ್ರತ್ಯಕ್ಷಮೇವ

ನಾನು ಅವನನ್ನು ಶೋಷಿಸುವುದಕ್ಕಾಗಿ ಕೋಪದಿಂದ ಧನುಸ್ಸನ್ನೆತ್ತಿದ

ಭಗವಾನ್ ದತ್ತವಾನ್ ವರಮುತ್ತಮಮ್" ಎಂಬುದಾಗಿ ರಾಮನು ಸೇತುಮಧ್ಯದಲ್ಲಿ ಶಿವಲಿಂಗವನ್ನು ಸ್ಥಾಪಿಸಿದುದಾಗಿಯೂ, ಆ ಲಿಂಗದರ್ಶನ ಮಾಡಿದವರಿಗೆ ಸರ್ವಪಾಪನಿವಾರಣವಾಗಲೆಂದು ರುದ್ರನು ಅನುಗ್ರಹಿಸಿದುದಾಗಿಯೂ ಹೇಳಲ್ಪಟ್ಟದೆ. ಪಾದ್ಮಪುರಾಣದಲ್ಲಿಯೂ ರಾಮನು ಪುಷ್ಪಕದಿಂದಿಳಿದು ಶಿವಲಿಂಗವನ್ನು ಪ್ರತಿಷ್ಠಿಸಿದುದಾಗಿಯೂ, ಇದಕ್ಕಾಗಿ ಶಿವನು ರಾಮನಲ್ಲಿ ಪ್ರಸನ್ನನಾದುದಾಗಿಯೂ ಹೇಳಲ್ಪಟ್ಟದೆ. ಹೀಗೆ ಪುರಾಣವಚನಗಳಿಂದ ರಾಮನು ಸೇತುಬಂಧಕ್ಕೆ ಮೊದಲು ಅದರ ನಿರ್ವಿಘ್ನಪರಿಸಮಾಪ್ತಿಗಾಗಿ ಶಿವಾನುಗ್ರಹವನ್ನು ಪಡೆದು ಹಿಂತಿರುಗಿ ಬರುವಾಗ ಲಿಂಗಪ್ರತಿಷ್ಠೆ ಮಾಡಿದುದಾಗಿ ಹೇಳಲ್ಪಟ್ಟದೆ. ಇತಿಹಾಸರೂಪವಾದ ಈ ಶ್ರೀಮದ್ರಾಮಾಯಣದಲ್ಲಿ ಮಾತ್ರ ಆ ಸೂಚನೆಗೆ ಅವಕಾಶವಿಲ್ಲ. ಹಿಂದೆ ರುದ್ರನು ರಾಮನನ್ನನುಗ್ರಹಿಸಿದುದಾಗಿ ಈ ಗ್ರಂಥದಲ್ಲಿ ಕಾಣುವುದಿಲ್ಲವಾದುದರಿಂದ ಇಲ್ಲಿ ಆ ಅರ್ಥವು ಸಮಂಜಸವಲ್ಲ. ಮೊದಲು ನಡೆದ ಸಂಗತಿಯನ್ನೇ ರಾಮನು ಇಲ್ಲಿ ಅನುವದಿಸಬೇಕೇ ಹೊರತು ಬೇರೆಯಲ್ಲ. ಆದರೆ "ಇದಕ್ಕೆ ಹಿಂದೆ ಸುಷೇಣಾಂಗದರಿಬ್ಬರೂ ವಿದ್ಯುನ್ಮಾಲಿವಿಕಟರೆಂಬ ರಾಕ್ಷಸರನ್ನು ಕೊಂದ ಸಂಗತಿಯು ಮೊದಲು ಹೇಳಲ್ಪಡದಿದ್ದರೂ, ಈಗಿನ ಅನುವಾದದಿಂದೇಕೆ ಸಿದ್ಧಿಸಬಾರದು?" ಎಂದು ಕೇಳಬಹುದು. ಹಾಗೆ ಗ್ರಹಿಸುವುದರಿಂದ ಅಲ್ಲಿ ವಿರೋಧವೇನೂ ತೋರದು. ಇಲ್ಲಿ ಮಾತ್ರ ವಿರೋಧವುಂಟು. "ರುದ್ರಾನುಗ್ರಹವೆಂಬುದು ಸೇತುನಿರ್ಮಾಣಕಾಲದಲ್ಲಿಯೇ? ಅಥವಾ ಹಿಂತಿರುಗಿ ಬರುವಾಗಲೇ? ಎಂಬ ಶಂಕೆಯುಂಟಾಗುವುದು. ಸಮುದ್ರ ಪ್ರಸಾದದಿಂದಲೇ ಸೇತುನಿರ್ಮಾಣವು ಸಿದ್ಧಿಸಿದಂತೆ ಸ್ಪಷ್ಟವಾಗಿರುವುದರಿಂದ, ಆಗ ರುದ್ರಾನುಗ್ರಹಕ್ಕೇನೂ ಪ್ರಯೋಜನವಿಲ್ಲ. ರಾವಣವಧಾದಿ ಕಾರ್ಯಗಳಿಗಾದರೂ ರುದ್ರಾನುಗ್ರಹವಿದ್ದಹಾಗೆ ಕಾಣುವುದಿಲ್ಲ. ಹಾಗಿಲ್ಲದೆ ಹಿಂತಿರುಗಿ ಬರುವಾಗ ನಡೆಯಿತೆಂದು ಹೇಳುವಪಕ್ಷದಲ್ಲಿ "ಅತ್ರಪೂರ್ವಮ್" ಎಂಬ ಪೂರ್ವಶಬ್ದಕ್ಕೆ ವಿರೋಧವುಂಟಾಗುವುದು, ಅಥವಾ ಪೂರ್ವವೆಂದರೆ ಪೂರ್ವಕಲ್ಪವೆಂದು ಗ್ರಹಿಸುವುದಕ್ಕೂ ಸಾಧ್ಯವಿಲ್ಲ. ಏಕೆಂದರೆ "ಆತ್ಮಾನಂ ಮಾನುಷಂ ಮನ್ಯೇ" ಎಂದು ತನ್ನ ಪರತ್ವವನ್ನು ಮರೆಸಿಕೊಳ್ಳುವುದರಲ್ಲಿಯೇ ನಿರತನಾದ ರಾಮನು, ತನ್ನ ಪೂರ್ವಕಲ್ಪವೃತ್ತಾಂತವನ್ನು ಹೇಗೆತಾನೇ ತಿಳಿಸುವನು? ಆದುದರಿಂದ ಪುರಾಣಾಂತರವನ್ನನುಸರಿಸಿ ಅದರ ಆಧಾರದಮೇಲೆ ಇಲ್ಲಿ ನವೀನಾರ್ಥವನ್ನು ಕಲ್ಪಿಸುವುದು ಯುಕ್ತವಲ್ಲ. ಇದಲ್ಲದೆ ಪುರಾಣಗಳಿಗಿಂತಲೂ ಇತಿಹಾಸಕ್ಕೆ ಹೆಚ್ಚು ಪ್ರಾಧಾನ್ಯವು. "ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್"

ಮೇಲೆ, ನನ್ನಲ್ಲಿ ಪ್ರಸನ್ನನಾದನು. ಇದು ರಾಕ್ಷಸರಾಜನಾದ ವಿಭೀಷಣನು ನನ್ನೊಡನೆ ಬಂದು ಸೇರಿದ ಸ್ಥಳವು. ಅದೋ ಆಗಲೇ ವಿಚಿತ್ರಾರಣ್ಯಗಳಿಂದ ರಮ್ಯವಾದ ಕಿಷ್ಕಿಂಧೆಯೆಂಬ ಸುಗ್ರೀವನ ಪಟ್ಟಣವು ಕಾಣುತ್ತಿರುವುದು ನೋಡು. ಈ ಸ್ಥಳದಲ್ಲಿ ನಾನು ವಾಲಿಯನ್ನು ಕೊಂದೆನು" ಎಂದನು. ಆಗ ಸೀತೆಯು ವಾಲಿರಕ್ಷಿತವಾಗಿದ್ದ ಆ ಕಿಷ್ಕಿಂಧೆಯನ್ನು ನೋಡಿ ಪ್ರೀತಿಯುಕ್ತಳಾಗಿ, ಸುಗ್ರೀವಾದಿ ವಾನರರೆಲ್ಲರೂ ಸಮೀಪದಲ್ಲಿದ್ದುದರಿಂದ, ತನ್ನ ಪತಿಯಾದ ರಾಮನೊಡನೆ ಮಾತಾಡುವುದಕ್ಕೆ ಅಷ್ಟಾಗಿ ಧೈರ್ಯವಿಲ್ಲದೆ, ಭಯಯುಕ್ತವಾದ ಮಾತಿನಿಂದ ವಿನಯಪೂರ್ವಕವಾಗಿ "ಆರ್ಯಪುತ್ರ! ತಾರೆ ಮೊದಲಾದ ಸುಗ್ರೀವನ ಪ್ರಿಯಪತ್ನಿಯರನ್ನೂ, ಇತರ ವಾನರೋತ್ತಮರ ಭಾರ್ಯೆಯರನ್ನೂ ನಮ್ಮೊಡನೆ ಅಯೋಧ್ಯೆಗೆ ಕರೆದುಕೊಂಡು, ಹೋಗಬೇಕೆಂದು ನನಗೆ ಕುತೂಹಲವಿರುವುದು." ಎಂದಳು. ಸೀತೆಯು ಹೀಗೆ

"ಇತಿಹಾಸಪುರಾಣಪಂಚಮಮ್'' ಇತ್ಯಾದಿವಾಕ್ಯಗಳಲ್ಲಿ ಇತಿಹಾಸ ಶಬ್ದವು ಅಧಿಕಾಕ್ಷರವಾದುದರಿಂದ ಉತ್ತರಪದವಾಗಿರಬೇಕಾದರೂ, ಪೂರ್ವಪದವಾಗಿ ಪ್ರಯೋಗಿಸಲ್ಪಟ್ಟಿರುವುದರಿಂದಲೇ ಅದಕ್ಕೆ ಪ್ರಾಧಾನ್ಯವು ಸೂಚಿತವಾಗುವುದು. ಅದರಲ್ಲಿಯೂ ಮುಖ್ಯವಾಗಿ ಈ ರಾಮಾಯಣವೆಂಬುದು "ವೇದಃ ಪ್ರಾಚೇತಸಾದಾಸೀತ್ಸಾಕ್ಷಾದ್ರಾಮಾಯಣಾತ್ಮನಾ" ಎಂಬುದಾಗಿ ವೇದಮಯವೆಂದೇ ನಿರ್ಣಯಿಸಲ್ಪಟ್ಟಿರುವುದರಿಂದ, ಪುರಾಣಕ್ಕಿಂತಲೂ ಪ್ರಬಲವೆನಿಸುವುದು. ಇದಕ್ಕೆ ಇತರ ಪುರಾಣಗಳೊಡನೆ ವಿರೋಧವು ತೋರಿದಾಗ ಆ ಪುರಾಣಗಳೆಲ್ಲವೂ ಸರ್ಗಪ್ರತಿಸರ್ಗಾದಿಪಂಚಲಕ್ಷಣಗಳನ್ನೇ ಪ್ರಧಾನವಾಗಿ ಹೊಂದಿರುವುವು. ಅವು ಪೂರ್ವಚರಿತ್ರಗಳನ್ನು ಹೇಳುವುದರಲ್ಲಿ ತಾತ್ಪರ್ಯವುಳ್ಳುವಲ್ಲ. ಇದೂ ಅಲ್ಲದೆ ಶ್ಲೋಕಗಳೆಲ್ಲವೂ ಪ್ರಾಯಿಕವಾಗಿ ಕ್ರಮತಪ್ಪಿ ಹಿಂದುಮುಂದಾಗಿರುವುವೆಂದು ಪುರಾತನ ವ್ಯಾಖ್ಯಾನಕರ್ತರ ಅಭಿಪ್ರಾಯವಾದುದರಿಂದ, ಮಂಡೋದರೀಪ್ರಲಾಪವನ್ನು ಹೇಳಿದಮೇಲೆ ಈ ಶ್ಲೋಕವಿದ್ದಿರಬೇಕೆಂದೂ ಊಹಿಸಬಹುದಾಗಿದೆ. ಆಗ ಮಹಾದೇವಪ್ರಸಾದವೆಂದರೆ, ರುದ್ರನಿಂದ ತನಗೆ ಲಭಿಸಿದ ಪಿತೃದರ್ಶನವೆಂದು ಹೇಳಿದುದಾಗಿ ಗ್ರಹಿಸಬಹುದು. ರಾಮನು ಹನುಮಂತನನ್ನು ಭರತನ ಕಡೆಗೆ ಕಳುಹಿಸುವಾಗ, ಇದೇ ವಾಕ್ಯವನ್ನು "ಮಹಾದೇವ ಪ್ರಸಾದಾಚ್ಚ ಪಿತ್ರಾ ಮಮ ಸಮಾಗಮಮ್'' ಎರಡು ಹೇಳಿರುವನು. ಆದುದರಿಂದ ಈ ವಾಲ್ಮೀಕಿರಾಮಾಯಣದ ಪೂರ್ವೋತ್ತರ ಸಂದರ್ಭಗಳನ್ನು ನೋಡಿದರೆ, ರಾಮನು ಲಿಂಗಪ್ರತಿಷ್ಠೆಮಾಡಿದುದಾಗಿ ಹೇಳಲು ಅವಕಾಶವಿಲ್ಲವೆಂದು ಗೋವಿಂದರಾಜರ ಅಭಿಪ್ರಾಯವು.

ಪ್ರಾರ್ಥಿಸುವುದನ್ನು ನೋಡಿ ರಾಮನು "ದೇವಿ! ನಿನ್ನಿಷ್ಟದಂತೆಯೇ ಆಗಲಿ" ಎಂದು ಹೇಳಿ, ಆಗಲೇ ವಿಮಾನವನ್ನು ಕಿಷ್ಕಿಂಧೆಯಲ್ಲಿಳಿಸಿ, ಸುಗ್ರೀವನನ್ನು ನೋಡಿ, 'ವಾನರೋತ್ತಮಾ! ನಿಮ್ಮೆಲ್ಲರನ್ನೂ ಪತ್ನೀಸಮೇತರನ್ನಾಗಿಯೇ ಅಯೋಧ್ಯೆಗೆ ಕರೆದುಕೊಂಡು ಹೋಗಬೇಕೆಂದು ಈ ಸೀತೆಯು ಬಹಳವಾಗಿ ಅಪೇಕ್ಷಿಸುತ್ತಿರುವಳು. ಆದುದರಿಂದ ಈ ಸೀತೆಗಾಗಿ ಇಲ್ಲಿನ ಸಮಸ್ತ ವಾನರರೂ, ತಮ್ಮತಮ್ಮ ಪತ್ನೀಸಮೇತರಾಗಿಯೇ ನಮ್ಮೊಡನೆ ಅಯೋಧ್ಯೆಗೆ ಬರಬೇಕೆಂದು ಹೇಳು. ಹಾಗೆಯೇ ನೀನೂ ನಿನ್ನ ಭಾರ್ಯೆಯರೆಲ್ಲರನ್ನೂ ಕರೆಸು! ತಡಮಾಡಬೇಡ! ಅವರನ್ನು ತ್ವರೆಪಡಿಸಿ ಕರೆದುಕೊಂಡುಬಾ! ನಾವು ಬೇಗನೆ ಹೋಗಿ ಸೇರಬೇಕು" ಎಂದನು. ಮಹಾತೇಜಸ್ವಿಯಾದ ರಾಮನು ಈ ಮಾತನ್ನು ಹೇಳಿದೊಡನೆ, ಸುಗ್ರೀವನು ಅಲ್ಲಿದ್ದ ಸಮಸ್ತವಾನರರನ್ನೂ ಕರೆದುಕೊಂಡು ಅಂತಃಪುರಕ್ಕೆ ಹೋಗಿ, ತಾರೆಯನ್ನು ನೋಡಿ ಹೇಳುವನು. "ಪ್ರಿಯೆ! ಇಲ್ಲಿನ ಇತರ ವಾನರೋತ್ತಮರ ಭಾರ್ಯೆಯರನ್ನೂ ಕರೆದುಕೊಂಡು, ಈಗಲೇ ನೀನು ಅಯೋಧ್ಯೆಗೆ ಹೊರಡಬೇಕು. ಸೀತೆಯ ಪ್ರಾರ್ಥನೆಯಮೇಲೆ ಆಕೆಯ ಪ್ರೀತಿಗಾಗಿ ರಾಮನು ನನಗೆ ಈ ಆಜ್ಞೆಯನ್ನು ಮಾಡಿರುವನು. ತಡಮಾಡಬೇಡ. ಸಮಸ್ತ ವಾನರಪತ್ನಿಯರನ್ನೂ ಕರೆದುಕೊಂಡು ಬೇಗನೆ ಹೊರಡು! ನಾವೆಲ್ಲರೂ ಹೋಗಿ ಆ ಅಯೋಧ್ಯಾನಗರದ ಸೊಬಗನ್ನು ನೋಡಿಕೊಂಡು, ದಶರಥ ಮಹಾರಾಜನ ಭಾರ್ಯೆಯರನ್ನೂ ದರ್ಶನಮಾಡಿ ಬರುವೆವು" ಎಂದನು. ಇದನ್ನು ಕೇಳಿದೊಡನೆ ತಾರೆಯು ತನ್ನ ಸರ್ವಾವಯವಗಳನ್ನೂ ಭೂಷಣಗಳಿಂದಲಂಕರಿಸಿಕೊಂಡು, ವಾನರಕಾಂತೆಯರೆಲ್ಲರನ್ನೂ ಕರೆಸಿ "ನೀವೆಲ್ಲರೂ ನಿಮ್ಮನಿಮ್ಮ ಗಂಡಂದಿರನ್ನೂ ಕರೆದುಕೊಂಡು ಅಯೋಧ್ಯೆಗೆ ಬರಬೇಕೆಂದು ಸುಗ್ರೀವಾಜ್ಞೆಯಾಗಿರುವುದು. ನೀವೆಲ್ಲರೂ ನನ್ನೊಡನೆ ಅಯೋಧ್ಯೆಗೆ ಬಂದು, ಅಲ್ಲಿನ ಅತಿಶಯಗಳನ್ನು ನೋಡುವುದರಿಂದ ನೀವೂ ಸಂತೋಷಪಟ್ಟು, ನನಗೂ ಸಂತೋಷವನ್ನುಂಟುಮಾಡಬೇಕು. ಸಮಸ್ತ ಪೌರಜಾನಪದರೊಡನೆ ಸೇರಿ ಶ್ರೀರಾಮನು ಮಹಾವೈಭವದಿಂದ ಅಯೋಧ್ಯೆಗೆ ಪ್ರವೇಶಿಸುವುದನ್ನೂ, ದಶರಥ ಪತ್ನಿಯರ ಮಹಾಭಾಗ್ಯವನ್ನೂ ಕಣ್ಣಾರೆ ನೋಡಿ ಸಂತೋಷಪಟ್ಟು ಬರುವೆವು" ಎಂದಳು. ತಾರೆಯು ಈ ಮಾತನ್ನು ಹೇಳಿದೊಡನೆ, ಸಮಸ್ತವಾನರಕಾಂತೆಯರೂ ಪ್ರಯಾಣಮಂಗಳ ನಿಯಮವನ್ನನುಸರಿಸಿ ಅಲಂಕಾರಗಳನ್ನು ಮಾಡಿಕೊಂಡು, ಮೊದಲು

ಸೀತಾದೇವಿಯನ್ನು ನೋಡಬೇಕೆಂಬ ಕುತೂಹಲದಿಂದ ಬೇಗಬೇಗನೆ ಹೊರಟು, ಆ ಪುಷ್ಪಕವಿಮಾನವನ್ನು ಪ್ರದಕ್ಷಿಣವಾಗಿ ಬಂದು ಎಲ್ಲರೂ ವಿಮಾನವನ್ನೇರಿ ಕುಳಿತರು. [1] ಈ ವಾನರಸ್ತ್ರೀಯರೆಲ್ಲರೂ ಸಿದ್ಧರಾಗಿ, ಕುಳಿತೊಡನೆ ಆ ವಿಮಾನವು ಮೇಲೆ ಹಾರಿ ಮುಂದೆ ಹೊರಟಿತು. ಆಗ ರಾಮನು ಋಶ್ಯಮೂಕ ಸಮೀಪದಲ್ಲಿ ತಿರುಗಿ ಸೀತೆಯನ್ನು ನೋಡಿ, 'ದೇವಿ! ಇದೋ! ಈ ಮಹಾ ಪರ್ವತವನ್ನು ನೋಡಿದೆಯಷ್ಟೆ? ಸುವರ್ಣಧಾತುಗಳಿಂದ ತುಂಬಿ, ಮಿಂಚಿನಿಂದ ಕೂಡಿದ ಮಹಾಮೇಘದಂತೆ ಕಾಣುತ್ತಿರುವ ಇದೇ ಋಷ್ಯಮೂಕವೆಂಬ ಪರ್ವತ ಶ್ರೇಷ್ಠವು. ಇಲ್ಲಿಯೇ ವಾನರರಾಜನಾದ ಈ ಸುಗ್ರೀವನಿಗೂ ನನಗೂ ಸಮಾಗಮನವುಂಟಾಯಿತು. ಇಲ್ಲಿಯೇ ನಾನು ವಾಲಿಯನ್ನು ಕೊಲ್ಲುವುದಾಗಿ ಶಪಥಮಾಡಿದೆನು. ಇದೋ! ಇಲ್ಲಿ ವಿಚಿತ್ರಾರಣ್ಯಗಳಿಂದ ಪರಿವೃತವಾದ ಪಂಪಾಸರಸ್ಸು ಕಾಣುವುದು ನೋಡು. ಹಿಂದೆ ನಾನು ನಿನ್ನ ವಿರಹದುಃಖವನ್ನು ತಡೆಯಲಾರದೆ ಇಲ್ಲಿ ಬಹಳವಾಗಿ ವಿಲಪಿಸಿದೆನು. ಈ ಸರೋವರದ ತೀರದಲ್ಲಿಯೇ ನಾನು ಧರ್ಮಚಾರಿಣಿಯಾದ ಶಬರಿಯನ್ನು ಕಂಡೆನು. ಇದೋ! ಈ ಸ್ಥಲದಲ್ಲಿ ನಾನು ಯೋಜನಬಾಹುವಾದ ಕಬಂಧನನ್ನು ಕೊಂದೆನು. ಇದೋ! ಈ ಜನಸ್ಥಾನದಲ್ಲಿ ಜಟಾಯುವಿಗೆ ನಿವಾಸಸ್ಥಾನವಾದುದರಿಂದ ಶ್ರೀಮಂತವೆನಿಸಿಕೊಂಡ ವಟವೃಕ್ಷವು ಕಾಣುವುದು ನೋಡು. ಈ ವಟವೃಕ್ಷದ ಸಮೀಪದಲ್ಲಿಯೇ ಕ್ರೂರನಾದ ರಾವಣನಿಗೂ, ಮಹಾತ್ಮನಾದ ಜಟಾಯುವಿಗೂ ನಿನ್ನ ನಿಮಿತ್ತವಾಗಿ ಮಹಾಯುದ್ಧವು ಜರಗಿತು. ಎಲೆ ವೈದೇಹಿ! ಹಿಂದೆ ನಾನು ಖರದೂಷಣರನ್ನೂ, ಮಹಾವೀರ್ಯಶಾಲಿಯಾದ ತ್ರಿಶಿರಸ್ಸನ್ನೂ ನನ್ನ ಬಾಣಗಳಿಂದ ಯಾವ ಸ್ಥಳದಲ್ಲಿ ಕೊಂದೆನೋ, ಆ ನಮ್ಮ ಆಶ್ರಮ ಪ್ರದೇಶವು ಇದೋ ಕಾಣುತ್ತಿರುವುದು ನೋಡು. ಇದೋ ಇಲ್ಲಿ ವಿಚಿತ್ರವಾಗಿಯೂ, ಶುಭದರ್ಶನವಾಗಿಯೂ ಇರುವ ನಮ್ಮ ಪರ್ಣಶಾಲೆ ಕಾಣುವುದು ನೋಡು. ಇಲ್ಲಿಯೇ ದುರಾತ್ಮನಾದ ರಾವಣನು ನಿನ್ನನ್ನು ಬಲಾತ್ಕಾರದಿಂದ ಅಪಹರಿಸಿಕೊಂಡು ಹೋದುದು. ಇದೋ ಇಲ್ಲಿ ಗೋದಾವರೀ ನದಿಯು ನಿರ್ಮಲ ಜಲದಿಂದ ರಮಣೀಯವಾಗಿ ಮಂಗಳಪ್ರದವಾಗಿ ಕಾಣು

---

1 ವಾನರಭಾರ್ಯೆಯರೆಲ್ಲರನ್ನು ಕರೆಯುವುದರಲ್ಲಿಯೂ, ಅವರು ಮಂಗಳಾಲಂಕಾರಗಳನ್ನು ಮಾಡಿಕೊಂಡು ಸಿದ್ಧರಾಗಿ ಬಂದು ವಿಮಾನವನ್ನೇರುವುದರಲ್ಲಿಯೂ ಕಿಷ್ಕಿಂಧೆಯಲ್ಲಿ ಒಂದುದಿನವು ಕಳೆದುದಾಗಿ ದಿನಸಂಖ್ಯೆಯೆನ್ನೆಣಿಸುವರು.

ತ್ತಿರುವುದು ನೋಡು. ಇದೇ ಅಗಸ್ತ್ಯಾಶ್ರಮವು. ಅದೋ ಅದು ಮಹಾತ್ಮನಾದ ಸುತೀಕ್ಷ್ಣನ ಪುಣ್ಯಾಶ್ರಮವು ಎಷ್ಟು ರಮಣೀಯವಾಗಿರುವುದು ನೋಡು; ಎಲೆ ದೇವಿ ! ಮೊದಲು ಸಹಸ್ರಾಕ್ಷನಾದ ಆ ಸಾಕ್ಷಾದ್ದೇವೇಂದ್ರನು ಯಾವ ಮಹಾತ್ಮನ ಸೇವೆಗಾಗಿ ಬಂದಿದ್ದನೋ, ಆ ಶರಭಂಗಮಹಾಮುನಿಯ ಆಶ್ರಮವು ಅದೋ ಅಲ್ಲಿ ಕಾಣುವುದು ನೋಡು ! ಇದೋ ಇಲ್ಲಿಯೇ ವಿರಾಧನೆಂಬ ರಾಕ್ಷಸನು ನನ್ನಿಂದ ಹತನಾದನು. ಸೀತೆ ! ಹಿಂದೆ ನಾವು ಹತ್ತು ಸಂವತ್ಸರಗಳವರೆಗೆ ಅಲ್ಲಲ್ಲಿ ವಾಸಮಾಡುತ್ತಿದ್ದ ಋಷ್ಯಾಶ್ರಮಗಳೆಲ್ಲವೂ ಕಾಣುತ್ತಿರುವುವು ನೋಡು. ಅವರೆಲ್ಲರಿಗೂ ಕುಲಪತಿಯಾಗಿ, ಸೂರ್ಯಾಗ್ನಿಗಳಿಗೆ ಸಮಾನವಾದ ತೇಜಸ್ಸುಳ್ಳ ಅತ್ರಿಮಹರ್ಷಿಯು ಇಲ್ಲಿಯೇ ಇರುವನು. ಸಹಧರ್ಮಚಾರಿಣಿಯಾದ ಆ ಅನಸೂಯಾದೇವಿಯನ್ನು ನೀನು ದರ್ಶನ ಮಾಡಿದ ಸ್ಥಳವೇ ಇದು ! ಸುಂದರಾಂಗಿ ! ಇದೋ ಇತ್ತಲಾಗಿ ಸರ್ವೋತ್ತಮವಾದ ಆ ಚಿತ್ರಕೂಟವು ಪ್ರಕಾಶಿಸುತ್ತಿರುವುದು ನೋಡು ! ಮೊದಲು ಕೈಕೇಯೀ ಕುಮಾರನಾದ ಭರತನು ನನ್ನನ್ನು ಸಮಾಧಾನಗೊಳಿಸಿ ರಾಜ್ಯವನ್ನಂಗೀಕರಿಸಬೇಕೆಂದು ಹೇಳುವುದಕ್ಕಾಗಿ ಬಂದಿದ್ದ ಸ್ಥಳವು ಇದೇ. ಅದೋ ! ದೂರದಲ್ಲಿ ಸುಂದರಾರಣ್ಯಗಳಿಂದ ಕೂಡಿದ ಯಮುನಾನದಿಯು ಕಾಣುತ್ತಿರುವುದು ನೋಡು ! ನಾವು ಮೊದಲು ಭರದ್ವಾಜಾಶ್ರಮವನ್ನು ನೋಡಿದ, ರಮ್ಯವಾದ ಸ್ಥಳವು ಆಗಲೇ ಸಮೀಪಿಸುತ್ತ ಬಂದಿರುವುದರಿಂದ ಚೆನ್ನಾಗಿ ಕಾಣುತ್ತಿರುವುದು ನೋಡು ! ದೇವಿ ! ಅದೋ! ಅದು ಗಂಗೆಯು ! ಸ್ವರ್ಗಮರ್ತ್ಯಪಾತಾಳಗಳೆಂಬ ಮೂರುಮಾರ್ಗಗಳಲ್ಲಿಯೂ ಪ್ರವಹಿಸಿದುದರಿಂದ ಇದಕ್ಕೆ ತ್ರಿಪಥಗೆಯೆಂದು ಪ್ರಸಿದ್ಧನಾಮಧೇಯವುಂಟು ! ಇದರಲ್ಲಿರುವ ನಾನಾಬಗೆಯ ಪಕ್ಷಿಸಮೂಹಗಳನ್ನು ನೋಡು! ಇದರ ತೀರಪ್ರದೇಶದಲ್ಲಿರುವ ಪುಷ್ಪಿತಗಳಾದ ವನಗಳ ಸೊಗಸನ್ನು ನೋಡು! ಇದೋ ! ಇತ್ತಲಾಗಿ ಶೃಂಗಿಬೇರಪುರವು ! ಇಲ್ಲಿಯೇ ಗುಹನು ನಮ್ಮಲ್ಲಿಗೆ ಬಂದುದು ! ದೇವಿ ! ಇದೋ ! ಅಲ್ಲಿ ಸರಯೂನದಿಯು ಕಾಣುವುದು ! ನೋಡು! ಆಗಾಗ ಇದರ ತೀರದಲ್ಲಿ ಅನೇಕ ಯಜ್ಞಗಳು ನಡೆದುದರಿಂದ, ಸಾಲಾಗಿ ಕಾಣುತ್ತಿರುವ ಯೂಪಸ್ತಂಭಗಳನ್ನು ನೋಡು ! ಅದರ ತೀರದಲ್ಲಿ ಸಾಲಾಗಿರುವ ಪುಷ್ಪಿತಗಳಾದ ವನಗಳನ್ನೂ, ಬಗೆಬಗೆಯ ಮರಗಳನ್ನೂ ನೋಡು. ದೇವಿ ! ಅದೋ ಅಲ್ಲಿ ನಮ್ಮ ತಂದೆಯ ರಾಜಧಾನಿಯಾದ

ಅಯೋಧ್ಯಾನಗರವು ಕಾಣುತ್ತಿರುವುದು ನೋಡು! ನಾವು ಹಿಂತಿರುಗಿ ಕ್ಷೇಮದಿಂದ ಇಲ್ಲಿಗೆ ಬಂದು ಸೇರಿದೆವಾದುದರಿಂದ, ಆ ಪಟ್ಟಣಕ್ಕೆ ನೀನು ಪ್ರಣಾಮವನ್ನುಮಾಡು!" ಎಂದನು. ಅಯೋಧ್ಯೆಯೆಂಬ ಶಬ್ದವನ್ನು ಕೇಳಿದೊಡನೆ ಅಲ್ಲಿದ್ದ ಸಮಸ್ತವಾನರರೂ, ರಾಕ್ಷಸೇಂದ್ರನಾದ ವಿಭೀಷಣನೂ, ಪರಮಸಂತೋಷದಿಂದ ಒಬ್ಬರಮೇಲೊಬ್ಬರು ನಿಗುರಿ ನಿಂತು, ಮಂಗಳಕರವಾದ ಆ ಅಯೋಧ್ಯಾಪುರವನ್ನು ನೋಡುತ್ತಿದ್ದರು. ಶುಭ್ರವಾದ ಮೇಘಪರಂಪರೆಯಂತಿರುವ ಬಿಳೀಸೌಧಗಳ ಸಾಲಿನಿಂದಲೂ, ವಿಶಾಲವಾದ ತೊಟ್ಟಿಗಳಿಂದಲೂ, ಕುದುರೆಗಳಿಂದಲೂ, ಇತರ ಸೇನೆಗಳಿಂದಲೂ ಕಿಕ್ಕಿರಿದು ತುಂಬಿ, ಅಮರಾವತಿಯಂತೆ ಬೆಳಗುತ್ತಿದ್ದ ಆ ಅಯೋಧ್ಯಾಪುರದ ಸೊಬಗನ್ನು ನೋಡಿ ವಾನರರೆಲ್ಲರೂ ಪರಮಾನಂದದಿಂದುಕ್ಕುತ್ತಿದ್ದರು.

ಇಲ್ಲಿಗೆ ನೂರಿಪ್ಪತ್ತೇಳನೆಯ ಸರ್ಗವು.

ರಾಮನು ಭರದ್ವಾಜಮುನಿಯಿಂದ ಅಯೋಧ್ಯೆಯಲ್ಲಿ ಭರತಾದಿಗಳ ಕ್ಷೇಮವನ್ನು ಕೇಳಿ ತಿಳಿದು, ಆ ಋಷಿಯ ಪ್ರಾರ್ಥನೆಯಿಂದ ಆ ಆಶ್ರಮದಲ್ಲಿಯೇ ಆ ದಿನವನ್ನು ಕಳೆದುದು. ಭರದ್ವಾಜಮುನಿಯು ತನ್ನಾಶ್ರಮದಿಂದ ಅಯೋಧ್ಯೆಯವರೆಗೆ ದಾರಿಯು ಸುಗಮವಾಗಿಯೂ, ಪುಷ್ಪಫಲ ಸಮೃದ್ಧವಾಗಿಯೂ ಇರುವಂತೆ ಅನುಗ್ರಹಿಸಿದುದು.

ಹೀಗೆ ರಾಮನು ಲಂಕೆಯಿಂದ ಹಿಂತಿರುಗಿ ಭರದ್ವಾಜಾಶ್ರಮಕ್ಕೆ ಬರುವಷ್ಟರಲ್ಲಿ ಹದಿನಾಲ್ಕು ಸಂವತ್ಸರಗಳು ತುಂಬುತ್ತ ಬಂದುವು. ಹಿಂದೆ ಅವನು ಅಯೋಧ್ಯೆಯಿಂದ ಕಾಡಿಗೆ ಹೊರಟ ದಿನವಾದ [1] ಚೈತ್ರಶುದ್ಧ ಪಂಚಮಿಯೂ

---

[1] ಚೈತ್ರ ಶುದ್ಧ ಪಂಚಮಿಯಲ್ಲಿ ರಾಮನು ವನವಾಸಕ್ಕಾಗಿ ಅಯೋಧ್ಯೆಯಿಂದ ಹೊರಟವನಾದುದರಿಂದ, ಚೈತ್ರಶುದ್ಧ ಚತುರ್ಥಿಗೆ ಹದಿನಾಲ್ಕು ವರ್ಷಗಳು ತುಂಬಿ, ಪಂಚಮೀ ತಿಥಿಗೆ ಭರದ್ವಾಜಾಶ್ರಮವನ್ನು ಸೇರಿದುದಾಗಿ ಗ್ರಾಹ್ಯವು. ಚೈತ್ರ ಶುದ್ಧ ಪಂಚಮಿಯಲ್ಲಿ ಅಯೋಧ್ಯೆಯಿಂದ ಹೊರಟುದು. ಆ ರಾತ್ರಿಯಲ್ಲಿ ತಮ್ಮ

ಪ್ರಾಪ್ತವಾಯಿತು. ಆ ಹದಿನಾಲ್ಕುವರ್ಷ ಕಳೆದು ತಿರುಗಿ ಅದೇ ಚೈತ್ರಶುದ್ಧ ಪಂಚಮೀ ತಿಥಿಗೆ ಸರಿಯಾಗಿ ಭರದ್ವಾಜಾಶ್ರಮಕ್ಕೆ ಬಂದು ಅಲ್ಲಿ ತ್ರಿಕರಣ ಶುದ್ಧಿಯಿಂದ ಆ ಮಹರ್ಷಿಯನ್ನು ನಮಸ್ಕರಿಸಿದನು. ಹೀಗೆ ರಾಮನು

ಸಾತೀರವಾಸವು. ಷಷ್ಠಿಯಲ್ಲಿ ಶೃಂಗಿಬೇರಪುರದಲ್ಲಿಯೂ, ಸಪ್ತಮಿಯಲ್ಲಿ ವೃಕ್ಷ ಮೂಲದಲ್ಲಿಯೂ, ಅಷ್ಟಮೀನವಮಿಗಳಲ್ಲಿ ಕ್ರಮವಾಗಿ ಭರದ್ವಾಜಾಶ್ರಮ ಯಮುನಾ ತೀರಗಳಲ್ಲಿಯೂ ಇದ್ದುದು. ದಶಮಿಯಲ್ಲಿ ಸುಮಂತ್ರನು ಗುಹನ ಚಾರರ ಮೂಲಕವಾಗಿ ರಾಮನ ಚಿತ್ರಕೂಟ ಪ್ರಯಾಣೋದ್ಯೋಗವನ್ನು ಕೇಳಿ, ಅ ಸಾಯಂಕಾಲದಲ್ಲಿಯೇ ಹಿಂತಿರುಗಿ ಅಯೋಧ್ಯೆಗೆ ಪ್ರಯಾಣಮಾಡಿದುದು. ಅ ರಾತ್ರಿಯೇ ದಶರಥನ ಮರಣವು. ಏಕಾದಶಿಯಲ್ಲಿ ದಶರಥನ ದೇಹವನ್ನು ತೈಲ ದ್ರೋಣಿಯಲ್ಲಿಟ್ಟು, ದ್ವಾದಶಿಯಲ್ಲಿ ಭರತನ ಬಳಿಗೆ ದೂತರನ್ನು ಕಳುಹಿಸಿದುದು. ಆ ದೂತರು ಎರಡು ದಿನಗಳವರೆಗೆ ದಾರಿನಡೆದು, ಹುಣ್ಣಿಮೆಯ ರಾತ್ರಿಯಲ್ಲಿ ಕೇಕಯ ನಗರವನ್ನು ಪ್ರವೇಶಿಸಿದುದು. ಪಾಡ್ಯದಲ್ಲಿ ಭರತನು ಅಯೋಧ್ಯೆಗೆ ಹೊರಟು, ದಾರಿಯಲ್ಲಿ ಏಳುರಾತ್ರಿಗಳನ್ನು ಕಳೆದು, ಎಂಟನೆಯ ದಿನದಲ್ಲಿ ಬಹಳ ತ್ವರೆಯಿಂದ ರಾತ್ರಿಹಗಲೂ ಪ್ರಯಾಣಮಾಡಿ, ನವಮಿ ಸೂರ್ಯೋದಯಕ್ಕೆ ಸರಿಯಾಗಿ ಅಯೋಧ್ಯೆಗೆ ಪ್ರವೇಶಿಸಿದುದು. ಆ ದಿನವೇ ದಶರಥನ ಸಂಸ್ಕಾರವು. ಅದಕ್ಕೆ ಹದಿಮೂರನೆಯ ದಿನದಲ್ಲಿ ಎಂದರೆ, ವೈಶಾಖಶುದ್ಧ ಪಂಚಮಿಯಲ್ಲಿ ಭರತನು ರಾಜನಿಗೆ ಶ್ರಾದ್ಧಕರ್ಮಗಳನ್ನು ನಡೆಸಿ ಮುಗಿಸಿದುದು. ಷಷ್ಠಿಯಲ್ಲಿ ಆ ದೇಶದ ಆಚಾರವನ್ನನುಸರಿಸಿ ದಹನದೇಶವನ್ನು ಶೋಧಿಸಿದುದು. ಸಪ್ತಮಿಯಿಂದ ದಶಮಿಯವರೆಗೆ ನಾಲ್ಕು ದಿನಗಳಲ್ಲಿ ಭರತನು ರಾಮನಬಳಿಗೆ ಹೋಗುವುದಕ್ಕಾಗಿ ದಾರಿಯನ್ನು ಕ್ರಮಪಡಿಸಿದುದು. ಏಕಾದಶಿಯಲ್ಲಿ ಭರತನ ಪ್ರಯಾಣವು. ಆ ರಾತ್ರಿಯಲ್ಲಿ ಗಂಗಾತೀರವಾಸವು. ದ್ವಾದಶಿಯಲ್ಲಿ, ಭರತನು ಭರದ್ವಾಜಾಶ್ರಮದಲ್ಲಿದ್ದು ತ್ರಯೋದಶಿಯಲ್ಲಿ ರಾಮನನ್ನು ಸೇರಿ, ಅಲ್ಲಿಂದ ಮೂರುದಿನಗಳವರೆಗೆ ಎಂದರೆ ಪಾಡ್ಯದವರೆಗೆ ಚಿತ್ರಕೂಟದಲ್ಲಿದ್ದುದು. ವೈಶಾಖ ಬಹುಳದ್ವಿತೀಯೆಯಲ್ಲಿ ಆ ಚಿತ್ರಕೂಟವನ್ನು ಬಿಟ್ಟು ಚತುರ್ಥಿಯಲ್ಲಿ ನಂದಿಗ್ರಾಮವನ್ನು ಪ್ರವೇಶಿಸಿದುದು. ಹೀಗೆ ರಾಮನು ಅಯೋಧ್ಯೆಯಿಂದ ಹೊರಟ ದಿನವು ಮೊದಲ್ಗೊಂಡು, ವೈಶಾಖಬಹುಳಚತುರ್ಥಿಗೆ ಒಂದೂವರೆ ತಿಂಗಳಾಯಿತು. ವೈಶಾಖ ಬಹುಳ ಪಂಚಮಿಯಲ್ಲಿ ರಾಮನು ಚಿತ್ರಕೂಟದಿಂದ ಹೊರಟು, ಅತ್ರಿಮಹರ್ಷಿಯ ಆಶ್ರಮವನ್ನು ಪ್ರವೇಶಿಸಿದುದು. ಅಲ್ಲಿನ ಆಶ್ರಮಮಂಡಲಗಳಲ್ಲಿ ಹತ್ತು ವರುಷಗಳೂ, ಅಲ್ಲಿಂದಾಚೆಗೆ ಪಂಚಮಿಯಲ್ಲಿ ಕಳೆದಕಾಲವೂ ಸೇರಿ ಮೊತ್ತಕ್ಕೆ ಹದಿ

ತಪೋಧನರಾದ ಭರಧ್ವಾಜರನ್ನು ದರ್ಶನಮಾಡಿ ನಮಸ್ಕರಿಸಿದ ಮೇಲೆ, "ಎಲೈ ಮಹಾತ್ಮನೆ! ನಮ್ಮ ಅಯೋಧ್ಯಾನಗರವು ಸುಭಿಕ್ಷವಾಗಿಯೂ, ಆರೋಗ್ಯವುಳ್ಳುದಾಗಿಯೂ ಇರುವ ವೃತ್ತಾಂತವನ್ನು ನೀನು ಕೇಳಿಬಲ್ಲೆಯಾ? ನಮ್ಮ ಭರತನು ಪ್ರಜಾಪಾಲನದಲ್ಲಿ ಜಾಗರೂಕನಾಗಿರುವನಷ್ಟೆ? ನನ್ನ ತಾಯಿ ಮುಂತಾದವರೆಲ್ಲರೂ ಬದುಕಿರುವರಷ್ಟೆ? ಎಂದನು. ಇದನ್ನು ಕೇಳಿ ಭರ ಧ್ವಾಜನು ಸಂತೋಷಪೂರ್ವಕವಾಗಿ ಮುಖದಲ್ಲಿ ಮಂದಹಾಸವನ್ನು ತೋರಿ ಸುತ್ತ, ರಾಮನನ್ನು ಕುರಿತು "ವತ್ಸ ರಾಮಾ! ಈಗಲೂ ಭರತನು ನಿನ್ನ ವಿರಹ ವ್ಯಸನದಿಂದ ದೇಹಸಂಸ್ಕಾರವಿಲ್ಲದೆ, [1]ಕೊಳೆಮುಚ್ಚಿದ ಮೈ

ಮೂರು ವರುಷಗಳಾದುವು. ಹದಿನಾಲ್ಕನೆಯ ವರುಷದ ಪ್ರಾರಂಭದಲ್ಲಿ ಚೈತ್ರ ಮಾಸದಲ್ಲಿ ಸೀತಾಪಹರಣವು. ವೈಶಾಖದಲ್ಲಿ ಸುಗ್ರೀವಸಮಾಗಮವು. ಆಷಾಢದಲ್ಲಿ ವಾಲಿವಧವು. ಆಶ್ವಯುಜದಲ್ಲಿ ಸೀತಾನ್ವೇಷಣಕ್ಕಾಗಿ ಸೇನಾಸನ್ನಾಹವು. ಫಾಲ್ಗುಣ ದಲ್ಲಿ ಹನುಮದಾದಿಗಳ ಪ್ರಾಯೋಪವೇಶವು. ಫಾಲ್ಗುಣಶುದ್ಧ ಚತುರ್ದಶಿಯಲ್ಲಿ ಲಂಕಾದಹನವು. ಅಮಾವಾಸ್ಯೆಯಲ್ಲಿ ರಾವಣವಧವು. ಚೈತ್ರಶುದ್ಧ ಪಾಡ್ಯದಲ್ಲಿ ರಾವಣಸಂಸ್ಕಾರಾದಿಗಳು. ದ್ವಿತೀಯೆಯಲ್ಲಿ ವಿಭೀಷಣಾಭಿಷೇಕಾದಿಗಳು. ತೃತೀಯೆ ಯಲ್ಲಿ ಲಂಕೆಯಿಂದ ಹೊರಟು, ಚತುರ್ಥಿಯಲ್ಲಿ ಕಿಷ್ಕಿಂಧೆಯಲ್ಲಿದ್ದು, ಪಂ ಚಮಿಯಲ್ಲಿ ಭರದ್ವಾಜಾಶ್ರಮಕ್ಕೆ ಬಂದುದಾಗಿ ಕಾಲಕ್ರಮವು. ಹಿಂದೆಯೇ ಅಲ್ಲಲ್ಲಿ ಕ್ರಮವಾಗಿ ಈ ದಿನಸಂಖ್ಯೆಗೆ ಉಪಪತ್ತಿಗಳು ಕಾಣಿಸಲ್ಪಟ್ಟಿರುವುವು. ಹಿಂದೆ ರಾವಣನು ಹನುಮಂತನ ಸಮಕ್ಷಮದಲ್ಲಿ "ದ್ವೌಮಾಸಾರಕ್ಷಿತವ್ಯಾಮೇ" ಎಂದು ಎರಡು ತಿಂಗಳ ಗಡುವನ್ನು ಹೇಳಿದುದು ಸೀತೆಯನ್ನು ಸಮಾಧಾನ ಪಡಿಸುವು ದಕ್ಕಾಗಿಯೇ ಹೊರತು ಬೇರೆಯಲ್ಲ. ಅದರಿಂದಾಚೆಗೆ ಸೀತೆಯು "ಮಾಸಾದೂರ್ಧ್ವಂ ನಜೀವಿಷ್ಯೇ" ಎಂದು ಹೇಳಿದ ಮಾತೇ ಸಮಂಜಸವಾಗಿ ಒಪ್ಪುವುದು. ರಾವಣನು ಮಧುಪಾನ ಮದದಿಂದ ವಿವೇಚನೆಯಿಲ್ಲದೆ ಆ ಎರಡು ಗಡುವನ್ನು ಹೇಳಿರಬಹು ದೆಂದೂ ಊಹಿಸಬಹುದು.

[1] ಭರತನು ಜಟೆಯನ್ನು ಧರಿಸಿರುವುದರಿಂದ, ಸ್ನಾನಮಾಡುವುದಕ್ಕಿಲ್ಲದೆ ಕೊಳೆ ಮುಚ್ಚಿದ ಮೈಯುಳ್ಳವನಾಗಿದ್ದನೆಂದೂ, ಸ್ನಾನವಿಲ್ಲದಿದ್ದರೂ, ನಿತ್ಯಾನುಷ್ಠಾನಗಳಲ್ಲಿ ದೀಕ್ಷಿತನಂತೆ ಗೌಣಸ್ನಾನಗಳನ್ನು ನಡೆಸುತ್ತಿದ್ದನೆಂದೂ ಗ್ರಾಹ್ಯವು. ಆದರೆ ಹೀಗೆ ಸ್ನಾನವಿಲ್ಲದಿರುವಾಗ "ಕಥಂನ್ವಪರಾತ್ರೇಷು ಸರಯೂಮವಗಾಹತೇ" ಎಂದು ಭರ ತನ ವಿಷಯವಾಗಿ ರಾಮನು ಹೇಳಿರುವ ವಾಕ್ಯಕ್ಕೆ ಭರತನು ಒಮ್ಮೊಮ್ಮೆ ಮಾತ್ರ ನಡೆಸತಕ್ಕ ಸ್ನಾನವೆಂದು ಗ್ರಹಿಸಿದ ಪಕ್ಷದಲ್ಲಿ ವಿರೋಧವು ಬಾರದು.

ಯುಳ್ಳವನಾಗಿ, ಜಡೆಯನ್ನು ಧರಿಸಿ, ನಿನ್ನನ್ನೇ ನಿರೀಕ್ಷಿಸುತ್ತಿರುವನು. ನಿನ್ನ ಪಾದುಕೆಗಳನ್ನು ಮುಂದಿಟ್ಟುಕೊಂಡು ರಾಜಕಾರ್ಯವನ್ನು ನಡೆಸುತ್ತಿರುವನು. ಅಯೋಧ್ಯೆಯಲ್ಲಿ ಸಮಸ್ತವೂ ಕ್ಷೇಮದಿಂದಿರುವುದು. ಎಲೆ ವತ್ಸನೆ! ಮೊದಲು ನೀನು ಪಿತೃವಾಕ್ಯಪರಿಪಾಲನವೊಂದೇ ತನ್ನ ಕೃತ್ಯವೆಂದು ನಂಬಿ, ಕೈಕೇಯಿಯ ಮಾತಿಗಾಗಿ ಸರ್ವಸ್ವವನ್ನೂ ತ್ಯಜಿಸಿ, ಸಮಸ್ತ ಭೋಗಗಳನ್ನೂ ಬಿಟ್ಟು, ಕೇವಲ ಧರ್ಮನಿರತನಾಗಿ, ಸೀತಾಲಕ್ಷ್ಮಣರೊಡನೆ ಹೊರಟುಬಂದೆಯಲ್ಲವೆ? ಸರ್ವೋತ್ತಮವಾದ ರಾಜವಂಶದಲ್ಲಿ ಹುಟ್ಟಿದ ನೀನು, ಸ್ವರ್ಗವನ್ನಗಲಿದ ದೇವತೆಯಂತೆ ರಾಜ್ಯಭ್ರಷ್ಟನಾಗಿ, ನಾರುಮಡಿಯನ್ನುಟ್ಟು ಕಾಲುನಡೆಯಿಂದಲೇ ಕಾಡುಕಾಡಾಗಿ ತಿರುಗುತ್ತ, ಆಗಾಗ ಸಿಕ್ಕಿದ ಗಡ್ಡೆಗೆಣಸುಗಳನ್ನೇ ಆಹಾರವಾಗಿ ತೆಗೆದುಕೊಂಡು ಈ ಆಶ್ರಮಕ್ಕೆ ಬಂದಿದ್ದಾಗ, ನಿನ್ನನ್ನು ನೋಡಿ ಸಹಿಸಲಾರದೆ ದುಃಖವುಂಟಾಗಿದ್ದಿತು. ಈಗಲೋ, ನೀನು ಶತ್ರುಗಳನ್ನು ಜಯಿಸಿ, ಕಾರ್ಯಸಿದ್ಧಿಯನ್ನು ಹೊಂದಿ ಕೃತಾರ್ಥನಾಗಿ, ಈ ಬಂಧುಮಿತ್ರಸಮೂಹದೊಡಗೂಡಿ ಕ್ಷೇಮದಿಂದ ಹಿಂತಿರುಗಿ ಬಂದಿರುವುದನ್ನು ನೋಡಿ ನನಗೆ ಮಹತ್ತಾದ ಸಂತೋಷವು ಉಕ್ಕಿಬರುತ್ತಿರುವುದು. ರಾಮಾ! ನಿನ್ನ ವನವಾಸಕಾಲದಲ್ಲಿ ನಿನಗುಂಟಾದ ಸುಖದುಃಖಗಳೆಲ್ಲವನ್ನೂ ನಾನು ಜ್ಞಾನದೃಷ್ಟಿಯಿಂದಲೇ ತಿಳಿದೆನು. ಪಂಚವಟಿ ಮೊದಲಾದ ಸ್ಥಳಗಳಲ್ಲಿ ನೀನು ಈ ಸೀತೆಯೊಡಗೂಡಿ ಅನುಭವಿಸುತ್ತಿದ್ದ ಸುಖಸಂತೋಷಗಳನ್ನೂ ಆಮೇಲೆ ಸೀತಾಪಹರಣದಿಂದ ನಿನಗೆ ಪ್ರಾಪ್ತವಾದ ಮಹಾವ್ಯಸನವನ್ನೂ ನಾನು ಬಲ್ಲೆನು. ಧರ್ಮವತ್ಸಲಾ! ಜನಸ್ಥಾನದಲ್ಲಿ ನೀನು ರಾಕ್ಷಸರೊಡನೆ ಮಹಾಘೋರಯುದ್ಧವನ್ನಾರಂಭಿಸಿ, ಆ ದುರಾತ್ಮರನ್ನು ಕೊಂದ ವೃತ್ತಾಂತವನ್ನೂ ನಾನು ಬಲ್ಲೆನು. ಋಷಿಗಳ ಪ್ರಾರ್ಥನೆಯ ಮೇಲೆ ನೀನು ಖರಾದಿರಾಕ್ಷಸರನ್ನು ಕೊಂದು, ಆ ಋಷಿಗಳ ರಕ್ಷಣೆಯಲ್ಲಿ ನಿರತನಾಗಿದ್ದಾಗ ನಿನ್ನ ಧರ್ಮಪತ್ನಿಯಾದ ಈ ಸೀತೆಯನ್ನು ಕದ್ದುಯ್ಯಬೇಕೆಂದು ರಾವಣನು ದುರಾಲೋಚನೆ ಮಾಡಿದುದು, ಇದಕ್ಕಾಗಿ ಮಾರೀಚನನ್ನು ಮಾಯಾಮೃಗರೂಪದಿಂದ ಕರೆತಂದುದು, ನನಗೆ ಮೊದಲೇ ಧ್ಯಾನದೃಷ್ಟಿಯಿಂದ ತಿಳಿಯಿತು. ಸೀತೆಯು ಅಪಹೃತಳಾದುದನ್ನೂ ಬಲ್ಲೆನು. ಆಮೇಲೆ ನೀನು ಕಬಂಧನನ್ನು ಕಂಡು ಅಲ್ಲಿಂದ ಮುಂದೆ ಪಂಪಾಸರಸ್ಸಿಗೆ ಹೋದುದನ್ನೂ ಬಲ್ಲೆನು. ಅದರಿಂದಾಚೆಗೆ ನೀನು ಸುಗ್ರೀವನೊಡನೆ ಸ್ನೇಹವನ್ನು

ಬೆಳೆಸಿ, ವಾಲಿಯನ್ನುಕೊಂದು, ಸೀತಾನ್ವೇಷಣಕ್ಕಾಗಿ ಪ್ರಯತ್ನಿಸುತ್ತಿದ್ದು ದನ್ನೂ ಬಲ್ಲೆನು. ಈ ಹನುಮಂತನು ಸಮುದ್ರವನ್ನು ದಾಟಿ ಸೀತೆಯನ್ನು ಕಂಡು ಲಂಕೆಯನ್ನು ಸುಟ್ಟುಬಂದ ಮಹಾಕಾರ್ಯವನ್ನೂ ಬಲ್ಲೆನು. ಈತನ ಮೂಲಕವಾಗಿ ನೀನು ಸೀತಾವೃತ್ತಾಂತವನ್ನು ತಿಳಿದಮೇಲೆ ನಳನಿಂದ ಸಮುದ್ರ ದಲ್ಲಿ ಸೇತುವನ್ನು ಕಟ್ಟಿಸಿದ ಕ್ರಮವನ್ನೂ ಬಲ್ಲೆನು. ಕೊನೆಗೆ ನೀನು ಲಂಕೆ ಯಲ್ಲಿ ರಾಕ್ಷಸರೊಡನೆ ಮಹಾಯುದ್ಧವನ್ನು ನಡೆಸುತ್ತಿರುವಾಗ, ಈ ವಾನರವೀರರಲ್ಲಿ ಕೆಲವರು ಯುದ್ಧೋತ್ಸಾಹದಿಂದ ಲಂಕೆಯನ್ನು ಪ್ರವೇಶಿಸಿ, ಆ ಶತ್ರುಪುರವನ್ನು ಸುಟ್ಟುಬಂದ ಸಂಗತಿಯನ್ನೂ ಬಲ್ಲೆನು. ಈಚೆಗೆ ನೀನು ದೇವಕಂಟಕನಾದ ರಾವಣನನ್ನು, ಅವನ ಪುತ್ರಮಿತ್ರಾದಿ ಬಾಂಧವ ರೊಡನೆಯೂ, ಅವನ ಸಮಸ್ತ ಸೈನ್ಯದೊಡನೆಯೂ, ಅವನ ವಾಹನಗಳೊ ಡನೆಯೂ ಯುದ್ಧದಲ್ಲಿ ಕೊಂದ ರೀತಿಯನ್ನೂ ಬಲ್ಲೆನು. ಆಮೇಲೆ ಬ್ರಹ್ಮಾದಿ ದೇವತೆಗಳು ನಿನ್ನ ಸಮೀಪಕ್ಕೆ ಬಂದುದನ್ನೂ, ಯುದ್ಧದಲ್ಲಿ ಮೃತರಾದ ಸಮಸ್ತವಾನರರೂ ತಿರುಗಿ ಜೀವಿಸುವಂತೆ ದೇವೇಂದ್ರನು ನಿನಗೆ ಕೊಟ್ಟ ವರದ ರೀತಿಯನ್ನೂ ನಾನು ನನ್ನ ತಪೋಬಲದಿಂದಲೇ ತಿಳಿದೆನು. ಎಲೇ ಧಾರ್ಮಿಕೋತ್ತಮನೇ ! ಈಗ ನಾನೂ ನಿನಗೆ ಬೇಕಾದ ವರವನ್ನು ಕೊಡು ವೆನು. ಇಷ್ಟವಾದುದನ್ನು ಕೇಳು ! ಈಗ ನೀನು ನನ್ನ ಸತ್ಕಾರವನ್ನು ಸ್ವೀಕ ರಿಸಿ ನಾಳೆ ಅಯೋಧ್ಯೆಗೆ ಹೋಗಬಹುದು" ಎಂದನು. ರಾಜಪುತ್ರನಾದ ರಾಮನು ಕಾಲೋಚಿತಬುದ್ಧಿಯುಳ್ಳವನಾದುದರಿಂದ, ಆ ಮಹರ್ಷಿಯ ಮಾತನ್ನು ಶಿರಸಾವಹಿಸಿ, ಸಂತೋಷದಿಂದ ಅಲ್ಲಿಯೇ ನಿಲ್ಲುವುದಾಗಿ ನಿಶ್ಚ ಯಿಸಿ, ಮಹರ್ಷಿಯನ್ನು ನೋಡಿ "ಎಲೆ ಮಹಾತ್ಮನೆ ! ಈಗ ನಾನು ಅಯೋಧ್ಯೆಗೆ ಹೋಗುವ ಮಾರ್ಗದಲ್ಲಿ ವೃಕ್ಷಗಳೆಲ್ಲವೂ ಯಾವಾಗಲೂ ಮಧು ವನ್ನು ಸುರಿಯುತ್ತ, ಅಮೃತದಂತೆ ರುಚಿಯುಳ್ಳ ನಾನಾ ಫಲಗಳಿಂದ ಸಮೃದ್ಧ ಗಳಾಗಿರುವಂತೆ ಅನುಗ್ರಹಿಸಬೇಕು. ಇದೇ ಈಗ ನೀನು ನನಗೆ ಅನುಗ್ರ ಹಿಸಬೇಕಾದ ವರವು' ಎಂದನು. ಇದನ್ನು ಕೇಳಿ ಭರದ್ವಾಜಮುನಿಯು ಹಾಗೆಯೇ ಆಗಲೆಂದು ಅನುಗ್ರಹಿಸಿದನು. ಈ ಮಹರ್ಷಿಯ ಬಾಯಿಂದ ಈ ಮಾತು ಹೊರಗೆ ಬರುವಷ್ಟರಲ್ಲಿಯೇ, ದಾರಿಯಲ್ಲಿದ್ದ ಸಮಸ್ತ ವೃಕ್ಷಗಳೂ ಸ್ವರ್ಗಲೋಕದ ಕಲ್ಪವೃಕ್ಷಗಳಂತೆ ಫಲಪುಷ್ಪಗಳಿಂದ ಸಮೃದ್ಧವಾಗಿ ತುಂಬಿ ಹೋದುವು. ವಾನರರು ಅಯೋಧ್ಯೆಗೆ ಹೋಗತಕ್ಕ ದಾರಿಯಲ್ಲಿ, ಯಾವಕಡೆ

ಯನ್ನು ನೋಡಿದರೂ, ಮೂರುಯೋಜನಗಳವರೆಗೆ, ಅದುವರೆಗೆ ಫಲಿಸದಿದ್ದ ವೃಕ್ಷಗಳೂ ಫಲಭರಿತಗಳಾದುವು. ಅದುವರೆಗೆ ಪುಷ್ಪಿಸದಿದ್ದ ಗಿಡಗಳೂ ಪುಷ್ಪಿತಗಳಾಗಿ ಶೋಭಿಸುತ್ತಿದ್ದುವು. ಒಣಗಿದ್ದ ವೃಕ್ಷಗಳೆಲ್ಲವೂ ಹುಸುರೆಲೆಗಳಿಂದ ತುಂಬಿ ಜೇನನ್ನು ತೊಟ್ಟಿಕ್ಕುತ್ತಿದ್ದುವು- ಇದನ್ನು ನೋಡಿ ವಾನರೋತ್ತಮರೆಲ್ಲರೂ ಪರಮ ಸಂತುಷ್ಟರಾಗಿ, ಅಲ್ಲಲ್ಲಿ ನಾನಾ ವಿಧಗಳಾದ ದಿವ್ಯಫಲಗಳನ್ನು ಯಥೇಷ್ಟವಾಗಿ ಭಕ್ಷಿಸುತ್ತ, ಸ್ವರ್ಗವನ್ನು ಸಾಧಿಸಿದವರಂತೆ ಸಂತೋಷಹೊಂದುಕ್ಕುತ್ತಿದ್ದರು.

ಇಲ್ಲಿಗೆ ನೂರಿಪ್ಪತ್ತೇಳನೆಯ ಸರ್ಗವು.

————

ರಾಮಾಜ್ಞೆಯಿಂದ ಹನುಮಂತನು ಮುಂದಾಗಿ ಹೊರಟು, ಶೃಂಗಬೇರಪುರದಲ್ಲಿದ್ದ ಗುಹನಿಗೂ, ನಂದಿಗ್ರಾಮದಲ್ಲಿದ್ದ ಭರತನಿಗೂ, ರಾಮಾಗಮನವೃತ್ತಾಂತವನ್ನು ತಿಳಿಸಿದುದು.

ಇಷ್ಟರಲ್ಲಿ ಭರದ್ವಾಜಾಶ್ರಮದಲ್ಲಿದ್ದ ರಾಮನಿಗೆ ಅಯೋಧ್ಯೆಯ ಸ್ಮರಣವುಂಟಾಗಿ ಅವನ ಮನಸ್ಸಿಗೆ ಒಂದು ಚಿಂತೆಯು ಹುಟ್ಟಿತು. ಹಾಗೆಯೇ ತನ್ನಲ್ಲಿ ಸ್ವಲ್ಪಹೊತ್ತಿನವರೆಗೆ ಚಿಂತಿಸಿ, ಆಮೇಲೆ ವಾನರೋತ್ತಮನಾದ ಹನುಮಂತನನ್ನು ಕುರಿತು ಹೇಳುವನು. “ವಾಯುಪುತ್ರಾ ! ನೀನು ಈಗಲೇ ಹೊರಟು, ಮುಂದಾಗಿ ಹೋಗಿ, ಅಯೋಧ್ಯೆಯಲ್ಲಿ ನಮ್ಮ ರಾಜಗೃಹದಲ್ಲಿ ನನ್ನ ತಾಯಿ ಮೊದಲಾದವರ ಕ್ಷೇಮವನ್ನು ವಿಚಾರಿಸಿ ತಿಳಿದುಕೊಳ್ಳುವನಾಗು. ಮೊದಲು ಶೃಂಗಿಬೇರಪುರಕ್ಕೆ ಹೋಗಿ ಅಲ್ಲಿ ನಿಷಾದಾಧಿಪತಿಯಾದ ಗುಹನನ್ನು ನೋಡಿ, ಅವನಿಗೆ ನನ್ನ ಮಾತಿನಿಂದ ನಮ್ಮೆಲ್ಲರ ಕ್ಷೇಮವನ್ನೂ ತಿಳಿಸು ! ನಾನು ಇದುವರೆಗೆ ಅನೇಕ ಕಷ್ಟಗಳನ್ನು ದಾಟಿ ನಿಶ್ಚಿಂತನಾಗಿ ಆರೋಗ್ಯದಿಂದಲೂ, ಕ್ಷೇಮದಿಂದಲೂ ಹಿಂತಿರುಗಿ ಬಂದುದನ್ನು ಕೇಳಿದೊಡನೆ ಆ ಗುಹನು ಬಹಳ ಸಂತೋಷಪಡುವನು. [1]ಅವನು ನನಗೆ

---

1 ಇಲ್ಲಿ ರಾಮನು ಹೀನಜಾತಿಯಾದ ಗುಹನನ್ನೂ 'ಆತ್ಮಸಮಸ್ಸಖಾ' ಎಂದು ತನಗೆ ಸಮಾನನನ್ನಾಗಿ ಹೇಳಿಕೊಂಡಿರುವುದರಿಂದ ಅವನ ಸೌಲಭ್ಯವು ಸೂಚಿತವಾಗುವುದು.

ಸರ್ವವಿಧದಲ್ಲಿಯೂ ಸಮಾನನೆನಿಸಿಕೊಂಡ ಪರಮಾಪ್ತನು! ಮೊದಲು ನೀನು ವ್ಯಾಧರಾಜನಾದ ಆ ಗುಹನನ್ನು ನೋಡಿದ ಪಕ್ಷದಲ್ಲಿ ಅವನು ನಿನಗೆ ಅಯೋಧ್ಯೆಗೆ ಹೋಗಬೇಕಾದ ದಾರಿಯನ್ನೂ, ಭರತನವೃತ್ತಾಂತವನ್ನೂ ಸಂತೋಷದಿಂದ ತಿಳಿಸುವನು. [1]ಆಮೇಲೆ ನೀನು ಅಲ್ಲಿಂದ ಹೊರಟು ಭರತನ ಬಳಿಗೆ ಹೋಗಿ ಅವನಿಗೂ ನನ್ನ ಮಾತಿನಿಂದ ನಮ್ಮ ಕ್ಷೇಮವನ್ನು ತಿಳಿಸಬೇಕು. ನಾನು ವನವಾಸವನ್ನು ಮುಗಿಸಿ, ಪಿತೃವಾಕ್ಯಪರಿಪಾಲನವೆಂಬ ವ್ರತವನ್ನೂ ನಿರ್ವಹಿಸಿ, ಸೀತಾಲಕ್ಷ್ಮಣರೊಡನೆ ಕ್ಷೇಮದಿಂದ ಹಿಂತಿರುಗಿ ಬಂದ ವೃತ್ತಾಂತವನ್ನೂ ಅವನಿಗೆ ತಿಳಿಸು! ಮತ್ತು ಬಲಾಢ್ಯನಾದ ರಾವಣನು ಹಿಂದೆ ಸೀತೆಯನ್ನು ಅಪಹರಿಸಿದ್ದನೆಂಬ ಸಂಗತಿಯನ್ನೂ, ನನಗೆ ಸುಗ್ರೀವನೊಡನೆ ಸ್ನೇಹವುಂಟಾದುದನ್ನೂ, ವಾಲಿವಧವನ್ನೂ, ಸೀತಾನ್ವೇಷಣಕ್ಕಾಗಿ ನೀನು ಅಪಾರವಾಗಿಯೂ, ಅಕ್ಷೋಭವಾಗಿಯೂ ಇದ್ದ ನದೀಪತಿಯಾದ ಮಹಾಸಮುದ್ರವನ್ನು ದಾಟಿ ಸೀತೆಯನ್ನು ಕಂಡುಬಂದುದು, ನಾವೆಲ್ಲರೂ ಸಮುದ್ರದಕಡೆಗೆ ಪ್ರಯಾಣಮಾಡಿದುದು, ಸಮುದ್ರರಾಜನು ನನಗೆ ದರ್ಶನವನ್ನು ಕೊಟ್ಟುದು, ನಳನಿಂದ ಸೇತುವನ್ನು ಕಟ್ಟಿಸಿದುದು, ರಾವಣನನ್ನು ಕೊಂದುದು, [2]ಬ್ರಹ್ಮೇಂದ್ರವರುಣರು ನನಗೆ ವರವನ್ನು ಕೊಟ್ಟುದು, ರುದ್ರಾನುಗ್ರಹದಿಂದ ನನಗೆ ನಮ್ಮ ತಂದೆಯಾದ ದಶರಥನ ದರ್ಶನವು ಲಭಿಸಿದುದು, ಈ ವೃತ್ತಾಂತಗಳೆಲ್ಲವನ್ನೂ ಅವನಿಗೆ ನೀನು ಕ್ರಮವಾಗಿ ವಿವರಿಸಿ ತಿಳಿಸು. ಎಲೈ ಸೌಮ್ಯನೆ!

---

1 ಚತುರ್ಥೀದಿನದಲ್ಲಿಯೇ ಹದಿನಾಲ್ಕುವರ್ಷಗಳು ಕಳೆದುಹೋದುದರಿಂದ, ತಾನು ಹಿಂತಿರುಗಿಬಂದ ಸಂಗತಿಯನ್ನು ಭರತನಿಗೆ ತಿಳಿಸದಿದ್ದ ಪಕ್ಷದಲ್ಲಿ, ಅತನು ಅಗ್ನಿಪ್ರವೇಶ ಮಾಡುವನೆಂಬ ಭಯಕ್ಕಾಗಿ ರಾಮನು ಹನುಮಂತನನ್ನು ಮುಂದಾಗಿ ಕಳುಹಿಸಿದುದಾಗಿ ಗ್ರಾಹ್ಯವು. ಇಲ್ಲಿ ಕೆಲವರು "ರಾಮನು ತಾನಾಗಿಯೇ ಮೊದಲುಬಂದು ಅಕಸ್ಮಾತ್ತಾಗಿ ಭರತನ ದೃಷ್ಟಿಗೆ ಗೋಚರಿಸಿದ ಪಕ್ಷದಲ್ಲಿ, ಆದರಿಂದ ಭರತನಿಗೆ ಸಂತೋಷವು ಉನ್ಮಸ್ತಕವಾಗಿ, ಅಪಾಯಕ್ಕೆ ಕಾರಣವಾಗಬಹುದೆಂಬ ಶಂಕೆಯಿಂದ, ಮೊದಲು ಹನುಮಂತನನ್ನು ಕಳುಹಿಸಿದ"ನೆಂದು ಹೇಳುವರು.

2 ಹಿಂದೆ ದೇವೇಂದ್ರನೊಬ್ಬನೇ ವರವನ್ನು ಕೊಟ್ಟಹಾಗೆ ಹೇಳಲ್ಪಟ್ಟಿದ್ದರೂ ಇಲ್ಲಿನ ವಾಕ್ಯದಿಂದ ಆ ವರದಾನಕ್ಕೆ ಬ್ರಹ್ಮವರುಣಾದಿಗಳ ಅನುಮತಿಯೂ ಉಂಟೆಂದು ಸೂಚಿತವಾಗುವುದು.

ಈಗ ನಾನು ರಾಕ್ಷಸರಾಜನಾದ ವಿಭೀಷಣನೊಡನೆಯೂ ವಾನರಾಧಿಪತಿಯಾದ ಸುಗ್ರೀವನೊಡನೆಯೂ ಇಲ್ಲಿ ಬಂದು ಸೇರಿರುವ ಸಂಗತಿಯನ್ನು ಭರತನಿಗೆ ಹೇಳು! ಈ ವೃತ್ತಾಂತವನ್ನು ಹೇಳಿದಮೇಲೆ [1]ಆ ಭರತನ ಮುಖದಲ್ಲಿ ಯಾವಯಾವ ಇಂಗಿತಚೇಷ್ಟಾದಿಗಳು ಕಾಣುವುವೋ, ಅವೆಲ್ಲವನ್ನೂ ನೀನು ನಿನ್ನ ಬುದ್ಧಿಚಾತುರ್ಯದಿಂದ ಚೆನ್ನಾಗಿ ಗ್ರಹಿಸಿ ತಿಳಿದುಕೊಳ್ಳಬೇಕು! ನೀನು ಭರತನಿಗೆ ಇಲ್ಲಿನ ವೃತ್ತಾಂತಗಳನ್ನು ತಿಳಿಸುವಾಗ "ನಿನ್ನಣ್ಣನಾದ ರಾಮನು ಅನೇಕ ಪ್ರಬಲ ಶತ್ರುಗಳನ್ನು ಜಯಿಸಿ, ಅತ್ಯುತ್ತಮವಾದ ಕೀರ್ತಿಯನ್ನು ಪಡೆದು, ಪೂರ್ಣಾಭಿಷ್ಟವನ್ನು ಹೊಂದಿ, ಮಹಾಬಲವಂತರಾದ ಮಿತ್ರರೊಡನೆ ಸಮೀಪಿಸಿ ಬರುತ್ತಿರುವನು" ಎಂದು ಹೇಳು. ಈ ಮಾತನ್ನು ಕೇಳಿದಾಗ ಅವನಿಗುಂಟಾಗಬಹುದಾದ ಮುಖವರ್ಣದಿಂದಲೂ, ಅವನ ನೋಟದಿಂದಲೂ, ಅವನ ಮಾತಿನಿಂದಲೂ, ಅವನ ಮನೋಭಾವಗಳನ್ನು ಚೆನ್ನಾಗಿ ಗ್ರಹಿಸಿ, ಇದ್ದುದಿದ್ದಂತೆ ತಿಳಿದುಕೊಳ್ಳಬೇಕು. ಬೇಕುಬೇಕಾದ ಭೋಗವಸ್ತುಗಳಿಂದ ಸಮೃದ್ಧವಾಗಿ, ರಥಗಜತುರಗಗಳಿಂದ ತುಂಬಿ, ಕುಲಪರಂಪರೆಯಾಗಿ ಬಂದ ರಾಜ್ಯವು ಎಂತವರಿಗಾದರೂ ಮನಸ್ಸನ್ನು ಆಕರ್ಷಿಸದೆ ಬಿಡದು. ಹಾಗಿದ್ದರೂ ಒಂದುವೇಳೆ ಹಿಂದೆ ಯೌವಾಗಲೂ ರಾಜ್ಯಭಾರವೆಂಬುದನ್ನೇ ಕಂಡರಿಯದವನು ಆ ಕಾರ್ಯಕ್ಕಾಗಿ ಭಯಪಟ್ಟು ಹಿಂಜರಿದಿದ್ದರೂ ಹಿಂಜರಿದಿರಬಹುದು. ಈಗ ಭರತನ ಸ್ಥಿತಿಯು ಹಾಗಲ್ಲ. ಕಳೆದ ಹದಿನಾಲ್ಕು ವರ್ಷಗಳಿಂದ ರಾಜ್ಯವನ್ನನುಭವಿಸಿ ನೋಡಿರುವನು. ಈ ದೀರ್ಘಕಾಲದ ಸಂಬಂಧದಿಂದ ಆ ಭರತನಿಗೆ ಇನ್ನೂ ತಾನೇ ರಾಜ್ಯವನ್ನಾಳಬೇಕೆಂಬ ಆಸೆಯಿದ್ದರೂ ಇರಬಹುದು. ಹಿಂದೆ ಅವನು ತನಗೆ

---

[1] ಇಲ್ಲಿ ರಾಮನು ಭರತನ ಮನೋಭಿಪ್ರಾಯವನ್ನು ಪರೀಕ್ಷಿಸಿ ತಿಳಿಯಬೇಕಾದ ಕಾರಣವೇನೆಂದರೆ:—ಮುಂದೆಯೂ ಭರತನೇ ರಾಜ್ಯವನ್ನು ವಹಿಸುವುದಕ್ಕೆ ಅನುಮತಿಸಿದ ಪಕ್ಷದಲ್ಲಿ ಅವನನ್ನೇ ರಾಜ್ಯದಲ್ಲಿರಿಸಿ ತಾನು ನಿರ್ಭರನಾಗಿರಬೇಕೆಂಬ ಭಾವವಲ್ಲದೆ ಬೇರೆಯಲ್ಲ. ಇದರಿಂದ ಶ್ರೀರಾಮನ ಗಂಭೀರಸ್ವಭಾವವು ವ್ಯಕ್ತವಾಗುವುದು. ಇಲ್ಲಿ ಕೆಲವರು "ರಾಮನು ಭರತನ ಸುಸ್ವಭಾವವನ್ನು ಚೆನ್ನಾಗಿ ತಿಳಿದಿರುವಾಗಲೂ ಅವನನ್ನು ಪರೀಕ್ಷಿಸಬೇಕೆಂದು ಹೇಳಿದುದಕ್ಕೆ ಕಾರಣವು, ರಾಜನು ಸರ್ವವಿಧದಲ್ಲಿಯೂ ತನಗೆ ಅನುರಕ್ತರಾದವರನ್ನೂ ಕೂಡ ಆಗಾಗ ಪರೀಕ್ಷಿಸುತ್ತಿರಬೇಕೆಂಬ ರಾಜನೀತಿಯನ್ನೇ ಲೋಕಕ್ಕೆ ತೋರಿಸುವುದಕ್ಕಲ್ಲದೆ ಬೇರೆಯಲ್ಲ' ವೆಂದು ಹೇಳುವರು.

ರಾಜ್ಯದಲ್ಲಿರುವ ನಿರಾಶೆಯನ್ನು ತೋರಿದ್ದರೂ, ಈಗ ಅವನಿಗೆ ರಾಜ್ಯಾಭಿಲಾಷೆಯಿರುವುದಾಗಿ ಅವನ ಇಂಗಿತಚೇಷ್ಟಾದಿಗಳಿಂದ ತೋರಿಬಂದ ಪಕ್ಷದಲ್ಲಿ ಆ ಸಮಸ್ತ ರಾಜ್ಯವನ್ನೂ ಅವನೇ ಅನುಭವಿಸುತ್ತಿರಲಿ! ಮುಖ್ಯವಾಗಿ ನಮ್ಮ ರಘುಕುಲಕ್ಕೆ ಕೀರ್ತಿಯನ್ನು ತರುವಂತೆ ಯಾರಾದರೂ ರಾಜ್ಯವನ್ನಾಳಿದರೆ ಸರಿ! (ಹಿಂದೆ ನನ್ನ ತಂದೆಯಾದ ದಶರಥನಿಗಂತೂ ನನ್ನ ಪಟ್ಟಾಭಿಷೇಕ ಸಂಭ್ರಮಗಳನ್ನು ಕಣ್ಣಾರೆ ನೋಡಿ ಸಂತೋಷಿಸುವುದಕ್ಕಿಲ್ಲದೆ ಹೋಯಿತು. ಈಗ ನಾನಾದರೂ ಭರತಾಭಿಷೇಕಮಹೋತ್ಸವದಿಂದುಂಟಾದ ಸಂತೋಷವನ್ನು), ತ್ರೈಲೋಕ್ಯವನ್ನೂ ಭರಿಸಬಲ್ಲ ರಘುಕುಲದಲ್ಲಿ ಹುಟ್ಟಿದವನಾದುದರಿಂದ, ಈ ರಾಜ್ಯವನ್ನೂ ಭರಿಸಬಲ್ಲನೆಂಬುದರಲ್ಲಿ ಏನೂ ಸಂದೇಹವಿಲ್ಲ. ಆದುದರಿಂದ ಮೊದಲು ನೀನು ಹೋಗಿ ಈ ವೃತ್ತಾಂತವನ್ನು ತಿಳಿಸಿ, ಅವನ ಬುದ್ಧಿಯನ್ನೂ, ಅವನ ಮನೋನಿಶ್ಚಯವನ್ನೂ ತಿಳಿದುಕೊಂಡು, ನಾವು ಇಲ್ಲಿಂದ ಹೊರಟು ಬಹಳದೂರಕ್ಕೆ ಬರುತ್ತಿದ್ದ ಪಕ್ಷದಲ್ಲಿ ನೀನು ಹಿಂತಿರುಗಿ ಬರಬೇಕಾದುದಿಲ್ಲ" ಎಂದನು. ಹೀಗೆ ರಾಮನು ನಿಯಮಿಸಿದೊಡನೆ, ಹನುಮಂತನು ಮನುಷ್ಯರೂಪವನ್ನು ಧರಿಸಿ ವೇಗದಿಂದ ಅಯೋಧ್ಯೆಯ ಕಡೆಗೆ ಹೊರಡುವುದಕ್ಕೆ ಸಿದ್ಧನಾದನು. ಸರ್ಪವನ್ನು ಹಿಡಿಯುವುದಕ್ಕಾಗಿ ವೇಗದಿಂದ ಹಾರುವ ಗರುತ್ಮಂತನಂತೆ ಆಗಲೇ ಆಕಾಶಕ್ಕೆ ಹಾರಿದನು. ವೀರ್ಯವಂತನಾದ ಆ ಹನುಮಂತನು ಆಕಾಶಮಾರ್ಗದಿಂದ ಹಾರಿ, ಮಹಾಸರ್ಪಗಳಿಗೆ ನಿವಾಸಸ್ಥಾನವಾಗಿಯೂ, ಮಂಗಳಕರವಾಗಿಯೂ ಇರುವ ಗಂಗಾ ಯಮುನೆಗಳ ಸಂಗಮಸ್ಥಾನವನ್ನು ನೋಡಿ ಸಂತೋಷಪೂರ್ವಕವಾದ ಶುಭವಾಕ್ಯದಿಂದ, "ಎಲೈ ಸೌಮ್ಯನೆ! ಸತ್ಯಪರಾಕ್ರಮನಾಗಿಯೂ, ಕಕುತ್ಸ್ಥಕುಲತಿಲಕನಾಗಿಯೂ ಇರುವ ನಿನ್ನ ಮಿತ್ರನಾದ ರಾಮನು ಸೀತಾಲಕ್ಷ್ಮಣರೊಡನೆ ಹಿಂದೆ ಬರುತ್ತಿರುವನು. ನಿನಗೆ ತನ್ನ ಕ್ಷೇಮವನ್ನು ಹೇಳಿಕಳುಹಿಸಿರುವನು. ಭರದ್ವಾಜಮಹರ್ಷಿಯ ಆಜ್ಞೆಯಿಂದ, ಈ ಪಂಚಮಿ ದಿನದ ರಾತ್ರಿಯನ್ನು ಆ ಆಶ್ರಮದಲ್ಲಿಯೇ ಕಳೆದು, ನಾಳೆ ಬೆಳಗಾದ ಮೇಲೆ ಆ ಮಹರ್ಷಿಯ ಅನುಜ್ಞೆಯನ್ನು ಪಡೆದು ಹೊರಟು ಬರುವನು. ಶೀಘ್ರದಲ್ಲಿಯೇ ನೀನು ಅವನನ್ನು ನೋಡಬಹುದು" ಎಂದನು. ಮಹಾತೇಜಸ್ವಿಯಾದ ಹನುಮಂತನು ಗುಹನಿಗೆ ಈ ಮಾತುಗಳನ್ನು ಹೇಳಿ, ಶ್ರೀರಾಮಾಗಮನವನ್ನು ಭರತನಿಗೆ ತಿಳಿಸತಕ್ಕ ಮಹಾಭಾಗ್ಯವು ತನ್ನ

ಲಭಿಸಿತೆಂಬ ಸಂತೋಷದಿಂದ ಪುಳಕಿತಗಾತ್ರನಾಗಿ, ಅಲ್ಲಿದ್ದ ಪರ್ವತನದೀನ ದಾದಿಗಳ ರಾಮಣೀಯಕವನ್ನು ನೋಡುವುದರಲ್ಲಿಯೂ ಆಸೆಯನ್ನಿಡದೆ, ಅತ್ಯಾತುರದಿಂದ ಮೇಲೆ ಹಾರಿಬರುತ್ತಿದ್ದನು. ಹೀಗೆ ಆ ಹನುಮಂತನು ಆಕಾಶಮಾರ್ಗದಿಂದ ಹಾರಿಬರುವಾಗ, ದಾರಿಯಲ್ಲಿ ಮೊದಲು ಪರುಶುರಾಮ ತೀರ್ಥವನ್ನೂ, ವಾಲುಕಿನಿ, ಗೋಮತಿ, ಎಂಬ ನದಿಗಳನ್ನೂ, ಭಯಂಕರ ವಾದ ಸಾಲವೃಕ್ಷಗಳ ತೋಪನ್ನೂ, ಸಸ್ಯ ಸಮೃದ್ಧಗಳಾದ ಕೋಸಲಜನಪದ ಗಳನ್ನೂ, ಅಲ್ಲಿನ ಸಾವಿರಾರು ಪ್ರಜೆಗಳನ್ನೂ ನೋಡುತ್ತಬಂದನು. ಹೀಗೆ ವೇಗದಿಂದ ಬಹುದೂರವನ್ನು ದಾಟಿ, ಕೊನೆಗೆ ನಂದಿಗ್ರಾಮದ ಸಮೀಪ ದಲ್ಲಿ ಪುಷ್ಪಿತಗಳಾದ ವೃಕ್ಷಗಳ ಸಾಲನ್ನು ಕಂಡನು. ಆ ತೋಪುಗಳಲ್ಲಿ ನಾನಾಕಡೆಗಳಲ್ಲಿಯೂ, ಸ್ತ್ರೀಬಾಲವೃದ್ಧರೂ ಸಂತೋಷದಿಂದ ಸೇರಿ ವಿಹರಿ ಸುತ್ತಿ[illegible] ವೃಕ್ಷಗಳೆಲ್ಲವೂ ವಿಶೇಷ ಶೋಭಾತಿಶಯವನ್ನು ಹೊಂದಿ ಇಂದ್ರನ ನಂದನವನದಲ್ಲಿಯೂ, ಕುಬೇರನ ಚೈತ್ರರಥೋದ್ಯಾನದಲ್ಲಿಯೂ, ಬೆಳೆದಿರುವ ವೃಕ್ಷಗಳಂತೆ ಬೆಳಗುತ್ತಿದ್ದುವು. ಅಯೋಧ್ಯೆಗೆ ಒಂದು ಹರ ದಾರಿಯ ದೂರದಲ್ಲಿದ್ದ ಆ ನಂದಿಗ್ರಾಮದ ಸಮೀಪವನ್ನು ಸೇರಿದೊಡನೆ ಹನುಮಂತನು ಅಲ್ಲಿ ತಾಪಸವೇಷದಿಂದ ಕೃಷ್ಣಾಜಿನವನ್ನೂ, ನಾರುಮಡಿ ಯನ್ನೂ ಧರಿಸಿ, ಜಡೆಯನ್ನು ಬೆಳೆಯಬಿಟ್ಟು, ರಾಮನನ್ನಗಲಿದ ವ್ಯಸನ ದಿಂದ ಕೊರಗುತ್ತ ಕೇವಲಕೃಶನಾಗಿ ಆಶ್ರಮವಾಸಿಯಾಗಿದ್ದ ಭರತನನ್ನು ಕಂಡನು. ಮಹಾರಾಜಕುಮಾರನಾಗಿದ್ದರೂ ಆ ಭರತನು ತನ್ನಣ್ಣನನ್ನಗ ಲಿದ ದುಃಖದಿಂದ ಕೃಶನಾಗಿ ದೇಹಸಂಸ್ಕಾರವನ್ನು ಬಿಟ್ಟು, ಕೊಳೆಮುಚ್ಚಿದ ಮೈಯುಳ್ಳವನಾಗಿ, ಬಹಿರಿಂದ್ರಿಯಗಳನ್ನು ನಿಗ್ರಹಿಸಿ ಗಡ್ಡೆಗೆಣಸುಗಳನ್ನೇ ಆಹಾರವಾಗಿ ಗ್ರಹಿಸಿ ತಾಪಸವೃತ್ತಿಯಿಂದ ಧರ್ಮವನ್ನಾಚರಿಸುತ್ತ, ಜಡೆ ಯನ್ನೆತ್ತಿ ಕಟ್ಟಿ, ನಾರುಮಡಿಯನ್ನುಟ್ಟು, ಕೃಷ್ಣಾಜಿನವನ್ನು ಉತ್ತರೀಯ ವಾಗಿ ಮೇಲೆ ಹಾಕಿಕೊಂಡು, ವಾಙ್ನಿಯಮದಿಂದಲೂ ಮನೋನಿಯಮ ದಿಂದಲೂ ಆತ್ಮಧ್ಯಾನವನ್ನು ಮಾಡುತ್ತ, ಬ್ರಹ್ಮಋಷಿಗಳಿಗೆ ಸಮಾನ ವಾದ ತೇಜಸ್ಸಿನಿಂದ ಬೆಳಗುತ್ತಿದ್ದನು. ಹಿಂದೆ ತನ್ನಣ್ಣನಾದ ರಾಮನು ತನಗೆ ಕೊಟ್ಟಿದ್ದ ಪಾದುಕೆಗಳನ್ನೇ ಮುಂದಿಟ್ಟುಕೊಂಡು ರಾಜ್ಯವನ್ನು ನಡೆ ಸುತ್ತ, ಆಯಾ ವರ್ಣಾಶ್ರಮಧರ್ಮಗಳಿಗೆ ಲೋಪವಿಲ್ಲದೆ, ನಾಲ್ಕುವರ್ಣದ ವರಿಗೂ ಯಾವ ಭಯವೂ ಇಲ್ಲದಂತೆ ಧರ್ಮಪರಿಪಾಲನವನ್ನು ಮಾಡುತ್ತಿ

ದ್ದನು. ಶುದ್ಧಾತ್ಮರಾಗಿಯೂ, ರಾಜ್ಯಭಾರದಲ್ಲಿ ಜಾಗರೂಕರಾಗಿಯೂ ಇರುವ ಮಂತ್ರಿಗಳೂ, ಪುರೋಹಿತರೂ, ಸೇನಾಪತಿಗಳೂ ಅವನನ್ನು ಸೇವಿಸುತ್ತಿದ್ದರು. ಮತ್ತು ಅವರು ರಾಜಕುಮಾರನಾದ ಆ ಭರತನು ಜಟಾವಲ್ಕಲಧಾರಿಯಾಗಿರುವುದನ್ನು ನೋಡಿ, ತಾವೂ ಧರ್ಮವತ್ಸಲನಾದ ಆತನನ್ನನುಸರಿಸಿಯೇ ನಡೆಯಬೇಕೆಂಬುದಕ್ಕಾಗಿ ಭೋಗಾಪೇಕ್ಷೆಯನ್ನು ಬಿಟ್ಟು ಕಾಷಾಯವನ್ನು ಧರಿಸಿ ಅವನನ್ನು ಸೇವಿಸುತ್ತಿದ್ದರು. ಹೀಗೆ, ಧರ್ಮಜ್ಞನಾದ ಭರತನು, ದೇಹವನ್ನು ಧರಿಸಿದ ಬೇರೊಬ್ಬ ಧರ್ಮದೇವತೆಯೇ ಎಂಬಂತೆ ಕಾಣುತ್ತ ಶಾಸ್ತ್ರೋಕ್ತವಿಧಿಯಿಂದ, ಅಗ್ನಿಕುಂಡವನ್ನು ಬೆಳಸಿ ಶುಚಿಯಾಗಿ ನಿಂತು, ತನ್ನ ದೇಹವನ್ನು ಅದರಲ್ಲಿ ತ್ಯಜಿಸಬೇಕೆಂದು ಪ್ರಯತ್ನಿಸುತ್ತಿದ್ದುದನ್ನು ಹನುಮಂತನು ನೋಡಿದನು. ವಾಯುಪುತ್ರನಾದ ಹನುಮಂತನು ಹೀಗಿದ್ದ ಆ ಭರತನನ್ನು ಕಂಡೊಡನೆ, ಥಟ್ಟನೆ ಕೆಳಗಿಳಿದು ಅವನಮುಂದೆ ಬದ್ಧಾಂಜಲಿಯಾಗಿ ನಿಂತು “ರಾಜಕುಮಾರಾ! ದಂಡಕಾರಣ್ಯದಲ್ಲಿ ಜಟಾವಲ್ಕಲಗಳನ್ನು ಧರಿಸಿ ವಾಸಮಾಡುತ್ತಿದ್ದ ಯಾವನಿಗಾಗಿ ನೀನು ಇಷ್ಟು ದುಃಖಿಸುತ್ತಿರುವೆಯೋ, ಆ ರಾಮನು ತನ್ನ ಕ್ಷೇಮವನ್ನು ನಿನಗೆ ತಿಳಿಸುವುದಕ್ಕಾಗಿ ನನ್ನನ್ನು ಕಳುಹಿಸಿರುವನು. ಈ ಪ್ರಿಯವೃತ್ತಾಂತವನ್ನು ತಿಳಿಸುವುದಕ್ಕಾಗಿಯೇ ನಾನು ಮುಂದಾಗಿ ಬಂದೆನು. ಇನ್ನು ನೀನು ಭಯಂಕರವಾದ ಈ ವ್ಯಸನವನ್ನು ಬಿಟ್ಟುಬಿಡು. ಇನ್ನು ಮುಹೂರ್ತದಲ್ಲಿಯೇ ನೀನು ರಾಮನೊಡನೆ ಸೇರಬಹುದು. ನಿನ್ನಣ್ಣನಾದ ರಾಮನು ರಾವಣನನ್ನು ಕೊಂದು, ಪ್ರಿಯಪತ್ನಿಯಾದ ಸೀತೆಯನ್ನು ಪಡೆದು ಕೃತಕೃತ್ಯನಾಗಿ, ಬಲಾಢ್ಯರಾದ ತನ್ನ ಮಿತ್ರರೊಡಗೂಡಿ ಅದೋ ಅಲ್ಲಿ ಬರುತ್ತಿರುವನು.. ಮಹಾತೇಜಸ್ವಿಯಾದ ಲಕ್ಷ್ಮಣನೂ ಅವನೊಡನೆ ಬರುತ್ತಿರುವನು. ಯಶಸ್ವಿಯಾದ ಸೀತೆಯೂಕೂಡ ಪೂರ್ಣಮನೋರಥಳಾಗಿ ಇಂದ್ರನೊಡಗೂಡಿದ ಶಚಿಯಂತೆ ರಾಮನ ಸಂಗಡಲೇ ಬರುತ್ತಿರುವಳು” ಎಂದನು. ಭ್ರಾತೃವತ್ಸಲನಾದ ಭರತನು, ಹನುಮಂತನ ಬಾಯಿಂದ ಈ ಮಾತುಗಳನ್ನು ಕೇಳಿದೊಡನೆ ತನ್ನ ಮನಸ್ಸಂತೋಷವನ್ನು ತಡೆದು ನಿಲ್ಲಲಾರದೆ, ಆ ಸಂತೋಷಪಾರವಶ್ಯದಿಂದ ಹಾಗೆಯೇ ಮೈಮರೆತು ಮೂರ್ಛಿತನಾಗಿ ಕೆಳಗೆ ಬಿದ್ದನು. ಮುಹೂರ್ತಮಾತ್ರದಲ್ಲಿಯೇ ತಿರುಗಿ ಚೇತರಿಸಿಕೊಂಡು ಮೇಲೆದ್ದು ತನಗೆ ಆ ಪ್ರಿಯವಾರ್ತೆಯನ್ನು ತಿಳಿಸಿದ ಹನುಮಂತನನ್ನು ಪ್ರೀತಿಯಿಂ

ದಾಲಿಂಗಿಸಿ, ತನಗೆ ಚಿರಕಾಲದಿಂದಿದ್ದ ಮನೋವ್ಯಥೆಯನ್ನೂ ನೀಗಿ ತನ್ನ ಕಣ್ಣುಗಳಿಂದುಂಟಾದ ಆನಂದಬಾಷ್ಪಗಳಿಂದ ಅವನ ದೇಹವನ್ನು ನೆನೆಸುತ್ತ ಆತನನ್ನು ಕುರಿತು "ಎಲೆ ಸೌಮ್ಯನೆ! ನೀನು ಯಾರು? ನನ್ನಲ್ಲಿ ಇಷ್ಟೊಂದು ದಯೆಯನ್ನು ತೋರಿಸಿ ಈ ಪ್ರಿಯವೃತ್ತಾಂತವನ್ನು ತಿಳಿಸಿದ ನೀನು ದೇವತೆಯೋ, ಅಥವಾ ಮನುಷ್ಯನೋ ತಿಳಿಯಲಿಲ್ಲ. ಈ ಪ್ರಿಯ ವಾರ್ತೆಯನ್ನು ತಿಳಿಸಿದ ನಿನಗೆ ನಾನು ಯಾವ ಪ್ರತ್ಯುಪಕಾರವನ್ನು ಮಾಡಲಿ! ನೂರಾರು ಸಹಸ್ರಗೋವುಗಳನ್ನೂ, ಸರ್ವೋತ್ತಮಗಳಾದ ನೂರಾರು ಗ್ರಾಮಗಳನ್ನೂ, ಕುಂಡಲಾಲಂಕೃತರಾಗಿಯೂ, ಸದಾಚಾರ ವುಳ್ಳವರಾಗಿಯೂ, ಬಂಗಾರದಂತೆ ಮೈಯುಳ್ಳವರಾಗಿಯೂ, ಅಂದವಾದ ತೊಡೆಗಳಿಂದಲೂ, ಎಸಳಾದ ಮೂಗಿನಿಂದಲೂ, ಚಂದ್ರಬಿಂಬಕ್ಕೆಣೆಯಾದ ಮುಖಗಳಿಂದಲೂ ಕೂಡಿದವರಾಗಿಯೂ, ಕುಲದಲ್ಲಿಯೂ, ಜಾತಿಯಲ್ಲಿಯೂ ಉತ್ತಮರಾಗಿಯೂ, ಸರ್ವಾಲಂಕಾರಭೂಷಿತರಾಗಿಯೂ ಇರುವ ಹದಿನಾಲ್ಕು ಮಂದಿ ಕನ್ನಿಕೆಯರನ್ನೂ ಇದೋ ಈಗ ನಾನು ನಿನಗೆ ಪಾರಿತೋಷಿಕವಾಗಿ ಕೊಡುವೆನು" ಎಂದನು. ಹೀಗೆ ರಾಜಕುಮಾರನಾದ ಭರತನು ಆಂಜನೇಯನ ಮುಖದಿಂದ ರಾಮಾಗಮನವೆಂಬ ಅತ್ಯಾಶ್ಚರ್ಯಕರವಾದ ಪ್ರಿಯ ವಾರ್ತೆಯನ್ನು ಕೇಳಿ ಪರಮಸಂತೋಷದಿಂದುಕ್ಕುತ್ತ, ರಾಮನನ್ನು ನೋಡ ಬೇಕೆಂಬ ಮಹೋತ್ಸಾಹವುಳ್ಳವನಾಗಿ, ಮೇಲೆಮೇಲೆ ಹೆಚ್ಚಿಬರುವ ಸಂತೋಷ ವನ್ನು ತಡೆಯಲಾರದೆ, ತಿರುಗಿ ಹನುಮಂತನನ್ನು ಕೇಳುವನು.

ಇಲ್ಲಿಗೆ ನೂರಿಪ್ಪತ್ತೆಂಟನೆಯ ಸರ್ಗವು.

ಭರತನು ಕೇಳಿದುದರಮೇಲೆ ಹನುಮಂತನು ರಾಮನ ವನವಾಸಕಾಲ ದಲ್ಲಿ ನಡೆದ ವೃತ್ತಾಂತಗಳೆಲ್ಲವನ್ನೂ ಕ್ರಮವಾಗಿ ಹೇಳಿ ತಿಳಿಸಿದುದು.

ಆಮೇಲೆ ಭರತನು ಹನುಮಂತನನ್ನು ಕುರಿತು "ಎಲೈ ಸೌಮ್ಯನೆ!" ನನ್ನಣ್ಣನಾದ ಶ್ರೀರಾಮನು ಆ ಘೋರಾರಣ್ಯಕ್ಕೆ ಹೋಗಿ ಇಪ್ಪವರ್ಷ ಗಳು ಕಳೆದಮೇಲೆ, ಕ್ಷೇಮದಿಂದ ಹಿಂತಿರುಗಿ ಬಂದನೆಂಬ ಈ ಪ್ರಿಯವೃ

ತ್ತಾಂತವನ್ನು ಈಗ ನಾನು ನಿನ್ನ ಬಾಯಿಂದ ಕೇಳುವ ಹಾಗಾಯಿತಲ್ಲವೆ? ಇದನ್ನು ನೋಡಿದರೆ, "ಲೋಕದಲ್ಲಿ ಮನುಷ್ಯನು ಸಾಯದೆ ಬದುಕಿದ್ದರೆ, ನೂರಾರುವರ್ಷಗಳಿಗಾದರೂ ಸುಖಸಂತೋಷಗಳನ್ನು ಕಾಣದೆ ಹೋಗಲಾರನು" ಎಂದು ಜನಗಳಾಡಿಕೊಳ್ಳುವ ನಾಣ್ಣುಡಿಯು ಬಹಳ ಸಮಂಜಸವೆಂದೇ ತೋರುವುದು! ಆ ಸಂಗತಿಯು ಹಾಗಿರಲಿ! ಮೊದಲು ರಾಮನು ಇಲ್ಲಿಂದ ಹೊರಟಮೇಲೆ ನಡೆದ ವೃತ್ತಾಂತಗಳನ್ನು ತಿಳಿಸು! ರಾಮನಿಗೂ ವಾನರರಾದ ನಿಮಗೂ ಎಲ್ಲಿ ಯಾವ ಕಾರಣಕ್ಕಾಗಿ ಸಮಾಗಮವುಂಟಾಯಿತು? ನಾನು ಅವಶ್ಯವಾಗಿ ಇದನ್ನು ಕೇಳಿ ತಿಳಿಯಬೇಕೆಂದಿರುವೆನು. ಇದ್ದುದಿದ್ದಂತೆ ಎಲ್ಲವನ್ನೂ ವಿವರಿಸಿ ಹೇಳು" ಎಂದನು. ಭರತನು ಹೀಗೆಂದು ಹೇಳಿ, ಹನುಮಂತನಿಗೆ ತಾಪಸಯೋಗ್ಯವಾದ ಒಂದಾಸನವನ್ನು ಕೊಟ್ಟು, ಅವನನ್ನು ಕುಳ್ಳಿರಿಸಿಕೊಂಡನು. ಆಗ ಹನುಮಂತನು ಕಾಡಿನಲ್ಲಿ ನಡೆದ ವೃತ್ತಾಂತವೆಲ್ಲವನ್ನೂ ಕ್ರಮವಾಗಿ ಹೇಳಲಾರಂಭಿಸಿ, "ಪ್ರಭೂ! ನಿನ್ನ ತಾಯಿ ಕೈಕೇಯಿಗೆ ದಶರಥನು ವರವನ್ನು ಕೊಡುವುದಾಗಿ ವಾಗ್ದಾನಮಾಡಿದುದೂ, ಅದನ್ನು ಕಾಪಾಡುವುದಕ್ಕಾಗಿ ರಾಮನು ಕಾಡಿಗೆ ಹೊರಟುದೂ, ಪುತ್ರಶೋಕದಿಂದ ನಿನ್ನ ತಂದೆಯಾದ ದಶರಥರಾಜನು ಮರಣವನ್ನು ಹೊಂದಿದುದೂ, ಆಮೇಲೆ ದೂತರು ರಾಜಗೃಹದಿಂದ ನಿನ್ನನ್ನು ಅಯೋಧ್ಯೆಗೆ ಕರೆತಂದುದೂ, ಆಗ ನೀನು ಶತ್ರುಗಳನ್ನಡಗಿಸಿ ರಾಜ್ಯವನ್ನು ಪಾಲಿಸುವುದಕ್ಕೆ ಸಮರ್ಥನಾಗಿದ್ದರೂ, ಅಯೋಧ್ಯೆಗೆ ಬಂದಮೇಲೆ ಆ ರಾಜ್ಯವನ್ನೊಲ್ಲದೆ, ಸತ್ಪುರುಷರ ಧರ್ಮವನ್ನನುಸರಿಸಿ, ಜ್ಯೇಷ್ಠಭ್ರಾತೃವಾದ ಆ ರಾಮನನ್ನೇ ಕರೆತಂದು ರಾಜ್ಯದಲ್ಲಿರಿಸಬೇಕೆಂಬ ಯತ್ನದಿಂದ ಚಿತ್ರಕೂಟಕ್ಕೆ ಹೊರಟುದೂ, ಅಲ್ಲಿ ನೀನು ರಾಮನನ್ನು ಅನೇಕವಿಧದಿಂದ ಪ್ರಾರ್ಥಿಸಿದರೂ ಪಿತೃವಾಕ್ಯಪರಿಪಾಲನದಲ್ಲಿಯೇ ನಿರತನಾದ ಆತನು ನಿನ್ನ ಪ್ರಾರ್ಥನೆಯನ್ನು ನಿರಾಕರಿಸಿ ರಾಜ್ಯವನ್ನೊಲ್ಲದೆ ಹೋದುದೂ ಆಮೇಲೆ ನೀನು ಪೂಜ್ಯನಾದ ಆ ರಾಮನ ಪಾದುಕೆಗಳನ್ನು ತೆಗೆದುಕೊಂಡು ಹಿಂತಿರುಗಿ ಬಂದುದೂ, ಈ ವೃತ್ತಾಂತಗಳೆಲ್ಲವೂ ನಿನಗೆ ಯಥಾಸ್ಥಿತವಾಗಿ ತಿಳಿದೇ ಇರುವುವಷ್ಟೆ? ನೀನು ರಾಮಪಾದುಕೆಗಳನ್ನು ತೆಗೆದುಕೊಂಡು ಇತ್ತಲಾಗಿ ಹಿಂತಿರುಗಿದಮೇಲೆ ನಡೆದ ವೃತ್ತಾಂತಗಳನ್ನು ಮಾತ್ರ ಹೇಳುವೆನು ಕೇಳು. ನೀನು ನಿನ್ನ ಸೈನ್ಯ

ದೊಡನೆ ಚಿತ್ರಕೂಟಕ್ಕೆ ಬಂದಾಗ ಆ ವನದಲ್ಲಿದ್ದ ಮೃಗಪಕ್ಷಿಗಳೆಲ್ಲವೂ ನಿನ್ನ ಸೇನಾ ಸಂಚಾರವನ್ನು ನೋಡಿ ಭಯಕ್ಕಾಗಿ ನಾನಾದಿಕ್ಕುಗಳಿಗೆ ಚದರಿ, ಆ ಪ್ರದೇಶವೆಲ್ಲವೂ ಬಹಳವಾಗಿ ಹಾಳುಬಿದ್ದಂತೆ ಕಾಣಿಸುತ್ತಿತ್ತು. ಒಡನೆಯೇ ರಾಮನು ಆ ಸ್ಥಳವನ್ನು ಬಿಟ್ಟು ಮುಂದೆ ಹೊರಟು, ನಿರ್ಜನವಾಗಿಯೂ, ಭಯಂಕರವಾಗಿಯೂ ಇದ್ದ ದಂಡಕಾರಣ್ಯವೆಂಬ ದೊಡ್ಡ ಕಾಡಿಗೆ ಹೋದನು. ಕಾಡಾನೆಗಳ ತುಳಿತದಿಂದಲೂ, ಸಿಂಹವ್ಯಾಘ್ರಗಳೇ ಮೊದಲಾದ ಅನೇಕ ಕ್ರೂರಮೃಗಗಳಿಂದಲೂ, ಅತಿ ಘೋರವಾಗಿ, ಬಹಳ ವಿಶಾಲವಾಗಿದ್ದ ಆ ದಂಡಕಾರಣ್ಯದಲ್ಲಿ ಸೀತಾಲಕ್ಷ್ಮಣರೊಡನೆ ರಾಮನು ಅಲ್ಲಲ್ಲಿ ಸಂಚರಿಸುತ್ತಿರುವಾಗ, ಬಹಳಬಲಾಢ್ಯನಾದ ವಿರಾಧನೆಂಬ ರಾಕ್ಷಸನೊಬ್ಬನು ಕ್ರೂರಧ್ವನಿಯಿಂದ ಕೂಗುತ್ತ ಇವರಿಗೆ ಅಡ್ಡಲಾಗಿ ಬಂದು ತಡೆದನು. ಆ ರಾಕ್ಷಸನು ಆನೆಯಂತೆ ಗರ್ಜಿಸುತ್ತ ಬಂದು ತಮಗಡ್ಡಲಾಗಿ ನಿಂತುದನ್ನು ನೋಡಿ, ಆ ಮೂವರೂ ಆ ರಾಕ್ಷಸನನ್ನು ತಲೆಕೆಳಗಾಗಿಯೂ, ಕೈಮೇಲಾಗಿಯೂ ಹಿಡಿದು ಮೇಲೆತ್ತಿತಂದು ಒಂದು ಹಳ್ಳದಲ್ಲಿ ಹಾಕಿ ಹೂಳಿಬಿಟ್ಟರು. ಹೀಗೆ ಆ ಸಹೋದರರಿಬ್ಬರೂ ಸೇರಿ, ದೇವತೆಗಳಿಂದಲೂ ಸಾಧ್ಯವಲ್ಲದ ಈ ಕಾರ್ಯವನ್ನು ನಡೆಸಿದ ಮೇಲೆ, ಆ ದಿನದ ಸಾಯಂಕಾಲದೇ ಶರಭಂಗಾಶ್ರಮಕ್ಕೆ ಹೋಗಿ ಸೇರಿದರು. ಶರಭಂಗನು ರಾಮನ ದರ್ಶನವನ್ನು ಮಾಡಿದೊಡನೆ, ತನ್ನ ದೇಹವನ್ನು ತ್ಯಜಿಸಿ ದೇವಲೋಕಕ್ಕೆ ಹೋದನು. ಆಮೇಲೆ ಸತ್ಯಪರಾಕ್ರಮನಾದ ರಾಮನು ಅಲ್ಲಿದ್ದ ಋಷಿಗಳೆಲ್ಲರನ್ನೂ ನಮಸ್ಕರಿಸಿ ಮುಂದೆ ಹೊರಟು, ಜನಸ್ಥಾನಕ್ಕೆ ಹೋದನು. ಆಮೇಲೆ ಕೆಲವು ದಿನಗಳಿಗೆ ಶೂರ್ಪಣಖಿಯೆಂಬ ರಾಕ್ಷಸಿಯೊಬ್ಬಳು ರಾಮನ ಬಳಿಗೆ ಬಂದಳು. ರಾಮಾಜ್ಞೆಯಿಂದ ಲಕ್ಷ್ಮಣನು, ತನ್ನ ಕತ್ತಿಯನ್ನೆತ್ತಿ ಆ ರಾಕ್ಷಸಿಯ ಕಿವಿಮೂಗುಗಳನ್ನು ಕುಯ್ದನು ಮಹಾತ್ಮನಾದ ರಾಮನು ಆ ಜನಸ್ಥಾನದಲ್ಲಿದ್ದಾಗಲೇ ಭಯಂಕರ ಕರ್ಮವುಳ್ಳ ಹದಿನಾಲ್ಕು ಸಾವಿರಮಂದಿ ರಾಕ್ಷಸರನ್ನು ವಧಿಸಿದನು. ಆ ಹದಿನಾಲ್ಕುಸಾವಿರಮಂದಿ ರಾಕ್ಷಸರೂ, ಒಂದಾಗಿ ಗುಂಪುಗೂಡಿ ರಾಮನ ಮೇಲೆ ದಂಡೆತ್ತಿ ಬಂದಿದ್ದರು. ಆದರೇನು? ರಾಮನು ತಾನೊಬ್ಬನೇ ಆ ರಾಕ್ಷಸರೆಲ್ಲರನ್ನೂ ಧೈರ್ಯದಿಂದಿದಿರಿಸಿ, ಮೂರು ಗಳಿಗೆಗಳೊಳಗಾಗಿ ಅವರೆಲ್ಲರನ್ನೂ ನಿಶ್ಶೇಷವಾಗಿ ಧ್ವಂಸಮಾಡಿಬಿಟ್ಟನು. ಆ ರಾಕ್ಷಸರೆಲ್ಲರೂ ದಂಡ

ಕಾರಣ್ಯದಲ್ಲಿ ತಿರುಗುತ್ತ ಋಷಿಗಳ ತಪಸ್ಸಿಗೆ ಬಹಳವಾಗಿ ವಿಘ್ನವನ್ನು ಮಾಡುತ್ತಿದ್ದರು. ಅವರಲ್ಲಿ ಒಬ್ಬೊಬ್ಬನೂ ಬಹಳ ಬಲಾಢ್ಯರು! ಒಬ್ಬೊಬ್ಬರೂ ವೀರ್ಯಶಾಲಿಗಳು! ರಾಮನು ಈ ರಾಕ್ಷಸರೆಲ್ಲರನ್ನೂ ಕೊಂದ ಮೇಲೆ ಆ ಪ್ರದೇಶವು ನಿಷ್ಕಂಟಕವಾಯಿತು. ರಾಮನೊಬ್ಬನೇ ಆ ಸಮಸ್ತ ರಾಕ್ಷಸರನ್ನೂ ನಜ್ಜುಗುಜ್ಜಾಗಿ ಮಾಡಿಬಿಟ್ಟನು. ಅವರಿಗೆಲ್ಲಾ ಪ್ರಮುಖನಾದ ಖರನೂ ರಾಮಬಾಣದಿಂದ ಸತ್ತುಬಿದ್ದನು. ಮೊದಲು ರಾಮನಿಂದ ವಿರೂಪನಮಾಡಲ್ಪಟ್ಟಿದ್ದ ಮೂರ್ಖೆಯಾದ ಆ ಶೂರ್ಪಣಖೆಯೂ, ಈ ಖರಾದಿ ವಧವನ್ನು ನೋಡಿ ಮತ್ತಷ್ಟು ಕೋಪಗೊಂಡು, ತನ್ನಣ್ಣನಾದ ರಾವಣನಬಳಿಗೆ ಹೋಗಿ ಮೊರೆಯಿಟ್ಟಳು. ರಾವಣನ ಕಡೆಯವನಾದ ಮಾರೀಚನೆಂಬ ಘೋರರಾಕ್ಷಸನೊಬ್ಬನು, ರಾವಣನಿಂದ ಪ್ರೇರಿತನಾಗಿ, ರತ್ನಮಯವಾದ ಒಂದು ಜಿಂಕೆಯ ರೂಪವನ್ನು ಧರಿಸಿ ಬಂದು, ಸೀತೆಯ ಮುಂದೆ ನಲಿದಾಡುತ್ತ, ಅವಳಿಗೆ ಆಸೆಯನ್ನು ಹುಟ್ಟಿಸಿದನು. ಆಗ ಸೀತೆಯು ರಾಮನನ್ನು ನೋಡಿ, "ನಾಥಾ! ಆ ಜಿಂಕೆಯನ್ನು ಹಿಡಿದು ತಂದುಕೊಡು! ಆಹಾ! ಅದನ್ನು ತಂದಿಟ್ಟುಕೊಂಡರೆ, ಅದರಿಂದ ನಮ್ಮಾಶ್ರಮಕ್ಕೇ ಒಂದುವಿಧವಾದ ಅಪೂರ್ವಶೋಭೆಯುಂಟಾಗುವುದು!" ಎಂದಳು. ಆಗಲೇ ರಾಮನು ಧನುರ್ಧಾರಿಯಾಗಿ ಬಂದು, ಮುಂದೆ ಮುಂದೆ ಓಡಿಹೋಗುತ್ತಿದ್ದ ಆ ಜಿಂಕೆಯನ್ನು ಬಹುದೂರದವರೆಗೆ ಬೆನ್ನಟ್ಟಿ ಹೋದನು. ಕೊನೆಗೆ ಆ ಮೃಗವು ತನ್ನ ಕೈಗೆ ಸಿಕ್ಕದೆ ಓಡುತ್ತಿರುವುದನ್ನು ನೋಡಿ ಅದೊಂದು ಮಾಯೆಯೆಂದೆಣಿಸಿ, ನಯವಾಗಿ ಕೆತ್ತಿದ ಒಂದು ತೀಕ್ಷ್ಣಬಾಣವನ್ನು ಪ್ರಯೋಗಿಸಿ, ಅದನ್ನು ಕೊಂದುಬಿಟ್ಟನು. ರಾಮನು ಅತ್ತಲಾಗಿ ಆ ಜಿಂಕೆಯನ್ನು ಬೆನ್ನಟ್ಟಿ ಹೋದಮೇಲೆ ಲಕ್ಷ್ಮಣನೂ ಅವನನ್ನು ಹುಡುಕುವುದಕ್ಕಾಗಿ ಹೊರಟನು. ಈ ಸಮಯವನ್ನು ನೋಡಿ ದುರಾತ್ಮನಾದ ರಾವಣನು ರಾಮಾಶ್ರಮವನ್ನು ಪ್ರವೇಶಿಸಿ, ಅಲ್ಲಿ ಅಂಗಾರಕಗ್ರಹವು ರೋಹಿಣಿಯನ್ನು ಹಿಡಿದಂತೆ ಏಕಾಕಿನಿಯಾಗಿದ್ದ ಸೀತೆಯನ್ನು ಬಲಾತ್ಕಾರದಿಂದ ಹಿಡಿದು ವೇಗದಿಂದೆತ್ತಿಕೊಂಡು ಹೊರಟನು. ಆಗ ಋಷ್ಯಮೂಕ ಪರ್ವತದ ಮೇಲೆ ಕುಳಿತಿದ್ದ ಅದ್ಭುತಾಕಾರವುಳ್ಳ ಕೆಲವು ವಾನರರು ರಾವಣನು ಸೀತೆಯನ್ನೆತ್ತಿಕೊಂಡು ಅಂತರಿಕ್ಷಮಾರ್ಗವಾಗಿ ಹೋಗುತ್ತಿರುವುದನ್ನು ಆಶ್ಚರ್ಯಭರಿತರಾಗಿ ನೋಡುತ್ತಿದ್ದರು. ಕೊನೆಗೆ ರಾವಣನು ಸೀತೆಯನ್ನು ತನ್ನ ರಾಜಧಾನಿ

ಯಾದ ಲಂಕೆಗೆ ತಂದುಬಿಟ್ಟನು. ಅಲ್ಲಿ ಸುವರ್ಣಪ್ರಾಕಾರದಿಂದ ರಮ್ಯ ವಾದ ಒಂದಾನೊಂದು ದೊಡ್ಡ ಮಂದಿರದಲ್ಲಿ ಆಕೆಯನ್ನಿರಿಸಿ, ಅವಳನ್ನು ವಶಪಡಿಸುವುದಕ್ಕೆ ಯತ್ನಿಸಿದನು. ಆದರೇನು? ಪರಮ ಪತಿವ್ರತೆಯಾದ ಸೀತಾದೇವಿಯು ಆ ರಾವಣನ ಪ್ರಲೋಭನವಾಕ್ಯಗಳೆಲ್ಲವನ್ನೂ ಹುಲ್ಲಿ ಗಿಂತಲೂ ಕಡೆಯಾಗಿ ಭಾವಿಸಿ, ಆ ರಾವಣನನ್ನು ಲಕ್ಷ್ಯಮಾಡದೆ ನಿರಾ ಕರಿಸಿದಳು. ಕೊನೆಗೆ ರಾವಣನು ನಿರಾಶನಾಗಿ ಅವಳನ್ನು ಅಶೋಕವನಕ್ಕೆ ಕಳುಹಿಸಿ ಬಿಟ್ಟನು. ಸೀತೆಯು ಅಲ್ಲಿಯೇ ಇರುತ್ತಿದ್ದಳು. ಇಷ್ಟರಲ್ಲಿ ಇತ್ತ ಲಾಗಿ ರಾಮನು ಆ ಮಾಯಾಮೃಗವನ್ನು ಕೊಂದು ಹಿಂತಿರುಗಿ ತನ್ನಾ ಶ್ರಮಕ್ಕೆಬಂದು ನೋಡಿದನು. ಅಲ್ಲಿ ಸೀತೆಯನ್ನಾಗಲಿ, ಸಮೀಪದಲ್ಲಿ ವಾಸ ಮಾಡುತ್ತಿದ್ದ ಜಟಾಯುವನ್ನಾಗಲಿ ಕಾಣದೆ ವ್ಯಸನಪೀಡಿತನಾಗಿ, ಲಕ್ಷ್ಮಣ ನೊಡಗೂಡಿ ಸೀತೆಯನ್ನು ಹುಡುಕುವುದಕ್ಕಾಗಿ ಹೊರಟನು. ದಾರಿಯಲ್ಲಿ ತನ್ನ ತಂದೆಗೆ ಮಿತ್ರನಾದ ಜಟಾಯುವು ಹತನಾಗಿ ಬಿದ್ದಿರುವುದನ್ನು ನೋಡಿ, ಅವನಿಗೆ ತನ್ನ ಕೈಯಿಂದಲೇ ಅಗ್ನಿಸಂಸ್ಕಾರವನ್ನು ಮಾಡಿ ಮುಂದೆಹೊರಟು, ಗೋದಾವರೀ ತೀರದಲ್ಲಿಯೂ, ಪುಷ್ಪಿತಗಳಾದ ಅಲ್ಲಿನ ವನಪ್ರದೇಶಗಳಲ್ಲಿಯೂ ಸೀತೆಯನ್ನು ಹುಡುಕುತ್ತ ಬಂದನು. ಹೀಗೆ ರಾಮ ಲಕ್ಷ್ಮಣರಿಬ್ಬರೂ ಆ ಮಹಾರಣ್ಯದಲ್ಲಿ ಹುಡುಕುತ್ತ ಬರುವಾಗ, ಕಂಬಂಧ ನೆಂಬ ರಾಕ್ಷಸನೊಬ್ಬನು ಇವರಿಗಡ್ಡಲಾದನು. ಸತ್ಯಪರಾಕ್ರಮನಾದ ರಾಮನು ಆ ಕಬಂಧನ ಮಾತಿನಮೇಲೆ ಋಶ್ಯಮೂಕಪರ್ವತಕ್ಕೆ ಹೋಗಿ ಸುಗ್ರೀವನೊಡನೆ ಸೇರಿದನು. ಈ ರಾಮಸುಗ್ರೀವರಿಬ್ಬರಿಗೂ ಪರಸ್ಪರ ಸಂಮೇಳನವಾಗುವುದಕ್ಕೆ ಮೊದಲೇ ಅವರಿಬ್ಬರಿಗೂ ಪರಸ್ಪರ ಸ್ನೇಹವನ್ನು ಬೆಳೆಸ ಬೇಕೆಂಬ ಆಸೆಯಿತ್ತು. ಇದಕ್ಕೆ ಮೊದಲು ಆ ಸುಗ್ರೀವನನ್ನು ಅವನಣ್ಣನಾದ ವಾಲಿಯು ರಾಜ್ಯದಿಂದ ಹೊರಡಿಸಿದ್ದನು. ರಾಮಸುಗ್ರೀವರಿಬ್ಬರೂ ತಮ್ಮ ತಮ್ಮ ಸ್ಥಿತಿಗಳನ್ನು ಪರಸ್ಪರವಾಗಿ ಹೇಳಿಕೊಂಡಮೇಲೆ, ಅವರ ಸ್ನೇಹವು ಚೆನ್ನಾಗಿ ಬೇರೂರಿತು. ರಾಮನ ಭುಜಪರಾಕ್ರಮದಿಂದ ಸುಗ್ರೀವನು, ಅತಿಬಲಾಢ್ಯನಾದ ವಾಲಿಯನ್ನು ಯುದ್ಧದಲ್ಲಿ ಕೊಲ್ಲಿಸಿ, ಕಿಷ್ಕಿಂಧಾರಾಜ್ಯ ವನ್ನು ಕೈಸೇರಿಸಿಕೊಂಡನು. ಸುಗ್ರೀವನು ಪಟ್ಟಾಭಿಷಿಕ್ತನಾಗಿ ಸಮಸ್ತ ವಾನರರನ್ನೂ ತನ್ನ ಸ್ವಾಧೀನದಲ್ಲಿಟ್ಟುಕೊಂಡನು. ಮತ್ತು ಆ ಸುಗ್ರೀವನು, ರಾಮನು ತನಗೆ ಮಾಡಿದ ಆ ಮಹೋಪಕಾರಕ್ಕೆ ಪ್ರತ್ಯುಪಕಾರವಾಗಿ ತಾನು ತನ್ನ ಕಡೆಯ ಸಮಸ್ತವಾನರರಿಂದಲೂ ಸೀತೆಯನ್ನು ಹುಡುಕಿಸುವು

ದಾಗಿ ಪ್ರತಿಜ್ಞೆಮಾಡಿಕೊಟ್ಟನು. ಮಹಾತ್ಮನಾದ ಆ ಸುಗ್ರೀವನ ಆಜ್ಞೆ ಯಿಂದ ಹತ್ತುಕೋಟಿ ವಾನರರು ಬೇರೆ ಬೇರೆ ದಿಕ್ಕುಗಳಿಗೆ ಹೊರಟರು. ಹೀಗೆ ಸೀತಾನ್ವೇಷಣಕ್ಕಾಗಿ ಹೊರಟ ವಾನರರಲ್ಲಿ ನಾವು ವಿಂಧ್ಯಪರ್ವತದ ಕಡೆಗೆ ಹೊರಟೆವು. ಆ ಪರ್ವತದಲ್ಲಿಯೇ ನಮಗೆ ಬಹುದಿನಗಳು ಕಳೆದು ಹೋದುವು. ಆ ಬೆಟ್ಟದ ಯಾವುದೋ ಒಂದು ಬಿಲದಲ್ಲಿ ಬಹು ದೂರಕ್ಕೆ ಹೋಗಿ, ಹಿಂತಿರುಗಿ ಬರುವುದಕ್ಕೂ ದಾರಿಕಾಣದೆ, ಅಲ್ಲಿಯೇ ದುಃಖಿಸುತ್ತ ಕಾಲವನ್ನು ಕಳೆದೆವು. ಕೊನೆಗೆ ಜಟಾಯುವಿನ ಅಣ್ಣನಾದ ಸಂಪಾತಿಯೆಂಬ ಮಹಾಪರಾಕ್ರಮಶಾಲಿಯಾದ ಗೃಧ್ರರಾಜನಿಂದ ಸೀತಾ ದೇವಿಯು ಲಂಕೆಯಲ್ಲಿ ರಾವಣನ ಮನೆಯಲ್ಲಿರುವುದಾಗಿ ನಮಗೆ ತಿಳಿ ಯಿತು. ಆಗ ನನ್ನೊಡನೆ ಬಂದಿದ್ದ ವಾನರರೆಲ್ಲರೂ ಸಮುದ್ರವನ್ನು ದಾಟಿ ಲಂಕೆಗೆ ಹೋಗುವ ಬಗೇಯೇನೆಂದು ಚಿಂತಿಸುತ್ತಿರುವುದನ್ನು ನೋಡಿ ನಾನು ಅಪಾರ ದುಃಖವನ್ನು ನೀಗಿಸುವುದಕ್ಕಾಗಿ ನನ್ನ ಬಲವನ್ನವಲಂಬಿಸಿ, ನೂರು ಯೋಜನ ವಿಸ್ತಾರವುಳ್ಳ ಆ ಸಮುದ್ರವನ್ನು ಒಂದೇ ನೆಗೆತಕ್ಕೆ ಹಾರಿಬಿಟ್ಟೆನು. ಕೊನೆಗೆ ಲಂಕೆಗೆ ಹೋಗಿ ಅಲ್ಲಿ ರಾವಣಗೃಹಕ್ಕೆ ಸೇರಿದ ಅಶೋಕವನದಲ್ಲಿ ಸೀತೆಯು ಏಕಾಕಿನಿಯಾಗಿ ಕುಳಿತಿರುವುದನ್ನು ಕಂಡೆನು. ಬಹುಕಾಲದಿಂದ ಒಂದೇ ಪಟ್ಟೆಮಡಿಯನ್ನುಟ್ಟು, ಕೊಳೆಮುಚ್ಚಿದ ಮೈಯು ಳ್ಳವಳಾಗಿ, ಮನಸ್ಸಿನಲ್ಲಿ ಸ್ವಲ್ಪವೂ ಹರ್ಷವಿಲ್ಲದೆ, ಪಾತಿವ್ರತ್ಯವೊಂದನ್ನೇ ದೃಢ ವಾಗಿ ಹಿಡಿದಿದ್ದ ಆ ಸತೀಮಣಿಯನ್ನು ಸಂದರ್ಶಿಸಿ, ಆಕೆಯ ವೃತ್ತಾಂತವೆಲ್ಲ ವನ್ನೂ ಕೇಳಿ ತಿಳಿದುಕೊಂಡೆನು. ಗುರುತಿಗಾಗಿ ರಾಮನು ನನ್ನಲ್ಲಿ ಕೊಟ್ಟಿದ್ದ ಉಂಗುರವನ್ನೂ ಅವಳ ಕೈಗೆ ಕೊಟ್ಟೆನು. ನನ್ನನ್ನು ನೋಡಿದ ಮೇಲೆಯೇ ಆ ಸೀತೆಗೆ ತಾನು ಇನ್ನೂ ಬದುಕಿರಬೇಕೆಂಬ ಆಸೆಯು ಹುಟ್ಟಿತು. ಆಮೇಲೆ ಆ ಸೀತೆಯೂ ಕೂಡ ತನ್ನ ಚೂಡಾಮಣಿಯನ್ನು ರಾಮನಿಗೆ ಗುರುತಾಗಿ ನನ್ನ ಕೈಗೆ ಕೊಟ್ಟಳು. ಆಮೇಲೆ ನಾನು ರಾವ ಣನಿಗೆ ಬಹಳ ಪ್ರಿಯವಾಗಿದ್ದ ಆ ಅಶೋಕವನವನ್ನು ಧ್ವಂಸಮಾಡಿ, ಅನೇಕ ರಾಕ್ಷಸರನ್ನು ಯುದ್ಧದಲ್ಲಿ ಕೊಂದು, ಲಂಕೆಯನ್ನು ಭಸ್ಮಮಾಡಿ, ಮಹೋತ್ಸಾಹದಿಂದ ಸೀತೆಯ ಚೂಡಾಮಣಿಯನ್ನು ತೆಗೆದುಕೊಂಡು ಕೃತಾ ರ್ಥನಾಗಿ ಹಿಂದಿರುಗಿದೆನು. ಅಲ್ಲಿಂದ ಹಿಂದಿರುಗಿದೊಡನೆ ರಾಮನ ಬಳಿಗೆ ಬಂದು, ಸೀತೆಯು ನನ್ನಲ್ಲಿ ಗುರುತಿಗಾಗಿ ಕೊಟ್ಟಿದ್ದ ಮಹಾದ್ಭುತಕಾಂತಿ

ನಿಶಿಷ್ಟವಾದ ಆ ಚೂಡಾಮಣಿಯನ್ನು ರಾಮನ ಕೈಗೆ ಕೊಟ್ಟೆನು. ದೇಹ ದಲ್ಲಿ ಹುಟ್ಟಿದ ರೋಗವು ಚೆನ್ನಾಗಿ ಮುದಿರಿ ಪ್ರಾಣೋತ್ಕ್ರಮಣ ವಾಗುವ ಸಂದರ್ಭದಲ್ಲಿ ರೋಗಿಯು ಅಮೃತಪಾನವನ್ನು ಮಾಡಿ ಬದು ಕುವಂತೆ, ಇದಕ್ಕೆ ಮೊದಲು ತನ್ನ ಪ್ರಾಣದಲ್ಲಿಯೇ ನಿರಾಶೆಯನ್ನು ಹೊಂದಿದ ರಾಮನು ಸೀತೆಯ ಕ್ಷೇಮವೃತ್ತಾಂತವನ್ನು ಕೇಳಿದೊಡನೆ ಪರಮಸಂತುಷ್ಟನಾಗಿ, ತನ್ನ ಜೀವದಮೇಲೆ ಪುನಃ ಆಸೆಯನ್ನಿಟ್ಟುಕೊಂ ಡನು. ಆ ಮೇಲೆ ರಾಮನು ಲಂಕೆಗೆ ಪ್ರಯಾಣಮಾಡುವುದಕ್ಕೆ ಪ್ರಯ ತ್ನಿಸಿ, ರಾವಣನನ್ನು ಕೊಲ್ಲಬೇಕೆಂಬ ಮನಸ್ಸಿನ ಆತುರದಿಂದ ಪ್ರಳಯ ಕಾಲದಲ್ಲಿ ಮೂರು ಲೋಕಗಳನ್ನೂ ದಹಿಸುವುದಕ್ಕಾಗಿ ಹೊರಟುಬರುವ ಕಾಲಾಗ್ನಿಯಂತೆ ಕೋಪದಿಂದ ಜ್ವಲಿಸುತ್ತಿದ್ದನು. ಕೊನೆಗೆ ರಾಮನು ಸಮುದ್ರತೀರವನ್ನು ಸೇರಿ ನಳನಿಂದ ಸೇತುವನ್ನು ಕಟ್ಟಿಸಿದನು. ಆ ಸೇತು ವಿನ ಮೇಲೆಯೇ ವಾನರಸೈನ್ಯವೆಲ್ಲವೂ ಸಮುದ್ರವನ್ನು ದಾಟಿಬಂದಿತು. ಅಲ್ಲಿನ ಯುದ್ಧದಲ್ಲಿ ನೀಲನು ಪ್ರಹಸ್ತನನ್ನು ಕೊಂದನು. ರಾಮನು ಕುಂಭಕರ್ಣನನ್ನು ವಧಿಸಿದನು. ಇಂದ್ರಜಿತ್ತನ್ನು ಲಕ್ಷ್ಮಣನು ತೀರಿಸಿ ಬಿಟ್ಟನು. ರಾವಣನನ್ನು ರಾಮನು ತನ್ನ ಕೈಯಿಂದ ತಾನೇ ವಧಿಸಿ ದನು. ಆಮೇಲೆ ಇಂದ್ರನೂ, ಯಮನೂ, ವರುಣನೂ, ಶಿವನೂ, ಬ್ರಹ್ಮನೂ, ಸ್ವರ್ಗದಲ್ಲಿದ್ದ ನಿನ್ನ ತಂದೆಯಾದ ದಶರಥನೂ, ಶ್ರೀಮಂತ ನಾಗಿಯೂ, ಪರಂತಪನಾಗಿಯೂ ಇರುವ ರಾಮನಬಳಿಗೆ ಬಂದು ಅವ ನಿಗೆ ವರಗಳನ್ನು ಕೊಟ್ಟರು. ರಾಮನು ಆ ದೇವತೆಗಳ ವರಪ್ರಸಾದ ದಿಂದ ಯುದ್ಧದಲ್ಲಿ ಸತ್ತ ವಾನರರೆಲ್ಲರನ್ನೂ ಬದುಕಿಸಿಕೊಂಡು, ಅವ ರೊಡನೆ ಸಂತೋಷದಿಂದ ಪುಷ್ಪಕವಿಮಾನವನ್ನೇರಿ ಕಿಷ್ಕಿಂಧೆಗೆ ಬಂದನು. ಅಲ್ಲಿಂದ ಹೊರಟು ಗಂಗಾತೀರಕ್ಕೆ ಬಂದು ಅಲ್ಲಿ ಭರದ್ವಾಜಾಶ್ರಮ ದಲ್ಲಿಳಿದು ಈಗ ಆ ಮಹರ್ಷಿಯ ಸನ್ನಿಧಾನದಲ್ಲಿರುವನು. ನಾಳೆ ಪುಷ್ಯ ನಕ್ಷತ್ರದಲ್ಲಿ ನೀನು ಅವರನ್ನು ತಡೆಯಿಲ್ಲದೆ ನೋಡಬಹುದು. ಪುಷ್ಯ ಯೋಗವನ್ನೇ ಇದಿರುನೋಡುತ್ತ ಈಗ ಗಂಗಾತೀರದಲ್ಲಿರುವನು" ಎಂದನು. ಹೀಗೆ ಸತ್ಯವಾಗಿಯೂ ಯಥಾರ್ಥವಾಗಿಯೂ ಇರುವ ಹನುಮಂತನ ಮಾತನ್ನು ಕೇಳಿ ಭರತನಿಗೆ ಮಿತಿಮೀರಿದ ಸಂತೋಷವುಂಟಾಯಿತು. ಆ ಸಂತೋಷಾತಿಶಯದಿಂದ ಭರತನು ಹನುಮಂತನ ಮುಂದೆ ಕೈಜೋಡಿಸಿ

ನಿಂತು "ಮಹಾತ್ಮಾ! ಬಹುಕಾಲಕ್ಕೆ ಈಗ ನನ್ನಕೋರಿಕೆಯು ಈಡೇರಿತು" ಎಂದು ಪರಮಸಂತೋಷಸೂಚಕವಾದ ಮಾತನ್ನಾಡಿ, ಹನುಮಂತನನ್ನು ಬಹಳವಾಗಿ ಮನ್ನಿಸಿದನು.

ಇಲ್ಲಿಗೆ ನೂರಿಪ್ಪತ್ತೊಂಬತ್ತನೆಯ ಸರ್ಗವು.

ಭರತನು ಅಯೋಧ್ಯಾನಗರವನ್ನಲಂಕರಿಸುವಂತೆ ಆಜ್ಞೆ ಮಾಡಿದುದು. ನಟನರ್ತಕಾದಿಗಳೊಡನೆ ಪುರಜನ ಪರಿವಾರಗಳೆಲ್ಲವೂ ರಾಮದರ್ಶನಾರ್ಥವಾಗಿ ನಂದಿಗ್ರಾಮಕ್ಕೆ ಬಂದುದು. ಭರತನು ಈ ಸಮಸ್ತಪರಿವಾರಗಳೊಡನೆ ಹೊರಟು ರಾಮನನ್ನಿದಿರುಗೊಂಡು ತನ್ನಾಶ್ರಮಕ್ಕೆ ಕರೆತಂದುದು. ರಾಮನು ಪುಷ್ಪಕ ವಿಮಾನವನ್ನು ಕುಬೇರನಿಗೆ ಕೊಟ್ಟು, ಭರತಾಶ್ರಮದಲ್ಲಿ ವಸಿಷ್ಠಾದಿಗಳೊಡನೆ ಉಚಿತಾಸನದಲ್ಲಿ ಕುಳಿತುದು.

ಪರಂತಪನಾಗಿಯೂ, ಸತ್ಯಪರಾಕ್ರಮನಾಗಿಯೂ ಇರುವ ಭರತನು, ಪರಮಾನಂದಜನಕವಾದ ಆ ಹನುಮಂತನ ವಾಕ್ಯವನ್ನು ಕೇಳಿ, ತನ್ನಂತೆಯೇ ಸಂತುಷ್ಟನಾಗಿದ್ದ ಶತ್ರುಘ್ನನನ್ನು ನೋಡಿ "ವತ್ಸ, ಶತ್ರುಘ್ನಾ! ಇನ್ನು ತ್ವರೆಮಾಡು! ಜನರು ಶುಚೀಭೂತರಾಗಿ ಪಟ್ಟಣದಲ್ಲಿರುವ ಸಮಸ್ತ ದೇವತೆಗಳನ್ನೂ, ಚತುಷ್ಪಥಮಂಟಪಗಳನ್ನೂ, ಉತ್ತಮಗಂಧಗಳಿಂದಲೂ, ಪುಷ್ಪಮಾಲಿಕೆಗಳಿಂದಲೂ, ವಾದ್ಯಗಳಿಂದಲೂ ಪೂಜಿಸುವಂತೆ ನಿಯಮಿಸು! ಸ್ತೋತ್ರಗಳಲ್ಲಿಯೂ, ಪುರಾಣಪಠನಗಳಲ್ಲಿಯೂ ಚತುರರಾದ ಸ್ತುತಿಪಾಠಕರೂ, ವೈತಾಳಿಕರೂ, ವಾದ್ಯವಿಶಾರದರೂ, ವೇಶ್ಯೆಯರೂ, ಇವರೆಲ್ಲರೂ ಸೇರಿ ಶ್ರೀರಾಮನ ಮುಖಚಂದ್ರವನ್ನು ನೋಡಿ ಸಂತೋಷಿಸುವುದಕ್ಕಾಗಿ ತಮ್ಮ ತಮ್ಮ ಸಾಧನಗಳೊಡನೆ ಈಗಲೇ ಹೊರಡಲಿ!" ಎಂದು ನಿಯಮಿಸಿದನು. ಭರತಾಜ್ಞೆಯನ್ನು ಕೇಳಿದೊಡನೆ ಶತ್ರುಘ್ನನು ಪರಮಸಂಭ್ರಮಯುಕ್ತನಾಗಿ, ಸಾವಿರಾರುಮಂದಿ ಬಿಟ್ಟಿಯಾಳುಗಳನ್ನು ಹಿಡಿದು, ಅವರನ್ನು ನೋಡಿ, "ಎಲೈ ಭೃತ್ಯರೆ! ಈಗಲೇ ನೀವು ನಿಮ್ಮ ನಿಮ್ಮ

ಆಯುಧಸಾಧನಗಳೊಡನೆ ಹೊರಟು ನಂದಿಗ್ರಾಮದಿಂದ ಅಯೋಧ್ಯೆಯ ವರೆಗೂ ಮಾರ್ಗವನ್ನು ಸರಿಮಾಡಬೇಕು! ಅಲ್ಲಲ್ಲಿ ಹಳ್ಳಗಳಿಗೆ ಮಣ್ಣನ್ನು ತುಂಬಿ, ತಿಟ್ಟುಗಳನ್ನು ಕಡಿದು, ನೆಲವನ್ನು ಸಮವಾಗಿ ಮಾಡಿಡ ಬೇಕು. ಕೆಲವರು ದಾರಿಯುದ್ದಕ್ಕೂ ಪನ್ನೀರನ್ನು ತಳಿದು ತಂಪೇರಿ ಸುತ್ತ ಬನ್ನಿರಿ. ಮತ್ತೆ ಕೆಲವರು ಹೂಗಳನ್ನೂ, ಬತ್ತದರಳುಗಳನ್ನೂ ನಾಲ್ಕು ಕಡೆಗಳಿಗೂ ಚೆಲ್ಲುತ್ತ ಬರಲಿ! ನಾಳೆ ಸೂರ್ಯೋದಯದೊಳಗಾಗಿ ನಮ್ಮ ಅಯೋಧ್ಯಾನಗರದ ಬೀದಿಬೀದಿಗಳಲ್ಲಿಯೂ, ದೊಡ್ಡ ದೊಡ್ಡ ರಾಜ ಮಾರ್ಗಗಳಲ್ಲಿಯೂ, ಧ್ವಜಗಳನ್ನೆತ್ತಿ ಕಟ್ಟಿಸಬೇಕು! ಅಯೋಧ್ಯೆಯ ಮನೆಮನೆಯ ಬಾಗಿಲುಗಳಲ್ಲಿಯೂ ಪುಷ್ಪಮಾಲಿಕೆಗಳನ್ನು ಕಟ್ಟಿ, ಸುಗಂಧವಿಶಿಷ್ಟಗಳಾದ ಬಿಡುಹೂಗಳನ್ನು ಚೆಲ್ಲಿ, ಪಂಚವರ್ಣದ ರಂಗೋ ಲಿಗಳನ್ನಿಡುವಂತೆ ಪುರಜನಗಳಿಗೆ ತಿಳಿಸಬೇಕು! ಮುಖ್ಯವಾಗಿ ಪಟ್ಟಣ ವೆಲ್ಲವೂ ಪೂರ್ಣಾಲಂಕಾರ ಶೋಭಿತವಾಗಿರಲಿ!" ಎಂದು ನಿಯಮಿಸಿದನು. ರಾಮಾಗಮನವೃತ್ತಾಂತವನ್ನು ಕೇಳಿದೊಡನೆ ರಾಜಭಾರ್ಯೆಯರೂ, ಮಂತ್ರಿ ಗಳೂ, ಸೈನಿಕರೂ, ಸೈನಿಕಪತ್ನಿಯರೂ, ಬ್ರಾಹ್ಮಣರೂ, ಕ್ಷತ್ರಿಯರೂ ತಮ್ಮ ತಮ್ಮ ಪ್ರಮುಖರೊಡನೆ ಬೇರೆ ಬೇರೆ ಪಂಗಡದವರೂ ರಾಮ ನನ್ನು ನೋಡಬೇಕೆಂಬ ಆತುರದಿಂದ ಗುಂಪುಗುಂಪಾಗಿ ಹೊರಟರು. ಧೃಷ್ಟಿ, ಜಯಂತ, ವಿಜಯ, ಸಿದ್ಧಾರ್ಥ, ಅರ್ಥಸಾಧನ, ಅಶೋಕ, ಮಂತ್ರಪಾಲ, ಸುಮಂತ್ರರೆಂಬ ಎಂಟು ಮಂದಿ ಪ್ರಧಾನಮಂತ್ರಿಗಳೂ, ಸುವರ್ಣಭೂಷಣಗಳಿಂದಲಂಕೃತಗಳಾದ ಸಾವಿರಾರು ಮದ್ದಾನೆಗಳೊಡನೆ ಆನೆಯನ್ನೇರಿ ಹೊರಟರು. ಬೇರೆ ಕೆಲವು ರಾಜಾಂತರಂಗರಾದ ಪುರು ಷರು ಸುವರ್ಣಕಕ್ಷ್ಯೆಗಳುಳ್ಳ ಗಂಡಾನೆಗಳೊಡಗೂಡಿದ ಹೆಣ್ಣಾನೆಗಳನ್ನೇರಿ ಬಂದರು. ಅನೇಕ ಮಹಾರಥರು ಉತ್ತಮಾಶ್ವಗಳಮೇಲೆ ಹೂಡಿದ ರಥ ಗಳನ್ನೇರಿ ಹೊರಟರು. ಅನೇಕ ವೀರಯೋಧರು ಶಕ್ತಿಗಳನ್ನೂ, ಋಷ್ಟಿ ಗಳನ್ನೂ, ಪ್ರಾಸಗಳನ್ನೂ ಧ್ವಜಪತಾಕೆಗಳನ್ನೂ ಹಿಡಿದು ಸಾವಿರಾರು ಕುದುರೆಯ ಸೈನ್ಯಗಳನ್ನೂ, ಉತ್ತಮ ಪುರುಷರಿಂದ ಕೂಡಿದ ಸಾವಿ ರಾರು ಪದಾತಿಸೈನ್ಯಗಳನ್ನೂ ಸಂಗಡ ಕರೆದುಕೊಂಡು ಬಂದರು. ಆಮೇಲೆ ದಶರಥಪತ್ನಿಯರೆಲ್ಲರೂ ಪಲ್ಲಕ್ಕಿ ಮೊದಲಾದ ವಾಹನಗಳನ್ನೇರಿ, ಕೌಸಲ್ಯೆ ಯನ್ನೂ, ಸುಮಿತ್ರೆಯನ್ನೂ ಮುಂದಿಟ್ಟುಕೊಂಡು ಹೊರಟರು. ಇವರ

ಹಿಂದೆ ಇತರ ರಾಜಪತ್ನಿಯರೆಲ್ಲರೂ [1]ಕೈಕೇಯಿಯನ್ನೂ ಕರೆದುಕೊಂಡು ನಂದಿಗ್ರಾಮಕ್ಕೆ ಬಂದು ಸೇರಿದರು. ಅಯೋಧ್ಯಾನಗರವೇ ಮೊತ್ತಕ್ಕೆ ನಂದಿಗ್ರಾಮದಲ್ಲಿ ಬಂದಿಳಿದಂತೆ, ಅಲ್ಲಿದ್ದ ಸಮಸ್ತ ಜನವೂ ಬಂದು ಸೇರಿತು. ಅವರೆಲ್ಲರೂ ಮಹೋತ್ಸಾಹದಿಂದ ಹೊರಟುಬರುವಾಗ, ಕುದುರೆಗಳ ಖುರ ಶಬ್ದದಿಂದಲೂ, ರಥನೇಮಿಧ್ವನಿಯಿಂದಲೂ, ಶಂಖ, ದುಂದುಭಿ ಮೊದಲಾದ ವಾದ್ಯಗಳ ಧ್ವನಿಯಿಂದಲೂ ಭೂಮಿಯೇ ನಡುಗುವಂತಾಯಿತು. ಹೀಗೆ ಮಹಾವೈಭವದಿಂದ ಅಯೋಧ್ಯಾವಾಸಿಗಳೆಲ್ಲರೂ ನಂದಿಗ್ರಾಮಕ್ಕೆ ಬಂದು ಸೇರಿದಮೇಲೆ, ಇತ್ತಲಾಗಿ ಬಹುಕಾಲದಿಂದ ತನ್ನಣ್ಣನಿಗಾಗಿ ಉಪವಾಸ ದಲ್ಲಿದ್ದು, ಕಂದಿಕುಂದಿ ಕೃಶನಾಗಿ, ನಾರುಮಡಿಯನ್ನೂ, ಕೃಷ್ಣಾಜಿನ ವನ್ನೂ ಧರಿಸಿ, ತಾಪಸವೇಷದಿಂದಿರುತ್ತಿದ್ದ, ಧರ್ಮಾತ್ಮನಾದ ಭರತನು, ಇದಕ್ಕೆ ಮೊದಲು ಹನುಮಂತನ ಮುಖದಿಂದ ರಾಮಾಗಮನವೃತ್ತಾಂತ ವನ್ನು ಕೇಳಿ ಪರಮಸಂತೋಷಭರಿತನಾಗಿದ್ದರೂ, ಈಗ ಅಯೋಧ್ಯಾ ವಾಸಿಗಳೆಲ್ಲರೂ ಅಷ್ಟೊಂದು ವೈಭವದಿಂದ ರಾಮನನ್ನಿದಿರುಗೊಳ್ಳುವುದಕ್ಕಾಗಿ ಮಹೋತ್ಸಾಹದಿಂದ ಬಂದುದನ್ನು ನೋಡಿ ಮತ್ತಷ್ಟು ಸಂತೋಷದಿಂದು ಕ್ಕುತ್ತಾ, ರಾಮನನ್ನಿದಿರುಗೊಂಡು ಕರೆತರುವುದಕ್ಕಾಗಿ ಆತನ ಪಾದುಕೆ ಗಳನ್ನು ತಲೆಯಮೇಲೆ ಧರಿಸಿ, ಆ ಸಮಸ್ತಪರಿವಾರಗಳೊಡನೆ ನಂದಿ ಗ್ರಾಮದಿಂದ ಹೊರಟನು. ಧರ್ಮವಿಶಾರದನಾದ ಭರತನು ತಾಪಸವೇಷ ದಲ್ಲಿದ್ದಂತೆಯೇ ರಾಮ ಪಾದುಕೆಗಳನ್ನು ತಲೆಯಲ್ಲಿ ಧರಿಸಿ, ಬಿಳೀಪುಷ್ಪ ಮಾಲಿಕೆಗಳಿಂದಲಂಕೃತವಾಗಿಯೂ, ಸುವರ್ಣಭೂಷಿತವಾಗಿಯೂ ಇದ್ದ ಸಾಮ್ರಾಜ್ಯಚಿಹ್ನವಾದ ಶ್ವೇತಚ್ಛತ್ರವನ್ನೂ, ಬಿಳೀಚಾಮರಗಳನ್ನೂ ಆ ಪಾದುಕೆಗಳಮೇಲೆ ಹಿಡಿಸಿಕೊಂಡು, ಬ್ರಾಹ್ಮಣೋತ್ತಮರಿಂದಲೂ, ನರ್ತಕ ರಿಂದಲೂ ಪುರವಾಸಿಗಳಲ್ಲಿ ಆಯಾ ಸಂಘಗಳ ಪ್ರಮುಖರಿಂದಲೂ ಪರಿ ವೇಷ್ಟಿತನಾಗಿ, ಮುಂಭಾಗದಲ್ಲಿ ಶಂಖ, ಭೇರೀ, ಮೊದಲಾದ ವಾದ್ಯ ಧ್ವನಿಗಳೊಡನೆಯೂ, ವಂದಿಮಾಗಧಾದಿ ಸ್ತುತಿಪಾಠಕರುಗಳೊಡನೆಯೂ

---

[1] ಇಲ್ಲಿ ಕೈಕೇಯಿಯ ಪ್ರಯಾಣವನ್ನು ಪ್ರತ್ಯೇಕವಾಗಿ ಹೇಳಿರುವುದರಿಂದ, ಭರತನು ಮೊದಲು ಕೈಕೇಯಿಯನ್ನು ಕರೆಯದೆ ಉಪೇಕ್ಷಿಸಿದುದಾಗಿಯೂ, ಅದು ದರಿಂದ ಆಕೆಯು ಕೌಸಲ್ಯಾದಿಗಳೊಡನೆ ಹೊರಡದೆ, ಆಮೇಲೆ ಬೇರೆ ಕೆಲವು ಸ್ತ್ರೀಯರೊಡನೆ ಹೊರಟು ನಂದಿಗ್ರಾಮಕ್ಕೆ ಬಂದು ಸೇರಿದುದಾಗಿಯೂ ಊಹ್ಯವು.

ಹೊರಟರು. ಸುಮಂತ್ರಾದಿ ಪ್ರಧಾನಸಚಿವರೆಲ್ಲರೂ ಅವನನ್ನು ಹಿಂಬಾಲಿಸಿಹೊರಟರು. ವಸಿಷ್ಠಾದಿಮಂತ್ರಿಗಳು ಪುಷ್ಪಮಾಲಿಕೆಗಳನ್ನೂ, ಪೂರಣಗಡುಬುಗಳನ್ನೂ, ತಟ್ಟೆಯಲ್ಲಿಟ್ಟುಕೊಂಡು ಮುಂದೆಬಂದರು. ಹೀಗೆ ಭರತನು ರಾಮನನ್ನಿದಿರುಗೊಂಡು ಕರೆತರುವುದಕ್ಕಾಗಿ, ಸ್ವಲ್ಪದೂರದವರೆಗೆ ದಾರಿನಡೆದು ಬರುವಷ್ಟರಲ್ಲಿಯೇ ಆತುರದಿಂದ ಪಕ್ಕದಲ್ಲಿದ್ದ ಹನುಮಂತನನ್ನು ನೋಡಿ, "ವಾಯುಕುಮಾರಾ! ಇದೇನಿದು! ರಾಮನೆಲ್ಲಿ? ಈಗ ನೀನು ನಿನ್ನ ಕಪಿಜಾತಿಗೆ ಸಹಜವಾದ ಚಪಲಬುದ್ಧಿಯನ್ನು ನನ್ನಲ್ಲಿ ತೋರಿಸಿಲ್ಲವಷ್ಟೆ? ಕಕುತ್ಸ್ಥಕುಲತಿಲಕನಾಗಿಯೂ ಪರಂತಪನಾಗಿಯೂ ಇರುವ ಆರ್ಯನಾದ ಆ ರಾಮನು ಇನ್ನೂ ನನ್ನ ಕಣ್ಣಿಗೆ ಬೀಳಲಿಲ್ಲ! ಒಂದುವೇಳೆ ಆ ವಾನರರು ಕಾಮರೂಪಿಗಳಾದುದರಿಂದ ನಿಜಸ್ವರೂಪದಿಂದ ಕಾಣಿಸದಿದ್ದರೂ, ಬೇರೆ ರೂಪದಿಂದಾದರೂ ಕಾಣಿಸಬೇಕಲ್ಲವೆ? ನೀನು ಸುಮ್ಮನೆ ವಿನೋದಾರ್ಥವಾಗಿ ರಾಮನು ಬರುವನೆಂದು ಹೇಳಿಲ್ಲವಷ್ಟೆ?" ಎಂದನು. ಹೀಗೆ ಭರತನು ರಾಮದರ್ಶನಾತುರದಿಂದ ತಪಿಸುತ್ತಿರುವುದನ್ನು ನೋಡಿ ಹನುಮಂತನು, ಸತ್ಯಪರಾಕ್ರಮನಾದ ಆ ಭರತನನ್ನು ಕುರಿತು, ರಾಮಾಗಮನಕ್ಕೆ ತಡವಾದ ಕಾರಣವನ್ನು ಯಥಾಸ್ಥಿತವಾಗಿ ತಿಳಿಸುತ್ತ "ರಾಜಪುತ್ರಾ! ಭರದ್ವಾಜಾನುಗ್ರಹದಿಂದ ಈ ದಾರಿಯುದ್ದಕ್ಕೂ ವೃಕ್ಷಗಳೆಲ್ಲವೂ ಫಲಪುಷ್ಪಗಳಿಂದ ತುಂಬಿಯಾವಾಗಲೂ ಜೇನನ್ನು ತೊಟ್ಟಿಕ್ಕುತ್ತಿರುವುವು. ಯಾವಾಗಲೂ ಅವುಗಳಲ್ಲಿ ದುಂಬಿಗಳು ಮಧುಪಾನದಿಂದ ಮದಿಸಿ ಝೇಂಕರಿಸುತ್ತಿರುವುವು. ಈ ಸಮೃದ್ಧಿಯನ್ನು ನೋಡಿ ವಾನರರು ಅವುಗಳನ್ನು ಬಿಟ್ಟುಬರಲಾರದೆ ತಡಮಾಡುತ್ತಿರುವರು. ಎಲೈ ಪರಂತಪನೆ! ಮೊದಲೇ ದೇವೇಂದ್ರನು ಈ ವಾನರರ ಸಂಚಾರಮಾರ್ಗಗಳೆಲ್ಲವೂ ಅಕಾಲದಲ್ಲಿಯೂ ಫಲಪುಷ್ಪಸಮೃದ್ಧಗಳಾಗಿರುವಂತೆ ವರವನ್ನು ಕೊಟ್ಟಿದ್ದನು. ಅದರಂತೆಯೇ ಈಗ ಭರದ್ವಾಜನೂ ಕೂಡ ರಾಮನಿಗೂ, ಅವನ ವಾನರಸೈನ್ಯಕ್ಕೂ ದಾರಿಯಲ್ಲಿರುವ ಸಮಸ್ತವೃಕ್ಷಗಳೂ ತಮ್ಮ ಫಲಪುಷ್ಪಗಳಿಂದಲೂ, ಮಧುವಿನಿಂದಲೂ ಸಮೃದ್ಧವಾದ ಆತಿಥ್ಯವನ್ನೆಸಗುವಂತೆ ಅನುಗ್ರಹಿಸಿರುವನು. ವಾನರರು ಈ ಮಹೋತ್ಸವದಲ್ಲಿ ಮೈಮರೆತಿರುವುದೇ ಈ ಕಾಲವಿಳಂಬಕ್ಕೆ ಕಾರಣವು. ಆದರೆ, ಆ ವಾನರರ ಭಯಂಕರವಾದ ಕೋಲಾಹಲಧ್ವನಿಯು ಅದೋ ಈಗಾಗಲೇ ಕೇಳಿಸುತ್ತಿರುವುದು. ನೋಡು! ಇದರಿಂದ ಆ ವಾನರಸೇನೆಯು ಈಗ ಗೋಮತೀನದಿಯನ್ನು ದಾಟಿ ಬರುತ್ತಿರುವುದೆಂದೆಣಿಸುವೆನು. ಅದರಿಂದಲೇ ಅವರ ಕೋಲಾಹಲವು ನಮಗೆ ಇಷ್ಟು ಸ್ಪಷ್ಟವಾಗಿ ಕೇಳಿ

ಬರುವುದು. ! ಅವರ ಧ್ವನಿಯು ಮಾತ್ರವೇ ಅಲ್ಲ ! ಆಕಾಶದಲ್ಲಿ ಪ್ರಸರಿಸಿರುವ ಕೆಂಧೂಳಿಯನ್ನು ನೋಡು ! ಇದರಿಂದ ವಾನರರು ಈಗಾಗಲೇ ವಾಲುಕಿನೀನದಿಯನ್ನೂ ದಾಟಿ ಬರುತ್ತಿರಬಹುದೆಂದೂ ತೋರುವುದು. ಈಗ ಆ ವಾನರರು ರಮಣೀಯವಾದ ಸಾಲವನ್ನು ಪ್ರವೇಶಿಸಿ, ಅಲ್ಲಿನ ವೃಕ್ಷಗಳನ್ನು ಕದಲಿಸುತ್ತ ವಿನೋದಿಸುತ್ತಿರಬಹುದು. ಅದರಿಂದಲೇ ಇಷ್ಟೊಂದು ಕಾಲವಿಳಂಬವು. ರಾಜೇಂದ್ರಾ ! ಅದೋ ದೂರದಲ್ಲಿ ಚಂದ್ರನಂತೆ ನಿರ್ಮಲವಾದ ದಿವ್ಯವಿಮಾನವು ಕಾಣಿಸುತ್ತಿರುವುದು ನೋಡು ! ಅದೇ ಪುಷ್ಪಕವಿಮಾನವು ! ಇದನ್ನು ಬ್ರಹ್ಮದೇವನು ತನ್ನ ಮನಸ್ಸಿನಿಂದಲೇ ನಿರ್ಮಿಸಿರುವನು. ಮಹಾತ್ಮನಾದ ರಾಮನು ಬಂಧುಸಹಿತನಾದ ರಾವಣನನ್ನು ಕೊಂದು ಇದನ್ನು ಪಡೆದನು. ಬಾಲಸೂರ್ಯನಂತೆ ಬೆಳಗುತ್ತಿರುವ ಆ ವಿಮಾನದಮೇಲೆ ನಿನ್ನಣ್ಣನಾದ ರಾಮನು ಕುಳಿತಿರುವನು ನೋಡು ! ಪೂರ್ವದಲ್ಲಿ ಈ ವಿಮಾನವು ಬ್ರಹ್ಮಾನುಗ್ರಹದಿಂದ ಕುಬೇರನಿಗೆ ಲಭಿಸಿತು. ಇದು ಮನೋವೇಗದಿಂದ ಹೋಗುವುದು. ವೀರರಾದ ರಾಮಲಕ್ಷ್ಮಣರೂ, ಸೀತೆಯೂ, ಮಹಾ ತೇಜಸ್ವಿಯಾದ ವಿಭೀಷಣನೂ, ವಾನರರಾಜನಾದ ಸುಗ್ರೀವನೂ, ಆ ವಿಮಾನದ ಮುಂಭಾಗದಲ್ಲಿ ಕುಳಿತಿರುವರು ನೋಡು! ಎಂದನು. ಹೀಗೆ ಹನುಮಂತನು "ಅಗೋ ! ರಾಮನು ಬರುತ್ತಿರುವ"ನೆಂದು ಹೇಳಿ ಭರತನಿಗೆ ತೋರಿಸುತ್ತಿರುವಷ್ಟರಲ್ಲಿಯೇ, ಅಲ್ಲಿದ್ದ ಸ್ತ್ರೀಬಾಲವೃದ್ಧರೂ ಮಹೋತ್ಸಾಹದಿಂದುಬ್ಬುತ್ತ, ಅಪರಿಮಿತವಾದ ಸಂತೋಷ ಕೋಲಾಹಲಗಳನ್ನು ಮಾಡತೊಡಗಿದರು. ಅವರ ಕೋಲಾಹಲಧ್ವನಿಯು ಸಮಸ್ತ ದಿಕ್ಕುಗಳನ್ನೂ ಮೀರುವಂತೆ ವ್ಯಾಪಿಸಿತು. ಅಲ್ಲಿದ್ದ ಸಮಸ್ತ ಜನರೂ ರಾಮನು ಬರುತ್ತಿರುವನೆಂಬ ಸುದ್ದಿಯನ್ನು ಕೇಳಿದೊಡನೆ, ತಮ್ಮ ತಮ್ಮ ರಥಗಜತುರಗಾದಿವಾಹನಗಳಿಂದ ಕೆಳಗಿಳಿದು, ಮೇಲೆ ಅಂತರಿಕ್ಷವನ್ನು ಕಣ್ಣಿಟ್ಟು ನೋಡುತ್ತಿದ್ದರು. ಇಷ್ಟರಲ್ಲಿಯೇ ಆಕಾಶದಲ್ಲಿ ಕಾಂತಿವಿಶಿಷ್ಟನಾದ ಚಂದ್ರನಂತೆ ಪುಷ್ಪಕವಿಮಾನವನ್ನೇರಿ ದಿವ್ಯತೇಜೋವಿಶಿಷ್ಟನಾಗಿ ಬರುತ್ತಿರುವ ಶ್ರೀರಾಮನ ಮುಖಕಮಲವನ್ನು ಕಂಡೊಡನೆ ಪರಮಹರ್ಷದಿಂದುಕ್ಕುತ್ತ, ವಿಮಾನಾರೂಢನಾದ ಶ್ರೀರಾಮನಿಗಿದಿರಾಗಿ ಕೈಮುಗಿದು ನಿಂತು " ಆರ್ಯನೆ! ಸ್ವಾಗತವು ! ಆಡಿದ ಮಾತಿಗೆ ತಪ್ಪದೆ ಸಕಾಲಕ್ಕೆ ಹಿಂತಿರುಗಿ ಬಂದ ನಿನಗೆ ಸುಖಾಗಮನವು ! ಬಿಜಯ

ಮಾಡಬೇಕು!" ಎಂದು ಅತ್ಯುತ್ಸಾಹದಿಂದ ದೂರದಿಂದಲೇ ಅವನ ಸುಖಾಗಮನವನ್ನು ಕೊಂಡಾಡಿ ಕರೆಯುತ್ತಿದ್ದರು. ಬ್ರಹ್ಮನಿಂದ ಮನೋನಿರ್ಮಿತವಾಗಿ ಅತಿವಿಶಾಲವಾಗಿದ್ದ ಆ ದಿವ್ಯವಿಮಾನದಲ್ಲಿ ಕುಳಿತು ಆಕಾಶಮಾರ್ಗದಿಂದ ಬರುತ್ತಿದ್ದ ರಾಮನು ಎರಡನೆಯ ದೇವೇಂದ್ರನಂತೆ ಶೋಭಿಸುತ್ತಿದ್ದನು. ಆಗ ಭರತನು ಪುಷ್ಪಕವಿಮಾನಾರೂಢನಾಗಿ ಬರುತ್ತಿದ್ದ ತನ್ನಣ್ಣನಾದ ರಾಮನನ್ನು ನೋಡಿ, ಮೇರುಪರ್ವತಾಗ್ರದಲ್ಲಿರುವ ಸೂರ್ಯನನ್ನು ನಮಸ್ಕರಿಸುವಂತೆ ಪರಿಶುದ್ಧಭಾವದಿಂದ ಅವನಿಗೆ ಪ್ರಣಾಮಮಾಡಿದನು. ಇಷ್ಟರಲ್ಲಿ ಹಂಸಾಕಾರವುಳ್ಳ ಪ್ರತಿಮೆಗಳಿಂದ ಶೋಭಿತವಾಗಿ ಮಹಾವೇಗವತ್ತಾದ ಆ ದಿವ್ಯವಿಮಾನವು, ರಾಮನ ಮನೋಭಿಪ್ರಾಯದಂತೆ ಆಕಾಶದಿಂದ ಕೆಳಗಿಳಿಯಿತು. ಆ ವಿಮಾನವು ಸಂಪೂರ್ಣವಾಗಿ ಕೆಳಗಿಳಿಯುವಷ್ಟರಲ್ಲಿಯೇ ರಾಮನು ಸತ್ಯಪರಾಕ್ರಮನಾದ ಭರತನನ್ನು ಪ್ರೀತಿಯಿಂದ ಮೇಲಕ್ಕೆತ್ತಿ ವಿಮಾನದಲ್ಲಿ ಕುಳ್ಳಿರಿಸಿಕೊಂಡನು. ಭರತನು ರಾಮಸಾನ್ನಿಧ್ಯವನ್ನು ಸೇರಿದೊಡನೆ ಪರಮಹರ್ಷದಿಂದ ತಿರುಗಿ ರಾಮನ ಪಾದಗಳನ್ನು ಹಿಡಿದು ನಮಸ್ಕರಿಸಿದನು. ಬಹುಕಾಲಕ್ಕೆ ದೃಷ್ಟಿಗೋಚರನಾದ ಭರತನನ್ನು ರಾಮನು ಮೇಲಕ್ಕೆತ್ತಿ ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು, ಪರಮ ಪ್ರೇಮದಿಂದ ಆತನನ್ನು ಬಿಗಿದಪ್ಪಿಕೊಂಡನು. ಆಮೇಲೆ ಭರತನು ತನಗೆ ಪ್ರಣಾಮಮಾಡಿದ ಲಕ್ಷ್ಮಣನನ್ನು ಪ್ರೀತಿಯಿಂದಾದರಿಸಿ, ಆಮೇಲೆ ತಾನೂ ಸೀತಾದೇವಿಗೆ ತನ್ನ ಹೆಸರನ್ನು ಹೇಳಿ ನಮಸ್ಕರಿಸಿದನು. ಆಮೇಲೆ ಕ್ರಮವಾಗಿ ಸುಗ್ರೀವನನ್ನೂ, ಜಾಂಬವಂತನನ್ನೂ, ಅಂಗದನನ್ನೂ, ಮೈಂದದ್ವಿವಿದರನ್ನೂ, ನೀಲನನ್ನೂ, ಋಷಭನನ್ನೂ ಸ್ನೇಹದಿಂದಾಲಿಂಗಿಸಿ ಮನ್ನಿಸಿದನು. ಹಾಗೆಯೇ ನಲ, ಗವಾಕ್ಷ, ಗಂಧಮಾದನ ಶರಭ, ಪನಸ ಮುಂತಾದ ವಾನರಪ್ರಮುಖರನ್ನೂ ಕ್ರಮವಾಗಿ ಆಲಿಂಗನಾದಿಗಳಿಂದ ಗೌರವಿಸಿದನು. ಆಗ ಮನುಷ್ಯರೂಪದಿಂದಿದ್ದ ಕಾಮರೂಪಿಗಳಾದ ಆ ವಾನರವೀರರೆಲ್ಲರೂ ಪರಮಹರ್ಷವುಳ್ಳವರಾಗಿ ಭರತನನ್ನು ಕುಶಲಪ್ರಶ್ನೆಮಾಡಿದರು. ಆಮೇಲೆ ಧರ್ಮಜ್ಞರಲ್ಲಿ ಮೇಲೆನಿಸಿದ ಮಹಾತೇಜಸ್ವಿಯಾದ ಭರತನು, ಮತ್ತೊಮ್ಮೆ ವಾನರಶ್ರೇಷ್ಠನಾದ ಸುಗ್ರೀವನನ್ನಾಲಿಂಗಿಸಿಕೊಂಡು, "ಸುಗ್ರೀವಾ! ನಮ್ಮ ನಾಲ್ವರಿಗೂ ನೀನು ಐದನೆಯ ಸಹೋದರನೇ ಹೊರತು ಬೇರೆಯಲ್ಲ! ಸ್ನೇಹದ ಮನಸ್ಸಿನಿಂದ ಉಪಕಾರಮಾಡುವವನೇ

ಮಿತ್ರನು. ಅಪಕಾರವೇ ಶತ್ರುಲಕ್ಷಣವು" ಎಂದನು. ಆಮೇಲೆ ವಿಭೀಷಣನ ಕಡೆಗೆ ತಿರುಗಿ ಅವನನ್ನೂ ಉಪಚಾರವಾಕ್ಯಗಳಿಂದ ಮನ್ನಿಸುತ್ತ "ರಾಕ್ಷಸೇಂದ್ರಾ! ನಮ್ಮೆಲ್ಲರ ಭಾಗ್ಯವಶದಿಂದಲೇ ರಾಮನಿಗೆ ನಿನ್ನ ಸಾಹಾಯ್ಯವು ದೊರಕಿತು. ಅವನಿಗಾಗಿ ನೀನು ಬಹಳ ದುಸ್ಸಾಧವಾದ ಕಾರ್ಯವನ್ನು ನಡೆಸಿದೆ" ಎಂದನು. ಇಷ್ಟರಲ್ಲಿ ಶತ್ರುಘ್ನನು ಮುಂದೆ ಬಂದು, ರಾಮನಿಗೂ ಲಕ್ಷ್ಮಣನಿಗೂ ನಮಸ್ಕಾರಮಾಡಿದನು. ಆಮೇಲೆ ಸೀತಾದೇವಿಯ ಪಾದಗಳಿಗೂ ವಿನಯದಿಂದ ಪ್ರಣಾಮಮಾಡಿದನು. ಆಮೇಲೆ ರಾಮನು ತನ್ನ ವಿರಹವ್ಯಸನದಿಂದ ಕೃಶಳಾಗಿ ಕೊರಗುತ್ತಿದ್ದ ತನ್ನ ಹೆತ್ತತಾಯಿಯಾದ ಕೌಸಲ್ಯೆಯ ಬಳಿಗೆ ಹೋಗಿ, ಅಮ್ಮಾ! ಮೊದಲು ನೀನು ನನ್ನನ್ನು ಎಷ್ಟೋ ವಿಧದಿಂದ ನಿವಾರಿಸಿದರೂ, ನಾನು ನಿನ್ನಾಜ್ಞೆಯನ್ನುಲ್ಲಂಘಿಸಿ ಕಾಡಿಗೆ ಹೋದುದಕ್ಕಾಗಿ ನೀನು ಮನಸ್ತಾಪವನ್ನಿಡಬಾರದು" ಎಂದು ಆಕೆಯ ಮನ್ನಣೆಯನ್ನು ಬೇಡಿ, ಅವಳ ಪಾದಗಳನ್ನು ಹಿಡಿದು ನಮಸ್ಕರಿಸಿದನು. ಆಮೇಲೆ ಸುಮಿತ್ರೆಯನ್ನೂ ಇದುವರೆಗೆ ರಾವಣಾದಿವಧರೂಪವಾದ ದೇವತೆಗಳ ಕಾರ್ಯವನ್ನು ನಡೆಸುವುದಕ್ಕೆ ಮೂಲಕಾರಣಳಾಗಿ ಕೀರ್ತಿಯನ್ನು ಪಡೆದ ಕೈಕೇಯಿಯನ್ನೂ, ಇತರಮಾತೆಯರನ್ನೂ ನಮಸ್ಕರಿಸಿ, ಆಮೇಲೆ ಕುಲಪುರೋಹಿತನಾದ ವಸಿಷ್ಠನ ಸಮೀಪಕ್ಕೆ ಬಂದು ಅವನ ಪಾದಗಳಿಗೆ ಪ್ರಣಾಮಮಾಡಿದನು. ಪುರಜನರೆಲ್ಲರೂ ರಾಮನನ್ನು ನೋಡಿ ಪರಮಸಂತೋಷದಿಂದ "ಮಹಾಭಾಗಾ! ಕೌಸಲ್ಯಾನಂದವರ್ಧನಾ! ನಿನಗೆ ಸ್ವಾಗತವು" ಎಂದು ಹೇಳಿ ಕೊಂಡಾಡುತ್ತಿದ್ದರು. ಅಲ್ಲಿ ನೆರೆದಿದ್ದ ಸಮಸ್ತಪೌರಜಾನಪದರೂ ರಾಮನಮುಂದೆ ಕೈಜೋಡಿಸಿ ನಿಂತಿದ್ದರು. ಆ ಸಮಸ್ತಜನವೂ ತಮ್ಮ ತಮ್ಮ ತಲೆಯಮೇಲೆ ಕೈಜೋಡಿಸಿ ಬದ್ಧಾಂಜಲಿಗಳಾಗಿ ನಿಂತಿದ್ದಾಗ ಆ ಪ್ರದೇಶವೆಲ್ಲವೂ ತಾವರೆಯ ಮೊಗ್ಗುಗಳಿಂದ ತುಂಬಿದಂತೆ ತೋರುತ್ತಿದ್ದುವು. ಈ ಅಂಜಲಿಗಳನ್ನು ನೋಡಿ ರಾಮನು ಅವರೆಲ್ಲರನ್ನೂ ಪ್ರೀತಿಯಿಂದಾದರಿಸಿದನು. ಇಷ್ಟರಲ್ಲಿ ಧರ್ಮಜ್ಞನಾದ ಭರತನು, ಹಿಂದೆ ರಾಮನು ತನ್ನ ಕೈಯಲ್ಲಿ ಕೊಟ್ಟಿದ್ದ ಪಾದುಕೆಗಳೆರಡನ್ನೂ, ತನ್ನ ಕೈಯಿಂದಲೇ ರಾಮನ ಪಾದಗಳಿಗೆ ತೊಡಿಸಿ ಅವನಮುಂದೆ ಬದ್ಧಾಂಜಲಿಯಾಗಿ ನಿಂತು ವಿಜ್ಞಾಪಿಸುವನು. "ರಾಜೇಂದ್ರಾ! ನೀನು ನನ್ನಲ್ಲಿ ನ್ಯಾಸವಾಗಿಟ್ಟ

ರಾಜ್ಯವನ್ನು ಇದುವರೆಗೆ ಎಚ್ಚರದಿಂದ ಕಾಪಾಡುತ್ತ ಬಂದೆನು. ಇದೋ! ಈಗ ನಿನ್ನ ವಶಕ್ಕೊಪ್ಪಿಸುತ್ತಿರುವೆನು. ಅಣ್ಣಾ! ನೀನು ಕ್ಷೇಮದಿಂದ ಅಯೋಧ್ಯೆಗೆ ಹಿಂತಿರುಗಿ ಬಂದು ರಾಜ್ಯಾಭಿಷಿಕ್ತನಾಗುವುದನ್ನು ನೋಡುವ ಮಹಾಭಾಗ್ಯವು ನನಗೆ ಪ್ರಾಪ್ತವಾದುದರಿಂದ ಈಗ ನನ್ನ ಜನ್ಮವು ಕೃತಾರ್ಥ ವಾಯಿತು. ಈಗಲೇ ನನ್ನ ಮನೋರಥವೂ ಪೂರ್ತಿಹೊಂದಿತು. ಇನ್ನು ನೀನು ಬಂದು, ನಿನ್ನ ಬೊಕ್ಕಸವನ್ನೂ, ನಿನ್ನ ಧಾನ್ಯಶಾಲೆಯನ್ನೂ, ನಿನ್ನ ಪಟ್ಟಣವನ್ನೂ, ನಿನ್ನ ಚತುರಂಗಸೈನ್ಯವನ್ನೂ ನೋಡಿಕೊಳ್ಳಬಹುದು. ನಿನ್ನ ಪ್ರಭಾವದಿಂದ ಅವೆಲ್ಲವನ್ನೂ ನಾನು ದಶಗುಣವಾಗಿ ಹೆಚ್ಚಿಸಿರುವೆನು” ಎಂದನು. ಭ್ರಾತೃವತ್ಸಲನಾದ ಭರತನು ಹೇಳಿದ ಆ ಮಾತನ್ನು ಕೇಳಿ, ಅವನಲ್ಲಿರತಕ್ಕ ಅಸಾಧಾರಣವಾದ ಭಕ್ತಿಪಾರತಂತ್ರ್ಯಗಳನ್ನೂ ನೋಡಿ, ಅಲ್ಲಿದ್ದ ಸಮಸ್ತವಾನರರೂ, ರಾಕ್ಷಸೇಂದ್ರನಾದ ವಿಭೀಷಣನೂ ಆನಂದಬಾಷ್ಪವನ್ನು ಸುರಿಸಿದರು. ಆಮೇಲೆ ರಾಮನು ಸಂತೋಷದಿಂದ ಭರತನನ್ನು ಕರೆದು ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು, ಸಮಸ್ತ ವಾನರಸೈನ್ಯದೊಡನೆ ಆ ಪುಷ್ಪಕವಿಮಾನದಲ್ಲಿಯೇ ಕುಳಿತು ಭರತಾಶ್ರಮ ವಾದ ನಂದಿಗ್ರಾಮಕ್ಕೆ ಬಂದನು. ನಂದಿಗ್ರಾಮವನ್ನು ಸೇರಿದಮೇಲೆ ಅಲ್ಲಿ ತನ್ನ ಸಮಸ್ತ ಪರಿವಾರಗಳೊಡನೆ ಪುಷ್ಪಕವಿಮಾನದಿಂದ ಕೆಳಗಿಳಿದು ನಿಂತು ಆ ದಿವ್ಯ ವಿಮಾನವನ್ನು ನೋಡಿ, “ಎಲೈ ವಿಮಾನರತ್ನವೇ! ಇನ್ನು ನೀನು ಹೊರಡು! ಅನುಜ್ಞೆಯನ್ನು ಕೊಟ್ಟಿರುವೆನು. ಇನ್ನು ಮೇಲೆ ನೀನು ಆ ಕುಬೇರನಲ್ಲಿಯೇ ಸೇರಿ, ಅವನಿಗೆ ವಾಹನವಾಗಿರು” ಎಂದನು. ರಾಮಾಜ್ಞೆಯಂತೆ ಆ ವಿಮಾನವು ಉತ್ತರಾಭಿಮುಖವಾಗಿ ಹೊರಟು ಕುಬೇರಭವನವನ್ನು ಸೇರಿತು. ಆಮೇಲೆ ಇತ್ತಲಾಗಿ ರಾಮನು ದೇವೇಂದ್ರನು ಬೃಹಸ್ಪತಿಯ ಪಾದಗಳನ್ನು ಹಿಡಿದು ನಮಸ್ಕರಿಸುವಂತೆ ತನಗೆ ಕುಲಪುರೋಹಿತ ನಾದ ವಸಿಷ್ಠನ ಪಾದಗಳನ್ನು ಹಿಡಿದು ನಮಸ್ಕರಿಸಿದನು. ಆಮೇಲೆ ಇವರಿಬ್ಬರೂ ಅಲ್ಲಿಯೇ [1] ಬೇರೆಬೇರೆ ದರ್ಭಾಸನಗಳಲ್ಲಿ ಕುಳಿತುಕೊಂಡರು.

ಇಲ್ಲಿಗೆ ನೂರಮೂವತ್ತನೆಯ ಸರ್ಗವು.

---

[1] ಇಲ್ಲಿ ರಾಮನು ಭರತಾನುಮತಿಯಿಲ್ಲದೆ ಅಯೋಧ್ಯೆಗೆ ಪ್ರವೇಶಿಸಲಾರದೆ ಅಲ್ಲಿಯೇ ಕುಳಿತನೆಂದೂ, ಇಂಗಿತಜ್ಞನಾದ ಭರತನು ಇದನ್ನು ಕಂಡುಕೊಂಡು, ಮುಂದೆ ಅಂಜಲಿ ಬಂಧಪೂರ್ವಕವಾಗಿ ರಾಮನನ್ನು ಪ್ರಾರ್ಥಿಸಿ ಕರೆತರುವನೆಂದೂ ಗ್ರಾಹ್ಯವು.

ಭರತನ ಪ್ರಾರ್ಥನೆಯಮೇಲೆ ರಾಮನು ರಾಜ್ಯವನ್ನಂಗೀಕರಿಸುವುದಕ್ಕೆ ಸಮ್ಮತಿಸಿ, ಲಕ್ಷ್ಮಣಸಹಿತನಾಗಿ ಜಟಾವಲ್ಕಲಗಳನ್ನು ತೆಗೆದು ಮಂಗಳಸ್ನಾನವನ್ನುಮಾಡಿ, ಸುಗ್ರೀವಾದಿಗಳೊಡನೆ ದಿವ್ಯರಥವನ್ನೇರಿ ಅಯೋಧ್ಯೆಗೆ ಬಂದುದು. ಅಲ್ಲಿ ಮಾಣಿಕ್ಯಮಂಟಪದನಡುವೆ ದಿವ್ಯಸಿಂಹಾಸನವನ್ನೇರಿ ಕುಳಿತುದು, ವಸಿಷ್ಠಾದಿಮಹರ್ಷಿಗಳು ತೀರ್ಥೋದಕದಿಂದ ಅಭಿಷೇಕಮಾಡಿ, ದಿವ್ಯಕಿರೀಟಧಾರಣಪೂರ್ವಕವಾಗಿ ಪಟ್ಟಾಭಿಷೇಕವನ್ನು ನಡೆಸಿದುದು. ವಿಭೀಷಣಾದಿಗಳು ರಾಮನಿಂದ ಸತ್ಕೃತರಾಗಿ ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಿದುದು. ಭರತನಿಗೆ ಯೌವರಾಜ್ಯಾಭಿಷೇಕವು. ರಾಮರಾಜ್ಯವೈಭವವು. ಫಲಶ್ರುತಿ.

ಆಗ ಭರತನು ರಾಮನಲ್ಲಿ ತನಗಿರುವ ಭಕ್ತಿವಿಶೇಷದಿಂದ ತನ್ನ ತಾಯಿಯಾದ ಕೈಕೇಯಿಗೂ ಆನಂದವನ್ನುಂಟುಮಾಡುವವನಾಗಿ, ಅನೋಘಪರಾಕ್ರಮವುಳ್ಳ ತನ್ನ ಹಿರಿಯಣ್ಣನಾದ ರಾಮನನ್ನು ನೋಡಿ, ತಲೆಯಮೇಲೆ ಕೈಜೋಡಿಸಿನಿಂತು ವಿಜ್ಞಾಪಿಸುವನು. “ಅಣ್ಣಾ! ನೀನು ರಾಜ್ಯವನ್ನು ಬಿಟ್ಟು ವನವಾಸದಲ್ಲಿದ್ದುದರಿಂದ ನನ್ನ ತಾಯಿಯನ್ನು ಸಂತೋಷಪಡಿಸಿದಂತಾಯಿತು. ಇದಕ್ಕಾಗಿ ನೀನು ನನ್ನಲ್ಲಿಟ್ಟು ಹೋದ ರಾಜ್ಯವನ್ನು ನಾನೂ ಇದುವರೆಗೆ ಸುರಕ್ಷಿತವಾಗಿ ಕಾಪಾಡುತ್ತ ಬಂದೆನು. ಇದರಿಂದ ನಾನೂ ನಿನ್ನಾಜ್ಞೆಯನ್ನು ನಡೆಸಿದಂತಾಯಿತು. ಹಿಂದೆ ನೀನು ಯಾವ ವಿಧದಿಂದ ನನ್ನ ವಶಕ್ಕೆ ನ್ಯಾಸರೂಪವಾಗಿ ಈ ರಾಜ್ಯವನ್ನೊಪ್ಪಿಸಿದ್ದೆಯೊ, ಆ ವಿಧದಿಂದಲೇ ಈಗ ಆ ರಾಜ್ಯವನ್ನು ನಿನಗೊಪ್ಪಿಸಿ, ನಾನು ಆ ಭಾರವನ್ನು ಕಳೆದುಕೊಳ್ಳಬೇಕಾಗಿದೆ- ಆದರೆ, “ಮುಂದೆಯೂ ನೀನೇ ರಾಜ್ಯವನ್ನು ನಡೆಸಬಾರದೆ” ಎಂದು ನೀನು ಕೇಳಬಹುದು. ಅಣ್ಣಾ? ಈ ಕಾರ್ಯವು ನನ್ನಿಂದ ಸಾಧ್ಯವಾದುದಲ್ಲ. ಬಲಿಷ್ಠವಾದ ಒಂದು ಮಹಾವೃಷಭವು ತಾನು ಮಾತ್ರವೇ ಹೊರಬಹುದಾದ ಒಂದು ದೊಡ್ಡ ಭಾರವನ್ನು, ಸಣ್ಣಕರುವಿನಮೇಲೆ ಹೊರಿಸಿದರೆ, ಅ ಕರುವು ಹೇಗೆ ತಾನೇ ತಡೆಯಬಲ್ಲುದು ? ಅದರಂತೆಯೇ ಮಹಾ ಬಲಾಢ್ಯನಾದ ನೀನೊಬ್ಬನು ಮಾತ್ರವೇ ವಹಿಸತಕ್ಕ ಈ ಮಹಾಭಾರವನ್ನು ನನ್ನಮೇಲೆ ಹೊರಿಸಿದರೆ ಅದನ್ನು ವಹಿಸುವುದಕ್ಕೆ ನನ್ನಿಂದ ಶಕ್ಯವೆ? ಎಂದಿಗೂ ಇಲ್ಲ! ದೊಡ್ಡ ಜಲಪ್ರವಾಹದಿಂದ ಕೊರಕಲು

ಬಿದ್ದ ಅಣೆಕಟ್ಟಿನಲ್ಲಿ ಅಲ್ಲಲ್ಲಿನ ರಂಧ್ರಗಳಿಂದ ನೀರು ಸೋರುತ್ತಿರುವಾಗ ಹುಲ್ಲು, ಸೊಪ್ಪುಸದೆ, ಮೊದಲಾದುವುಗಳನ್ನು ತಂದಿಟ್ಟು, ಅದರ ರಂಧ್ರಗಳನ್ನು ಚೆನ್ನಾಗಿ ಮುಚ್ಚಿದ ಹೊರತು, ಆ ಅಣೆಕಟ್ಟನ್ನು ನಿಲ್ಲಿಸುವುದು ಹೇಗೆ ಕಷ್ಟವೋ ಹಾಗೆ ಅನೇಕ ಛಿದ್ರಗಳುಳ್ಳ ಈ ರಾಜ್ಯದಲ್ಲಿ ಮಂತ್ರಗೋಪನವೇ ಮೊದಲಾದ ರಾಜಗುಣಗಳಿಂದ ಆ ಛಿದ್ರಗಳನ್ನು ಮುಚ್ಚುತ್ತಿದ್ದ ಹೊರತು, ಅದನ್ನು ರಕ್ಷಿಸಿಕೊಳ್ಳುವುದು ಸಾಧ್ಯವಲ್ಲ. ಆ ಶಕ್ತಿಯು ನನಗೆಲ್ಲಿಯದು? ಆದರೆ "ನೀನೂ ನನ್ನ ಹಾಗೆಯೇ ಕ್ಷತ್ರಿಯನಲ್ಲವೆ?" ಎಂದು ನೀನು ಕೇಳಬಹುದು. ನಿನ್ನ ಮಹಾಮಹಿಮೆಯೆಲ್ಲಿ? ನಾನೆಲ್ಲಿ ! ಕುದುರೆಯ ಗತಿಯನ್ನು ಕತ್ತೆಯೂ, ಹಂಸದ ನಡೆಯನ್ನು ಕಾಗೆಯೂ ಅನುಸರಿಸುವಂತೆ ನಿನ್ನ ಹಾಗೆ ರಾಜ್ಯಭಾರವನ್ನು ನಡೆಸಬೇಕೆಂದರೆ ನನಗೆ ಸಾಧ್ಯವೆ? ಎಂದಿಗೂ ಶಕ್ಯವಲ್ಲ. ಒಂದುವೇಳೆ ನೀನು " ನನ್ನ ಬೆಂಬಲದಿಂದ ನೀನೇ ರಾಜನಾಗಿ ರಾಜ್ಯವನ್ನು ನಡೆಸು" ಎಂದು ಹೇಳುವೆಯೂ ? ಮಹಾಬಾಹೂ! ಇದೂ ಯುಕ್ತವಲ್ಲ. ಮನೆಯಲ್ಲಿ ಒಂದು ಗಿಡವನ್ನು ನಟ್ಟಮೇಲೆ, ಅದು ಕ್ರಮಕ್ರಮವಾಗಿ ವೃದ್ಧಿಹೊಂದಿ, ಏರುವುದಕ್ಕೂ ಸಾಧ್ಯವಿಲ್ಲದಷ್ಟು ದೊಡ್ಡದಾಗಿ, ಶಾಖೋಪಶಾಖೆಗಳಿಂದ ತುಂಬಿ, ಸಮೃದ್ಧವಾದ ಪುಷ್ಪಗಳನ್ನೂ ಕಾಣಿಸಿ, ಕೊನೆಗೆ ಫಲವನ್ನುಮಾತ್ರಬಿಡದೆ ನಶಿಸಿಹೋದ ಪಕ್ಷದಲ್ಲಿ, ಅದನ್ನು ಬೆಳೆಸಿದವನು ಯಾವ ಉದ್ದೇಶದಿಂದ ಅದಕ್ಕಾಗಿ ಅಷ್ಟು ಶ್ರಮ ವಹಿಸಿದನೋ ಆ ಉದ್ದೇಶವು ಅವನಿಗೆ ಕೈಗೂಡದಂತೆಯೇ ಹೋಗುವುದಲ್ಲವೆ? ಅದರಂತೆಯೇ ನಮ್ಮ ತಂದೆಯಾದ ದಶರಥನೂ ಕೂಡ, ಪುತ್ರಕಾಮೇಷ್ಟಿ ಮೊದಲಾದ ಯಾಗಗಳನ್ನು ಮಾಡಿ, ನಿನ್ನಂತಹ ಪುತ್ರರತ್ನವನ್ನು ಪಡೆದ ಮೇಲೆ, ನೀನೂ ಉತ್ತರೋತ್ತರಾಭ್ಯುದಯದಿಂದ ಮಹಾಪರಾಕ್ರಮಶಾಲಿಯೆನಿಸಿಕೊಂಡು, ಸಮಸ್ತ ಕಲ್ಯಾಣಗುಣಸಂಪನ್ನನಾಗಿ, ಬಂಧುಮಿತ್ರಾದಿ ಪರಿವಾರಗಳಿಂದ ಕೂಡಿ ಬೆಳಗುತ್ತಿರುವಾಗ, ದಶರಥನು ನಿನ್ನನ್ನು ಪಡೆದುದಕ್ಕೆ ಫಲವಾಗಿ, ನೀನು ರಾಜ್ಯವನ್ನು ಪಾಲಿಸಿ, ನಿನ್ನ ಭಕ್ತರನ್ನೂ, ನಿನಗೆ ಭೃತ್ಯರಾದ ನಮ್ಮನ್ನೂ, ಪಾಲಿಸದಿದ್ದ ಪಕ್ಷದಲ್ಲಿ, ನಮ್ಮ ತಂದೆಯಾದ ದಶರಥನ ಕೋರಿಕೆಯು ಹೇಗೆತಾನೇ ಪೂರ್ಣವಾಗುವುದು? ಆದುದರಿಂದ ನೀನು ಆ ವೃಕ್ಷದ ಹೋಲಿಕೆಯನ್ನು ನಿನ್ನ ಮನಸ್ಸಿನಲ್ಲಿಯೇ ಚೆನ್ನಾಗಿ ವಿಚಾರಿಸಿ ನೋಡು. ಅಣ್ಣಾ ! ಇನ್ನು ಹೆಚ್ಚುಮಾತಿನಿಂದೇನು ? ನೀನು ಅವ

ಶ್ಯವಾಗಿ ಈಗಲೇ ಪಟ್ಟಾಭಿಷಿಕ್ತನಾಗಿ ಮಧ್ಯಾಹ್ನದ ಸೂರ್ಯನಂತೆ ರಾಜ ತೇಜಸ್ಸಿನಿಂದ ಬೆಳಗುತ್ತಿರುವುದನ್ನು ಲೋಕವೆಲ್ಲವೂ ನೋಡಿ ಸಂತೋಷ ಪಡಬೇಕು! ಇನ್ನು ಮೇಲಾದರೂ ನೀನು ವಿವಿಧ ವಾದ್ಯಧ್ವನಿಗಳಿಂದಲೂ, ಪ್ರಭಾತಕಾಲದಲ್ಲಿ ನರ್ತಿಸುವ ವಾರಸ್ತ್ರೀಯರ ಕಾಲುಂದುಗೆ ಮೊದಲಾದ ಆಭರಣಗಳಿಂದಲೂ, ಕಿವಿಗಿಂಪಾದ ಗಾನಧ್ವನಿಗಳಿಂದಲೂ, ಸುಖನಿದ್ರೆ ಯಿಂದೆಚ್ಚರಗೊಳ್ಳುವವನಾಗು! ಈ ಸಮಸ್ತರಾಜಭೋಗಗಳನ್ನೂ ಸಂತೋಷ ದಿಂದನುಭವಿಸು! ಈ ಜ್ಯೋತಿಶ್ಚಕ್ರವು ಎಂದಿನವರೆಗೆ ತಿರುಗುತ್ತಿರು ವುದೋ, ಎಂದಿನವರೆಗೆ ಈ ಭೂಮಿಯಿರುವುದೋ, ಅಂದಿನವರೆಗೂ ಇಲ್ಲಿ ನೀನೇ ಸಮಸ್ತ ರಾಜ್ಯಕ್ಕೂ ಪ್ರಭುವಾಗಿ ಪಾಲಿಸುತ್ತಿರು" ಎಂದನು. ಶತ್ರುಬಲವನ್ನು ಸಾಧಿಸತಕ್ಕ ಮಹಾವೀರನಾದ ರಾಮನು, ಭರತನು ಹೇಳಿದ ಮಾತನ್ನು ಕೇಳಿ "ವತ್ಸನೆ, ನಿನ್ನ ಕೋರಿಕೆಯಂತೆ ನಡೆಸುವೆನು. ಎಂದು ಸಮ್ಮತಿಸಿದನು. ಅದುವರೆಗೂ ಇವನಮುಂದೆ ಬದ್ಧಾಂಜಲಿಯಾಗಿ ನಿಂತಿದ್ದ ಭರತನು. ಈ ವಾಕ್ಯವು ರಾಮನಬಾಯಿಂದ ಹೊರಟಮೇಲೆ ಸಮೀಪದಲ್ಲಿದ್ದ ಒಂದು ಶುಭಾಸನದಮೇಲೆ ಕುಳಿತನು. ಇಷ್ಟರಲ್ಲಿಯೇ ಶತ್ರು ಘ್ನನು, ಮುಹೂರ್ತಕಾಲವು ಮೀರದಂತೆ ಶೀಘ್ರವಾಗಿಯೂ, ಸುಖವಾ ಗಿಯೂ ಕೆಲಸಮಾಡತಕ್ಕ ಕ್ಷೌರಿಕರನ್ನು ಕರೆಸಿದನು. ತಮ್ಮತಮ್ಮ ವೃತ್ತಿ ಯಲ್ಲಿ ನಿಪುಣರಾದ ಆ ಕ್ಷೌರಿಕರೆಲ್ಲರೂ ಬಂದು, ಮೊದಲು ರಾಮನಿಗೂ ಆಮೇಲೆ ಭರತನಿಗೂ ಲಕ್ಷ್ಮಣನಿಗೂ ಕ್ಷೌರಕಾರ್ಯವನ್ನು ನಡೆಸಿ ಅಂದವಾಗಿ ಮೀಸೆಗಳನ್ನು ಬಿಡಿಸಿದರು. [1]ಮೊದಲು ಭರತನು ಸ್ನಾನವನ್ನು ಮಾಡಿ ದನು. ಆಮೇಲೆ ಮಹಾಬಲಾಢ್ಯನಾದ ಲಕ್ಷ್ಮಣನಿಗೆ ಸ್ನಾನಕಾರ್ಯವು ನಡೆ ಯಿತು. ಆಮೇಲೆ ಸುಗ್ರೀವ, ವಿಭೀಷಣರೂ ಸ್ನಾನವನ್ನು ಮಾಡಿದರು. ಕೊನೆಗೆ ರಾಮನು, ತಾನು ಬೆಳೆಸಿದ್ದ ಜಡೆಯನ್ನು ತೆಗೆದು, ತಲೆಕೂದಲುಗಳನ್ನು ನುಣುಪಾಗಿ ಬಿಡಿಸಿಕೊಂಡು, ವಿಚಿತ್ರ ಪುಷ್ಪಮಾಲಿಕೆಯನ್ನೂ, ಚಂದ ನಾನುಲೇಪನವನ್ನೂ ಧರಿಸಿ, ಬೆಲೆಯುಳ್ಳ ಪೀತಾಂಬರವನ್ನುಟ್ಟು, ಅಲಂಕಾರ

1 ಹಿಂದೆ ರಾಮನು ವಿಭೀಷಣನು ತನ್ನನ್ನು ಸ್ನಾನಕ್ಕಾಗಿ ಪ್ರಾರ್ಥಿಸಿದಾಗ "ನಮೇ ಸ್ನಾನಂ ಬಹುಮತಂ ತಂ ವಿನಾ ಕೈಕಯೀಸುತಮ್" ಭರತನನ್ನು ಬಿಟ್ಟು ತಾನು ಸ್ನಾನ ಮಾಡಲೊಲ್ಲೆನೆಂದು ಹೇಳಿದನಷ್ಟೆ? ಅದಕ್ಕಾಗಿಯೇ ಇಲ್ಲಿ ಭರತನಿಗೆ ಪ್ರಥಮಸ್ನಾನವು.

ಕಾಂತಿಯಿಂದೊಪ್ಪುತ್ತ, ದಿವ್ಯಾಸನದಮೇಲೆ ಕುಳಿತನು. ಇಷ್ಟರಲ್ಲಿ ಇಕ್ಷ್ವಾಕು ಕುಲವರ್ಧನನಾಗಿಯೂ, ವೀರ್ಯಶಾಲಿಯಾಗಿಯೂ, ಶ್ರೀಮಂತನಾಗಿಯೂ ಇರುವ ಶತ್ರುಘ್ನನು, ಶ್ರೀರಾಮನಿಗೂ ಲಕ್ಷ್ಮಣನಿಗೂ ಭರತನಿಗೂ, ಹಾರಕೇಯೂರಾದ್ಯಾಭರಣಗಳನ್ನು ತೊಡಿಸಿ ಅವರನ್ನಲಂಕರಿಸಿದನು. ಹಾಗೆಯೇ ಶುಭಹೃದಯವುಳ್ಳ ದಶರಥ ಸ್ತ್ರೀಯರೆಲ್ಲರೂ ಬಂದು ತಮ್ಮ ಕೈಯಿಂದಲೇ ಸೀತಾದೇವಿಗೆ ಅತಿಮನೋಹರವಾದ ಅಲಂಕಾರಗಳನ್ನು ಮಾಡಿದರು. ಪುತ್ರವತ್ಸಲೆಯಾದ ಕೌಸಲ್ಯೆಯು ತನ್ನ ಪ್ರಿಯಕುಮಾರನಾದ ರಾಮನ ಮನಸ್ಸಂತೋಷಪಡಿಸುವುದರಲ್ಲಿಯೇ ನಿರತಳಾದುದರಿಂದ, ಆ ರಾಮನಿಗೆ ಸುಹೃತ್ತುಗಳಾದ ವಾನರರ ಪತ್ನಿಯರೆಲ್ಲರನ್ನೂ ಅತ್ಯುತ್ಸಾಹದಿಂದ ಕರೆದು, ಅವರಿಗೆ ತನ್ನ ಕೈಯಿಂದಲೇ ಪ್ರಯತ್ನಪಟ್ಟು ಮಂಗಳಾಲಂಕಾರಗಳನ್ನು ಮಾಡಿದಳು. ಇಷ್ಟರಲ್ಲಿ ಶತ್ರುಘ್ನಾಜ್ಞೆಯಿಂದ ಸುಮಂತ್ರನೆಂಬ ಸಾರಥಿಯು ಸರ್ವಾಂಗಸುಂದರವಾದ ರಥವನ್ನು ಜೋಡಿಸಿ, ಉತ್ತಮಾಶ್ವಗಳನ್ನು ಕಟ್ಟಿ ಸಿದ್ಧಪಡಿಸಿ ತಂದು ನಿಲ್ಲಿಸಿದನು. ಆಗ ಮಹಾಬಾಹುವಾಗಿಯೂ, ಸತ್ಯಪರಾಕ್ರಮನಾಗಿಯೂ ಇರುವ ರಾಮನು ಸೂರ್ಯಮಂಡಲದಂತೆ ತೇಜೋವಿಶಿಷ್ಟವಾದ ದಿವ್ಯರಥವು ಸಿದ್ಧವಾಗಿ ಬಂದು ನಿಂತಿರುವುದನ್ನು ನೋಡಿ ಅದನ್ನೇರಿ ಕುಳಿತನು. ಇಷ್ಟರಲ್ಲಿ ಸುಗ್ರೀವನೂ, ಹನುಮಂತನೂ ಸ್ನಾನವನ್ನು ಮಾಡಿ, ದೇವಯೋಗ್ಯಗಳಾದ ಉತ್ತಮ ವಸ್ತ್ರಗಳನ್ನುಟ್ಟು, ಅಂದವಾದ ಕುಂಡಲಗಳನ್ನಿಟ್ಟು, ದೇವೇಂದ್ರನಂತೆ ತೇಜಸ್ಸಿನಿಂದ ಬೆಳಗುತ್ತ ಮುಂದಾಗಿ ಅಯೋಧ್ಯೆಗೆ ಹೊರಟರು. ಹಾಗೆಯೇ ಸುಗ್ರೀವಪತ್ನಿಯರೂ ಕೂಡ ಸೀತಾದೇವಿಯೊಡಗೂಡಿ, ಮೇಲಾದ ಭೂಷಣಗಳಿಂದಲೂ, ಉತ್ತಮಕುಂಡಲಗಳಿಂದಲೂ ಅಲಂಕೃತರಾಗಿ ಅಯೋಧ್ಯಾನಗರವನ್ನು ನೋಡುವ ಕುತೂಹಲದಿಂದ ಹೊರಟುಬಂದರು. ಇವರೆಲ್ಲರಿಗೂ ಮುಂದಾಗಿ ದಶರಥರಾಜನಲ್ಲಿದ್ದ ಕೆಲವು ವೃದ್ಧಮಂತ್ರಿಗಳು ಅಯೋಧ್ಯೆಗೆ ಹೋಗಿ ಅಲ್ಲಿ ಕುಲಪುರೋಹಿತನಾದ ವಸಿಷ್ಠನನ್ನು ಮುಂದಿಟ್ಟುಕೊಂಡು, ರಾಮನ ಪಟ್ಟಾಭಿಷೇಕಕ್ಕಾಗಿ ಶಾಸ್ತ್ರಕ್ರಮದಂತೆ ಯಾವ ಯಾವ ಮಂಗಳವಸ್ತುಗಳನ್ನು ಸಿದ್ಧಪಡಿಸಬೇಕೋ ಆ ವಿಷಯವನ್ನು ಕುರಿತು ಆಲೋಚಿಸುತ್ತಿದ್ದರು. ಅವರಲ್ಲಿ ಮುಖ್ಯವಾಗಿ, ಅಶೋಕ, ವಿಜಯ, ಸುಮಂತ್ರರೆಂಬ ಮೂವರು ಪ್ರಧಾನಮಂತ್ರಿಗಳೂ ಕಲೆತು, ರಾಮನಿಗೂ, ರಾಜ್ಯಕ್ಕೂ, ಶ್ರೇಯಸ್ಕರವಾಗಿರುವಂತೆ ಯಾವ ಶಾಸ್ತ್ರಕ್ರಮದಿಂದ

ಪಟ್ಟಾಭಿಷೇಕವನ್ನು ನಡೆಸಬೇಕೋ ಆ ಕ್ರಮವನ್ನು ಕುರಿತು ವಸಿಷ್ಠ ರೊಡನೆ ಆಲೋಚಿಸುತ್ತ ಅವರನ್ನು ನೋಡಿ, "ಜಯಾರ್ಹನಾಗಿಯೂ ಮಹಾತ್ಮನಾಗಿಯೂ ಇರುವ ನಮ್ಮ ರಾಮನಿಗೆ ಅಭಿಷೇಕವನ್ನು ನಡೆಸುವು ದಕ್ಕಾಗಿ ಯಾವಯಾವ ಮಂಗಳವಸ್ತುಗಳನ್ನು ಸಿದ್ಧಪಡಿಸಬೇಕೋ, ಅವೆಲ್ಲವನ್ನೂ ಲೋಪವಿಲ್ಲದೆ ಎಚ್ಚರದಿಂದ ನೋಡಿಕೊಳ್ಳುವ ಭಾರವು ನಿಮ್ಮದು" ಎಂದರು. ಆ ಮಂತ್ರಿಗಳೆಲ್ಲರೂ ಹೀಗೆ ಪುರೋಹಿತರಾದ ವಸಿ ಷ್ಠರ ಮೇಲೆ ಆ ಭಾರವನ್ನು ಹೊರಿಸಿ ತಾವು ತಿರುಗಿ ರಾಮನನ್ನು ನೋಡಬೇಕೆಂಬ ಆತುರದಿಂದ ಪಟ್ಟಣದಿಂದ ಹಿಂತಿರುಗಿ ರಾಮನನ್ನಿದಿರು ಗೊಳ್ಳುವುದಕ್ಕಾಗಿ ಹೊರಟರು. ಇಷ್ಟರಲ್ಲಿ ರಾಮನೂ ಕೂಡ ಸಹ ಸ್ರಾಕ್ಷನಾದ ದೇವೇಂದ್ರನು ಹಸುರುಕುದುರೆಗಳಮೇಲೆ ಹೂಡಿದ ತನ್ನ ರಥವನ್ನೇರಿ ಹೊರಟಂತೆ, ಉತ್ತಮವಾದ ರಥವನ್ನೇರಿ ಪಟ್ಟದ ಕಡೆಗೆ ಹೊರಟನು. ರಾಮನು ರಥದಲ್ಲಿ ಕುಳಿತು ಬರುವಾಗ ಭರತನು ತಾನೇ ಕುದುರೆಯ ಹಗ್ಗವನ್ನು ಹಿಡಿದು ಸಾರಥ್ಯವನ್ನು ನಡೆಸಿದನು. ಶತ್ರುಘ್ನನು ಛತ್ರವನ್ನು ಹಿಡಿದನು. ಲಕ್ಷ್ಮಣನು ಶ್ರೀ ರಾಮನ ಪಾದಸೇವೆಯಲ್ಲಿ ಇವರೆಲ್ಲರಿಗಿಂತಲೂ ಹೆಚ್ಚಾದ ಆತುರವುಳ್ಳವನಾದುದ ರಿಂದ ಒಂದು ಕೈಯಿಂದ ಬೀಸಣಿಗೆಯನ್ನೂ, ಬೇರೊಂದು ಕೈಯಿಂದ ಚಾಮರ ವನ್ನೂ ಹಿಡಿದು ರಾಮನ ತಲೆಯಮೇಲೆ ಸುಖಕರವಾಗಿರುವಂತೆ ಮೆಲ್ಲಗೆ ಬೀಸುತ್ತಿದ್ದನು. ರಾಕ್ಷಸರಾಜನಾದ ವಿಭೀಷಣನು ರಾಮನಮುಂದೆ ಚಂದ್ರ ಬಿಂಬಕ್ಕೆ ಸಮಾನವಾದ ಬೇರೊಂದು ಬಿಳೀಚಾಮರವನ್ನು ಹಿಡಿದು ನಿಂತನು. ಹೀಗೆ ರಾಮನು ಅತಿವೈಭವದಿಂದ ಹೊರಟುಬರುವಾಗ ಆಕಾಶದಲ್ಲಿ ಋಷಿ ಗಳೂ, ಮರುದ್ಗಣಗಳೂ, ದೇವತೆಗಳೂ, ಗುಂಪುಗುಂಪಾಗಿ ಸೇರಿ, ರಾಮನು ನಡೆಸಿದ ವೀರಕೃತ್ಯಗಳನ್ನು ಕಿವಿಗಿಂಪಾದ ಮಧುರಧ್ವನಿಯಿಂದ ಕೀರ್ತಿಸುತ್ತಿ ದ್ದರು. ರಾಮನು ರಥಾರೂಢನಾಗಿ ಹೊರಟಾಗ ಅವನ ಹಿಂದೆ, ಮಹಾ ತೇಜಸ್ವಿಯಾಗಿಯೂ, ವಾನರಸಿಂಹನಾಗಿಯೂ ಇರುವ ಸುಗ್ರೀವನು, ಪರ್ವ ತಾಕಾರವುಳ್ಳ ಶತ್ರುಂಜಯವೆಂಬ ಆನೆಯನ್ನೇರಿ ಬಂದನು. ಸಮಸ್ತ ವಾನ ರರೂ ಮನುಷ್ಯರೂಪವನ್ನು ಧರಿಸಿ ಸರ್ವಾಭರಣಭೂಷಿತರಾಗಿ, ಬೇರೆಬೇರೆ ಒಂಬತ್ತು ಸಾವಿರ ಆನೆಗಳನ್ನೇರಿ ಹೊರಟರು. ಪುರುಷೋತ್ತಮನಾದ ಶ್ರೀರಾಮನು ಪುರಪ್ರವೇಶಕ್ಕಾಗಿ ಹೊರಟು ಬರುವಾಗ, ಮುಂದೆ ಒಂದು ಕಡೆಯಲ್ಲಿ ಶಂಖಧ್ವನಿಗಳೂ, ಮತ್ತೊಂದು ಕಡೆಯಲ್ಲಿ ದುಂದುಭಿಧ್ವನಿಗಳೂ,

ಅಲ್ಲಲ್ಲಿ ಪುರಜನರು ಮಹೋತ್ಸಾಹದಿಂದ ಮಾಡುತ್ತಿದ್ದ ಕೋಲಾಹಲ ಧ್ವನಿಗಳೂ ಮೇಲೆ ಮೇಲೆ ಹೆಚ್ಚುತ್ತಿದ್ದುವು. ಇಷ್ಟು ಮಹಾವೈಭವದೊಡನೆ ಶ್ರೀರಾಮನು ಉಪ್ಪರಿಗೆಗಳ ಸಾಲಿನಿಂದ ಶೋಭಿತವಾದ ಅಯೋಧ್ಯಾಪುರವನ್ನು ಪ್ರವೇಶಿಸಿದನು. ಇಷ್ಟರಲ್ಲಿ ಅಭಿಷೇಕಸನ್ನಾಹಗಳನ್ನು ನಡೆಸುವುದಕ್ಕಾಗಿ ಮುಂದಾಗಿಯೇ ಹೋಗಿದ್ದ ಸುಮಂತ್ರಾದಿಮಂತ್ರಿಗಳು, ರಾಮದರ್ಶನಾತುರದಿಂದ ಹಿಂತಿರುಗಿ ಬರುತ್ತ, ದಾರಿಯಲ್ಲಿ ಪರಿವಾರಸಮೇತನಾಗಿ ತನ್ನ ದೇಹಕಾಂತಿಯಿಂದಲೇ ದಿಕ್ಕುಗಳೆಲ್ಲವನ್ನೂ ಬೆಳಗುತ್ತ, ರಥದಲ್ಲಿ ಕುಳಿತು ಬರುತ್ತಿದ್ದ ರಾಮಚಂದ್ರನನ್ನು ನೋಡಿದರು. ಆ ವೃದ್ಧಮಂತ್ರಿಗಳೆಲ್ಲರೂ ರಾಮನನ್ನು ನೋಡಿದೊಡನೆ ಜಯಜಯಶಬ್ದಗಳಿಂದಾಶೀರ್ವದಿಸಿ, ಅವನಿಂದ ತಾವೂ ಪ್ರತಿಸತ್ಕಾರವನ್ನು ಹೊಂದಿ, ಸಹೋದರರೊಡನೆ ಬರುತ್ತಿದ್ದ ಆ ಮಹಾತ್ಮನನ್ನು ತಾವೂ ಹಿಂಬಾಲಿಸಿ ಬರುತ್ತಿದ್ದರು. ಆಗ ರಾಮನು, ಮಂತ್ರಿಗಳೂ, ಬ್ರಾಹ್ಮಣರೂ, ಪ್ರಜೆಗಳೂ ತನ್ನನ್ನು ಸುತ್ತಿ ಸೇವಿಸುತ್ತಿರಲು, ನಕ್ಷತ್ರಗಳಿಂದ ಪರಿವೃತನಾದ ಚಂದ್ರನಂತೆ ಶೋಭಾತಿಶಯದಿಂದ ಬೆಳಗುತ್ತಿದ್ದನು. ತೂರ್ಯವನ್ನು ಬಾಜಿಸತಕ್ಕವರೂ, ತಾಳಹಾಕತಕ್ಕವರೂ, ತಮ್ಮತಮ್ಮ ವಾದ್ಯಗಳನ್ನು ನುಡಿಸುತ್ತ ಮುಂದೆ ಹೊರಟರು. ಮಂಗಳಪಾಠಕರು ಸ್ತುತಿಪಾಠಗಳನ್ನು ಹೇಳುತ್ತ ಬಂದರು. ಬ್ರಾಹ್ಮಣರು ಬಂಗಾರದ ಬಣ್ಣವುಳ್ಳ ಮಂತ್ರಾಕ್ಷತೆಗಳನ್ನು ಹಿಡಿದು, ಗೋವುಗಳನ್ನೂ, ಕನ್ನೆಯರನ್ನೂ ರಥದಮುಂದೆ ಬಿಟ್ಟುಕೊಂಡು ಬರುತ್ತಿದ್ದರು. ಕೆಲವರು ಮಂಗಳಾರ್ಥವಾಗಿ ಹೂರಣಗಡುಬುಗಳನ್ನು ಕೈಯಲ್ಲಿಟ್ಟುಕೊಂಡು (ಹೂರಣ ಗಡುಬುಗಳಂತೆ ಜೋಡಿಸಿದ ಕೈಯುಳ್ಳವರಾಗಿ) ಬರುತ್ತಿದ್ದರು. ಹೀಗೆ ಬರುತ್ತಿರುವಾಗ ರಾಮನು ತನ್ನಲ್ಲಿ ಸುಗ್ರೀವನಿಗಿರುವ ಅಸಾಧಾರಣ ಸ್ನೇಹವನ್ನೂ, ಹನುಮಂತನ ಪ್ರಭಾವವನ್ನೂ, ಯುದ್ಧದಲ್ಲಿ ವಾನರರು ನಡೆಸಿದ ವೀರಕರ್ಮಗಳನ್ನೂ, ರಾಕ್ಷಸರ ಬಲಾತಿಶಯವನ್ನೂ, ವಿಭೀಷಣನು ತನ್ನಲ್ಲಿ ಬಂದು ಸೇರಿದುದನ್ನೂ ತನ್ನನ್ನು ಸುತ್ತಿ ಬರುತ್ತಿದ್ದ ಮಂತ್ರಿಗಳಿಗೆ ಕಥಾರೂಪವಾಗಿ ಹೇಳುತ್ತ ಬಂದನು. ಅಯೋಧ್ಯಾವಾಸಿಗಳೆಲ್ಲರೂ ಈ ವೃತ್ತಾಂತಗಳನ್ನು ಕೇಳಿ ಆಶ್ಚರ್ಯಚಕಿತರಾದರು. ಹೀಗೆ ರಾಮನು ತನ್ನ ಹಿಂದಿನ ವೃತ್ತಾಂತಗಳನ್ನು ತಿಳಿಸುತ್ತ, ಯಾವಾಗಲೂ ತುಷ್ಟರಾಗಿಯೂ, ಪುಷ್ಟರಾಗಿಯೂ ಇರುವ ಪುರಜನರಿಂದ ನಿಬಿಡವಾದ

ತನ್ನ ರಾಜಧಾನಿಯನ್ನು ಸಮಸ್ತ ವಾನರಸೈನ್ಯಸಮೇತನಾಗಿ ಪ್ರವೇಶಿಸಿದನು. ರಾಮನು ಪುರಪ್ರವೇಶಮಾಡುವಾಗ ಅಲ್ಲಿನ ಪುರಜನರೆಲ್ಲರೂ ತಮ್ಮ ತಮ್ಮ ಪ್ರತಿಗೃಹದ ಮುಂದೆಯೂ ಧ್ವಜಗಳನ್ನೆತ್ತಿ ಕಟ್ಟಿದರು. ಹೀಗೆ ರಾಮನು ಮಂಗಳಾಲಂಕಾರಭೂಷಿತವಾದ ಅಯೋಧ್ಯೆಯನ್ನು ಪ್ರವೇಶಿಸಿ, ಇಕ್ಷ್ವಾಕುವಂಶದ ರಾಜರಿಗೆ ವಾಸಯೋಗ್ಯವಾಗಿಯೂ ರಮಣೀಯವಾಗಿಯೂ ಇರುವ ತನ್ನ ತಂದೆಯರಮನೆಯ ಬಳಿಗೆ ಬಂದನು. ರಘುಕುಲಾನಂದಕರನಾದ ಆ ಶ್ರೀರಾಮನು ಮಹಾತ್ಮನಾದ ತನ್ನ ತಂದೆಯರಮನೆಯನ್ನು ಪ್ರವೇಶಿಸಿದೊಡನೆ, ಕೌಸಲ್ಯೆಗೂ, ಸುಮಿತ್ರೆಗೂ, ಕೈಕೇಯಿಗೂ ನಮಸ್ಕರಿಸಿ, ಸಮೀಪದಲ್ಲಿದ್ದ ಧಾರ್ಮಿಕೋತ್ತಮನಾದ ಭರತನನ್ನು ನೋಡಿ ಮಧುರವಾಕ್ಯದಿಂದ "ವತ್ಸಭರತಾ! ಮುತ್ತಿನ ಮಣಿಗಳಿಂದಲೂ, ವೈಡೂರ್ಯರತ್ನಗಳಿಂದಲೂ ಖಚಿತವಾದ, ಅತ್ಯುತ್ತಮವಾದ ಆ ನನ್ನ ದೊಡ್ಡ ಮನೆಯನ್ನು, ಅದರ ಅಂತಃಪುರೋದ್ಯಾನದೊಡನೆ ಈ ಸುಗ್ರೀವನ ನಿವಾಸಾರ್ಥವಾಗಿ ಬಿಡಿಸಿಕೊಡು" ಎಂದನು. ಅಮೋಘಪರಾಕ್ರಮನಾದ ರಾಮಾಜ್ಞೆಯನ್ನು ಶಿರಸಾವಹಿಸಿ, ಭರತನು ಸುಗ್ರೀವನನ್ನು ಕೈಹಿಡಿದು ಕರೆದುಕೊಂಡು ಹೋಗಿ ರಾಮನ ಅರಮನೆಯಲ್ಲಿ ಬಿಟ್ಟನು. ಇಷ್ಟರಲ್ಲಿ ಶತ್ರುಘ್ನಾಜ್ಞೆಯಿಂದ ಪರಿಚಾರಕರು, ತೈಲದೀಪಗಳನ್ನೂ, ಮಂಚಗಳನ್ನೂ, ಹಾಸಿಗೆಗಳನ್ನೂ, ಬೇಗಬೇಗನೆ ಸಿದ್ಧಪಡಿಸಿಕೊಂಡು ಬಂದರು. ಸುಗ್ರೀವನು ಸುಖವಾಗಿ ತನ್ನ ಬಿಡಾರವನ್ನು ಸೇರಿದಮೇಲೆ, ಮಹಾತೇಜಸ್ವಿಯಾದ ಭರತನು ಆ ವಾನರರಾಜನನ್ನು ನೋಡಿ, "ಪ್ರಭೂ! ರಾಮಪಟ್ಟಾಭಿಷೇಕಾರ್ಥವಾಗಿ ಪುಣ್ಯತೀರ್ಥಗಳನ್ನು ತರುವುದಕ್ಕೆ ದೂತರನ್ನು ಕಳುಹಿಸು! ಈ ಕಾರ್ಯಕ್ಕೆ ನೀನೇ ಸಮರ್ಥನು!" ಎಂದನು. ಒಡನೆಯೇ ಸುಗ್ರೀವನು ನವರತ್ನಖಚಿತಗಳಾದ ನಾಲ್ಕು ಸುವರ್ಣಕುಂಭಗಳನ್ನು ತರಿಸಿ, ಸಮರ್ಥರಾದ[1] ನಾಲ್ಕುಮಂದಿ ವಾನರ ವೀರರ ಕೈಗೆ ಕೊಟ್ಟು ಅವರನ್ನು ಕುರಿತು "ಎಲೈ ವಾನರರೆ! ನೀವು ನಾಲ್ಕುಮಂದಿಯೂ ಬೇರೆಬೇರೆ ದಿಕ್ಕುಗಳಿಗೆ ಹೊರಟು

---

1 ಜಾಂಬವಂತನೇ ಮೊದಲಾದ ನಾಲ್ಕುಮಂದಿ ವಾನರರು ನದೀಜಲವನ್ನೂ, ಸುಷೇಣಾದಿಗಳು ಸಮುದ್ರತೀರ್ಥವನ್ನೂ ತರುವುದಕ್ಕಾಗಿ ನಿಯೋಗಿಸಲ್ಪಟ್ಟರೆಂದೂ ಈ ಎರಡು ಗುಂಪುಗಳಲ್ಲಿಯೂ ಋಷಭನೆಂಬ ಒಂದೇ ಹೆಸರುಳ್ಳ ಬೇರೆಬೇರೆ ವಾನರರಿದ್ದರೆಂದೂ ಗ್ರಾಹ್ಯವು.

ನಾಲ್ಕು ಸಮುದ್ರಗಳಿಂದಲೂ (ಅಲ್ಲಲ್ಲಿನ ಪುಣ್ಯನದಿಗಳಿಂದಲೂ) ತೀರ್ಥ ಗಳನ್ನು ಸಂಗ್ರಹಿಸಿಕೊಂಡು, ನಾಳೆ ಬೆಳಗಾಗುವುದರೊಳಗಾಗಿ ಇಲ್ಲಿಗೆ ಸಿದ್ಧ ರಾಗಿ ಬಂದು ಕಾದಿರಬೇಕು !" ಎಂದನು. ಈ ಸುಗ್ರೀವಾಜ್ಞೆಯನ್ನು ಕೇಳಿ ದೊಡನೆ, ಮದದಾನೆಯಂತೆ ಉಬ್ಬಿದ ಮೈಯುಳ್ಳವರಾಗಿಯೂ, ಮಹಾ ಮಹಿಮೆಯುಳ್ಳವರಾಗಿಯೂ ಇದ್ದ ಆ ನಾಲ್ಕುಮಂದಿ ವಾನರರೂ ಗರುಡ ನಂತೆ ಶೀಘ್ರಗತಿಯಿಂದ ಆಕಾಶಕ್ಕೆ ಹಾರಿ ಬೇರೆಬೇರೆ ದಿಕ್ಕುಗಳಿಗೆ ಹೊರ ಟರು. ಜಾಂಬವಂತನೂ, ಹನುಮಂತನೂ, ವೇಗದರ್ಶಿಯೆಂಬ ವಾನರನೂ, ಋಷಭನೂ ಬೇರೆಬೇರೆ ದಿಕ್ಕುಗಳಿಗೆ ಹೊರಟು, ಅಲ್ಲಲ್ಲಿಂದ ಐನೂರು ಪುಣ್ಯ ನದಿಗಳ ತೀರ್ಥಗಳನ್ನು ಕಲಶಗಳಲ್ಲಿ ತುಂಬಿಕೊಂಡು, ಕ್ಲೃಪ್ತಕಾಲಕ್ಕೆ ಸರಿ ಯಾಗಿ ಆ ಪೂರ್ಣಕಲಶಗಳನ್ನು ತಂದಿಟ್ಟರು. ಬಲಸಂಪನ್ನನಾದ ಸುಷೇಣನು ಪೂರ್ವಸಮುದ್ರದಿಂದ ತೀರ್ಥವನ್ನು ಸಂಗ್ರಹಿಸಿಕೊಂಡು, ನವರತ್ನಖಚಿತವಾದ ಆ ಪೂರ್ಣ ಕುಂಭದೊಡನೆ ಬಂದು ಸೇರಿದನು. ಹಾಗೆಯೇ ಋಷಭನು ದಕ್ಷಿಣಸಮುದ್ರದಿಂದ ತನ್ನ ಸುವರ್ಣಘಟದಲ್ಲಿ ತೀರ್ಥವನ್ನು ತುಂಬಿ, ಆ ಪೂರ್ಣಕುಂಭವನ್ನು ಚಂದನಶಾಖೆಗಳಿಂದ ಮುಚ್ಚಿಕೊಂಡು, ವೇಗದಿಂದ ಬಂದು ಸೇರಿದನು. ವಾಯುವಿನಂತೆ ಶೀಘ್ರಗತಿಯುಳ್ಳ ಗವಯನು, ದೊಡ್ಡ ರತ್ನಕಲಶದಲ್ಲಿ, ಪಶ್ಚಿಮಸಮುದ್ರದಿಂದ ಶೀತಲಜಲವನ್ನು ತುಂಬಿ ತಂದನು. ಸರ್ವಗುಣಸಂಪನ್ನನಾಗಿಯೂ ಗರುಡನಂತೆಯೂ, ವಾಯುವಿನಂತೆಯೂ, ವೇಗ ವುಳ್ಳವನಾಗಿಯೂ ಇರುವ ಧರ್ಮಾತ್ಮನಾದ ನಳನೆಂಬ ಪ್ರಸಿದ್ಧ ವಾನರಯೂಥ ಪತಿಯು ಉತ್ತರ ಸಮುದ್ರದಿಂದ ತೀರ್ಥವನ್ನು ತಂದಿರಿಸಿದನು. ಆಮೇಲೆ ಶತ್ರು ಘ್ನನು ಮಂತ್ರಿಗಳೊಡಗೂಡಿ ಬಂದು, ರಾಮಾಭಿಷೇಕಕ್ಕಾಗಿ ವಾನರೋತ್ತಮ ರಿಂದ ತೀರ್ಥವು ಸಿದ್ಧಪಡಿಸಲ್ಪಟ್ಟಿರುವುದನ್ನು ನೋಡಿ, ಈ ವಿಷಯವನ್ನು ಪುರೋಹಿತರಾದ ವಸಿಷ್ಠರಿಗೂ, ಇತರ ಬಂಧುಮಿತ್ರರಿಗೂ ತಿಳಿಸಿದನು.

ಶ್ರೀರಾಮಪಟ್ಟಾಭಿಷೇಕವು.

ಆಮೇಲೆ ನಿಯತಾತ್ಮನಾದ ವಸಿಷ್ಠನು, ಅನೇಕ ಬ್ರಾಹ್ಮಣರೊಡಗೂಡಿ ಬಂದು, ರಾಮನನ್ನು ಸೀತೆಯೊಡನೆ ರತ್ನಮಯವಾದ ಪೀಠದಲ್ಲಿ ಕುಳ್ಳಿರಿಸಿ

ಧನು. ಒಡನೆಯೇ ವಸಿಷ್ಠನೂ, ವಾಮದೇವನೂ, ಜಾಬಾಲಿಯೂ, ಕಾಶ್ಯಪನೂ, ಕಾತ್ಯಾಯನನೂ, ಸುಯಜ್ಞನೂ, ಗೌತಮನೂ, ವಿಜಯನೂ, ಋತ್ವಿಕ್ಕುಗಳೊಡನೆ ಸೇರಿ ಬಂದು, ಅಷ್ಟವಸುಗಳು ದೇವೇಂದ್ರನನ್ನು ಸ್ವರ್ಗಾಧಿಪತ್ಯಕ್ಕಾಗಿ ಅಭಿಷೇಕಿಸಿದಂತೆ, ಸ್ವಚ್ಛವಾಗಿಯೂ, ಸುಗಂಧವಿಶಿಷ್ಟವಾಗಿಯೂ ಇರುವ ತೀರ್ಥದಿಂದ ರಾಮನನ್ನು ಅಭಿಷೇಕಿಸಿದರು. ಮಹರ್ಷಿಗಳೆಲ್ಲರೂ ಹೀಗೆ ತಾವು ಅಭಿಷೇಕಮಾಡಿದಮೇಲೆ ಪರಮಸಂತೋಷಭರಿತರಾಗಿ, ಋತ್ವಿಕ್ಕುಗಳಿಂದಲೂ, ಬ್ರಾಹ್ಮಣರಿಂದಲೂ, ಕನ್ಯೆಯರಿಂದಲೂ, ಮಂತ್ರಿಗಳಿಂದಲೂ, ಪುರಜನರಿಂದಲೂ ಕ್ರಮವಾಗಿ ಅಭಿಷೇಕವನ್ನು ಮಾಡಿಸಿದರು. ಮತ್ತು ಆಕಾಶದಲ್ಲಿರುವ ಸಮಸ್ತದೇವತೆಗಳೂ, ಇಂದ್ರಾದಿಗಳಾದ ನಾಲ್ಕುಮಂದಿ ದಿಕ್ಪಾಲಕರೂ, ಇನ್ನೂ ಇತರ ದೇವತೆಗಳೂ, ಸೇರಿಬಂದು, ಬಗೆಬಗೆಯ ದಿವ್ಯೌಷಧಿರಸಗಳಿಂದ ರಾಮನಿಗೆ ಅಭಿಷೇಕವನ್ನು ನಡೆಸಿದರು. ರತ್ನಖಚಿತವಾದ ಯಾವ ದಿವ್ಯ ಕಿರೀಟವು ಪೂರ್ವದಲ್ಲಿ ಬ್ರಹ್ಮನಿಂದ ನಿರ್ಮಿಸಲ್ಪಟ್ಟಿತೋ, ಮನುಪ್ರಜಾಪತಿಯು ಹಿಂದೆ ಯಾವ ಕಿರೀಟದಿಂದಲೇ ಅಭಿಷೇಕಿಸಲ್ಪಟ್ಟನೋ, ಆ ವಂಶದ ಇತರ ರಾಜರೂಕೂಡ ಕುಲಕ್ರಮವಾಗಿ ಯಾವ ಕಿರೀಟದಿಂದಲೇ ಪಟ್ಟಾಭಿಷಿಕ್ತರಾದರೋ, ಆ ಕಿರೀಟವನ್ನು ತಂದು ರಾಮನ ಶಿರಸ್ಸಿನಲ್ಲಿಟ್ಟು ಪಟ್ಟಾಭಿಷೇಕವನ್ನು ನಡೆಸಿದನು. ಬಳಿಕ ಅನೇಕ ಮಂಗಳಾಭರಣಗಳನ್ನೂ ತಂದು ತೊಡಿಸಿದನು. ಈ ಅಭಿಷೇಕಕಾಲದಲ್ಲಿ ಶತ್ರುಘ್ನನು ರಾಮನಿಗೆ ಶ್ವೇತಚ್ಛತ್ರವನ್ನು ಹಿಡಿದನು. ವಾನರೇಶ್ವರನಾದ ಸುಗ್ರೀವನು, ರಾಜಚಿಹ್ನವಾದ ಚಾಮರವನ್ನು ತಂದು ಹಿಡಿದನು. ಚಂದ್ರನಿಗೆಣೆಯಾದ ಬೇರೊಂದು ಚಾಮರವನ್ನು ರಾಕ್ಷಸೇಂದ್ರನಾದ ವಿಭೀಷಣನು ಹಿಡಿದು ನಿಂತನು. ಇಷ್ಟರಲ್ಲಿ ವಾಯುದೇವನು ದೇವೇಂದ್ರನಿಂದ ಪ್ರೇರಿತನಾಗಿ, ಕಾಂತಿಯಿಂದ ಜ್ವಲಿಸುವಂತಿದ್ದ ನೂರು ಸುವರ್ಣಕಮಲಗಳುಳ್ಳ ಮಾಲಿಕೆಯನ್ನು ತಂದು ರಾಮನಿಗೆ ಸಮರ್ಪಿಸಿದನು. ತಿರುಗಿ ಆ ವಾಯುದೇವನೇ ಮತ್ತೊಮ್ಮೆ ಇಂದ್ರನಿಂದ ಪ್ರೇರಿತನಾಗಿ ಬಂದು ಸುತ್ತಲೂ ನವರತ್ನಗಳಿಂದಲೂ, ನಡುವೆ ನಾಯಕರತ್ನದಿಂದಲೂ ಶೋಭಿತವಾದ ಮುಕ್ತಾಹಾರವನ್ನು ತಂದು ಕೊಟ್ಟನು. ಸಾಮ್ರಾಜ್ಯಾಭಿಷೇಕಕ್ಕೆ ತಕ್ಕ ಪಾತ್ರನಾದ ರಾಮನಿಗೆ ಈ ಪಟ್ಟಾಭಿಷೇಕೋತ್ಸವವು ನಡೆಯುವುದನ್ನು ನೋಡಿ ದೇವ ಗಂಧರ್ವರು ಸಂತೋಷದಿಂದ ಹಾಡಿದರು. ಅಪ್ಸರಸ್ಸುಗಳು ನರ್ತನಮಾಡಿದರು. ಸಮಸ್ತಭೂಮಿಯೂ ಸಸ್ಯಸಮೃದ್ಧ

ವಾಯಿತು. [1]ಸಮಸ್ತ ವೃಕ್ಷಗಳೂ ಉತ್ತಮಫಲಗಳಿಂದೊಪ್ಪುತ್ತಿದ್ದುವು. ಪುಷ್ಪಗಳೆಲ್ಲವೂ ಮೇಲಾದ ಸುವಾಸನೆಯಿಂದ ಘಮಘಮಿಸುತ್ತಿದ್ದುವು. ಪುರುಷೋತ್ತಮನಾದ ರಾಮನು ತನ್ನ ಪಟ್ಟಾಭಿಷೇಕಕಾಲದಲ್ಲಿ ನೂರುಸಾವಿರ ಕುದುರೆಗಳನ್ನೂ, ಆಗಲೇ ಕರುಹಾಕಿದ ಲಕ್ಷ ಗೋವುಗಳನ್ನೂ, ನೂರು ವೃಷಭಗಳನ್ನೂ ಬ್ರಾಹ್ಮಣರಿಗೆ ವಿನಿಯೋಗಿಸಿದುದಲ್ಲದೆ ಮೂವತ್ತುಕೋಟಿ ಸುವರ್ಣನಾಣ್ಯಗಳನ್ನೂ, ಅಮೂಲ್ಯಗಳಾದ ಬಗೆಬಗೆಯ ವಸ್ತ್ರಾಭರಣಗಳನ್ನೂ ದಾನಮಾಡಿದನು. ಅನಂತರದಲ್ಲಿ ಸೂರ್ಯಕಿರಣದಂತೆ ಪ್ರಕಾಶಮಾನವಾಗಿಯೂ ಮಣಿಖಚಿತವಾಗಿಯೂ ಇದ್ದ ದೇವಯೋಗ್ಯವಾದ ಒಂದು ಸುವರ್ಣಮಾಲಿಕೆಯನ್ನು ತೆಗೆದು ಸುಗ್ರೀವನಿಗೆ ಬಹುಮಾನಿಸಿದನು. ಆಮೇಲೆ ಅಂಗದನನ್ನು ಕರೆದು ವೈಡೂರ್ಯಮಣಿಗಳಿಂದಲೂ, ವಜ್ರಗಳಿಂದಲೂ ಖಚಿತವಾಗಿ, ಕಾಂತಿಯಿಂದ ಬೆಳಗುತ್ತಿದ್ದ ಎರಡು ತೋಳ್ಬಳೆಗಳನ್ನು ಅವನಿಗೆ ಕೊಟ್ಟನು. ಮತ್ತು ಉತ್ತಮರತ್ನ ಖಚಿತವಾಗಿ ಚಂದ್ರಕಿರಣದಂತೆ ಶೋಭಾಯಮಾನವಾದ ಸರ್ವೋತ್ತಮವಾದ ಒಂದು ಮುತ್ತಿನಹಾರವನ್ನು ತೆಗೆದು (ಅದನ್ನು ಸೀತೆಯ ಕೈಯಿಂದಲೇ ಹನುಮಂತನಿಗೆ ಕೊಡಿಸಬೇಕೆಂಬ ಭಾವದಿಂದ) ಅದನ್ನು ಆಕೆಯ ಕಂಠದಲ್ಲಿ ಹಾಕಿದನು. ಸ್ತ್ರೀಯರು ಯಾವ ವಿಧದಲ್ಲಿಯೂ ಸ್ವತಂತ್ರರಲ್ಲವೆಂಬ ಧರ್ಮವನ್ನು ತಿಳಿದ ಸೀತಾದೇವಿಯು, ಇದಕ್ಕೆ ಮೊದಲೇ ತನ್ನ ಪ್ರಿಯನ ಮುಖಭಾವದಿಂದ ಅವನ ಅನುಮತಿಯನ್ನು ಪಡೆದು, ಸ್ವಚ್ಛವಾಗಿಯೂ, ದೇವಯೋಗ್ಯವಾಗಿಯೂ ಇರುವ ಎರಡು ವಸ್ತ್ರಗಳನ್ನೂ, ಅಂದವಾದ ಕೆಲವು ಭೂಷಣಗಳನ್ನೂ ತನ್ನದಾಗಿ ಹನುಮಂತನಿಗೆ ಬಹುಮಾನಿಸಿದುದಲ್ಲದೆ, ರಾಮನು ತನಗೆ ಕೊಟ್ಟ ಮುತ್ತಿನ ಸರವನ್ನು ಕಂಠದಿಂದ ತೆಗೆದು, ಅದನ್ನು ಯಾರಿಗೆ ಬಹುಮಾನಿಸುವುದೆಂದು ಅಲ್ಲಿದ್ದ ಸಮಸ್ತವಾನರರನ್ನೂ ನೋಡುತ್ತ, ಆ ವಿಷಯದಲ್ಲ ತನ್ನ ಪತಿಯ ಮನೋಭಿಪ್ರಾಯವನ್ನೂ ತಿಳಿಯಬೇಕೆಂದು ಬಾರಿಬಾರಿಗೂ ಅವನ ಮುಖವನ್ನೂ ನೋಡುತ್ತಿದ್ದಳು. ರಾಮನು ಇಂಗಿತಜ್ಞನಾದುದರಿಂದ ಸೀತೆಯ ಅಭಿಪ್ರಾಯವನ್ನು ತಿಳಿದುಕೊಂಡು, ಆಕೆಯನ್ನು ಕುರಿತು, "ಎಲೆ ಸುಂದರಾಂಗಿ ! ಯಾವನಲ್ಲಿ ಬಲ, ಪರಾಕ್ರಮ, ಬುದ್ಧಿಗಳೇ ಮೊದಲಾದ ಸಮಸ್ತಕಲ್ಯಾಣಗುಣಗಳೂ ತುಂಬಿರುವುವೋ, ಮುಖ್ಯವಾಗಿ ಯಾವನ

---

[1] ಮೊದಲು ರಾಮವಿರಹದಿಂದ ಕಂದಿದ್ದ ಗಿಡಮರಗಳೆಲ್ಲವೂ ಈಗ ಉಲ್ಲಾಸ ಹೊಂದಿದುವೆಂದು ಗ್ರಾಹ್ಯವು.

ವಿಷಯದಲ್ಲಿ ನೀನು ಸಂಪೂರ್ಣವಾಗಿ ತೃಪ್ತಿಯನ್ನು ಹೊಂದಿರುವೆಯೋ, ಅಂತ ವನಿಗೆ ನೀನು ಈ ಹಾರವನ್ನು ಬಹುಮಾನಿಸು" ಎಂದನು. ರಾಮನು ಈ ಮಾತನ್ನು ಹೇಳಿದೊಡನೆ ನೀಲಲೋಚನೆಯಾದ ಆ ಜಾನಕಿಯು, ಆ ಹಾರ ವನ್ನು ಹನುಮಂತನಿಗೆ ಕೊಟ್ಟಳು. ಹನುಮಂತನು ಚಂದ್ರಕಿರಣದಂತೆ ಶುಭ್ರವಾದ ಆ ಹಾರವನ್ನು ಕಂಠದಲ್ಲಿ ಧರಿಸಿ, ಬಿಳೀಮೇಘಮಾಲಿಕೆಯಿಂದ ಕೂಡಿದ ಪರ್ವತದಂತೆ ಶೋಭಿಸುತ್ತಿದ್ದನು. ಆಮೇಲೆ ಪರಂತಪನಾದ ಶ್ರೀರಾಮನು ಮೈಂದದ್ವಿವಿದರನ್ನೂ, ನೀಲನನ್ನೂ ಕರೆದು, ಅವರವರ ಕೋರಿಕೆಯಂತೆ ಗುಣವಿಶಿಷ್ಟಗಳಾದ ನಾನಾವಸ್ತುಗಳನ್ನು ಕೊಟ್ಟು ಬಹುಮಾನಿಸಿದನು. ಮತ್ತು ಆ ವಾನರ ಸೇನೆಯಲ್ಲಿ ಬಹಳ ವಯೋವೃದ್ಧರಾದವರಿಗೂ, ಇತರ ವಾನ ರೋತ್ತಮರಿಗೂ, ಅವರವರ ಸ್ಥಿತಿಗೆ ತಕ್ಕಂತೆ ವಸ್ತ್ರಭೂಷಣಾದಿಗಳನ್ನು ಕೊಟ್ಟು ಗೌರವಿಸಿದನು. ಹೀಗೆ ರಾಮನು ವಿಭೀಷಣನನ್ನೂ, ಸುಗ್ರೀವನನ್ನೂ ಹನುಮಂತನನ್ನೂ, ಜಾಂಬವಂತನನ್ನೂ, ಇತರ ಸಮಸ್ತ ವಾನರವೀರರನ್ನೂ ಅವರವರ ಅಂತಸ್ತಿಗೆ ತಕ್ಕಂತೆ ಗೌರವಿಸಿ, ಅವರವರಿಗೆ ರತ್ನಾಭರಣಗಳೇ ಮೊದ ಲಾದ ಇಷ್ಟವಸ್ತುಗಳನ್ನೂ ಸಮೃದ್ಧವಾಗಿ ಕೊಟ್ಟು ಗೌರವಿಸಿದಮೇಲೆ. ಅವರೆಲ್ಲರೂ ಮನಸ್ಸಿನಲ್ಲಿ ಪರಮಸಂತೋಷದಿಂದುಕ್ಕುತ್ತ ತಮ್ಮತಮ್ಮ ಸ್ಥಾನ ಗಳಿಗೆ ಹೊರಡಲು ಸಿದ್ಧರಾದರು. ಹೀಗೆ ವಾನರಶ್ರೇಷ್ಠರೆಲ್ಲರೂ ಮಹಾತ್ಮ ನಾದ ರಾಮನ ಪಟ್ಟಾಭಿಷೇಕಮಹೋತ್ಸವವನ್ನು ನೋಡಿ ಆತನ ಅನುಜ್ಞೆ ಯನ್ನು ಪಡೆದು ಕಿಷ್ಕಿಂಧಾಪುರಕ್ಕೆ ಹೊರಟರು. ಹಾಗೆಯೇ ವಾನರರಾಜನಾದ ಸುಗ್ರೀವನೂ ಕೂಡ,ರಾಮಾಭಿಷೇಕೋತ್ಸವ ವೈಭವವನ್ನು ನೋಡಿ ಸಂತೋಷ ಗೊಂಡು, ರಾಮನಿಂದ ತನ್ನ ಸರ್ವಾಭೀಷ್ಟಗಳನ್ನೂ ಪಡೆದು, ಅವನಿಂದ ವಿಶೇಷಸತ್ಕಾರವನ್ನೂ ಹೊಂದಿ, ತನ್ನ ರಾಜಧಾನಿಯಾದ ಕಿಷ್ಕಿಂಧೆಗೆ ಹೋಗಿ ಸೇರಿದನು. ರಾಕ್ಷಸರಾಜನಾದ ವಿಭೀಷಣನೂಕೂಡ ರಾಮನಿಂದ [1]ಇಕ್ಷ್ವಾಕು ಕುಲಧನವಾದ ಶ್ರೀರಂಗವಿಮಾನವನ್ನು ಪಡೆದು ಲಂಕೆಗೆ ಹೋಗಿ ಸೇರಿದನು. ಇತ್ತಲಾಗಿ ರಾಮನು ಪಟ್ಟಾಭಿಷಿಕ್ತನಾದಮೇಲೆ ಸಮಸ್ತ ಶತ್ರುಗಳನ್ನೂ

---

1 ಇಲ್ಲಿ "ಲಬ್ಧ್ವಾ ಕುಲಧನಂ ರಾಜಾ" ಎಂದು ಮೂಲವು. ಕುಲಧನವೆಂದರೆ ಇಕ್ಷ್ವಾಕು ಕುಲಧನವಾದ ಶ್ರೀರಂಗವಿಮಾನವೆಂದು ಗೋವಿಂದರಾಜೀಯ ವ್ಯಾಖ್ಯಾನವು. ಇಲ್ಲಿ ಮಹೇಶ್ವರತೀರ್ಥರು "ಕುಲಧನವೆಂದರೆ ರಾಕ್ಷಸಕುಲಧನವಾದ ಲಂಕಾ ರಾಜ್ಯದಅನುವಾದವೇ ಹೊರತು ರಂಗವಿಮಾನವಲ್ಲವೆಂದು ವ್ಯಾಖ್ಯಾನಮಾಡಿರುವರು.

ವಧಿಸಿ, ಮಹಾಯಶಸ್ಸನ್ನು ಪಡೆದು, ದುಷ್ಟರನ್ನಡಗಿಸಿ, ಲೋಕದಲ್ಲಿ ತಾನೇ ಸರ್ವೋತ್ತಮನೆಂಬ ಕೀರ್ತಿಗೆ ಭಾಗಿಯಾಗಿ, ಸಮಸ್ತಭೂಮಿಯನ್ನೂ ಸಂತೋಷ ದಿಂದ ಪಾಲಿಸುತ್ತಿದ್ದನು. [1]ಧರ್ಮವತ್ಸಲನಾದ ರಾಮನು, ಧರ್ಮಜ್ಞನಾದ ಲಕ್ಷ್ಮಣನನ್ನು ನೋಡಿ "ವತ್ಸ ಲಕ್ಷ್ಮಣಾ! ನೀನು ಸಮಸ್ತ ಧರ್ಮಗಳನ್ನೂ ಬಲ್ಲವನಾದುದರಿಂದ ನಾನು ನಿನಗೆ ಹೇಳಿ ತಿಳಿಸಬೇಕಾದುದೇನೂ ಇಲ್ಲ. ಮನು ಮೊದಲಾದ ನಮ್ಮ ಪುರಾತನರಾಜರು ತಮ್ಮ ಬಲಸಂಪತ್ತಿಯಿಂದ ರಕ್ಷಿಸುತ್ತ ಬಂದ ಈ ಭೂಮಂಡಲವನ್ನು ಧರಿಸುವ ವಿಷಯದಲ್ಲಿ, ಮುಖ್ಯವಾಗಿ ನೀನು ನನಗೆ ಸಹಾಯಕನಾಗಬೇಕು. ನಮ್ಮ ತಾತಂದಿರು. ಮುತ್ತಾತಂದಿರು ಮೊದ ಲಾದ ಹಿರಿಯರು ಪ್ರಯತ್ನಪೂರ್ವಕವಾಗಿ ಪಾಲಿಸುತ್ತ ಬಂದ ಈ ರಾಜ್ಯ ದಲ್ಲಿ ನೀನೂ ನನ್ನ ಹಾಗೆಯೇ ಸ್ವಲ್ಪಭಾರವನ್ನು ವಹಿಸಬೇಕಾದುದರಿಂದ ಯೌವರಾಜ್ಯದಲ್ಲಿದ್ದು ಆ ಭಾರವನ್ನು ವಹಿಸು!" ಎಂದನು. ರಾಮನು ಈ ವಿಚಾರವನ್ನು ಕುರಿತು ಅನುನಯಪೂರ್ವಕವಾಗಿಯೂ, ಆಜ್ಞಾಪೂರ್ವಕ ವಾಗಿಯೂ ಎಷ್ಟೆಷ್ಟೋ ವಿಧದಿಂದ ನಿರ್ಬಂಧಿಸಿದರೂ, ಲಕ್ಷ್ಮಣನು ಆ ಕಾರ್ಯಕ್ಕೆ ಸಮ್ಮತಿಸದಿರಲು, ಕೊನೆಗೆ ಮಹಾತ್ಮನಾದ ರಾಮನು ಭರತನಿಗೆ ಯೌವರಾಜ್ಯಾಭಿಷೇಕವನ್ನು ನಡೆಸಿದನು. ರಾಜಲಲಾಮನಾದ ರಾಮನು ಆಗಾಗ ಅನೇಕಾವೃತ್ತಿ ಪೌಂಡರೀಕಾಶ್ವಮೇಧಗಳನ್ನೂ, ವಾಜಪೇಯಗಳನ್ನೂ, ಇನ್ನೂ ಬೇರೆಬೇರೆ ವಿಧಗಳಾದ ಯಜ್ಞಗಳನ್ನೂ ನಡೆಸುತ್ತ ಹೀಗೆ ಹತ್ತುಸಾವಿರ ವರ್ಷಗಳವರೆಗೆ ಧರ್ಮದಿಂದ ರಾಜ್ಯವನ್ನು ನಡೆಸಿದನು. ಈ ಮಧ್ಯಕಾಲದಲ್ಲಿ ಉತ್ತಮಾಶ್ವಗಳಿಂದಲೂ. ಭೂರಿದಕ್ಷಿಣೆಗಳಿಂದಲೂ ಕೂಡಿದ ಅಶ್ವಮೇಧಯಜ್ಞ ವನ್ನು ನೂರಾವೃತ್ತಿಮಾಡಿ ಮುಗಿಸಿದನು. ಆಜಾನುಬಾಹುವಾಗಿಯೂ ಮಹಾಸ್ಕಂಧನಾಗಿಯೂ ಇರುವ ಪ್ರಶಸ್ತಪರಾಕ್ರಮವುಳ್ಳ ಆ ಶ್ರೀರಾಮನ ಸರ್ವವಿಧದಲ್ಲಿಯೂ ತನಗೆ ಸಹಾಯಕನಾಗಿ ತನ್ನನ್ನು ಹಿಂಬಾಲಿಸುತ್ತಿರುವ

---

1 ಇಲ್ಲಿ ಲಕ್ಷ್ಮಣನಿಗಿಂತಲೂ ಭರತನೇ ಜ್ಯೇಷ್ಠನಾಗುವುದರಿಂದ, ಅವನೇ ಯೌ ರಾಜ್ಯವನ್ನು ವಹಿಸಬೇಕಾಗಿದ್ದರೂ, ಹಿಂದೆ ರಾಮನು ತಂದೆಯು ತನ್ನ ಪಟ್ಟಾಭಿಷೆ ಕಕ್ಕೆ ಯತ್ನಿಸಿದ್ದಾಗ ಲಕ್ಷ್ಮಣನನ್ನು ಕುರಿತು "ಲಕ್ಷ್ಮಣೇಮಾಂ ಮಯಾ ಸಾಧ ಪ್ರಶಾಧಿತ್ವಂವಸುಂಧರಾಂ" ಎಂದು ಹೇಳಿದ್ದುದರಿಂದಲೂ "ರಾಮೋದ್ವಿರ್ನಾಭಿಭ ಷತೇ" ಎಂಬಂತೆ ಆತನು ಎರಡು ಮಾತಾಡುವವನಲ್ಲವಾದುದರಿಂದಲೂ ಹಿಂ ನುಡಿದಂತೆ ಈಗಲೂ ಲಕ್ಷ್ಮಣನನ್ನೇ ಮೊದಲು ಕೇಳಿದನೆಂದು ಗ್ರಾಹ್ಯವು.

ಲಕ್ಷ್ಮಣನೊಡಗೂಡಿ ಭೂಮಿಯನ್ನು ಪಾಲಿಸುತ್ತಿದ್ದನು. ಧರ್ಮಾತ್ಮನಾದ ರಾಮನು ಸರ್ವೋತ್ತಮವಾದ ಆ ಕೋಸಲರಾಜ್ಯವನ್ನು ಕೈಕೊಂಡಮೇಲೆ, ತನ್ನ ಜ್ಞಾತಿಮಿತ್ರಬಂಧುಗಳೊಡಗೂಡಿ,ಬಹುವಿಧಯಜ್ಞಗಳನ್ನು ನಡೆಸಿದನು. ರಾಮನು ರಾಜ್ಯವನ್ನಾಳುತ್ತಿದ್ದಾಗ ಸ್ತ್ರೀಯರು ವೈಧವ್ಯದುಃಖವೆಂಬುದನ್ನೇ ಕಂಡರಿಯರು ! ಆ ದೇಶದ ಜನರು ದುಷ್ಟಮೃಗಗಳಿಂದಾಗಲಿ, ಕೆಟ್ಟ ರೋಗಗಳಿಂದಾಗಲಿ ಭಯವೆಂಬುದನ್ನೇ ಕಾಣರು ! ಲೋಕದಲ್ಲಿ ಕಳ್ಳರ ಹುಟ್ಟೇ ಅಡಗಿಹೋಯಿತು ! ರಾಷ್ಟ್ರದಲ್ಲಿ ಯಾವ ಪ್ರಜೆಗೂ ಯಾವ ವಿಧ ವಾದ ಅನರ್ಥವೂ ಸಂಭವಿಸುತ್ತಿರಲಿಲ್ಲ. ಮುದುಕರು ಮಕ್ಕಳಿಗೆ ಪ್ರೇತಕಾರ್ಯ ವನ್ನು ಮಾಡುವ ಸಂಭವವೇ ಇರಲಿಲ್ಲ. ಸಮಸ್ತವೂ ಸದಾಸಂತೋಷಭರಿತ ವಾಗಿಯೇ ಇರುತ್ತಿತ್ತು. ಸಮಸ್ತಜನವೂ ಧರ್ಮವೊಂದರಲ್ಲಿಯೇ ನಿರತವಾಯಿತು. ವೈರಬುದ್ಧಿಯುಂದ ಶತ್ರುಗಳೆಲ್ಲ ಹಗೆ ತೀರಿಸಿಕೊಳ್ಳಬೇಕೆಂದು ಯತ್ನಿಸುತ್ತಿ ದ್ದರೂ ಕೂಡ ರಾಮನ ಮುಖವನ್ನು ನೋಡಿದೊಡನೆ ಆ ವೈರಬುದ್ಧಿಯನ್ನು ಬಿಟ್ಟು ಸ್ನೇಹಪರರಾಗುತ್ತಿದ್ದರು. ರಾಮನು ರಾಜ್ಯವನ್ನಾಳುವಾಗ ಸಮಸ್ತ ಪ್ರಜೆಗಳೂ ಸಹಸ್ರಸಂವತ್ಸರಗಳವರೆಗೆ ಸಹಸ್ರ ಸಂತಾನಗಳನ್ನು ಪಡೆದು, ರೋಗಬಾಧೆಯಿಲ್ಲದೆ ದುಃಖವೆಂಬುದನ್ನೇ ಕಾಣದೆ ಸುಖದಿಂದಿರುತ್ತಿದ್ದರು ರಾಮನು ರಾಜ್ಯವನ್ನಾಳುವಾಗ ಯಾರನ್ನು ನೋಡಿದರೂ, "ರಾಮನು ! ರಾಮನು!! ರಾಮನು !!!" ಎಂದು ಯಾವಾಗಲೂ ರಾಮನ ಸುದ್ದಿಯನ್ನೇ ಹೇಳಿ ಕೊಂಡಾಡುತ್ತಿದ್ದರು. ಜಗತ್ತೆಲ್ಲವೂ ರಾಮನಾಮಮಯವಾಯಿತು. ರಾಮರಾಜ್ಯದಲ್ಲಿ ಯಾವ ಗಿಡಮರಬಳ್ಳಿಗಳನ್ನು ನೋಡಿದರೂ ಶಾಖೋಪಶಾಖೆ ಗಳಿಂದ ವಿಸ್ತೃತವಾಗಿ ಬೆಳೆದು, ಯಾವಾಗಲೂ ಫಲಪುಷ್ಪಗಳಿಂದ ತುಂಬಿ ದ್ದುವು. ರಾಮರಾಜ್ಯದಲ್ಲಿ ಅತಿವೃಷ್ಟಿ, ಅನಾವೃಷ್ಟಿ, ಅಕಾಲವೃಷ್ಟಿ, ಮುಂ ತಾದ ಅತ್ಯಾಹಿತಗಳೊಂದೂ ಇಲ್ಲದೆ, ಮೇಘವು ಕಾಲಕಾಲಕ್ಕೆ ಮಳೆ ಯನ್ನು ಸುರಿಸುತ್ತಿತ್ತು. ಯಾವಾಗಲೂ ಗಾಳಿಯು ಸುಖಸ್ಪರ್ಶವಾಗಿ ಬೀಸುತ್ತಿತ್ತು. ಬ್ರಹ್ಮಕ್ಷತ್ರಿಯವೈಶ್ಯಶೂದ್ರರೆಂಬ ನಾಲ್ಕುವರ್ಣದವರೂ, ಸ್ವಲ್ಪ ಮಾತ್ರವೂ ಲೋಭವಿಲ್ಲದವರಾಗಿ ತಮತಮಗೆ ವಿಹಿತಗಳಾದ ವೃತ್ತಿಗಳ ಲ್ಲಿಯೇ ತೃಪ್ತಿಹೊಂದಿ ಆಯಾ ಕರ್ಮಗಳನ್ನು ತಪ್ಪದೇ ನಡೆಸುತ್ತಿದ್ದರು. ರಾಮನು ರಾಜ್ಯವನ್ನಾಳುವಾಗ ಪ್ರಜೆಗಳಲ್ಲಿ ಒಬ್ಬೊಬ್ಬರೂ ಧರ್ಮನಿರ ತರು! ಒಬ್ಬೊಬ್ಬರೂ ಧರ್ಮಪರಾಯಣರು! ಒಬ್ಬೊಬ್ಬರೂ ಸತ್ಯವಾದಿಗಳು!

ಒಬ್ಬೊಬ್ಬರೂ ಶುಭಲಕ್ಷಣ ಸಂಪನ್ನರಾಗಿದ್ದರು. ಸಮಸ್ತ ಸೌಭಾಗ್ಯ ಸಂಪನ್ನನಾದ ಶ್ರೀರಾಮನು, ಹೀಗೆ ಸೀತಾಸಮೇತನಾಗಿ ತನ್ನ ತಮ್ಮಂದಿರೊಡಗೂಡಿ [1]ಹನ್ನೊಂದುಸಾವಿರ ವರ್ಷಗಳವರೆಗೆ ಧರ್ಮದಿಂದ ರಾಜ್ಯವನ್ನು ನಡೆಸಿದನು.

ಫಲಶ್ರುತಿ

ಶ್ರೀಮದ್ವಾಲ್ಮೀಕಿ ಮಹರ್ಷಿಯಿಂದ ಮೊದಲು ರಚಿತವಾಗಿ ಆದಿಕಾವ್ಯವೆನಿಸಿಕೊಂಡ ಈ ರಾಮಾಯಣವು, ಪಾರಾಯಣಮಾಡಿದವರಿಗೆ ಬೇಕಾದ ಕುಟುಂಬವೃದ್ಧಿಯನ್ನೂ ಧಾನ್ಯಸಮೃದ್ಧಿಯನ್ನೂ ಹೆಚ್ಚಿಸುವುದು. ವಿಶೇಷ ಕೀರ್ತಿಯನ್ನುಂಟುಮಾಡುವುದು. ರಾಜರಿಗೆ ಜಯವನ್ನು ಕೈಗೂಡಿಸುವುದು. ಇದು ಸಮಸ್ತ ವೇದಾರ್ಥಪ್ರಕಾಶಕವಾದುದು. ಆದುದರಿಂದ ಲೋಕದಲ್ಲಿ ಈ ಶ್ರೀರಾಮಚರಿತ್ರವನ್ನು ಯಾವನು ಓದುವನೋ ಯಾವನು ಕಿವಿಯಿಂದ ಕೇಳುವನೋ ಆ ಮನುಷ್ಯನು ಸಮಸ್ತಪಾಪಗಳಿಂದಲೂ ಬಿಡಲ್ಪಡುವನು. ಈ ರಾಮಾಭಿಷೇಕ ಕಥೆಯನ್ನು ಕಿವಿಯಿಂದ ಕೇಳಿದ ಮಾತ್ರದಲ್ಲಿಯೇ ಪುತ್ರಾರ್ಥಿಗಳು ಸತ್ಪುತ್ರರನ್ನೂ ಧನಾಕಾಂಕ್ಷಿಗಳು ಧನವನ್ನೂ ಪಡೆಯುವರು. ರಾಜನಾದವನು ಈ ರಾಮಾಯಣವನ್ನು ಕೇಳಿದ ಪಕ್ಷದಲ್ಲಿ ತನ್ನ ಸಮಸ್ತ ಶತ್ರುಗಳನ್ನೂ ಜಯಿಸಿ ವಿಶಾಲವಾದ ಭೂಮಿಯನ್ನು ಪಡೆಯುವನು. ಸ್ತ್ರೀಯರು ಈ ಪುಣ್ಯಕಥೆಯನ್ನು ಕೇಳಿದ ಪಕ್ಷದಲ್ಲಿ, ಕೌಸಲ್ಯೆಯು ಶ್ರೀರಾಮನನ್ನೂ, ಸುಮಿತ್ರೆಯು ಲಕ್ಷ್ಮಣನನ್ನೂ, ಕೈಕೇಯಿಯು ಭರತನನ್ನೂ ಪಡೆದಂತೆ ದೀರ್ಘಾಯುಷ್ಮಂತರಾದ ಸತ್ಪುತ್ರರನ್ನು ಪಡೆಯುವರು. ಪ್ರಜೆಗಳಲ್ಲಿ ಯಾರೊಬ್ಬರಿಗೂ ಯಾವ ಕ್ಲೇಶವೂ ಉಂಟಾಗದ ಹಾಗೆ ರಾಜಕಾರ್ಯವನ್ನು ನಡೆಸತಕ್ಕ ಆ ಶ್ರೀರಾಮನ ಚರಿತ್ರರೂಪವಾದ ಈ ಶ್ರೀರಾಮಾಯಣವನ್ನೂ, ಆತನ ವಿಜಯವನ್ನೂ ಯಾವನು ಸಾಕಲ್ಯವಾಗಿ ಓದುವನೋ ಅವನು ದೀರ್ಘಾಯುಷ್ಯವನ್ನು ಹೊಂದುವನು-ಯಾವನು ಕಾಮಕ್ರೋಧಗಳನ್ನು ನಿಗ್ರಹಿಸಿ, ವಾಲ್ಮೀಕಿಮಹರ್ಷಿಯಿಂದ ರಚಿತವಾಗಿ ವೇದೋಪಬೃಂಹಣವೆಂದೆನಿಸಿದ ಈ ಆದಿಕಾವ್ಯವನ್ನು ಶ್ರದ್ಧೆಯಿಂದ ಕೇಳುವನೋ ಅವನು

---

[1] ರಾಮನು ಸೀತಾಸಮೇತನಾಗಿ ಹತ್ತುಸಾವಿರ ವರ್ಷಗಳೂ, ಸೀತಾಪರಿತ್ಯಾಗವಾದ ಮೇಲೆ ಒಂದುಸಾವಿರ ವರ್ಷವೂ ರಾಜ್ಯಭಾರಮಾಡಿದನೆಂಬ ವಿಭಾಗವನ್ನು ಕಾಣಿಸುವುದಕ್ಕಾಗಿ ಇಲ್ಲಿ "ದಶವರ್ಷಸಹಸ್ರಾಣಿ ದಶವರ್ಷಶತಾನಿಚ" ಎಂದು ಮೂಲವು.

ದಾರಿದ್ರ್ಯಾದಿ ಸಮಸ್ತ ಕಷ್ಟಗಳನ್ನೂ ದಾಟಿ ಸುಖವನ್ನು ಹೊಂದುವನು. ದೇಶಾಂತರಗತನಾದವನು ಶೀಘ್ರದಲ್ಲಿಯೇ ತನ್ನ ಬಂಧುಗಳೊಡನೆ ಸೇರುವನು. ರಾಮಾಯಣವನ್ನು ಶ್ರದ್ಧೆಯಿಂದ ಪಠನಮಾಡುವವನು ಈ ಲೋಕದಲ್ಲಿ ರಾಮಾನುಗ್ರಹದಿಂದ ತನ್ನ ಸರ್ವಾಭೀಷ್ಟಗಳನ್ನೂ ಹೊಂದಿ ಸಂತೋಷದಿಂದಿರುವನು. ಈ ಶ್ರೀರಾಮಾಯಣವನ್ನು ಭಕ್ತಿಯಿಂದ ಕೇಳಿದ ಮಾತ್ರಕ್ಕೆ ಸಮಸ್ತದೇವತೆಗಳೂ ಪ್ರೀತರಾಗುವರು. ಮನೆಯಲ್ಲಿ ರಾಮಾಯಣಪಠನ ಮಾಡುವುದರಿಂದ ಆ ಮನೆಯಲ್ಲಿರುವ ವಿಘ್ನಕಾರಿಗಳಾದ ಭೂತಗಳೆಲ್ಲವೂ ಅಡಗಿಹೋಗುವುವು. ರಾಜನಾದವನು ಈ ಪುಣ್ಯಚರಿತ್ರವನ್ನು ಕೇಳಿದ ಪಕ್ಷದಲ್ಲಿ, ವಿಶಾಲವಾದ ಭೂಮಿಯನ್ನು ಸಾಧಿಸುವನು. ದೇಶಭ್ರಷ್ಟನಾದವನು ಕೂಡ ಶೀಘ್ರದಲ್ಲಿಯೇ ಕ್ಷೇಮವನ್ನು ಹೊಂದುವನು. ಕನ್ಯಕೆಯರು ರಜಸ್ವಲೆಯರಾದ ಮೇಲೆ ಈ ಸತ್ಕಥೆಯನ್ನು ಕೇಳಿದ ಪಕ್ಷದಲ್ಲಿ ಲೋಕೋತ್ತರರೆನಿಸಿದ ಸತ್ಪುತ್ರರನ್ನು ಪಡೆಯುವರು. ಪುರಾತನವಾದ ಈ ಇತಿಹಾಸವನ್ನು ಪೂಜಿಸಿ ಪಠಿಸಿದವರಿಗೆ ಅವರವರ ಸಮಸ್ತ ಪಾಪಗಳೂ ನಾಶಹೊಂದುವುವಲ್ಲದೆ, ಅವರಿಗೆ ದೀರ್ಘಾಯುಷ್ಯವುಂಟಾಗುವುದು. ಕ್ಷತ್ರಿಯನಾದವನು ಈ ರಾಮಾಯಣವನ್ನು ಪ್ರತಿದಿನವೂ ಶಿರಃಪ್ರಣಾಮಪೂರ್ವಕವಾಗಿ ಬ್ರಾಹ್ಮಣರಿಂದ ಕೇಳಬೇಕು. ಅಂತವರಿಗೆ ಮಹಾಭಾಗ್ಯವೂ, ಸತ್ಪುತ್ರಸಂತಾನವೂ ಲಭಿಸುವುದರಲ್ಲಿ ಸಂದೇಹವಿಲ್ಲ. ಈ ರಾಮಾಯಣವನ್ನು ಪ್ರತಿದಿನವೂ ಕೇಳಿದವರಾಗಲಿ, ಓದಿದವರಾಗಲಿ, ಅಂತವರಲ್ಲಿ ರಾಮನು ಯಾವಾಗಲೂ ಪ್ರಸನ್ನನಾಗಿರುವನು. ಆ ಶ್ರೀರಾಮನೇ ಸನಾತನನಾಗಿಯೂ ಆದಿದೇವನಾಗಿಯೂ, ಮಹಾಬಾಹುವಾಗಿಯೂ, ಸರ್ವೇಶ್ವರನಾಗಿಯೂ ಇರುವ ಶ್ರೀಮನ್ನಾರಾಯಣನಲ್ಲದೆ ಬೇರೆಯಲ್ಲ. ಅಂತಹ ಮಹಾವಿಷ್ಣುವೇ ಪ್ರಸನ್ನನಾಗುವ ಪಕ್ಷದಲ್ಲಿ ಜನರಿಗೆ ಇಹಲೋಕದಲ್ಲಿ ಆಯುರಾರೋಗ್ಯಾದಿ ಸಮಸ್ತ ಭೋಗಗಳೂ, ಪರಲೋಕದಲ್ಲಿ ದುರ್ಲಭವಾದ ಮುಕ್ತಿಯೂ ಲಭಿಸುವುದರಲ್ಲಿ ಸಂದೇಹವೇನಿದೆ? ಮಹಾರ್ಥವಂತವಾದ ಈ ಶುಭಕಾವ್ಯವನ್ನು ಕೇಳಿದವನು ಕುಟುಂಬವೃದ್ಧಿಯನ್ನೂ ಧನಧಾನ್ಯಸಮೃದ್ಧಿಯನ್ನೂ ಹೊಂದುವುದಲ್ಲದೆ, ಉತ್ತಮ ಸ್ತ್ರೀಯರನ್ನು ಕೈಹಿಡಿದು ಸರ್ವೋತ್ತಮವಾದ ಸುಖವನ್ನೂ ಪಡೆಯುವನು. ಅವನಿಗೆ ಹಿಡಿದ ಕಾರ್ಯಗಳೆಲ್ಲವೂ ಕೈಗೂಡಿಬರುವುವು. ಕೋರಿದ ಕೋರಿಕೆಗಳೆಲ್ಲವೂ ಕೈಸೇರುವುವು. ಈ ಪುಣ್ಯಚರಿತ್ರವು ಆಯುಸ್ಸನ್ನು ಹೆಚ್ಚಿಸುವುದು. ಆರೋಗ್ಯವನ್ನು ನೆಲೆಗೊಳಿಸುವುದು. ಕೀರ್ತಿಯನ್ನು ವೃದ್ಧಿಗೊಳಿಸುವುದು. ಸಹೋದರ ಸ್ನೇಹವನ್ನು

ಹೆಚ್ಚಿಸುವುದು. ಬುದ್ಧಿಬಲವನ್ನೂ, ಸೌಖ್ಯವನ್ನೂ ಕೊಡುವುದು. ತೇಜಸ್ಸನ್ನು ವೃದ್ಧಿಗೊಳಿಸುವುದು. ಪುರೋಭಿವೃದ್ಧಿಯನ್ನಪೇಕ್ಷಿಸುವ ಸತ್ಪುರುಷರೆಲ್ಲರೂ ಇದನ್ನು ನಿಯಮದಿಂದ ಅತ್ಯವಶ್ಯವಾಗಿ ಕೇಳಬೇಕು. ಲೋಕದಲ್ಲಿ ಈ ಪುಣ್ಯಕಥೆಯನ್ನು ಬೇರೆಯವರಿಂದ ಅತ್ಯವಶ್ಯವಾಗಿ ಕೇಳಬೇಕು. ಲೋಕದಲ್ಲಿ ಈ ಪುಣ್ಯಕಥೆಯನ್ನು ಬೇರೆಯವರಿಂದ ಶ್ರವಣಮಾಡಿದವರು ಪಠನ ಮಾಡಿದವರನ್ನು ಧನಧಾನ್ಯವಸ್ತ್ರಾಭರಣಗಳಿಂದಲೂ ಗೃಹದಾನ ಭೂದಾನಗಳಿಂದಲೂ ಸತ್ಕರಿಸಿ ಸಂತೋಷಪಡಿಸಿದ ಪಕ್ಷದಲ್ಲಿ, ತಪ್ಪದೆ ಪೂರ್ಣಫಲವನ್ನು ಹೊಂದುವರು. ಎಲೈ ಮಹಾಜನರೆ! ಇದೇ ಹಿಂದೆ ನಡೆದ ಪುಣ್ಯಚರಿತ್ರವು! ನಿಮಗೆ ಮಂಗಳವಾಗಲಿ! ಇದನ್ನು ಶ್ರದ್ಧೆಯಿಂದ ಪಠಿಸಿರಿ! ಆ ಶ್ರೀ ನಾರಾಯಣನ ಮಹಿಮೆಯು ಲೋಕದಲ್ಲಿ ಹೆಚ್ಚುತ್ತಿರಲಿ! ಈ ಶ್ರೀಮದ್ರಾಮಾಯಣವನ್ನು ಕಿವಿಯಿಂದ ಕೇಳಿದರೂ, ಇದರರ್ಥವನ್ನು ಗ್ರಹಿಸಿದರೂ ಸಮಸ್ತ ದೇವತೆಗಳೂ ಸಂತೋಷಿಸುವರು. ರಾಮಾಯಣಶ್ರವಣದಿಂದ ಪಿತೃದೇವತೆಗಳೂ ಸಂತೋಷ ಹೊಂದುವರು. ಲೋಕದಲ್ಲಿ ವಾಲ್ಮೀಕಿ ಮಹರ್ಷಿಯಿಂದ ರಚಿಸಲ್ಪಟ್ಟ ರಾಮಚರಿತ್ರಪ್ರತಿಪಾದಕವಾದ ಈ ಸಂಹಿತೆಯನ್ನು ಯಾರು ಭಕ್ತಿಯಿಂದ ಬರೆಯುವರೋ ಅಥವಾ ಬೇರೆಯವರಿಂದ ಬರೆಸುವರೋ ಅವರು ದೇಹಾವಸಾನದಲ್ಲಿ ಪುನರಾವೃತ್ತಿರಹಿತವಾದ ಪುಣ್ಯಲೋಕದಲ್ಲಿ ಸೇರಿ ಸುಖಿಸುವರಲ್ಲದೆ, ಈ ಲೋಕದಲ್ಲಿಯೂ ದೀರ್ಘಾಯುಷ್ಮಂತರಾಗಿ, ಈ ದೇಹವಿರುವವರೆಗೂ ಸರ್ವೈಶ್ವರ್ಯಸಂಪನ್ನರಾಗಿ, ಸರ್ವಲೋಕಪೂಜಿತರಾಗಿ, ಸಮಸ್ತ ಭೋಗಗಳನ್ನೂ ಅನುಭವಿಸುವರು.

ಇಲ್ಲಿಗೆ ನೂರಮೂವತ್ತೊಂದನೆಯ ಸರ್ಗವು.

ಶ್ರೀ ಸೀತಾ ಲಕ್ಷ್ಮಣ ಭರತ ಶತ್ರುಘ್ನ ಹನುಮತ್ಸಮೇತ
ಶ್ರೀರಾಮಚಂದ್ರಪರಬ್ರಹ್ಮಣೇ ನಮಃ

ಶ್ಲೋ॥ ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ಚ ಯದ್ಭವೇತ್।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತು ತೇ ॥

ಸ್ವಸ್ತಿಪ್ರಜಾಭ್ಯಃ ಪರಿಪಾಲಯಂತಾಂ ನ್ಯಾಯೇನ ಮಾರ್ಗೇಣ ಮಹೀಂ ಮಹೀಶಾಃ।
ಗೋಬ್ರಾಹ್ಮಣೇಭ್ಯಶ್ಶುಭಮಸ್ತು ನಿತ್ಯಂ ಲೋಕಾಸ್ಸಮಸ್ತಾಸ್ಸುಖಿನೋ ಭವಂತು ॥

ಯುದ್ಧಕಾಂಡವು ಸಮಾಪ್ತವು.

ಶುಭಂ ಭೂಯಾತ್

ಶ್ರೀಃ

ಮ||ವಿ| ಕ್ಷಿತಿ ಸಸ್ಯಾಳಿಸಮೃದ್ಧಮಕ್ಕೆ । ಸುಜನರ್ ಸಮ್ಮೋದದಿಂದಿರ್ಕೆ ! ಭೂ
ಪತಿಗಳ್ ನ್ಯಾಯರತರ್ಕಳಕ್ಕೆ! ಧರೆಯೊಳ್ ಧರ್ಮಂ ನೆಗಳ್ದಿರ್ಕೆ!ಮೇಣ್
ಮತಿಯೊಳ್ ಮಚ್ಚರವಿಲ್ಲದೋದುಗೆ ಬುಧರ್ ಸತ್ಕಾವ್ಯಮಂ ಮತ್ತಮೀ
ಕೃತಿ ಸರ್ವೋನ್ನತಮಕ್ಕೆ ರಾಮಕೃಪೆಯಿಂ ಚಂದ್ರಾರ್ಕರಿಪ್ಪನ್ನೆಗಂ ||

ಶಾ|| ಶ್ರೀಮದ್ದೇವಶಿಖಾಮಣೀ ತಿರುಮಲಾರ್ಯಂ ಮುನ್ನೆಗಳ್ದಂ ಗುಣೋ
ದ್ದಾಮಂ ಕೋಮಲಕಾವ್ಯಬಂಧಚತುರಂ ಯದ್ವದ್ರಿನಾಥಾಶ್ರಯಂ |
ಆ ಮಾಚಾರ್ಯನ ಸೂನು, ತದ್ವರಕೃಪಾ ಸಂಪ್ರಾಪ್ತವಿದ್ಯಂ ಬುಧ
ಸ್ತೋಮಂ ಮೆಚ್ಚುವವೋಲ್ ನೆಗಳ್ದನಳಸಿಂಗ್ರಾಚಾರ್ಯನೀ ಕಾವ್ಯಮಂ||

ಶಾ|| ಕರ್ಣಾಟ ದ್ರವಿಡಾಂಧ್ರ ಮಂಡಲಜೊಳಿಪ್ಪ ಬಾಲಗೋಪಾಲರುಂ
ಪೂರ್ಣಾಮೋದದಿನೋದಿ ರಾಮಕಥೆಯಂ "ಶ್ರೀರಾಮ! ರಾಮೆ"ಂಬಿನಂ
ಕರ್ಣಾನಂದದಮೂದ ತಚ್ಚರಿತಮಂ ಸ್ವಾಪಿಸ್ತಿಕ್ಯದಿಂ ಲೋಕವಿ
ಸ್ತೀರ್ಣಂಗೈದಸಮಾನಕೀರ್ತಿವಡೆದಂ ಶ್ರೀರಂಗನಾಥಾಹ್ವಯಂ||

ಕಂ|| ಆನಂದವರ್ಷಮಿದು | ಮೇ |
ಜ್ಞಾನಂದಕಧಾರಿ ಹರಿಯ ಕಥೆಯಿದು | ಮತ್ತೇ||
ನಾನಂದಾಲಯಮುದ್ರಿತ |
ಮಾನಂದಮನೀವುದರಿದೆ? ಸಕಲಜಗಕ್ಕಂ||

ಮಂಗಳಂ

ಶ್ರೀಃ

ಪರಮವೇದಾಂತಿಗಳಾದ ಪೂರ್ವಾಚಾರ್ಯರು
ಶ್ರೀಮದ್ರಾಮಾಯಣದಿಂದ ಸಂಗ್ರಹಿಸಿ ನಿರ್ಣಯಿಸಿದ ಮುಖ್ಯಾರ್ಥಗಳು
ಹದಿನೆಂಟು ಯಾವುವೆಂದರೆ :—

1. ರಾಮರೂಪದಿಂದವತರಿಸಿದ ಶ್ರೀಮಹಾವಿಷ್ಣುವೇ ಸಕಲ ಜಗತ್ಕಾ ರಣನಾಗಿ ವೇದಾಂತವೇದ್ಯನೆನಿಸಿದ ಪರಬ್ರಹ್ಮವು.

"ಪ್ರಾಯೇಣ ಪೂರ್ವಭಾಗಾರ್ಥೋ ಧರ್ಮಶಾಸ್ತ್ರೇಣ ಕಥ್ಯತೇ । ಇತಿಹಾಸ ಪುರಾಣಾಭ್ಯಾಂ ವೇದಾಂತಾರ್ಥಃ ಪ್ರಕಾಶ್ಯತೇ" ಎಂಬ ವಚನದಂತೆ, ಇತಿ ಹಾಸ ರೂಪವಾದ ಈ ರಾಮಾಯಣ ಗ್ರಂಥವು ವೇದೋಪಬೃಂಹಣವಾದು ದರಿಂದ, "ಯತೋವಾ ಇಮಾನಿ ಭೂತಾನಿ ಜಾಯನ್ತೇ, ಯೇನ ಜಾತಾನಿ ಜೀವನ್ತಿ, ಯತ್ಪ್ರಯನ್ತ್ಯಭಿಸಂವಿಶನ್ತಿ, ತದ್ವಿಜಿಜ್ಞಾಸಸ್ವ, ತದ್ಬ್ರಹ್ಮ" ಎಂಬ ಶ್ರುತಿವಚನದಿಂದ ಜಿಜ್ಞಾಸ್ಯವಾದ ಪರಬ್ರಹ್ಮವು ಶ್ರೀಮನ್ನಾರಾಯಣನೇ ಹೊರತು ಇತರ ದೇವತೆಗಳಲ್ಲವೆಂಬುದು ಈ ಗ್ರಂಥದ ಮುಖ್ಯತಾತ್ಪರ್ಯವು. ಈ ತಾತ್ಪರ್ಯವನ್ನು ನಿರ್ಣಯಿಸುವುದರಲ್ಲಿ "ಉಪಕ್ರಮೋಪಸಂಹಾರಾವಭ್ಯಾ ಸೋಽಪೂರ್ವತಾ ಫಲಂ। ಅರ್ಥವಾದೋಪಪತ್ತೀಚ ಲಿಙ್ಗಂ ತಾತ್ಪರ್ಯನಿರ್ಣಯೇ" ಎಂಬಂತೆ, ಉಪಕ್ರಮ, ಉಪಸಂಹಾರ, ಅಭ್ಯಾಸ, ಅಪೂರ್ವತೆ, ಫಲ ಉಪಪತ್ತಿ ವಿಶಿಷ್ಟವಾದ ಅರ್ಥವಾದವು ಎಂಬುದಾಗಿ ಆರು ಬಗೆಯ ಲಿಙ್ಗ ಗಳುಂಟು. ಆ ಆರು ವಿಧಗಳಿಂದಲೂ ಈ ತಾತ್ಪರ್ಯವು ನಿರ್ಣಯಿಸಲ್ಪಡು ವುದು. ಉಪಕ್ರಮದಲ್ಲಿ "ಕೋಽನ್ವಸ್ಮಿನ್ ಸಾಂಪ್ರತಂ ಲೋಕೇ" ಇತ್ಯಾದಿ ವಾಕ್ಯಗಳಿಂದ ವಾಲ್ಮೀಕಿಯು "ವೇದಾನ್ತೋದಿತಸಕಲಕಲ್ಯಾಣಗುಣವಿಶಿಷ್ಟ ನಾದ ಪರಮಾತ್ಮ"ನಾರೆಂದು ಕೇಳಿದುದಕ್ಕೆ ಪ್ರತ್ಯುತ್ತರವಾಗಿ ನಾರದನು "ಇಕ್ಷ್ವಾಕುವಂಶಪ್ರಭವೋ ರಾಮಃ" ಇತ್ಯಾದಿವಾಕ್ಯಗಳಿಂದ, ರಾಮರೂಪದಿಂದವ ತರಿಸಿದ ಶ್ರೀಮಹಾವಿಷ್ಣುವೇ ವೇದಾನ್ತೋಕ್ತಸಕಲಗುಣವಿಶಿಷ್ಟನಾದ ಪರಮ ಪುರುಷನೆಂದು ಸೂಚಿಸಿರುವನು. ಉಪಸಂಹಾರದಲ್ಲಿಯೂ ಕೂಡ ಚತುರ್ಮುಖ ಬ್ರಹ್ಮನು "ತವಾಹಂ ಪೂರ್ವಕೇ ಭಾವೇ । ಪುತ್ರಃ ಪರಪುರಂಜಯ । ಸಂಕ್ಷಿಪ್ಯಚ ಪುರಾ ಲೋಕಾನ್ಮಾಯಯಾ ಸ್ವಯಮೇವ ಹಿ । ಮಹಾರ್ಣವೇ ಶಯಾನೋಽಪ್ಸು ಮಾಂ ತ್ವಂ ಪೂರ್ವಮಜೀಜನಃ । ಪದ್ಮೇ ದಿವ್ಯೇಽರ್ಕ ಸಂಕಾಶೇ ನಾಭ್ಯಾಮುತ್ಪಾದ್ಯಮಾಮಪಿ । ಪ್ರಾಜಾಪತ್ಯಂ ತ್ವಯಾ ಕರ್ಮ ಸರ್ವಂ ಮಯಿ ನಿವೇಶಿತಂ" ಎಂದು ಜಗತ್ಸೃಷ್ಟಿಕರ್ತನಾದ ತನಗೂ

ಆತನೇ ಜನಕನೆಂದು ಹೇಳಿರುವುದರಿಂದ, ವಿಷ್ಣುವೇ ಜಗತ್ಕಾರಣನಾದ ಬ್ರಹ್ಮನೆಂದು ನಿರ್ಣಯಿಸಲ್ಪಡುವುದು. ಅಭ್ಯಾಸದಿಂದಲೂ ಈ ಅರ್ಥಗಳೇ ನಿರ್ಧರಿಸಲ್ಪಡುವುವು. ಬಾಲಕಾಂಡದಲ್ಲಿ "ಏತಸ್ಮಿನ್ನಂತರೇ ವಿಷ್ಣುರುಪ ಯಾತೋ ಮಹಾದ್ಯುತಿಃ । ಶಂಖಚಕ್ರಗದಾಪಾಣಿಃ ಪೀತವಾಸಾಜಗತ್ಪತಿಃ" ಎಂಬುದಾಗಿ ಸರ್ವಜಗನ್ನಿಯಾಮಕತ್ವವೂ "ತ್ವಂಗತಿಃ ಪರಮಾ ದೇವ ಸರ್ವೇಷಾಂ" ಎಂಬುದರಿಂದ ಸರ್ವಶರಣ್ಯತ್ವವೂ "ತತೋ ದೇವರ್ಷಿಗಂಧರ್ವಾಸ್ಸರುದ್ರಾಸ್ಸಾಪ್ಸ ರೋಗಣಾಃ । ಸ್ತುತಿಭಿರ್ದಿವ್ಯರೂಪಾಭಿಸ್ತುಷ್ಟುವುರ್ಮಧುಸೂದನಮ್" ಎಂಬು ದರಿಂದ ಸರ್ವಸ್ತುತ್ಯತ್ವವೂ ಹೇಳಲ್ಪಟ್ಟಿರುವುದು. ಆಮೇಲೆ ವಿಶ್ವಾಮಿತ್ರನು "ವೇದಾ ಹಮೇತಂ ಪುರುಷಂ ಮಹಾನ್ತಂ" ಇತ್ಯಾದಿ ಶ್ರುತ್ಯುಕ್ತರೀತಿಯಲ್ಲಿ 'ಅಹಂ ವೇದ್ಮಿ ಮಹಾತ್ಮಾನಂ' ಎಂದು ಹೇಳಿ ಆತನ ಮಹಾಪುರುಷತ್ವವನ್ನು ಸ್ಥಾಪಿಸಿರುವನು. ಅದರಿಂದಾಚೆಗೆ ಸೀತಾವಿವಾಹಘಟ್ಟದಲ್ಲಿ ವಸಿಷ್ಠನು 'ಅವ್ಯಕ್ತ ಪ್ರಭವೋ ಬ್ರಹ್ಮಾ ಶಾಶ್ವತೋ ನಿತ್ಯ ಅವ್ಯಯಃ" ಇತ್ಯಾದಿವಾಕ್ಯ ಗಳಿಂದ ಬ್ರಹ್ಮಾದಿಗಳಿಗೂ ವಿಷ್ಣುವೇ ಮೂಲಕಾರಣನೆಂಬುದನ್ನು ಪ್ರಕ ಟಿಸಿರುವನು. ಅಯೋಧ್ಯಾಕಾಂಡದಲ್ಲಿ "ಅರ್ಥಿತೋ ಮಾನುಷೇ ಲೋಕೇ ಜಜ್ಞೇ ವಿಷ್ಣುಸ್ಸನಾತನಃ" ಎಂಬುದಾಗಿ ಆತನ ಸನಾತನತ್ವವೂ "ಆಕಾಶ ಪ್ರಭವೋ ಬ್ರಹ್ಮಾ" ಎಂಬಲ್ಲಿ ಆಕಾಶಶಬ್ದದಿಂದ ನಿರ್ದೇಶಿಸುವುದರಿಂದ ಆತನ ಸ್ವಯಂ ಪ್ರಕಾಶತ್ವವೂ ಸರ್ವವ್ಯಾಪಕತ್ವವೂ ನಿರೂಪಿಸಲ್ಪಟ್ಟಿರುವುವು. ಅದರಿಂ ದಾಚೆಗೆ ಅರಣ್ಯಕಾಂಡದಲ್ಲಿ ಮಾರೀಚನು 'ಅಪ್ರಮೇಯಂಹಿ ತತ್ತೇಜೋ ಯಸ್ಯ ಸಾ ಜನಕಾತ್ಮಜಾ' ಎಂದು ಹೇಳಿದ ವಾಕ್ಯದಿಂದ, ಅವನು ಅಪರಿ ಚ್ಛೇದ್ಯಮಹಿಮನೆಂಬುದು ವ್ಯಕ್ತವಾಗುವುದು. ಕಿಷ್ಕಿಂಧಾಕಾಂಡದಲ್ಲಿ ತಾರೆಯು ಮಾಡಿದ ಸ್ತೋತ್ರದಿಂದ, ಆತನಲ್ಲಿ ಜ್ಞಾನಾನಂದಾದಿ ಸಮಸ್ತಕಲ್ಯಾಣ ಗುಣಾಕರತ್ವವು ಹೇಳಲ್ಪಟ್ಟಿತು, ಸುಂದರಕಾಂಡದಲ್ಲಿ "ಬ್ರಹ್ಮಾಸ್ವಯಂಭೂಶ್ಚ ತುರಾನನೋವಾರುದ್ರಸ್ತ್ರಿಣೇತ್ರ ಸ್ತ್ರಿಪುರಾನ್ತಕೋವಾ ! ಇಂದ್ರೋಮಹೇಂದ್ರ ಸ್ಸುರನಾಯಕೋವಾ ತ್ರಾತುಂ ನ ಶಕ್ತಾ ಯುಧಿರಾಮವಧ್ಯಂ' ಎಂಬುದರಿಂದ ಸರ್ವಸಂಹಾರಕತ್ವವು ತೋರಿಸಲ್ಪಟ್ಟಿತು. 'ಕಿಂ ವೈಷ್ಣವಂ ವಾ ಕಪಿರೂಪ ಮೇತ್ಯ ರಕ್ಷೋ ವಿನಾಶಾಯ ಪರಂ ಸುತೇಜಃ! ಅನನ್ತಮವ್ಯಕ್ತಮಚಿನ್ತ್ಯ ಮೇಕಂ ಸ್ವಮಾಯಯಾ ಸಾಂಪ್ರತಮಾಗತಂವಾ" ಎಂಬಲ್ಲಿ ಅವಧಾರಣಾ ರ್ಥಕವಾದ ವಾಕಾರದಿಂದ ಅನಂತರೂಪತ್ವವು ಹೇಳಲ್ಪಟ್ಟಿತು. ಆದರೆ ಯುದ್ಧ

ಕಾಂಡದಲ್ಲಿ "ಹಿರಣ್ಯಗರ್ಭಸ್ಸಮವರ್ತತಾಗ್ರೇ। ಯದಾ ತವಸ್ತನ್ನದಿವಾ ನರಾತ್ರಿರ್ನ ಸನ್ನಚಾಸಚ್ಛಿವ ಏವ ಕೇವಲಃ । ಇಂದ್ರೋ ಮಾಯಾಭಿಃ ಪುರುರೂಪ ಈಯತೇ" ಇತ್ಯಾದಿ ಶ್ರುತಿವಚನಗಳಿಂದ ಹಿರಣ್ಯಗರ್ಭಾದಿ ದೇವತೆಗಳಿಗೂ ಕೂಡ ಜಗತ್ಕಾರಣತ್ವವು ಸಿದ್ಧವಾಗುವಾಗ, ವಿಷ್ಣುವಿಗೆ ಮಾತ್ರವೇ ಜಗತ್ಕಾರಣತ್ವವನ್ನು ಹೇಳುವುದು ಹೇಗೆ? ಎಂಬ ಶಂಕೆಯನ್ನು ನಿವಾರಿಸುವುದಕ್ಕಾಗಿ ಸತ್, ಬ್ರಹ್ಮ, ಆತ್ಮ, ಶಬ್ದಗಳಂತೆ ಹಿರಣ್ಯಗರ್ಭಶಿವೇನ್ದ್ರಾದಿ ಶಬ್ದಗಳೂ ವಿಷ್ಣುಪರಗಳೇ ಆಗುವುವೆಂಬಭಿಪ್ರಾಯದಿಂದಲೇ ಮುಂದೋದರಿಯು, "ವ್ಯಕ್ತಮೇಷಮಹಾಯೋಗೀ ಪರಮಾತ್ಮಾ ಸನಾತನಃ। ಅನಾದಿಮಧ್ಯನಿಧನೋ ಮಹತಃಪರಮೋಮಹಾನ್ । ತಮಸಃ ಪರಮೋ ಧಾತಾ ಶಙ್ಖಚಕ್ರಗದಾಧರಃ ! ಶ್ರೀವತ್ಸವಕ್ಷಾ ನಿತ್ಯಶ್ರೀರಜಯ್ಯಶ್ಶಾಶ್ವತೋಧ್ರುವಃ" ಎಂದು ಹೇಳಿರುವಳು. ಇದರಿಂದ ವಿಷ್ಣುವೇ ಆ ಪರಮಾತ್ಮನೆಂದು ನಿರ್ಧರಿಸಲ್ಪಡುವುದು. ಅಲ್ಲಿಂದ ಮುಂದೆ "ಭವಾನ್ನಾರಾಯಣೋದೇವಃ' ಇತ್ಯಾದಿ ವಾಕ್ಯದಿಂದ ನಾರಾಯಣಶಬ್ದ ವಾಚ್ಯತ್ವವು ಹೇಳಲ್ಪಡುವುದು. ಹೀಗೆ ಅಲ್ಲಲ್ಲಿ ವಿಷ್ಣುಪಾರಮ್ಯವನ್ನೇ ದೃಢೀಕರಿಸಿರುವುದರಿಂದ ಅಭ್ಯಾಸದಿಂದಲೂ ರಾಮರೂಪದಿಂದವತರಿಸಿದ ಆ ಮಹಾವಿಷ್ಣುವೇ ಪರಾತ್ಪರನೆಂದೂ ನಿರ್ಧರಿಸಲ್ಪಟ್ಟಿರುವುದು. ಅಪೂರ್ವತ್ವವೆಂದರೆ ಪ್ರಮಾಣಾಂತರಗಳಿಂದ ಲಭ್ಯವಾಗದಿರುವುದು. ಶ್ರುತಿವಚನಗಳಿಂದ ಹೊರತು ಇತರ ಪ್ರಮಾಣಗಳಿಂದ ತಿಳಿಯಲಸಾಧ್ಯವಾದ ಪರತ್ವವು ಇದರಿಂದ ನಿರ್ಧರಿಸಲ್ಪಡುವುದು. ಫಲವೆಂದರೆ ಭಗವಂತನೊಡನೆ ಸಾಲೋಕ್ಯಾದಿರೂಪವಾದ ಮೋಕ್ಷಪ್ರಾಪ್ತಿಯು. ಈ ವಿಷಯವು ಗ್ರಂಥಾಂತದಲ್ಲಿ ವ್ಯಕ್ತವಾಗುವುದು, ಅರ್ಥವಾದೋಪಪತ್ತಿಗಳೆಂದರೆ ಉಪಪತ್ತಿ ವಿಶಿಷ್ಟವಾದ ಅರ್ಥವಾದವು. ಬಾಲಕಾಂಡದಲ್ಲಿ "ಇಮೇ ದ್ವೇ ಧನುಷಿ ಶ್ರೇಷ್ಠೇ" ಈ ಧನುಸ್ಸುಗಳೆರಡೂ ಸರ್ವೋತ್ತಮಗಳೆಂಬ ಅರ್ಥವಾದವನ್ನು ಹೇಳಿ, ರಾಮನಿಂದ ಅದು ಭಗ್ನವಾದುದನ್ನು ನೋಡಿ ದೇವರ್ಷಿಗಣಗಳೆಲ್ಲವೂ "ಅಧಿಕಂ ಮೇನಿರೇ ವಿಷ್ಣುಂ" ಎಂಬುದಾಗಿ ನ್ಯೂನಾತಿರೇಕಗಳನ್ನು ವಿಚಾರಿಸಿ, ವಿಷ್ಣುವೇ ಅಧಿಕನೆಂದು ನಿರ್ಣಯಿಸಿರುವುದರಿಂದ ಉಪಪತ್ತಿಯು ಹೇಳಲ್ಪಟ್ಟಿತು. ಹೀಗೆ ಉಪಕ್ರಮವೇ ಮೊದಲಾದ ಆರುಬಗೆಯ ಲಿಂಗಗಳಿಂದಲೂ ವೇದಾಂತವೇದ್ಯವಾದ ಪರತತ್ತ್ವವು ಶ್ರೀವಿಷ್ಣುವೇ ಎಂಬುದು ಈ ಶ್ರೀರಾಮಾಯಣದಿಂದ ವಿಸ್ತರಿಸಿ ಪ್ರತಿಪಾದಿಸಲ್ಪಡುವುದು.

2. ಇದರಿಂದ ಪರತತ್ತ್ವವನ್ನು ಹೊಂದುವುದಕ್ಕೆ "ಯೋಬ್ರಹ್ಮಾಣಂ ವಿದಧಾತಿ ಪೂರ್ವಂ ಯೋವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ । ತಗ್ಂಹ ದೇವಮಾತ್ಮಬುದ್ಧಿಪ್ರಸಾದಂ ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ"ಎಂಬ ಶ್ರುತಿವಾಕ್ಯದಿಂದುಪಬೃಂಹಿತವಾದ ಶರಣಾಗತಿಯೇ ಮುಖ್ಯೋಪಾಯವು.

ಇದಕ್ಕಾಗಿ ಉಪಕ್ರಮದಿಂದ ಹಿಡಿದು ಉಪಸಂಹಾರದವರೆಗೆ ಅನೇಕಾಧಿಕಾರಿಗಳಿಗೆ ಲಭಿಸಿದ ಆಯಾ ಫಲವಿಶೇಷಗಳೆಲ್ಲವೂ ಇದರಲ್ಲಿ ಪ್ರತಿಪಾದಿಸಲ್ಪಟ್ಟಿರುವುವು. ಉಪಕ್ರಮದಲ್ಲಿ ದೇವತೆಗಳು ರಾವಣವಧರೂಪವಾದ ಫಲವನ್ನು ಕೋರಿ ಭಗವಂತನಲ್ಲಿ ಮಾಡಿದ ಶರಣಾಗತಿಯು ಹೇಳಲ್ಪಟ್ಟಿರುವುದು. ಅದರಿಂದಾಚೆಗೆ ತ್ರಿಶಂಕು ಶುನಶ್ಶೇಫಾದಿಗಳ ವೃತ್ತಾಂತದಲ್ಲಿ ವಿಶ್ವಾಮಿತ್ರಾದಿಗಳ ವ್ಯಾಪಾರದಿಂದ ಶರಣಾಗತಲಕ್ಷಣವೇ ಪರಮಧರ್ಮವೆಂದೂ, ಎಂತವರಿಗಾದರೂ ಶರಣಾಗತಿಯಿಂದ ತಪ್ಪದೆ ಫಲವು ಸಿದ್ಧಿಸುವುದೆಂದೂ ನಿರೂಪಿಸಲ್ಪಡುವುದು. ಆಮೇಲೆ ದಂಡಕಾರಣ್ಯದಲ್ಲಿ ಋಷಿಗಳು "ತೇ ವಯಂ ಭವತಾ ರಕ್ಷ್ಯಾಃ" ಎಂದು ಹೇಳಿ ಮಾಡಿದ ಶರಣಾಗತಿಗೆ ಅಲ್ಲಿನ ರಾಕ್ಷಸವಧರೂಪವಾದ ಫಲವು ಹೇಳಲ್ಪಟ್ಟಿತು. ಆಮೇಲೆ ಕಾಕಾಸುರ ವೃತ್ತಾಂತದಲ್ಲಿ, ಆತನು ವಧಾರ್ಹನಾಗಿದ್ದರೂ ಅವನು ತನ್ನ ಮುಂದೆ ಆಕಸ್ಮಾತ್ತಾಗಿ ಕೆಳಗೆ ಬಿದ್ದುದನ್ನೇ, ರಾಮನು ಅವನು ಮಾಡಿದ ಶರಣಾಗತಿಯನ್ನಾಗಿ ಭಾವಿಸಿ, ಕೃಪಾಪಾರವಶ್ಯದಿಂದ ಅವನನ್ನು ರಕ್ಷಿಸಿದುದಾಗಿ ಹೇಳಲ್ಪಟ್ಟಿತು. ಆ ಮೇಲೆ ಸುಗ್ರೀವವೃತ್ತಾಂತದಲ್ಲಿ "ಕೃತಾಪರಾಧಸ್ಯಹಿತೇ. ನಾನ್ಯತ್ಪಶ್ಯಾಮ್ಯಹಂಕ್ಷಮಂ।ಅನ್ತರೇಣಾಂಜಲಿಂ ಬಧ್ವಾ" ಎಂಬುದಾಗಿ ಶರಣಾಗತಿಯು ಅಂಜಲಿಬಂಧರೂಪವಾಗಿ ಹೇಳಲ್ಪಟ್ಟಿರುವುದು. ಆಮೇಲೆ ಸೀತೆಯು ಲಂಕೆಯಲ್ಲಿ ರಾವಣನನ್ನು ಕುರಿತು ಹೇಳಿದ "ಮಿತ್ರಮೌಪಯಿಕಂ ಕರ್ತುಂ" ಇತ್ಯಾದಿ ವಾಕ್ಯದಿಂದ ಆನುಕೂಲ್ಯವೇ ಶರಣಾಗತಿಯೆಂದು ನಿರೂಪಿಸಲ್ಪಟ್ಟಿತು. ಅದರಿಂದಾಚೆಗೆ ವಿಭೀಷಣವೃತ್ತಾಂತದಲ್ಲಿ "ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ ರಾಘವಂ ಶರಣಂ ಗತಃ" ಎಂಬ ವಾಕ್ಯದಿಂದ ವಿರೋಧಿಪರಿತ್ಯಾಗರೂಪವಾದ ಶರಣಾಗತಿಯು ಹೇಳಲ್ಪಟ್ಟಿತು. ಸೀತೆಗೆ ಕಾವಲಿದ್ದ ರಾಕ್ಷಸ ಸ್ತ್ರೀಯರನ್ನು ಕುರಿತು ತ್ರಿಜಟೆಯು "ಅಭಿಯಾಚಾಮ ವೈದೇಹೀಮ್" ಎಂದು ಹೇಳಿದ ಮಾತ್ರಕ್ಕೆ ಸೀತೆಯು ಹನುಮಂತನಿಂದ ಆ ರಾಕ್ಷಸಿಯರಿಗುಂಟಾದ ಭಯವನ್ನು ತಪ್ಪಿಸಿದುದರಿಂದ, ಬೇರೊಬ್ಬರ

ಗಾಗಿ ಬೇರೊಬ್ಬರು ಮಾಡಿದ ಶರಣಾಗತಿಯು ಕೂಡ ಫಲಪ್ರದವೆಂದು ಸೂಚಿತವಾಗುವುದು. ವಿಭೀಷಣ ಶರಣಾಗತಿಯಿಂದ ಅವನ ಮಂತ್ರಿಗಳಿಗೂ ರಕ್ಷಣವುಂಟಾದುದರಿಂದ ಶರಣಾಗತ ಸಂಬಂಧಿಗಳೂ ಕೂಡ ಭಗವತ್ಕಟಾಕ್ಷಕ್ಕೆ ಪಾತ್ರರಾಗುವರೆಂಬಂಶವು ವ್ಯಕ್ತವಾಗುವುದು. ಹೀಗೆ ಈ ಗ್ರಂಥದಲ್ಲಿ ಉಪಕ್ರಮದಿಂದ ಉಪಸಂಹಾರದವರೆಗೂ ಶರಣಾಗತಿಸ್ವರೂಪವೂ, ಆ ಶರಣಾಗತಿಯೇ ಸರ್ವಫಲಪ್ರದವೆಂದೂ, ಅದೇ ಮುಕ್ತಿಗೂ ಹೇತುವೆಂದೂ ತಿಳಿಸಲ್ಪಟ್ಟಿದೆ.

3. ಈ ಉಪಾಯಕ್ಕೆ ಭಗವತ್ಪ್ರಾಪ್ತಿರೂಪವಾದ ಕೈಂಕರ್ಯವೇ ಮುಖ್ಯ ಪ್ರಾಪ್ಯವು. ಹೇಗೆಂದರೆ :—ಉಪಕ್ರಮದಲ್ಲಿ ದೇವತೆಗಳು ಶರಣಾಗತಿಯನ್ನು ಮಾಡಿದ ಮೇಲೆ ಅವರೆಲ್ಲರೂ ಅಪ್ಸರಸ್ಸು ಮುಂತಾದವರಲ್ಲಿ ವಾನರ ಭಲ್ಲೂಕಾದಿ ರೂಪಗಳಿಂದವತರಿಸಿ, ರಾಮನನ್ನು ಸೇವಿಸುತ್ತಿದ್ದುದಾಗಿ ಪ್ರತಿಪಾದಿಸಿರುವುದರಿಂದ, ಅವರ ಅವತಾರಕ್ಕೆ ಭಗವತ್ಕೈಂಕರ್ಯವೇ ಪ್ರಧಾನ ಫಲವೆಂದೂ, ರಾವಣವಧವು ಆನುಷಂಗಿಕ ಫಲವೆಂದೂ ವ್ಯಕ್ತವಾಗುವುದು. ವಿಭೀಷಣಾದಿಗಳ ಪ್ರಪತ್ತಿಗೂ ರಾಮಕೈಂಕರ್ಯವೇ ಮುಖ್ಯಫಲವಾಗಿರುವುದು. ಇದರಿಂದ ಸರ್ವಸಮರ್ಥನೂ, ಕಾರುಣಿಕನೂ ಆದ ಭಗವಂತನಲ್ಲಿ ಮಾಡುವ ಪ್ರಪತ್ತಿಯು ಸಕಲ ಫಲಸಾಧನವಾಗಿದ್ದರೂ, ಅಧಿಕಾರಿ ವಿಶೇಷದಿಂದ ಅನುಷ್ಠಿಸಲ್ಪಡುವುದಾದರೆ ಅದಕ್ಕೆ ಭಗವತ್ಪ್ರಾಪ್ತಿ ಪೂರ್ವಕವಾದ ತತ್ಕೈಂಕರ್ಯರೂಪವಾದ ಮೋಕ್ಷವೇ ಮುಖ್ಯಫಲವೆಂದೂ, ಫಲಾಂತರಗಳೆಲ್ಲವೂ ಆನುಷಂಗಿಕಗಳೆಂದೂ ವ್ಯಕ್ತವಾಗುವುದು.

4. ಈ ಪ್ರಪತ್ತಿಯು ಪುರುಷಕಾರವಿಲ್ಲದೆ ಫಲಪ್ರದವಾಗದು.

ಇದಕ್ಕಾಗಿಯೇ ಮೊದಲು "ಸೀತಾಯಾಶ್ಚರಿತಂ ಮಹತ್" ಎಂಬುದಾಗಿ ಪುರುಷಕಾರಭೂತೆಯಾದ ಸೀತಾದೇವಿ ಚರಿತ್ರವೇ ಪ್ರಧಾನವೆಂದುಪದೇಶಿಸಲ್ಪಟ್ಟಿತು. ಈಕೆಯ ಸಾನ್ನಿಧ್ಯದಿಂದಲೇ ಕಾಕಾಸುರನ ಪ್ರಾಣವು ರಕ್ಷಿತವಾಯಿತು. ಈಕೆಯಿಲ್ಲದುದರಿಂದ ರಾವಣನು ಪ್ರಾಣವನ್ನೊಪ್ಪಿಸಬೇಕಾಯಿತು. ಮತ್ತು ಈ ದೇವಿಗೆ ಮೂರಾವೃತ್ತಿ ಸಂಭವಿಸಿದ ಪತಿವಿಶ್ಲೇಷದಿಂದ ಕ್ರಮವಾಗಿ, ಕೃಪೆ, ಪಾರತಂತ್ರ್ಯ, ಅನನ್ಯಾರ್ಹಶೇಷತ್ವಗಳೆಂಬ ಮೂರು ಪುರುಷಕಾರ ಧರ್ಮಗಳೂ ಪ್ರತಿಪಾದಿಸಲ್ಪಡುವುವು. ವಿಭೀಷಣನು ಮೊದಲು "ನಿವೇದಯತ ಮಾಂ ಕ್ಷಿಪ್ರಂ" ಎಂಬುದಾಗಿ ತನ್ನನ್ನು

ರಾಮನಿಗೆ ತಿಳಿಸುವಂತೆ ವಾನರರನ್ನು ಪ್ರಾರ್ಥಿಸಿ, ಅವರ ಪುರುಷಕಾರ ಮುಖದಿಂದಲೇ ರಾಮನಲ್ಲಿ ಸೇರಿದನು. ರಾಮನೂ ಕೂಡ "ಆನಯೈನಂ ಹರಿಶ್ರೇಷ್ಠ" ಎಂದು ಘಟಕಮೂಲವಾಗಿಯೇ ವಿಭೀಷಣನನ್ನು ವಿಷಯೀ ಕರಿಸಿದನು. ಹಾಗೆಯೇ ಸುಗ್ರೀವನೂ ರಾಮಭಕ್ತನಾದ ಹನುಮಂತನ ಮೂಲಕವಾಗಿಯೇ ರಾಮನಲ್ಲಿ ಶರಣಾಗತಿಯನ್ನು ಮಾಡಿರುವನು.

5. ಇಂತಹ ಉಪಾಯಕ್ಕೆ ಅಧಿಕಾರಿಯಾಗುವವನಿಗೆ ಸ್ವರೂಪವು ಶೇಷತ್ವ (ದಾಸ್ಯ) ವೆಂಬುದು.

ಲಕ್ಷ್ಮಣನ ನಡತೆಯಿಂದ ಇದು ವ್ಯಕ್ತವಾಗುವುದು.

6. ಭಗವತ್ಪಾರತಂತ್ರ್ಯವು.

ಇದು "ರಾಜ್ಯಂಚಾಹಂಚ ರಾಮಸ್ಯ" ಎಂದು ಹೇಳಿದ ಭರತನ ನಡತೆಯಿಂದ ಸ್ಪಷ್ಟವಾಗುವುದು.

7. ಭಾಗವತ ಪಾರತಂತ್ರ್ಯವು.

"ಗಚ್ಛತಾ ಮಾತುಲಕುಲಂ ಭರತೇನ ತದಾನಘಃ। ಶತ್ರುಘ್ನೋ ನಿತ್ಯ ಶತ್ರುಘ್ನೋ ನೀತಃ ಪ್ರೀತಿಪುರಸ್ಕೃತಃ" ಇತ್ಯಾದಿ ವಾಕ್ಯಗಳಲ್ಲಿ ಭರತಾನುವರ್ತಿಯಾದ ಶತ್ರುಘ್ನನ ಗುಣೋದ್ಘಾಟನದಿಂದ ಈ ಭಾಗವತ ಪಾರತಂತ್ರ್ಯವು ವ್ಯಕ್ತವಾಗುವುದು.

8. ಈ ಅಧಿಕಾರಿಯು ತಿಳಿದುಕೊಳ್ಳಬೇಕಾದ ಅರ್ಥಪಂಚಕವು.

ಅರ್ಥಪಂಚಕವೆಂದರೆ "ಪ್ರಾಪ್ಯಸ್ಯ ಬ್ರಹ್ಮಣೋರೂಪಂ ಪ್ರಾಪ್ತುಶ್ಚ ಪ್ರತ್ಯಗಾತ್ಮನಃ। ಪ್ರಾಪ್ತ್ಯುಪಾಯಂ ಫಲಂ ಪ್ರಾಪ್ತೇ ಸ್ತಥಾಪ್ರಾಪ್ತಿ ವಿರೋಧಿ ಚ। ವದನ್ತಿ ಸಕಲಾವೇದಾ ಸ್ಸೇತಿಹಾಸ ಪುರಾಣಕಾಃ। ಮುನ ಯಶ್ಚ ಮಹಾತ್ಮಾನೋ ವೇದವೇದಾಜ್ಞಪಾರಗಾಃ॥" ಎಂಬಂತೆ ಪ್ರಾಪ್ಯ ವಾದ ಬ್ರಹ್ಮ ಸ್ವರೂಪವೂ, ಆ ಬ್ರಹ್ಮವನ್ನು ಸೇರತಕ್ಕ ಪ್ರತ್ಯಗಾತ್ಮ ಸ್ವರೂಪವೂ, ಆ ಪ್ರಾಪ್ತಿಗೆ ಉಪಾಯವೂ, ಫಲವೂ, ವಿರೋಧಿಗಳೂ, ಇವೈದೂ ಅರ್ಥಪಂಚಕವೆನಿಸುವುದು. ಇವುಗಳಲ್ಲಿ ರಾಮನ ಪ್ರಸ್ತಾಪ ದಿಂದ ಪರಸ್ವರೂಪವೂ, ಲಕ್ಷ್ಮಣಾದಿ ವೃತ್ತಾಂತಗಳಿಂದ ಪ್ರತ್ಯಗಾತ್ಮ ಸ್ವರೂಪವೂ, ಶರಣಾಗತಿ ನಿರೂಪಣದಿಂದ ಉಪಾಯ ಸ್ವರೂಪವೂ, ವಿಭೀಷಣಾದಿ ವ್ಯಾಪಾರಗಳಿಂದ ಭಗವತ್ಕೈಂಕರ್ಯರೂಪಫಲ ಸ್ವರೂಪವೂ ನಿರೂಪಿಸಲ್ಪಡುವುವು.

9. ಈ ಅಧಿಕಾರಿಯು ಭಗವತ್ಕೃಪಾಪಾತ್ರನಾಗುವುದಕ್ಕೆ ಅವನಲ್ಲಿ ಆಕಿಂಚನ್ಯವೂ, ಅನನ್ಯಗತಿತ್ವವೂ ಅಪೇಕ್ಷಿತಗಳು.

ರಾವಣನಿಗೆ ಬ್ರಹ್ಮರುದ್ರಾದಿದೇವತೆಗಳೆಲ್ಲರೂ ವರವನ್ನು ಕೊಟ್ಟಿದ್ದರೂ ಅವರಿಗೆ ಸಾವು ತಪ್ಪದುದರಿಂದ ದೇವತಾಂತರಗಳಿಗೆ ರಕ್ಷಕತ್ವವಿಲ್ಲವೆಂದು ಸೂಚಿತವು. ಹಾಗೆಯೇ ದಶರಥವೃತ್ತಾಂತದಿಂದ ತಂದೆಗೂ ವಿಭೀಷಣ ಮೇಘನಾದಾದಿ ವೃತ್ತಾಂತಗಳಿಂದ ಭ್ರಾತೃಪುತ್ರಾದಿಗಳಿಗೂ ರಕ್ಷಕತ್ವವಿಲ್ಲವೆಂದು ವ್ಯಕ್ತಪಡಿಸಲ್ಪಟ್ಟಿದೆ.

10. ಈ ಅಧಿಕಾರಿಗೆ ಭಗವದ್ಜ್ಞಾನವು ಆಚಾರ್ಯಮುಖದಿಂದಲೇ ಲಭಿಸುವುದು— ಇದು ಹನುಮಂತನ ಚರಿತ್ರದಿಂದ ತೋರಿಸಲ್ಪಡುವುದು.

11. ಈ ಅಧಿಕಾರಿಯು ಶರೀರಪಾತದವರೆಗೂ ಭಗವತ್ಕೃಪೆಯನ್ನಿದಿರು ನೋಡುತ್ತಿರಬೇಕೆಂಬುದು.

ಇದು ಸೀತಾಧ್ಯವಸಾಯದಿಂದ ವ್ಯಕ್ತವಾಗುವುದು. "ಶರೈಸ್ತು ಸಂಕುಲಾಂಕೃತ್ವಾಲಂಕಾಂಪರಬಲಾರ್ದನಃ। ಮಾಂ ನಯೇದ್ಯದಿ ಕಾಕುತ್ಸ್ಥಃ ತತ್ತಸ್ಯ ಸದೃಶಂ ಭವತ್" ಎಂಬುದಾಗಿ ಸೀತೆಯು ರಾಮನೇ ಬಂದು ಶತ್ರುಗಳನ್ನು ಜಯಿಸಿ ತನ್ನನ್ನು ಕರೆದುಕೊಂಡು ಹೋಗುವುದು ಮೇಲೆಂದು ಹೇಳಿದಳಲ್ಲವೆ? ಇಲ್ಲಿ ಲಂಕೆಯೆಂದರೆ ಶರೀರವು. ರಾವಣ ಕುಂಭಕರ್ಣರೇ ಅಹಂಕಾರಗಳು. ಇಂದ್ರಜಿತ್ತು ಮೊದಲಾದವರು ಕಾಮಕ್ರೋಧಾದಿಗಳು. ವಿಭೀಷಣನೇ ವಿವೇಕವು. ಲಂಕಾರೂಪವಾದ ಶರೀರದಲ್ಲಿ ಸೆರೆಬಿದ್ದ ಸೀತೆಯೇ ಚೇತನನು- ಆ ಚೇತನನಿಗೆ ಹನುಮಂತನೆಂಬ ಆಚಾರ್ಯನಿಂದ ಭಗವದ್ ಜ್ಞಾನಲಾಭವು. ಭಗವಂತನು ತಾನಾಗಿಯೇ ಶರೀರವನ್ನು ಧ್ವಂಸಮಾಡಿ, ಅದರಲ್ಲಿ ಸೆರೆಬಿದ್ದಿರುವ ಜೀತನನನ್ನು ಉದ್ಧರಿಸುವುದಾಗಿ ಇದರಿಂದ ಧ್ವನಿತವಾಗುವುದು.

12. ಈ ಅಧಿಕಾರಿಯು ತನ್ನ ದೇಹವಿರುವವರೆಗೂ ನಡೆದುಕೊಳ್ಳಬೇಕಾದ ಉತ್ತಮಮಾರ್ಗಗಳು.

ಇದು ರಾಮರಾವಣರ ನಡತೆಗಳಿಂದ ವ್ಯಕ್ತವಾಗುವುದು. ರಾಮನಂತೆ ಧರ್ಮನಿರತನಾಗಿರಬೇಕೇ ಹೊರತು, ರಾವಣಾದಿಗಳಂತೆ ವರ್ತಿಸಬಾರದೆಂಬುದು ಈ ಗ್ರಂಥದಿಂದ ಯಥಾಯೋಗ್ಯವಾಗಿ ಉಪದೇಶಿಸಲ್ಪಡುವುದು.

13. ಈ ಅಧಿಕಾರಿಗೆ ವಾಸಯೋಗ್ಯವಾದ ಪ್ರದೇಶವು ಭಗವತ್ಸಾನ್ನಿಧ್ಯವುಳ್ಳ ದೇಹವಲ್ಲದೆ ಬೇರೆಯಲ್ಲ—ಕೋಸಲದೇಶವಾಸಿ ಜನಗಳ ವೃತ್ತಾಂತದಿಂದ ಈ ವಿಷಯವು ವ್ಯಕ್ತವಾಗುವುದು.

14. ಈ ಅಧಿಕಾರಿಗೆ ದ್ವಯವಿವರಣರೂಪವಾದ ಈ ರಾಮಾಯಣ ಗ್ರಂಥವೇ ನಿತ್ಯಾನುಸಂಧೇಯವೆಂಬುದು.

ಇದಕ್ಕಾಗಿ ಬಾಲಕಾಂಡದಲ್ಲಿ ಶ್ರೀಮಚ್ಛಬ್ದಾರ್ಥವೂ, ಅಯೋಧ್ಯಾಕಾಂಡದಿಂದ ಆ ಭಗವಂತನ ಕಲ್ಯಾಣಗುಣಗಳನ್ನು ವರ್ಣಿಸತಕ್ಕ ನಾರಾಯಣಶಬ್ದಾರ್ಥವೂ ದ್ಯೋತಿತವಾಗುವುದು. ಅರಣ್ಯಕಾಂಡದಲ್ಲಿ "ತೇ ತಂ ಸೋಮಮಿವೋದ್ಯನ್ತಂ" ಇತ್ಯಾದಿ ವಾಕ್ಯಗಳಿಂದ ಅವನ ದಿವ್ಯಮಂಗಳ ವಿಗ್ರಹವನ್ನು ವರ್ಣಿಸಿರುವುದರಿಂದ ಚರಣಶಬ್ದಾರ್ಥವು ಸೂಚಿತವಾಗುವುದು. ಕಿಷ್ಕಿಂಧಾಕಾಂಡ ಸುಂದರಕಾಂಡಗಳಲ್ಲಿ ಚರಣಶಬ್ದಾರ್ಥವೂ ಯುದ್ಧಕಾಂಡದಲ್ಲಿ "ಪ್ರಪದ್ಯೇ" ಎಂಬ ಪದದರ್ಥವೂ ಪ್ರತಿಪಾದಿಸಲ್ಪಡುವುವು. ಉತ್ತರಕಾಂಡದಲ್ಲಿ ಮುಕ್ತಿಫಲವನ್ನು ಹೇಳುವುದರಿಂದ ಉತ್ತರಖಂಡಾರ್ಥವು ಪ್ರತಿಪಾದಿತವಾಗುವುದು. ಹೀಗೆ ಈ ಗ್ರಂಥವು ಮೊದಲಿಂದ ಕೊನೆಯವರೆಗೂ ದ್ವಯಾರ್ಥ ವಿವರಣವುಳ್ಳುದಾದುದರಿಂದ ನಿತ್ಯಾನುಸಂಧೇಯವು.

15. ಈ ಅಧಿಕಾರಿಗೆ ರಾಮಾಯಣವೇ ಸದಾ ಜಪ್ಯವೆಂಬುದನ್ನು ತಿಳಿಸುವುದಕ್ಕಾಗಿ ಇದು ಗಾಯತ್ರೀಮಂತ್ರಾರ್ಥವನ್ನು ಪ್ರತಿಪಾದಿಸುವುದೆಂಬುದು.

ಹೇಗೆಂದರೆ :—ಬಾಲಕಾಂಡದಲ್ಲಿ ವೇದಪ್ರಸಿದ್ಧವಾಗಿ ಜಗತ್ಪ್ರಸೂತಿಗೆ ಹೇತುಭೂತವಾದ ಭಗವತ್ಸ್ವರೂಪವನ್ನು ವರ್ಣಿಸುವುದರಿಂದ ಸವಿತೃಶಬ್ದಾರ್ಥವೂ ಅಯೋಧ್ಯಾಕಾಂಡ ಕಿಷ್ಕಿಂಧಾಕಾಂಡಗಳಲ್ಲಿ ಗುಣವರ್ಣನಗಳಿಂದ ವರೇಣ್ಯಶಬ್ದಾರ್ಥವೂ, ಅರಣ್ಯಕಾಂಡದಲ್ಲಿ ತೇಜೋಮಯವಾದ ಶರೀರವನ್ನು ವರ್ಣಿಸುವುದರಿಂದ ಭರ್ಗಶಬ್ದಾರ್ಥವೂ, ಸುಂದರಕಾಂಡದಲ್ಲಿ ದಿವ್ಯಮಂಗಳ ವಿಗ್ರಹಲಕ್ಷಣಗಳನ್ನು ವರ್ಣಿಸುವುದರಿಂದ ದೇವಶಬ್ದಾರ್ಥವೂ, ಯುದ್ಧಕಾಂಡದಲ್ಲಿ ಶರಣಾಗತಿಯನ್ನು ಹೇಳುವುದರಿಂದ "ಧೀಮಹಿ" ಶಬ್ದಾರ್ಥವೂ ಉತ್ತರಕಾಂಡದಲ್ಲಿ ಮುಕ್ತಿಫಲವನ್ನು ಕೀರ್ತಿಸುವುದರಿಂದ ತೃತೀಯಪಾದಾರ್ಥವೂ ಪ್ರತಿಪಾದಿಸಲ್ಪಡುವುವು.

16. ಈ ಅಧಿಕಾರಿಗೆ ಅಸಚ್ಛಾಸ್ತ್ರ ಪ್ರವೃತ್ತಿಯುಂಟಾಗಬಾರದು.

ಇದು ಜಾಬಾಲಿ ಲಕ್ಷ್ಮಣಾದಿಗಳ ವಾಕ್ಯಗಳಿಗೆ ರಾಮನು ಮಾಡಿದ ಖಂಡನಗಳಿಂದ ನಿರ್ಣಯಿಸಲ್ಪಡುವುವು.

17. ಮಹಾತ್ಮರಿಗೂ ವ್ಯಸನಗಳುಂಟೆಂಬುದನ್ನು ತೋರಿಸುವುದರ ಮೂಲಕವಾಗಿ ಲೋಕಕ್ಕೆ ವೈರಾಗ್ಯಬೋಧನವು.

ರಾಮನ ರಾಜ್ಯಭ್ರಂಶಾದಿಗಳಿಂದಲೂ, ಸೀತಾಪಹಾರ, ಬ್ರಹ್ಮಾಸ್ತ್ರ, ನಾಗಪಾಶ ಬಂಧಾದಿಗಳಿಂದಲೂ ಈ ವಿಷಯವು ವ್ಯಕ್ತವಾಗುವುದು.

18. ಲೋಕವ್ಯವಹಾರಾರ್ಥವಾಗಿ ಚತುಷ್ಷಷ್ಟಿಕಲೆಗಳ ಅರ್ಥವೂ ಇದರಲ್ಲಿ ನಡುನಡುವೆ ಸಂಗ್ರಹವಾಗಿ ತಿಳಿಸಲ್ಪಡುವುದು.

"ಯದಿಹಾಸ್ತಿ ತದನ್ಯತ್ರಯನ್ನೇಹಾಸ್ತಿ ನತತ್ ಕ್ವಚಿತ್" ಎಂಬ ನ್ಯಾಯದಿಂದ ಸರ್ವಾರ್ಥಪ್ರತಿಪಾದಕವೆನಿಸಿದ ಈ ಗ್ರಂಥದಲ್ಲಿ, ಆಯಾ ಸಂದರ್ಭಾನುಸಾರವಾಗಿ ಚತುಷ್ಷಷ್ಟಿಕಲೆಗಳ ಅರ್ಥವೂ ನಿರೂಪಿಸಲ್ಪಡುವುದು. ಹೇಗೆಂದರೆ:—ಸಾಮಾನ್ಯವಾಗಿ ಇದರಲ್ಲಿ ಒಂದೊಂದು ವಾಕ್ಯವೂ ವೇದಾರ್ಥ ವನ್ನು ತಿಳಿಸುವುದಲ್ಲದೆ "ಅನಯಾ ಚಿತ್ರಯಾ ವಾಚಾ ತ್ರಿಸ್ಥಾನ ವ್ಯಂಜನಸ್ಥಯಾ" ಇತ್ಯಾದಿ ವಾಕ್ಯಗಳಿಂದ ಹನುಮಂತನ ವಾಗ್ವೈ ಖರಿಯನ್ನು ಶ್ಲಾಘಿಸುವಾಗ ಶಿಕ್ಷಾರ್ಥವೂ ಅಶ್ವಮೇಧಾದಿ ಪ್ರಕರಣ ಗಳಲ್ಲಿ ಕಲ್ಪಸೂತ್ರಾರ್ಥವೂ "ನೂನಂ ವ್ಯಾಕರಣಂ ಕೃತ್ಸ್ನಮನೇಕ ಬಹು ಧಾಶ್ರುತಮ್" ಇತ್ಯಾದಿವಾಕ್ಯಗಳಿಂದ ವ್ಯಾಕರಣಾರ್ಥವೂ ತಿಳಿಸಲ್ಪಟ್ಟಿ ರುವುವು. ಇತರ ವಿಷಯಗಳನ್ನೂ ಹೀಗೆಯೇ ಸೂಕ್ಷ್ಮವಿಚಾರದಿಂದ ಗ್ರಹಿಸ ಬಹುದು.

Sri B. L. S. Press, 'Tirumalai', Madras - 600 024